MICROFILMED BY
NEHRU MEMORIAL MUSEUM AND LIBRARY
TEEN MURTI HOUSE
NEW DELHI

REEL-19

SWADESHABHIMANI

CONTD FROM:

24, JANUARY-1941

D.V.
2.4.80

ESTD. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಗಾಂಧಿಜಿ ಸರ್ವಾಧಿಕಾರಿಗಳೆ?

ಸ್ಪೆಂಡರರ ವಿಚಿತ್ರ ಹೇಳಿಕೆ

ಟೈಮ್ಸ್ ಪತ್ರಿಕೆಯಲ್ಲಿ ಲೇಖನ

"ಕಾಂಗ್ರೆಸಿಗೆ ಮಹಾತ್ಮ ಗಾಂಧಿಯವರು ಸರ್ವಾಧಿಕಾರಿಯಂತಿದ್ದಾರೆಯೇ ಹೊರತು, ತಮ್ಮ ಬೆಂಬಲಕಾರರಿಗೆ ರಾಜಕೀಯ ಮುಖಂಡರಂತೆ ಅವರಿಲ್ಲ. ಇದೇ ಮಹಾತ್ಮ ಗಾಂಧಿ ಮತ್ತು ಕಾಂಗ್ರೆಸಿಗಿರುವ ಸಂಬಂಧ ಅವರು ಹಿಟ್ಲರ್ ಮತ್ತು ಮುಸಲೋನಿಗಳಂತೆ ಯಾವಾಗ ಏನು ಮಾಡಿದರೂ ಅದೆಲ್ಲಾ ಸರಿ. ಅವರು ಮಾತನಾಡಿದರೆ ಅವರು ಹೇಳಿದಂತೆ ಎಲ್ಲರೂ ವಿಧೇಯತೆಯಿಂದ ನಡೆಯಬೇಕು. ಅವರ ಅನುಯಾಯಿಗಳು ಮನಸ್ಸಮ್ಮತವಾದ ವಿಮರ್ಶೆಮಾಡುವಂತಹವರೆಂದು ಹೇಳುವುದಾದರೆ ಅದು ತಪ್ಪು"

ಹೀಗೆಂಬುದಾಗಿ ಜ ಎ ಸ್ಪೆಂಡರ್‌ರವರು ಜ..ರ ಟೈಂಸ್ ಪತ್ರಿಕೆಯಲ್ಲಿ ಬರೆದಿದ್ದಾರೆ. 'ಭಾರತದ ರಾಜಕೀಯ ಪರಿಸ್ಥಿತಿ ಪ್ರತ್ಯ.. ಗಾಂಧಿಯವರ ಸಿದ್ಧಾಂತ ... ವಿಷಯ ..ಗಿಯೇ ಅವರ ಈ ಲೇಖನವಿದೆ.

ಹರಿಜನ ಪತ್ರಿಕೆ

ಹರಿಜನ ಪತ್ರಿಕೆಯನ್ನು ನಿಲ್ಲಿಸಿದ್ದಾಗಿ ಗಾಂಧಿಜಿಯವರು ಪ್ರಕಟಿಸಿದ ಕೊನೆಯ ಹರಿಜನ ಪತ್ರಿಕೆಯ ಪ್ರತಿಯು ಈಗತಾನೇ ಸ್ಪೆಂಡರ್‌ರವರ ಕೈಸೇರಿದೆ. ಅವರು ಆ ಬಗೆ ಈ ರೀತಿ ಬರೆದಿರುವರು:—

"ಈ ಪತ್ರಿಕೆಯಲ್ಲಿ [ಹರಿಜನ] ಗಾಂಧಿಜಿಯವರ ಬರೆದಿರುವ ಲೇಖನಗಳು ಭಾರತದ ಇಂದಿನ ಸ್ಥಿತಿಯ ಮೇಲೆ ಚೆನ್ನಾಗಿ ಬೆಳಕನ್ನು ಚೆಲ್ಲುವವು. ಅವರ ಸಿದ್ಧಾಂತವನ್ನು ಕುರಿತು ಪ್ರತಿವಾರವೂ ನಾನು ಅವರ ಈ ಪತ್ರಿಕೆಯನ್ನೋದುತ್ತಿದ್ದೆ. ಅವರು ತಮ್ಮ ವಾದಸರಣಿಯನ್ನು ಅನುಸರಿಸುವುದರಲ್ಲಿ ಎಷ್ಟು ಧೈರ್ಯ ತೋರಿಸುವರೆಂಬುದಕ್ಕೆ ನನಗೆ ನಿಜವಾಗಿಯೂ ಗೌರವವಿದೆ. ಗಾಂಧೀಜಿಯವರೆಲ್ಲಿ ಕರದೊಯ್ಯುವರೋ ಅಲ್ಲಿಗೆ ಕಾಂಗ್ರೆಸು ಹೋಗುವದು.

"ಆದರೆ ಕೊನೆಯಲ್ಲಿ ಅವರು ತಮಗೂ ನಮಗೂ ಒಪ್ಪಂದವಾಗುವದು ಅಸಾಧ್ಯವಾಗುವಂತಹ ಸ್ಥಿತಿಯಲ್ಲಿ ನಮ್ಮನ್ನಿಡುವರು. ಅವರ ಅಭಿಪ್ರಾಯದಂತೆ ಯುದ್ಧದಿಂದ ದೂರವಾಗಬೇಕು ಮತ್ತು ನಮ್ಮ ಶತ್ರುಗಳೊಡನೆ ಮುಂದೆ ನಾವು ಹಿಂಸೆಯಿಂದ ವರ್ತಿಸುವುದನ್ನು ತ್ಯಜಿಸಬೇಕು. ಇದೇ ಅವರ ಸೂಚನೆ. ಅವರ ಈ ಹೇಳಿಕೆಗಳನ್ನು ಅಂಗೀಕರಿಸದಿದ್ದಲ್ಲಿ ಅವರ ಅಭಿಪ್ರಾಯದಲ್ಲಿ ಅದೊಂದು ಪಾಪ. ನಾಜಿಸಂ, ಫ್ಯಾಸಿಸಂಗಳನ್ನು ತಾವು ಒಪ್ಪುವುದಿಲ್ಲವೆಂದು ಹೇಳುವರು ಮತ್ತು ನಮಗೆ ಹೆಚ್ಚು ಅಡಚಣೆಯನ್ನೀಯುವುದಿಲ್ಲವೆಂದೂ ಹೇಳುವರು. ಅವರ ಈ ಸ್ಪಷ್ಟೀಕರಣದ ಮುಂದೆ ಹಿಟ್ಲರ್ ಮುಸಲೋನಿಗಳ ತತ್ತ್ವ ರಿಸುವರು ಒಂದು ಪಕ್ಷ ಭಾರತದ ಮೇಲೇನಾದರೂ ಆಕ್ರಮಣ ನಡಸಿದರೆ ಈ ನೈತಿಕ ಶಕ್ತಿಯ ಸಂದರ್ಭದಲ್ಲಿಯೂ ಭಾರತವು ಅಸಹಾಯವಾಗಿ ನಿಲ್ಲುವದು.

ಗಾಂಧೀಜಿಯವರ ಮಾರ್ಗ

ಸದ್ಯಕ್ಕೆ ಕಾಂಗ್ರೆಸಿನ ನೀತಿ ಅಹಿಂಸೆಯಿಂದು ನಾವು ತಿಳಿಯುತ್ತೇವೆ. ಹಾಗಿದಲ್ಲಿ ಸಹಕಾರವು ಭಾರತದ ಆಶೋತ್ತರಗಳಿಗೆ ತಡೆಯಾಗಿ ನಿಂತಿದೆಯೆಂದು ಹೇಳುತ್ತಾ ಹೋಗುವುದು ಸರಿಯಲ್ಲ. ಗಾಂಧೀಜಿಯವರು ತಮ್ಮ ಸಿದ್ಧಾಂತದ ಮೂಲಕವೂ ತಮ್ಮ ಅನುಯಾಯಿಗಳಿಗೆ ಕೊಡುತ್ತಿರುವ ಆಜ್ಞೆಗಳ ಮೂಲಕವೂ ನಮ್ಮ ಮುಂದೆ ಬಹಳ ಇಕ್ಕಟ್ಟಿನ ಸ್ಥಿತಿ ಉಂಟುಮಾಡಿದ್ದಾರೆ.

"ಅಧೈರ್ಯಪಡುವುದಕ್ಕೆ ಕಾರಣವೇನೂ ಇಲ್ಲ. ಭಾರತವು—ಸಂಸ್ಥಾನಗಳು ಮತ್ತು ಪ್ರಾಂತಗಳು—ನಮ್ಮ ಯುದ್ಧ ಪ್ರಯತ್ನಕ್ಕೆ ಸಹಾಯಮಾಡುತ್ತಿದ್ದ ಇನ್ನೂ ಮಾಡುವದು. ಅಲ್ಲದೆ ಸಮಸ್ಯೆಯನ್ನು ಇತ್ಯರ್ಥಗೊಳಿಸಲು ನಾವು ರಾಜಕೀಯ ಸಂಘಗಳಿಗಾಗಲೀ ಅಥವಾ ಚಳವಳದ ಕೂಗುಗಳಿಗಾಗಲೀ ಗಮನಕೊಡಬೇಕಾಗಿಲ್ಲ.

ಈಜಿಪ್ಟಿನ ಮಾದರಿ

"ಪೂರ್ಣ ಸ್ವಾತಂತ್ರ್ಯವು ಭಾರತದ ರಾಜಕೀಯಕ್ಕೆ ಜೀತಿದಾಯಕವಾದುದು. ಅವರ ಅನುಮತಿ ಪಡೆಯದೆ ಯುದ್ಧಕ್ಕೆ ಭಾರತವನ್ನೆಳೆದುದರಿಂದಾಗಿಯೇ ಅವರು ತಮ್ಮ ಆತ್ಮಗೌರವ ಹೋಯಿತೆನ್ನುವರು. ಅವರ ಮನಸ್ಸಿನ ಮುಂದೆ ಈಜಿಪ್ಟಿನ ರಾಜ್ಯಾಂಗ ಮಾದರಿಯು ಇರುವದು. ಇತರ ರಾಷ್ಟ್ರಗಳಿಗೆ ತೋರಿರುವಂತೆಯೇ ಈ ಯುದ್ಧದಿಂದ ಭಾರತಕ್ಕೂ ಕೂಡ ಬಲವಾದ ರಾಷ್ಟ್ರಗಳ ಬೆಂಬಲದಲ್ಲಿರಬೇಕೆಂಬ ಅಂಶವು ತೋರುವುದು. ಆದರೆ ಭಾರತ ದೇಶೀಯರು ತಮ್ಮ ಭವಿಷ್ಯವನ್ನು ಕೈತೋಟಿಯಲ್ಲಿಟ್ಟುಕೊಳ್ಳಲು ನಮ್ಮೊಡನೆ ಸಹಕರಿಸಿ ಸಮಾನವಾದ ರೀತಿಯಲ್ಲಿ ಕೆಲಸಮಾಡಲು ನಿಜವಾದಂತಹ ಭಾಗೀದಾರತನವನ್ನು ನಾವು ಅವರಿಗೆ ಕೊಡಬೇಕು."

ಮೃದುವಾದ ಶುಚಿಯಾದ ಚರ್ಮವಿರುವುದು, ಶುಭ್ರವಾದ, ಕಾಂತಿಯುಕ್ತವಾದ ಕಣ್ಣುಗಳಿರುವುದು, ತುಂಬಿದ ಕೃಷ್ಣ ಕಾಂತಿಯು ಕೂಡಲಿರುವುದು, ಇದೇ ಅಂತರಂಗದ ಶುಚಿತ್ವದ ಚಿಹ್ನೆಗಳು! ನಿಮ್ಮ ಶರೀರದ ಒಳಭಾಗವನ್ನು ಸ್ವಚ್ಛಗೊಳಿಸಿರಿ. ಹೊಟ್ಟೆಯಲ್ಲಿ ಆಶದ ವಸ್ತುಗಳು ಒಟ್ಟುಗೂಡದಂತೆ ನೋಡಿಕೊಳ್ಳಿರಿ. ಪ್ರತಿ ದಿನವೂ ಒಂದು ಗ್ಲಾಸು ತಂಪಾದ ಪಾನೀಯ

ಅಂಡ್ರೂಸ್' ಲಿವರ್ ಸಾಲ್ಟನ್ನು

ತೆಗೆದುಕೊಳ್ಳುವುದರಿಂದ ಶರೀರದ ಅಂತರಂಗವು ಶುಚಿಯಾಗುತ್ತದೆ. ಮಲಬದ್ಧತೆಯು ನಾಶವಾಗುತ್ತದೆ. ಮತ್ತೆ ಅನೇಕ ತರದ ರೋಗಗಳು ಪರಿಹಾರವಾಗುತ್ತವೆ. ಇದು ಹೊಟ್ಟೆಯನ್ನು ಬಹಳ ಶುಚಿಯಾಗಿಡುತ್ತದೆ. ರಕ್ತವನ್ನು ಶುದ್ಧಗೊಳಿಸುತ್ತದೆ.

ನಿಮ್ಮ ಅಂತರಂಗ ಶುಚಿತ್ವಕ್ಕಾಗಿ ದಿನನಿತ್ಯ

ಅಂಡ್ರೂಸ್ ಲಿವರ್ ಸಾಲ್ಟ್

ಈ ಆರೋಗ್ಯ ಪಾನೀಯವನ್ನು ಉಪಯೋಗಿಸಿರಿ

ANDREWS LIVER SALT



ಶುಚಿಗೊಳಿಸುತ್ತದೆ—ತಂಪುಗೊಡುತ್ತದೆ—ಆನಂದಪಡಿಸುತ್ತದೆ

ESTD 1906

CANARA BANK LIMITED.

ANNOUCEMENT.

On and after February, 1941 Fixed Deposits will be accepted at the following rates

3, 4 & 5 months	2¼%
6, 7 & 8 months	2½%
9, 10 & 11 months	2¾%
12 months	3%
24 months	3½%

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

24—1—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೪—೧—೧೯೪೧

ಬ್ರಿಟಿಷ್ ಮಿತ್ರರಿಗೆ ಭಾರತ ಮಿತ್ರರು ಉತ್ತರ ಕೊಡುತ್ತಾರೆ!



ತನ್ನ ಕಾರ್ಯಕಾರೀ ಮಂಡಳಿಯಲ್ಲಿ ಭಾರತ ಮುಖಂಡರಿಗೆ ಸ್ಥಾನಕೊಡುವೆನೆಂದು ಹೇಳಿದ ವೈಸರಾಯರು

ಕ್ರಿಸ್‌ಮಸ್ಸಿನ ಸಮಯದಲ್ಲಿ ಒಂಬತ್ತು ಮಂದಿ ಪಾರ್ಲಿಮೆಂಟು ಸದಸ್ಯರು ಹಿಂದೀಯರಿಗೆ ಆಪ್ತಸೂಚನೆಯಾಗಿ ಒಂದು ಪತ್ರಬರೆದು ಕಳುಹಿಸಿದ್ದರಷ್ಟೆ? ಅದಕ್ಕೆ ಉತ್ತರವಾಗಿ ಬ್ರಿಟಿಷ್ ಮತ್ತು ಹಿಂದೀಯ ಹಿತಸಂಬಂಧಗಳ ವಿಚಾರಮಾಡುತ್ತಾ, ಭಾರತದ ಪ್ರಾಗತಿಕ ಪಕ್ಷದ ಕೆಲವು ಮುಖಂಡರು ಅವರಿಗೆ ಒಂದು ಪತ್ರ ಬರೆದಿರುವರು. ಅದರಲ್ಲಿ ಇದುವರೆಗೆ ಹಿಂದೀಯರು ಬ್ರಿಟಿಷ್ ಧ್ಯೇಯದಲ್ಲಿ ಒಡಗೂಡಲು ಅಯಶಸ್ವಿಯಾದ ವಿಚಾರವನ್ನು ಹೇಳುತ್ತಾ, ಪ್ರಯತ್ನಿಸಿದರೆ ಮುಂದಾದರೂ ಯಶಸ್ವೀ ತೀರ್ಮಾನವಾಗಬಹುದೆಂದು ಬರೆದಿರುತ್ತಾರೆ.

ಈ ಪತ್ರಕ್ಕೆ ಶ್ರೀಗಳಾದ ವಿ. ಎಸ್. ಚಂದಾವರಕರ್, ಶಿವಸ್ವಾಮಿಅಯ್ಯರ್ ಶ್ರೀನಿವಾಸ ಶಾಸ್ತ್ರಿ, ಚಿಂತಾಮಣಿ, ಜೆ. ಎನ್. ಬಸು, ಪಂಡಿತ ಕುಂಜ್ರು, ಪರಾಂಜಪೆ, ವಿ. ಎಸ್. ಸಪ್ರು, ಟಿ. ಆರ್. ವೆಂಕಟರಾಮ್ ಶಾಸ್ತ್ರಿ, ಸರ್. ಮಹಾರಾಜಸಿಂಗ್, ಪಿ. ಕೋದಂಡರಾವ್ ಇವರು ಸಹಿಹಾಕಿರುವರು.

ಅವರ ಪತ್ರದ ಸಾರಾಂಶವು ಇಂತಿರುವುದು:—

ಬ್ರಿಟನು ಸಹಾನುಭೂತಿ ಕಳಕೊಂಡಿತು.

ಪರರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡುವುದೆ?

ಬ್ರಿಟಿಷ್ ಮಿತ್ರರಿಗೆ ಪರಿಸ್ಥಿತಿ ಗೊತ್ತಿಲ್ಲ.

"ಭಾರತ ಜನತೆಗೆ ಸಂದೇಶ ಕಳುಹಿಸಿದ ಬ್ರಿಟಿಷ್ ಮಿತ್ರರ ಸದಿಚ್ಛೆಯನ್ನು ನಾವು ಕೊಂಡಾಡುತ್ತೇವೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಭಾರತವು ಪ್ರಜಾಪ್ರಭುತ್ವಕ್ಕೆ ಬೆಂಬಲಕೊಡುವ ನಿಶ್ಚಯ ಮಾಡಿರುವಲ್ಲಿ ಭಾರತ ಮತ್ತು ಇಂಗ್ಲೆಂಡುಗಳು ಭಿನ್ನಭೇದಗಳಿಂದ ದೂರದೂರವಾಗುವುದು ವಿಷಾದಕರವಾಗಿದೆ. ಇದನ್ನು ಹೋಗಲಾಡಿಸಲು ತಕ್ಕ ಮಾರ್ಗವನ್ನು ಕೈಕೊಳ್ಳದಿದ್ದಲ್ಲಿ ಅದೂ ಮಹಾಪ್ರಮಾದವೇ ಆಗುವುದು.

ಸಹಾನುಭೂತಿ ಕಳಕೊಂಡಿತು?

ಭಾರತವು ಸಮಾನಾಧಿಕಾರ ರಾಷ್ಟ್ರವಲ್ಲವೆಂಬುದು ಪಾರ್ಲಿಮೆಂಟಿನವರಿಗೆ ಗೊತ್ತಿಲ್ಲವೆಂದು ಹೇಳಿದ್ದು ಅಸಂಬದ್ಧ ಸುದ್ದಿ. ಭಾರತದಲ್ಲಿ ಅನುಸರಿಸುತ್ತಿರುವ ಧೋರಣೆಯನ್ನು ನೋಡಿದರೆ ಸಮಾನಾಧಿಕಾರದ ನೆಳಲೂ ಇರುವುದಿಲ್ಲವೆಂದು ಹೇಳಬೇಕಾದುದು ದುಃಖದ ವಿಷಯ. ಕಳೆದ ಯುದ್ಧಕ್ಕಿಂತಲೂ ಈಗಿನ ಯುದ್ಧದ ಆರಂಭ ಕಾಲದಲ್ಲಿ ಭಾರತೀಯರಿಗೆ ಹೆಚ್ಚಿನ ಸಹಾನುಭೂತಿಯಿತ್ತು. ಆದರೆ, ಬ್ರಿಟನ ವಿಷಯ ಬ್ರಿಟಿಷ್ ಸರಕಾರವೇ ತನ್ನ ಅವಿವೇಕದಿಂದ ಮತ್ತು ಅವಿಶ್ವಾಸ ಧೋರಣೆಯಿಂದ ಭಾರತೀಯರ ಸ್ನೇಹವನ್ನು ತನ್ನೆಡೆಗೆ ಸೆಳಕೊಳ್ಳಲು ತಪ್ಪಿತು. ರಾಜಕೀಯದಲ್ಲಿ ಬ್ರಿಟಿಷರು ಕೇವಲ ಮಂದಗತಿಯಿಡುತ್ತಿರುವರು. ಸಾಮಂತ ಸ್ವರಾಜ್ಯವೇ ಭಾರತದ ಅಂತಿಮಧ್ಯೇಯವೆಂದು ವೈಸರಾಯರು ದೃಢೀಕರಿಸಿ ಹೇಳಿದರು. ಆದರೆ ಯುದ್ಧ ವಿಷಯದಲ್ಲಿ ಭಾರತೀಯರನ್ನು ಸೇರಿಸಿಕೊಳ್ಳುವ ವಿಚಾರವನ್ನು ಹೇಳಲಿಲ್ಲ. ದೇಶೀಯ ಕೈಗಾರಿಕೆ ಮತ್ತು ಸಂರಕ್ಷಣೆಯ ವಿಷಯ ಬ್ರಿಟಿಷ್ ಸರಕಾರದವರು ವಹಿಸಿದ ಧೋರಣೆಯು ಭಾರತೀಯರ ಕೇವಲ ಅತೃಪ್ತಿಗೇ ಕಾರಣವಾಗಿದೆ.

ಜಾತೀಯ ವಿಚಾರ

ಜಾತೀಯ ಪಕ್ಷದ ಮೇಲೆ ನಾವು ಸಮಸ್ಯೆಯನ್ನು ಬಿಡಿಸಲು ಯತ್ನಿಸಲಿಲ್ಲ. ಅಲ್ಪಸಂಖ್ಯಾಕರ ಪ್ರಶ್ನೆಯು ರಾಜ್ಯಘಟನೆಯ ಸಮಯದಲ್ಲಿ ಪರಿಹಾರವಾಗುವುದೆಂದು ನಾವು ಪ್ರಾಮಾಣಿಕವಾಗಿ ನಂಬಿದ್ದೇವೆ. ಭಾರತದ ಮುಂದಿನ ರಾಜ್ಯಘಟನೆಯನ್ನು ನಿರ್ಮಿಸಲು ನಮಗೆ ಸಂಪೂರ್ಣ ಅಧಿಕಾರ ಕೊಡಲಾಗುವುದೆಂದು ಹೇಳಲಾಗಿದರೂ, ಅಲ್ಪಸಂಖ್ಯಾಕರಿಗೆ ಕೊಟ್ಟ ಅಲ್ಲಸಲ್ಲದ ಆಶ್ವಾಸನಗಳಿಂದಲಾಗಿ ಅದಕ್ಕೆ ದೊಡ್ಡ ತಡೆಯುಂಟಾಗಿದೆ. ಬ್ರಿಟಿಷ್ ಸರಕಾರವು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಜಾತಿಭೇದದ ದುರ್ಲಾಭ ಪಡೆಯುತ್ತಿರುವುದೆಂದು ಸಂಶಯ ಬರುತ್ತದೆ.

ಮತ್ತೊಂದು ವಿಷಯವೆಂದರೆ, ಭಾರತದಲ್ಲಿ ಬ್ರಿಟಿಷರು ಹೊತ್ತ ಹೊಣೆಗಾರಿಕೆ. ಅವುಗಳನ್ನು ತಮಗೆ ಸರಿತೋರಿದಂತೆ ಅವರು ನಿರ್ವಹಿಸುವರು. ವೈಸರಾಯರು ಆಗಸ್ಟ್ ಎಂಟನೆಯ ತಾರೀಕಿನಂದು ಮಾಡಿದ ಭಾಷಣದಲ್ಲಿ ಭಾರತಕ್ಕೆ ಯಾವುದೇ ರೀತಿಯ ಸ್ವರಾಜ್ಯ ಇಲ್ಲವೇ ಸಮಾನಾಧಿಕಾರ ಸ್ಥಾನವು ಕೊಡುವ ಚಿಹ್ನೆಯಿದೆಯೇ ಎಂದು ಬ್ರಿಟಿಷ್ ಮಿತ್ರರು ಯೋಚಿಸಿನೋಡಬೇಕು.

ವೈಸರಾಯರ ತತ್ಕಾಲದ ಏರ್ಪಾಡು

ಭಾರತೀಯರನ್ನು ತತ್ಕಾಲಕ್ಕೆ ವೈಸರಾಯರ ಕಾರ್ಯಕಾರೀ ಮಂಡಳಿಗೆ ಸೇರಿಸುವುದು ವೈಸರಾಯರ ತತ್ಕಾಲದ ಏರ್ಪಾಡಾಗಿದೆ. ಆದರೆ ಕಾರ್ಯಕಾರೀ ಮಂಡಳಿಗೆ ಯಾವುದೇ ಪ್ರಾಮುಖ್ಯ ಅಧಿಕಾರವಿರುವುದಿಲ್ಲ. ಹಲವು ವಿಷಯಗಳನ್ನು ವೈಸರಾಯರು ಕಾರ್ಯಕಾರೀ ಮಂಡಳಿಯೊಡನೆ ಕೇಳದೇ ಮಾಡಬಹುದು. ಹೀಗಿರುವಾಗ ಅಂತಹ ಮಂಡಳದಲ್ಲಿ ಸ್ಥಾನವಹಿಸಲು ಭಾರತೀಯರು ಒಪ್ಪಲಾರರು. ಸ್ವಿನ್ನಡಲ್ಲಿ ಅನುಸರಿಸಿದ ಧೋರಣೆ, ಕೈಗಾರಿಕೆ ವಿಚಾರ, ಪೌರ್ವಿಕ ಖಾತೆಯ ಕಾರ್ಯಭಾರ, ಹಿಂದೀಯರಿಗೆ ದೊಡ್ಡ ಅಧಿಕಾರ ಕೊಡದಿರುವುದು ಇವೇ ಮೊದಲಾದ ವಿಚಾರಗಳನ್ನು ನೋಡಿದರೆ ಸರಕಾರಕ್ಕೆ ಭಾರತದಲ್ಲಿ ಭಾರತೀಯರ ಹಿತಕ್ಕಿಂತ ಬ್ರಿಟಿಷರ ಹಿತವೇ ದೊಡ್ಡದಾಗಿರುವಂತೆ ತೋರುತ್ತದೆ.

ಪರಿಸ್ಥಿತಿ ಗೊತ್ತಿಲ್ಲ.

ವೈಸರಾಯರ ಘೋಷಣೆಯನ್ನು ಪುನರಾಲೋಚಿಸುವರೆ ನಮ್ಮ ಬ್ರಿಟಿಷ್ ಮಿತ್ರರು ಸೂಚಿಸುತ್ತಾರೆ. ಆದರೆ ಅವರಿಗೆ ನಮ್ಮ ಪರಿಸ್ಥಿತಿ ಗೊತ್ತಿಲ್ಲವೆಂದು ತೋರುತ್ತದೆ. ಇಲ್ಲಿನ ವಿರುದ್ಧಗಾಮಿ ಆರ್ಥಿಕ ರೀತಿಯಿಂದ ಎಂಥ ಅನಿಷ್ಟವಾಗುತ್ತಿದೆಯೆಂದೂ ಅವರಿಗೆ ಗೊತ್ತಿಲ್ಲ. ಗೌರವಕರ ಒಪ್ಪಂದದ ಅನ್ಯೋನ್ಯ ಸಹಕಾರದಲ್ಲಿ ನಮಗೆ ವಿಶ್ವಾಸವಿದೆ. ಈಗಿದ್ದ ಭೇದಗಳು ಎಷ್ಟು ದೊಡ್ಡವಿದ್ದರೂ ಮರೆತುಬಿಡಬಹುದು. ಸರಕಾರದವರು ಅಂತಹ ವಾತಾವರಣವನ್ನು ಉಂಟುಮಾಡಬೇಕು. ಭಾರತವು ತನ್ನ ಸ್ವಾತಂತ್ರ್ಯದ ವಿಷಯ ಯೋಗ್ಯ ಆಶ್ವಾಸನವಿಲ್ಲದೆ ಪರರಾಷ್ಟ್ರದ ಸ್ವಾತಂತ್ರ್ಯದ ಸಲುವಾಗಿ ಹೇಗೆ ಉತ್ಸಾಹದಿಂದ ಹೋರಾಡಬಹುದು? ಸತ್ಯಾಗ್ರಹಕಾರರನ್ನು ನಾವು ವಿರೋಧಿಸುವೆವು. ಪ್ರತಿಪ್ರಭುತ್ವ ನಮಗೆ ಮೆಚ್ಚಿಗೆಯದು. ಆದರೆ ಬ್ರಿಟಿಷ್ ಸರಕಾರವು ಯೋಗ್ಯ ಧೋರಣೆಯನ್ನು ಕೈಕೊಂಡಿಲ್ಲವೆಂದು ವಿಷಾದಿಸುತ್ತೇವೆ. ಬ್ರಿಟಿಷರು ಮುಂಜಾಗ್ರತೆ, ಧೈರ್ಯ ವಹಿಸಿ ಕೆಲಸಮಾಡಿದರೆ ಇನ್ನಾದರೂ ಪರಿಸ್ಥಿತಿ ಸುಧಾರಿಸಬಹುದೆಂದು ನಾವು ಅಭಿಪ್ರಾಯ ಪಡುತ್ತೇವೆ."

ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ.

ಸ್ವದೇಶಾಭಿಮಾನಿ

ತಾರೀಕು 24—1—1941

ಸಮರಭೂಮಿಯಲ್ಲಿ

ಯುರೋಪು ಇಂದು ಸಮರಭೂಮಿಯಾಗಿದೆ. ಅತ್ಯುಗ್ರವಾದ ಯುದ್ಧವು ಪ್ರಪಂಚದ ಇತಿಹಾಸದಲ್ಲಿಯೇ ಭೀಷಣವಾಗಿರುವ ಯುದ್ಧವು ಇಂದು ಯೂರೋಪಿನಲ್ಲಿ ನಡೆಯುವ ಯುದ್ಧವಾಗಿದೆ. ಯುದ್ಧವು ಅನೇಕ ಕಾರಣಗಳ ಸಲುವಾಗಿ ಆರಂಭವಾಗಿರಬಹುದು; ಅನೇಕ ರಾಷ್ಟ್ರಗಳು ನುಚ್ಚುನೂರಾಗಿರಬಹುದು; ಅನೇಕರು ಯುದ್ಧ ಮಾಡಿರಬಹುದು, ಆದರೆ ಇಂದಿಗೂ ವಿಷಮತೆಯು ಕಡೆಗೇ ಏರುತ್ತಾ ಹೋಗುವ. ಈ ಯುದ್ಧವು ಬ್ರಿಟನು—ಜರ್ಮನಿಗಳೊಳಗೆಯೇ ದಿನದಿಂದ ದಿನಕ್ಕೆ ಪ್ರಬಲವಾಗುತ್ತಿದ್ದು ಜಗತ್ತಿನ ಶಾಂತಿಯನ್ನು ಕದಡುತ್ತಿದೆ.

ಯುದ್ಧದ ಕುರಿತು ಚರ್ಚಿಲ್ಲರು ಕಳೆದ ವಾರ ಒಂದು ಮಹತ್ವದ ಭಾಷಣವನ್ನು ಕೊಟ್ಟರು. ಇಂದಿನ ಯುದ್ಧಪರಿಸ್ಥಿತಿಯನ್ನು ತಿಳಕೊಳ್ಳಲು ಅವರು ಆಗಾಗ ಕೊಡುವ ಭಾಷಣಗಳೇ ಅತ್ಯುತ್ತಮ ಉಪಾಯಗಳಾಗಿವೆ. ಚರ್ಚಿಲ್ಲರು ಸ್ಪಷ್ಟವಕ್ತಾರರು. ಇಂಗ್ಲೆಂಡು ವಿಜಯಿಯಾಗುವುದೆಂದು ವಿಜಯಹೊಂದಲೇ ಬೇಕೆಂಬ ನಿರ್ಧಾರವಿರುವುದರಿಂದ ಅವರು ಸ್ಪಷ್ಟ ನುಡಿದರು. ಆದರೆ ಅದರೊಡನೆ ಬ್ರಿಟನಿನ ಸಂಕಷ್ಟಗಳು ಇನ್ನೂ ತಪ್ಪಿಲ್ಲವೆಂದೂ ಎಚ್ಚರಿಸಿದರು. ಶತ್ರುವು ಲಂಡನಿನ ಮೇಲೆ ಅತ್ಯುಗ್ರವಾದ ಧಾಳಿಯನ್ನು ಮಾಡುವನೆಂದು ಬ್ರಿಟಿಷ್ ಪ್ರಧಾನರೂ ಸಂಶಯಗೊಂಡಿದ್ದಾರೆ. ಬರುವ ವಸಂತದಲ್ಲಿ ಆಕಾಶವು ಶುಭ್ರವಾಗಲು ಹಿಟ್ಲರನು ಲಂಡನಿನ ಮೇಲೆ ಅತ್ಯುಗ್ರ ಧಾಳಿಯನ್ನು ಮಾಡಲಿರುವನೆಂದು ಸುದ್ದಿ ಹರಡಿರುತ್ತದೆ.

ಇಂದು ಕಾದಾಟಕ್ಕೇನೂ ಕಡಿಮೆಯಿಲ್ಲ. ಗೋರಿಂಗನ ವಿಮಾನಗಳು ದಿನನಿತ್ಯ ಹಗಲುರಾತ್ರಿಯೆನ್ನದೆ ಹಾರಾಡುತ್ತಿವೆ. ನಿರ್ದಾಕ್ಷಿಣ್ಯವಾಗಿ ಬಾಂಬುಗಳನ್ನೆಸೆದು ಪೀಡಿಸುತ್ತಿವೆ. ಈ ಸಮಯದಲ್ಲಿ ನೋಡತಕ್ಕ ವಿಚಾರ ಒಂದಿದೆ. ಬ್ರಿಟನು ರಕ್ಷಣೆಯನ್ನು ಮಾಡುವ ಉಪಾಯವನ್ನು ಮಾತ್ರ ವಹಿಸಿಕೊಂಡಿದೆಯಲ್ಲದೆ ಆಕ್ರಮಣ ಕಾರ್ಯಕ್ಕೆ ಭರದಿಂದ ತೊಡಗಲಿಲ್ಲ. ಆಕ್ರಮಣನೀತಿಯನ್ನು ಮುಂದಿಟ್ಟ ಜರ್ಮನರು ಆಕ್ರಮಿಸಲು ಯತ್ನಿಸಿ ಬ್ರಿಟಿಷರ ಗುಂಡಿನೇಟಿಗೆ ಬಲಿಯಾಗುತ್ತಿದ್ದಾರೆ. ಹೇಗಿದ್ದರೂ ಇಂದು ಯುರೋಪಿನ ಸಮರ ಭೂಮಿಯಲ್ಲಿ ಘೋರತರ ಹಿಂಸಾಕೃತ್ಯವು ನಡೆಯುತ್ತದೆ.

ಇತ್ತ ಇಟಲಿ ಗ್ರೀಸಿನೊಡನೆ ಸೋತು ಹೋಗಿ ತನ್ನ ಅಸಾಮರ್ಥ್ಯವನ್ನು ಜಗತ್ತಿನೆದುರು ಪ್ರದರ್ಶಿಸಿದೆ. ಮುಸಲಿನಿಯು ಹಿಟ್ಲರನಂತೆಯೇ ಒಬ್ಬ ಭಯಂಕರ ವೈರಿಯೆಂದು ಹಿಂದೆ ತಿಳಿಯಲಾಗಿತ್ತು. ಯುರೋಪಿನ ಯುದ್ಧಕ್ಕೆ ಮೊದಲು ಮಾಡಿದವನು ಆತನು. ಅಬಿಸೀನಿಯವನ್ನು ಸುಲಿಗೆಮಾಡಿದವನೂ ಆತನು. ಆತನ ಆರ್ಭಟವನ್ನು ಗ್ರೀಕರು ತಮ್ಮ ಅತ್ಯಂತ ಸಾಹಸದಿಂದ ನಿಲ್ಲಿಸಿಬಿಟ್ಟರು. ಹಿಟ್ಲರ ಸಹಾಯವಿಲ್ಲದೆಯಾತರ ಸಾಹಸವನ್ನು ಮಾಡಲೂ ಮುಸಲಿನಿ ಅಸಮರ್ಥನೆಂದು ತಿಳಿದುಬಂದಂತಾಗಿದೆ.

ಬ್ರಿಟಿಷರು ಬೇರೆ ಬೇರೆ ಕಡೆಗಳಲ್ಲಿ ಬಹಳ ಚಟುವಟಿಕೆ ನಡೆಸುತ್ತಿದ್ದಾರೆ. ಬಾರ್ಡಿಯದಲ್ಲಿ ಬ್ರಿಟಿಷರಿಗೆ ಒದಗಿದ ವಿಜಯವು ಬಹಳ ಸಾಹಸದ್ದಾಗಿದೆ. ಗ್ರೀಸಿನ ಸೇನಾಪತಿಯೊಡನೆ ಬ್ರಿಟಿಷರು ಮಾತುಕತೆ ನಡೆಸಿ ಅಲ್ಲಿ ಸಮರವನ್ನು ಮತ್ತಷ್ಟು ಬಿಗಿಮಾಡುತ್ತಿರುವರಾಗಿ ಸುದ್ದಿಯಿದೆ. ಮತ್ತೆ ಟರ್ಕಿಯೊಡನೆಯೂ ವ್ಯವಹಾರಗಳು ನಡೆಯುತ್ತಿವೆಯಂತೆ. ಇಂಗ್ಲೆಂಡಿಗೆ ಅಮೇರಿಕದಿಂದ ಮತ್ತಷ್ಟು ನೌಕಾ ಸಹಾಯವು ದೊರಕುವುದೆಂದು ಖಂಡಿತವಾಗಿ ತಿಳಕೊಳ್ಳಬಹುದು. ಮೊನ್ನೆ ಅಮೆರಿಕಾ ಕಾಂಗ್ರೆಸಿನಲ್ಲಿ ಬ್ರಿಟಿಷರ ಸಹಾಯಾರ್ಥವಾಗಿ ಠರಾವೊಂದು ಮಂಜೂರಾಗಿರುವುದರಿಂದ, ಬ್ರಿಟನು ಅಮೇರಿಕದ ಸಹಾನುಭೂತಿ ಸಹಾಯಗಳೆರಡನ್ನೂ ಪಡೆದಂತೆಯೇ ಆಗಿದೆ. ಮಾತ್ರವಲ್ಲದೆ, ಕಳೆದ ಚುನಾವಣೆಯಲ್ಲಿ ರೂಸ್‌ವೆಲ್ಟರಿಗೆ ಎದುರಾಳಿಯಾಗಿ ನಿಂತ ವಿಲ್ಕಿಯವರೇ ಮತ್ತೆ ರೂಸ್‌ವೆಲ್ಟರಿಂದ ನೇಮಕ ಹೊಂದಿ ಬ್ರಿಟನಿಗೆ ತೆರಳುವರೆಂದೂ ಅಲ್ಲಿನ ಯುದ್ಧ ಪರಿಸ್ಥಿತಿಯನ್ನು ಇವರು ಪ್ರತ್ಯಕ್ಷ ಕಂಡು ಬರುವರೆಂದೂ ಗೊತ್ತಾಗಿದೆ.

ಅಮೇರಿಕವು ಬ್ರಿಟನಿಗೆ ಬೆಂಬಲ ಕೊಡುತ್ತಿರುವ ವಿಷಯವನ್ನು ಕಂಡು ಜಪಾನು ಜಾಗರೂಕವಾಗಿರುತ್ತದೆ. ಬ್ರಿಟನಿಗೆ ಅಮೇರಿಕವು ಬೆಂಬಲ ನಿಂತರೆ, ಏಶಿಯದಲ್ಲಿ ತನ್ನ ಕೈವಾಡವು ನಡೆಯಲಾರದೆಂದು ಜಪಾನು ಅಂಜುತ್ತಿರಬೇಕು. ಹಾಗಾಗಿಯೋ ಏನೋ ಜಪಾನು ಅಮೇರಿಕಕ್ಕೆ ಒಂದು ರೀತಿಯ ಬೆದರಿಕೆ ಹುಟ್ಟಿಸುತ್ತದೆ. ಏಶಿಯಾದಲ್ಲಿ ಸಾಮ್ರಾಜ್ಯವೊಂದನ್ನು ಕಟ್ಟುವ ಕನಸು ಜಪಾನಿನದು. ಆದರೆ ಹಲಕಾಲದಿಂದ ಕಾದಾಡುತ್ತಿದ್ದರೂ ಚೀನವು ಜಪಾನನ್ನು ಯುದ್ಧದಲ್ಲಿ ಮುಂದುವರಿಯಲು ಬಿಟ್ಟಿಲ್ಲ. ಚೀನಿಯರ ಪರಾಕ್ರಮವು ಕೊಂಡಾಡತಕ್ಕದ್ದಿದೆ.

ಮತ್ತೆ ಬಾಲ್ಕನಿನಲ್ಲಿ ಅಶಾಂತತೆಯು ಹೆಚ್ಚುತ್ತಿದೆ. ರುಮೇನಿಯ ಹಂಗೇರಿಗಳೊಳಗೆ ತಿಕ್ಕಾಟವೊದಗುವುದೆಂಬ ಸುದ್ದಿಯಿದೆ. ಜರ್ಮನರ ಸೈನ್ಯವು ರುಮೇನಿಯಕ್ಕೆ ನಡೆದಿದೆ. ಅದಲ್ಲಿ ಅಶಾಂತತೆಯುಂಟಾಗಿ ಕ್ರಾಂತಿಯೆದ್ದರೆ ಜರ್ಮನಿಗೆ ತೊಂದರೆಯುಂಟು. ಅದಕ್ಕಾಗಿ ರುಮೇನಿಯಕ್ಕೆ ಹಿಟ್ಲರನು ಸೈನಿಕರನ್ನು ಕಳುಹಿಸಿರುವನೆಂದು ಗೊತ್ತಾಗಿದೆ. ರುಮೇನಿಯದ ಪ್ರಧಾನ ಮಂತ್ರಿ ಅಂಟೊನೆಸ್ಕ್ಯೂ ಇವರು ನಾಜಿ ಪ್ರಮುಖರೊಡನೆ ಮಾತುಕತೆ ನಡೆಸಿರುವರಂತೆ. ಇದರ ಕುರಿತು ಹಲವು ಪ್ರಾಮುಖ್ಯ ಊಹೆಗಳು ಎದ್ದಿವೆ.

ಹಿಟ್ಲರನು ಈಗ ಹಲವು ಗುಪ್ತಕಾರಸ್ಥಾನಗಳನ್ನು ನಡೆಸುವಂತೆ ಕಂಡು ಬರುತ್ತದೆ. ತನ್ನ ಸರ್ವಾಧಿಕಾರೀ ಮಿತ್ರನಾದ ಮುಸಲಿನಿಯನ್ನು ಕಂಡು ಮಾತುಕತೆ ಮಾಡಿದನು. ಉಭಯ ರಾಷ್ಟ್ರಗಳ ಯುದ್ಧ ಪರಿಸ್ಥಿತಿಯ ಬಗ್ಗೆ ಉಭಯ ರಾಷ್ಟ್ರಗಳ ಸರ್ವಾಧಿಕಾರಿಗಳವರು ಒಟ್ಟುಗೂಡಿ ಮುಂದಿನ ಕಾರ್ಯಯೋಜನೆ ಗೈಯಲಿರುವರೆಂದು ತಿಳಿದುಬಂದಿದೆ.

ಹಾಗೂ ಯೂರೋಪಿನಲ್ಲಿ ತತ್ಕಾಲಕ್ಕೆ ಶಾಂತಿಯು ತಲೆದೋರುವ ಚಿಹ್ನೆಯಿಲ್ಲ. ಸಮರ ಭೂಮಿಯ ದೃಶ್ಯವು ಭೀಕರ ಭೀಕರವಾಗುತ್ತಿದೆ, ಮಾನವನು ಸ್ವಾರ್ಥಕ್ಕೆ ಬಲಿಬಿದ್ದು ಪರಾರ್ಥವನ್ನು ತುಳಿಯುತ್ತಿರುವನು. ಸಮರ ಭೂಮಿಯ ಚಿತ್ರವು ಚಿತ್ತವೇಧಕವಿದೆ.

ಭಾರತದ ವಿಷಯದಲ್ಲಿ ಬ್ರಿಟಿಷ್ ಕೂಲಿಗಾರರ ಪಕ್ಷ

ಬ್ರಿಟನು ಪ್ರಜಾಪ್ರಭುತ್ವದ ರಾಜ್ಯ. ಆದ ಕಾರಣ ಅದರ ಅಧೀನದೊಳಗಿರುವ ಇತರ ರಾಷ್ಟ್ರಗಳಿಗೂ ಬ್ರಿಟನು ಪ್ರಜಾಪ್ರಭುತ್ವವನ್ನೇ ಕೊಡತಕ್ಕದ್ದು ನ್ಯಾಯವೂ ಧರ್ಮವೂ ಆಗಿದೆ. ಮನೆಯೊಳಗೆ ಪ್ರಜಾಪ್ರಭುತ್ವ, ಹೊರಗಡೆ ಸಾಮ್ರಾಜ್ಯಶಾಹಿತ್ವವೆಂದರೆ ಈ ಮಾತು ಪ್ರಾಮಾಣಿಕತ್ವದ್ದಾಗುವುದಿಲ್ಲ. ಸಮಾನ ಸಮಾಜಾಧಿಕಾರ ತತ್ವಪ್ರಿಯರೂ ಜಗತ್ತಿನ ಮಾನವ ಕುಟುಂಬದ ವಿಷಯ ಭ್ರಾತೃಭಾವನೆಯನ್ನು ಸಾರುವವರೂ ಆದ ಬ್ರಿಟಿಷ್ ಕೂಲಿಗಾರ ಪಕ್ಷದವರಾದರೂ ಬ್ರಿಟನು, ತನ್ನ ಅಧೀನ ರಾಷ್ಟ್ರಗಳಲ್ಲಿಯೂ ಸ್ವತಂತ್ರ ರಾಜ್ಯಭರಣವನ್ನು ಸ್ಥಾಪಿಸಲು ಸಿದ್ಧವಾಗಬೇಕೆಂದು ಅಭಿಪ್ರಾಯ ಪಟ್ಟವರಿರುವರು. ಇದೇ ಅಭಿಪ್ರಾಯದಿಂದಲೇ ಅವರು ಭಾರತಕ್ಕೆ ಸ್ವಯಂಭರಣಾಧಿಕಾರವನ್ನು ಕೊಡತಕ್ಕದ್ದು ನ್ಯಾಯವಿದೆಯೆಂಬ ಬಗ್ಗೆ ಒಂದು ನಿರ್ಣಯವನ್ನೂ ಮಾಡಿರುತ್ತಾರೆ.

ಆದರೆ ತತ್ವಧ್ಯೇಯಗಳು ದಿನದಿನಕ್ಕೆ ಶಿಥಿಲವಾಗುತ್ತಿರುವುದನ್ನು ನಾವು ಕಾಣುತ್ತೇವೆ. ತಮ್ಮ ಆಶ್ರಯದಲ್ಲಿರುವ ಜನರಿಗೆ ಸ್ವಾತಂತ್ರ್ಯವನ್ನು ಕೊಟ್ಟಲ್ಲಿ ತಾವು ನಷ್ಟಕ್ಕೊಳಗಾಗುವೆವೆಂಬ ಭೀತಿಯು ಬ್ರಿಟಿಷ್ ಕೂಲಿಗಾರ ಪಕ್ಷದವರನ್ನೂ ಬ್ರಿಟಿಷರಿಗೆ ವ್ಯಾಪಾರದ ಸಾರ್ವತ್ರಿಕ ಅಧಿಕಾರವು ಹಿಂದಿನಂತೆಯೇ ಇಂದೂ ಇರುವುದಿಲ್ಲ. ದಿನ ದಿನಹೋದಂತೆ ಅದು ಕಡಿಮೆ ಕಡಿಮೆಯಾಗುತ್ತಿರುವಾಗ ಬ್ರಿಟಿಷ್ ಕೂಲಿಗಾರರಾದರೂ ಭಾರತ ಬ್ರಿಟನುಗಳ ಸೌಹಾರ್ದದಿಂದ ಮಾತ್ರ ಪ್ರಯೋಜನವನ್ನು ಹೊಂದಬಹುದಾಗಿದೆಯಲ್ಲದೆ ವಿರೋಧದಿಂದಲ್ಲ. ಆದರೆ ಕೆಲವು ಬ್ರಿಟಿಷ್ ಕೂಲಿಗಾರ ಪಕ್ಷದ ಮುಖಂಡರು ಭಾರತದಂತಹ ಆಶ್ರಿತ ರಾಷ್ಟ್ರಗಳಿಗೆ ಬ್ರಿಟನು ಸ್ವತಂತ್ರ ರಾಜ್ಯಭರಣವನ್ನಿತ್ತರೆ ಬ್ರಿಟಿಷ್ ಹಿತಕ್ಕೆ ಧಕ್ಕೆ ಬರುವುದೆಂದು ವಿಚಾರಿಸುತ್ತಿರುವುದು ನಿಜವಾಗಿಯೂ ಆಶ್ಚರ್ಯಕರವಾಗಿದೆ.

ಬ್ರಿಟಿಷ್ ಕೂಲಿಗಾರ ಪಕ್ಷದಲ್ಲಿ ಸಾಮ್ರಾಜ್ಯದ ಕೂಲಿಗಾರ ಪಕ್ಷದ ಪ್ರತಿನಿಧಿಗಳು ಹೆಚ್ಚು ಪ್ರಭಾವಶಾಲಿಗಳಾಗಿರುವುದರಿಂದ ಅವರು ಎಂದಾದರೂ ಒಂದು ದಿನ ಪಕ್ಷದಲ್ಲಿ ಪ್ರಾಬಲ್ಯ ಹೊಂದಿ ತಮ್ಮ ಹಿತಕ್ಕೆ ತೊಂದರೆ ಮಾಡುವರೆಂದೂ ಅವರು ಬಗೆದಂತೆ ತೋರುತ್ತದೆ. ಹೀಗಾಗಿ ರಾಜ್ಯಾಂಗ ಪದ್ಧತಿಯ ಅಭ್ಯುದಯದಲ್ಲಿ ಭಾರತವು ಮುಂದುವರಿದಲ್ಲಿ ಬ್ರಿಟಿಷ್ ಕೂಲಿಗಾರ ಪಕ್ಷದವರೂ 'ಟೋರಿ' ಪಕ್ಷದವರೊಡನೆ ಸೇರಿ ತಮ್ಮ ನೀತಿಯನ್ನು ಬದಲಾಯಿಸಿದ ವಿಷಾದಮಯ ಘಟನೆಯು ಇಂದು ಪ್ರಾಪ್ತವಾಗಿದೆ.

ಬ್ರಿಟಿಷ್ ಕೂಲಿಗಾರ ಪಕ್ಷವು ಭಾರತದ ವಿಷಯದಲ್ಲಿ ಅಪ್ರಾಗತಿಕ ಧೋರಣೆ ವಹಿಸಿರುವುದೆಂಬುದಕ್ಕೆ, ಬ್ರಿಟನಿನಲ್ಲಿರುವ ಇಂಡಿಯನ್ ಲೀಗಿನ ಕಾರ್ಯದರ್ಶಿ ಶ್ರೀ ಕೃಷ್ಣ ಮೇನನರ ಕುರಿತು ಆ ಪಕ್ಷವು ಕೈಕೊಂಡ ಕಾರ್ಯವು ಒಂದು ಸಬಲ ದೃಷ್ಟಾಂತವಾಗಿದೆ: ಕೂಲಿಗಾರ ಪಕ್ಷದ ಉತ್ಸಾಹೀ ಕೆಲಸಗಾರರಾದ ಶ್ರೀ ಮೇನನರು, ೧೯೩೯ರಲ್ಲಿ ಡಂಡೀಯಿಂದ ಪಾರ್ಲಿಮೆಂಟು ಸದಸ್ಯತ್ವಕ್ಕೆ ನಿಲ್ಲುವ ಮುಂದಿನ ಉಮೇದ್ವಾರರೆಂದು ಪಕ್ಷದಿಂದಲೇ ನಿಶ್ಚಯಿಸಲಾಗಿತ್ತು. ಕಳೆದ ಏಪ್ರಿಲಿನಲ್ಲಿ ಡಂಡೀಲೇಬರ್ ಪಕ್ಷದ ಕಾರ್ಯಕಾರೀಮಂಡಳವು ಅವರ ಉಮೇದ್ವಾರಿಕೆಯ ಪತ್ರವನ್ನು ನಿಷ್ಕಾರಣದಿಂದ ತೆಗೆದುಹಾಕಿತು. ಭಾರತವು ಬ್ರಿಟನಿನ ಯುದ್ಧದ ಕುರಿತು ವಹಿಸಿದ ಧೋರಣೆ, ಶ್ರೀ ಮೇನನರು ಅದಕ್ಕೆ ಕೊಡುವ ಸಹಕಾರ ಇವುಗಳಿಂದಲೇ ಹೀಗೆ ಮಾಡಲಾಯಿತೆಂದು ಆಗಲೇ ಊಹಿಸಲಾಗಿತ್ತು. ಆದರೆ ಶ್ರೀ ಮೇನನರು ಈ ಕುರಿತು ಪಕ್ಷದ ಮೂಲಸ್ಥಾನಕ್ಕೆ ಬರೆದರು. ಅವರಿಗೆ ಸಿಕ್ಕಿದ ಉತ್ತರವೂ ಮೊದಲಿನ ಅಭಿಪ್ರಾಯವನ್ನೇ ರುಜುಗೊಳಿಸಿದೆ. ಮೆಂಚೆಸ್ಟರ್ ಗಾರ್ಡಿಯನ್‌ನಂತಹ ಪತ್ರಿಕೆಯೂ ಇದರಿಂದ, ಭಾರತದ ಕುರಿತು ಕೂಲಿಗಾರ ಪಕ್ಷವು ವಹಿಸಿದ ಧೋರಣವನ್ನು ಖಂಡಿಸುವಂತಾಗಿದೆ. ಅವರಿಗೆ ಸಿಕ್ಕಿದ ಉತ್ತರದಲ್ಲಿ 'ಭಾರತದ ಕುರಿತು ನಿಮ್ಮ ಅಭಿಪ್ರಾಯವು ಹೀಗಾಗಿರುವುದರಿಂದ, ನೀವು ಪಕ್ಷನೀತಿಗೆ ಸರಿಯಾಗಿ ನಡೆಯುವಿರೆಂದು ನಾವು ವಿಶ್ವಾಸವಿಡಲಾಗುವುದಿಲ್ಲವೆಂ'ದಿದೆ.

ಯಾವ ಕೂಲಿಗಾರ ಪಕ್ಷವು ಹಿಂದೆ, ಭಾರತಕ್ಕೆ ಸ್ವತಂತ್ರಭರಣವನ್ನು ಕೊಡಬೇಕೆಂದು ನಿರ್ಣಯ ಮಾಡಿತ್ತೋ ಆ ಪಕ್ಷದಿಂದಲೇ ಈ ಉತ್ತರ! ಯಾವ ಪಕ್ಷದ ನಿರ್ಣಯದಂತೆಯೇ ಶ್ರೀ ಮೇನರು ಪುನಃಪೂರ್ವಕ ಚಟುವಟಿಕೆ ನಡೆಸಿದರೋ ಅದಕ್ಕಾಗಿ ಈ ಶಿಕ್ಷೆ! ಯಾವ ಪಕ್ಷವು ಅಂತರ್‌ರಾಷ್ಟ್ರೀಯ ಸಮಾಜಸಮಾನಾಧಿಕಾರವನ್ನು ಬಯಸುತ್ತದೋ ಆ ಪಕ್ಷದ ನಿರ್ಧಾರವಿದು! ಭಾರತದ ಕುರಿತು ಬ್ರಿಟಿಷ್ ಕೂಲಿಗಾರ ಪಕ್ಷವು ಈಗ ಇಂತಹ ಧೋರಣೆ ವಹಿಸಿರುವುದು ನಿಜವಾಗಿಯೂ ನಿರಾಶಾಜನಕವಾಗಿದೆ.

ಭಾರತ ಮುಂದಾಳುಗಳನ್ನು ಸೆರೆಮನೆಗೆ ಸೇರಿಸಿ-
ಯುದ್ಧದಲ್ಲಿ ಗೆಲ್ಲಲು ಬಹಳ ಭಾಗ್ಯಬೇಕು.

ರಾಜಾಜಿಯವರ ಸೂಚನೆ ತಿರಸ್ಕರಿಸಬಾರದಿತ್ತು!

— ಎಡ್ವರ್ಡ್ ಥಾಮ್ಸನರ ಅಮೂಲ್ಯ ಲೇಖನ —

"ಕಾಂಗ್ರೆಸು ಅಖಿಲ ಭಾರತದ ಪ್ರತಿನಿಧಿ ಸಂಸ್ಥೆಯಲ್ಲವೆಂದು ನಮಗೆ ಅನೇಕ ಸಲ ಹೇಳಲಾಗಿದೆ. ನೆಹರುಗಳು ಹೇಳಿದಂತೆ, ಕಾಂಗ್ರೆಸು, ಯಾರು ಅದನ್ನು ವಿರೋಧಿಸುತ್ತಾರೋ, ಅಂಥವರ ಪ್ರತಿನಿಧಿ ಸಂಸ್ಥೆಯಲ್ಲವೆಂಬುದು ಖಂಡಿತ. ಹಾಗಾದರೆ ಇಡೀ ಬ್ರಿಟನಿಗೆ ಮತ್ತು ಇಡೀ ಅಮೇರಿಕಕ್ಕೇ ಯಾವ ಒಂದೇ ಪಕ್ಷವು ಪ್ರತಿನಿಧಿಯಾಗಿದೆ? ಈಗ ಒಂದು ಚುನಾವಣೆ ನಡೆದ ಪಕ್ಷದಲ್ಲಿ, ಈಗ ಹೌಸ್ ಆಫ್ ಕಾಮನ್ಸಿನಲ್ಲಿರುವ ಪ್ರತಿಯೊಬ್ಬ ಸದಸ್ಯನೂ ಸದಸ್ಯನಾಗಿಯೇ ಉಳಿದಾನೆಂದು ನಿಶ್ಚಯವಾಗಿ ಹೇಳಬಹುದೆ?"

ಹೀಗೆಂದು 'ಟೈಮ್ ಎಂಡ್ ಟೈಡ್' ಪತ್ರಿಕೆಯಲ್ಲಿ ಪ್ರಸಿದ್ಧ ಬ್ರಿಟಿಷ್ ಗ್ರಂಥಕರ್ತರಾದ ಎಡ್ವರ್ಡ್ ಥಾಮ್ಸನರವರು ಬರೆಯುತ್ತಾರೆ. ಅವರು ಆ ಲೇಖನದಲ್ಲಿ ಮತ್ತೆ ಹೀಗೆಂದಿರುವರು:

"ನಾವು ಭಾರತದ ನಿಜವಾದ ಧುರೀಣರಾಗಿರುವ ಅನೇಕ ಮಂದಿ ಮಹಿಳೆಯರನ್ನೂ ಮಹನೀಯರನ್ನೂ ಸೆರೆಮನೆಯೊಳಗೆ ಸೇರಿಸುತ್ತಾ, ನಮ್ಮ ಇಂದಿನ ಪರೀಕ್ಷೆಯ ಯುದ್ಧವನ್ನು ಮುಂದುವರಿಸುತ್ತಿದ್ದಲ್ಲಿ, ನಮಗೆ ದೇವರು ಒದಗಿಸಬಹುದಾದ ಭಾಗ್ಯಕ್ಕಿಂತ ಹೆಚ್ಚಿನ ಭಾಗ್ಯವೇ ಯುದ್ಧದಲ್ಲಿ ಯಶಸ್ವಿಗಳಾಗಲು ಬೇಕಾಗಬಹುದು.

ಅಲ್ಪಸಂಖ್ಯಾಕರು ಮತ್ತು ರಾಜರು

"ಭಾರತದಲ್ಲಿರುವ ಅಲ್ಪ ಸಂಖ್ಯಾಕರ ವಿಷಯವಾಗಿ ನಾವು ಆಕ್ಷೇಪವೆತ್ತುತ್ತೇವೆ. ರಾಜರನ್ನು ಒಂದು ಶತಮಾನದಿಂದ ಬಹಳ ಒಳ್ಳೆಯ ರೀತಿಯಿಂದಲೇ ನಡೆಸಲಾಗಿದೆ (ಅವರ ಪ್ರಜೆಗಳನ್ನು ಹಾಗಲ್ಲ) ಕೊನೆಗೆ ಸಾಮಂತ ಸ್ವರಾಜ್ಯವು ಏರ್ಪಟ್ಟರೂ ಅವರು ತಮ್ಮನ್ನು ಚೆನ್ನಾಗಿ ನೋಡಿಕೊಳ್ಳುವಷ್ಟು ಸಾಮರ್ಥ್ಯ ಹೊಂದಿರುವರು. ಅಸ್ಪೃಶ್ಯರ ಕುರಿತು ನಾವು ಇದಕ್ಕಿಂತ ಹಿಂದೆ ಬಹಳ ಸ್ವಲ್ಪ ಮಾತ್ರ ಕೆಲಸ ಮಾಡಿರುತ್ತೇವೆ.

"ಮುಸ್ಲಿಂ ಲೀಗಾದರೂ ಕಾಂಗ್ರೆಸಿನಂತೆಯೇ, ತನ್ನ ಧ್ಯೇಯವು ಸಂಪೂರ್ಣ ಸ್ವಾತಂತ್ರ್ಯವೆಂದು ಅಧಿಕಾರಯುತವಾಗಿ ಸಾರುತ್ತದೆ. ಅದು ಈಗ ಮಾತ್ರ ಭಾರತವನ್ನು ಎರಡು ಭಾಗಮಾಡಿ, ಪ್ರತ್ಯೇಕ ಒಂದು ಮುಸ್ಲಿಂ ರಾಜ್ಯವನ್ನೇ ಮಾಡಬೇಕೆಂದು ಹೇಳುತ್ತಿದೆ. ಕಳೆದ ಗತಕಾಲದ ಚುನಾವಣೆಯಲ್ಲಿ ಮುಸ್ಲಿಂ ಪ್ರಾಂತಗಳಾದ ಸಿಂಧ ಮತ್ತು ಗಡಿನಾಡುಗಳಲ್ಲಿ ಒಂದೇ ಒಂದು ಸ್ಥಾನವು ಮುಸ್ಲಿಂ ಲೀಗಿಗೆ ದೊರಕಲಿಲ್ಲ. ಪಂಜಾಬಿನಲ್ಲಿ ಮಾತ್ರ ಒಂದು ಸ್ಥಾನವು ಸಿಕ್ಕಿತು. ಅದರ ಪ್ರಧಾನ ಮಂತ್ರಿಗಳಾದ ಮುಸ್ಲಿಮರೇ ಯುದ್ಧದ ನಂತರ ಭಾರತಕ್ಕೆ ಸಾಮಂತ ಸ್ವರಾಜ್ಯ ದೊರಕುವುದೆಂದು ಸಾರುತಿದ್ದಾರೆ.

ರಾಜಾಜಿಯವರ ಸೂಚನೆ

'ಇಂದಾದರೂ ಮನಮಾಡಿದರೆ, ಕಾಂಗ್ರೆಸು ಬ್ರಿಟಿಷ್ ಸರಕಾರದೊಡನೆ ನ್ಯಾಯವಾದ ಒಪ್ಪಂದಕ್ಕೆ ಸಿದ್ಧವೇ ಆಗಿರುತ್ತದೆ. ಮದ್ರಾಸಿನ ಮಾಜಿ ಪ್ರಧಾನ ಮಂತ್ರಿಗಳಾದ ರಾಜಾಜಿಯವರೇ, ಸರಕಾರವು ರಾಷ್ಟ್ರೀಯ ಸರಕಾರವನ್ನು ಕೇಂದ್ರದಲ್ಲಿ ಸ್ಥಾಪಿಸಲು ಒಪ್ಪುವಂಥ ಪಕ್ಷದಲ್ಲಿ ತನ್ನ ವರ್ಕಿಂಗ್ ಕಮಿಟಿಯ ಗೆಳೆಯರನ್ನು ಆ ರಾಷ್ಟ್ರೀಯ ಸರಕಾರಕ್ಕೆ ಮುಸ್ಲಿಂ ಪ್ರಧಾನ ಮಂತ್ರಿಗಳನ್ನಾಗಿ ಮಾಡಲು ತಾನು ಒಪ್ಪಿಸುವೆನೆಂದೂ, ಆ ಪ್ರಧಾನ ಮಂತ್ರಿಗಳೇ ತನಗೆ ಯೋಗ್ಯರೆಂದು ಕಂಡುಬಂದವರನ್ನು ಮಂತ್ರಿಮಂಡಳದಲ್ಲಿ ಆರಿಸಬಹುದೆಂದೂ ಸರಕಾರಕ್ಕೆ ಹೇಳಿಕಳುಹಿಸುತ್ತಿದ್ದರು. ನಿಜವಾಗಿಯೂ ಅದು ಬಹಳ ಉದಾತ್ತವಾದ ಸೂಚನೆಯಾಗಿತ್ತು.

ಕೂಲಿಗಾರರ ಪಕ್ಷ

'ಈಗಾದರೂ ಬ್ರಿಟಿಷ್ ಕೂಲಿಗಾರರ ಪಕ್ಷವು ಏನು ಮಾಡುತ್ತಿದೆ? ಅದು ವಿರೋಧ ಪಕ್ಷದಲ್ಲಿದ್ದಾಗ, ಭಾರತದ ಹಿತಕರವಾಗಿ ಕೆಲಸಮಾಡುವೆನೆಂದು ಸಾರುತ್ತಿತ್ತು. ಇಂದು ಅದು ಅಧಿಕಾರ ಸ್ಥಾನಕ್ಕೇರಿದೆ. ಭಾರತದ ವಿಷಯವಾಗಿ ಏನೂ ಮಾಡುವಂತೆ ಕಂಡುಬರುವುದಿಲ್ಲ. ಈ ಯುದ್ಧವನ್ನು ಆದಷ್ಟು ಬೇಗನೇ ಆದಷ್ಟು ನಷ್ಟವಿಲ್ಲದೆಯೇ ಯಾಕೆ ಗೆಲ್ಲುವಂತೆ ಮಾಡಬಾರದು? ಭಾರತವನ್ನು ನಮ್ಮ ಮಿತ್ರರಾಷ್ಟ್ರವಾಗಿ ಹತ್ತಿರ ತನ್ನಿರಿ. ನಮ್ಮ ಇಡೀ ಕಾರ್ಯವನ್ನು ಇನ್ನಷ್ಟು ಉದಾತ್ತಧ್ಯೇಯದಿಂದ ಹಿಡಿದೆತ್ತಿರಿ. ಒಂದೋ ಈ ಯುದ್ಧವು ಸಾಮ್ರಾಜ್ಯವನ್ನು ಧ್ವಂಸಗೊಳಿಸಬೇಕು. ಇಲ್ಲವೇ ಇದರಿಂದ ಸಾಮ್ರಾಜ್ಯವು ಮೊದಲಿಗಿಂತಲೂ ಬಲಗೊಳ್ಳಬೇಕು.'

ಹೀಗೆಂದು ಅವರು ಬ್ರಿಟಿಷ್ ಸರಕಾರವು ಭಾರತದೆಡೆಗೆ ತೋರುವ ನಿರ್ಲಕ್ಷ್ಯಕ್ಕಾಗಿ ಕಟುತರದಿಂದ ಟೀಕೆ ಮಾಡಿರುವರು.—

ಸತ್ಯಾಗ್ರಹಿಗಳಿಗೆ ಸೂಚನೆಗಳು!

ಮಹಾದೇವ ದೇಸಾಯಿಯವರಿಂದ

ಸತ್ಯಾಗ್ರಹದ ದ್ವಿತೀಯಾಂಕವು ಇಂದು ಭರದಿಂದ ನಡೆಯುತ್ತಿದೆ. ಮೊದಲನೆಯ ಅಂಕವೆಂದರೆ ವರ್ಕಿಂಗ್ ಕಮಿಟಿ ಸದಸ್ಯರು, ಅಖಿಲಭಾರತ ಕಾಂಗ್ರೆಸು ಕಮಿಟಿ ಸದಸ್ಯರು ಇವರು ಮಾಡಿದ ಸತ್ಯಾಗ್ರಹ. ಈಗ ಪ್ರಾಂತಿಕ ಕಾಂಗ್ರೆಸ್ ಸಂಸ್ಥೆಯಿಂದ ಗ್ರಾಮ ಕಾಂಗ್ರೆಸ್ ಸಂಸ್ಥೆಗಳ ವರೆಗಿನ ಅಧಿಕಾರೀ ಮಂಡಳದವರ ಸತ್ಯಾಗ್ರಹವು ಪ್ರಾರಂಭವಾಗಿದೆ. ದೇಶ ಸರ್ವತ್ರ ಸ್ವಾತಂತ್ರ್ಯ ಸಂಗ್ರಾಮದ ಈ ಉದ್ವೇಗವು ದಿನದಿಂದ ದಿನಕ್ಕೆ ಹೆಚ್ಚುತ್ತಾ ಇದೆ.

ಈ ಕುರಿತು ಮಹಾದೇವ ದೇಸಾಯಿಗಳು ಒಂದು ಲೇಖನವನ್ನು ಬರೆದಿರುವರು. ಅವರು ತಮ್ಮ ಲೇಖನದಲ್ಲಿ ಹೀಗೆಂದು ಅಭಿಪ್ರಾಯಪಟ್ಟಿರುತ್ತಾರೆ.

"ಸತ್ಯಾಗ್ರಹಿಗಳನ್ನು ಚುನಾಯಿಸಲಿಕ್ಕಾಗಿ ಮಹಾತ್ಮರ ಸಮ್ಮತಿಯನ್ನು ಕೇಳಲು ಬಂದವರನ್ನು ಗಾಂಧಿಜಿ ವಿವರ ವಿವರವಾಗಿ ಪ್ರಶ್ನಿಸಿದರು. ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ವಿಚಾರ ಮಾಡಿ ತಿಳಿದುಕೊಂಡರು. ನೂಲುತೆಗೆಯುವುದೇ ಮೊದಲಾದ ರಚನಾತ್ಮಕ ಕಾರ್ಯಗಳಲ್ಲಿಯೂ, ಅಹಿಂಸಾ ತತ್ವದಲ್ಲಿ ವಿಶ್ವಾಸವಿರುವ ವಿಷಯದಲ್ಲಿಯೂ ಅವರನ್ನು ಪರೀಕ್ಷಿಸಿದರು. ಮಾತ್ರವಲ್ಲದೆ ಸತ್ಯಾಗ್ರಹಿಗಳು ಈ ತತ್ವಗಳನ್ನು ಪಾಲಿಸುವರೇ ಎಂಬ ವಿಷಯವಾಗಿ ಗ್ರಾಮ ಗ್ರಾಮಾಂತರಗಳಿಗೆ ಹೋಗಿ ತಿಳಿಕೊಳ್ಳಬೇಕಾಗಿದೆಯೆಂದರು. ಸತ್ಯಾಗ್ರಹಿಗಳು ಈ ನಿಯಮಗಳನ್ನು ಸರಿಯಾಗಿ ಪಾಲಿಸದೆ ಮುಂದೆ ಬರಲಾರರೆಂದು ಹೇಳುವುದು ಸಾಧ್ಯವಿಲ್ಲ. ಆದರೆ ಪ್ರತಿಯೊಬ್ಬರು ತಮ್ಮ ಅಂತಸ್ಸಾಕ್ಷಿಯನ್ನು ವಂಚಿಸುವುದು ಅಸಾಧ್ಯವಾಗಿರುತ್ತದೆ.

'ಈ ಮೊದಲು ಸೆರೆಮನೆ ಸೇರಿದವರು ಸತ್ಯಾಗ್ರಹ ತತ್ವಗಳನ್ನು ನಿಷ್ಠೆಯಿಂದ ಪಾಲಿಸುತ್ತಿರುವರು. ಸರದಾರ ಪಟೇಲರು ಮೇಲ್ ಪ್ರಭೃತಿಗಳೊಡನೆ ಒಂದು ಚರಕಾ ಸಂಘವನ್ನು ಸ್ಥಾಪಿಸಿ ನೂಲು ತೆಗೆಯುತ್ತಾರೆ. ಎರವಾಡದಲ್ಲಿರುವ ಮಹಿಳಾ ಸತ್ಯಾಗ್ರಹಿಗಳು ನೂಲುವುದರಲ್ಲಿಯೇ ಹೆಚ್ಚಿನ ಕಾಲವನ್ನು ಕಳೆಯುತ್ತಿದ್ದಾರೆ. ಸಬರ್ಮತಿ ಸೆರೆಮನೆಯಲ್ಲಿರುವ 'ಮಣಿಬೆನ್' ಪಟೇಲರೇ ಮೊದಲಾದವರೂ ಅದೇ ಕೆಲಸದಲ್ಲಿರುವರು. ನಾಗಪುರದಲ್ಲಿರುವ ವಿನೋಬಾ ಬಾವೆ (ಈಗ ಅವರು ಬಿಡುಗಡೆಯಾಗಿದ್ದು ತಿರುಗಿ ಸತ್ಯಾಗ್ರಹ ಹೂಡಿದ್ದಾರೆ.) ನೂಲುವ ಅಧ್ಯಾಪಕರೇ ಆಗಿರುವರು. ಗೀತಾಪ್ರವಚನವೇ ಮೊದಲಾದ ಉಪನ್ಯಾಸಗಳನ್ನೂ ಕೊಡುತ್ತಾರೆ. ಪಂಡಿತ ನೆಹರುಗಳು ಸ್ವಲ್ಪ ಸಮಯವನ್ನೂ ವ್ಯರ್ಥಗೊಳಿಸುವುದಿಲ್ಲ.

'ದಕ್ಷಿಣ ಭಾರತದ ಸೆರೆಮನೆಗಳ ವಿಷಯವಾಗಿ ವಿವರವು ತಿಳಿದಿಲ್ಲವಾದರೂ ರಾಜಾಜಿಯವರ ಕೈಕೆಳಗೆ ಅವರೆಲ್ಲರೂ ರಚನಾತ್ಮಕ ಕಾರ್ಯಗಳಲ್ಲಿಯೇ ಮಗ್ನರಾಗಿರುವರೆಂದು ನಾನು ಭರವಸೆಯಿಂದಿರುವೆನು.

'ತಮ್ಮ ಮುಂದಾಳುಗಳನ್ನು ಜಯಘೋಷದಿಂದ ಸೆರೆಮನೆಗೆ ಕಳುಹಿಸಿದ ಸಾರ್ವಜನಿಕರು, ಅವರಿಗೆ ಸಲಿಸುವ ಮನ್ನಣೆಯೆಂದರೆ ತಾವು ರಚನಾತ್ಮಕ ಕಾರ್ಯಗಳಲ್ಲಿ ವಿಶೇಷ ಆಸಕ್ತಿವಹಿಸುದುಡಿವುದಾಗಿದೆ."

ಕೊಳ್ಳಿರಿ ಡಿಫೆನ್ಸ್

ಸೇವಿಂಗ್ ಸ್ಟಾಂಪ್‌ಗಳನ್ನು ಮತ್ತು ಹಣಗಳಿಸಿರಿ

೪ ಆಣೆ, ೮ ಆಣೆ, ಮತ್ತು ೧ ರೂಪಾಯಿ ಬೆಲೆಯ ಸೇವಿಂಗ್ಸ್ ಸ್ಟಾಂಪುಗಳು ಪೋಸ್ಟಾಫೀಸಿನಲ್ಲಿ ಮಾರಾಟಕ್ಕಿವೆ. ನೀವು ಅವನ್ನು ಕೊಂಡಂತೆಲ್ಲಾ ಅವನ್ನು ಪೋಸ್ಟಾಫೀಸುಗಳಲ್ಲಿ ಉಚಿತವಾಗಿ ಕೊಡುವ ಸೇವಿಂಗ್ಸ್ ಸ್ಟಾಂಪ್ಸ್ ಕಾರ್ಡಿಗೆ ಅಂಟಿಸಿರಿ. ಆ ಕಾರ್ಡಿನ ಮೇಲೆ ೧೦ ರೂಪಾಯಿ ಬೆಲೆ ಬಾಳುವ ಸ್ಟಾಂಪುಗಳನ್ನು ಅಂಟಿಸಿದ ಮೇಲೆ ಅದನ್ನು ಪೋಸ್ಟಾಫೀಸಿನಲ್ಲಿ ಕೊಟ್ಟು ಅದಕ್ಕೆ ಬದಲಾಗಿ ಒಂದು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟನ್ನು ತೆಗೆದುಕೊಳ್ಳಿ. ಅದು ನಿಮಗೆ ಹಣವನ್ನು ಗಳಿಸಿ ಕೊಡುವುದು.

[illegible] ೧೦ ರೂಪಾಯಿ ೧೦ ವರ್ಷಗಳಲ್ಲಿ ರೂ. ೧೫ ಅನ್ನು ಗಳಿಸುತ್ತದೆ.

ಇಂದೇ ನಿಮ್ಮ ಸೇವಿಂಗ್ಸ್ ಕಾರ್ಡನ್ನು ತೆಗೆದುಕೊಂಡು ಬನ್ನಿ!

ಅಂದವಾದ ಮುದ್ರಣವಾಗಬೇಕೆ?
ಹಾಗಾದರೆ
ಶಾರದಾ ಛಾಪಖಾನೆ
ಯವರಲ್ಲಿ ವಿಚಾರಿಸಿರಿ!

೧೯೪೧ರಲ್ಲಿ ಬ್ರಿಟಿಷರು ಬಲಶಾಲಿಗಳಾಗುವರೆ?

ಬ್ರಿಟಿಷ್ ಪ್ರಧಾನರು ಧೈರ್ಯಗೊಂಡಿದ್ದಾರೆ

ಗಂಡಾಂತರ ಬಂದರೂ ಜಯವು ಖಂಡಿತವಂತೆ!

ಚರ್ಚಿಲ್ಲರ ಸ್ಫೂರ್ತಿಯ ಭಾಷಣ!

"ವಿಶೇಷ ವಿಪತ್ತುಗಳಿಲ್ಲದೆ, ಕಷ್ಟನಷ್ಟಗಳೊದಗದೆ ನಮಗೆ ಜಯ ದೊರಕುವುದೆಂದು ನಾನು ನಿಮಗೆ ಭರವಸೆ ಕೊಡಲಾರೆನು. ಯಾಕೆಂದರೆ ನಮಗೆ ಇನ್ನೂ ಅನೇಕ ಸಂಕಷ್ಟಗಳಾಗಲಿವೆ. ಆದರೆ ಈ ಯುದ್ಧದಲ್ಲಿ ಕೊನೆಗೆ ನಮಗೇ ಜಯವಾಗುವುದೆಂಬ ಮಾತನ್ನು ಮಾತ್ರ ನೀವು ಮರೆಯಬೇಡಿರಿ." ಎಂದು ಮುಖ್ಯ ಮಂತ್ರಿ ಚರ್ಚಿಲ್ಲರು ಈ ವಾರ ಒಂದು ಸಭೆಯಲ್ಲಿ ಭಾಷಣ ಮಾಡುತ್ತಾ ಹೇಳಿದರು.

ಅವರ ಭಾಷಣದ ಸಾರಾಂಶವು ಹೀಗಿದೆ:—

'ನಮ್ಮ ಮೇಲೆ ಇನ್ನೂ ಭಯಂಕರವಾದ ಗಂಡಾಂತರಗಳು ಬರಲಿವೆ. ಅವುಗಳಿಂದ ಪಾರಾಗಲು ನಾವು ಸಿದ್ಧರಾಗಬೇಕು. ಇಲ್ಲದಿದ್ದರೆ ನಾವು ಸಾಯುವೆವು. ನಮ್ಮ ಅಧೋಗತಿಯಾಗುವದು. ನಮ್ಮ ಹಳ್ಳಿ ಪಟ್ಟಣಗಳ ಮೇಲೆ ವೈರಿಗಳು ಬಾಂಬುಗಳನ್ನು ಸುರಿಸುತ್ತಿದ್ದಾರೆ. ಕೈಗಾರಿಕೆಯ ಪ್ರದೇಶಗಳನ್ನು ಹಾಳುಮಾಡುತ್ತಿದ್ದಾರೆ. ಹೀಗಿದ್ದರೂ ಅವರನ್ನು ಎದುರಿಸಿ ಹಿಂದಕ್ಕೋಡಿಸುವಷ್ಟು ಶಕ್ತಿ ನಮ್ಮಲ್ಲಿ ಸಾಕಷ್ಟು ಇಲ್ಲ. ಆ ಶಕ್ತಿ ಬರಲು ಇನ್ನೂ ಕೆಲವು ದಿನ ಬೇಕಾಗಬಹುದು. ಇದ್ದ ಸಂಗತಿಯನ್ನು ನಾನು ಇದ್ದಂತೆ ಹೇಳುವವನು. ನಮ್ಮ ಹಾದಿ ಸುಗಮವಾಗಿರುವದೆಂದು ಅಥವಾ ನಮಗೆ ಈ ವರ್ಷ ಏನೇನೂ ಕಷ್ಟವಾಗುವುದಿಲ್ಲವೆಂದು ಹೇಳಿ ನಿಮಗೆ ಒಣ ಆಶೆ ಹುಟ್ಟಿಸಲಾರೆನು.

ಆದರೆ ಈ ಹೋರಾಟದ ಪರಿಣಾಮದ ಬಗ್ಗೆ ಮಾತ್ರ ಸ್ವಲ್ಪವೂ ಸಂದೇಹವಿಲ್ಲ. ಇಲ್ಲಿಯ ಪರಿಸ್ಥಿತಿಯನ್ನು ಸ್ವತಃ ತಿಳಿದುಕೊಂಡು ಹೋಗುವುದಕ್ಕಾಗಿ ಅಮೇರಿಕೆಯಿಂದ ಹಾಪಕಿನ್ಸರು ಬಂದಿದ್ದಾರೆ. ಅವರು ಈಗ ಇದೇ ಸಭೆಯಲ್ಲಿದ್ದಾರೆ. ಅವರು ಇಷ್ಟರಲ್ಲಿಯೇ ಅಮೇರಿಕೆಗೆ ಹಿಂತಿರುಗಿ ಹೋಗಿ ರೂಸ್‌ವೆಲ್ಟರಿಗೆ ಎಲ್ಲ ಸಂಗತಿಯನ್ನು ತಿಳಿಸುತ್ತಾರೆ.

'೧೯೪೧ರಲ್ಲಿ ನಮಗೆ ಪರದೇಶಗಳಿಂದ ಸೈನ್ಯ ಸಹಾಯ ವಿಶೇಷ ಬೇಕಾಗಿಲ್ಲ. ನಮಗೆ ಯುದ್ಧಾಸ್ತ್ರಗಳು, ಹಡಗುಗಳು ಮತ್ತು ವಿಮಾನಗಳು ಬೇಕು. ಇವನ್ನೆಲ್ಲ ಕೊಂಡುಕೊಳ್ಳಲು ಈಗ ನಮ್ಮಲ್ಲಿ ಸಾಕಷ್ಟು ಹಣವಿಲ್ಲ. ಶಕ್ಯವಿರುವಷ್ಟು ಸಾಮಾನುಗಳಿಗೆ ಹಣ ಕೊಡುತ್ತೇವೆ. ಆದರೆ ಅಷ್ಟರಿಂದ ನಮ್ಮ ಕೆಲಸ ಸಾಗದು. ಇನ್ನೂ ಹೆಚ್ಚು ಬೇಕು. ಅವನ್ನು ಕೊಡಲು ನಮ್ಮ ಮಿತ್ರರಾದ ಅಮೇರಿಕನರು ಮುಂದೆ ಬಂದಿರುವದನ್ನು ನೋಡಿ ನಮಗೆ ತುಂಬಾ ಆನಂದವಾಗಿದೆ.'

ಬಳಿಕ ಚರ್ಚಿಲ್ಲರು ಲಿಬಿಯ ಮೊದಲಾದ ಕಡೆಗಳಲ್ಲಿ ಬ್ರಿಟಿಷರಿಗಾದ ವಿಜಯ ಪರಂಪರೆಯನ್ನು ವರ್ಣಿಸಿ ೧೯೪೧ರಲ್ಲಿ ಬರಬಹುದಾದ ಗಂಡಾಂತರಗಳನ್ನು ಬ್ರಿಟನು ಎದುರಿಸಬಹುದೆಂದು ಹೇಳಿದರು.

ಮುಂದುವರಿಸಿ ಹೀಗೆಂದರು:

'ಇನ್ನೂ ನಮ್ಮಲ್ಲಿ ಸಾಕಷ್ಟು ಶಸ್ತ್ರಾಸ್ತ್ರಗಳಿಲ್ಲವೆಂಬುದು ನಿಜ. ೧೯೪೧ನೆಯ ಇಸವಿ ಮುಗಿಯುವ ಹೊತ್ತಿಗೆ ನಾವು ಸಂಪೂರ್ಣ ಪ್ರಬಲರಾಗುವೆವು. ಆಗ ಯುದ್ಧವು ಎರಡು ಸರಿಸಮಾನ ರಾಷ್ಟ್ರಗಳ ನಡುವಿನಂತೆ ನಡೆಯುವುದು.

"ಸದ್ಯಕ್ಕೆ ನಮ್ಮಲ್ಲಿ ಅತ್ಯಂತ ಪ್ರಬಲವಾದ ಒಂದು ಸೈನ್ಯವಿದೆ. ಕರಾವಳಿಯ ಸುತ್ತಲೂ ದುರ್ಗಮವಾದ ದುರ್ಗಗಳಿವೆ. ವೈರಿಯು ಬಂದ ಕೂಡಲೇ ಅವನನ್ನೆದುರಿಸುವದಕ್ಕಾಗಿ, ಆವಶ್ಯವಿರುವ ಎಲ್ಲ ಸಿದ್ಧತೆಗಳನ್ನೂ ನಾವು ಮಾಡಿದ್ದೇವೆ. ಹೀಗೆಂದ ಮಾತ್ರಕ್ಕೆ, ನಾವು ಇನ್ನು ಯೋಚನೆ ಮಾಡಬೇಕಾಗಿಲ್ಲವೆಂದು ಭಾವಿಸಬೇಡಿರಿ. ಈ ದ್ವೀಪದ ಮೇಲೆ ಧಾಳಿ ಮಾಡುವುದಕ್ಕೆ ಈಗೊಳ್ಳೆಯ ಸುಸಂಧಿ ಬಂದಿದೆ. ಇಂಥ ಸಮಯವನ್ನು ಆ ದುರುಳ ಹಿಟ್ಲರನು ಎಂದೂ ಬಿಟ್ಟುಕೊಡಲಾರನು. ಯುರೋಪಿನ ಬಹುಭಾಗಕ್ಕೆ ಇಂದು ಅವನು ಒಡೆಯನಾಗಿದ್ದಾನೆ. ಯುರೋಪ್ ಖಂಡದಲ್ಲಿ ಅವನ ಸೈನ್ಯಗಳು ಎಲ್ಲಿ ಬೇಕಾದಲ್ಲಿ ಸಂಚರಿಸಬಹುದು. ಆಸ್ಟ್ರಿಯಾ, ಝೆಕೋಸ್ಲೋವಾಕಿಯಾ, ಪೋಲೆಂಡ, ನಾರ್ವೆ, ಡೆನ್ಮಾರ್ಕ, ಹಾಲಂಡ, ಬೆಲ್ಜಿಯಮ್ ಫ್ರಾನ್ಸ ಮೊದಲಾದ ರಾಷ್ಟ್ರಗಳನ್ನು ವಶಮಾಡಿಕೊಂಡು ಅವರ ಜರ್ಮನರ ಬಗ್ಗೆ ಇಡೀ ಜಗತ್ತಿನ ಮನಸ್ಸನ್ನೇ ಕಲುಷಿತ ಕಲುಷಿತ ಮಾಡಿದ್ದಾನೆ. ಈ ಕೆಟ್ಟ ಹೆಸರು ಎಂದೆಂದಿಗೂ ಅಳಿಯದು.

"ಬ್ರಿಟಿಶರನ್ನು ಬಗ್ಗುಬಡಿದು ಇಡೀ ಯುರೋಪ್ ಖಂಡವನ್ನೇ ದಾಸ್ಯಕೂಪದಲ್ಲಿ ತಳ್ಳಬೇಕೆಂದು ಹಿಟ್ಲರನು ಸಾಹಸಪಡುತ್ತಿದ್ದಾನೆ. ಆದರೆ ಹಾಗಾಗುವುದು ಎಂದಿಗೂ ಶಕ್ಯವಿಲ್ಲ. ಅವನ ಬೆದರಿಕೆಗೆ ನಾವೆಂದಿಗೂ ಬಗ್ಗುವುದಿಲ್ಲ. ಈ ದ್ವೀಪದ ಮೇಲೆ ದಾಳಿ ಮಾಡಬೇಕೆಂದು ಹಿಟ್ಲರನು ಕಳೆದ ಜುಲೈ ತಿಂಗಳಲ್ಲಿಯೇ ಯೋಚಿಸಿದ್ದನು. ಆದರೆ ಆಗ ಅದು ಸಾಧ್ಯವಾಗಲಿಲ್ಲ. ಸಪ್ಟಂಬರದಲ್ಲಿ ಮತ್ತೆ ಕೆಲವು ತೊಡಕುಗಳು ಬಂದವು. ಈಗ ಅವು ಮತ್ತಷ್ಟು ಹೆಚ್ಚಾಗಿವೆ. ಫೆಬ್ರವರಿ, ಮಾರ್ಚ ಅಥವಾ ಎಪ್ರಿಲ ತಿಂಗಳಲ್ಲಿ ಅವನು ನಮ್ಮ ಮೇಲೆ ಧಾಳಿ ಮಾಡಿದರೆ, ಅನಂತರ ಕಷ್ಟಗಳಿಗೊಳಗಾಗಬೇಕಾಗುವದು. ಆದರೆ ನಾವು ಮಾತ್ರ ಸದಾ ಎಚ್ಚರಿಕೆಯಿಂದಿರಬೇಕು.

ಬ್ರಿಟನಿನಲ್ಲಿ ಹೊಸ ತರದ ವಿಮಾನಗಳು

ಲೋರ್ಡ ಬೀವರ್ ಬ್ರೂಕರವರ ಅಭಿಪ್ರಾಯದಂತೆ, ಬ್ರಿಟನಿನೊಳಗಿನ ಪ್ರತ್ಯೊಬ್ಬ ವೈಮಾನಿಕನಿಗೆ ಒಂದೊಂದು ವಿಮಾನವನ್ನು ಕೊಟ್ಟರೂ, ಇನ್ನೂ ಅಲ್ಲಿ ವಿಮಾನಗಳು ಉಳಿಯುತ್ತವೆ. ಒಂದು ವರ್ಷದಿಂದ ಬ್ರಿಟನಿನ ಮೇಲೆ ಜರ್ಮನಿಯ ದಾಳಿಯಾಗುತ್ತದೆಯಾದರೂ, ಅವುಗಳಿಂದ ವಿಮಾನ ಕೈಗಾರಿಕೆಗೆ ಯಾವ ಕೊರತೆಯೂ ಉಂಟಾಗಿಲ್ಲ, ಎಂಬುದರಿಂದ ಬ್ರಿಟಿಷರ ವೈಚಾರಿಕ ಶಕ್ತಿಯು ಎಷ್ಟು ಪ್ರಬಲವಾಗಿದೆ ಎಂಬುದು ತಿಳಿಯುತ್ತದೆ. ಈಗೀಗ ಅವರು ಹೊಸತರದ, ಯಾರೂ ಕಂಡು ಕೇಳಿ ಅರಿಯದ ವಿಮಾನಗಳನ್ನು ಕಂಡುಹಿಡಿದಿರುತ್ತಾರೆ.

THE PIE-MONEY BANK LTD.,
Maidan Road, MANGALORE.
Undertakes all kinds of Banking Business. Current account at 3½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public.
Apply for particulars—
K. R. GURU, *Managing Director*

U. K. BHUJANGA NAYAK
CLOTH COMMISSION AGENT
SHEVAPET, SALEM
ಯು. ಕೆ. ಭುಜಂಗ ನಾಯಕ್,
ಜವುಳಿ ದಲ್ಲಾಲ, ಶಿವಪೇಟೆ, ಸೇಲಂ.
ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.
ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

THE
Canara Banking Corporation Ltd.,
(INCORPORATED IN BRITISH INDIA)
Estd: 1906
Head Office: UDIPI, S. Kanara.
Our attractive Rates on Deposits.
FIXED DEPOSITS

3 to 6 months ……	2½% p. a.
6 to 9 ,, ……	3% ,,
One year ……	3½% ,,
Two years ……	4% ,,
SHORT TERM Deposits:	2½% p. a.
Current Account:	1% p. a.
Savings Bank:	2½% *

Particulars of other kinds of deposits on application.

ಈ ವಾರದ ಕತೆ:

ವಿಶ್ವಾಸಘಾತ!

ಅನುವಾದಕರು: ಕೆ. ಎಸ್. ಶೆಣೈ

'ಬಾದಶಾಹ ಸಲಾಂಮತ್!'

'ಏನು ಅಮರಸಿಂಹ?'

'ಜಹಾಂಪನಾಹ, ಕೆಲವು ದಿನಗಳ ರಜೆತೆಗೆದುಕೊಂಡು ಮನೆತನಕ ಹೋಗಿ ಬರಬೇಕೆಂದು ಬಹಳ ಆಸೆಯಾಗುತ್ತದೆ. ಅಪ್ಪಣೆಯಾದರೆ . . .'

'ನೋಡು, ಅಮರಸಿಂಹ; ಪದೇ ಪದೇ ರಜೆಯ ಮಾತನ್ನು ತೆಗೆಯಬಾರದು. ನೀನು ಒಂದು ದಿನವಾದರೂ ನನ್ನ ದರಬಾರಿನಲ್ಲಿ ಇಲ್ಲದಿರುವುದು, ರಾಜ್ಯಕ್ಕೆ ಬಹಳ ನಷ್ಟವಾಗುತ್ತದೆ; ನನಗೆ ಬಹಳ ದುಃಖವಾಗುವುದು.'

'ಜಹಾಂಪನಾಹ, ಅದು ಸರಿ; ಆದರೆ ಕೆಲವೇ ದಿನಗಳಾದರೂ ರಜೆಕೊಟ್ಟರೆ...'

'ಪುನಃ ಅದನ್ನೇ ಹೇಳುವಿ. ನಿನಗೆ ಮನೆಗೆ ಹೋಗಿ ಬರಲೇ ಬೇಕೆಂದು ಅಷ್ಟು ಹಟವಿರುವುದಾದರೆ, ಕೇಳು, ಏಳು ದಿನಗಳ ರಜೆ ಕೊಡುತ್ತೇನೆ. ಅಷ್ಟರೊಳಗೆ ಹೋಗಿಬರಬೇಕು. ಬಾರದಿದ್ದರೆ ಮುಂದೆ ಗೈರಹಾಜರಾದ ಪ್ರತಿಯೊಂದು ದಿನಕ್ಕೂ ಲಕ್ಷ ವರಹದಂತೆ ದಂಡ ಕೊಡಬೇಕು.'

'ಸರಿ ಒಪ್ಪಿಯದು.'

★

'ಬಾದಶಾಹ ಸಲಾಮತ್!'

'ಏನು, ಸಲಾಮತ್‌ಖಾನ್?'

'ಏಳು ದಿನಗಳ ರಜೆ ತೆಗೆದುಕೊಂಡು ಅಮರಸಿಂಹ ಹೋದ. ಇವತ್ತಿಗೆ ಹದಿನಾಲ್ಕು ದಿನಗಳಾದರೂ ಆತನು ಮರಳಲಿಲ್ಲ.'

'ಏನಾದರೂ ಜರೂರಿ ಕೆಲಸ ಇದ್ದಿರಬಹುದು; ಅದುದರಿಂದ ಮನೆಯಲ್ಲಿ ಉಳಕೊಂಡಿರಬಹುದು.'

'ಹಾಗಲ್ಲ, ಜಹಾಂಪನಾಹ! ಕೆಲಸದ ಏನೂ ಕಾರಣವಿಲ್ಲ. ಸುಮ್ಮಗೆ ಮನೆಯಲ್ಲಿ ಬಿದ್ದುಕೊಂಡು ಮಜಾ ಮಾಡುತ್ತಾನೆ. ಅಪ್ಪಣೆ ಆದರೆ ಈಗಲೇ ಹೋಗಿ ದಂಡದ ಹಣ ವಸೂಲು ಮಾಡುವೆನು.'

'ಕೂಡದು, ಸಲಾಮತ್. ಅಮರಸಿಂಹನು ಕಾರಣವಿಲ್ಲದೆ ಮನೆಯಲ್ಲಿ ಉಳಕೊಳ್ಳುವ ಮನುಷ್ಯನಲ್ಲ. ಅವನು ಆದಷ್ಟು ಬೇಗ ಬರಬೇಕೆಂದು ಜುರ್ಮಾನೆಯ ಬೆದರಿಕೆ ಹಾಕಿದ್ದೆ. ಅಷ್ಟೆ.'

'ಜಹಾಂಪನಾಹ. ಹೀಗಿದ್ದರೂ ಅವನನ್ನು ಸುಮ್ಮನೆ ಬಿಟ್ಟರೆ ತಲೆಮೇಲೆ ಏರಿ ಕುಳಿತಾನು.'

'ಸಲಾಮತ್. ಜುರುಮಾನೆ ವಸೂಲಿಗೆ ಹೋದರೆ ಅವನು ಏನು ಮಾಡುವನೆಂದು ತಿಳಿದಿದ್ದೀಯಾ? ಆ ವೀರ ರಾಠೋರನು ಯಾವ ಸಣ್ಣ ಅಪಮಾನವನ್ನಾದರೂ ತಲೆಬಗ್ಗಿಸಿ ಸಹಿಸಿಕೊಳ್ಳುವವನಲ್ಲ. ರಾಜಪುತ್ರರ ಗುಣ ಧರ್ಮ ನಿನಗೆ ತಿಳಿಯದು.'

'ಜಹಾಂಪನಾಹ, ಕೇವಲ ನನಗೆ ಅಪ್ಪಣೆ ಕೊಟ್ಟರಾದರೆ, ನಾನು ಎಷ್ಟು ಸುಲಭದಲ್ಲಿ ಜುರುಮಾನೆ ವಸೂಲು ಮಾಡುವೆನೆಂದು ತಾವು ನೋಡುವಿರಿ; ನೋಡಿ ಮುಗನ ಕುದಿಯಾ ಮೇಲೆ ಬರುವಿರಿ.'

'ಸರಿ, ಹಾಗಿದ್ದರೆ ಅಪ್ಪಣೆಕೊಟ್ಟೆ.'

'ತಾವು ನಿಶ್ಚಿಂತರಾಗಿರಿ. ನಾನು ಹೋಗಿ ಬರುತ್ತೇನೆ.'

★

'ಯಾರಲ್ಲಿ?'

'ಸ್ವಾಮಿ.'

'ಹೊರಗೆ ಏನು ಗಲಾಟೆ, ನೋಡಿಬಾ'

'ಸ್ವಾಮಿ, ಬಾದಶಾಹೀ ಸೇನೆಯು ಬಂದು ಮನೆಯನ್ನು ಮುತ್ತಿದೆ. ಸಲಾಮತ್‌ಖಾನನು ಜುಲುಮಾನೆ ವಸೂಲಿಗೆ ಬಂದಿದ್ದಾನಂತೆ.'

'ಏನು? ಸಲಾಮತನು ಜುಲುಮಾನೆ ವಸೂಲಿಗೆ ಬಂದಿದ್ದಾನೆಯೆ?'

'ಹೌದು, ಸ್ವಾಮಿ.'

'ಹಾಗಿದ್ದರೆ ಆ ನೀಚನಿಗೆ ಈಗಲೇ ಅದನ್ನು ಕೊಟ್ಟುಬರುತ್ತೇನೆ.'

ಸಿದ್ಧವಾದ ಕಠಾರಿಯನ್ನು ಹತ್ತಿ ಅಮರಸಿಂಹನು ಮನೆಯ ಹೆಬ್ಬಾಗಿಲಿಗೆ ಬಂದ. ಸಲಾಮತನು ಮುಂದೆ ಬಂದು ಬಾದಶಾಹನ ಅಪ್ಪಣೆಯನ್ನು ತಿಳಿಸಿದ. ಅದನ್ನು ಕೇಳಿ ಅಮರಸಿಂಹನ ಎರಡು ಕಣ್ಣುಗಳು ಧಗಧಗನೆ ಉರಿಯುತ್ತಿರುವ ಎರಡು ಬೆಂಕಿಯ ಕೆಂಡಗಳಂತಾದುವು. ಅವನ ಆ ರೌದ್ರಾವತಾರವನ್ನು ನೋಡಿಯೇ ಬಾದಶಾಹನ ಸೇನೆಯು ಹಿಮ್ಮೆಟ್ಟಿತು. ತಲವಾರಿನ ಹೊಡೆತಗಳಿಗೆ ನೂರಾರು ಮುಗಲರು ಬಲಿಯಾದರು. ಸಲಾಮತನು ಬದುಕಿ ಉಳಿದರೆ ಭಿಕ್ಷೆಬೇಡಿ ಬದುಕುವೆನೆಂದು ಪಲಾಯನ ಮಾಡಿದ. ದರಬಾರಿಗೆಹೋಗಿ ಬಾದಶಹನ ಹತ್ತಿರ ಕಿವಿಗಳನ್ನು ಚುಚ್ಚುತ್ತಿರುವಷ್ಟರಲ್ಲಿ ಬೆನ್ನಟ್ಟಿ ಬಂದ ಅಮರಸಿಂಹನ ತಲವಾರು ಅವನ ಕುತ್ತಿಗೆಯ ಮೇಲೆ ಬೀಸಿಯೇ ಬೀಸಿತು. ಸಲಾಮತನ ರುಂಡಮುಂಡಗಳು ಎರಡಾಗಿ ಭೂಮಿಯ ಮೇಲೆ ಉರುಳಿದುವು. ಅಮರಸಿಂಹನು ಹಿಂತಿರುಗಿದ.

★

ಬಾದಶಾಹನು ಸಿಟ್ಟಿನಿಂದ ಬೇಗಮಳ ಮಹಲಿಗೆ ಬಂದ. ಬೇಗಮಳು ಅವನನ್ನು ನೋಡಿ 'ಜಹಾಂಪನಾಹ, ಏನಾಯಿತು?' ಎಂದು ಗಾಬರಿಯಿಂದ ಕೇಳಿದಳು.

'ಏನೂ ಇಲ್ಲ, ನಿನ್ನ ತಮ್ಮ ಸಲಾಮತ್‌ಖಾನನು ಅಮರಸಿಂಹನಿಂದ ಕೊಲ್ಲಲ್ಪಟ್ಟಿದ್ದಾನೆ. ನಾನು ಬದುಕಿಬಂದುದೇ ಕಷ್ಟ' ಎಂದು ನಡೆದ ಎಲ್ಲಾ ಸಂಗತಿಗಳನ್ನು ಹೇಳಿದ.

'ಏನು? ನನ್ನ ತಮ್ಮನು ಕೊಲ್ಲಲ್ಪಟ್ಟನೆ?'

'ಹೌದು.'

'ಯಾರಿಂದ?'

'ಅಮರಸಿಂಹನಿಂದ'

'ಮತ್ತೆ ನೀವು ಬದುಕಿ ಬಂದಿರಾ? ಮೋರೆ ತೋರಿಸಲಿಕ್ಕೆ ಲಜ್ಜೆಯಾಗುವುದಿಲ್ಲವೆ?'

'ಈಗೇನು ಮಾಡಬಹುದು?'

'ಈಗೇನು ಮಾಡಬಹುದು! ಈ ಹತ್ಯೆಯ ಪ್ರತೀಕಾರ ತೆಗೆಯದ ಹೊರತು ನನಗೆ ಸಮಾಧಾನವಿಲ್ಲ. ನಾನು ವಿಷ ತೆಕ್ಕೊಂಡು ಸಾಯುವೆನು.'

'ಇಲ್ಲ, ನನ್ನ ಬೇಗಮ್! ನಿನಗಾಗಿ ಪ್ರತೀಕಾರ ತಕ್ಕೊಳ್ಳುವೆನು.'

★

ಕೆಲವು ದಿನಗಳು ಕಳೆದ ಮೇಲೆ ದರಬಾರು ಕೂಡಿತು. ಅಮರಸಿಂಹನನ್ನು ಜೀವಸಹಿತ ಅಥವಾ ಕೊಂದು ತಂದವನಿಗೆ ಬಹಳ ಇನಾಮು ಕೊಡುವೆನೆಂದು ಬಾದಶಹನು ಸಾರಿದ. ಆದರೆ ಆ ಸಾಹಸದ ಕಾರ್ಯಕ್ಕೆ ಒಬ್ಬನಾದರೂ ಮುಂದೆ ಬರಲಿಲ್ಲ. ಕಡೆಗೆ ಅಮರಸಿಂಹನ ಒಬ್ಬ ಭಾವನೆಂಟ ಅರ್ಜುನಗೌರನು ಈ ಕಾರ್ಯವನ್ನು ಒಪ್ಪಿಕೊಂಡ. ಅವನು ಅಮರಸಿಂಹನ ಬಳಿಗೆ ಹೋಗಿ ಅವನನ್ನು ಬಾದಶಹನು ಕರೆಸಿದ್ದಾನಾಗಿ ಸುಳ್ಳು ಹೇಳಿ ನಂಬಿಸಿದ. ಇಬ್ಬರೂ ಸಾಯಂಕಾಲದ ಹೊತ್ತಿಗೆ ರಾಜಮಹಲಿಗೆ ಬಂದಾಗ ಇದ್ದರು. ಹೆಬ್ಬಾಗಿಲಿನ ಬಳಿ ಇಬ್ಬರು ಕಾವಲುಗಾರರು ಮೊದಲಿನಿಂದ ಹೊಂಚು ಹಾಕಿ ನಿಂತಿದ್ದರು. ಒಳಗೆ ಕಾಲಿಡುತ್ತಲೆ ಅವರ ತಲವಾರು ಬೀಸಿತು. ಅಮರಸಿಂಹನ ಸೂಕ್ಷ್ಮ ಬುದ್ಧಿಗೆ ಎಲ್ಲಾ ಸಂಗತಿ ಕ್ಷಣಾರ್ಧದಲ್ಲಿ ಮಿಂಚು ಮಿಂಚಿದಂತೆ ಹೊಳೆಯಿತು. ಅವನೂ ಕತ್ತಿಯನ್ನು ಬೀಸಿದ. ಅದು ಹೋಗಿ ಅರ್ಜುನಗೌರನ ಮೂಗನ್ನು ಕಡಿಯಿತು. ಅಮರಸಿಂಹನು ಮೋಸದಿಂದ ಕೊಲ್ಲಲ್ಪಟ್ಟು ವೀರಗತಿಯನ್ನು ಹೊಂದಿದನು. ಮೂಗು ಕಳೆಯಿಸಿಕೊಂಡ ಅರ್ಜುನನು ಮೋರೆಯನ್ನು ಮುಚ್ಚಿಕೊಂಡು ಬಾದಶಾಹನಲ್ಲಿಗೆ ಹೋದನು. ಬಾದಶಾಹನಿಗೆ ಅವನ ಮೋರೆ ತಿಳಿಯಿತು. ಸರಿಯಾದ ಪ್ರಾಯಶ್ಚಿತ್ತವಾಯಿತೆಂದು ಎಣಿಸಿದ. ಆದರೆ ಅಷ್ಟರಿಂದ ತೃಪ್ತನಾಗದೆ ಅರ್ಜುನನ ಮುಖಕ್ಕೆ ಮಸಿಯನ್ನು ಬಳಿಸಿ, ಒಂದು ಕತ್ತೆಯ ಮೇಲೆ ಕುಳ್ಳಿರಿಸಿ ನಗರದಲ್ಲಿ ಮೆರವಣಿಗೆ ಮಾಡಿದ. ಅನಂತರ ದೇಶದಿಂದ ಹೊರಗೆ ಹಾಕಿಬಿಟ್ಟ. ಮತ್ತೆ ಏನೋ ದುರ್ಗತಿಯಾಗಿ ಅರ್ಜುನನು ಅಜ್ಞಾತನಾಗಿ ಎಲ್ಲಿಯೋ ಸತ್ತುಹೋದ.

(ಅನುವಾದ)

THE
BANK OF MANGALORE LTD.,
H. O. MANGALORE
ESTD. 1931
Branches:
Moodabidri & Padubidri.

NOTICE

On and from 1st January 1941 the following are the revised rates of interest on deposits:

FIXED DEPOSITS:

For 2 years or over	5½%
„ 1 „	4½%
„ 6 months	3½%
„ 3 months	3

Interest Payable Quarterly.

SAVINGS BANK DEPOSITS:

On daily balances on balances over Rs. 5-0-0 in multiples of Rs. 5-0-0 @ 3%.

All kinds of banking business transacted

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ
ಬೇಕಾದರೆ ಇಂದೇ
ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ.

ಒಂದು ರಾತ್ರಿಯ ಧಾಳಿಗೆ

ಜರ್ಮನಿಗೆ ಒದಗುವ ಅಪಾರ ವೆಚ್ಚ!

ಬಾಂಬಿನ ಖರ್ಚು ೧೨೦,೦೦೦ ಪವನುಗಳು!

ಜರ್ಮನಿಯ ಆಕ್ರಮಣ ನೀತಿ! ಬ್ರಿಟನಿನ ರಕ್ಷಣಾನೀತಿ!

ಲಂಡನಿನ ಮೇಲೆ ಆಗುವ ಒಂದು ರಾತ್ರಿಯ ವಿಮಾನಧಾಳಿಗೆ ನಾಜಿಗಳು ಸುಮಾರು ೩೦೦ ವಿಮಾನಗಳನ್ನು ಕಳುಹಿಸಿಕೊಡುತ್ತಾರೆ. ಈ ಧಾಳಿಗೆ ಬರುವ ಹೆಚ್ಚಿನ ವಿಮಾನಗಳೆಲ್ಲ ಮಹಾಕಾಯಗಳಾದ ಹೇಂಕೆಲ್ ಮತ್ತು ಡೋರ್ನಿಯರ ಜಾತಿಗೆ ಸೇರಿದವುಗಳಾಗಿ ಇರುತ್ತವೆ. ಸಣ್ಣ ಜಾತಿಯವುಗಳು ಒಂದೇ ಬಾರಿಗೆ ಹೋಗಿ ಬೊಂಬು ಸುರಿದು ಹಿಂದಿರುಗಿ ಬರುವಷ್ಟು ಸಮರ್ಥವಾಗಿ ಇರುವುದಿಲ್ಲ.

ಫ್ರೆಂಚ್ ಕರಾವಳಿ ಮೇಲಿರುವ ವಿಮಾನ ನಿಲ್ದಾಣಗಳನ್ನೆಲ್ಲ ಬ್ರಿಟಿಷರು ನಾಶಮಾಡಿರುವುದರಿಂದ ನಾಜಿಗಳ ವಿಮಾನಗಳು ಜರ್ಮನಿಯಿಂದಲೇ ಹೊರಟು ಹಿಂದಿರುಗಬೇಕು. ಹೀಗಾದುದರಿಂದ ಅವು ಕನಿಷ್ಠಪಕ್ಷ ಎರಡೆರಡು ತಾಸುಗಳ ಕನಕವಾದರೂ ಆಕಾಶದಲ್ಲಿ ಹಾರಾಡುತ್ತಿರಬೇಕು. ಮತ್ತು ತಾಸಿಗೆ ೨೦೦ ಮೈಲುಗಳ ವೇಗದಿಂದ ಸಂಚರಿಸಬೇಕು. ಪ್ರತಿಯೊಂದು ವಿಮಾನದಲ್ಲಿ ೧೨೦೦ ಅಶ್ವಶಕ್ತಿಯ ಎರಡೆರಡು ಇಂಜಿನುಗಳು ಇರುತ್ತವೆ. ಇವುಗಳಲ್ಲಿ ಒಂದೊಂದು ಎಂಜಿನು ತಾಸಿಗೆ ೧೪೦ ಗೆಲನು ಪೆಟ್ರೋಲನ್ನು ಸುಟ್ಟುಹಾಕುತ್ತದೆ. ಹೀಗೆ ಒಂದು ರಾತ್ರಿ ಧಾಳಿಗೆ ಹೊರಟ ನಾಜಿ ವೈಮಾನಿಕ ದಳಕ್ಕೆ ೬೦೦೦ ಗೆಲನು ಪೆಟ್ರೋಲು ಬೇಕಾಗುವುದು.

ಪೆಟ್ರೋಲಿಗೆ ೧೫೦೦ ಪವನು

ಯುದ್ಧದ ಹಿಂದಿನ ಕಾಲದ ದರದಲ್ಲಿ ಎಣಿಸಿದರೂ ಗೆಲನಿಗೆ ೪॥ ಪೆನ್ನಿಗಳಂತೆ ಎಣಿಸಿದರೂ ಖರ್ಚು ೧೦೦೦ ಪವನು ಆಗುವುದು. ಆದರೆ ಈಗ ಪೆಟ್ರೋಲಿನ ದರ ಏರಿದೆ. ಜರ್ಮನಿ ಕೃತಕ ಪೆಟ್ರೋಲನ್ನು ಉಪಯೋಗಿಸುತ್ತದೆ. ಅದು ಗೆಲನಿಗೆ ೬ ಪೆನ್ನಿಯಂತೆ ಆದರೂ ಒಂದು ರಾತ್ರಿಯ ಪೆಟ್ರೋಲು ಖರ್ಚು ೧೫೦೦ ಪವನು ಆಗುವುದು.

ಮತ್ತೆ ಪ್ರತಿಯೊಂದು ವಿಮಾನವು ಒಂದು ರಾತ್ರಿಗೆ ೨೫ ಗೆಲನು ಎಣ್ಣೆ ಉಪಯೋಗಿಸುವುದು. ಹಿಂದಿನ ದರದಲ್ಲಿ ಎಣಿಸಿದರೂ ೫೦೦೦ ಗೆಲನು ಎಣ್ಣೆಯ ಖರ್ಚು ಟನ್ನಿಗೆ ೧೬ ಪವನುಗಳಂತೆ ಸುಮಾರು ೨೫೦ ಪವನು ಆಗುತ್ತದೆ.

ನಾಶವಾದ ವಿಮಾನಗಳು

ಒಂದೊಂದು ಧಾಳಿಯಲ್ಲಿ ೬೦೦ರ ಒಳಗಿಂದ ಕೇವಲ ನಾಲ್ಕು ವಿಮಾನಗಳು ನಾಶವಾಗುತ್ತವೆ ಎಂದಿಟ್ಟುಕೊಂಡರೂ ಪ್ರತಿಯೊಂದು ಭೀಮಕಾಯ ವಿಮಾನದ ಕ್ರಯವು ೨೫೦೦೦ ಪವನು ಆಗುತ್ತದೆ. ಅಂದರೆ ನಾಶವಾದ ವಿಮಾನಗಳ ದೆಸೆಯಿಂದ ಜರ್ಮನಿಗೆ ಪ್ರತಿ ರಾತ್ರಿ ೧೦೦೦೦೦ ಪವನಿನ ನಷ್ಟವಾಗುವುದು.

ಜರ್ಮನಿಯು ಒಂದೊಂದು ಸ್ಫೋಟಕ ಬೋಂಬನ್ನು ತಯಾರಿಸಬೇಕಾದರೆ ಒಂದೊಂದು ಪವನು ಬೇಕು. ಮತ್ತೆ ೨೫ ಪವನುಗಳು, ೫೦ ಪವನುಗಳು, ೧೨೫ ಪವನುಗಳ ಭಾರದ ಬೋಂಬುಗಳೂ ಇವೆ. ಒಂದೊಂದು ಭೀಮಕಾಯದ ವಿಮಾನವು ಸುಮಾರು ೮೦೦ ಪವನುಗಳ ಸಣ್ಣ ದೊಡ್ಡ ಬೋಂಬುಗಳನ್ನು ಹೊತ್ತುಕೊಂಡು ಹೋಗುತ್ತದೆ. ಸರಾಸರಿ ಒಂದೊಂದು ವಿಮಾನವು ೬೦೦ ಪವನು ಬೆಲೆಬಾಳುವ ಬೋಂಬುಗಳನ್ನು ತೆಗೆದುಕೊಂಡು ಹೋಗುವುದೆಂದು ಇಟ್ಟುಕೊಂಡರೂ ಒಂದು ರಾತ್ರಿಯ ಬೋಂಬು ಖರ್ಚು ೧೨೦,೦೦೦ ಪವನು ಆಗುವದು.

ಚಿಲ್ಲರೆ ಖರ್ಚುಗಳು

ಮತ್ತೆ ಚಿಲ್ಲರೆ ಖರ್ಚುಗಳಿವೆ. ಲಾಗವಾಡು ಮತ್ತು ಯಂತ್ರೋಪಕರಣಗಳ ಡಿಪ್ರಿಸಿಯೇಶನು ಇದೆ. ಇವುಗಳೆಲ್ಲದರ ಸೂಕ್ಷ್ಮವಾದ ಅಂದಾಜನ್ನು ತಿಳಕೊಳ್ಳುವುದು ಸಾಧ್ಯವಿಲ್ಲ. ೨೪೦೦ ಅಶ್ವಶಕ್ತಿಯ ಒಂದೊಂದು ವಿಮಾನವು ಓಡುತ್ತಿರುವಾಗ ಒಂದು ಮೈಲಿಗೆ ೫ ಶಿಲಿಂಗಿನಂತೆ ಈ ಖರ್ಚು ಇರುತ್ತದೆಂದು ತಜ್ಞರು ಲೆಕ್ಕಹಾಕಿದ್ದಾರೆ. ಇದನ್ನೇ ಲೆಕ್ಕವಿಟ್ಟುಕೊಂಡು ಹೋದರೂ ಒಂದು ರಾತ್ರಿ ದಾಳಿಯ ೪೫೦ ಮೈಲುಗಳ ಒಂದೊಂದು ವಿಮಾನ ಸಂಚಾರಕ್ಕೆ ೨೦೦ ವಿಮಾನಗಳ ಒಂದು ಪಡೆಗೆ ೨೨೪೦೦ ಪವನು ಖರ್ಚು ಬೀಳುವದು.

೨೦೦ ವಿಮಾನಗಳ ಒಂದು ಧಾಳಿ

ಹೀಗೆ ಲೆಕ್ಕಹಾಕುತ್ತ ಹೋದರೆ ೨೦೦ ವಿಮಾನಗಳ ಒಂದು ರಾತ್ರಿ ದಾಳಿಯ ಖರ್ಚು ಎಷ್ಟಾಗುತ್ತದೆ ಎಂಬುದನ್ನು ಈಗ ನೀವು ಅಂದಾಜು ಮಾಡಬಹುದು. ಪೆಟ್ರೋಲು ೧೫೦೦ ಪವನು; ಎಣ್ಣೆ ೨೫೦ ಪವನು, ನಷ್ಟ ೧೦೦೦೦೦ ಪವನು, ಬೋಂಬುಗಳು ೧೨೦,೦೦೦ ಪವನು, ಲಾಗವಾಡು ೨೨೪೦೦ ಪವನು.

ಹೀಗೆ ಒಟ್ಟು ಒಂದು ರಾತ್ರಿಗೆ ೨೪೪೧೫೦ ಪವನು ಖರ್ಚಾಗುತ್ತದೆ. ಅದು ಬರೇ ಎರಡು ಲಕ್ಷ ಪವನು ಎಂದಿಟ್ಟುಕೊಂಡರೂ, ವರ್ಷಗಟ್ಟಲೆ ಯುದ್ಧ ನಡೆಯುತ್ತಿರುವಾಗ ಖರ್ಚು ಎಷ್ಟಾಗಬೇಡ?

ಬ್ರಿಟಿಷರು ಆಕ್ರಮಣಕಾರಿಗಳಾಗಿಲ್ಲ. ಅವರು ಕೇವಲ ರಕ್ಷಣೋಪಾಯಗಳನ್ನು ಸಾಧಿಸಿದ್ದಾರೆ. ಆದ್ದರಿಂದ ಬ್ರಿಟಿಷರಿಗಿಂತಲೂ ನಾಝಿಗಳ ಯುದ್ಧ ಖರ್ಚು ವಿಪರೀತವಾಗಿರುವುದು.

ಸುಂದರ ಯುವತಿಯರು ನರಳಲಾಗದು

ಆದರೆ, ಹೆಂಗಸರು ಅವರಿಗೆ ವಿಚಿತ್ರವೆನಿಸುವ ವ್ಯಾಧಿಗಳಿಂದ ನರಳುತ್ತಿದ್ದರೆ ಸ್ವಾಭಾವಿಕ ಸೌಂದರ್ಯವನ್ನು ಗಳಿಸಲಾರರು ಅಥವಾ ಉಳಿಸಿಕೊಳ್ಳಲಾರರು. ಸ್ವಭಾವಸಿದ್ಧ ಶಕ್ತಿಗಳೂ ಮತ್ತು ಆರೋಗ್ಯಯುತವಾದ ಕಾಯವನ್ನೂ ಆಕೆಯ ಜನ್ಮಸಿದ್ಧ ಹಕ್ಕು.

ಅರುಣ

ಗರ್ಭಾಶಯಕ್ಕೆ ಅತ್ಯುತ್ತಮ ಟಾನಿಕ್

ಮುಟ್ಟುದೋಷಗಳನ್ನೆಲ್ಲಾ ಸರಿಪಡಿಸುತ್ತದೆ

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

K.A.3

ಅಮೃತ

ರಕ್ತ ಶುದ್ಧಿಯನ್ನು ಮಾಡುವ ನರಗಳ ದೌರ್ಬಲ್ಯವನ್ನು ಪರಿಹರಿಸುವ ಟಾನಿಕ್!

ಮಲಬದ್ಧತೆ, ಅಜೀರ್ಣ, ಮತ್ತು ಇತರ ಜಠರ ದೋಷಗಳನ್ನು ನಿವೃತ್ತಿಗೊಳಿಸುತ್ತದೆ; ಕ್ಷೀಣಗೊಂಡವರಿಗೆ ತಿರಿಗಿ ಶಕ್ತಿ ಧಾತು ಪುಷ್ಟಿಯನ್ನು ಕೊಡುತ್ತದೆ.

ವಿಶೇಷ ವಿಷಯಗಳಿಗೆ, ಯಾವುದೇ ಕೆಮಿಸ್ಟರಲ್ಲಾಗಲಿ, ಇಲ್ಲವೇ ಇವರಲ್ಲಾಗಲಿ ವಿಚಾರಿಸಿರಿ.

"ಕೇಸರೀ ಕುಟೀರಂ"

ಇಂಡಿಯನ್ ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್

ರಾಯಪೇಟೆ, ಮದ್ರಾಸು.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಅತಿಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಇದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ದಯವಿಟ್ಟು ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್ ಕೊಪ್ಪಳಮಾಹಿಮ, ಸಾಕೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಇಲ್ಲ. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯವೂ ೪-೦-೦ ಪ್ರತಿ.

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜ್ S. M. C.

ಜಿಲ್ಲಾ ಸಮಾಚಾರ

ಮಂಗಳೂರು

ವಾರ್ಷಿಕೋತ್ಸವ:—ಸ್ಥಳೀಯ ಬಿ. ಇ. ಎಮ್. ಹೈಸ್ಕೂಲಿನ ಹಳೇ ವಿದ್ಯಾರ್ಥಿಸಂಘದ ವಾರ್ಷಿಕೋತ್ಸವವು ಇದೇ ಜನವರಿ ೨೬ನೇ ತಾರೀಕು ಆದಿತ್ಯವಾರ ಸಂಜೆ ಗಂಟೆ ೫-೩೦ಕ್ಕೆ ಶ್ರೀ ಕೆ. ಗಣಪಯ್ಯ ಬಿ. ಎ., ಇವರ ಅಧ್ಯಕ್ಷತೆಯಲ್ಲಿ ಜರಗುವುದು. ಮರುದಿನ ಅಂದರೆ ಸೋಮವಾರ ರಾತ್ರಿ ೭-೩೦ಕ್ಕೆ ಮಿತ್ರಭೋಜನವಿರುವುದು (ಟಿಕೇಟು ಮೂಲಕ) ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಶ್ರೀ ಕೃಷ್ಣಮಂದಿರ ವಿವೇಕಾನಂದ ಸಭೆ:—ಈ ಸಭೆಯ ನೇತೃತ್ವದಲ್ಲಿ ಇದೇ ತಿಂಗಳ ತಾ. ೨೬ನೇ ಆದಿತ್ಯವಾರ ಶ್ರೀ ಕೃಷ್ಣಮಂದಿರದಲ್ಲಿ ಕೆಳಗೆ ಸೂಚಿಸಿದಂತೆ ಶ್ರೀ ವಿವೇಕಾನಂದ ಸ್ವಾಮಿಜಿಯವರ ಜನ್ಮದಿನವನ್ನು ಆಚರಿಸುವರು. ಸರ್ವರಿಗೂ ಸ್ವಾಗತವಿದೆ.

ಪೂರ್ವಾಹ್ನ ಭಜನೆ ಶ್ರೀ ಕಾಸರಗೋಡು ರಘುನಾಥ ಮಲ್ಯರು ೮-೩೦ರಿಂದ ೯-೩೦
೨ ಅವತಾರ ಮಹಾತ್ಮ್ಯ ಶ್ರೀ ವೇದಮೂರ್ತಿ ಗೋಕರ್ಣ ವೆಂಕಟ್ರಮಣ ಭಟ್ಟರು ೯-೩೦ರಿಂದ ೧೦-೩೦
೩ ಪೂಜಾ ೧೦-೩೦ರಿಂದ ೧೧ ಅಪರಾಹ್ನ
೧, ಹರಿಕಥೆ—ಶ್ರೀ ಸಮರ್ಥ ರಾಮದಾಸರ ಚರಿತ್ರೆ ಶ್ರೀನಿವಾಸ ... ೩ರಿಂದ ... ೨ ವಿವೇಕಾನಂದ ಸ್ವಾಮಿಜಿಯವರ ಜೀವನಚರಿತ್ರೆ ಶ್ರೀ ಮೂಲ್ಕಿ ಸುಬ್ರಾಯರು —

ಇದಲ್ಲದೆ ತಾ. ...ನೇ ಫೆಬ್ರವರಿ ಆದಿತ್ಯವಾರ ಪೂರ್ವಾಹ್ನ ಗಂಟೆ ೧೦ರಿಂದ ೧೨ರ ವರೆಗೆ ಉರ್ವ ಮೈದಾನದಲ್ಲಿ ಶ್ರೀ ಲಕ್ಷ್ಮೀನರಸಿಂಹ ದೇವರ ಮಠದ ಎದುರಿಗೆ ಬಡವರಿಗೆ ಗಂಜಿ ಹಂಚಲಾಗುವದು.

ಮಿಶನ್ ಹೈಸ್ಕೂಲ್ ವರ್ಧಂತಿ:—ಸ್ಥಳೀಯ ಬಿ. ಇ. ಮಿಶನ್ ಹೈಸ್ಕೂಲಿನ ವಾರ್ಷಿಕ ವರ್ಧಂತ್ಯುತ್ಸವವು ಕಳೆದ ಆದಿತ್ಯವಾರ ಶ್ರೀ. ಎಚ್. ಸೋನ್ಸರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನಾನಂತರ ಹಜೂರ್ ಶಿರಸ್ತೇದಾರ್ ಶ್ರೀ ಗಣಪತಿ ರಾವ್ ಟೋಸ್ಟ್ ಭಾಷಣ ಮಾಡಿದರು. ಹೆಡ್ಮಾಸ್ಟರಾದ ಶ್ರೀ ಎಸ್. ಎ. ಪರ್ಟೋಜೋರವರು ಶಾಲಾ ವರದಿಯನ್ನೋದಿದರು, ಅದರಲ್ಲಿ ಗತವರ್ಷದ ವಿದ್ಯಾರ್ಥಿಗಳ ಸಂಖ್ಯೆ ೭೬೧ ಎಂದೂ ಉಪಾಧ್ಯಾಯ ವರ್ಗದವರು ೨೮ ಮಂದಿಯೆಂದೂ ತಿಳಿಸಿ ಶಾಲೆಯ ಹಲವು ಚಟುವಟಿಕೆಗಳನ್ನು ತಿಳಿಸಿದರು. ಬಹುಮಾನ ವಿತರಣೆಯಾದ ಮೇಲೆ ಅಧ್ಯಕ್ಷರು ವಿಚಾರವತ್ತಾದ ಭಾಷಣ ಮಾಡಿದರು.

ಹಳ್ಳಿಗಳ ಪುನರ್ಘಟನೆ:—ಈ ಕುರಿತು ಶ್ರೀ. ಪಿ. ವಿ. ಉಪಾಧ್ಯಾಯರು ಕಳೆದ ಶನಿವಾರ ಯುನಿವರ್ಸಿಟಿ ಎಕ್ಸ್ಟೆನ್ಶನ್ ಬೋರ್ಡಿನ ಆಶ್ರಯದಲ್ಲಿ ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ಒಂದು ಭಾಷಣವಿತ್ತರು.

ಹೋಕಿ ಪಂದ್ಯಾಟ:—ಲೂವಿಸ್ ಅಲ್ಬುರ್ಕಲೋಜೋ ಮೆಮೋರಿಯಲ್ ಹೋಕಿ ಪಂದ್ಯಾಟವು ಮಂಗಳೂರು ಯಂಗ್ಮೆನ್ ಮತ್ತು ಕೆನನ್ನೋರ್ ಯಂಗ್ಮೆನ್ ಇತ್ತಂಡಗಳೊಳಗೆ ಜರಗಿ ಮಂಗಳೂರು ಯಂಗ್ಮೆನ್ ದಳವು ೪-೨ ಗೋಲ್ಗಳಿಗೆ ಗೆದ್ದಿತು.

ಬಾರಕೂರು

ಕಾಂಗ್ರೆಸ್ ಪ್ರಚಾರ:—ಇಲ್ಲಿನ ಸರ್ಕಲ್ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿಗಳಾದ ಶ್ರೀ. ಬಿ. ಗೋಪಾಲಕೃಷ್ಣ ಕಾಮತರು ಈ ಕೆಳಗಿನ ಸ್ಥಳಗಳಲ್ಲಿ ಈ ದಿನಗಳಲ್ಲಿ ಕಾಂಗ್ರೆಸು ಪ್ರಚಾರ ಮಾಡುವರಾಗಿ ತಿಳಿಯುತ್ತದೆ.

ತಾ. ೨೯-೧-೪೧ಕ್ಕೆ ಸಾಬರಕಟ್ಟೆ ಹಾಲಾಡಿ, ಶಂಕರನಾರಾಯಣ. ತಾ. ೩೦ಕ್ಕೆ ಸಿದ್ದಾಪುರ, ಹೊಸಂಗಡಿ, ಬಾಳೆಬರೆ, ಕೋಟೇಶ್ವರ. ತಾ. ೩೧ ಕೋಟ, ಹಂಗಾರಕಟ್ಟೆ, ಸಾಸ್ತಾನ, ಬಾರಕೂರು. ತಾ. ೧-೨ ಬ್ರಹ್ಮಾವರ, ಕಲ್ಯಾಣಪುರ, ಪೇತ್ರಿ, ಕೊಕ್ಕರ್ಣೆ. ತಾ. ೨-೨ ಪಂಡಾರು, ಕುಕ್ಕುಂಜೆ, ಹಿಲಿಯಾಣ, ಮಂದರ್ತಿ. ತಾ. ೩ರಂದು ಅವರು ಬಾರಕೂರಲ್ಲಿ ಸತ್ಯಾಗ್ರಹ ಮಾಡುವರೆಂದೂ ತಿಳಿದಿದೆ.

ಕಾರ್ಕಳ

ಶಿಕ್ಷಣೋಪನ್ಯಾಸಗಳು:—ಈ ಬಾರಿ ಇದೇ ತಾ. ೨೭ರಿಂದ ೩ ದಿನಗಳ ಕಾಲ ನಡೆಯುವ ಶಿಕ್ಷಣ ಪ್ರದರ್ಶನ ಕಾಲದಲ್ಲಿ, ಅದರ ಒಂದು ಅಂಗವಾಗಿ ಇಲ್ಲಿ ಶಿಕ್ಷಣಜ್ಞರ ವಿದ್ಯಾ ಸಂಬಂಧವಾದ ವಿವಿಧ ವಿಷಯಗಳ ಕುರಿತು ಉಪನ್ಯಾಸಗಳೂ, ಶರೀರ ವ್ಯಾಯಾಮ ಆಟ ತಮಾಷೆಗಳೂ ವಿವಿಧ ವಿನೋದ ವಳಿ ಪ್ರದರ್ಶನಗಳೂ ಇರುವವು. ಇವೆಲ್ಲವುಗಳ ವ್ಯವಸ್ಥಾ ಕಾರ್ಯವು ಭರದಿಂದ ನಡೆಯುತ್ತಲಿದೆ.

ಕಾಸರಗೋಡು

ತಾ. ೧೯ರಂದು ಜಿಲ್ಲಾ ಹಿಂದೂ ಮಹಾಸಭೆಯ ಪ್ರಚಾರಕರಾದ ಶ್ರೀ ಬಿ. ಲಕ್ಷ್ಮಣದೇವ ವಿದ್ಯಾರ್ಥಿಗಳು ಹಿಂದೂ ಮಹಾಸಭೆಯ ಆವಶ್ಯಕತೆ, ಅದರ ತತ್ತ್ವಧ್ಯೇಯ ಮತ್ತು ನಮ್ಮ ಮುಂದಿನ ಕರ್ತವ್ಯ ಎಂಬ ಕುರಿತು ಭಾಷಣವಿತ್ತರು. ಇವರು ಇಲ್ಲಿ ಕೆಲವು ತಾಲೂಕಿನಲ್ಲಿ ಸಂಚರಿಸಿ ಮಹಾಸಭೆಯ ಪ್ರಚಾರ ಕಾರ್ಯವನ್ನು ಮಾಡುತ್ತಿರುವರು.

ಉಜ್ರೆ

ಶ್ರೀ ಜನಾರ್ದನ ದೇವರ ಸನ್ನಿಧಿಯಲ್ಲಿ ಆಗತಕ್ಕ ಕಾಲಾವಧಿ ಮಹಾ ರಥೋತ್ಸವವು ತಾ. ೨೦-೧-೪೧ಕ್ಕೆ ಆಗುವಂತಾದ್ದು ಕಾರಣಾಂತರಗಳಿಂದ ಬಾಕಿಯಾಗಿ ಸದ್ರಿ ರಥೋತ್ಸವವು ತಾ. ೨೬-೧-೪೧ನೇ ಆದಿತ್ಯವಾರ ರಾತ್ರಿಗೆ ಜರಗುವದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಜಿಲ್ಲೆಯಲ್ಲಿ ಸತ್ಯಾಗ್ರಹ

ಶ್ರೀ ಪಿ. ಲಕ್ಷ್ಮೀನಾರಾಯಣ ನಾಯ್ಕರು—ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಉಡುಪಿಯಲ್ಲಿ ತಾ. ೧೮ರಂದು ಸಂಜೆ ೫|| ತಾಸಿಗೆ ಯುದ್ಧವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಮಾಡಿದರು. ಅಸಂಖ್ಯ ಜನಸಂದಣಿಯೂ ನೆರೆದಿತ್ತು. ಸತ್ಯಾಗ್ರಹಿಗಳಿಗೆ ಅನೇಕರು ಪೂಮಾಲೆಗಳನ್ನು ಹಾಕಿ ಗೌರವಿಸಿದರು. ಶ್ರೀಯುತರು ಯುದ್ಧವಿರುದ್ಧ ಘೋಷಣೆಯನ್ನು ಕನ್ನಡದಲ್ಲಿಯೂ ತುಳುವಿನಲ್ಲಿಯೂ ಹೇಳಿದರು. ಅವರನ್ನು ಪೋಲೀಸು ಅಧಿಕಾರಿಗಳು ಕೂಡಲೇ ಬಂಧಿಸಿದರು. ಕುಂದಾಪುರ ಸಬ್ ಡಿವಿಜನಲ್ ಆಫೀಸರರ ಮುಂದೆ ವಿಚಾರಣೆಯಾಗಿ ಇವರಿಗೆ ೬ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಯಿತು. 'ಬಿ' ಕ್ಲಾಸು ಕೊಡಲಾಗಿದೆ. ಶ್ರೀಯುತರನ್ನು ಮಂಗಳೂರಿಗೆ ತಂದು ಲಾಕಪ್ಪಿನಲ್ಲಿರಿಸಿ, ಮರುದಿನ ತಿರುಚಿನಾಪಳ್ಳಿಗೆ ಒಯ್ಯಲಾಯಿತು.

ಶ್ರೀಮತಿ ಕಮಲಾವತಿ ಅಧಿಕಾರಿ:—ದ. ಕ. ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ. ಯಂ. ಡಿ. ಅಧಿಕಾರಿಗಳ ಪತ್ನಿ ಶ್ರೀಮತಿ ಕಮಲಾವತಿ ಅಧಿಕಾರಿಗಳು ದ. ಕ. ಜಿಲ್ಲೆಯಲ್ಲಿ ಮೊದಲನೆಯ ಮಹಿಳಾ ಸತ್ಯಾಗ್ರಹಿಯಾಗಿ ತಾ. ೧೮ರಂದು ಪ್ರಾತಃ ಗಂಟೆ ೮ಕ್ಕೆ ಪುತ್ತೂರಿನಲ್ಲಿ ಜೈನಬಸದಿಯ ಮುಂದೆ ಯುದ್ಧವಿರುದ್ಧ ಘೋಷಣೆಮಾಡಿ ಸತ್ಯಾಗ್ರಹ ಹೂಡಿದರು.

ಪುತ್ತೂರಿನಲ್ಲಿ ಈ ಮಹಿಳೆಯು ಮಾಡುವ ಸತ್ಯಾಗ್ರಹವನ್ನು ನೋಡಲು ಅನೇಕರು ದೂರದೂರದ ಹಳ್ಳಿಗಳಿಂದಲೂ ಬಂದಿದ್ದರು. ಜನಸಂಖ್ಯೆ ಎರಡು ಮೂರು ಸಾವಿರ ಮಿಕ್ಕಿತ್ತು. ಮಹಿಳಾವರ್ಗವೇ ಸುಮಾರು ಐನೂರರಷ್ಟು ಇರಬಹುದಿತ್ತು. ಅವರು ಯುದ್ಧವಿರುದ್ಧ ಘೋಷಣೆಯನ್ನು ಹಿಂದಿಯಲ್ಲಿಯೂ ಕನ್ನಡದಲ್ಲಿಯೂ ಓದಿಹೇಳಿದ ಕೂಡಲೇ ಪೋಲೀಸರು ಬಂಧಿಸಿದರು. ಅದೇ ದಿನ ವಿಚಾರಣೆಯಾಗಿ ಇವರಿಗೆ ೬ ತಿಂಗಳ ಸಾದಾ ಶಿಕ್ಷೆ ಮತ್ತು 'ಸಿ' ಕ್ಲಾಸು ಕೊಡಲಾಯಿತು. ಶ್ರೀಮತಿಯವರನ್ನು ಅದೇ ದಿನ ಮಂಗಳೂರಿಗೆ ತಂದು ಮರುದಿನ ವೆಲ್ಲೂರು ಸೆರೆಮನೆಗೆ ಕೊಂಡೊಯ್ಯಲಾಯಿತು. ಶ್ರೀಮತಿಯವರು ೨ ವರ್ಷ ಪ್ರಾಯದ ಮಗುವನ್ನು ಬಿಟ್ಟು ಸತ್ಯಾಗ್ರಹ ಮಾಡಿ ಸೆರೆಮನೆಗೆ ಹೋಗಿರುವರು.

ಶ್ರೀ. ಮುದ್ರಾಡಿ ನಾರಾಯಣ ಶೆಟ್ಟಿ:—ಮಣಿಪಾಲದಲ್ಲಿ ತಾ. ೧೮ರಂದು ಶ್ರೀ ಮುದ್ರಾಡಿ ನಾರಾಯಣ ಶೆಟ್ಟಿ ನೆರೆದ ಜನಸಂದಣಿಯ ಮುಂದೆ ಯುದ್ಧವಿರುದ್ಧ ಘೋಷಣೆಮಾಡಿ ಸತ್ಯಾಗ್ರಹ ಮಾಡಿದರು. ಸತ್ಯಾಗ್ರಹಿಗಳನ್ನು ಅನೇಕರು ಪೂಮಾಲೆಗಳನ್ನು ಹಾಕಿ ಸನ್ಮಾನಿಸಿದರು. ಅವರು ಯುದ್ಧವಿರುದ್ಧ ಘೋಷಣೆ ಮಾಡಿದ ಕೂಡಲೇ ಪೋಲೀಸಿನವರು ಅವರನ್ನು ಬಂಧಿಸಿ, ಕಾರ್ಕಳಕ್ಕೆ ತಂದು, ಮರುದಿನ ಕುಂದಾಪುರಕ್ಕೊಯ್ದು ವಿಚಾರಣೆ ನಡೆಸಿ ೬ ತಿಂಗಳ ಕಠಿಣ ಶಿಕ್ಷೆ ಮತ್ತು 'ಸಿ' ಕ್ಲಾಸು ಕೊಡಲಾಯಿತು. ಇವರು ... ತನಕ ಇವರನ್ನು ಕುಂದಾಪುರದಲ್ಲಿಯೇ ಇರಿಸುವರಾಗಿ ತಿಳಿದಿದೆ.

ಶ್ರೀ. ಮಾಧವ ಪಡಿಯಾರರು:—ಪಾಣೆಮಂಗಳೂರಿನ ಶ್ರೀ. ಮಾಧವ ಪಡಿಯಾರರು ತಾ. ೨೦ರಂದು ಸಂಜೆಗೆ ಪಾಣೆಮಂಗಳೂರಲ್ಲಿ ಯುದ್ಧವಿರುದ್ಧ ಘೋಷಣೆಮಾಡಿ ಸತ್ಯಾಗ್ರಹ ಹೂಡಿದರು. ತುಂಬಾ ಜನರು ಒಂದು ನೆರೆದಿದ್ದರು. ಅವರನ್ನು ಕೂಡಲೇ ಬಂಧಿಸಿ ಸೆರೆಮನೆಗೊಯ್ದರು. ಮರುದಿನ ವಿಚಾರಣೆಯಾಗಿ ೬ ತಿಂಗಳ ಶಿಕ್ಷೆ ಮತ್ತು 'ಸಿ' ಕ್ಲಾಸು ಕೊಡಲಾಯಿತು.

ಶ್ರೀ ದೇವಪ್ಪ ಆಳ್ವರು:—ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಸದಸ್ಯರಾದ ಶ್ರೀ ಬಿ. ದೇವಪ್ಪ ಆಳ್ವರು ತಾ. ೧೮ರಂದು ಕುಂಬಳೆಯಲ್ಲಿ ಸತ್ಯಾಗ್ರಹ ಮಾಡಿದರು. ಕಾಸರಗೋಡು ಮಂಜೇಶ್ವರ, ಬದಿಯಡ್ಕ, ಮಂಗಲ್ಪಾಡಿ ಮೊದಲಾದ ಸ್ಥಳಗಳಿಂದಲೂ ಬಹುಮಂದಿ ಸಭ್ಯಗೃಹಸ್ಥರು ದೇಶಾಭಿಮಾನಿಗಳು ಊರ ಮುಖಂಡರೂ ನೆರೆದಿದ್ದರು. ಸುತ್ತು ಹಳ್ಳಿಯ ಅನೇಕ ಮಂದಿ ರೈತರು ಕೆಲಸಗಾರರು ಕೂಡಿದ್ದರು. ಮೊದಲೇ ನೋಟೀಸು ಕೊಟ್ಟಂತೆ ಗಂಟೆ ೧೦.೩೦ಕ್ಕೆ ಯುದ್ಧವಿರೋಧ ಘೋಷಣೆಯನ್ನು ಓದಿಹೇಳಲು ಶ್ರೀಯುತರು ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಎದುರು ನಾಲ್ಕು ಮಾರ್ಗಗಳು ಕೂಡುವಲ್ಲಿಗೆ ಬಂದರು. ಒರುತ್ತಾ ದಾರಿಯಲ್ಲಿ ಕಾಂಗ್ರೆಸ್ ಭವನದಿಂದ ಘೋಷಣಾ ಸ್ಥಳದ ತನಕವೂ ಕಿಕ್ಕಿರಿದಿದ್ದ ಜನಸ್ತೋಮವು ಇಕ್ಕಡೆಗಳಿಂದಲೂ ಹೂಮಾಲೆಗಳನ್ನು ಕೈನೂಲಿನ ಹಾರಗಳನ್ನೂ ಅರ್ಪಿಸಿತು. ಜನಸ್ತೋಮ ಎರಡು ಸಾವಿರಕ್ಕೆ ಮಿಕ್ಕಿದ್ದಿತು. ಯುದ್ಧವಿರೋಧ ವಾಕ್ಯಗಳನ್ನು ಕನ್ನಡದಲ್ಲಿಯೂ ತುಳುವಿನಲ್ಲಿಯೂ ಓದಿದೊಡನೆ ಸರ್ಕಲ್ ಇನ್ಸ್ಪೆಕ್ಟರರಾದ ಶ್ರೀಯುತ ರಾಮ ಇವರು ಶ್ರೀಯುತರನ್ನು ಕೈದುಮಾಡಿ ಮೊದಲೇ ಏರ್ಪಡಿಸಿದ್ದ ಕಾರಿನಲ್ಲಿ ಪುತ್ತೂರು ಡಿವಿಜನಲ್ ಆಫೀಸರರಲ್ಲಿಗೆ ಕರೆದೊಯ್ದರು.

ಜನರು ಶಾಂತತೆಯಿಂದಿದ್ದು ಸತ್ಯಾಗ್ರಹಿಗಳನ್ನು ಜಯಘೋಷದಿಂದ ಬೀಳ್ಕೊಟ್ಟರು. ವಿಚಾರಣೆಯಾಗಿ ಶ್ರೀಯುತರಿಗೆ ಆರು ತಿಂಗಳ ಕಠಿಣ ಶಿಕ್ಷೆ, ಸಿ ಕ್ಲಾಸುಕೊಟ್ಟಿರುವರು. ಮರುದಿನ ತಾ. ೧೯-೧-೪೧ ಬೆಳಿಗ್ಗೆ ಮೈಲ್ಟ್ರೈನಿನಲ್ಲಿ ವೆಲ್ಲೂರಿಗೆ ಕರೆದೊಯ್ದರೆಂದು ತಿಳಿಯಬರುತ್ತದೆ.

ಕುಂಬಳೆ

ತೀಯ ಯುವಜನ ಸಂಘ:—ಇಲ್ಲಿ ಸಮೀಪದ ಆರಿಕ್ಕಾಡಿ ಗ್ರಾಮದಲ್ಲಿ ಶ್ರೀ ಭುವನೇಶ್ವರಿ ತೀಯ ಯುವಜನ ಸಂಘದ ವಾರ್ಷಿಕ ಮಹೋತ್ಸವವು ಸುಮಾರು ೫೦೦ ಜನರ ಕೂಡುವಿಕೆಯಿಂದ ೧೦-೧-೪೧ರಲ್ಲಿ ಕೊಯಿಪಾಡಿ ಪಂಚಾಯತ ಬೋರ್ಡು ಸೆಕ್ರೆಟರಿಯವರಾದ ವಿದ್ವಾನ್ ಬಿ. ವಿಷ್ಣುಮೂರ್ತಿ ಹೊಳ್ಳರ ಅಧ್ಯಕ್ಷತೆಯಲ್ಲಿ ಅತಿ ಸಂಭ್ರಮದಿಂದ ನೆರವೇರಿಸಲ್ಪಟ್ಟಿತು. ಸದರಿ ಇದೇ ಮಹಾ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸುವದಕ್ಕೆ ಮಂಜೇಶ್ವರ ಸರ್ಕಲ್ ಕಾಂ. ಕಮಿಟಿಯ ಉಪಾಧ್ಯಕ್ಷ ಹಾಗೂ ನಮ್ಮ ತಾಲೂಕಿನ ಪ್ರಥಮ ಸತ್ಯಾಗ್ರಹಿಯೂ ಬಡ ಜನರ ಪ್ರೇಮಿಗಳೂ ಆದ ಶ್ರೀಯುತ ಬೊಂಬ್ರಾಣಬೈಲು ದೇವಪ್ಪ ಆಳ್ವರ್ ಆ ದಿನವೇ ಮಂಗಳೂರಿನಲ್ಲಿ ಸತ್ಯಾಗ್ರಹಿಗಳ ಕೂಡುವಿಕೆಯ ಸಭೆಗೆ ಹೋಗತಕ್ಕವರಾದ್ದರಿಂದ ಅವರಿಗೆ ಆ ದಿನ ಸಭೆಗೆ ಬರಲು ಅವಕಾಶ ದೊರೆಯದಿದ್ದದ್ದರಿಂದ ಸದರಿ ಸಂಘದ ಉನ್ನತಿಯ ವಿಷಯವಾಗಿ ಸಕಲರಿಗೂ ಮನವರಿಕೆಯಾಗುವಂತ ರೀತಿಯಲ್ಲಿ ಒಂದು ಸಂದೇಶವನ್ನು ಕಳುಹಿಸಿದ್ದರು. ಅದನ್ನು ಸಭಿಕರ ಮುಂದೆ ಓದಿ ಹೇಳಲಾಯಿತು. ಅಲ್ಲದೆ ಸಭಿಕರಲ್ಲಿ ಕೆಲವರ ಸಣ್ಣ ಪುಟ್ಟ ಭಾಷಣಗಳಾದ ನಂತರ ಸಭಾಧ್ಯಕ್ಷರ ಉಪಸಂಹಾರ ಭಾಷಣದೊಂದಿಗೆ ಅಂದಿನ ಮಹಾಸಭೆಯು ಮುಕ್ತಾಯಗೊಂಡಿತು.

ಶ್ರೀ. ಆಳ್ವರಿಗೆ ಸತ್ಕಾರ ಕೂಟ:—ಮಹಾತ್ಮ ಗಾಂಧಿಜಿಯವರಿಂದ ಕಾಸರಗೋಡು ತಾಲೂಕಿಗೆ ಚುನಾಯಿಸಿದ ಪ್ರಥಮ ಸತ್ಯಾಗ್ರಹಿಗಳೂ ಸ್ಥಳೀಯ ಶ್ರೀ. ಜಯ ಮಾರುತಿ ವ್ಯಾಯಾಮ ಶಾಲೆಯ ಕಮಿಟಿಯ ಮೆಂಬರರೂ ಆಗಿರುವ ಶ್ರೀ. ಬೊಂಬ್ರಾಣಬೈಲು ದೇವಪ್ಪ ಆಳ್ವರಿಗೆ ತಾರೀಕು ೧೭-೧-೪೧ನೇ ಸಾಯಂಕಾಲ ಏಳೂವರೆಗೆ ಸದರಿ ವ್ಯಾಯಾಮ ಶಾಲೆಯ ವತಿಯಿಂದ ಒಂದು ಸತ್ಕಾರ ಕೂಟವೇರ್ಪಡಿಸಲ್ಪಟ್ಟಿತು. ಆದಿನ ಊರಿನ ವ್ಯಾಪಾರಸ್ಥರೂ ವರ್ಗದವರೂ ಅಲ್ಲದೆ ಮುಸಲ್ಮಾನ ಬಂಧುಗಳ ಪೈಕಿ ಇಲ್ಲಿಯ ವರ್ಗದಾರರೂ ನಮ್ಮ ಸಂಯುಕ್ತ ಕಾಂಗ್ರೆಸ್ ಕಮಿಟಿಯ ಮಾಜಿ ಪ್ರೆಸಿಡೆಂಟರೂ ಆದ ಜನಾಬ್ ಯಂ. ಸಿ. ಮಮ್ಮಿಸಾಹೇಬ್‌ರವರೂ ಮತ್ತು ಪರವೂರವರಲ್ಲಿ ಶ್ರೀ. ಲಕ್ಷ್ಮಣದೇವ ವಿದ್ಯಾರ್ಥಿಗಳವರೂ ಸಹ ಭಾಗವಹಿಸಿದ್ದರು. ಮರುದಿನ ತಾ. ೧೮-೧-೪೧ನೇ ಬೆಳಿಗ್ಗೆ ೧೦ ಗಂಟೆಗೆ ಕಾಂಗ್ರೆಸ್ ಆಫೀಸಿನಲ್ಲಿ ಶ್ರೀಯುತ ಆಳ್ವರ ಗೌರವಾರ್ಥವಾಗಿ ಊರ ಮಹನೀಯರೋರ್ವರು ಒಂದು ಟೀಪಾರ್ಟಿಯನ್ನೇರ್ಪಡಿಸಿದ್ದು ನೆರೆದ ಊರ ಪರವೂರ ಹಲವು ಸದ್ಗೃಹಸ್ಥರನ್ನು ಸತ್ಕರಿಸಿದರು.

ಹರಿಕಥೆ:—ತಾ. ೧೭ರಂದು ಜಿಲ್ಲಾ ಹಿಂದೂ ಮಹಾಸಭೆಯ ಪ್ರಚಾರಕರಾದ ಶ್ರೀ. ಬಿ. ಲಕ್ಷ್ಮಣದೇವ ವಿದ್ಯಾರ್ಥಿಗಳು ಕುಂಬಳೆ ಶ್ರೀ. ಗೋಪಾಲಕೃಷ್ಣ ದೇವಸ್ಥಾನದಲ್ಲಿ ಹಿಂದೂ ಮಹಾಸಭೆಯ ತತ್ತ್ವಧ್ಯೇಯಗಳ ಕುರಿತು ಹರಿಕಥಾ ರೂಪದಲ್ಲಿ ದೀರ್ಘವಾದ ಭಾಷಣವಿತ್ತರು.

ವಿನೋಬಾಜಿ ತಿರಿಗಿ ಸತ್ಯಾಗ್ರಹ ಹೂಡಿದರು

ತಿಲಕರ ಪುತ್ರರಿಗೆ ಮಹಾತ್ಮರ ಉಪದೇಶ

ಕರ್ನಾಟಕದ ಮೂರನೆಯ ಪಟ್ಟಿಗೆ ಮಹಾತ್ಮರ ಸಮ್ಮತಿ?

ಸತ್ಯಾಗ್ರಹ ಸಮರ

ವೈಯುಕ್ತಿಕ ಸತ್ಯಾಗ್ರಹ ಸಮರವು ದೇಶದಲ್ಲಿ ಸರ್ವತ್ರ ಭರದಿಂದ ಸಾಗುತ್ತದೆ. ಪ್ರಥಮ ಸತ್ಯಾಗ್ರಹಿ ವಿನೋಬಬಾವೆಯವರು ಬಿಡುಗಡೆ ಹೊಂದಿದ ಮೇಲೆ ಸತ್ಯಾಗ್ರಹವನ್ನು ಮಾಡಿದ್ದಾರೆ ಆದರೆ ಅವರನ್ನು ಬಂಧಿಸಲಿಲ್ಲ. ಅವರು ಭಾಷಣ ಕೊಡುತ್ತಾ ಸಂಚರಿಸುತ್ತಿದ್ದಾರೆ. ಪ್ರಾತಿನಿಧಿಕ ಸತ್ಯಾಗ್ರಹವು ಬೆಳೆದಿದೆ. ನಾಲ್ಕಾಣೆ ಕಾಂಗ್ರೆಸ್ಸು ಸದಸ್ಯರೂ ಸತ್ಯಾಗ್ರಹವನ್ನು ಮುಂದೆ ಹೂಡಲಿರುವರಾಗಿ ವದಂತಿಯಿದೆ. ಈಗ ಸತ್ಯಾಗ್ರಹಿ ಹೂಡಿದ್ದವರಿಗೆ ಹೆಚ್ಚಾಗಿ ಸಿ ಕ್ಲಾಸುಗಳೇ ಕೊಡಲಾಗುತ್ತವೆ. ಹಿಂದೂ ಮಹಾಸಭೆಯವರೂ ಚಟುವಟಿಕೆ ನಡೆಸುತ್ತಿದ್ದಾರೆ. ಸರಕಾರವು ಅವರ ಕೇಳಿಕೆಗಳ ವಿಷಯವಾಗಿ ಗಮನ ಕೊಡದಿದ್ದಲ್ಲಿ ಅವರೂ ಮುಂದೆ ಶಾಸನಭಂಗ ಮಾಡುವ ಸಿದ್ಧತೆ ಮಾಡುತ್ತಿರುವರು.

ಹೊಸ ಬ್ರಾಡ್‌ಕ್ಯಾಸ್ಟಿಂಗ್ ಸ್ಟೇಶನ್‌ಗಳು

ಬೇಗನೇ ಪಾಟ್ನಾ ಸ್ಟೇಶನ್ ಆರಂಭವಾಗುವದು

ಕರಾಚಿ ಸ್ಟೇಶನಿನ ವಿಷಯ ಮಾತ್ರ ಇನ್ನೂ ಗೊತ್ತಿಲ್ಲ

ಕರಾಚಿಯಲ್ಲಿ ರೇಡಿಯೋ ಬ್ರಾಡ್‌ಕ್ಯಾಸ್ಟಿಂಗ್ ಸ್ಟೇಶನನ್ನು ತೆರೆಯಲು ಮುಂದಿನ ವರ್ಷದ ಆಯುವ್ಯಯ ಅಂದಾಜು ಪಟ್ಟಿಯಲ್ಲಿ ಏರ್ಪಡಿಸಲಾಗುವದೇ ಎಂಬುದಕ್ಕೆ ಅಧಿಕಾರಿ ವ್ಯಕ್ತಿದಿಂದ ವಿನೊಂದೂ ಗೊತ್ತಾಗುವ ಹಾಗಿಲ್ಲ.

ಸದ್ಯದ ಕಾರ್ಯಕ್ರಮವನ್ನು ನೋಡಿದರೆ ಮುಂದಿನ ಬೇಸಿಗೆ ಹೊತ್ತಿಗೆ ಪಾಟ್ನಾದಲ್ಲಿ ಬ್ರಾಡ್ ಕ್ಯಾಸ್ಟಿಂಗ್ ಸ್ಟೇಷನ್ ಆರಂಭವಾಗುವದು ಎಂಬುದು ವ್ಯಕ್ತವಾಗುವುದು. ಹೊಸಡೆಲ್ಲಿಯಲ್ಲಿ ಈಗಿರುವ ಬ್ರಾಡ್‌ಕ್ಯಾಸ್ಟಿಂಗ್ ಸ್ಟೇಶನಿಗೆ ಬಲವಾದಂತಹ ಟ್ರಾನ್ಸ್‌ಮಿಟರನ್ನು ಏರ್ಪಡಿಸಲಾಗುವುದು. ಇದಕ್ಕೆ ಸ್ಟಾಂಡಿಂಗ್ ಫೈನಾನ್ಸ ಕಮಿಟಿಯು ಈಗಾಗಲೇ ಮಂಜೂರು ಮಾಡಿದೆ.

ಪಟ್ಟಿಯ ಪ್ರಕಾರ ಮುಂದಿನ ಬ್ರಾಡ್‌ಕ್ಯಾಸ್ಟಿಂಗ್ ಸ್ಟೇಶನ್ ಎಂದರೆ ಕರಾಚಿ. ಆದರೆ ಅದು ಯಾವಾಗ ಆರಂಭ ಆಗುವದೆಂಬುದಕ್ಕೆ ಕಾಲವು ಸರಿಯಾಗಿ ನಿರ್ಧಾರವಾಗಿಲ್ಲ.

ಆರ್. ಬಿ. ತಿಲಕರಿಗೆ ಮಹಾತ್ಮರ ಪತ್ರ

ಉಪವಾಸ ನಿಲ್ಲಿಸಲು

ತಿಲಕಫಂಡಿನ ವಿಷಯವಾಗಿ, ಅದನ್ನು ಕಾಂಗ್ರೆಸಿನ ಬಿಟ್ಟುಕೊಡಬೇಕೆಂದು ತಿಲಕರ ಪುತ್ರರಾದ ಶ್ರೀ ರಾಮಭಾವು ತಿಲಕರು ನಿರಶನ ವ್ರತವನ್ನಾದಿ ಆರೇಳು ದಿನಗಳಾದುವು. ಟ್ರಸ್ಟಿಗಳು ಆ ವಿಷಯವಾಗಿ ಏನೂ ಮಾಡುವಂತೆ ಕಾಣು ಬರುವುದಿಲ್ಲ. ಈಗ ಮಹಾತ್ಮಾಜಿಯವರು ಅವರಿಗೆ ಉಪವಾಸ ನಿಲ್ಲಿಸಬೇಕಾಗಿ ಪತ್ರ ಬರೆದಿರುವರೆಂದು ತಿಳಿದಿದೆ.

ಕರ್ನಾಟಕದ ಸತ್ಯಾಗ್ರಹಿಗಳ ಮೂರನೆಯ ಪಟ್ಟಿ

ಗಾಂಧಿಜಿಯವರ ಸಮ್ಮತಿ

ಎಪ್ರಿಲ್ ೫ರೊಳಗೆ ಸತ್ಯಾಗ್ರಹ?

ಕರ್ನಾಟಕದಿಂದ ಸುಮಾರು ೫೦೦ ಮಂದಿ ಸತ್ಯಾಗ್ರಹಿಗಳ ಹೆಸರನ್ನು ಗಾಂಧಿಜಿಯವರಲ್ಲಿ ಕೊಂಡೊಯ್ದಿದ್ದು, ಅವರಲ್ಲಿ ಕೇವಲ ಕೆಲವೇ ಮಂದಿಯನ್ನುಳಿದ ಮಿಕ್ಕ ಎಲ್ಲರಿಗೂ ಸತ್ಯಾಗ್ರಹ ಹೂಡಲು ಗಾಂಧಿಜಿಯವರು ಸಮ್ಮತಿಕೊಟ್ಟಿರುವರೆಂದು ತಿಳಿದಿದೆ. ಇವರು ಎಪ್ರಿಲ್ ೫ರೊಳಗೆ ಸತ್ಯಾಗ್ರಹ ಹೂಡಬೇಕಾಗಿ ಗಾಂಧಿಜಿಯವರ ಅಪೇಕ್ಷೆಯಂತೆ. ಈ ಪಟ್ಟಿಯಲ್ಲಿ ಕಾಂಗ್ರೆಸಿನ ನಾಲ್ಕಾಣೆ ಸದಸ್ಯರೂ ಬಹು ಮಂದಿಯಿರುವರಾಗಿ ತಿಳಿದುಬರುತ್ತದೆ.

ಮೈಸೂರು ಕಾಂಗ್ರೆಸಿಗೆ ಮಹಾತ್ಮರ ಸಲಹೆ

ಮೈಸೂರು ಶಾಸನ ಮಂಡಳಿದ ಉಮೇದ್ವಾರರಾಗಿ ನಿಂತ ಅನೇಕ ಜನ ಕಾಂಗ್ರೆಸು ಉಮೇದ್ವಾರರನ್ನು ನಾಮಪತ್ರ ರದ್ದು ಮಾಡಿ ಚುನಾವಣೆಗೆ ನಿಲ್ಲದಂತೆ ಸರಕಾರದವರು ಮಾಡಿರುವರಷ್ಟೆ? ಸ್ವೀಕೃತವಾದ ಉಮೇದ್ವಾರರ ಕಡೆಯಿಂದಲೇ ಪ್ರಚಾರವನ್ನು ಬಹಳ ಜೋರಿನಿಂದ ನಡೆಸತಕ್ಕದೆಂದು ಶ್ರೀ ಭಾಷ್ಯಂರವರು ಒಂದು ಹೇಳಿಕೆಯಿತ್ತಿರುವರು. ಗಾಂಧಿಜಿ ಹೀಗೆಯೇ ಸಲಹೆ ಕೊಟ್ಟಿರುವರಂತೆ.

ವಿನೋಬಭಾವೆಯರ ಸತ್ಯಾಗ್ರಹ ಬಂಧನವಾಗಿಲ್ಲ

ಮೂರು ತಿಂಗಳ ಶಿಕ್ಷೆಯನ್ನು ಅನುಭವಿಸಿದ ಮೇಲೆ ಪ್ರಥಮ ಸತ್ಯಾಗ್ರಹಿಯಾದ ಶ್ರೀ ವಿನೋಬಬಾವೆಯವರು ತಿರಿಗಿ ಸತ್ಯಾಗ್ರಹ ಮಾಡಿರುವರು. ಅವರನ್ನು ಇದುವರೆಗೆ ಬಂಧನ ಮಾಡಲಿಲ್ಲ. ಅವರು ಹಲವು ಭಾಷಣಗಳನ್ನು ಹಳ್ಳಿ ಹಳ್ಳಿಗಳನ್ನು ಸಂಚರಿಸಿ ಕೊಡುತ್ತಿದ್ದಾರೆ.

ರಾಜಕೀಯ ಕೈದಿಗಳ ಸಂದರ್ಶನ

ರಾಜಕೀಯ ಕೈದಿಗಳ ಮನೆಯವರು ಅವರ ಭೇಟಿ ಮಾಡಬರುವಾಗ ಪೋಲೀಸರು ಹತ್ತಿರ ಇರಕೂಡದಾಗ ಪಾಟ್ನಾ ಸರಕಾರವು ವಿಧಿಸಿರುವುದೆಂದೂ ಇತರರ ವಿಷಯ ಹಾಗಿಲ್ಲವೆಂದೂ ತಿಳಿದಿದೆ.

ಇಂಡಿಯನ್ ಸಿವಿಲ್ ಸರ್ವಿಸ್

ಸರಕಾರದ ಹೊಸ ವ್ಯವಸ್ಥೆ

ಅನರ್ಹರಾದವರ ಸಂಖ್ಯೆ ಕಡಮೆ ಮಾಡುವುದಕ್ಕಾಗಿ

ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಬಹುಮಂದಿ ಉಮೇದುವಾರರು ಅರ್ಜಿ ಹಾಕಿ ಪರೀಕ್ಷೆಗೆ ಕುಳಿತುಕೊಳ್ಳುತ್ತಾರೆ. ಇವರಲ್ಲಿ ಅನರ್ಹರ ಸಂಖ್ಯೆಯೇ ಹೆಚ್ಚು. ಆದ್ದರಿಂದ ಈ ಸಂಖ್ಯೆಯನ್ನು ಬಹುಮಟ್ಟಿಗೆ ಕಡಮೆ ಮಾಡಬೇಕು ಎಂಬುದಾಗಿ ನಿರ್ಧರಿಸಿ ಇಂಡಿಯಾ ಸರಕಾರದವರು ಒಂದು ವ್ಯವಸ್ಥೆಯನ್ನು ಏರ್ಪಡಿಸಿ ಈ ರೀತಿ ಆರ್ಡರು ಮಾಡಿದ್ದಾರೆ.

ಫೆಡರಲ್ ಪಬ್ಲಿಕ್ ಸರ್ವಿಸ್ ಕಮೀಷನ್ನಿನವರು ಈ ಬಗ್ಗೆ ತಕ್ಕ ಹತೋಟಿ ಕ್ರಮವನ್ನೂ ವಿಮರ್ಶೆಯನ್ನೂ ನಡೆಸುವರು. ಪರೀಕ್ಷೆಗೆ ಕುಳಿತುಕೊಳ್ಳಬೇಕೆಂದು ಅರ್ಜಿ ಹಾಕಿರುವವರಿಗೆ ಮೊದಲು ಪೂರ್ವಭಾವಿಯಾಗಿ ಭೇಟಿಯನ್ನು ಕೊಡಲಾಗುವುದು. ಈ ಭೇಟಿಯಲ್ಲಿ ಬಹುಮಂದಿ ಅನರ್ಹರಾದವರನ್ನು ನಿರ್ಧರಿಸಿ ಅವರಿಗೆ ಅವಕಾಶ ಕೊಡಲಾಗುವುದಿಲ್ಲ. ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಒಟ್ಟು ೩೦೦ ಮಂದಿ ಉಮೇದುವಾರರು ಕುಳಿತುಕೊಳ್ಳುವಂತೆ ವ್ಯವಸ್ಥೆ ಮಾಡಲಾಗಿದೆ.

ಅಸ್ಸಾಮಿಗೆ ೬ ಸ್ಥಾನಗಳು, ಬಂಗಾಳ ೪೫, ಬಿಹಾರ ೩೩, ಒರಿಸ್ಸಾ ೫, ಮಧ್ಯಪ್ರಾಂತ ಮತ್ತು ಬೀರಾರ್ ೧೧, ಮದ್ರಾಸ್ ೫೦, ಪಂಜಾಬ್ ೪೪, ಗಡಿನಾಡು ೬, ಬೊಂಬಾಯಿ ೨೨, ಸಿಂಧ್ ೬, ಸಂಯುಕ್ತ ಪ್ರಾಂತ್ಯಗಳು ೫೩. ಈ ರೀತಿಯಾಗಿ ಆಯಾ ಪ್ರಾಂತ್ಯಗಳಿಂದ ಪರೀಕ್ಷೆಗೆ ಕುಳಿತು ಕೊಳ್ಳುವವರ ಸಂಖ್ಯೆಯನ್ನು ನಿರ್ಧರಿಸಲಾಗುವುದು. ಚೀಫ್ ಕಮೀಶನರ ಪ್ರಾಂತಗಳೂ ಮತ್ತು ಭಾರತದ ಸಂಸ್ಥಾನಗಳೂ ಇವುಗಳಿಗೆ ಉಳಿದ ೨೫ ಸ್ಥಾನಗಳನ್ನು ಫೆಡರಲ್ ಪಬ್ಲಿಕ್ ಸರ್ವಿಸ್ ಕಮೀಶನ್ನಿನವರು ಹಂಚಿ ಹಾಕುವರು. ಅವಶ್ಯವಿದ್ದರೆ ಸಂಖ್ಯೆ ಹೆಚ್ಚಾದರೆ ಚುನಾಯಿತ ಸಮಿತಿಯನ್ನು ರಚಿಸಲಾಗುವುದು.

ಪಂಜಾಬಿನಲ್ಲಿ ೬೫೨ ಮಂದಿಯ ಬಂಧನ

ಡಿಫೆನ್ಸ್ ಕಾನೂನಿನಂತೆ

ಡಿಫೆನ್ಸ್ ಕಾನೂನು ಜಾರಿಗೆ ಬಂದ ಮೇಲೆ ಪಂಜಾಬಿನಲ್ಲಿ ಒಟ್ಟು ೬೫೨ ಮಂದಿಯನ್ನು ಬಂಧಿಸಲಾಗಿದೆಯೆಂದು ತಿಳಿದುಬರುತ್ತದೆ.

ಪಂಜಾಬಿನಲ್ಲಿ ಚುನಾವಣೆ

ಎಸೆಂಬ್ಲಿ ಅವಧಿ ಮುಗಿವುದರೊಳಗೆ ನಡೆಯುವುದು

ಅಸೆಂಬ್ಲಿಯ ಈಗಿನ ಅವಧಿ ಮುಗಿವುದರೊಳಗಾಗಿ ಪಂಜಾಬಿನಲ್ಲಿ ತಿರಿಗಿ ಚುನಾವಣೆ ನಡೆಯುವುದೆಂದು ಅಸೆಂಬ್ಲಿಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರ ಸಿಕ್ಕಿದೆ.

ಭಾರತದಿಂದ ಚೀನಕ್ಕೆ ವಿಮಾನ ಸೌಕರ್ಯ

ಚೀನದಿಂದ ಬರ್ಮಾ ಮತ್ತು ಭಾರತಗಳಿಗೆ ಪ್ರತಿವಾರವೂ ವಿಮಾನ ಸಂಚರಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಚೀನದ ನೇಶನಲ್ ಏವಿಯೇಶನ್ ಕಾರ್ಪೊರೇಶನ್ನಿನವರು ನಿರ್ಧರಿಸಿರುವರು. ಈ ವಿಷಯವಾಗಿ ಭಾರತ ಸರಕಾರದೊಡನೆ ವಿಚಾರ ವಿನಿಮಯ ಮಾಡುವರೆಂದೂ ತಿಳಿದುಬರುತ್ತದೆ.

ದಮ್ಮು ನೆಟ್ಟಗೆ ಆಗಲೇ ಬೇಕು

ಇದು ಅಸಾಧ್ಯವೆಂದು ಡಾಕ್ಟರರು ಹೇಳುವುದಿಲ್ಲ

ನಿಮಗೆ ನಿರಾಶೆಯು ಆದರೆ ಅದರ ಕಾರಣ ತಪ್ಪು ಔಷಧ ತೆಗೆದುಕೊಂಡದ್ದು ಇರಬಹುದು. ದಮ್ಮು ನೆಟ್ಟಗಾಗಬೇಕೆಂಬ ಹಂಬಲದಿಂದ ಕ್ಷಣಿಕವಾಗಿ ಗುಣವಾಗುವ ಔಷಧ ಉಪಯೋಗಿಸಿ ಅನೇಕರಿಗೆ ದುಃಖವಾಗಿದೆ.

ಪುರೋಹಿತ ಶ್ವಾಸಹಾರಿಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಂದಿಸದೆ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳ ಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ತೇಕು ಕಡಿಮೆಯಾಗುವುದು; ಶೌಚದ ತೊಂದರೆ ಉಳಿಯುವುದಿಲ್ಲ. ಪಚನ ಕ್ರಿಯೆಯು ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸವು ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ನೆಟ್ಟಗಾಗುವುದು.

ರೂ. ೩-೦-೦, ರೂ. ೫-೧೨-೦, ರೂ. ೯-೮-೦ ಈ ಕ್ರಯಕ್ಕೆ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಾ ಕಡೆ ಸಿಗುವುದು. ತರಿಸಿಕೊಳ್ಳುವ ವಿಳಾಸ: ಡಾ|| ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಪುರೋಹಿತ ಶ್ವಾಸಹಾರಿ

ಜಪಾನು ಅಮೇರಿಕವನ್ನು ಎಚ್ಚರಿಸುತ್ತಿದೆ!

ಚೀನ-ಜಪಾನ ಯುದ್ಧ ಬೇಗನೇ ಮುಗಿಯುವುದಿಲ್ಲ

ಚೀನ-ಜಪಾನು ಯುದ್ಧವನ್ನು ನಾವು ಯಶಸ್ವಿಯಾಗಿ ಕೊನೆಗಾಣಿಸುವೆವು. ಆದರೆ ಈ ಯುದ್ಧವು ಬೇಗನೇ ಕೊನೆಗಾಣುವಂತಿಲ್ಲವೆಂದು ಜಪಾನ್ ಯುದ್ಧ ಮಂತ್ರಿ ಕರ್ನಲ್ ಕೋಚೋ ಇವರು ಹೇಳಿದರು.

ಟರ್ಕಿಯ ಎಚ್ಚರಿಕೆ

ಬಾಲ್ಕನ್ ಶಾಂತಿಯನ್ನು ಜರ್ಮನಿ ಕದಲಿಸಕೂಡದು

ರುಮೇನಿಯಾ ಮತ್ತು ಹಂಗೇರಿಗಳಲ್ಲಿ ಜರ್ಮನ್ ಸೈನ್ಯಗಳು ಓಡಾಡುತ್ತಿರುವುದನ್ನು ಟರ್ಕಿಯು ಬಹಳ ಸೂಕ್ಷ್ಮವಾಗಿ ಪರಿಶೀಲಿಸುತ್ತಿದೆ. ಈಗ ಸುಮಾರು ಒಂದುವರೆ ಲಕ್ಷ ಜರ್ಮನ್ ಸೈನಿಕರು ರುಮೇನಿಯಾದಲ್ಲಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ಇನ್ನು ಕೆಲವು ದಿನಗಳೊಳಗೆ ಈ ಸಂಖ್ಯೆಯನ್ನು ಹೆಚ್ಚಿಸುವ ಸಂಭವವುಂಟು.

ಟರ್ಕಿಯ ಮೇಲೂ ಕೂಡ ದಂಡೆತ್ತಿ ನಡೆಯಬಹುದು ಅಥವಾ ಅದನ್ನು ಹೆದರಿಸಬಹುದು ಎಂಬ ಅಂಶವನ್ನು ಟರ್ಕಿಯು ಮನಗಂಡಿದೆ. ಆದರೆ ಬಾಲ್ಕನ್ ರಾಷ್ಟ್ರಗಳ ಶಾಂತಿಯನ್ನು ಕದಲಿಸುವ ಗೋಜಿಗೆ ಹೋಗುವುದಾದರೆ ಜರ್ಮನಿಯು ಅಪಾಯಕರವಾದ ಕೆಲಸದಲ್ಲಿ ಕೈಹಾಕಿದಂತಾಗುವುದು ಎಂದು ಜರ್ಮನಿಗೆ ಎಚ್ಚರಿಸಲಾಗಿದೆ.

ಮೆಡಿಟರೇನಿಯನಿನಲ್ಲಿ ಬ್ರಿಟಿಷ್ ಶಕ್ತಿ, ಇಟಲಿಯ ದೌರ್ಬಲ್ಯ ಮತ್ತು ಬ್ರಿಟನಿಗೆ ಅಮೇರಿಕದ ಅಗಾಧಸಹಾಯ ಇವುಗಳಿಂದ ಬಲ್ಗೇರಿಯಾವು ತನ್ನ ತಾಟಸ್ಥ್ಯವನ್ನು ಏನೇ ಆದರೂ ಕಾಪಾಡಿಕೊಂಡು ಬರಬೇಕಾದುದು ಅಗತ್ಯ ಎಂದು ಅಂಕಾರದ ಸುದ್ದಿ.

ಆಲ್ಬೇನಿಯಾದಲ್ಲಿ ಇಟಲಿ ಸೈನ್ಯ ವ್ಯವಸ್ಥೆ

ಆಲ್ಬೇನಿಯಾದಲ್ಲಿರುವ ಇಟಲಿ ಸೈನ್ಯವನ್ನೆಲ್ಲಾ ಪೂರ್ಣವಾಗಿ ಪುನರ್ವ್ಯವಸ್ಥೆಗೊಳಿಸಲಾಗುವುದು. ಹೊಸ ಕಮಾಂಡರ್ ಇನ್ ಚೀಫರಾದ ಕೀವಲ್ಲೋರರು ಜ|| ಸೊಡ್ಡುರ್ವರಿಂದ ಸೇನಾನಾಯಕತ್ವದ ಅಧಿಕಾರವನ್ನು ಸ್ವೀಕರಿಸಿದರು.

ಇಟಲಿಯವರ ಸ್ಥಿತಿಯು ಬಹಳ ಶೋಚನೀಯವಾಗುತ್ತಿದೆ ಎಂದು ಗ್ರೀಕ್ ಮಿಲಿಟರಿ ಅಧಿಕಾರಿಯ ಹೇಳಿಕೆ. ದಕ್ಷಿಣ ಟೆಕ್ಕಾರಿನಲ್ಲಿ ಇಟಲಿಯ ಕಾವಲುಗಾರಿಕೆ ಸೈನ್ಯ ತಂಡವೊಂದನ್ನು ಕೈಸೆರೆಹಿಡಿಯಲಾಯಿತು.

ಜರ್ಮನಿಯು ಹೊಸ ಧಾಳಿ ಕ್ರಮ ನಡೆಸುವುದು

ಜರ್ಮನಿಯು ಬೇಗನೇ ಶಸ್ತ್ರಸಜ್ಜಿತವಾದ ಹೊಸ ಕದನವನ್ನು ಪ್ರಾರಂಭಿಸುವ ಸಂಭವವಿದೆ ಎಂಬುದಾಗಿ ಆರ್ಥಿಕ ಯುದ್ಧದ ಮಂತ್ರಿ ಡಾಲ್ಟನ್‌ರವರು

ಹಿಟ್ಲರ್-ಮುಸಲನಿಗಳು ಭೇಟಿಯಾದರು!

ರುಮೇನಿಯದಲ್ಲಿ ದಂಗೆಯೆದ್ದಿದೆ!

ಪಿಟೇನರು ಜರ್ಮನಿಗೆ ಶರಣಾದರೆ?

ಲಂಡನಿನಲ್ಲಿ ಮಾತನಾಡುತ್ತಾ ತಿಳಿಸಿದರು.

"ಲಿಬ್ಯಾ ಮತ್ತು ಆಲ್ಬೇನಿಯಾಗಳಲ್ಲಿಯೂ ಸಮುದ್ರ ಆಕಾಶಗಳಲ್ಲಿಯೂ ಬಲವಾದ ಪೆಟ್ಟು ತಿನ್ನುತ್ತಿರುವಾಗ ಹಿಟ್ಲರನು ಸುಮ್ಮನೆ ಕುಳಿತಿರುವುದು ಸಾಧ್ಯವಿಲ್ಲ" ಎಂದು ಅವರು ತಿಳಿಸಿದರು.

ಇತರ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಜರ್ಮನಿಯ ಬೆದರಿಕೆಯು ಈಗ ಅತ್ಯುತ್ಕಟಸ್ಥಿತಿಗೆ ಬಂದಿದೆ. ಜರ್ಮನಿಯು ಹೊಸ ಕದನಕ್ಕೆ ಕೈಹಾಕಿದೆ ಅಥವಾ ಕೈಹಾಕುವುದರಲ್ಲಿದೆ ಎಂಬುದಾಗಿ ಜರ್ಮನ್ ಪ್ರಚಾರಮಂತ್ರಿ ಡಾ|| ಗೂಬೆಲ್ಸರು ಹೇಳಿದುದಾಗಿ ಸ್ಪೆಯಿನ್ ಪತ್ರಿಕೆಯ ಬರ್ಲಿನ್ ಬಾತ್ಮೀದಾರರು ತಿಳಿಸುತ್ತಾರೆ.

ಹಾಲೆಂಡಿನಲ್ಲಿ ಜರ್ಮನ್ ಸೈನ್ಯ ಶೇಖರಣೆ

ಹಾಲೆಂಡ್‌ನಲ್ಲಿ ಈಗ ಜರ್ಮನ್ ಸೈನಿಕರು ಅಮಿತವಾಗಿ ಸೇರಿದ್ದಾರೆ. ಆಕ್ರಮಿಸಲ್ಪಟ್ಟ ಪ್ರದೇಶದಲ್ಲಿ ಸೈನ್ಯವೆಷ್ಟಿರಬೇಕೋ, ಅದಕ್ಕಿಂತ ಬಹಳ ಜಾಸ್ತಿಯಾಗಿ ಈ ಸೈನ್ಯವಿದೆ. ಈ ಅಂಶವು ಲಂಡನಿನಲ್ಲಿರುವ ಡಚ್ ವೃತ್ತದಲ್ಲಿ ಗೊತ್ತಾಗುವುದು.

ತೀರದ ಜಿಲ್ಲೆಗಳಲ್ಲಿ ಜರ್ಮನ್ ಸೈನಿಕರು ಜಾಸ್ತಿಯಿದ್ದಾರೆ. ಆ ಪ್ರದೇಶಗಳೆಲ್ಲಾ ರಕ್ಷಣಾ ಪ್ರದೇಶಗಳೆಂದು ಘೋಷಿಸಲಾಗಿದೆ.

'ನಮ್ಮ ಸಾಮ್ರಾಜ್ಯಕ್ಕೆ ಗಂಡಾಂತರ ಬಂದಿದೆ'

ಜಪಾನ್ ಪ್ರಧಾನ ಮಂತ್ರಿಗಳ ಹೇಳಿಕೆ

ಜಪಾನಿನ ಮುಖ್ಯ ಮಂತ್ರಿ ಕೊನೊಯೆಯವರು ಜಪಾನ್ ಪಾರ್ಲಿಮೆಂಟಿನಲ್ಲಿ ಭಾಷಣಮಾಡುತ್ತಾ ನಮ್ಮ ಸಾಮ್ರಾಜ್ಯಕ್ಕೆ ಗಂಡಾಂತರ ಬಂದಿದೆ. ನಮ್ಮ ನಿರ್ಧಾರಗಳನ್ನು ಕಾರ್ಯರೂಪಕ್ಕೆ ತರಲು ನಾವು ಸರ್ವಸಿದ್ಧರಿದ್ದೇವೆ. ಅವಶ್ಯವಾದಷ್ಟು ಶಸ್ತ್ರಾಸ್ತ್ರಗಳನ್ನೂ ಸಂಗ್ರಹಿಸಬೇಕು. ಪೂರ್ವ ಏಶಿಯದಲ್ಲಿ ಹೊಸ ಸಾಮ್ರಾಜ್ಯ ಸ್ಥಾಪಿಸಬೇಕು ಎಂದರು.

ಜರ್ಮನ್ ಸೇನಾಪತಿಯ ಕೊಲೆ

ಜರ್ಮನ್ ವಿರುದ್ಧ ಕ್ರಾಂತಿ!

ಮೇಜರ್ ಡಾಬ್ರೆಂಗ್ ಎಂಬ ಜರ್ಮನ್ ಸೇನಾಪತಿಯನ್ನು ಬುಕಾರೆಸ್ಟಿನಲ್ಲಿ ಗುಂಡು ಹಾಕಿ ಕೊಂದರೆಂದು ಸುದ್ದಿ ಹರಡಿದೆ. ಗ್ರೀಕ್ ಪೈಲವಾನನು ಅವರನ್ನು ಕೊಂದನೆಂದು ತಿಳಿಯಲಾಗಿದೆ. ಅವನನ್ನು ಸೆರೆ ಹಿಡಿದಿರುವರು. ರಾಜಕೀಯ ಸಂಬಂಧವೇ ಇದಕ್ಕೆ ಕಾರಣವೆಂದು ಊಹೆ. ಸರಕಾರದವರು ರುಮೇನಿಯದಲ್ಲಿರುವ ಎಲ್ಲಾ ಗ್ರೀಕರನ್ನೂ ಬಂಧಿಸಿರುವರು.

ರುಮೇನಿಯದ ರಾಜ್ಯಕ್ರಮವನ್ನು ಬದಲಾಯಿಸುವ ಉದ್ದೇಶದಿಂದ ಬುಕಾರೆಸ್ಟಿನಲ್ಲಿ ಕ್ರಾಂತಿಯುಂಟಾಗಿದೆ. ಅದು ಎಲ್ಲೆಡೆ ವ್ಯಾಪಿಸುತ್ತಿದೆ. ಅನೇಕ ಹೊಡೆದಾಟಗಳು ನಡೆದಿವೆ. ಕೆಲವು ಟೆಲಿಫೋನ್ ಸಂಬಂಧ ಕಡಿದುಹೋಗಿದೆ. ರುಮೇನಿಯದ ಈಗಿನ ಮಂತ್ರಿಯನ್ನಿಳಿಸುವುದಕ್ಕಾಗಿ ಐರನ್ ಗಾರ್ಡರು ಮತ್ತು ಕಮ್ಯುನಿಸ್ಟರು ಈ ಕ್ರಾಂತಿಯನ್ನುಂಟುಮಾಡಿದರೆಂದು ಊಹಿಸಲಾಗಿದೆ.

ರೂಸ್‌ವೆಲ್ಟರನು ಕೊಲ್ಲುವ ಯತ್ನವೇ?

ಅಧಿಕಾರ ಸ್ವೀಕಾರದ ಕಾಲದಲ್ಲಿ

ಮೂರನೆಯ ಸಲದ ಅಧ್ಯಕ್ಷ ರೂಸ್‌ವೆಲ್ಟರು ಅಧಿಕಾರ ಗ್ರಹಣಮಾಡುವ ದಿನ ತಾವು ದ್ವಾರದಿಂದ ವೇದಿಕೆಗೆ ಸಂಭ್ರಮದಿಂದ ಹೊರಟರು. ಅವರು ಅಧಿಕಾರ ಗ್ರಹಣಮಾಡುತ್ತಾ ಪ್ರಜಾಸತ್ತೆಗೆ ಇಂದು ಬಹಳ ಗಂಡಾಂತರ ಬಂದಿದೆ. ಅದನ್ನು ಪರಿಹರಿಸಲು ಯತ್ನಿಸಬೇಕಾಗಿದೆಯೆಂದು ಭಾಷಣವಿತ್ತರು.

ರೂಸ್‌ವೆಲ್ಟರು ಭಾಷಣ ಮುಗಿಸಿ ಮನೆಗೆ ಹಿಂತಿರುಗುವಾಗ ಒಂದು ಆಕಸ್ಮಿಕ ಘಟನೆ ನಡೆಯಿತು. ಒಬ್ಬ ಮನುಷ್ಯನು ಕೈಯಲ್ಲಿ ಗುಂಡು ತುಂಬಿದ ರಿವಾಲ್ವರನ್ನು ಹಿಡಕೊಂಡು ರೂಸ್‌ವೆಲ್ಟರನ್ನು ಕಾಯುತ್ತಾ ನಿಂತಿದ್ದನು. ಪೋಲೀಸರು ಅವನನ್ನು ಹಿಡಿದು ಸೆರೆಮನೆಯೊಳಗಿಟ್ಟರು.

ಜಪಾನು ಯುದ್ಧದಲ್ಲಿ ಸೇರಿದರೆ ಮಹಾಯುದ್ಧ ಖಂಡಿತ

ಅಮೇರಿಕವು ಧೋರಣೆ ಬದಲಾಯಿಸಬೇಕು

ಜಪಾನು ಮಂತ್ರಿಯ ಹೇಳಿಕೆ

ಜಪಾನು ವಿದೇಶ ಮಂತ್ರಿ ಮತ್ಸುವೋಕಾರವರು ಜಪಾನು ಪಾರ್ಲಿಮೆಂಟಿನಲ್ಲಿ ಒಂದು ಭಾಷಣ ಮಾಡುತ್ತಾ ಜಪಾನಿನ ದೇಶನೀತಿಯನ್ನು ವಿವರಿಸಿ ಅಮೇರಿಕವನ್ನು ಬೆದರಿಸಿದರು. ಅಮೇರಿಕವು ತನ್ನ ಧೋರಣದ ಬಗ್ಗೆ ಪುನರ್ವಿಚಾರ ಮಾಡಿ, ಅದನ್ನು ಬದಲಾಯಿಸದಿದ್ದರೆ ಜಗತ್ತಿನ ಇಂದಿನ ನಾಗರಿಕತೆಯು ಲಯವಾಗುವುದೆಂದೂ ಮಹಾ ಯುದ್ಧವು ಬೇಗನೆ ಪ್ರಾರಂಭವಾಗುವುದೆಂದೂ ಹೇಳಿದರು.

ಪೂರ್ವ ಏಶಿಯದಲ್ಲಿ ಜಪಾನ ರಾಷ್ಟ್ರದ ಸ್ಥಾನವು ಹೇಗೆ ಹೇಗೆ ಇದೆಯೆಂದು ಅಮೇರಿಕವು ತಿಳಿಯದಿರುವ ವಿಷಯ ವಿಷಾದ ಸೂಚಿಸಿದರು. ಅಮೇರಿಕವು ಯುದ್ಧದಲ್ಲಿ ಸೇರಿದರೆ ಮತ್ತೆ ಆ ಯುದ್ಧದಲ್ಲಿ ಜಪಾನು ಭಾಗಿಯಾಗಬೇಕಾದ ಸಂದರ್ಭವು ಬಂದೊದಗಿದರೆ ಭಯಂಕರ ಯುದ್ಧವಾಗುವುದೆಂದರು. ಇದುವರೆಗೆ ಗುಪ್ತವಾಗಿರುವ ಎಷ್ಟೋ ಹೊಸ ಅಸ್ತ್ರಗಳು ಆಗ ಹೊರಬರುವುವೆಂದರು. ಇಂಡೋ ಚೀನಾ ಈಸ್ಟ್ ಇಂಡೀಸ್‌ಗಳೊಡನೆ ಬಾಂಧವ್ಯವನ್ನು ಬೆಳೆಸಲು ಜಪಾನು ಯತ್ನಿಸುವಾಗ ಅನೇಕ ಆತಂಕಗಳು ಬಂದಿವೆಯೆಂದರು. ಬಳಿಕ ಅವರು ಚಿಯಾಂಗ್ ಕೈಶೇಕರನ್ನು ತಿರಸ್ಕರಿಸಿ ಮಾತನಾಡಿದರು. ಬಳಿಕ ಅವರು ಇಟಲಿ ಜರ್ಮನಿಗಳೊಡನೆ ಜಪಾನು ಹಿಂದಿನಂತೆಯೇ ಇದೆಯೆಂದರು. ಮತ್ತೆ ರಶ್ಯದ ಮಾತೆತ್ತಿ ಅದರೊಡನಿದ್ದ ತಪ್ಪು ತಿಳುವಳಿಕೆಗಳನ್ನು ಬೇಗನೆ ಪರಿಹರಿಸಲಾಗುತ್ತದೆಯೆಂದರು.

'ಕಾರ್ಲಟನ್' ಮುಳುಗಿತು

ಅಟ್ಲಾಂಟಿಕ ಸಾಗರದಲ್ಲಿ ಬ್ರಿಟಿಷ್ ಹಡಗವಾದ 'ಕಾರ್ಲಟನ್' ಎಂಬುದು ಇಟಲಿಯನ್ ಸಬ್‌ಮೇರಿನಿನಿಂದ ಮುಳುಗಿಸಲ್ಪಟ್ಟಿತು.

ಹಿಟ್ಲರ್-ಮುಸಲನಿಗಳ ಭೇಟಿ

ಹಿಟ್ಲರ್ ಮುಸಲನಿಗಳು ಈ ವಾರದಲಿ ಕೂಡಿ ಮಾತನಾಡಿದರು. ಯೂರೋಪಿನ ಯುದ್ಧವನ್ನು ಬಿಗಿಗೊಳಿಸುವ ಸಾಧನದ ಕುರಿತು ಅವರು ಇನ್ನೊಂದು ನಿರ್ಧಾರ ಮಾಡಿಕೊಂಡಿರುವರೆಂದು ಊಹಿಸಲಾಗಿದೆ.

ಪಿಟೇನ್ ಲಾವಲರ ಭೇಟಿ

ಜರ್ಮನರ ಒತ್ತಾಯದ ಮೇರೆಗೆ, ಪಿಟೇನರು ಲಾವಲರೊಡನೆ ಭೇಟಿಯಾಗಿ ತಮ್ಮೊಳಗಿನ ಭೇದಭಾವನೆಗಳನ್ನು ತಿದ್ದಿಕೊಂಡರೆಂದೂ ಒಂದಾಗಿ ಕೆಲಸಮಾಡಲು ನಿಶ್ಚಯಿಸಿರುವರೆಂದೂ ಸುದ್ದಿಯಿದೆ.

ಬ್ರಿಟನಿಗೆ ಅಮೇರಿಕೆಯ ವಿಮಾನಗಳು

ಅಮೇರಿಕೆಯಲ್ಲಿ ತಯಾರಾಗುತ್ತಿರುವ ಯುದ್ಧ ವಿಮಾನಗಳಲ್ಲಿ ನೂರಕ್ಕೆ ಎಂಬತ್ತು ಬ್ರಿಟನಿಗೆ ಹೋಗುತ್ತಿವೆಯೆಂದು ಹೆರಾಲ್ಡ್ ಟ್ರಿಬ್ಯೂನ ಪತ್ರಿಕೆಯ ವಾಶಿಂಗ್ಟನ ಸುದ್ದಿಗಾರನು ಬರೆಯುತ್ತಾನೆ.

ಮಾಲ್ಟಾದ ಮೇಲೆ ದಾಳಿ

ತಾ|| ೧೭ ನೆಯ ದಿವಸ ವೈರಿಗಳ ವಿಮಾನಗಳು ಮಾಲ್ಟಾದ ಮೇಲೆ ದಾಳಿ ಮಾಡಿದವು. ಆಸ್ತಿಗೆ ಸ್ವಲ್ಪ ನಷ್ಟ ಸಂಭವಿಸಿದ್ದು ಪ್ರಾಣಾಪಾಯವೇನೂ ಆಗಿಲ್ಲ. ಆರ್. ಎ. ಎಫ್. ದವರಿಗೂ ನಷ್ಟ ಸಂಭವಿಸಲಿಲ್ಲ. ಈ ದಾಳಿಯಲ್ಲಿ ವೈರಿಗಳ ಅನೇಕ ವಿಮಾನಗಳು ನಾಶವಾದವು.

ಇಂಗ್ಲೆಂಡಿನ ಮೇಲೆ ದಾಳಿಮಾಡಲು ಜರ್ಮನರ ಸಿದ್ಧತೆ

ಇಂಗ್ಲೆಂಡಿನ ಮೇಲೆ ದಾಳಿಮಾಡುವುದಕ್ಕಾಗಿ ಜರ್ಮನರು ಫ್ರಾನ್ಸ್ ಕರಾವಳಿಯಲ್ಲಿರುವ ನೌಕಾಕೇಂದ್ರಗಳನ್ನು ಮತ್ತು ಸೇತುವೆಗಳನ್ನು ಭದ್ರಪಡಿಸುತ್ತಿರುವರೆಂದು ಬೆಲ್ಜಿಯಮಿನಲ್ಲಿರುವ ಒಂದು ಸ್ವತಂತ್ರ ನ್ಯೂಸ್ ಏಜನ್ಸಿಯಿಂದ ತಿಳಿದುಬರುತ್ತದೆ.

ಪುಸ್ತಕಾವಲೋಕನ

ಮಂಗಳಸೂತ್ರ†

ಆಧುನಿಕ ಕನ್ನಡ ಲೇಖಕರಲ್ಲಿ ಶ್ರೀ ಅ.ನ. ಕೃಷ್ಣರಾಯರು ಹೆಸರಾಂತವರು. ಕತೆ, ಕಾದಂಬರಿ, ನಾಟಕ, ಲೇಖನಗಳಿಂದ ಬಹುಮುಖವಾಗಿ ಕನ್ನಡ ವಾಙ್ಮಯವನ್ನು ಪುಷ್ಟಿಗೊಳಿಸಿದವರು. ಜೀವನಯಾತ್ರೆ, ಉದಯರಾಗ, ಸಂಧ್ಯಾರಾಗ ಮೊದಲಾದ ಕಾದಂಬರಿಗಳಿಂದ ಕನ್ನಡ ವಾಚಕರ ಮನವನ್ನು ಮೆಚ್ಚಿಸಿದ ಶ್ರೀಯುತರು ಇಂದು 'ಸಾಮಾನ್ಯ ಜನರ ಸಾಮಾನ್ಯ ಬಾಳುವೆ ಚಿತ್ರ'ವಾದ 'ಮಂಗಳ ಸೂತ್ರ'ವನ್ನು ರಸಿಕ ಕನ್ನಡಿಗರ ಕೈಯಲ್ಲಿ ಕೊಟ್ಟಿದ್ದಾರೆ. 'ಜನ ಸಾಮಾನ್ಯರ ಸಾಮಾನ್ಯ ಜೀವನದಲ್ಲಿಯೂ ಪುರಾಣಗಳಿಗಿಂತ ಮಿಗಿಲಾದ ರಸರಾಶಿಯುದೆ'ಯೆಂಬುದನ್ನು ಇಲ್ಲಿ ತಮ್ಮ ಈ ಕಾದಂಬರಿಯಲ್ಲಿ ಬಹಳ ರಸವತ್ತಾಗಿ ವಿವೇಚಿಸಿರುತ್ತಾರೆ.

ಹಾಲಳ್ಳಿಯಲ್ಲಿ ನಾರಾಯಣಪ್ಪನರು ಒಬ್ಬ ಪ್ರತಿಷ್ಠಿತ ಸದ್ಗೃಹಸ್ಥರು. ಊರಿಗೇ ಬೇಕಾದ ಚಿನ್ನದಂಥ ಮನುಷ್ಯರು. ಅವರ ಸಂಸಾರದಿಂದ, ಅವರ ಹೆಣ್ಣುಮಕ್ಕಳ ಸಂಸಾರದಿಂದ ಕಥೆಯು ಬೆಳೆಯುತ್ತದೆ. ಅವರ ಹಿರಿಯ ಮಗಳನ್ನು, ಕಾವೇರಮ್ಮನನ್ನು ಮೈಸೂರಿಗೆ ಕೊಟ್ಟರು. ಆಕೆಯು ಅತ್ತೆ ಮೊದಲು ತಿಕ್ಕಂತ ಪ್ರೀತಿಯಿಂದಲೇ ಸೊಸೆಯನ್ನು ನೋಡುವಳು. ಕೊನೆಗೆ ಕೆರಳಿದ ಚಂಡಿಯಂತೆ ವರ್ತಿಸುವಳು. ಅಲ್ಲಿ ಕಾವೇರಮ್ಮ ಶಾಲಾ ಧ್ಯಾಪಕನಾದ ತನ್ನ ಗಂಡ ವೆಂಕಟಸುಬ್ಬಯ್ಯನೊಡನೆ ಬಾಳುವೆ ಮಾಡುತ್ತಿರುವಳು. ಇದು ಕಥೆಯ ಮೊದಲನೆಯಲ್ಲಿ ತರಂಗವೆನಬಹುದು.

ನಾರಣಪ್ಪನವರ ಎರಡನೆಯ ಮಗಳು ರತ್ನಳ ವಿವಾಹಜೀವನವು ಕಥೆಯಲ್ಲಿ ವಿಸ್ತಾರವಾದ ಎರಡನೆಯ ಭಾಗವಾಗಿದೆ. ರತ್ನಳು ರತ್ನದಂತಹ ಹುಡುಗಿ ಚೆಲುವಿನಲ್ಲಿ, ಗುಣದಲ್ಲಿ, ಕಲಿಕೆಯಲ್ಲಿ ಮತ್ತೆ ನಡೆನುಡಿಗಳಲ್ಲಿ. ರತ್ನ ಬೆಳೆದು ದೊಡ್ಡವಳಾಗಲು, ಆಕೆಗೆ ಗಂಡಹುಡುಕಿ ಕೊನೆಗೆ ಬೆಂಗಳೂರಿನಲ್ಲಿ ವಿದ್ಯಾವಂತನಾದ ವರನೇ ದೊರಕಿದ. ರತ್ನಳಿಗೆ ವಿವಾಹವಾಯಿತು. ಪತಿ–ಪತ್ನಿಯರು ರಸಿಕತೆಯ ಗಾಢ ಪ್ರೇಮದ ಜೀವನ ನಡೆಸಿದರು. ಆಗ ಬಿ.ಎ.ಪಾಸಾದ ರತ್ನಳ ಗಂಡ ಶಂಕರ, ಎಲ್.ಎಲ್.ಬಿ. ಕಲಿಯಲು ಬೊಂಬಾಯಿಗೆ ಹೋದ. ರತ್ನ ಅಗಲಲಾರದೆ ಬೀಳ್ಕೊಟ್ಟಳು. ಮತ್ತೆ ರಜೆಯಲ್ಲಿ ಊರಿಗೆ ಬಂದಾಗ ಸಂತಸ ಕೇಳಬೇಕೆ? ರತ್ನ ಗರ್ಭವತಿಯಾಗಿ ಗಂಡು ಮಗವನ್ನೂ ಹೆತ್ತಳು. ತಾಯಿ ತಂದೆಯರಿಗೆ ಹಿಗ್ಗೋ ಹಿಗ್ಗು. ಕೊನೆಯ ಪರೀಕ್ಷೆಗೆ ಓದಲು ಬೊಂಬಾಯಿಗೆ ತೆರಳಿದವನು ಮರಳಲಿಲ್ಲ. ವಿಧಿ ಪ್ರೇಮಪಕ್ಷಿಗಳನ್ನು ಅಗಲಿಸಿತು. ರತ್ನಳ ಮಂಗಳ ಸೂತ್ರವು ಕಡಿಯಿತು.

ಭುಕ್ತಿ ಮೂರನೆಯ ತರಂಗವಾಗಿ ನಾರಣಪ್ಪನವರ ಕಿರಿಯ ಮಗಳು ಸುಂದರುವಿನ ಬಾಳವೆಯ ಚಿತ್ರಣವು ಇದೆ. ಸುಂದರು ಅಕ್ಕನಿಗಿಂತಲೂ ಹೆಚ್ಚು ಕಲಿತಳು. ಕಾಲೇಜಿನ ಮೆಟ್ಟಲೇರಿದಳು. ಗುಪ್ತ ಪ್ರಣಯವನ್ನೂ ಮಾಡಿದಳು. ಆಟ, ಪಾಠ, ವಾದವಿವಾದಗಳಲ್ಲಿ ಹುಡುಗರಂತೆ ಸ್ವಚ್ಛಂದ ಸ್ವತಂತ್ರಳಾಗಿ ಮೆರೆದಳು. ಅವಳ ಜೀವನದಲ್ಲಿ ಪ್ರೇಮವೂ ಸ್ವಚ್ಛಂದವಾದುದೇ; ಅದರಲ್ಲಿ ಶುದ್ಧ ನೈರ್ಮಲ್ಯವಿಲ್ಲ. ಪ್ರೇಮ-ಭಗ್ನಳೂ ಆಗುತ್ತಾಳೆ. ಆದರೆ ಕೊನೆಗೆ ತನ್ನ ಮೊದಲನೆಯ ಪ್ರಣಯಿಯ ಕೈಯಿಂದಲೇ ಮಂಗಳಸೂತ್ರವನ್ನು ಕಟ್ಟಿಸಿಕೊಳ್ಳುತ್ತಾಳೆ. ಕಾದಂಬರಿಯು ಇಲ್ಲಿಗೆ ಮುಗಿಯುತ್ತದೆ.

ಈ ಮುಖ್ಯವಾದ ಕಥಾಪ್ರವಾಹಕ್ಕೆ ಹಲವು ಉಪಘಟನೆಗಳು ಸೇರಿ ಕಾದಂಬರಿಯು ಬೆಳೆದಿದೆ. ಹಾಲಳ್ಳಿಯ ಸುಬ್ಬನ ನಿಷ್ಕಪಟ ವಿಧೇಯತೆ, ಶ್ಯಾಮಯ್ಯಂಗಾರಿಯ ತಪ್ಪು ಹಾದಿ, ರಾಮಮಂದಿರದ ಕೆಲಸ, ಕಾವೇರಮ್ಮ ಮತ್ತು ವೆಂಕಟಸುಬ್ಬಯ್ಯ ಇವರ ಸಂಸಾರ, ರತ್ನಳ ಮಾವ ನಂಜುಂಡಯ್ಯನ ಬಾಳುವೆ, ಚಂದ್ರಶೇಖರ ಶಾಸ್ತ್ರಿಯ ಮುಗ್ಧಸ್ತ್ರೀತ್ವ, ರತ್ನಳನ್ನು ಪ್ರಣಯಪ್ರಸಂಗಕ್ಕೆ ಎಳೆದ ನಾಗೇಶನ ನಡತೆ, ನಾಗೇಂದ್ರನ ಪ್ರೇಮಾನ್ವೇಷಣೆ ಇವುಗಳು ಸೇರಿ, ಹಲವು ಭಾವಗಳು, ಹಲವು ರಸಗಳು ಜತೆಗೂಡಿ ಮೊದಲಿಂದ ತುದಿವರೆಗೆ ಕಥೆ ರಸವತ್ತಾಗಿ ಹರಿದಿದೆ.

ಕಾದಂಬರಿಕಾರರು ಇಲ್ಲಿ ಹಲತೆರದ ಜೀವನ ಚಿತ್ರಗಳನ್ನು ಚಿತ್ರಿಸಿದ್ದಾರೆ. ಹಳ್ಳಿಯ ಜನರ ನಿಷ್ಕಪಟತ್ವ, ಅಧಿಕಾರಿಗಳ ಮನೋಭಾವ, ಗಂಡಹೆಂಡಿರ ಪ್ರೇಮಮಯ ರಸಿಕ ಜೀವನ, ಕಲಿತ ಹುಡುಗಿಯರ ಚಂಚಲ ಮನಸ್ಸು, ಅತ್ತೆ-ಸೊಸೆಯರ ಸಂಬಂಧ, ಈ ತರದ ನಿತ್ಯ ಜೀವನದಲ್ಲಿ ಕಾಣುವ ಸಾಮಾನ್ಯ ಚಿತ್ರಗಳು ಕಾದಂಬರೀಕಾರರ ಲೇಖನಿಯಲ್ಲಿ ವಿಶೇಷ ಕಳೆಗೊಂಡಿವೆ. ರತ್ನ ಮತ್ತು ಶಂಕರ ಇವರ ದಾಂಪತ್ಯ ಪ್ರೇಮಜೀವನವನ್ನು ಬಹಳ ಲಂಬಿಸಿ ಬರೆದ ಕತೆಗಾರರು, ಕೊನೆಗೆ ರತ್ನಳ ವೈಧವ್ಯದಲ್ಲಿ ವಾಚಕರನ್ನು ಕಂಬನಿಗರೆಯುವಂತೆ ಮಾಡಿದ್ದಾರೆ. ಹಾಗೆ ವಿಷಾದಾಂತವಾಗಿ ಕೊನೆಗೊಳ್ಳಬಹುದಾಗಿದ್ದ ಕತೆಯನ್ನು ಸುಂದರಳ ವಿವಾಹದೊಡನೆ ಸುಖಾಂತಗೊಳಿಸಿ, ರತ್ನಳಂತೆ, ದುಃಖದಿಂದ ಭಾರವಾದ ವಾಚಕರ ಹೃದಯಗಳನ್ನೂ ಸ್ವಲ್ಪ ಹಗುರ ಮಾಡಿದ್ದಾರೆ.

ಸಮಾಜದ ಗುಣದೋಷಗಳನ್ನು ಸಾರುವಲ್ಲಿ, ಶ್ರೀ ಅ. ನ. ಕೃಷ್ಣರಾಯರದು ಒಂದು ಪ್ರತ್ಯೇಕ ಶೈಲಿ, ಅದು ಪೂರ್ಣ ಕಲಾಮಯವಾದುದು. ಭಾಷೆ ಅದಕ್ಕೆ ಒಪ್ಪುವಂತಹುದು. ಕೆಳಮಟ್ಟದ ಕೂಲಿಯಿಂದ ಹಿಡಿದು ಮೇಲ್ಮಟ್ಟದ ಅಧಿಕಾರಿ, ಸಾಹುಕಾರರ ವರೆಗೆ, ಅವರ ಮನೋಗತವನ್ನು ಅರಿತುಕೊಳ್ಳುವ, ಇದ್ದುದ್ದನ್ನು ರಸವತ್ತಾಗಿ ತಿಳಿಸಬಲ್ಲ ಕಲೆಗಾರಿಕೆ ಸಾಮಾನ್ಯವಾದುದಲ್ಲ.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳು ಯುಗುಗಳಿಗನುಸಾರವಾಗಿ ನಡೆಯುವ ದೇಶವಾಗಿಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಕರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನನ್ನ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅಮೋಘ/ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

ಸೇರಿಗೆ ರೂ. ೩

ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ.ಸಿ.ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪುರ ಕಾಲೇಜಿನ ಮಾಜಿ ಕೆಮಿಸ್ಟರಿ ಪ್ರೊಫೆಸರರು.

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ. —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜಂಟ್: ಶಾ. ಕಂಪೆನಿ, ಹಂಪನಕಟ್ಟಾ, ಮಂಗಳೂರು.

ಮಂಗಳ ಸೂತ್ರವು ಮೂರು ಮಂದಿ ಹೆಣ್ಣುಮಕ್ಕಳ ಸಂಸಾರ ಚಿತ್ರ. ಕಥೆಯ ನಾಯಕ ನಾಯಕಿಯರು ಯಾರೆಂದು ಸ್ಪಷ್ಟಹೇಳಬರುವುದಿಲ್ಲ. ರತ್ನ ಶಂಕರರು ಇದೇ ಕಥೆಯಲ್ಲಿ ಲಂಬಿಸಿ ಬಂದಿದ್ದರೂ ಮಧ್ಯಭಾಗದಲ್ಲಿ ಮಾತ್ರವಿದ್ದು ಅವಿ ಕೊನೆಗಳಲ್ಲಿ ಇರುವವರಲ್ಲ. ಅಂತ್ಯದ ದಂಪತಿಗಳಿಗೂ ಆದಿಯ ವಿವರಣೆಗೂ ಹೆಚ್ಚಿನ ಸಂಬಂಧವಿಲ್ಲ. ಮೊದಲಿನ ಕಾವೇರಮ್ಮನ ಸಂಸಾರ ಚಿತ್ರವು ಮಧ್ಯದ ಕೊನೆಯ ಸಂಸಾರ ಚಿತ್ರಗಳಿಗೆ ಅವಶ್ಯವಾಗಿರುವುದಿಲ್ಲ. ಒಂದೇ ತಂದೆತಾಯಿ ಮಕ್ಕಳ ಕಥೆಯೆಂಬುದರಿಂದ ಮಾತ್ರ ಇದೇ ಕಥೆಗೆ ಒಂದು ಸಂಬಂಧವುಂಟಲ್ಲದೆ ಅನ್ಯಥಾ ಪ್ರತಿಯೊಂದು ಘಟನೆಯೂ ಪ್ರತ್ಯೇಕ ಪ್ರತ್ಯೇಕವಾಗಿಯೂ ಪೂರ್ಣವಾಗಿದೆ. ಇದೇ ಕಥೆಯನ್ನು ನಾವು ಮೊದಲು ಹೇಳಿದಂತೆ ಮೂರು ಭಾಗವಾಗಿ ವಿಂಗಡಿಸಿಕೊಳ್ಳುವುದು ಸಮಂಜಸವಾಗಿ ತೋರುತ್ತದೆ. ಹೇಗಿದ್ದರೂ ಕನ್ನಡದ ಉತ್ತಮ ಕಾದಂಬರಿಗಳಲ್ಲಿ ಇದು ಒಂದು ರಸವತ್ತಾದ ಕಾದಂಬರಿಯೆಂಬುದಕ್ಕೆ ಏನೇನೂ ಸಂಶಯವಿಲ್ಲ.

ತಿಂಗಳಾದ ಮೈಲಾರಯ್ಯ ಮತ್ತು ರಾಘವೇಂದ್ರ ಈ ಇಬ್ಬರು ಕನ್ನಡದ ಕಲಾವಂತರು ತಮ್ಮ ಚಿತ್ರಗಳಿಂದ ಪುಸ್ತಕದ ಅಂದವನ್ನು ಹೆಚ್ಚಿಸಿದ್ದಾರೆ. ಶ್ರೀ ರಾಘವೇಂದ್ರರ ಮುಖಚಿತ್ರವು ಭಾವನಾಪೂರ್ಣವಾಗಿದೆ.

—ಕಯ್ಯಾರ.

†ಬರೆದವರು:- ಅ. ನ. ಕೃಷ್ಣರಾಯ. ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ. ಮನೋಹರ ಗ್ರಂಥ ಮಾಲೆಯ ಅಲ್ಲಿಕಿನೆಯ ಕುಸುಮ. ಕ್ರೌನ್ ೧/೮ ಆಕಾರದ ೩೩೪ ಪುಟಗಳು ಬೆಲೆ ೧–೮–೦.

NOTICE

The Kanara Enterprise, Ltd.
(Notice under Section 37 of the Indian Companies Act)

The Register of Members & Transfer Books of the Bank will remain closed from the 27th January 1941 to 9th February 1941 (both days inclusive)

Office of the Bank, Puttur. } U. N. LAKSHMAN, [illegible]

ವಿಚಿತ್ರ ಪ್ರಪಂಚ

ಕುಂಟ ನರ್ತಕಿಗೆ ನೂರಾರು ಪ್ರೇಮ ಪತ್ರಗಳು

ಒಲಿವ್ ಕೆಂಟ್ ಎಂಬಾಕೆ ಬ್ರಿಟನ್ನಿನ ಒಬ್ಬ ಪ್ರಸಿದ್ಧ ನರ್ತಕಿ. ಆದರೆ ಅವಳ ಒಂದು ಕಾಲು ಕುಂಟು. ಅವಳು ಒಂದು ಕಾಲಿನಿಂದಲೇ ಕುಣಿದು ಬಹಳ ಮಂದಿಯ ಮೆಚ್ಚುಗೆಯನ್ನು ಪಡೆದಿರುವಳು ಅಷ್ಟೇ ಅಲ್ಲ, ನೂರಾರು ಮಂದಿ ತರುಣರ ಹೃದಯದಲ್ಲಿ ಅವಳು ನಲಿಯುತ್ತಿದ್ದಾಳೆ. ಅವರು ಪ್ರತಿದಿನವೂ ಎಂಬಂತೆ ಅವಳಿಗೆ ಪ್ರೇಮಭಿಕ್ಷೆಯನ್ನು ಬೇಡಿ ಅವಳಿಗೆ ಪತ್ರಗಳನ್ನು ಬರೆಯುತ್ತಿದ್ದಾರೆ. ಇವುಗಳಿಗೆಲ್ಲ ಉತ್ತರಗಳನ್ನು ಬರೆಯುತ್ತ ಅವಳು ಪ್ರತಿದಿನವೂ ಕೆಲವು ತಾಸುಗಳ ಸಮಯವನ್ನು ಕಳೆಯಬೇಕಾಗುತ್ತಿದೆ. ಅವಳ ಒಲವಿನವರಲ್ಲಿ ಕೆಲವರು ಯುದ್ಧಕ್ಷೇತ್ರದಲ್ಲಿಯೂ ಇರುವರು. ಅಲ್ಲಿಂದಲೂ ಅವಳಿಗೆ ಅವರ ಪತ್ರಗಳು ಬರುತ್ತವೆ. ಮತ್ತು ಅವಳು ಸ್ವಲ್ಪ ಹೊತ್ತು ಅವರಿಂದೂ, ತಾಳಿದವನು ಬಾಳುವ ಎಂದೂ ಸನ್ಸ್ಫೂರ್ತಿ ಉತ್ಸಾಹಗಳನ್ನು ತುಂಬಿಸುವ ಉತ್ತರಗಳನ್ನು ಬರೆಯುವಳು.

◈ ◈

ಹೆಂಡಂದಿರಿಗೆ ಯುದ್ಧಕ್ಷೇತ್ರ ಮತ್ತು ಗಂಡಂದಿರಿಗೆ ಮನೆಕೆಲಸ

ಯುದ್ಧಕಾಲವಾಗಿರುವುದರಿಂದ ಬ್ರಿಟನ್ನಿನ ಸಮರ್ಥರಾದ ಹೆಂಗಸರೆಲ್ಲರೂ ಕಾರ್ಖಾನೆಗಳಲ್ಲಿಯೂ ಯುದ್ಧಕ್ಷೇತ್ರಗಳಲ್ಲಿಯೂ ಕೆಲಸ ಮಾಡಬೇಕಾಗಿ ಬಂದಿದೆ. ಆದುದರಿಂದ ಅಲ್ಲಿ ಮನೆ ಕೆಲಸಕ್ಕೆ ಯಾರೂ ಇರುವುದಿಲ್ಲ. ಹೀಗಿದ್ದರೂ ಅಲ್ಲಿಯ ಗಂಡಸರು—ಮನೆ ಕೆಲಸ ಹೆಂಗಸರದ್ದೇ ಎಂದು ಹೇಳಿ, ಅದನ್ನು ಅವರ ಪಾಲಿಗೇ ಬಿಟ್ಟಿಲ್ಲ. ಅಡಿಗೆಯನ್ನು ಸಹ ಅವರೇ ಮಾಡಲು ಮುಂದಾಗಿದ್ದಾರೆ! ಪಾಕಶಾಸ್ತ್ರವನ್ನು ಕಲಿಸುವುದಕ್ಕೋಸ್ಕರ ಗಂಡಸರ ಕ್ಲಾಸುಗಳು ಅಲ್ಲಿ ತೆರೆಯಲ್ಪಟ್ಟಿವೆ. ಪಾಕಶಾಸ್ತ್ರದ ಅನುಭವವಿಲ್ಲದ ಗಂಡಸರು ಈ ಕ್ಲಾಸುಗಳನ್ನು ಸೇರಿಕೊಂಡು ಅದನ್ನು ಕಲಿಯುತ್ತಿದ್ದಾರೆ. ಮಿಸೆಸ್ ಡೊರೊತಿ ಎಂಬ ಪಾಕಶಾಸ್ತ್ರ ನಿಪುಣೆಯು ಈ ಕ್ಲಾಸುಗಳ ವ್ಯವಸ್ಥೆ ಮಾಡಿದ್ದಾಳೆ. ಹೆಂಡಂದಿರು ಕಾರ್ಖಾನೆಗಳಲ್ಲಿ ಪರಿಶ್ರಮಪಟ್ಟು ಕೆಲಸ ಮಾಡಿ ಮನೆಗೆ ಮರಳುತ್ತಿರುವಾಗ, ಅವರ ಗಂಡಂದಿರು ರುಚಿಕರವಾದ ವ್ಯಷ್ಟಾನ್ನಭೋಜನವನ್ನು ಅವರಿಗಾಗಿ ಸಿದ್ಧ ಮಾಡಿ ದಾರಿ ಕಾಯುವರು!

◈ ◈

ಪ್ಯಾರಿಸ್ ಗಿಳಿಯ — ನಾಜೀ ದ್ವೇಷ!

ಜರ್ಮನಿಗಧೀನವಾದ ಫ್ರಾನ್ಸಿನ ಪ್ಯಾರಿಸ್ ನಗರದಲ್ಲಿರುವ ಒಂದು ಗಿಳಿ, ನಾಜಿಗಳ ವಕ್ರದೃಷ್ಟಿಗೆ ಪಾತ್ರವಾಗಿ ಗಲ್ಲಿಗೇರಿಸಲ್ಪಟ್ಟಿತು! ಪ್ಯಾರಿಸು ನಾಜಿಗಳ ಅಧೀನವಾದ ಮೇಲೆ ಕೆಲವು ಜನ ನಾಜಿಗಳು ಅಲ್ಲಿನ ಒಂದು ಹೊಟೇಲಿನಲ್ಲಿ ಇಳಕೊಂಡಿದ್ದರು. ಅಲ್ಲಿ ಒಂದು ಗೂಡಿನೊಳಗಿದ್ದ ಗಿಳಿ—'ಜರ್ಮನರ ಸರ್ವನಾಶವಾಗಲಿ' ಎಂದು ಕೂಗಿತಂತೆ. ಇದನ್ನು ಕೇಳಿದ ನಾಜಿಗಳು ಕ್ರೋಧದಿಂದ ಸಂತಪ್ತರಾದರು. ಉನ್ಮತ್ತರಾಗಿ ಅವರು ಕರ್ತವ್ಯವಿಮೂಢರಾದರು; ಮತ್ತೆ ಆ ಹೊಟೇಲಿನ ಮಾಲಕನನ್ನೇ ದಂಡಿಸಲಿಕ್ಕೆ ಹೋದರು. ಆಗ—'ನಾನು ನಿರಪರಾಧಿ. ಹೀಗೆ ಹೇಳಲಿಕ್ಕೆ ಕಲಿಸಲಿಲ್ಲ. ೭೦-೮೦ ವರ್ಷಗಳಿಂದಲೂ ಅದು ಹೀಗೆ ಕೂಗುತ್ತಾ ಉಂಟು' ಎಂದು ಅವನು ನಾಜಿಗಳಿಗೆ ತಿಳಿಸಿದ. ಆಗಲೇ ಆ ಗಿಳಿ—'ಬಿಸ್ಮಾರ್ಕನು ಸಾಯಲಿ' ಎಂದು ಅರಚಿತು. ಹೊಟೇಲು ಮಾಲಕನು ಹೇಳಿದ ಮಾತು ಸತ್ಯವೆಂದು ನಾಜಿಗಳಿಗೆ ಬೋಧೆಯಾಯಿತು. ಬಿಸ್ಮಾರ್ಕನು ಜರ್ಮನಿಯ ರಾಜನಾಗಿದ್ದುದು ೭೦ ವರ್ಷಗಳ ಹಿಂದೆ. ಅಂದಿನಿಂದಲೂ ಅದು ಹೀಗೆ ಹೇಳುತ್ತಾ ಉಂಟು. ಹೊಟೇಲಿನ ಮಾಲಕನನ್ನು ಪಾರು ಮಾಡಿದರೆ ಈ ಗಿಳಿ ನಿಜಕ್ಕೂ ಅಪರಾಧಿ ಹೌದು. ಜರ್ಮನರನ್ನು ಬಯ್ಯುವ ಈ ಮಾತುಗಳನ್ನು ಅದೇಕೆ ಬಾಯಿಪಾಠ ಕಲಿಯಬೇಕಿತ್ತು? ಎಂದು ಆ ಪಾಪದ ಗಿಳಿಯನ್ನು ಕೊಂದೇ ಹಾಕಿದರು!

◈ ◈

ಜೀವಜಂತುಗಳ ಬುದ್ಧಿಶಕ್ತಿ!

ಜೀವಜಂತುಗಳು ಕೆಲವು ಕೆಲವು ಸಂದರ್ಭಗಳಲ್ಲಿ ಅವು ಮನುಷ್ಯನಿಗಿಂತಲೂ ಹೆಚ್ಚು ಬುದ್ಧಿವಂತವಾಗಿ ಇರುತ್ತವೆ. ಓಲ್ಲಿ ಎಂಬ ಒಂದು ಟೇರಿಯರ್ ನಾಯಿ, ಯಾವ ಶಿಕ್ಷಣ ಅಥವಾ ತರಬೇತಿಯನ್ನೂ ಪಡೆಯದೆ ಸಣ್ಣ ಸಣ್ಣ ಗಣಿಸುವ ಲೆಕ್ಕಗಳನ್ನು ಮಾಡಿ, ಉತ್ತರಗಳನ್ನು ಕೊಡುತ್ತಿತ್ತು. ಮತ್ತೆ ಈ ನಾಯಿಯು ಒಂದು ಮಾರ್ತಿ ಲೀಟಾ ಎಂಬುದು ಸಮಯವೆಷ್ಟು ಹೇಳುತ್ತಿದ್ದುದು ಮಾತ್ರವಲ್ಲದೆ ಲೆಕ್ಕಗಳನ್ನೂ ಮಾಡುತ್ತಿತ್ತು. ಧ್ವಜಪತಾಕೆಗಳು ಹಾರಾಡುತ್ತಿದ್ದ ದಿನಗಳನ್ನೆಲ್ಲ ರಜಾದಿನಗಳೆಂದು ಭಾವಿಸಿ ಆ ದಿನಗಳಲ್ಲಿ ಯಾವ ಕೆಲಸಗಳನ್ನೂ ಮಾಡುತ್ತಿದ್ದಿಲ. ಮತ್ತೆ ಪ್ರಾಣಿಗಳಿಗೆ ಬಹುದೂರದಲ್ಲಿ ಘಟಿಸಿದ ಸಂಗತಿಗಳೂ ಗೊತ್ತಾಗುತ್ತವೆ. ಇಟಲಿಯ ಒಬ್ಬ ಬಣ್ಣಗಾರನು ತನ್ನ ಒಂದು ಕತ್ತೆಯ ಮೇಲೆ ಪರ್ವತ ಪ್ರಯಾಣ ಮಾಡುತ್ತ ಇದ್ದ. ಅವನು ಇನ್ನೊಂದು ಊರಿಗೆ ಬಂದ. ಅಲ್ಲಿಯ ಒಬ್ಬ ಹೊಟೇಲು ಮಾಲಿಕಿಯೊಂದಿಗೆ ಮಾತನಾಡುತ್ತಿದ್ದ ಹಾಗೆಯೇ ಆತನು ಕಟ್ಟಿಕೊಂಡಿದ್ದ ಕತ್ತೆ, ಅನಿರೀಕ್ಷಿತವಾಗಿ ಕಿರುಚಿ, ಸಿಡಿಲು ಬಡಿದ ಹಾಗೆ ನೆಲಕ್ಕೆ ಬಿದ್ದಿತು. ಇದನ್ನು ಕಂಡು ಬಣ್ಣಗಾರನಿಗೆ ಬಹಳ ಆಶ್ಚರ್ಯವಾಯಿತು. ಮತ್ತೆ ವಿಚಾರಿಸಿ ತಿಳಿದುಕೊಂಡಾಗ ಅದೇ ಸಮಯಕ್ಕೆ ಅವನ ಊರಿನಲ್ಲಿ ಆತನ ಚಿಕ್ಕ ಮಗು ಸತ್ತುಹೋಗಿತ್ತೆಂದು ಗೊತ್ತಾಯಿತು.

◈ ◈

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ

HALFTONE & LINE BLOCK MAKING UNDERTAKEN

Sharada Press
MANGALORE

BHUVANENDRA PRODUCTS LTD.,

KATAPADI, S. K.

Why Doctors prescribe

"BHUVANENDRA"

NARAYANA TAILA

Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರ ನಾರಾಯಣ ತೈಲ

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ

ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ಟೋಕಿಸ್ಟರು:—

ಯು ಪಾಂಡುರಂಗ ನಾಯಕ್, ರಥಬೀದಿ

ರಾಘವೇಂದ್ರ ರಂಗ ಶೈ, ರಥಬೀದಿ.

ಡಾ॥ ಎಮ್. ಎಸ್. ಪ್ರಭು, ಸಿ. ವಿ. ಸಿ. ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ನೋಬೆಲ್ ಪಾರಿತೋಷಿಕ ಪಡೆದ ಕಾದಂಬರಿಕಾರಳು.

ಶ್ರೀಮತಿ ಪರ್ಲ್. ಎಸ್. ಬಕ್ಕಳ ಜೀವನ ಪರಿಚಯ
ಪೂರ್ವದೇಶಗಳ ಕಡೆಗೆ ಆಕೆಯ ಒಲವು ಹೆಚ್ಚು!

ಸಾಹಿತ್ಯ ಸಾಮ್ರಾಜ್ಯದಲ್ಲಿ ಹಿರಿಯ ಮನ್ನಣೆಯ ಪಟ್ಟವನ್ನೇರಿದ ಶ್ರೀಮತಿ ಪರ್ಲ್. ಎಸ್. ಬಕ್ಕಳ ಕೀರ್ತಿಯೂ, ಆಕೆಯ ಅಮರ ಕಾದಂಬರಿಯಾದ "ದಿ ಮದರ್" (ಅಮ್ಮಾ) ಇದರ ಹೆಸರೂ, ಪ್ರಭಾಪೂರ್ಣವಾಗಿ-ವಿಶಾಲ ವಿಶ್ವದಲ್ಲಿಯೇ ಶಾಶ್ವತವೆನಿಸಿ ನೆಲೆನಿಲ್ಲುವಷ್ಟು ಮಹತ್ವದ್ದಾಗಿದೆ "ದಿ ಮದರ್" ಕಾದಂಬರಿಗೆ ೧೯೩೮ರಲ್ಲಿ ನೋಬೆಲ್ ಬಹುಮಾನವು ದೊರಕಿತು. ಆ ವಿಶೇಷ ಗೌರವದೊಡನೆ ಆಕೆಯ ಕೀರ್ತಿಯೂ ಎಲ್ಲೆಡೆಗಳಲ್ಲಿಯೂ ಪಸರಿಸಿತು. ಅದೇ ಕಥೆಯನ್ನವಲಂಬಿಸಿ "ಮೆಟ್ರೊ ಗೋಲ್ಡ್ವಿನ್ ಮೇಯರ್" ಚಿತ್ರಕಂಪೆನಿಯವರು "ಗುಡ್ ಅರ್ತ್" ಎಂಬ ಹೆಸರಿನಿಂದ ಭವ್ಯವಾದೊಂದು ಚಲಚ್ಚಿತ್ರವನ್ನು ತಯಾರಿಸಿದರು. ಆಂಗ್ಲ ಚಿತ್ರಗಳಲ್ಲಿ ಇದು ಸರ್ವ ವಿಧದಿಂದಲೂ ಅತ್ಯಂತ ಭಾಸ್ವರವೆಂದು ಪ್ರಶಂಸನೀಯವಾಯಿತು. ಶ್ರೀಮತಿ ಪರ್ಲ್ ಎಸ್. ಬಕ್ಕಳ ಕೀರ್ತಿಯು ಇದರಿಂದಲೂ ಅತ್ಯಂತ ಹೆಚ್ಚಿತೆಂಬುದನ್ನು ಪ್ರತ್ಯೇಕ ಹೇಳತಕ್ಕ ಅವಶ್ಯವುಂಟೆ?

ಚೈನೀಯ ಜೀವನ ಚಿತ್ರ

ಚೈನೀಯರ ಜೀವನ ಚಿತ್ರವನ್ನು, 'ದಿ ಮದರ್' ಕಾದಂಬರಿಯಲ್ಲಿ ಶ್ರೀಮತಿ ಪರ್ಲ್. ಎಸ್. ಬಕ್ಕಳು ಚಿತ್ರಿಸಿದಳು. ಚೈನದ ಅಂತರಂಗವನ್ನು, ಅಲ್ಲಿನ ಸಮಾಜಸ್ವರೂಪವನ್ನು, ಆ ಜನರ ದೋಷಗುಣಗಳನ್ನು, ಅಷ್ಟೊಂದು ಭವ್ಯವಾಗಿ, ಅಷ್ಟೊಂದು ಸುಂದರವಾಗಿ, ಅಷ್ಟೊಂದು ಸಹಜವಾಗಿ ಚಿತ್ರಿಸುವುದು ಯಾವ ಲೇಖಕನಿಗೂ ಅಸಾಧ್ಯವಾಗಿದೆಯೆಂಬಷ್ಟು ಪೂರ್ಣತೆಯಿಂದ ಆಕೆ ಆ ಕಾದಂಬರಿಯನ್ನು ಬರೆದಳು. ಯಾವನೇ ಲೇಖಕನಾಗಲಿ, ಕವಿಯಾಗಲಿ, ಕಾದಂಬರಿಕಾರನಾಗಲಿ, ತಾನು ಕಂಡ ಜೀವನವೊಂದನ್ನು ತನ್ನ ಕಲ್ಪನೆಯ ಚಿತ್ರದಲ್ಲಿ ಹಿಡಿದು ಅದನ್ನು ಓದುಗರಿಗೆ ಅರ್ಪಿಸುತ್ತಾನೆ; ಆದರೆ ಶ್ರೀಮತಿ ಬಕ್ಕಳು ಯಾವುದು ಸಹಜವಾಗಿ ನೆಲಸಿರುವ ಜೀವನವೋ ಅದನ್ನೇ ತೆಗೆದು ಮೊಗೆದು ತೋರಿಸಿಬಿಡಬಲ್ಲಳು. ಈ ಅಭೂತಪೂರ್ವ ಶಕ್ತಿಗೆ, ಕಲಾಸಾಮರ್ಥ್ಯಕ್ಕೆ ಪಾಶ್ಚಾತ್ಯ ಸಾಹಿತ್ಯ ಪ್ರಪಂಚವೇ ಬೆರಗುಗೊಂಡಿತು! ನೋಬೆಲ್ ಗೌರವ ಮಾಲಿಕೆಯು ಆಕೆಯನ್ನು ಅರಸಿಬಂದಿತು!

ಪೂರ್ವ ರಾಷ್ಟ್ರಗಳ ಪ್ರೀತಿ

ಶ್ರೀಮತಿ ಬಕ್ಕಳ ಬಾಲ್ಯಜೀವನದ ವಿಷಯ ಹೆಚ್ಚೇನೂ ತಿಳಿಯುವುದಿಲ್ಲ. ಅಮೇರಿಕನ್ ಮಿಶನರಿಯೊಬ್ಬನು, ತನ್ನ ಅಂಗ್ಲ ಪತ್ನಿಯೊಡನೆ ಶಾಂಗಾಯಿಗೆ ಬಂದಿದ್ದನು. ಅವರ ಕುಮಾರಿಯೇ ಬಕ್ಕಳು. ಆಗ ಅವಳು ಬಹಳ ಸಣ್ಣ ಮಗುವಾಗಿದ್ದಳು. ಆ ಮೇಲೆ ಬಕ್ಕಳಿಗೆ ಚೈನವೇ ತನ್ನ ಮಾತೃಭೂಮಿಯಾಯಿತು. ಪೂರ್ವದೇಶದ ಜನರ ದಾರಿದ್ರ್ಯ ಸಂಕಷ್ಟಗಳು-ಅದರಲ್ಲಿಯೂ ತನ್ನ ಮಾತೃಭೂಮಿಯೆನಿಸಿದ ಚೈನದ ಪರಿಭವವು ಆಕೆಯ ಮನಸ್ಸಿನಲ್ಲಿ ಅತ್ಯಂತ ಪರಿಣಾಮವನ್ನು ಉಂಟುಮಾಡಿದವು. ಭಾರತದ ದುರ್ದೆಸೆಯೂ ಆಕೆಯನ್ನು ಬಹಳವಾಗಿ ಸೆಳೆಯಿತು. ಅಮೇರಿಕಾ, ಲಂಡನ್ ನಗರಗಳಲ್ಲಿರುವ ಕೃತ್ರಿಮ ಜೀವನವನ್ನು ಪೂರ್ವದೇಶದ ದಾರಿದ್ರ್ಯಮಾಪವೂ, ಸಹಜ ಜೀವನದೊಡನೆ ಹೋಲಿಸಿ ಆಕೆ ದಿನದಿಂದ ದಿನಕ್ಕೆ ಪೂರ್ವದ ರಾಷ್ಟ್ರಗಳ ಕಡೆಗೇ ಹೆಚ್ಚು ಹೆಚ್ಚು ಮನವೊಲಿದಳು.

ಬರೆಹಗಾರರು

ಶ್ರೀಮತಿ ಬಕ್ಕಳು ಉತ್ತಮ ಕಾದಂಬರೀಕಾರಳೆಂದೂ, ಶ್ರೇಷ್ಠ ತರಗತಿಯ ಕತೆಗಾರ್ತಿಯೆಂದೂ ಹೆಸರು ಪಡೆದದ್ದು ಮಾತ್ರವಲ್ಲದೆ, ಪ್ರಸಿದ್ಧಳಾದ ಪತ್ರಿಕೋದ್ಯಮಿಯೆಂದೂ ಹೆಸರು ಹೊಂದಿರುವಳು. 'ಏಶ್ಯಾ' ಪತ್ರಿಕೆಯಲ್ಲಿ ಆಕೆ ವಿಮರ್ಶಕಳಾಗಿ ಅತ್ಯಂತ ಕೀರ್ತಿಗೆ ಬಂದಿರುವಳು. ಪಂಡಿತ ನೆಹರುಗಳ ಆತ್ಮ ಚರಿತ್ರೆಯ ಕುರಿತು ಆಕೆ 'ಏಶ್ಯಾ'ದಲ್ಲಿ ಬರೆದ ವಿಮರ್ಶೆಯ ಕುರಿತು ಸ್ವತಃ ನೆಹರುಗಳೇ ಅದು ಅತ್ಯುತ್ತಮವಾದ ವಿಮರ್ಶೆಯೆಂದು ಹೇಳಿರುವರು. ಶ್ರೀಮತಿ ಬಕ್ಕಳ ಪರಿಶ್ರಮದಿಂದಲೇ ಕವೀಂದ್ರ ಠಾಗೋರರು ತನ್ನ 'ಚಾರ್ ಅಧ್ಯಾಯ' ಎಂಬ ಕಾದಂಬರಿಯನ್ನು ಭಾಷಾಂತರಿಸಿ 'ಏಶ್ಯಾ' ಪತ್ರಿಕೆಯಲ್ಲಿ ಪ್ರಕಟಪಡಿಸಿದರು. ಶ್ರೀಮತಿ ಬಕ್ಕಳು ಸಾಮಾನ್ಯ ಜನತೆಯ ಜೀವನವನ್ನು ಹೆಚ್ಚಾಗಿ ಅಭ್ಯಸಿಸುತ್ತಾಳೆ. ಅವರ ಜೀವನದ ಸುಖದುಃಖಗಳಿಂದ ತನ್ನ ಕತೆಗಳಿಗೆ ಸ್ವರೂಪ ಸಂಪತ್ತನ್ನು ತಂದುಕೊಳ್ಳುತ್ತಾಳೆ. ಜೀವನವನ್ನು ಚಿತ್ರಿಸುವ ಕಾರ್ಯವು ಬಹಳ ಸಮಸ್ಯಾತ್ಮಕವಾದುದು. ಜೀವನ ವೈವಿಧ್ಯ, ಜನಾಂಗ ವೈವಿಧ್ಯ, ಅಭಿರುಚಿ ವೈವಿಧ್ಯಗಳಿಂದ, ಜೀವನವನ್ನು ಚಿತ್ರಿಸುವಾಗ ಕಲಾವಿದರು ಭಿನ್ನಭಿನ್ನತೆಯನ್ನು ಕಾಣುವುದು ಸಹಜವಿದೆ. ಆದರೆ ಜನತೆಯೊಡನೆ ಬೆರೆತು ಅವರ ಸುಖದುಃಖಗಳಲ್ಲಿ ಸೇರಿಕೊಂಡಿರುವವರಿಗೆ ಜೀವನ ಚಿತ್ರದಲ್ಲಿ ಅಂತಹ ಸಮಸ್ಯೆಯು ಹೆಚ್ಚಾಗಿ ಬರಲಾರದು. ಅವರು ಜನತೆಯ ಅಂತರಾಳಕ್ಕಿಳಿದು ಅಲ್ಲಿಂದ ನಿಜಸತ್ಯವನ್ನು ಕಂಡು ಮೇಲೆತ್ತಿ ತೋರಿಸುವರು. ಶ್ರೀಮತಿ ಬಕ್ಕಳದು ಅದರಲ್ಲಿ ನುರಿತ ಕೈಯಾಗಿದೆ; ಹದವಾದ ಆತ್ಮವಾಗಿದೆ.

ಜೀವನ ಧರ್ಮ ಚಿತ್ರೀಕರಣ

ಟೊಳ್ಳಾದ ನಾವೀನ್ಯ ಚಿತ್ರಣಕ್ಕಿಂತ, ಜೀವನ ಧರ್ಮದ ಪರಿಚಯ ಮಾಡುವ ಚಿತ್ರೀಕರಣವೇ, ಹೆಚ್ಚಿನ ಫಲಕಾರಿಯಾದುದೆಂಬುದನ್ನು ಶ್ರೀಮತಿ ಬಕ್ಕಳು ಚೆನ್ನಾಗಿ ಅರಿತುಕೊಂಡಿರುವಳು. ನಿಜವಾದ ಸಾಹಿತ್ಯವು ಜನತೆಯ ಚಲನವಲನಗಳ ಮೂಲಕ ಸಂಸಾರದಲ್ಲಿ ಕೂಡಿ ನಡೆದು ಮಾಡುವ ಕಾರ್ಯಗಳ ಅನುಭವದಿಂದ-ಹೆಚ್ಚು ಭವ್ಯವಾಗುತ್ತದೆ. 'ದಿ ಮದರ್' ಕಾದಂಬರಿಯನ್ನು ಓದಿದವರಿಗೆ ಈ ವಿಷಯವು ಚೆನ್ನಾಗಿ ಅಭಿವ್ಯಕ್ತವಾಗದಿರದು. ಶ್ರೀಮತಿ ಬಕ್ಕಳ ಸಾಹಿತ್ಯ ಸಂಪತ್ತನ್ನು ಅರಿತುಕೊಳ್ಳಬೇಕಾದರೆ, ನಾವು ಆಕೆಯ ಆ ಉಜ್ವಲ ಕಾದಂಬರಿಯನ್ನೇ ಓದಬೇಕು. ಈ ಕಾದಂಬರಿಯಲ್ಲಿ ಆಕೆಯು ತನ್ನ ಲೇಖನಶಕ್ತಿಯ ಪೂರ್ಣ ಪ್ರಭಾವನ್ನು ತೋರಿಸಿದ್ದಾಳೆ. ಈ ಕಾದಂಬರಿಯನ್ನು ಬರೆದ ಕೂಡಲೇ ಆಕೆ ಪ್ರಪಂಚದಲ್ಲಿ ಪ್ರತಿಷ್ಠೆಯನ್ನು ಪಡೆದ ಸಾಹಿತ್ಯ ಸೇವಕರ ಸ್ಥಾನವನ್ನು ಪಡೆದಳು. ಇಲ್ಲಿ ಆಕೆಯ ಪೂರ್ಣತೆಯನ್ನು, ಕಲಾ ಸಂಪತ್ತಿಯನ್ನು, ಜೀವನ ಚಿತ್ರೀಕರಣವನ್ನು, ಮಾನವ ಹೃದಯ ಪರೀಕ್ಷಣಾಭ್ಯಾಸವನ್ನು ಕಾಣಬಹುದು. ಇದಕ್ಕಿಂತ ಸಹಜವಾಗಿ ಸುಂದರವಾಗಿ, ಮಾನವ ಜೀವನದ ವಿ... ಳಿಕಗಳನ್ನು ತೋರಿಸುವುದು ಸಾಧ್ಯವುಂಟೇ ಎಂದು ರಸಿಕ ಲೋಕವು ತಲೆದೂಗುವಂತೆ ಆಕೆ ಆ ಕಾದಂಬರಿಯನ್ನು ಬರೆದಿರುವಳು.

ವಿಶೇಷ ಕಾಣಿಕೆ

ಯಾವುದೇ ಲೇಖಕನಾಗಲಿ ಆತನ ಮಹತ್ವವು ಎತ್ತಿ ತೋರಬೇಕಾದರೆ ಜಗತ್ತಿಗೆ ಹೊಚ್ಚ ಹೊಸತೆಂಬಂತಹ ಅಸದೃಶ ಕೃತಿಯೊಂದು ಆತನಿಂದ ಸಲ್ಲಬೇಕಾಗಿದೆ. ಇಂತಹ ಸರ್ವಸಾಮಾನ್ಯವಲ್ಲದ ಪ್ರತಿಭೆ ಶ್ರೀಮತಿ ಬಕ್ಕಳಲ್ಲಿ ನೆಲಸಿದೆ. ತನ್ನ ಕಥೆ ಕಾದಂಬರಿಗಳೆಲ್ಲವುಗಳಲ್ಲಿಯೂ ಆಕೆ ಇಂತಹ ನಾವೀನ್ಯತೆಯನ್ನು ತುಂಬಿ ಕೃತಾರ್ಥಳಾಗಿದ್ದಾಳೆ. ಆಕೆಯ ಕೃತಿಗಳು ಸ್ವತಂತ್ರ ಭಾವನೆಯ ಸುಂದರ ಫಲಗಳು. ಯಾವುದೇ ವಸ್ತುವನ್ನವಲಂಬಿಸಿ ಆಕೆ ಬರೆಯಲಿ, ಅದರಲ್ಲಿ ಜೀವನವು ಆಕೆಯ ಲೇಖನಿಯೊಡನೆ ಸ್ಫುರಿಸಿ ಬರದಿರದು. ಉತ್ತಮ ಕಲಾವಿದೆಯಾಗಿ, ಶ್ರೇಷ್ಠ ತರಗತಿಯಲ್ಲಿ ಮಾನವ ಜೀವನದ ಚಿತ್ರೀಕರಣ ಸಮರ್ಥೆಯೆನಿಸಿ ವಿಶಾಲ ವಿಶ್ವದಲ್ಲಿಯೆ ಶ್ರೀಮತಿ ಬಕ್ಕಳು ತನ್ನದೊಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿರುವಳು.

—K. K. Rai



ಇಟಲಿಯನರಿಗೆ ಯುದ್ಧ ಬೇಡ!

ಅಂತಃಕಲಹದ ಜ್ವಾಲಾಮುಖಿಯೇಳುವುದೆ?

ಮುಸಲನಿ ಮೇಲೆ ಅತೃಪ್ತಿಯಿರುವುದಂತೆ!

ಮುಸಲನಿ

ಭೂಮಧ್ಯ ಸಮುದ್ರದಲ್ಲಿ ಯುದ್ಧದ ವಿಷ ಬೀಜವನ್ನು ಬಿತ್ತಿದ ಮುಸಲೋನಿ, ಈಗ ಅದರ ಫಲವನ್ನು ತಾನೇ ಉಣ್ಣಬೇಕಾಗಿ ಬಂದಿದೆ ಬಿದ್ದ ಫ್ರಾನ್ಸಿನ ಮೇಲೆ ಗುದ್ದನ್ನಿಟ್ಟ ಮುಸಲೋನಿ, ಇಷ್ಟು ಬೇಗನೆ ತನಗೆ ಫ್ರಾನ್ಸಿಗಿಂತಲೂ ಕೀಳಾದ ಗತಿಯು ಪ್ರಾಪ್ತವಾಗುವದೆಂದು ಕನಸು ಮನಸುಗಳಲ್ಲಿಯೂ ಎಣಿಸಿರಲಿಕ್ಕಿಲ್ಲ. ಫ್ರಾನ್ಸು ಬಿದ್ದಾಗಲೂ ಕೂಡ ಮುಸಲೋನಿಯು ಅದರೊಳಗೆ ಪ್ರವೇಶಮಾಡಲು ಸಮರ್ಥನಾಗಿರಲಿಲ್ಲ ಕೇವಲ ಕುತಂತ್ರದಿಂದ ಮುಸಲೋನಿ ತನ್ನ ಬೇಳೆಯನ್ನು ಬೇಯಿಸಿದ್ದನು ಈಗ ಮುಸಲೋನಿಯ ಸೈನಿಕರ ಧೈರ್ಯ ಸ್ಥೈರ್ಯಗಳು ಚೆನ್ನಾಗಿ ಪ್ರಕಾಶಕ್ಕೆ ಬಂದಿವೆ

ಈ ಸೈನಿಕರು ರಣರಂಗದಿಂದ ಪಲಾಯನ ಮಾಡುವುದಷ್ಟನ್ನೇ ಕಲಿತಿರುವರಲ್ಲದೆ ಮತ್ತೇನಿಲ್ಲ! ಇದ ಗ್ರೀಸಿನ, ಉತ್ತರ ಆಫ್ರಿಕದ, ಕೆನಿಯದ ಯುದ್ಧಗಳಲ್ಲಿ ಈಗ ಚೆನ್ನಾಗಿ ತಿಳಿದುಬಂದಿದೆ

ಇಟಲಿಯಲ್ಲಿ ಅಸಮಾಧಾನ

ಗ್ರೀಸು, ಉತ್ತರ ಆಫ್ರಿಕ, ಕೆನಿಯ ಮೊದಲಾದ ಯುದ್ಧಕ್ಷೇತ್ರಗಳಲ್ಲಿ ಮುಸಲೋನಿಗೆ ಒಂದರಮೇಲೊಂದಾಗಿ ಪ್ರಾಪ್ತವಾದ ಸೋಲು ಇಟಲಿಯಲ್ಲಿ ಬಹಳ ದುಷ್ಪರಿಣಾಮವನ್ನು ಉಂಟುಮಾಡಿರುವದು ಜನರು ಮುಸಲೋನಿ ಮತ್ತು ಅವನ ಫೇಸಿಸ್ಟ ದಳದ ಮೇಲೆ ಬಹಳ ಅಸಮಾಧಾನದಿಂದಿದ್ದಾರೆ ಅನೇಕ ದೇಶಪ್ರೇಮಿಗಳು ಈ ಪರಾಭವದಿಂದ ಬಹಳನೊಂದು ಬೆಂದು ಮುಸಲೋನಿಯ ಮೇಲೆ ಒಳಗಿಂದೊಳಗೆಯೇ ಉರಿಕಾರುತ್ತಿರುವರು. ಈಗ ಜರ್ಮನ ಸೈನಿಕರು ಇಟಲಿಯನ್ನು ತುಳಿಯುತ್ತಿರುವದರಿಂದ ಉರಿಯುವ ಬೆಂಕಿಗೆ ತುಪ್ಪವನ್ನು ಹಾಕಿದಂತಾಗಿದೆ ಜನರಿಗೂ ಮುಸಲೋನಿಯ ಅಂಥ ಅನುಯಾಯಿಗಳಿಗೂ ಅಲ್ಲಲ್ಲಿ ಪ್ರತ್ಯಕ್ಷ ಹೋರಾಟಗಳೂ ಆಗಿವೆ. ಅಂತಃಕಲಹದ ಕಿಚ್ಚು ಇಟಲಿಯಲ್ಲಿ ಹೊಗೆಯಾಡುತ್ತಿರುವದು

ಮುಸಲೋನಿಗೆ ವಿರೋಧ

ಇಟಲಿಯ ಸರ್ವಾಧಿಕಾರಿಯಾಗಿ ಇಷ್ಟು ವರ್ಷ ನಿರಂಕುಶ ಶಾಸನಮಾಡಿದ ಮುಸಲೋನಿಯು ಪದಚ್ಯುತನಾಗುವದು ಸುಲಭ ಸಾಧ್ಯವಲ್ಲ ಆದರೂ ಇಟಲಿಯಲ್ಲಿ ಆ ಬಗ್ಗೆ ತುಂಬಾ ಪ್ರಯತ್ನಗಳು ನಡೆಯುತ್ತಿವೆ ಎಂಬುದರಲ್ಲಿ ಸುಳ್ಳಿಲ್ಲ ಮುಸಲೋನಿಗೆ ವಿರೋಧವು ಬೆಳೆಯುತ್ತಲಿದೆ ಹಿರಿಯ ಸೇನಾಪತಿಗಳೇ ಅವನಿಗೆ ವಿರೋಧವಾಗುತ್ತಿದ್ದಾರೆ ಮುಸಲೋನಿ ಹಿಟ್ಲರನಿಗೆ ಬಗ್ಗುತ್ತ ಹೋದ ಹಾಗೆ ಈ ವಿರೋಧವು ಹೆಚ್ಚುತ್ತಾ ಇದೆ. ಇಟಲಿಗೆ ಬ್ರಿಟಿಷರ ಶತ್ರುತ್ವಕ್ಕಿಂತಲೂ ನಾಝಿಗಳ ಮಿತ್ರತ್ವವು ಹೆಚ್ಚಿಗೆ ಸೇಡನ್ನುಂಟುಮಾಡುವದೆಂಬ ಭಾವನೆಯು ಸರ್ವತ್ರ ಪ್ರಚಾರ ಹೊಂದುತ್ತಾ ಇದೆ ಬ್ರೆನ್ನರ ಕಣಿವೆಯ ಮೂಲಕ ಜರ್ಮನರ ದಾಳಿಯ ಭಯವು ಇಟಲಿಗೆ ಇದ್ದೇ ಇದೆ ಎಂಬುದನ್ನು ಸೇನಾಪತಿಗಳು ನಂಬಿರುವರು ಆದರೆ ಮುಸಲೋನಿ ಇದಕ್ಕೆ ಮಹತ್ವವನ್ನು ಕೊಡುವದಿಲ್ಲ. ಆದ್ದರಿಂದ ಪರದೆಯೊಳಗಿನ ಈ ತಿಕ್ಕಾಟ ಮತ್ತು ವಿಚಾರ ಸಂಘರ್ಷದಿಂದ ಇಟಲಿಯಲ್ಲಿ ಯಾವಾಗ ಬೇಕಾದರೂ ಜ್ವಾಲಾಮುಖಿ ಏಳಬಹುದು ಎಂದು ಅಲ್ಲಿಯ ರಾಜಕಾರಣ ತಜ್ಞರೇ ಹೇಳಿದ್ದಾರೆ

ಯಾಕಾಗಿ ಯುದ್ಧ?

ಈ ಪ್ರಶ್ನೆಯನ್ನು ಪ್ರತಿಯೊಬ್ಬ ಇಟಾಲಿಯಾನನೂ ಪ್ರಶ್ನಿಸತೊಡಗಿರುವನು. ಬ್ರಿಟಿಷರೊಡನೆಯಾಗದ್ದದಲ್ಲಿ ಇಟಲಿಯು ಗೆದ್ದರೂ ಅದಕ್ಕೆ ಸಿಕ್ಕುವ ಲಾಭವೇನು? ಯುದ್ಧದಿಂದ ದುರ್ಬಲವಾದ ಇಟಲಿಯು ಜರ್ಮನಿಗೆ ಅಧೀನವಾಗಿ ಇರಬೇಕಾದಂಥ ಪ್ರಸಂಗ ಬರಲಾರದೆಂದು ಯಾರು ಹೇಳಬಹುದು? ಈ ಸಂದೇಹವು ಪ್ರತಿಯೊಬ್ಬ ಇಟಾಲಿಯನನನ್ನು ಪೀಡಿಸತೊಡಗಿದೆ ಆದ್ದರಿಂದಲೇ ಮುಸಲೋನಿಯ ಪತನವಾಗಲಿ! ಅವನು ಆದಷ್ಟು ಬೇಗ ಸಾಯಲಿ! ಎಂಬಂಥ ಮಾತುಗಳು ಇಟಲಿಯ ದೊಡ್ಡ ದೊಡ್ಡ ನಗರಗಳ ಮನೆ ಗೋಡೆಗಳ ಮೇಲೆ ಬರೆಯಲ್ಪಡುತ್ತಿರುವವು. ಪೋಲೀಸರು ಬಂದು ಅವನ್ನು ಅಳಿಸಿ ತೆಗೆಯಬೇಕಾದರೆ ಮೊದಲು ಜನರೆಲ್ಲರೂ ಅವನ್ನು ಓದುತ್ತಿರುವರು. ನಮ್ಮ ನಿಜವಾದ ಶತ್ರುಗಳು ಜರ್ಮನರೇ ಆಗಿದ್ದಾರೆ. ಇಂಗ್ಲಿಷರೊಡನೆ ನಮಗೆ ಯಾವ ದ್ವೇಷವೂ ಇಲ್ಲ ಎಂಬುದು ಹಳ್ಳಿ ನಾಡಿನ ಇಟಾಲಿಯನ ಜನರ, ಸರ್ವಸಾಮಾನ್ಯ ಅಭಿಪ್ರಾಯವಾಗಿದೆ.

ಯುದ್ಧವು ಸಾಕು

ಕೆಟ್ಟುಹೋದ ಸಾಂಪತ್ತಿಕ ಸ್ಥಿತಿ, ರಣರಂಗದಿಂದ ಬರುವ ಅಪರೂಪದ ಸಮಾಚಾರಗಳು, ಯುದ್ಧದಲ್ಲಿ ಸೋಲುತ್ತಿರುವ ಪ್ರಸಂಗಗಳಿಂದ ಇಟಾಲಿಯಾನರು ನಿರಾಶರೂ ಸಂತಪ್ತರೂ ಆಗಿದ್ದಾರೆ ಆದ್ದರಿಂದ ಇಟಲಿಗೆ ಬ್ರಿಟಿಷರ ಯುದ್ಧ ವಿಮಾನಗಳು ಬಂದೊಡನೆ ಜನರು ಒಂದು ರೀತಿಯ ಸಂತೋಷಪಡುವರಂತೆ ಮುಸಲೋನಿಯ ಸರ್ವನಾಶವು ಬೇಗನೆ ಈ ವಿಮಾನಗಳ ಮೂಲಕ ಆಗಿ ಯುದ್ಧವು ಕೊನೆಗಾಣುವದೆಂಬುದೇ ಈ ಸಂತೋಷದ ಕಾರಣವಾಗಿರುವದು ಯುದ್ಧವು ಸಾಕೆಂಬುದು ಪ್ರತಿಯೊಬ್ಬ ಇಟಾಲಿಯಾನನ ಸೊಲ್ಲು ಆಗಿದೆ.

ಗಾಯಗಳಲ್ಲಿರುವ ಹೊಲಸು

ವಿಷಕಾರಿಯಾಗಿ ಪರಿಣಮಿಸಬಹುದು

ಸೂಜಿಯ ಸಣ್ಣ ಬಿಂದು, ಚುಚ್ಚುವಿಕೆಯೂ ಭಯಂಕರವಾದ ಗಾಯ—ಎರಡೂ ಒಂದೇ ಸಮಾನ. ಅಂಥಾ ಚಿಕ್ಕ ದೊಡ್ಡ ಗಾಯಗಳಲ್ಲಿರಬಹುದಾದ ವಿಷಕಾರಿ ಕ್ರಿಮಿಗಳನ್ನು ನಾಶಮಾಡಲು ಕೂಡಲೇ ವಿಷಹಾರಿ ಔಷಧಿಯನ್ನು ಹಾಗಿಸದಿದ್ದರೆ ಭಯಂಕರವಾದ ಹಾನಿಯು ದೊರೆಬಹುದು ಅಂಥಾ ಗಾಯಗಳನ್ನು ಗಮನಿಸದಿದ್ದರೆ ಅಂಗಾಂಗಗಳಿಗೆ ಹಾನಿಯಾಗುವುದು ಮಾತ್ರವಲ್ಲದೆ ಜೀವಕೂ ಕೆಡುಕುಂಟು ಹಾಗಾದರೆ ಇಲ್ಲದ ಸಂಕಷ್ಟಗಳನ್ನು ಯಾಕೆ ಅನುಭವಿಸಬೇಕು? ಇಂಥ ಬಾಧೆಗಳನ್ನು ಬರಗೊಡದಂತೆ ಮಾಡಲು ಉತ್ತಮವಾದುದೆಂದರೆ ಕುಟ್ಟಿಕೂರಾ ಮುಲಾಮು (cuticura ointment) ಕುಟಕೂರಾ (cuticura) ಮುಲಾಮು ಹಾಗಿಸಿದ ಭಾಗದಲ್ಲಿ ಕ್ರಿಮಿಗಳು ವಾಸಿಸುವುದಿಲ್ಲ ಒಂದೂ ಲೋಪವಿಲ್ಲದ ಇಂಥಾ ರಕ್ಷಣೆಯ ಔಷಧಿಯನ್ನು ಉಪಯೋಗಿಸಿದರೆ ಗಾಯಗಳಲ್ಲಿ ರಶಿಗೆಯಾದೀತೆಂಬ ಭಯವೇ ಇರುವುದಿಲ್ಲ.

ಗಜ್ಜಿ, ಗಾಯ, ವ್ರಣ, ಕುರು, ಹುಣ್ಣು, ಚರ್ಮರೋಗ ಮ. ದ್ರಣ, ವಿಷಕಾರಿ ಗಾಯ ಬೆಂಕಿಯ ಹುಣ್ಣು ಮೊದಲಾದ ಚರ್ಮರೋಗಗಳನ್ನು ನಾಶಮಾಡಲು ಕುಟಕೂರಾ ಮುಲಾಮನ್ನು (cuticura ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ಡೊಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡತ್ತದೆ

★ ಸಿನೆಮಾ ಪುಟ ★

ಮೈಸೂರು ಹುಡುಗ ಸಾಬು

ಪ್ರಸಿದ್ಧ ಸಿನೆಮಾ ನಟ

ಅಲೆಕ್ಸಾಂಡರ ಕೋರ್ಡಾ ಇವರ 'ಬಾಗ್ದಾದಿನ ಕಳ್ಳ' ಎಂಬ ತ್ರಿವರ್ಣ ರಂಜಿತ ಚಿತ್ರದಲ್ಲಿ ಪ್ರಾಮುಖ್ಯ ಪಾತ್ರ ವಹಿಸುವ ಸಾಬು ಮೈಸೂರಿನ ಒಬ್ಬ ಸಾವಾನ್ಯ ಮಾವುತನ ಹುಡುಗನಾಗಿದ್ದವನು ಇಂದು ತನ್ನ ೧೬ನೆಯ ವಯಸ್ಸಿನಲ್ಲಿಯೇ ಕೀರ್ತಿಶಿಖರವನ್ನೇರಿದ್ದಾನೆ. ಈಗ ಆತನು ಅಮೇರಿಕದಲ್ಲಿರುತ್ತಾನೆ. ನಾಲ್ಕು ಸಂಖ್ಯೆಗಳುಳ್ಳ ವಾರದ ಸಂಬಳವನ್ನು ಆತ ಪಡೆಯುತ್ತಾನೆ. ರಾಜ ಮನ್ನಣೆ ಹೊಂದಿರುತ್ತಾನೆ. ಶ್ರೀಮತಿ ರೂಸ್‌ವೆಲ್ಟರನ್ನೂ ಭೇಟಿಯಾಗಿದ್ದಾನೆ. ಚಕ್ರವರ್ತಿ ರಾಣಿಯವರೊಡನೆ ಮಾತುಕತೆ ನಡೆಸಿದ್ದಾನೆ. ಮುಂದೆ ಆತನಿಂದ ಹಲವು ಚಿತ್ರ ಪುಟಗಳು ತಯಾರಾಗಲಿವೆ.

'ಆನೆ ಹುಡುಗ' ಎಂಬ ಚಿತ್ರವನ್ನು ತಯಾರಿಸಲು ಕೋರ್ಡಾದ ಸಲುವಾಗಿ ಭಾರತಕ್ಕೆ ಒಬ್ಬ ಹುಡುಗನನ್ನು ಹುಡುಕಿಕೊಂಡು, ಅದರ ಪ್ರತಿನಿಧಿಗಳಾದ ರೋಬರ್ಟ್ ಫ್ಲಾಹರ್ಟಿ ಇವರು ಬಂದಿದ್ದರು. ಈತನನ್ನು ನೋಡಿದರು. ಈತ ಮಹಾರಾಜರೊಬ್ಬರ ಮಾವುತನ ಮಗನಾಗಿದ್ದ. ಬಡತನದಲ್ಲಿ ಅವರು ಜೀವಿಸುತ್ತಿದ್ದರು. ಆತನು ಮೊದಲನೆಯ ಚಿತ್ರದಲ್ಲಿಯೇ ಯಶಸ್ವಿಯಾಗಿ ಅಭಿನಯಿಸಿ ಸಕಲರ ಪ್ರೀತಿಗೆ ಪಾತ್ರನಾದ. ಮುಂದೆ ಹತ್ತಾರು ಚಿತ್ರಗಳಲ್ಲಿ ನಟಿಸಿ ಹೆಸರು ಪಡೆದ 'ಮಹಾತ್ಮಾ' ಎಂಬ ಚಿತ್ರವನ್ನು ಅಮೇರಿಕದವರು ತಯಾರಿಸುವರೆಂದೂ ಅದರಲ್ಲಿ ಈತನೇ ಅಭಿನಯಿಸಲಿರುವನೆಂದೂ ತಿಳಿದಿದೆ.

ಪ್ರಭಾತ ಫಿಲ್ಮ್ ಕಂಪೆನಿ

'ಪಡೋಶಿ' ಚಿತ್ರವು ಈಗಾಗಲೇ ಬೊಂಬಾಯಿ ಮತ್ತು ಪೂನಾಗಳಲ್ಲಿ ಪ್ರದರ್ಶಿತವಾಗಿದೆ. 'ಜಯಶ್ರೀ' ಎಂಬ ಹೊಸ ಸಿನೆಮಾ ತಾರೆಯು ಇದರ ಮರಾಠೀ ಭಾಷಾಂತರದಲ್ಲಿ ಅಭಿನಯಿಸುತ್ತಿದ್ದಾಳೆ. ತನ್ನ ಉಜ್ವಲ ಮುಖಪ್ರಭೆಯಿಂದ ಸುಂದರ ನಟಿಯಾಗಿ ಅನೇಕರನ್ನು ಇದೇ ಪ್ರಥಮ ಸಲ ಆಕೆ ಸಿನೆಮಾರಂಗದಲ್ಲಿ ನಟಿಸಿ ಆಕರ್ಷಿಸಲಿರುವಳು. ಅದರ ಹಿಂದೀ ಭಾಷಾಂತರದಲ್ಲಿ ಅನಿಸಳು ತನ್ನ ಪ್ರೇಮಮಯವಾದ ನಟನಾಭಂಗಿಗಳಿಂದ ರಸಿಕರ ಹೃದಯಗಳನ್ನು ಮುಗ್ಧಗೊಳಿಸುವಳು.

ಭಾರತದ ಪ್ರಸಿದ್ಧ ನಿರ್ದೇಶಕರಾದ ಶಾಂತಾರಾಮರ ನಿರ್ದೇಶಕತ್ವವೆಂದರೆ ಸಾಕು. 'ಪಡೋಶಿ' ಅತ್ಯುತ್ತಮ ಚಿತ್ರವೆಂದು ಖಂಡಿತವಾಡಬಹುದು.

ಮುಂದಿನ ಅವರ ಚಿತ್ರವು ಭಾರತದ ಮಹಾ ಭಕ್ತಶಿರೋಮಣಿಯಳೆನಿಸಿದ 'ಸಂತ ಸಖು'ವಿನ ಜೀವನಚಿತ್ರವಾಗಿದೆ. ದಾಮ್ಲೆ ಮತ್ತು ಫತೇಲಾಲರು ಇದನ್ನು ನಿರ್ದೇಶಿಸುವರು.

'ಉಮರ್ ಖಯ್ಯಾಮ್' ಚಿತ್ರದ ತಯಾರಿಕೆಯು ಭರದಿಂದ ಸಾಗುತ್ತಿದೆ. ಚಿತ್ರದ ಕಥೆಯು ಸಂಭಾಷಣೆಯೊಡನೆ ಬರೆದು ಪೂರ್ಣವಾಗಿದೆ. ಮಾರ್ಚ ತಿಂಗಳಲ್ಲಿ ಇದರ ಕಾರ್ಯವು ಆರಂಭವಾಗುವುದಾಗಿ ಗೊತ್ತಾಗಿದೆ.

ವಾಡಿಯಾ ಮುವಿಟೋನ್

ನಿರ್ದೇಶಕ ಶಾಂತಾರಾಮರ ಕೀರ್ತಿಯನ್ನು ಸ್ಪರ್ಧಿಸುವ ಪ್ರಭಾವಶಾಲೀ ನಿರ್ದೇಶಕ ಮಾಧು ಬೋಸರ 'ಚಿತ್ರ ರಾಜನರ್ತಕಿ'ಯು ಮೊದಲೇ ತಿಳಿಸಲಾದಂತೆ, ಕ್ರಿಸ್‌ಮಸ್ ಕಾಲದಲ್ಲಿ ಪ್ರದರ್ಶಿತವಾಗಲಿಲ್ಲ. ಇದರ ಮೂರು ಭಾಷೆಗಳ ಭಾಷಾಂತರ ಚಿತ್ರಗಳೂ, (ಹಿಂದಿ, ಬಂಗಾಳಿ, ಇಂಗ್ಲಿಷ್) ಮಾಧು ಬೋಸರಿಂದಲೇ ನಿರ್ದೇಶಿಸಲಾಗಿದೆ. ರಾಜನರ್ತಕಿಯು ಚಲಚ್ಚಿತ್ರ ಲೋಕಕ್ಕೆ ಸುಂದರಳಾದ ಹೊಸ ತಾರೆಯೊಂದನ್ನು ತೋರಿಸಲಿರುವುದು. ಆಕೆಯೇ ಪ್ರತಿಮಾ ಗುಪ್ತಳು. ನಿಜವಾಗಿ ಆಕೆ ಎಷ್ಟು ನಿತ್ಯಜೀವನದಲ್ಲಿ ಸೌಂದರ್ಯವತಿಯಾಗಿರುವಳೋ ಅದರ ಅರ್ಧದಷ್ಟು ಸೌಂದರ್ಯವನ್ನು, ನಟನೆಯಲ್ಲಿ ಪ್ರೇಕ್ಷಕರು ಕಂಡರೆ ಸಾಕು, ಆಕೆ ಅತ್ಯುತ್ತಮ ನಟಿಯೆಂದು ಎಲ್ಲರೂ ಕೊಂಡಾಡಲೇಬೇಕು.

ರಾಧಾರಾಣಿಯ ನಟನೆಯಿಂದ ಕೂಡಿದ 'ಮಂಥನ' ಚಿತ್ರವು ಸಿದ್ಧವಾಗುತ್ತಲಿದೆ. ನಾಡಿಯಾಳ ನಟನೆಯಿಂದ ಕೂಡಿದ 'ಬೊಂಬಾಯಿ ವಾಲೀ' ಎಂಬ ಹೊಸ ಚಿತ್ರವೊಂದನ್ನೂ ಹೋಮಿ ವಾಡಿಯಾ ಇವರು ತಯಾರಿಸುವರೆಂದೂ ಸುದ್ದಿ.

ಮುಖದಲ್ಲಿ ನಗೆ!

ಕಣ್ಣುಗಳಲ್ಲಿ ಹೊಗೆ!

ಮಾಸ್ಟರ್ ವಿನಾಯಕರ ಹಾಸ್ಯಚಿತ್ರಗಳು

ಬೊಂಬಾಯಿ ಮಿರರ್ ಪತ್ರಿಕೆಯ ಪ್ರತಿನಿಧಿಯು ಮಾಸ್ಟರ್ ವಿನಾಯಕರ ಭೇಟಿಯಾಗಿ ಮಾತುಕತೆ ನಡೆಸಿದ ವಿಷಯವಾಗಿ ಒಂದು, ಮನೋರಂಜಕವಾದ ಲೇಖನವನ್ನು ಬರೆದಿರುತ್ತಾನೆ. ಹಾಸ್ಯಚಿತ್ರಗಳನ್ನು ತಯಾರಿಸುವಲ್ಲಿ ವಿನಾಯಕರು ಯಾವ ಉದ್ದೇಶವನ್ನಿಟ್ಟುಕೊಂಡಿರುವರೆಂಬುದು ಆ ಲೇಖನದಲ್ಲಿ ಸ್ಪಷ್ಟಪಡಿಸಲಾಗಿದೆ. 'ನನ್ನ ಉದ್ದೇಶವು ಚಾಪ್ಲಿನನಂತೆಯೇ ಇದೆ. ಸಮಾಜದ ಕುಂದುಕೊರತೆಯನ್ನು ತೋರಿಸಿ ವ್ಯಂಗವಾಗಿ ಬರುವ ನಗು ಇರಬೇಕೆಂದು ನಾನು ಅಪೇಕ್ಷಿಸುತ್ತೇನೆ. ಜನರು ಮುಖದಲ್ಲಿ ನಗುವನ್ನೂ ಕಣ್ಣಲ್ಲಿ ದುಃಖದ ಹೊಗೆಯನ್ನೂ ತೋರಿಸುತ್ತಾ, ನನ್ನ ಚಿತ್ರಗಳನ್ನು ಕಾಣಲು ಕುತೂಹಲಗೊಳ್ಳುವ ಸುದಿನಗಳನ್ನು ನಾನು ನಿರೀಕ್ಷಿಸುತ್ತೇನೆ' ಹೀಗೆಂದು ಅವರು ತಮ್ಮ ಸಂಭಾಷಣೆಯ ಕಾಲದಲ್ಲಿ ಹೇಳಿದರಾಗಿ ತಿಳಿದುಬರುತ್ತದೆ. 'ನನಗೆ ಉದ್ದೇಶವಿಲ್ಲದ ಹಾಸ್ಯಚಿತ್ರಗಳೆಂದರೆ ಆಗುವುದಿಲ್ಲ. ಒಂದು ಹಾಸ್ಯಕ್ಕಾದರೂ ಒಂದು ಉದ್ದೇಶವಿರಬೇಕು. ಒಂದು ಪ್ರಯೋಗ ಸತ್ವವಿರಬೇಕು. ಜನತೆಯಲ್ಲಿ ಅಂತಹ ಪ್ರಯೋಗದ ಪರಿಣಾಮವಾಗಬೇಕು. ಅಂತಹ ಉದ್ದೇಶದಿಂದಲೇ ಸಾಮಾಜಿಕ ಹಾಸ್ಯಚಿತ್ರಗಳನ್ನು ತಯಾರಿಸಬೇಕು' ಹೀಗೆಂದು ಅವರು ಹೇಳಿದರಂತೆ. 'ಎಂತಹ ಕನಸುಗಾರ' ಎಂದರಂತೆ ಪತ್ರಿಕೆಯ ಪ್ರತಿನಿಧಿಗಳು ಈ ಮಾತನ್ನು ಕೇಳಿ. 'ಯಾವನೇ ಆಗಲಿ, ಇಂತಹ ಯಾವುದೇ ಕನಸು ಇಲ್ಲದವನು ಒಬ್ಬ ಕಲಾವಂತನೆನಿಸಲಾರ. ನಾನು ಕನಸು ಕಾಣುವುದು ಯಾವಾಗ ನಿಂತು ಹೋಗುವುದೋ ಆಗ ನನ್ನ ಜೀವನವೂ ಕೊನೆಗೊಂಡಂತೆಯೇ ಸರಿ. ಯಾರು ನಿಜವಾಗಿಯೂ ಕನಸು ಕಾಣಬಲ್ಲರೋ ಅವರೇ ಯಾವುದನ್ನಾದರೂ ರಚಿಸಬಲ್ಲರು.' ಹೀಗೆಂದರು ಅದಕ್ಕುತ್ತರವಾಗಿ ಮಾಸ್ಟರ್ ವಿನಾಯಕರು.

ನವಯುಗ ಚಿತ್ರಪಟ

'ಲಗ್ನ ಪಹಾವೇ ಕರೂನ' ಈ ಚಿತ್ರವು ಈಗ ಹಲವು ಕಡೆಗಳಲ್ಲಿ ಪ್ರದರ್ಶಿತವಾಗುತ್ತಿದ್ದು ಪ್ರೇಕ್ಷಕರನ್ನು ಆಕರ್ಷಿಸುತ್ತದೆ. ಇದು ಒಂದು ಉತ್ತಮ ಹಾಸ್ಯಚಿತ್ರವಾಗಿದೆ. ದಾಮಣ್ಣ ಮಾಲ್ವಂಕರ್ ಇದರಲ್ಲಿ ನಾಯಕ ಪಾತ್ರವಹಿಸುವರು.

'ಅಮೃತ' ಎಂಬ ಹೆಸರಿನ ಹೊಸ ಚಿತ್ರವೊಂದನ್ನು ನಿರ್ದೇಶಕ ನಟ ವಿನಾಯಕರು ತಯಾರಿಸುವರೆಂದು ವಾರ್ತೆ. ಬಾಬುರಾವ್ ಪೆಂಡಾರ್ಕಾರ್ ಮತ್ತು ಮೀನಾಕ್ಷಿ ಅದರಲ್ಲಿ ನಟಿಸುವರಂತೆ. ಖಾಂಡೇಕರರು ಇದರ ಕಥಾಲೇಖಕರು.

ನೇಶನಲ್ ಸ್ಟುಡಿಯೋ

ಶ್ರೀ. ಕರ್ದಾರರು 'ಪೂಜಾ' ಎಂಬ ಉತ್ತಮ ಚಿತ್ರವನ್ನು ನಿರ್ದೇಶಿಸಿರುವರು. ಅದರೆ ಈ ಚಿತ್ರದ ಪೂರ್ಣತೆಯಾದ ಕೂಡಲೇ ಅವರು ಈ ಕಂಪೆನಿಯನ್ನು ಬಿಟ್ಟು ಹೋದದ್ದು ಕಂಪೆನಿಯ ದೌರ್ಭಾಗ್ಯವೇ ಎನ್ನಬೇಕು. ಒಳ್ಳೆಯ ನಿರ್ದೇಶಕರಿಂದ ಮಾತ್ರ ಒಳ್ಳೆಯ ಚಿತ್ರಗಳು ತಯಾರಾಗಲು ಸಾಧ್ಯವಿದೆ. ಕರ್ದಾರರಂತಹ ನಿರ್ದೇಶಕರು ನಮ್ಮ ದೇಶದಲ್ಲಿ ಕಡಿಮೆ ಮಂದಿ. ಹೀಗಿರಲು ನೇಶನಲ್ ಸ್ಟುಡಿಯೊದವರು ಅವರನ್ನು ದೂರವಿರಿಸಿದ ವಿಷಯ ಚಿಂತಾಜನಕವಿದೆ.

ವಿರೇಂದ್ರ ದೇಸಾಯಿಯವರು 'ರಾಧಿಕಾ' ಚಿತ್ರವನ್ನು ತಯಾರಿಸುತ್ತಿದ್ದಾರೆ. ನಲಿನೀ ಜಯಂತ್ ಇದರಲ್ಲಿ ಹಲವು ನೃತ್ಯಭಂಗಿಗಳನ್ನು ಕೊಟ್ಟಿರುವಳಾಗಿ ತಿಳಿದುಬಂದಿದೆ. ಈಕೆ ಹೊಸ ಚಲಚ್ಚಿತ್ರ ತಾರೆ. ಬಹಳ ಸಣ್ಣಪ್ರಾಯದ ಹುಡುಗಿಯಾದುದರಿಂದ ಈಕೆ ಇದರಲ್ಲಿ ಮುಖ್ಯ ನಟಿಯಾಗಿ ಅಭಿನಯಿಸುವಳೋ ಎಂಬುದು ಸಂತೋಷಾಸ್ಪದವಾಗಿದೆ.

'ಅಸ್ರಾ' ಎಂಬ ಸಾಮಾಜಿಕ ಚಿತ್ರವು ಸಿದ್ಧತೆಯ ಭರದಲ್ಲಿದೆ. ಚಿಮನ್ ಕಾಂತ ಮತ್ತು ಲಲಿತ ಚಂದ್ರ ಇವರು ಇದನ್ನು ನಿರ್ದೇಶಿಸುವರು. 'ಪುರುಷ' ಎಂಬ ಹೆಸರಿನ ಸಾಮಾಜಿಕ ಚಿತ್ರವೊಂದೂ ಸಿದ್ಧವಾಗುತ್ತದೆ. ಸರ್ದಾರ್ ಅಖ್ತಾರ್, ಶೇಕ್ ಮುಖ್ತಾರ್ ಇವರು ಇದರಲ್ಲಿ ಅಭಿನಯಿಸುವರು.

ರಣಜಿತ್ ಮುವಿಟೋನ್

ಮಣಿಭಾಯಿ ವ್ಯಾಸರ ನಿರ್ದೇಶಕತ್ವದಿಂದ ತಯಾರಾಗುವ 'ಉಮಿದ್' ಎಂಬ ಈ ಕಂಪನಿಯ ಹೊಸಚಿತ್ರವು ಬೇಗನೇ ಪೂರ್ಣತೆಯನ್ನು ಹೊಂದಲಿರುವುದಾಗಿ ತಿಳಿದುಬರುತ್ತದೆ.

'ಮುಸಾಫಿರ್' ಚಿತ್ರವನ್ನು ನಿರ್ದೇಶಿಸಿದ ಶ್ರೀ ಚತುರ್ಭುಜ ದೋಶಿ ಇವರು ತನ್ನ ಹೊಸ ಚಿತ್ರಕ್ಕೆ 'ಪರ್ದೇಶಿ' ಎಂಬ ಹೆಸರನ್ನು ಕೊಟ್ಟಿರುವರು. ಮುಂದೆ ತಯಾರಿಸಲಿರುವ ಹಾಸ್ಯ ಚಿತ್ರಕ್ಕೆ 'ಸುಸ್ರಾಲ್' ಎಂಬ ನಾಮಕರಣ ಮಾಡಿರುವುದಾಗಿ ತಿಳಿದುಬರುತ್ತದೆ. ಇದರಲ್ಲಿ ಮಾಧುರಿ, ಮೋತಿಲಾಲ ಮೊದಲಾದವರು ಅಭಿನಯಿಸಲಿರುವರೆಂದು ಸುದ್ದಿ. 'ಪರ್ದೇಶಿ ಚಿತ್ರವು ಬಹುಶಃ ಪ್ರಥಮವಾಗಿ ಬೊಂಬಾಯಿಯಲ್ಲಿಯೇ ಪ್ರದರ್ಶಿತವಾಗುವುದು.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S. 156/1938

R. I. A. 926/1940

ಶ್ರೀಮದ್ ಈಶ್ವರಾನಂದ ಭಾರತಿ ಸ್ವಾಮಿಯವರು ಎಡ್ನೀರು ಮಠ ಶ್ರೀ ಬಾಲಕೃಷ್ಣಾನಂದ ಸ್ವಾಮಿಯರ್‌ರವರ ಶಿಷ್ಯ ಕಾಸ್ರಗೋಡು ತಾಲ್ಲೂಕು ಪಾಡಿ ಗ್ರಾಮದಲ್ಲಿರುವವರು—	ಅರ್ಜಿದಾರ —ವಾದಿ—

ವ

1. ವೆಂಕಟೇಶ್ವರ ಭಟ್ಟ, 2. ನಾರಾಯಣ ಭಟ್ಟ, 3. ಕೃಷ್ಣ ಭಟ್ಟ, ಕುಂಬಾಡಿ ಕಾನಾ ಗಣೇಶ ಭಟ್ಟರ ಮಕ್ಕಳು. ಇವರು ಕಾಸ್ರಗೋಡು ತಾಲ್ಲೂಕು ಮುಳಿಯಾರ್ ಗ್ರಾಮದಲ್ಲಿರುವವರು—

ರೆಸ್ಪೊಂಡೆಂಟರು—ಪ್ರತಿವಾದಿಗಳು

ಮೇಲ್ಕಂಡ ವ್ಯಾಜ್ಯದಲ್ಲಿ ತಾರೀಕು 7-3-'40ರಲ್ಲು ಪ್ರಿಲಿಮಿನರಿ ಡಿಕ್ರಿ ಕೊಡಲಾಗಿಯದೆ, ಮತ್ತು ಪ್ರತಿವಾದಿಗೆ ಹಣಸಂದಾಯ ಮಾಡುವರೆ ತಾರೀಕು 7—6—'40ರ ವರೆಗೆ 6 ತಿಂಗಳ ವ್ಯಾದೆಕೊಟ್ಟರೂ ಪ್ರತಿವಾದಿಯು ರೆಸ್ಪೊಂಡೆಂಟರು ಈವರೆಗೂ ಏನನ್ನಾದರೂ ಕ್ಯಾಷ್ ವಾದಿ_ಅರ್ಜಿದಾರರಿಗೆ ಸಲ್ಲು ಕೊಡದೆ ಇದ್ದುದರಿಂದ ಸದ್ರಿ ವಾದಿ_ಅರ್ಜಿದಾರ ಮೇಲ್ಕಂಡ ಕೋರ್ಟಿಗೆ ಫೈನಲ್ ಡಿಕ್ರಿಬಗ್ಗೆ ಅರ್ಜಿಕೊಟ್ಟಿರುವುದರಿಂದ, ಸದ್ರಿ ಅರ್ಜಿಯು ಇದೇ ತಿಂಗಳು ತಾರೀಕು 1-2-1941ಕ್ಕೆ ತನಿಖೆಯಿಟ್ಟಿರುತ್ತದೆ. ಸದ್ರಿ ದಿವಸ ನಿಮಗೇನಾದರೂ ಆಕ್ಷೇಪಣೆಯಿದ್ದ ಪಕ್ಷದಲ್ಲಿ ನೀವು ಖುದ್ದು ನಿಂಪಾಗಲೀ ವಕೀಲುಮುಖಾಂತರವಾಗಲೀ ಹಾಜರಾಗಿ ತಿಳಿಸಿಕೊಳ್ಳಬೇಕು. ಹಾಗೆ ಹಾಜರಾಗದಿದ್ದರೆ ಸದ್ರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು—

ಮಂಗಳೂರು 16-1-'41 } H. H. Shasta. Vakil for Petitioner-Pltf.

ಅಲ್ಪಸಂಖ್ಯಾಕ ಸಮಸ್ಯೆಯನ್ನು

ರೂಸ್‌ವೆಲ್ಟರು ತೀರ್ಮಾನಿಸಬಹುದು.

ಭಾರತದ ಜನತೆಯನ್ನು ತೃಪ್ತಿಗೊಳಿಸಬೇಕು

ಅಖಿಲ ಭಾರತ ಮಂತ್ರಿಮಂಡಳದ ಸೂಚನೆ

ಚರ್ಚಿಲರಿಗೆ ಲಾಸ್ಕಿಯವರ ಸೂಚನೆಗಳು

ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟ್

ಭಾರತದ ವಿಷಯ ವಹಿಸುವ ಧೋರಣದಿಂದ, ಸರಕಾರದ ನಡತೆಯಲ್ಲಿ ಕಳಂಕಬಂದಿರುವುದೆಂದಾಗಿ ಖಂಡಿತ ಹೇಳಬಹುದಾಗಿದೆ. ಎಮೆರಿಯವರು ಸೂಚನೆಗಳನ್ನು ಮುಂದಿಡುವಲ್ಲಿ ಸ್ವಲ್ಪವೇನೋ ಬದಲಾವಣೆಯಿದೆ. ಆದರೆ ಅದರ ಒಟ್ಟು ಅರ್ಥದಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ. ವೈಸರಾಯರು ಯುದ್ಧ ಮುಗಿವ ತನಕ ಭಾರತದ ಮೊಕೆಯಾಗಿರುವರು. ಅವರ ಕೌನ್ಸಿಲಿನಲ್ಲಿ ಭಾರತದ ಮುಖಂಡರಿಗೆ ಸ್ಥಳ ಕೊಡಲಾಗುವುದೆಂದು ಹೇಳಿದ ಸ್ಥಾನಗಳ ವಿಷಯವಾಗಿಯಾವ ಭರವಸೆಯೂ ಇಲ್ಲ. ಯುದ್ಧ ಮುಗಿದ ಮೇಲೆ, ಅಲ್ಪ ಸಂಖ್ಯಾಕರ ವಿಷಯದಲ್ಲಿ ಸರಕಾರವು ತೃಪ್ತಿ ಹೊಂದಿದರೆ ಯಾವುದೋ ರೀತಿಯ ಸರಕಾರವನ್ನು ಕೊಡಲಾಗುವುದೆಂದು ಹೇಳಲಾಗಿದೆ ಆದರೆ ಭಾರತಕ್ಕೆ ಕೂಡಲೇ ಸ್ವಾತಂತ್ರ್ಯ ಕೊಡುವುದು ಅವಶ್ಯವಾಗಿದೆ. ನಾವು ಆ ಕುರಿತು ಇಂದೇ ಒಂದು ಹೆಜ್ಜೆ ಮುಂದಿಡಬೇಕು."

—ಹೀಗೆಂದು ಲಂಡನಿನ ಟ್ರಿಬ್ಯೂನ್ ಪತ್ರಿಕೆಯಲ್ಲಿ ಹೆರಾಲ್ಡ್ ಲಾಸ್ಕಿಯವರು ಒಂದು ವಿಚಾರ ಪೂರ್ಣವಾದ ಲೇಖನವನ್ನು ಬರೆದಿರುತ್ತಾರೆ. ಅವರು ಮತ್ತೆ ಹೀಗೆಂದಿರುವರು.

ಜನತೆಯು ಮುನ್ನಡೆವಾಗ

"ಭಾರತದ ಜನತೆಯು ಇಂದಿನ ಯುದ್ಧದಲ್ಲಿ ಬ್ರಿಟನಿಗೆ ಬೆಂಬಲ ನಿಲ್ಲಬೇಕೆಂಬ ವಿಷಯವಾಗಿ ಪೂರ್ಣ ಆಸಕ್ತಿಯಿಂದಿದೆ. ಅಲ್ಲಿನ ಮುಖಂಡರೆಲ್ಲರೂ, ನಮ್ಮ ಪ್ರಧಾನ ಮಂತ್ರಿಗಳಷ್ಟೇ ನಾಜೀ ವಿರೋಧಿಗಳಾಗಿರುವರು. ಅವರಿಗಾದರೂ, ಜನ ಧನ ವಸ್ತು ರೂಪದಲ್ಲಿ ಇಂದಿನ ಯುದ್ಧಕ್ಕೆ ಬೇಕಾದಷ್ಟು ಸಹಾಯ ಮಾಡುವ ಶಕ್ತಿಯುದೆ; ಅಷ್ಟನ್ನು ನಾವು ಅವರ ಸಹಕಾರ ಬಿಟ್ಟು ಮಾಡಲು ಸಾಧ್ಯವಿರುವುದಿಲ್ಲ. ಅವರಿಂದು ಅತೃಪ್ತರಾಗಿರುವುದರಿಂದ ಖಂಡಿತ ದಬ್ಬಾಳಿಕೆಯು ಆರಂಭವಾಗಬಹುದು ದಬ್ಬಾಳಿಕೆಯಿಂದ ನಾವು ಜಗತ್ತಿನ ಮುಂದೆ ಅನ್ಯಾಯ ಮಾಡಿದಂತೆಯೇ ಆಗುತ್ತದೆ. ಕೊನೆಗೆ ನಾವು ತಲೆ ಬಾಗಿಸಬೇಕಾಗಿದೆ. ಜನತೆಯು ಮುನ್ನಡೆವಾಗ ಯಾರಾದರೂ ಅದನ್ನು ತಡೆದು ನಿಲ್ಲಿಸಲು ಸಾಧ್ಯವಿಲ್ಲ.

ಅಲ್ಪಸಂಖ್ಯಾಕರು

ಭಾರತದ ವಿಷಯವಾಗಿ ಮಾತಾಡುವಾಗ ಚರ್ಚಿಲ್ಲರ ತಲೆಯನ್ನು ಕೆಡಿಸುವ 'ಪ್ರೇತಗಳು' ಯಾವವು ಎಂದು ನಾನು ತಿಳಕೊಳ್ಳಬಲ್ಲೆ. ಚರ್ಚಿಲ್ಲರು ಆಶ್ರಿತರಾಜರನ್ನು ಪ್ರಶಂಸಿಸಲು ಸಾಧ್ಯವಿಲ್ಲ. ಜಿನ್ನರಿಗೂ, ಮುಸ್ಲಿಂ ಲೀಗಿಗೂ ಭಾರತದಲ್ಲಿ ಪ್ರಾತಿನಿಧ್ಯವಿಲ್ಲವೆಂದು ಅವರು ತಿಳಿದಿರಬೇಕು. ಕಾಂಗ್ರೆಸು ಮುಸ್ಲಿಮರ ಮತ್ತು ಇತರ ಅಲ್ಪ ಸಂಖ್ಯಾಕರ ಹಿತಕ್ಕೆ ಸಾಕಷ್ಟು ಭರವಸೆ ಕೊಡುತ್ತದೆ. ಭಾರತದಲ್ಲಿ ಕಾಂಗ್ರೆಸ್ಸು ಇತರ ಎಲ್ಲಾ ಪಕ್ಷಗಳನ್ನು ಒಟ್ಟು ಸೇರಿಸಿದರೂ ಅವುಗಳಿಗಿಂತ ಬಲಿಷ್ಠವಾಗಿ ನಿಲ್ಲುವುದೆಂದು ಚರ್ಚಿಲರು ತಿಳಿದಿರಬೇಕು. ಕಳೆದ ಸಪ್ತಂಜರದಿಂದ ಭಾರತದ ವಿಷಯವಾಗಿ ನಾವು ತೋರಿಸುವ ಧೋರಣೆ ತೀರಾ ಅತೃಪ್ತಿಕರವಾದುದು. ಭಾರತೀಯರು ಸ್ವತಂತ್ರ ರಾಜ್ಯಭಾರಣಕ್ಕೆ ಅನರ್ಹರೆಂದು ಚರ್ಚಿಲ್ಲರು ಅಭಿಪ್ರಾಯ ಪಡುತ್ತಾರೆಯೇ?

ಸ್ವಾತಂತ್ರ್ಯ ನಿರಾಕರಣ

'ನಾವು ಇನ್ನೊಂದು ಸೂಚನೆ ಕೊಡಬೇಕು. ಎಮೆರಿಯವರು ಕೊಟ್ಟ ಸಲಹೆಯು ಕೊನೆಯ ಸಲಹೆಯಾಗಲು ಸಾಧ್ಯವಿಲ್ಲ. ಏಕೆಂದರೆ ಅದರಲ್ಲಿ ಸ್ವಾತಂತ್ರ್ಯದ ನಿರಾಕರಣವಿದೆ. ಇಂದಿನ ಯುದ್ಧದಲ್ಲಿ ಭಾರತವನ್ನು ನಮ್ಮ ಕಡೆಗೆ ಒಲಿಸಿಕೊಳ್ಳುವುದು ಬಹಳ ಅದ್ಭುತ ಯಶಸ್ಸಿಗೆ ಕಾರಣವಾಗಿದೆ. ವೈಸರಾಯರು ಇದನ್ನು ವಹಿಯಬಹುದಾಗಿದೆ. ಚರ್ಚಿಲ್ಲರು ಎಂತಹ ಗಂಡಾಂತರವನ್ನಾದರೂ ಎದುರಿಸಬಲ್ಲ ಧೈರ್ಯದವರು. ಇಂದು ಅವರು ಇರುವ ಅಧಿಕಾರವು ಅಂತಹ ಕಾರ್ಯಕ್ಕೆ ಅನುಕೂಲತೆ ಕೊಟ್ಟಿದೆ. ಅದನ್ನು ಅವರು ಭಾರತದ ವಿಷಯವೂ ತೋರಿಸಬೇಕಾಗಿದೆ.

ಅಖಿಲ ಭಾರತ ಮಂತ್ರಿಮಂಡಳ

ನಾವೀಗ ಮಾಡಬೇಕಾದುದು ಬಹಳ ಸುಲಭದಲ್ಲಿದೆ. ಅಖಿಲ ಭಾರತ ಮಂತ್ರಿಮಂಡಳವನ್ನು ರಚಿಸಬೇಕಾಗಿದೆ. ಎಲ್ಲಾ ಶಾಸನ ಸಭೆಗಳ ಪ್ರಾತಿನಿಧ್ಯವಿರಬೇಕು. ಇಲ್ಲಿ ಇಂಗ್ಲೆಂಡಿನಲ್ಲಿ ಮಂತ್ರಿಮಂಡಳಕ್ಕಿರುವ ಅಧಿಕಾರವು ಆ ಮಂತ್ರಿಮಂಡಳಕ್ಕೂ ಇರತಕ್ಕದ್ದು. ಅದು ಯುದ್ಧಕ್ಕೆ ತೀವ್ರ ನೆರವಾಗಬೇಕು; ಮತ್ತು ಮುಂದಿನ ಸ್ವತಂತ್ರ ರಾಜ್ಯಾಂಗ ರಚನೆಯನ್ನು ತಯಾರಿಸಬೇಕು.

ರೂಸ್‌ವೆಲ್ಟರು ಸಂಧಾನ ಮಾಡಲಿ

ಈ ಸಮಯದಲ್ಲಿ ಅಲ್ಪಸಂಖ್ಯಾಕರ ಮತ್ತು ಮುಸ್ಲಿಮರ ಆಕ್ಷೇಪಗಳು ಬರುವದಿದ್ದಲ್ಲಿ ಅಂತಹುದನ್ನು ಅಮೇರಿಕದ ಅಧ್ಯಕ್ಷರಂತಹ ಸ್ವತಂತ್ರರಿಗೆ ತೀರ್ಮಾನಕ್ಕೆ ಬಿಟ್ಟುಕೊಡಬೇಕು. ಯುದ್ಧ ಮುಗಿದ ಹನ್ನೆರಡೇ ತಿಂಗಳಲ್ಲಿ ನಾವು ರಾಜ್ಯಾಂಗರಚನೆಯನ್ನು ಪಾರ್ಲಿಮೆಂಟಿನಲ್ಲಿ ಪಾಸುಮಾಡಬೇಕು. ಅದು ವರೆಗೆ ಅಖಿಲ ಭಾರತ ಮಂತ್ರಿಮಂಡಳವು ಕೆಲಸಗಳನ್ನು ನಿರ್ವಹಿಸಬೇಕು.

ನಾವಿಂದು ಭಾರತದ ಜನತೆಯನ್ನು ತೃಪ್ತಿಪಡಿಸಬೇಕಾಗಿದೆ. ಹಲಕಾಲದ ಅವರ ಸ್ವಾತಂತ್ರ್ಯ ಚಳವಳಿಯಿಂದ ಅವರಾದರೂ ಸ್ವತಂತ್ರರಾಗಲು ಆಶಿಸುತ್ತಾರೆ. ಅವರನ್ನು ತೃಪ್ತಿಪಡಿಸಿ ನಾವು ಅವರಿಂದ ಖಂಡಿತ ಸಹಾಯ ಪಡೆಯಬಹುದು."

ಶೀತ ಮತ್ತು ತಂಡಿಯ ಬಾಧೆಯಿಂದ ದೂರವಾಗಿರಿ

ನಿಮ್ಮೆದೆಯನ್ನು ಜಾಂಬಕಿನಿಂದ ಚೆನ್ನಾಗಿ ತಿಕ್ಕಿರಿ

ಶೀತ ಮತ್ತು ತಂಡಿ ಬಗ್ಗೆ ಬಾಧೆ ಕೊಡುತ್ತವೆ. ಅವುಗಳಿಂದ ನಾವು ದೂರವಾಗಿರಬೇಕು. ಹಾಗಾದರೆ, ನಿಮ್ಮೆದೆಗೆ ಒಂದಿಷ್ಟು ಜಾಂಬಕ್ ಲೇಪವನ್ನು ತೆಗೆದು ತಿಕ್ಕಿರಿ. ಈ ಅಮೂಲ್ಯ ವನಸ್ಪತಿಯ ಲೇಪವು ಎರಡು ತರದ ಗುಣಗಳನ್ನು ಕೊಡುತ್ತವೆ. ಎದೆಯ ಬಿಗಿತವನ್ನು ಕಡಿಮೆ ಮಾಡಿ ಇದು ಪೋಲ್ಟಿಸನಂತೆ ಗುಣಕೊಡುತ್ತದೆ. ಮತ್ತು ಅದರಲ್ಲಿರುವ ಎಣ್ಣೆಯ ವಾಸನೆಯಿಂದ ಅದು ಶ್ವಾಸಕೋಶಕ್ಕೆ ಹೋಗಿ ತಲೆ ನೋವನ್ನು ಗುಣಪಡಿಸುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಜಾಂಬಕ್ ಒಂದು ರೂಪಾಯಿ ಅಥವಾ ರೂ. [illegible] ಮಾರಲ್ಪಡುವುದು, ಜಾಂಬಕ್ ಸೋಪಿಗೆ ಎಂಟು ರೂಪಾಯಿ, ಜಾಂಬಕ್ ಪೌಡರಿಗೆ ಒಂದು ರೂಪಾಯಿ ಕ್ರಯ.

ಏಜೆಂಟ್ಸ್:—

ಮೆಸರ್ಸ್ ದಾಧಾ ಮತ್ತು ಕಂಪೆನಿ ಪೋರ್ಟ್‌ಔಸ್ ಮದರಾಸು.

ಯಾವಾಗಲೂ ಜಾಂಬಕನ್ನೆ ಉಪಯೋಗಿಸಿರಿ.

ZAM-BUK

ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾದುದು

1941ನೇ ಇಸವಿ ಜನವರಿ ತಿಂಗಳ ತಾರೀಕು 20ನೇ ಸೋಮವಾರ ದಿವಸದ ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆಗಳು.

		ರಿಂದ	ವರೆಗೆ
1. (a)	ಬೆಳ್ತಿಗೆ ಅಕ್ಕಿ ತರದ ಮುಡಿ	1—11—0	2—0—0
(b)	,, ಮಧ್ಯಮ ,, ,, ,,	1—12—0	—
2. (a)	ಕಜೆ ಅಕ್ಕಿ ತರದ ಮುಡಿ	1—11—0	5—0—0
(b)	,, ಮಧ್ಯಮ ,, ,, ,,	1—10—0	4—12—0
3. (a)	,, ಫಸ್ಟ್ ,, ,, ,,	5—0—0	—
(b)	,, ಮಧ್ಯಮ ,, ,, ,,	1—12—0	
4. (a)	ತೆಂಗಿನಕಾಯಿ ಸುಲಿದದ್ದು 1000ಕ್ಕೆ	12—8—0	17—8—0
(b)	,, ಸಿಪ್ಪೆಯಿದ್ದದ್ದು	15—0—0	50—0—0
5. (a)	ಕೊಬ್ಬರಿ ಆಫೀಸು ಕಂಡಿಗೆ	55—0—0	
(b)	,, ದೇಶಿ ,,	65—0—0	—
(c)	,, ಮಿಲ್‌ಪಸಂದ್ ,,	57—8—0	—
6.	ತೆಂಗಿನ ಎಣ್ಣೆ ಮಣಕ್ಕೆ	3—12—0	3—14—0
7. (a)	ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2—12—0	3—4—0
(b)	ಸುಲಿದ ಅಡಿಕೆ ಖಂಡಿಗೆ (ಹಳತು)	110—0—0	120—0—0
	(ಹೊಸತು)	85—0—0	95—0—0
8.	ಗೇರುಬೀಜ ಮುಡಿಗೆ	3—6—0	4—0—0
9.	ಕಬ್ಬಿನ ಬೆಲ್ಲ ಖಂಡಿಗೆ	22—8—0	30—0—0
10.	ಬಿಳಿ ಮೆಣಸು ಹಾಸ್ಟೆಡ್ ಸಟೀನ	13—8—0	14—0—0
11. (a)	ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	4—0—0	5—8—0
(b)	ಸುಡಿಯ ,,	7—0—0	10—0—0
12. (a)	ಮೈಸೂರು ಸಿಲ್ಕಿ ಮಣಕ್ಕೆ	10—0—0	57—8—0
(b)	ಕೊಡಗಿನ ,, ,,	11—0—0	55—0—0
13. (a)	ಕುಮಟೆಯ ಮೆಣಸು ಖಂಡಿಗೆ	45—0—0	62—8—0
(b)	ಕಾಸರಗೋಡು ,, ಮಣಕ್ಕೆ	2—4—0	—
(c)	ಊರಿನ ,, ,,	4—0—0	4—4—0

ವಿಜ್ಞಾನಯುಗ

ಸಾಯುವಾಗ ಸಂಕಟವಿಲ್ಲ!

ಜೀವಿಯು ಮರಣವನ್ನು ಹೊಂದುತ್ತಿರುವಾಗ ಅದಕ್ಕೆ ವೇದನೆಯಾಗುವದೆ? ಅದು ನೋವಿನಿಂದ ನರಳುವದೆ? ಎಂಬ ಪ್ರಶ್ನೆಗಳಿಗೆ ವಿಜ್ಞಾನಿಗಳು ಉತ್ತರವನ್ನು ಕೊಡುವ ಪ್ರಯತ್ನಮಾಡಿದ್ದಾರೆ. ಈ ವಿಜ್ಞಾನಿಗಳ ಅಭಿಪ್ರಾಯದಲ್ಲಿ, ಮರಣವನ್ನು ಹೊಂದುತ್ತಿರುವಾಗ ಜೀವಿಗೆ ನೋವು, ವೇದನೆ ಯಾವುದೂ ಇರುವದಿಲ್ಲ. ಅದು ತನ್ನ ಶರೀರವನ್ನು ಬಿಟ್ಟ ಮೇಲೆ ಅದಕ್ಕೆ ಒಂದು ತರದ ಸುಖಾನುಭವವು ಆಗುತ್ತದೆ. ಆದರೆ ಮರಣವೆಂದರೆ ಜೀವಿಯು ಹೆದರಿ ನಡುಗುವದರಿಂದ ಅವುಗಳು ಮರಣಕಾಲದಲ್ಲಿ ನರಳುತ್ತಿರುವಂತೆ ಆಗುತ್ತದೆ. ಕತ್ತಲೆ ಎಂದರೇನು ಎಂದು ತಿಳಿಯದ ಅನಾಗರಿಕಜನರು ಕತ್ತಲೆಯನ್ನು ಕಂಡು ಹೆದರಿ-ನಡುಗುವ ಹಾಗೆ, ಮತ್ತು ಕತ್ತಲೆಯಲ್ಲಿ ಕಪೋಲಕಲ್ಪಿತ ನೋವುಗಳನ್ನು ಅನುಭವಿಸುವ ಹಾಗೆ, ಮರಣಕಾಲದಲ್ಲಿನ ಹೆದರಿಕೆ, ನಡುಕೆ ಮತ್ತು ನೋವಿನ ಅನುಭವವು ಇರುತ್ತದೆ. ಯಥಾರ್ಥವನ್ನು ಹೇಳುವದಾದರೆ ಮರಣಕಾಲದಲ್ಲಿ ನೋವು ಎಂಬುದು ಬರಿಯ ಭ್ರಮೆ ಮಾತ್ರ. ಆದ್ದರಿಂದ ಯಾರೂ ಮರಣ ಅಥವಾ ಮರಣಾನಂತರದ ಸ್ಥಿತಿಗಾಗಿ ಹೆದರಬೇಕಾಗಿಲ್ಲ. ನಿರ್ಭಯರಾಗಿರುವವರಿಗೆ ಮರಣವು ಅತ್ಯಂತ ಸುಖಕಾರಿಯಾಗಿ ಇರುವದು.

ಹುಲ್ಲು ತಿಂದಲ್ಲಿ ಬಲಬರುವುದೇ

ಪ್ರಪಂಚದಲ್ಲಿ ಬಹಳ ಭಾರವನ್ನು ಹೊರುವ ಪ್ರಾಣಿಗಳೆಲ್ಲ ಸಸ್ಯಾಹಾರಿಗಳಾಗಿರುವದಷ್ಟೇ ಅಲ್ಲದೆ ಅವು ಹುಲ್ಲು ತಿಂದು ಬದುಕುವವುಗಳಾಗಿ ಇರುತ್ತವೆ. ಅನಾದಿಯಿಂದಲೂ ಹುಲ್ಲು ಈ ಜೀವಿಗಳಿಗೆ ಆಹಾರವಾಗಿದೆ; ಮನುಷ್ಯರು ಕೂಡಾ ಹುಲ್ಲು ಜಾತಿಗೆ ಸೇರಿದ ಕಳಲೆ ಮೊದಲಾದವನ್ನು ತಮ್ಮ ಆಹಾರವಾಗಿ ಉಪಯೋಗಿಸಿಕೊಂಡು ಬಂದಿದ್ದಾರೆ. ಹುಲ್ಲು ಆಹಾರಕ್ಕೆ ಮಾತ್ರವಲ್ಲ, ಅದು ಸಂಪತ್ತಿಗೂ ಸುಖಕ್ಕೂ ಕಾರಣವಾಗಿದೆ. ಹುಲ್ಲಿರುವದಿಲ್ಲವಾದರೆ ನಮ್ಮ ಜೀವನಕ್ಕೆ ಅವಶ್ಯಕವಾದ ಕಾಗದ ಮೊದಲಾದವು ನಮಗೆ ದೊರೆಯುತ್ತಿದ್ದಿಲ್ಲ. ಈಗ ವಿಜ್ಞಾನಿಗಳು ವೈಜ್ಞಾನಿಕ ದೃಷ್ಟಿಯಿಂದ ಹುಲ್ಲನ್ನು ಪರೀಕ್ಷಿಸಿ ಅದರ ಪ್ರಚಂಡ ಶಕ್ತಿಯನ್ನು ತಿಳಿಸಿದ್ದಾರೆ. ಹುಲ್ಲಿನಲ್ಲಿ ಎ. ಬಿ. ಸಿ. ಡಿ. ಎಂಬ ಎಲ್ಲಾ ಜೀವಾತುಗಳು ಇರುತ್ತವೆ. ಆದ್ದರಿಂದ ಅದು ಉತ್ತಮ ದರ್ಜೆಗೆ ಸೇರಿದ ಪೋಷಕ ಪದಾರ್ಥವಾಗಿದೆ. ವಿಜ್ಞಾನಿಗಳು ಅದನ್ನು ಮನುಷ್ಯನ ಹೊಟ್ಟೆಗೆ ಯೋಗ್ಯವಾಗುವಂತೆ ಮಾರ್ಪಡಿಸಿ, ಮಾರುವದಕ್ಕೋಸ್ಕರ ಬೇಕಾದ ಸಂಶೋಧನೆಗಳನ್ನು ನಡೆಸಿದ್ದಾರೆ. ಅಮೇರಿಕದಲ್ಲಿ ಹುಲ್ಲಿನ ಹುಡಿಯನ್ನು ತಯಾರಿಸಿ ಮಾರುವ ನಾಲ್ಕು ದೊಡ್ಡ ಕಾರ್ಖಾನೆಗಳು ಇರುತ್ತವೆ. ಒಂದು ವರ್ಷಕ್ಕೆ ಒಂದು ಕುಟುಂಬಕ್ಕೆ ಬೇಕಾಗುವಷ್ಟು ೧೨ ರಾತಲು ಹುಲ್ಲು ಹುಡಿಯು ಬರೀ ೭೨ ಸೆಂಟ್ಸ ಎಂದರೆ ಸುಮಾರು ೪ ರೂಪಾಯಿಗಳಿಗೆ ಮಾರಲ್ಪಡುತ್ತದೆ. ಇಷ್ಟು ಅಗ್ಗ ಮತ್ತು ಪೌಷ್ಟಿಕವಾದ ಆಹಾರಪದಾರ್ಥವು ಬೇರೆ ಇರುವದಿಲ್ಲ.

ಗುಣಾಕಾರ-ಭಾಗಾಹಾರದ ನವೀನ ಕ್ರಮ

ಲಾಹೋರಿನ ಗವರ್ನಮೆಂಟ್ ಕಾಲೇಜಿನ ನಿವೃತ್ತ ಗಣಿತಾಧ್ಯಾಪಕರಾದ ಶ್ರೀ. ಆರ್. ಎಸ್. ಲಾಲಾಮುಕುಂದಲಾಲ ಎಂಬವರು ಇತ್ತೀಚೆಗೆ ಕೆಲವು ಪರಿಶೋಧನೆಗಳನ್ನು ನಡೆಸಿ, ಈಗ ಪ್ರಚಲಿತವಾಗಿರುವ ಕ್ರಮಗಳಿಂದ ಭಿನ್ನವಾದ ಇನ್ನೊಂದು ತರದ ಗುಣಾಕಾರ ಮತ್ತು ಭಾಗಾಹಾರ ಕ್ರಮವನ್ನು ಕಂಡುಹಿಡಿದಿರುತ್ತಾರೆಂದು 'ಟ್ರಿಬ್ಯೂನ್' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ಹೊಸ ಕ್ರಮವು ಸರಳವೂ ಸುಲಭವೂ ಆಗಿರುವದು ಮಾತ್ರವಲ್ಲದೆ, ಲೆಕ್ಕಗಳನ್ನು ಈಗಿನಕ್ಕಿಂತ ಬಹಳ ಕಡಿಮೆ ಸಮಯದಲ್ಲಿ ಮಾಡಲು ಸಾಧ್ಯವಾಗಿರುವದೆಂದೂ ಹೇಳಲಾಗಿದೆ. ಹೊಸ ಕ್ರಮದ ಈ ಗುಣಾಕಾರ ಭಾಗಹಾರಗಳಲ್ಲಿ, ಹೆಚ್ಚಿನ ಕೆಲಸಗಳು ಮಾನಸಿಕವಾಗಿಯೇ ನಡೆಯುವವು. ಭಿನ್ನರಾಶಿಗಳನ್ನು ದಶಮಾಂಶಕ್ಕೆ ರೂಪಕ್ಕೆ ತರುವುದು ಕೂಡ ಈ ಕ್ರಮದಿಂದ ಸುಲಭವಾಗಿದೆಯಂತೆ.

ಆಸ್ಟ್ರೇಲಿಯದ ನವೀನ ಬಾಂಬು

ಮೆಲ್ಬೋರ್ನಿನ ಒಂದು ಪರಿಶೋಧನಾಲಯದಲ್ಲಿ ಡಾಕ್ಟರ್ ಎಚರ್ಲೆ ಎಂಬವರು ಒಂದು ಹೊಸ ಜಾತಿಯ ಬೊಂಬನ್ನು ಕಂಡುಹಿಡಿದಿದ್ದಾರೆ. ಇದು ವಿಮಾನದಾಳಿಗಳ ಕಾಲದಲ್ಲಿ ಬೊಂಬುಗಳನ್ನು ಸುರಿಯಲಿಕ್ಕೆ ಬಹಳ ಅನುಕೂಲವಾಗಿ ರಚಿಸಲ್ಪಟ್ಟಿರುತ್ತದೆ. ಈ ಜಾತಿಯ ಬಾಂಬುಗಳಲ್ಲಿ ತುಂಬಿಸುವ ಮದ್ದಿನ ಹುಡಿಯು, ಬಹಳ ಶೀತವಾದ ಹವಾಗುಣದಲ್ಲಿ ಹೊರತು, ಇತರ ಎಲ್ಲಾ ಹವಾಗುಣಗಳಲ್ಲಿ, ವಾಯುವಿನ ಸಂಪರ್ಕವಾದೊಡನೆ ಬೆಂಕಿ ಹಿಡಿದು ಉರಿಯುವದು. ಆದ್ದರಿಂದ ಈ ಜಾತಿಯ ಬಾಂಬುಗಳಲ್ಲಿ ಬೆಂಕಿ ಹೊತ್ತಿಸಲಿಕ್ಕೆ ಬತ್ತಿಯನ್ನು ಇಡಬೇಕಾದ ಅಗತ್ಯ ಇರುವದಿಲ್ಲ. ಬಾಂಬು ವಿಮಾನದಿಂದ ಕೆಳಗೆ, ಭೂಮಿಗೆ ಬಂದು ಬಿದ್ದೊಡನೆ ಅದರ ಕವಚವು ಚೂರುಚೂರಾಗಿ ಸಿಡಿದು, ಒಳಗಿನ ಮದ್ದಿನ ಹುಡಿಯು ೩೦೦೦° ಸೆಂಟಿಗ್ರೇಡಿನಷ್ಟು ಪ್ರಬಲವಾದ ಬೆಂಕಿಯನ್ನು ಕೊಡುವದು. ಈ ಅದ್ಭುತವಾದ ಪ್ರಳಯಕಾರಿ ಹುಡಿಯನ್ನು ಇಗ್ನ್ಯಾಟ್ ಎಂದು ಹೆಸರಿಟ್ಟಿದ್ದಾರೆ. ಅದನ್ನು ಸರಕಾರದ ಅಧಿಕಾರಿಗಳು ಪರೀಕ್ಷಿಸಿ, ಅದರ ವಿನಾಶಕಾರೀ ಶಕ್ತಿಯನ್ನು ಪರೀಕ್ಷಿಸುತ್ತಿದ್ದಾರೆ. ಈಗಿರುವ ಎಲ್ಲಾ ಜಾತಿಯ ಬಾಂಬುಗಳಿಗಿಂತ ಇದು ಭಯಂಕರವಾಗಿದೆ ಎಂಬುದರಲ್ಲಿ ಮಾತ್ರ ಅವರಿಗೂ ಸಂದೇಹವಿರುವದಿಲ್ಲ.

ಅಮೇರಿಕದ ಕೆಲವು ಹೊಸ ಶೋಧಗಳು

ಅಮೇರಿಕ ವಿಜ್ಞಾನಿಗಳು ವಿಚಿತ್ರವಾದರೂ ಪ್ರಯೋಜನಕಾರಿಯಾದ ಕೆಲವು ಶೋಧನೆಗಳನ್ನು ಮಾಡಿ, ನಿತ್ಯಜೀವನಕ್ಕೆ ಉಪಯುಕ್ತವಾದ ಕೆಲವು ಹೊಸ ಸಾಮಾಗ್ರಿಗಳನ್ನು ಕಂಡುಹಿಡಿದಿರುತ್ತಾರೆ. ಅವುಗಳಲ್ಲಿ ಮುಖ್ಯವಾದುವು ಯಾವುವೆಂದರೆ-ಒತ್ತಿ ಮಡಚಿ ಅಂಗಿಕಿಸೆಯಲ್ಲಿಟ್ಟುಕೊಂಡು ಹೋಗಲಿಕ್ಕಾಗುವ ಗುಡುಗುಡಿನಳಿಗೆ; ಕ್ಷೌರಮಾಡುತ್ತಿರುವಾಗಲೇ ಅದನ್ನು ಮಾಡಿಸಿಕೊಳ್ಳುವವನು ಕ್ಷೌರಿಕನ ಸೂಚನೆಗಳು ಮೌನವಾಗಿಯೇ ತಿಳಕೊಳ್ಳಲಿಕ್ಕಾಗುವ ಒಂದು ಸಂಜ್ಞಾ ಯಂತ್ರ; ಹೊರಗಿನ ಕ್ರಿಮಿಕೀಟಗಳು ನಾಯಿ ಮೊದಲಾದ ಪ್ರಾಣಿಗಳ ಶರೀರವನ್ನು ಸೇರಿಕೊಳ್ಳದ ಹಾಗೆ ಅವನ್ನು ಹೊರಗಟ್ಟುವಂಥ ಮದ್ದು ತುಂಬಿದ ಕೊರಳ ಪಟ್ಟಿ; ಬೆಂಕಿಪೆಟ್ಟಿಗೆಯೂ, ಬೀಡಿಸಿಗರೇಟು ಸೇದಿದ್ದರಿಂದ ಬೂದಿಯನ್ನು ಹಾಕುವ ಬಟ್ಟಲೂ ಒಂದರಲ್ಲೇ ಮಡಗಿರುವ ಸಣ್ಣ ಡಬ್ಬಿ; ಸಿಗರೇಟುಗಳನ್ನು ಉಪಯೋಗಿಸಿದ ಹಾಗೆ ಚಿಕ್ಕದಾಗುತ್ತ ಬರುವ ಸಿಗರೇಟು ಕರಡಿಗೆ.

Wanted—

Agents, Sub-organizers and District organizers to represent the clock insurance policy on salary and commission basis.

Insist upon a policy under clock insurance scheme

1. 20 scholarships of Rs. 4 each awarded in addition to the sum assured without extra charge.
2. Clocks given free
3. 9 scholarships of Rs. 5 each already awarded.

For terms apply to

K. Balakrishna Shetty
District Inspector

Kurukshetra Provident Insurance Co. Ltd., Mangalore.

Now camping at Padupet, Udipi, S. K.

ರಾಷ್ಟ್ರೀಯ ವಾರ ಪತ್ರಿಕೆ

ಸ್ವದೇಶಾಭಿಮಾನಿಗೆ

ಇಂದೇ

ಚಂದಾದಾರರಾಗಿರಿ

ನೇಶನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಒಬ್ಬ ಲೇಖಕರು ಬರೆಯುತ್ತಾ, ಗವರ್ನರರು ಪಟ್ಟಣಗಳನ್ನು ಸಂದರ್ಶಿಸುವ ವಿಷಯದಲ್ಲಿ ಒಂದು ಮನೋರಂಜಕವಾದ ವಿವರವನ್ನು ಕೊಡುತ್ತಾರೆ.

ಗವರ್ನರರು ನಗರ ಸಂಚಾರ ಮಾಡುವಾಗ-

ಮಾರ್ಗಗಳನ್ನು ಮುಚ್ಚಿ ನಿರ್ಬಂಧಿಸಬೇಕೆ?

ಪೋಲೀಸು ಕಾನೂನಿನ ಉದ್ದೇಶವೇನು?

ನೇಶನಲ್ ಹೆರಾಲ್ಡಿನಲ್ಲಿ ಲೇಖನ

ಅವರು ತಮ್ಮ ಲೇಖನದಲ್ಲಿ ಹೀಗೆ ಬರೆಯುತ್ತಾರೆ

"ಗವರ್ನರರಾದವರೂ, ಇತರ ಮನುಷ್ಯ ಜೀವಿಗಳಂತೆ ತಿರುಗಾಡಲು ಇಷ್ಟಪಡುವವರೇ. ಒಬ್ಬ ದೊಡ್ಡ ಮನುಷ್ಯನು ತಿರುಗಾಡುವುದೂ, ಸಣ್ಣ ಮನುಷ್ಯನು ತಿರುಗಾಡುವುದೂ ಒಂದೇ ಕ್ರಮವಲ್ಲ. ಗವರ್ನರರು ಪೇಟೆ ತಿರುಗಾಡಲು ಹೊರಟರೆಂದರೆ ಇಡೀ ನಗರದ ಪರಿಸ್ಥಿತಿಯೇ, ಕಡ್ಡಾಯವಾಗಿಯಾದರೂ ಬಹಳ ವಿಪರೀತವಾಗಿಯೇ ಮಾರ್ಪಡುತ್ತದೆ. ಬಹುಕಾಲಗಳ ವರೆಗೆ ಮಾರ್ಗಗಳಲ್ಲಿ ವಾಹನ ಸಂಚಾರವಾಗದಂತೆ ದಾರಿಯನ್ನು ಮುಚ್ಚಿಬಿಡುತ್ತಾರೆ. ಡಾಕ್ಟರರು ವೈದ್ಯರು ಎಷ್ಟೇ ಜರೂರಿರಲಿ ತಮ್ಮ ರೋಗಿಗಳನ್ನು ಸಂದರ್ಶಿಸಲು ಸಾಧ್ಯವಿಲ್ಲ. ವ್ಯಾಪಾರಿಯು ತನ್ನ ಅಂಗಡಿಗೆ ಹೋಗಿ ವಿಡಲು ಸಾಧ್ಯವಿಲ್ಲ, ಗೃಹಸ್ಥನು ತನ್ನ ದಿನನಿತ್ಯದ ಸಾಮಾನುಗಳನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ

ನೃತನಗರ

"ಹೀಗೆ ಗವರ್ನರರು ನಗರ ಸಂಚಾರ ಮಾಡುವ ಕಾಲದಲ್ಲಿ ತಾನು ಆಳುವ ಊರಿನಲ್ಲಿರುವ ಜನರ ಬಹಳ ಯೋಗ್ಯವಾದ ಪರಿಸ್ಥಿತಿಯನ್ನು ತಿಳಕೊಳ್ಳುವಂತೆ ಅಗುತ್ತದೆ. ಗವರ್ನರರು ಸಂದರ್ಶಿಸುವ ಪ್ರತಿಯೊಂದು ನಗರವೂ ಸಾಲಾಗಿ ಮಾರ್ಗದ ಬದಿನಿಂತಿರುವ ಪೋಲೀಸರನ್ನು ಬಿಟ್ಟರೆ ಶತ್ರುಗಳು ನೆಲಸಿರುವ ನಗರವೆಂದು ಅವರು ತಿಳಕೊಳ್ಳಬಹುದಾಗಿದೆ.

ಗವರ್ನರರು ಒಂದು ಮಾರ್ಗವಾಗಿ ಸಂಚಾರ ಮಾಡುವುದಿದ್ದರೆ ಆ ಮಾರ್ಗದಲ್ಲಿ ವಾಹನ ಸಂಚಾರವಾಗದಂತೆ ನಿರ್ಬಂಧಪಡಿಸಲು ಯಾವ ಕಾನೂನು ಸಹಾಯ ಮಾಡುತ್ತದೋ ಎಂದು ತಿಳಿಯುದಾಗಿದೆ. ಈ ಕೆಲಸವನ್ನು ಮಾಡುವ ಪೋಲೀಸ್ ಕಾನೂನಿನ ಪಕ್ಷದಂತೆ, ಪೋಲೀಸರು ತಮ್ಮ ಅನುಮತಿಯಿಲ್ಲದೆ ಮೆರವಣಿಗೆಯನ್ನು ಕೊಂಡುಹೋಗಲು ವಿಚಾರದಿಂದ ಮಾತ್ರ ಇದ

ಲಂಡನ್ ರಾಜಮನೆತನದಲ್ಲಿ-

ಕಾನೂನಿನ ಉದ್ದೇಶವೆಂದರೆ, ನಗರದ ದಿನನಿತ್ಯದ ಜೀವನ ರೀತಿಗೆ ಯಾವುದೇ ಮೆರವಣಿಗೆಯಿಂದ ತಡೆಯುಂಟಾಗಬಾರದೆಂಬದು. ಮೆರವಣಿಗೆ ಮೊದಲಾದವು ಹೊರಟು ಜನರ ವ್ಯವಹಾರಕ್ಕೆ ಆತಂಕ ಬರುವುದೇ ಎಂಬುದನ್ನು ಪೋಲೀಸಿನವರು ನೋಡಿಕೊಳ್ಳಬೇಕಾಗಿದೆ.

ಹೀಗೆ ಕಾನೂನಿರುವಾಗ, ಕಾನೂನಿನ ಉದ್ದೇಶವಿದಿರುವಾಗ ಅನಾವಶ್ಯಕವಾಗಿ ಗವರ್ನರರು ಬಂದಾಗ ಮಾರ್ಗದಲ್ಲಿ ವಾಹನ ಸಂಚಾರ ಮೊದಲಾದವನ್ನು ನಿಲ್ಲಿಸಿ ಜನರ ದಿನದ ವ್ಯವಹಾರಕ್ಕೆ ತೊಂದರೆ ಕೊಡುವುದು, ಪೋಲೀಸರ ಕರ್ತವ್ಯವಾಗಿಸುವುದಿಲ್ಲ. ಗವರ್ನರರ ಕಾರಾದರೂ ಇತರ ನಾಗರಿಕರ ಕಾರಿನಂತೆ ಯಾವುದೇ ಗಲಭೆಯಿಲ್ಲದ ಶಾಂತವಾಗಿಯೇ ಸಂಚರಿಸಬಹುದಾಗಿದೆ. ಲಂಡನ್ನಿನಲ್ಲಿ ರಾಜಮನೆತನದವರ ಕಾರು ಹಾದು ಹೋಗುವಾಗಲೂ ಇಂತಹ ನಿರ್ಬಂಧವು ಇರುವುದಿಲ್ಲ.

ಸಿಕಲಿ ದ್ವೀಪದ ಆಕ್ರಮಣ

ಇಟಲಿಯ ದಕ್ಷಿಣದಲ್ಲಿರುವ ಸಿಸಲಿ ದ್ವೀಪವು ಸಂಪೂರ್ಣವಾಗಿ ಜರ್ಮನರ ಸ್ವಾಧೀನವಾಗಿರುವದೆಂದು ವಾಷಿಂಗ್ಟನ್ನಿನಲ್ಲಿಯ ಅಧಿಕಾರಿಗಳಿಗೆ ಬಂದ ಸುದ್ದಿಯಿಂದ ತಿಳಿದುಬರುತ್ತದೆ. ಜರ್ಮನ್ ದಂಡಾಳುಗಳು ವೈಮಾನಿಕರು ಮತ್ತು ಕೆಲಸಗಾರರು ಈ ದ್ವೀಪವನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿರುವರಂತೆ

ಬೊಂಬೇ ಟಾಕೀಸ್

ಈ ಕಂಪನಿಯ 'ಬಂಧನ್' ಚಿತ್ರವು ಹಲವು ವಾರಗಳ ವರೆಗೆ ಪ್ರದರ್ಶಿತವಾಗುತ್ತಿದೆ. ಇದರ ಮುಂದಿನ ಚಿತ್ರ 'ಪುನರ್ಮಿಲನ'ವು ಬೇಗನೇ ಪ್ರದರ್ಶಿತವಾಗುವುದು. ಈಗ ತಯಾರಾಗುತ್ತಿರುವ ಸಾಮಾಜಿಕ ಚಿತ್ರ 'ನಯಾ ಸಂಸಾರ್' ಎಂಬುದ ಫಬ್ರವರಿ ಅಂತ್ಯದೊಳಗೆ ಸಿದ್ಧವಾಗುವುದೆಂದು ತಿಳಿದುಬರುತ್ತದೆ. ರೇಣುಕಾದೇವಿ, ಅಶೋಕ ಕುಮಾರ, ಮುಬಾರಕ್ ಮುಂತಾದ ಹಲವರು ಪ್ರಸಿದ್ಧ ನಟರು ಇದರಲ್ಲಿ ಅಭಿನಯಿಸುತ್ತಾರೆ

The Combined Booking Agency, MANGALORE. **and** **The Joint Booking Office,** KODIALBAIL.

FEAST OF St. Lawrence KARKALA

Tuesday the 28th Jan., '41 — **Solemn Vespers and Benedictions**

Wednesday the 29th Jan., '41 — **Solemn High Mass, Sermon, procession and Benediction.**

Thursday the 30th Jan., '41 — **Confraternity Feast of B. V. Mary.**

10 A.M. — **Solemn High mass, Sermon, procession, and benediction**

JOINT MANAGERS.

The Combined Booking Agency, MANGALORE. **The Joint Booking Office,** KODIALBAIL.

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 3-0-0 | ಅಂಚೆ ವೆಚ್ಚ ಸೇರಿ ರೂ. 3—12—0 | Regd. No. M. 340

ಸ್ವದೇಶಾಭಿಮಾನಿ

ಸಂಪುಟ 35] ತಾರೀಕು 24—1—1941 [ಸಂಚಿಕೆ 1]

(ESTABLISHED 1908)

The Bombay Life Assurance Company, Ltd.

FIGURES FOR 1939

Completed business exceeds	Rs. 1.42 Crores
Total Funds exceed	Rs. 1.52 Crores
Premium income during the year exceeds	Rs. 37½ Lakhs
Claims paid during the year exceed	Rs. 10 Lakhs

THE INSURANCE POLICIES

Form Best Investment in Wartime. This is the unique opportunity to Agents to put through larger business. To Insure or to Represent,

Please apply to

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI.

OR ANY OF OUR FOLLOWING OFFICES AT:

Puthiyara, Calicut. | Car Street, Mangalore. | Central Station Road, Trivandrum.

Gautam Niwas, Charni Road, Girgaum, Bombay No. 4. | Post Box No. 337 Mount Road, Madras. | Visweswarapuram Circle, Bangalore City.

(Regd)

ಅಮೃತಾಂಜನ.

ಶಿರವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಪೆಡಿವ್ಕೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬ್ಬಾ, ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಕಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯುಗಳ್ಳಿಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD 1906

ಸ್ವದೇಶಾಭಿಮಾನಿ

SWADESHABHIMANI

ತಾಯಿಯಿಲ್ಲದೆ, ದುಃಖಿತಳಾದ ಪುತ್ರಿಯನ್ನು ಬೇರೆ ಯಾರು ಸಮಾಧಾನಪಡಿಸಬಲ್ಲರು?

KANNADA ILLUSTRATED WEEKLY

ಬೋಸರು ಅಕಸ್ಮಾತ್ ಕಾಣೆಯಾದರು!

ಸನ್ಯಾಸ ಜೀವನಕ್ಕೆ ತೆರಳಿದರೆ?

ಪೋಲಿಸು ವಾರಂಟು ಹೋಗಿದೆ!

[illegible] ಸರು ತಾ. ೨೭ರಂದು ಕಣ್ಮರೆಯಾಗಿರುವರೆಂಬ ಸುದ್ದಿಯು ಎಲ್ಲೆಡೆಗಳಲ್ಲಿಯೂ ಅತ್ಯಾಶ್ಚರ್ಯವನ್ನೇ ಉಂಟುಮಾಡಿದೆ; ಕಲ್ಕತ್ತ ನಗರವಂತೂ ಉದ್ವೇಗಗೊಂಡಿದೆ: ಅವರ ಬಂಧುಮಿತ್ರ ವರ್ಗದವರು ತುಂಬಾ ಕಳವಳಗೊಂಡಿರುವರು — ಹೀಗೆಂದು ಕಲ್ಕತ್ತೆಯಿಂದ ಸುದ್ದಿ ಬಂದಿರುತ್ತದೆ.

ಸುಭಾಸರನ್ನು ದಶಂಬರ ಮೊದಲನೆಯ ವಾರದಲ್ಲಿ ಸೆರೆಮನೆಯಿಂದ ಬಿಡುಗಡೆ ಮಾಡಿರುವರಷ್ಟೆ. ಆ ಮೇಲೆ ಅವರು, ಮನೆಯ ಕೋಣೆಯೊಂದರಲ್ಲಿಯೇ ಉಳಿದುಕೊಂಡಿದ್ದರು. ಅವರು ಇತ್ತೀಚೆಗೆ ಕೆಲದಿನಗಳಿಂದ ಮೌನವ್ರತವನ್ನು ಅಂಗೀಕರಿಸಿದ್ದು ಧಾರ್ಮಿಕ ಗ್ರಂಥಗಳ ಪಠಣದಲ್ಲಿ ತನ್ಮಯರಾಗಿದ್ದರೆಂದು ತಿಳಿದುಬರುತ್ತದೆ. ಅವರ ಕೋಣೆಯೊಳಗೆ ಹೋಗಲು ಬೇರೆ ಯಾರಿಗೂ ಅನುಮತಿಯಿರಲಿಲ್ಲವೆಂದೂ ಅವರ ಸಮೀಪದ ಬಂಧುವೊಬ್ಬರು ಮಾತ್ರ ಅವರ ಬಳಿ ಹೋಗಿ ಅಡ್ಡ ಹಾಕಿದ್ದ ಪರದೆಯೆಡೆಯಿಂದ ಬೇಕಾದುದನ್ನು ಒದಗಿಸಿಕೊಡಬಹುದಾಗಿತ್ತೆಂದೂ, ಬೇಕಾದುದೆಲ್ಲವನ್ನೂ ಅವರು ಕಾಗದ ಚೀಟಿಯಲ್ಲಿ ಬರೆದು ಪರದೆಯ ಹಿಂದೆ ಬೀಸಾಡುತ್ತಿದ್ದರೆಂದೂ ತಿಳಿಯುತ್ತದೆ.

ಹೀಗಿರಲು, ತಾ. ೨೭ರಂದು ಅವರಿಗಾಗಿ ಇಟ್ಟಿದ್ದ ಹಾಲು ಹಣ್ಣುಗಳು ಹಾಗೆಯೇ ಇರಲು ಅವರ ಸಮೀಪ ಸಂಬಂಧಿಕರು ಬಂದು ನೋಡಿ, ಅರ್ಧ ಗಂಟೆಯೊಳಗೆ ತನಗೆ ಉತ್ತರ ಕೊಡದಿದ್ದರೆ ತಾನು ಒಳಬರುವೆನಾಗಿ ಚೀಟಿ ಬರೆದು ಒಳಹಾಕಿದರಂತೆ. ಅರ್ಧ ಗಂಟೆ ಕಳೆದು ಹೋದರೂ ಹಾಕಿದ ಚೀಟಿಗೆ ಉತ್ತರವಿಲ್ಲದಿರಲು ಅವರು ಒಳಹೋಗಿ ಹುಡುಕಿ ನೋಡಿದರೆಂದೂ ಆ ಮೇಲೆ ಸುಭಾಸ ಬೋಸರು ಮನೆಯಿಂದ ಯಾರಿಗೂ ಹೇಳದೇ ಕಣ್ಮರೆಯಾದರೆಂದು ತಿಳಿದು ಬಂತು.

ಈ ಸುದ್ದಿಯಿಂದ ಗಾಬರಿಗೊಂಡ ಸಂಬಂಧಿಕರು ನೆರೆಕರೆಯವರಿಗೆ, ಹತ್ತಿರದ ಸಂಬಂಧಿಕರಿಗೆ, ಮಾತ್ರವಲ್ಲದೆ ಸುಭಾಸರ ಸೋದರ ಶರತ್ ಬೋಸರಿಗೆ ಈ ವಾರ್ತೆಯನ್ನು ತಿಳಿಸಿದರು. ಎಲ್ಲಿ ಹುಡುಕಿದರೂ ಅವರ ವಿಚಾರ ತಿಳಿದು ಬಂದಿಲ್ಲವೆಂದು ಗೊತ್ತಾಗಿದೆ.

ಸಾರ್ವದರ್ಶಿ ಬ್ಲಾಕಿನ ಅಧ್ಯಕ್ಷರಾದ ಶಾರ್ದೂಲಸಿಂಗರು ಒಂದು ಹೇಳಿಕೆಯನ್ನು ಕೊಡುತ್ತಾ ಸುಭಾಸರು ಬಹುಶಃ ಸನ್ಯಾಸವನ್ನು ಕೈಕೊಂಡಿರಬೇಕೆಂದೂ, ಹಾಗಾಗಿ ಅವರಿಗೆ ಪೊಂಡಿಚೇರಿಗೆ ತೆರಳಿರಬಹುದೆಂದೂ ಹೇಳುವರು.—ನಾನು ಕೆಲದಿನಗಳ ಹಿಂದೆ ಬೋಸರನ್ನು ಭೇಟಿಯಾಗಲು ಹೋದಾಗ ಅವರು ರಾಜಕೀಯದ ವಿಷಯವಾಗಿ ಅತ್ಯಂತ ಸ್ಫೂರ್ತಿಯಿಂದ ಮಾತನಾಡಿದರೆಂದೂ, ಭಾರತದ ಬಂಧವಿಮೋಚನೆ ಮಾಡಬೇಕಾದರೆ ಸನ್ಯಾಸಿಗಳೇ ಆಗಬೇಕೆಂದು ಅಭಿಪ್ರಾಯಪಟ್ಟರೆಂದೂ ತಿಳಿಯುತ್ತದೆ. ಹಾಗಾಗಿ ಅವರು ಸನ್ಯಾಸ ಜೀವನಕ್ಕೆ ತೆರಳಿರಬಹುದೆಂದು ಊಹಿಸಲಾಗಿದೆ.

ತ್ರಿಪುರಿ ಅಧಿವೇಶನದ ಅನಂತರ ಅವರು ಮಾಡರ್ನ್ ರಿವ್ಯೂನಲ್ಲಿ ಒಂದು ಲೇಖನ ಬರೆಯುತ್ತಾ ತನಗೆ ಸನ್ಯಾಸದ ಕಡೆಗೆ ಮನಸ್ಸೊಲಿಯುತ್ತದೆಯೆಂದು ಹೇಳಿದ್ದರು. ಬೋಸರು ಪಾಂಡಿಚೇರಿಯಲ್ಲಿ ಇಲ್ಲವೆಂದೂ ತಿಳಿದುಬಂದಿರುವುದರಿಂದ ಕೈಲಾಸಕ್ಕೆ ತೆರಳಿರಬಹುದೇ ಎಂದು ಊಹಿಸಲಾಗಿದೆ.

ಬೋಸರ ಮೇಲೆ ಕೋರ್ಟಿನಲ್ಲಿ ಎರಡು ಕೇಸುಗಳು ಇವೆ. ಅವರು ಸರಕಾರದ ವಿರುದ್ಧ ಭಾಷಣ ಮತ್ತು ಲೇಖನ ಕೊಟ್ಟದ್ದಕ್ಕೆ. ಅದನ್ನು ವಿಚಾರಣೆಗೆ ಕರೆದಾಗ ಬೋಸರ ಸ್ವಂತ ಹಾಜರಿ ನಿಮಿತ್ತ ಅವರನ್ನು ಕ್ರಮವಾಗಿ ಕರೆದರೆ. ಸರಕಾರದವರು ಪೋಲೀಸರನ್ನು ವಾರಂಟು ಸಹಿತ ಕಳುಹಿಸಿರುವರೆಂದೂ ತಿಳಿದಿದೆ.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 482/1940

ಜನಾರ್ದನ ಪ್ರಭು ... ವಾದಿ,

ಮತ್ತು

ಭವಾನಿ ಶಂಕರರಾವ್ ಕೂಡಾ ಪ್ರತಿವಾದಿ,

ಇವರೊಳಗೆ—

ಪ್ರತಿವಾದಿಗಳು, 1. ಭವಾನಿ ಶಂಕರರಾವ್ ಬೋಳೂರು ಬೆಟ್ಟು ರಾಮರಾಯರ ಮಗ, ಮಂಗಳೂರು ಕದ್ರಿಯಲ್ಲಿರುವವ—

2. ವೇಣುಗೋಪಾಲ 1ನೇ ಪ್ರತಿವಾದಿಯ ಮಗ, ಮಂಗಳೂರು ಶ್ರೀ ಉಮಾಮಹೇಶ್ವರ ದೇವಸ್ಥಾನದ ಸುತ್ತಿನ ಹಿಂದುಗಡೆ ಬೆಟ್ಟನಲ್ಲಿರುವವ, ಇವರಿಗೆ—

ನಿಮ್ಮ ಪೈಕಿ 1ನೆಯವನು ಆಗ ಮೈನರನಾಗಿರುತ್ತಿದ್ದ 2—4ನೆ ಪ್ರತಿವಾದಿ ಗಾರ್ಡಿಯನನಾಗಿ ಕೂಡಾ ತಾ. 30—11—'34ರಲ್ಲು ರೂಪಾಯಿ 1800ಕ್ಕೆ ತಾ. 18—2—'36ರಲ್ಲು ರೂಪಾಯಿ 450ಕ್ಕೂ ಬರಕೊಟ್ಟ ಆಧಾರ ದಸ್ತಾವೇಜುಗಳ ಬಾಬ್ತು ಬಾಕಿ ಬಡ್ಡಿ ರಿಜಿಸ್ಟ್ರೇಶನ್ ಖರ್ಚು ಕೂಡಾ ರೂ. 341-13-2 ಕೋರ್ಟು ಖರ್ಚು ಮುಂದಿನ ಬಡ್ಡಿ ಕೂಡಾ ವಸೂಲು ಮಾಡಿಕೊಳ್ಳುವರೆ ವಾದಿಯು ಹಾಕಿದ ಸದ್ರಿ ದಾವೆಯು ತಾ. 10—2—1941ಕ್ಕೆ ಇಟ್ಟಿರುವದರಿಂದ ಸದ್ರಿ ದಾವೆಗೆ ನಿಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ನೀವು ಸದ್ರಿ ತಾರೀಕಿನ ಮುಂಚಿತವಾಗಿ ಜ್ಯಾರಿಗೆ ಆಗತಕ್ಕದಿರುವ ನಿಮ್ಮ ಬರಸ ದಾಖಲುಮಾಡಿ ಆಕ್ಷೇಪಣೆಗಳನ್ನು ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಬಿನಾಯಿ ಮಾಡಿ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ದಾವೆಯು ತನ್ನಿಂದ ತೀರ್ಮಾನಿಸಲ್ಪಡುವುದೆಂಬುದನ್ನು ಕೋರ್ಟ್ ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಲಾಗಿದೆ.

ತಾರೀಕು 24-1-41. } P. Ramachandra Rao, Pleader for Plaintiff.

1941ನೇ ಇಸವಿ ಜನವರಿ ತಿಂಗಳ ತಾರೀಕು 27ನೇ ಸೋಮವಾರ ದಿವಸದ ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆಗಳು.

	ರಿಂದ	ವರೆಗೆ
1. (a) ಛತ್ರ ಅವ್ವಲ್ ತರದ ಗುಡ್ಡು ಮುಡಿಗೆ	2— 0—0	—
(b) ,, ದುಯಂ ,, ,, ,,	1—14—0	—
2. (a) ಅಕ್ಕಿ—ಅವ್ವಲ್ ತರದ ಗುಡ್ಡು ಮುಡಿಗೆ	4—14—0	—
(b) ,, ದುಯಂ ,, ,, ,,	4—10—0	4—11—0
3. (a) ,, ಅವ್ವಲ್ ,, ಸುಗ್ಗಿ ,,	5— 0—0	—
(b) ,, ದುಯಂ ,, ,, ,,	4—12—0	—
4. (a) ತೆಂಗಿನಕಾಯಿ ಸುಲಿದದ್ದು 1000ಕ್ಕೆ	42— 8—0	47— 8—0
(b) ಸಿಪ್ಪೆಯಿದ್ದದ್ದು	45— 0—0	50— 0—0
5. (a) ಕೊಬ್ಬರಿ ಆಫೀಸು ಖಂಡಿಗೆ	57— 8—0	—
(b) ,, ದೇಶಿ ,,	65— 0—0	—
(c) ,, ದಿಲ್‍ಪಸಂದ್	60— 0—0	—
6. ತೆಂಗಿನ ಎಣ್ಣೆ ಮಣಕ್ಕೆ	3—13—0	3—15—0
7. (a) ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2—12—0	3— 4—0
(b) ಸುಲಿದ ಅಡಿಕೆ ಖಂಡಿಗೆ (ಹಳ್ತು)	110— 0—0	125— 0—0
(ಹೊಸ್ತು)	85— 0—0	95— 0—0
8. ಗೇರುಬೀಜ ಮುಡಿಗೆ	3— 6—0	4— 0—0
9. ಕಪ್ಪಿನ ಬೆಲ್ಲ ಖಂಡಿಗೆ	22— 8—0	30— 0—0
10. ಬಿಳಿ ಮೆಣಸು ಹಂಡ್ರಡ್‍ವೇಟಿಗೆ	13— 8—0	14— 0—0
11. (a) ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	4— 6—0	—
(b) ಹುಡಿಯು	7—10—0	—
12. (a) ಮೈಸೂರು ಸಕ್ಕರೆ ಮಣಕ್ಕೆ	44— 0—0	60— 0—0
(b) ಕೊಡಗಿನ	44— 0—0	55— 0—0
13. (a) ಕುಮುಟೆಯ ಮೆಣಸು ಖಂಡಿಗೆ	55— 0—0	62— 8—0
(b) ಕಾಸರಗೋಡು ,, ಮಣಕ್ಕೆ	2— 4—0	—
(c) [illegible]	[illegible]	[illegible]

ರೋಗ ವಾಸಿಯಾದ ಕೂಡಲೇ, ದಿನನಿತ್ಯ ಓವಲ್‍ಟಿನನ್ನು ಕುಡಿದು ನಿಮ್ಮ ಹಿಂದಿನ ಆರೋಗ್ಯವನ್ನು ಪಡೆಯಿರಿ. ನೀವು ಅದರ ಹಿತಕರವಾದ ಸವಿಯನ್ನು ಕೊಂಡಾಡುವಿರಿ. ನಿಶ್ಶಕ್ತವಾದ ದೇಹಕ್ಕೆ ದುರ್ಬಲವಾದ ನರಗಳಿಗೆ, ಅದು ತಿರಿಗಿ ಶಕ್ತಿಯನ್ನು ಉಂಟುಮಾಡಿ, ಸುಖ ನಿದ್ರೆಯನ್ನುಂಟು ಮಾಡುವುದಲ್ಲದೆ ಶರೀರವನ್ನು ಕ್ರಮಪ್ರಕಾರ ಬಲಗೊಳಿಸುತ್ತದೆ.

ಓವಲ್‍ಟಿನ್ ಪುಷ್ಟಿ, ಪೂರ್ಣ ನೈಸರ್ಗಿಕ ಆಹಾರವಾಗಿದೆ. ದಿನನಿತ್ಯ ಆರೋಗ್ಯದ ಸಲುವಾಗಿ ಅದನ್ನು ಕುಡಿಯಿರಿ. ಇತರ ನಕಲಿ ಮಾಲುಗಳನ್ನು ಉಪಯೋಗಿಸಬೇಡಿ.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಅಂಗಡಿಗಳಲ್ಲಿಯೂ ಇದು ಮಾರಾಟಕ್ಕಿದೆ.

ಡಿಸ್ಟ್ರಿಬ್ಯೂಟರ್ಸ್—ಗ್ರೆಹಮ್ಸ್ ಟ್ರೇಡಿಂಗ ಕಂಪೆನಿ (ಇಂಡಿಯಾ) ಲಿಮಿಟೆಡ್, ಬೊಂಬಾಯಿ, ಕಲ್ಕತ್ತ, ಮದ್ರಾಸು, ಕರಾಚಿ, ರಂಗೂನ್.

ಓವಲ್‍ಟಿನ್

OVALTINE

ಓವಲ್ಟಿನ್ ಬಿಸ್ಕುಟುಗಳು

ಕೆಲವು ಓವಲ್ಟಿನ್ ಬಿಸ್ಕುಟುಗಳನ್ನು ಉಪಯೋಗಿಸಿ ನೋಡಿರಿ.

ಮಧುರವಾಗಿವೆ; ಜೀರ್ಣಕಾರಿಯಾಗಿವೆ ಮತ್ತು ಆರೋಗ್ಯಕರವಾಗಿವೆ. ಪ್ರಯಾಣಕ್ಕೆ ಅತ್ಯಂತ ಯೋಗ್ಯವಾಗಿವೆ. ೪ ಔನ್ಸ್ ಮತ್ತು ೮ ಔನ್ಸ್‍ಗಳ ಪೆಕೇಟುಗಳಾಗಿಯೂ, ಒಂದು ಪೌಂಡಿನ ಡಬ್ಬಿಗಳಾಗಿಯೂ ಮಾರಾಟಮಾಡಲಾಗುತ್ತವೆ.

OV/26/40

ಸ್ವದೇಶಾಭಿಮಾನಿಯಲ್ಲಿ,

ನಿಮ್ಮ ಜಾಹೀರಾತುಗಳನ್ನು

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

31—1—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೩೧—೧—೧೯೪೧

ನೆಹರುಗಳನ್ನು ಬಿಡಬೇಕೆಂದು ಬ್ರಿಟಿಷರೇ ವಾದಿಸುತ್ತಾರೆ!

ಲಂಡನಿನಲ್ಲಿ ಸೇರಿದ ಸಭೆಯ ಸುದ್ದಿ

ಫ್ಯಾಸಿಸಂ ವಿರೋಧಿಗೆ ಹೀಗೆ ಬಂಧನವೆ?
ಸ್ವಾತಂತ್ರ್ಯಪ್ರಿಯರಿಗೆ ಪಾರತಂತ್ರ್ಯವೆ?
ಉದಾತ್ತಗುಣಿಗೆ ವಾಕ್‌ಸ್ವಾತಂತ್ರ್ಯವಿಲ್ಲವೆ?
ಭಾರತವನ್ನು ಸ್ವತಂತ್ರ ಮಾಡದೆ
ಯುರೋಪನ್ನು ಸ್ವತಂತ್ರ ಮಾಡಲಾರೆವು.

ನೆಹರುಗಳನ್ನು ಬಿಡುಗಡೆ ಮಾಡಬೇಕೆಂದು ಭಾರತ ಹಿತಚಿಂತಕರಾದ ಹಲವು ಮಂದಿ ಬ್ರಿಟಿಷ್ ಮಿತ್ರರ ಪ್ರಚಾರವು ದಿನ ಹೋದಂತೆ ಹೆಚ್ಚು ಹೆಚ್ಚು ಪ್ರಭಾವಶಾಲಿಯಾಗುತ್ತಾ ಬರುತ್ತದೆ. ಎಡ್ವರ್ಡ್ ಥಾಮ್ಸನ್ ಮೊದಲಾದವರ ಪರಿಣಾಮಕಾರಿಯಾದ ಪ್ರಚಾರಗಳು ಬ್ರಿಟನಿನಲ್ಲಿ, ಯುರೋಪಿನಲ್ಲಿ ಬಹಳ ವಿಚಾರ ಕ್ರಾಂತಿಯನ್ನುಂಟು ಮಾಡಿರುತ್ತದೆ ಎಂದು ಲಂಡನಿನ ಸುದ್ದಿಗಾರರೊಬ್ಬರು ಲಾಹೋರು ಪತ್ರಿಕೆಗೆ ವಿಶೇಷ ಸುದ್ದಿಯೊಂದನ್ನು ಕಳುಹಿಸಿರುತ್ತಾರೆ. ಅವರು ಅದರಲ್ಲಿ ಹೀಗೆಂದಿರುವರು:

"ಲಂಡನಿನ ಈಸ್ಟ್ ಇಂಡಿಯಾ ಎಸೋಸಿಯೇಶನ್ ರೋಯಲ್ ಎಂಪಯರ್ ಸೊಸೈಟಿ ಮೊದಲಾದ ಕಡೆಗಳಲ್ಲಿ ಈಗೀಗ ಹಲವು ಸಭೆಗಳು ಭಾರತದ ಪರಿಸ್ಥಿತಿಯ ವಿಷಯ ವಿಮರ್ಶೆಗಾಗಿ ಸೇರಿದವು. ಅದರಲ್ಲಿ ಕೂಡುವ ಮಹಿಳೆಯರಲ್ಲಿ ಮಹನೀಯರಲ್ಲಿ ಭಾರತಕ್ಕೆ ಬಂದು ಇಲ್ಲಿ ವಾಸವಾಗಿದ್ದು, ಇಲ್ಲಿನ ಪರಿಸ್ಥಿತಿಗಳನ್ನು ಪರಿಶೀಲಿಸಿದವರೂ ಕೆಲವರು ಇರುತ್ತಿದ್ದರೂ ಅಲ್ಲಿ ಭಾರತ ನಿವಾಸಿಕರಾದವರು ಭಾರತೀಯರ ಸಂಖ್ಯೆ ಕಡಿಮೆಯಿರುವುದರಿಂದ ಅವರು ಹೇಳುವ ಮಾತುಗಳು ಬ್ರಿಟನಿನ ಜನತೆಯ ಮೇಲೆ ಹೆಚ್ಚಿನ ಪರಿಣಾಮವನ್ನು ಹುಟ್ಟಿಸೀತು ಎನ್ನಲಾಗುವುದಿಲ್ಲ. ಇಂಥ್ಥು ಲಂಡನಿನಲ್ಲಿ ಯಾವುದೇ ಕಡೆಯಲ್ಲಿಯೇ ಆಗಲಿ ಭಾರತದ ವಿಷಯವಾಗಿ ಸಭೆ ಕರೆದರೆ ಅಲ್ಲಿ ಜನತೆ ಗುಂಪು ಕೂಡದೆ ಇರುವುದಿಲ್ಲ.

ಅಂತೆಯೇ ಮೊನ್ನೆ ಹೊಲ್‌ಬೋರ್ನ್ ಹಾಲಿನಲ್ಲಿ 'ನೆಹರುಗಳನ್ನು ಬಿಡುಗಡೆ ಮಾಡಬೇಕು' ಎಂಬ ವಿಷಯವಾಗಿ ಒಂದು ಮಹಾಸಭೆ ಕೂಡಿತು. ಮತ್ತು ಅದರಲ್ಲಿ ಭಾರತದ ಪ್ರಕೃತದ ಪರಿಸ್ಥಿತಿಯ ವಿಮರ್ಶೆಯೂ ಆಯಿತು.

ಥಾಮ್ಸನರ ಭಾಷಣ

ಎಡ್ವರ್ಡ್ ಥಾಮ್ಸನರು ಆ ದಿನ ಬಹಳ ಸ್ಫೂರ್ತಿಮತ್ತಾದ ಭಾಷಣವನ್ನು ಕೊಟ್ಟು ಪಂಡಿತ ನೆಹರುಗಳ ಜೀವನ ಮತ್ತು ಗುಣ ಗಂಭೀರತೆಗಳ ವಿಷಯ ಬಹಳ ಉಜ್ವಲವಾದ ಮಾತುಗಳನ್ನು ಹೇಳಿದರು. 'ಯಾವ ಮನುಷ್ಯನು ನಮ್ಮ ನೆಲಸಿಗೆ ಆಮಂತ್ರಣ ಕೊಡಲಿಲ್ಲವೋ' ಎಂದು ಅವರು ಮಾತೆತ್ತಿ, ಪಂಡಿತಜಿಯವರು ರೋಮಿಗೆ ತೆರಳಿದ್ದಾಗ ಮುಸಲಿನಿಯು ಆಮಂತ್ರಣ ಸಹಿತ ಬಂದು ಕಾರು ಹಿಡಿದು ಕಾದು ಕುಳಿತಿದ್ದ ರಾಯಭಾರಿಗಳನ್ನು ತಿರಸ್ಕರಿಸಿ ಕಳುಹಿಸಿದ್ದ ವಿಚಾರವಾಗಿ ಮಾತನಾಡಿದರು: ಈ ಸಂಭವವು ನೆಹರುಗಳ ಉದಾತ್ತ ಗುಣಕ್ಕೆ ಹೆಚ್ಚಿನ ಯೋಗ್ಯತೆಯನ್ನು ತಂದುಕೊಟ್ಟಿತು ಎಂದು ಅವರು ಅಭಿಪ್ರಾಯಪಟ್ಟರು.

ಮುಂದುವರಿಸುತ್ತಾ ಥಾಮ್ಸನರು ಸ್ಪೈನಿನ ಕ್ರಾಂತಿಯ ವಿಷಯ, ಚೈನದ ಆಕ್ರಮಣದ ವಿಷಯವಾಗಿ ಜವಾಹಿರಲಾಲರು ಕೊಟ್ಟ ಅಭಿಮತಗಳನ್ನು ಎತ್ತಿ ಹೇಳಿ, ಸರ್ವಾಧಿಕಾರ ಬುದ್ಧಿಯನ್ನು ಅನ್ಯಾಯವನ್ನು ಬಲವಂತವಾಗಿ ನೆಹರುಗಳು ಖಂಡಿಸುವರೆಂದು ಹೇಳಿದರು.

ನೆಹರು ನಮ್ಮ ಮಿತ್ರರು

ಅಧ್ಯಕ್ಷ ಪೀಠದಿಂದ ಪ್ರೂಟರು ಹೇಳಿದ ಮಾತುಗಳಿವು:—ನೆಹರುಗಳನ್ನು—ನಾವು ನಮ್ಮ ಗೆಳೆಯರೆಂದು ತಿಳಿಯುತ್ತೇವೆ. ಅವರ ಉದಾತ್ತ ತತ್ವಗುಣಗಳನ್ನು ಕೊಂಡಾಡುತ್ತೇವೆ. ಈ ಸಭೆಯು ಅವರನ್ನು ಬಿಡುಗಡೆಮಾಡಬೇಕೆಂದು ನಿರ್ಣಯಿಸುತ್ತದೆ. ಈ ಮೂಲಕ ಸರಕಾರವನ್ನು ಕೇಳುತ್ತದೆ, ಮಾತ್ರವಲ್ಲದೆ ಬ್ರಿಟನು ಭಾರತದ ವಿಷಯ ಧೋರಣೆಯನ್ನು ಬದಲಾಯಿಸಿ ಬೇಗನೇ ಅದನ್ನು ಬಂಧಮುಕ್ತ ಮಾಡಬೇಕೆಂದೂ ಕೇಳುತ್ತೇವೆ.

ಯಾಕೆ ಕೇಳಲಿಲ್ಲ?

ಮತ್ತೆ ಮಾತನಾಡಿದವರು ಟ್ರೇಡ್ ಯೂನಿಯನ್ ಕಾಂಗ್ರೆಸಿನ ಹಿಂದಿನ ಅಧ್ಯಕ್ಷರಾದ ಎಲ್ವಿನರು. ಅವರು ಯುದ್ಧ ಸಾರುವಾಗ ಭಾರತದೊಡನೆ ಯಾಕೆ ಒಂದು ಮಾತು ಕೇಳಲಿಲ್ಲವೆಂದು ಪ್ರಶ್ನಿಸಿದರು. ಇದರಿಂದಲೇ ಕೇಂದ್ರ ಎಸೆಂಬ್ಲಿಯಲ್ಲಿ ಆರ್ಥಿಕ ಮಸೂದೆಯು ಬಿದ್ದು ಹೋಗುವಂತೆಯೂ, ನೆಹರು ಪ್ರಭೃತಿಗಳನ್ನು ಯುದ್ಧವಿರೋಧ ವರ್ತಿಸುವಂತೆಯೂ ಆಯಿತೆಂದರು.

ಆ ಮೇಲೆ ಡಾ। ಮಾಡೆ ಕೈಡಸರು ಮಾತನಾಡುತ್ತಾ, ಇಂದಿನ ಪ್ರಧಾನ ಮಂತ್ರಿಗಳು ಭಾಷಣ ಸ್ವಾತಂತ್ರ್ಯದ ವಿಷಯವಾಗಿ ವಹಿಸುವ ಆಸಕ್ತಿಯನ್ನು ಹೊಗಳಿ, ಯಾರು ಉದಾತ್ತ ಗುಣಶಾಲಿಗಳೋ ವಿಚಾರವಂತರೋ, ಯಾವ ಅಂಥವರನ್ನು ಇಂದು ಸೆರೆಯೊಳಗಿರಿಸಲಾಗಿದೆಯೋ ಆ ನೆಹರುಗಳಿಗೂ ಅಂಥಾ ಭಾಷಣ ಸ್ವಾತಂತ್ರ್ಯವನ್ನು ಪ್ರಧಾನ ಮಂತ್ರಿಗಳು ಕೊಡಬೇಕಾಗಿ ಕೇಳಿಕೊಂಡರು.

ಬ್ರೈಲ್ಸ್‌ಫೋರ್ಡರು

ಆ ಮೇಲೆ ಬ್ರೈಲ್ಸ್‌ಫೋರ್ಡರು ಮಾತನಾಡುತ್ತಾ, ನಾವು ಭಾರತವನ್ನು ಬಂಧಮುಕ್ತ ಮಾಡಿದ ವಿನಾ, ನಮ್ಮ ಯುದ್ಧವು ಸ್ವಾತಂತ್ರ್ಯದ ಸಲುವಾಗಿ ಹೋರಾಟ ಯುದ್ಧವೆಂದಾಗುವುದಿಲ್ಲವೆಂದರು. 'ನಾವು ಭಾರತವನ್ನು ಸ್ವತಂತ್ರಗೊಳಿಸಿದಂದು ಮಾತ್ರ ಯುರೋಪನ್ನು ಸ್ವತಂತ್ರಮಾಡಲು ಅರ್ಹತೆ ಪಡೆಯುವೆವು' ಎಂದು ಹೇಳಿದರು.

ಆ ಮೇಲೆ ಸೊರೆನ್ಸನರು ಮಾತನಾಡುತ್ತಾ ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳ ಸಲುವಾಗಿ ಕಾದಾಡುವ ವೀರಯೋಧರಾದ ನೆಹರುಗಳಂಥವರನ್ನು ಸೆರೆಯೊಳಗಿಟ್ಟದ್ದು ಮಹಾ ಅಪರಾಧವೆಂದರು.

THE PIE-MONEY BANK LTD.,
Maidan Road, MANGALORE.
Undertakes all kinds of Banking Business. Current account at 2½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/- to Rs. 5000 run regularly on systematic lines. Unique Banking facilities to Businessmen and interested Public.
Apply for particulars—
K. R. GURU, *Managing Director*

ಸ್ವದೇಶಾಭಿಮಾನಿ

ತಾರೀಕು 31—1—1941

ಪುನಃ ಎಮೆರಿ

ಭಾರತದ ಪರಿಸ್ಥಿತಿಯ ಕುರಿತು, ಭಾರತ ಮಂತ್ರಿ ಎಮೆರಿಯವರು ಪುನಃ ಈ ವಾರ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಕಾಮನ್ಸ್ ಸಭೆಯಲ್ಲಿ ಪ್ರಶ್ನೆ ಬಂದಾಗ, ಭಾರತದ ಪರಿಸ್ಥಿತಿಯಲ್ಲಿ ಏನೂ ವಿಶೇಷ ವ್ಯತ್ಯಾಸಗಳಾಗಲಿಲ್ಲವೆಂದು ಅವರು ಹೇಳಿದರು. ಮತ್ತೆ 'ಗ್ರೇಟ್ ಬ್ರಿಟನ್ ಎಂಡ್ ಈಸ್ಟ್' ಪತ್ರಿಕೆಯ ಸಂಪಾದಕರೊಡನೆ, ಸಂದರ್ಶನ ಕಾಲದಲ್ಲಿ, ವೈಸರಾಯರು ಅಗಸ್ಟ್ ತಿಂಗಳಲ್ಲಿ ಬಹಳ ಉದಾರವಾದ ಸೂಚನೆಯನ್ನು ಭಾರತೀಯರಿಗೆ ಕೊಟ್ಟರೆಂದೂ, ಇಂದಿನ ಭಾರತದ ಸಮಸ್ಯೆಯನ್ನು ಭಾರತೀಯರೇ ಬಗೆಹರಿಸಿಕೊಳ್ಳತಕ್ಕದ್ದೆಂದೂ ಹೇಳಿದರು.

ಭಾರತ ಮಂತ್ರಿಗಳ ಈ ಹೇಳಿಕೆಗಳ ಕುರಿತು ಈಗಾಗಲೇ ದೇಶದ ಮುಖಂಡರು, ಪತ್ರಿಕೆಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ಹೇಳಿಕೆಯನ್ನು ಸರ್ವಸಾಧಾರಣ ಪ್ರತಿಯೊಬ್ಬರೂ ಟೀಕಿಸಿದ್ದಾರೆನ್ನಬಹುದು. ಎಮೆರಿಯವರ ಹೇಳಿಕೆಯು ಭಾರತದ ಜನಮತಕ್ಕೆ ಸಮ್ಮತವಾಗಲಿಲ್ಲವೆಂಬುದು ಇಷ್ಟರಿಂದಲೇ ಅರ್ಥಮಾಡಿಕೊಳ್ಳಲಾಗುತ್ತದೆ.

ಕಳೆದ ಎರಡು ತಿಂಗಳಿಂದ ಭಾರತದ ರಾಜಕೀಯದಲ್ಲಿ ಬಹಳ ಕ್ರಾಂತಿಕಾಲವೇ ಉಂಟಾಗಿದೆ. ಬ್ರಿಟನು ತನ್ನದೇ ಧೋರಣೆಯನ್ನು ಮುಂದೊತ್ತಿ ಜನತಾಭಿಪ್ರಾಯಕ್ಕೆ ಮನ್ನಣೆ ಕೊಡದುದನ್ನು ಕಂಡು, ಮಹಾತ್ಮರ ಮುಂದಾಳುತನದಲ್ಲಿ ಕಾಂಗ್ರೆಸು, ಅಖಿಲ ಭಾರತವೇ ವೈಯುಕ್ತಿಕ ಅಹಿಂಸಾಮಯ ಸತ್ಯಾಗ್ರಹ ಸಮರವನ್ನು ಹೂಡಿದೆ. ಅದು ಇಂದು ದಿನದಿಂದ ದಿನಕ್ಕೆ ಉಗ್ರವಾಗುತ್ತಿದೆ. ಭಾರತದ ಜನತಾ ಪ್ರತಿನಿಧಿಗಳನ್ನು ಸೆರೆಮನೆಯ ಕತ್ತಲೆ ಕೋಣೆಗಳೊಳಗೆ ಸೇರಿಸಲಾಗಿದೆ. ಪಶ್ಚಿಮದಲ್ಲಿ ರಾಷ್ಟ್ರರಾಷ್ಟ್ರಗಳು ಸ್ವಾತಂತ್ರ್ಯದ ಸಲುವಾಗಿ ರಕ್ತ ಚೆಲ್ಲಿ ಕಾದಾಡುತ್ತಿರುವೀ ಕಾಲದಲ್ಲಿ, ಭಾರತದ ಸತ್ಯಾಗ್ರಹಿಗಳಾದರೂ ಅದಕ್ಕಿಂತ ಕಡಿಮೆಯಿಲ್ಲದ ಸ್ವಾತಂತ್ರ್ಯದ ಆವೇಶದಲ್ಲಿ, ರಕ್ತ ಚೆಲ್ಲದೆ ಆತ್ಮಬಲದ ಅಮೋಘ ಶಕ್ತಿಯನ್ನು ಪ್ರದರ್ಶಿಸಿ ಹೋರಾಡುತ್ತಿದ್ದಾರೆ. ಹಿಂದೂ ಮಹಾಸಭೆಯಾದರೂ, ಅಶಾಂತವಾಗಿ ಒಂದು ರೀತಿಯಿಂದ ಸರಕಾರಕ್ಕೆ ಕಡೆಯ ನುಡಿಯನ್ನೇ ಹೇಳಿದೆಯೆನಬೇಕು. ಭಾರತದಲ್ಲಿ ಹೀಗೆ ಗೊಂದಲವು ಹೆಚ್ಚಿರುವಾಗ, ಭಾರತ ಮಂತ್ರಿಗಳು ವಿಶೇಷ ಬದಲಾವಣೆಗಳಾಗಿಲ್ಲವೆಂದು ಹೇಳುವ ರೀತಿಯನ್ನು ನೋಡಿದರೆ ಪರಿಸ್ಥಿತಿಯ ಕಡೆಗೆ ಅವರು ಕಣ್ಣೆತ್ತಿ ನೋಡಲಿಲ್ಲವೆಂದು ಹೇಳಬೇಕಲ್ಲದೆ ಇನ್ನೇನೂ ಹೇಳಲಾಗುವುದಿಲ್ಲ.

ಭಾರತದ ಸಮಸ್ಯೆಯನ್ನು ಬಗೆಹರಿಸಲು ಸರಕಾರದವರು ಸರ್ವ ಪ್ರಯತ್ನಗಳನ್ನೂ ಮಾಡಿರುವರೆಂದೂ, ಮುಂದಿನದು ಭಾರತೀಯರನ್ನೇ ಹೊಂದಿಕೊಂಡಿದೆಯೆಂದೂ ಎಮೆರಿಯವರು ಹೇಳಿದರು. ವೈಸರಾಯರು ತನ್ನ ಕೌನ್ಸಿಲಿನ ವಿಸ್ತರಣೆಯ ವಿಷಯ ಹೇಳಿ, ಅದರಲ್ಲಿ ಭಾರತೀಯರಿಗೆ ಸ್ಥಾನ ಕೊಡಲಾಗುವುದೆಂದೂ, ಯುದ್ಧ ವಿಷಯದಲ್ಲಿ ಭಾರತವು ತೀವ್ರ ಸಹಕರಿಸಬೇಕೆಂದೂ ಹೇಳಿರುವಷ್ಟು ವಿಷಯವಲ್ಲದೆ, ಒಕ್ಕಟ್ಟನ್ನು ಬಗೆಹರಿಸುವಲ್ಲಿ ಬೇರೆ ಯತ್ನಗಳನ್ನು ಸರಕಾರವು ಏನಾದರೂ ಮಾಡಿರುವುದು ನಮಗೆ ಕಂಡುಬರುವುದಿಲ್ಲ. ವೈಸರಾಯರ ಈ ಸೂಚನೆಯನ್ನು ಎಲ್ಲಾ ರಾಜಕೀಯ ಪಂಗಡದವರೂ ತಿರಸ್ಕರಿಸಿದ ಮೇಲೆ ಜನತೆಗೆ ಬೇಡವಾದ ಸೂಚನೆ ಕೊಟ್ಟು, ಅದನ್ನು ತಮ್ಮ ಉದಾರ ಪ್ರಯತ್ನವೆಂದು ಸರಕಾರವು ಹೇಳುವುದರಲ್ಲಿ ಸ್ವಾರಸ್ಯವಿಲ್ಲ.

ಹೀಗೆ ತನ್ನದೇ ಆದ ಧೋರಣೆಯನ್ನು ತನ್ನಿಷ್ಟ ಬಂದಂತೆ ಮಾಡುತ್ತಿರುವಲ್ಲಿ, ಭಾರತದ ಜನತೆಯ ಮೇಲೆ ಅಪವಾದದ ಹೊರೆ ಹೊರಿಸುವುದು ಜಗತ್ತಾದರೂ ಮೆಚ್ಚತಕ್ಕ ನ್ಯಾಯವಾಗಿಲ್ಲ. ಎಮೆರಿಯವರು, ಭಾರತದ ಕುರಿತು ಸ್ಪಷ್ಟವಾದ, ಮಾತುಗಳನ್ನು ಹೇಳಿ ಅದನ್ನು ಕಾರ್ಯದಲ್ಲಿ ಮಾಡುವ ಮನಸ್ಸು ತೋರಿಸಿದರೆ, ಖಂಡಿತವಾಗಿಯೂ ಭಾರತೀಯರು ಸಹಕರಿಸದಿರಲಾರರು.

ಸೆರೆಮನೆಯಲ್ಲಿ ಸತ್ಯಾಗ್ರಹಿಗಳು

ಆಗಾಗ ಪತ್ರಿಕೆಗಳಲ್ಲಿ ಬರುವ ಸುದ್ದಿಗಳನ್ನು ಓದಿದರೆ, ರಾಜಕೀಯ ಕೈದಿಗಳಿಗೆ ಒದಗುವ ಸಂಕಷ್ಟಕರವಾದ ವಿಷಯಗಳು ನಮಗೆ ತಿಳಿದುಬರುತ್ತವೆ. ಯಾವ ಕಳವು ಮೋಸಗಳನ್ನು ಮಾಡದೆ, ಕೇವಲ ರಾಜಕೀಯದಲ್ಲಿ ವಿರುದ್ಧಾಭಿಪ್ರಾಯವನ್ನು ಪ್ರಕಟಿಸಿದ, ಜನತೆಯ ವಿಶ್ವಾಸ ಗೌರವಗಳಿಗೆ ಪಾತ್ರರೇ ಆದ ಮಹನೀಯರನ್ನು ಸೆರೆಮನೆಗಳಲ್ಲಿ ಈ ತರದ ಸ್ಥಿತಿಯಲ್ಲಿ ನೋಡುತ್ತಿರುವರೆಂದು ಕೇಳಿದರೆ ಯಾರ ಎದೆಯು ದುಃಖದಿಂದ ನೋಯದಿರದು. ರಾಜಕೀಯ ಕೈದಿಗಳನ್ನು ಉತ್ತಮ ರೀತಿಯಿಂದ ನೋಡುವುದು ಅವಶ್ಯವಿದೆಯೆಂದು ನಾವು ವಾದಿಸದಿರಲು ಸಾಧ್ಯವಿಲ್ಲ.

ವೆಲ್ಲೂರು ಸೆರೆಮನೆಯಲ್ಲಿ, ಸತ್ಯಾಗ್ರಹಿಗಳಾದವರು, ರಾಗಿಯ ಅಂಬಲಿ ತಿನ್ನಲಾಗದೆ, ಅಕ್ಕಿಯ ಅನ್ನವನ್ನು ಕೇಳಲು, ಅದನ್ನು ಕೊಡದಿರಲು, ಅವರು ಉಪವಾಸ ಮಾಡಿದರೆಂದೂ, ಆದರಿಂದ ಸತ್ಯಾಗ್ರಹಿಗಳು ಸೆರೆಮನೆಯ ನಿಯಮವನ್ನು ಉಲ್ಲಂಘಿಸಿ ನಡೆದರೆಂದು ಆರೋಪಿಸಿ ಅವರಿಗೆ ಮೂರು ತಿಂಗಳ ಸಶ್ರಮ ಶಿಕ್ಷೆ ವಿಧಿಸಲಾಯಿತೆಂದೂ ಕೇಳುತ್ತೇವೆ.

ಪಂಜಾಬಿನ ಶಾಸನ ಸಭಾ ಸದಸ್ಯರಾದ ಶ್ರೀ ಚೌಧರಿ ಕೃಷ್ಣಗೋಪಾಲದತ್ತ ಇವರನ್ನು ವಿಚಾರಣೆಗಾಗಿ ಕೋರ್ಟಿಗೆ ತರುವ ಸಂಧರ್ಭದಲ್ಲಿ ಎರಡು ಮೂರು ಸಲ ಬೇಡಿ ಹಾಕಿ ಕರತರಲಾಯಿತೆಂದು ತಿಳಿದಿದೆ.

ಹೀಗೆಯೇ ಪತ್ರಬರೆವಲ್ಲಿ ಭೇಟಿಯಾಗುವಲ್ಲಿ ಇರುವ ಅನೇಕ ಅನಾನುಕೂಲಗಳು ಅಲ್ಲಲ್ಲಿ ನಡೆದ ಅನೇಕ ಸುದ್ದಿಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಆದರೆ ಈ ವಿಷಯದಲ್ಲಿ ಸರಕಾರದವರು ಚೆನ್ನಾದ ರೀತಿಯಿಂದ ವರ್ತಿಸಬೇಕಾಗಿದೆ. ದೇಶಪ್ರೇಮಿಗಳನ್ನು ನ್ಯಾಯವಲ್ಲದ ನಿಷ್ಠುರವಾದ ಸಂಕಷ್ಟದಿಂದ ಪರಿಹರಿಸುವುದು ಸಾರ್ವಜನಿಕರ ಜವಾಬ್ದಾರಿಯೂ ಆಗಿದೆ.

ಬ್ರಿಟನು-ಅಮೇರಿಕ

ಬ್ರಿಟನು ಅಮೇರಿಕಗಳ ಸಂಬಂಧವು ದಿನದಿಂದ ದಿನಕ್ಕೆ ಸಮೀಪ ಸಮೀಪವಾಗುತ್ತಾ ಬರುತ್ತದೆ. ಸರ್ವಾಧಿಕಾರಿಗಳನ್ನು ಅಣಗಿಸಲು, ಬ್ರಿಟನಿಗೆ ಬೆಂಬಲ ಕೊಡದಲ್ಲಿ ತಮಗೂ ನಿರ್ವಾಹವಿಲ್ಲವೆಂದು ಅಮೇರಿಕಾ ಚೆನ್ನಾಗಿ ತಿಳಿಕೊಂಡಿದೆ. ಅಂತೆಯೇ ರೂಸ್‌ವೆಲ್ಟರು ಬ್ರಿಟನಿಗೆ ಹೆಚ್ಚಿನ ಸಹಾಯದ ಸಿದ್ಧತೆಯನ್ನು ಭರದಿಂದ ಮಾಡುತ್ತಿದ್ದಾರೆ.

ಅಮೇರಿಕಕ್ಕೆ ಈಗ ಬ್ರಿಟನಿನ ರಾಯಭಾರಿಗಳಾಗಿ ಲಾರ್ಡ್ ಹೆಲಿಫಾಕ್ಸರಂತಹ ಶಿಕ್ಷಿತರಾದ ರಾಜನೀತಿಜ್ಞರೇ ಹೋಗಿದ್ದಾರೆ. ಬ್ರಿಟನಿಗಾದರೂ ವೆಂಡಲ್ ವಿಲ್ಕಿಯಂತಹ ಪ್ರಭಾವಶಾಲಿಗಳೇ ಆಗಮಿಸಿರುವರು. ಇವರ ಅನ್ಯೋನ್ಯ ರಾಯಭಾರಿತನವು ಉಭಯ ರಾಷ್ಟ್ರಗಳನ್ನು ಹೆಚ್ಚಿನ ಸ್ನೇಹಬಂಧದಲ್ಲಿ ಬಿಗಿವಂತೆ ಮಾಡುವುದೆಂದು ಜಗತ್ತೇ ಹಾರೈಸಿದೆ. ಹೀಗಾಗಿ ಬ್ರಿಟನಿನೊಡನೆ ಅಮೇರಿಕವು ಇಂದಿನ ಯುದ್ಧಕ್ಕೆ ಧುಮುಕುವುದೇ ಎಂಬ ನಿರೀಕ್ಷಣೆಯೂ ಉಂಟಾಗಿದೆ.

ಅತ್ತ ಜಪಾನು ಅಮೇರಿಕಕ್ಕೆ ಎಚ್ಚರಿಕೆಯನ್ನು ಕೊಟ್ಟಿದೆ. ಅಮೇರಿಕವು ಯುದ್ಧರಂಗಕ್ಕಿಳಿದರೆ ಮಹಾ ಯುದ್ಧವೇ ಸಂಭವಿಸುವುದೆಂದು ಅದು ಬೆದರಿಸಿದೆ. ಅಮೇರಿಕವು ಬ್ರಿಟನಿನ ಬೆಂಬಲ ನಿಂತು ಕಾದಾಡುವಲ್ಲಿ ಜಪಾನಾದರೂ ತ್ರಿರಾಷ್ಟ್ರಗಳ ಒಪ್ಪಂದದಂತೆ ಜರ್ಮನ್ ಇಟಲಿಗಳ ಸಹಾಯ ನಿಂತು ಕಾದಾಡಬೇಕಾಗಬಹುದು; ಹೀಗೆ ಪ್ರಪಂಚದ ಭೀಷಣ ಯುದ್ಧವೇ ಏಳಬಹುದು; ಆದಕಾರಣ ಅಮೇರಿಕವು ಬ್ರಿಟನಿಗೆ ಸಹಾಯಮಾಡುವುದರಿಂದ ಜಗತ್ತಿಗೆ ಮಹಾನರ್ಥವನ್ನು ತಂದೊಡ್ಡುವುದೆಂದು ಜಪಾನು ಬೆದರಿಸುತ್ತದೆ.

ಈಗಿನ ಪರಿಸ್ಥಿತಿಯನ್ನು ಆಲೋಚಿಸಿದರೆ ಅಮೇರಿಕವಾದರೂ ಪ್ರತ್ಯಕ್ಷ ಯುದ್ಧರಂಗಕ್ಕಿಳಿವ ಸಂದರ್ಭವಿಲ್ಲ. ಆದರೆ ಮಹಾಯುದ್ಧದ ಭೀಷಣ ತಮ ಚಿತ್ರವು ನಮ್ಮ ಕಣ್ಣ ಮುಂದಿನಿಂದ ಮಾಸುವ ಹಾರೈಕೆಯಂತೂ ಸದ್ಯಕ್ಕೆ ಖಂಡಿತ ಇಲ್ಲವೆನಬೇಕು.

ರುಮೇನಿಯಾದ ಕ್ರಾಂತಿ

ಕಳೆದವಾರ ರುಮೇನಿಯಾದಲ್ಲಿ ಬಹಳ ಭಯಂಕರ ಕ್ರಾಂತಿಯೆದ್ದಿತು. ಜನರಲ್ ಎಂಟನೆಸ್ಕ್ಯೂ ಅಧಿಕಾರವನ್ನು ರದ್ದು ಮಾಡಬೇಕೆಂದು ಅಯರ್ನ್‌ಗಾರ್ಡರು ಈ ದೊಂಬಿಯನ್ನೆಬ್ಬಿಸಿದರೆಂದು ತಿಳಿದು ಬರುತ್ತದೆ. ಈ ದೊಂಬಿಯಿಂದ ರುಮೇನಿಯದಲ್ಲಿ ಆದ ಅನಾಹುತಗಳು ಸಾಮಾನ್ಯವಾದುವಲ್ಲ. ಆದರೆ ಕ್ರಾಂತಿಕಾರರು ತಮ್ಮ ದೊಂಬಿಯ ಕೆಲಸದಲ್ಲಿ ಯಶಸ್ವಿಗಳಾಗಲಿಲ್ಲ. ಜರ್ಮನ್ ಸೈನಿಕರು ರುಮೇನಿಯಕ್ಕೆ ಬಂದು, ದಂಗೆಯನ್ನು ಅಣಗಿಸಿದರು. ಆದರೆ ಈ ಕ್ರಾಂತಿಯ ಮೂಲವನ್ನು ನಾವು ವಿಚಾರಿಸದಿರತಕ್ಕುದಲ್ಲ.

ಅಂಟೆನೆಸ್ಕ್ಯೂ ತನ್ನ ಮಂತ್ರಿಮಂಡಳದಿಂದ ಜನರಲ್ ಪ್ರೊವೆನ್‌ಸ್ಕ್ಯೂ ಎಂಬವನನ್ನು ತೆಗೆದುಹಾಕಿದನು. ಆತನು ಅಯರ್ನ್‌ಗಾರ್ಡ್ ಪಕ್ಷದ ಒಬ್ಬ ಮುಂದಾಳುವು. ಅಂಟೆನೆಸ್ಕ್ಯೂವಿನ ರೀತಿನೀತಿಯು ಹೀಗಾಗಿ ಅಯರ್ನ್‌ಗಾರ್ಡರಿಗೆ ಒಪ್ಪಿತವಾಗಲಿಲ್ಲ. ಅಯರ್ನ್‌ಗಾರ್ಡರಾದರೂ, ರುಮೇನಿಯವು ರುಮೇನಿಯರಿಗಲ್ಲದೆ ಅನ್ಯರು ಅಲ್ಲಿಗೆ ಬರಬೇಡವಾಗಿ ಅಭಿಪ್ರಾಯಪಡುತ್ತಾರೆ. ಜರ್ಮನಿಯು ರುಮೇನಿಯದ ಕಾರ್ಯಗಳಲ್ಲಿ ಕೈಹಾಕುವುದನ್ನು ಅವರು ಮೆಚ್ಚುವುದಿಲ್ಲ. ಅದರೊಡನೆ ಹಿಟ್ಲರನ ಸಂಗಡ ಗೆಳೆತನ ಮಾಡಿಕೊಳ್ಳುವ ಎಂಟೊನೆಸ್ಕ್ಯೂವಿನ ಮನಿ ಹಿಟ್ಲರ್‌ಬುದ್ಧಿಯನ್ನಂತೂ ಅವರು ಸಹಿಸುವುದಿಲ್ಲ. ಇದಾಗಿ ಅಲ್ಲಿ ಆ ದಂಗೆಯು ಉಂಟಾಯಿತು.

ರುಮೇನಿಯಾ ಇಂದು ತೀವ್ರ ಅಸಂತೋಷಗೊಂಡಿದೆಯೆಂದಿಷ್ಟು ನಾವು ತಿಳಕೊಳ್ಳಬಹುದಾಗಿದೆ. ಇಂದು ಅದನ್ನು ದರ್ಪದಿಂದ ಒಮ್ಮೆ ಅಡಗಿಸಿದರೂ, ಮತ್ತೆ ಎಂದಾದರೂ ಕ್ರಾಂತಿಯು ಪುನರುತ್ಥಾನವಾಗುವುದು ಸಂಭವವೇ ಆಗಿರುತ್ತದೆ.

ಇಂದಿನ ಹಿಟ್ಲರನ ಪ್ರಾಬಲ್ಯದೆಸೆಯಲ್ಲಿ ರುಮೇನಿಯವು ಸ್ವತಂತ್ರವಾಗಿ ತಲೆಯೆತ್ತುವುದು ಹೇಗೆ ಸಾಧ್ಯವಾಗಬಹುದೋ ಎಂಬುದು ಸಂಶಯದ ವಿಷಯವಾಗಿದೆ.

HALFTONE & LINE
BLOCK MAKING
UNDERTAKEN
Sharada Press,
MANGALORE

'ನಾನು ಹಿಂದೆ ಸರಿಯುವುದಿಲ್ಲ'

• ಮಹಾತ್ಮರ ಹೇಳಿಕೆ

• ಆಚಾರ್ಯ ಕೃಪಲಾನಿಯವರ ಸೂಚನೆಗಳು

ಮಹಾತ್ಮರು ಹಿಟ್ಲರನಿಗೆ ಪತ್ರ ಕಳುಹಿಸಿದರು

ಸರಕಾರವು ಆ ಪತ್ರ ಕಳುಹಿಸಿಲ್ಲ ನಂತೆ!

ಲಖನೋ ಸುದ್ದಿಗಾರನ ಹೇಳಿಕೆ

ಆಚಾರ್ಯ ಕೃಪಲಾನಿಯವರು ಕೆಳಗಿನ ಪ್ರಕಟಣೆಯೊಂದನ್ನು ಕೊಟ್ಟಿದ್ದಾರೆ —

ಸದ್ಯದ ಸತ್ಯಾಗ್ರಹ ಹೋರಾಟವು ಬಹು ದಿನಗಳವರೆಗೆ ನಡೆಯುವುದೆಂದು ಮೊದಲು ತಿಳಿಯತಕ್ಕದ್ದು "ನಾನು ಹಿಂದೆ ಸರಿಯುವುದಿಲ್ಲ" ಎಂದು ಮಹಾತ್ಮ ಗಾಂಧಿಯವರು ಸಾರಿ ಹೇಳಿದ್ದಾರೆ ಆದುದರಿಂದ ಸತ್ಯಾಗ್ರಹಿಗಳನ್ನು ಆರಿಸುವಾಗ ಸಂಖ್ಯೆಯ ಕಡೆಗೆ ಗಮನ ಕೊಡದೆ ಅವರ ಗುಣಗಳನ್ನು ನೋಡಬೇಕು ನಮ್ಮ ಜನರ ಗುಣ ನಿಶ್ಚಯ ಮಾಡಿಕೊಳ್ಳಬೇಕು. ಗಾಂಧೀಜಿಯವರು ಹಾಕಿಕೊಟ್ಟ ಶರತಗಳನ್ನು ಪ್ರತಿಯೊಬ್ಬ ಸತ್ಯಾಗ್ರಹಿಯೂ ಪಾಲಿಸುವನೋ ಇಲ್ಲವೋ ಎಂಬುದನ್ನು ಲಕ್ಷ್ಯಪೂರ್ವಕವಾಗಿ ನೋಡುತ್ತಿರಬೇಕು. ಅವನು ಯಾವದೇ ಶರತವನ್ನು ಪೂರೈಸದಿದ್ದರೆ ಅವನ ಅರ್ಜಿ ನಿರಾಕರಿಸಬೇಕು.

ಸತ್ಯಾಗ್ರಹಿಯು ತನ್ನ ಆಹಾರದ ಬಗ್ಗೆ ತಾನೇ ನಿಶ್ಚಯಮಾಡಬೇಕು ಇಲ್ಲದಿದ್ದರೆ ಹಳ್ಳಿಯವರು ಕೊಟ್ಟದ್ದನ್ನು ಸ್ವೀಕರಿಸಬೇಕು

ಪ್ರಾಂತಿಕ ಸಂಘಗಳು

ರಾಷ್ಟ್ರಪತಿಗಳು ಬಂಧಿಸಲ್ಪಟ್ಟರೆ ಅವರ ಸ್ಥಳದಲ್ಲಿ ಯಾರನ್ನೂ ನೇಮಿಸಬಾರದೆಂದು ವರ್ಕಿಂಗ್ ಕಮಿಟಿಯವರು ವಿಚಾರ ಮಾಡಿದ್ದರು. ಏಕೆಂದರೆ ಹೋರಾಟದ ಸಂಪೂರ್ಣ ಅಧಿಕಾರವು ಮಹಾತ್ಮಾ ಗಾಂಧಿಯವರಿಗೆ ಒಪ್ಪಿಸಲ್ಪಟ್ಟದ್ದರಿಂದ ಯಾರ ಅವಶ್ಯಕತೆಯೂ ಇರುವುದಿಲ್ಲ ಪ್ರಾಂತಿಕ ಅಧ್ಯಕ್ಷರು ಬಂಧಿಸಲ್ಪಟ್ಟರೆ ಮತ್ತೊಬ್ಬರಿಗಾಗಿ ಚುನಾವಣೆ ನಡೆಸುವ ಅಗತ್ಯವಿಲ್ಲ. ಆದರೆ ಅಧಿಕಾರದಲ್ಲಿದ್ದವರು ಹೋರಾಟದಲ್ಲಿ ಗಾಂಧೀಜಿಯವರಿಗೆ ಸಹಾಯಕವಾಗುವಂಥ ಎಬ್ಬರ ಅಥವಾ ಅದಕ್ಕೂ ಹೆಚ್ಚು ಜನರ ಹೆಸರುಗಳನ್ನು ಶಿಫಾರಸು ಮಾಡಬಹುದು ಮಹಾತ್ಮಾ ಗಾಂಧಿಯವರ ಒಪ್ಪಿಗೆಯಿಲ್ಲದೆ ಯಾರೂ ಪ್ರಾಂತಿಕ ಸಂಘಗಳ ಅಧಿಕಾರ ಸೂತ್ರ ವಹಿಸತಕ್ಕದ್ದಲ್ಲ ಮೊದಲೇ ಅಪ್ಪಣೆ ದೊರೆತಿರದಿದ್ದರೆ ಅಧಿಕಾರ ವಹಿಸಿದ ಕೂಡಲೇ ಅಪ್ಪಣೆ ಪಡೆದುಕೊಳ್ಳಬೇಕು ಪ್ರಾಂತಿಕ ಕಾಂಗ್ರೆಸ ಕಮಿಟಿಗಳು ಸತ್ಯಾಗ್ರಹಕ್ಕಾಗಲಿ ಅದವಾ ವಿಧಾಯಕ ಕಾರ್ಯಕ್ರಮಕ್ಕಾಗಲಿ ತಮ್ಮ ಕಾರ್ಯವನ್ನು ಎಂದಿನಂತೆ ಸಾಗಿಸಬೇಕು. ಆದರೆ ಅವು ಗಾಂಧೀಜಿಯವರ ಸಲಹೆ ಸೂಚನೆಗಳಂತೆ ವರ್ತಿಸಬೇಕು. ಉಳಿದ ಯಾವದೇ ಮಾರ್ಗದಿಂದ ಅವು ಕಾರ್ಯ ಮಾಡತಕ್ಕದ್ದಲ್ಲ ಜೈಲಿಗೆ ಹೋಗುವುದರಿಂದ ಖಾಲಿಯಾದ ಸ್ಥಾನಗಳನ್ನು ತುಂಬತಕ್ಕದ್ದಲ್ಲ ಕಾಂಗ್ರೆಸ ಅಧಿಕಾರ ಸ್ಥಾನದಲ್ಲಿದ್ದವರು ತಮ್ಮ ಸ್ಥಳ ಖಾಲಿ ಮಾಡಬೇಕು. ಅವುಗಳನ್ನು ತುಂಬಬಾರದು

ಅಧೀನ ಕಾಂಗ್ರೆಸ ಕಮಿಟಿಗಳು

ಅಧೀನ ಕಾಂಗ್ರೆಸ ಕಮಿಟಿಗಳ ವಿಷಯವಾಗಿ ಹೇಳುವುದಾದರೆ, ಅವುಗಳ ಕಾರ್ಯವು ಸುಸೂತ್ರವಾಗಿ ಸಾಗುವಂತಿದ್ದರೆ ಪ್ರಾಂತಾಧ್ಯಕ್ಷರು ಅವುಗಳನ್ನು ರದ್ದುಗೊಳಿಸಬಹುದು. ಇಂಥ ಘೋರ ನ್ಯಾಯನ್ನು ಕೈಕೊಂಡರೆ ಅದನ್ನು ಇದೀ ಪ್ರಾಂತಕ್ಕೆ ಅನ್ವಯಿಸಬೇಕು

ಮಹಾತ್ಮಾ ಗಾಂಧಿಯವರು ಹೊರಗೆ ಇರುವ ವರೆಗೆ ಎಲ್ಲ ಸಂಶಯಗಳನ್ನೂ ಅವರಿಗೆ ಕೇಳಿ ನಿವಾರಿಸಿಕೊಳ್ಳಬೇಕು. ಎ ಐ ಸಿ ಸಿ ಕಚೇರಿಯೂ ಸೇವಾಗ್ರಾಮದಲ್ಲಿರುವುದರಿಂದ ಅವರ ಅಂತರ್ಯ ಕೇಳಿಕೊಳ್ಳಬಹುದ

ಒಂದು ವೇಳೆ ಮಹಾತ್ಮಾ ಗಾಂಧಿಯವರು ಬಂಧಿಸಲ್ಪಟ್ಟರೆ ಅವರು ತಮ್ಮ ತರುವಾಯ ಯಾರನ್ನೂ ನೇಮಿಸುವುದಿಲ್ಲ ಆಗ ಪ್ರತಿಯೊಬ್ಬ ಕಾಂಗ್ರೆಸ ಮನುಷ್ಯನು ತನಗೆ ಸರಿದೋರಿದಂತೆ ವರ್ತಿಸಬಹುದು

ನಮ್ಮ ಪತ್ರಗಳೂ ಪ್ರಕಟಣೆಗಳೂ ಮುಟ್ಟುವುದಿಲ್ಲವೆಂದು ಅನೇಕ ಪ್ರಾಂತಗಳಿಂದ ಹೇಳಿಕೆಗಳು ಬಂದಿರುತ್ತವೆ

ಮಹಾತ್ಮರು ಹಿಟ್ಲರನಿಗೆ ಪತ್ರ ಬರೆದರು

ಗಾಂಧಿಯವರು ಹಿಟ್ಲರನಿಗೆ ಒಂದು ಪತ್ರವನ್ನು ಬರೆದು, ಅದನ್ನು ಜರ್ಮನಿಗೆ ಕಳಿಸಿ ಕೊಡುವಂತೆ ಹಿಂದುಸ್ಥಾನ ಸರಕಾರದವರನ್ನು ಕೇಳಿಕೊಂಡಿದ್ದರೆಂದು ಸ್ಟೇಟ್ಸಮನ್ ಪತ್ರಿಕೆಯ ಲಖನೌ ಸುದ್ದಿಗಾರನು ಬರೆಯುತ್ತಾನೆ

ಆ ಪತ್ರದಲ್ಲಿ ಮಹಾತ್ಮರು ಅಹಿಂಸಾ ತತ್ವದ ಮತ್ತು ಕಾಂಗ್ರೆಸು ಧೋರಣದ ಕಾರಣಗಳನ್ನು ವಿವರಿಸಬೇಕೆಂದೂ ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯನ್ನು ವಿರೋಧಿಸಿರಬೇಕೆಂದೂ ಕಾಂಗ್ರೆಸು ವರ್ಗದಲ್ಲಿ ಊಹಿಸಲಾಗಿದೆ. ಆದರೆ ಈ ಪತ್ರವನ್ನು ಹಿಟ್ಲರನಿಗೆ ಕಳಿಸಿದರೆ, ಅದರಿಂದ ಭಾರತದ ಬಗ್ಗೆ ಜರ್ಮನಿಗೆ ತಪ್ಪು ಕಲ್ಪನೆಯಾಗಬಹುದೆಂದು ಸರಕಾರದವರು ಆ ಪತ್ರವನ್ನು ಕಳಿಸಿಲ್ಲವಂತೆ ಮೇಲಾಗಿ ಯುದ್ಧ ಕಾಲದಲ್ಲಿ ಪತ್ರಗಳನ್ನು ಜರ್ಮನಿಗೆ ಕಳುಹಿಸುವುದಕ್ಕೆ ಶಕ್ಯವೂ ಇಲ್ಲವಂತೆ

ಹಿಂದುಸ್ಥಾನಕ್ಕೆ ಈ ವರ್ಷ ಸಾಮಂತ ಸ್ವರಾಜ್ಯ

ಜ್ಯೋತಿಷ್ಯರ ಭವಿಷ್ಯ

'ಈ ವರ್ಷದಲ್ಲಿ ಹಿಂದುಸ್ಥಾನಕ್ಕೆ ಸಾಮಂತ ಸ್ವರಾಜ್ಯವು ದಯಪಾಲಿಸಲ್ಪಡುವುದು ಮಹಾತ್ಮಾ ಗಾಂಧಿಯವರು ಶೀಘ್ರದಲ್ಲಿಯೇ ಉಪವಾಸ ಕೈಕೊಳ್ಳುವ ಸಂಭವ ತೋರಿ ಬರುತ್ತಿದ್ದು ಅವರ ವ್ಯಕ್ತಿ ವಿಷಯಕ್ಕೆ ಚಿಂತೆಯ ಪ್ರಸಂಗವಾಗುವದು ಕಾಂಗ್ರೆಸ ಮುಖಂಡರು ಹಾಗು ಸರಕಾರದವರಲ್ಲಿ ಈ ವರ್ಷದ ಎಪ್ರಿಲ್, ಸಪ್ಟೆಂಬರ್ ಅಥವಾ ಡಿಸೆಂಬರದಲ್ಲಿ ಒಪ್ಪಂದವಾಗುವುದು ತುರ್ಕಿಸ್ಥಾನ ಬಲುಚಿಸ್ಥಾನ ಮತ್ತು ಉತ್ತರ ಹಿಂದುಸ್ಥಾನದಲ್ಲಿ ಭೂಕಂಪದ ಪಕ್ಕೆ ಸಂಭವಿಸುವುದು' ಹೀಗೆಂದು ಹೊಸರೀತಿ ಶಾಸ್ತ್ರಗಳ ಭವಿಷ್ಯವಿದು

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C No 807/1940

Between —

ಕೆ ಗೋಪಾಲಕೃಷ್ಣ ರಾವ್ ... ವಾದಿ

ಮತ್ತು

ರಾಮ ಪೈ ... ಪ್ರತಿವಾದಿ

ಮಂಗಳೂರು ತಾಲ್ಲೂಕು ಪಡವು ಗ್ರಾಮದಲ್ಲಿರುವ ಕೋಡಿಕಲ್ ಕೊರಗ ಪೈ ಮಗ ರಾಮ ಪೈ ಯವರಿಗೆ ಈ ಮೂಲಕ ತಿಳಿಸುವುದೇನಂದ್ರೆ —

ಪ್ರತಿವಾದಿಯಾದ ನೀನು ವಾದಿಗೆ ರೂಪಾಯಿ 100ಕ್ಕೆ ಬರೆದುಕೊಟ್ಟ ಪ್ರಾಮಿಸರಿ ನೋಟಿನ ಬಾಬ್ತು ಬರಬೇಕಾದ ಅಸಲು ಬಡ್ಡಿ ... ... ದಾವೆಯು ಇದ್ಯೆರುವದಾಗಿ ... ತಾರೀಕು 10—2—1941ಕ್ಕೆ ಹಿಯರಿಂಗ ಕೋರ್ಟಿನಲ್ಲಿ ಇಟ್ಟಿರುತ್ತದೆ

ಸದ್ರಿ ದಿವಸ ಪೂರ್ವಾಹ್ನ 11 ಗಂಟೆಗೆ ... ... ಎಕ್ಸ್ಪಾರ್ಟಿ ತೀರ್ಮಾನವಾಗುತ್ತದೆ

By order of the Court

ಮಂಗಳೂರು 28—1—'41 K Gopalakrishna Rao Plaintiff

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ರೋಗವನ್ನೂ ಬಲವನ್ನೂ ಕೊಡತ್ತದೆ

ESTD 1906

CANARA BANK LIMITED

ANNOUCEMENT.

On and after February, 1941 Fixed Deposits will be accepted at the following rates —

3, 4 & 5 months	2%
6, 7 & 8 months	2¼%
9, 10 & 11 months	2½%
12 months	3%
24 months	3½

ಅನ್ಯರ ಆಕ್ರಮಣಗಳಿಂದ ⁘ ⁘ ಕಂಗೆಡುವ 'ಸಿಸಿಲಿ'

ಇಂಗ್ಲಿಷರ ಆಡಳಿತದಲ್ಲಿತ್ತು!
ಇಟಲಿಯು ಅಧೀನವಾಯಿತು!
ಜರ್ಮನಿಯು ಆಕ್ರಮಿಸಿಕೊಂಡಿತು!

ಸ್ವತಂತ್ರವಾಗಲು ಸಮಯ ಕಾಯುತ್ತಾ ಇದೆ

ಪೂರ್ವದಕ್ಷಿಣ ಎಲ್ಲಾ ಯುದ್ಧ ರಂಗಗಳಲ್ಲಿ ಇಟಲಿಯು ಸೋಲುತ್ತಾ ಇದೆ ಎಂದು ಕೇಳುವ ಹಾಗೆಯೇ ನಾಝಿ ಸೈನಿಕರು ಇಟಾಲಿಯನ್ ಸಾಮ್ರಾಜ್ಯದ ಒಂದಂಗವಾದ ಭೂಮಧ್ಯ ಸಾಗರದೊಳಗಿನ ಸಿಸಿಲಿ ದ್ವೀಪವನ್ನು ಮುತ್ತಿ ಅದರ ಒಳನುಗ್ಗಿದ್ದಾರೆಂಬ ವರ್ತಮಾನವೂ ಬಂದಿದೆ. ಒಂದು ಶತಮಾನದ ಮೊದಲು ಕೆಲವು ವರ್ಷಗಳ ತನಕ ಇದೇ ಸಿಸಿಲಿಯು ಬ್ರಿಟಿಷರ ಅಧೀನದಲ್ಲಿಯೂ ಇದ್ದಿತು.

ನೆಪೋಲಿಯನನ ಕಾಲದಲ್ಲಿ

ಹತ್ತೊಂಭತ್ತನೆಯ ಶತಮಾನದಲ್ಲಿ ನೆಪೋಲಿಯನನು ಇಡೀ ಯೂರೋಪನ್ನು ಮೆಟ್ಟಿ ಹಾಕುವದರಲ್ಲಿದ್ದಾಗ, ಅವನನ್ನು ವಿರೋಧಿಸಿ ತಡೆಯುವದಕ್ಕೋಸ್ಕರ ಬ್ರಿಟಿಷರು ಸಿಸಿಲಿಗೆ ತಮ್ಮ ಸೇನೆಯನ್ನು ಕಳುಹಿಸಿಕೊಟ್ಟಿದ್ದರು. ಈ ಸೇನೆಯ ಅದಮ್ಯ ಸಾಹಸದ ಪರಿಣಾಮವಾಗಿ ಸಿಸಿಲಿಯ ಸ್ವಾತಂತ್ರ್ಯಕ್ಕೆ ಲೋಪ ಬರಲಿಲ್ಲ. ಇಟಾಲಿಯನ್ ಸಾಮ್ರಾಜ್ಯವು ನೆಪೋಲಿಯನನಿಗೆ ತಲೆತಗ್ಗಿಸಿತಾದರೂ ಸಿಸಿಲಿಯು ಅವನ ಅಧೀನತೆಯನ್ನು ಒಪ್ಪಿಕೊಳ್ಳಲಿಲ್ಲ.

ಇಟಲಿಯು ನೆಪೋಲಿಯನನ ಅಧೀನವಾದ ಮೇಲೆ ಅವನು ತನ್ನ ತಮ್ಮನಾದ ಜೋಸೆಫ ಬೊನಪಾರ್ಟನನ್ನು ಇಟಲಿಯ ರಾಜನನ್ನಾಗಿ ಸಾರಿದನು. ನಿಜವಾದ ಅರಸು ಫರ್ಡಿನಾಂಡ್ ಮತ್ತು ಆತನ ರಾಣಿ ಮೇರಿಯಾ ಸಿಸಿಲಿಗೆ ಪಲಾಯನ ಮಾಡಿದರು. ಈ ರಾಣಿ ಬಹಳ ಸ್ವಾರ್ಥಪರಳೂ ಕ್ರೂರಳೂ ಆಗಿದ್ದಳು. ಇವಳ ದುರ್ಬೋಧನೆಯಿಂದ ಫರ್ಡಿನಾಂಡನು ತಾನೇ ಸಿಸಿಲಿಯ ರಾಜನೆಂದು ಹೇಳಿ ಸಿಂಹಾಸನವನ್ನು ಏರಿದನು. ಸಿಸಿಲಿಯಲ್ಲಿ ಶಾಸನ ಮಾಡುವ ನಿಜವಾದ ವ್ಯಕ್ತಿ ಈ ರಾಣಿಯೇ ಆಗಿದ್ದಳು. ಈ ದುರಾಡಳಿತದಿಂದ ಜನರು ಬಹಳ ಕ್ಷುಬ್ಧರಾದರು. ೧೮೧೧ರಲ್ಲಿ ಲೋರ್ಡ ವಿಲಿಯಂ ಬೆಂಟಿಂಕನು ಬ್ರಿಟಿಷ್ ಸರಕಾರದ ರಾಜಪ್ರತಿನಿಧಿಯಾಗಿ ಸಿಸಿಲಿಯ ರಾಜದರ್ಬಾರಿಗೆ ಬಂದಿದ್ದನು. ಅವನು ರಾಜ್ಯದ ದುರ್ಗತಿಯನ್ನು ಕಂಡು ಫರ್ಡಿನಾಂಡನು ರಾಜ್ಯಾಧಿಕಾರವನ್ನು ತನ್ನ ಎಂಟು ವರ್ಷದ ಚಿಕ್ಕ ಮಗನಿಗೆ ಬಿಟ್ಟುಕೊಡಬೇಕೆಂದೂ ಆತನು ಪ್ರಾಯಕ್ಕೆ ಬರುವ ತನಕ ತನಗೇ ಶಾಸನಾಧಿಕಾರವಿರಬೇಕೆಂದೂ, ಹೀಗೆ ಮಾಡದಿದ್ದರೆ ರಾಜ್ಯ ವಿಪ್ಲವವಾಗಬಹುದೆಂದೂ ಆತನಿಗೆ ಎಚ್ಚರಿಕೆ ಕೊಟ್ಟನು. ಒಂದು ವರ್ಷದ ಮೇಲೆ ಫರ್ಡಿನಾಂಡನು ಅದಕ್ಕೆ ಒಪ್ಪಿದನು.

ಮೇರಿಯಳ ಮರಣ ಮಂತ್ರ

ರಾಜ್ಯಾಧಿಕಾರವು ಬೆಂಟಿಂಕನ ಕೈಗೆ ಬಂದ ಮೇಲೆ ಮೇರಿಯಳು ಅಸಹಾಯಳಾದಳು, ಆದರೂ ಅವಳು ಬೆಂಟಿಂಕನ ಪ್ರಾಣದ ಶತ್ರುವಾದಳು. ಅವಳು ಅವನಿಗೆ ವಿರೋಧವಾಗಿ ಅನೇಕ ಸಂಚುಗಳನ್ನು ನಡೆಸಿದಳು. ಬೆಂಟಿಂಕನು ನಿರುಪಾಯನಾಗಿ ಅವಳಿಗೆ ದ್ವೀಪಬಿಟ್ಟು ಹೊರಹೋಗುವಂತೆ ಆಜ್ಞಾಪಿಸಬೇಕಾಯಿತು.

ಬೆಂಟಿಂಕನ ಸುರಾಜ್ಯದಿಂದ ಸಿಸಿಲಿಯ ಜನರು ಮೋಹಿತರಾಗಿದ್ದರು. ಅವನು ಅವರಿಗೆ ಬ್ರಿಟಿಷ ಮಾದರಿಯ ಸ್ವರಾಜ್ಯ ಘಟನೆಯನ್ನು ಕೊಟ್ಟಿದ್ದನು. ೧೮೧೪ರಲ್ಲಿ ಅವನು ತನ್ನ ಹುದ್ದೆಯನ್ನು ಬಿಟ್ಟು ಹೋಗುತ್ತಿದ್ದಾಗ ಜನರ ಸ್ವಾತಂತ್ರ್ಯದ ಸ್ವರ್ಗಸುಖವನ್ನು ಅನುಭವಿಸುತ್ತಿದ್ದರು. ಯೂರೋಪಿನಲ್ಲಿ ನೆಪೋಲಿಯನನ ಪೂರ್ಣ ಪರಾಭವವಾದ ಮೇಲೆ ಜೋಸಫ ಬೊನಪಾರ್ಟನು ಗಲ್ಲಕ್ಕೇರಿಸಲ್ಪಟ್ಟನು. ಮತ್ತೆ ಇಟಲಿಯು ಫರ್ಡಿನಾಂಡನನ್ನೇ ತನ್ನ ರಾಜನನ್ನಾಗಿ ವರಿಸಿತು. ಸ್ವಲ್ಪ ಸಮಯದ ಮೇಲೆ ಬ್ರಿಟಿಷರು ಸಿಸಿಲಿಯನ್ನು ಬಿಟ್ಟುಹೋದರು. ಫರ್ಡಿನಾಂಡನ ದುರಾಡಳಿತದಿಂದ ಸಿಸಿಲಿಯು ಪುನಃ ಅಂತಕಲಹಗಳ ರಂಗಭೂಮಿಯಾಯಿತು. ಅವನ ಅನಂತರ ಅವನ ಉತ್ತರಾಧಿಕಾರಿಯು ಪಟ್ಟಕ್ಕೆ ಬಂದ ಕೂಡಲೇ ಸಿಸಿಲಿಯಲ್ಲಿ ಶಾಂತಿಯೂ ನೆಮ್ಮದಿಯೂ ಉಂಟಾಯಿತು. ಈ ಉತ್ತರಾಧಿಕಾರಿಯು ಸಿಸಿಲಿಯವರಿಗೆ ಬ್ರಿಟಿಷ್ ಮಾದರಿಯ ರಾಜ್ಯಘಟನೆಯನ್ನೇ ಕೊಟ್ಟು ಅವರನ್ನು ತೃಪ್ತಿಗೊಳಿಸಿದ್ದನು.

ಮುಸೋಲಿನಿಯ ಕರಾಳದವಡೆ

ಮುಸಲೋನಿಯು ಅಧಿಕಾರಕ್ಕೆ ಬಂದು ಫೆಸಿಜಮ್ಮಿನ ಕರಾಳದವಡೆಯಲ್ಲಿ ನಜ್ಜುಗುಜ್ಜಾಗುವ ಈ ಕೆಲವು ವರ್ಷಗಳ ತನಕವೂ ಸಿಸಿಲಿಯು ಬ್ರಿಟಿಷರ ವರದಾನವಾದ ಸ್ವರಾಜ್ಯದ ಸುಖವನ್ನು ಅನುಭವಿಸುತಿತ್ತು. ಈಗ ಸಿಸಿಲಿ ಇಟಲಿಯನ ಸಾಮ್ರಾಜ್ಯದ ಒಂದು ಅಂಗವಾಗಿದೆ. ಸಂದುಕಟ್ಟಿನ ಸನ್ನಿವೇಶದಲ್ಲಿರುವುದರಿಂದಲೇ ಮುಸಲೋನಿ ಅದಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದಾನೆ. ಆದುದರಿಂದ ಇಟಲಿಯ ಪತನವಾಗುವ ಕಾಲಕ್ಕೆ ತನ್ನ ಸ್ವಾತಂತ್ರ್ಯವನ್ನು ಸಾರುವ ಸಾಮ್ರಾಜ್ಯದ ಅಂಗತ್ವದೇಶದಲ್ಲಿ ಸಿಸಿಲಿಯೇ ಮೊದಲನೆಯದಾಗುವುದು ಎಂದು ರಾಜಕಾರಣಿಗಳು ಹೇಳುವರು. ಪುನಃ ಸ್ವತಂತ್ರವಾಗಲಿಕ್ಕೆ ಸಿಸಿಲಿಯು ಎಷ್ಟೋ ಸಮಯದಿಂದ ಅನುಕೂಲ ಸಂದರ್ಭವನ್ನು ಕಾಯುತ್ತಾ ಇದೆ.

ವಿಪರೀತವಾದ ಸೆಕೆ, ಮತ್ತು ಸರಿಯಾದ ಪೋಷಣೆಇಲ್ಲದಿರುವಿಕೆ, ಇವುಗಳೇ ನರಗಳ ದೌರ್ಬಲ್ಯಕ್ಕೂ ಮತ್ತು ಸಾಮಾನ್ಯ ನಿಶ್ಶಕ್ತಿಗೂ ಕಾರಣ. ಜೀವಾಮೃತಂ ಸೇವಿಸಿ ನಿಮ್ಮ ದೇಹವನ್ನು ಬೆಳೆಸಿರಿ. ಜೀವಕ್ಕೊಂದು ಸಂಜೀವಿನಿ.

ಬಲಿದ ನರಗಳಿಗೆ ಜೀವಾಮೃತಂ

ಜೀವಾಮೃತಂ

ನರಗಳಿಗೆ ಅತ್ಯುತ್ತಮ ಟಾನಿಕ್.

K.A 2

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

THE

BANK OF MANGALORE LTD.,

H. O. MANGALORE.

ESTD. 1931.

Branches:-

Moodabidri & Padubidri.

NOTICE

On and from 1st January 1941 the following are the revised rates of interest on deposits:-

FIXED DEPOSITS:

For 2 years or over	...	5½%
„ 1 „	...	4½%
„ 6 months	...	3½%
„ 3 months	...	3

Interest Payable Quarterly.

SAVINGS BANK DEPOSITS:

On daily balances on balances over Rs. 5–0–0 in multiples of Rs. 5–0–0 @ 3%.

All kinds of banking business transacted

ವಾರದ ಕತೆ

ಸತಿಗೆ ಪತಿ ಪರದೈವ....

ಕತೆಗಾರರು: ಕೆ. ಶ್ರೀನಿವಾಸ ಶೆಟ್ಟಿ

'ಏನಂದಿ? ಅವಳು ನಿನ್ನ 'ಹೆಂಡತಿ'ಯಾದರೆ, ನಾನು ಅವಳ ಅತ್ತೆ, ತಿಳಿದಿದೆ?' ಎಂದು ಕಾಳಮ್ಮ ಮಗನನ್ನು ಗದರಿದಳು.

'ಅಮ್ಮಾ! ಹಾಗೇಕೆ ಹೇಳುವಿ? ಅವಳು ಏನು ಕೆಟ್ಟ? ನಾನು ಕೇಳಬಿದ್ದರೆ ಮದುವೆ ಕೇಳಬೇಕು' ಅವಳನ್ನ ಕೈಹಿಡಿದ ಕರ್ತವ್ಯದವನು ನಾನಲ್ಲವೆ, ಅಮ್ಮ.'

ಕಾಳಮ್ಮನ ಕಣ್ಣುಗಳಿಂದ ನೀರುಗಳು ಚಿಮ್ಮಿಕ್ಕಿದುವು. ಅವಳು ಹೇಳಿದಳು—'ಏನೂ, ಗೊತ್ತಾಯಿತು! ಬಂದ ಎರಡು ದಿನ ಕೂಡ ಆಗಿಲ್ಲ, ಬಿನ್ನಾಗಿ ಮದ್ದು ಅರೆದಿಟ್ಟಿದ್ದಾಳೆ. ಇಲ್ಲವಾದರೆ ನನ್ನ ಹೊಟ್ಟೆ ರಕ್ತ ಹೀಗೆಂದೂ ಅವಳ ಸರಗಾಗಿ ಮಾತಾಡುತ್ತಿದ್ದಿಲ್ಲ.'

ರಾಮರಾಯ ತಾಯಿ ಮೋರೆಯನ್ನು ನೋಡಿದ. ಅವನಿಗೆ ಇನ್ನು ಅಲ್ಲಿರಲಾಗಲ್ಲ. ಒಂದು ನಿಟ್ಟುಸಿರು ಬಿಟ್ಟು ಹೊರಟು ಹೋದ.

ಅಮಾವಾಸ್ಯೆಯ ರಾತ್ರಿ ಆಗಿದ್ದಿತು. ಹೊರಗೆ ಎಲ್ಲೆಲ್ಲಿಯೂ ಗಾಢಾಂಧಕಾರ ತುಂಬಿದ್ದಿತು. ರಾಮರಾಯನ ಶಯನಾಗಾರದಲ್ಲಿ ಮಾತ್ರ ಒಂದು ಜ್ಯೋತಿ ಉಜ್ವಲವಾಗಿ ಉರಿಯುತ್ತಿತ್ತು. ಸುಸಜ್ಜಿತವಾದ ಆ ಕೋಣೆಯಲ್ಲಿ ಗ್ರಾಮಫೋನು ಮಧುರ ಸಂಗೀತದ ಅಲೆಯನ್ನು ... ತ್ತಿತ್ತು—'ಪತಿ ಸತಿಗೆ ಪರದೈವ ಲೋಕದೊಳು.'

'ಶಾಂತಿಯು ಕೃತ್ರಿಮ ಕ್ರೋಧದಿಂದ ರೆಕಾರ್ಡನ್ನು ತೆಗೆದು ನಿಲ್ಲಿಸಿ ಬಿಡುತ್ತ ಎಂಥ ಹೇಸಿಗೆಯ ರೆಕಾರ್ಡು! ಎಷ್ಟು ಅಸಂಬದ್ಧ ಪ್ರಲಾಪ!' ಎಂದಳು ಎ... ಕೋಪವಾಗಿ ... ರೆಕಾರ್ಡನ್ನು ನೋಡಿದಳು.

'ಶಾಂತಿ! ಪತಿ ಸತಿಗೆ ಪರದೈವ ಲೋಕದೊಳು. ಇದೆಷ್ಟು ಮಧುರವಾಗಿದೆ! ಆದರೆ ರೆಕಾರ್ಡನ್ನು ಒಡೆದು ಹಾಕಿದೆ. ಏನು ಮೌಢ್ಯದಲ್ಲೇ ...'

'ಏನು ಹುಚ್ಚು ಮಾತ! ... ಪತಿ ಸತಿಗೆ ಪರದೈವ ... ಹೀಗೇಕೆ ಆಗವಮುಂ, ಸ್ವಾಮಿ?'

'ಯಾರು ಬಲ್ಲರು? ಒದ ಹಿರಿಯರ ಮಾತು, ಭವಿಷ್ಯತ್ತಿನಲ್ಲಿ ನಿನ್ನ ಅನುಭವಕ್ಕೆ ಬರಲೂ ಬಹುದು!'

ಭವಿಷ್ಯದ ಮಾತು ಕೇಳಿ ಶಾಂತಿಯ ಹೃದಯವು ಅಶಾಂತವಾಯಿತು. ಅವಳು ಕುಬ್ಧಳು, ನೇತ್ರಗಳು ದುಃಖಾಶ್ರುಗಳಿಂದ ತುಂಬಿದಾಗುವು. 'ಸ್ವಾಮಿ! ತಾವು ಭವಿಷ್ಯದ ಮಾತ ಆಡಬಾರದು. ನನ್ನ ಕೋರಿಕಾಹ ಇಂದಿನಂತೆ ಪ್ರತಿದಿನ ನಾವು ಸುಖಿಗಳಾಗಿದ್ದರೆ ಸಾಕು!' ಎಂದಳು ತಲೆಯನ್ನು ರಾಮರಾಯನ ಎದೆ ಪ್ರದೇಶದಲ್ಲಿಟ್ಟು ಬಿಸುಸುಯ್ಯುವಳು.

ಶಾಂತಿಯು ಹೃದಯವು ಅಷ್ಟು ಕೋಮಲವಾಗಿದ್ದುದು ರಾಮರಾಯನಿಗೆ ಗೊತ್ತಿರಲಿಲ್ಲ. ಅವನು ಪ್ರೇಮದಿಂದ ಅವಳ ಬೆನ್ನಿನ ಮೇಲೆ ಕೈ ಆಡಿಸುತ್ತ—'ಇಲ್ಲ, ನನ್ನ ರತ್ನ! ಇನ್ನು ನಾನು ಅಂದ ಮಾತು ಎತ್ತುವುದಿಲ್ಲ. ಕ್ಷಮಿಸು, ಕೋಪವೆ ... ಎಂದ ಸಿತವೇ?'

'ಹೌದು, ಮನ್ನಿ, ... ಜಗ್ಗ'

ಮಿಕ್ಕ ರಾತ್ರಿ ತರುಣ ಸತಿಪತಿಗಳ ಸರಸದಲ್ಲಿ ಕಳೆಯಿತು. ಒಳಗಾಯಿತು. ಅದರಿಂದ ಅವರ ಸುಖ ದಿನಗಳೂ ಬೆಳಗಿದುವು.

★

ಒಂದು ದಿನ ಕಾಳಮ್ಮ—'ಶಾಂತಿ!' ಎಂದು ಸೊಸೆಯನ್ನು ಕರೆದಳು.

'ಅಮ್ಮಾ!'

'ಮಗೂ, ನಾನಿನ್ನು ಮುದುಕಿಯಾದೆ. ಈ ಮನೆ ಭಾರವನ್ನು ಇನ್ನು ತಾಳಲಾರೆ. ಶಾಂತಿ, ನೀವು ಸುಸಂಸಾರ ಮಾಡಿದುದ್ದನ್ನು ನೋಡಿ ಸಾಯಬೇಕೆಂಬುದು ನನ್ನ ಇಷ್ಟ' ಎಂದು ಹೇಳಿ—ಕಾಳಮ್ಮ ತಿಜೋರಿಯ ಬೀಗದ ಕೈಗಳನ್ನು ಶಾಂತಿಯ ಕೈಯಲ್ಲಿಟ್ಟಳು.

ಅಮ್ಮಾ! ಇದು ನನ್ನಿಂದ ಹೇಗಾದೀತು? ಇನ್ನೂ ಕೆಲವು ದಿನ ನೀವೇ ನೋಡಿಕೊಳ್ಳಿ. ನನ್ನಿಂದಾಗದು ಆ ಭಾರದ ಕೆಲಸ.'

'ಇಲ್ಲ ಶಾಂತಿ, ಹಾಗೆ ಹೇಳಬೇಡ. ನಾನು ಈಗ ಸಮರ್ಥಳಾಗಿದ್ದಾನೆ ನೀವೇ ಮನೆಭಾರ ಹೊತ್ತುಕೊಳ್ಳಲು ಸಮರ್ಥರು.'

ಕಾಳಮ್ಮ ಬೀಗದ ಕೈಯನ್ನು ಶಾಂತಿಯ ಸೆರಗಿಗೆ ಕಟ್ಟಿದಳು.

ದಿನಗಳ ಮೇಲೆ ದಿನಗಳು ಕಳೆದುವು. ಶಾಂತಿಯ ಹೃದಯವು ಪೂರ್ಣ ಶಾಂತವಾಗಿ ಹೊರಗಿನ ಪ್ರಪಂಚವನ್ನು ಮರೆಯುತ್ತ ಬಂದಿತ್ತು. ದಿನಗಳು ಹೇಗೆ ಕಳೆಯುತ್ತಿದ್ದುವೆಂಬುದು ಯಾರಿಗೂ ತಿಳಿಯುತ್ತಿದ್ದಿಲ್ಲ. ಅವು ಅಷ್ಟು ಶೀಘ್ರವಾಗಿ ಕಳೆಯುತ್ತಿದ್ದುವು. ಮತ್ತೆ ಒಂದು ಅಮಾವಾಸ್ಯೆಯ ರಾತ್ರಿ ಬಂದಿತು.

★

ಶಾಂತಿ ದೈನಿಕ 'ಭಾರತ'ವನ್ನು ಓದುತಿದ್ದಳು. ಅದರಲ್ಲಿ ದಪ್ಪಕ್ಷರಗಳಲ್ಲಿ ಪ್ರಕಟವಾದ ಒಂದು ವಾರ್ತೆಯನ್ನು ಓದಿ ಅವಳಿಗೆ ಸಿಡಿಲು ಬಡಿದಂತಾಯಿತು. ಇಂಪೀರಿಯಲ್ ಬ್ಯಾಂಕಿನ ಕ್ಲಾರ್ಕ ರಾಮರಾವ್ ಎಂಬವನು ರೈಲಿನಡಿಯಲ್ಲಿ ಬಿದ್ದು ಆತ್ಮಘಾತ ಮಾಡಿಕೊಂಡಿರುವನು. ಬ್ಯಾಂಕಿನ ಒಂದು ಸಾವಿರ ರೂಪಾಯಿಗಳನ್ನು ತಿಂದು ಹಾಕಿರುವನೆಂದು ಸುದ್ದಿ ಇದೆ. ಪೋಲೀಸ್ ತನಿಖೆ ನಡೆಯುತ್ತಾ ಇದೆ.'

ಇದಾಗುವ ಎರಡು ದಿನಗಳ ಮೊದಲು ರಾಮರಾಯ ಶಾಂತಿಗೆ ಪಚ್ಚದ ಎರಡು ಬೆಂಡೋಲೆಗಳನ್ನು ತಂದುಕೊಟ್ಟಿದ್ದ. ಅವುಗಳಿಗಾಗಿ ಅವಳು ಬಹಳ ಹಟ ಹಿಡಿದಿದ್ದಳು. ಈ ಶೋಕವಾರ್ತೆಯನ್ನು ಕೇಳಿ ಶಾಂತಿಯ ಕೋಮಲ ಹೃದಯವು ಛಿನ್ನವಿಚ್ಛಿನ್ನವಾಯಿತು!

ವಾರ್ತೆಯನ್ನು ಕೇಳಿದಾಕ್ಷಣವೇ ಕಾಳಮ್ಮನ ಕೂಗಾಟವಾರಂಭವಾಗಿತ್ತು—'ಅಯ್ಯೋ, ಈ ರಾಕ್ಷಸಿ ನನ್ನ ಮುದ್ದ ಮಗನನ್ನು ಕೊಂದು ಹಾಕಿ ನನ್ನ ಮನ ಹಾಳುಮಾಡಿದಳೆಂದು. ಬಂದವರು ಕಾಳಮ್ಮನನ್ನು ಸಮಾಧಾನಗೊಳಿಸುತ್ತಿದ್ದರೇ ಹೊರತು, ಯಾರ ಲಕ್ಷ್ಯವು ಶಾಂತಿಯ ಕಡೆಗೆ ಹೋಗಲಿಲ್ಲ.

ಮೂರು ನಾಲ್ಕು ದಿನಗಳಿಂದ ಶಾಂತಿಯ ಹೊಟ್ಟೆಯೊಳಗೆ ಅನ್ನವೂ ಒಂದು ಕಾಳು ಕೂಡ ಸೇರಿಲ್ಲ. 'ನೀರು ಬೇಕೆ, ಶಾಂತಿ?' ಎಂದು ಒಬ್ಬರಾದರೂ ಅವಳನ್ನು ವಾತ್ಸಲ್ಯದಿಂದ ಕೇಳಿದ್ದಿಲ್ಲ.

★

ಇಂದು ಆ ಅಮಾವಾಸ್ಯೆ ಪುನಃ ಬಂದಿದೆ. ಆದರೆ ಅಂದಿನ ಅಮಾವಾಸ್ಯೆಗೂ ಇಂದಿನ ಅಮಾವಾಸ್ಯೆಗೂ ಎಂಥ ಅಂತರ!

ಅಂದಿನ ಆ ಅಮಾವಾಸ್ಯೆಯ ರಾತ್ರಿ—ಅದು ನವವಿವಾಹಿತ ಸತಿಪತಿಯರನ್ನು ಅತ್ಯಂತ ಸುಖಕರ, ಅತ್ಯಂತ ಮಧುರ ಸರಸ ಕೇಳಿಗೆ ಪ್ರೇರೇಪಿಸುವ ಮಿಲನ ರಾತ್ರಿ ಆಗಿತ್ತು. ಆದರೆ ಇಂದಿನ ರಾತ್ರಿ—ನಾರಕೀಯ ವೇದನೆಯನ್ನು ಕೊಡುವ ದುಃಖದ ಪರಾಕಾಷ್ಠೆಯನ್ನು ಮುಟ್ಟಿದ ವಿಯೋಗದ ರಾತ್ರಿಯಾಗಿ ಪರಿವರ್ತಿಸಿತ್ತು.

ಶಾಂತಿ ಹಾಸ್ಗೆಯ ಕೂತುಕೊಂಡು ಆಕಾಶವನ್ನು ನೋಡುತ್ತಿದ್ದಳು. ನೋಡುತ್ತಿದ್ದ ಹಾಗೆ ಅವಳ ಮನಸ್ಸಿಗೆ—'ಪತಿ ಸತಿಗೆ ಪರದೈವ ಲೋಕದೊಳು...' ಎಂಬ ಆ ಮಾತು ನೆನಪಿಗೆ ಬಂದಿತು—ಅವಳು ಮನಸ್ಸಿನಲ್ಲಿಯೇ ಗೊಣಗಿದಳು. 'ಪತಿ ಸತಿಗೆ ಪರದೈವ! ಲೋಕದೊಳು! ...' ಅವಳ ಕಣ್ಣುಗಳಿಂದ ನೀರು ಗಂಗಾಪ್ರವಾಹವಾಗಿ ಹರಿಯಿತು. ಪತಿಯು ಜೀವಿಸಿದ್ದರೆ ... ಆದರೆ ಅವಳ ಮೂರ್ಖತನದ ಬಲಿವೇದಿಯ ಮೇಲೆ ಅವನ ಪ್ರಾಣಾಹುತಿಯಾಗಿತ್ತು. ಈಗ ಮರುಗುವುದರಿಂದ ಅವಳ ಭಾಗ್ಯವಾದಿದೆ ... ಜೀವಿಸಿರುವ ತನಕ ಕಾಳಮ್ಮ ಅವಳನ್ನು ಸ್ವೀಕರಿಸಿದ್ದಳು. ಆದರಿಸಿದ್ದಳು. ಆದರೆ ಅವನು ಹೋದೊಡನೆ ಅವಳೂ ಅವಳ ವೈರಿಯಾದಳು.

'ಇನ್ನು ಎಷ್ಟು ಕಾಲ ಇಲ್ಲಿಯೇ ... ಅತ್ತು ಅತ್ತು ಇನ್ನು ಯಾರಿಗೆ ... ತಯಲಿಕೆ ಹೋಗಬೇಕು?' ಎಂದು ಪಕ್ಕದ ಒಂದು ಕಾಳಮ್ಮ ಶಾಂತಿಯ ... ಶವನ್ನು ಎತ್ತಿ ಹಿಡಿದಳು ... ನೋಡಿದಳು — ... ಮೂರ್ತಿಯೇ ಅವಳ ಮುಂದೆ ನಿಂತಿತ್ತು. 'ಬಾವಿಕಟ್ಟೆಗೆ ಹೋಗಿ ...' ಕಾಳಮ್ಮ ಗರ್ಜಿಸಿದಳು.

ಶಾಂತಿ ಮ್ಲಾನ ವದನಗಳನ್ನು ಎತ್ತಿಕೊಂಡು ಬಾವಿಕಟ್ಟೆಗೆ ಹೋದಳು. ಬಗ್ಗಿ ನೀರನ್ನು ತುಂಬುವಾಗ, ಬಾವಿಯಾದ ಆ ನೀರಿನಲ್ಲಿ ಆಕಾಶದೊಳಗಿನ ಯಾವುದೋ ಒಂದು ದಿವ್ಯಾಕೃತಿಯು ಪ್ರತಿಬಿಂಬಿತವಾಗಿ ಪತಿಯನ್ನು ಕಂಡಳು ಅದು ಅವಳಿಗೆ—'ಪತಿ ಸತಿಗೆ ಪರದೈವ ಲೋಕದೊಳು!' ಎಂದು ಹಾಡುತ್ತಿರುವಂತೆ ಭಾಸವಾಯಿತು. ಮರುಕ್ಷಣದಲ್ಲಿಯೇ—'ಶಾಂತಿ! ಪತಿವಿಹೀನೆಯಾದ ನಿನಗೆ ಅಲ್ಲೀನ ಸುಖ' ಎಂದ ಯಾರೋ ಪ್ರಶ್ನಿಸುತ್ತಿರುವಂತೆ ಕೇಳಿತು 'ಜೀವ ಪ್ರಾಣದಾತಾ! ಈಗೋ ಬಂದೆ. ನೀನು ಹೇಳಿದುದು ನಿಜ—ಪತಿ ಸತಿಗೆ ಪರದೈವ ಲೋಕದೊಳು ಎಂದು ಗುಣುಗುಣುತ್ತ ಶಾಂತಿ ಅಚೇತನಳಾಗಿ ನೀರೊಳಗೆ ಬಿದ್ದಳು. 'ಪತಿ ಸತಿಗೆ ಪರದೈವ ಲೋಕದೊಳು...' ಈ ಸ್ವಾಧಿನ ದಿಗಂತಗಳಲ್ಲಿ ಪ್ರತಿಧ್ವನಿಸಿತು.

ಸ್ತ್ರೀಯರು, ಪುರುಷರು, ಮಕ್ಕಳು ಬಹುಹೊತ್ತು ಶಾಂತಿಯನ್ನು ನೋಡಲಿಕ್ಕೆ ಕೂಡಿದ್ದರು. ... ಶವವು ಬಿದ್ದುಕೊಂಡಿತ್ತು. ಅವನ್ನು ಅದನ್ನು ಸುತ್ತುಹಾಕಿ ನೋಡಿದರು. ಶಾಂತಿಯ ಕಣ್ಣುಗಳು ಮುಚ್ಚಿದ್ದುವು. ಆದರೆ ಬಾಯಿ ತೆರೆದಿತ್ತು. ಅವಳು ಆಗಲೂ 'ಪತಿಸತಿಗೆ ಪರದೈವ ಲೋಕದೊಳು...' ಎಂದು ಹಾಡುತ್ತ, ಲೋಕಕ್ಕೆ ಸಂದೇಶವನ್ನು ಕೊಡುತ್ತಿರುವಂತೆ ಕಾಣುತ್ತಿದ್ದಳು.

(ಆಧಾರದಿಂದ)

ಪುನಃ ಭಾರತ ಮಂತ್ರಿ ಉವಾಚ.

"ಭಾರತದ ಸಮಸ್ಯೆಯನ್ನು ಭಾರತೀಯರೇ ಬಿಡಿಸಬೇಕು"

ಅಮೆರಿಯವರ ಉಪದೇಶ

ಬ್ರಿಟಿಷರು ಅಧಿಕಾರ ಬಿಟ್ಟುಕೊಡಲಾರರು

ಭಾರತದ ಸದ್ಯದ ರಾಜಕೀಯ ಸಮಸ್ಯೆಯನ್ನು ಬಿಡಿಸುವ ಕೆಲಸ ಭಾರತೀಯರಿಗೇ ಸೇರಿದೆ. ಸರಕಾರದವರು ತಮ್ಮ ಪ್ರಯತ್ನಗಳನ್ನೆಲ್ಲ ಮಾಡಿದ್ದಾರೆ. ಅವರು ಸೂಚಿಸಿರುವ ಮಾರ್ಗದಿಂದ ಸದ್ಯದ ಸಮಸ್ಯೆ ಬಗೆಹರಿಯುವುದಲ್ಲದೆ, ಭಾರತೀಯರಿಗೆ ವಿಶೇಷ ಸ್ವಾತಂತ್ರ್ಯವೂ ದೊರೆಯುವುದು ಎಂದು ಭಾರತ ಮಂತ್ರಿ ಅಮೆರಿಯವರು ಪುನಃ ಈಗ ಹೇಳುತ್ತಿದ್ದಾರೆ.

ಅವರು ಮತ್ತೆ ಹೀಗೆಂದಿರುವರು:

"ಈಗ ಎದ್ದಿರುವ ತೊಡಕುಗಳನ್ನು ಬಿಡಿಸಲು ಭಾರತೀಯರಿಗೆ ಅನೇಕ ಸುಸಂಧಿಗಳು ಬಂದಿವೆ. ಇವನ್ನವರು ಉಪಯೋಗಿಸಿಕೊಂಡರೆ, ತೊಡಕು ಬಗೆಹರಿಯುವುದಲ್ಲದೆ ಭಾರತದಲ್ಲಿ ಐಕ್ಯಮತ್ಯವೂ ನೆಲಸುವುದು. ಈ ಒಕ್ಕಟ್ಟಿನಿಂದ ದೇಶದಲ್ಲಿ ಶಾಂತಿ ಸ್ಥಾಪನೆಯಾಗುವುದಲ್ಲದೆ, ಹೊರಗಿನಿಂದ ಧಾಳಿಯಾಗುವ ಭಯವೂ ತಪ್ಪುವುದು. ಇದಲ್ಲದೆ ಭಾರತದ ಎಲ್ಲ ಜನರಿಗೂ ತಮ್ಮ ತಮ್ಮ ಮಾರ್ಗಗಳಲ್ಲಿ ತಮ್ಮ ತಮ್ಮ ಧರ್ಮದ ಸಂಸ್ಕೃತಿಗಳನ್ನು ಅಭಿವೃದ್ಧಿಪಡಿಸಿಕೊಳ್ಳಬಹುದೆಂದೂ ಅನಿಸುವುದು. ಇದೇ ಈಗ ಮುಖ್ಯ ಪ್ರಶ್ನೆಯಾಗಿದೆ. ಬ್ರಿಟಿಷ್ ಸರಕಾರದವರು ತಮ್ಮ ಅಧಿಕಾರವನ್ನು ಹಿಂದೀಯರಿಗೆ ಬಿಟ್ಟುಕೊಡುವುದಕ್ಕಿಂತ ಇದೇ ಹೆಚ್ಚು ಕಷ್ಟಕರವಾಗಿದೆ. ಈ ಕೆಲಸವಾದರೆ, ಮುಂದಿನ ಕೆಲಸಗಳೆಲ್ಲ ತಾವಾಗಿಯೇ ಆಗುವುವು.

ಸಮರ್ಥರು ಇಲ್ಲ?

"ಇಷ್ಟೇ ಅಲ್ಲ; ಬ್ರಿಟಿಷ್ ಸರಕಾರದವರು ತಮ್ಮ ಅಧಿಕಾರವನ್ನು ಬಿಟ್ಟುಕೊಡಲು ಹಿಂಜರಿಯುವುದಕ್ಕೆ ಮುಖ್ಯ ಕಾರಣವೆಂದರೆ ಆ ಅಧಿಕಾರವನ್ನು ತೊಂದರೆಯಿಲ್ಲದೆ ಸ್ವೀಕರಿಸಬಲ್ಲ ಸಮರ್ಥವಾದ ಸರಕಾರ ಭಾರತದಲ್ಲಿ ಬೇಕು. ಇನ್ನೂ ಒಂದು ಮಾತಿದೆ. ಭಾರತದ ಶಾಂತಿ ಸಮಾಧಾನಗಳನ್ನು ಸಂರಕ್ಷಿಸುವುದು ನಮ್ಮ ಕೆಲಸ. ಈ ಜವಾಬ್ದಾರಿಯನ್ನು ನಾವು ಹೊತ್ತಿದ್ದೇವೆ. ಆದ್ದರಿಂದ ಹಿಂದುಸ್ಥಾನದಲ್ಲಿ ಪ್ರಬಲವಾದ ಪಕ್ಷಗಳಿಂದ ವಿರೋಧಿಸಲ್ಪಡುವ ಯಾವುದೇ ಸರಕಾರಕ್ಕೂ ನಾವು ನಮ್ಮ ಜವಾಬ್ದಾರಿಯನ್ನು ಬಿಟ್ಟುಕೊಡಲಾರೆವು.

ಸಿದ್ಧರಾಗಿದ್ದರೆ?

"ಆದ್ದರಿಂದ ಇಂದಿನ ತೊಡಕು ಬಗೆಹರಿಯಬೇಕಾದರೆ ಭಾರತೀಯರೇ ಪ್ರಯತ್ನಿಸಬೇಕು. ಅವರೇ ಒಂದೆಡೆ ಸೇರಿ ಪರಸ್ಪರ ವಿಚಾರ ವಿನಿಮಯ ಮಾಡಿ ಒಂದು ನಿರ್ಣಯಕ್ಕೆ ಬರಬೇಕು. ಸರಕಾರದವರು ಈಗಾಗಲೇ ತಮ್ಮ ಕೆಲಸ ಮಾಡಿದ್ದಾರೆ. ಯುದ್ಧ ಕಾರ್ಯದಲ್ಲಿ ಹಿಂದೀ ಮುಖಂಡರಿಗೆ ಭಾಗ ಕೊಡಲು ಸರಕಾರದವರು ಸಿದ್ಧರಾಗಿದ್ದರಲ್ಲದೆ ದೇಶದಲ್ಲಿ ಅನುಕೂಲವಾದ ವಾತಾವರಣವನ್ನೇರ್ಪಡಿಸಲು ಸಹಾಯ ಮಾಡುವುದಕ್ಕೆ ಸಹ ಸಿದ್ಧರಾಗಿದ್ದರು.

ಮಹತ್ಕಾರ್ಯ!

"ನಾವೀಗ ಘೋರ ಹೋರಾಟದಲ್ಲಿ, ಇಡೀ ಜಗತ್ತನ್ನೇ ಬದಲು ಮಾಡುವಂತಹ ಘೋರ ಸಂಗ್ರಾಮದಲ್ಲಿ ತೊಡಗಿದ್ದೇವೆ. ಹೀಗಿದ್ದರೂ ವೈಸರಾಯರ ಕಾರ್ಯಕಾರಿ ಮಂಡಲವನ್ನು, ಅದರಲ್ಲಿ ಭಾರತೀಯರೇ ಹೆಚ್ಚಾಗಿರುವಂತೆ ವಿಸ್ತರಿಸಲು ಒಪ್ಪಿದ್ದೇವೆ. ಇದು ನಮ್ಮ ಮಹತ್ಕಾರ್ಯವಲ್ಲವೆ? ಯುದ್ಧ ನಡೆಯುತ್ತಿರುವಾಗ ಇಡೀ ಸರಕಾರವನ್ನೇ ಬದಲು ಮಾಡಬೇಕೆಂದು ಕೇಳುವುದು ಸರಿಯಲ್ಲ ಮತ್ತು ಇದು ಸಾಧ್ಯವೂ ಇಲ್ಲ.

ಹೀಗೆಂದು ಮತ್ತೆ ಅಮೆರಿಯವರು ವೈಸರಾಯರ ಕಾರ್ಯಕಾರೀ ಮಂಡಲವನ್ನು ವಿಸ್ತರಿಸುವ ಯೋಜನೆಯನ್ನು ಬಾಯಿ ತುಂಬಾ ಹೊಗಳಿದರು ಮತ್ತು ಹೀಗೆ ಹೇಳಿದರು.

ಸ್ವೀಕರಿಸಬಹುದು!

"ಆ ಯೋಜನೆ ಇನ್ನೂ ರದ್ದಾಗಿಲ್ಲ. ಅದನ್ನು ಕಾರ್ಯರೂಪಕ್ಕೆ ತರಲು ನಾವು ಸದಾ ಸಿದ್ಧರಿದ್ದೇವೆಂದು ವೈಸರಾಯರು ಇನ್ನೂ ಮೊನ್ನೆ ಮೊನ್ನೆ ಹೇಳಿದ್ದಾರೆ. ಆದ್ದರಿಂದ ಭಾರತೀಯರು ಇದನ್ನು ಯಾವಾಗ ಬೇಕಾದರೂ ಸ್ವೀಕರಿಸಬಹುದು".

ಬಳಿಕ ಅಮೆರಿಯವರು ಘಟನಾತ್ಮಕ ಮತ್ತು ರಾಜಕೀಯ ವಿಚಾರಗಳನ್ನು ಅವುಗಳ ಯೋಗ್ಯತೆಗೆ ತಕ್ಕಂತೆ ಪರಿಶೀಲಿಸಬೇಕೆಂದು ಹೇಳಿ, ಈ ಯುದ್ಧದಲ್ಲಿ ಹಿಟ್ಲರನಿಗೆ ಜಯವಾದರೆ ಇಡೀ ಜಗತ್ತೇ ಅವನ ಸ್ವಾಧೀನವಾಗುವುದು ಎಂದು ನುಡಿದರು. ಆದ್ದರಿಂದ ನಾವು 'ಮೊದಲು ಮಾಡುವ ಕೆಲಸವನ್ನು ಮೊದಲು ಮಾಡಬೇಕು' ಎಂದು ಅಂದರು.

ಕೊನೆಗೆ ಅಮೆರಿಯವರು 'ಯುದ್ಧಾನಂತರ ಕೈಕೊಳ್ಳಬಹುದಾದ ಈ ವ್ಯವಹಾರಿಕ ಮಾರ್ಗಗಳ ಬಗ್ಗೆ ಭಾರತೀಯರು ಮತ್ತು ಬ್ರಿಟಿಶರಲ್ಲಿ ಜಗಳವಾಗುವ ಸಂಭವವಿಲ್ಲ. ಮುಖ್ಯ ತತ್ವಗಳ ಬಗ್ಗೆ ಯಾವ ಭಿನ್ನಾಭಿಪ್ರಾಯವಿಲ್ಲ' ಎಂದು ಹೇಳಿದರು.

ಸುಕ್ರ ಸಂಜೀವನ

ಭಾರತ ದೇಶವೆಂದು ಪ್ರಾಚೀನ ಋಷಿಗಳು ನಿಯಮಗಳಿಗನುಸಾರವಾಗಿ ನಡೆಯುವ ದೇಶವಾಗಿಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲಿಸಲ್ಪಡದೆ ಎಂದೋ ದೂರಕ್ಕೆ ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

ಸೇರಿಗೆ ರೂ. ೩

ಅಧ್ಯಕ್ಷ ಡಾ॥ ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ.ಸಿ.ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪುರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಢಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜಂಟ್ಸ್: ಶಾ ಕಂಪನಿ, ಹಂಪನಕಟ್ಟಾ, ಮಂಗಳೂರು.

ದಮ್ಮು ನೆಟ್ಟಗೆ ಆಗಲೇ ಬೇಕು

ಇದು ಅಸಾಧ್ಯವೆಂದು ಡಾಕ್ಟರರು ಹೇಳುವುದಿಲ್ಲ

ನಿಮಗೆ ನಿರಾಶೆಯು ಆದರೆ ಅದರ ಕಾರಣ ತಪ್ಪು ಔಷಧ ತೆಗೆದುಕೊಂಡದ್ದು ಇರಬಹುದು. ದಮ್ಮು ನೆಟ್ಟಗಾಗಬೇಕೆಂಬ ಹಂಬಲದಿಂದ ಕ್ಷಣಿಕವಾಗಿ ಗುಣವಾಗುವ ಔಷಧ ಉಪಯೋಗಿಸಿ ಅನೇಕರಿಗೆ ದುಃಖವಾಗಿದೆ.

ಪುರೋಹಿತ ಶ್ವಾಸಹಾರಿಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಲ್ಲಿಸದೆ ಬೇರು ಸಹಿತ ಕಿತ್ತೊಗೆದು ಗುಣವಾಗುತ್ತದೆ. ಅದನ್ನು ತೆಗೆದುಕೊಳ್ಳ ಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ತೇಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ. ಪಚನ ಕ್ರಿಯೆಯು ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸವು ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ನೆಟ್ಟಗಾಗುವುದು.

ರೂ. ೨—೮—೦, ರೂ. ೪—೧೨—೦, ರೂ. ೬—೮—೦ ಈ ಕ್ರಮಕ್ಕೆ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಾ ಕಡೆ ಸಿಗುವುದು. ತರಿಸಿಕೊಳ್ಳುವ ವಿಳಾಸ: **ಡಾ॥ ಪುರೋಹಿತ ಫಾರ್ಮಸಿ, ಕೊಲ್ಹಾಪುರ.**

ಪುರೋಹಿತ ಶ್ವಾಸಹಾರಿ

ಜಿಲ್ಲಾ ಸಮಾಚಾರ

ಮಂಗಳೂರು

ಮಂಗಳೂರು ವಿದ್ಯಾರ್ಥಿ ಸಂಘ: ಇದರ ಆಶ್ರಯದಲ್ಲಿ ಕಳೆದ ಸ್ವಾತಂತ್ರ್ಯ ದಿನ ಪಂದು ಖಾದಿ ಹೊತ್ತು ಮಾರಾಟ ಮಾಡುವ ಕಾರ್ಯವು ಯಶಸ್ವಿಯಾಗಿ ಜರಗಿಸಲ್ಪಟ್ಟಿತು. ಅಂದು ವಿದ್ಯಾರ್ಥಿಗಳು ರಾಷ್ಟ್ರಧ್ವಜವನ್ನೂ ವಿಕ್ರಯಿಸಿ ಮಹಾಜನರಲ್ಲಿ ದೇಶಪ್ರೇಮ ಹೆಚ್ಚುವಂತೆ ಮಾಡಿದರು.

ವಿದ್ಯಾರ್ಥಿ ಪರಿಷದ:—ದಕ್ಷಿಣ ಕನ್ನಡ ಜಿಲ್ಲಾ ಸ್ಟೂಡೆಂಟ್ ಫೆಡರೇಶನಿನ ಆಶ್ರಯದಲ್ಲಿ ಜಿಲ್ಲಾ ವಿದ್ಯಾರ್ಥಿಗಳ ಪರಿಷದವು ಇದೇ ಫೆಬ್ರುವರಿ ತಿಂಗಳ ತಾರೀಕು ೮-೯ರಲ್ಲಿ ಮಂಗಳೂರಿನಲ್ಲಿ ಡಾ॥ ಕೆ. ಜಿ. ಕೃಷ್ಣ, M. A. PH. D. ಮದ್ರಾಸ್ ಇವರ ಅಧ್ಯಕ್ಷತೆಯಲ್ಲಿ ಜರಗಲಿರುವದರಿಂದ ಜಿಲ್ಲೆಯ ಸಕಲ ವಿದ್ಯಾರ್ಥಿ ಸಂಘಗಳೂ ಶಾಲೆಗಳೂ ತಮ್ಮ ಪ್ರತಿನಿಧಿಗಳನ್ನು ಕಳುಹಿ ಪರಿಷದವನ್ನು ಯಶಸ್ವಿಗೊಳಿಸಬೇಕಾಗಿಯೂ, ಮಂಗಳೂರಿನ ಹಾಗೂ ಇತರಕಡೆಯ ಮಹಾನೀಯರು ತನು ಮನ ಧನ ಸಹಾಯವನ್ನಿತ್ತು ನಮ್ಮ ಕಾರ್ಯದಲ್ಲಿ ಪ್ರೋತ್ಸಾಹಿಸಬೇಕಾಗಿಯೂ ವಿದ್ಯಾರ್ಥಿಸಂಘದ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಕಾಫಿ ತೋಟಿಗರ ಮನವಿ:— ದ. ಕ. ಜಿಲ್ಲಾ ಕಾಫಿ ಪ್ಲಾಂಟರರ ಸಂಘದವರು ಇಂಡಿಯನ್ ಕಾಫಿ ಮಾರ್ಕೆಟ್ ಎಕ್ಸ್ಪ್ಯಾನ್ಶನ್ ಕಾಫಿ ಕಂಟ್ರೋಲರಿಗೆ ಒಂದು ಮನವಿಯನ್ನು ಮಾಡಿಕೊಂಡು ಅವರಲ್ಲಿ ಹೊಸ ಕಾನೂನಿನಂತೆ ತಮಗೆ ಉಂಟಾಗುವ ಅನೇಕ ತೊಂದರೆಗಳನ್ನು ನಿವೇದಿಸಿಕೊಂಡಿದ್ದಾರೆ.

ಸಾಲದಲ್ಲಿ ಕಡಿತ:— ಶ್ರೀ. ಓ. ರಾ. ಮಲ್ಯರ ಭಾಷಣ ಜಿಲ್ಲಾ ಸೆಂಟ್ರಲ್ ಸಹಕಾರಿ ಬೇಂಕ್, ಮಂಗಳೂರು ಇವರ ಆಶ್ರಯದಲ್ಲಿ ಸೇರಿದ ಸಹಕಾರ ಸಂಘದ ಸದಸ್ಯರ ಮತ್ತು ಪಂಚಾಯತದ ಸಭೆಯಲ್ಲಿ ಶ್ರೀ. ಓ. ರಾ. ಮಲ್ಯರು ಮಾತನಾಡುತ್ತಾ "ಸಾಲಕೊಡುವಾಗ ಯಾವುದಕ್ಕೆ ಸಹಕಾರಿ ಸಂಘವು ಸಾಲಕೊಡುವುದೋ ಆ ಉದ್ದೇಶ ಈಡೇರಗದಂತೆ ನೋಡಿಕೊಳ್ಳಬೇಕು, ಅದಕ್ಕಾಗಿ ಕೊಡಲಾಗುವ ಹಣದಲ್ಲಿ ನಿರ್ದಿಷ್ಟ ಭಾಗವನ್ನು ಕೊಟ್ಟು, ಅದು ಸದುಪಯೋಗವಾದಲ್ಲಿ ಮುಂದೆ ಉಳಿದನಂತರವನ್ನು ಕೊಡಬೇಕು. ದೀರ್ಘಕಾಲದ ಸಾಲಬಾಕಿಯಲ್ಲಿ ಸದಸ್ಯರು ಅದರಹಿಸ ಬೇಕಾದುದರ ಬಗ್ಗೆ ಕೇಳಿಕೊಳ್ಳುವುದು ಮೇಲು" ಎಂದರು.

ಡಿಪ್ರೆಸ್ಡ್ ಕ್ಲಾಸಸ್ ಮಿಶನ್:— ಇವರ ೪ನೆಯ ವಾರ್ಷಿಕೋತ್ಸವವು ಫೆಬ್ರುವರಿ ೪ರಂದು ಅ. ಗ. ೫ಕ್ಕೆ ಕೋರ್ಟ್‌ಹಿಲ್ ರಾಜಾ ರಾಮ್ ಮೋಹನ ರಾಯ ಸಭಾಭವನದಲ್ಲಿ ಜರಗಲಿರುವುದು. ಡಾ॥ ಪಿ. ರಾಮಬಾಲಿಗರು ಅಧ್ಯಕ್ಷತೆ ವಹಿಸುವರು. ಶ್ರೀ. ಯಂ. ಕೆ. ನಂಜಿಯಾರರು ಮಿಶನಿನ ಸ್ಥಾಪಕರಾದ ಸ್ವಾಮಿ ಈಶ್ವರಾನಂದರ ಸ್ಮಾರಕ ಭಾಷಣ ಮಾಡಲಿರುವರು. ಆ ದಿನ ಪ್ರಾತಃ ೩ ಗಂಟೆಗೆ ಭದ್ರಿಗುಡ್ಡೆಯ ನರ್ಸಿಂಗ್‌ರಾವ್ ಲಕ್ಷ್ಮೀದೇವಿ ಬಿಲ್ಡಿಂಗಿನಲ್ಲಿ ಭಾವಚಿತ್ರ ಅನಾವರಣೋತ್ಸವವೂ ಇದೆ.

ಗವರ್ನರರ ಕಾರ್ಯಕ್ರಮ:— ಮದ್ರಾಸ್ ಗವರ್ನರರಾದ ಸರ್ ಅರ್ಥರ್ ಹೋಪರು, ತಾರೀಕು ೨ರಂದು ಸಂಜೆ ಮೈಲ್‌ನಲ್ಲಿ ಮಂಗಳೂರಿಗೆ ಬಂದು, ಸಂಜೆ ಯುನಿವರ್ಸಿಟಿ ಯಸ್ ಕ್ಲಬ್ಬನ್ನು ಸಂದರ್ಶಿಸುವರು. ಮರುದಿನ ೩॥ ತಾಸಿಗೆ ತನ್ನ ಕ್ಯಾಂಪಿನಿಂದ ಹೊರಟು ಕೆಥೋಲಿಕ್ ಕ್ಲಬ್ ಮತ್ತು ಲೇಡಿಸ್ ಕ್ಲಬ್‌ಗಳನ್ನು ಕಂಡು ಸಿವಿಲ್ ಗಾರ್ಡುಗಳನ್ನು ಸಂದರ್ಶಿಸಿ, ೮॥ ತಾಸಿಗೆ ಬೆಂಡ್‌ಕೋರ್ಟ್ ಹೋಲ್‌ನಲ್ಲಿ ಜಿಲ್ಲಾ ಯುದ್ಧ ಸಮಿತಿಯ ಸಭೆಗೆ ತೆರಳುವರು. ೧೦ರಿಂದ ೧೨॥ ತಾಸಿನ ತನಕ ಕಲೆಕ್ಟರರ ಆಫೀಸಿನಲ್ಲಿ ಭೇಟಿಕೊಡುವರು. ಮಧ್ಯಾಹ್ನ ನಂತರ ಸೈಂಟ್ ಆನ್ಸ್ ಸೆಕೆಂಡರಿ ಶಾಲೆಯಲ್ಲಿ ರೆಡ್‌ಕ್ರಾಸ್ ಕೆಲಸಗಾರರನ್ನು ಕಾಣುವರು. ಆ ಬಳಿಕ ಕಲೆಕ್ಟರರ ಆಫೀಸಿನಿಂದ ಹೆಂಗುಸರ ಆಸ್ಪತ್ರೆ, ಗವರ್ನಮೆಂಟ್ ಕಾಲೇಜು, ಬಾವುಟಗುಡ್ಡೆ, ಮಹಿಳಾಸಭೆ ಮಾರ್ಗವಾಗಿ ಕಂಕನಾಡಿಗೆ ಹೋಗಿ ಅಲ್ಲಿಂದ ಜಪ್ಪು ಸೆಮಿನರಿಯನ್ನು ನೋಡಿ ಹಿಂತಿರುಗಿ ಫಳ್ನೀರ್, ಮಿಲಾಗ್ರಿಸ್ ಮಾರ್ಗವಾಗಿ ಗವರ್ನಮೆಂಟ್ ಕಾಲೇಜಿಗೆ ಬರುವರು. ಇಲ್ಲಿ ಸಂಜೆ ೫ಕ್ಕೆ ಸಾರ್ವಜನಿಕ ಭಾಷಣ ಮಾಡಿ, ಮುಂದೆ ಕೆನರಾ ಕ್ಲಬ್ಬಿಗೆ ತೆರಳುವರು. ರಾತ್ರಿ ಯುದ್ಧ ಸಹಾಯಾರ್ಥ ಗವರ್ನಮೆಂಟ್ ಕಾಲೇಜಿನಲ್ಲಿ ಅಭಿನಯಿಸಲ್ಪಡಲಿರುವ ನಾಟಕಕ್ಕೆ ಬಂದು ಮುಂದೆ ಅದೇ ರಾತ್ರಿ ಸ್ಪೆಶಲ್ ಟ್ರೈನಿನಲ್ಲಿ ಕಣ್ಣಾನೂರಿಗೆ ತೆರಳುವರು.

ಜಿಲ್ಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ:—ಮಂಗಳೂರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಬಹಳ ವಿಜೃಂಭಣೆಯಿಂದ ನೆರವೇರಿತು. ಬೆಳಿಗ್ಗೆ ಪ್ರಚಂಡ ಜನಸ್ತೋಮದಿಂದ ಕೂಡಿದ ಪ್ರಭಾತ ಫೇರಿ ನಡೆದು ಧ್ವಜವಂದನೆಯಾಯಿತು. ಆಮೇಲೆ ಸಂಜೆಯ ತನಕ ಸ್ವಯಂಸೇವಕರು ಖಾದೀ ಮಾರಾಟ ಮಾಡಿದರು. ಸಂಜೆಗೆ ೩ಕ್ಕೆ ನಗರದಲ್ಲಿ ಮೆರವಣಿಗೆಯಾಯಿತು. ಮೈದಾನದಲ್ಲಿ ಕೂಡಿದ ಸಭೆಯಲ್ಲಿ ಶ್ರೀ. ಯಂ. ವಿ. ಅಧಿಕಾರಿಗಳು ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಓದಿ ವಿವರಿಸಿದರು. ಶ್ರೀ. ಎಸ್. ಎನ್. ಹೊಳ್ಳರೂ ಮಾತನಾಡಿದರು. ಡಾ॥ ಕೆ. ವಿಟ್ಠಲ ಶೆಟ್ಟರು ಅಧ್ಯಕ್ಷರಾಗಿದ್ದರು. ಜನಸ್ತೋಮ ಪ್ರಚಂಡವಾಗಿತ್ತು.

ಜಿಲ್ಲೆಯ ಸತ್ಯಾಗ್ರಹಿಗಳಿಗೆ ಸೂಚನೆ:—ಮಹಾತ್ಮಾ ಗಾಂಧಿಜಿಯವರ ನೇತೃತ್ವದಲ್ಲಿ ಪ್ರಾರಂಭವಾಗಿರುವ ಸತ್ಯಾಗ್ರಹ ಸಮರದ ಪ್ರಥಮಾಂಕವು ಕೊನೆಗೊಂಡು ದ್ವಿತೀಯಾಂಕವು ಜರಗುತ್ತಲಿರುವುದು ಎಲ್ಲರಿಗೂ ಗೊತ್ತಿದೆ. ಸತ್ಯಾಗ್ರಹದ ಈ ವರೆಗಿನ ಆಚರಣೆಯಲ್ಲಿ ಗಾಂಧಿಜಿಯವರು ತೃಪ್ತಿ ಹೊಂದಿರುವರೆಂದು ತಿಳಿದುಬರುವದು. ಈ ವರೆಗೆ ಆದದ್ದು ಅಣುವಾಗಿದ್ದರೆ ಇನ್ನು ಪರ್ವತದಷ್ಟು ಆಗಲಿದೆ. ನಾವು ಸಮರದ ಪ್ರಥಮ ಸೋಪಾನದಲ್ಲಿಯೇ ಇದ್ದೇವೆ. ಮಹಾತ್ಮಾಜಿಯವರು ಸ್ಪಷ್ಟಪಡಿಸಿರುವಂತೆ ಈ ಸಮರವು ಬಹುಶಃ ದೀರ್ಘವಾಗಬಹುದು, ದಾರಿಯು ಕಠಿಣತರವಾಗಿ ಪರಿಣಮಿಸಲೂ ಬಹುದು. ಬೇಗನೇ ಇತ್ಯರ್ಥವಾಗುವುದು ಊಹಿಸುವುದಾದರೂ ಮೂರ್ಖತನವೇ ಸರಿ.

ಇಂಥ ಪರಿಸ್ಥಿತಿಯಲ್ಲಿ ಗಾಂಧಿಜಿಯವರು ಸುಯೋಗ್ಯ ಮತ್ತು ಸಮರ್ಥ ಸತ್ಯಾಗ್ರಹಿಗಳನ್ನು ಆಪೇಕ್ಷಿಸುವಲ್ಲಿ ಆಶ್ಚರ್ಯವಿಲ್ಲ. ಸತ್ಯಾಗ್ರಹದ ಮುನ್ನಡೆಯ ಕುರಿತು ಇನ್ನು ಮುಂದೆ ಹೆಚ್ಚಿನ ನಿಗಾ ತೆಗೆದುಕೊಳ್ಳಬೇಕಾಗಿದೆ. ಈ ಬಾರಿಯ ಸತ್ಯಾಗ್ರಹದಲ್ಲಿ "ಸಂಖ್ಯೆಯತ್ತ ಲಕ್ಷ್ಯವಿಡದೆ ಬರೇ ಯೋಗ್ಯತೆಯನ್ನು ಪರೀಕ್ಷಿಸುತ್ತಿದ್ದಾರೆ. ಶರ್ತಗಳಿಗೊಪ್ಪದ ಜೀವನಗಳನ್ನು ತರಬೇತಿ ಅಗ್ಗವಾದ ಪ್ರಸಿದ್ಧಿಯನ್ನಿಚ್ಛಿಸುವ ಸತ್ಯಾಗ್ರಹಿಗಳನ್ನು ಮಹಾತ್ಮರು ಅಪೇಕ್ಷಿಸುವುದಿಲ್ಲ. ನೂಲುವುದು ದೈನಂದಿನದ ಅಭ್ಯಾಸವಾಗಿಟ್ಟು, ಸತತ ಖಾದಿ ಧರಿಸುವವನ್ನು ಮೊದಲಾದ ಅಷ್ಟು ತತ್ವಗಳಿಗೆ ಒಪ್ಪದೆಯೂ, ಒಪ್ಪಿಯೂ ಅದರಂತೆ ವರ್ತಿಸದೆಯೂ ಇರುವ ವ್ಯಕ್ತಿಗಳಿಗೆ ಸತ್ಯಾಗ್ರಹ ಮಾಡಲು ಶಿಫಾರಸು ದೊರೆಕದು. ಅಲ್ಲದೆ ಸತ್ಯಾಗ್ರಹ ಮಾಡಲು ಮಹಾತ್ಮಾ ಗಾಂಧಿಜಿಯವರಿಂದ ಈಗಾಗಲೇ ಒಪ್ಪಿಗೆ ಪಡೆದವರಲ್ಲಿಯೂ ಯಾರಾದರೂ ನೂಲುವುದು ಮತ್ತು ಸತತ ಖಾದಿ ಧರಿಸುವುದು ಮೊದಲಾದ ತತ್ವಗಳಿಗೆ ವಿರೋಧವಾಗಿ ನಡೆದಲ್ಲಿ, ಅಂಥವರಿಗೆ ಸಿಕ್ಕಿದ ಒಪ್ಪಿಗೆಯನ್ನು ವಜಾ ಮಾಡಿಸಲಾದೀತು ಎಂಬುವನ್ನು ನಾನು ಒತ್ತಿ ಹೇಳಬಯಸುತ್ತೇನೆ.

ಶಾರೀರಿಕ ಅನಾರೋಗ್ಯ ಮತ್ತು ಆರ್ಥಿಕ ಗೊಂದಲದಲ್ಲಿರುವ ವ್ಯಕ್ತಿಗಳ ನಾಮಪತ್ರಗಳು ಸ್ವೀಕರಿಸಲ್ಪಡಲಾರವು ಅಲ್ಲದೆ ಇನ್ನು ಮುಂದೆ ೨೧ ವರ್ಷ ಅಥವಾ ಅದಕ್ಕಿಂತ ಕಮ್ಮಿ ಪ್ರಾಯದವರಿಗೆ ಸತ್ಯಾಗ್ರಹ ಮಾಡಲು ಮಹಾತ್ಮರಿಂದ ಒಪ್ಪಿಗೆ ದೊರೆಯಲಾರದು. ಕಾರಣ ಅಂಥವರು ಸತ್ಯಾಗ್ರಹ ಪ್ರತಿಜ್ಞೆಗೆ ಸಹಿಮಾಡಕೂಡದು.

ಸ್ಥಳೀಯ ಸಂಸ್ಥೆ (ಜಿಲ್ಲಾ ಬೋರ್ಡು, ಮುನಿಸಿಪಾಲಿಟಿಗಳಲ್ಲಿರುವ) ಕಾಂಗ್ರೆಸ್ ಸದಸ್ಯರು. (ಅವರಿಗೆ ಈಗಾಗಲೇ ಸತ್ಯಾಗ್ರಹ ಮಾಡಲು ಅಪ್ಪಣೆ ಸಿಕ್ಕಿದ್ದರೂ ಕೂಡ) ಈಗ ಕೆಲ ಸಮಯದ ಮಟ್ಟಿಗೆ ಸತ್ಯಾಗ್ರಹವಮಾಡಕೂಡದೆಂದು ಗಾಂಧಿಜಿಯವರು ಸ್ಪಷ್ಟಪಡಿಸಿರುವರು.

ಎಲ್ಲ ಸತ್ಯಾಗ್ರಹ ಪ್ರತಿಜ್ಞೆಗಳೂ ಕಾಂಗ್ರೆಸ್ ಸಮಿತಿಗಳ ಮೂಲಕವೇ ತನ್ನೆಡೆಗೆ ಬರಬೇಕೆಂದೂ ಯಾರೂ ತಮಗೆ ಸತ್ಯಾಗ್ರಹ ಮಾಡಲು ಅಪ್ಪಣೆ ಕೊಡಬೇಕೆಂದು ನೇರವಾಗಿ ತನ್ನನ್ನು ಕೇಳಬಾರದೆಂದೂ ಗಾಂಧಿಜಿಯವರು ಕೇಳಿಕೊಂಡಿರುವರು. ಕಾರಣ ಸತ್ಯಾಗ್ರಹಿಗಳಾಗಬಿಚ್ಛಿಸುವವರು ಅಲ್ಲಲ್ಲಿಯ ಕಾಂಗ್ರೆಸ್ ಸಮಿತಿಗಳಿಗೆ ತಮ್ಮ ಸತ್ಯಾಗ್ರಹ ಮತ್ತು ಅನುಮತಿ ಪತ್ರಗಳನ್ನು ಕಳುಹಿಸಬೇಕಾಗಿ ವಿನಂತಿ ಎಂದು ಅಧ್ಯಕ್ಷ ದ. ಕ. ಜಿ. ಕಾಂ. ಕಮಿಟಿ ಇವರು ತಿಳಿಸುತ್ತಾರೆ.

ಶ್ರೀ. ಭೋಜಶೆಟ್ಟಿಯವರಿಗೆ ಶಿಕ್ಷೆ: ಮುದ್ರಾಡಿ ಕಾಂಗ್ರೆಸ್ ಕಮಿಟಿಯ ಮೆಂಬರರಾದ ಶ್ರೀ. ಎಂ. ಭೋಜಶೆಟ್ಟಿಯವರನ್ನು ಅಜೆಕಾರಿನಲ್ಲಿ ಸತ್ಯಾಗ್ರಹ ಮಾಡಿದ ಬಗ್ಗೆ ನಿನ್ನೆ ಬುಧವಾರ ಕೈದುಮಾಡಲಾಗಿತ್ತು. ಬಿ. ಆನಂದ ರಾಯರ, ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಕುಂದಾಪುರ ಇವರ ಕಚೇರಿಯಲ್ಲಿ ಅವರ ವಿಚಾರಣೆಯಾಗಿ ೬ ತಿಂಗಳ ಸಜೆಯ ಶಿಕ್ಷೆ ಹಾಗೂ 'ಸಿ' ಕ್ಲಾಸು ವಿಧಿಸಲಾಯಿತು.

ಕುಂಞಂಬು ನಾಯರರಿಗೆ ಶಿಕ್ಷೆ: ನಿನ್ನೆ ತಾ. ೧೫ಕ್ಕೆ ಸತ್ಯಾಗ್ರಹ ಮಾಡಿದ ಶ್ರೀ. ಕುಂಞಂಬು ನಾಯರರಿಗೆ ೬ ತಿಂಗಳ ಸಜೆಯ ಶಿಕ್ಷೆ ಹಾಗೂ 'ಸಿ' ಕ್ಲಾಸ್ ವಿಧಿಸಲಾಯಿತು.

ಜಿಲ್ಲೆಯ ಸತ್ಯಾಗ್ರಹಿಗಳ ತೃತೀಯ ದಲ:—ದಕ್ಷಿಣಕನ್ನಡ ಜಿಲ್ಲೆಯಲ್ಲಿ ತೃತೀಯ ದಲದಲ್ಲಿ ಸತ್ಯಾಗ್ರಹ ಮಾಡುವರೆ ಮಹಾತ್ಮರಿಂದ ೮೦ ಮಂದಿಗೆ ಸಮ್ಮತಿ ದೊರೆತಿದೆಯೆಂದೂ, ಅವರಲ್ಲಿ ಕೆಲವರು ಸ್ಥಳೀಕ ಸಂಸ್ಥೆಗಳ ಸದಸ್ಯರಾಗಿರುವುದರಿಂದ ಅವರು ಸದ್ಯಕ್ಕೆ ಸತ್ಯಾಗ್ರಹ ಮಾಡಬಾರದಾಗಿ ಗಾಂಧಿಜಿ ಹೇಳಿರುವರಾಗಿ ಅವರನ್ನುಳಿದು ಮಿಕ್ಕವರು ಎಪ್ರಿಲ್ ೫ರೊಳಗೆ ಸತ್ಯಾಗ್ರಹ ಮಾಡತಕ್ಕದ್ದೆಂದೂ ತಿಳಿದು ಬರುತ್ತದೆ. ಈ ಸತ್ಯಾಗ್ರಹಿಗಳಲ್ಲಿ ಶ್ರೀಗಳಾದ ಉಳ್ಳಾಲ ಶತ್ರುಘ್ನನವರು, ಬಂಟ್ವಾಳ ಕೃಷ್ಣಶೆಟ್ಟರು, ಪಾಂಗಾಳ ಮನೋರಮಾಬಾಯಿ, ಪೊಳಲಿ ಶೀನಪ್ಪ ಹೆಗ್ಡೆ, ಅಹಮ್ಮದ್ ಬಾವಾ ಮೊದಲಾದವರಿರುವರೆಂದು ತಿಳಿಯುತ್ತದೆ.

ಶ್ರೀ ಬಾಲಾಜಿ ಟಾಕೀಸ್ ಮಂಗಳೂರು

ಇದರ ಪ್ರಥಮ ವರ್ಷದ ವಾರ್ಷಿಕೋತ್ಸವವು ಇದೇ ಕಳೆದ ತಾ. 29-1-41ನೇ ಬುಧವಾರ ಸಂಜೆ ೫ ಗಂಟೆಗೆ ವಕೀಲ್ ಶ್ರೀ. ವೈಕುಂಠ ಬಾಳಿಗರಿಂದ ನೆರವೇರಿಸಲ್ಪಟ್ಟಿತು. ಅನೇಕ ಮಹನೀಯರಿಗೂ, ಪತ್ರಿಕಾ ಸಂಪಾದಕರಿಗೂ ಆಮಂತ್ರಣವಿದ್ದಿತು. ಅಂದಿನಿಂದ ಮಿನರ್ವಾ ಮೂವಿಟೋನಿನವರ "ಪುಕಾರ್" ಎಂಬ ಚಿತ್ರವು ಪ್ರದರ್ಶಿತವಾಗುತ್ತಲಿದೆ.

ಕಾರ್ಕಳ

ಭಾಷಣ:—ಇದೇ ತಾ. ೨೭-೧-೪೧ರದಿನ ಡಾಕ್ಟರ ಕೆ. ಗೋಪಾಲಕೃಷ್ಣ ಕಾಮತರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿ ಸತ್ಯಾಗ್ರಹಿಗಳಾದ ಶ್ರೀ. ಭೋಜಪ್ಪ ಶೆಟ್ಟರು ಸದ್ಯದ ರಾಜಕೀಯ ಪರಿಸ್ಥಿತಿ ಮತ್ತು ಜನತೆಯ ಕರ್ತವ್ಯಗಳ ಕುರಿತು ಭಾಷಣಕೊಡುತ್ತಾ ಎಲ್ಲರೂ ಕಾಂಗ್ರೆಸಿಗೆ ಅನುಕೂಲರಾಗಿ ನಡೆಯಬೇಕೆಂದು ವಿನಂತಿಸಿದರು.

ಸ್ವಾತಂತ್ರ್ಯ ದಿನಾಚರಣೆ:— ಕಾರ್ಕಳ ಸರ್ಕಲ್ ಕಾಂಗ್ರೆಸ್ ಕಮಿಟಿಯವರು ಇಲ್ಲಿ ತಾ. ೨೬-೧-೪೧ನ್ನು ಅಖಿಲ ಭಾರತ ಸ್ವತಂತ್ರ ದಿನವನ್ನಾಗಿ ಆಚರಿಸಿದರು. ಆ ಸಂಬಂಧ ಆ ದಿನ ಇಲ್ಲಿ ಪ್ರಭಾತಫೇರಿ, ಗಾಂಧಿ ಮೈದಾನಿನಲ್ಲಿ ಧ್ವಜವಂದನೆ, ಖಾದಿಮಾರಾಟ, ಸಾಯಂಕಾಲ ಮೆರವಣಿಗೆ ಸಾರ್ವಜನಿಕ ಸಭೆಮತ್ತು ಭಾಷಣಗಳು, ಶಬರಿ ಆಶ್ರಮದಲ್ಲಿ ಹರಿಜನ ಮಕ್ಕಳ ನೂಲುವ ಸ್ಪರ್ಧೆ ಮತ್ತು ಬಹುಮಾನ ವಿತರಣಗಳಿದ್ದುವು.

ದ. ಕ. ಜಿಲ್ಲಾ 5ನೇ ಶಿಕ್ಷಣ ಪ್ರದರ್ಶನ:—ಕಾರ್ಕಳದಲ್ಲಿ ಇದೇ ಕಳೆದ ತಾರೀಕು ೨೯ರಿಂದ ಪ್ರಾರಂಭವಾಗಿದೆ. ಪ್ರದರ್ಶನದ ತೆರೆಯೋಣ ಸಮಾರಂಭವು ಶ್ರೀ ಹಾಪೋದರ ಶಿಟ್ಟಿ ಎಂ. ಎ. ಎಲ್. ಟಿ. ಯವರಿಂದ ನೆರವೇರಿಸಲ್ಪಟ್ಟಿತು. ಶಿಕ್ಷಣೋಪನ್ಯಾಸ, ವ್ಯಾಯಾಮ ಪ್ರದರ್ಶನ, ವಿನೋದಾವಳಿಗಳು ಮೊದಲಾದ ಕಾರ್ಯಕ್ರಮಗಳಿಂದ ಪ್ರದರ್ಶನವು ತಾರೀಕು 1—2—1941ರಂದು ಕೊನೆಗೊಳ್ಳುವುದು.

ಕುಂದಾಪುರ

ಮುದ್ದಣ ಕವಿಯ ಜಯಂತಿ:— ನಮ್ಮ ಜಿಲ್ಲೆಯ ಕವಿಕುಲತಿಲಕರಾದ ಮುದ್ದಣ (ನಂದಳಿಕೆ ಲಕ್ಷ್ಮೀನಾರಣಪ್ಪ)ಯರ ಜಯಂತಿಯು ತಾ. ೧-೨-೪೧ನೇ ಶನಿವಾರ ಅ. ಘ. ೪-೩೦ಕ್ಕೆ ಕುಂದಾಪುರ ಬೋರ್ಡ್‌ಹೈಸ್ಕೂಲಿನ ಆವಾರದಲ್ಲಿ ದ. ಕ. ಪಂಡಿತ ಸಂಘದವರ ಉಪಕಾರ ಸಹಕಾರದಿಂದ ಇಲ್ಲಿಯ ಕರ್ನಾಟಕ ಸಾಹಿತ್ಯಸಂಘದ ಆಶ್ರಯದಲ್ಲಿ ಜರಗಲಿರುವುದು.

ಶ್ರೀಮಾನ್ ಐರೋಡಿ ಶಿವರಾಮಯ್ಯನವರು ಅಧ್ಯಕ್ಷರಾಗಲಿರುವರು. ಈ ಸಭೆಯ ಹಲವು ವಿದ್ವಾಂಸರ ಭಾಷಣಗಳೂ ಕವಿಯ ಕಾವ್ಯಗಳ ವಾಚನವೂ ನಡೆಯಲಿರುವುವು. ಈ ಸಭೆಗೆ ಭಾಷಾಭಿಮಾನಿಗಳೆಲ್ಲರಿಗೂ ಸ್ವಾಗತವಿದೆ. ಸಂಘದ ಸದಸ್ಯರಿಗೂ. ಈ ಮೂಲಕ ಪ್ರತ್ಯೇಕ ಆಮಂತ್ರಣವಿದೆ.

ಕಾಸರಗೋಡು

ಶ್ರೀ॥ ಅಚ್ಯುತನ್ ಇವರ ಸತ್ಯಾಗ್ರಹ:—ತಾ. ೨೮-೧—೪೧ನೇ ಮಂಗಳವಾರ ಬೆಳಿಗ್ಗೆ ಒಂಭತ್ತುವರೆ ಗಂಟೆಗೆ ಕಾಸರಗೋಡು ಫಿರ್ಕಾ ಕಾಂಗ್ರೆಸ್ ಕಮಿಟಿ ಸೆಕ್ರೆಟರಿಗಳಾದ ಶ್ರೀ. ಅಚ್ಯುತನವರು, ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಮುಂಭಾಗದಲ್ಲಿ ಯುದ್ಧ ಘೋಷಣೆ ಮಾಡಿ ಸತ್ಯಾಗ್ರಹವನ್ನಾಚರಿಸಿದರು. ಸಾಧಾರಣ ೩ ಸಾವಿರ ಜನರ ಸಭೆಯು ನೆರೆದಿತ್ತು. ಅವರಿಗಾಗಿ ಕಾದಿದ್ದ ಪೋಲೀಸ್ ಸಬ್‌ಇನ್ಸ್‌ಪೆಕ್ಟರರು ಅವರನ್ನು ಕೂಡಲೇ ಕೈದು ಮಾಡಿರುವರು.

ಸ್ವಾತಂತ್ರ್ಯ ದಿನಾಚರಣೆ:—ಕಾಸರಗೋಡಿನಲ್ಲಿ ಪ್ರಭಾತಫೇರಿ ಧ್ವಜವಂದನೆ ಮತ್ತು ಖಾದಿ ಮಾರಾಟಗಳಿಂದ ಪ್ರಾರಂಭವಾದ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮವು ಕೊನೆಗೊಂಡು ಸಾಯಂಕಾಲ ಐದೂವರೆ ಗಂಟೆಗೆ ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಡಾ॥ ಪಿ. ಯಸ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ಸ್ವಾತಂತ್ರ್ಯ ಪ್ರತಿಜ್ಞೆಯ ವಿವರ ಹೇಳಿದ ನಂತರ ಸಭಿಕರೆಲ್ಲರೂ ಶಿಸ್ತುಪ್ರಕಾರ ಗಂಭೀರವಾಗಿ ನಿಂತುಕೊಂಡು ಸ್ವಾತಂತ್ರ್ಯಪ್ರತಿಜ್ಞೆಯನ್ನು ಸ್ವೀಕರಿಸಿದರು.

ಬದಿಯಡ್ಕ: ಸ್ವಾತಂತ್ರ್ಯ ದಿನಾಚರಣೆಯು ಪ್ರಭಾತ ಫೇರಿ, ಧ್ವಜವಂದನೆ ಮತ್ತು ಸಾಯಂಕಾಲ ಐದೂವರೆ ಗಂಟೆಗೆ ಸಾರ್ವಜನಿಕ ಸಭೆ ಇವುಗಳಿಂದ ಆಚರಿಸಲ್ಪಟ್ಟಿತು. ಶ್ರೀ. ಭಾಸ್ಕರರಾಯರು ಅಧ್ಯಕ್ಷರಾಗಿದ್ದರು.

ಸಾಲೆತ್ತೂರು ಸ್ವಾತಂತ್ರ್ಯ ದಿನಾಚರಣೆ:—ಇಲ್ಲಿಯ ಬೋರ್ಡ ಎಲಿಮೆಂಟರಿ ಶಾಲೆಯ ಮುಂದೆ ಶ್ರೀ॥ ಕಾಡುಮನೆ ನಾರಾಯಣ ಶೆಟ್ಟರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನ ಆಚರಿಸಲ್ಪಟ್ಟಿತು. ಶ್ರೀ. ಬಿ. ವಿಠಲದಾಸ ಶೆಟ್ಟಿ ಮತ್ತು ಶ್ರೀ. ಎ. ಸಿ. ತಿರುಮಲೇಶ್ವರ ಭಟ್, ಶ್ರೀ. ಶೀನಣ್ಣ ಶೆಟ್ಟಿ, ಇವರು ಇಂದಿನ ರಾಜಕೀಯ ಪರಿಸ್ಥಿತಿಯ ವಿಚಾರ ಭಾಷಣಗೈದರು.

ಸ್ವದೇಶಾಭಿಮಾನಿ
— ಇಂದೇ —
ಚಂದಾದಾರರಾಗಿರಿ

ರುಮಾನಿಯದಲ್ಲಿ ಶಾಂತತೆ
ಕ್ರಾಂತಿಕಾರರ ಮುಂದಾಳುವಿನ ಪಲಾಯನ

ರುಮಾನಿಯದ ದಂಗೆಯು ಸಂಪೂರ್ಣವಾಗಿ ಅಡಗಿಸಲ್ಪಟ್ಟಿರುವದು. ಕ್ರಾಂತಿಕಾರರನ್ನೆಲ್ಲ ಬಂಧಿಸಲು ಸರಕಾರದವರು ಆಜ್ಞೆಯಿತ್ತಿರುವದರಿಂದ ಇದೊಂಬಿಯೂ ಬೇಗನೆ ಅಡಗುತ್ತಿದೆ. ಈಗಿನ ಪರಿಸ್ಥಿತಿ ನೋಡಲಾಗಿ, ಜನರಲ್ ಆ್ಯಂಟೆನಸ್ಕ್ಯೂರವರೇ ಮತ್ತೆ ರುಮಾನಿಯದ ಸರ್ವಾಧಿಕಾರಿಗಳಾದರೆಂದು ಹೇಳಬಹುದೆಂದು ವಾರ್ತೆ.

ಜರ್ಮನ್ ಸೈನಿಕರು ಬುಖಾರೆಸ್ಟಿನಲ್ಲಿ ಮತ್ತು ಅದರ ಹೊರಗೆ ಸುಮಾರು ನಾಲ್ಕು ಮೈಲುಗಳ ವರೆಗೆ ನಿಂತಿದ್ದಾರೆ. ಆದ್ದರಿಂದ ಬೇರೆ ಬೇರೆ ಕಡೆಗಳಿಂದ ಕ್ರಾಂತಿಕಾರರು ರಾಜಧಾನಿಯೊಳಕ್ಕೆ ಬರದಂತಾಗಿದೆ.

ಬುಖಾರೆಸ್ಟಿನಲ್ಲಿ ಯಹೂದಿಗಳಿಗೆ ತುಂಬಾ ಹಾನಿಯಾಗಿದೆ.

ಕ್ರಾಂತಿಗಾರರ ಮುಖಂಡನಾದ ಹೋರಿಯೋ ಸೀಮಾ ಎಂಬವನು ಕಣ್ಮರೆಯಾಗಿದ್ದಾನೆ. ಅವನನ್ನು ಹಿಡಿದುಕೊಂಡು ಬರಬೇಕೆಂದು ಮುಖ್ಯ ಮಂತ್ರಿಗಳು ಆಜ್ಞೆ ಮಾಡಿದ್ದಾರೆ. ಅಯರ್ನ ಗಾರ್ಡ್ ಪಕ್ಷದಿಂದಲೂ ಅವನನ್ನು ಹೊರಗೆ ಹಾಕಲಾಗಿದೆ.

ರಾಜಧಾನಿಯ ರಸ್ತೆಗಳಲ್ಲಿ ಟ್ಯಾಂಕುಗಳೂ ಓಡಾಡುತ್ತಿವೆ.

ತಂತಿ ಮತ್ತು ಟೆಲಿಫೋನ್ ಕಚೇರಿಗಳು ಎಂದಿನಂತೆ ಕೆಲಸಮಾಡುತ್ತಿವೆ. ರೈಲ್ವೆ ಗಾಡಿಗಳೂ ಓಡಾಡುತ್ತಿವೆ. ಆದರೆ ಬುಖಾರೆಸ್ಟ ಮತ್ತು ಕಾನಸ್ಟಾಂಜಾಗಳ ಗಾಡಿಯು ಮಾತ್ರ ಇನ್ನೂ ಬಂದಾಗಿದೆ.

ಇಟಲಿಯಲ್ಲಿ ಜರ್ಮನ್ ಸೈನ್ಯ?

ಅಂಕೋರಕ್ಕೆ ಅನೇಕ ಜರ್ಮನ್ ಸೈನ್ಯಗಳು ನುಗ್ಗಿರುವವೆಂದು ಸುದ್ದಿ. ಆಯಕಟ್ಟಿನ ಸ್ಥಳಗಳಲ್ಲಿ ಜರ್ಮನರೇ ನಿಂತುಕೊಂಡಿದ್ದಾರೆ.

ವೆಂಡಲ್ ವಿಲ್ಕಿ

ಬ್ರಿಟನಿನ ಪರಿಸ್ಥಿತಿಯನ್ನು ನೋಡಬರಲು ಅಮೇರಿಕದಿಂದ ಹೊರಟ ವೆಂಡಲ್ ವಿಲ್ಕಿಯು ಲಂಡನಿಗೆ ತೆರಳಿರುವನು. ಈ ಯುದ್ಧದಲ್ಲಿ ಬ್ರಿಟಷರಿಗೆ ಜಯವು ಖಂಡಿತ ದೊರಕುವುದೆಂದನು.

ಅಮೇರಿಕಕ್ಕೆ ಇನ್ನೆರಡು ದ್ವೀಪಗಳು

ಅಮೇರಿಕಕ್ಕೆ ಅಟ್ಲಾಂಟಿಕ ಸಾಗರದ ಬಳಿಯಲ್ಲಿರುವ ಮಾರ್ಗನ್, ಟಕರ ಎಂಬೆರಡು ದ್ವೀಪಗಳು ೯೯ ವರ್ಷದ ಅವಧಿಗೆ ಬ್ರಿಟನು ಕೊಡುವುದೆಂದು ಸುದ್ದಿ. ಈ ಕುರಿತು ಈಗಾಗಲೇ ಬ್ರಿಟನು ಅಮೆರಿಕಗಳೊಳಗೆ ಒಪ್ಪಂದವೂ ಆಗಿರುವುದಂತೆ.

ಮಿಲಾನಿನಲ್ಲಿ ದಂಗೆ

ಮಿಲಾನಿನಲ್ಲಿ ತೀವ್ರ ದಂಗೆಯು ಪ್ರಾರಂಭವಾಗಿರುವುದೆಂದು ತಿಳಿದಿದೆ. ಜರ್ಮನ್ ಸೈನಿಕರು, ಅಲ್ಲಿನ ಸ್ಟೇಶನುಗಳು, ಪೋಸ್ಟ್ ಆಫೀಸು ಮತ್ತು ದೊಡ್ಡ ದೊಡ್ಡ ಕಾರ್ಖಾನೆಗಳನ್ನೆಲ್ಲಾ ಸ್ವಾಧೀನ ಮಾಡಿಕೊಂಡಿರುವರಂತೆ.

ಅಮೇರಿಕದೊಡನೆ ಒಪ್ಪಂದ ಸಾಧ್ಯವಿಲ್ಲವೆ?

ಜಪಾನೀ ವಿದೇಶ ಮಂತ್ರಿಯ ಹೇಳಿಕೆ ಹಾಗಿದೆ

ಸರ್ವಾಧಿಕಾರಿಗಳಿಗೆ ರುಮೇನಿಯದ ಭರವಸೆ!

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ದಂಗೆ ಕಲಹ!

ಇಟಲಿಯಲ್ಲಿ ಜರ್ಮನ್ ಸೈನ್ಯ?

ಬೋಹೇಮಿಯದಲ್ಲಿ ಕ್ರಾಂತಿ

ಬೋಹೇಮಿಯದಲ್ಲಿ ಸ್ಟಗರ್ ಎಂಬ ಅನಧಿಕೃತ ಪತ್ರಿಕೆಯ ಸಂಬಂಧ ಗೆಸ್ಟಪೊ ದಲದವರು ಸೆರೆಹಿಡಿದ ಕಾರಣ ಇಲ್ಲಿ ದಂಗೆ ಎದ್ದಿರುವುದಾಗಿ ತಿಳಿದಿದೆ.

೧೯ ದಿವಸಗಳ ತನಕ ಯುದ್ಧ

ತೋಬ್ರುಕ ಪತನ

ತೋಬ್ರುಕವು ಸಂಪೂರ್ಣ ಪತನವಾಯಿತೆಂದೂ ಇದರ ಸಲುವಾಗಿ ಇಟಲಿಯನರು ೧೯ ದಿನಗಳ ತನಕ ನಿರಂತರ ಕಾದಾಟ ಮಾಡಬೇಕಾಯಿತೆಂದೂ ಹೇಳಿರುವರು.

ಹೆಲಿಫಾಕ್ಸರು ಅಮೇರಿಕದಲ್ಲಿ

ಬ್ರಿಟನಿನ ರಾಯಭಾರಿಗಳಾಗಿ ಅಮೆರಿಕಕ್ಕೆ ತೆರಳಿದ ಲಾರ್ಡ್ ಹೆಲಿಫಾಕ್ಸರು ಅಮೇರಿಕಕ್ಕೆ ತಲಪಿರುವರು. ಅಲ್ಲಿ ಅವರಿಗೆ ಅಪೂರ್ವ ಸತ್ಕಾರಗಳು ಆಗಿವೆ.

ಗುಪ್ತ ಒಪ್ಪಂದ ಮಾಡಿಲ್ಲ
ಲಾರ್ಡ್ ಹೆಲಿಫಾಕ್ಸರ ಮಾತು

ಯುದ್ಧವಾದ ಮೇಲೆ ಭೂಭಾಗವನ್ನು ಹಂಚಿಕೊಳ್ಳುವುದಾಗಿ ಬ್ರಿಟಿಷ ಸರಕಾರದವರು ಯಾರೊಡನೆಯೂ ಗುಪ್ತ ಒಪ್ಪಂದವನ್ನು ಮಾಡಿಕೊಂಡಿಲ್ಲವೆಂದು ಅಮೇರಿಕದಲ್ಲಿ ಹೆಲಿಫಾಕ್ಸರು ಹೇಳಿದರು.

ಅಬಿಸೀನಿಯಕ್ಕೆ ಹಬಸಿ ಚಕ್ರವರ್ತಿ
ಇಟಲಿಯ ಉಚ್ಚಾಟನೆಯೆ?

ಹಬಸಿ ಚಕ್ರವರ್ತಿಯಾದ ಹೈಲ್ ಸೆಲ್ಲಾಸಿಯು ಅಬಿಸೀನಿಯದೊಳಗೆ ತಿರಿಗಿ ಪ್ರವೇಶಮಾಡಿರುವನೆಂದು ತಿಳಿದಿದೆ. ಅವರು ಗಡಿನಾಡಿಗೆ ಕಾಲಿಟ್ಟ ಕೂಡಲೇ ಇಬ್ಬರು ಮಕ್ಕಳೂ ಇತರ ಪ್ರಮುಖರೂ ಭೇಟಿಯಾದರಂತೆ. ಅವರನ್ನು ಧರ್ಮಾಧಿಕಾರಿಗಳು ಆಶೀರ್ವದಿಸಿದರಂತೆ.

ಸರ್ವಾಧಿಕಾರಿಗಳಿಗೆ ರುಮೇನಿಯದ ಬೆಂಬಲ

ರುಮೇನಿಯದ ಪ್ರಧಾನ ಮಂತ್ರಿ ಏಂಟೆನಸ್ಕ್ಯೂ ಇವರು ತನ್ನ ಹೊಸ ಮಂತ್ರಿಮಂಡಳದಲ್ಲಿ ಒಂದು ಭಾಷಣವಿತ್ತು, ಸರ್ವಾಧಿಕಾರಿಗಳಿಬ್ಬರನ್ನೂ ಕೊಂಡಾಡಿ, ರುಮೇನಿಯವು ಅವರಿಗೆ ಬೆಂಬಲ ನಿಲ್ಲಬೇಕೆಂದೂ ತಮ್ಮ ಉದ್ಧಾರವು ಅವರಿಂದಲೇ ಆಗಬೇಕೆಂದೂ ಹೇಳಿದರು.

ಜಪಾನಿನ ಧ್ಯೇಯ

ಜಪಾನು ಇಂದು ಹೆಚ್ಚು ಹೆಚ್ಚಾಗಿ ಉದ್ವೇಗವನ್ನು ತೋರಿಸುತ್ತಿದೆ. ಅಮೇರಿಕವು ತನ್ನ ಧೋರಣವನ್ನು ಬದಲಾಯಿಸದ ವಿನಾ ತಾನು ಅದರೊಡನೆ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಿಲ್ಲವೆಂದು ಜಪಾನಿನ ಮುಖ್ಯ ಮಂತ್ರಿ ಮಟ್ಸುವೋಕಾರವರು ಇತ್ತೀಚೆಗೆ ಹೇಳಿದರು. ಅವರು ತಮ್ಮ ಮಾತಿನಲ್ಲಿ ಅಮೇರಿಕದ ವಿದೇಶ ಮಂತ್ರಿಗಳಾದ ಕಾರ್ಡೆಲ್ ಹಲ್ಲರಲ್ಲಿ ಜಪಾನಿನ ಕುರಿತು ಹೇಳಿದ ಸಂಗತಿಗಳನ್ನು ಕಟುತರವಾಗಿ ಟೀಕಿಸಿದರು.

'ಪೂರ್ವ ಏಶಿಯದಲ್ಲಿ ಒಂದು ವ್ಯವಸ್ಥೆಯ ಹೊಸ ರಾಜ್ಯವನ್ನು ಸ್ಥಾಪಿಸುವುದು ನಮ್ಮ ಧ್ಯೇಯವಾಗಿದೆ'ಯೆಂಬುದನ್ನು ಅವರು ಈ ಸಲದ ಭಾಷಣದಲ್ಲಿಯೂ ಮತ್ತೆ ಸಾರಿ ಹೇಳಿದರು. ಇದು ಕೆಟ್ಟ ಆಶೆಯೆಂದು ಕಾರ್ಡೆಲ್ ಹಲ್ಲರು ಹೇಳಿರುವುದನ್ನು ಮಟ್ಸುವೋಕರು ಅಲ್ಲಗಳೆದಿರುವರು. ಪಶ್ಚಿಮಾರ್ಧ ಗೋಲದಲ್ಲಿ ತನ್ನ ಪ್ರಭುತ್ವ ನಡೆಸುವ ಅಮೇರಿಕವು ಪೂರ್ವ ಏಶಿಯದ ಸಂಗತಿಗಳ ಕುರಿತು ಕೈಹಾಕಬಾರದೆಂದು ಎಚ್ಚರಿಸಿರುವರು. ಪೂರ್ವ ಏಶಿಯದಲ್ಲಿ ಜಪಾನೇ ಪ್ರಬಲ ರಾಷ್ಟ್ರವೆಂದೂ, ಅದಕ್ಕೇ ಇಲ್ಲಿ ಅಧಿಕಾರ ನಡೆಸಲು ಹಕ್ಕಿದೆಯೆಂದೂ ಹೇಳಿದರು. ಕೊನೆಗೆ ಅವರು ಹೇಳಿದ್ದೆಂದರೆ, ಮಾನವ ಜನಾಂಗದ ಹಿತದ ಸಲುವಾಗಿಯೇ ಜಪಾನು ಪಶ್ಚಿಮ ಪೆಸಿಫಿಕಿನಲ್ಲಿ ತನ್ನ ಅಧಿಕಾರವನ್ನು ನಡೆಸಬೇಕಾಗಿದೆ ಎಂದು.

ಜಪಾನಿನ ಧ್ಯೇಯಗಳು ಇಲ್ಲಿ ಸ್ಪಷ್ಟವಾಗುತ್ತಾ ಬರುತ್ತದೆ. ಪೂರ್ವ ಪ್ರಾಂತ್ಯದಲ್ಲಿ ತನ್ನ ಪ್ರಾಬಲ್ಯ ಅಧಿಕಾರಕ್ಕೆ ಯಾರೂ ಆತಂಕ ಬರಬಾರದು ಎಂಬುದು ಅದರ ಅಭಿಪ್ರಾಯವಾಗಿದೆ. ಜಗತ್ತನ್ನು ಆವರಿಸುವ ಸಾಮ್ರಾಜ್ಯಶಾಹೀ ಬುದ್ಧಿಯು ಜಪಾನಿನದಾಗಿದೆಯೆಂದು ನಾವು ಇದರಿಂದ ಸ್ಪಷ್ಟವಾಗಿ ತಿಳಕೊಳ್ಳಬಹುದು.

ಸಯಾಮು ಯುದ್ಧ ನಿಂತಿತು
ಇಂಡೋ ಚೀನದೊಡನೆ ಯುದ್ಧ

ಸಯಾಮು ಮತ್ತು ಇಂಡೋ ಚೀನಗಳ ನಡುವೆ ನಡೆಯುತ್ತಿದ್ದ ಯುದ್ಧವು ನಿಂತಿತೆಂದು ಬ್ಯಾಂಕಾಗದಿಂದ ಜರ್ಮನ್ ನ್ಯೂಸ್ ಏಜನ್ಸಿಗೆ ಸುದ್ದಿ ಬಂದಿದೆ. ಒಪ್ಪಂದದ ವಿವರಗಳು ಸಿದ್ಧವಾಗುತ್ತಿದ್ದು ಅದಕ್ಕೆ ಬೇಗನೆ ಆಗಬಹುದೆಂದು ಊಹಿಸಲಾಗಿದೆ.

ಹಿಟ್ಲರನಿಗೆ ಟುನಿಸಿಯಾ ಬೇಕೆ?
ಉತ್ತರ ಆಫ್ರಿಕದಲ್ಲಿ ಯುದ್ಧ ಹೂಡಲು
ಆಧಾರವಿಲ್ಲದ ಸುದ್ದಿ

ಉತ್ತರ ಆಫ್ರಿಕದಲ್ಲಿ ಹೋರಾಟ ಹೂಡಲು ಟುನಿಶಿಯಾ ಪ್ರಾಂತವನ್ನು ತನಗೆ ಕೊಡಬೇಕೆಂದು ಹಿಟ್ಲರನು ಪಿಟೇನನಿಗೆ ಕೇಳಿದನೆಂದು ತಿಳಿದಿದೆ. ಲಂಡನ ರಾಜಕೀಯ ಜನರಿಗೆ ಇದರ ಬಗ್ಗೆ ಏನೂ ಗೊತ್ತಿಲ್ಲವಂತೆ. ಈ ಸುದ್ದಿಯು ಇನ್ನೂ ನಿರಾಧಾರವಿದ್ದು ರಾಯಟರ ರಾಜಕೀಯ ಸುದ್ದಿಗಾರನು ಈ ರೀತಿ ತಿಳಿಸುತ್ತಾನೆ. 'ಹಿಟ್ಲರನು ಫ್ರಾನ್ಸಿಗೆ ಹಾಗೆ ಬೇಡಿದನು, ಹೀಗೆ ಬೇಡಿದನು,' ಎಂದು ಅನೇಕ ಬೇಡಿಕೆಗಳು ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿವೆ. ಆದರೆ ಇವು ಸಾಧಾರವೆಂಬುದು ಎಂದೂ ತಿಳಿದೇ ಇಲ್ಲ. ಭೂಮಧ್ಯ ಸಮುದ್ರವನ್ನು ದಾಟ ಟುನಿಶಿಯದ ಸುಪ್ರಸಿದ್ಧವಾದ ಬಂದರವಾದ ಬಿಝರ್ಟಾ ಎಂಬಲ್ಲಿ ಇಳಿಯಲು ಜರ್ಮನರ ಎರಡು ಡಿವಿಜನ್ನುಗಳು ಇಟಲಿಯಲ್ಲಿ ಸಿದ್ಧವಾಗಿ ನಿಂತಿರುವವೆಂದೂ ಸುದ್ದಿ ಬಂದಿದೆ. ಇದಕ್ಕೂ ಆಧಾರಗಳಿಲ್ಲ.

ಅಮೇರಿಕಕ್ಕೆ ಚಿಂತೆಯೇ?

ರಶಿಯವು ಅಮೇರಿಕದಲ್ಲಿ ಯುದ್ಧಾಸ್ತ್ರಗಳನ್ನು ಕೊಂಡು ಅವುಗಳನ್ನು ಜರ್ಮನಿಗೆ ಕಳಿಸಿದರೆ ಏನು ಮಾಡಬೇಕು ಎಂದು ಅಮೇರಿಕನ್ ಸರಕಾರವು ಚಿಂತಿಸುತ್ತಿರುವದಂತೆ. ಈ ಬಗ್ಗೆ ಇನ್ನೂ ನಿರ್ಧಾರವಾಗಿಲ್ಲ.

ಸ್ಪೈನ್ ಬ್ರಿಟನ್, ಸ್ಪೈನ್-ಜರ್ಮನಿ ಒಪ್ಪಂದಗಳು

ಸ್ಪೈನ್ ಬ್ರಿಟನುಗಳ ಆರ್ಥಿಕ ಒಪ್ಪಂದಕ್ಕೆ ಸಹಿಯಾಗಿದ್ದು ಆ ಪ್ರಕಾರ ಸ್ಪೈನು ಕಾನಡಾ ದೇಶದ ಗೋದಿಯನ್ನು ಒದಗಿಸಲು ಬ್ರಿಟನ್ನವು ಒಪ್ಪಿರುವುದಂತೆ.

ಇದೇ ರೀತಿ ಸ್ಪೈನವು ಜರ್ಮನಿಯೊಡನೆಯೂ ಆರ್ಥಿಕ ಒಪ್ಪಂದ ಮಾಡಿಕೊಂಡಿದ್ದು, ಜರ್ಮನಿಯು ಸುಮಾರು ೩೦ ಲಕ್ಷ ಮಾರ್ಕುಗಳನ್ನು ಬೆಲೆಬಾಳುವ ಕಾಗದವನ್ನು ಸ್ಪೈನಿಗೆ ಒದಗಿಸುವುದಂತೆ. ಆದರೆ ಸ್ಪೈನಿನಿಂದ ಜರ್ಮನಿಯು ಏನು ಪಡೆಯುವುದೆಂಬುದು ಮಾತ್ರ ಗೊತ್ತಿಲ್ಲ.

ಪಿಟೇನ ಲಾವಾಲರ ನಡುವೆ ಸಂಧಾನ

ಪಿಟೇನ ಮಂತ್ರಿಮಂಡಲವು ಸಭೆಗೂಡಿ ಜರ್ಮನ ಸರಕಾರದಿಂದ ಬಂದ ಪತ್ರವನ್ನು ಕುರಿತು ಮಹತ್ವದ ಚರ್ಚೆಯಾಯಿತು. ಆಗ ಲಾವಾಲರೂ ಹಾಜರಿದ್ದರು. ಅಲ್ಲಿ ನಡೆದ ಮಾತುಕತೆಗಳಿಂದ ಪಿಟೇನ ಲಾವಾಲರಲ್ಲಿದ್ದ ತಪ್ಪು ತಿಳುವಳಿಕೆಗಳೆಲ್ಲ ದೂರಾದವಂತೆ.

ಒಪ್ಪಂದಕ್ಕೆ ಇಟಲಿಯ ಸಿದ್ಧತೆಯೆ!

ಇಟಲಿಗೆ ಎಲ್ಲ ರಣಭೂಮಿಗಳಲ್ಲಿಯೂ ಮೇಲಿಂದ ಮೇಲೆ ಸೋಲುಗಳಾಗುತ್ತಿರುವದರಿಂದ ಇಟಲಿಯು ಸದ್ಯಕ್ಕೆ ಒಪ್ಪಂದ ಮಾಡಿಕೊಳ್ಳುವದೇ ಲೇಸೆಂದು ಫ್ಯಾಸಿಸ್ಟ ಗ್ರ್ಯಾಂಡ ಕೌನ್ಸಿಲದಲ್ಲಿ ಅನೇಕ ಜನರ ಅಭಿಪ್ರಾಯವಿರುವದಂತೆ. ಮುಸೊಲಿನಿಯು ಮಾತ್ರ ಇದಕ್ಕೆ ವಿರುದ್ಧವಂತೆ. ಆದರೆ ಅವನ ಮಾತು ನಡೆಯುತ್ತಿಲ್ಲ; ಜನರು ಅವನಲ್ಲಿ ವಿಶ್ವಾಸವಿಡುತ್ತಿಲ್ಲ.

[೧ನೆಯ ಪುಟವನ್ನು ನೋಡಿರಿ]

ಬೋಸರು ಎಲ್ಲಿ ಹೋದರು?

ದೇಶ ಸರ್ವತ್ರ ಕಳವಳ!

ಬೋಸರು ಹಿಮಾಲಯಕ್ಕೆ ಹೋಗಿರಬಹುದೆ?

ಪಾಂಡಿಚೇರಿಯಲ್ಲಿಲ್ಲವಂತೆ

ಸುಭಾಸಬೋಸರು ಶಾರ್ದೂಲಸಿಂಗರು ಹೇಳಿದಂತೆ ಪಾಂಡಿಚೇರಿಯಲ್ಲಿ ಇಲ್ಲವಾಗಿ ಅಲ್ಲಿನ ಆಶ್ರಮವಾಸಿಗಳೊಬ್ಬರು ಕೊಟ್ಟ ಶಂಕೆಗೆ ಉತ್ತರ ಬರೆದಿರುವರು. ಆದಾಗ ಅವರು ಕೈಲಾಸ ಶಿಖರಕ್ಕೆ ತೆರಳಿರಬಹುದೇ ಎಂದು ಊಹಿಸಲಾಗಿದೆ.

ಪೋಲೀಸರು ಬೋಸರ ಮನೆಯ ಜಪ್ತಿ ಮಾಡಿದರು. ಮನೆಯವರ ನೌಕರರ ಹೇಳಿಕೆಗಳನ್ನು ಬರೆಕೊಂಡರು.

"ಇದು ನನ್ನ ಕೊನೆಯ ದರ್ಶನ"

ಬೋಸರು ತಾ. ೧೬ರಂದು ತಮ್ಮ ಬಂಧುಗಳನ್ನು ಮನೆಗೆ ಕರೆಸಿ ಮಾತನಾಡುತ್ತಾ 'ಇದು ನನ್ನ ಕೊನೆಯ ದರ್ಶನವಾಗಬಹುದು' ಎಂದು ಕೊನೆಗೆ ಹೇಳಿದರಂತೆ. ಅವರು ಹೀಗೇಕೆಂದು ಕೇಳಲು ಬೋಸರು ಉತ್ತರಕೊಡದೆ, ಎಲ್ಲರೂ ಶಿಸ್ತಿನಿಂದ ನಡೆದುಕೊಳ್ಳಿರಿ ಎಂದರಂತೆ.

ಅಖಿಲಭಾರತದಲ್ಲಿ ಸ್ವಾತಂತ್ರ್ಯ ದಿನ

ಈ ಸಲದ ಸ್ವಾತಂತ್ರ್ಯ ದಿನಾಚರಣೆಯು ಸಮಗ್ರಭಾರತದಲ್ಲಿ ಅತ್ಯಂತ ಯಶಸ್ವಿಯಾಗಿ ನೆರವೇರಿತು. ನಗರ ನಗರಗಳಲ್ಲಿ ಮಾತ್ರವಲ್ಲದೆ ಹಳ್ಳಿಮೂಲೆಗಳಲ್ಲಿ ಜನರು ನೆರೆದು ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಂಡರು. ಗಾಂಧಿಜಿಯವರು ಈ ಸಲದ ಸ್ವಾತಂತ್ರ್ಯ ಪ್ರತಿಜ್ಞೆಗೆ ವಿಶೇಷ ಮಹತ್ವ ಕೊಟ್ಟಿರುತ್ತಾರೆ. ರಚನಾತ್ಮಕ ಕಾರ್ಯದಲ್ಲಿ ಅಚಲ ವಿಶ್ವಾಸ ಮತ್ತು ಅಹಿಂಸಾ ಪಾಲನೆಯಲ್ಲಿ ಶ್ರದ್ಧೆಯು ಈ ಸಲ ಒತ್ತಿ ಹೇಳಲಾಗಿದೆ. ಗಾಂಧಿಜಿ ಇದರಿಂದ ತನ್ನ ಸತ್ಯಾಗ್ರಹೀ ಸೈನ್ಯವನ್ನು ಬಲಪಡಿಸಿಕೊಂಡರು.

ಸ್ವಾತಂತ್ರ್ಯ ದಿನ ಮಹಾತ್ಮರ ಉಪವಾಸ

ಕಳೆದ ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ಗಾಂಧಿಜಿ ಒಂದು ದಿವಸದ ಉಪವಾಸಮಾಡಿರುವುದಾಗಿ ತಿಳಿದಿದೆ. ಅವರೊಡನೆ ಇನ್ನೂ ಅನೇಕರು ಆಶ್ರಮವಾಸಿಗಳು ಸಹಕರಿಸಿ ಉಪವಾಸ ಮಾಡಿರುವರಂತೆ.

ದಿವಾನ್ ಬಹದ್ದೂರ್ ಪದವಿಯ ತಿರಸ್ಕಾರ

ಗಾಂಧೀ ಸೇವೆ ಮಾಡುವೆನೆಂದು ಗವರ್ನರರಿಗೆ ಪತ್ರ!

ದೇಶದಲ್ಲೆಲ್ಲಿಯೂ ಸ್ವಾತಂತ್ರ್ಯ ದಿನಾಚರಣೆ

ಸೂಚನೆಯನ್ನು ಸ್ವತಂತ್ರ ಸದಸ್ಯರಾದ ಮೌಲಾನಾ ಅಬ್ದುಲ್ ರಶೀದ ಚೌಧರಿಯವರು ಕೇಂದ್ರ ಅಸೆಂಬ್ಲಿಯ ಬಜೆಟ್ ಅಧಿವೇಶನದಲ್ಲಿ ಚರ್ಚಿಸಲು ನೋಟೀಸು ಕೊಟ್ಟಿರುವರು.

ಸಿ. ಪಿ. ರಾಜ್ಯದಲ್ಲಿ ಸ್ವಾತಂತ್ರ್ಯ ಪ್ರತಿಜ್ಞೆಗೆ ತಡೆ!

"ತ್ರಾವಂಕೋರ್ ಸಂಸ್ಥಾನವು ಸಾರ್ವಭೌಮ ಸರಕಾರದೊಡನೆ ಒಪ್ಪಂದ ಮಾಡಿಕೊಂಡಿರುವುದರಿಂದ, ಇಲ್ಲಿ ಸ್ವಾತಂತ್ರ್ಯ ಪ್ರತಿಜ್ಞೆ ಮಾಡಲು ಅವಕಾಶ ಕೊಡುವದಿಲ್ಲ. ಒಂದು ವೇಳೆ ಯಾರಾದರೂ ಮಾಡಿದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವದು" ಎಂದು ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ಅಸೆಂಬ್ಲಿಯಲ್ಲಿ ಹೇಳಿದರು.

ಜನಗಣನೆಯ ವಾರ

ಫೆಬ್ರವರಿ ಮೊದಲನೇ ವಾರವನ್ನು ಜನಗಣನೆಯ ವಾರವನ್ನಾಗಿ ಆಚರಿಸಬೇಕೆಂದು ಹಿಂದು ಮಹಾಸಭೆಯ ಅಧ್ಯಕ್ಷರಾದ ಬ್ಯಾ. ಸಾವರಕರರು ಪ್ರಕಟಣೆ ಹೊರಡಿಸಿರುವರು. ಆ ವಾರದಲ್ಲಿ ಸಭೆಗಳನ್ನು ಏರ್ಪಡಿಸಿ ಜನಗಣನೆಯ ಮಹತ್ವವನ್ನು ಜನರಿಗೆ ತಿಳಿಸಿಕೊಡಬೇಕು. ಜನಗಣನೆ ಅಧಿಕಾರಿಗಳೊಡನೆ ಸಹಕರಿಸಬೇಕು. ಮತ್ತು ಟ್ರೈಬಲ್ ಹಾಗೂ ಅಸ್ಪೃಶ್ಯರನ್ನು ಕಂಡು ತಾವು ಹಿಂದುಗಳೆಂದು ನಮೂದಿಸುವಂತೆ ಅವರಿಗೆ ಹೇಳಬೇಕು ಎಂದು ಸೂಚನೆಗಳನ್ನು ಕ್ರಮಗಳನ್ನು ಹಾಕಿಕೊಟ್ಟಿರುವರು.

ಭಾರತದ ರಾಜಕೀಯ ಪರಿಸ್ಥಿತಿಯಲ್ಲಿ ಏನೊಂದೂ ಬದಲಾವಣೆಯಿಲ್ಲ?

ಎಮರಿ ಹೇಳಿಕೆ— ಕಾಮನ್ಸಿನಲ್ಲಿ ಪ್ರಶ್ನೆ

ವೈಸರಾಯ್ ಮತ್ತು ಭಾರತೀಯ ರಾಜಕೀಯ ಮುಖಂಡರುಗಳ ಮಾತುಕತೆಗಳ ಮುನ್ನಡೆಯ ವಿಷಯದಲ್ಲಿ ಏನಾದರೂ ಹೇಳಿಕೆಯನ್ನು ಕೊಡುವಿರಾ ಎಂದು ಇಂಡಿಯಾ ಸ್ಟೇಟ್ ಸೆಕ್ರೆಟರಿ ಕರ್ನಲ್ ಎಲ್. ಎಸ್. ಎಮರಿಯವರನ್ನು ಕಾಮನ್ಸಿನಲ್ಲಿ ಪ್ರಶ್ನಿಸಲಾಯಿತು.

ಅದಕ್ಕೆ ಶ್ರೀ ಎಮರಿಯವರು ಉತ್ತರ ಕೊಡುತ್ತಾ, 'ಮಾತುಕತೆಗಳು ಆ ಮೇಲೆ ಏನೂ ನಡೆಯಲಿಲ್ಲ. ಕಳೆದ ನವೆಂಬರ್ ೨೦ರಲ್ಲಿ ನಾನು ಹೇಳಿಕೆ ಕೊಟ್ಟಾಗಿನಿಂದ ಅಲ್ಲಿನ ರಾಜಕೀಯ ಪರಿಸ್ಥಿತಿಯಲ್ಲಿ ಏನೊಂದೂ ಬದಲಾವಣೆಯಾಗಿಲ್ಲ' ಎಂದು ಹೇಳಿದರು.

ಇನ್ನೊಂದು ಪ್ರಶ್ನೆಗೆ ಉತ್ತರವಾಗಿ ಶ್ರೀ ಎಮರಿಯವರು ಡಿಲ್ಲಿಯಲ್ಲಿ ನಡೆವ ಸಾಮ್ರಾಜ್ಯ ಸಮ್ಮೇಳನದಲ್ಲಾದ ನಿರ್ಣಯಗಳನ್ನು ಕುರಿತು ಬ್ರಿಟಿಷ್ ಸರಕಾರವು ಇತರ ಸಂಬಂಧಪಟ್ಟ ಸರಕಾರಗಳೊಡನೆ ಸಮಾಲೋಚಿಸುತ್ತದೆ. ಆದರೆ ಆ ಬಗ್ಗೆ ವಿವರವಾದ ಹೇಳಿಕೆಯನ್ನು ಕೊಡುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ' ಎಂದು ಹೇಳಿದರು.

ಮದ್ರಾಸ್ ಪ್ರಾಂತಿಕ ಯುದ್ಧ ಸಮಿತಿ ಸಭೆ

ಕಾಂಗ್ರೆಸ್ ಪ್ರಚಾರ ತಡೆಯಲು ಗವರ್ನರರ ವಿನಂತಿ

ಗವರ್ನರರ ಅಧ್ಯಕ್ಷತೆಯಲ್ಲಿ ಪ್ರಾಂತಿಕ ಯುದ್ಧ ಸಮಿತಿಯ ಸಭೆಸೇರಿ ಉಪಸಮಿತಿಗಳ ಕಾರ್ಯಪರಿಶೀಲನೆಯಾಗಿ ಮದ್ರಾಸ್ ಪ್ರಾಂತದ ಜನರು ಸ್ವಯಂಪ್ರೇರಣೆಯಿಂದ ೨೦॥ ಲಕ್ಷ ರೂ. ಯುದ್ಧ ಕಾಣಿಕೆ ಕೊಟ್ಟಿರುವರೆಂದು ಹೇಳಲಾಯಿತು. ಇದರಿಂದ ೪॥ ಸ್ಪಿಟ್‌ಫೈರ್ ವಿಮಾನಗಳನ್ನು ಕೊಳ್ಳಲಾಗಿದೆಯೆಂದೂ ಆ ವಿಮಾನಗಳಿಗೆ ಪ್ರತ್ಯೇಕವಾಗಿ ಜಿಲ್ಲೆಗಳ ಹೆಸರಿಡಲಾಗಿದೆಯೆಂದೂ ವರದಿಯಲ್ಲಿ ಹೇಳಲ್ಪಟ್ಟಿತು. ಮದ್ರಾಸಿನಲ್ಲಿ ಶೇಖರಿಸಿದ ಬಹ್ವಂಶ ಹಣವನ್ನು ವಿಮಾನಗಳನ್ನು ಕೊಂಡುಕೊಳ್ಳಲು ಕೊಡಲಾಗಿದೆಯಂತೆ.

ಗವರ್ನರರು ತಮ್ಮ ಭಾಷಣದಲ್ಲಿ ಮದ್ರಾಸ್ ಪ್ರಾಂತದ ಜನರು ಬ್ರಿಟನ್ನರ ವಿಜಯಕ್ಕಾಗಿ ತೋರಿಸುತ್ತಿರುವ ಉತ್ಸಾಹವನ್ನು ವರ್ಣಿಸಿ, ಕಾಂಗ್ರೆಸ್ ಪ್ರಚಾರವನ್ನು ತಡೆಯಲು ಎಲ್ಲಾ ರೀತಿಯಿಂದಲೂ ಪ್ರಯತ್ನಿಸಬೇಕೆಂದೂ ಜನರಿಗೆ ನಿಜಪರಿಸ್ಥಿತಿಯನ್ನು ತಿಳಿಸಿಕೊಡಬೇಕೆಂದೂ ಹೇಳಿದರು.

(10ನೆಯ ಪುಟದಿಂದ ಮುಂದುವರಿದುದು)

ಭೂಮಧ್ಯ ಸಮುದ್ರದಲ್ಲಿ ಯುದ್ಧವೇ?

ಅಡೋಲ್ಫ್ ಹಿಟ್ಲರನಿಗೆ ಇದ್ದ ತೊಡಕುಗಳು ಒಂದೊಂದಾಗಿ ಬಿಡಹತ್ತಿದಂತೆ ತೋರುತ್ತಿದೆ. ಸಿಸಿಲೀನ ಮತ್ತು ಲಾವಾಲರಲ್ಲಿ ಒಮ್ಮತವನ್ನುಂಟುಮಾಡಿ ಸ್ಪೇನಿನ ಸಹಕಾರ ಹೊಂದುವಲ್ಲಿ ಯಶಸ್ವಿಯಾಗಿರುವನು. ಭೂಮಧ್ಯಸಮುದ್ರದಲ್ಲಿ ಜನರಲ್ ಗೋರಿಂಗನ ವಿಮಾನದಳವು ತುಂಬ ಸಾಮರ್ಥ್ಯದಿಂದ ಕಾರ್ಯಮಾಡುತ್ತಿರುವುದರಿಂದ ಭೂಮಧ್ಯ ಸಮುದ್ರದ ಚಟುವಟಿಕೆಗಳ ಕಡೆಗೆ ಬ್ರಿಟನರು ತಮ್ಮ

ಲಕ್ಷಕೊಡಬೇಕಾಗಿದೆ. ಹಿಟ್ಲರ ಮುಸಲಿನಿಗಳು ಗುಪ್ತಸ್ಥಳದಲ್ಲಿ ಭೆಟ್ಟಿಯಾಗಿ ಒಮ್ಮತಕ್ಕೆ ಬಂದಿರುವರೆಂದು ಸುದ್ದಿ ಇದೆ. ಆದರೆ ಈ ಭೇಟಿಯಲ್ಲಾದ ನಿಶ್ಚಿತ ಸಂಗತಿಗಳು ಇನ್ನು ೨—೩ ದಿನಗಳಲ್ಲಿ ಹಿಟ್ಲರನ ಚಲನವಲನದಿಂದ ತಿಳಿದುಬರುತ್ತವೆ.

ಜರ್ಮನಿಯ ಕೆಲವು ವಿಮಾನದಳಗಳು ಸಿಸಿಲಿ ದ್ವೀಪದಲ್ಲಿ ಬಂದಿಳಿದಿವೆಯಂತೆ.

ಅಮೇರಿಕೆಯ ಮೇಲೆ ದಾಳಿ ಅಸಾಧ್ಯ

ಅಮೇರಿಕೆಯ ಸುಪ್ರಸಿದ್ಧ ವೈಮಾನಿಕನಾದ ಕರ್ನಲ್ ಲಿಂಡಬರ್ಗನು ಇಂದು ಪ್ರತಿನಿಧಿ ಸಭೆಯ ವಿದೇಶ ವಿಚಾರ ಕಮಿಟಿಯಲ್ಲಿ ಮಾತನಾಡುತ್ತ ಸಮುದ್ರಮಾರ್ಗವಾಗಿ ಸೈನ್ಯವನ್ನು ತಂದು ಅಮೇರಿಕದ ಮೇಲೆ ದಾಳಿಮಾಡಲಾಗುವದೆಂಬ ವಿಚಾರವು ಅಸಾಧ್ಯವಾದುದೆಂದು ಹೇಳಿದರು. ಆದರೆ ವೈಮಾನಿಕ ಹಲ್ಲೆಯಿಂದ ಹಾನಿಯಾಗಬಹುದೆಂದು ಅವರು ಅಭಿಪ್ರಾಯ ಪಟ್ಟರು.

'ಗಂಡಾಂತರವುಂಟು'

ಅಮೇರಿಕನ್ ಮಂತ್ರಿಯ ಭವಿಷ್ಯ

ಇನ್ನು ೨-೩ ತಿಂಗಳಲ್ಲಿ ಭಯಂಕರ ಗಂಡಾಂತರ ಪ್ರಾಪ್ತವಾಗುವದೆಂದು ನನಗನಿಸುತ್ತದೆ' ಎಂದು ಅಮೇರಿಕನ್ ಮುಖ್ಯಮಂತ್ರಿ ಸ್ಟಿಮ್ಸನ್ನರು ಪತ್ರಿಕೋದ್ಯೋಗಿಗಳಿಗೆ ಹೇಳಿದರು.

ದಿವಾನ್ ಬಹದ್ದೂರ್—ನನಗೆ ಬೇಡ

ನಾನು ಗಾಂಧಿ ಸೇವೆ ಮಾಡುತ್ತೇನೆ

ಗವರ್ನರರಿಗೆ ವೀರರಾಘವಾಚಾರ್ಯರ ಪತ್ರ

ಚಿತ್ತೂರು ಜಿಲ್ಲಾಬೋರ್ಡಿನ ನಿವೃತ್ತ ಇಂಜಿನಿಯರಾದ ಶ್ರೀ ಟಿ. ಕೆ. ಟಿ. ವೀರರಾಘವಾಚಾರ್ಯರು ತಮಗೆ ಸರಕಾರವು ಒಪ್ಪಿಸಿದ ದಿವಾನ್ ಬಹದ್ದೂರ್ ಬಿರುದನ್ನು ಹಿಂದಕ್ಕೆ ಕಳುಹಿಸುತ್ತಾ, ಭಾರತದ ಜನತಾಭಿಪ್ರಾಯದ ವಿರುದ್ಧ ಬ್ರಿಟನು ಕೆರೆದ ಧೋರಣೆಯನ್ನು ನಿಷೇಧಿಸಿ ತಾನು ಮಹಾತ್ಮರ ಸೇವೆಗೆ ಸಿದ್ಧನಾಗಿರುವೆನೆಂದು ಅದರಲ್ಲಿ ಬರೆದಿರುವರು.

ಸಾಮಂತ ಸ್ವರಾಜ್ಯ ಕೊಡಿರಿ

ಹಿಂದುಸ್ಥಾನಕ್ಕೆ ಕೂಡಲೇ ಸಾಮಂತ ಸ್ವರಾಜ್ಯ ಕೊಡಬೇಕೆಂಬ ನಿರ್ಣಯದ

NOTICE

On the occasion of His Excellency the Governor's visit to Mangalore on the 2nd and 3rd February 1941, the undersigned earnestly requests the cooperation of the general public.

2. To enable His Excellency to adhere to his programme of visits, the Police on duty have instructions to divert slow moving traffic 15 minutes before His Excellency is expected to pass at any point and fast moving traffic moving in the same direction as His Excellency 5 minutes before he is due to arrive and that moving in the opposite direction 5 minutes before His Excellency is due to arrive. His Excellency would be travelling along the Municipal Office Road, Hazzur road, Light House Hill via Hampankatta and back to the Collector's Office between 8-45 and 9-30 in the morning and his public drive between 4-30 to 5 p. m. will be along the Municipal Office Road, Maidan West, Hampankatta, Balmatta, Kankanady and Falnir roads. His Excellency will be returning to Bunder Siding at about 6 p. m. and will again be attending the entertainment at the Government College at about 9-30 p. m.

It is earnestly requested that on all these occasions the directions of the traffic men may be fully complied with. At the public meeting and at the time of the entertainment at the Government College, arrangements have been made to park owner driven cars fairly close to the place of the meeting and the chauffeurs of the chauffeur driven cars may kindly be directed to follow the directions of the traffic police and get into the car park and remain in their vehicles.

Mangalore, 24—1—1941

[illegible]
Dt. Superintendent of Police, S. K.

ಪುಸ್ತಕಾವಲೋಕನ

*ಅಂದಿನ ಅವ್ವೂರು

— ಎಂ. ಎನ್. ಕಾಮತರ ಪ್ರಶಸ್ತಿ ಪುಸ್ತಕ —

ಆಧುನಿಕ ಕನ್ನಡ ಸಾಹಿತ್ಯದ ಆರಂಭ ಕಾಲದ ಬರೆಹಗಾರರ ಸಾಲಿನಲ್ಲಿ ಹಿರಿಯ ಹೆಸರನ್ನು ಪಡೆದ ದಿವಂಗತ ಎಂ. ಎನ್. ಕಾಮತರ ವಿಷಯವಾಗಿ ಬೇರೆ ಬೇರೆ ಮಹನೀಯರು ಬರೆದ ಹದಿನೆಂಟು ಬರೆಹಗಳ ಮತ್ತು ಕಾಮತರು ಇತ್ತೀಚೆಗೆ ಬರೆದ ಐದು ಸ್ವತಂತ್ರ ಕಥೆಗಳ ಸಂಗ್ರಹವು ಈ ಪುಸ್ತಕ. ಮಂಗಳೂರಲ್ಲಿ ಕನ್ನಡ ಸಾಹಿತ್ಯದ ಕುರಿತು ಉತ್ಸಾಹದಿಂದ ಕೆಲಸಮಾಡುತ್ತಿರುವ 'ಮಿತ್ರಮಂಡಳಿ'ಯವರು ತಮ್ಮ 'ಅಖಿಲ ಸೇವಾ ಗ್ರಂಥಮಾಲೆ'ಯ ಹನ್ನೊಂದನೇ ಕುಸುಮವಾಗಿ ಇದನ್ನು ಪ್ರಕಟಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಇಂದಿನ ಈ ಹೊಸ ರೂಪವನ್ನು ಕೊಡುವಲ್ಲಿ, ಕನ್ನಡದ ಬೆಳವಣಿಗೆಯನ್ನು ಸಾಧಿಸುವ ಯತ್ನದಲ್ಲಿ ಬಹುಮುಖವಾಗಿ ನಿರಂತರ ದುಡಿಯುತ್ತಿದ್ದು ಕೀರ್ತಿಶೇಷರಾದ ಕಾಮತರ ಪ್ರಶಸ್ತಿರೂಪವಾಗಿ 'ಮಂಡಳಿ'ಯವರು ಈ ಪುಸ್ತಕವನ್ನು ಕನ್ನಡಿಗರಿಗೆ ಕೊಟ್ಟಿದ್ದಾರೆ.

ಪುಸ್ತಕದ ಪ್ರಾರಂಭದಲ್ಲಿ ಕಾಮತರ 'ರುಜು' ಸಹಿತವಿರುವ ಅವರ ಹಸ್ತಪ್ರತಿಯ ಕವನವೊಂದನ್ನು ಒದಗಿಸಿ ಪ್ರಶಸ್ತಿಯ ಚೆಲುವನ್ನು ಹೆಚ್ಚಿಸಿದ್ದಾರೆ. ಕಾಮತರ ಪರಿಚಯ ಲೇಖನಗಳು ಹದಿನೆಂಟು ಜನರದಿವೆ. ಮೊದಲ 'ಮುನ್ನುಡಿ' ಕತೆಗಾರ 'ಶ್ರೀನಿವಾಸ'ರದು. ಕಾಮತರ ಕುರಿತು ಬಹಳ ಅಂತಃಕರಣದ ಮಾತುಗಳನ್ನೇ ಬರೆದಿದ್ದಾರೆ. ಒಂಬತ್ತು ಪುಟಗಳ ಅವರ ಲೇಖನವು ವಾಚಕರಿಗೆ ಈ ಪುಸ್ತಕದ ಮಹತ್ವವನ್ನು ಪ್ರಾರಂಭದಲ್ಲಿಯೇ ಮನವಮುಟ್ಟಿಸಿ ಕಾಮತರ ಉನ್ನತ ನೆಲೆಯನ್ನು ತಿಳಿಸುತ್ತದೆ. ಆದರೆ, 'ಶ್ರೀನಿವಾಸ'ರಂತೆ, ಮೈಸೂರಿನ ಹಾಗೂ ಇತರ ಕಡೆಯ ಕನ್ನಡದ ಮಹನೀಯರಿಗೆ ಕಾಮತರ ಪರಿಚಯ, ಇತ್ತೀಚೆಗೆ ಹಾಗೂ ಅವರು ತೀರಿಹೋದ ಮೇಲೆ ಮಾತ್ರ ಆದದ್ದು ಬಹಳ ದೌರ್ಭಾಗ್ಯವೆನಿಸಬೇಕಾಗಿದೆ. 'ಎಸ್. ವಿ.' ಇವರು 'ಕಾಮತರು' ಎಂಬ ಚತುರ್ದಶಪದಿಯ ಚೆನ್ನಾದ ಕವನವೊಂದನ್ನು ಕಟ್ಟಿದ್ದಾರೆ. ಈ ಪುಸ್ತಕದ ಸಂಪಾದಕರಾದ ಶ್ರೀ. ವಾಮನ ಭಟ್ಟರು ತಮ್ಮ 'ಮಾತಿ'ನಲ್ಲಿ, ಕಾಮತರ ಗುಣವಿಶೇಷಗಳನ್ನು ಬಣ್ಣಿಸಿದ್ದಾರೆ. ಈ ಪುಸ್ತಕಪ್ರಕಾಶನದ ವಿವರವೂ ಅದರಲ್ಲಿದೆ. ಶ್ರೀ ಗೋವಿಂದ ಪೈಗಳ 'ನೆನವಿನ ಕಾಣಿಕೆ' ಈ ಪುಸ್ತಕದಲ್ಲಿ ಒಂದು ಬೆಲೆಯುಳ್ಳ ಲೇಖನ. ೧೮೯೭-೯೮ರ ಇಸವಿಗಳಲ್ಲಿ ತಮ್ಮ ಸಹಾಧ್ಯಾಯಿಯಾಗಿದ್ದ, 'ಕೈಕಾಲುಗಳಿಗೆ ಬಳೆ ತೊಟ್ಟು ಸಾಲೆಗೆ ಬರುತ್ತಿದ್ದ ತೆಳುವಾದ ಗಿಡ್ಡ ಹುಡುಗ, ಮುಂಡಪ್ಪರು. ನರಸಿಂಗ ಕಾಮತ'ರ ಬಾಲ್ಯಕಾಲದ ಪರಿಚಯದಿಂದ ಅವರ ನೆನಸಿನ ಕಾಣಿಕೆಯು ಆರಂಭವಾಗಿ, ಮುಂದುವರಿಯುತ್ತಾ ಕಾಮತರ ಕವನ, ಕತೆ, ಜೀವನಗಳನ್ನು ವಿಮರ್ಶಿಸಿ, ಕನ್ನಡ ಸಾಹಿತ್ಯದಲ್ಲಿ ಹೆಸರಾದ ಲೇಖಕರಾಗಿ ಮೆರೆದ ಉದ್ದವಲ್ಲದ ನಿಲುವಿನ, ಕಲೆಯಲ್ಲಿ ನಸು ಬಿಳಿಯ ಉಂಗುರ ಕೂದಲಿನ, ಅಗಲವಾದ ಹಣೆಯ, ಕೊಂಚ ಉಬ್ಬಾದ ಕೆಳರೆಪ್ಪೆಯ, ಅದರಲ್ಲಿ ಹೊಳೆಯುವ ಮಿನುಗುದೃಷ್ಟಿಯ ಎಂ. ಎನ್. ಕಾಮತರ ಈ ಪರಿಚಯ ಚಿತ್ರದಲ್ಲಿ ಅಂತ್ಯವಾಗುತ್ತದೆ; ಬಹಳ ಸ್ವಾರಸ್ಯವಾಗಿದೆ. ಕಾಮತರ ಕತೆಗಾರಿಕೆಯ ವಿಷಯವಾಗಿ ಬರೆಯುತ್ತಾ ಪ್ರಸಿದ್ಧ ವಿಮರ್ಶಕರಾದ ಶ್ರೀ ಪೈಗಳು 'ಸ್ವಾರ್ಥದ ಒಂದು ದೃಷ್ಟಿಯಿಂದ ಹೊರತು ಬೇರೆ ಯಾವ ದೃಷ್ಟಿಯಿಂದ ನೋಡಿದರೂ ಕನ್ನಡ ಕಥೆಗಳಿಗೆ ಮೊತ್ತಮೊದಲಿಗರೆಂದರೆ ಶ್ರೀ. ನಾ. ಶ್ರೀ. ಪಂಜೆ ಮಂಗೇಶರಾಯರಲ್ಲದೆ ಅನ್ಯರಾರೂ ಅಲ್ಲ, ಅವರ ಬೆನ್ನುಹಿಂದೆಯೇ ಬಂದವರು, ನಾನು ಬಲ್ಲಮಟ್ಟಿಗೆ, ಪ್ರಾಯಶಃ ಕಾಮತರೇ' ಎಂಬ ಸಿದ್ಧಾಂತವನ್ನು ಅಧಿಕಾರವಾಣಿಯಿಂದ ಸಾರಿದ್ದಾರೆ. ಶ್ರೀ ಹುರುಳಿ ಭೀಮರಾಯರು, ಕಾಮತರನ್ನು 'ಕರ್ನಾಟಕ ಪತ್ರಿಕಾ ಪ್ರಪಂಚದ ಅಕ್ಷಯಪಾತ್ರೆ' ಎಂದು ತಮ್ಮ ಲೇಖನದಲ್ಲಿ ವರ್ಣಿಸಿದ್ದಾರೆ. ದಕ್ಷಿಣ ಕನ್ನಡದ ಪತ್ರಿಕಾಚಾರ್ಯರಲ್ಲೊಬ್ಬರಾದ ಶ್ರೀ. ರಾಯರು, ತಮ್ಮ ಪತ್ರಿಕಾ ಜೀವನದ ಆರಂಭಕಾಲದಿಂದಲೇ ಸಹೋದ್ಯೋಗಿಗಳಾಗಿದ್ದ, ಅವರ ಕೊನೆಗಾಲದ ತನಕವೂ ಪತ್ರಿಕಾವ್ಯವಸಾಯದಲ್ಲಿಯೂ ಬಹು ರೀತಿಯಿಂದ ದುಡಿದು, ಪತ್ರಿಕಾ ಲೇಖನಕ್ಕೆ ಹಾದಿ ಹಾಕಿಕೊಟ್ಟ ಅವರ ಪುಣ್ಯಸ್ಮರಣೆಯನ್ನು ತಮ್ಮ ಬರವಣಿಗೆಯಲ್ಲಿ ಉತ್ತಮ ರೀತಿಯಿಂದ ಮಾಡಿರುವರು. 'ಮರಣದ ಮುಂದೆ ನಗು' ಎಂಬ ಶ್ರೀ. ಕಾರಂತರ ಲೇಖನದಲ್ಲಿ ಮಿಗಿಲಾದ ಒಂದು ವೈಶಿಷ್ಟ್ಯವಿದೆ. ಕಾಮತರು ತಮ್ಮ ಮಾತು ಬರೆಹಗಳಲ್ಲಿ ಉತ್ತಮ ನಗೆಗಾರರು; ಒಳ್ಳೆಯ ರಸಿಕ ಜೀವಿ. ಆ ನಗೆಗಾರತನ, ಆ ರಸಿಕ ಪ್ರವೃತ್ತಿ, ಮರಣಶಯ್ಯೆಯಲ್ಲಿಯೂ ಅವರನ್ನು ಹೇಗೆ ಉಲ್ಲಾಸವಾಗಿರುವಂತೆ ಮಾಡಿತು ಎಂಬುದನ್ನು ಶ್ರೀ ಕಾರಂತರು ಅವರ ಕೊನೆಗಾಲದ ಸಂದರ್ಶನದ ವಿಷಯವನ್ನು ವರ್ಣಿಸುತ್ತಾ ತಿಳಿಸಿ ವಾಚಕರ ಕಲ್ಪನೆಯ ಕಾಮತರ ಜೀವನಚಿತ್ರಕ್ಕೆ ಒಳ್ಳೆಯ ಬಣ್ಣವನ್ನು ಕೊಟ್ಟಿದ್ದಾರೆ. ಶ್ರೀ. ಡಿ. ಕೆ. ಭಾರದ್ವಾಜರು, ಕಾಮತರು ಜೀವಿಸಿರುವಾಗಲೇ ಬರೆದ ಲೇಖನವೊಂದು ಇದರಲ್ಲಿದೆ. ಅದರಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಪಟ್ಟವು ಅವರಿಗೆ ದೊರಕಬೇಕಾಗಿತ್ತು' ಎಂಬ ಆದರದ ಅಭಿಮಾನದ ಆಶಯವನ್ನು ಹೇಳಿದ್ದರು. 'ಹೀಗೆ ಹಾಡಿದ ಕವಿ ಇಂದಿನ ಸ್ವಾತಂತ್ರ್ಯಯುಗದಲ್ಲಿ ಮದ್ರಾಸಿನ ಮಂತ್ರಿಮಂಡಳದಲ್ಲಿ ಒಬ್ಬನಾಗಿರಬೇಕಿತ್ತು' ಎಂದು ಅವರ ಕುರಿತು ಉದಾತ್ತಾಭಿಮಾನವನ್ನು ತೋರಿಸಿದ್ದರು. ಕಾಮತರ ವಿಷಯವಾಗಿ ಹೊರಗಿನವರು ಮೊದಲೇ ಚೆನ್ನಾಗಿ ತಿಳಿಕೊಂಡಿದ್ದಾರೆ ಎಂಬುದಕ್ಕೆ ಬೆಂಗಳೂರಿನ ಶ್ರೀ. ಭಾರದ್ವಾಜರ ಲೇಖನವೇ ಸಾಕಷ್ಟು ಸಾಕ್ಷಿಯಾಗಿದೆ. ಶ್ರೀ. ಪ. ರಮಾನಂದರು 'ನಮ್ಮನ್ನಗಲಿದ ಕಾಮತರು' ಎಂಬ ಲೇಖನದಲ್ಲಿ ದಕ್ಷಿಣ ಕನ್ನಡಿಗರು ಹಾಗೂ ಕನ್ನಡಿಗರು, ಅವರ ಗೆಳೆಯರು, ಕಾಮತರಂತಹ ರಸಿಕ ಜೀವಿಯನ್ನು ಅಗಲಿ, ಎಷ್ಟು ಬಡವಾಗಿದ್ದಾರೆಯೆಂದು ತಿಳಿಸಿದ್ದಾರೆ. ಶ್ರೀ. ಕುದ್ಪಿ ವಾಸುದೇವ ಶೆಣೈಯವರು ತಮ್ಮ ಚುಟುಕು ಲೇಖನದಲ್ಲಿ ಕಾಮತರ ಪರಿಚಯ ಸರ್ವಸ್ವವನ್ನೂ ಬರೆದಿದ್ದಾರೆ. ಶ್ರೀ. ಜಿ. ಆರ್. ಶೆಣೈಯವರ 'ಕಾಮತರ ರಂಗಭೂಮಿ' ಯೆಂಬ ಲೇಖನವು ಈ ಪುಸ್ತಕದಲ್ಲಿ ಮತ್ತೊಂದು ಮಹತ್ವದ ಲೇಖನ. ಕಾಮತರ ಸಾಹಿತ್ಯಕೃತಿಗಳಲ್ಲಿ ನಾಟಕಗಳು, ಏಕಾಂಕ ನಾಟಕಗಳು ಬಹಳ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ನಾಟಕಗಳನ್ನು ಭಾಷಾಂತರ ಹಾಗೂ ಸ್ವತಂತ್ರವಾಗಿ ಅವರು ಅನೇಕ ಬರೆದಿದ್ದಾರೆ. ಸ್ವತಃ ಅಭಿನಯಗಾರರಾಗಿ, ವಿದ್ಯಾರ್ಥಿಗಳನ್ನು ತರಬೇತಿಮಾಡಿ ಪ್ರಯೋಗಿಸಿ ನೋಡಿದ್ದಾರೆ. ನಾಟಕಗಳಿಗಾಗಿ ಹಾಡುಕಟ್ಟಿ ಹಾಡಿದ್ದಾರೆ, ಹಾಡಿಸಿದ್ದಾರೆ, ಇತ್ತೀಚೆಗೆ ಪ್ರಾಣಿಗಳ ಅಭಿನಯ ಪ್ರದರ್ಶನದ ಹೊಸರೀತಿಯ, ನಾಟಕವನ್ನೂ ಬರೆದಿದ್ದಾರೆ. ಈ ಎಲ್ಲಾ ವಿಷಯಗಳನ್ನು ಅವರ ನಾಟಕ ಲೇಖನದ ವಿಮರ್ಶೆಯೊಡನೆ ಶ್ರೀ. ಶೆಣೈಯವರು ವಿವರಿಸಿರುವರು. 'ಕಾವನ' ಎಂಬವರ 'ಎಮ್ಮೆಯನ್ನ' ಎಂಬೀ ನಾಲ್ಕು ಸಾಲಿನ ಕವಿತೆಯ ಸ್ವಾರಸ್ಯ ನಮಗೆ ಅರ್ಥವಾಗುವುದಿಲ್ಲ. ಮುಂದೆ ಶ್ರೀಗಳಾದ ಎ. ಶ್ರೀನಿವಾಸ ಪೈ, ಎಂ. ಮಾಧವರಾವ್, ಎಂ. ನರಸಿಂಗ ರಾವ್; ಇವರು ಕಾಮತರ ಕುರಿತು ಬರೆದ ಇಂಗ್ಲಿಷ್ ಲೇಖನಗಳಿವೆ. ಶ್ರೀ. ಎಂ. ನರಸಿಂಗರಾಯರ ಲೇಖನದಲ್ಲಿ ಕಾಮತರ ಬರೆಹದ ಸೂಕ್ಷ್ಮ ವಿಮರ್ಶೆಯುಂಟು. ಶ್ರೀ. ಕೆ. ಗೋಪಾಲರಾಯರೂ 'ಕಾಮತರು' ಎಂಬ ಲೇಖನ ಬರೆದಿದ್ದಾರೆ. ಶ್ರೀ. ಎಸ್. ಪಿ. ಭಟ್ಟರು 'ಹಲವು ಮಕ್ಕಳ ತಾಯಿ' ಎಂಬೀ ಲೇಖನದಲ್ಲಿ ಕಾಮತರು ತಮ್ಮಂತಹ ಹಲವು ಕಿರಿಯರಿಗೆ ಮಾರ್ಗದರ್ಶಕರಾಗಿ ಸ್ಫೂರ್ತಿದಾಯಕರಾಗಿದ್ದರೆಂದು ಬಣ್ಣಿಸಿದ್ದಾರೆ. ಕೊನೆಗೆ ಶ್ರೀ ಮುಳಿಯ ತಿಮ್ಮಪ್ಪಯ್ಯನವರು, 'ಮಿತ್ರಮಂಡಳಿ'ಯ ಅಧ್ಯಕ್ಷನ ನೆಲೆಯಲ್ಲಿ 'ಒಂದು ಮಾತು' ಹೇಳಿ ಬಹಳ ಸಂಕೋಚವಾಗಿ ಕಾಮತರ ಕುರಿತು ನಾಲ್ಕು ಪ್ರಶಂಸೆಯ ಮಾತು ಬರೆದಿದ್ದಾರೆ.

ಮುಂದೆ 'ಅವ್ವೂರಿ'ನ ಐದು ಕತೆಗಳಿವೆ. ಎಲ್ಲವೂ ಹಳ್ಳಿಯ ಜೀವನಚಿತ್ರ. ಸಾಮಾನ್ಯ ಮೂವತ್ತು ವರ್ಷಗಳ ಹಿಂದಿನ ದಕ್ಷಿಣ ಕನ್ನಡದ ಹಳ್ಳಿಯ ಜೀವನ ಚಿತ್ರ. ಕಾಮತರು ತಮ್ಮ ಸಹಜ ಹಾಸ್ಯಮಯ ಶೈಲಿಯಲ್ಲಿ ಈ ಕತೆಗಳನ್ನು ಕಟ್ಟಿದ್ದಾರೆ. ಕಾಮತರ ಪ್ರಶಸ್ತಿರೂಪವಾಗಿ ಮಾಡಿದ ಈ ಪುಸ್ತಕದಲ್ಲಿ ವಿಶೇಷವಾಗಿ ಇವೇ ಐದು ಕತೆಗಳನ್ನು ಸಂಗ್ರಹಿಸಿಕೊಡುವಲ್ಲಿ ವೈಶಿಷ್ಟ್ಯವೇನೋ ತಿಳಿಯುವುದಿಲ್ಲ. ಹೇಗಿದ್ದರೂ ಪುಸ್ತಕರೂಪದಲ್ಲಿ ಕಾಮತರ ಉತ್ತಮ ಕವನಗಳನ್ನು, ಉತ್ತಮ ನಾಟಕಗಳನ್ನು ಉಳಿದ ಉತ್ತಮ ಕತೆಗಳನ್ನೂ ಹಲವು ಹರಟೆಗಳನ್ನೂ ಲೇಖನಗಳನ್ನೂ ಪ್ರಕಟಿಸುವ ಯೋಜನೆ ಮಾಡಿದರೆ ಈ ಎಲ್ಲಾ ವಿಧದ ಸಾಹಿತ್ಯ ಪ್ರಕಟಣೆಯಿಂದ ಕಾಮತರ ಪ್ರಶಸ್ತಿಯು ಹೆಚ್ಚಾಗಿ ಬೆಳಗುವಂತಾಗುವುದೆಂದೂ ಆ ಬಗ್ಗೆ ಕನ್ನಡಿಗರು, ಹೆಚ್ಚಾಗಿ ದಕ್ಷಿಣ ಕನ್ನಡಿಗರು ಮನಮಾಡಬೇಕೆಂದೂ ನಾವು ಆಶಿಸುತ್ತೇವೆ.

ಪುಸ್ತಕದ ಅಚ್ಚುಕಟ್ಟು ಪ್ರಶಸ್ತಿಪುಸ್ತಕಕ್ಕೆ ತಕ್ಕಷ್ಟು ಆಕರ್ಷಣೀಯವಾಗಿಲ್ಲ. 'ಶ್ರೀನಿವಾಸ'ರ ಮುನ್ನುಡಿಯನ್ನು ಸಣ್ಣ ಅಕ್ಷರಗಳಲ್ಲಿ ಕೊಟ್ಟು ಮಿಕ್ಕುಳಿದ ಲೇಖನಗಳು ದೊಡ್ಡಕ್ಷರದಲ್ಲಿ ಕೊಟ್ಟಿದ್ದರೆ ಚಂದ ಹೆಚ್ಚುತ್ತಿತ್ತು ಎಂಬುದು ನಮ್ಮ ಅಭಿಪ್ರಾಯ. ಕಾಮತರ ಭಾವಚಿತ್ರವೊಂದನ್ನು ಬೆಂಗಳೂರಿಂದ ತರಿಸಿ ಇದರಲ್ಲಿ ಹಾಕಿದ್ದಾರೆ. ಸಾಹಿತ್ಯ ಸೇವಕರಾದ ಕಾಮತರು ಈ ಚಿತ್ರದಲ್ಲಿ ತೋರುತ್ತಾರೆ. ಶ್ರೀ. ಕಾರಂತರು ವರ್ಣಿಸುವಂತಹ 'ಗುಂಗುರು ಕೂದಲಿನ ಭೇಟಿಯಾದಾಗಲೆಲ್ಲ ಕರಿಬಿಳಿ ಹಲ್ಲುಗಳಲ್ಲಿ ಡಕೆವಾದ ನಗು ಮತ್ತು ಹಾಸ್ಯವುಳ್ಳ ಕಾಮತರ ಚಿತ್ರವೊಂದು ಮಂಗಳೂರ ಪುಸ್ತಕವೊಂದರಲ್ಲಿಯೇ ನಮಗೆ ಕಂಡ ನೆನಪು. ಅದನ್ನೂ ಒದಗಿಸಿಕೊಂಡಿದ್ದರೆ, ಎರಡು ತರದ ಭಾವಚಿತ್ರಗಳನ್ನು ಕೊಡಬಹುದಾಗಿತ್ತು; ಅದೂ ಚೆನ್ನಾಗುತ್ತಿತ್ತು ಎಂದು ನಮ್ಮೆಣಿಕೆ.

—ಕಯ್ಯಾರ

*ಅಂದಿನ ಅವ್ವೂರು (ದಿವಂಗತ ಎಂ. ಎನ್. ಕಾಮತರ ಪ್ರಶಸ್ತಿ ಮತ್ತು ಕೆಲವು ಕತೆಗಳ ಸಂಗ್ರಹ ಪುಸ್ತಕ) 'ಶ್ರೀನಿವಾಸ'ರ ಮುನ್ನುಡಿ, ೧/೮ ಕ್ರೌನ್ ಆಕಾರದ ೬೮+೧೧೮ ಪುಟಗಳು, ಬೆಲೆ ರೂ. ೧.

ಬ್ರಹ್ಮಚಾರಿಗಳ ಮೇಲೆ ಜಪಾನಿನ ತೆರಿಗೆ

೧೯೬೦ರೊಳಗಾಗಿ ಜಪಾನದ ಜನಸಂಖ್ಯೆಯನ್ನು ೧೦ ಕೋಟಿ ವರೆಗೆ (ಸಾ... ರ ಲಕ್ಷ) ಹೆಚ್ಚಿಸಬೇಕೆಂದು ಸರಕಾರದವರು ನಿಶ್ಚಯಿಸಿದ್ದಾರೆ. ಇದು ಸಾಧ್ಯವಾಗಬೇಕಾದರೆ ಇನ್ನು ೨೦ ವರ್ಷಗಳಲ್ಲಿ ಜಪಾನದ ಜನಸಂಖ್ಯೆ ಕನಿಷ್ಠ ೩೦ ಲಕ್ಷದಷ್ಟು ಹೆಚ್ಚಬೇಕು. ಆದ್ದರಿಂದ ಬಾಲವಿವಾಹಗಳಿಗೆ ಪ್ರೋತ್ಸಾಹ ಕೊಡಬೇಕೆಂದೂ ದೊಡ್ಡ ದೊಡ್ಡ ಸಂಸಾರಗಳಿಗೆ ಸಹಾಯ ಮಾಡಬೇಕೆಂದೂ ಸರಕಾರದವರ ವಿಚಾರವಿರುವುದು. ಒಂದು ಸಂಸಾರದಲ್ಲಿ ಕನಿಷ್ಠ ಐದು ಮಕ್ಕಳಾದರೂ ಇರಬೇಕಂತೆ. ಇದಲ್ಲದೆ ಬ್ರಹ್ಮಚಾರಿಗಳ ಮೇಲೆ ಕರಹೇರಬೇಕೆಂದೂ ಅವರು ಯೋಚಿಸಿದ್ದಾರೆ.

ವಿಚಿತ್ರ ಪ್ರಪಂಚ

ವೃದ್ಧನ ವಿಚಿತ್ರ ಪ್ರೇಮ!

ಅಮೇರಿಕದ ಫ್ಲೋರಿಡದಲ್ಲಿ ಕಾರ್ಲ್ ...ಂಟೋಜನ ಎಂಬೊಬ್ಬ ಶಿಲ್ಪಿ ಇದ್ದಾನೆ. ...ವನು ಹತ್ತು ವರ್ಷಗಳ ಹಿಂದೆ ಒಬ್ಬ ...ರುಣಿಯನ್ನು ಮೋಹಿಸಿ ಅವಳಲ್ಲಿ ಅನುರಕ್ತನಾಗಿದ್ದ. ಆಗ ಅವನಿಗೆ ೬೧ ವರ್ಷ ಪ್ರಾಯ. ಆದರೆ ತನ್ನ ಪ್ರೇಮವನ್ನು ...ಸಿ ಆಕೆಯನ್ನು ವಿವಾಹವಾಗುವ ...ದಲೇ ಅವಳು ಒಂದು ಕಾಯಿಲೆ...ಂದ ಅಕಾಲದಲ್ಲಿ ಸತ್ತಳು. ಅದು ...ಮುದುಕ ಶಿಲ್ಪಿಗೆ ಸಹನಾತೀತವಾ...ತು. ಆಕೆಯ ಹೆತ್ತವರ ಅನುಮತಿ...ಂದ ಅವನು ಅವಳಿಗೆ ತನ್ನ ಖರ್ಚಿ...ಂದ ಒಂದು ಸುಂದರವಾದ ಗೋರಿಯನ್ನು ಕಟ್ಟಿಸಿದ. ಅಲ್ಲಿ ಅವಳ ದಫನ ಸಂಸ್ಕಾರವು ನಡೆದ ಬಳಿಕ, ಯಾರಿಗೂ ತಿಳಿಯದ ಹಾಗೆ, ಆ ಗೋರಿಯಲ್ಲಿ ಹೊಕ್ಕು, ಆಕೆಯ ಶವವನ್ನು ಎತ್ತಿಕೊಂಡು ತನ್ನ ...ಲಗುವ ಕೋಣೆಗೆ ತಂದ. ಮತ್ತೆ ...ವಳನ್ನು ಸರ್ವವಿಧ ಅಲಂಕಾರಗಳಿಂದ ಅಲಂಕರಿಸಿದ. ಈ ಪ್ರೇಮದ ಹುಚ್ಚಿನ ...ದಿನಿಂದ ಒಂಭತ್ತು ವರ್ಷಗಳ ತನಕ ...ದೇ ಶವದ ಬಳಿ ತನ್ನ ಹಾಸಿಗೆಯನ್ನು ...ಹಾಸಿ ಅದರೊಂದಿಗೆ ರಾತ್ರಿಗಳನ್ನು ಕಳೆಯುತ್ತಿದ್ದ. ಮತ್ತೆ ಕಳೆದ ವರ್ಷ ಈ ಸಂಗತಿ ...ಗುಟ್ಟು ತಿಳಿದುಬಂದಿತು. ಗೋರಿಯನ್ನು ಕೆಡಿಸಿದನೆಂಬ ಅಪರಾಧದ ಮೇಲೆ ಈಗ ಪೋಲೀಸರು ಅವನನ್ನು ಸೆರೆ ಹಿಡಿದಿದ್ದಾರೆ. ವಿಚಾರಣೆ ನಡೆಯುತ್ತಾ ...ಉಂಟು.

೩೩ ವರ್ಷಕಾಲ ದೇಶ ಸಂಚಾರ ಮಾಡಿದ ಆಮೆ!

ಮೂವತ್ತಮೂರು ವರ್ಷಗಳ ತನಕ ಸಂಚಾರದಲ್ಲಿದ್ದ ಒಂದು ಜಾತಿಯ ಆಮೆಯನ್ನು ಕನೆಕ್ಟಿಕಟ್ ಎಂಬಲ್ಲಿ ಹಿಡಿದಿರುವರು. ೧೯೦೭ನೇ ಇಸವಿಯಲ್ಲಿ ಅರ್ನೆಸ್ಟ್ ಟೇಲರ್ ಎಂಬಾತನು ಈ ಆಮೆಯನ್ನು ಹಿಡಿದು, ಬೆನ್ನು ಚಿಪ್ಪಿನ ಮೇಲೆ ೧೯೦೭ ಎಂದು ಕೆತ್ತಿ ಅದನ್ನು ಬಿಟ್ಟುಬಿಟ್ಟಿದ್ದನು. ಮತ್ತೆ ೧೯೪೦ರಲ್ಲಿ ಇದೇ ಆಮೆಯನ್ನು ಆ ಟೇಲರನ ಮಗಳು ಹಿಡಿದುಕೊಂಡಳು. ಈಗ ಟೇಲರನು ಅದರ ಚಿಪ್ಪಿನ ಮೇಲೆ ೧೯೪೦ ಎಂದು ಬರೆದು ಪುನಃ ಅದನ್ನು ಬಿಟ್ಟುಬಿಟ್ಟಿದ್ದಾನೆ. ಮುಂದೆ ಯಾವಾಗ ಅದು ತನ್ನ ಸಂಚಾರ ಮುಗಿಸಿ ಮರಳುವದೋ ನೋಡಬೇಕು.

ತಾನಾಗಿ ಶಬ್ದ ಮಾಡುವ ಗಂಟೆ!

ಬ್ರಿಟನಿನ [illegible] ಎವರ್ಸ್‌ಬರಿ ಎಂಬ ಊರಿನಲ್ಲಿ ಒಂದು ಕ್ರೈಸ್ತ ದೇವಾಲಯವಿದೆ. ಅದರಲ್ಲಿ ಗಾಬ್ರಿಯಲ್ ಎಂಬ ಹೆಸರಿನ ಒಂದು ಗಂಟೆ ಇರುವುದು. ಇದನ್ನು ಜನರು ಪವಿತ್ರ ಗಂಟೆ ಎಂದು ಕರೆಯುವುದು ರೂಢಿಯಾಗಿದೆ. ಯಾಕೆಂದರೆ ಕ್ರೈಸ್ತ ಇಗರ್ಜಿಯ ಪೋಷಕರುಗಳು ಸತ್ತ ಪ್ರತಿಯೊಂದು ಸಂದರ್ಭದಲ್ಲಿಯೂ ಈ ಗಂಟೆ ತಾನಾಗಿ ಬಡಿದು ದುಃಖಸೂಚಕ ಸ್ವರವನ್ನು ಕೊಟ್ಟಿದೆ. ಈಗ ಇಗರ್ಜಿಯನ್ನು ಕೆಡವಿರುವುದರಿಂದ ಈ ಗಂಟೆಯನ್ನು ಬ್ರೈಸ್ ಪ್ರಯರ್ಸ್‌ನ ಇಗರ್ಜಿಯಲ್ಲಿ ಕಟ್ಟಿ ತೂಗಿಸಿರುವರು. ಗಾಬ್ರಿಯಲಿನ ಹಾಗೆಯೇ ಶಕ್ತಿಯನ್ನು ಪಡೆದುಕೊಳ್ಳುವ ಕೆಲವು ಗಂಟೆಗಳು ಮತ್ತೆ ಕೆಲವು ಕಡೆಗಳಲ್ಲಿ ಇರುವುದು ತಿಳಿದುಬರುತ್ತದೆ. [illegible] ಸಮುದ್ರ ಕರಾವಳಿಯಲ್ಲಿ [illegible] ಆಗಾಗ ಕಂಡು ಕೇಳಿದ ಒಂದು ವಿಚಿತ್ರ ಅನುಭವವನ್ನು ಹೇಳುತ್ತಾರೆ. ಅಲ್ಲಿ ಅವರು [illegible] ಕರ್ಣ ಮಧುರವೂ ಸ್ಪಷ್ಟವೂ ಆದ ಒಂದು ಗಂಟೆಯ ಶಬ್ದವನ್ನು ಕೇಳುವರು. ಅದು ಅವರಿಗೆ ಬಹಳ ಸಮೀಪದಲ್ಲಿಯೇ ಆದಂತೆ ಭಾಸವಾಗುತ್ತದೆ. ಆದರೆ ಹತ್ತಿರ ಎಲ್ಲಿಯೂ ನೆಲವಿರುವುದಿಲ್ಲ, ಗಂಟೆ ಇರುವ ಮಾತು ದೂರವೇ ಉಳಿಯಿತು. ಅವರು ಕೇಳುವುದು ಸಮುದ್ರದ ಅಲೆಗಳ ಶಬ್ದವೂ ಆಗಿರುವುದಿಲ್ಲ. ಇದುದರಿಂದ ಈ ಅದೃಶ್ಯ ಗಂಟೆಯು ಶಬ್ದ ಎಲ್ಲಿಂದ ಹೇಗೆ ಒದಗುತ್ತದೆಂಬುದು ಒಂದು ಸಮಸ್ಯೆಯಾಗಿದೆ.

NACET BLADES

ಮೂರು ಗೂಟದ ರೇಜರುಗಳಿಗೆ

ಸೆಟುಬ್ಲೇಡುಗಳು

ನಿಜವಾದ ಕ್ಷೌರ ಸುಖಕ್ಕೆ ಪರಿಶುದ್ಧವಾದ ಅಲಗುಗಳು ಬೇಕು. ಉತ್ತಮವಾಗಿ ಅಷ್ಟಯೋಕರ [illegible] ನಯವಾದ ಕ್ಷೌರವು ಬೇಕಾದಲ್ಲಿ ಆಕೀ ಕತ್ತಿ ... ನೆಸೆಟು ಬ್ಲೇಡುಗಳನ್ನು ಉಪಯೋಗಿಸಿರಿ



INBI

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ

BHUVANENDRA PRODUCTS LTD.,
ATAPADI, S. K.

Why Doctors prescribe

"BHUVANENDRA"

NARAYANA TAILA

Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತರಬೇತಿ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರ ನಾರಾಯಣ ತೈಲ'

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ.

ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು

ಸ್ಥಳೀಯ ಸ್ಟಾಕಿಸ್ಟರು —

ಯು. ಪಾಂಡುರಂಗ ನಾಯಕ್, ರಥಬೀದಿ.

ರಾಘವೇಂದ್ರ ರಂಗ ಶೈ, ರಥಬೀದಿ.

ಡಾ। ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್

ಕಟಪಾಡಿ, ದ. ಕನ್ನಡ.

"ಕತ್ತಲೆಯಿಂದ ಬೆಳಕಿಗೆ ದಾರಿ ತೋರಿಸು!"

ವಿವೇಕಾನಂದರು ಜಗತ್ತಿನ ಸಂದೇಶ ಸಾರಿದರು

ಯುದ್ಧ ಭೀಷಣಲೋಕಕ್ಕೆ ಅಮೃತಮಯ ಸಂದೇಶ!

ಸಾಧು ವಾಸ್ವಾನಿಯವರ ಲೇಖನ

ಸ್ವಾಮಿ ವಿವೇಕಾನಂದರು

ಶ್ರೀ ಕೇಶವ ಚಂದ್ರಸೇನರು ಪಾಶ್ಚಿಮಾತ್ಯ ರಾಷ್ಟ್ರಕ್ಕೆ ಪ್ರಯಾಣ ಮಾಡಿದ ಪ್ರಥಮ ಹಿಂದೂ ಪ್ರವಾದಿಯು. ಇಂಗ್ಲೆಂಡಿನ ಸಾರ್ವಜನಿಕ ಹೃದಯದಲ್ಲಿ ಅವರು ಎಂತಹ ಅದ್ಭುತವಾದ ಪರಿಣಾಮವನ್ನು ಅಂದು ಉಂಟುಮಾಡಿದ್ದರು! ಇಂಗ್ಲೆಂಡಿನ ಹಲವು ಭಾಗಗಳಲ್ಲಿ ನಾನು ಸಂಚರಿಸಿದಾಗ, ಹಲವರು ಅವರ ಮೇಲೆ ತಮಗಿರುವ ಗಾಢ ಪ್ರೇಮವನ್ನು ಮಾತುಕತೆಗಳ ಸಮಯದಲ್ಲಿ ವ್ಯಕ್ತಪಡಿಸಿದರು. ಆ ಮೇಲೆ, ಅಲ್ಲಿಗೆ ಯಾತ್ರೆಮಾಡಿದವರ ಪೈಕಿ ಎರಡನೆಯ ಹಿಂದೂ ಪ್ರವಾದಿಯೆಂದರೆ ಶ್ರೀ ಪ್ರತಾಪಚಂದ್ರ ಮುಜುಮ್‌ದಾರರು. ಅಮೇರಿಕದ ಕವಿ, ವಿಟ್ಟಿಯರು—ಅವರ ಅಮೂಲ್ಯ ಉಪದೇಶಗಳಿಂದ ಆಕರ್ಷಿತರಾಗಿ, ಬ್ರಹ್ಮಸಮಾಜದ ತತ್ವಗಳ ವಿಷಯದಲ್ಲಿ ಕೆಲವು ಕವಿತೆಗಳನ್ನು ಬರೆದರು. ಇತ್ತೀಚೆಗೆ ಪಾಶ್ಚಾತ್ಯ ರಾಷ್ಟ್ರವನ್ನು ತನ್ನ ಅಮೃತಮಯವಾಣಿಯಿಂದ ಆಪ್ಯಾಯನಗೊಳಿಸಿದವರೆಂದರೆ, ಹಿಂದೂ ಧಾರ್ಮಿಕ ಸಂಸ್ಕೃತಿಗಳನ್ನು ಪಾಶ್ಚಾತ್ಯ ಜಗತ್ತಿಗೆ ಸಾರಿ ತಿಳಿಸಿದವರೆಂದರೆ, ಸರ್ ರಾಧಾಕೃಷ್ಣನರವರು!

° ° ° °

ಆದರೆ ಸ್ವಾಮಿ ವಿವೇಕಾನಂದರಂತೆ, ಪಾಶ್ಚಾತ್ಯ ರಾಷ್ಟ್ರವನ್ನು ತನ್ನ ಬೋಧಪರವಾದ ವಾಕ್ಯಸರಣಿಯಿಂದ ಸ್ಫೂರ್ತಿಗೊಳಿಸಿದವರು ಬೇರಿಲ್ಲ. ಸರ್ವಧರ್ಮ ಸಮ್ಮೇಳನದಲ್ಲಿ, ಕಷಾಯಾಂಬರ ಧಾರಿಯಾಗಿ, ಶುಭ್ರನೇತ್ರಭಾಸ್ವರನಾದ ಶ್ರೀ ಸ್ವಾಮಿ ವಿವೇಕಾನಂದರು ಮಾತನಾಡಲು ನಿಂತಾಗ, ಅವರ ಅಸ್ಖಲಿತ ವಾಕ್ಪ್ರವಾಹಕ್ಕೆ, ಮಧುರ ಮಧುರ ಬೋಧಮಯವಾಣಿಗೆ ಬೆರಗುಗೊಂಡ ಪಾಶ್ಚಾತ್ಯಲೋಕವು, ಇಷ್ಟು ಬುದ್ಧಿವಂತನಾದ, ಇಷ್ಟು ಸಂಸ್ಕೃತಿ ಪಡೆದ, ಇಷ್ಟು ಸರ್ವಜ್ಞನಾದ, ಇಷ್ಟು ಸಮರ್ಥನಾದ ಬೇರೆ ಭಾರತೀಯನೊಬ್ಬನನ್ನು ನಾವು ಕಂಡಿಲ್ಲ ಕೇಳಿಲ್ಲವೆಂಬಂತೆ ಹರ್ಷಿತರಾಗಿದ್ದರು. ಅಮೇರಿಕದ ಹೆರಾಲ್ಡ್ ಪತ್ರಿಕೆಯು ಸ್ವಾಮಿ ವಿವೇಕಾನಂದರ ಭಾಷಣವನ್ನು ಕೇಳಿದ ಮರುದಿನ, ಇಷ್ಟು ಪ್ರತಿಭಾವಂತರು ಇರುವ ರಾಷ್ಟ್ರಕ್ಕೆ, ಪಾಶ್ಚಾತ್ಯ ಕ್ರಿಶ್ಚಿಯನ್ ಮಿಷನರಿಗಳನ್ನು, ಧರ್ಮೋಪದೇಶ ಮಾಡಲು ಕಳುಹಿಸುವುದು ವ್ಯರ್ಥವಾಗಿದೆ ಎಂದು ಬರೆಯಿತು! ಆ ವಿಚಾರಸರಣಿಯೇ ಆ ಮೇಲೆ ದಿನದಿಂದ ದಿನಕ್ಕೆ ಬೆಳೆಯುತ್ತಾ ಬಂತು; ಪಶ್ಚಿಮ ಲೋಕವು ಪೂರ್ವದ ಹಿಂದೂ ಸಂಸ್ಕೃತಿಯ ಜ್ಞಾನವನ್ನು ಹೊಂದಲು ಆತುರಗೊಂಡಿತು.

° ° °

ಈಗ ನಾವು (ಜನವರಿ ೧೯ರಂದು) ಸ್ವಾಮಿವಿವೇಕಾನಂದರ ಸ್ಮಾರಕದಿನವನ್ನು ಆಚರಿಸುತ್ತೇವೆ. ಪಶ್ಚಿಮ ಲೋಕವು ತಮ್ಮ ಜನಾಂಗದ, ರಾಷ್ಟ್ರದ, ವರ್ಣದ, ಕೂಗಿನಿಂದ ತಮ್ಮ ತಮ್ಮ ರಕ್ತಮಯ ಪತಾಕೆಗಳನ್ನು ಮೇಲೆತ್ತಿಕೊಂಡು ಅಟ್ಟಹಾಸ ಹಾಕುತ್ತಿವೆ! ಈ ಯುದ್ಧದ ಭೀಷಣಪಾಪಮಯ ಚಿತ್ರವನ್ನು ಯಾರು ಅವರಿಗೆ ತೋರಿಸಬಲ್ಲರು? ಶ್ರೀ ವಿವೇಕಾನಂದರು, ಆಧುನಿಕ ಯುಗದ ವ್ಯಾಖ್ಯಾನ ರೂಪದಲ್ಲಿ ಅಂದು ಪಾಶ್ಚಾತ್ಯರಿಗೆ ಹಿಂದೂ ಸಂಸ್ಕೃತಿಯನ್ನು ಸಾರಿದ್ದರು. ಅದೇ ವಿಶ್ವಭ್ರಾತೃತ್ವ ಭಾವನೆಯ ಸಂದೇಶ. ಎಲ್ಲ ಧರದಲ್ಲಿಯೂ ಒಂದೇ ಜೀವನ ಭಾವನೆಯಾಗಿದೆ. ಯಾವ ಪಶುಬುದ್ಧಿಯು ಪಾಶ್ಚಾತ್ಯಲೋಕವು ವಿಜ್ಞಾನವನ್ನು ಅನ್ಯಾಯದ ಮರಣ ಕ್ರಿಯೆಗಾಗಿ ಉಪಯೋಗಿಸಿತೋ, ಆ ಯೂರೋಪವನ್ನು ಹಿಂದೂ ಸಂಸ್ಕೃತಿಯೇ ನಿಜವಾಗಿ ಪಾವನಗೊಳಿಸುವುದೆಂದು ಅವರು ಹೇಳಿದರು. ಆ ಹೊಸ ಸಂಸ್ಕೃತಿಯ ಪ್ರಸಾರದಿಂದ ಹೊಸ ಜಗತ್ತಿನ ನಿರ್ಮಾಣವಾಗಲಿದೆಯೆಂದು ಅವರು ತಿಳಿಸಿದರು. ಅದು ರಕ್ತಪಿಪಾಸೆಯ ಸಾಮ್ರಾಜ್ಯದಾಶೆಯ ವಿಜಯದಂತಹ ಪಾಪಭೂಯಿಷ್ಠದಲ್ಲವೆಂದೂ ಪುಣ್ಯಮಯವಾದುದೆಂದೂ ಘೋಷಿಸಿದರು.

° ° °

ಹಂತ! ಇಂದು ಜರ್ಮನ್ ವೈಮಾನಿಕರು ತಮ್ಮ ಬಾಂಬುಗಳಿಂದ ಆಂಗ್ಲನಾಗರಿಕರನ್ನು ಕೊಂದುಬಿಟ್ಟೆನೆಂದು ಆಗ್ಗಳಿಕೆ ಕೊಚ್ಚುತ್ತಾರೆ! ಆಂಗ್ಲ ವೈಮಾನಿಕರು ತಮ್ಮ ಬಾಂಬುಗಳಿಂದ ಜರ್ಮನ್ ನಾಗರಿಕರನ್ನು ಧ್ವಂಸಮಾಡಿಬಿಟ್ಟೆವೆಂದು ಜಂಭ ಸಾರುತ್ತಾರೆ! ಇಂದು ಹಿಟ್ಲರನು ಫ್ರಾನ್ಸಿನ ಜನತೆಯನ್ನು ಉಪವಾಸ ಬೀಳಿಸಿ, ಪಿಟೇನ್ ತನ್ನ ಹೇಳಿಕೆಯಂತೆ ಕೇಳಬೇಕೆಂದು ಬಲಾತ್ಕರಿಸುತ್ತಿದ್ದಾನೆ! ಇಂದು ಆರ್ಥಿಕ ನಿರ್ಬಂಧದ್ದ ಘೋರಣೆಯನ್ನು, ಹಂತ, ಜನಾಂಗಜನಾಂಗಗಳು ನಿರ್ದಾಕ್ಷಿಣ್ಯವಾಗಿ ಅಂಗೀಕರಿಸಿವೆ! ಈ ರೀತಿಯೆಂದರೆ ಮಿಲಿಯಾಂತರ ಮಂದಿಯನ್ನು ನಿತ್ಯಉಪವಾಸದಲ್ಲಿ ಕೆಡವಿದಂತೆಯೇ ಎಂದರ್ಥ. ಇಂತಹ ಉಪವಾಸ ಪೀಡಿತರಿಗೆ ಹೊಟ್ಟೆಗೆ ಉಣಕೊಡಲೂ ನಾವು ನಿರಾಶರಾಗಿ ನೋಡಬೇಕಾಗಿದೆ. ಇಂದು ಮಿಲಿಯಾಂತರ ಮಂದಿ, ಪತಂಗಗಳಂತೆ ಸಾಯುತ್ತಿದ್ದಾರೆ. ನಾಗರಿಕತೆಯು ನಿರ್ನಾಮವಾಗುತ್ತಿದೆ. ಹಸಿವಿನಿಂದ ಕಂಗಾಲಾದ ಮಿಲಿಯಾಂತರ ಜನರು ಕಗ್ಗತ್ತಲೆಯಲ್ಲಿ ಕಂಗಾಲಾಗಿದ್ದಾರೆ!

"ಕರುಣಾಳು ದೇವರೇ! ನಮಗೆ ಕತ್ತಲೆಯಿಂದ ಬೆಳಕಿಗೆ ದಾರಿತೋರಿಸು" ಎಂದು ಪ್ರಾಚೀನ ಋಷಿಗಳು ಪ್ರಾರ್ಥಿಸಿದರು. ಈ ಸಂದೇಶವನ್ನು ವಿವೇಕಾನಂದರು ಪುನರಪಿ ಘಂಟಾಘೋಷವಾಗಿ ಸಾರಿದರು. ಹಿಂದುತ್ವಕ್ಕಾಗಿ ದುಡಿಯಲು ಅನೇಕ ಹೃದಯಗಳಲ್ಲಿ ಅವರು ಚೈತನ್ಯ ಸ್ಫೂರ್ತಿಗಳನ್ನು ತುಂಬಿದರು. ಹಿಂದುತ್ವವು ಜಗತ್ಪ್ರಸಾರಕವಾಗಿರಬೇಕೆಂದು ಅವರು ತಿಳಿಸಿದರು.

ಎಲ್ಲಾ ರಾಷ್ಟ್ರರಾಷ್ಟ್ರಗಳ ತರುಣರೇ, ಮುಂದೆ ಬದುಕುವ ಸಲುವಾಗಿ, ಈಗ ಪ್ರಾಚೀನ ಆ ಋಷಿಗಳ ತತ್ವಗಳನ್ನು ಲೋಕಕ್ಕೆ ಬೋಧಿಸಿರಿ! ಹಿಂದೂಧರ್ಮವನ್ನು ನಿಮ್ಮ ಕಾರ್ಯದಲ್ಲಿ ಜೀವನದಲ್ಲಿ ಹೊಸ ಶಕ್ತಿಯನ್ನಾಗಿ ಮಾಡಿಕೊಳ್ಳಿರಿ! ಹಾಗಾದರೆ ಮಾತ್ರ ಈ ಜಗತ್ತು ಇಂದಿನ ಯುದ್ಧದ ಭೀಷಣತೆಯನ್ನು ನೀಗಿ, 'ತಮಸ್ಸಿನಿಂದ' ಜ್ಯೋತಿಯ ಕಡೆಗೆ ಹೋಗಬಹುದು. ನ್ಯಾಯ, ಶಾಂತಿಗಳನ್ನು ಸ್ಥಾಪಿಸುವ ಹೊಸ ನಿರ್ಮಾಣವೊಂದು ಈ ಜಗತ್ತಿನ ಮೇಲೆ ನೆಲೆಗೊಳ್ಳಬಹುದು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

CONO KILLER

ಜಗತ್ಪ್ರಸಿದ್ಧ ಡಾ| ಜಸಾನಿಯವರ

ಗೊನೊಕಿಲರ್ (ರಜಿಸ್ಟರ್ಡ್)

ಕಳಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ

...ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು; ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ. ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮ್ಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೋಕಸ್ ಎಂಬ ವಿಷಹಾರ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲು 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer: **Dr. D. N. JASANI**, 4 (S.B.M.) Vithalbhai Patel Road, BOMABY

Madras Agent: **Appah & Co, China Bazar Madras.**

★ ಸಿನೆಮಾ ಪುಟ ★

...ಸಿ. ದೇ ಸಿರ್ಕೋ ಕಂಪೆನಿಯಲ್ಲಿ?

ಕಲ್ಕತ್ತದ ನ್ಯೂಥಿಯೇಟರ್ಸ್ ಚಲತ್ರ ಕಂಪನಿಯ ಪ್ರಸಿದ್ಧ ಅಂಧಗಾಯಕ ಶ್ರೀ. ಕೆ. ಸಿ. ಡೇಯು ಬೊಂಬಯಿಯ ಸಿರ್ಕೋ ಕಂಪೆನಿಯನ್ನು ಸೇರುವುದಾಗಿ ತಿಳಿದು ಬರುತ್ತದೆ. ಸಿರ್ಕೋ ಕಂಪೆನಿಯವರು ತಯಾರಿಸುವ ನಿರ್ದೇಶಕ ದೇವಕಿಬೋಸರ ಚಿತ್ರದಲ್ಲಿ ಅವರು ಮುಖ್ಯ ಪಾತ್ರವಹಿಸುವುದಾಗಿಯೂ ತಿಳಿದು ಬರುತ್ತದೆ.

ಪ್ರಸಿದ್ಧ ಸಂಗೀತ ನಿರ್ದೇಶಕರೆಂದು ಹೆಸರು ಪಡೆದ ರಫೀಕ್ ಗಜ್ನಾವಿಯವರೂ ಸಿರ್ಕೋ ಕಂಪೆನಿಯನ್ನು ಸೇರಿರುವುದಾಗಿಯೂ ನಿರ್ದೇಶಕ ಕೇದಾರರ 'ಗ್ವಾವಿಬೋ' ಚಿತ್ರದಲ್ಲಿ ಅವರು ಸಂಗೀತ ದರ್ಶನಮಾಡುವರೆಂದೂ ಸುದ್ದಿ.

ಪ್ರಭಾತದ ಮುಂದಿನ ಚಿತ್ರ

ಉಮರ್ ಖಯ್ಯಾಂ

'ಉಮರ್ ಖಯ್ಯಾಂ' ಚಿತ್ರ ತಯಾರಿಯ ವಿಷಯ ಪ್ರಭಾತದವರು ನಿಶ್ಚಯ ಮಾಡಲಿಲ್ಲವೆಂದು ಹರಡಿದ ವಾರ್ತೆಯು ನಿರಾಧಾರವೆಂದು ಈಗ ತಿಳಿದು ಬರುತ್ತದೆ. ನಿರ್ದೇಶಕ ಶಾಂತಾರಾಮರು 'ಪಡೋಸಿ'ಯನ್ನು ತಯಾರುಮಾಡಿದ ಕೂಡಲೇ ಆ ಚಿತ್ರದ ಕಾರ್ಯವನ್ನೂ ಪ್ರಾರಂಭಿಸುವರೆಂದು ತಿಳಿಯುತ್ತದೆ. ಜಯಶ್ರೀಯು ಇದರಲ್ಲಿ ಪ್ರಾಮುಖ್ಯ ಪಾತ್ರವಹಿಸುವಳೆಂಬ ಕುರಿತು ಬಿಟ್ಟು ಮಿಕ್ಕ ಪಾತ್ರವರ್ಗದ ವಿಷಯ ಇನ್ನೂ ಸ್ಪಷ್ಟವಾಗಿ ಏನೂ ತಿಳಿದಿಲ್ಲ.

ಮಣಿಬಾಯಿಗೆ ೧೦೦೧ ರೂ.ಗಳ ಬಹುಮಾನ

ರಣಜಿತ್ ಸ್ಟುಡಿಯೋದಲ್ಲಿ ಉಮಿದ್ ಚಿತ್ರದ ತಯಾರಿಕೆಯ ಸೊಗಸನ್ನು ಕಂಡು ಶ್ರೀ ಚಂದುಲಾಲ ಶಹಾರವರು ತರುಣ ನಿರ್ದೇಶಕ ಮಣಿಬಾಯಿವ್ಯಾಸರನ್ನು ಪ್ರೇಮದಿಂದ ಆಲಿಂಗಿಸಿ ಬಿಟ್ಟುದೂ ಮಾತ್ರವಲ್ಲದೆ ಅಲ್ಲಿಯೇ ಬಹುಮಾನವಾಗಿ ೧೦೦೧ ರೂಪಾಯಿಗಳ ಚೆಕ್ಕೊಂದನ್ನು ಅವರಿಗೆ ಬರೆದುಕೊಟ್ಟರೆಂದೂ ತಿಳಿದುಬರುತ್ತದೆ.

ರಣಜಿತ್ ಕಂಪೆನಿಯ ಪಂಜಾಬೀ ಚಿತ್ರ

ಮೋಡಕರ ನಿರ್ದೇಶಕತ್ವದಿಂದ ರಣಜಿತ್ ಕಂಪೆನಿಯವರು ಧಾಸಭಾಗತ್ ಎಂಬ ಪಂಜಾಬೀ ಚಿತ್ರವನ್ನು ತಯಾರಿಸಲಿರುವರೆಂದು ತಿಳಿದಿದೆ.

ಕಮಲಾಪಾಶಾ

ಉರ್ದು ಸಂಭಾಷಣೆಯಿಂದೊಡಗೂಡಿದ ಮುಸ್ತಾಫ್ ಕಮಲಪಾಶರ ಜೀವನಚರಿತೆಯ ಚಿತ್ರವನ್ನು ಮುಸ್ಲಿಂ ಪ್ರೇಕ್ಷಕರು ಬಹಳವಾಗಿ ಮೆಚ್ಚುತ್ತಿರುವರು.

ಕಜಾಂಚಿ

ಪಂಚೋಲಿ ಆರ್ಟ್ ಪಿಕ್ಚರ್ಸಿನವರ 'ಕಜಾಂಚಿ' ಚಿತ್ರವು ಈಗ ಪೂರ್ಣವಾಗಿದೆ. ಇಸ್ಮಾಯಿಲ್, ರಾಮೋಲಾದೇವಿ, ಮನೋರಮಾ, ಅಜಮೂಲ್, ದುರ್ಗಾ ಮೋತಾ ಇವರು ಇದರಲ್ಲಿ ಪ್ರಾಮುಖ್ಯ ಪಾತ್ರವಹಿಸುವರು.

ಅಮುರ್-ಕಿ-ಬೀನಾ

ನಿರ್ದೇಶಕ ಮೆಹಬೂಬರು ನಿರ್ದೇಶಿಸುವ ಮುಂದಿನ ಚಿತ್ರಕ್ಕೆ ಅಮುರ್-ಕೀ-ಬೀನಾಯೆಂದು ಹೆಸರು ಹಾಕಲಿರುವರಾಗಿ ತಿಳಿದಿದೆ.

'ನರ್ತಕಿ'ಯಿಂದ ೨ ವಾರಗಳಲ್ಲಿ ೧೫,೦೦೦ ರೂ.ಗಳು

ಡಿಲ್ಲಿಯಲ್ಲಿ ಕಳೆದ ಎರಡು ವಾರಗಳ ಪ್ರದರ್ಶನದಿಂದಲೇ 'ನರ್ತಕಿ' (ನ್ಯೂಥಿಯೇಟರ್ಸ್ ಚಿತ್ರ) ಚಿತ್ರದಿಂದ ರೂ. ೧೫,೦೦೦ಗಳಷ್ಟು ಧನಸಂಗ್ರಹವಾಗಿರುವುದಾಗಿ ತಿಳಿದುಬರುತ್ತದೆ.

ಲಗನ್

ನಿರ್ದೇಶಕ ನಿತಿನ್ ಬೋಸರು ಈ ಚಿತ್ರವನ್ನು ಈಗ ಪೂರ್ಣಮಾಡುತ್ತಾ ಬಂದಿದ್ದಾರೆ. ಬಂಗಾಳಿಯಲ್ಲಿ ಇದರ ಹೆಸರು 'ಪರಿಚಯ'ವೆಂದಿದೆ. ಸೈಗಲ್, ಕನ್ನನ್ ಇದರಲ್ಲಿ ಅಭಿನಯಿಸುತ್ತಾರೆ.

ಚಿತ್ರ ತಯಾರಿಯಲ್ಲಿ (ಇನ್ನೊಬ್ಬ ಮಹಿಳೆ

ಕೆ. ಬಿ. ಎಲ್. ವಸಂತಾ ಎಂಬೀ ದಕ್ಷಿಣ ಭಾರತದ ನಟಿಯೊಬ್ಬಳು ತನ್ನ ಕೆಲವು ಗೆಳೆಯರೊಡನೆ ಗೀತಾ ಪಿಕ್ಚರ್ಸ್ ಎಂಬ ಹೊಸ ಚಲಚ್ಚಿತ್ರ ಕಂಪೆನಿಯೊಂದನ್ನು ಪ್ರಾರಂಭಿಸಿರುವಳಾಗಿ ತಿಳಿದಿದೆ.

ನ್ಯೂಟೋನ್ ಸ್ಟುಡಿಯೋ

ಇವರು ಅಶೋಕ ಕುಮಾರ ಎಂಬ ಚಿತ್ರವನ್ನು ತಯಾರಿಸಿದ್ದಾರೆ. ತ್ಯಾಗರಾಜಭಾಗವತರ್ ಮತ್ತು ಕನ್ನಂಬಾ ಇದರಲ್ಲಿ ಪ್ರಮುಖ ಪಾತ್ರವಹಿಸುವರು. ತನ್ನ ಮಲತಾಯಿಯಾದ ತಿಷ್ಯರಕ್ಷಿತೆಯ ಪ್ರೇಮ ಪಿಪಾಸೆಗೆ ತಿರಸ್ಕರಿಸಿದ ರಾಜಕುಮಾರ ಕುನಲನು ಜೀವನದಲ್ಲಿ ಯಮಯಾತನೆಯನ್ನು ಅನುಭವಿಸಬೇಕಾಯಿತು. ನಾರಿ ಮುನಿದರೆ ಮಾರಿ. ಆಕೆ ಪ್ರೇಮಭಗ್ನಳಾಗಿ ಕುನಲನ ಮೇಲೆ ಉರಿದು ಬಿದ್ದು ಆತನು ತನ್ನ ಮೇಲೆ ಪೌಷಬಯಸಿದನೆಂದು ಆರೋಪಿಸಿ, ಆತನ ಕಣ್ಣುಗಳನ್ನು ಕೀಳುವಂತೆ ರಾಜಾಜ್ಞೆ ಹೊರಡಿಸುತ್ತಾಳೆ. ತ್ಯಾಗರಾಜಭಾಗವತರ್ ಕುನಲನ ಅಭಿನಯದಿಂದ ಪ್ರೇಕ್ಷಕರನ್ನು ಕಂಬನಿಗರೆಸುತ್ತಾರೆ. ಕನ್ನಾಂಬಾ ಸೌಂದರ್ಯರಾಣಿಯೆನಿಸಿ ಅಭಿನಯಿಸುತ್ತಾಳೆ.

ನಾಡಿಯಾ

ಇವಳ ನಟನೆಯಿಂದ ನಾಡಿಯಾದವರು 'ಬೊಂಬಯಿವಾಲಿ' ಎಂಬೀ ಚಿತ್ರವನ್ನು ತಯಾರಿಸುತ್ತಾರೆ.

ಇದು ನಿಮ್ಮ ಚರ್ಮವನ್ನು ತಂಪಾಗಿರಿಸುವುದು ಅಲ್ಲದೆ ಅಧಿಕ ಉಷ್ಣತೆಯಿಂದ ಚರ್ಮವನ್ನು ರಕ್ಷಿಸುವುದು.

ಅಧಿಕ ಉಷ್ಣತೆಯನ್ನು ಪರಿಹರಿಸಲು ತಕ್ಕ ಹಂಚಿಕೆಗಳಿರುವಾಗ ಅಸೌಖ್ಯವನ್ನು ಹೊಂದಿ ಯಾಕೆ ಬಳಲುತ್ತೀರಿ. ಸಾವಿರಾರು ಮಹಿಳೆಯರು ಆನಂದದಾಯಕವಾದ ಸೌಖ್ಯವನ್ನು ಪಡೆಯಲು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಶೋಧನೆ ಮಾಡಿ ಉಪಯೋಗಿಸುತಿದ್ದಾರೆ. ಬಹಳ ಕೋಮಲವಾದ ಚರ್ಮವನ್ನು ಕೂಡ ಸಂತವಿಸುವುದು. ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum) ಅತಿಶ್ರೇಷ್ಠ ರೀತಿಯಿಂದ ತಯಾರಿಸಿ ತಕ್ಕುದಾದ ಪರಿಮಳ ದ್ರವ್ಯ ಮತ್ತು ತೈಲಗಳಿಂದ ಔಷಧೀಕರಿಸಲ್ಪಟ್ಟಿದೆ. ಸಾಮಾನ್ಯ ಪೌಡರುಗಳಿಗಿಂತ ಉತ್ತಮಗುಣವುಳ್ಳದ್ದಾಗಿ ಚರ್ಮವನ್ನು ತಂಪಾಗಿರಿಸಿ ಸಂತವಿಸುವ ಶಕ್ತಿ ಇರುವುದು. ಉಷ್ಣದಿಂದ ಬೆಂದುಹೋದ ಚರ್ಮದ ಭಾಗಕ್ಕೆ ಸ್ವಲ್ಪ ಪೌಡರನ್ನು ಹಚ್ಚಿದಾಕ್ಷಣ ತಂಪಾದ ಸ್ಪರ್ಶದಂತೆ ಭಾಸವಾಗುತ್ತದೆ. ದೇವರನ್ನು ಹೀರಿಕೊಂಡು ಅನೇಕ ತಾಸುಗಳ ಪರ್ಯಂತರ ಆನಂದವನ್ನೀಯುವುದು. ಎಲ್ಲಾ ಮಹಿಳೆಯರು ಇದರ ಸುಮಧುರವಾದ ಪರಿಮಳವನ್ನು ಮೆಚ್ಚುತ್ತಿರುವರು.

ಇಂದೇ ಒಂದು ಕುಟಿಕೂರಾ ಟಿನ್ನನ್ನು (Cuticura) ಕೊಂಡುಕೊಳ್ಳಿರಿ ಕುಟುಂಬದ ಪ್ರತೀ ಒಬ್ಬನಿಗೂ ಬಹು ಅಮೂಲ್ಯವಾದದ್ದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಟಾಲ್ಕಮ್ ಪೌಡರು

CUTICURA TALCUM POWDER

ಭಕ್ತಗೌರಿ

ಭಕ್ತಗೌರಿ ಎಂಬೀ ಭಕ್ತಿ ಚಿತ್ರದಲ್ಲಿ ಶ್ರೀಮತಿ ಜೀವರತ್ನಂ ಇವಳು ನಾಯಿಕಾ ಪಾತ್ರವನ್ನು ವಹಿಸಿ ಅತ್ಯುತ್ತಮವಾಗಿ ನಟಿಸಿರುತ್ತಾಳೆ.

ಜ್ಞಾನೇಶ್ವರವನ್ನು ನೋಡಲು ಸ್ಪೆಶಲ್ ಟ್ರೈನು

ಅನಂದಪಟ್ಟಣದಲ್ಲಿ ಪ್ರದರ್ಶಿತವಾಗುವ 'ಪ್ರಭಾತ'ದ 'ಸಂತಜ್ಞಾನೇಶ್ವರ' ಚಿತ್ರವನ್ನು ನೋಡಲು, ಶಿಡೋಸದಿಂದ ಸುಮಾರು ೫೦೦ ಜನರಿಂದ ಕೂಡಿದ ಸ್ಪೆಶಲ್ ಟ್ರೈನು ಬಂದಿತ್ತು. ಪ್ರಭಾತದವರ ಇತ್ತೀಚಿಯ ಅತ್ಯುತ್ತಮ ಭಕ್ತಿ ಚಿತ್ರವಿದು.

'ಭರೋಸಾ' ಚಿತ್ರದ ಮೇಲೆ ದುರಾರೋಪಗಳು

ಮಿನರ್ವಾ ಮುವಿಟೋನಿನ ಭರೋಸಾ ಚಿತ್ರದ ಮೇಲೆ ಕೆಲವು ಹಿಂದುಗಳೆಂಬವರು ದುರಾರೋಪ ಹೊರಿಸಿ ಅಪಪ್ರಚಾರವನ್ನು ಮಾಡಿರುವರು. ಅವರು ಸ್ತ ಚಿತ್ರವನ್ನು ಕೂಡಲೇ ನಿಷೇಧಿಸಬೇಕೆಂದು ಬರೆದಿರುತ್ತಾರೆ. ಈ ಚಿತ್ರದಿಂದ ಹಿಂದೂ ಮತವನ್ನು ಹೀನಗೈದು ಮುಸ್ಲಿಂ ಮತವನ್ನು ಪ್ರೋತ್ಸಾಹಿತವಾಗುತ್ತದೆಂದು ಅವರು ಹೇಳುತ್ತಾರೆ. ಮಹಿಪಾಲ್ ದೀಘ್ರಾಸ ಸರ್ದಾರ್ ಅಕ್ತರಳ ರಾಧಾಕೃಷ್ಣ ನೃತ್ಯವು ಹಿಂದುಗಳಿಗೆ ಅಸಹನೀಯವಾಗಿದೆಯಂತೆ. ಅಣ್ಣತಂಗಿಯರ ವಿವಾಹ ಮತ್ತು ಹಿಂದೂಸಮಾಜವು ವಿಷಯುಳ್ಳದ್ದೆಂದು ತೋರಿಸುವ ಸನ್ನಿವೇಶಗಳಿವೆಯಂತೆ. ಹೀಗಾಗಿ ಅವರು ಗಲಭೆಯೆಬ್ಬಿಸಿರುವರು. ಹಿಂದುಗಳು ಮುಸ್ಲಿಂ ಪಾತ್ರವಹಿಸುವುದೂ, ಮಹಮ್ಮದೀಯರು ಹಿಂದೂ ಅಭಿನಯ ಮಾಡುವುದು ಕಲಾದೃಷ್ಟಿಯಿಂದ ಮುಟ್ಟಿಗೆ ವಿಶೇಷವಲ್ಲ. ಒಂದು ಸಮಾಜದಲ್ಲಿರುವ ದೋಷವನ್ನು ಹೇಳಿದರೆ ಅದನ್ನು ತಿದ್ದಿಕೊಳ್ಳಬೇಕೆಂಬುದು ಸಮಾಜದವರಿಗೆ ಬುದ್ಧಿವಾದವಲ್ಲದೆ ಅದರಿಂದ ನೊಂದುಕೊಳ್ಳಬೇಕಾಗಿಲ್ಲ. ಕಲಾಸೇವಕರ ಮೇಲೆ ಹೀಗೆ ಆಕ್ಷೇಪವೆತ್ತುವುದು ನ್ಯಾಯವಲ್ಲವೆಂದು ಮಿರರ್ ಪತ್ರಿಕೆಯು ಬರೆಯುತ್ತದೆ.

ನಿಜವಾದ ಕನ್ನಡಮಾತೆಯೊಬ್ಬಳು ಆಗಿಹೋದಳು!

ಕಿತ್ತೂರ ಚನ್ನಮ್ಮನ ಸ್ಮಾರಕಕ್ಕೆ ರಾಜಾಜಿಯವರ ಬೆಂಬಲ

— ಹನ್ನೊಂದು ವರ್ಷಗಳ ಹಿಂದಿನದೊಂದು ನೆನಪು —

ಬರೆದವರು: ಚಿಕ್ಕೋಡಿ ಅನಂತರಾಯರು, ಬೆಳಗಾವಿ.

ಕನ್ನಡ ನಾಡಿನ ಇತಿಹಾಸದಲ್ಲಿ ಅಮರ ಕೀರ್ತಿಯನ್ನು ಗಳಿಸಿರುವ ಕಿತ್ತೂರಿನ ವೀರರಾಣಿ ಚನ್ನಮ್ಮನ ಸ್ಮಾರಕೋತ್ಸವವು ಇದೇ ತಿಂಗಳ ಕೊನೆಯ ಗುರುವಾರಕ್ಕೆ ಕಿತ್ತೂರಲ್ಲಿಯೇ ನೆರವೇರುವದೆಂಬದಾಗಿ ಶ್ರೀ ವಾಲಿಯವರು ವೃತ್ತ ಪತ್ರಗಳಲ್ಲಿ ಪ್ರಕಟಿಸಿದ ಸಂಗತಿಯನ್ನೋದಿ ನನಗೆ ಬಹಳ ಸಂತೋಷವಾಯಿತು. ಈ ಸಂತೋಷದ ಭರದಲ್ಲಿ ಹನ್ನೊಂದು ವರ್ಷಗಳ ಹಿಂದಿನ ಸ್ಮೃತಿಯೊಂದು ಉಕ್ಕಿ ಬರತೊಡಗಿರುವದರಿಂದ ಅದನ್ನು ಕನ್ನಡಿಗರಿಗೆ ತಿಳಿಸುವದಕ್ಕಾಗಿಯೇ ಇದೆರಡು ಸಾಲುಗಳನ್ನು ಬರೆಯುತ್ತಿದ್ದೇನೆ.

ಲಾಹೋರದ ಕಾಂಗ್ರೆಸ್ಸು ಮುಗಿದ ಬಳಿಕ ೧೯೩೦ರ ಜನವರಿ ತಿಂಗಳ ಆರಂಭಕ್ಕೆ ಚಕ್ರವರ್ತಿ ರಾಜಗೋಪಾಲಾಚಾರ್ಯರು ಕರ್ನಾಟಕಕ್ಕೆ ದಯಮಾಡಿಸಿದರಷ್ಟೆ. ಬೆಳಗಾವಿಯ ಕಾರ್ಯಕ್ರಮವನ್ನು ಮುಗಿಸಿಕೊಂಡು ರಾಜಾಜಿಯವರು ಧಾರವಾಡಕ್ಕೆ ಮೋಟಾರಿನಲ್ಲಿ ಪಯಣ ಬೆಳೆಸಿದರು. ದೇ. ಗಂಗಾಧರರಾಯರು ಜೊತೆಯಲ್ಲಿದ್ದರು. ಕಾರಣಾಂತರದಿಂದ ನಾನೂ ಆ ಪರಿವಾರದಲ್ಲಿದ್ದೆನು. ದಾರಿಯ ಮೇಲೆ ಕಿತ್ತೂರಲ್ಲಿಯೂ ಸಭೆಯ ಕಾರ್ಯಕ್ರಮವಿದ್ದಿತು. ಮುಕ್ತೂರ ಮಹಾಬಳೆಪ್ಪನವರು ಒಳ್ಳೆ ಅಭಿಮಾನದಿಂದ ಕಿತ್ತೂರಿನ ಗತವೈಭವವನ್ನೂ ಚನ್ನಮ್ಮನ ಸಾಹಸವನ್ನೂ ವರ್ಣಿಸಿದರು. ಸಭೆಯು ಮುಗಿದು ಮೋಟಾರು ಧಾರವಾಡಕ್ಕೆ ಸಾಗಿದ ಬಳಿಕ ರಾಜಾಜಿಯವರು ಮಹಾಬಳೆಪ್ಪನವರು ಹೇಳಿದ ವಿಷಯದ ವಿಶೇಷ ವಿಶದೀಕರಣವನ್ನು ಗಂಗಾಧರರಾಯರಿಂದ ಕೇಳತೊಡಗಿದರು. ಇವರಿಬ್ಬರು ಧುರೀಣರ ಸಂಭಾಷಣೆಯು ಇಂಗ್ಲಿಷಿನಲ್ಲಿಯೇ ನಡೆದಿತ್ತೆಂಬುದನ್ನು ಬೇರೆ ಹೇಳುವ ಕಾರಣವೇ ಇಲ್ಲ. ಕಿತ್ತೂರಿನ ಕಥೆಯು ನಡೆದಾಗ ಥ್ಯಾಕರೆ ಸಾಹೇಬನ ಹೆಸರು ಬಾರದೆ ಇರುತ್ತದೆಯೇ? We will pass by Thakeray memorial presently (ನಾವು ಇನ್ನು ಕೆಲಹೊತ್ತಿನಲ್ಲಿಯೇ......ಥ್ಯಾಕರೆಯವರ ಸ್ಮಾರಕದ ಬಳಿಯಿಂದಲೇ ಹಾದು ಹೋಗುತ್ತೇವೆ) ಎಂದರು ರಾಯರು. ಇದನ್ನು ಕೇಳಿದ ಕೂಡಲೆ ರಾಜಾಜಿಯವರು So that fellow has a fine Memorial over there and what about Channamma? (ಥ್ಯಾಕರೆಯವರಿಗೆ ಅಲ್ಲಿ ಅವರು ಸ್ಮಾರಕ ಕಟ್ಟಿದ್ದಾರೆ; ಆದರೆ ಚನ್ನಮ್ಮನಿಗೆ ಏನು?) ಎಂದು ಕೇಳಿದರು. ಗಂಗಾಧರರಾಯರು ಸುಮ್ಮನಿದ್ದರು. ರಾಜಾಜಿಯವರು ಒಂದು ನಿಮಿಷ ನಿಂತು ಮತ್ತೆ No memorial to Channamma whatsoever? [ಚನ್ನಮ್ಮನಿಗೆ ಯಾವ ಬಗೆಯ ಸ್ಮಾರಕವೂ ಇಲ್ಲವೆ?] ಎಂದು ಪ್ರಶ್ನೆ ಹಾಕಿದರು. ವಸ್ತುಸ್ಥಿತಿಗೆ ಅನುಸಾರವಾಗಿ ಯಾವ ಉತ್ತರವನ್ನು ಕೊಡುವದು ಶಕ್ಯವಿದ್ದಿತೋ ಅದನ್ನೇ ಗಂಗಾಧರರಾಯರು ಕೊಟ್ಟರು—ಎಂದರೆ ಏನೂ ಉತ್ತರವನ್ನೇ ಕೊಡಲಿಲ್ಲ. ಇಂಥ ಐತಿಹಾಸಿಕ ವ್ಯಕ್ತಿಗಳ ಸ್ಮಾರಕಗಳ ಆವಶ್ಯಕತೆಯ ವಿಷಯಕ್ಕೂ ಕೆಲವು ಮಾತುಗಳಾದವು. ಕಿತ್ತೂರು ಬರುವದಕ್ಕೂ ಮುಂದೆ ಬಾಗೇವಾಡಿಯಲ್ಲಿ ಕೆಲವು ಸ್ವಯಂಸೇವಕರು 'ಭಾರತಮಾತಾಕಿ ಜಯ್' ಎಂಬ ಕೂಗಿನೊಡನೆ 'ಕರ್ನಾಟಕ ಮಾತಾಕೀಜಯ್' ಎಂಬ ಕೂಗನ್ನು ಹಾಕಿದ್ದರು. ಇದು ರಾಜಗೋಪಾಲಾಚಾರ್ಯರ ಮನಸ್ಸಿಗೆ ಬಾರದೇ ಇದ್ದುದರಿಂದ ಅವರು ವ್ಯಂಗವಾದ ನಗೆನುಡಿಯಲ್ಲಿ "Oh here is a daughter-in law for mother India! ಓ ಇಲ್ಲಿ ನಮ್ಮ ಭಾರತಮಾತೆಗೆ ಒಬ್ಬ ಸೊಸೆಯೂ ಸಿಕ್ಕಿರುವಳಲ್ಲ!" ಎಂದು ಉದ್ಗರಿಸಿದ್ದರು. ಅದೇ ಮಾತು ಅವರಿಗೆ ಮತ್ತೆ ನೆನಪಾಗಿ "Here was one of the real Karnatak-mathas (Channamma). These fellows should justly be proud of her. ಇಲ್ಲಿ ನಿಜವಾದ ಕರ್ನಾಟಕ ಮಾತೆಯೊಬ್ಬಳು (ಚನ್ನಮ್ಮನು) ಆಗಿಹೋದಳು. ಇವರೆಲ್ಲರೂ ಅವಳ ಬಗ್ಗೆ ನಿಜವಾಗಿಯೂ ಅಭಿಮಾನ ತಾಳಬೇಕು" ಎಂದರು. ಮೋಟರು ಥ್ಯಾಕರೆ ಸ್ಮಾರಕವನ್ನು ದಾಟಿ ಧಾರವಾಡ ಪಟ್ಟಣವನ್ನು ಸೇರಿತು.

—ಕರ್ಮವೀರ



ನಿಮ್ಮ ೧೦ ರೂಪಾಯಿ ರೂ. ೧೩॥ ಆಗುತ್ತದೆ ಹತ್ತು ವರ್ಷಗಳಲ್ಲಿ

ನೀವು ಈಗ ಹತ್ತು ವರ್ಷದ ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟ್‌ಗಳನ್ನು ಕೊಳ್ಳಬಹುದು ಮತ್ತು ಯುದ್ಧದಲ್ಲಿ ವಿಜಯ ದೊರಕುವುದಕ್ಕಾಗಿ ನಿಜವಾಗಿ ಸಹಾಯ ಮಾಡಿದೆನೆಂದು ನಂಬಿ ಸಂತೃಪ್ತರಾಗಬಹುದು.

ನೀವು ಮಾಡಬೇಕಾದ್ದಿಷ್ಟೇ

ಪೋಸ್ಟಾಫೀಸಿಗೆ ಹೋಗಿ ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟ್ ಕಾರ್ಡ್ ಕೊಡುವಂತೆ ಕೇಳಿರಿ; ಅದನ್ನು ಉಚಿತವಾಗಿ ಕೊಡಲಾಗುವುದು. ಆ ಮೇಲೆ ನಿಮಗೆ ಅನುಕೂಲವಾದಾಗಲೆಲ್ಲಾ ನಾಲ್ಕಾಣೆ, ಎಂಟಾಣೆ ಅಥವಾ ಒಂದು ರೂಪಾಯಿ ಬೆಲೆಯ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪುಗಳನ್ನು ಸಾಧ್ಯವಾದಷ್ಟು ಕೊಳ್ಳಿರಿ. ನಿಮ್ಮ ಕಾರ್ಡಿನ ಮೇಲೆ ರೂ. ೧೦. ಬೆಲೆ ಬಾಳುವಷ್ಟು ಸ್ಟಾಂಪುಗಳನ್ನು ಹಚ್ಚಿದ ಮೇಲೆ ಅದನ್ನು ಸೇವಿಂಗ್ಸ್ ಬ್ಯಾಂಕ್ ಇಲಾಖೆ ಇರುವ ಯಾವ ಪೋಸ್ಟಾಫೀಸಿನಲ್ಲಾದರೂ ಕೊಡಿರಿ. ಅವರು ನಿಮಗೆ ರೂ. ೧೦. ಬೆಲೆ ಬಾಳುವ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಕೊಡುವರು! ಈ ಸರ್ಟಿಫಿಕೇಟು ಹತ್ತು ವರ್ಷ ಕಾಲದಲ್ಲಿ ರೂ. ೧೩॥ ಬೆಲೆಯುಳ್ಳದ್ದಾಗುವುದು. ಇದರ ಮೇಲೆ ಆದಾಯ ತೆರಿಗೆ ಇಲ್ಲ. ಅದಕ್ಕೂ ಮೊದಲೇ ನಿಮಗೆ ಹಣ ಬೇಕಾದಲ್ಲಿ ಆ ವರೆಗಿನ ಬಡ್ಡಿ ಸೇರಿಸಿ ಹಣವನ್ನು ನಿಮಗೆ ಹಿಂದಕ್ಕೆ ಕೊಡಲಾಗುವುದು.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು ಕೊಳ್ಳಿರಿ

ಲಾ ಭ ಕ್ಕೆ ಮ ತ್ತು ರ ಕ್ಷ ಣೆ ಗೆ

ಛ. ಕಿ. ೨೦.

ಶಿಕ್ಷಣ ಮಾಧ್ಯಮವಾಗಿ ಕನ್ನಡ

ದಕ್ಷಿಣ ಕನ್ನಡದ ವಿದ್ಯಾ ಸಂಸ್ಥೆಗಳಲ್ಲಿ

ಶಿಕ್ಷಣ ಮಧ್ಯಮವು ಆಯಾಯ ದೇಶಭಾಷೆಗಳಲ್ಲಿ ಇರತಕ್ಕದ್ದು—ಎಂಬೀ ವಿಷಯವನ್ನು ಎಲ್ಲಾ ಪ್ರಗತಿಪರ ರಾಷ್ಟ್ರಗಳೂ ಅಂಗೀಕರಿಸಿ ಫಲಪ್ರಯೋಜನಗಳನ್ನು ಪಡೆದುಕೊಂಡಿವೆ. ಇತರ ರಾಷ್ಟ್ರಗಳಲ್ಲಿ ಈ ಕುರಿತು ಪ್ರಯೋಗ ಪ್ರಯೋಜನೆಗಳು ಬಹುಕಾಲದ ಹಿಂದೆಯೇ ಆಗುತ್ತಿವೆ. ತಡವಾಗಿಯಾದರೂ ಭಾರತದಲ್ಲಿಯೂ ರಾಷ್ಟ್ರೀಯ ಮನೋಭಾವವು ಜನತೆಯಲ್ಲಿ ವಿಚಾರವನ್ನುಂಟು ಮಾಡಿದಾಗ, ನಮ್ಮ ಮೇಲೆ ಹೊರಿಸಲ್ಪಟ್ಟ ಆಂಗ್ಲ ಭಾಷೆಯ ಶಿಕ್ಷಣ ಮಾಧ್ಯಮವನ್ನು ತೆಗೆದುಹಾಕಿ, ಆಯಾಯ ದೇಶಭಾಷೆಗಳಲ್ಲಿಯೇ ಶಿಕ್ಷಣ ಮಾಧ್ಯಮವಾಗಬೇಕೆಂದು ಶಿಕ್ಷಣತಜ್ಞರು ಸಂಬಂಧಿಸಿದ ಅಧಿಕಾರೀ ವರ್ಗದವರೂ ನಿರ್ಧರಿಸಿ ಇಂದು ಪ್ರಯೋಗಿಸಿದ್ದಾರೆ. ಇಂತಹ ಸಂದರ್ಭದಲ್ಲಿ, ಕೆಥೊಲಿಕ್ ಕ್ರೈಸ್ತ ಬಂಧುಗಳು ಇಂದು ಅದಕ್ಕೆ ಒಪ್ಪುವುದಿಲ್ಲವೆಂಬ ವಿಷಯವು ಅತ್ಯಂತ ಶೋಚನೀಯವಾಗಿದೆ.

ಆಂಗ್ಲ ಭಾಷಾಜ್ಞಾನ ಕೆಡುವುದಿಲ್ಲ

ಶಿಕ್ಷಣಮಾಧ್ಯಮವಾಗಿ ದೇಶಭಾಷೆಯನ್ನು ಅಂಗೀಕರಿಸುವುದರಿಂದ ಆಂಗ್ಲ ಭಾಷಾಜ್ಞಾನವು ಕೆಟ್ಟು ಹೋಗುವುದೆಂದು ತಿಳಿಯುವುದು ಸರಿಯಲ್ಲ. ನಾವು ಗಣಿತ ವಿಜ್ಞಾನ, ಮೊದಲಾದ ವಿಷಯಗಳನ್ನು ಕನ್ನಡದಲ್ಲಿ ವಿದ್ಯಾರ್ಥಿಗಳಿಗೆ ಕಲಿಸಿದರೆ ವಿಷಯಗಳು ಆದಷ್ಟು ಬೇಗನೇ ಅವರ ಮನಸ್ಸಿಗೆ ಮುಂದಟ್ಟಾಗುವುದರಿಂದ ಅಂತರ್‌ರಾಷ್ಟ್ರೀಯ ಪ್ರಖ್ಯಾತಿಯುಳ್ಳ ಇಂಗ್ಲಭಾಷೆಯ ವಿಪುಲ ಸಾಹಿತ್ಯ ಸಂಪಾದನೆಗೆ ಅವರಿಗೆ ಅವಕಾಶವು ಹೆಚ್ಚು ದೊರೆತಂತಾಗಿ ಆಂಗ್ಲ ಭಾಷಾಜ್ಞಾನವು ಇದರಿಂದ ಹೆಚ್ಚಲು ಅವಕಾಶವಿದೆ. ಇದರೊಡನೆ ನಾವೀಗ ತುಚ್ಛವೆಂದು ಪರಿಗಣಿಸುವ ದೇಶಭಾಷಾಜ್ಞಾನವೂ ಹೆಚ್ಚುವುದೆಂಬುದರಲ್ಲಿ ಏನೇನೂ ಸಂಶಯವಿಲ್ಲ. ಅರ್ಥಮಾಡಿಕೊಳ್ಳಲು ಅತ್ಯಂತ ಪರಿಶ್ರಮವುಳ್ಳ ಪರದೇಶೀಯ ಭಾಷೆಯಾದ ಆಂಗ್ಲ ಭಾಷೆಯಲ್ಲಿ ಗಣಿತ ವಿಜ್ಞಾನಾದಿ ವಿಷಯಗಳನ್ನು ಪಾಠ ಹೇಳಿದರೆ ತಿಳಿಯುವುದಕ್ಕಿಂತ ವಿದೇಶೀಯ ಭಾಷೆಯ ತೊಡಕು ಬಗೆಹರಿದು, ಆಯಾಯ ವಿಷಯಗಳನ್ನು ಕಡಿಮೆ ಸಮಯದಲ್ಲಿ ಹೆಚ್ಚು ತಿಳಕೊಳ್ಳಲೂ ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತವೆಂಬುದು ಸಾಮಾನ್ಯ ತಿಳುವಳಿಕೆಯುಳ್ಳ ಯಾವನಿಗಾದರೂ ಅರ್ಥವಾಗುವುದು, ಮಾತ್ರವಲ್ಲದೆ ಇದು ಪ್ರಯೋಗ ಮೂಲವಾದ ಸಿದ್ಧಾಂತವಾಗಿಯೂ ಇರುವುದು. ಹೀಗಿರುವಾಗ ನಮ್ಮ ಜಿಲ್ಲೆಯ ರೋಮನ್ ಕೆಥೋಲಿಕ್ ಕ್ರೈಸ್ತಬಂಧುಗಳು ಕನ್ನಡವು ಶಿಕ್ಷಣ ಮಾಧ್ಯಮವಾದಲ್ಲಿ ಆಗುವ ಅನರ್ಥಗಳೆಂದು ಯಾವುವನ್ನು ಹೇಳುತ್ತಾರೋ ಆ ವಾದದಲ್ಲಿ ಒಂದಿಷ್ಟಾದರೂ ನ್ಯಾಯವಿದೆಯೆಂದು ತಿಳಕೊಳ್ಳಲಾಗುವುದಿಲ್ಲ.

ಪ್ರಯೋಗ ಫಲಿತಾಂಶವೇನು?

ಆಂಗ್ಲಭಾಷೆಯು ಇಂದು ಅಂತರ್‌ರಾಷ್ಟ್ರೀಯ ಭಾಷೆಯಾದರೂ, ಯೂರೋಪಿನ ರಾಷ್ಟ್ರಗಳಾದರೂ, ತಮ್ಮ ತಮ್ಮಲ್ಲಿ ಶಿಕ್ಷಣ ಮಾಧ್ಯಮವಾಗಿ ದೇಶೀಯ ಭಾಷೆಯನ್ನೇ ಅಂಗೀಕರಿಸಿಕೊಂಡಿವೆ. ಆ ಯಾವ ರಾಷ್ಟ್ರವಾದರೂ, ಪ್ರಗತಿಯ ದೃಷ್ಟಿಯಲ್ಲಿ ನಮ್ಮ ಭಾರತಕ್ಕಿಂತ ಹಿಂದುಳಿದಿದೆಯೆಂದು ನಾವೀಗ ಹೇಳಲು ಖಂಡಿತ ಸಾಧ್ಯವಿಲ್ಲ. ಅವರು ಯಥಾರ್ಥತೆಯನ್ನು ಅರ್ಥಮಾಡಿಕೊಂಡಿದ್ದಾರೆಯೆಂದೇ ನಾವಿದರಿಂದ ತಿಳಕೊಳ್ಳಬೇಕಾಗಿದೆ.

ಕನ್ನಡವು ಶಿಕ್ಷಣ ಮಾಧ್ಯಮವಾಗಬೇಕೆಂದು ಮೊದಲಾಗಿ ಇದನ್ನು ಪ್ರಯೋಗಿಸಿದವರು ಮೈಸೂರು ವಿದ್ಯಾ ಇಲಾಖೆಯವರು. ಅಲ್ಲಿ ಮಾಡಿದ ಪ್ರಯೋಗವು ಆಶ್ಚರ್ಯಕರವಾದ ಫಲಿತಾಂಶವನ್ನು ಕೊಟ್ಟಿದೆ. ಸಾರ್ವಜನಿಕ ಪರೀಕ್ಷೆಗಳಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ತೆಗೆದುಕೊಂಡ ವಿದ್ಯಾರ್ಥಿಗಳು, ಗಣಿತ, ವಿಜ್ಞಾನಾದಿ ವಿಷಯಗಳಲ್ಲಿ ಮಾತ್ರವಲ್ಲ ಆಂಗ್ಲ ಭಾಷೆಯಲ್ಲಿಯೂ ಹೆಚ್ಚು ಮಾರ್ಕುಗಳನ್ನು ಪಡೆದು ಉತ್ತೀರ್ಣರಾಗಿರುವರು ಇಂದು. ಈ ಪ್ರಯೋಗವು ನಮ್ಮ ಪ್ರತ್ಯಕ್ಷದಲ್ಲಿರುವಾಗ, ಕನ್ನಡವು ನಮ್ಮ ಶಿಕ್ಷಣ ಮಾಧ್ಯಮವಾಗಬೇಕೆಂದು ಶಿಕ್ಷಣಜ್ಞರು, ವಿದ್ಯಾವಂತರು, ಅಧ್ಯಾಪಕರೇ ಸಾರಿಸಾರಿ ಹೇಳುತ್ತಿರುವಾಗ, ತಮ್ಮಲ್ಲಿ ಶಿಕ್ಷಣ ಮಾಧ್ಯಮ ಮಾಡಿದರೆ, ಅದರಿಂದ ಹಾನಿಯುಂಟೆಂದು ಸಾಧಿಸುವ ಕ್ರೈಸ್ತ ಬಂಧುಗಳ ಈ ಹಟವನ್ನು ಅವರು ಪ್ರಗತಿಗೆ ಅನುಕೂಲವಿಲ್ಲವೆಂಬ ನೆಲೆಯಲ್ಲಿ ವಿಚಾರಿಸಬೇಕಾಗಿದೆಯಲ್ಲದೆ ಬೇರೆ ಅರ್ಥಮಾಡಿಕೊಳ್ಳಲಾಗುವುದಿಲ್ಲ.

ಕಾಂಗ್ರೆಸಿನ ಒತ್ತಾಯವಲ್ಲ

ಇದು ಕಾಂಗ್ರೆಸು ಮಂತ್ರಿಮಂಡಳದ ಒತ್ತಾಯವೆಂದು ಕೆಲವರು ಅರ್ಥಮಾಡಿಕೊಂಡಿದ್ದಾರೆ. ಅದು ಬರಿಯ ಭ್ರಮೆ ಇದು. ಪ್ರಗತಿಪರ ಮನೋಭಾವನೆಯ ಒತ್ತಾಯ ಮಾತ್ರ. ಪ್ರಥಮವಾಗಿ ಕನ್ನಡದಲ್ಲಿ ಶಿಕ್ಷಣ ಮಾಧ್ಯಮವಾಗಿ ಮೈಸೂರಲ್ಲಿ ಪ್ರಯೋಗಿಸಿದ್ದು ಕಾಂಗ್ರೆಸಿನ ಒತ್ತಾಯದಿಂದಲ್ಲ. ಬಂಗಾಳದಲ್ಲಿಯಾದರೂ ಇದನ್ನು ಪ್ರಯೋಗಿಸಿ ಯಶಸ್ವಿಯಾಗಿ ನಡೆಸುತ್ತಿರುವುದು ಕಾಂಗ್ರೆಸಿನ ಒತ್ತಾಯದಿಂದಲೆಂದು ಹೇಳಲು ಯಾರಿಗೂ ನಾಲಿಗೆ ಬರಲಿಕ್ಕಿಲ್ಲ. ವಿದೇಶೀಯ ಭಾಷೆಯೊಂದರಲ್ಲಿ ಪ್ರಾಪಂಚಿಕ ಜ್ಞಾನವನ್ನು ತಿಳಿಸುವ ಶಿಕ್ಷಣ ವ್ಯವಸ್ಥೆಯನ್ನು ಮಾಡಿಕೊಂಡ ನಮ್ಮ ರೀತಿಯು ಕ್ರಮ ಅಸ್ವಾಭಾವಿಕ ಪದ್ಧತಿಯೆಂಬುದು ಎಲ್ಲೆಡೆ ಜನರಿಗೂ ತಿಳಿದು ಬಂದಿರುವುದರಿಂದ ಸ್ವಾಭಾವಿಕವಾಗಿಯೇ ಈ ವಿಚಾರದಲ್ಲಿ ಕ್ರಾಂತಿಯುಂಟಾಗಿದೆಯಲ್ಲದೆ, ಕಾಂಗ್ರೆಸು ಮಂತ್ರಿಮಂಡಳದ ಒತ್ತಾಯವಿದೆಂದು ಯಾರಾದರೂ ಗ್ರಹಿಸುವುದಿದು ತಪ್ಪಾಗಿದೆ. ದೇಶಭಾಷೆಯಲ್ಲಿ ಶಿಕ್ಷಣ ಮಾಧ್ಯಮವನ್ನಾಗಿಸಿಕೊಂಡಿರುವ ವಿದೇಶೀಯ ರಾಷ್ಟ್ರಗಳಲ್ಲಿ, ನಮ್ಮ ಇಲ್ಲಿನ ವಿದ್ಯಾರ್ಥಿಗಳು ಯಾವ ಪ್ರಾಯದಲ್ಲಿ ಎಷ್ಟು ವಿಷಯ ಗ್ರಹಣಮಾಡಿಕೊಳ್ಳುತ್ತಾರೋ ಅದಕ್ಕಿಂತ ಹೆಚ್ಚು ವಿಷಯ ಗ್ರಹಣವನ್ನು ಅಲ್ಲಿನ ವಿದ್ಯಾರ್ಥಿಗಳು ಮಾಡಿಕೊಳ್ಳುತ್ತಿದ್ದಾರೆಯೆಂಬುದು ಜಗತ್ತಿನ ಕಡೆಗೆ ಕಣ್ಣೆತ್ತಿ ನೋಡುವವರಿಗೆ ತಿಳಿಯದಿರದು.

ಕನ್ನಡ ಬರುವುದಿಲ್ಲವೇ?

ಕೊಂಕಣಿ ಭಾಷೆಯವರಿಗೆ ಕನ್ನಡವು ಬರುವುದಿಲ್ಲವೆಂದೂ, ಅವರಿಗೆ ಆಂಗ್ಲ ಭಾಷೆಯುನ್ನೇ ಕನ್ನಡವೂ ಹೊಸತೆಂದೂ ಅದಕಾರಣ ಕನ್ನಡಕ್ಕಿಂತ ಆಂಗ್ಲ ಭಾಷೆಯೇ ಶಿಕ್ಷಣ ಮಾಧ್ಯಮವಾಗಬಹುದೆಂದೂ ವಾದಿಸುವುದರಲ್ಲಿಯೂ ಸತ್ಯಾಂಶವುಂಟೆಂದು ಹೇಳಬರುವುದಿಲ್ಲ. ಕೊಂಕಣಿ ಮಾತನಾಡುವವರು ನಮ್ಮ ಜಿಲ್ಲೆಯಲ್ಲಿ ಕೆಥೊಲಿಕರೇ ಮಾತ್ರವಲ್ಲ ಸಾರಸ್ವತರು ಗೌಡಸಾರಸ್ವತರು ಮತ್ತೆ ಕೆಲವರೂ ಇದ್ದಾರೆ. ಇವರೆಲ್ಲರೂ ಕನ್ನಡವನ್ನು ಮೆಚ್ಚುತ್ತಾರೆ. ಇವರಲ್ಲಿ ಹಲವು ಮಂದಿ ಅಖಿಲ ಕರ್ನಾಟಕದ ಧುರೀಣರೇ ಇದ್ದಾರೆ. ಕನ್ನಡ ಭಾಷೆಯಲ್ಲಿ ಉತ್ತಮ ಪಂಡಿತರಾಗಿದ್ದಾರೆ. ಹೀಗಿರುವಾಗ ಕೊಂಕಣಿ ಭಾಷೆಯಾಡುವ ಕ್ರೈಸ್ತರಿಗೆ ಮಾತ್ರ ಕನ್ನಡ ಬರುವುದಿಲ್ಲವೆಂದು ಹೇಳುವುದು ಸತ್ಯವಾಗಿ ತೋರುವುದಿಲ್ಲ, ಕೆಲ ಕ್ರೈಸ್ತರಿಗೆ ಕನ್ನಡದಲ್ಲಿ ತುಚ್ಛಭಾವವುಂಟೆಂದೂ, ಅವರು ಈ ಚಳವಳಿಯನ್ನು ಮುಂದೆ ಮಾಡುತ್ತಿದ್ದಾರೆಂದೂ ಹೇಳುವುದರಲ್ಲಿ ಹೆಚ್ಚಿನ ಸ್ಪಷ್ಟತೆಯುಂಟು. ಕನ್ನಡವನ್ನು ತುಚ್ಛಮಾಡುವುದರಿಂದ, ಕೊಂಕಣಿ ಭಾಷೆಗೂ ಪ್ರಯೋಜನವಾಗದೆ ವಿದೇಶೀಯ ಭಾಷೆಯನ್ನು ವಿದ್ಯಾರ್ಥಿಗಳ ಮೇಲೆ ಹೊರಿಸುವ ಪ್ರಮಾದವೊಂದು ಮಾತ್ರ ಸಾಧಿಸಿದಂತಾಗುವುದು.

ತುಳುವರ ಸಮ್ಮತಿ

ದಕ್ಷಿಣಕನ್ನಡದಲ್ಲಿ ಬಹುಮಂದಿಯಾಗಿರುವವರ ಪ್ರಬಲ ಮತವಿರುವವರು ತುಳು ಮಾತನಾಡುವವರು. ಯಾವುದೇ ಅಭಿಪ್ರಾಯಕ್ಕೆ ಅವರದು ನಿರ್ಧಾರಮತ. ಕನ್ನಡವು ಅವರಿಗೂ ಭಿನ್ನಭಾಷೆ. ಆದರೆ ಅವರು ಇದಕ್ಕೆ ಆತಂಕಪಡಿಸುವುದಿಲ್ಲ. ಕೊಂಕಣಿ ಮಾತನಾಡುವವರ ಅಲ್ಪಮತದ ಆತಂಕದಲ್ಲಿಯೂ ಎಲ್ಲಾ ಕೊಂಕಣಿ ಮಾತನಾಡುವ ಪಂಗಡದವರ ಸಹಕಾರವಿಲ್ಲ. ಹೀಗಿರುವಾಗ ಸರಕಾರದವರು ನಮ್ಮ ಜಿಲ್ಲೆಯ ವಿದ್ಯಾಸಂಸ್ಥೆಗಳ ವಿಷಯವಾಗಿ ಕನ್ನಡದಲ್ಲಿಯೇ ಶಿಕ್ಷಣಮಾಧ್ಯಮವಿರುವಂತೆ ಮಾಡಬೇಕಾದುದು ಅವಶ್ಯವಿದೆ ನಾವು ಬಿನ್ನವಿಸುತ್ತೇವೆ.

—K R

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ವಿವರಗಳಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಗುಣಬಾರದಿದ್ದರೆ ಹಣ ವಾಪಾಸು.
ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ
ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಿಕೆಯ ಅಶಕ್ತಿಯಾಗುತ್ತದೆ. ಒಕ್ಕಲು ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರ್ತಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೊಲ್ಹಾಪುರ ಇವರು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯು ಕ್ರಯರೂ ೪—೦—೦ ಟ. ಖ. ಅಲ್ಲ

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C.

'ನಿಜವಾದ ಕನ್ನಡಮಾತೆಯೊಬ್ಬಳು ಆಗಿಹೋದಳು!'

ಕಿತ್ತೂರ ಚನ್ನಮ್ಮನ ಸ್ಮಾರಕಕ್ಕೆ ರಾಜಾಜಿಯವರ ಬೆಂಬಲ

— ಹನ್ನೊಂದು ವರ್ಷಗಳ ಹಿಂದಿನದೊಂದು ನೆನಪು —

ಬರೆದವರು: ಚಿಕ್ಕೋಡಿ ಅನಂತರಾಯರು, ಬೆಳಗಾವಿ

ಕನ್ನಡ ನಾಡಿನ ಇತಿಹಾಸದಲ್ಲಿ ಮರ ಕೀರ್ತಿಯನ್ನು ಗಳಿಸಿರುವ ತ್ತೂರಿನ ವೀರರಾಣಿ ಚನ್ನಮ್ಮನ ಸ್ಮಾರಕೋತ್ಸವವು ಇದೇ ತಿಂಗಳ ಕೊನೆಯ ಸುಮಾರಕ್ಕೆ ಕಿತ್ತೂರಲ್ಲಿ ಯೇ ನೆರವೇರುವದೆಂಬದಾಗಿ ಶ್ರೀ ಕಾಲಿಯವರು ವೃತ್ತ ಪತ್ರಗಳಲ್ಲಿ ಪ್ರಕಟಿಸಿದ ಸಂಗತಿಯನ್ನೋದಿ ನನ ಬಹಳ ಸಂತೋಷವಾಯಿತು. ಸಂತೋಷದ ಭರದಲ್ಲಿ ಹನ್ನೊಂ ದು ವರ್ಷಗಳ ಹಿಂದಿನ ಸ್ಮೃತಿ ತೊಂದು ಉಕ್ಕಿ ಬರತೊಡಗಿರುವ ದರಿಂದ ಅದನ್ನು ಕನ್ನಡಿಗರಿಗೆ ತಿಳು ಸುವದಕ್ಕಾಗಿಯೇ ಇದೆರಡು ಸಾ ಲುಗಳನ್ನು ಬರೆಯುತ್ತಿದ್ದೇನೆ.

ಲಾಹೋರದ ಕಾಂಗ್ರೆಸ್ಸು ಮುಗಿದ ಳಿಕ ೧೯೩೦ರ ಜನವರಿ ತಿಂಗಳ ಆರಂ ಭಕ್ಕೆ ಚಕ್ರವರ್ತಿ ರಾಜಗೋಪಾಲಾಚಾ ರ್ಯರು ಕರ್ನಾಟಕಕ್ಕೆ ದಯಮಾಡಿಸಿದ್ದ ಷ್ಟು. ಬೆಳಗಾವಿಯ ಕಾರ್ಯಕ್ರಮವ ನ್ನು ಮುಗಿಸಿಕೊಂಡು ರಾಜಾಜಿಯವರು ಧಾರವಾಡಕ್ಕೆ ಮೋಟಾರಿನಲ್ಲಿ ಪಯಣ ಬೆಳೆಸಿದರು. ದೇ. ಗಂಗಾಧರರಾಯರು ಜೊತೆಯಲ್ಲಿದ್ದರು. ಕಾರಣಾಂತರದಿಂದ ನಾನೂ ಆ ಪರಿವಾರದಲ್ಲಿದ್ದೆನು. ದಾರಿ ಯ ಮೇಲೆ ಕಿತ್ತೂರಲ್ಲಿಯೂ ಸಭೆಯ ಕಾರ್ಯಕ್ರಮವಿದ್ದಿತು. ಮುತ್ತೂರ ಮ ಹಾಬಳೆಪ್ಪನವರು ಒಳ್ಳೆ ಅಭಿಮಾನದಿಂದ ಕಿತ್ತೂರಿನ ಗತವೈಭವವನ್ನೂ ಚನ್ನಮ್ಮನ ಸಾಹಸವನ್ನೂ ವರ್ಣಿಸಿದರು. ಸಭೆಯು ಮುಗಿದು ಮೋಟಾರು ಧಾರವಾಡಕ್ಕೆ ಹೊರಗಿದ ಒಳಿಕ ರಾಜಾಜಿಯವರು ಮಹಾಬಳೆಪ್ಪನವರು ಹೇಳಿದ ವಿಷಯದ ವಿಶೇಷ ವಿಶದೀಕರಣವನ್ನು ಗಂಗಾಧರ ರಾಯರಿಂದ ಕೇಳತೊಡಗಿದರು. ಇವರಿ ರು ಧುರೀಣರ ಸಂಭಾಷಣೆಯು ಇಂಗ್ಲಿ ಷಿನಲ್ಲಿಯೇ ನಡೆದಿತ್ತೆಂಬುದನ್ನು ಬೇರೆ ಹೇಳುವ ಕಾರಣವೇ ಇಲ್ಲ. ಕಿತ್ತೂರಿನ ಸಭೆಯು ನಡೆದಾಗ ಥ್ಯಾಕರೆ ಸಾಹೇಬನ ಹೆಸರು ಬಾರದೆ ಇರುತ್ತದೆಯೇ? We ll pass by Thakeray memorial presently (ನಾವು ಇನ್ನು ಸ್ವಲ್ಪಹೊತ್ತಿನಲ್ಲಿಯೇ ಥ್ಯಾಕರೆಯವರ ಸ್ಮಾರಕದ ಬಳಿಯಿಂದಲೇ ಹಾದು ಹೋ ಗುತ್ತೇವೆ) ಎಂದರು ರಾಯರು. ಇದನ್ನು ಕೇಳಿದ ಕೂಡಲೆ ರಾಜಾಜಿಯವರು that fellow has a fine Memorial over there and what about Channamma? (ಥ್ಯಾಕರೆಯು ಗ್ರೆ ಅಲ್ಲಿ ಅವರು ಸ್ಮಾರಕ ಕಟ್ಟಿದ್ದಾರೆ; ಹಾಗಾದರೆ ಚನ್ನಮ್ಮನಿಗೆ ನೀವು?) ಎಂದು ಕೇಳಿದರು. ಗಂಗಾಧರರಾಯರು ಸ್ತಬ್ಧರಾಗಿದ್ದರು. ರಾಜಾಜಿಯವರು ಒಂದು ಗಳಿಗೆ ನಿಂತು ಮತ್ತೆ No memorial Channamma whatsoever? ಚನ್ನಮ್ಮನಿಗೆ ಯಾವ ಬಗೆಯ ಸ್ಮಾರಕ ವೂ ಇಲ್ಲವೆ?] ಎಂದು ಪ್ರಶ್ನೆ ಹಾಕಿದ ರು. ವಸ್ತು ಸ್ಥಿತಿಗೆ ಅನುಸಾರವಾಗಿ ಯಾವ ಉತ್ತರವನ್ನು ಕೊಡುವದು ಶಕ್ಯ ವಿದ್ದಿತೋ ಅದನ್ನೇ ಗಂಗಾಧರರಾಯರು ಕೊಟ್ಟರು—ಎಂದರೆ ಏನೂ ಉತ್ತರವನ್ನೇ ಕೊಡಲಿಲ್ಲ. ಇಂಥ ಐತಿಹಾಸಿಕ ವ್ಯಕ್ತಿ ಗಳ ಸ್ಮಾರಕಗಳ ಆವಶ್ಯಕತೆಯ ವಿಷಯ ಕ್ಕೂ ಕೆಲವು ಮಾತುಗಳಾದವು. ಕಿತ್ತೂ ರು ಬರುವದಕ್ಕೂ ಮುಂಚೆ ಬಾಗೇವಾಡಿ ಯಲ್ಲಿ ಕೆಲವು ಸ್ವಯಂ ಸೇವಕರು 'ಭಾರತಮಾತಾಕಿ ಜಯ್' ಎಂಬ ಕೂಗಿ ನೊಡನೆ 'ಕರ್ನಾಟಕ ಮಾತಾಕೀಜಯ್' ಎಂಬ ಕೂಗನ್ನು ಹಾಕಿದ್ದರು. ಇದು ರಾಜಗೋಪಾಲಾಚಾರ್ಯರ ಮನಸ್ಸಿಗೆ ಬಾರದೇ ಇದ್ದುದರಿಂದ ಅವರು ವ್ಯಂಗ್ಯ ವಾದ ನಗೆನುಡಿಯಲ್ಲಿ "Oh here is a daughter-in law for mother India! " ಇಲ್ಲಿ ನಮ್ಮ ಭಾರತಮಾತೆಗೆ ಒಬ್ಬ ಸೊಸೆಯೂ ಸಿಕ್ಕಿರುವಳಲ್ಲ!" ಎಂದು ಉದ್ಗರಿಸಿದ್ದರು. ಅದೇ ಮಾತು ಅವರಿಗೆ ಮತ್ತೆ ನೆನಪಾಗಿ "Here was one of the real Karnatak-mathas (Channamma) These fellows should justly be proud of her. ಇಲ್ಲಿ ನಿಜವಾದ ಕರ್ನಾಟಕ ಮಾತೆಯೊಬ್ಬಳು (ಚನ್ನಮ್ಮನು) ಆಗಿ ಹೋದಳು. ಇವರೆಲ್ಲರೂ ಅವಳ ಬಗ್ಗೆ ನಿಜವಾಗಿಯೂ ಅಭಿಮಾನ ತಾಳಬೇಕು" ಎಂದರು. ಮೋಟರು ಥ್ಯಾಕರೆ ಸ್ಮಾರಕ ವನ್ನು ದಾಟಿ ಧಾರವಾಡ ಪಟ್ಟಣವನ್ನು ಸೇರಿತು.

—ಕರ್ಮವೀರ



ನಿಮ್ಮ ೧೦ ರೂಪಾಯಿ ರೂ. ೧೩॥ ಆಗುತ್ತದೆ ಹತ್ತು ವರ್ಷಗಳಲ್ಲಿ

ನೀವು ಈಗ ಹತ್ತು ವರ್ಷದ ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟ್‍ಗಳನ್ನು ಕೊಳ್ಳಬಹುದು ಮತ್ತು ಯುದ್ಧದಲ್ಲಿ ವಿಜಯ ದೊರಕುವುದಕ್ಕಾಗಿ ನಿಜ ವಾಗಿ ಸಹಾಯ ಮಾಡಿದೆನೆಂದು ನಂಬಿ ಸಂತೃಪ್ತ ರಾಗಬಹುದು.

ನೀವು ಮಾಡಬೇಕಾದ್ದಿಷ್ಟೇ

ಪೋಸ್ಟಾಫೀಸಿಗೆ ಹೋಗಿ ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟ್ ಕಾರ್ಡ್ ಕೊಡುವಂತೆ ಕೇಳಿರಿ. ಅದನ್ನು ಉಚಿತವಾಗಿ ಕೊಡಲಾಗುವುದು. ಆ ಮೇಲೆ ನಿಮಗೆ ಆದಾದಾಗಲೆಲ್ಲಾ ನಾಲ್ಕಾಣೆ, ಎಂಟಾಣೆ ಅಥವಾ ಒಂದು ರೂಪಾಯಿ ಬೆಲೆಯ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪುಗಳನ್ನು ಸಾಧ್ಯ ವಾದಷ್ಟು ಕೊಳ್ಳಿರಿ. ನಿಮ್ಮ ಕಾರ್ಡಿನ ಮೇಲೆ ರೂ. ೧೦. ಬೆಲೆ ಬಾಳುವಷ್ಟು ಸ್ಟಾಂಪುಗಳನ್ನು ಹಚ್ಚಿದ ಮೇಲೆ ಅದನ್ನು ಸೇವಿಂಗ್ಸ್ ಬ್ಯಾಂಕ್ ಇಲಾಖೆ ಇರುವ ಯಾವ ಪೋಸ್ಟಾಫೀಸಿನಲ್ಲಾ ದರೂ ಕೊಡಿರಿ. ಅವರು ನಿಮಗೆ ರೂ. ೧೦. ಬೆಲೆ ಬಾಳುವ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಕೊಡುವರು. ಈ ಸರ್ಟಿಫಿಕೇಟು ಹತ್ತು ವರ್ಷ ಕಾಲದಲ್ಲಿ ರೂ. ೧೩॥ ಬೆಲೆಯುಳ್ಳದ್ದಾಗುವುದು. ಇದರ ಮೇಲೆ ಆದಾಯ ತೆರಿಗೆ ಇಲ್ಲ. ಅದಕ್ಕೆ ಮೊದಲೇ ನಿಮಗೆ ಹಣ ಬೇಕಾದಲ್ಲಿ ಆ ವರೆಗಿನ ಬಡ್ಡಿ ಸೇರಿಸಿ ಹಣವನ್ನು ನಿಮಗೆ ಹಿಂದಕ್ಕೆ ಕೊಡಲಾಗುವುದು.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫೀಕೇಟ್‍ಗಳನ್ನು ಕೊಳ್ಳಿರಿ

ಲಾಭಕ್ಕೆ ಮತ್ತು ರಕ್ಷಣೆಗೆ

GI. Kn. 20.

ಶಿಕ್ಷಣ ಮಾಧ್ಯಮವಾಗಿ ಕನ್ನಡ

ದಕ್ಷಿಣ ಕನ್ನಡದ ವಿದ್ಯಾಸಂಸ್ಥೆಗಳಲ್ಲಿ

ಶಿಕ್ಷಣ ಮಾಧ್ಯಮವು ಆಯಾಯ ದೇಶಭಾಷೆಗಳಲ್ಲಿ ಇರತಕ್ಕದ್ದು—ಎಂಬೀ ವಿಷಯವನ್ನು ಎಲ್ಲಾ ಪ್ರಗತಿಪರ ರಾಷ್ಟ್ರಗಳೂ ಅಂಗೀಕರಿಸಿ ಫಲಪ್ರಯೋಜನಗಳನ್ನು ಪಡೆದುಕೊಂಡಿವೆ. ಇತರ ರಾಷ್ಟ್ರಗಳಲ್ಲಿ ಈ ಕುರಿತು ಪ್ರಯೋಗ ಪ್ರಯೋಜನಗಳು ಬಹುಕಾಲದ ಹಿಂದೆಯೇ ಆಗುತ್ತಿವೆ -ತಡವಾಗಿಯಾದರೂ—ಭಾರತದಲ್ಲಿ ಯೂ ರಾಷ್ಟ್ರೀಯ ಮನೋಭಾವವು ಜನತೆಯಲ್ಲಿ ವಿಚಾರವನ್ನುಂಟು ಮಾಡಿದಾಗ, ನಮ್ಮ ಮೇಲೆ ಹೊರಿಸಲ್ಪಟ್ಟ ಆಂಗ್ಲ ಭಾಷೆಯ ಶಿಕ್ಷಣ ಮಾಧ್ಯಮವನ್ನು ತೆಗೆದುಹಾಕಿ, ಆಯಾಯ ದೇಶಭಾಷೆಗಳಲ್ಲಿಯೇ ಶಿಕ್ಷಣ ಮಾಧ್ಯಮವಾಗಬೇಕೆಂದು ಶಿಕ್ಷಣತಜ್ಞರು ಸಂಬಂಧಿಸಿದ ಅಧಿಕಾರೀ ವರ್ಗದವರೂ ನಿರ್ಧರಿಸಿ ಇಂದು ಪ್ರಯೋಗಿಸಿದ್ದಾರೆ ಇಂತಹ ಸಂದರ್ಭದಲ್ಲಿ, ಕೆಥಲಿಕ್ ಕ್ರೈಸ್ತ ಬಂಧುಗಳು ಇಂದು ಅದಕ್ಕೆ ಒಪ್ಪುವುದಿಲ್ಲವೆಂಬ ವಿಷಯವು ಅತ್ಯಂತ ಶೋಚನೀಯವಾಗಿದೆ.

ಆಂಗ್ಲ ಭಾಷಾಜ್ಞಾನ ಕೆಡುವುದಿಲ್ಲ

ಶಿಕ್ಷಣಮಾಧ್ಯಮವಾಗಿ ದೇಶಭಾಷೆಯನ್ನು ಅಂಗೀಕರಿಸುವುದರಿಂದ ಆಂಗ್ಲ ಭಾಷಾಜ್ಞಾನವು ಕೆಟ್ಟು ಹೋಗುವುದೆಂದು ತಿಳಿಯುವುದು ಸರಿಯಲ್ಲ. ನಾವು ಗಣಿತ ವಿಜ್ಞಾನ, ಮೊದಲಾದ ವಿಷಯಗಳನ್ನು ಕನ್ನಡದಲ್ಲಿ ವಿದ್ಯಾರ್ಥಿಗಳಿಗೆ ಕಲಿಸಿದರೆ ವಿಷಯಗಳು ಅವಷ್ಟು ಬೇಗನೇ ಅವರ ಮನಸ್ಸಿಗೆ ನಾಟುವಂತಾಗುವುದರಿಂದ ಅಂತರ್‌ರಾಷ್ಟ್ರೀಯ ಪ್ರಖ್ಯಾತಿಯುಳ್ಳ, ಆಂಗ್ಲಭಾಷೆಯ ವಿಪುಲ ಸಾಹಿತ್ಯಜ್ಞಾನಾರ್ಜನೆಗೆ ಅವರಿಗೆ ಅವಕಾಶವು ಹೆಚ್ಚು ದೊರೆತಂತಾಗಿ ಆಂಗ್ಲ ಭಾಷಾಜ್ಞಾನವು ಇದರಿಂದ ಹೆಚ್ಚಲು ಅವಕಾಶವಿದೆ ಇದರೊಡನೆ ನಾವೀಗ ತುಚ್ಛವೆಂದು ಪರಿಗಣಿಸುವ ದೇಶಭಾಷಾಜ್ಞಾನವೂ ಹೆಚ್ಚುವುದೆಂಬುದರಲ್ಲಿ ಏನೇನೂ ಸಂಶಯವಿಲ್ಲ. ಅರ್ಥಮಾಡಿಕೊಳ್ಳಲು ಅತ್ಯಂತ ಪರಿಶ್ರಮವುಳ್ಳ ಪರದೇಶೀಯ ಭಾಷೆಯಾದ ಆಂಗ್ಲ ಭಾಷೆಯಲ್ಲಿ ಗಣಿತ ವಿಜ್ಞಾನಾದಿ ವಿಷಯಗಳನ್ನು ಸಾರ ಹೇಳಿದರೆ ತಿಳಿಯುವುದಕ್ಕಿಂತ ವಿದೇಶೀಯ ಭಾಷೆಯ ತೊಡಕು ಬಗೆಹರಿದು, ಆಯಾಯ ವಿಷಯಗಳನ್ನು ಕಡಿಮೆ ಸಮಯದಲ್ಲಿ ಹೆಚ್ಚು ತಿಳಕೊಳ್ಳಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತದೆಂಬುದು ಸಾಮಾನ್ಯ ತಿಳುವಳಿಕೆಯುಳ್ಳ ಯಾವನಿಗಾದರೂ ಅರ್ಥವಾಗುವುದು, ಮಾತ್ರವಲ್ಲದೆ ಇದು ಪ್ರಯೋಗ ಮೂಲವಾದ ಸಿದ್ಧಾಂತವಾಗಿಯೂ ಇರುವುದು ಹೀಗಿರುವಾಗ ನಮ್ಮ ಜಿಲ್ಲೆಯ ರೋಮನ್ ಕೆಥೋಲಿಕ್ ಕ್ರೈಸ್ತ ಬಂಧುಗಳು ಕನ್ನಡವು ಶಿಕ್ಷಣ ಮಾಧ್ಯಮವಾದಲ್ಲಿ ಆಗುವ ಅನರ್ಥಗಳೆಂದು ಯಾವುದನ್ನು ಹೇಳುತ್ತಾರೋ ಆ ವಾದದಲ್ಲಿ ಒಂದಿಷ್ಟಾದರೂ ನ್ಯಾಯವಿದೆಯೆಂದು ತಿಳಕೊಳ್ಳಲಾಗುವುದಿಲ್ಲ.

ಪ್ರಯೋಗ ಫಲಿತಾಂಶವೇನು?

ಆಂಗ್ಲಭಾಷೆಯು ಇಂದು ಅಂತರ್‌ರಾಷ್ಟ್ರೀಯ ಭಾಷೆಯಾದರೂ ಯೂರೋಪಿನ ರಾಷ್ಟ್ರಗಳಾದರೂ, ತಮ್ಮ ತಮ್ಮಲ್ಲಿ ಶಿಕ್ಷಣ ಮಾಧ್ಯಮವಾಗಿ ದೇಶೀಯ ಭಾಷೆಯನ್ನೇ ಅಂಗೀಕರಿಸಿಕೊಂಡಿವೆ. ಆ ಯಾವ ರಾಷ್ಟ್ರವಾದರೂ, ಪ್ರಗತಿಯ ದೃಷ್ಟಿಯಲ್ಲಿ ನಮ್ಮ ಭಾರತಕ್ಕಿಂತ ಹಿಂದುಳಿದಿವೆಯೆಂದು ನಾವೀಗ ಹೇಳಲು ಖಂಡಿತ ಸಾಧ್ಯವಿಲ್ಲ. ಅವರು ಯಥಾರ್ಥತೆಯನ್ನು ಅರ್ಥಮಾಡಿಕೊಂಡಿದ್ದಾರೆಯೆಂಬುದನ್ನೇ ನಾವಿದರಿಂದ ತಿಳಕೊಳ್ಳಬೇಕಾಗಿದೆ.

ಕನ್ನಡವು ಶಿಕ್ಷಣ ಮಾಧ್ಯಮವಾಗಬೇಕೆಂದು ಮೊದಲಾಗಿ ಇದನ್ನು ಪ್ರಯೋಗಿಸಿದವರು ಮೈಸೂರು ವಿದ್ಯಾಇಲಾಖೆಯವರು. ಅಲ್ಲಿ ಮಾಡಿದ ಪ್ರಯೋಗವು ಆಶ್ಚರ್ಯಕರವಾದ ಫಲಿತಾಂಶವನ್ನು ಕೊಟ್ಟಿದೆ ಸಾರ್ವಜನಿಕ ಪರೀಕ್ಷೆಗಳಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ತೆಗೆದುಕೊಂಡ ವಿದ್ಯಾರ್ಥಿಗಳು, ಗಣಿತ, ವಿಜ್ಞಾನಾದಿ ವಿಷಯಗಳಲ್ಲಿ ಮಾತ್ರವಲ್ಲ ಆಂಗ್ಲ ಭಾಷೆಯಲ್ಲಿಯೂ ಹೆಚ್ಚು ಮಾರ್ಕುಗಳನ್ನು ಪಡೆದು ಉತ್ತೀರ್ಣರಾಗಿರುವರು ಇಂದು ಈ ಪ್ರಯೋಗವು ನಮ್ಮ ಪ್ರತ್ಯಕ್ಷದಲ್ಲಿರುವಾಗ, ಕನ್ನಡವು ನಮ್ಮ ಶಿಕ್ಷಣ ಮಾಧ್ಯಮವಾಗಬೇಕೆಂದು ಶಿಕ್ಷಣಜ್ಞರು, ವಿದ್ಯಾವಂತರು, ಅಧ್ಯಾಪಕರೇ ಸಾರಿಸಾರಿಹೇಳುತ್ತಿರುವಾಗ, ತಮ್ಮಲ್ಲಿ ಶಿಕ್ಷಣ ಮಾಧ್ಯಮ ಮಾಡದೆ, ಅದರಿಂದ ಹಾನಿಯುಂಟೆಂದು ವಾದಿಸುವ ಕ್ರೈಸ್ತ ಬಂಧುಗಳ ಈ ಹಟವನ್ನು ಅವರ ಪ್ರಗತಿಗೆ ಅನುಕೂಲವಿಲ್ಲವೆಂಬ ನೆಲೆಯಲ್ಲಿ ವಿಚಾರಿಸಬೇಕಾಗಿದೆಯಲ್ಲದೆ ಬೇರೇನೂ ಅರ್ಥಮಾಡಿಕೊಳ್ಳಲಾಗುವುದಿಲ್ಲ.

ಕಾಂಗ್ರೆಸಿನ ಒತ್ತಾಯವಲ್ಲ

ಇದು ಕಾಂಗ್ರೆಸು ಮಂತ್ರಿಮಂಡಳದ ಒತ್ತಾಯವೆಂದು ಕೆಲವರು ಅರ್ಥಮಾಡಿಕೊಂಡಿದ್ದಾರೆ. ಅದು ಬರಿಯ ಭ್ರಮೆ. ಇದು ಪ್ರಗತಿಪರ ಮನೋಭಾವನೆಯ ಒತ್ತಾಯ ಮಾತ್ರ. ಪ್ರಥಮವಾಗಿ ಕನ್ನಡದಲ್ಲಿ ಶಿಕ್ಷಣ ಮಾಧ್ಯಮವಾಗಿ ಮೈಸೂರಲ್ಲಿ ಪ್ರಯೋಗಿಸಿದ್ದೂ ಕಾಂಗ್ರೆಸಿನ ಒತ್ತಾಯದಿಂದಲ್ಲ. ಬಂಗಾಳದಲ್ಲಿಯಾದರೂ ಇದನ್ನು ಪ್ರಯೋಗಿಸಿ ಯಶಸ್ವಿಯಾಗಿ ನಡೆಸುತ್ತಿರುವುದು ಕಾಂಗ್ರೆಸಿನ ಒತ್ತಾಯದಿಂದಲೆಂದು ಹೇಳಲು ಯಾರಿಗೂ ನಾಲಿಗೆ ಬರಲಿಕ್ಕಿಲ್ಲ. ವಿದೇಶೀಯ ಭಾಷೆಯೊಂದರಲ್ಲಿ ಪ್ರಾಪಂಚಿಕ ಜ್ಞಾನವನ್ನು ತಿಳಿಸುವ ಶಿಕ್ಷಣ ವ್ಯವಸ್ಥೆಯನ್ನು ಮಾಡಿಕೊಂಡ ನಮ್ಮ ರೀತಿಯು ತೀರಾ ಅಸ್ವಾಭಾವಿಕ ಪದ್ಧತಿಯೆಂಬುದು ಇಂದು ಎಲ್ಲ ಜನರಿಗೂ ತಿಳಿದು ಬಂದಿದರಿಂದ ನೈಸರ್ಗಿಕವಾಗಿಯೇ ಈ ವಿಚಾರಕ್ರಾಂತಿಯುಂಟಾಗಿದೆಯಲ್ಲದೆ, ಕಾಂಗ್ರೆಸು ಮಂತ್ರಿಮಂಡಳದ ಒತ್ತಾಯವಿದೆಂದು ಯಾರಾದರೂ ಗ್ರಹಿಸುವುದಿದು ತಪ್ಪಾಗಿದೆ. ದೇಶಭಾಷೆಯಲ್ಲಿ ಶಿಕ್ಷಣ ಮಾಧ್ಯಮವನ್ನಿರಿಸಿಕೊಂಡಿರುವ ವಿದೇಶೀಯ ರಾಷ್ಟ್ರಗಳಲ್ಲಿ, ನಮ್ಮ ಇಲ್ಲಿನ ವಿದ್ಯಾರ್ಥಿಗಳು ಯಾವ ಪ್ರಾಯದಲ್ಲಿ ಎಷ್ಟು ವಿಷಯ ಗ್ರಹಣಮಾಡಿಕೊಳ್ಳುತ್ತಾರೋ ಅದಕ್ಕಿಂತ ಹೆಚ್ಚು ವಿಷಯ ಗ್ರಹಣವನ್ನು ಅಲ್ಲಿನ ಆ ವಿದ್ಯಾರ್ಥಿಗಳು ಮಾಡಿಕೊಳ್ಳುತ್ತಿದ್ದಾರೆಯೆಂಬುದು ಜಗತ್ತಿನ ಕಡೆಗೆ ಕಣ್ಣೆತ್ತಿ ನೋಡುವವರಿಗೆ ತಿಳಿಯದಿರದು

ಕನ್ನಡ ಬರುವುದಿಲ್ಲವೆ?

ಕೊಂಕಣಿ ಭಾಷೆಯವರಿಗೆ ಕನ್ನಡವು ಬರುವುದಿಲ್ಲವೆಂದೂ, ಅವರಿಗೆ ಆಂಗ್ಲ ಭಾಷೆಯಷ್ಟೇ ಕನ್ನಡವೂ ಹೊಸತೆಂದೂ ಆದಕಾರಣ ಕನ್ನಡಕ್ಕಿಂತ ಆಂಗ್ಲ ಭಾಷೆಯೇ ಶಿಕ್ಷಣ ಮಾಧ್ಯಮವಾಗಬಹುದೆಂದೂ ವಾದಿಸುವುದರಲ್ಲಿಯೂ ಸತ್ಯಾಂಶವುಂಟೆಂದು ಹೇಳಬರುವುದಿಲ್ಲ ಕೊಂಕಣಿ ಮಾತನಾಡುವವರು ನಮ್ಮ ಜಿಲ್ಲೆಯಲ್ಲಿ ಕೆಥೋಲಿಕರೇ ಮಾತ್ರವಲ್ಲ ಸಾರಸ್ವತರು, ಗೌಡಸಾರಸ್ವತರು ಮತ್ತೆ ಕೆಲವರೂ ಇದ್ದಾರೆ ಇವರೆಲ್ಲರೂ ಕನ್ನಡವನ್ನು ಮೆಚ್ಚುತ್ತಾರೆ ಇವರಲ್ಲಿ ಹಲವು ಮಂದಿ ಅಖಿಲ ಕರ್ನಾಟಕದ ಧುರೀಣರೇ ಇದ್ದಾರೆ. ಕನ್ನಡ ಭಾಷೆಯಲ್ಲಿ ಉತ್ತಮ ಪಂಡಿತರಾಗಿದ್ದಾರೆ ಹೀಗಿರುವಾಗ ಕೊಂಕಣಿ ಭಾಷೆಯುಳ್ಳ ಕ್ರೈಸ್ತರಿಗೆ ಮಾತ್ರ ಕನ್ನಡ ಬರುವುದಿಲ್ಲವೆಂದು ಹೇಳುವುದು ಸತ್ಯವಾಗಿ ತೋರುವುದಿಲ್ಲ ಕೆಲ ಕ್ರೈಸ್ತರಿಗೆ ಕನ್ನಡದಲ್ಲಿ ತುಚ್ಛಭಾವವುಂಟೆಂದೂ, ಅವರು ಈ ಹೊಳವಳವನ್ನು ಮುಂದೆ ಮಾಡುತ್ತಿದ್ದಾರೆಂದೂ ಹೇಳುವುದರಲ್ಲಿ ಹೆಚ್ಚಿನ ಸ್ಪಷ್ಟತೆಯುಂಟು. ಕನ್ನಡವನ್ನು ತುಚ್ಛಮಾಡುವುದರಿಂದ, ಕೊಂಕಣಿ ಭಾಷೆಗೂ ಪ್ರಯೋಜನವಾಗದ ವಿದೇಶೀಯ ಭಾಷೆಯನ್ನು ವಿದ್ಯಾರ್ಥಿಗಳ ಮೇಲೆ ಹೊರಿಸುವ ಪ್ರಮಾದವೊಂದು ಮಾತ್ರ ಸಾಧಿಸಿದಂತಾಗುವುದು.

ತುಳುವರ ಸಮ್ಮತಿ

ದಕ್ಷಿಣಕನ್ನಡದಲ್ಲಿ ಬಹುಸಂಖ್ಯೆಯಾಗಿರುವವರ ಪ್ರಬಲ ಪಕ್ಷವಿರುವವರು ತುಳು ಮಾತನಾಡುವವರು. ಯಾವುದೇ ಅಭಿಪ್ರಾಯಕ್ಕೆ ಅವರದು ನಿರ್ಧಾರಾತ್ಮಕ ಕನ್ನಡವು ಅವರಿಗೂ ಭಿನ್ನಭಾಷೆ ಆದರೆ ಅವರು ಇದಕ್ಕೆ ಆತಂಕಪಡಿಸುವುದಿಲ್ಲ. ಕೊಂಕಣ ಮಾತನಾಡುವವರ ಅಲ್ಪಮತದ ಆತಂಕದಲ್ಲಿಯೂ ಎಲ್ಲಾ ಕೊಂಕಣಿ ಮಾತನಾಡುವ ಪಂಗಡದವರ ಸಹಕಾರವಿಲ್ಲ ಹೀಗಿರುವಾಗ ಸರಕಾರದವರು ನಮ್ಮ ಜಿಲ್ಲೆಯ ವಿದ್ಯಾಸಂಸ್ಥೆಗಳ ಧ್ಯೇಯವಾಗಿ ಕನ್ನಡದಲ್ಲಿಯೇ ಶಿಕ್ಷಣಮಾಧ್ಯಮವಿರುವಂತೆ ಮಾಡಬೇಕಾದುದು ಅವಶ್ಯವಿದೆ ನಾವು ಬಿನ್ನವಿಸುತ್ತೇವೆ.

—K. R

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲ್ಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗಳಿಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಗುಣಬಾರದಿದ್ದರೆ ಹಣ ವಾಪಾಸು
ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ
ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಕ್ತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರ್ಣ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೆಟು ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೊಲ್ಹಾಪುರ ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ ೪-೦-೦ ಟ. ಖ. ಅಲ್ಲ

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C.

‘ನಿಜವಾದ ಕನ್ನಡಮಾತೆಯೊಬ್ಬಳು ಆಗಿಹೋದಳು!’

ಕಿತ್ತೂರ ಚನ್ನಮ್ಮನ ಸ್ಮಾರಕಕ್ಕೆ ರಾಜಾಜಿಯವರ ಬೆಂಬಲ

— ಹನ್ನೊಂದು ವರ್ಷಗಳ ಹಿಂದಿನದೊಂದು ನೆನಪು —

ಬರೆದವರು: ಚಿಕ್ಕೋಡಿ ಅನಂತರಾಯರು, ಬೆಳಗಾವಿ.

ಕನ್ನಡ ನಾಡಿನ ಇತಿಹಾಸದಲ್ಲಿ ಅಮರ ಕೀರ್ತಿಯನ್ನು ಗಳಿಸಿರುವ ಕಿತ್ತೂರಿನ ವೀರರಾಣಿ ಚನ್ನಮ್ಮನ ಸ್ಮಾರಕೋತ್ಸವವು ಇದೇ ತಿಂಗಳ ಕೊನೆಯ ಸುಮಾರಕ್ಕೆ ಕಿತ್ತೂರಲ್ಲಿಯೇ ನೆರವೇರುವದೆಂಬದಾಗಿ ಶ್ರೀ ವಾಲಿಯವರು ವೃತ್ತ ಪತ್ರಗಳಲ್ಲಿ ಪ್ರಕಟಿಸಿದ ಸಂಗತಿಯನ್ನೋದಿ ನನಗೆ ಬಹಳ ಸಂತೋಷವಾಯಿತು. ಈ ಸಂತೋಷದ ಭರದಲ್ಲಿ ಹನ್ನೊಂದು ವರ್ಷಗಳ ಹಿಂದಿನ ಸ್ಮೃತಿಯೊಂದು ಉಕ್ಕಿ ಬರತೊಡಗಿರುವದರಿಂದ ಅದನ್ನು ಕನ್ನಡಿಗರಿಗೆ ತಿಳುಹುವದಕ್ಕಾಗಿಯೇ ಇದೆರಡು ಸಾಲುಗಳನ್ನು ಬರೆಯುತ್ತಿದ್ದೇನೆ.

ಲಾಹೋರದ ಕಾಂಗ್ರೆಸ್ಸು ಮುಗಿದ ಬಳಿಕ ೧೯೩೦ರ ಜನವರಿ ತಿಂಗಳ ಆರಂಭಕ್ಕೆ ಚಕ್ರವರ್ತಿ ರಾಜಗೋಪಾಲಾಚಾರ್ಯರು ಕರ್ನಾಟಕಕ್ಕೆ ದಯಮಾಡಿಸಿದ್ದರು. ಬೆಳಗಾವಿಯ ಕಾರ್ಯಕ್ರಮವನ್ನು ಮುಗಿಸಿಕೊಂಡು ರಾಜಾಜಿಯವರು ಧಾರವಾಡಕ್ಕೆ ಮೋಟಾರಿನಲ್ಲಿ ಪಯಣ ಬೆಳಸಿದರು. ದೇ. ಗಂಗಾಧರರಾಯರು ಜೊತೆಯಲ್ಲಿದ್ದರು. ಕಾರಣಾಂತರದಿಂದ ನಾನೂ ಆ ಪರಿವಾರದಲ್ಲಿದ್ದೆನು. ದಾರಿಯ ಮೇಲೆ ಕಿತ್ತೂರಲ್ಲಿಯೂ ಸಭೆಯ ಕಾರ್ಯಕ್ರಮವಿದ್ದಿತು. ಮುತ್ತೂರ ಮಹಾಬಳೆಪ್ಪನವರು ಒಳ್ಳೆ ಅಭಿಮಾನದಿಂದ ಕಿತ್ತೂರಿನ ಗತವೈಭವವನ್ನೂ ಚನ್ನಮ್ಮನ ಸಾಹಸವನ್ನೂ ವರ್ಣಿಸಿದರು. ಸಭೆಯು ಮುಗಿದು ಮೋಟಾರು ಧಾರವಾಡಕ್ಕೆ ಸಾಗಿದ ಬಳಿಕ ರಾಜಾಜಿಯವರು ಮಹಾಬಳೆಪ್ಪನವರು ಹೇಳಿದ ವಿಷಯದ ವಿಶೇಷ ವಿಶದೀಕರಣವನ್ನು ಗಂಗಾಧರರಾಯರಿಂದ ಕೇಳತೊಡಗಿದರು. ಇವರಿಬ್ಬರ ಧುರೀಣರ ಸಂಭಾಷಣೆಯು ಇಂಗ್ಲಿಷಿನಲ್ಲಿಯೇ ನಡೆದಿತ್ತೆಂಬುದನ್ನು ಬೇರೆ ಹೇಳುವ ಕಾರಣವೇ ಇಲ್ಲ. ಕಿತ್ತೂರಿನ ಕಥೆಯು ನಡೆದಾಗ ಥ್ಯಾಕರೆ ಸಾಹೇಬನ ಹೆಸರು ಬಾರದೆ ಇರುತ್ತದೆಯೇ? We will pass by Thakeray memorial presently (ನಾವು ಇನ್ನು ಕೆಲಹೊತ್ತಿನಲ್ಲಿಯೇ ಥ್ಯಾಕರೆಯವರ ಸ್ಮಾರಕದ ಬಳಿಯಿಂದಲೇ ಹಾದು ಹೋಗುತ್ತೇವೆ) ಎಂದರು ರಾಯರು. ಇದನ್ನು ಕೇಳಿದ ಕೂಡಲೆ ರಾಜಾಜಿಯವರು So that fellow has a fine Memorial over there and what about Channamma? (ಥ್ಯಾಕರೆಯವನಿಗೆ ಅಲ್ಲಿ ಅವರು ಸ್ಮಾರಕ ಕಟ್ಟಿದ್ದಾರೆ; ಆದರೆ ಚನ್ನಮ್ಮನಿಗೆ ನೀವು?) ಎಂದು ಕೇಳಿದರು. ಗಂಗಾಧರರಾಯರು ಸುಮ್ಮನಿದ್ದರು. ರಾಜಾಜಿಯವರು ಒಂದು ನಿಮಿಷ ನಿಂತು ಮತ್ತೆ No memorial to Channamma whatsoever? [ಚನ್ನಮ್ಮನಿಗೆ ಯಾವ ಬಗೆಯ ಸ್ಮಾರಕವೂ ಇಲ್ಲವೆ?] ಎಂದು ಪ್ರಶ್ನೆ ಹಾಕಿದರು. ವಸ್ತು ಸ್ಥಿತಿಗೆ ಅನುಸಾರವಾಗಿ ಯಾವ ಉತ್ತರವನ್ನು ಕೊಡುವದು ಶಕ್ಯವಿದ್ದಿತೋ ಅದನ್ನೇ ಗಂಗಾಧರರಾಯರು ಕೊಟ್ಟರು—ಎಂದರೆ ಏನೂ ಉತ್ತರವನ್ನೇ ಕೊಡಲಿಲ್ಲ. ಇಂಥ ಐತಿಹಾಸಿಕ ವ್ಯಕ್ತಿಗಳ ಸ್ಮಾರಕಗಳ ಆವಶ್ಯಕತೆಯ ವಿಷಯಕ್ಕೂ ಕೆಲವು ಮಾತುಗಳಾದವು. ಕಿತ್ತೂರು ಬರುವದಕ್ಕೂ ಮುಂದೆ ಬಾಗೇವಾಡಿಯಲ್ಲಿ ಕೆಲವು ಸ್ವಯಂ ಸೇವಕರು ‘ಭಾರತಮಾತಾಕಿ ಜಯ್’ ಎಂಬ ಕೂಗಿನೊಡನೆ ‘ಕರ್ನಾಟಕ ಮಾತಾಕೀ ಜಯ್’ ಎಂಬ ಕೂಗನ್ನು ಹಾಕಿದ್ದರು. ಇದು ರಾಜಗೋಪಾಲಾಚಾರ್ಯರ ಮನಸ್ಸಿಗೆ ಬಾರದೇ ಇದ್ದುದರಿಂದ ಅವರು ವ್ಯಂಗವಾದ ನಗೆನುಡಿಯಲ್ಲಿ “Oh here is a daughter-in law for mother India! ಓ ಇಲ್ಲಿ ನಮ್ಮ ಭಾರತಮಾತೆಗೆ ಒಬ್ಬ ಸೊಸೆಯೂ ಸಿಕ್ಕಿರುವಳಲ್ಲ!” ಎಂದು ಉದ್ಗರಿಸಿದ್ದರು. ಅದೇ ಮಾತು ಅವರಿಗೆ ಮತ್ತೆ ನೆನಪಾಗಿ “Here was one of the real Karnatak-mathas (Channamma). These fellows should justly be proud of her. ಇಲ್ಲಿ ನಿಜವಾದ ಕರ್ನಾಟಕ ಮಾತೆಯೊಬ್ಬಳು (ಚನ್ನಮ್ಮನು) ಆಗಿ ಹೋದಳು. ಇವರೆಲ್ಲರೂ ಅವಳ ಬಗ್ಗೆ ನಿಜವಾಗಿಯೂ ಅಭಿಮಾನ ತಾಳಬೇಕು” ಎಂದರು. ಮೋಟರು ಥ್ಯಾಕರೆ ಸ್ಮಾರಕವನ್ನು ದಾಟಿ ಧಾರವಾಡ ಪಟ್ಟಣವನ್ನು ಸೇರಿತು.

— ಕರ್ಮವೀರ



ನಿಮ್ಮ ೧೦ ರೂಪಾಯಿ ರೂ. ೧೪॥ ಆಗುತ್ತದೆ ಹತ್ತು ವರ್ಷಗಳಲ್ಲಿ

ನೀವು ಈಗ ಹತ್ತು ವರ್ಷದ ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟ್‌ಗಳನ್ನು ಕೊಳ್ಳಬಹುದು ಮತ್ತು ಯುದ್ಧದಲ್ಲಿ ವಿಜಯ ದೊರಕುವುದಕ್ಕಾಗಿ ನಿಜವಾಗಿ ಸಹಾಯ ಮಾಡಿದೆನೆಂದು ನಂಬಿ ಸಂತೃಪ್ತರಾಗಬಹುದು.

ನೀವು ಮಾಡಬೇಕಾದ್ದಿಷ್ಟೇ

ಪೋಸ್ಟಾಫೀಸಿಗೆ ಹೋಗಿ ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟ್ ಕಾರ್ಡ್ ಕೊಡುವಂತೆ ಕೇಳಿರಿ. ಅದನ್ನು ಉಚಿತವಾಗಿ ಕೊಡಲಾಗುವುದು. ಆ ಮೇಲೆ ನಿಮಗೆ ಆದಾಗಲೆಲ್ಲಾ ನಾಲ್ಕಾಣೆ, ಎಂಟಾಣೆ ಅಥವಾ ಒಂದು ರೂಪಾಯಿ ಬೆಲೆಯ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪುಗಳನ್ನು ಸಾಧ್ಯವಾದಷ್ಟು ಕೊಳ್ಳಿರಿ. ನಿಮ್ಮ ಕಾರ್ಡಿನ ಮೇಲೆ ರೂ. ೧೦. ಬೆಲೆ ಬಾಳುವಷ್ಟು ಸ್ಟಾಂಪುಗಳನ್ನು ಹಚ್ಚಿದ ಮೇಲೆ ಅದನ್ನು ಸೇವಿಂಗ್ಸ್ ಬ್ಯಾಂಕ್ ಇಲಾಖೆ ಇರುವ ಯಾವ ಪೋಸ್ಟಾಫೀಸಿನಲ್ಲಾದರೂ ಕೊಡಿರಿ. ಅವರು ನಿಮಗೆ ರೂ. ೧೦. ಬೆಲೆ ಬಾಳುವ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಕೊಡುವರು. ಈ ಸರ್ಟಿಫಿಕೇಟು ಹತ್ತು ವರ್ಷ ಕಾಲದಲ್ಲಿ ರೂ. ೧೪॥ ಬೆಲೆಯುಳ್ಳದ್ದಾಗುವುದು. ಇದರ ಮೇಲೆ ಆದಾಯ ತೆರಿಗೆ ಇಲ್ಲ. ಅದಕ್ಕೆ ಮೊದಲೇ ನಿಮಗೆ ಹಣ ಬೇಕಾದಲ್ಲಿ ಆ ವರೆಗಿನ ಬಡ್ಡಿ ಸೇರಿಸಿ ಹಣವನ್ನು ನಿಮಗೆ ಹಿಂದಕ್ಕೆ ಕೊಡಲಾಗುವುದು.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು ಕೊಳ್ಳಿರಿ

ಲಾಭಕ್ಕೆ ಮತ್ತು ರಕ್ಷಣೆಗೆ

ಜಿ. ಕೆ. ೬೦.

ಶಿಕ್ಷಣ ಮಾಧ್ಯಮವಾಗಿ ಕನ್ನಡ

ದಕ್ಷಿಣ ಕನ್ನಡದ ವಿದ್ಯಾ ಸಂಸ್ಥೆಗಳಲ್ಲಿ

ಶಿಕ್ಷಣ ಮಾಧ್ಯಮವು ಆಯಾಯ ದೇಶಭಾಷೆಗಳಲ್ಲಿ ಇರತಕ್ಕದ್ದು—ಎಂಬೀ ವಿಷಯವನ್ನು ಎಲ್ಲಾ ಪ್ರಗತಿಪರ ರಾಷ್ಟ್ರಗಳೂ ಅಂಗೀಕರಿಸಿ ಫಲಪ್ರಯೋಜನಗಳನ್ನು ಪಡೆದುಕೊಂಡಿವೆ. ಇತರ ರಾಷ್ಟ್ರಗಳಲ್ಲಿ ಈ ಕುರಿತು ಪ್ರಯೋಗ ಪ್ರಯೋಜನಗಳು ಬಹುಕಾಲದ ಹಿಂದೆಯೇ ಆಗುತ್ತಿವೆ. ತಡವಾಗಿಯಾದರೂ ಭಾರತದಲ್ಲಿಯೂ ರಾಷ್ಟ್ರೀಯ ಮನೋಭಾವವು ಜನತೆಯಲ್ಲಿ ವಿಚಾರವನ್ನುಂಟು ಮಾಡಿದಾಗ, ನಮ್ಮ ಮೇಲೆ ಹೊರಿಸಲ್ಪಟ್ಟ ಆಂಗ್ಲ ಭಾಷೆಯ ಶಿಕ್ಷಣ ಮಾಧ್ಯಮವನ್ನು ತೆಗೆದುಹಾಕಿ, ಆಯಾಯ ದೇಶಭಾಷೆಗಳಲ್ಲಿಯೇ ಶಿಕ್ಷಣ ಮಾಧ್ಯಮವಾಗಬೇಕೆಂದು ಶಿಕ್ಷಣತಜ್ಞರು ಸಂಬಂಧಿಸಿದ ಅಧಿಕಾರೀ ವರ್ಗದವರೂ ನಿರ್ಧರಿಸಿ ಇಂದು ಪ್ರಯೋಗಿಸಿದ್ದಾರೆ. ಇಂತಹ ಸಂದರ್ಭದಲ್ಲಿ, ಕೆಥಲಿಕ್ ಕ್ರೈಸ್ತ ಬಂಧುಗಳು ಇಂದು ಅದಕ್ಕೆ ಒಪ್ಪುವುದಿಲ್ಲವೆಂಬ ವಿಷಯವು ಅತ್ಯಂತ ಶೋಚನೀಯವಾಗಿದೆ.

ಆಂಗ್ಲ ಭಾಷಾಜ್ಞಾನ ಕೆಡುವುದಿಲ್ಲ

ಶಿಕ್ಷಣಮಾಧ್ಯಮವಾಗಿ ದೇಶಭಾಷೆಯನ್ನು ಅಂಗೀಕರಿಸುವುದರಿಂದ ಆಂಗ್ಲ ಭಾಷಾಜ್ಞಾನವು ಕೆಟ್ಟು ಹೋಗುವುದೆಂದು ತಿಳಿಯುವುದು ಸರಿಯಲ್ಲ. ನಾವು ಗಣಿತ ವಿಜ್ಞಾನ, ಮೊದಲಾದ ವಿಷಯಗಳನ್ನು ಕನ್ನಡದಲ್ಲಿ ವಿದ್ಯಾರ್ಥಿಗಳಿಗೆ ಕಲಿಸಿದರೆ ವಿಷಯಗಳು ಅದಷ್ಟು ಬೇಗನೇ ಅವರ ಮನಸ್ಸಿಗೆ ಮುಂದಟ್ಟಾಗುವುದರಿಂದ ಅಂತರ್‌ರಾಷ್ಟ್ರೀಯ ಪ್ರಖ್ಯಾತಿಯುಳ್ಳ, ಆಂಗ್ಲಭಾಷೆಯ ವಿಪುಲ ಸಾಹಿತ್ಯಜ್ಞಾನಾರ್ಜನೆಗೆ ಅವರಿಗೆ ಅವಕಾಶವು ಹೆಚ್ಚಾಗೊರೆತಂತಾಗಿ ಆಂಗ್ಲಭಾಷಾಜ್ಞಾನವೂ ಇದರಿಂದ ಹೆಚ್ಚಳಲು ಅವಕಾಶವಿದೆ. ಇದರೊಡನೆ ನಾವೀಗ ಮುಖ್ಯವೆಂದು ಪರಿಗಣಿಸುವ ದೇಶಭಾಷಾಜ್ಞಾನವೂ ಹೆಚ್ಚುವುದೆಂಬುದರಲ್ಲಿಯೇನೂ ಸಂಶಯವಿಲ್ಲ. ಅರ್ಥಮಾಡಿಕೊಳ್ಳಲು ಅತ್ಯಂತ ಪರಿಶ್ರಮವುಳ್ಳ ಪರದೇಶೀಯ ಭಾಷೆಯಾದ ಆಂಗ್ಲ ಭಾಷೆಯಲ್ಲಿ ಗಣಿತ ವಿಜ್ಞಾನಾದಿ ವಿಷಯಗಳನ್ನು ಪಾಠ ಹೇಳಿದರೆ ತಿಳಿಯುವುದಕ್ಕಿಂತ ವಿದೇಶೀಯ ಭಾಷೆಯ ತೊಡಕು ಬಗೆಹರಿದು, ಆಯಾಯ ವಿಷಯಗಳನ್ನು ಕಡಿಮೆ ಸಮಯದಲ್ಲಿ ಹೆಚ್ಚು ತಿಳಕೊಳ್ಳಲೂ ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತದೆಂಬುದು ಸಾಮಾನ್ಯ ತಿಳುವಳಿಕೆಯುಳ್ಳ ಯಾವನಿಗಾದರೂ ಅರ್ಥವಾಗುವುದು, ಮಾತ್ರವಲ್ಲದೆ ಇದು ಪ್ರಯೋಗ ಮೂಲವಾದ ಸಿದ್ಧಾಂತವಾಗಿಯೂ ಇರುವುದು. ಹೀಗಿರುವಾಗ ನಮ್ಮ ಜಿಲ್ಲೆಯ ರೋಮನ್ ಕೆಥೋಲಿಕ್ ಕ್ರೈಸ್ತ ಬಂಧುಗಳು ಕನ್ನಡವು ಶಿಕ್ಷಣ ಮಾಧ್ಯಮವಾದಲ್ಲಿ ಆಗುವ ಅನರ್ಥಗಳೆಂದು ಯಾವುವನ್ನು ಹೇಳುತ್ತಾರೋ ಆ ವಾದದಲ್ಲಿ ಒಂದಿಷ್ಟಾದರೂ ನ್ಯಾಯವಿದೆಯೆಂತು ತಿಳಕೊಳ್ಳಲಾಗುವುದಿಲ್ಲ.

ಪ್ರಯೋಗ ಫಲಿತಾಂಶವೇನು?

ಆಂಗ್ಲಭಾಷೆಯು ಇಂದು ಅಂತರ್‌ರಾಷ್ಟ್ರೀಯ ಭಾಷೆಯಾದರೂ ಯೂರೋಪಿನ ರಾಷ್ಟ್ರಗಳಾದರೂ, ತಮ್ಮ ತಮ್ಮಲ್ಲಿ ಶಿಕ್ಷಣ ಮಾಧ್ಯಮವಾಗಿ ದೇಶೀಯ ಭಾಷೆಯನ್ನೇ ಅಂಗೀಕರಿಸಿಕೊಂಡಿವೆ. ಆ ಯಾವ ರಾಷ್ಟ್ರವಾದರೂ, ಪ್ರಗತಿಯ ದೃಷ್ಟಿಯಲ್ಲಿ ನಮ್ಮ ಭಾರತಕ್ಕಿಂತ ಹಿಂದುಳಿದಿದೆಯೆಂದು ನಾವೀಗ ಹೇಳಲು ಖಂಡಿತ ಸಾಧ್ಯವಿಲ್ಲ. ಅವರು ಯಥಾರ್ಥತೆಯನ್ನು ಅರ್ಥಮಾಡಿಕೊಂಡಿದ್ದಾರೆಯೆಂದು ನಾವಿದರಿಂದ ತಿಳಕೊಳ್ಳಬೇಕಾಗಿದೆ.

ಕನ್ನಡವು ಶಿಕ್ಷಣ ಮಾಧ್ಯಮವಾಗಬೇಕೆಂದು ಮೊದಲಾಗಿ ಇದನ್ನು ಪ್ರಯೋಗಿಸಿದವರು ಮೈಸೂರು ವಿದ್ಯಾಇಲಾಖೆಯವರು. ಅಲ್ಲಿ ಮಾಡಿದ ಪ್ರಯೋಗವು ಆಶ್ಚರ್ಯಕರವಾದ ಫಲಿತಾಂಶವನ್ನು ಕೊಟ್ಟಿದೆ. ಸಾರ್ವಜನಿಕ ಪರೀಕ್ಷೆಗಳಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ತೆಗೆದುಕೊಂಡ ವಿದ್ಯಾರ್ಥಿಗಳು, ಗಣಿತ, ವಿಜ್ಞಾನಾದಿ ವಿಷಯಗಳಲ್ಲಿ ಮಾತ್ರವಲ್ಲ ಆಂಗ್ಲ ಭಾಷೆಯಲ್ಲಿಯೂ ಹೆಚ್ಚು ಮಾರ್ಕುಗಳನ್ನು ಪಡೆದು ಉತ್ತೀರ್ಣರಾಗಿರುವರು. ಇಂತು ಈ ಪ್ರಯೋಗವು ನಮ್ಮ ಪ್ರತ್ಯಕ್ಷವಲ್ಲಿರುವಾಗ, ಕನ್ನಡವು ನಮ್ಮ ಶಿಕ್ಷಣ ಮಾಧ್ಯಮವಾಗಬೇಕೆಂದು ಶಿಕ್ಷಣಜ್ಞರು, ವಿದ್ಯಾವಂತರು, ಅಧ್ಯಾಪಕರೇ ಸಾರಿಸಾರಿಹೇಳುತ್ತಿರುವಾಗ, ತಮ್ಮಲ್ಲಿ ಶಿಕ್ಷಣ ಮಾಧ್ಯಮ ಮಾಡದೆ, ಅದರಿಂದ ಹಾನಿಯುಂಟೆಂದು ಸಾಧಿಸುವ ಕ್ರೈಸ್ತ ಬಂಧುಗಳ ಈ ಹಟವನ್ನು ಅವರು ಪ್ರಗತಿಗೆ ಅನುಕೂಲರಿಲ್ಲವೆಂಬ ನೆಲೆಯಲ್ಲಿ ವಿಚಾರಿಸಬೇಕಾಗಿದೆಯಲ್ಲದೆ ಬೇರೇನೂ ಅರ್ಥಮಾಡಿಕೊಳ್ಳಲಾಗುವುದಿಲ್ಲ.

ಕಾಂಗ್ರೆಸಿನ ಒತ್ತಾಯವಲ್ಲ

ಇದು ಕಾಂಗ್ರೆಸು ಮಂತ್ರಿಮಂಡಳದ ಒತ್ತಾಯವೆಂದು ಕೆಲವರು ಅರ್ಥಮಾಡಿಕೊಂಡಿದ್ದಾರೆ. ಅದು ಬರಿಯ ಭ್ರಮೆ. ಇದು ಪ್ರಗತಿಪರ ಮನೋಭಾವನೆಯ ಒತ್ತಾಯ ಮಾತ್ರ. ಪ್ರಥಮವಾಗಿ ಕನ್ನಡದಲ್ಲಿ ಶಿಕ್ಷಣ ಮಾಧ್ಯಮವಾಗಿ ಮೈಸೂರಲ್ಲಿ ಪ್ರಯೋಗಿಸಿದ್ದು ಕಾಂಗ್ರೆಸಿನ ಒತ್ತಾಯದಿಂದಲ್ಲ. ಬಂಗಾಳದಲ್ಲಿಯಾದರೂ ಇದನ್ನು ಪ್ರಯೋಗಿಸಿ ಯಶಸ್ವಿಯಾಗಿ ನಡೆಸುತ್ತಿರುವುದು ಕಾಂಗ್ರೆಸಿನ ಒತ್ತಾಯದಿಂದಲೆಂದು ಹೇಳಲು ಯಾರಿಗೂ ನಾಲಿಗೆ ಬರಲಿಕ್ಕಿಲ್ಲ. ವಿದೇಶೀಯ ಭಾಷೆಯೊಂದರಲ್ಲಿ ಪ್ರಾಥಮಿಕ ಜ್ಞಾನವನ್ನು ತಿಳಿಸುವ ಶಿಕ್ಷಣ ವ್ಯವಸ್ಥೆಯನ್ನು ಮಾಡಿಕೊಂಡ ನಮ್ಮ ರೀತಿಯು ತೀರಾ ಅಸ್ವಾಭಾವಿಕ ಪದ್ಧತಿಯೆಂಬುದು ಇಂದು ಎಲ್ಲೆಡೆಯ ಜನರಿಗೂ ತಿಳಿದು ಬಂದಿದರಿಂದ ನೈಸರ್ಗಿಕವಾಗಿಯೇ ಈ ವಿಚಾರಕ್ರಾಂತಿಯುಂಟಾಗಿದೆಯಲ್ಲದೆ, ಕಾಂಗ್ರೆಸು ಮಂತ್ರಿಮಂಡಳದ ಒತ್ತಾಯವಿದೆಂದು ಯಾರಾದರೂ ಗ್ರಹಿಸುವುದಿದು ತಪ್ಪಾಗಿದೆ. ದೇಶಭಾಷೆಯಲ್ಲಿ ಶಿಕ್ಷಣ ಮಾಧ್ಯಮವನ್ನಿರಿಸಿಕೊಂಡಿರುವ ವಿದೇಶೀಯ ರಾಷ್ಟ್ರಗಳಲ್ಲಿ, ನಮ್ಮಲ್ಲಿನ ವಿದ್ಯಾರ್ಥಿಗಳು ಯಾವ ಪ್ರಾಯದಲ್ಲಿ ಎಷ್ಟು ವಿಷಯ ಗ್ರಹಣಮಾಡಿಕೊಳ್ಳುತ್ತಾರೋ ಅದಕ್ಕಿಂತ ಹೆಚ್ಚು ವಿಷಯ ಗ್ರಹಣವನ್ನು ಅಲ್ಲಿನ ವಿದ್ಯಾರ್ಥಿಗಳು ಮಾಡಿಕೊಳ್ಳುತ್ತಿದ್ದಾರೆಯೆಂಬುದು ಜಗತ್ತಿನ ಕಡೆಗೆ ಕಣ್ಣೆತ್ತಿ ನೋಡುವವರಿಗೆ ತಿಳಿಯದಿರದು.

ಕನ್ನಡ ಬರುವುದಿಲ್ಲವೆ?

ಕೊಂಕಣ ಭಾಷೆಯವರಿಗೆ ಕನ್ನಡವು ಬರುವುದಿಲ್ಲವೆಂದೂ, ಅವರಿಗೆ ಆಂಗ್ಲ ಭಾಷೆಯಷ್ಟೇ ಕನ್ನಡವೂ ಹೊಸತೆಂದೂ ಅದಕಾರಣ ಕನ್ನಡಕ್ಕಿಂತ ಆಂಗ್ಲ ಭಾಷೆಯೇ ಶಿಕ್ಷಣ ಮಾಧ್ಯಮವಾಗಬಹುದೆಂದೂ ವಾದಿಸುವುದರಲ್ಲಿಯೂ ಸತ್ಯಾಂಶವುಂಟೆಂದು ಹೇಳಬರುವುದಿಲ್ಲ. ಕೊಂಕಣಿ ಮಾತನಾಡುವವರು ನಮ್ಮ ಜಿಲ್ಲೆಯಲ್ಲಿ ಕೆಥೊಲಿಕರೇ ಮಾತ್ರವಲ್ಲ, ಸಾರಸ್ವತರು ಗೌಡಸಾರಸ್ವತರು ಮತ್ತೆ ಕೆಲವರೂ ಇದ್ದಾರೆ. ಇವರೆಲ್ಲರೂ ಕನ್ನಡವನ್ನು ಮೆಚ್ಚುತ್ತಾರೆ. ಇವರಲ್ಲಿ ಹಲವು ಮಂದಿ ಅವಿಲ ಕರ್ನಾಟಕದ ಧುರೀಣರೇ ಇದ್ದಾರೆ. ಕನ್ನಡ ಭಾಷೆಯಲ್ಲಿ ಉತ್ತಮ ಪಂಡಿತರಾಗಿದ್ದಾರೆ. ಹೀಗಿರುವಾಗ ಕೊಂಕಣಿ ಭಾಷೆಯಿರುವ ಕ್ರೈಸ್ತರಿಗೆ ಮಾತ್ರ ಕನ್ನಡ ಬರುವುದಿಲ್ಲವೆಂದು ಹೇಳುವುದು ~~ಸತ್ಯ~~ವಾಗಿ ತೋರುವುದಿಲ್ಲ. ಕೆಲ ಕ್ರೈಸ್ತರಿಗೆ ಕನ್ನಡದಲ್ಲಿ ತುಚ್ಛಭಾವವುಂಟೆಂದೂ, ಅವರು ಈ ಚಳವಳವನ್ನು ಮುಂದೆ ಮಾಡುತ್ತಿದ್ದಾರೆಂದೂ ಹೇಳುವವರಲ್ಲಿ ಹೆಚ್ಚಿನ ಸ್ಪಷ್ಟತೆಯುಂಟು. ಕನ್ನಡವನ್ನು ತುಚ್ಛಮಾಡುವುದರಿಂದ, ಕೊಂಕಣಿ ಭಾಷೆಗೂ ಪ್ರಯೋಜನವಾಗದ ವಿದೇಶೀಯ ಭಾಷೆಯನ್ನು ವಿದ್ಯಾರ್ಥಿಗಳ ಮೇಲೆ ಹೊರಿಸುವ ಪ್ರಮಾದವೊಂದು ಮಾತ್ರ ಸಾಧಿಸಿದಂತಾಗುವುದು.

ತುಳುವರ ಸಮ್ಮತಿ

ದಕ್ಷಿಣಕನ್ನಡದಲ್ಲಿ ಬಹುಮಂದಿಯಾಗಿರುವವರ ಪ್ರಬಲಮತವಿರುವವರು ತುಳು ಮಾತನಾಡುವವರು. ಯಾವುದೇ ಅಭಿಪ್ರಾಯಕ್ಕೆ ಅವರದು ನಿರ್ಧಾರಮತ. ಕನ್ನಡವು ಅವರಿಗೂ ಭಿನ್ನಭಾಷೆ. ಆದರೆ ಅವರು ಇದಕ್ಕೆ ಆತಂಕಪಡಿಸುವುದಿಲ್ಲ. ಕೊಂಕಣ ಮಾತನಾಡುವವರ ಅಲ್ಪಮತದ ಆತಂಕದಲ್ಲಿಯೂ ಎಲ್ಲಾ ಕೊಂಕಣಿ ಮಾತನಾಡುವ ಪಂಗಡದವರ ಸಹಕಾರವಿಲ್ಲ. ಹೀಗಿರುವಾಗ ಸರಕಾರದವರು ನಮ್ಮ ಜಿಲ್ಲೆಯ ವಿದ್ಯಾಸಂಸ್ಥೆಗಳ ವಿಷಯವಾಗಿ ಕನ್ನಡದಲ್ಲಿಯೇ ಶಿಕ್ಷಣಮಾಧ್ಯಮವಿರುವಂತೆ ಮಾಡಬೇಕಾದುದು ಅವಶ್ಯವಿದೆ ನಾವು ಬಿನ್ನವಿಸುತ್ತೇವೆ.

—K. R.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ್ಲು, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.
ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಗುಣಬಾರದಿದ್ದರೆ ಹಣ ವಾಪಾಸು
ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ
ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಶುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಶುರುವಾಗುವುದಿಲ್ಲ. ನೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೊಲ್ಹಾಪೂರ, ತಾವೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಪೆಟ್ಟಿಗೆಯ ಕ್ರಯ ರೂ. ೪–೦–೦ ಟ. ಪಿ. ಆ೯ ೮
ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜ. S. M. C.

ವಿಜ್ಞಾನಯುಗ

ಆಕಾಶದಲ್ಲಿ ಸಂಚರಿಸುವ ಮೋಟರು!

ಈಗ ಅಮೇರಿಕಕ್ಕೆ ಹೋಗಿ ನೆಲಸಿ, ರಾಷ್ಟ್ರದ ನಾಗರಿಕನಾಗಿರುವ ರಶ್ಯದ ಒಬ್ಬ ಪ್ರಸಿದ್ಧ ವಿಜ್ಞಾನಿಯು ನೆಲದಮೇಲೆ ನಡೆಯುವಂಥ ಮೋಟರಿನಂತಿರುವ ಒಂದು ಅದ್ಭುತವಾದ ವಾಹನವನ್ನು ಕಂಡು ಹಿಡಿದಿದ್ದಾನೆ. ಈ ವಾಹನವು ಆಕಾಶದಲ್ಲಿ ಸಂಚರಿಸುವದು. ಆಕಾಶದಲ್ಲಿ ಚಲಿಸುವಂತೆ ಇದರ ಯಂತ್ರ ರಚನಾಕ್ರಮವು ವಿಮಾನವನ್ನು ಹೋಲುತ್ತದಾದರೂ ಅದು ವಿಮಾನದಂತೆ ಇರುವದಿಲ್ಲ. ಆಕಾಶದಲ್ಲಿ ವಿಮಾನವು ನಿಂತಲ್ಲೇ ನಿಲ್ಲಲಾರದು; ಹಿಂದಕ್ಕೆ ಚಲಿಸಲಾರದು. ಪರಂತು ಈ ಅದ್ಭುತ ವಾಹನವು ವಿಮಾನವು ಮಾಡದಂಥ ಈ ಎಲ್ಲಾ ಕಾರ್ಯಗಳನ್ನು ಮಾಡುವದು. ಆದ್ದರಿಂದ ಇದು ಯುದ್ಧದಲ್ಲಿ ಮಹಾಕ್ರಾಂತಿಯನ್ನುಂಟು ಮಾಡೀತು. ಹಿಂದುಮುಂದು ಚಲಿಸದೆ ನಿಂತಲ್ಲೇ ಇದ್ದುಕೊಂಡು ಆಕಾಶದ ಮೇಲಿನಿಂದ ಬಾಂಬುಗಳನ್ನು ಸುರಿಸೀತು. ವಿಜ್ಞಾನಿಯು ಇದಕ್ಕೆ ಆಕಾಶದ ಮೋಟರು ಎಂದು ಹೆಸರಿಟ್ಟಿದ್ದಾನೆ.

ರೋಗ ಚಿಕಿತ್ಸೆಯಲ್ಲಿ ರೇಡಿಯೋ

ವಾರ್ತಾ ಸಂಗ್ರಹ ಮತ್ತು ಮನೋರಂಜನೆಗಾಗಿ ಮಾತ್ರ ತಂತಿರಹಿತ ತಂತಿ—ವಾಯರ್‌ಲೆಸ್—ಅಥವಾ ರೇಡಿಯೋದ ಪ್ರಯೋಜನವಿರುವದಲ್ಲ. ರೋಗಚಿಕಿತ್ಸೆಯಲ್ಲಿಯೂ ಇದರ ಪ್ರಯೋಜನವು ಕಂಡುಬರಹತ್ತಿದೆ. ಬಾಂಬುಗಳು ಸಿಡಿದಾಗ ಅದರಿಂದ ಹಾರಿ ಶರೀರವನ್ನು ಸೇರಿಕೊಂಡ ಲೋಹದ ಚೂರುಗಳನ್ನು ಗುರುತಿಸಲಿಕ್ಕೆ ವಾಯರ್‌ಲೆಸ್ ಉತ್ತಮ ಸಾಧನವಾಗಿದೆ. ಯುದ್ಧ ಕ್ಷೇತ್ರದ ಆಸ್ಪತ್ರೆಗಳಲ್ಲಿ ಬಾಂಬುಗಳ ಸಿಡಿತದಿಂದ ಗಾಯಗೊಂಡವರ ಚಿಕಿತ್ಸೆಗಾಗಿ, ಸರ್ಜನರು ಈಗ ಇದೇ ಉಪಾಯವನ್ನು ಅನುಸರಿಸುತ್ತಿರುವರು. ವಾಯರ್‌ಲೆಸ್ ಸೆಟ್ಟಿಗೂ ಗಾಯಗೊಂಡ ಶರೀರಕ್ಕೂ ಒಂದು ವಿದ್ಯುತ್ವಾಹಕ ಸರಿಗೆಯನ್ನು ಜೋಡಿಸಿದೊಡನೆ, ಎಲುಬುಗಳ ಸ್ಪರ್ಶದಿಂದ ಬೇರೆಯೇ ಆದ ಒಂದು ಸ್ವರವನ್ನು ವಾಯರ್‌ಲೆಸ್ ಸೆಟ್ಟು ಶರೀರದೊಳಗಿನ ಲೋಹದ ಚೂರುಗಳ ಸ್ಪರ್ಶವಾದೊಡನೆ ಕೊಡುವದು. ಆದುದರಿಂದ ಎಲ್ಲಿ ಲೋಹದ ಚೂರು ಸೇರಿಕೊಂಡಿದೆ ಎಂಬುದನ್ನು ಚಿಕಿತ್ಸಕರು ಈ ಸ್ವರಭೇದದಿಂದ ತಿಳಿಯುವರು.

ಹವಾಗುಣ ತಿಳಿಯಲಿಕ್ಕೆ ಯಂತ್ರಸಾಧನ

ಹವಾಗುಣವನ್ನು ಪರೀಕ್ಷಿಸಿ ತಿಳಿದು ಮತ್ತೆ ಅದನ್ನೇ ರೇಡಿಯೋದ ಮೂಲಕ ಜನರಿಗೆ ಹೇಳುವಂಥ ಒಂದು ಯಂತ್ರ ಸಾಧನವನ್ನು, ಅಮೇರಿಕದ ಮೆಟರಿಯೊಲೊಜಿಕಲ್ ಅಥವಾ ಹವಾಗುಣ ಶೋಧಕ ಇಲಾಖೆಯವರು ಕಂಡುಹಿಡಿದಿದ್ದಾರೆ. ಈ ಒಂದು ಯಂತ್ರ ಸಾಧನವನ್ನು ಎತ್ತರವಾದ ಒಂದು ಗುಡ್ಡ ಪ್ರದೇಶದ ಮೇಲಿಟ್ಟಾಗ; ಒಂದು ದಿನದ ಬೇರೆ ಬೇರೆ ಸಮಯಗಳಲ್ಲಿ ಶೀತೋಷ್ಣ, ಗಾಳಿ ಮಳೆ ಇತ್ಯಾದಿ ಎಷ್ಟಿತ್ತು ಮತ್ತು ಅವು ಮುಂದೆ ಹೇಗಿರಬಹುದು ಎಂಬದನ್ನೆಲ್ಲ ತಿಳಕೊಳ್ಳುವದು. ಮತ್ತೆ ಇದಕ್ಕೆ ಜೋಡಿಸಿರುವಂಥ ಒಬ್ಬ ಯಾಂತ್ರಿಕ ಮನುಷ್ಯನು ಈ ಎಲ್ಲಾ ವಿಚಾರಗಳನ್ನು ರೇಡಿಯೋದ ಮೂಲಕ ಪ್ರಕಟಿಸುವನು. ಈ ಎಲ್ಲಾ ಕಾರ್ಯಗಳಾಗಲಿಕ್ಕೆ ಎಲ್ಲಿಯೂ ಮನುಷ್ಯ ಸಹಾಯವು ಬೇಕಾಗಿರುವದಿಲ್ಲ. ಎಲ್ಲೆಲ್ಲಿ ರೇಡಿಯೋ ಸೆಟ್ಟುಗಳಿವೆಯೋ, ಅಲ್ಲೆಲ್ಲ ಈ ಯಾಂತ್ರಿಕ ಮನುಷ್ಯನ ಹವಾಮಾನದ ವರದಿಗಳನ್ನು ನಿಯಮಿತ ಸಮಯಗಳಲ್ಲಿ ಕೇಳಬಹುದು.

ತತ್ವಜ್ಞಾನದಿಂದ ವಿಜ್ಞಾನಿಗಳಿಗೆ ಮನೋಶಾಂತಿ

ಲೋಕಪ್ರಸಿದ್ಧ ವೈಜ್ಞಾನಿಕರಾಗಿರುವ ಆಚಾರ್ಯ ಪ್ರಫುಲ್ಲ ಚಂದ್ರರಾಯರು ತಮ್ಮ ವೃದ್ಧಾಪ್ಯವನ್ನು ದರ್ಶನ ಶಾಸ್ತ್ರಗಳ ಅಧ್ಯಯನದಲ್ಲಿ ಕಳೆಯುತ್ತಿದ್ದಾರೆ. ಕಲ್ಕತ್ತದ ಸ್ಕೊಟಿಶಚರ್ಚ ಕಾಲೇಜಿನ ಸಾಂಸ್ಕೃತಿಕ ಪರಿಷತ್ತಿನ ತೃತೀಯ ವಾರ್ಷಿಕ ಅಧಿವೇಶನದಲ್ಲಿ ಭಾಷಣಕೊಡುತ್ತಾ, ತಾವು ತಮ್ಮ ವಿರಾಮ ಕಾಲವನ್ನು ಮಹಾ ಕವಿ ಶೇಕ್ಸಪಿಯರನ ಗ್ರಂಥಗಳನ್ನು ಓದುತ್ತಾ ಕಳೆಯುತ್ತಲಿರುವದಾಗಿ ಹೇಳಿದರು. ಹೀಗೆ ಅವರು ತತ್ವಗ್ರಂಥಗಳನ್ನು ಓದಲು ತೊಡಗಿ ನಾಲ್ಕು ವರ್ಷಗಳ ಮೇಲೆ ಆಯಿತು. ಮನುಷ್ಯನಿಗೆ ನಿಜವಾದ ಮನೋಶಾಂತಿಯು ಇಂಥ ಗ್ರಂಥಗಳ ಪಠನದಿಂದಲೇ ಪ್ರಾಪ್ತವಾಗುವದೆಂಬುದು ಅವರ ಖಚಿತ ಅಭಿಪ್ರಾಯವಾಗಿದೆ. ಸಂಸಾರ ತಾಪತ್ರಯಗಳಿಗೆ ಗುರಿಯಾಗಿ ಶರೀರ ಮನಸ್ಸುಗಳು ಸೊರಗಿ ಸುಣ್ಣವಾದಾಗ ತತ್ವ ಮತ್ತು ವೇದಾಂತ ಗ್ರಂಥಗಳೇ ಅಮೃತಪಾನವನ್ನು ಮಾಡಿಸಿ ಮನುಷ್ಯನಿಗೆ ಸುಖಶಾಂತಿಗಳನ್ನು ಕೊಡುವವು!

ಅದೃಶ್ಯ ವಿಮಾನಗಳು

ಜರ್ಮನಿನ ಅಧೀನವಾಗಿರುವ ಆಸ್ಟ್ರಿಯದ ಯಾವದೋ ಒಂದು ವಿಮಾನ ಕಾರಖಾನೆಯಲ್ಲಿ ಜರ್ಮನ್ ವೈಮಾನಿಕರು ಕಣ್ಣಿಗೆ ಕಾಣದಂಥ ವಿಮಾನಗಳನ್ನು ತಯಾರಿಸ ಹತ್ತಿದ್ದಾರೆಂಬ ಸುದ್ದಿ ಉಂಟಾಗಿದೆ. ಈ ವಿಮಾನಗಳು ಪಾರದರ್ಶಕ ಸಾಮಗ್ರಿಗಳಿಂದ ರಚಿಸಲ್ಪಟ್ಟಿರುವದರಿಂದ ಎರಡು ಮೂರು ಸಾವಿರ ಅಡಿಗಳ ಮೇಲಿನಿಂದ ಹಾರುತ್ತಿರುವಾಗ ಇವು ನಮಗೆ ತೋರಿಬರುವದಿಲ್ಲ. ಆದುದರಿಂದಲೇ ಇವನ್ನು ಅದೃಶ್ಯ ವಿಮಾನಗಳೆಂದು ಕರೆಯುವದಾಗಿದೆ. ಇವುಗಳ ಯಂತ್ರಗಳು ಬಲಿಷ್ಠವಾಗಿದ್ದು ತಾಸಿಗೆ ೩೦೦—೪೦೦ ಮೈಲುಗಳ ವೇಗದಿಂದ ಹಾರಬಲ್ಲವಾದ್ದರಿಂದ, ಇತರ ವಿಮಾನಗಳಂತೆ ಇವೂ ಉಪಯುಕ್ತವಾಗಿರುವವು ಮತ್ತೆ ಆಕಾಶದಲ್ಲಿ ಹಾರುತ್ತಿರುವಾಗ ಇವು ಕಣ್ಣಿಗೆ ಕಾಣಿಸದಿರುವದು ಯುದ್ಧ ಕಾಲದಲ್ಲಿ ಶತ್ರುಗಳ ದೃಷ್ಟಿಗೆ ಬೀಳದೆ ಕಾರ್ಯವನ್ನು ಸಾಧಿಸಲಿಕ್ಕೆ ಇವು ಅನುಕೂಲವಾಗಿವೆ. ಪರಂತು ಜರ್ಮನರ ಈ ವಿಮಾನಗಳನ್ನು ಕೆಡವಿಹಾಕುವ ಪ್ರತ್ಯಸ್ತ್ರಗಳನ್ನು ಬ್ರಿಟಿಷರು ಈಗಾಗಲೇ ಕಂಡು ಹಿಡಿದಿದ್ದಾರಾಗಿಯೂ ಸಮಾಚಾರವಿದೆ.

ಯುದ್ಧ ಜಯಿಸಲು ವೈಜ್ಞಾನಿಕನೊಬ್ಬನ ಉಪಾಯ

ಬ್ರಿಟನಿನ ಲೀವರಪೂಲ್ ಬಂದರದಿಂದ ಅಮೇರಿಕದ ನ್ಯೂಯಾರ್ಕಿಗೆ ನಡುವಿರುವ ಅತ್ಲಾಂತಿಕ ಮಹಾ ಸಾಗರದ ಮಧ್ಯದಲ್ಲಿ ಒಂದು ಪರ್ವತವಿದೆ. ಇದರ ಶಿಖರವು ಸಮುದ್ರ ಮಟ್ಟದಿಂದ ಕೇವಲ ೩೦೦ ಅಡಿಗಳ ಆಳದಲ್ಲಿದೆ. ಯಾರೂ ಅದನ್ನು ಈ ವರೆಗೆ ಕೇಳದೆ ಇರಬಹುದಾದರೂ ಅದನ್ನು ವಿಜ್ಞಾನಿಗಳು ಮಾಂಟ ಲೋರಾ ವಿಥೆಲ್ ಎಂದು ನಾಮಕರಣ ಮಾಡಿದ್ದಾರೆ. ಈ ಶಿಖರದ ಮೇಲೆ ಸಾವಿರಾರು ಟನ್ನು ಹ್ಯೊನೆ, ಮಣ್ಣು ಮತ್ತು ಕಾಂಕ್ರೀಟನ್ನು ಸುರುವಿದರೆ ಅದು ಸಾಗರ ಮಧ್ಯದ ಒಂದು ದ್ವೀಪವಾಗುವದು. ಮತ್ತೆ ಈ ದ್ವೀಪದಲ್ಲಿಯೇ ಅಸ್ತ್ರ ಶಸ್ತ್ರಗಳು, ಅನ್ನಾಹಾರ, ಸೈನ್ಯ ಸರಂಜಾಮುಗಳನ್ನು ಇಟ್ಟುಕೊಂಡು ಭದ್ರಮಾಡಿದರೆ, ಶತ್ರುಗಳ ಯು-ಬೋಟುಗಳ ಹಾವಳಿಯಿಂದ ಸಾವಿರಾರು ಮಂದಿ ಮಿತ್ರಪಕ್ಷದವರ ಪ್ರಾಣಗಳನ್ನು ಕಾಪಾಡಬಹುದು. ಆದುದರಿಂದ ಯುದ್ಧದಲ್ಲಿ ವಿಜಯಿಗಳಾಗಲಿಕ್ಕೆ ಇದನ್ನೇ ಮಾಡಬೇಕೆಂದು ಒಬ್ಬ ವಿಜ್ಞಾನಿಯು ಸೂಚಿಸಿದ್ದಾನೆ.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ
ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ.

ಪರಮ ರಹಸ್ಯ

ನಯನಾನಂದಕರವಾದ ಸೌಂದರ್ಯಕ್ಕೆ
ಒಳ್ಳೆಯ ಸಂತಾನಕ್ಕೆ ಆರೋಗ್ಯವೇ ಕಾರಣ!

ಸ್ತ್ರೀಯರಿಗೆ ಎಂತಹ ಋತು ದೋಷಗಳೂ ಇಲ್ಲದೆ ಆರೋಗ್ಯವನ್ನು ಕಾಪಾಡುತ್ತಾ ಸಂತಾನ ಸಫಲತೆಯನ್ನುಂಟುಮಾಡುವ ಮಹಿಮಾನ್ವಿತ ರಸಾಯನವೇ ಲೋಧ್ರ ಸ್ತ್ರೀಯರಿಗೆ ಆರೋಗ್ಯವು ಮುಖ್ಯ. ಆದ್ದರಿಂದಲೇ ಲೋಧ್ರ ಸೇವನೆಯೂ ಮುಖ್ಯ.

ಎಲ್ಲಾ ಮದ್ದಿನ ಅಂಗಡಿಗಳಲ್ಲಿಯೂ ಸಿಕ್ಕುತ್ತದೆ.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು

ಅಹಿಂಸಾಪಾಲನೆಯು ಇಸ್ಲಾಮಿನ ನೀತಿ

ಪ್ರಸಿದ್ಧ ಮಹಮ್ಮದೀ ಸಂತರ ಉಪದೇಶ.

ಜಗ್ತಾದಿನ ಪ್ರಸಿದ್ಧ ಮುಸ್ಲಿಂ ಸಂತರಾದ ಪಿರಾನ್ ಇಪೀರ್ ಮೊಹಿಉದ್ದಿನ್ ಸಯ್ಯದ್ ಅಬ್ದುಲ್ ಖಾದರ್ ಜಿಲಾನಿಯುಂಬವರು ಮುಸ್ಲಿಮರಿಗೆ ಹತ್ತು ಆಜ್ಞೆಗಳನ್ನು ಕೊಟ್ಟಿರುವರೆಂದು ತನ್ನ 'ಸಜತ್ ಉಸಾಲ್ಕಿನ್' ಎಂಬ ಗ್ರಂಥದಲ್ಲಿ ಜಲಂದಿನ ಸಯ್ಯದ್ ಆಲಂ ಉಲ್ಲಾ ಹಸನಿ ಎಂಬವರು ಬರೆದಿರುತ್ತಾರೆ.

ಆ ಆಜ್ಞೆಗಳು ಈ ಕೆಳಗಿನಂತಿವೆ:

೧. ನ್ಯಾಯವಾದ ಕಾರಣಕ್ಕಾದರೂ, ಮುಸ್ಲಿಮನು ದೇವರ ಆಣೆ ಹಾಕಬಾರದು. ಆಣೆ ಹಾಕದ ಮನುಷ್ಯನನ್ನು ದೇವರು ಅಂಗೀಕರಿಸುತ್ತಾನೆ; ಆತನನ್ನು ಮಿತ್ರರು ಶತ್ರುವೆನ್ನದೆ ಎಲ್ಲರೂ ಗೌರವಿಸುತ್ತಾರೆ.

೨. ಎಂತಹ ಪರಿಸ್ಥಿತಿಯಲ್ಲಾದರೂ ಅವನು ಅಸತ್ಯ ಹೇಳಬಾರದು. ಅವನೇ ನಿಜವಾದ ಮುಸ್ಲಿಮನು.

೩. ಸಾಧ್ಯವಾದಷ್ಟು ಅಲ್ಲಾ ಭರವಸೆ (promise) ಕೊಡುವುದನ್ನು ಮುಸ್ಲಿಮನು ತಪ್ಪಿಸಬೇಕು. ಭರವಸೆ ಕೊಟ್ಟ ನಂತರ ಅದಕ್ಕೆ ಎಂದೆಂದೂ ತಪ್ಪಬಾರದು. ಅಂತಹ ಮನುಷ್ಯನೇ ದೇವರಿಂದ ವಿಶೇಷ ಪ್ರೀತಿಯನ್ನು ಪಡೆಯುತ್ತಾನೆ.

೪. ಅವನು ಯಾರನ್ನೂ ಶಪಿಸಬಾರದು; ಯಾರನ್ನೂ ನೋಯಿಸಬಾರದು. ಅಂತಹವನೇ ದೇವರ ರಕ್ಷಣೆಯನ್ನು ಪಡೆಯುತ್ತಾನೆ.

೫. ಯಾವನಾದರೂ ತನಗೆ ಅನಿಷ್ಟ ಮಾಡಿದ್ದರೂ, ಅವನು ಯಾರಿಗೂ ಅನಿಷ್ಟ ಬಯಸಬಾರದು. ಅವನು ಅಂಥವನನ್ನು ಮರೆತುಬಿಡಬೇಕು; ಪ್ರತೀಕಾರ ಮಾಡುವುದನ್ನು ಮನೋವಾಕ್ಕಾಯಗಳಿಂದ ತಪ್ಪಿಸಬೇಕು. ಅಂತಹ ಕೆಲಸದಿಂದ ಆತನು ಜನರ ಪ್ರೀತಿಗೆ ಪಾತ್ರನಾಗುವನು, ಮತ್ತೆ ದೇವರ ಸನ್ನಿಧಿಯಲ್ಲಿ ಆತನು ಪ್ರಧಾನ ಸ್ಥಾನವನ್ನು ಹೊಂದುವನು.

೬. ಆತನು ಯಾವನಾದರೊಬ್ಬ ದೇವಭಕ್ತನಾದ ಮನುಷ್ಯನಿಗೆ ಅಹಿತವಾತ ಮಾಡಬಾರದು; ಹಾಗೆ ಮಾಡಿದರೆ, ಆತನನ್ನು ದೇವರು ಶಿಕ್ಷಿಸಿಕೊಳ್ಳುವನು.

೭. ದರ್ಶನ ಮಾತ್ರದಿಂದಲಾದರೂ ಒಬ್ಬ ಮುಸ್ಲಿಮನು ಪಾಪಕಾರ್ಯವನ್ನು ವಿಚಾರಿಸಬಾರದು; ತಾನು ವಾಸನೆಯನ್ನು ತಡೆದುಕೊಳ್ಳಬೇಕು; ತನ್ನ ಕಾರ್ಯಗಳನ್ನು ನಿಯಮಿತ ಮಾಡಿರಬೇಕು, ಹೀಗೆ ತನ್ನನ್ನು ಸಂಪೂರ್ಣ ಸಂಯಮಿಸಿಕೊಳ್ಳಬೇಕು. ಹೀಗೆ ಮಾಡಿದರೆ ಆತನು ಅಮರ ಸುಖವನ್ನು ಪಡೆವನು.

೮. ಆತನು ಯಾರದೇ ಆಗಲಿ ಹಂಗಿನಲ್ಲಿರಬಾರದು; ಯಾವುದೇ ರೀತಿಯಲ್ಲಾಗಲಿ ಯಾರಿಂದಲೇ ಆಗಲಿ ತನ್ನ ಕೆಲಸಗಳನ್ನು ಮಾಡಿಸಿಕೊಳ್ಳಬಾರದು. ಏಕೆಂದರೆ, ಆತ್ಮಗೌರವವುಳ್ಳ ಮನುಷ್ಯನು ಅಪರಿಮಿತ ಶಕ್ತಿಯನ್ನು ಪಡೆಯುತ್ತಾನೆ; ಅತ್ಯಂತ ಪ್ರಭಾವ ಶಾಲಿಯಾಗುತ್ತಾನೆ. ಎಲ್ಲರೂ ಆವನನ್ನು ಗೌರವಿಸುತ್ತಾರೆ.

೯. ಆತನು ಯಾವುದನ್ನೂ ಕಾಮಿಸಬಾರದು. ತನಗೆ ಇದ್ದುದರಲ್ಲಿ ತೃಪ್ತಿಪಡಬೇಕು; ನಿಷ್ಕಾಮಿಯಾಗಿಯೂ ತೃಪ್ತನಾಗಿಯೂ ಇರುವುದೇ ಮನುಷ್ಯನನ್ನು ಸುಖಿಯನ್ನಾಗಿ ಮಾಡುತ್ತದೆ. ಅಂತಹನೇ ಹೆಚ್ಚು ಪ್ರಾಧಾನ್ಯತೆಯನ್ನು ಹೊಂದುತ್ತಾನೆ.

೧೦. ಒಬ್ಬ ಮುಸ್ಲಿಮನು ವಿನಯವಂತನಾಗಿಯೂ ಸಾಧುವಾಗಿಯೂ ಇರಬೇಕು. ತ್ರಿಕರಣ ಪೂರ್ವಕವಾಗಿ ಹಿಂಸೆಯನ್ನು ತಡೆಯಬೇಕು, ಏಕೆಂದರೆ ಅಹಿಂಸಾ ಪಾಲನೆಮಾಡುವಂಥವನು ಜನರನ್ನು ತನ್ನ ಕಡೆಗೆ ಆಕರ್ಷಿಸಿ ಕೊಳ್ಳುತ್ತಾನೆ. ಆತನ ಮಾತು ಜನರಿಗೆ ಶಾಸನವಾಗುತ್ತದೆ. ಅಂಥ ಮನುಷ್ಯ ದೇವರ ಬಹಳ ಹತ್ತಿರದ ಸ್ಥಾನವನ್ನು ಪಡೆಯುತ್ತಾನೆ.

ಈ ನೀತಿಗಳು ಎಲ್ಲಾ ಧರ್ಮೋಪದೇಶಕರ ಉಪದೇಶಗಳಲ್ಲಿಯೂ ಅಡಕವಾಗಿವೆಯಲ್ಲವೆ? ಇಂದು ಗಾಂಧಿಜಿಯೂ ಕೂಡಾ ಇವೇ ತತ್ವಗಳನ್ನು ಸಾರುತ್ತಿದ್ದಾರೆ ವಿಶ್ವಧರ್ಮದ ಅಮೂಲ್ಯತತ್ವಗಳಿವು.

THE

Canara Banking Corporation Ltd.,

(INCORPORATED IN BRITISH INDIA)

Estd: 1906

Head Office: UDIPI, S. Kanara.

Our attractive Rates on Deposits.

FIXED DEPOSITS

3 to 6 months	2½% p. a.
6 to 9 „	3% „
One year	3½% „
Two years	4% „
SHORT TERM Deposits:	2½% p. a.
Current Account:	1% p. a.
Savings Bank:	2½% „

Particulars of other kinds of deposits on application.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೋಂಟ್ ಬುಕ್ಕಿಂಗ್ ಆಫೀಸ

ಮಂಗಳೂರು. ಕೊಡಿಯಾಲಬೈಲು.

ಮಧ್ಯಾಹ್ನ 2 P. M. ಗೆ ಬಿಡುವ

ಮಂಗಳೂರು — ಚಿಕ್ಕಮಗಳೂರು

ಸರ್ವಿಸು

ತಾರೀಕು 1—2—1941 ರಿಂದ ಪ್ರಾರಂಭವಾಗಲಿರುವುದು

ಮಂಗಳೂರಿನಿಂದ 2 P. M. ಗೆ ಹೊರಟರೆ ಅದೇ ದಿನ ಸಾಯಂಕಾಲ 8 P. M. ಗೆ ಚಿಕ್ಕಮಗಳೂರಿಗೆ ತಲಪಬಹುದು

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಅಥವಾ ಸ್ವತಹಾ ಕೇಳಿ ತಿಳಕೊಳ್ಳಬಹುದು.

JOINT MANAGERS.

The Combined Booking Agency, MANGALORE.

The Joint Booking Office, KODIALBAIL.

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2—13—0   Regd. No. M. 306

ಸ್ವದೇಶಾಭಿಮಾನಿ

ಸಂಪುಟ 35]   ತಾರೀಕು 31—1—1941   [ಸಂಚಿಕೆ 5]

(ESTABLISHED 1908)

The Bombay Life Assurance Company, Ltd.

IGUFRES FOR 1939

Completed business exceeds	....	Rs.	**1.42** Crores
Total Funds exceed	....	Rs.	**1.52** Crores.
Premium income during the year exceeds	....	Rs.	**37½** Lakhs
Claims paid during the year exceed	....	Rs.	10 Lakhs

THE INSURANCE POLICIES

'orm Best Investment in Wartime This is the unique opportunity to Agents to put through larger business. To Insure or to Represent,

Please apply to

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI.

OR ANY OF OUR FOLLOWING OFFICES AT:

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Girgaum, Bombay No. 4.	Post Box No. 337 Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು



ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

..ited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI



ಬೋಂಬೆ ಟಾಕೀಸಿನವರ 'ನವಜೀವನ' ಚಿತ್ರದಲ್ಲಿ
ರಾಮಶುಕ್ಲ ಮತ್ತು ಹನ್ಸಾ ವಾಡ್‌ಕರ್

KANNADA ILLUSTRATED WEEKLY

'ಓವಲ್‌ಟಿನ್'

OVALTINE

★ ಆರೋಗ್ಯದಲ್ಲಿದ್ದ ಸಂಸಾರವೇ ★ ಸುಖಮಯ ಸಂಸಾರ

ನಿಮ್ಮ ಕುಟುಂಬದ ಪ್ರತಿ ಒಬ್ಬನಿಗೂ ಯಾವಾಗಲೂ "ಓವಲ್ಟಿನ್" ಇತ್ತು, ಪ್ರತಿ ಕಡೆಯಲ್ಲಿಯೂ ಸಾವಿರಾರು ಜನರು ಅನುಸರಿಸುತ್ತಿರುವ ಉದಾಹರಣೆಯನ್ನೇ ಅನುಸರಿಸಿ. ಶ್ರೇಷ್ಠವಾದ ಪೋಷಣೆಯ ಗುಣವುಳ್ಳ ಈ ಪಾನೀಯವು ಆರೋಗ್ಯ, ಬಲ ಹಾಗೂ ಚೇತನವನ್ನೀಯುತ್ತದೆ.

ಮಕ್ಕಳು ಹಾಗೂ ಪ್ರಾಯಸ್ಥರು ಇದರ ರುಚಿಯನ್ನು ಬಹಳ ಮೆಚ್ಚುತ್ತಾರೆ. "ಓವಲ್ಟಿನ್"ನ ಪ್ರತೀ ಒಂದು ಹನಿಯೂ ಶ್ರೇಷ್ಠವಾದ ಪೋಷಣೆಯಿಂದ ಕೂಡಿದ್ದು ದೇಹ, ಮೆದುಳು ಹಾಗೂ ನರನಾಡಿಗಳನ್ನು ಉತ್ತೇಜನ ಸ್ಥಿತಿಯಲ್ಲಿಡುತ್ತದೆ. ನಿಮ್ಮ ಮಕ್ಕಳು ಮರಿಗಳ ಸುಖವು ಅವರ ಆರೋಗ್ಯದ ಮೇಲೆ ಹೊಂದಿಕೊಂಡಿರುವುದೆಂದು

ನೆನಪಿನಲ್ಲಿಟ್ಟುಕೊಳ್ಳಿರಿ!

"ಓವಲ್ಟಿನ್" ಪ್ರಕೃತಿಯ ಶ್ರೇಷ್ಠ ಟಾನಿಕ್ ಆಹಾರಗಳ ತಯಾರಿಕೆಯಾಗಿರುತ್ತದೆ. ನೆನೆಯ ಹಾಕಿ ಮಾಗಿದ ಬಾರ್ಲಿ—ನವ ಹಾಲು, ಶ್ರೇಷ್ಠವಾದ ನೈಸರ್ಗಿಕ ಜೀವಾತುಗಳು ಮತ್ತು ಇತರ ನಕಲಿ ಪಾನೀಯಗಳನ್ನು ತ್ಯಜಿಸಿರಿ. "ಓವಲ್ಟಿನ್"ನ್ನು ಕೊಂಡುಕೊಳ್ಳಿರಿ.

"ಓವಲ್ಟಿನ್" ರುಚಿಕರವಾದ ಆಹಾರಪಾನೀಯವಾಗಿರುತ್ತದೆ. ಇದು ಬಿಸಿಯಾಗಲೀ ತಣ್ಣಗಾಗಲೀ ಕುಡಿಯಬಹುದು. ತಡವಿಲ್ಲದೆ ಓವಲ್ಟಿನ್ ಪಾನೀಯವನ್ನು ತಯಾರಿಸಲು ಬಲು ಸುಲಭ. ಪ್ರತಿ ಟಿನ್ನುಗಳ ಒಟ್ಟಿಗೆ ಮೇಲೆ ತಯಾರಿಸುವ ವಿಧಾನವಿದೆ.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ
— ಮಾರಲ್ಪಡುತ್ತದೆ —

ಡಿಸ್ಟ್ರಿಬ್ಯೂಟರ್ಸ್:

ಗ್ರೇಹಮ್ಸ್ ಟ್ರೇಡಿಂಗ್ ಕೋ.
(ಇಂಡಿಯಾ), ಲಿಮಿಟೆಡ್.

ಬೇಂಕ್ ಸ್ಟ್ರೀಟ್, ಬೊಂಬಾಯಿ ಮತ್ತು ಕಲ್ಕತ್ತ, ಮದ್ರಾಸು, ಕರಾಚಿ, ರಂಗೂನ್‌ಗಳಲ್ಲಿ.

'ಓವಲ್ಟಿನ್ ಬಿಸ್ಕುಟುಗಳು'

ರುಚಿಕರ— ಜೀರ್ಣಕಾರಿ— ಹಾಗೂ ಪೋಷಕ—ಓವಲ್ಟಿನ್ ಬಿಸ್ಕುಟುಗಳು ಉತ್ತಮವಾದುವು. ಇವುಗಳಲ್ಲಿ ಉತ್ತಮ ಬೆಲೆಯ 'ಓವಲ್ಟಿನ್' ಸೇರಿದೆ.

4 ಔನ್ಸ್ 8 ಔನ್ಸುಗಳ ಪೆಕೇಟುಗಳಲ್ಲಿಯೂ 1 ಪೌಂಡಿನ ಟಿನ್ನಿನಲ್ಲಿಯೂ ಮಾರಲ್ಪಡುತ್ತದೆ

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

7—2—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೭—೨—೧೯೪೧

ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡುವೆವು!

ಅಖಿಲ ಭಾರತ ಪತ್ರಿಕಾ ಸಂಪಾದಕರ ನಿರ್ಧಾರ

'ಮಹಾತ್ಮರ ಹೇಳಿಕೆಗಳನ್ನು ತಡೆಯಲಾಗದು'

ಹರಿಜನವನ್ನು ಪ್ರಾರಂಭಿಸಲು ಮಹಾತ್ಮರಲ್ಲಿ ಬಿನ್ನಹ

— ಡಿಲ್ಲಿಯಲ್ಲಿ ನೆರೆದ ಸಮ್ಮೇಳನದ ಸುದ್ದಿ —

ಅಖಿಲ ಭಾರತ ಸಂಪಾದಕರ ಪರಿಷತ್ತು ಡಿಲ್ಲಿಯಲ್ಲಿ 'ಹಿಂದೂಸ್ಥಾನ ಟೈಮ್ಸ್' ಪತ್ರಿಕೆಯ ಆಫೀಸಿನಲ್ಲಿ 'ಹಿಂದೂ' ಪತ್ರಿಕೆಯ ಸಂಪಾದಕರಾದ ಶ್ರೀ. ಶ್ರೀನಿವಾಸನರ ಅಧ್ಯಕ್ಷತೆಯಲ್ಲಿ ಸೇರಿತು. ಸಂಪಾದಕರ ಪರಿಷತ್ತಿನ ಅಧ್ಯಕ್ಷರು ಪರಿಷತ್ತಿಗೆ ಹೋಗುವುದಕ್ಕಿಂತ ಮೊದಲು ವರ್ಧಾಕ್ಕೆ ತೆರಳಿ ಗಾಂಧಿಜಿಯವರನ್ನೂ ಡಿಲ್ಲಿಯಲ್ಲಿ ವೈಸರಾಯರನ್ನೂ ಭೇಟಿಯಾಗಿದ್ದರು. ವೃತ್ತಪತ್ರಿಕೆಗಳಿಗೆ ಹಾಕಿದ ನಿರ್ಬಂಧದ ಕುರಿತು ಪರ್ಯಾಲೋಚಿಸಲು ಸಭೆ ಕೂಡಿತ್ತು. ಇತ್ತೀಚೆಗೆ ಗಾಂಧಿಜಿಯವರು ಕೊಟ್ಟ ಹಲವು ಹೇಳಿಕೆಗಳನ್ನು ಸರಕಾರವು ತಡೆಹಾಕಿದ್ದರಿಂದ ಈ ಎಲ್ಲಾ ಮುದ್ರಣ ಸ್ವಾತಂತ್ರ್ಯದ ವಿಷಯ ವಿಚಾರಿಸುವರೆ ಈ ಪರಿಷತ್ತು ಕೂಡಿತ್ತು.

ಸಭೆಗೆ ಪ್ರಮುಖ ಪತ್ರಿಕಾ ಸಂಪಾದಕರೆಲ್ಲರೂ ಸೇರಿದ್ದರು. ಶ್ರೀ. ಮಹಾದೇವ ದೇಸಾಯಿಯವರೂ ಬಂದಿದ್ದರು. ಅನೇಕ ವಿಚಾರಗಳು ಚರ್ಚಿಸಲ್ಪಟ್ಟವು. ಅದರಲ್ಲಿ ಈ ಠರಾವುಗಳು ಮಂಜೂರಾದವು:

(೧) 'ಡಿಲ್ಲಿಯಲ್ಲಿ ಕಳೆದ ಸಲ ಸರಕಾರ ಮತ್ತು ಸಂಪಾದಕರ ನಡುವೆ ಆದ ಒಪ್ಪಂದವು ಯಶಸ್ವಿಯಾಗಬೇಕಾದರೆ ಸರಕಾರದ ವೃತ್ತಪತ್ರ ಸಲಹೆಗಾರರು ಇಂಥಿಂಥ ಸುದ್ದಿಗಳನ್ನು ಪ್ರಕಟಿಸಬೇಡಿರೆಂದು ಸಲಹೆ ಕೊಡುವ ಮೊದಲು, ಕೇಂದ್ರ ಸಲಹೆಯ ಮಂಡಳಿಯೊಡನೆ ಕೇಳಬೇಕು ಮತ್ತು ಯಾವ ವಿಷಯದ ಸುದ್ದಿಗಳನ್ನು ಪ್ರಕಟಿಸಕೂಡದೆಂದು ತಮ್ಮ ಇಚ್ಛೆಯಿದೆಯೋ ಅಂಥ ವಿಷಯಗಳನ್ನು ಮುಂದಿನ ಸಲ ಕೇಂದ್ರ ಸಲಹೆಯ ಸಮಿತಿಗೆ ತಿಳಿಸಬೇಕು.'

(೨) ಬಂಗಾಳ ಸರಕಾರವು ಸಂರಕ್ಷಣಾ ಶಾಸನದ ಬಗ್ಗೆ ನಾನಾರ್ಥ ಮಾಡಿದರೆ ಸಂಪಾದಕರಿಗೆ ತುಂಬಾ ತೊಂದರೆಯಾಗುವುದು ಮತ್ತು ಪತ್ರಿಕೆಗಳ ಕೆಲಸ ನಡೆಯಲು ಕಷ್ಟಸಾಧ್ಯವಾಗುವುದು (ಬಂಗಾಳಕ್ಕೆ ಸಂಬಂಧಿಸಿದ ನಿರ್ಣಯ).

(೩) ಸೈನಿಕ ಮತ್ತು ನೌಕಾ ನೇಶನಲ್ ಹೆರಾಲ್ಡ್ ಪತ್ರಿಕೆಗಳ ಮೇಲೆ ಹಾಕಿದ ನಿರ್ಬಂಧವನ್ನು ತೆಗೆದುಹಾಕಬೇಕು.

(೪) ಭಾರತದ ಪತ್ರಿಕೆಗಳು, ಭಾರತದ ಸ್ವಾತಂತ್ರ್ಯದ ಸಲುವಾಗಿ ನಿರ್ಭಯ ನಿದಾಕ್ಷಿಣ್ಯದಿಂದ ಹೋರಾಡುತ್ತವೆ. ಆದ್ದರಿಂದ ದೇಶದ ರಾಜಕೀಯಕ್ಕೆ ಸಂಬಂಧಿಸಿದ ಸುದ್ದಿಗಳನ್ನು ನ್ಯಾಯವಾದಷ್ಟು ಪ್ರಸಿದ್ಧಿಸಲು ಅಪೇಕ್ಷಿಸುತ್ತವೆ. ಭಾರತದ ಪತ್ರಿಕೆಗಳು ನಾಝಿಸಂ, ಫಾಸಿಸಂಗಳನ್ನು ಸಂಪೂರ್ಣ ವಿರೋಧಿಸುತ್ತವೆ. ಬ್ರಿಟನಿನ ಯುದ್ಧಕಾರ್ಯಕ್ಕೆ ಅಡ್ಡಿಯನ್ನುಂಟುಮಾಡಬೇಕೆಂಬ ಇಚ್ಛೆ ಅವುಗಳಿಗಿಲ್ಲ. ಆದ್ದರಿಂದ ಸರಕಾರವು ಡಿಲ್ಲಿ ಒಪ್ಪಂದದಂತೆ ನಡೆದುಕೊಂಡು, ಪತ್ರಿಕೆಗಳ ವಿಷಯವಾಗಿ ಯೋಗ್ಯ ರೀತಿಯಿಂದ ವರ್ತಿಸಬೇಕಾಗಿ ಈ ಸಭೆಯು ಸಾರಿ ಹೇಳುತ್ತದೆ.

ಮಹಾತ್ಮರ ಹೇಳಿಕೆಗಳನ್ನು ನಿರ್ಬಂಧಿಸಕೂಡದು

ಸರಕಾರದೊಡನೆ ಸಂಪಾದಕರ ಕೇಳಿಕೆ

ಅಖಿಲ ಭಾರತ ಸಂಪಾದಕರ ಪರಿಷತ್ತಿನ ಸ್ಥಾಯಿ ಸಮಿತಿಯು ದೀರ್ಘ ಚರ್ಚೆಯಾಗಿ ನಿರ್ಣಯವೊಂದನ್ನು ಮಾಡಿ, ಅದರಲ್ಲಿ ಸರಕಾರವು ಗಾಂಧಿಜಿಯವರ ಹೇಳಿಕೆಗಳನ್ನು ದೇಶಹಿತದ ಸಲುವಾಗಿ ಪ್ರಕಟಿಸಲು ನಿರ್ಬಂಧ ಮಾಡಕೂಡದೆಂದು ಕೇಳಿಕೊಂಡಿದೆ. ಅದರ ವಿವರ ಹೀಗಿದೆ —

"ಭಾರತದ ಸಾರ್ವಜನಿಕ ಜೀವನದಲ್ಲಿ ಮಹಾತ್ಮಾ ಗಾಂಧಿಜಿಯವರ ಸ್ಥಾನಮಾನಗಳು ಬಹಳ ಮಹತ್ವದ್ದಾಗಿರುತ್ತವೆ. ಅವರ ಭಾಷಣ ಮತ್ತು ಹೇಳಿಕೆಗಳು ದೇಶಹಿತಕ್ಕೆ ಸಂಬಂಧಿಸಿದ್ದಾಗಿರುತ್ತವೆ. ಈ ವಿಷಯವನ್ನು ಸರಕಾರವೇ ಮನಗಂಡಿರುವುದು ಸಂತೋಷದ ವಿಚಾರವಾಗಿದೆ. ಹೀಗಾದ್ದರಿಂದಲೇ, ಸರಕಾರವು ಮಹಾತ್ಮಾಜಿಯವರು ಕೊಟ್ಟ ಹೇಳಿಕೆಗಳನ್ನು ತಡೆಯಬಾರದಾಗಿ ಸರಕಾರದೊಡನೆ ಈ ಸಭೆಯು ಕೇಳಿಕೊಳ್ಳುತ್ತದೆ. ಪ್ರತಿಬಂಧಿಸುವಂತಹ ಸಂದರ್ಭ ಬಂದಲ್ಲಿ ಅಂತಹ ಆಜ್ಞೆ ಹೊರಡಿಸುವ ಮೊದಲು ಸರಕಾರವು ಮಧ್ಯವರ್ತಿ ವೃತ್ತಪತ್ರ ಸಲಹೆಗಾರ ಮಂಡಲದ ಅಭಿಪ್ರಾಯವನ್ನು ತೆಗೆದುಕೊಳ್ಳತಕ್ಕದ್ದೆಂದೂ ಈ ಸಭೆಯು ಕೇಳುತ್ತದೆ."

ಮಹಾತ್ಮರಲ್ಲಿ ಬಿನ್ನಹ

ಹರಿಜನವನ್ನು ಪ್ರಾರಂಭಿಸಿರಿ

ಮಹಾತ್ಮಾಜಿಯವರು ತಿರಿಗಿ ಹರಿಜನ ಪತ್ರಿಕೆಯನ್ನು ಪ್ರಾರಂಭಿಸಬೇಕೆಂದು ಒಂದು ನಿರ್ಣಯವು ಮಾಡಲಾಗಿದೆ.

"ಸರಕಾರದವರು ೧೯೪೦ನೆಯ ಅಕ್ಟೋಬರ ತಿಂಗಳ ಪ್ರಕಟಣೆಗಳನ್ನು ಹಿಂತೆಗೆದುಕೊಂಡಿರುವರು. ಮತ್ತು ಗಾಂಧಿಜಿಯವರ ಪ್ರಕಟಣೆಯನ್ನು ತಡೆಹಾಕುವ ಇಚ್ಛೆಯು ತಮಗಿಲ್ಲವೆಂದು ಸ್ಪಷ್ಟಪಡಿಸಿರುವರು. ಇದಲ್ಲದೆ, ಮಹಾತ್ಮರ ಪ್ರಕಟಣೆಗಳ ಬಗ್ಗೆ ವಿಶೇಷ ಲಕ್ಷ್ಯಪೂರ್ವಕ ವಿಚಾರಮಾಡಬಾರದೆಂಬ ಬುದ್ಧಿ ತಮಗಿಲ್ಲವೆಂದೂ ಹೇಳಿರುವರು. ಆದ್ದರಿಂದ ಮಹಾತ್ಮಾ ಗಾಂಧಿಜಿಯವರು, ತಮಗೆ ಯೋಗ್ಯವೆಂದು ಕಂಡ ಸಂದರ್ಭದಲ್ಲಿ ಹರಿಜನ ಪತ್ರಿಕೆಯನ್ನು ಪುನಃ ಪ್ರಕಟಿಸಲು ಪ್ರಾರಂಭಿಸಿದರೆ, ಈ ಕಮಿಟಿಗೆ ತುಂಬಾ ಸಂತೋಷವಾಗುವುದು. ಏಕೆಂದರೆ ಹರಿಜನ ಪತ್ರಿಕೆಯು ನಿಲ್ಲಿಸಿದ್ದರಿಂದ ಭಾರತೀಯ ಪತ್ರಿಕೋದ್ಯಮದಲ್ಲಿ ದೊಡ್ಡ ಕೊರತೆಯುಂಟಾಗಿರುವದೆಂದು ಈ ಕಮಿಟಿಯು ಅಭಿಪ್ರಾಯಪಡುತ್ತದೆ."

THE

BANK OF MANGALORE LTD.,

H. O. MANGALORE

ESTD. 1931

Branches - **Moodabidri & Padubidri.**

NOTICE

On and from 1st January 1941 the following are the revised rates of interest on deposits:

FIXED DEPOSITS:

For 2 years or over	..	5%
„ 1 „	...	4½%
„ 6 months	...	3½%
„ 3 months	..	3 „

Interest Payable Quarterly.

SAVINGS BANK DEPOSITS:

On daily balances on balances over Rs. 5–0–0 in multiples of Rs. 5–0–0 @ 3%.

All kinds of banking business transacted

ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ

ಸ್ವದೇಶಾಭಿಮಾನಿ

ತಾರೀಕು 7—2—1941

ಸಂಪಾದಕರ ಪರಿಷತ್ತು

ದಿಲ್ಲಿಯಲ್ಲಿ ಈ ವಾರ ಅಖಿಲ ಭಾರತ ಸಂಪಾದಕರ ಪರಿಷತ್ತು ಸೇರಿತು. ಭಾರತದ ರಾಜಕೀಯ ವಾತಾವರಣದಲ್ಲುಂಟಾದ ವಿಷಮತೆಯಿಂದ, ಪತ್ರಿಕಾ ಸ್ವಾತಂತ್ರ್ಯ, ಲೇಖನ ಸ್ವಾತಂತ್ರ್ಯ, ಮುದ್ರಣ ಸ್ವಾತಂತ್ರ್ಯಗಳಿಗೆ ನಿಜವಾಗಿಯೂ ತೊಡಕುಗಳು ಬಂದಿವೆ. ಇಂದಿನ ಈ ಪ್ರಜಾಪ್ರಭುತ್ವದ ಯುಗದಲ್ಲಿ, ಪತ್ರಿಕೆಗಳ ಸಂಪಾದಕರಾದರೂ, ರಾಷ್ಟ್ರದಲ್ಲಿ ತಮ್ಮ ಹೊಣೆಗಾರಿಕೆಯೇನೆಂಬುದನ್ನು ಚೆನ್ನಾಗಿ ಮನಸ್ಸಿಂದು, ನ್ಯಾಯವಾದ ವಿಷಯಗಳನ್ನು ನಿರ್ಭೀತಿಯಿಂದಲೂ, ನಿದಾಕ್ಷಿಣ್ಯದಿಂದಲೂ ಪ್ರಕಟಿಸುವುದು ಅವಶ್ಯವಿದೆ. ಅದಕ್ಕೆ ಬಂದೊದಗಿದ ಆತಂಕದ ಸಲುವಾಗಿ, ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನವು ದಿಲ್ಲಿಯಲ್ಲಿ ನೆರೆದು ಅನೇಕ ವಿಚಾರಗಳನ್ನು ವಿಮರ್ಶೆ ಮಾಡಿ, ಹಲವು ಗಂಭೀರ ನಿರ್ಣಯಗಳನ್ನು ಮಾಡಿದೆ.

ಪತ್ರಿಕಾ ಸಂಪಾದಕರ ಸಮ್ಮೇಳನವು ತಮ್ಮ ಸ್ಪಷ್ಟ ನಿರ್ಧಾರವನ್ನು ಸಾರಿದೆ. ರಾಷ್ಟ್ರದ ಸ್ವಾತಂತ್ರ್ಯ ಸಾಧನೆಯ ಸಲುವಾಗಿ ತಾವು ಹೋರಾಡುವವರಿದ್ದೇವೆ ಎಂಬುದನ್ನು ಅದು ಖಂಡಿತವಾದ ಮಾತಿನಿಂದ ಸರಕಾರಕ್ಕೆ ತಿಳಿಸುವುದರೊಡನೆ, ತಾವೂ ನಾಜೀವಾದ, ಫ್ಯಾಸಿಸ್ಟ್ ವಾದಗಳನ್ನು ಮೆಚ್ಚುವವರಲ್ಲವೆಂದೂ, ಬ್ರಿಟಿಷರ ಯುದ್ಧ ಪ್ರಯತ್ನಕ್ಕೆ ವಿಘ್ನ ತರುವವರಲ್ಲವೆಂದೂ ಸಾರಿದೆ. ಮಾತ್ರವಲ್ಲದೆ, ಇಂದಿನ ಭಾರತದ ರಾಜಕೀಯ ವಾತಾವರಣದಲ್ಲಿ ಉಂಟಾದ ವಿಷಮತೆಯನ್ನು ಅನುಲಕ್ಷಿಸಿ, ದೇಶ ಹಿತದ ದೃಷ್ಟಿಯಿಂದ ಅವಶ್ಯವಿರುವ ನ್ಯಾಯವಾದ ಸುದ್ದಿಗಳನ್ನು ಪ್ರಕಟಿಸುವುದು ತಮ್ಮ ಕರ್ತವ್ಯವಾಗಿದೆಯೆಂದೂ ಒತ್ತಿ ಹೇಳಿದೆ.

ಇದೇ ಸಂದರ್ಭದಲ್ಲಿ ಇನ್ನೊಂದು ವಿಚಾರವು ಮಾಡತಕ್ಕದ್ದಿದೆ. ಇತ್ತೀಚೆಗೆ ಗಾಂಧೀಜಿಯವರು ಕೊಟ್ಟ ಕೆಲವು ಹೇಳಿಕೆಗಳನ್ನು ಸರಕಾರದವರು ಪ್ರಕಟಣೆಗೆ ಕೊಡಲೊಪ್ಪಲಿಲ್ಲ. ಗಾಂಧೀಜಿಯಂತಹ ಪ್ರಭಾವಶಾಲಿಯಾದ, ಸತ್ಯ ಅಹಿಂಸಾ ನಿಷ್ಠೆಯುಳ್ಳ ಮಹಾಪುರುಷನ ಹೇಳಿಕೆಯು ದೇಶದ ಹಿತದ ದೃಷ್ಟಿಯಲ್ಲಿ ಅತ್ಯಂತ ಮಹತ್ವದ್ದಿದೆಯೆಂದು ಸರಕಾರವೇ ಒಪ್ಪಿಕೊಂಡಿರುವುದು ಸಂತೋಷದ ಸಂಗತಿಯಾದರೂ, ಗಾಂಧಿಜಿಯವರ ಹೇಳಿಕೆಗಳ ವಿಚಾರವಾಗಿ ಪ್ರತ್ಯೇಕ ಲಕ್ಷ್ಯ ಕೊಡಲು ಸರಕಾರದ ಮನಸ್ಸಿದೆಯೆಂದು ತಿಳಿಸಲ್ಪಟ್ಟಿದ್ದರೂ, ಆ ಹೇಳಿಕೆಗಳನ್ನು ತಡೆದು ಸಾರ್ವಜನಿಕರನ್ನು ಅಗತ್ಯಕ್ಕೆ ಒಳಪಡಿಸಿದ್ದು ಏನೇನೂ ಔಚಿತ್ಯವೆನಿಸಲಿಲ್ಲವೆಂದೂ, ಗಾಂಧಿಜಿಯವರ ಹೇಳಿಕೆಗಳನ್ನು ಸರಕಾರವು ತಡೆದು ಹಾಕುವುದು ಸರಿಯಲ್ಲವೆಂದೂ ಸಂಪಾದಕರ ಪರಿಷತ್ತು ಸರಕಾರಕ್ಕೆ ಹಿತಸೂಚನೆ ಕೊಟ್ಟಿರುತ್ತದೆ.

ಇದರೊಡನೆಯೇ ಮಾಡಿದ, ಇನ್ನೊಂದು ನಿರ್ಣಯದಲ್ಲಿ, ಗಾಂಧಿಜಿಯವರು ತಿರಿಗಿ ತಮ್ಮ ಹರಿಜನ ಪತ್ರಿಕೆಗಳನ್ನು ಪ್ರಾರಂಭಿಸಬೇಕಾಗಿಯೂ, ಸರಕಾರವು ಮೊದಲು ಹೊರಡಿಸಿದ ನಿರ್ಬಂಧಗಳನ್ನು ಈಗ ತೆಗೆದುಹಾಕಿರುವುದರಿಂದಾಗಿಯೂ, ಗಾಂಧಿಜಿಯವರ ಹರಿಜನ ಪತ್ರಿಕೆಯು ಪ್ರಕಟವಾಗದ ನಿಮಿತ್ತ ಭಾರತದ ಪತ್ರಿಕೋದ್ಯಮಕ್ಕೇ ಅಪಾರ ನಷ್ಟವಾಗಿದೆಯೆಂದೂ, ಗಾಂಧಿಜಿಯವರನ್ನು ಈ ಸಮ್ಮೇಳನವು ಕೇಳಿಕೊಂಡಿದೆ.

ಇದು ಮಾತ್ರವಲ್ಲದೆ, ನೇಶನಲ್ ಹೆರಾಲ್ಡ್, ಸೈನಿಕ ಮೊದಲಾದ ರಾಷ್ಟ್ರೀಯ ಪತ್ರಿಕೆಗಳ ವಿಷಯವಾಗಿ ಸರಕಾರವು ಎತ್ತಿದ ಗದೆಯನ್ನು ಪರಿಷತ್ತು ಖಂಡಿಸಿ, ಮುಂದಕ್ಕೆ ಅವುಗಳಿಗಾದರೂ ಹೆಚ್ಚಿನ ಸ್ವಾತಂತ್ರ್ಯ ಕೊಡತಕ್ಕದ್ದೆಂದೂ, ಬಂಗಾಳ ಸರಕಾರವು ಡಿಫೆನ್ಸ್ ಕಾನೂನನ್ನು ಜಾರಿಗೆ ತರುವಲ್ಲಿ ಮಾಡುವ ಅರ್ಥವ್ಯಾಪಕತೆಯಿಂದ, ಅಲ್ಲಿನ ವೃತ್ತಪತ್ರಿಕಾ ಸಂಪಾದಕರಿಗೆ ಒದಗುವ ಸಂಕಷ್ಟಗಳನ್ನು ನಿವೇದಿಸಿ, ಬಂಗಾಳ ಸರಕಾರವೂ ಪತ್ರಿಕೆಗಳ ಮೇಲೆ ಹೆಚ್ಚಿನ ಸಹಾನುಭೂತಿಯಿಂದ ನಡೆದುಕೊಳ್ಳಬೇಕೆಂದೂ ನಿರ್ಣಯಗಳನ್ನು ಮಾಡಿರುತ್ತದೆ.

ಈ ನಿರ್ಣಯಗಳ ಕೂಲಂಕಷ ವಿಚಾರಮಾಡುವವರಿಗೆ, ಇಂದು ಭಾರತ ಪತ್ರಿಕೋದ್ಯಮದಲ್ಲಿ ಎಷ್ಟರ ಮಟ್ಟಿನ ನಿರ್ಬಂಧವಿರುತ್ತದೆಯೆಂಬ ವಿಚಾರವು ಹೊಳೆಯದಿರದು. ಆದರೂ, ಅವುಗಳನ್ನು ಎದೆಗೊಟ್ಟು ಎದುರಾಡುವ ಧೈರ್ಯದಿಂದ ಅಖಿಲ ಭಾರತ ಸಂಪಾದಕರು ಮುಂದೆ ಬಂದಿರುವರು. ರಾಷ್ಟ್ರೀಯ ಸಂಕ್ರಾಂತಿಯ ಈ ಕಾಲದಲ್ಲಿ ತಮ್ಮ ಪಾಲಿನ ದೊಡ್ಡ ಹೊಣೆಗಾರಿಕೆಯನ್ನು ನ್ಯಾಯವಾಗಿಯೂ, ನಿಶ್ಚಯವಾಗಿಯೂ, ಪೂರ್ಣವಾಗಿಯೂ ನೆರವೇರಿಸುವ ನಿರ್ಧಾರವನ್ನು ಅವರು ಈಗ ಮಾಡಿರುತ್ತಾರೆ.

ಈ ಸಂದರ್ಭದಲ್ಲಿಯೇ ಮಹಾತ್ಮಾಜಿಯವರೂ ಒಂದು ಪ್ರಕಟಣೆ ಹೊರಡಿಸಿ ಪತ್ರಿಕಾ ಸಂಪಾದಕರಿಗೆ ಹಲವು ಅಮೂಲ್ಯ ಉಪದೇಶಗಳನ್ನು ಇತ್ತಿದ್ದಾರೆ. ಕೆಲವು ವಿಷಯಗಳನ್ನು ಪತ್ರಿಕೆಗಳು ಪ್ರಕಟಿಸಬಾರದಾಗಿ ಸರಕಾರವು ಹಾಕಿರುವ ನಿರ್ಬಂಧವು ಅನ್ಯಾಯ ರೀತಿಯದೆಂದು ಸಂಪಾದಕರು ಮನಗಂಡಲ್ಲಿ, ಅಂತಹ ಸುದ್ದಿಗಳು ದೇಶಹಿತ ದೃಷ್ಟಿಯಿಂದ ಅಗುಣಲ್ಯದವುಗಳಾಗಿದ್ದರೆ, ಅವುಗಳನ್ನು ಸಂಪಾದಕರು ಧೈರ್ಯದಿಂದ ಪ್ರಕಟಿಸಬೇಕೆಂದೂ, ಸರಕಾರದ ಕೆಲವು ನೀತಿಗಳು ತಮಗೆ ಅಸಮ್ಮತವಾಗಿದ್ದರೆ, ಅವುಗಳನ್ನು ಸ್ಪಷ್ಟವಾಗಿ ಸಂಪಾದಕರು ನಿವೇದಿಸಬೇಕೆಂದೂ, ಹೀಗೆ ಮಾಡುವಲ್ಲಿ ಸರಕಾರದವರು ಮಾಡುವ ಪ್ರತಿಕ್ರಿಯೆಗಳನ್ನು ಸಹಿಸಲೂ ಸಂಪಾದಕರು ಸಿದ್ಧರಾಗಿರಬೇಕೆಂದೂ ಸೂಚಿಸಿರುತ್ತಾರೆ. ನ್ಯಾಯದ ಸಲುವಾಗಿ ಹೋರಾಡುವಲ್ಲಿ ಪತ್ರಿಕೆಗಳನ್ನು ನಿಲ್ಲಿಸಬೇಕಾಗಿ ಬರಬಹುದಾದ ಸಂದರ್ಭ ಬಂದರೂ ಸತ್ಯಕ್ಕೆ ಬೆಂಬಲ ಕೊಡಲು ಹಿಂದುಳಿಯಬಾರದೆಂದು ಅವರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ, ಸರಕಾರದವರಾದರೂ ಪತ್ರಿಕಾ ಸಂಪಾದಕರ ಬಗ್ಗೆ ಹೆಚ್ಚಿನ ನಿರ್ಬಂಧ ಉಪಯೋಗಿಸದೆ, ಪತ್ರಿಕಾ ಸ್ವಾತಂತ್ರ್ಯಕ್ಕೆ ಆತಂಕ ತರದೆ, ಸಂಪಾದಕರ ಪರಿಷತ್ತಿನ ನಿರ್ಣಯಗಳನ್ನು ತಾಳ್ಮೆಯಿಂದಲೂ, ಗಂಭೀರತೆಯಿಂದಲೂ ವಿಚಾರಿಸಿ, ದೇಶದ ಏಳಿಗೆಯ ದೃಷ್ಟಿಯಲ್ಲಿ ಸಂಪಾದಕರು ಮಾಡುವ ಕಾರ್ಯಕ್ಕೆ ಪೂರ್ಣ ಸಹಕರಿಸಬೇಕಾಗಿ ನಾವು ಬಿನ್ನವಿಸುತ್ತೇವೆ.

ದೇಶದ ಇಂದಿನ ಪ್ರಕ್ಷೋಭೆ ಪರಿಸ್ಥಿತಿಯಲ್ಲಿ ಪತ್ರಿಕಾಸಂಪಾದಕರಾದರೂ ಅಗ್ನಿಪರೀಕ್ಷೆಗೆ ಒಳಗಾಗುವ ಕಠಿಣ ಕಾಲವು ಈಗ ಬಂದೊದಗಿದೆಯೆಂಬುದು ನಿರ್ವಿವಾದವಾದ ವಿಷಯವೇ ಆಗಿರುಗದೆ.

ಜಪಾನಿಗೆ ಬುದ್ಧಿ ಬಂತೆ?

ಜಪಾನಿಗೆ ಸಾಮ್ರಾಜ್ಯ ವಿಸ್ತರಣ ಬುದ್ಧಿ ಹಲಕಾಲದಿಂದ ಪ್ರಬಲವಾಗಿತ್ತೆಂದು ಎಲ್ಲರೂ ತಿಳಿದ ವಿಚಾರ. ಪೂರ್ವ ಏಶಿಯದಲ್ಲಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಬೇಕೆಂದು ಜಪಾನಿನ ಬಯಕೆಯಾಗಿದೆಯೆಂದು, ಜಪಾನ್ ಪ್ರಮುಖರೇ ಆಗಾಗ ಸಾರಿ ಹೇಳಿರುವುದುಂಟು; ಇದೇ ಸಾಮ್ರಾಜ್ಯಲಾಲಸೆಯಿಂದಲೇ ಜಪಾನು ಸ್ವತಂತ್ರವಾದ ಚೀನದ ಮೇಲೆ ಬೀಳುವಂತೆ ಆಯಿತಲ್ಲದೆ ಅನ್ಯಕಾರಣವೇನನ್ನೂ ನಾವು ತಿಳಕೊಳ್ಳಲಾಗುವುದಿಲ್ಲ.

ಜಪಾನು ಚೀನದೊಡನೆ ರಣರಂಗಕ್ಕಿಳಿದು ವರ್ಷ ವರ್ಷಗಳು ದಾಟಿ ಹೋದವು. ಆದರೆ ದಳಪತಿ ಚಿಯಾಂಗ್ ಕೈಶೇಕರ ಸಮರ್ಥ ಮುಂದಾಳುತನದಿಂದ ಚೀನೀಯರು ನಾಡ ಸ್ವಾತಂತ್ರ್ಯಕ್ಕಾಗಿ ಅಮಿತ ಪರಾಕ್ರಮದಿಂದ ಕಾದಾಡಿ, ಜಪಾನನ್ನು ಬಗ್ಗು ಬಡೆದರು. ಚೀನದಲ್ಲಿ ಜಪಾನು ಇಷ್ಟು ಸಮಯಗಳ ನಿರಂತರ ಹೋರಾಟದ ಮೇಲೆಯೂ ಬಂದು ನೆಲೆಯೂರಲು ಸಮರ್ಥವಾಗಲಿಲ್ಲ. ಮಾತ್ರವಲ್ಲದೆ, ಜಪಾನಿನ ಅವಸ್ಥೆಯು ಕಳೆದ ಮೂರು ವರ್ಷಗಳ ಯುದ್ಧದ ಮೇಲೆ ಇಂದು ಬಹಳ ಕೆಟ್ಟುಹೋದಂತೆಯೇ ಆಗಿದೆ.

ಈ ಸಂದರ್ಭದಲ್ಲಿ ಜಪಾನು ಚೀನದೊಡನೆ ಸಂಧಿಮಾಡಿಕೊಳ್ಳುವ ಆಶೆಯನ್ನು ಈಗ ತೋರಿಸುವಂತಿದೆ. ಜಪಾನಿನ ಕೈಗೊಂಬೆಯಾದ ವಾಂಗನು, ಕೈಶೇಕರಿಗೆ ಅಂತಹ ಸೂಚನೆಯೊಂದನ್ನು ಕಳುಹಿಕೊಟ್ಟಿರುವನು. ಈತನು ಒಪ್ಪಂದಕ್ಕೆ ಮುಂದೆ ಬರುವುದೆಂದರೆ ಜಪಾನಿನ ಪ್ರೇರೇಪಣೆಯಿಂದಲ್ಲದೆ ಬೇರಲ್ಲವೆಂದು ಖಂಡಿತ ತಿಳಿದುಕೊಳ್ಳಬೇಕಾದ ವಿಚಾರವಾಗಿದೆ. ಕೈಶೇಕರು ತಾವು ಮಾಡಿದ್ದ ತಪ್ಪನ್ನು ಒಪ್ಪಿಕೊಂಡು, ಜಪಾನಿನೊಡನೆ ಸಂಧಿಮಾಡಿಕೊಳ್ಳುವ ಸಂದರ್ಭದಲ್ಲಿ ಪಾಪದ ಪ್ರಾಯಶ್ಚಿತ್ತವನ್ನು ತಾನು ತೆಗೆದುಕೊಳ್ಳಲು ಸಿದ್ಧನಿರುವೆನಾಗಿ ವಾಂಗನ ಹೇಳಿಕೆಯಿದೆ.

ಇದಕ್ಕೆ ಚೀನದ ವೀರ ದಳಪತಿಯ ಉತ್ತರವು ಏನೆಂಬುದು ತಿಳಿದುಬಂದಿಲ್ಲ. ದೇಶದ ಸ್ವಾತಂತ್ರ್ಯದ ಸಲುವಾಗಿ ಇದುವರೆಗೆ ನಿರಂತರ ಹೂಡಿದ ಹೋರಾಟವು, ಆ ತನ್ನ ಧ್ಯೇಯವು, ತಪ್ಪೆಂದು ಕೈಶೇಕರ ಹಾಗಿದ್ದ ಆತ್ಮಗೌರವವುಳ್ಳ ಸ್ವಾತಂತ್ರ್ಯ ಪ್ರೇಮಿಯು ಒಪ್ಪಿಕೊಳ್ಳುವುದಂತೂ ಸಾಧ್ಯವಿಲ್ಲ. ಹೀಗೆ ಕೈಶೇಕರನ್ನು ಒಪ್ಪಿಸಿ, ಜಪಾನು ಒಪ್ಪಂದ ಮಾಡಿಕೊಳ್ಳುವುದು ಅಸಾಧ್ಯವಾದುದೇ ಆಗಿದೆ. ತನ್ನ ಶಕ್ತಿಯು ಕುಂದುತ್ತಾ ಬರುವಾಗ, ಅತ್ತ ಅಮೇರಿಕವೂ ಒತ್ತಾಟ ನಡೆಸುತ್ತಿರುವಾಗ, ಚೀನದೊಡನೆ ಈಗ ಗೆಳೆತನ ಬೇಕಾಗಿದೆಯೆಂಬುದು ಜಪಾನಿನ ತಿಳುವಳಿಕೆಗೆ ಬಂದಿದೆಯೆಂದು ನಮಗೆ ತೋರುತ್ತದೆ.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 507/1940

ಕುಂಞಯ್ಯ ಯಾನೆ ನೇಂಕಪ್ಪ ಹೆಗ್ಡೆ . ವಾದಿ.

ಮತ್ತು

ನಾರಾಯಣ ಭಂಡಾರಿ ವಗೈರರು ಪ್ರತಿವಾದಿದ್ರು.

ಇವರೊಳಗೆ

1ನೇ ಪ್ರತಿವಾದಿ ನಾರಾಯಣ ಬಂಡಾರಿ ಮಡಪ್ಪ ಪ್ರಂಜಿರ ಅಳಿಯ ಕಾರ್ಕಳ ತಾಲ್ಲೂಕು ಮರ ಕೊಡಿ ಗ್ರಾಮದ ಕೆಳಗಿನ ಮನೆಯೆಂಬಲ್ಲಿರುವವರಿಗೆ—

ಮೇಲ್ಕಂಡ ದಾವೆಯ 1ನೇ ಪ್ರತಿವಾದಿಯಾದ ನೀವು ವಾದಿಯೂ 3ನೇ ಪ್ರತಿವಾದಿಯು ಮೋಟಿ ಯಾನೆ ಬೊಂಬಿ ಹೆಗಡ್ತಿ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ಕ್ರಮ ನಂಬ್ರ 562/1936ನೇಯ ಪಡದ್ದೆಂಬ ಸಿವ್ವಾ ಡಿಕ್ರಿಯು. ವಾದಿಯು ಮೇಲಾಗಲೀ ವಾದಿಯ ವ. 3ನೇ ಪ್ರತಿವಾದಿಯ ಕುಟುಂಬದ ಮೇಲಾಗಲೀ ಬಾಧಿಸತಕ್ಕದ್ದಲ್ಲವೆಂತ ಡಿಕ್ಲೇರ ಮಾಡಬೇಕಾಗಿಯೂ ಸದರಿ ಕುಟುಂಬದ ಮೇಲೆ ನಿವೃತ್ತಿ ಕೇಳಿ ಸದರಿ ಡಿಕ್ರಿಯ ಮೇಲೆ 2ನೇ ಪ್ರತಿವಾದಿಯು ಶಿವದೇವಿ ಹೆಂಗಸು ಅಮ್ಮಲ್ಜಾರಿಯನ್ನು ನಡೆಸದ ಹಾಗೆ ಅವಳ ಮೇಲೆ ಶಾಶ್ವತವಾದ ಯಿಂಜಂಕ್ಷನ್ ಕೊಡಬೇಕಾಗಿಯೂ ನಿವೃತ್ತಿ ಕೇಳಿ ವಾದಿಯು ದಾಖಲು ಮಾಡಿರುವ ಈ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ಇದೇ ಬರುವ ಮಾರ್ಚಿ ತಿಂಗಳ ತಾರೀಕು 12ಕ್ಕೆ ಮೇಲ್ಕಂಡ ಕೋರ್ಟ ಮುಂದೆ ತನ್ನಿಗೆ ಇಟ್ಟಿರುವದರಿಂದ ಸದರಿ ದಾವೆಯ ಕುರಿತು ನಿಮ್ಮ ಉದಾಹರಣೆಯು ಇದವಲ್ಲಿ ಸದರಿ ತಾರೀಕಿನಲ್ಲು ಹಗಲ್ಲೆ 10 ಗಂಟೆಯ ಸಮಯಕ್ಕೆ ಸದರಿ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಬಹುದಾಗಿಯೂ ತಪ್ಪಿದಲ್ಲಿ ಸದರಿ ದಾವೆಯು ನಿಮ್ಮ ಗೈರ ಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವದಾಗಿಯೂ ಎಂಬ ಸಂಗ್ತಿ ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ.

ಕಾರ್ಕಳ 31—1—'41 } A. N. S. ACHAR, Pleader for Plaintiff.

ಬೋಸರು ಹಿಮಾಲಯದ ಕರೆ ಕೇಳಿದ್ದರು!

ಸನ್ಯಾಸದ ಕಡೆ ಮನಸ್ಸು ಹರಿದಿತ್ತು!

ತ್ರಿಪುರಿ ಅಧಿವೇಶನದ ಕಾಲದಲ್ಲಿ

೨ ವರ್ಷಗಳ ಹಿಂದಿನ ಅವರ ವಿಚಾರ ವಿಭ್ರಮದ ಲೇಖನ!

— ಮೋಡರ್ನ್ ರಿವ್ಯೂನಿಂದ —

ಸುಭಾಸ ಬೋಸರು ಇಂದು ಅದೃಶ್ಯರಾಗಿರುವುದರಿಂದ ಅವರು ಸನ್ಯಾಸಿಯಾಗಿ, ರಾಜಕೀಯವನ್ನು ಪರಿತ್ಯಜಿಸಿ ಏಕಾಂತ ಜೀವನಕ್ಕೆ ತೆರಳಿದರೇ ಎಂಬ ಪ್ರಶ್ನೆ ಎಲ್ಲೆಡೆಯಲ್ಲಿಯೂ ಕೇಳಿಬರುತ್ತಿದೆ. ಬಾಬು ಸುಭಾಸರ ಜೀವನದಲ್ಲಿ ಈ ಸನ್ಯಾಸ ಬುದ್ಧಿಯು ಅವರಿಗೆ ಕೆಲವು ಸಲ ಬಂದಿತ್ತು. ಬಾಲ್ಯಕಾಲದಲ್ಲಿ ಅವರು ವಿರಾಗಿಯಾಗಿ ಹೋಗುವರೆಂದೇ ಕುಟುಂಬದವರು ಕಳವಳಗೊಂಡಿದ್ದರು. ಆ ಮೇಲೆ ಕಳೆದ ತ್ರಿಪುರಿ ಅಧಿವೇಶನದ ಕಾಲದಲ್ಲಿಯೂ ಅವರಿಗೆ–ಸನ್ಯಾಸದ ಕರೆ–ತಿರಿಗಿ ಕೇಳಿತ್ತೆಂಬುದು ಅವರು ಮೊಡರ್ನ್ ರಿವ್ಯೂನಲ್ಲಿ ಬರೆದ ಲೇಖನ ಒಂದರಿಂದ ತಿಳಿದುಬರುತ್ತದೆ.

ಆ ಲೇಖನದಲ್ಲಿ ಅವರು ಹಿಮಾಲಯದ ಕರೆಯನ್ನು ಕೇಳಿದ ವಿಷಯವು ಈ ರೀತಿ ವರ್ಣಿತವಾಗಿದೆ—(ತ್ರಿಪುರಿ ಅಧ್ಯಕ್ಷ ಪೀಠದಿಂದ ತಳ್ಳಲಾಕಿದ ಕಾಲದ ಈ ಲೇಖನ ಬರೆಯಲಾಗಿದೆ)

'ನನ್ನ ಅನಾರೋಗ್ಯ ವಿಷಯವು ಅಸತ್ಯವಾದದ್ದು, ನನ್ನ ಜ್ವರವು ಕೇವಲ ವಿಧ್ಯಾಯದ್ದೆಂದು ಜನರು ಅಲ್ಲಲ್ಲಿ ಗುಜುಗುಜು ಹೇಳುತ್ತಿದ್ದರು. ಹಾಗೆ ಪ್ರಚಾರಮಾಡಲಾಗಿತ್ತು. ಈ ಸುದ್ದಿಯನ್ನು ಹಲವು ಕಡೆಯ ಮಿತ್ರರು ನನಗೆ ತಿಳಿಸಿದರು. ನಾನದನ್ನು ನಂಬಿರಲು ಸಾಧ್ಯವಿರಲಿಲ್ಲ. ಸರ್ ನೀಲರತ್ನ ಸರ್ಕಾರರಂತಹವರ ಹೇಳಿಕೆಯಲ್ಲಿಯೂ ಅವರಿಗೆ ನಂಬಿಕೆಬರಲಿಲ್ಲ. ತ್ರಿಪುರಿಯಲ್ಲಿಯೂ ಪತಿಯೊಬ್ಬರೂ ನಾನು ನಿಜವಾಗಿ ಅಸ್ವಸ್ಥನಾಗಿಲ್ಲವೆಂದೇ ತಿಳಿದಿದ್ದರು. ಡಾಕ್ಟರರನ್ನೇಕೆ ಹೀಗೆಂದು ಬಂದು ಹಲವರು ಪ್ರಶ್ನೆ ಮಾಡಿದರು. ಇದರಿಂದ ಡಾಕ್ಟರರೂ ಪರಮಾಶ್ಚರ್ಯಗೊಂಡರು. ಆಗ ನನಗೆ ೧೦೨° ೧೦೩° ಜ್ವರ ಬರುತಿತ್ತು. ಆದರೂ ನನ್ನ ಅಸೌಖ್ಯವು ಸತ್ಯವಲ್ಲವೆಂದೇ ಪ್ರಚಾರಮಾಡಲಾಗಿತ್ತು.

'ದೇಶದ ನಾನಾ ಮೂಲೆಗಳಿಂದ ನನಗೆ ಪತ್ರಗಳು, ತಂತಿಗಳು, ಮದ್ದುಗಳು, ಆಶೀರ್ವಾದಗಳು, ತಾಯಿತಗಳು ಎಲ್ಲಾ ಬಗೆಯ ಜನರಿಂದ, ಎಲ್ಲಾ ಜಾತಿಯವರಿಂದಲೂ ಬರುತ್ತಿದ್ದುವು. ನಾನು ಅವರಿಗೆ ನನ್ನ ಮೇಲೆ ಇರುವ ಸಹಾನುಭೂತಿಯನ್ನು ನೋಡಿ ಆನಂದಗೊಂಡೆ, ಜರಗು ಗುಂಡಿ ಭಾರತದ ಮೂಲೆಯ ಹಳ್ಳಿಗಳಲ್ಲಿ ಇಷ್ಟೊಂದು ಮಂದಿ ನನ್ನ ಹಿತ ಬಯಸುವವರು ಇದ್ದಾರೆಯೆಂದು ನಾನು ಕನಸಿನಲ್ಲಿಯೂ ಎಣಿಸಿರಲಿಲ್ಲ.

'ಇವರಲ್ಲಿ ಕೆಲವರು ತಮ್ಮ ಔಷಧಿಗಳ ಪ್ರಚಾರದ ಸಲುವಾಗಿ ನನಗೆ ಬರೆದಿರಬಹುದೋ ಏನೋ. ಆದರೆ ಬಹುಮಂದಿಯ ಹೃದಯವು ನನ್ನ ಮೇಲೆ ಅವರಿಗಿರುವ ಅತ್ಯಂತ ಆದರವನ್ನು ತೋರಿಸುತ್ತಿತ್ತು. ಈ ಸದ್ಬುದ್ಧಿಯಿಂದ ಅವರು ಕಳುಹಿಸಿದುದರಿಂದಲೇ ನಾನು ಒಡನೆ ಗುಣಹೊಂದುವೆನೆಂದೂ ಭಾವಿಸಿಕೊಂಡೆ.

ತ್ರಿಪುರಿಯ ಘಟನೆಯನ್ನು ನೆನೆದು, ನನ್ನ ೨೦ ವರ್ಷಗಳ ರಾಜಕೀಯ ಜೀವನದ ಅನಂತರ ನನಗೆ ಧ್ಯಾನತೊಂದು ದೃಷ್ಟಿ, ಜಮುನಾ ನದಿಯ ದಡದ ಮೇಲೆ ನಾನು ಹಗಲು ರಾತ್ರಿ ಏಕಾಂತನಾಗಿ ಕಳೆದ ಇಂತಹ ಶ್ರೇಷ್ಠರೆನಿಸಿದ ರಾಜಕೀಯ ಮುಂದಾಳುಗಳ ನಡುವೆ ಹೀಗೆ ಅಲ್ಪತನವು ಇರುವುದಾದರೆ, ರಾಜಕೀಯದಿಂದ ನಿವೃತ್ತಿಹೊಂದುವುದು ಸರಿಯಲ್ಲವೇ ಎಂದು ನಾನು ವಿಚಾರಿಸಿದೆ. ಇದೇ ವಿಚಾರಮಾಡುತ್ತಾ ಮಾನಸಿಕ ನನಗೆ, ನನ್ನ ಜೀವನದ ಮೊದಲಿನ ಪ್ರೇಮವು—ಹಿಮಾಲಯದ ಕರೆಯು—ನನಗೆ ಹೊಳೆಯಿತು. ಯಾವುದನ್ನು ಅಲ್ಲಿಂದ ಮೊದಲು ಜೀವನ ಕರೆದರೂ ಅದಕ್ಕೆ ನಾನು ವಿಮುಖನಾಗಿರಬೇಕೆಂದು ಆಗ ನಿಶ್ಚಯಮಾಡಿದೆ. ಮಾಯೆಯ ಬಲೆಯನ್ನು ಹರಿದೊಗೆದು ಎಲ್ಲಾ ಪ್ರೀತಿಗಳ ಭಾಜನವಾದ ವೈರಾಗ್ಯದ ಕಡೆಗೆ ಧಾವಿಸಲು ನನಗೆ ಸಮಯವು ಒಂತೇ ಎಂಬ ವಿಚಾರ ಹೊಳೆಯಿತು. ನಾನು ನೈತಿಕ ಸಂಶಯ ಮತ್ತು ಅನಿಶ್ಚಿತತೆಯಲ್ಲಿ ಹಗಲು ರಾತ್ರಿಗಳನ್ನು ಕಳೆದೆ. ನನಗೆ ನಿರ್ಧಾರಕ್ಕೆ ಬರಲಾಗಲಿಲ್ಲ. ಆ ಕತ್ತಲೆಯ ಮಧ್ಯದಲ್ಲಿ ಬೆಳಕಿಗಾಗಿ ನಾನು ಪ್ರಾರ್ಥಿಸಿದೆ. ಆಗ ಕೂಡಲೇ ಹೊಸ ದರ್ಶನವೊಂದು ನನಗೆ ಹೊಳೆಯಿತು. ನನ್ನ ಬುದ್ಧಿಯನ್ನು ನಾನು ಸಮತೋಲಕ್ಕೆ ತಂದುಕೊಂಡೆ. ನನ್ನ ಜನರಲ್ಲಿ ನನ್ನ ನಾಡಿನಲ್ಲಿ ನಾನು ತಿರಿಗಿ ವಿಶ್ವಾಸವಿರಿಸಿದೆ.

ಏನೇ ಆದರೂ ತ್ರಿಪುರಿಯಲ್ಲಿ ನೋವ ಈ ಜನರೇ ನಿಜವಾದ ಭಾರತವಲ್ಲ. ನನಗೆ ಕಳುಹಿಸಿದ ಕಾಗದ, ತಂತಿ, ಔಷಧಿ ಇವುಗಳಿಂದ ತೋರುವ ಇನ್ನೊಂದು ಭಾರತವು ಬೇರೆ ಇದೆಯೆಂದು ನಾನು ಬಗೆದೆ. ನಾನು ತ್ರಿಪುರಿಯಲ್ಲಿ ಗುರುತಿಸಿದ ಈ ಅಲ್ಪತನ ಅಲ್ಲಿ ಇರಲಾರದೆಂದು ವಿಚಾರಿಸಿದೆ.

ನಾನು ದೈಹಿಕ ಆರೋಗ್ಯದಲ್ಲಿ ಬಹಳ ಪಟ್ಟಿಗೆ, ಸಂಕಟಕ್ಕೊಳಗಾಗಿದ್ದೇನೆ. ವಿದೇಶದಲ್ಲಿದ್ದಾಗ, ಸ್ವದೇಶದಲ್ಲಿದ್ದಾಗ, ಹೊರಗಡೆಯಿದ್ದಾಗ, ಸೆರೆಯೊಳಗಿದ್ದಾಗ ಅನೇಕ ತರದ ರೋಗಗಳಿಂದ ಪೀಡಿತನಾಗಿದ್ದೆನು. ಒಮ್ಮೊಮ್ಮೆ ನನಗೆ ನಾನು ಶಕ್ತಿಯನ್ನು ಕಳಕೊಂಡೆನೇ ಎಂದು ಅನಿಸುತ್ತಿದೆ. ಆದರೆ ಈ ಸಂದರ್ಭದಲ್ಲಿ ಆದಷ್ಟು ದೈಹಿಕ ಮಾನಸಿಕ ಸಂಕಷ್ಟ ಮಾತ್ರ ನನಗೆ ಬೇರೆ ಎಂದೂ ಆಗಿರಲಿಲ್ಲ.

ನನ್ನ ಅಸೌಖ್ಯವು ಹೆಚ್ಚಾಗುತ್ತಿದೆ. ಡಾಕ್ಟರರು ಪರೀಕ್ಷಿಸಿ ನನ್ನ ದೇಹದೌರ್ಬಲ್ಯವೆನ್ನುತ್ತಾರೆ. ಹಲವು ಕಡೆಗಳಿಂದ ಹಲವು ಪತ್ರಗಳು ಬಂದವು, ಒಂದು ಪತ್ರದಲ್ಲಿ ನನಗೆ ಯಾರೋ ವಿಷ ಹಾಕಿರುವುದಾಗಿ ಬರೆದಿತ್ತು. ಡಾಕ್ಟರರು ಪರೀಕ್ಷಿಸಿ ನೋಡಿದರು. ಅಂದ ನಾನೆನ್ನೆ ಕಂಡುಬರಲಿಲ್ಲ. ಕಲ್ಕತ್ತ ವಿಶ್ವವಿದ್ಯಾನಿಲಯದ ಪ್ರೊಫೆಸರರೂ ಬ್ಬರು ಒಂದು ದಿನ ಒಂದರು. ಅವರು ಒಳ್ಳೇ ವಿದ್ವಾಂಸರು, ನನ್ನ ಮೇಲೆ ಅಭಿಮಾನವಿದ್ದವರು. ಅವರ ಪ್ರತ್ಯೇಕ ಸಂದೇಶವೊಂದನ್ನು ತಂದಿದ್ದರು.

'ಹಲವು ಪಂಡಿತರು ಅವರು ಕೂಡಿ ನನ್ನ ಅನಾರೋಗ್ಯದ ವಿಷಯ ವಿಚಾರ ಮಾಡಿದರಂತೆ. ಸಾಮಾನ್ಯ ಮಾನವರಿಂದ ಇದು ನಾಶಿಸಲ್ಪಡಲು ಸಾಧ್ಯವಿಲ್ಲವೆಂದೂ ದೇಶದ ಯಾವುದೋ ಮೂಲೆಯಲ್ಲಿ ಯಾರೋ ನನ್ನ ಮರಣವನ್ನು ಮಾಡುತ್ತಿರುವರೆಂದೂ ಅವರು ಕೊನೆಗೆ ನಿರ್ಧರಿಸಿದರಂತೆ. ನಾನದನ್ನು ನಂಬಲಿಲ್ಲ. ಆದರೂ ಪ್ರೊಫೆಸರರು ಆರೋಗ್ಯದ ವಿಷಯ ಕೆಲವು ಸೂಚನೆಗಳನ್ನು ಕೊಟ್ಟು ಹೋದರು.

ಹಲವರು ನನಗೆ ರಾಜೀನಾಮೆ ಕೊಡ್ಬೇಕೆಂದಿದ್ದರು. ನಾನು ಅದನ್ನು ವಿರೋಧಿಸಿದ್ದೆ. ಆದರೆ ಕೊನೆಗೆ ಒಪ್ಪಿಕೊಂಡು ಕಚೇರಿ ಆದರೆ ಇದು ಸ್ಥಾನವನ್ನು ಬಿಟ್ಟು ಎಲ್ಲಾ ಬಿಟ್ಟಿದ್ದೇನೆ. ನಾನು ತಿರಿಗಿ ನನ್ನ ಪ್ರಗತಿಪ್ರಿಯರನ್ನು ನಂಬಿದ್ದೇನೆ. ನನ್ನ ದೇವರನ್ನು ನೋಡುತ್ತೇನೆ, ನನ್ನ ಅದೃಷ್ಟವನ್ನು ಅರಸುತ್ತೇನೆ.

7 o'clock
7 ಓ ಕ್ಲೋಕ್ ಸ್ಲೊಟೆಡ್ ಬ್ಲೇಡುಗಳು
ಹಳೆಯ ಮೂರು ತೂತಿನ ಬ್ಲೇಡ್‌ಗಳಿಗಿಂತ ಸೀಳಲ್ಪಟ್ಟ ಬ್ಲೇಡ್‌ಗಳಿಗಿರುವ ಹೆಚ್ಚಿನ ಪ್ರಯೋಜನವೆಂದರೆ, ಹೆಚ್ಚು ಹರಿತ, ನಯ ಮತ್ತು ಬಾಳ್ವಿಕೆ ಇವು ಮೂರು. ಈ ಎಲ್ಲಾ ಸೀಳಲ್ಪಟ್ಟ ಬ್ಲೇಡುಗಳಿಗಿಂತಲೂ 7 ಒ'ಕ್ಲೋಕ್ ಬ್ಲೇಡುಗಳು ಉಚಿತ ದರದಲ್ಲಿ ಈ ಮೂರು ಪ್ರಯೋಜನಗಳನ್ನು ಕೊಡುವುವು.
8 ಆಣೆಗೆ
10 ಬ್ಲೇಡುಗಳು

ಸರ್ವಾಧಿಕಾರಿಗಳ ದುರ್ಭಾಗ್ಯ ಮಕ್ಕಳು

— ಹಿಟ್ಲರನೊಬ್ಬನನ್ನು ಹೊರತು —

ಉಕ್ಕಿನ ಮನುಷ್ಯನ ಸೊಕ್ಕಿದ ಕುಮಾರಿ!

ಮುಸಲನಿಯ ಮಮತೆಯ ಮಗಳು!

ಫ್ರಾಂಕೋ ಪುತ್ರಿ ಹಟಮಾರಿ! – ಮಿಕ್ಕ ಮಕ್ಕಳ ಅವಸ್ಥೆ ಬಲ್ಲಿರಾ?

ಜಗತ್ತಿನಲ್ಲಿ ಯಾರ ಕೀರ್ತಿಯನ್ನು ಕಂಡು ಜನರು ಮತ್ಸರಪಡುತ್ತಾರೋ ಅಂಥಾ ಮಹನೀಯರ ಮಕ್ಕಳ ಪರಿಸ್ಥಿತಿಯು ಯಾರಿಗೂ ಬೇಡದ ಅವಸ್ಥೆಯಾಗಿದೆ.

ಈಗ ಜಗತ್ತಿನಲ್ಲಿ ನಾಲ್ಕು ಮಂದಿ ಸರ್ವಾಧಿಕಾರಿಗಳಿದ್ದಾರೆ. ಅವರಲ್ಲಿ ಮೂರು ಮಂದಿಗೆ ಮಕ್ಕಳಾಗಿರುವರು. ಹಿಟ್ಲರನೊಬ್ಬನು ಮಾತ್ರ ಭವಿಷ್ಯದ ಕುರಿತು ತನ್ನ ನೆನಪನ್ನು ರಕ್ತಮೂರ್ತಿಯಾಗಿ ಸ್ಥಾಪಿಸಿಡಲು ಇಷ್ಟಪಡದಂತೆ ತೋರುತ್ತದೆ.

ಸ್ಟಾಲಿನನ ಸಂಸಾರ

ಉಕ್ಕಿನ ಮನುಷ್ಯನೆನಿಸಿದ ಸ್ಟಾಲಿನನಿಗೆ ಮೂರು ಮಂದಿ ಮಕ್ಕಳಿರುವರು.

ಆತನ ಹಿರಿಯ ಮಗನ ಹೆಸರು ಜಾಶಾ. ಜಾಶನು ಬಹಳ ಏಕಾಂತವಾಸಿಯಾಗಿದ್ದಾನೆ. ಸ್ಟಾಲಿನನ ಪುತ್ರನೆಂದು, ಆತನನ್ನು ಯಾರೂ ಗುರುತಿಸುವುದಿಲ್ಲ; ಸ್ಟಾಲಿನನ ಪುತ್ರನೆಂಬ ಸಂಭ್ರಮ ಸುಖಗಳೂ ಅವನಿಗಿಲ್ಲ. ಅವನು ಒಬ್ಬ ಸಾಮಾನ್ಯರಲ್ಲಿ ಸಾಮಾನ್ಯನಾದ ರಶ್ಯನನಾಗಿದ್ದಾನೆ. ಕೆಲಸಗಾರನಾಗಿ ಜೀವನ ನಡೆಸುತಿದ್ದಾನೆ.

ಸ್ಟಾಲಿನನು ಅವನ ಉನ್ನತಿಗೆ ಯಾವುದೇ ಒಂದು ಸಂದರ್ಭವನ್ನೂ ಕಲ್ಪಿಸಿಕೊಡಲಿಲ್ಲ. ಅವನನ್ನು ಯಾವುದೇ ಪದವಿಗೆ ಏರಿಸಿ ನೋಡಲಿಲ್ಲ. ಆತನು ಎಳೆತನದಲ್ಲಿ ಅಪ್ಪಿ ತಪ್ಪಿ ಒಮ್ಮೆ ಹೊಗೆ ಸೇದಿದರೂ ತಂದೆ ಆತನನ್ನು ಬಹಳವಾಗಿ ಗದರಿಸಿಬಿಡುತಿದ್ದ.

ಹೀಗೆ ತಂದೆಯ ತೀರಾ ನಿರ್ಲಕ್ಷ್ಯತೆಯಿಂದ ಜಾಶಾ ಬಾಲ್ಯವನ್ನು ಕಳೆದ.

ಮತ್ತೆ ಪ್ರಾಯಕ್ಕೆ ಬಂದ ಕೂಡಲೇ ಆತನು ಸ್ಟಾಲಿನನ ಮನೆಯನ್ನೂ ಬಿಟ್ಟು ಹೋಗಬೇಕಾಯಿತು. ಬಿಟ್ಟು ಹೋದುದೆಂದರೆ ಪುನಃ ತಂದೆಯೊಡನೆ ಬಂದು ಸೇರದಂತೆಯೇ. ಈಗ ಒಂದು ಕಾರ್ಖಾನೆಯಲ್ಲಿ ಕೂಲಿಗಾರನಾಗಿ, ವಾರಕ್ಕೆ ೨೭ ಶಿಲಿಂಗುಗಳ ದುಡಿತದಿಂದ, ಕೀರ್ತಿ ಗೌರವಗಳಿಲ್ಲದೆ, ಜನತೆಯ ಮೇಲೆ ಯಾವುದೇ ಅಧಿಕಾರ ಪ್ರಭಾವವಿಲ್ಲದೆ ಆತ ತನ್ನ ಹೊಟ್ಟೆ ಹೊರೆದುಕೊಂಡಿದ್ದಾನೆ.

ಎರಡನೆಯ ಮದುವೆಯಲ್ಲಿ ಸ್ಟಾಲಿನನಿಗೆ ಎರಡು ಮಕ್ಕಳಾದರು. ಒಂದು ಗಂಡು, ಒಂದು ಹೆಣ್ಣು.

ಎರಡನೆಯ ಮಗನಾದ ವಾಸಿಲನೂ ತನ್ನ ಅಣ್ಣನಿಗಿಂತ ಏನೂ ಹೆಚ್ಚಿನ ಪಾಲನೆ ಪ್ರೀತಿಗಳನ್ನು ತಂದೆಯಿಂದ ಹೊಂದಲಿಲ್ಲ.

ಆದರೆ, ಆತನ ಪುತ್ರಿ ಸ್ವೆತ್ಲಾನಳು ಮಾತ್ರ ಆ ಮುದಿ ಪಾಶವೀ ಹೃದಯವನ್ನುಪೂರ್ಣವಾಗಿ ಆವರಿಸಿಬಿಟ್ಟಿದ್ದಾಳೆ!

ಆಕೆಗೆ ಬೇಕಾದುದೆಲ್ಲವನ್ನೂ ಆತ ಒದಗಿಸಿ ಕೊಡುವನು. ಆಕೆಯು ಹದಿನೆರಡನೆಯ ವರ್ಷ ಪ್ರಾಯದಲ್ಲಿಯೇ ದೇವಧರ್ಮಗಳ ವಿರುದ್ಧ ಸಂಸ್ಥೆಯೊಂದರಿಂದ ಆಕೆಗೆ ನಾಸ್ತಿಕವಾದದ ಕುರಿತು ಭಾಷಣ ಮಾಡಲು ಯೋಗ್ಯತೆ ಹೊಂದುವ ಉಪಾಧಿ ಸಿಕ್ಕಿತ್ತು.

ಆಕೆ ತಂದೆಯೊಡನೆ ಆತನ ಕ್ರೆಮ್ಲಿನ್‌ನಲ್ಲಿಯೇ ವಾಸಿಸುತ್ತಾಳೆ. ಸದಾ ಸಂಗೀತ ಮಾಡುತ್ತಾ ಇರುತ್ತಾಳೆ. ತಂದೆಗೆ ಹಲವು ಸಲ ರಾಜಕೀಯದಲ್ಲಿ ಸಂಗಾತಿನಿಯಾಗಿ ಅಭಿಪ್ರಾಯ ಸೂಚಿಸುತ್ತಾಳೆ.

ಸ್ವೆತ್ಲಾನಳು ಹುಡುಗಿಯಾಗಿ ಒಮ್ಮೆಯೂ ಇರಲಿಲ್ಲವೆನ್ನಬೇಕು. ಆಕೆ ಹೆಂಗುಸಾಗಿಯೇ ಹುಟ್ಟಿದಳು. ಬಾಲ್ಯದಿಂದಲೇ ಆಕೆಗೆ ಭೀಷಣ ಭಯಂಕರಗಳನ್ನು ಸದಾ ಕಂಡು ಕೇಳಿ ಅನುಭವವಾಗಿದೆ. ಯಾವುದಕ್ಕೂ ಆಕೆ ನಿತ್ಯ ಸಿದ್ಧಳೇ ಆಗಿದ್ದಾಳೆ.

ಉಕ್ಕಿನ ಮನುಷ್ಯನೆನಿಸಿದ ತಂದೆಗೆ ಯೋಗ್ಯಳಾದ ಉಕ್ಕಿನ ಪುತ್ರಿ ಆಕೆ ಆಗಿದ್ದಾಳೆ.

ಮುಸಲನಿಯ ಮಕ್ಕಳು

ಮುಸಲನಿಗೆ ಐದು ಮಂದಿ ಮಕ್ಕಳು. ಆತನ ಮಕ್ಕಳನ್ನು ನಾವು ಸುಖಿಗಳೆಂದಾಗಲೀ, ಒಂದೇ ಬುದ್ಧಿಯವರೆಂದಾಗಲಿ ಹೇಳಬರುವುದಿಲ್ಲ.

ಆತನ ಮಕ್ಕಳಲ್ಲಿ ತಂದೆಯೊಡನೆ ಸದಾ ಇದ್ದು, ಆತನ ಮೆಚ್ಚುಗೆಗೆ ಪಾತ್ರಳಾದವಳೆಂದರೆ ಪ್ರಥಮ ಪುತ್ರಿಯಾದ ಎಡ್ಡಾಳು.

ಹಾಗಾಗಿ ಆಕೆಯೇ ಇಂದು ತಂದೆಯ ಬಲಗೈಯಂತಿದ್ದಾಳೆ. ಇಡೀ ಕುಟುಂಬದಲ್ಲಿ ಆಕೆಯ ಪ್ರಭಾವ ಬಹಳ ಇದೆ. 'ಎಡ್ಡಳನ್ನು ಕೇಳಿ'. ಮುಸಲನಿ ತನ್ನ ಮಂತ್ರಿಗಳಿಗೂ ಹಲವು ಸಲ ಹೇಳುತ್ತಾನೆ. 'ಎಡ್ಡಳಿಗಾಗಿ ಕಾಯ್ದಿರಿ' ಮನೆಯವರೊಡನೆ ಮುಸಲನಿ ಹೇಳುತ್ತಾನೆ. ಸುಂದರಿಯಾದ ಕೌಂಟೆಸ್ ಸಿಯಾನೋ ಎಂದು ಆಕೆ ಪ್ರಸಿದ್ಧಳಾಗಿದ್ದಾಳೆ. ಆಕೆಯ ಸ್ವಾಮಿಯಾನೋ ಕೂಡಾ ಆಕೆಯ ಸಲುವಾಗಿಯೇ ಮುಸಲನಿಯ ಮೆಚ್ಚುಗೆಯ ಬಲಗೈಬಂಟನಾಗಿದ್ದಾನೆ.

ಮುಸಲನಿಯ ಮಿಕ್ಕ ಮಕ್ಕಳು ಅನಂತೆಯೇ ಪಾಲಿತರಾದರೂ, ಅವರು ಜೀವನದಲ್ಲಿ ಆಕೆಯಂತೆ ಜಯಶಾಲಿಗಳಾಗಲಿಲ್ಲ. ಅವರು ಯಾರೂ ಅಷ್ಟು ಧೈರ್ಯವಂತರಾಗಿ, ಅಷ್ಟು ತೀಕ್ಷ್ಣರಾಗಿ ಆಗಲಿಲ್ಲ. ಅವರು ಎಂದೆಂದೂ ತಂದೆಗೆ

ಹೆದರಿ ಜೀವನ ಮಾಡುತ್ತಾರೆ:

ಫ್ರಾಂಕೋ ಪುತ್ರಿ

ಫ್ರಾಂಕೋವಿನ ಪುತ್ರಿ ಕರ್ಮೆನ್ ಸೀಟಾ. ಆಕೆ ಆ ಇಬ್ಬರು ಸರ್ವಾಧಿಕಾರಿಗಳ ಪುತ್ರಿಯರಿಗಿಂತ ತೀರಾ ಭಿನ್ನ ರೀತಿಯವಳೆಂದು ನೋಡಿದಾಕ್ಷಣವೇ ಯಾರಾದರೂ ತಿಳಿದುಕೊಳ್ಳಬೇಕು.

ಆಕೆಯದು ಸಣ್ಣ ದನಿ, ನಗುಮೊಗ ಸರಸ ಹಾಸ್ಯದಲ್ಲಿ ಪ್ರೀತಿ ಹೆಚ್ಚು ಅವಳಿಗೆ. ತಂದೆಗಿಂತಲೂ ಆಕೆ ಸುಂದರಿಯಾದ ತಾಯಿಯನ್ನೇ ಹೋಲುತ್ತಾಳೆ. ಎಂದೆಂದೂ ಮನೆಯೊಳಗಿರುವುದರಲ್ಲಿಯೇ ಆಕೆಗೆ ಪ್ರೀತಿ ಹೆಚ್ಚಾಗಿ ತೋರುತ್ತದೆ.

ಆದರೆ ಕರ್ಮೆನ್ ಸಿಟಳ ಮನೋಗತಿಯು ವಿಷಯವಾಗಿ ಹರಡಿದ ಸುದ್ದಿಗಳಿಂದ ಆಕೆಯು ಅತ್ಯಂತ ವಜ್ರಕಠಿಣವಾದ ಮನೋನಿಷ್ಠೆಯುಳ್ಳವಳೆಂದು ತಿಳಿಯುತ್ತದೆ. ಆಕೆ ತಾಯಿಯನ್ನು ಬೇಕಾದಂತೆ ಕುಣಿಸುತ್ತಾಳೆ. ಆದರೆ ತಂದೆಯ ಮುಂದುಗಡೆ ಅವಳ ಮಾತು ಹೆಚ್ಚು ನಡೆಯುವುದಿಲ್ಲ. ಆಕೆಯ ಕೋಪವು ಒಮ್ಮೊಮ್ಮೆ ಅವಳಿಂದ ತಡೆದುಕೊಳ್ಳಲಾರದಷ್ಟು ವಿಪರೀತವಾಗಿಬಿಡುವುದುಂಟು. ಆಗ ಆಕೆ ತೀರಾ ಕುರೂಪಿಯಂತೆಯೇ ಕಾಣುವಳು. ಶಿಸ್ತಿಲ್ಲದೆ, ನಿಯಮವಿಲ್ಲದೆ, ಅಂಜಿಕೆಯಿಲ್ಲದೆ, ಭಯಭೀತಿಯಿಲ್ಲದೆ ಮಗಳನ್ನು ಬೆಳಸಿದ ಕಾರಣ ಆಕೆ ಹೀಗಾಗುತ್ತಾಳೆಯೆಂದು ಸೇವಕರು ಹೇಳುತ್ತಾರೆ.

ಈ ಸರ್ವಾಧಿಕಾರಿಗಳ ಮನೆಯ ಸಂಸಾರದ ವ್ಯವಸ್ಥೆ ಹೀಗಿದೆ! ಒಂದು ಕ್ರಮ, ಒಂದು ಶಿಸ್ತು, ಒಂದು ಚಂದ, ಒಂದು ಸೊಬಗು ಅವರ ಗೃಹಜೀವನದಲ್ಲಿಯೇ ಇಲ್ಲವೆಂದರೆ, ಹೊರಗಡೆ ಅವರಿಂದ ಎಷ್ಟರ ಮಟ್ಟಿನ ವ್ಯವಸ್ಥೆ ಶಿಸ್ತು, ಕ್ರಮ, ನಿಯಮ ನೀತಿಗಳನು ನಾವು ಹಾರೈಸಬಹುದು?

ಜೀವವಿಮೆಯೇ—ಸುಲಭವಾದ ಕಂತುಗಳಲ್ಲಿ ಹಣವನ್ನು ಪಾವತಿಮಾಡಿ, ನಿಸ್ಸಂದೇಹವಾಗಿ ತನ್ನ ಮುಪ್ಪಿನ ಕಾಲದಲ್ಲಿ ತನಗಾಗಿಯೂ ಅಥವಾ ತನ್ನ ಆಶ್ರಿತರಿಗಾಗಿಯೂ **ಆರ್ಥಿಕ ಸ್ವಾತಂತ್ರ್ಯವನ್ನು** ಖಚಿತಮಾಡಿಕೊಟ್ಟಲು ಹಣ ಶೇಖರಿಸಲು ಸಾಧ್ಯವಾದ ಮಾರ್ಗವು.

ಪ್ರತಿವರ್ಷವೂ— ವಿವೇಚನಾಶಕ್ತರಾದ ಸಾವಿರಾರು ಜನರು ತಮ್ಮ ಮುಪ್ಪಿನ ಕಾಲದಲಿ ತಮಗಾಗಿಯೂ ಅಥವಾ ತಮ್ಮ ನಂತರ ತಮ್ಮ ಆಶ್ರಿತರಿಗಾಗಿಯೂ ಆರ್ಥಿಕ ಸ್ವಾತಂತ್ರ್ಯದ ಅಡಿಗಲ್ಲನ್ನು ಅತ್ಯಂತ ಭದ್ರವಾದ ಮತ್ತು ಭಾರತೀಯ ವಿಮಾ ಕಂಪನಿಗಳಲ್ಲೆಲ್ಲಾ ಅತ್ಯಂತ ಜನಪ್ರಿಯವಾದ 'ಓರಿಯಂಟಲ್'ನಲ್ಲಿ ತಮ್ಮ ಜೀವವಿಮೆಯನ್ನು ಮಾಡುತ್ತಾರೆ.

'ತಡಮಾಡಬೇಡಿರಿ'

ಇಂದೇ ಒಂದು 'ಓರಿಯಂಟಲ್' ಪಾಲಿಸಿ ತೆಗೆದುಕೊಳ್ಳಿ

★ 'ಓರಿಯಂಟಲ್' ★

ಗಾ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂ. ಲಿ.,

ಸ್ಥಾಪನೆ: 1874 **ಮುಖ್ಯ ಕಛೇರಿ: ಬೊಂಬಾಯಿ**

ವಿಶೇಷ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್ಸ್ ಸೌತ್ ಪರೇಡ್, ಬೆಂಗಳೂರು.

ಭಾರತದಲ್ಲೆಲ್ಲೂ ಈ ಸಂಸ್ಥೆಯ ಶಾಖೆಗಳಿವೆ, ಪ್ರತಿನಿಧಿಗಳಿದ್ದಾರೆ.

ದಮ್ಮು ನೆಟ್ಟಗೆ ಆಗಲೇ ಬೇಕು

ಇದು ಅಸಾಧ್ಯವೆಂದು ಡಾಕ್ಟರರು ಹೇಳುವುದಿಲ್ಲ

ನಿಮಗೆ ನಿರಾಶೆಯು ಆದರೆ ಅದರ ಕಾರಣ ತಪ್ಪು ಔಷಧ ತೆಗೆದುಕೊಂಡದ್ದು; ಇದಲ್ಲದೆ, ದಮ್ಮು ನೆಟ್ಟಗಾಗಬೇಕೆಂಬ ಹಂಬಲದಿಂದ ಕ್ಷಣಿಕವಾಗಿ ಗುಣವಾಗುವ ಔಷಧ ಉಪಯೋಗಿಸಿ ಅನೇಕರಿಗೆ ದುಃಖವಾಗಿದೆ.

ಪುರೋಹಿತ ಶ್ವಾಸಹಾರಿಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ಕೂಡಿಸದೆ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳ ಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ಶೀಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ; ಪಚನಕ್ರಿಯೆಯು ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿ ಬರುವು ಪುಪ್ಪುಸವು ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ನೆಟ್ಟಗಾಗುವುದು.

ರೂ. ೨-೭-೦, ರೂ. ೪-೧೨-೦, ರೂ. ೬-೮-೦ ವಿಕ್ರಯಕ್ಕೆ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಾ ಕಡೆ ಸಿಗುವುದು. ತರಿಸಿಕೊಳ್ಳುವ ವಿಳಾಸ: **ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ.**

ಪುರೋಹಿತ ಶ್ವಾಸಹಾರಿ

ಬಳುವಳಿ

ಅನುವಾದಕರು: ಕಟಪಾಡಿ ಶ್ರೀನಿವಾಸ ಶೆಣೈ.

ರಾಮುಲಾಲ ಓದಿನ ಪುಸ್ತಕಗಳನ್ನು ತೋಳಿಗೆ ಅವುಚಿಕೊಂಡು ಕಾಲೇಜಿನ ಕಡೆಗೆ ಹೋಗುತ್ತಿದ್ದ. ಹಿಂದಿನಿಂದ ಶರದಕುಮಾರಿಯು ಸಂಗಾತಿನಿಯರೂ ಅವಳೊಂದಿಗೆ ಕೂಡಿ ಕಾಲೇಜಿಗೆ ಹೊರಟಿದ್ದರು. ಶರದಕುಮಾರಿ ರಾಮುಲಾಲರ ನಾಲ್ಕು ಕಣ್ಣುಗಳು ಒಂದಾದುವು. ಯಾರಾದರೂ ನೋಡಿ ಏನೆಂದುಕೊಂಡಾರು ಎಂಬುದರ ಕಡೆಗೆ ಅವರ ಪರಿಭಾವನೆ ಉಳಿಯಲಿಲ್ಲ. ಅವರು ಒಬ್ಬರನ್ನೊಬ್ಬರು ನೋಡುತ್ತ ಬಹುದೂರ ನಡೆದು ಹೋದರು. ಶರದಕುಮಾರಿಯ ನೇತ್ರಗಳಿಂದ ಸ್ನೇಹ ಮತ್ತು ಕಾತರತೆಯು ಉಕ್ಕಿ ಹರಿಯುತ್ತಿತ್ತು. ಅವಳು ಮೂಕಭಾಷೆಯಿಂದ ಅವನೊಡನೆ ಏನನ್ನೋ ಭಿಕ್ಷೆ ಬೇಡುತ್ತಿರುವಂತೆ ಭಾಸವಾಗುತ್ತಿತ್ತು—ರಾಮುಲಾಲನಿಗೆ ಶರದಕುಮಾರಿಯ ಈ ವಿಚಿತ್ರ ವರ್ತನೆಯ ಯಾವ ಅರ್ಥವೂ ಆಗಲಿಲ್ಲ. ಅವನು ದೊಡ್ಡ ಅಸಮಂಜಸದಲ್ಲಿ ಬಿದ್ದ. ಹೃದಯದಲ್ಲಿ ವಿವಿಧ ಭಾವನೆಗಳ ಉತ್ಪಾತ ಪ್ರಾರಂಭವಾಯಿತು. ಕಾಲೇಜಿನಲ್ಲಿ ಓದುವುದರ ಕಡೆಗೆ ಅವನ ಮನಸ್ಸು ಹರಿಯಲಿಲ್ಲ. ಯಾವಾಗಲೂ ಅವನ ಮನಸ್ಸಿನಲ್ಲಿ ಶರದಕುಮಾರಿಯ ಆ ವಿಷಾದಪೂರ್ಣ ಮುಖಕಮಲವು ಸುಳಿಯುತಿತ್ತು. ಸಾಯಂಕಾಲ ಹೇಗೋ ಹಾಗೆ ಕಾಲೇಜು ಬಿಟ್ಟಿತು. ರಾಮುಲಾಲ ಟ್ಯೂಶನು ಕೊಡಲು ಶರ್ಮನ ಕಡೆಗೆ ನಡೆದ.

ಶರದಕುಮಾರಿಯ ವಿವಾಹವು ಶಹಜಹಾನಪುರದಲ್ಲಿ ನಿಶ್ಚಯವಾಗಿದೆ ಎಂಬ ಮಾತನ್ನು ಕಿಶೋರಿ ರಾಮುಲಾಲನಿಗೆ ಹೇಳಿದಳು. ಆ ಮಾತು ಕೇಳಿ ಟ್ಯೂಶನು ಕೊಡುತ್ತಿದ್ದ ರಾಮುಲಾಲ ವ್ಯಾಕುಲಚಿತ್ತನಾದ. ಅವನ ಮನಸ್ಸು ಚಂಚಲವಾಯಿತು. ಬಾಯಿಯಿಂದ ಮಾತು ಹೊರಡಲಿಲ್ಲ. ಅಲ್ಲಿಂದಲ್ಲಿಗೆ ಟ್ಯೂಶನು ಮುಗಿಸಿ ಮನೆಗೆ ಬಂದ. ಆ ದಿನ ಅವನು ಏನನ್ನಾದರೂ ಉಣಲಿಲ್ಲ; ತಿನ್ನಲಿಲ್ಲ. ಮರುದಿನವಾದರೂ ಅವನ ಹೊಟ್ಟೆಗೆ ಒಂದು ಅನ್ನದ ಅಗುಳು ಕೂಡ ಸೇರಲಿಲ್ಲ. ಅವನು ಸಾಯಂಕಾಲ ಟ್ಯೂಶನಿಗೆ ಹೋದ. ಅಲ್ಲಿ ಕಿಶೋರಿ, ಶರದಕುಮಾರಿಯ ದೀನಾವಸ್ಥೆಯನ್ನು ಮನಸ್ಸು ಕರಗುವಂತೆ ಹೇಳಿದಳು. ಅದರಿಂದ ರಾಮುಲಾಲನ ಮನಸ್ಸು ಮತ್ತಷ್ಟು ಉದ್ವಿಗ್ನವಾಯಿತು.

ಎರಡು ದಿನಗಳ ಮೊದಲು ಶರದಕುಮಾರಿಯ ತಂದೆ, ರಾಮುಲಾಲನೊಡನೆ ಶರದಕುಮಾರಿಯ ವಿವಾಹಪ್ರಸ್ತಾಪವನ್ನು ಬೆಳೆಸಿ ಬಂದಿದ್ದ. ಆದರೆ ರಾಮುಲಾಲನ ತಂದೆ, ಹಳೆಸಂಪ್ರದಾಯದವ. ಅವನು ಬಳುವಳಿ ಏನೂ ಇಲ್ಲದೆ ಮಗನ ವಿವಾಹಕ್ಕೆ ಸಿದ್ಧನಾಗಿರಲಿಲ್ಲ. ಶರದಕುಮಾರಿಯ ತಂದೆ ಉದಾರಿಯೂ ಸುಧಾರಕನೂ ಆಗಿದ್ದ. ಪರಂತು ಅವನ ಸಾಮರ್ಥ್ಯಕ್ಕೆ ಮೀರಿ ಬಳುವಳಿ ಕೇಳಿದ್ದರಿಂದ ರಾಮುಲಾಲ-ಶರದಕುಮಾರಿಯರ ವಿವಾಹ ಪ್ರಸ್ತಾಪವು ಅಲ್ಲಿಗಲ್ಲಿಗೇ ನಿಂತಿತು.

ರಾಮುಲಾಲ ಶರದಕುಮಾರಿಯರು ಬಹುಕಾಲದಿಂದ ಒಬ್ಬರೊಬ್ಬರ ಕಡೆಗೆ ಆಕರ್ಷಿತರಾಗಿದ್ದರು. ಅವರ ಹೃದಯದಲ್ಲಿ ಪರಸ್ಪರ ಪ್ರೇಮದ ಬೀಜವು ಮೊಳಕೆ ಒಡೆದಿತ್ತು. ತಮ್ಮ ವಿಚಾರವನ್ನು ಅವರು ಯಾರೊಡನೆಯೂ ಪ್ರಕಟಮಾಡಿರಲಿಲ್ಲ. ಸ್ವತಃ ಅವರಿಗೆ ಕೂಡ ಒಬ್ಬರೊಬ್ಬರ ಭಾವನೆಗಳು ತಿಳಿದಿರಲಿಲ್ಲ. ಆದರೆ ಶರದಕುಮಾರಿಯ ತಂದೆ, ಶಹಜಹಾನಪುರದಲ್ಲಿ ಅವಳ ವಿವಾಹವನ್ನು ನಿಶ್ಚಯಿಸಿರುವನೆಂದು ತಿಳಿದುಬಂದಾಕ್ಷಣ ಅವಳು ಸ್ತ್ರೀಸ್ವಭಾವೋಚಿತವಾದ ಲಜ್ಜೆಯನ್ನು ಬಿಟ್ಟು, ತಾಯಿ ಬಳಿಗೆ ಹೋದಳು. "ಅಮ್ಮಾ! ನನ್ನ ಮದುವೆಗೆ ಇಷ್ಟು ಅವಸರವೇಕೆ? ಓದು ಮುಗಿಯಲಿ; ಆ ಮೇಲೆ ನೋಡಿಕೊಂಡರೆ ಸರಿ" ಎಂದಳು. ಪರಂತು ಮಗಳ ಈ ಮಾತುಗಳ ಅರ್ಥ ತಾಯಿಗೆ ಆಗಲಿಲ್ಲ. ಈ ಕಾರಣದಿಂದ ಅವಳು ಈಗ ಅಸ್ವಸ್ಥವಾಗಿರುವಳು.

ಕಿಶೋರಿಯಿಂದ ಶರದಕುಮಾರಿಯ ಅಸ್ವಸ್ಥ ವಿಚಾರವು ತಿಳಿದುಬಂದಾಕ್ಷಣ ರಾಮುಲಾಲ ಗೊಂದಲದಲ್ಲಿ ಬಿದ್ದ. ಶರದಕುಮಾರಿಯೊಡನೆ ಅವನು ಆ ಮೊದಲು ಮಾತನಾಡಿದ್ದಾಗಲಿ, ಪತ್ರವ್ಯವಹಾರ ಮಾಡಿದ್ದಾಗಲಿ ಇಲ್ಲ. ಇದ್ದರಿಂದ ಆ ಸಮಯ ಏನು ಮಾಡಬೇಕೆಂದು ಅವನಿಗೆ ಗೊತ್ತಾಗಲಿಲ್ಲ. ಕೊನೆಗೆ ಮನೆಗೆ ಬಂದು ದೃಢಚಿತ್ತನಾಗಿ ಅವಳಿಗೊಂದು ಕಾಗದ ಬರೆದ—

"ಪ್ರಿಯ ಶರದಕುಮಾರಿ!

ಕಿಶೋರಿಯ ಮೂಲಕ ನನ್ನ ಎಲ್ಲಾ ಸಮಾಚಾರ ತಿಳಿಯಿತು. ಅನ್ಯತ್ರ ವಿವಾಹ ನಿಶ್ಚಯ ಆಗಿಬಿಟ್ಟಿರುವುದರಿಂದ ನಿನ್ನ ವಿವಾಹವು ಅಲ್ಲಿಯೇ ಆಗುವುದು ಉತ್ತಮವಾಗಿದೆ. ನೀನು ನಿನ್ನ ಕುಲಮರ್ಯಾದೆಯ ಕಡೆಗೆ ಧ್ಯಾನವನ್ನು ಇಟ್ಟಿರಬೇಕು. ಅಷ್ಟಾಗಿಯೂ ನೀನು ನಿನ್ನ ಮೊದಲಿನ ನಿರ್ಧಾರದಲ್ಲಿ ಬದಲಾವಣೆಯನ್ನು ಮಾಡಲಾರೆಯಾದರೆ, ನಾನು ನಿನ್ನ ಇಚ್ಛೆಯನ್ನು ಪೂರೈಸಲಿಕ್ಕೆ ಯಾವಾಗಲೂ ಸಿದ್ಧನಾಗಿ ಇರುವೆನು. ಯೋಗ್ಯ ಸೇವೆಗಾಗಿ ಉತ್ತರ ಬರೆ.

—ಇತಿ ನಿನ್ನವ, ರಾಮುಲಾಲ"

ಈ ಪತ್ರವನ್ನು ಓದಿ ಶರದಕುಮಾರಿಯಲ್ಲಿ ಹೊಸ ಸ್ಫೂರ್ತಿ ಉತ್ಸಾಹಗಳು ತುಂಬಿದುವು. ಅವಳ ಮುಖಮಂಡಲದ ಮೇಲೆ ನವಜೀವನದ ಕಳೆ ಬಂತು. ಅವಳು ಆ ಕೂಡಲೆ ಒಂದು ಪತ್ರ ಬರೆದು ತನ್ನ ಮನೋಭಾವವನ್ನು ಪ್ರಕಟಮಾಡಿದಳು—

"ಪ್ರಿಯ ರಾಮುಲಾಲ!

ನಿಮ್ಮ ಪತ್ರವನ್ನು ಪಡೆದು ಅತೀವ ಆನಂದವಾಗಿದೆ. ನಿಮ್ಮನ್ನು ಬಿಟ್ಟು ಅನ್ಯ ಯಾರನ್ನೂ ವಿವಾಹವಾಗುವುದಿಲ್ಲವೆಂದು ನಾನು ದೃಢಪ್ರತಿಜ್ಞೆ ತೊಟ್ಟುಕೊಂಡಿರುವೆನು. ನೀವು ನನಗೆ ಎಲ್ಲಾ ದೃಷ್ಟಿಯಿಂದ ಯೋಗ್ಯರಿರುತ್ತೀರಿ. ಆರ್ಯ ಕನ್ಯೆಗೆ ಜೀವನದಲ್ಲಿ ಒಬ್ಬನು ಮಾತ್ರ ಪತಿಯಾಗುವನು. ನಾನು ನಿಮ್ಮನ್ನೇ ಪತಿಯೆಂದು ಸ್ವೀಕರಿಸಿದ್ದೇನೆ. ಈ ಬಡವಿಯ ಮೇಲೆ ಕೃಪೆಯೂ ದಯೆಯೂ ಇದ್ದಿರಲಿ. ಚರಣದಾಸಿಯನ್ನು ಎಂದೂ ಮರೆಯಬೇಡಿ.

—ಇತಿ ನಿಮ್ಮವಳು, ಶರದಕುಮಾರಿ"

ರಾಮುಲಾಲನ ನಿಶ್ಚಯವು ದೃಢವಾಯಿತು. ಅವನು ಸಾಹಸಮಾಡಿ ಶರದಕುಮಾರಿಯ ತಂದೆಯ ಬಳಿಗೆ ಹೋಗಿ ತನ್ನ ಇಚ್ಛೆಯನ್ನು ನಿವೇದಿಸಿಕೊಂಡ. ಪರಂತು ಒಮ್ಮೆ ತಿರಸ್ಕೃತನಾದ ಕಷ್ಟ, ಅದೂ ಅನ್ಯತ್ರ ಮಾತು ನಿಶ್ಚಯವಾಗಿರುವಾಗ, ಶರದಕುಮಾರಿಯನ್ನು ಕೊಡಲಿಕ್ಕೆ ಅವಳ ತಂದೆ ಒಪ್ಪಲಿಲ್ಲ. ನಿರಾಶನಾದ ರಾಮುಲಾಲ ಸ್ಥಳೀಯ ಆರ್ಯಸಮಾಜದ ಕಾರ್ಯದರ್ಶಿಯನ್ನು ಕಂಡು ಅವನೊಡನೆ ನಡೆದ ಯಾವತ್ತು ಸಂಗತಿಗಳನ್ನು ಹೇಳಿದ. ಸಮ್ಮರುಮ್ಮನಾದರು ಹೋಗಿ ಶರದಕುಮಾರಿಯ ತಾಯಿಯೊಡನೆ ಆಲೋಚನೆ ತೆಗೆದುಕೊಂಡರು. ಅವರು ಶರದಕುಮಾರಿಯ ತಂದೆಯನ್ನೂ ಕಂಡು ಬಹಳ ಮಾತನಾಡಿದರು. ರಾಮುಲಾಲ ಶರದಕುಮಾರಿಯರು ಒಬ್ಬರೊಬ್ಬರ ಕಡೆಗೆ ಆಕರ್ಷಿತರಾಗಿರುವುದನ್ನೂ ಅವರು ಅನುರೂಪರಾಗಿರುವುದನ್ನೂ ತಿಳಿಸಿದರು. ಮತ್ತೆ ರಾಮುಲಾಲ ಯಾವ ಬಳುವಳಿಯನ್ನೂ ತೆಗೆದುಕೊಳ್ಳದೆ ಶರದಕುಮಾರಿಯನ್ನು ವಿವಾಹವಾಗಲು ತಯ್ಯಾರಾಗಿದ್ದಾನೆಂಬುದಾಗಿಯೂ ಹೇಳಿದರು. ಬಹಳ ವಾದ-ವಿವಾದವು ನಡೆದ ನಂತರ ಶರದಕುಮಾರಿಯ ತಂದೆ, ಈ ವಿವಾಹಕ್ಕೆ ಒಪ್ಪಿದ.

ವಿವಾಹವೇನೋ ಆಗಿಹೋಯಿತು. ಪರಂತು ಬಳುವಳಿ ತೆಗೆದುಕೊಳ್ಳದೆ ಯಾವ ಪ್ರಕಾರ ಅದು ಆಗಬೇಕಾಗಿತ್ತೊ ಹಾಗೆ ಆಗಲಿಲ್ಲ. ಬಳುವಳಿ ಇಲ್ಲದೆ ವಿವಾಹವಾಗಲು ರಾಮುಲಾಲ ಒಪ್ಪಿದ್ದನಾದರೂ, ಶರದಕುಮಾರಿಯ ತಂದೆ, ತನ್ನ ಶಕ್ತಿಗೆ ಮೀರಿ ಅವಳಿಗೆ ಬಳುವಳಿ ಕೊಟ್ಟಿದ್ದ. ಆದರೆ ಧನಲೋಲುಪಿಯಾದ ರಾಮುಲಾಲನ ತಂದೆಗೆ ಅಷ್ಟರಿಂದ ಸಂತೋಷವೂ ತೃಪ್ತಿಯೂ ಆಗಲಿಲ್ಲ. ಮದುವೆ ಕಾಲದಲ್ಲೇ ಎಷ್ಟೋ ಎಡರುತೊಡರುಗಳು ಬಂದುವು. ಆದರೆ ರಾಮುಲಾಲ ತಂದೆಯ ರಾಕ್ಷಸೀ ವ್ಯವಹಾರವನ್ನು ನೋಡುತ್ತ ಇದ್ದನೇ ಹೊರತು ಅದನ್ನು ವಿರೋಧಿಸುವ ಸಾಹಸವನ್ನು ತೋರಿಸಲಿಲ್ಲ. ಇಂಥ ಸಾಹಸವು ನಮ್ಮ ಈಗಿನ ಯುವಕರಲ್ಲಿ ಇದ್ದುದಾದರೆ, ಅವರ ಕಣ್ಣಮುಂದೆ ಬಳುವಳಿಯ ಅನ್ಯಾಯಗಳು ಎಷ್ಟುಮಾತ್ರ ನಡೆಯುತ್ತಿರಲಿಲ್ಲ. ಆದರೆ ಯುವಕರು ಈಗ ಹತವೀರ್ಯರಾಗಿದ್ದಾರೆ. ಅವರು ಅನ್ಯಾಯವನ್ನು ಕಾಣುತ್ತಾರೆ. ಪರಂತು ಅದನ್ನು ಎದುರಿಸಿ ವಿರೋಧಿಸುವ ಶಕ್ತಿ ಸಾಮರ್ಥ್ಯಗಳು ಅವರಲ್ಲಿರುವುದಿಲ್ಲ. ಇದ್ದರಿಂದಲೇ ಸಮಾಜದಲ್ಲಿ ಬಳುವಳಿ ರಾಕ್ಷಸನ ತಾಂಡವನೃತ್ಯವೇ ಸರ್ವತ್ರ ಕಾಣಬರುತ್ತದೆ.

ವಿವಾಹವಾಗಿ ರಾಮುಲಾಲ ನೌಕರಿಯ ಮೇಲೆ ಬೊಂಬಾಯಿಗೆ ಬಂದ. ಆಗಲೂ ಅವನು ಶರದಕುಮಾರಿಯನ್ನು ಬೊಂಬಾಯಿಗೆ ಕರೆಸಿಕೊಳ್ಳಲಿಲ್ಲ. ಅವಳು ಮಾವನ ಮನೆಯಲ್ಲಿಯೇ ಉಳಿದಳು. ಮಾವನ ಕ್ರೋಧವು ಕೇವಲ ಶರದಕುಮಾರಿಯ ಮೇಲೆ ಇಳಿಯಿತು. ಅಲ್ಲಿ ಅವಳ ಮೇಲೆ ಅನೇಕ ಬಗೆಯ ಅತ್ಯಾಚಾರಗಳು ನಡೆದುವು. ಆದರೂ ಅವಳು ಅವುಗಳೆಲ್ಲವನ್ನೂ ಧೈರ್ಯದಿಂದ ಸಹಿಸುತ್ತ ಬಂದಳು. ವಿವಾಹವಾಗಿ ಮೂರು ವರ್ಷಗಳಾದರೂ ರಾಮುಲಾಲನ ತಂದೆ ಅವಳನ್ನು ತಾಯಿಮನೆಗೆ ಕಳುಹಿಸಲಿಲ್ಲ. ಅವಳ ಹೃದಯ ಮನಸ್ಸುಗಳು ಒಂದು ಬಾರಿಗಾದರೂ ಹೆತ್ತ ತಾಯಿತಂದೆ ಮತ್ತು ಬಾಲ್ಯದ ಸ್ನೇಹಿತೆಯರನ್ನು ಕಂಡು ಬರಬೇಕೆಂದು ಬಹಳ ಆಶಿಸುತ್ತಿದ್ದುವು. ಪರಂತು ಮಾವ ಬಿಡಲೊಲ್ಲ.

ಈ ವಿಷಯವಾಗಿ ರಾಮುಲಾಲನಿಗೆ ಪತ್ರ ಬರೆಯುವುದಾದರೂ ಶರದಕುಮಾರಿಯ ಮನಸ್ಸಿಗೆ ಬಾರದು. ಅದರಿಂದ ಅವನು ತೊಂದರೆಗೀಡಾಗಬಹುದೆಂದೂ, ಅಲ್ಲವಾದರೆ ವ್ಯರ್ಥ ಚಿಂತೆ ಮತ್ತು ದುಃಖಕ್ಕೆ ಪಾತ್ರನಾಗಬಹುದೆಂದೂ ಅವಳು ಹೆದರಿದ್ದಾಳೆ. ಮಾವನ ಮನೆಯ ಎಲ್ಲಾ ಕಷ್ಟಗಳನ್ನು ಕಹಿ ಔಷಧಿಯಂತೆ ಗುಟುಕು ಗುಟುಕಾಗಿ ಅನುಭವಿಸುತ್ತಾಳೆ. ಬಳುವಳಿಯ ಕಾರಣದಿಂದ ಸಮಾಜದಲ್ಲಿ ಹೀಗೆ ಎಷ್ಟು ಮಂದಿ ಭಗಿನಿಯರು ಕಷ್ಟವನ್ನು ಅನುಭವಿಸುತ್ತಿದ್ದಾರೋ ಯಾರು ಬಲ್ಲರು? ಶರದಕುಮಾರಿಯ ಕಷ್ಟಗಳಿಗೆ ಜವಾಬುದಾರರು ಯಾರು—ಶರದಕುಮಾರಿಯೆ? ರಾಮುಲಾಲನೆ? ಅಥವಾ ಸಮಾಜವೆ?—ಇದರ ನಿರ್ಣಯವನ್ನು ಪಾಠಕರೇ ಮಾಡಬೇಕು.

THE PIE-MONEY BANK LTD.,
Maidan Road, MANGALORE.
Undertakes all kinds of Banking Business. Current accoun at 2½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/- to Rs. 5000 run regularly on systematic lines. Unique Banking facilitie to Businessmen and interested Public.
Apply for particulars—
K. R. GURU, *Managing Director*

ಬರ್ಮಾ-ರಸ್ತೆ

ಪ್ರಪಂಚದ ಅದ್ಭುತಗಳಲ್ಲಿ ಇದೊಂದು

ಯುರೋಪಿನಲ್ಲಿ ಯುದ್ಧವಾರಂಭವಾದ ಮೇಲೆ ಅಂತರ್‍ರಾಷ್ಟ್ರೀಯ ಪರಿಸ್ಥಿತಿಯಿಂದಾಗಿ ಸ್ವಲ್ಪ ಸಮಯ ಕ್ಲೋಸ್ಪರ ಮುಚ್ಚಬೇಕಾಗಿ ಬಂದ ಬರ್ಮಾ ರಸ್ತೆಯ ಇತಿಹಾಸವು ರೋಮಾಂಚನಕಾರಿಯಾಗಿದೆ. ಇದು ಪ್ರಪಂಚದ ಅದ್ಭುತಗಳಲ್ಲಿ ಒಂದಾಗಿದ್ದು, ಇದನ್ನು ನಿರ್ಮಿಸಿದ ಇಂಜಿನಿಯರರ ಬುದ್ಧಿ ಕುಶಲತೆಯು ಮನುಷ್ಯನ ಅಪಾರವಾದ ಶಕ್ತಿ ಸಾಮರ್ಥ್ಯಗಳಿಗೆ ಒಂದು ಉತ್ಕೃಷ್ಟ ದೃಷ್ಟಾಂತವಾಗಿರುವುದು.

ಏಳ್ನೂರು ಮೈಲುಗಳಷ್ಟು ಉದ್ದವಾದ ಈ ರಸ್ತೆಯನ್ನು ದೇಶಪ್ರೇಮದ ದಿವ್ಯ ಭಾವನೆಯಿಂದ ಪ್ರೇರಿತರಾದ ಚೀನೀ ಜನರು ಪರಸ್ಪರ ಸಹಕಾರ ಸಹಾಯ ಕೊಟ್ಟು ಕಡಿಸಿದರು. ಇದು ಬರ್ಮಾ ಚೀನ ಗಡಿಯಿಂದ ಆರಂಭವಾದ ಚೀನೀ ಜಪಾನ ಕಲಹದ ರಂಗಕ್ಷೇತ್ರವಾಗಿರುವ ಚಂಗ್‌ಕಿಂಗ ರಾಜಧಾನಿಯ ತನಕ ಹೋಗಿದೆ. ಎರಡು ವರ್ಷಗಳಲ್ಲಿ ಈ ಕೆಲಸವನ್ನು ಮುಗಿಸಲಿಕ್ಕೆ ೧೬೦,೦೦೦ ಜನರು ಸತತ ಪರಿಶ್ರಮ ಮಾಡಿದರು. ಇವರಲ್ಲಿ ಪುರುಷರು ಮಾತ್ರವಲ್ಲದೆ ಸ್ತ್ರೀಯರೂ ಬಾಲಕರೂ ಇದ್ದರು. ಆದರೆ ಮಾರ್ಗದರ್ಶಕರಾಗಿ ಕೆಲಸ ಮಾಡಿದ ಇಂಜಿನಿಯರರ ಸಂಖ್ಯೆ ೨೦೦ರನ್ನು ಮೀರಿರಲಿಲ್ಲ. ಈ ಇಂಜಿನಿಯರರಲ್ಲಿ ಅನೇಕ ಮಂದಿ ಬ್ರಿಟಿಷರು ಮತ್ತು ಅಮೇರಿಕನರು ಆಗಿದ್ದರು. ಆಪತ್ತಿನಲ್ಲಿ ಸಿಲುಕಿದ ಚೀನಕ್ಕೆ ಸಹಾಯ ಮಾಡುವುದಕ್ಕಾಗಿಯೇ ಅವರು ತಮ್ಮ ಸೇವೆಯನ್ನು ಒಪ್ಪಿಸಿದ್ದರು.

ಕೊರಕಲು ಮಾರ್ಗ

ಈ ರಸ್ತೆಯು ದುರ್ಗಮವಾದ ಬಹು ದೂರದ ತನಕ ಇರುವ ಕೊರಕಲನ್ನು ಹಾದು ಹೋಗಿರುವುದು. ರಸ್ತೆಯು ದೊಡ್ಡ ದೊಡ್ಡ ಪರ್ವತಗಳನ್ನು ಮಾಲಾಕಾರವಾಗಿ ಸುತ್ತಿಕೊಂಡು ಹೋಗಿದೆ. ಈ ರಸ್ತೆಯು ೩೦೦ ದೊಡ್ಡ ಸೇತುವೆಗಳಿಂದಲೂ ೬೦೦೦ ಲೋರಿಗಳಿಂದಲೂ ಆಗಿದೆ. ಎರಡು ಟನ್ನಿನ ನೂರಾರು ಮೋಟರು ಲೋರಿಗಳು ದಿನಂಪ್ರತಿ ಯಾವಾಗಲೂ ಓಡಾಡುತಿದ್ದು ಕೆಡದಷ್ಟು ಭದ್ರವಾಗಿ ಈ ರಸ್ತೆಯು ಕಟ್ಟಲ್ಪಟ್ಟಿದೆ. ಚೀನಕ್ಕೆ ಬೇಕಾದ ಸಾಹಿತ್ಯೋಪಕರಣಗಳು ಅಮೇರಿಕ ಮತ್ತು ರಶ್ಯದಿಂದ ಬರುವ ಸಮುದ್ರ ಮಾರ್ಗಗಳಿಗೆ ಜಪಾನು ದಿಗ್ಬಂಧನ ಹಾಕಿದರೆ, ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದು ಕಷ್ಟವಾಗುವುದೆಂಬ ಮನವರಿಕೆಯಾಗಿಯೇ ಚೀನದ ರಾಷ್ಟ್ರೀಯ ಸರಕಾರವು ಈ ರಸ್ತೆಯನ್ನು ಕಡಿಯುವ ಮಹಾಕಾರ್ಯದಲ್ಲಿ ಪ್ರವೃತ್ತವಾಯಿತು. ಈಗ ರಂಗೂನು ಮೂಲಕವಾಗಿ ಚೀನೀ ಸರಕಾರವು ತನಗೆ ಬೇಕಾದ ಯಾವತ್ತು ಸಾಮಾನುಗಳನ್ನು ಹೊರದೇಶಗಳಿಂದ ಬೇಕಾದಷ್ಟು ತರಿಸಿಕೊಳ್ಳಬಹುದಾಗಿದೆ.

ಮಾರ್ಕೊಪೊಲೋ ಸಂಚರಿಸಿದ ಹಾದಿ

೩೫೦ ಮೈಲು ಉದ್ದವಾಗಿರುವ ಆಟಿಂಗದಿಂದ ಚಾಕನೊನದ ತನಕ ಇರುವ ಬರ್ಮಾ ರಸ್ತೆಯ ಮೊದಲನೆ ಭಾಗವು ಅತ್ಯಂತ ಪ್ರಾಚೀನವಾಗಿದ್ದು ಇತಿಹಾಸ ಪ್ರಸಿದ್ಧವಾಗಿದೆ. ಇದು ಪುರಾತನ ಕಾಲದಲ್ಲಿ ಒಂಟೆಗಳು ಹೋಗುವ ಕಾಲುದಾರಿ ಆಗಿದ್ದಿತು. ಜಪಾನಿ ಸಾಮ್ರಾಜ್ಯವೆಂಬುದೊಂದು ಇರುವುದೆಂಬ ತಿಳಿವು ಕೂಡ ಯುರೋಪಿಯನರಿಗೆ ಇಲ್ಲದಿದ್ದ ಆ ಕಾಲದಲ್ಲಿ ಮಾರ್ಕೊಪೊಲೋ ಎಂಬ ಯುರೋಪಿನ ಭೂಲೋಕ ಸಂಚಾರಿಯು ಈ ಮಾರ್ಗದಲ್ಲಿ ನಡೆದು ಜಪಾನ್ ಸಾಮ್ರಾಜ್ಯವನ್ನು ಸುತ್ತಾಡಿದ್ದನು. ಈ ಕಾಲುದಾರಿಯನ್ನೇ ಅಗಲವಾಗಿ ಕಡಿದು ಚೀನಿ ಜನರು ವಾಹನಾದಿಗಳ ಸಂಚಾರಕ್ಕೆ ಅನುಕೂಲವಾಗುವಂತೆ ಪುನಃ ಕಟ್ಟಿದರು. ಕೆಲ ಕೆಲವು ಕಡೆಗಳಲ್ಲಿ ಈ ರಸ್ತೆಯು ೧೮-೨೪ ಅಡಿಗಳಷ್ಟು ಅಗಲವಾಗಿದೆ. ಆದರೆ ಎಲ್ಲಿಯೂ ಅದು ೧೧ ಅಡಿಗಳಿಗಿಂತ ಕಡಿಮೆ ಅಗಲವಾಗಿಲ್ಲ. ಈ ರಸ್ತೆಗೆ ಕಲ್ಲು ಹಾಕುವುದು, ಡಾಮಾರು ಹಾಕುವುದು ಮೊದಲಾದ ಎಲ್ಲಾ ಕ್ರಿಯೆಗಳಿಗೆ ಆಧುನಿಕ ಯಾವ ಸಲಕರಣೆಗಳನ್ನು ಉಪಯೋಗಿಸಿರುವುದಿಲ್ಲ. ಚೀನಿ ಜನರು ಅಲ್ಲಲ್ಲಿ ಸಿಗುವ ಕಲ್ಲಿನ ರೋಲರು ಮೊದಲಾದವುಗಳಿಂದ ತಮ್ಮ ಕೆಲಸಗಳನ್ನು ಸಾಧಿಸಿದ್ದಾರೆ.

ಭಗೀರಥ ಸಾಧನೆ

ಈ ರಸ್ತೆಯನ್ನು ಕಡಿಯಲಿಕ್ಕೆ ಎಷ್ಟೋ ಮಿಲಿಯನ ಗಜ ಕಲ್ಲುಗಳನ್ನು ಭೂಮಿಯಿಂದ ಒಡೆದು ತೆಗೆಯಬೇಕಾಯಿತು. ನೂರಾರು ಸೇತುವೆಗಳನ್ನೂ ಸಾವಿರಾರು ಮೋರಿಗಳನ್ನು ಕಟ್ಟಬೇಕಾಯಿತು. ಇಂಥ ಅಗಾಧವಾದ ಕೆಲಸವನ್ನು ಚೀನಿ ಜನರು ಆಧುನಿಕ ಉಪಕರಣಗಳ ಯಾವ ಸಹಾಯವೂ ಇಲ್ಲದೆ ಕೇವಲ ಎರಡು ವರ್ಷಗಳಲ್ಲಿ ಸಾಧಿಸಿದರು ಎಂಬುದು ಅವರ ಶಾರೀರ ಶಕ್ತಿ ಮತ್ತು ಧೈರ್ಯ ಸ್ಥೈರ್ಯಗಳನ್ನಷ್ಟೇ ಅಲ್ಲ, ದೇಶಪ್ರೇಮವನ್ನೂ ವ್ಯಕ್ತಮಾಡುತ್ತದೆ. ಚೀನ ಸರಕಾರವು ಸಾವಿರಾರು ಮೋಟರು ವಾಹನಗಳನ್ನು ಈ ರಸ್ತೆಯ ಮೂಲಕ ಅಮೇರಿಕದಿಂದ ತರಿಸಿಕೊಂಡಿರುವುದು ಮತ್ತು ಸಾವಿರಾರು ಡ್ರೈವರರಿಗೆ ತರಬೇತಿಯನ್ನು ಕೊಟ್ಟಿರುವುದು ಈ ರಸ್ತೆಯ ಕೆಲಸವು ನಡೆಯುತ್ತಿರುವಾಗ ಬಹಳ ಅಪಘಾತಗಳು ಸಂಭವಿಸಿದ್ದುವು. ರೋಗರುಜಿನಗಳಿಗೆ ಬಲಿಯಾಗಿ ನೂರಾರು ಮಂದಿ ಕೆಲಸಗಾರರು ಪ್ರಾಣ ಕೊಟ್ಟಿದ್ದಾರೆ. ಕಲ್ಲುಗಳನ್ನು ಒಡೆಯುವಾಗ ಅಪಘಾತಗಳಾಗಿ ಬೇರೆ ನೂರಾರು ಮಂದಿ ಸತ್ತು ಹೋಗಿದ್ದಾರೆ. ಸೇತುವೆಗಳನ್ನು ಕಟ್ಟುವಾಗಲು ನೂರಾರು ಮಂದಿ ನೀರಲ್ಲಿ ಮುಳುಗಿದ್ದಾರೆ. ಹೀಗೆ ಸಾವಿರಾರು ಜನರು ಸತ್ತರಾದರೂ ಈ ಚೀನಿ ಜನರಿಗೆ, ದೇಶರಕ್ಷಣೆಗಾಗಿ ತಾವು ಮಾಡಿದ ಈ ತ್ಯಾಗ ಬಹಳ ಅಲ್ಪವೆಂದೇ ತೋರಿದೆ.

ಅರುಣ
ಗರ್ಭಾಶಯಕ್ಕೆ ಅತ್ಯುತ್ತಮ
ಟಾನಿಕ್
ಮುಟ್ಟಿನದೋಷಗಳನ್ನೆಲ್ಲಾ ಸರಿಪಡಿಸುತ್ತದೆ
ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.
K. A. 3

ESTD. 1906.

CANARA BANK LIMITED.

ANNOUCEMENT.

On and after February, 1941 Fixed Deposits will be accepted at the following rates —

3, 4 & 5 months	2¼%.
6, 7 & 8 months	2½%.
9, 10 & 11 months	2¾%.
12 months	3%.
24 months	3½%.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ... ಗರ್ಭಧಾರಣ ಬಂದಾಗುವುದು. ... [illegible]

ಜಿಲ್ಲಾ ಸಮಾಚಾರ



ಮಂಗಳೂರು

ಹಿಂದೂ—ಮುಸ್ಲಿಂ ಗಲಭೆ — ತಾ ೨ರಂದು ರಾತ್ರಿ ಶ್ರೀ ವೆಂಕಟರಮಣ ದೇವಸ್ಥಾನದ ಮ[illegible]ಯ ಉತ್ಸವವು ಚಿತ್ರಾ ಟಾಕೀಸಿನ ಸಮೀಪದಲ್ಲಿರುವ ಸಾಮಿದು ಪಳ್ಳಿಯನ್ನು ದಾಟಿ [illegible] ಹೋಗಿ ಹಿಂದಿರುಗಿ ಬರುತ್ತಿರುವಾಗ ಒಮ್ಮೆಲೇ ಗಲಾಟೆಯುಂಟಾಗಿ ಹಿಂದು ಮುಸಲ್ಮಾನ ಉಭಯತ[illegible] ಕೆಲವರಿಗೆ ಗಾಯಗಳಾದುವು. ಒಬ್ಬ ಪೋಲೀಸನಿಗೂ ಗಾಯ ಸಂಭವಿಸಿತ [illegible] ಟೆಯ—ಅನುಮಾನದಿಂದ ಮೊದಲೇ ಪೋಲೀಸರನ್ನು ನಿಲ್ಲಿಸಿದ್ದರೂ ಹೆಚ್ಚಿನ [illegible] ಲ್ಲ.

ಮರುದಿವಸ [illegible] ಒಂದು ರೆಸ್ಟೋರೆಂಟಿಗೆ [illegible] ಹೋಗುವ ಒಬ್ಬ ಬ್ರಾಹ್ಮಣನನ್ನೂ ಒಂದರದಲ್ಲಿ ತಮ್ಮ ಒಂದು ಶಾಲೆಯ [illegible] ಹೋದ [illegible]ನ್ನು ಕೆನರಾ ಬೇಂಕಿನ ಬಂದರ ಶಾಖೆಗೆ [illegible] ಹೋಗುವ [illegible] ಕ್ಲಾರ್ಕರನ್ನೂ ಮುಸಲ್ಮಾನರು ಹೊಡೆದರು. ಇದರಿಂದಾಗಿ ಹಿಂದುಗಳೂ ಮುಸಲ್ಮಾನರ ಮೇಲೆ ಹೊಡೆಯಲು ಆರಂಭಿಸಿದರು. [illegible] ಈ ರೀತಿ ವಿಕೋಪಕ್ಕೆ ಹೋದುದನ್ನು ಕಂಡ [illegible] ಸಾರಸ್ವತ ಬ್ರಾಹ್ಮಣ ಸಮಾಜದ ಕೆಲವು ಮುಖಂಡರೂ, ಮುಸಲ್ಮಾನರಲ್ಲಿ ಕೆಲವು ಮುಖಂಡರೂ ಕೂಡಿ ಒಪ್ಪಂದ ಮಾಡಿಕೊಂಡರು. ಆನಂತರ ಯಾವ [illegible]ಯೂ ನಡೆದಿಲ್ಲ. [illegible] ಪೋಲೀಸರು ವಾರ್ಡುಗಳಲ್ಲಿ [illegible] ದಿಂದ ಕಾಯುತ್ತಿದ್ದಾರೆ.

ಸತ್ಯಾಗ್ರಹ

ಶ್ರೀ ಕೆ ಕೇಶವ ಶೆಣೈ (ಮಂಗಳೂರು) — ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ [illegible] ಕೇಶವ ಶೆಣೈಯವರು ತಾ ೩ರಲ್ಲಿ ಕೆನರಾ ಹೈಸ್ಕೂಲಿನ ಮುಂದುಗಡೆ ಯುದ್ಧವಿರುದ್ಧ ಘೋಷಣೆ ಹೇಳಿ ಸತ್ಯಾಗ್ರಹ ಮಾಡಿದರು. ಅವರನ್ನು ಸೆರೆಹಿಡಿದು ವಿಚಾರಣೆ ನಡೆಸಿ [illegible] ತಿಂಗಳ ಕಠಿಣ ಶಿಕ್ಷೆ ೨೦೦ ರೂಪಾಯಿ [illegible] ದಂಡ ವಿಧಿಸಲಾಗಿದೆ.

ಗವರ್ನರರ ಆಗಮನ — ಮದ್ರಾಸು ಪ್ರಾಂತದ ಗವರ್ನರರಾಗಿದ್ದ ಸರ್ [illegible] ಹೋಪರು ಮಂಗಳೂರಿಗೆ ತಾ ೩ರಂದು ಬಂದಿದ್ದರು. ಯುದ್ಧ ಸಮಿತಿಯ ಸಭೆ ಸೇರಿಸಿದರು. ಗವರ್ನಮೆಂಟು ಕಾಲೇಜಿನಲ್ಲಿ ಯುದ್ಧವಿಚಾರ [illegible] ಹಣವಿತ್ತರು. ಹಲವು ಕ್ಲಬ್ಬುಗಳಿಗೆ ಸಂದರ್ಶನವಿತ್ತರು.

ಜಿಲ್ಲಾ ಹರಿಜನ ಸೇವಕಸಂಘ:— ಇದರ ೧೯೪೦ನೆಯ ವರ್ಷಕ್ಕೆ ಅಂತ್ಯವಾಗುವ ಎಂಟನೆಯ ವಾರ್ಷಿಕ ವರದಿಯು ಹಸ್ತಗತವಾಗಿದೆ. ಸಮರ್ಥ ಆಡಳಿತಗಾರರಿಂದ, ನುರಿತ ಕೆಲಸಗಾರರಿಂದ ಕೂಡಿದ ಈ ಸಂಸ್ಥೆಯ ಕಾರ್ಯಕಲಾಪಗಳು ಸ್ತುತ್ಯಾರ್ಹವಾಗಿವೆ. ಕುಂದಾಪುರ, ಉಡುಪಿ, ಕಾರ್ಕಳ, ಕಾಸರಗೋಡು, [illegible] ಗಾಡು, ಮಂಜೇಶ್ವರಗಳಲ್ಲಿ ಸಂಘದ ಉಪಶಾಖೆಗಳೂ ಸ್ಥಾಪಿತವಾಗಿ ಕಾರ್ಯಕಲಾಪಗಳನ್ನು ನಡೆಸುತ್ತಿರುವುದು ಅತ್ಯಂತ ಪ್ರಶಂಸನೀಯವಾಗಿದೆ. ಹರಿಜನ ಮಕ್ಕಳ ವಿದ್ಯಾಭ್ಯಾಸ ಅವರಿಗೆ ವಸತಿ ಸೌಕರ್ಯ, ವೈದ್ಯಕೀಯ ಸಹಾಯ ಮೊದಲಾದವುಗಳ ಕಡೆಗೆ ಸಂಘವು ಸಾಕಷ್ಟು ಗಮನಕೊಟ್ಟಿದೆ. ದೇಗುಲಪ್ರವೇಶದಂತಹ ವಿಚಾರವೂ ಸಂಘದ ಉದ್ದೇಶದಲ್ಲಿದೆಯೆಂದು ತಿಳಿದು ನಾವು ಸಂತೋಷ ಪಡುತ್ತೇವೆ. ಶ್ರೀ. ಎಸ್. ಎಸ್. ಶೆಟ್ಟಿಯವರಂತಹ ಸಮರ್ಥ ಸೇವಕರು ದೊರಕಿರುವ ಜಿಲ್ಲಾ ಹರಿಜನ ಸೇವಕಸಂಘಕ್ಕೆ ಭೂಷಣವೆನ್ನುತ್ತೇವೆ.

ಕಾರ್ಕಳ

ಶಿಕ್ಷಣ ಪ್ರದರ್ಶನ:— ಈ ಪ್ರದರ್ಶನವು ಇಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ಕೊನೆಯ ದಿನವಾದ ತಾ ೧ರಂದು ಸಾಯಂಕಾಲ ಸಾರ್ವಜನಿಕ ಸಭೆ ಕೂಡಿ ಅಧ್ಯಕ್ಷರಾದ ಡಾ ಕೆ [illegible] ಶೆಟ್ಟರು ಉತ್ತಮವಾದ ವಸ್ತುಗಳನ್ನು ಪ್ರದರ್ಶನಕ್ಕೆ ಕಳುಹಿಸಿಕೊಟ್ಟ ಶಾಲೆಗಳಿಗೆ ಸರ್ಟಿಫಿಕೇಟುಗಳನ್ನು ಕೊಟ್ಟರು. [illegible] ಶ್ರೀ [illegible] ಕಣ್ಣಪ್ಪನವರು ಪ್ರದರ್ಶನದ ಸಫಲತೆಗೆ ಕಾರಣಭೂತರಾದ ಎಲ್ಲರಿಗೂ ಧನ್ಯವಾದಗಳನ್ನು ಕೊಟ್ಟರು. ಈ ಪ್ರದರ್ಶನಕ್ಕೆ ಜಿಲ್ಲೆಯ ಸುಮಾರು ೩೦ ಪ್ರಾಥಮಿಕ ಶಾಲೆಗಳಿಂದ ೧೫೦೦. ಪ್ರದರ್ಶನ ವಸ್ತುಗಳು ಬಂದಿದ್ದುವು. ಅವುಗಳ ಪೈಕಿ ೧೩೦ ಶಾಲೆಗಳ ೧೦೦೦ ವಸ್ತುಗಳು ಕಾರ್ಕಳ [illegible] ದ್ದುವು. ಪ್ರದರ್ಶನ ಕಮಿಟಿಯ ಅಧ್ಯಕ್ಷರಾದ ಜನ [illegible] ಮಿಸ್ ಮಸ್ಕೆಲ ಎಂ ಎಲ್ ಎ ರವರು [illegible]ಗಳನ್ನು ಸೂಚಿಸಿದರು.

ಉಡುಪಿ

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವರ್ಧಂತಿ.— [illegible] ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕ ವರ್ಧಂತಿಯು ಇದೇ ೨೩/೨——೪೧ರಲ್ಲಿ ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ಪಿ [illegible], ಬಿ ಎ ಬಿ ಎಲ್, ಇವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿಸಲ್ಪಟ್ಟಿತು.

ಬಾರ್ಕೂರಿನಲ್ಲಿ ಶ್ರೀ ಬಿ. ಜಿ. ಕಾಮತರ ದಸ್ತಗಿರಿ:— [illegible] ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ. ಬಿ ಜಿ ಕಾಮತರು ತಾ. ೨1—1—41ರಲ್ಲಿ ಬಾರ್ಕೂರಿನಲ್ಲಿ ಯುದ್ಧವಿರುದ್ಧ ಘೋಷಣೆಗೈದು ಸತ್ಯಾಗ್ರಹವಾಚರಿಸಿದರು. ಅವರನ್ನು ಕೂಡಲೇ ದಸ್ತಗಿರಿ ಮಾಡಿ ಕುಂದಾಪುರಕ್ಕೆ ಕೊಂಡೊಯ್ದು ಲೋಕಪ್ಪಿನಲ್ಲಿರಿಸಲಾಯಿತು. ಶ್ರೀ ಕಾಮತರ ದಸ್ತಗಿರಿಯ ಸಂಬಂಧ ತಾ 1 2—41ರಲ್ಲಿ ಬಾರ್ಕೂರಿನಲ್ಲಿ ಹರತಾಳವ ಆಚರಿಸಲ್ಪಟ್ಟಿತು.

ಮುನಿಸಿಪಲ್ ಸಭೆ:— [illegible] ಸಿಪಲ್ ಕೌನ್ಸಿಲಿನ ವಿಶೇಷ ಸಭೆಯು ತಾ. ೩—೨— 1ನೇ ಸೋಮವಾರ ಸಂಜೆ ಚೇಯರ್ ಮೇನ್ ಶ್ರೀ. [illegible] ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಕಳೆದ ಸಾಮಾನ್ಯ ಸಭೆಯಲ್ಲಿ ಪಾಸಾದ ವಕೀಲರ ನೇಮಕದ ಕುರಿತು [illegible] ಲೋಚನೆ ಜರಗಿತು.

ಪುತ್ತೂರು

ಕೊಳನಾಡು—ವಾಲೆತ್ತೂರು — [illegible] ಯೂನಿಯನ್ ಪಂಚಾಯತ ಬೋರ್ಡಿನ ಇಲೆಕ್ಷನ್ [illegible] ಯವರಿಂದ ತಾ ೨೩—೧—೪೧ರಲ್ಲಿ ಜರಗಿತು. ಜನಾಬ್ [illegible] ಹಸನ್ ಕುಂಞಿ ಸಾಹಿಬ್ [illegible], ಜನಾಬ್ [illegible] ಸಾಹಿಬ್ [illegible] ಮುಸ್ಲಿಮ್ [illegible] ಕಾಮತರ ಶಿವಸಂಕರ ಶೆಟ್ಟಿ [illegible] ವೆಂಕಟಚಾರ್ [illegible] ನಾರಾಯಣ [illegible] ಕರಿಯಪ್ಪ ರೈ [illegible] ರೈ, [illegible] ಸುಬ್ಬರಾವ್ ಮುದಿಯಾರ [illegible] ಜನರಲ್ ಸೀಟಿಗೂ [illegible] ಹರಿಜನ [illegible] ನಾಯಕರನ್ನು [illegible] ಸೀಟಿಗೂ [illegible] ರನ್ನು ಕ್ರಿಶ್ಚನ್ ಸೀಟಿಗೂ ಚುನಾಯಿಸಿರುವರು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ:— ಕಾಂಗ್ರೆಸಿನಲ್ಲಿ ಚುನಾಯಿತ ಸ್ಥಾನವನ್ನು ಪಡೆದಿರುವ ಸದಸ್ಯರೆಲ್ಲ [illegible] ಸತ್ಯಾಗ್ರಹ ಪ್ರತಿಜ್ಞಾ ಪತ್ರಕ್ಕೆ ಸಹಿಮಾಡಿ ಸತ್ಯಾಗ್ರಹಮಾಡಲು ಸಿದ್ಧರಿರದೇ ಇದ್ದಲ್ಲಿ ಅವರು ತಮ್ಮ ಸ್ಥಾನಗಳ ರಾಜೀನಾಮೆ ಕೊಡಬೇಕೆಂದು ಅಖಿಲಭಾರತ ಕಾಂಗ್ರೆಸ್ ಸಮಿತಿಯು ಕಾರ್ಯದರ್ಶಿಗಳು ಗಾಂಧಿಜಯಂತಿ [illegible] ಸೂಚನೆಗಳನ್ನು ಹೊರಡಿಸಿರುವರು.

[illegible] ಪ್ರಾಂತದಲ್ಲಿಯ ಕಾಂಗ್ರೆಸ್ ಕಮಿಟಿಗಳಲ್ಲಿ ಚುನಾಯಿತ ಸ್ಥಾನಗಳಲ್ಲಿದ್ದಂಥ ಪ್ರತಿಯೊಬ್ಬ ಸದಸ್ಯನು ಕೂಡಲೇ ಸತ್ಯಾಗ್ರಹ ಪ್ರತಿಜ್ಞಾಪತ್ರಕ್ಕೆ ಸಹಿಮಾಡದೇ ಇದ್ದಲ್ಲಿ ಪ್ರತಿಜ್ಞಾಪತ್ರಕ್ಕೆ ಸಹಿಮಾಡ[illegible]. ಇಲ್ಲವೆ ಚುನಾಯಿತ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ಈ ಪ್ರಕಾರ [illegible] ಸ್ಥಾನಗಳನ್ನು [illegible] ಗ [illegible] ಸೂಚನೆ.

[illegible] ಸಮಿತಿ [illegible] ಸಮಿತಿ [illegible] ಗ್ರಾಮ ಮತ್ತು ನಗರ ಸಮಿತಿಯ ಸದಸ್ಯರೆಲ್ಲರೂ [illegible] ಗ್ರೆಸ್ಸಿನಲ್ಲಿ ಚುನಾಯಿತ ಸದಸ್ಯರೆನಿಸಿಕೊಳ್ಳುವರು.

[illegible] ಸಂಸ್ಥೆಯಲ್ಲಿ [illegible] ಸದಸ್ಯರು ಸತ್ಯಾಗ್ರಹ [illegible] ಕಾರಣದಿಂದ ಕಾಂಗ್ರೆಸ್ಸು [illegible] ನಲ್ಲಿ [illegible] ಅದೇ ಸಂಸ್ಥೆಯಲ್ಲಿ ಕಾಂಗ್ರೆಸ್ಸಿನ ಧೋರಣೆಯ ವಿರುದ್ಧ ಅಥವಾ ಯುದ್ಧಕ್ಕೆ ಸಹಾಯ [illegible] ಕಾಂಗ್ರೆಸ್ [illegible] ರಾಜೀನಾಮೆ [illegible] ಸದಸ್ಯರನ್ನು ಹೊರಡಿಸಿದವರ ನಮ್ಮ ಪ್ರಾಂತದಲ್ಲಿ [illegible] ಮುನ್ಸಿಪಾಲಿಟಿ ಇಲ್ಲವೇ [illegible] ಕಾಂಗ್ರೆಸ್ [illegible] ಸಹಾಯ [illegible] ಸದಸ್ಯ [illegible] ರಾಜೀನಾಮೆ [illegible] ಪ್ರಕಾರ [illegible] ವರ್ಷದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ [illegible] ತಿಳಿಯಪಡಿಸಬೇಕು.

[illegible] ಸಂಸ್ಥೆಯಲ್ಲಿ [illegible] ಪ್ರಜೆಗಳಲ್ಲಿ [illegible] ಸತ್ಯಾಗ್ರಹ [illegible] ಬೇಕೆಂದು ಇಚ್ಛಿಸಿದಲ್ಲಿ ಅವರು ಸತ್ಯಾಗ್ರಹ ಪ್ರತಿಜ್ಞಾ ಪತ್ರವನ್ನು [illegible] ತಮ್ಮ ಸಂಸ್ಥೆಯ ಪ್ರತಿನಿಧಿ ಅಥವಾ ಸಂಸ್ಥಾನ ಕಾಂಗ್ರೆಸ್ಸಿನ ಮಧ್ಯಾಂತರ ನಮ್ಮ ಕಡೆಗೆ ಕಳಿಸಿಕೊಡಬೇಕು. [illegible] ಅಧ್ಯಕ್ಷ [illegible] ಇವರು ತಿಳಿಸುತ್ತಾರೆ.

ಪ್ರಕಟಣೆ

ದಕ್ಷಿಣ ಕನ್ನಡಾ ಜಿಲ್ಲಾ ಗಜೇಟು

ಲೋಕಲ್ ಮತ್ತು ಮುನಿಸಿಪಲ್ ಡಿಪಾರ್ಟ್‌ಮೆಂಟು — [illegible] ಇಸವಿಯ ಮದ್ರಾಸು ಲೋಕಲ್ ಬೋರ್ಡು ಆಕ್ಟಿನ ನಂಬ್ರ ೧೬೦ (೧ರಿಂದ ೪) ಪ್ರಕರಣಗಳಿಗನುಸಾರವಾಗಿ ದಕ್ಷಿಣಕನ್ನಡಾ ಜಿಲ್ಲಾಬೋರ್ಡು ಪ್ರೆಸಿಡೆಂಟರ ಪ್ರಕಟಣೆ.

೧೯೪೦ನೇ ಇಸವಿ ಮಾರ್ಚ್ಯ ತಿಂಗಳ ತಾ. [illegible]ರ ನಂಬ್ರ ೨೬೦೨ನೇ ಗವರ್ನಮೆಂಟ್ ಹುಕುಮಿಗನುಸಾರವಾಗಿ ದಕ್ಷಿಣ ಕನ್ನಡಾ ಜಿಲ್ಲಾಬೋರ್ಡಿನಲ್ಲಿ ತಾರೀಕು [illegible] ರಲ್ಲಿ ಮಂಜೂರಾದ ನಂಬ್ರ [illegible] ನಿರ್ಣಯದ ಮೇರೆಗೆ ಈ ಕೆಳಗೆ ಕಾಣಿಸಿದ ಸಂಗತಿಗಳ ಪ್ರತಿಯಾಗಿ ವರ್ಷದ [illegible] ಒಳಗೆ ಮುಂದಿನ ವರ್ಷದ ಸರ್ಟಿಫಿಕೇಟ ಲೈಸೆನ್ಸ್ ಬಗ್ಗೆ ಅರ್ಜಿಗಳನ್ನು ಕಳುಹಿಸದಿದ್ದರೆ ನಿಶ್ಚಿತ ದರಗಳಿಗಿಂತ ಶೇಕಡಾ (೫೦) ಐವತ್ತರಂತೆ ಹೆಚ್ಚಿಗೆ ಫೀಸು ವಸೂಲು ಮಾಡಲಾದೀತು.

೧, ಪ್ರಕರಣ ೧೬೦ ೧ ಸಾರ್ವಜನಿಕ ರಸ್ತೆಯ ಮೇಲೆ ಆಕ್ರಮಣಗಳು, ಮೆಟ್ಟಿಲುಗಳು ಮತ್ತು ಚಪ್ಪರ [illegible] ೨, ಪ್ರಕರಣ ೧೬೦ ೩. ಸಾರ್ವಜನಿಕ ರಸ್ತೆಗಳಲ್ಲಿ ಹಂಗಾಮಿ ಚಪ್ಪರಗಳು ವಾ ಇತರ ಕಟ್ಟುವಣೆಗಳು ೩. ಪ್ರಕರಣ ೧೬೦ ೪. ರಸ್ತೆಬದಿಯ ಹಂಗಾಮಿ ಚೀರೋಟಿನ ಸ್ಥಳಗಳ ಬಾಬ್ತು.

ಮೇಲೆ ಹೇಳಿದ ನಿರ್ಣಯದ ಬಾಬ್ತು, ಈ ಪ್ರಕಟಣೆಯು ೧೯೪೧ನೆಯ ಇಸವಿ ಎಪ್ರಿಲ್ ತಾರೀಕು ೧ರಿಂದ ಜಾರಿಗೆ ಬರಲಾದೀತು.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

R, 1 A No 1506/1940

O S No. 106/1936

ರಾಜೀವಿಯಾನ ಲಕ್ಷ್ಮೀ ಅಮ್ಮ ಅರ್ಜಿದಾರಳು.

ಮತ್ತು

ಸುಬ್ರಹ್ಮಣ್ಯ ಆಚಾರ್ಯ—ವಾಮನ ಆಚಾರ್ಯರ ಮಗ—1ನೇ ಪ್ರತಿವಾದಿ . . ಎದ್ರಿ

ಇವರೊಳಗೆ—

ಸದ್ರಿ ಎದ್ರಿಗೆ ಈ ಮೂಲಕ ತಿಳಿಸುವುದೇನೆಂದರೆ,—ಅರ್ಜಿದಾರಳಿಗೆ O S No 106 of 1936ನೇ ದ ವೆಯ ಡಿಕ್ರಿ ಪ್ರಕಾರ ಇನ್ನು ಬರತಕ್ಕ ಐವೇಜುಗಳಿಗೆ ಪರ್ಸನಲ್ ಡಿಕ್ರಿ ಕೊಡಬೇಕಾಗಿ—ಅರ್ಜಿದಾರಳು—ಕೊಟ್ಟ ಮೇಲ್ಕಂಡ ಅರ್ಜಿಯು ಎದ್ರಿಗೆ ನೋಟೀಸು ಒಗ್ಗೆ ತಾ 25—2—1941ಕ್ಕೆ ಹಗಲು ಗಂಟೆ 10ಕ್ಕೆ ಇಟ್ಟಿರುತ್ತದೆ, ಆ ದಿನ ಎದ್ರಿಯು ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜ್ರಾಗಲಿಕ್ಕೆ ತಪ್ಪಿದಲ್ಲಿ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟಿನ ಹುಕುಂ ಪ್ರಕಾರ

ಮೊಕ್ಕಾ ಕಾರ್ಕಳ, ತಾರೀಕು 1—2—41

K G. Kamath,
ಅರ್ಜಿದಾರಳ ಕಡೆ ವಕೀಲ್

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R. I A No 818/1940

O. S 1[illegible]/[illegible]

[illegible] ಗೋಪಾಲಕೃಷ್ಣ ಶೆಣೈ ವಾದಿ ಅರ್ಜಿದಾರ

ಮತ್ತು

ಕೃಷ್ಣಂಮಾ ಹೆಂಗ್ಸು [illegible] ಪ್ರತಿವಾದಿರು

ಇವರೊಳಗೆ

ರೆಸ್ಪಾಂಡೆಂಟರು

9ನೇ ರೆಸ್ಪಾಂಡೆಂಟ್—ಕಮಲ ಪಡೆಕಲ್ ಕೋಟಿಯಪ್ಪ ಪೂಜಾರಿ ಮಗಳು 10ನೇ ರೆಸ್ಪಾಂಡೆಂಟ್—ದೇವಾವತಿ ಅಮ್ಮ—ದೇವಪ್ಪ ಪ್ರಭುಗಳವರ ವಿಧವೆ, ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನೋಟಿನ ವ್ಯಾಜ್ಯದಲ್ಲಿ ವಾದಿ ಅರ್ಜಿದಾರನು ಫೈನಲ್ ಡಿಕ್ರಿ [illegible] ಮಾಡಿದ ಅರ್ಜಿಯು ತಾರೀಕು 26—2—1941ಕ್ಕೆ ತನಿಖೆಗೆ ಇಟ್ಟಿರುತ್ತದೆ. ಸದ್ರಿ ದಿವಸ ನೀವು ಖುದ್ದು ನಿಂದಾಗಲೀ, ವಕೀಲರ ಮುಖಾಂತರವಾಗಲೀ ಕೋರ್ಟಿನ ಮುಂದೆ ಹಗಲು ಗಂಟೆ 11ಕ್ಕೆ ಹಾಜರಾಗಿ ಉಜರ ಹೇಳುವದು. ತಪ್ಪಿದಲ್ಲಿ ಸದ್ರಿ ಅರ್ಜಿಯು ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸಲ್ಪಡುಗುವುದು.

Mangalore 5—2—1941 } **B. R. Vyasaraya Achar.**
Advocate for Petitioner.

ಬರ್ಮಾ-ರಸ್ತೆ

ಪ್ರಪಂಚದ ಅದ್ಭುತಗಳಲ್ಲಿ ಇದೊಂದು

ಯುರೋಪಿನಲ್ಲಿ ಯುದ್ಧವಾರಂಭವಾದ ಮೇಲೆ ಅಂತರ್ರಾಷ್ಟ್ರೀಯ ಪರಿಸ್ಥಿತಿಯಿಂದಾಗಿ ಸ್ವಲ್ಪ ಸಮಯ ಕ್ಲೋಸ್ಸರ ಮುಚ್ಚಬೇಕಾಗಿ ಬಂದ ಬರ್ಮಾ ರಸ್ತೆಯ ಇತಿಹಾಸವು ರೋಮಾಂಚನಕಾರಿಯಾಗಿದೆ. ಇದು ಪ್ರಪಂಚದ ಅದ್ಭುತಗಳಲ್ಲಿ ಒಂದಾಗಿದ್ದು, ಇದನ್ನು ನಿರ್ಮಿಸಿದ ಇಂಜಿನಿಯರರ ಬುದ್ಧಿ ಕುಶಲತೆಯು ಮನುಷ್ಯನ ಅಪಾರವಾದ ಶಕ್ತಿ ಸಾಮರ್ಥ್ಯಗಳಿಗೆ ಒಂದು ಉತ್ಕೃಷ್ಟ ದೃಷ್ಟಾಂತವಾಗಿರುವುದು.

ಏಳ್ನೂರು ಮೈಲಿಗಳಷ್ಟು ಉದ್ದವಾದ ಈ ರಸ್ತೆಯನ್ನು ದೇಶಪ್ರೇಮದ ದಿವ್ಯ ಭಾವನೆಯಿಂದ ಪ್ರೇರಿತರಾದ ಚೀನೀ ಜನರು ಪರಸ್ಪರ ಸಹಕಾರ ಸಹಾಯ ಕೊಟ್ಟು ಕಡಿಸಿದರು. ಇದು ಬರ್ಮಾ ಚೀನ ಗಡಿಯಿಂದ ಆರಂಭವಾದ ಚೀನೀ ಜಪಾನ ಕಲಹದ ರಂಗಕ್ಷೇತ್ರವಾಗಿರುವ ಚುಂಗ್‌ಕಿಂಗ ರಾಜಧಾನಿಯ ತನಕ ಹೋಗಿದೆ. ಎರಡು ವರ್ಷಗಳಲ್ಲಿ ಈ ಕೆಲಸವನ್ನು ಮುಗಿಸಲಿಕ್ಕೆ ೧೬೦,೦೦೦ ಜನರು ಸತತ ಪರಿಶ್ರಮ ಮಾಡಿದರು. ಇವರಲ್ಲಿ ಪುರುಷರು ಮಾತ್ರವಲ್ಲದೆ ಸ್ತ್ರೀಯರೂ ಬಾಲಕರೂ ಇದ್ದರು. ಆದರೆ ಮಾರ್ಗದರ್ಶಕರಾಗಿ ಕೆಲಸ ಮಾಡಿದ ಇಂಜಿನಿಯರರ ಸಂಖ್ಯೆ ೨೦೦ರನ್ನು ಮೀರಿರಲಿಲ್ಲ. ಈ ಇಂಜಿನಿಯರರಲ್ಲಿ ಅನೇಕ ಮಂದಿ ಬ್ರಿಟಿಷರು ಮತ್ತು ಅಮೇರಿಕನರು ಆಗಿದ್ದರು. ಆಪತ್ತಿನಲ್ಲಿ ಸಿಲುಕಿದ ಚೀನಕ್ಕೆ ಸಹಾಯ ಮಾಡುವುದಕ್ಕಾಗಿಯೇ ಅವರು ತಮ್ಮ ಸೇವೆಯನ್ನು ಅರ್ಪಿಸಿದ್ದರು.

ಕೊರಕಲು ಮಾರ್ಗ

ಈ ರಸ್ತೆಯು ದುರ್ಗಮವಾದ ಬಹು ದೂರದ ತನಕ ಇರುವ ಕೊರಕಲನ್ನು ಹಾದು ಹೋಗಿರುವುದು. ರಸ್ತೆಯು ದೊಡ್ಡ ದೊಡ್ಡ ಪರ್ವತಗಳನ್ನು ಮೋಲಾಕಾರವಾಗಿ ಸುತ್ತಿಕೊಂಡು ಹೋಗಿದೆ. ಈ ರಸ್ತೆಯು ೩೦೦ ದೊಡ್ಡ ಸೇತುವೆಗಳಿಂದಲೂ ೬೦೦೦ ಮೋರಿಗಳಿಂದಲೂ ಆಗಿದೆ. ಎರಡು ಟನ್ನಿನ ನೂರಾರು ಮೋಟರು ಲೋರಿಗಳು ದಿನಂಪ್ರತಿ ಯಾವಾಗಲೂ ಓಡಾಡುತ್ತಿದ್ದು ಕೆಡದಷ್ಟು ಭದ್ರವಾಗಿ ಈ ರಸ್ತೆಯು ಕಟ್ಟಲ್ಪಟ್ಟಿದೆ. ಚೀನಕ್ಕೆ ಬೇಕಾದ ಸಾಹಿತ್ಯೋಪಕರಣಗಳು ಅಮೇರಿಕ ಮತ್ತು ರಶ್ಯದಿಂದ ಬರುವ ಸಮುದ್ರ ಮಾರ್ಗಗಳಿಗೆ ಜಪಾನು ದಿಗ್ಬಂಧನ ಹಾಕಿದರೆ, ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದು ಕಷ್ಟವಾಗುವುದೆಂಬ ಮನವರಿಕೆಯಾಗಿಯೇ ಚೀನದ ರಾಷ್ಟ್ರೀಯ ಸರಕಾರವು ಈ ರಸ್ತೆಯನ್ನು ಕಡಿಯುವ ಮಹಾಕಾರ್ಯದಲ್ಲಿ ಪ್ರವೃತ್ತವಾಯಿತು. ಈಗ ರಂಗೂನು ಮೂಲಕವಾಗಿ ಚೀನೀ ಸರಕಾರದವರಿಗೆ ಬೇಕಾದ ಯಾವತ್ತು ಸಾಮಾನುಗಳನ್ನು ಹೊರದೇಶಗಳಿಂದ ಬೇಕಾದಷ್ಟು ತರಿಸಿಕೊಳ್ಳಬಹುದಾಗಿದೆ.

ಮಾರ್ಕೋಪೋಲೋ ಸಂಚರಿಸಿದ ಹಾದಿ

೩೫೦ ಮೈಲು ಉದ್ದವಾಗಿರುವ ಅಟಂಗದಿಂದ ಚಾಕನೊನದ ತನಕ ಇರುವ ಬರ್ಮಾ ರಸ್ತೆಯ ಮೊದಲನೆ ಭಾಗವು ಅತ್ಯಂತ ಪ್ರಾಚೀನವಾಗಿದ್ದು ಇತಿಹಾಸ ಪ್ರಸಿದ್ಧವಾಗಿದೆ. ಇದು ಪುರಾತನ ಕಾಲದಲ್ಲಿ ಒಂಟೆಗಳು ಹೋಗುವ ಕಾಲುದಾರಿ ಆಗಿದ್ದಿತು. ಜಪಾನಿ ಸಾಮ್ರಾಜ್ಯವೆಂಬುದೊಂದು ಇರುವುದೆಂಬ ತಿಳಿವು ಕೂಡ ಯುರೋಪಿಯನರಿಗೆ ಇಲ್ಲದಿದ್ದ ಆ ಕಾಲದಲ್ಲಿ ಮಾರ್ಕೋಪೋಲೋ ಎಂಬ ಯುರೋಪಿನ ಭೂಲೋಕ ಸಂಚಾರಿಯು ಈ ಮಾರ್ಗದಲ್ಲಿ ನಡೆದು ಜಪಾನ್ ಸಾಮ್ರಾಜ್ಯವನ್ನು ಸುತ್ತಾಡಿದ್ದನು. ಈ ಕಾಲುದಾರಿಯನ್ನೇ ಅಗಲವಾಗಿ ಕಡಿದು ಚೀನಿ ಜನರು ವಾಹನಾದಿಗಳ ಸಂಚಾರಕ್ಕೆ ಅನುಕೂಲವಾಗುವಂತೆ ಪುನಃ ಕಟ್ಟಿದರು. ಕೆಲ ಕೆಲವು ಕಡೆಗಳಲ್ಲಿ ಈ ರಸ್ತೆಯು ೧೬-೨೪ ಅಡಿಗಳಷ್ಟು ಅಗಲವಾಗಿದೆ. ಆದರೆ ಎಲ್ಲಿಯೂ ಅದು ೧೦ ಅಡಿಗಳಿಗಿಂತ ಕಡಿಮೆ ಅಗಲವಾಗಿಲ್ಲ. ಈ ರಸ್ತೆಗೆ ಕಲ್ಲು ಹಾಕಿಸುವುದು, ದಾಮಾರು ಹಾಕುವುದು ಮೊದಲಾದ ಎಲ್ಲಾ ಕ್ರಿಯೆಗಳಿಗೆ ಆಧುನಿಕ ಯಾವ ಸಲಕರಣೆಗಳನ್ನು ಉಪಯೋಗಿಸಿರುವುದಿಲ್ಲ. ಚೀನಿ ಜನರು ಅಲ್ಲಲ್ಲಿ ಸಿಗುವ ಕಲ್ಲಿನಕೋಲು ಮೊದಲಾದವುಗಳಿಂದ ತಮ್ಮ ಕೆಲಸಗಳನ್ನು ಸಾಧಿಸಿದ್ದಾರೆ.

ಭಗೀರಥ ಸಾಧನೆ

ಈ ರಸ್ತೆಯನ್ನು ಕಡಿಯಲಿಕ್ಕೆ ಎಷ್ಟೋ ಮಿಲಿಯ ಘನ ಗಜ ಕಲ್ಲುಗಳನ್ನು ಭೂಮಿಯಿಂದ ಒಡೆದು ತೆಗೆಯಬೇಕಾಯಿತು. ನೂರಾರು ಸೇತುವೆಗಳನ್ನೂ ಸಾವಿರಾರು ಮೋರಿಗಳನ್ನೂ ಕಟ್ಟಬೇಕಾಯಿತು. ಇಂಥ ಅಗಾಧವಾದ ಕೆಲಸವನ್ನು ಚೀನಿ ಜನರು ಆಧುನಿಕ ಉಪಕರಣಗಳ ಯಾವ ಸಹಾಯವೂ ಇಲ್ಲದೆ ಕೇವಲ ಎರಡು ವರ್ಷಗಳಲ್ಲಿ ಸಾಧಿಸಿದರು ಎಂಬುದು ಅವರ ಶಾರೀರ ಶಕ್ತಿ ಮತ್ತು ಧೈರ್ಯ ಸ್ಥೈರ್ಯಗಳನ್ನಷ್ಟೇ ಅಲ್ಲ, ದೇಶಪ್ರೇಮವನ್ನೂ ವ್ಯಕ್ತಮಾಡುತ್ತದೆ. ಚೀನಿ ಸರಕಾರವು ಸಾವಿರಾರು ಮೋಟರು ವಾಹನಗಳನ್ನು ಈ ರಸ್ತೆಯ ಮೂಲಕ ಅಮೇರಿಕದಿಂದ ತರಿಸಿಕೊಂಡಿರುವುದು ಮತ್ತು ಸಾವಿರಾರು ಡ್ರೈವರರಿಗೆ ತರಬೇತಿಯನ್ನು ಕೊಟ್ಟಿರುವುದು. ಈ ರಸ್ತೆಯ ಕೆಲಸವು ನಡೆಯುತ್ತಿರುವಾಗ ಬಹಳ ಅಪಘಾತಗಳು ಸಂಭವಿಸಿದ್ದುವು. ರೋಗರುಜಿನಗಳಿಗೆ ಬಲಿಯಾಗಿ ನೂರಾರು ಮಂದಿ ಕೆಲಸಗಾರರು ಪ್ರಾಣ ಕೊಟ್ಟಿದ್ದಾರೆ. ಕಲ್ಲುಗಳನ್ನು ಒಡೆಯುವಾಗ ಅಪಘಾತಗಳಾಗಿ ಬೇರೆ ನೂರಾರು ಮಂದಿ ಸತ್ತು ಹೋಗಿದ್ದಾರೆ. ಸೇತುವೆಗಳನ್ನು ಕಟ್ಟುವಾಗ ಇನ್ನು ನೂರಾರು ಮಂದಿ ನೀರಲ್ಲಿ ಮುಳುಗಿದ್ದಾರೆ. ಹೀಗೆ ಸಾವಿರಾರು ಜನರು ಸತ್ತರಾದರೂ ಈ ಚೀನಿ ಜನರಿಗೆ, ದೇಶರಕ್ಷಣೆಗಾಗಿ ತಾವು ಮಾಡಿದ ಈ ತ್ಯಾಗ ಬಹಳ ಅಲ್ಪವೆಂದೇ ತೋರಿದೆ.

ಮುಟ್ಟುದೋಷಗಳನ್ನೆಲ್ಲಾ ಸರಿಪಡಿಸುತ್ತದೆ
ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.
K. A. 3

ESTD. 1906.

CANARA BANK LIMITED.

ANNOUCEMENT.

On and after February, 1941 Fixed Deposits will be accepted at the following rates —

3, 4 & 5 months	2¼%
6, 7 & 8 months	2½%
9, 10 & 11 months	2¾%
12 months	3%
24 months	3½%

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ್ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ... [illegible]

7—2—1941 ಸ್ವದೇಶಾಭಿಮಾನಿ

ಜಿಲ್ಲಾ ಸಮಾಚಾರ

★

ಮಂಗಳೂರು

ಹಿಂದೂ—ಮುಸ್ಲಿಂ ಗಲಭೆ — [illegible] ತಾ. [illegible]ರಂದು ರಾತ್ರಿ ಶ್ರೀ ವೆಂಕಟರಮಣ ದೇವಸ್ಥಾನದ [illegible] ಉತ್ಸವವು [illegible] ಮಸೀದಿ ಪಳ್ಳಿಯನ್ನು ದಾಟಿ [illegible] ಹೋಗಿ ಹಿಂದಿರುಗಿ [illegible] ಒಮ್ಮೆಲೇ [illegible]ಯುಂಟಾಗಿ ಹಿಂದೂ ಮುಸಲ್ಮಾನ ಉಭಯತ [illegible] ಕೆಲವರಿಗೆ ಗಾಯಗಳಾದುವು [illegible] ಪೋಲೀಸರಿಗೂ [illegible] ಸಂಭವಿಸಿತು [illegible]ಯ ಅನುಮಾನದಿಂದ [illegible] ಪೋಲೀಸ ರನ್ನು ನಿಲ್ಲಿಸಿದ್ದರಿಂದ ಹೆಚ್ಚಿನ [illegible] ಇಲ್ಲ.

ಮರುದಿವಸ [illegible] ಹಿಂದೂ [illegible] ಕೆಲಸಕ್ಕೆ ಹೋಗುವ ಒಬ್ಬ ಬ್ರಾಹ್ಮಣನನ್ನೂ, ಒಂದೆಡೆಯಲ್ಲಿ ತನ್ನ ಒಂದು ಶಾಲೆಯ [illegible] ಹೋದ ಕೆಲವ ರನ್ನೂ [illegible] ಕೆಲಸಕ್ಕೆ ಹೋಗುವ [illegible] ಮುಸಲ್ಮಾನರು [illegible] ಹಿಂದೂಗಳೂ ಮುಸಲ್ಮಾನರ ಮೇಲೆ ಹೊಡೆಯಲು ಆರಂಭಿಸಿದರು. [illegible] ವಿರೋಧಪಕ್ಷ [illegible] ಸಾರಸ್ವತ ಬ್ರಾಹ್ಮಣ ಸಮಾಜದ ಕೆಲವು [illegible] ಮುಸಲ್ಮಾನರಲ್ಲಿ ಕೆಲವು [illegible] ಅನಂತರ [illegible] ಪೋಲೀಸರು [illegible] ಕಾಯುತ್ತಿದ್ದಾರೆ.

ಸತ್ಯಾಗ್ರಹ

ಶ್ರೀ ಕೆ ಕೇಶವ ಶೆಟ್ಟಿ (ಮಂಗಳೂರು) — ಮಂಗಳೂರು [illegible] ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ [illegible] ಶ್ರೀ [illegible] ಕೇಶವ ಶೆಟ್ಟಿಯವರು ತಾ. [illegible] ಕೆನರಾ ಹೈಸ್ಕೂಲಿನ ಮುಂದುಗಡೆ ಯುದ್ಧವಿರುದ್ಧ ಘೋಷಣೆ ಹೇಳಿ ಸತ್ಯಾಗ್ರಹ ಮಾಡಿದರು. ಅವರನ್ನು ಸೆರೆಹಿಡಿದು ವಿಚಾರಣೆ [illegible] ತಿಂಗಳ ಕಠಿಣ ಶಿಕ್ಷೆ [illegible] ರೂಪಾಯಿ ದಂಡ ವಿಧಿಸಲಾಗಿದೆ.

ಗವರ್ನರರ ಆಗಮನ — ಮದ್ರಾಸು ಪ್ರಾಂತದ ಗವರ್ನರರಾಗಿದ್ದ ಸರ್ ಆರ್ಥರ್ ಹೋಪರು ಮಂಗಳೂರಿಗೆ ತಾ. [illegible]ರಂದು ಬಂದಿದ್ದರು. ಯುದ್ಧ ಸಮಿತಿಯ ಸಭೆ ಸೇರಿಸಿದರು. ಗವರ್ನ್‌ಮೆಂಟು ಕಾಲೇಜಿನಲ್ಲಿ ಯುದ್ಧವಿಚಾರ [illegible] ಹಲವು ಕ್ಲಬ್ಬುಗಳಿಗೆ ಸಂದರ್ಶನವಿತ್ತರು.

ಜಿಲ್ಲಾ ಹರಿಜನ ಸೇವಕಸಂಘ:— ಇದರ [illegible]ನೆಯ ವರ್ಷಕ್ಕೆ ಅಂತ್ಯವಾಗುವ ಎಂಟನೆಯ ವಾರ್ಷಿಕ ವರದಿಯು ಹಸ್ತಗತವಾಗಿದೆ. ಸಮರ್ಥ ಆಡಳಿತಗಾರರಿಂದ, [illegible] ಕಾರರಿಂದ ಕೂಡಿದ ಈ ಸಂಸ್ಥೆಯ ಕಾರ್ಯಕಲಾಪಗಳು ಸ್ತುತ್ಯಾರ್ಹವಾಗಿವೆ. ಕುಂದಾಪುರ ಉಡುಪಿ, ಕಾರ್ಕಳ, [illegible] ಮಂಜೇಶ್ವರಗಳಲ್ಲಿ ಸಂಘದ ಉಪಶಾಖೆಗಳು ಸ್ಥಾಪಿತವಾಗಿ ಕಾರ್ಯಕಲಾಪಗಳನ್ನು ನಡೆಸುತ್ತಿರುವುದು ಅತ್ಯಂತ ಪ್ರಶಂಸನೀಯವಿದೆ. ಹರಿಜನ ಮಕ್ಕಳ ವಿದ್ಯಾಭ್ಯಾಸ ಅವರಿಗೆ ವಸತಿ [illegible] ವೈದ್ಯಕೀಯ ಸಹಾಯ ಮೊದಲಾದವುಗಳ ಕಡೆಗೆ ಸಂಘವು ಸಾಕಷ್ಟು ಗಮನಕೊಟ್ಟಿದೆ. ದೇಗುಲಪ್ರವೇಶದಂತಹ ವಿಚಾರವೂ ಸಂಘದ ಉದ್ದೇಶದಲ್ಲಿ ಸೇರಿದೆಯೆಂದು [illegible] ನಾವು [illegible] ಶ್ರೀ. ಎಸ್. ಎಸ್. [illegible] ಶೆಟ್ಟಿಯವರಂತಹ ಸಮರ್ಥ ಸೇವಕರು ದೊರಕಿರುವ ಜಿಲ್ಲಾ ಹರಿಜನ ಸೇವಕಸಂಘಕ್ಕೆ ಭೂಷಣವೆನ್ನುತ್ತೇವೆ.

ಕಾರ್ಕಳ

ಶಿಕ್ಷಣ ಪ್ರದರ್ಶನ:— ಈ ಪ್ರದರ್ಶನವು ಇಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು ಕೊನೆಯ ದಿನವಾದ [illegible]ರಂದು ಸಾಯಂಕಾಲ ಸಾರ್ವಜನಿಕ ಸಭೆ ಕೂಡಿ ಅಧ್ಯಕ್ಷರಾದ ಡಾ ಕೆ [illegible] ಶೆಟ್ಟರು ಉತ್ತಮವಾದ ವಸ್ತುಗಳನ್ನು ಪ್ರದರ್ಶನಕ್ಕೆ ಕಳುಹಿಸಿಕೊಟ್ಟ [illegible] ಸರ್ಟಿಫಿಕೇಟುಗಳನ್ನು ಕೊಟ್ಟರು [illegible] ಶ್ರೀ ಯು ಕಣ್ಣಪ್ಪನವರು ಪ್ರದರ್ಶನದ ಸಫಲತೆಗೆ [illegible] ಧನ್ಯವಾದಗಳನ್ನು [illegible] ಈ ಪ್ರದರ್ಶನಕ್ಕೆ ಜಿಲ್ಲೆಯ [illegible] ಪ್ರಾಥಮಿಕ ಶಾಲೆಗಳಿಂದ [illegible] ಪ್ರದರ್ಶನ ವಸ್ತುಗಳು ಬಂದಿದ್ದುವು [illegible] ಶಾಲೆಗಳ [illegible] ವಸ್ತುಗಳು [illegible] ಪ್ರದರ್ಶನ ಕಮಿಟಿಯ ಅಧ್ಯಕ್ಷರಾದ ಜನಾಬ್ [illegible] ಯುಸುಫ್ ಹುಸ್ಸೇನ್, [illegible] ವರು [illegible] ಸೂಚಿಸಿದರು.

ಉಡುಪಿ

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವರ್ಧಂತಿ.— ಉಡುಪಿಯ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕ ವರ್ಧಂತಿಯು ಇದೇ ತಾ [illegible]ರಲ್ಲಿ ಡಿಸ್ಟ್ರಿಕ್ಟ್ ಮುನ್ಸೀಫ್ ಶ್ರೀ [illegible] ಬಿ. ಎ., ಬಿ. ಎಲ್., ಇವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಆಚರಿಸಲ್ಪಟ್ಟಿತು.

ಬಾರ್ಕೂರಿನಲ್ಲಿ ಶ್ರೀ ಬಿ. ಜಿ ಕಾಮತರ ದಸ್ತಗಿರಿ:— ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ ಬಿ ಜಿ ಕಾಮತರು ತಾ. 31—1—41ರಲ್ಲಿ ಬಾರ್ಕೂರಿನಲ್ಲಿ ಯುದ್ಧವಿರುದ್ಧ ಘೋಷಣೆಗೈದು ಸತ್ಯಾಗ್ರಹವಾಚರಿಸಿದರು. ಅವರನ್ನು ಕೂಡಲೇ ದಸ್ತಗಿರಿ ಮಾಡಿ ಕುಂದಾಪುರಕ್ಕೆ ಕೊಂಡೊಯ್ದು ಲಾಕಪ್ಪಿನಲ್ಲಿ ಇರಿಸಲಾಯಿತು. ಶ್ರೀ ಕಾಮತರ ದಸ್ತಗಿರಿಯ ಸಂಬಂಧ [illegible] 1 2—41ರಲ್ಲಿ ಬಾರ್ಕೂರಿನಲ್ಲಿ ಹರತಾಳ ಆಚರಿಸಲ್ಪಟ್ಟಿತು.

ಮುನಿಸಿಪಲ್ ಸಭೆ:— ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯು ತಾ [illegible]—1ನೇ ಸೋಮವಾರ ಸಂಜೆ ಚೆಯರ್‌ಮೆನ್ ಶ್ರೀ [illegible] ಇವರ ಅಧ್ಯಕ್ಷತೆಯಲ್ಲಿ ಕಳೆದ ಸಾಮಾನ್ಯ ಸಭೆಯಲ್ಲಿ ಪಾಸಾದ [illegible] ಚರ್ಚಿಸುವರೆ ಜರಗಿತು.

ಪುತ್ತೂರು

ಕೊಳನಾಡು—ಸಾಲೆತ್ತೂರು — [illegible] ಯೂನ್ಯಾಟಿಡ್ ಪಂಚಾಯತ ಬೋರ್ಡಿನ ಇಲೆಕ್ಷನ್ [illegible] ಜರಗಿತು. ಜನಾಬ್ [illegible] ಸಾಹೆಬ್ [illegible] ಜನಾಬ್ [illegible] ಮುಸ್ಲಿಮ್ [illegible] ಮುಸ್ಲಿಂ [illegible] ಬ್ರಾಹ್ಮಣ [illegible] ಬಂಟ್ಸ್ [illegible] ಶೆಟ್ಟಿ [illegible] ಸುಬ್ರಹ್ಮಣ್ಯ [illegible] ಜನರಲ್ [illegible] ತೆಗೆದ [illegible] ರಾಮನಾಯ್ಕರನ್ನು [illegible] ಕ್ರಿಶ್ಚನ್ [illegible] ನಾಯಿಕರವರು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ:— ಕಾಂಗ್ರೆಸಿನಲ್ಲಿ ಚುನಾಯಿತ ಸ್ಥಾನವನ್ನು ಹೊಂದಿರುವ ಸದಸ್ಯರಲ್ಲಿ ಯಾರಾದರೂ ಸತ್ಯಾಗ್ರಹಪ್ರತಿಜ್ಞಾ ಪತ್ರಕ್ಕೆ ಸಹಿಮಾಡಿ ಸತ್ಯಾಗ್ರಹ ಮಾಡಲು ಸಿದ್ಧರಿರದೇ ಇದ್ದಲ್ಲಿ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಬೇಕೆಂದು ಅಖಿಲಭಾರತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ಗಾಂಧೀಜಿಯವರ ಸಲಹೆಯ ಮೇರೆಗೆ [illegible] ಸೂಚನೆಗಳನ್ನು ಹೊರಡಿಸಿರುವರು

[illegible] ಪ್ರಾಂತದಲ್ಲಿಯೂ ಕಾಂಗ್ರೆಸ್ ಕಮಿಟಿಗಳಲ್ಲಿ ಚುನಾಯಿತ ಸ್ಥಾನಗಳಲ್ಲಿದ್ದಂತಹ ಪ್ರತಿಯೊಬ್ಬ ಸದಸ್ಯನೂ ಕೂಡಲೇ ಸತ್ಯಾಗ್ರಹ ಪ್ರತಿಜ್ಞಾಪತ್ರಕ್ಕೆ ಸಹಿಮಾಡದೇ ಇದ್ದಲ್ಲಿ ಪ್ರತಿಜ್ಞಾಪತ್ರಕ್ಕೆ ಸಹಿಮಾಡದ ಹೊರತು ಇಲ್ಲವೆ ಚುನಾಯಿತ ಸ್ಥಾನಕ್ಕೆ ರಾಜೀನಾಮೆ ಕೊಡದೇ [illegible] ಈ ಪ್ರಕಾರ ತಮ್ಮ ಸ್ಥಾನಗಳನ್ನು [illegible] ಗಾಂಧೀಜಿಯವರ ಸೂಚನೆ.

[illegible] ಸಮಿತಿ [illegible] ಗ್ರಾಮವರ್ಗದ ಸಮಿತಿಯ ಸದಸ್ಯರೆಲ್ಲರೂ ಕಾಂಗ್ರೆಸ್ಸಿನಲ್ಲಿ ಚುನಾಯಿತ ಸದಸ್ಯರೆನಿಸಿಕೊಳ್ಳುವರು.

ಯಾವ್ಯಾವುದರಿಂದ ಸ್ಥಾನಿಕ ಸಂಸ್ಥೆಯಲ್ಲಿ [illegible] ಕಾಂಗ್ರೆಸ್ಸು [illegible] (ಸ್ಟೆಚ್ಯುಟರಿ)ದಲ್ಲಿ [illegible]ಯಿದ್ದರೆ [illegible] ಅದರ ಸಂಸ್ಥೆಯಲ್ಲಿ ಕಾಂಗ್ರೆಸ್ಸಿನ [illegible] ಅಥವಾ [illegible] ಕಾಂಗ್ರೆಸ್ ಸದಸ್ಯರು ತಮ್ಮ ಸ್ಥಾನಗಳ [illegible] ರಾಜೀನಾಮೆ [illegible] ನಮ್ಮ ಪ್ರಾಂತದಲ್ಲಿ ಯಾವ [illegible] ಕಾಂಗ್ರೆಸ್ [illegible] ಕಾಂಗ್ರೆಸ್ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡತಕ್ಕದ್ದು. ಈ ಪ್ರಕಾರ [illegible] ಮುಂಚಿನ ಪೂರ್ವದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅನುಮತಿಯನ್ನು ಪಡೆಯತಕ್ಕದ್ದು.

ಮೇಲಿನ [illegible] ಸತ್ಯಾಗ್ರಹ ಪ್ರತಿಜ್ಞಾ ಪತ್ರವನ್ನು [illegible] ತಮ್ಮ ಸಂಸ್ಥಾನದ ಪ್ರಜಾಮಂಡಲ ಅಥವಾ ಸಂಸ್ಥಾನ ಕಾಂಗ್ರೆಸ್ಸಿನ ಮುಖಾಂತರ ನಮ್ಮ ಕಡೆಗೆ ಕಳುಹಿಸಿಕೊಡಬೇಕೆಂದು ಅಧ್ಯಕ್ಷ [illegible] ಕಮಿಟಿ ಇವರು ತಿಳಿಸುತ್ತಾರೆ.

೨ ಪ್ರಕಟಣೆ

ದಕ್ಷಿಣ ಕನ್ನಡಾ ಜಿಲ್ಲಾ ಗೆಜೇಟು

ಲೋಕಲ್ ಮತ್ತು ಮುನಿಸಿಪಲ್ ಡಿಪಾರ್ಟ್‌ಮೆಂಟು — [illegible] ಮದ್ರಾಸು ಲೋಕಲ್ ಬೋರ್ಡು ಆಕ್ಟಿನ ನಂಬ್ರ [illegible] ಪ್ರಕರಣಗಳಿಗನುಸಾರವಾಗಿ ದಕ್ಷಿಣಕನ್ನಡಾ ಜಿಲ್ಲಾಬೋರ್ಡು ಪ್ರೆಸಿಡೆಂಟರ ಪ್ರಕಟಣೆ

[illegible]ನೇ ಇಸವಿ ಜುಲಾಯಿ ತಿಂಗಳ ತಾ. [illegible]ದ ನಂಬ್ರ [illegible]ನೇ ಗವರ್ನಮೆಂಟ್ ಹುಕುಮಿಗನುಸಾರವಾಗಿ ದಕ್ಷಿಣ ಕನ್ನಡಾ ಜಿಲ್ಲಾಬೋರ್ಡಿನಲ್ಲಿ ತಾರೀಕು [illegible]ರಲ್ಲಿ ಮಂಜೂರಾದ ನಂಬ್ರ [illegible] ನಿರ್ಣಯದ ಮೇರೆಗೆ ಈ ಕೆಳಗೆ ಕಾಣಿಸಿದ ಸಂಗತಿಗಳ ಪ್ರತಿ ಸಾಲಿನ ವರ್ಷದ [illegible] ಒಳಗೆ ಮುಂದಿನ ವರ್ಷದ ನವೀಕರಣದ ಲೈಸನ್ಸ್ ಬಗ್ಗೆ ಅರ್ಜಿಗಳನ್ನು ಕಳುಹಿಸದಿದ್ದರೆ ನಿಶ್ಚಿತ ದರಗಳಿಗಿಂತ ಶೇಕಡಾ (೫೦) ಐವತ್ತರಂತೆ ಹೆಚ್ಚಿಗೆ ಫೀಸು ವಸೂಲು ಮಾಡಲಾದೀತು

೧ ಪ್ರಕರಣ [illegible], ಸಾರ್ವಜನಿಕ ರಸ್ತೆಯ ಮೇಲೆ ಅತಿಕ್ರಮಣಗಳು, ಮೆಟ್ಟಿಲುಗಳು ಮತ್ತು ಚರಂಡಿ ಮುಚ್ಚೋಣ [illegible] ಪ್ರಕರಣ [illegible] ಸಾರ್ವಜನಿಕ ರಸ್ತೆಗಳಲ್ಲಿ ಹಂಗಾಮಿ ಚಪ್ಪರಗಳು ಮತ್ತು ಇತರ ಕಟ್ಟುವಣೆಗಳು. [illegible] ಪ್ರಕರಣ [illegible] ರಸ್ತೆಬದಿಯ ಹಂಗಾಮಿ ಚೀರೋಜಿನ ಸ್ಥಳಗಳ ಬಾಬ್ತು.

ಮೇಲೆ ಹೇಳಿದ ನಿರ್ಣಯದ ಬಾಬ್ತು, ಈ ಪ್ರಕಟಣೆಯು [illegible] ಇಸವಿ ಏಪ್ರಿಲ್ ತಾರೀಕು [illegible]ರಿಂದ ಜಾರಿಗೆ ಬರಲಾದೀತು.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

R. I. A. No. 1806/1940

O S No 106/1936

ರಾಜೀವಿಯಾನ [illegible] ಅಮ್ಮ. ಅರ್ಜಿದಾರಳು

ಮತ್ತು

ಸುಬ್ರಹ್ಮಣ್ಯ ಆಚಾರ್ಯ ಮಾನುನ ಆಚಾರ್ಯರ ಮಗ—1ನೇ ಪ್ರತಿವಾದಿ ವಗೈರೆ

ಇವರೊಳಗೆ—

[illegible] ಸದ್ರಿ ಎದ್ರಿಗೆ ಈ ಮೂಲಕ ತಿಳಿಸುವುದೇನೆಂದರೆ—ಅರ್ಜಿದಾರಳಿಗೆ O. S No 106 of 1936ನೇ ದಾವೆಯ ಡಿಕ್ರಿ ಪ್ರಕಾರ [illegible] ಬರತಕ್ಕ ಇವೇಜುಗಳಿಗೆ ಪರ್ಸನಲ್ ಡಿಕ್ರಿ [illegible] ಪಡೆಯಲಾಗಿ ಅರ್ಜಿದಾರಳು ಕೊಟ್ಟ ಮೇಲ್ಕಂಡ ಅರ್ಜಿಯು ಎದ್ರಿಗೆ ನೋಟೀಸು ಒಗ್ಗೆ ತಾ 25-2-1941ಕ್ಕೆ ಹಗಲು ಗಂಟೆ 10ಕ್ಕೆ ಇಟ್ಟಿರುತ್ತದೆ. ಆ ದಿನ ಎದ್ರಿಯು ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜರಾಗಲಿಕ್ಕೆ ತಪ್ಪಿದಲ್ಲಿ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟು ಹುಕುಂ ಪ್ರಕಾರ

ಮೊಕ್ಕಾ ಕಾರ್ಕಳ, ತಾರೀಕು 1—2—41

K. G. Kamath,

ಅರ್ಜಿದಾರಳ ಕಡೆ ವಕೀಲ್

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R. I. A. No 868/1940

O S 1[illegible]/36

ಸಡ್ಡಿ ಗೋಪಾಲಕೃಷ್ಣ ಶೆಟ್ಟಿ ವಾದಿ ಅರ್ಜಿದಾರ

ಮತ್ತು

ಕೃಷ್ಣಂಮಾ ಹೆಗ್ಗಡ್ತಿ ವಗೈರಾ ಪ್ರತಿವಾದಿಗಳು

ಇವರೊಳಗೆ

[illegible] ರೆಸ್ಪಾಂಡೆಂಟರು. 9ನೇ ರೆಸ್ಪಾಂಡೆಂಟ್—ಕಮಲ ಪಡೆಕೊಲ ಕೋಟಿಯಪ್ಪ ಪೂಜಾರಿ ಮಗಳು 10ನೇ ರೆಸ್ಪಾಂಡೆಂಟ್—ನೇತ್ರಾವತಿ ಅಮ್ಮ—ದೇವಪ್ಪ ಪ್ರಭುಗಳವರ ವಿಧವೆ ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲಿನ ಖ್ಯಾಜ್ಯದಲ್ಲಿ ವಾದಿ ಅರ್ಜಿದಾರನು ಫೈನಲ್ ಡಿಕ್ರಿ ಬಗ್ಗೆ ದಾಖಲು ಮಾಡಿದ ಅರ್ಜಿಯು ತಾರೀಕು 26—2—1941ಕ್ಕೆ ತನಿಖೆಗೆ ಇಟ್ಟಿರುತ್ತದೆ. ಸದ್ರಿ ದಿವ್ಸ ನೀವು ಖುದ್ದು ನಿಮ್ಮಾ ವಕೀಲರ ಮುಖಾಂತರವಾಗಲೀ ಕೋರ್ಟು ಮುಂದೆ ಹಗಲು ಗಂಟೆ 11ಕ್ಕೆ ಹಾಜರಾಗಿ ಉತ್ತರಿಸುವರೆ ತಪ್ಪಿದಲ್ಲಿ ಸದ್ರಿ ಅರ್ಜಿಯು ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು.

Mangalore } B. R. Vyasaraya Achar,
5-2-1941 } Advocate for Petitioner.

ಸುಭಾಸಬೋಸರ ಗೊತ್ತುಗುರಿ ಇಲ್ಲ!

ರಾಮಭಾವೂ ತಿಲಕರು ಉಪವಾಸ ನಿಲ್ಲಿಸಿದರು

ಕ್ವೆಟ್ಟಾದಲ್ಲಿ ಭೂಕಂಪವಾಯಿತು!

ಭಾರತದ ಸ್ವಾತಂತ್ರ್ಯ ಐಕ್ಯಮತ್ಯದ ಕಾರ್ಯ ಸಾಧನೆಯಿಂದಲೇ ಲಭಿಸುತ್ತದೆ

ಖಾನ್ ಅಬ್ದುಲ್ ಗಫರ್ ಖಾನರ ಭಾಷಣ

ಖಾನ್ ಅಬ್ದುಲ್ ಗಫರ್ ಖಾನರು ಬನೂ ಜಿಲ್ಲೆಯ ಮಾರವಾರ್ ಪ್ರಾಂತ್ಯದ ಟಿಟಾರ್ ಖೇಲ್‌ನಲ್ಲಿ ಸಂಚಾರ ಮಾಡುತ್ತಾ ಪ್ರಚಾರಕಾರ್ಯ ಮಾಡಿದ್ದಾರೆ. ಟಿಟಾರ್ ಖೇಲ್‌ನಲ್ಲಿ ಸೇರಿದ ಭಾರೀ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತಾ, 'ಭಾರತೀಯರೆಲ್ಲರೂ ಸ್ವಾತಂತ್ರ್ಯಸಾಧನೆಗಾಗಿ ಉತ್ಸಾಹದಿಂದಲೂ ಶ್ರದ್ಧೆಯಿಂದಲೂ ಕೆಲಸಮಾಡಬೇಕು. ಎಲ್ಲರೂ ಐಕ್ಯಮತ್ಯದಿಂದ ಸ್ವಾತಂತ್ರ್ಯಸಾಧನೆಗಾಗಿ ಕಾರ್ಯಮಾಡಬೇಕು. ಈ ಸನ್ನಿವೇಶವು ಬಂದಕೂಡಲೆ ನಮಗೆಲ್ಲರಿಗೆ ಸ್ವಾತಂತ್ರ್ಯವು ಲಭಿಸುತ್ತದೆ. ಪ್ರಪಂಚದಲ್ಲಿ ಪ್ರಗತಿಮಾರ್ಗದಲ್ಲಿ ಮುಂದುವರಿದ ಜನಾಂಗಗಳ ಪದ್ಧತಿಗಳನ್ನೂ ಸಾಹಸ ಗುಣಗಳನ್ನೂ ನಾವು ಅನುಕರಿಸಬೇಕು. ಭಾರತದಲ್ಲಿ ನಾವೆಲ್ಲರೂ ಪಂಗಡ ಭಾವಗಳನ್ನು ಬಿಟ್ಟು ಐಕಮತ್ಯ ಹೊಂದಬೇಕು' ಎಂದರು.

ಬನ್ನೂ ಡಿಸ್ಟ್ರಿಕ್ಟ್‌ನಲ್ಲಿ ೧೨ ದಿನಗಳವರೆಗೆ ಪ್ರವಾಸ ಪ್ರಚಾರವನ್ನು ನಡೆಸಿ ಖಾನ್ ಅಬ್ದುಲ್ ಗಫರ್ ಖಾನರು ಡೇರಾ ಇಸ್ಮೇಲ್ ಖಾನಿಗೆ ಪ್ರಯಾಣ ಮಾಡಿದರು.

ಶ್ರೀ ಜಯಪ್ರಕಾಶ್ ನಾರಾಯಣ್‌ರವರ ದಸ್ತಗಿರಿ

ಅಖಿಲಭಾರತ ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯ ಜನರಲ್ ಸೆಕ್ರೆಟರಿ ಶ್ರೀ ಜಯಪ್ರಕಾಶ್ ನಾರಾಯಣ್‌ರನ್ನು ಬೊಂಬಾಯಿ ಪೋಲೀಸರು ದಸ್ತಗಿರಿ ಮಾಡಿದರು. ಇವರ ಬಗ್ಗೆ ಸಂಯುಕ್ತ ಪ್ರಾಂತ ಸರಕಾರದವರು ವಾರಾಂಟು ಕಳುಹಿಸಿದ್ದರು.

ಸಿಂಧ್ ಮಂತ್ರಿ ಮಂಡಲ ಮೌಲಾನಾ ಅಜಾದರ ವ್ಯವಸ್ಥೆಯಂತೆ ನಡೆಯಲಾಗುವುದು

'ಸಿಂಧ್ ಮಂತ್ರಿಮಂಡಳದ ರಚನೆ ವಿಚಾರದಲ್ಲಿ ಮೌಲಾನಾ ಅಬುಲ್ ಕಲಾಂ ಅಜಾದರು ಮಾಡಿದ ಏರ್ಪಾಡುಗಳನ್ನು ಅಕ್ಷರಶಃ ಜ್ಯಾರಿಯಲ್ಲಿ ತರಲಾಗುವುದು. ಸರ್. ಗುಲಾಂ ಹುಸೇನರನ್ನು ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳಲಾಗುವುದು. ಮಂತ್ರಿಮಂಡಲದಲ್ಲಿ ಮತ್ತೇನೂ ಬಿಕ್ಕಟ್ಟು ಉಂಟಾಗುವುದಿಲ್ಲ' ಎಂಬುದಾಗಿ ಮುಖ್ಯಮಂತ್ರಿ ಮಿ। ಬಾಂಡೇಲಿಖಾನ್ ಕಳಹೂರ್‌ರವರು ಅಸೋಸಿಯೇಟೆಡ್ ಪತ್ರಿಕಾ ಪ್ರತಿನಿಧಿಗೆ ಕೊಟ್ಟ ಭೇಟಿಯಲ್ಲಿ ನುಡಿದರು.

ಕ್ವೆಟ್ಟಾದಲ್ಲಿ ಭೂಕಂಪ

೩೧. ೫ರಂದು ಕ್ವೆಟ್ಟಾದಲ್ಲಿ ಭೂಕಂಪವಾಯಿತು. ಮನೆಗಳು ನಡುಗಿದವೆಂದೂ, ಆದರೆ ವಿಶೇಷ ಹಾನಿಯಾಗಲಿಲ್ಲವೆಂದೂ ತಿಳಿದುಬರುತ್ತದೆ.

ಅಸೆಂಬ್ಲಿಗಳಿಗೆ ಕಾಂಗ್ರೆಸ್ ಸದಸ್ಯರ ಬಹಿಷ್ಕಾರ

ಪಂಜಾಬ್ ಅಸೆಂಬ್ಲಿಗಳಲ್ಲಿರುವ ಕಾಂಗ್ರೆಸ್ ಸದಸ್ಯರು ಅಸೆಂಬ್ಲಿಯ ಕಾರ್ಯಕಲಾಪಗಳಿಗೆ ಬಹಿಷ್ಕಾರ ಹಾಕಲಿರುವರೆಂದು ತಿಳಿದಿದೆ.

ಸುಭಾಸರ ಸುದ್ದಿಯಿಲ್ಲ

ಸುಭಾಸಚಂದ್ರ ಬೋಸರು ಕಾಣೆಯಾಗಿ ಈಗ ಒಂದು ವಾರದ ಮೇಲಾಯಿತು. ಅವರ ನೆಂಟರಿಷ್ಟರೂ ನಾನಾ ಕಡೆ ಹುಡುಕಿಸಿದರು. ಸರಕಾರವೂ ವಾರಂಟು ಹಿಡಿದು ಹುಡುಕುತ್ತದೆ. ಆದರೆ ಇದುವರೆಗೆ ಅವರ ಪತ್ತೆಯೇ ಇಲ್ಲವಾಗಿ ತಿಳಿದುಬಂದಿದೆ.

ರಾಮಭಾವು ತಿಳಕರು ಉಪವಾಸ ಬಿಟ್ಟರು

ಖೇರ, ಮುನಶಿ ಮೊದಲಾದವರ ಆಶ್ವಾಸನ

ರಾಮಭಾವು ತಿಳಕರು ಈ ಹೊತ್ತು ತಮ್ಮ ಉಪವಾಸವನ್ನು ಬಿಟ್ಟುಕೊಟ್ಟರು. ಅದಕ್ಕೂ ಪೂರ್ವದಲ್ಲಿ ಕಾಂಗ್ರೆಸ್ ಜನರಲ್ ಸೆಕ್ರೆಟರಿಗಳಾದ ಆಚಾರ್ಯ ಕೃಪಲಾನಿಯವರು ಅವರನ್ನು ಕಂಡು ಕಾಂಗ್ರೆಸ್ಸಿನ ವರಿಷ್ಠ ಅಧಿಕಾರಿಗಳು ಈ ಸಂಬಂಧದಲ್ಲಿ ಕಾಯಿದೆಯ ಸಲಹೆ ತೆಗೆದುಕೊಳ್ಳುವ ವಿಚಾರ ಮಾಡುವರೆಂದೂ ಕೂಡಲೇ ಏನೆಂಬುದನ್ನು ತಿಳಿಸಲಾಗುವುದೆಂದು ಅವರಿಗೆ ಆಶ್ವಾಸನ ಕೊಟ್ಟರು.

ರಾಮಭಾವು ತಿಲಕರಿಗೆ ಯರೆವಾಡಾ ಜೈಲಿನಿಂದ ಸರದಾರ ಪಟೇಲ, ಖೇರ, ಮತ್ತು ಶ್ರೀ ಮುನಶಿಯವರಿಂದ ಈ ಕೆಳಗಿನ ತಂತಿಯೂ ಬಂದಿತ್ತು.

'ನಿಮ್ಮ ಪ್ರಕೃತಿಯು ಕ್ಷೀಣವಾಗುತ್ತಿರುವದು ಕಂಡು ಅತಿ ವಿಷಾದವಾಗಿದೆ. ನಿಮ್ಮ ಪ್ರಕರಣವನ್ನು ನಾವು ಕಾಯಿದೆಯ ದೃಷ್ಟಿಯಿಂದ ಪರಿಶೀಲಿಸಲು ಸಿದ್ಧವಿರುವೆವು. ಮತ್ತು ನಿಮ್ಮ ಪಕ್ಷವು ಸರಿಯಾಗಿರುವುದೆಂದು ಕಂಡುಬಂದಲ್ಲಿ ನ್ಯಾಯ ದೊರಕಿಸಿಕೊಡಲು ನಾವು ಸಿದ್ಧರಾಗಿರುವೆವು. ಲೋಕಮಾನ್ಯರ ಪುಣ್ಯ ಸ್ಮರಣವೇ ಈ ತಂತಿಯನ್ನು ಕಳಿಸಲು ನಮ್ಮನ್ನು ಪ್ರೇರೇಪಿಸಿದೆ. ದಯವಿಟ್ಟು ಉಪವಾಸ ಬಿಟ್ಟುಬಿಡಿರಿ.'

ಜೈಲಿಗೆ ಹೋಗುವಷ್ಟೇ ಪುಣ್ಯಕಾರ್ಯವಾಗಿದೆ

ಸಂಪಾದಕ ವರ್ಗದವರೊಬ್ಬರಿಗೆ ಗಾಂಧಿಯವರ ಪತ್ರ

ಆಜ್ ಪತ್ರಿಕೆಯ ಸಂಪಾದಕ ಮಂಡಲಿಯವರೊಬ್ಬರಿಗೆ ಮಹಾತ್ಮಾ ಗಾಂಧಿಯವರು ಒಂದು ಪತ್ರವನ್ನು ಬರೆದು 'ಪತ್ರಿಕಾ ಸಿಬ್ಬಂದಿಯವರ ಜವಾಬ್ದಾರಿಯು ಸಂಪಾದಕರಷ್ಟೇ ಜವಾಬ್ದಾರಿಯುತವಾಗಿದೆ. ಪತ್ರಿಕಾ ಸಂಪಾದಕ ವರ್ಗದಲ್ಲಿ ಯಾರಾದರೂ ಜೈಲಿಗೆ ಹೋಗಬೇಕಾದ ಅವಶ್ಯಕತೆಯು ಅನಿವಾರ್ಯವಾದರೆ ಅಂತಹವರು ಮಾತ್ರ ತಮ್ಮ ಕರ್ತವ್ಯಪಾಲನೆಯ ದೃಷ್ಟಿಯಿಂದ ಜೈಲಿಗೆ ಹೋಗಲು ಸಿದ್ಧರಾಗಬಹುದು. ಇತರರು ಸಂಪಾದಕ ವರ್ಗದಲ್ಲಿದ್ದುಕೊಂಡು ತಮ್ಮ ತಮ್ಮ ಕರ್ತವ್ಯವನ್ನು ಮಾಡಬೇಕು. ಪತ್ರಿಕಾ ಸಂಪಾದನ ಕಾರ್ಯವನ್ನು ಮಾಡುವುದೂ ಸತ್ಯಾಗ್ರಹ ಮಾಡಿ ಸೆರೆಮನೆಗೆ ಹೋಗುವಷ್ಟೇ ಪುಣ್ಯಕಾರ್ಯವಾಗಿದೆ' ಎಂದಿರುವರು.

ಜಿನ್ನಾ — ಹಕ್ ಪತ್ರವ್ಯವಹಾರ

ಜಾತೀಯ ಸಮಸ್ಯೆಯು ತೀರ್ಮಾನವು ಎಂದಾದರೂ ಒಂದು ದಿನ ತೀರ್ಮಾನವಾಗಲೇ ಬೇಕು. ಈ ಬಗ್ಗೆ ಮುಸ್ಲಿಂ ಲೀಗು ಎಲ್ಲರಿಗಿಂತ ಮುಂಚಿತವಾದ ಕಾರ್ಯಕ್ರಮವನ್ನು ನಡೆಸಬೇಕು. ಇದರಿಂದ ಲೀಗಿಗೆ ಕೀರ್ತಿ ಬರುವುದು. ಭಾರತಕ್ಕೆ ದೊಡ್ಡ ಸೇವೆಯನ್ನು ಮಾಡಿದಂತಾಗುವುದು ಎಂಬುದಾಗಿ ಬಂಗಾಳದ ಮುಖ್ಯಮಂತ್ರಿ ಫಜುಲುಲ್ ಹಕ್‌ರವರು ಜಿನ್ನಾರವರಿಗೆ ಒಂದು ಪತ್ರವನ್ನು ಬರೆದಿರುತ್ತಾರೆ.

ಈ ವಿಚಾರವಾಗಿ ಜಿನ್ನಾರವರಿಗೂ ಫಜುಲುಲ್ ಹಕ್‌ರಿಗೂ ಪತ್ರವ್ಯವಹಾರಗಳು ನಡೆದಿದ್ದುವು. ಅವೆಲ್ಲವೂ ಈಗ ಪ್ರಕಟವಾಗಿವೆ.

ಹಕ್‌ರಿಗೆ ಜಿನ್ನಾರವರು ಉತ್ತರ ಕೊಡುತ್ತಾ 'ಕಾಂಗ್ರೆಸ್ಸಿನ ರೀತಿನೀತಿಗಳು ಸರಿಯಿಲ್ಲ. ಕಾನೂನು ಭಂಗವನ್ನು ನಡೆಸಿ ಬ್ರಿಟಿಷರನ್ನು ಭಗ್ಗಿಸಿ ಮುಸ್ಲಿಮರಿಗೆ ಅಹಿತವನ್ನು ಮಾಡಬೇಕೆಂಬುದೇ ಕಾಂಗ್ರೆಸ್ಸಿನ ಉದ್ದೇಶವಾಗಿದೆ. ಮುಸ್ಲಿಂ ಲೀಗು ಏನೂ ಮಾಡಬಲ್ಲುದು? ಸಂಧಾನಕ್ಕೆ ಅವಕಾಶವೆಲ್ಲಿದೆ?' ಎಂದಿರುತ್ತಾರೆ.

ಹಕ್‌ರವರು ಇದಕ್ಕೆ ಉತ್ತರಕೊಟ್ಟು 'ಇಂಡಿಯಾದಲ್ಲಿ ಎಲ್ಲಾ ಪಂಗಡಗಳು ಐಕ್ಯಮತ್ಯವನ್ನು ಸಾಧಿಸಿ, ಭಾರತದ ರಾಜಕೀಯ ಅಭಿವೃದ್ಧಿಯನ್ನು ಮಾಡಬೇಕು. ಈಗಿನ ರಾಜ್ಯಾಂಗ ಸುಧಾರಣೆಗಳು ಬಹಳ ಅತೃಪ್ತಿಕರವಾಗಿವೆ, ಜವಾಬ್ದಾರಿ ಕೊಡುತ್ತಾರೆ, ಅಧಿಕಾರವಿಲ್ಲ. ಜಿನ್ನಾರವರೂ ಪರಿಸ್ಥಿತಿಯನ್ನು ಹೊಸದಾಗಿ ವಿಮರ್ಶಿಸಿ ಮಾಡಿ ಮತ್ತೊಂದು ಹೇಳಿಕೆ ಕೊಡಬೇಕು' ಎಂದಿದ್ದಾರೆ.

ಗಾಂಧಿಯವರಿಗೆ ಎಂ. ಎಸ್. ರಾಯರ ಪತ್ರ

ಕಾಂಗ್ರೆಸ್ ಅನುಯಾಯಿಗಳ ವರ್ತನೆಯ ಖಂಡನೆ

ಶ್ರೀ. ಎಂ. ಎನ್. ರಾಯ್‌ರವರು ಮಹಾತ್ಮಾ ಗಾಂಧಿಯವರಿಗೆ ಒಂದು ಪತ್ರವನ್ನು ಬರೆದು ತಿಳಿಸುವುದೇನೆಂದರೆ:

ಪೂರಿಯಲ್ಲಿ ನಾನು ನಡೆಸಿದ ಸಾರ್ವಜನಿಕ ಸಭೆಯೊಂದರಲ್ಲಿ ನಿಮ್ಮ ಕಾಂಗ್ರೆಸ್ ಅನುಯಾಯಿಗಳಲ್ಲಿ ಹತ್ತು ಹನ್ನೆರಡು ಸಾವಿರ ಜನರು ವಿಚಿತ್ರ ರೀತಿಯಲ್ಲಿ ವರ್ತಿಸಿ ಗಲಭೆ ಮಾಡಿದರು. ಸಭೆಯ ಕಾರ್ಯಗಳಿಗೆ ಆತಂಕವುಂಟುಮಾಡಿದರು. ನಾನು ಭಾಷಣ ಮಾಡಬೇಕಾಗಿದ್ದ ಈ ಸಭೆಗೆ ಬಹುಮಂದಿ ಜನರು ಬಂದಿದ್ದರು. ಜನಸಮೂಹವು ಅಧಿಕವಾಗಿ ಸೇರಿತ್ತು. ಇಷ್ಟು ಭಾರೀ ಜನಸಮೂಹವು ಸೇರಿದ್ದು ನೋಡಿದರೆ, ಕಾಂಗ್ರೆಸಿನಲ್ಲಿ ಜನತೆಗೆ ವಿಶ್ವಾಸವು ಕಡಿಮೆಯಾಗುತ್ತಿದೆ ಎಂಬುದು ವ್ಯಕ್ತವಾಗುತ್ತದೆ. ಕಾಂಗ್ರೆಸ್ ಅನುಯಾಯಿಗಳು ಕುರುಡರಂತೆ ಕಾಂಗ್ರೆಸ್ ಧ್ಯೇಯವನ್ನು ಅನುಸರಿಸುತ್ತಾರೆಂದು ವ್ಯಕ್ತವಾಗುತ್ತದೆ. ನೀವು ಹೇಳಿದ ಹಾಗೆ, ಕಾಂಗ್ರೆಸಿನವರೆಲ್ಲರೂ ಅನುಸರಿಸುವುದರಿಂದ ನಿಮ್ಮ ಅನುಯಾಯಿಗಳ ವೈಯಕ್ತಿಕ ಸ್ವಾತಂತ್ರ್ಯವೆಲ್ಲಿ

(11ನೆಯ ಪುಟವನ್ನು ನೋಡಿರಿ)

U. K. BHUJANGA NAYAK
CLOTH COMMISSION AGENT
SHEVAPET, SALEM
ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶೆವಪೇಟೆ, ಸೇಲಂ.
ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.
ಹೆಚ್ಚಿನ ಮಾಹಿತಿಗಳಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಜಪಾನು ಚೈನದೊಡನೆ ಸಂಧಿಮಾಡುವುದೆ?

ವಾಂಗರ ಮೂಲಕ ಒಪ್ಪಂದದ ಸೂಚನೆಗಳು

ಚುಂಕಿಂಗಿಗೆ ಜಪಾನಿನ ಸಲಹೆ

ವಾಂಗ್ ಚಿಂಗ್ ಮೂಲಕ ಸಂಧಾನ ನಡೆಸುತ್ತಿದೆ

ನ್ಯಾನ್‌ಕಿಂಗಿನಲ್ಲಿ ವಾಂಗ್ ಚಿಂಗ್ ವೈರವರ ಸರಕಾರವನ್ನು ಅಂಗೀಕರಿಸುವುದರಿಂದ ಜಪಾನು ಚೀನಾದಲ್ಲಿ ಚುಂಕಿಂಗ್ ಸರಕಾರದ ಬಗ್ಗೆ ವರ್ತಿಸುವ ಅಂಶವನ್ನು ಜಪಾನು ತನ್ನ ನೀತಿಯಿಂದ ದೂರಮಾಡಿಲ್ಲ ಎಂಬುದಾಗಿ ದ್ವಿತೀಯ ಶಾಸನ ಸಭೆಯ ಮುಂದೆ ಜಪಾನಿನ ವಿದೇಶಾಂಗ ಮಂತ್ರಿ ಮ ಟ್ಸೂಕಾರವರು ಸಾಕ್ಷ್ಯವನ್ನೀಯುತ್ತಾ ತಿಳಿಸಿದರು.

ಚೀನಾದಲ್ಲಿರುವ ಎರಡು ಸರಕಾರಗಳನ್ನೂ ಒಟ್ಟುಗೂಡಿಸುವುದಕ್ಕಾಗಿ ವಾಂಗ್ ಚಿಂಗ್ ವೈರವರ ಮೂಲಕ ಜಪಾನು ಪ್ರಯತ್ನ ಪಡುತ್ತಿದೆ ಎಂದು ಅವರು ಹೇಳಿದರು.

ಕಳೆದ ನವೆಂಬರಿನಿಂದ ಜಪಾನು ಏನೊಂದೂ ಹೊಸ ಕಾರ್ಯಾಂತರಕ್ಕೆ ಕೈ ಹಾಕಿಲ್ಲ ಎಂಬಂಶವನ್ನು ಅವರು ಸ್ಪಷ್ಟಪಡಿಸಿ, 'ಚುಂಕಿಂಗ್ ಸರಕಾರವು ತನ್ನ ತಪ್ಪನ್ನು ಒಪ್ಪಿಕೊಂಡು ಜಪಾನಿನೊಡನೆ ಶಾಂತಿ ಒಪ್ಪಂದ ಮಾಡಿಕೊಳ್ಳುವುದಾದರೆ ಆಗ್ಗೆ ನಾನು ಅವ್ಯಕ್ತನಾಗಿ ಹೊರಟು ಹೋಗುವೆನು, ಅಥವಾ ದೇಶದಿಂದ ಗಡೀಪಾರಾಗುವೆನು ಅಥವಾ ಬೇಕಿದ್ದಲ್ಲಿ ಮರಣಹೊಂದಲೂ ಸಿದ್ಧನಿರುವೆನು ಎಂಬುದಾಗಿ ವಾಂಗ್ ಚಿಂಗ್ ವೈರವರು ಚುಂಕಿಂಗಿಗೆ ತಿಳಿಸಿದ್ದಾರೆ' ಎಂಬುದಾಗಿ ಹೇಳಿದರು.

ಟರ್ಕಿ ಅಧ್ಯಕ್ಷರಿಗೆ ರೂಸ್‌ವೆಲ್ಟರ ಸಂದೇಶ

ಮಧ್ಯಪ್ರಾಂತ್ಯದಲ್ಲಿ ಅಧ್ಯಕ್ಷ ರೂಸ್‌ವೆಲ್ಟರ ನಿಯೋಗಿಯಾಗಿರುವ ಕ. ಡೊನೋವನ್‌ರವರು ಇಸ್ತಾಂಬುಲ್‌ಗೆ ಆಗಮಿಸಿದರು. ಬಾಲ್ಕನ್ ರಾಷ್ಟ್ರಗಳಲ್ಲಿ ಅವರು ತಮ್ಮ ಪ್ರವಾಸವನ್ನು ಮುಗಿಸಿಕೊಂಡು ಇಲ್ಲಿಗೆ ಬಂದಿದ್ದಾರೆ.

ಅಧ್ಯಕ್ಷ ರೂಸ್‌ವೆಲ್ಟರಿಂದ ಟರ್ಕಿಯ ಅಧ್ಯಕ್ಷ ಇನ್ನೊನುರವರಿಗೆ ಒಂದು ವೈಯಕ್ತಿಕ ಸಂದೇಶವನ್ನು ಕ. ಡೊನೋವನ್‌ರವರು ತಂದಿದ್ದಾರೆಂದು ಹೇಳಲಾಗಿದೆ.

ಕ. ಡೊನೋವನ್‌ರವರು ಟರ್ಕಿಯ ಕೆಲವು ಮುಖಂಡರನ್ನು ಭೇಟಿಮಾಡಿದರು.

ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರಗಳು

ಕಾಮನ್ಸಿನಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಎಮರಿಯವರ ಹೇಳಿಕೆ

'ಭಾರತದ ರಾಜ್ಯಾಂಗ ಬೆಳವಣಿಗೆಗೆ ಬ್ರಿಟಿಷ್ ಸರಕಾರವು ತನ್ನ ನೀತಿಯನ್ನು ಸ್ಪಷ್ಟವಾಗಿ ಹೊರಪಡಿಸಿದೆ. ಅದೇ ನೀತಿಯೇ ಇಂದಿಗೂ ಆಚರಣೆಯಲ್ಲಿದೆ' ಎಂಬುದಾಗಿ ಇಂಡಿಯಾ ಸ್ಟೇಟ್ ಸೆಕ್ರೆಟರಿ ಶ್ರೀ ಎಲ್. ಎಸ್ ಎಮರಿಯವರು ಕಾಮನ್ಸ್ ಸಭೆಯಲ್ಲಿ ಕ್ಯಾರಿಯವರ ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು.

ವೈಸರಾಯರಿಗೂ ಭಾರತದ ಮುಖಂಡರುಗಳಿಗೂ ಮಾತುಕತೆ ನಿಂತು ಹೋದ ಮೇಲೆ ಈಗ ಭಾರತದ ರಾಜಕೀಯ ಪರಿಸ್ಥಿತಿಯನ್ನು ಉತ್ತಮಪಡಿಸುವಂತಹ ಕಾರ್ಯಕ್ರಮವನ್ನು ಕೂಡಲೇ ಕೈಕೊಳ್ಳಲಾಗುವುದೇ ಎಂದು ಕ್ಯಾರಿಯವರು ಪ್ರಶ್ನೆ ಕೇಳಿದರು.

ಶ್ರೀ ಎಮರಿಯವರು ಮುಂದುವರಿಯುತ್ತಾ ಹೀಗೆಂದರು—'ಭಾರತೀಯರಲ್ಲಿ ಒಂದು ಒಪ್ಪಂದವಾಗುವ ರೀತಿಯಲ್ಲಿ ಪರಿಸ್ಥಿತಿಯನ್ನೇರ್ಪಡಿಸಲು ಬ್ರಿಟಿಷ್ ಸರಕಾರವು ಕೂಡಲೇ ಕ್ರಮ ನಡೆಸುವುದಕ್ಕೆ ಅವಕಾಶವಾಗುವುದೆಂದು ನಾನು ಆಲೋಚಿಸುವುದಿಲ್ಲ.'

ಸೌಹಾರ್ದಮಂಡಲಿ ಕಳುಹಿಸಲು ಸಾಧ್ಯವೇ?

ಕ್ಯಾರಿ—ಈ ದೇಶದಿಂದ ಒಂದು ಸೌಹಾರ್ದಮಂಡಲಿಯನ್ನು—ಈ ಉದ್ದಿಷ್ಟ ಸಾಧನೆಗಾಗಿ—ಭಾರತಕ್ಕೆ ಕಳುಹಿಸುವ ಅಂಶವನ್ನು ಪರಿಶೀಲಿಸಕೂಡದೇ?

ಎಮರಿ.—ಭಾರತೀಯರಲ್ಲಿ ಸೌಹಾರ್ದವನ್ನೇರ್ಪಡಿಸಲು ಈ ಯಾವ ಮಂಡಲಿಯಿಂದಲೂ ಸಾಧ್ಯವಾಗಬಹುದೆಂದು ನಾನು ತಿಳಿಯಲಾರೆ. ಆ ಸೌಹಾರ್ದವು ಭಾರತೀಯರಲ್ಲಿ ಮೊದಲು ಇರಬೇಕಾದುದು ಆವಶ್ಯಕ.

ಭಾರತದಲ್ಲಿ ಸತ್ಯಾಗ್ರಹ

ಭಾರತದ ರಾಜಕೀಯ ಪರಿಸ್ಥಿತಿ ಬಗ್ಗೆ ಏನಾದರೂ ಹೆಚ್ಚಿನ ಹೇಳಿಕೆಯನ್ನೀಯುವಿರಾ ಎಂದು ಎಮರಿಯವರನ್ನು ಸೊರೆನ್‌ಸನ್‌ರವರು ಕೇಳಿದರು. 'ಜನವರಿ ೨೯ನೇ ತಾರೀಕು ಇದೇ ರೀತಿಯ ಎರಡು ಪ್ರಶ್ನೆಗಳಿಗೆ ನಾನು ಕೊಟ್ಟ ಉತ್ತರಕ್ಕಿಂತ ಹೆಚ್ಚಿನದೇನನ್ನೂ ಈಗ ನಾನು ಹೇಳುವ ಹಾಗಿಲ್ಲ' ಎಂದು ಎಮರಿಯವರು ನುಡಿದರು.

ಪ್ರ: ರಾಜಕೀಯ ಅಪರಾಧಕ್ಕಾಗಿ ಎಷ್ಟು ಮಂದಿ ಕಾರಾಗೃಹವಾಸವನ್ನು ಅನುಭವಿಸುತ್ತಿದ್ದಾರೆ?

ಉ: ಈಗ ಎಷ್ಟು ಮಂದಿ ಇನ್ನೂ ಜೈಲಿನಲ್ಲಿ ಇದ್ದಾರೆಂಬುದನ್ನು ನಾನು ಹೇಳಲಾರೆ. ಆದರೆ ಜನವರಿ ೨೫ರ ವರೆಗೆ ಶಿಕ್ಷಿತರಾದಂತಹವರು ಮಾತ್ರ ೯೫೭ ಮಂದಿ. ಅವರಲ್ಲಿ ಕೆಲವರು ಈಗಾಗಲೇ ಶಿಕ್ಷೆಯ ಅವಧಿ ಮುಗಿಸಿಕೊಂಡು ಹೊರಕ್ಕೆ ಬಂದಿರಬೇಕು. ಸ್ವಂತ ಇಚ್ಛೆಯಿಂದಲೇ ಜೈಲಿನಲ್ಲಿರಲು ಬಂದಂತಹವರೇ ಇವರಲ್ಲಿ ಜಾಸ್ತಿ ಮಂದಿಯಿದ್ದಾರೆ ಎಂಬುದನ್ನು ನಾನು ಸೊರೆನ್‌ಸನ್‌ರಿಗೆ ಸ್ಪಷ್ಟಪಡಿಸಬೇಕಾಗಿದೆ.

ಚೀನೀ ಯುದ್ಧದಲ್ಲಿ ೨೩ ಅಬ್ಜ ಖರ್ಚು

ಜಪಾನಿ ಮಂತ್ರಿಮಂಡಳದ ಸಭೆಯಲ್ಲಿ ಇಡಲಾದ ಅಂದಾಜು ಪಟ್ಟಿಯನ್ನು ನೋಡಲಾಗಿ ೧೯೪೦ನೆಯ ಮಾರ್ಚಿ ಕೊನೆಯೊಳಗೆ ಜಪಾನ್ ಸರಕಾರಕ್ಕೆ ಚೀನೀ ಯುದ್ಧದಲ್ಲಿ ಒಟ್ಟು ೨೨ ಅಬ್ಜ ೩೩ ಕೋಟಿ ೫೦ ಲಕ್ಷ ಯೆನ್‌ಗಳ ಖರ್ಚಾದುದೆಂದು ತಿಳಿದಿದೆ.

ಥೈಲ್ಯಾಂಡ್ ಇಂಡೊಚೀನಾ ಶಾಂತಿ ಒಪ್ಪಂದ

ಹಡಗಿನಲ್ಲಿಯೇ ಸಹಿಯಾಯಿತು

ಫ್ರೆಂಚ್ ಇಂಡೋಚೀನಾವಿಗೂ ಥೈಲೆಂಡಿಗೂ ಶಾಂತಿ ಒಪ್ಪಂದವು ಸೈಗಾನಿನಿಂದಾಚೆ ಜಪಾನೀ ಯುದ್ಧಹಡಗಿನಲ್ಲಿ ಸಹಿಯಾಯಿತು.

ಮಾತುಕತೆಗಳಲ್ಲಿ ಜಪಾನೀ ಪ್ರತಿನಿಧಿಗಳೂ ಭಾಗವಹಿಸಿದ್ದರು.

ಥೈಲ್ಯಾಂಡು ಕೇಳುತ್ತಿದ್ದ ಭಾಗಗಳನ್ನು ವಶಪಡಿಸಿಕೊಂಡಿವೆ

ಜನವರಿ ೩೧ರಲ್ಲಿ ಥೈಲ್ಯಾಂಡಿಗೂ ಫ್ರೆಂಚ್-ಇಂಡೋಚೀನಕ್ಕೂ ಶಾಂತಿ ಒಪ್ಪಂದವು ಸಹಿಯಾಯಿತಷ್ಟೆ. ಅಲ್ಲಿಯ ತನಕ ಈ ಎರಡು ಪಕ್ಷಗಳ ಸೈನಿಕರಿಗೆ ನಡೆದ ಕದನಗಳನ್ನು ಕುರಿತು ಪ್ರಸ್ತಾಪಿಸುತ್ತಾ ಥೈಲ್ಯಾಂಡ್ ಕಾರ್ನಸಲೇಟು ಒಂದು ಪ್ರಕಟನೆ ಹೊರಡಿಸಿ, 'ಮೊದಲು ಥೈಲ್ಯಾಂಡು ಯಾವ ಯಾವ ಸರಹದ್ದುಗಳು ತನಗೆ ಬರಬೇಕೆಂದು ಕೇಳುತ್ತಿತ್ತೋ ಆ ಪ್ರದೇಶಗಳನ್ನೆಲ್ಲಾ ಪೂರ್ಣವಾಗಿ ಸ್ವಾಧೀನಪಡಿಸಿಕೊಂಡು ಥೈಲ್ಯಾಂಡಿಗೆ ಸೇರಿಕೊಂಡಿವೆ' ಎಂದು ತಿಳಿಸಿದೆ.

೯೦೦೦ ಜಪಾನಿಗಳ ಮರಣ

ಹೊನಾನಾ ಪ್ರಾಂತದಲ್ಲಿ ನಡೆದ ಕಾಳಗದಲ್ಲಿ ೫ ದಿನಗಳಲ್ಲಿ ೯೦೦೦ ಜಪಾನೀ ಸೈನಿಕರು ಮರಣಹೊಂದಿದರೆಂದು ಸುದ್ದಿ. ಚೀನೀಯರು ಜಯಶಾಲಿಗಳಾಗಿ ಜಪಾನರನ್ನು ಎದುರಿಸಿದರು.

(10ನೆಯ ಪುಟದಿಂದ ಮುಂದುವರಿದುದು)

ಉಳಿಯಿತೆ. ನಿಮ್ಮ ಅನುಯಾಯಿಗಳಿಗೆ ಭಾಷಣ ಸ್ವಾತಂತ್ರ್ಯವೆಲ್ಲಿದೆ?

ನಾನು ಭಾಷಣ ಮಾಡಬೇಕಾಗಿದ್ದ ಈ ಸಭೆಯಲ್ಲಿ ನನ್ನ ಕಾರ್ಯಕ್ರಮಕ್ಕೆ ಬದಲಾಗಿ ನಿಮ್ಮ ಅನುಯಾಯಿಗಳು ಮಹಾತ್ಮಾ ಗಾಂಧೀ ಕೀ ಜೈ ಎಂದು ಕೂಗುತ್ತಾ ದೊಂಬಿ ಗಲಾಟೆ ಮಾಡಿದರು. ಇದು ನಿಮ್ಮ ಅಹಿಂಸಾ ತತ್ವಕ್ಕೆ ವಿರುದ್ಧವಲ್ಲವೆ? ನಿಮ್ಮ ಕಾಂಗ್ರೆಸ ಅನುಯಾಯಿಗಳ ಈ ದುರ್ವರ್ತನೆಯನ್ನು ನೀವು ಬಲಿಸಬೇಕು.

ಕಾಂಗ್ರೆಸ್ ಸತ್ಯಾಗ್ರಹ ಸರಿಯಾಗಿಲ್ಲ. ಯುದ್ಧದಲ್ಲಿ ಬ್ರಿಟನು ಸೋಲಬೇಕೆಂದು ನಿಮ್ಮ ಕಾಂಗ್ರೆಸ್ ಅನುಯಾಯಿಗಳು ಅಭಿಲಾಷೆಪಡುತ್ತಾರೆ. ಬ್ರಿಟನ ಸೋತರೆ ಭಾರತದ ಸ್ವಾತಂತ್ರ್ಯವು ಲಭಿಸುತ್ತದೆ ಎಂಬ ತಪ್ಪು ಭಾವನೆಯೇ ಇದಕ್ಕೆ ಕಾರಣ. ಕಾಂಗ್ರೆಸ್ ಸದಸ್ಯರೂ, ಅನುಯಾಯಿಗಳೂ ಹೀಗೆ ವರ್ತಿಸುವುದು ಸರಿಯೆ? ಈ ಪ್ರಶ್ನೆಗೆ ಕಾಂಗ್ರೆಸ್ ಕಾರ್ಯಕರ್ತರು ಆತ್ಮಸಾಕ್ಷಿ ಪ್ರಕಾರ ಸತ್ಯನಿಷ್ಠೆಯಿಂದ ಆತ್ಮಶೋಧನೆ ಮಾಡುವುದು ಹೇಗೆ? ಇದನ್ನೆಲ್ಲಾ ನೀವು ಏನು ಮಾಡಿ ನಡೆಸಬೇಕು.

ಈಸಾರಿ ಕಾಂಗ್ರೆಸ್ ಅಧಿವೇಶನವಿಲ್ಲ

ಸತ್ಯಾಗ್ರಹ ಚಳವಳದ ಕಾರಣದಿಂದ

ಕಾಂಗ್ರೆಸ್ ಅಧಿಕಾರೀ ಆವರಣದಿಂದ ತಿಳಿದುಬಂದಿರುವಂತೆ ಈ ಸಾರಿ ಸತ್ಯಾಗ್ರಹ ಚಳವಳದ ಕಾರಣದಿಂದ ಕಾಂಗ್ರೆಸ್ ಅಧಿವೇಶನವನ್ನು ನಡೆಸಲು ಸಾಧ್ಯವಿಲ್ಲವೆಂದು ಗೊತ್ತಾಗಿದೆ.

ಮಂಗಳೂರು

ಅಂತರ್ಜಾತೀಯ ವಿವಾಹ:— ಪ್ರತ್ಯಾಂಶ ಬಾಲವನದಲ್ಲಿ ವಾಸವಾಗಿರುವ ಶ್ರೀ. ಕೇಶವರಾವ ಕುಲಕರ್ಣಿಯವರು (ವೈಷ್ಣವ ಬ್ರಾಹ್ಮಣರು) ದಿವಂಗತ ಶ್ರೀ ಬಿ. ಅಕ್ಕಪ್ಪ ಶೆಟ್ಟಿ ಕುವರಿ ಅಹಲ್ಯಾಬಾಯಿಯನ್ನು ವಿವಾಹವಾದರು. ಶ್ರೀಯುತ ಮೊಜಪ್ಪನವರು ವಿವಾಹವನ್ನು ರಜಿಸ್ಟರ್ ಮಾಡಿದರು. ವಧುವು ಶ್ರೀ. ಶಿ. ಅನಂತರ ಸತ್ಯ ಶೀಲರ ಶಾಂತರ ಸಹೋದರಿ.

'೧೯೪೧ರಲ್ಲಿ ಸಮರವು ಭೀಷಣವಾಗುವುದು.'

ಯು ಬೋಟುಗಳ ಕಾಳಗವನ್ನು ಪ್ರಾರಂಭಿಸುವೆನು

— ಹಿಟ್ಲರನ ರಣಗರ್ಜನೆ —

ಹಿಟ್ಲರನು ಈ ಘೋರ ರಣಗರ್ಜನೆ ಮಾಡಿದನು. ತಾನು ಬೇಗನೇ ಯು ಬೋಟುಗಳ ಯುದ್ಧವನ್ನು ಪ್ರಾರಂಭಿಸುವೆನೆಂದೂ, ಅಮೇರಿಕವು ಬ್ರಿಟನಿಗೆ ಬೆಂಬಲ ಕೊಡಕೂಡದೆಂದೂ, ಹಾಗೆ ಮಾಡಿದರೆ ಅದರ ಹಡಗಗಳನ್ನೆಲ್ಲಾ ಮುಳುಗಿಸುವೆನೆಂದೂ ಹೇಳಿದನು. ಇಟೆಲಿಯು ಕೆಲವು ಕಡೆಗಳಲ್ಲಿ ಹಿಂದೆ ಬಿದ್ದಿದ್ದರೂ ಅದರಿಂದ ಬ್ರಿಟಿಷರು ವಿಜಯಿಗಳೆಂದು ತಿಳಿದುಕೊಳ್ಳಬೇಕಾದ ಅವಶ್ಯವಿಲ್ಲವೆಂದೂ ಎಚ್ಚರಿಸಿದನು.

ಹಿಟ್ಲರನು ಸಿಂಹಾಸನವೇರಿದ ಎಂಟನೆಯ ಉತ್ಸವದ ಸಲುವಾಗಿ ಈ ಭಾಷಣ ಏರ್ಪಟ್ಟಿತ್ತು. ಸಭೆಗೆ ಪ್ರಚಂಡ ಜನ ಸಂದಣಿ ಕೂಡಿತ್ತು. ಜರ್ಮನಿಯ ಮುಖ್ಯಸ್ಥರು, ಗೋರಿಂಗ್, ಗೋಬೆಲ್ಸ್ ಪ್ರಮುಖರು ಆಸನ್ನರಾಗಿದ್ದರು. ಪ್ರಾರಂಭದಲ್ಲಿ ಗೋಬೆಲ್ಸನು 'ನಮಗೆ ಮುಂದೆ ಸಂಕಷ್ಟಮಯವಾದ ದಿನಗಳು ಬರಲಿವೆ. ನಾವೆಲ್ಲರೂ ನಮ್ಮೊಡೆಯ ಹಿಟ್ಲರನಲ್ಲಿ ಅಚಲ ವಿಶ್ವಾಸವುಳ್ಳವರಾಗಿದ್ದೇವೆ' ಎಂದನು.—

ಅನಂತರ ಹಿಟ್ಲರನು ಉನ್ನತ ವೇದಿಕೆಯ ಮೇಲೆ ನಿಂತು ಗಂಭೀರಸ್ವರದಲ್ಲಿ ತಾಸುಗಳ ತನಕ ಗರ್ಜಿಸಿದನು. ಪ್ರಾರಂಭದಲ್ಲಿ ಆತನು ಜರ್ಮನರ ಸಾಹಸಕಾರ್ಯಗಳನ್ನು ಕೊಂಡಾಡಿ ಮಾತನಾಡಿದನು.

ಯುದ್ಧ ಕಾರಣರಾರು?

ಬಳಿಕ ಹೀಗಂದನು:—

'ಜಗತ್ತಿನ ಯುದ್ಧಕ್ಕೆ ಕಾರಣರಾರೆಂಬ ವಿಷಯ ಅಧ್ಯಕ್ಷ ರೂಸ್‌ವೆಲ್ಟರು ನಿಯೋಜಿಸಿದ ಮಂಡಳವೇ ಈ ಯುದ್ಧಕ್ಕೆ ಜರ್ಮನಿಯು ಕಾರಣವಲ್ಲವೆಂದು ಸ್ಪಷ್ಟಪಡಿಸಿದೆ. ಮುನ್ನೂರು ವರ್ಷಗಳ ಪಾಶವೀಶಕ್ತಿಯಿಂದ ಕಟ್ಟಲ್ಪಟ್ಟ ಬ್ರಿಟಿಷ್ ಸಾಮ್ರಾಜ್ಯವು ತನ್ನ ಸಾಮ್ರಾಜ್ಯ ವಿಸ್ತರಣೆಯ ಸಲುವಾಗಿ ಒಂದರ ಮೇಲೊಂದು ಯುದ್ಧವನ್ನು ಬೆಳಸಿದೆ.

ಅಮೇರಿಕವು ನೆನಪಿಡಲಿ

'ಬ್ರಿಟಿಷರಿಗೆ ಅಮೇರಿಕವು ಸಹಾಯ ಕೊಡಲು ಅಪೇಕ್ಷಿಸುತ್ತದೆ. ಅವರ ಹಡಗಗಳನ್ನೆಲ್ಲಾ ನಾವು ನಮ್ಮ ಯು ಬೋಟುಗಳಿಂದ ಮುಳುಗಿಸುವೆವು. ಯು

ಅಮೇರಿಕಕ್ಕೆ ಎಚ್ಚರ

ರೋಪಿನ ಯುದ್ಧದಲ್ಲಿ ಅಮೇರಿಕವು ಕೈ ಹಾಕಲು ಬಗೆದರೆ ನಮ್ಮ ಧೋರಣವೇ ಬದಲುವುದು. ಇದೀ ಯುರೋಪೇ ಅಮೇರಿಕವನ್ನು ದ್ವೇಷಿಸುವುದು.

'ಯುರೋಪವನ್ನು ಪದಹತಿಯಲ್ಲಿಡಬೇಕೆಂದು ಬ್ರಿಟಿಷರು ಬಗೆದಿದ್ದರು. ಆದರೆ ಇಟಲಿ ಜರ್ಮನಿಗಳು ತಲೆಯೆತ್ತಿದ ಕಾರಣ, ಅವರಿಗೆ ನಿರಾಶೆಯು ಉಂಟಾಗಿದೆ. ಜರ್ಮನಿಯನ್ನು ತಡೆಯಿಕ್ಕಲು ಬ್ರಿಟಿಷರು ಯುದ್ಧ ಹೂಡಿದರು. ಹಿಂದಿನ ಯುದ್ಧದಲ್ಲಿ ಜರ್ಮನಿಯು ಸೋಲಲಿಲ್ಲ, ಮುಂದಾಳುಗಳ ಅಯೋಗ್ಯತೆಯಿಂದ ದುಷ್ಫಲವಾಯಿತು ಮಾತ್ರ. ಆದರೆ ಇಂದು ಜರ್ಮನಿಯು ಪ್ರಬಲವಾಗಿ ಶಕ್ತಿವಂತವಾಗಿದೆ. ಕಳೆದ ಮಹಾಯುದ್ಧದ ಘಟನೆಗಳನ್ನು ಅವು ಮರೆತಿಲ್ಲ.. ಜರ್ಮನರು ಇಂದು ತಮ್ಮ ತಮ್ಮೊಳಗೆ ಬಡಿದಾಡುಕೊಳ್ಳುತ್ತಿಲ್ಲ; ಜನರು ಒಂದಾಗಿ ನಿಂತಿದ್ದಾರೆ.

ಹಿಟ್ಲರನ ನೀತಿಯೇನು?

'ನನ್ನ ವಿದೇಶ ನೀತಿಯು ವರ್ಸೇಲಿ ಒಪ್ಪಂದವನ್ನು ರದ್ದುಗೊಳಿಸುವುದೇ ಆಗಿದೆ. ಅದು ಶಾಂತಿಯಿಂದಾಗಬೇಕೆಂದು ನಾನು ಹಲವು ಬಗೆಯಿಂದ ಯತ್ನಿಸಿದೆ. ರಾಷ್ಟ್ರಸಂಘದವರೂ ತಪ್ಪು ತಿಳಕೊಂಡರು. ಹಾಗಾಗಿ ಶಾಂತಿ ಯತ್ನಗಳು ವ್ಯರ್ಥವಾದುವು.

'ನನಗೆ ಇಂಗ್ಲಂಡಿನ ಮೇಲೆ ಏನೇನೂ ವೈರವಿಲ್ಲ. ಅವರೊಡನೆ ಸ್ನೇಹ ಮಾಡಿಕೊಳ್ಳಲು ಮತ್ತೂ ನಾನು ಬಯಸುತ್ತೇನೆ.

ನನ್ನ ಮೇಲೆ ಉಗುಳಿದರು

ಯುದ್ಧವು ಆರಂಭವಾದ ಮೇಲೂ ನಾನು ಶಾಂತಿಗಾಗಿ ಯತ್ನಿಸಿದೆ. ಫ್ರಾನ್ಸಿನ ಪತನದ ಮೇಲೂ ನಾನು ಸಂಧಿಗಾಗಿ ಯೋಚಿಸಿದೆ. ಆದರೆ ಅವರು ನಕ್ಕರು; ನನ್ನ ಮೇಲೆ ಉಗುಳಿದರು. ನನಗೆ ಅಪಮಾನವನ್ನು ಮಾಡಿದರು!

ಮತ್ತೆ ಬ್ರಿಟನಿಗೆ ಅಮೇರಿಕವು ಕೊಡುವ ಸಹಾಯವನ್ನೆತ್ತಿ ಅಮೇರಿಕವು ಸಹಾಯ ಮಾಡಕೂಡದೆಂದನು.

ಮುಸಲಿನಿಯು ಆಪ್ತ ಸ್ನೇಹಿತ

ಮತ್ತು ಇಟಲಿಯ ಕುರಿತು ಹಿಟ್ಲರನು ಮಾತನಾಡುತ್ತಾ ಜರ್ಮನಿ ಇಟಲಿಗಳೊಳಗೆ ಮತಭೇದವುಂಟಾಗಿರುವುದೆಂದು ಪ್ರಚಾರಮಾಡಿದ್ದು ಸತ್ಯವಲ್ಲವೆಂದೂ, ಇಟಲಿಯಲ್ಲಿ ಕ್ರಾಂತಿಯಾಗುವುದೆಂದು ಊಹಿಸುವುದೂ ಶುದ್ಧ ತಪ್ಪೆಂದೂ, ಇಟಲಿಗೆ ಕೆಲಕಡೆಗಳಲ್ಲಿ ಕಷ್ಟಗ

ಇಟಲಿಗೆ ಸಹಾನುಭೂತಿ

ಳಾಗಿದ್ದರೂ ಶಕ್ಯವಿದ್ದಲ್ಲೆಲ್ಲಾ ನಾವು ಬ್ರಿಟಿಷರನ್ನು ಬೆನ್ನಟ್ಟುತ್ತಿರುವವೆಂದು ಹೇಳಿದನು. ಮುಸಲಿನಿ ಮತ್ತು ತನ್ನ ಸ್ನೇಹವು ಅತ್ಯಂತ ಗಾಢವಾಗಿದೆಯೆಂದನು, ತಾವಿಬ್ಬರೂ ಗೌರವಸ್ಥರು, ಮರ್ಯಾದವಂತರೂ ಅಂತೆಯೇ ಗಾಢ ಸ್ನೇಹದಿಂದಿರುವೆವು ಎಂದನು.

ಭಾಷಣದ ಕೊನೆಗೆ ಹೀಗಂದನು:

ಇಂದು ಜರ್ಮನಿಯು ಹಿರಿಗಿ ಪೂರ್ಣ ಶಸ್ತ್ರಾಸ್ತ್ರ ಸಜ್ಜಿತವಾಗಿದೆ. ಇಂದಿನಷ್ಟು ಶಕ್ತಿ ಅದರಲ್ಲಿ ಹಿಂದೆ ಇರಲಿಲ್ಲ. ಈ ವಸಂತಕಾಲದಲ್ಲಿ ನಾವು ಯು ಬೋಟುಗಳ ಯುದ್ಧ ಪ್ರಾರಂಭಿಸುವೆವು. ನಮಗೆ ಜಯವಾಗುವುದೆಂದು ನನಗೆ ಪೂರ್ಣ ವಿಶ್ವಾಸವಿದೆ. ೧೯೪೧ರ ಹೊಸ ವರ್ಷದಲ್ಲಿ ನಮ್ಮ ಹೋರಾಟವು ಅತ್ಯಂತ ಭೀಷಣವಾಗುವುದು.'

ನೋಟೀಸು

ಕಾರ್ಕಳ ಡಿ: ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 110/1938

R. E. P. No. 1351/1940

ದೇವಂಮ ಪಣಿಯಪ್ಪಯ್ಯನ ವಿಧವೆ, ಕಾರ್ಕಳ ತಾಲ್ಲೂ ಕಾಂತಾವರ ಗ್ರಾಮದಲ್ಲಿರುವವಳು—

ವಾದಿಳು—ಅರ್ಜಿದಾರಳು

ಮತ್ತು

1. ರಾಮದಾಸ ಭಟ್ಟ, 2. ವೆಂಕಟದಾಸ ಭಟ್ಟ, 3. ವಿಟ್ಠಲದಾಸ ಭಟ್ಟ (ಮೈನರ ಈತನ ಗಾರ್ಡಿಯಾನ್ ಶ್ರೀ I. ಸುಬ್ರಾವ್ ಎಡ್ವೊಕೇಟ್— ಕಾರ್ಕಳ ಕಸ್ಬಾ ಪೇಟೆಯಲ್ಲಿರುವವರು— ಸುಬ್ರಾಯ ಭಟ್ರ ಮಕ್ಕಳು—ಕಾರ್ಕಳ ತಾಲ್ಲೂ ಕಾಂತಾವರ ಗ್ರಾಮದ ನಡಿ ಹಿತ್ಲು ದೊಡ್ಡ ಮನೆ ಬೆಂಬಲ್ಲಿರುವವರು.— ಪ್ರ ತಿ ವಾ ದಿ ರು

ಎದ್ರಿ ಅರ್ಜಿದಾರರು

ಇವರೊಳಗೆ

1, 2ನೇ ಯೆದ್ರಿದಾರಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:—

ಮೇಲ್ಕಂಡ ಡಿಕ್ರಿಯ ಅಮ್ಲುಜ್ಯಾರಿಯಲ್ಲಿ ಪ್ರಿಲಿಮಿನೆರಿ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿರುವ ನಿಮ್ಮ ಸ್ಥಿರಾಸ್ತಿಗಳ ವಿಕ್ರಯದ ಬಗ್ಗೆ ಅರ್ಜಿದಾರಳು ಅರ್ಜಿ ಮಾಡಿದ್ದಾಳೆ. ಸದ್ರಿ ಅಮ್ಲುಜ್ಯಾರಿಯಲ್ಲಿ ಯೇಲಂ ಕಾಲದಲ್ಲಿ ಬಿಡ್ ಮಾಡುವರೆ ಯಾ ಬಿಡ್ ಮಾಡಿದ ಮೊಬಲಗನ್ನು ಡಿಕ್ರಿಯ ಮೊಬಲಗಿನಲ್ಲಿ ವಜಾ ಮಾಡಿ ಕೊಡುವ ದರಖಾಸ್ತನ್ನು ಮಂಜೂರು ಮಾಡಬೇಕಾಗಿಯೂ ಅಪೇಕ್ಷಿಸಿ ಅರ್ಜಿ ಬರಕೊಂಡಿದ್ದಾಳೆ. ಆದ್ರಿಂದ ವಿಕ್ರಯದ ಶರತುಗಳನ್ನು ನಿರ್ಣಯಿಸುವರೆ ಯಾ ಬಿಡ್ ಮಾಡುವರೆ ಯಾ ಬಿಡ್ ಮಾಡಿದ ಮೊಬಲಗನ್ನು ಡಿಕ್ರಿ ಐವೇಜಿನಲ್ಲಿ ವಜಾ ಮಾಡುವರೆ ಯಾ ನಿವೇನಾದರೂ ಆಕ್ಷೇಪಿಸುವದಿದ್ರೆ ತಾ. 26–2–1941ರಲ್ಲು ಪೂರ್ವಾಹ್ನ ಗಂಟೆ 10ಕ್ಕೆ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ಜ್ಞಾಹೀರು ಮಾಡಿಕೊಳ್ಳತಕ್ಕದ್ದು—ತಪ್ಪಿದಲ್ಲಿ ನಿಮ್ಮ ಪರೋಕ್ಷದಲ್ಲಿ ಯುಕ್ತಕಂಡ ರೀತಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಲಾಗುತ್ತದೆ.

By order of the Court

Karkala, Date 3—2—1941

K. L. Kudva,
Pleader for petitioners.

ಅಂತರಂಗ ನೈರ್ಮಲ್ಯವೇ ಆರೋಗ್ಯದ ಪ್ರಥಮ ಸೂತ್ರವೆಂದು ಮಕ್ಕಳಿಗೆ ಚಿಕ್ಕಂದಿನಲ್ಲಿಯೇ ಕಲಿಸಿರಿ

ದೇಹದ ಒಳಭಾಗವನ್ನು ನೈರ್ಮಲ್ಯವಾಗಿಸಲು ಯಾವಾಗಲೂ ಅವುಗಳಿಗೆ ಒಂದು ಗ್ಲಾಸು ಎಂಡ್ರೂಸ್ ಲಿವರ್ ಸಾಲ್ಟನ್ನು ಕೊಡಿರಿ. ಎಂಡ್ರೂಸ್ ಲಿವರ್ ಸೋಲ್ಟ್ ಹೊಟ್ಟೆಯನ್ನು ಹಗುರವಾಗಿಯೂ ಸ್ವಚ್ಛವಾಗಿಯೂ ಇಟ್ಟುಕೊಂಡು ಮಲಬದ್ಧತೆ ಮತ್ತು ಇತರ ಬಾಧೆಗಳಿಗೆ ಕಾರಣವಾದ ಮಲಿನತೆಯನ್ನು ಹೊರಡಿಸುತ್ತದೆ. ಮಕ್ಕಳಿಗೆ ಉತ್ತೇಜನವನ್ನೂ, ಬಲವನ್ನೂ ಕೊಟ್ಟು ಮುಖ ಮತ್ತು ಕಣ್ಣುಗಳ ಸೌಂದರ್ಯವನ್ನೂ ಹೆಚ್ಚಿಸಿ, ಸುವರ್ಣೀಯುವುದು.

ಅಂತರಂಗ ನೈರ್ಮಲ್ಯಕ್ಕೆ ಯಾವಾಗಲೂ ಸೇವಿಸಿ

ಎಂಡ್ರೂಸ್ ಲಿವರ್ ಸಾಲ್ಟ್

ANDREWS
LIVER SALT

ಆರೋಗ್ಯ ... ಸನಿಯ ... ವಿರೇಚಕ ... ನೈರ್ಮಲ್ಯ ... ಪಡುವಾಗಲು ... ವದು.

ಸ. ಸ್ಸೈ. 11ಅ.
ದೊ. ಸ್ಸೈ. 1 ರೂ.

ವಿಚಿತ್ರ ಪ್ರಪಂಚ

ಹಿಟ್ಲರನು ವಿವಾಹಿತನೆ?

ಹಿಟ್ಲರನು ಬ್ರಹ್ಮಚಾರಿ ಹೌದೋ, ಅಲ್ಲವೋ ಎಂದು ಯಾರೂ ಹೇಳಲಾರರು. ಯಾಕೆಂದರೆ ಒಬ್ಬನ ಖಾಸಗಿ ಜೀವನವನ್ನು ಸೂಕ್ಷ್ಮವಾಗಿ ನೋಡುವುದು ಬಹಳ ಪ್ರಯಾಸದ ಕೆಲಸ. ಹೇಗಿದ್ದರೂ, ಹಿಟ್ಲರನು ಅವಿವಾಹಿತನೆಂದೇ ಎಲ್ಲರೂ ಊಹಿಸಿದ್ದರು. ಆದರೆ ಅವನು ವಿವಾಹಿತನಾಗಿದ್ದಾನೆಂದೂ ಈಗ ಸುದ್ದಿ ಉಂಟಾಗಿದೆ. ವಿವಾಹಿತ ಹಿಟ್ಲರ್ ದಂಪತಿಗಳ ಒಂದು ಭಾವಚಿತ್ರವು ಲಂಡನಿನ ಒಂದು ಪತ್ರಿಕೆಯಲ್ಲಿ ಛಾಪೆಯಾಗಿದೆ. ಈ ಪತ್ರಿಕೆಯ ಸುದ್ದಿಗಾರನು ಹೇಳುವಂತೆ ಹಿಟ್ಲರನ ಹೆಂಡತಿಯ ಹೆಸರು ಈವಿ ಬ್ರೋನ್ ಎಂದು, ಪ್ರಾಯ ೨೮ ವರ್ಷ. ಬರ್ಚ್‌ಟೆಸ್‌ಗೇತನಿನ ಹಿಟ್ಲರನ ಮನೆಯಲ್ಲಿ ಅವಳು ವಾಸವಾಗಿ ಇರುವಳು. ಇವಳು ಆಹಾರಪಾನೀಯ ಉಡಿಗೆಗಳ ವಿಚಾರದಲ್ಲಿ ಅತ್ಯಂತ ಸರಳಳಾಗಿದ್ದು ಹಿಟ್ಲರನ ಸಾಂಸಾರಿಕ ಸುಖಕ್ಕೆ ವ್ಯತಿಚಾರದ ಹಾಗೆ ಬಹಳ ಮುತುವರ್ಜಿಯಿಂದ ನಡೆಕೊಳ್ಳುತ್ತಿರುವಳು. ಜರ್ಮನಿಯ ಜನರು ಬ್ರಹ್ಮಚಾರಿ ಹಿಟ್ಲರನನ್ನು ದೇವತಾಪುರುಷನೆಂದು ತಿಳಿಯುವರು. ಅವನು ವಿವಾಹಿತನೆಂದು ಅವರಿಗೆ ಗೊತ್ತಾದರೆ ಅವನ ಮೇಲೆ ಅವರು ಇಟ್ಟಿರುವ ಶ್ರದ್ಧೆಯೂ ಪೂಜ್ಯಭಾವನೆಯೂ ಕಡಿಮೆಯಾಗಬಹುದೆಂಬುದರಿಂದ, ವಿವಾಹದ ಸಮಾಚಾರವಾಗಲೀ ಈವಿ ಬ್ರೋನಳ ಭಾವಚಿತ್ರವಾಗಲೀ ಜರ್ಮನಿಯ ಯಾವ ಪತ್ರಿಕೆಯಲ್ಲಿಯೂ ಪ್ರಕಟವಾಗಿರುವುದಿಲ್ಲ.

ಗಡ್ಡ ಮೀಸೆಯ ಹೆಂಗಸು

ಇಂಗ್ಲೆಂಡಿನ ವೆಸ್ಟ್ ಮಿನಿಸ್ಟರಿನ ಒಂದು ಆಸ್ಪತ್ರೆಯಲ್ಲಿ ಒಬ್ಬ ಬ್ರಿಟಿಷ್ ಹೆಂಗಸು ಇದ್ದಾಳೆ. ಇವಳಿಗೆ ೧೮-೧೯ ವರ್ಷಗಳು ತುಂಬುತ್ತ ಬಂದ ಹಾಗೆ ಹುಡುಗರ ಹಾಗೆ ಇವಳಿಗೂ ಗಡ್ಡಮೀಸೆಗಳು ಬರಲಾರಂಭಿಸಿ ಈಗ ಅವಳು ಒಬ್ಬ ಪ್ರಾಯಭರಿತ ಗಂಡಸಿಗೆ ಇರುವ ಹಾಗೆಯೇ ಗಡ್ಡ ಮೀಸೆ ಬೆಳೆದವಳಾಗಿದ್ದಾಳೆ. ಸಾಮಾನ್ಯ ಸ್ತ್ರೀಯಾದರೆ ತನಗೆ ಗಡ್ಡ ಮೀಸೆ ಬೆಳೆದಿರುವುದನ್ನು ನೋಡಿ ನೋಡಿ ಲಜ್ಜೆಯಿಂದ ಮುದುಡಿ ಹೋಗಬಹುದು. ಆದರೆ ಇವಳಿಗೆ ಮಾತ್ರ ತನ್ನ ಗಡ್ಡ ಮೀಸೆಗಳಿಂದ ಯಾವ ಸಂಕೋಚವೂ ಇರುವುದಿಲ್ಲ. ಮಾತ್ರವಲ್ಲ; ಗಡ್ಡ ಮೀಸೆ ಬೆಳೆದಿರುವ ತನ್ನನ್ನು ಯಾರಾದರೂ ಖಾಯಸು ಮಾಡಿ ಮದುವೆಯಾಗಬಹುದೆಂದೂ ಆಶೆಯನ್ನು ಇಟ್ಟುಕೊಂಡಿದ್ದಾಳೆ!

ಕುದುರೆ ಮರಿಗೆ ದನ ಮೊಲೆ ಕೊಡುವುದು

ಅಮೇರಿಕದಲ್ಲಿ ಒಂದು ವಿಚಿತ್ರ ದನವಿದೆ. ಇದು ತನ್ನ ಕರುವಿನ ಜೊತೆಗೆ ಒಂದು ಕುದುರೆ ಮರಿಗೂ ಹಾಲು ಕೊಡುತ್ತಿರುವುದು. ಕುದುರೆ ಮರಿ ಹುಟ್ಟಿದೊಡನೆ ಅದರ ತಾಯಿ ಕುದುರೆ ಸತ್ತು ಹೋಯಿತು. ಒಕ್ಕಲಿಗನು ಆ ಕುದುರೆ ಮರಿಯನ್ನು ದನದ ಹತ್ತಿರ ಬಿಟ್ಟನು. ದನವು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಕರುವಿನ ಹಾಗೆಯೇ ಅದನ್ನು ಪ್ರೀತಿಸಿ, ಹಾಲುಕೊಟ್ಟು ಸಾಕತೊಡಗಿದೆ. ಪೂರ್ವಜನ್ಮದ ಪ್ರೇಮ ಸಂಬಂಧವೆಂದು ಜನರು ಆಡಿಕೊಳ್ಳುತ್ತಾ ಈ ಪುಣ್ಯ ದೃಶ್ಯವನ್ನು ನೋಡಲು ಗುಂಪುಗುಂಪಾಗಿ ಹೋಗುತ್ತಿದ್ದಾರೆ.

ತಲೆ ಕೆಳಗೆ ಕಾಲು ಮೇಲೆ

ಈಗ ಪ್ರಪಂಚದಲ್ಲಿ ನಡೆಯುವುದೆಲ್ಲ ಉಪ್ರಾಟಿಯಾಗಿ; ತಲೆ ಕೆಳಗೆ, ಕಾಲು ಮೇಲಾಗಿ! ಪ್ರಾಪಂಚಿಕ ಘಟನೆಗಳು ಮಾತ್ರ ಹೀಗಾಗಿವೆ ಎಂದಲ್ಲ; ಪ್ರಪಂಚವೇ ತಲೆಕೆಳಗೆ ಕಾಲು ಮೇಲಾಗಿದೆ ಎಂದರೂ ಅತಿಶಯೋಕ್ತಿಯಾಗಲಿಕ್ಕಿಲ್ಲ. ಇಂಥ ವಿಚಿತ್ರ ಪ್ರಪಂಚದ ಯಥಾರ್ಥ ಪರಿಚಯವು ಆಗಬೇಕಾದರೆ, ಅದನ್ನು ತಲೆ ಕೆಳಗೆ ಕಾಲು ಮೇಲಾಗಿಯೇ ನೋಡಬೇಕು! ಹೀಗೆ ಎಣಿಸಿಕೊಂಡು ಕೆಲಿಫೋರ್ನಿಯದ ವಿಲ್ಮಿಸೋ ನಗರದವರು ತಲೆ ಕೆಳಗೆ ಕಾಲು ಮೇಲಾಗಿ ನಡೆಯುವ ಒಂದು ಸಪ್ತಾಹವನ್ನೇ ಆಚರಿಸಿದ್ದಾರೆ. ಈ ಸಪ್ತಾಹವನ್ನು ಆ ನಗರದ ಅಧ್ಯಕ್ಷರೂ ಆಚರಿಸಿದ್ದಾರೆ. ಎಲ್ಲರೂ ಶೀರ್ಷಾಸನ ಮಾಡಿಕೊಂಡು ನಡೆದಿದ್ದಾರೆ. ಎಲ್ಲಿ ನೋಡಿದರಲ್ಲಿ, ಹೊರ ಊರುಗಳಿಂದ ಬಂದ ಜನರು ಕಾಲು ಮೇಲೆ ತಲೆ ಕೆಳಗೆ ಮಾಡಿ ನಡೆಯುವ ಈ ವಿಚಿತ್ರ ದೃಶ್ಯವನ್ನು ನೋಡಿ ಮೂಗ ಮೇಲೆ ಬೆರಳಿಟ್ಟಿದ್ದಾರೆ. ಪೋಲೀಸರೂ ಸರಕಾರಿ ನೌಕರರೂ ಈ ಸಪ್ತಾಹವನ್ನು ಆಚರಿಸಿದ ಚಿತ್ರಗಳು ಅಮೇರಿಕದ ಪತ್ರಿಕೆಗಳಲ್ಲಿ ತುಂಬಾ ಪ್ರಕಟವಾಗಿರುವವು.

ಈಜಾಡುವ ತೋಟಗಳು

ಕಾಶ್ಮೀರವು ಸಣ್ಣ ದೊಡ್ಡ ಸರೋವರಗಳ ತವರು ಭೂಮಿ. ಅಲ್ಲಿ ಸುಂದರವಾದ ಅನೇಕ ಸರೋವರಗಳಿರುತ್ತವೆ. ಇವುಗಳಲ್ಲಿ ಅಲ್ಲಿಯ ತೋಟಗಾರರು ತೇಲುವ ತೋಟಗಳನ್ನು ಮಾಡಿದ್ದಾರೆ. ಮತ್ತು ಈ ತೋಟಗಳಲ್ಲಿ ಕುಂಬಳಕಾಯಿ, ಬದನೆಕಾಯಿ, ಸೌತೆಕಾಯಿ ಮೊದಲಾದದ್ದನ್ನು ಬೆಳೆಸಿದ್ದಾರೆ. ಇವುಗಳಿಗೆ ನೀರು ಹಾಕುವ ಅಗತ್ಯವೇ ಇರುವುದಿಲ್ಲ. ಯಾಕೆಂದರೆ ಈ ಗಿಡಗಳ ಬೇರುಗಳೆಲ್ಲ ನೀರಿನಲ್ಲಿ ಇಳಿದಿರುತ್ತವೆ.

THE
Canara Banking Corporation Ltd.,
(INCORPORATED IN BRITISH INDIA)
Estd: 1906
Head Office: UDIPI, S. Kanara.
Our attractive Rates on Deposits.
FIXED DEPOSITS

3 to 6 months	2½% p.a.
6 to [illegible]	3%
One year	3½%
Two years	4%
SHORT TERM Deposits:	2½% p.a.
Current Account:	1% p.a.
Savings Bank:	[illegible]

Particulars of other kinds of deposits on application.

BHUVANENDRA PRODUCTS LTD.,
KATAPADI, S. K.
Why Doctors prescribe
"BHUVANENDRA"
NARAYANA TAILA
Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!
ಯಾವ ಕಾರಣದಿಂದ?
'ಭುವನೇಂದ್ರ ನಾರಾಯಣ ತೈಲ
ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ
ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.
ಸ್ಥಳೀಯ ಸ್ಟೋಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ರಥಬೀದಿ.
ಡಾ॥ ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ
ಕಟಪಾಡಿ, ದ. ಕನ್ನಡ.

ಭಗವಾನ್ ರಾಮಕೃಷ್ಣ ಪರಮಹಂಸರು

ವಿವೇಕಾನಂದ! ಅಹಾ! ಎಂತಹ ಕರ್ಣಾನಂದಕರವಾದ ಹೆಸರದು. ಎಂತಹ ಅದ್ಭುತ ವ್ಯಕ್ತಿತ್ವವದು! ಧನ್ಯ! ಭಾರತಮಾತೆಯ ತೇಜೋಮಯ ಪುತ್ರರತ್ನವೇ ಧನ್ಯ!

ವಿವೇಕಾನಂದರ ಜೀವನವೆಂದರೆ ನಾಸ್ತಿಕವಾದದಿಂದ ಆಸ್ತಿಕವಾದಕ್ಕೆ ತಿರುಗಿದ ಒಂದು ಅಗಾಧವಾದ ಸನ್ನಿವೇಶ. ಜಗತ್ತಿನ ಕಣ್ಣನ್ನೇ ಅದು ಕುಕ್ಕಿಸಿತು. ಪ್ರಪಂಚಕ್ಕೆ ಜ್ಞಾನದ ದೀವಟಿಗೆಯನ್ನು ತೋರಿಸಿತು.

ಸ್ವಾಮಿ ವಿವೇಕಾನಂದರ ಹೃದಯವನ್ನು ಸೂರೆಗೊಂಡವರು ಶ್ರೀ ರಾಮಕೃಷ್ಣ ಪರಮಹಂಸರು. ಅವರ ಜೀವನವೂ ಅದ್ಭುತವಾದುದು; ಮಾನವ ಕೋಟಿಯನ್ನೇ ಉದ್ಧಾರಮಾಡುವ ಅಖಂಡ ಶಕ್ತಿಯುಳ್ಳದ್ದು.

ಬಂಗಾಳದ ಕಾಮಾರಪುಕ್ಕರ್ ಎಂಬೊಂದು ಚಿಕ್ಕಹಳ್ಳಿಯಲ್ಲಿ ಖುದಿರಾಮ ಚಂದ್ರಮಣಿ ದೇವಿಯರೆಂಬ ನಿಷ್ಠಾವಂತ ಬ್ರಾಹ್ಮಣ ದಂಪತಿಗಳ ಬಸುರಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ದೇವನು ಜನ್ಮವೆತ್ತಿದನು. ಅಖಿಲ ಭಾರತ ದೇಶ ಆಗ ನಾನಾ ಮತಗಳ ಆಂದೋಳನಕ್ಕೆ ಸಿಕ್ಕಿತ್ತು. ಬಹಳವಾಗಿ ಪರಿತಪಿಸುತ್ತಿತ್ತು. ಆಗಿನ ಆ ವಿಷಮ ಪರಿಸ್ಥಿತಿಯನ್ನು ಸರಿಪಡಿಸಿ, ಎಲ್ಲೆಲ್ಲೂ ಶಾಂತಿಯನ್ನು ಸ್ಥಾಪಿಸುವುದಕ್ಕಾಗಿ ದೇಶಕ್ಕೆ ದೇಶವೇ ಒಬ್ಬ ಮಹಾಪುರುಷನ ಆಗಮನಕ್ಕಾಗಿ ಕಾಯುತ್ತಿತ್ತು. ಅಂಥ ಆ ಸಂಧಿ ಸಮಯದಲ್ಲಿ ಇಡೀ ಪ್ರಪಂಚವನ್ನೇ ತನ್ನ ಅಗಾಧವಾದ ವ್ಯಕ್ತಿತ್ವದಿಂದ ಬೆರಗುಗೊಳಿಸಿದ ಮಹಾಪುರುಷ ಭಾರತದಲ್ಲಿ ಹುಟ್ಟಿಬಂದನು. ಅವನೇ ಶ್ರೀ ರಾಮಕೃಷ್ಣದೇವ.

ಹೆತ್ತವರ ಸದ್ವಾತಾವರಣದ ಸಂಸ್ಕಾರವು ಮಗುವಿನ ಮೇಲಾಗದೆ ಹೋಗುವುದೆ? ಮಗುವೂ ಕೂಡ ಒಬ್ಬರನ್ನು ನಿಂದಿಸುವುದನ್ನೂ, ಒಬ್ಬರನ್ನೇ ಹಿಯಾಳಿಸುವುದನ್ನೂ, ದುಷ್ಟವಾದ ಮಾತುಗಳನ್ನಾಡುವುದನ್ನೂ ಕಲಿಯಲಿಲ್ಲ. ಆ ಮಗುವಿನ ಚಿಕ್ಕಂದಿನ ಹೆಸರು 'ಗದಾಧರ'. 'ಗದಾಧರ' ಇಡೀ ಊರಿಗೇ ಭಾಗ್ಯವಾಗಿದ್ದ.

ಗದಾಧರ, ಭಾವನಾಪರವಶನಾದ ಹುಡುಗ. ಎತ್ತಾದರೂ ತಿರುಗಾಡುತ್ತ ಹೊರಟಾಗ ಸೃಷ್ಟಿಯನ್ನು ಸೂಕ್ಷ್ಮವಾಗಿ ನಿರೀಕ್ಷಿಸುವುದರಲ್ಲಿ ವೇಳೆ ಕಳೆಯಬೇಕು, ಆಕಾಶವನ್ನು ನೆಟ್ಟನೋಟದಿಂದ ನೋಡುವುದು; ಗಿಡಬಳ್ಳಿಗಳನ್ನು ನಿರೀಕ್ಷಿಸುವುದು; ಹಕ್ಕಿಗಳ ಕರ್ಣಮಧುರ ಗಾನವನ್ನು ಕಿವಿಯಾರೆ ಕೇಳುವುದು, ಇನ್ನೂ ಇಂತಹದನ್ನೇನಾದರೂ ನೋಡಿದನೆಂದರೆ ತನ್ನನ್ನು ತಾನೇ ಮರೆತುಬಿಡುತ್ತಿದ್ದ.

ಹಿಂದಣ ಪುರಾಣೇತಿಹಾಸಗಳಲ್ಲಿ ಗದಾಧರನಿಗೆ ಬಹಳ ಶ್ರದ್ಧೆ. ಆ ರಮ್ಯ ಕಥಾನಕಗಳಲ್ಲಿನ ನಾಯಕರು ಗದಾಧರನ ಮೆಚ್ಚುಗೆಗೆ ಪಾತ್ರರು.

ಒಂದು ಗ್ರಾಮಸ್ಥರು ಅಭಿನಯಿಸಿದ ಒಂದು ಆಟದಲ್ಲಿ, ಗದಾಧರನು ಶಿವನ ಪಾತ್ರವನ್ನು ವಹಿಸಿ ಜನರನ್ನು ಮುಗ್ಧರನ್ನಾಗಿ ಮಾಡಿದನು.

ಗದಾಧರನ ಉಪನಯನವಾಯಿತು. ಉಪನಯನದ ದಿನ ಮಾತೃಭಿಕ್ಷೆ ಬೇಡುವುದೊಂದು ಸಾಂಪ್ರದಾಯ. ಅಂದು ತನ್ನನ್ನು ಬಹುಪ್ರೀತಿಯಿಂದ ಎತ್ತಿ, ಮುದ್ದಿಸಿ, ಚಿಕ್ಕಂದಿನಲ್ಲಿ ಆಡಿಸುತ್ತ ಬಂದಿದ್ದ ಒಬ್ಬ ಶೂದ್ರ ಹೆಂಗುಸಿನಿಂದ ಭಿಕ್ಷೆ ಬೇಡಿದನು. ಅವಳ ಕಣ್ಣುಗಳು ಆನಂದ ಭಾಷ್ಪಗಳನ್ನು ಸುರಿಸಿದುವು.

ಗದಾಧರ ಇನ್ನೂ ತೀರ ಚಿಕ್ಕವನಿದ್ದಾಗ ಅವನ ತಂದೆ ಪರಂಧಾಮವನ್ನೈದಿದರು. ಈತನ ಅಣ್ಣ ರಾಮಕುಮಾರ ಜೀವನಪಥ ಸಾಗಿಸುವ ನೆಪದಿಂದ ಕಲ್ಕತ್ತೆಗೆ ಹೋದ. ಕಾಲಾಂತರದಿಂದ ಗದಾಧರನೂ ಅಲ್ಲಿಗೆ ಬಂದ.

ಕಲ್ಕತ್ತಾನಗರದ ಸಿರಿವಂತಳೊಬ್ಬಳು ಕಟ್ಟಿಸಿದ ರಾಧಾಮಾಧವ ಮಂದಿರದ ಪೂಜೆಗಾಗಿ ಅರ್ಚಕರೊಬ್ಬರು ಬೇಕಾಗಿತ್ತು. ಅದಕ್ಕಾಗಿ ರಾಮಕುಮಾರ ಆರಿಸಲ್ಪಟ್ಟ.

ಗದಾಧರ ತನ್ನ ಅಣ್ಣನ ಸಹಾಯಕನಾದ. ದಿನಂಪ್ರತಿ ದೇವಾಲಯಕ್ಕೆ ಹೋಗಿ ಪೂಜಾಸಾಮಾನುಗಳನ್ನು ಪೂರೈಸಿಕೊಡುತ್ತಿದ್ದ.

ಹಲವು ದಿನ ಗತಿಸಿ ಹೋದುವು. ರಾಮಕುಮಾರನಿಗೆ ಕಾಯಿಲೆಯಾಯಿತು. ಗದಾಧರ ಗಾಬರಿಯಾದ. ರಾಮಕುಮಾರ ತನ್ನ ನಶ್ವರದೇಹವನ್ನು ತ್ಯಜಿಸಿ ತಿರುಗಿ ಬಾರದ ಹಾದಿಗೆ ಹೋಗಿಬಿಟ್ಟ.

ಆಗ ಗದಾಧರನಿಗಾದ ದುಃಖ ಅಷ್ಟಿಷ್ಟಲ್ಲ! ರಾಧಾಮಂದಿರದ ಬಳಿಯಲ್ಲಿಯೇ ಕಾಳಿಯಗುಡಿ ಇತ್ತು. ಈ ದೇವಿಯ ಪೂಜೆಯೂ ಗದಾಧರನ ಕೊರಳಿಗೆ ಬಿತ್ತು.

ದೇವತಾಪೂಜೆಯನ್ನು ಬಹು ಭಕ್ತಿಯಿಂದ ಮಾಡುತ್ತಿದ್ದ ಗದಾಧರ. "ತಾಯಿ, ನನಗೆ ಪ್ರತ್ಯಕ್ಷಳಾಗು" ಎಂದು ಅನ್ನುತ್ತಿದ್ದ ಗದಾಧರ.

ದೇವಿಯನ್ನು ಪ್ರತ್ಯಕ್ಷಳನ್ನಾಗಿಸಿಕೊಳ್ಳುವ ಹುಚ್ಚು ಗದಾಧರನಿಗೆ ದಿನೇ ದಿನೇ ಹೆಚ್ಚಾಗಲಾರಂಭಿಸಿತು. ಅದಕ್ಕಾಗಿ ಬೇಕಾದ ಯಾವ ತ್ಯಾಗಕ್ಕೂ ಗದಾಧರ ಸಿದ್ಧನಾಗಿಬಿಟ್ಟ.

ದೇವಿಯನ್ನು ಕುರಿತು ಗಟ್ಟಿಯಾಗಿ ಕೂಗುವುದೂ, ಅಳುವುದೂ, ಗೋಳಿಡುವುದೂ ಪ್ರಾರಂಭವಾಯಿತು. ಏನು ಮಾಡಿದರೂ ದೇವಿ ತೋರಿ ಕಾಣಲಿಲ್ಲ. ಹೀಗೆ ಎಷ್ಟೋ ದಿನಗಳು ಮರೆಯಾಗಿ ಹೋಗಿದ್ದುವು.

ಅಂದು ದೇವಿಯ ದರ್ಶನಕ್ಕಾಗಿ ಬಹಳವಾಗಿ ಶೋಕಿಸಿ ನಿರಾಶನಾಗಿ ಬಿಟ್ಟಿದ್ದ. ಅತ್ತು ಅತ್ತು ಕಣ್ಣು ಕೆಂಪಗಾಗಿ ಹೋಗಿದ್ದುವು. ದುಃಖ ಇನ್ನೂ ತುಂಬಿ ತುಂಬಿ ಬರುತ್ತಲಿತ್ತು. ಜೀವನದಲ್ಲಿ ಏನು ಸೊಗಸಿದೆ? ದೇವಿ ಪ್ರತ್ಯಕ್ಷಳಾಗಿ ನನ್ನೊಡನೆ ಮಾತಾಡಲಿಲ್ಲ! ಇನ್ನೂ ಜೀವಿಸಿರುವಲ್ಲಿ ಉಪಯೋಗವೇನು? ಎಂದವನೇ ದೇವಿಯ ಕೈಯಲ್ಲಿಯ ಖಡ್ಗವನ್ನು ತಕ್ಕೊಂಡು ತನ್ನ ಕುತ್ತಿಗೆಯನ್ನು ಕಡಿಯ್ದುಕೊಂಡು ಸಾಯಲು ಸಿದ್ಧನಾಗಿಬಿಟ್ಟನು; ತತ್‌ಕ್ಷಣವೇ ವಿಚಿತ್ರ ಘಟನೆಯೊಂದು ಒದಗಿತು. ಇಡೀ ಗುಡಿಯೇ ಕಣ್ಮರೆಯಾಯಿತು. ಭೋರ್ಗರೆಯುವ ಅಗಾಧವಾದ ಸಮುದ್ರ ಕಂಗೊಳಿಸಿತು. ಅಲ್ಲಿ ಸಹಸ್ರಕೋಟಿ ಕಿರಣ ತೇಜಸ್ವಿನಿಯಾದ ಮಹಾಮಾತೆಯಾದ ಭವತಾರಿಣಿಯ ದರ್ಶನವಾಯಿತು.

ಕರೆದಾಗಲೆಲ್ಲ ದೇವಿ ತನ್ನೆದುರು ಬಂದು ನಿಲ್ಲಬೇಕೆಂದು ಗದಾಧರನ ಯೋಚನೆ; ಇಚ್ಛೆ. ಅದಕ್ಕಾಗಿ ಅಹರ್ನಿಶವೂ ಅವನ ತಪಸ್ಸು ನಡೆಯಿತು. ಇದರಿಂದ ಅವನ ದೇಹ ಪ್ರಕೃತಿ ಕೆಟ್ಟಿತು. ತಾಯಿ ಮಗನನ್ನು ತನ್ನ ಊರಿಗೆ ಕರೆಯಿಸಿಕೊಂಡು ಉಪಚರಿಸಿದಳು.

ಗದಾಧರನು ಇಪ್ಪತ್ತನಾಲ್ಕು ವರ್ಷದವನಿದ್ದಾಗ ಅವನಿಗೆ ಮದುವೆಯಾಯಿತು. ತಾನು ಆರಿಸಿದ ಕನ್ಯೆಯನ್ನು ಆತ ವರಿಸಿದ.

ಗದಾಧರನು ಮದುವೆಮಾಡಿಕೊಂಡಿದ್ದೇನೋ ನಿಜ. ಆದರೆ ಸಂಸಾರದಲ್ಲಿ ಅವನು ಆಸಕ್ತಿಯನ್ನು ತೋರಲಿಲ್ಲ. ಅವನ ಹೆಂಡತಿಯೂ ಆತನಿಗೆ ಅನುಕೂಲಳಾಗಿಯೇ ಇದ್ದಳು.

ಗದಾಧರನ ಭಕ್ತಿ ಮಗು ತಾಯಿಯನ್ನು ಒಲಿಸಿಕೊಳ್ಳುವ ತೆರಹದ್ದಾಗಿತ್ತು.

ಇವನನ್ನು ಜನರೆಲ್ಲ ಹುಚ್ಚನೆನ್ನುವರು; ನಗುವರು, ಗೇಲಿಮಾಡುವರು, ಆದರೆ, ತನ್ನಷ್ಟಕ್ಕೆ ತಾನು ಮಾತ್ರ ಬಹಳ ಸಮಾಧಾನ ಶಾಂತಿಗಳನ್ನು ಹೊಂದಿದ್ದ ಗದಾಧರ.

ದಿನಗಳುರುಳಿದಂತೆ ಶ್ರೀರಾಮಕೃಷ್ಣನ ಕೀರ್ತಿ ಹರಡಲಾರಂಭಿಸಿತು. ತೋತಾಪುರಿಯೆಂಬ ಅದ್ವೈತ ವೇದಾಂತಿಯಲ್ಲಿ ಜ್ಞಾನವನ್ನು ಪಡೆದನು.

ಗದಾಧರನು ಹಿಂದು, ಕ್ರೈಸ್ತ, ಬೌದ್ಧ ಇಸ್ಲಾಂ ಈ ಎಲ್ಲಾ ಧರ್ಮಗಳನ್ನು ಆಳವಾಗಿ ಅಭ್ಯಾಸಮಾಡಿ ಪರಿಪೂರ್ಣತ್ವವನ್ನು ಹೊಂದಿದನು.- ಇದರಂತೆ ಅನೇಕ ವಿಧವಾದ ಸಿದ್ಧಿಗಳನ್ನು ಪಡೆದು ಪರಮಹಂಸನಾದನು. ಜ್ಞಾನಿಯಾದನು. ಸಿದ್ಧನಾದನು.

ಆ ಸಮಯಕ್ಕೆ ನರೇಂದ್ರನು (ಮುಂದೆ ಇವನೇ ವಿವೇಕಾನಂದರೆಂದು ಹೆಸರಾದನು.) ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡಿ ನಾಸ್ತಿಕವಾದವನ್ನು ಎತ್ತಿಹಿಡಿದಿದ್ದನು. ಸಂಶಯ ನಿವೃತ್ತಿಗಾಗಿ ಎಷ್ಟೋ ಜನ ಪಂಡಿತರನ್ನು ಭೆಟ್ಟಿಮಾಡಿ ಚರ್ಚಿಸಿದನು. ಅವನಿಗೆ ಎಲ್ಲಿಯೂ ಸರಿಯಾದ ಮನಶ್ಶಾಂತಿ ಸಿಕ್ಕಲಿಲ್ಲ. ಒಮ್ಮೆ ರಾಮಕೃಷ್ಣರನ್ನು ಕಾಣುವ ಸುಪ್ರಸಂಗ ಒದಗಿತು. ಅದು ನರೇಂದ್ರನ ಜೀವನವನ್ನೇ ತಿರುಗಿಸಿಬಿಟ್ಟಿತು.

ದಕ್ಷಿಣೇಶ್ವರದಲ್ಲಿ ರಾಮಕೃಷ್ಣರಿದ್ದಾಗ ನರೇಂದ್ರನ ಸ್ವಾರಿ ಅಲ್ಲಿಗೆ ಆಗಮಿಸಿತು. ಗುರುದೇವನ ದರ್ಶನಕ್ಕೆಂದು ನರೇಂದ್ರನು ಹೋದನು.

ಗುರುದೇವನ ಆಜ್ಞೆಯ ಮೇರೆಗೆ ನರೇಂದ್ರ ಒಂದೆರಡು ಬಂಗಾಳಿ ಗೀತೆಗಳನ್ನು ಹಾಡಿದ. ಭಕ್ತಿಯಿಂದ ಹಾಡಿದ ಗೀತೆಯನ್ನು ಕೇಳಿ ರಾಮಕೃಷ್ಣರು ಸಮಾಧಿಯನ್ನು ಹೊಂದಿದರು. ನರೇಂದ್ರನನ್ನೂ ಸಮಾಧಿ ಹೊಂದುವಂತೆ ಮಾಡಿದರು.

ನರೇಂದ್ರನನ್ನು ಸಮಾಧಿಸ್ಥನನ್ನಾಗಿಸುವ ಪೂರ್ವ ರಾಮಕೃಷ್ಣರು ಅವನನ್ನು ಒಂದು ಸಣ್ಣ ಕೊಟಡಿಗೆ ಕರೆದೊಯ್ದು ಅವನ ತಲೆಯ ಮೇಲೆ ಕೈಯಿಟ್ಟರು. ಆಗ ಅದ್ಭುತವಾದ ಬದಲಾವಣೆಯಾಯಿತು.

ಅಂದಿನಿಂದ ನರೇಂದ್ರ ಶ್ರೀರಾಮಕೃಷ್ಣರ ಪರಮ ಶಿಷ್ಯನಾಗಿಬಿಟ್ಟನು.

ಹಿಂದುಸ್ಥಾನದ ಕೀರ್ತಿಯನ್ನು ಪರದೇಶದಲ್ಲಿಯೂ ಹಬ್ಬಿಸಿದ ಜಗದ್ವಂದ್ಯನಾದನು.

ಅಮೇರಿಕೆಯಲ್ಲಿ ಕೂಡಿದ ಸರ್ವಧರ್ಮ ಪರಿಷತ್ತಿನಲ್ಲಿ ಹಿಂದೂಧರ್ಮವನ್ನು ಎತ್ತಿ ಹಿಡಿದು ಅಸ್ಖಲಿತವಾದ ಭಾಷಣಮಾಡಿ ಪರದೇಶಿಯರನ್ನು ಮುಗ್ಧರನ್ನಾಗಿಸಿಬಿಟ್ಟ ವಿವೇಕಾನಂದ! ಎಷ್ಟೋ ಜನ ಈತನ ಶಿಷ್ಯರಾದರು; ಹಿಂದೂ ಧರ್ಮವನ್ನು ಸ್ವೀಕಾರ ಮಾಡಿದರು.

ಶ್ರೀರಾಮಕೃಷ್ಣ ಪರಮಹಂಸರಂಥ ಅದ್ವಿತೀಯ ಗುರುವಿನ ಶಿಷ್ಯನಾಗಿ ವಿವೇಕಾನಂದ ಜಗತ್ತಿನ ಕಣ್ಣನ್ನೇ ಕುಕ್ಕಿಸಿದನು. ಧನ್ಯ! ಭಾರತ ಜ್ಯೋತಿ! ಇನ್ನೊಮ್ಮೆ ಹುಟ್ಟಿ ಬಾ! ಭಾರತವನ್ನು ಪುನಃ ಬೆಳಗಿಸು!

(ಸ್ವ.-ಕ.)

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ
R. E. P. 689/1940
in O. S. 305/38

ಅರ್ಜಿದಾರ್‍ರು—ಕಲೆಕ್ಟರ್ of S. Kanara
ಎದುರು—ಗೋಪಾಲಕೃಷ್ಣ ಚಡಗ ಕೂಡ್ಲು
ಸದ್ರಿ ಅಮ್ಮಲಜಾರಿಯ 5ನೇ ಪ್ರತಿವಾದಿ
ಎದ್ರಿ ಲಕ್ಷ್ಮಿ—ವೆಂಕಟೇಶ ಚಡಗರ ವಿಧವೆ—ಪುತ್ತೂರು ತಾಲ್ಲೂಕು ನೆಟ್ಟಣಿಗೆ ಗ್ರಾಮ, ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಸದ್ರಿ ವ್ಯಾಜ್ಯದಲ್ಲಿ, ಅರ್ಜಿದಾರ್‍ರಿಗೆ ಬರತಕ್ಕ ಕೋರ್ಟು ಫೀಸಿನ ಬಾಬ್ತಿಗೆ ದಾಖಲು ಮಾಡಿದ ಮೇಲ್ಕಂಡ ಅಮ್ಮಲ್ಜಾರಿ ಅರ್ಜಿ ಡಿಕ್ರಿ ವಿಧಿ ಪ್ರಕಾರ, ಸರ್ಕಾರಕ್ಕೆ ಬರತಕ್ಕ ಕೋರ್ಟು ಫೀಸಿನ ಬಾಬ್ತಿಗೆ ಪ್ರಥಮ ಜವಾಬ್ದಾರಿ ಕೊಟ್ಟಿರುವ ಸ್ಥಿರಾಸ್ತಿಯನ್ನು ಯೇಲಂಪಡಿಸಬೇಕಾಗಿ ಅರ್ಜಿದಾರರು ಅಪೇಕ್ಷಿಸಿದ್ದರಿಂದ ಯೇಲಂ ಇಸ್ತಿಹಾರಿನ ಷರ್ತುಗಳು ನಿರ್ಣಯಿಸುವರೇ ತಾರೀಕು 21-2-'41 ಕ್ಕೆ ಇಟ್ಟಿರುವುದರಿಂದ, ಆ ಕುರಿತು ನಿಮ್ಮ ಆಕ್ಷೇಪವಿದ್ದಲ್ಲಿ ಆ ದಿವಸ ಸದ್ರಿ ಕೋರ್ಟಿನ ಮುಂದೆ ಹಗಲು 10 ಗಂಟೆಗೆ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದು. ಎಂತ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಲ್ಪಟ್ಟಿರುತ್ತದೆ.

By order of the Court

Puttur 24-1-'41 } B. Adrtha Balige, Pleader for Petitioner

★ ಸಿನೆಮಾ ಪ್ರಪಂಚ ★

ಲೀಲಾ ದೇಸಾಯಿ ಕೇರಳ ಕಲಾ ಮಂಡಲಕ್ಕೆ

ನೃತ್ಯಯಾತ್ರೆಯಲ್ಲಿ ಹೊರಟ ಲೀಲಾ ದೇಸಾಯಿ ಕವಿ ವಲ್ಲತ್ತೋಳ ಕೇರಳ ಕಲಾ ಮಂಡಲಕ್ಕೆ ಬೇಗನೇ ಬರಲಿರುವ ಳೆಂದು ವದಂತಿಯಿದೆ ಕಲಾಮಂಡಲದ ಕಥಕ್ಕಳಿ ನೃತ್ಯವು ಉತ್ತರದ ಹಾಗೂ ಇತರ ಅನೇಕ ನರ್ತಕರನ್ನು ತನ್ನೆಡೆಗೆ ಆಕರ್ಷಿಸಿದೆ. ಕೇರಳ ಕಲಾಮಂಡಲ ದಲ್ಲಿ ಕವಿ-ವಲ್ಲತ್ತೋಳರು ಕಥಕ್ಕಳಿ ಯನ್ನು ಕಲಿಸುತ್ತಿದ್ದಾರೆ ಕಥಕ್ಕಳಿ ನೃತ್ಯವು ಕೇರಳದ ಪ್ರಾಚೀನ ಕಲಾಕೀರ್ತಿ ಯಾಗಿದೆ.

ರಾಧಾರಾಣಿ

ಕರ್ದಾರರ 'ಸ್ವಾಮಿ' ಚಿತ್ರದಲ್ಲಿ ರೇಡಿಯೋ ನಟಿ ರಾಧಾರಾಣಿಯು ಪಾತ್ರವಹಿಸುವಳೆಂದು ತಿಳಿದುಬಂದಿದೆ ಕಳೆದ ವಾರ ಈ ಚಿತ್ರದ ಪ್ರಾರಂಭವು ಆಗಿದೆ.

ಮಿಸ್ ವಾಹಿದನಳ ನಿಧನ

ಆಲಿಬಾಬದಲ್ಲಿ ಅಭಿನಯಿಸಿ ಪ್ರಖ್ಯಾತಿ ಪಡೆದ ಗಾಯಕಿ ನಟಿ ಮಿಸ್ ವಾಹಿದನಳು ನಿಧನಹೊಂದಿದಳು ಅವಳು ಇತ್ತೀಚೆಗೆ ನ್ಯಾಶನಲ್‌ನವರ 'ಸಂಸ್ಕಾರ' ದಲ್ಲಿ ಅಭಿನಯಿಸಿದ್ದಳು

ಚಿತ್ರಲೇಖಾ

ಕಲ್ಕತ್ತದ ಫಿಲ್ಮ್ ಕೊರ್ಪೊರೇಶನ್ ಒಫ್ ಇಂಡಿಯಾ ಇದರ ಸುದ್ದಿಯಿಂದ ತಿಳಿದುಬರುವುದೇನಂದರೆ, ಚಿತ್ರಲೇಖಾ ಎಂಬ ಹೆಸರಿನ ಚಂದ್ರಗುಪ್ತ ಚಕ್ರವರ್ತಿಯ ಕಾಲದ ಐತಿಹಾಸಿಕ ಚಿತ್ರವೊಂದು ಬೇಗನೇ ಸಿದ್ಧವಾಗಲಿದೆ ಯೆಂದು. ಇದರ ಕಥಾಲೇಖಕರು ಶ್ರೀ ಭಗವತೀ ಚರಣ ವರ್ಮರು ಕಾಶೀ ವಿಶ್ವವಿದ್ಯಾಲಯದ ಎಂ ಎ, ತರಗತಿಗೆ ಈ ಕಥೆಯು ಪಠ್ಯಪುಸ್ತಕವಾಗಿದೆ.

ಅಪವಾದ

ಈ ನಿರ್ದೇಶಕ ರಾವ್-ಬ್ರಹ್ಮರ ಹೊಸ ತೆಲುಗು ಸಾಮಾಜಿಕ ಚಿತ್ರವು ಅಪವಾದ ಎಂಬ ಹೆಸರಿನಿಂದ ರಚಿತವಾಗುತ್ತದೆ. ಮಿಸ್ ರಾಜ್ಯಂ, ಬಾಲಸರಸ್ವತಿ, ವರಲಕ್ಷ್ಮಿ, ಬಾಲಮಣಿ, ರಾಮಯ್ಯ ಮೊದಲಾದವರು ಇದರಲ್ಲಿ ಅಭಿನಯಿಸುವರು

ಸರ್ವಾಧಿಕಾರಿಯನ್ನು ಮೆಚ್ಚಿಸಿದ ಭಾರತ ಗಾಯಕ

ಓಂಕಾರನಾಥ ಎಂಬವರು ಪ್ರಸಿದ್ಧ ಭಾರತ ಗಾಯಕರು. ಅಖಿಲ ಪ್ರಪಂಚವನ್ನೇ ಗಾಯನ ವಿದ್ಯೆಮಾಡಿ ತಿರುಗಿದ್ದಾರೆ. ಅವರನ್ನು ಒಮ್ಮೆ ಸಂಗೀತ ಕೇಳಲು ಇಟಲಿಯ ಸರ್ವಾಧಿಕಾರಿಯು ರಾಜಅತಿಥಿಯಾಗಿ ಆಮಂತ್ರಿಸಿದ್ದ. ಓಂಕಾರನಾಥರ ಸಂಗೀತವು ಮುಸ ಲಿನಿಯನ್ನೂ ಮರುಳುಗೊಳಿಸಿ ಬಿಟ್ಟಿತೆಂದು ತಿಳಿದುಬಂದಿದೆ

ಅಕೇಲಾ

ಗ್ರೇಟ್ ಇಂಡಿಯಾ ಪಿಕ್ಚರ್ಸಿನವರ ಎರಡನೆಯ ಚಿತ್ರ 'ಅಕೇಲಾ' ಚಿತ್ರದ ಪ್ರಾರಂಭೋತ್ಸವವು ಕಳೆದ ತಿಂಗಳ ಪ್ರಾರಂಭದಲ್ಲಿ ನಡೆಯಿತು. ಇದರಲ್ಲಿ ಮಜಾರ್ ಖಾನ್, ರಾಮ ಮರಾಟೆ, ಬಿಬ್ಬೊ, ಬಿಲ್‌ಮೋರಿಯಾ ಮೊದಲಾದವರು ಅಭಿನಯಿಸುವರು ಇದರ ನಿರ್ದೇಶಕತ್ವವನ್ನು ಪಿಸ್ಸಿ ಕರಾನಿಯವರು ನಡೆಸುವರು

ಶಹಜಾದಿ

ಮೋಹನ ಪಿಕ್ಚರ್ಸಿನವರು ಶಹಜಾದಿ ಯೆಂಬ ಚಿತ್ರವನ್ನು ಪ್ರಾರಂಭಿಸಿದ್ದಾರೆ ಅದ್ವಾನಿಯವರ ನಿರ್ದೇಶಕತ್ವ ಅಲೋಕಾ, ಪ್ರೇಮಲಾ, ನವೀನಚಂದ್ರ ಇವರ ಅಭಿನಯ.

ಜಮಾನಾ

ದರ್ಯಾನಿ ಸಹೋದರರು ತಮ್ಮ ಮೊನ್ನಿನ ಪಂಜಾಬೀ ಚಿತ್ರ 'ಜಮಾನಾ' ವನ್ನು ತಯಾರಿಸಲು ರಣಜಿತ್ ಸ್ಟುಡಿಯೋವನ್ನು ನಿಶ್ಚಯಿಸಿರುವರಂತೆ

ಪಡೋಸಿ

ಬೊಂಬಾಯಿಯಲ್ಲಿ ಪ್ರಕಟವಾಗದ ಮೊದಲೇ ನಿಶ್ಚಯವಾದ ದಿನ ಪ್ರಕಟಿಸಲು ಆಗಲಿಲ್ಲವೇಕೆಂದರೆ ಕೆಲವು ಸೆನ್ಸರ್ ಆಗುವ ವಿಷಯ ಗಳು ಇದ್ದುವಂತೆ ಈಗ ಪ್ರತಿಯೊಂದೂ ಸಮರ್ಪಕವಾಗಿದೆ ಯೆಂದು ತಿಳಿದು ಬಂದಿದೆ

ಮೊಲಿನಾ ಇಂದ್ರ ಮೂವಿಟೋನಿಗೆ

ಪ್ಯಾರಾಮೌಂಟ್ ಥಿಯೇಟರ್ಸಿನ ಪ್ರಸಿದ್ಧ ನಟಿ ಮೊಲಿನಾ ಈಗ ಇಂದ್ರ ಮೂವಿಟೋನನ್ನು ಸೇರಿ ಶ್ರೀ ರಾಧಾ ಚಿತ್ರದಲ್ಲಿ ಪ್ರಾಮುಖ್ಯ ಪಾತ್ರವಹಿಸ ವಳೆಂದು ತಿಳಿದುಬರುತ್ತದೆ

ಪ್ರಶಾಂತ ದಾಸ ಗುಪ್ತ

ಲಕ್ನೋ ಮೋರಿಸ್ ಕೊಲೆಜ್ ಒಫ್ ಮ್ಯೂಸಿಕ್ ಇದರ ಪ್ರಸಿದ್ಧ ಸಂಗೀತಾಧ್ಯಾಪಕರಾದ ಪ್ರಶಾಂತದಾಸ ಗುಪ್ತರು ಬೊಂಬೇ ಟೊಕಿಸಿಗೆ ಸಂಗೀತ ನಿರ್ದೇಶಕರಾಗಿ ಸೇರಿರುವರೆಂದು ಗೊತ್ತಾಗಿದೆ.

HALFTONE & LINE
BLOCK MAKING
UNDERTAKEN
Pharada Sress,
MANGALORE

ಆರೋಗ್ಯ ಮತ್ತು ಸೌಂದರ್ಯಕ್ಕೆ
ಈ ಇಮ್ಮಡಿ ಗುಣದ ಸಾಬೂನನ್ನೇ ಉಪಯೋಗಿಸಿರಿ

ಕಾಂತಿಯನ್ನುಂಟುಮಾಡುವ ಮತ್ತು ಔಷಧಿಯುಕ್ತವಾದ ಇಮ್ಮಡಿ ಗುಣಗಳಿರುವ ಸಾಬೂನು ಕುಟಿಕೂರಾ ಟಾಯ್ಲೆಟ್ ಸಾಬೂನು (Cuticura Toilet Soap) ನಿಮ್ಮ ಮೈಯ ಚರ್ಮವನ್ನು ಸೌಂದರ್ಯಮಯವಾಗಿಯೂ ಆರೋಗ್ಯ ಸ್ಥಿತಿಯಲ್ಲಿರಿಸುವಂತೆಯೂ ಔಷಧೀಕರಿಸಿರುತ್ತದೆ. ಈ ಸಾಬೂನಿನಿಂದ ಹೊರಟ ಮಹತ್ತಾದ ನೊರೆಯು ಚರ್ಮರಂಧ್ರಗಳಿಂದ ಕಲ್ಮಶಗಳನ್ನು ತೆಗೆಯುತ್ತದೆ ಈ ಇಮ್ಮಡಿ ಗುಣಗಳಿರುವ ಸೌಂದರ್ಯಯುಕ್ತವಾದ ಸಾಬೂನನ್ನು ಉಪಯೋಗಿಸಿ ಸೌಂದರ್ಯವನ್ನು ಗಳಿಸಿರಿ

ಕುಟಿಕೂರಾ ಸಾಬೂನು (Cuticura Soap) ಬಣ್ಣೆಯಂತೆ ಗುಣವುಳ್ಳದ್ದಾಗಿದೆ ದೊರಗಾದ ಚರ್ಮವನ್ನು ನುಣುಪಾಗಿರಿಸುತ್ತದೆ.

ಸೌಮ್ಯ ಕ್ರಿಮಿನಾಶಕ ಗುಣವುಳ್ಳದ್ದು—ಚರ್ಮವನ್ನು ಸ್ವಚ್ಛವಾಗಿರಿಸುವುದು ಮುದ್ದಣ, ಚರ್ಮವ್ಯಾಧಿಗಳಿದ್ದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಇದರ ಕ್ರಿಮಿನಾಶಕ ಗುಣಯುಕ್ತವಾದ ಔಷಧಿಯು ಚರ್ಮವ್ಯಾಧಿಯನ್ನು ಕೂಡಲೇ ಗುಣಪಡಿಸುವುದು ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಉತ್ತಮವಾದದ್ದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಸಾಬೂನು
CUTICURA SOAP

— ರಹಸ್ಯವು ಪ್ರಕಟಮಾಡಲ್ಪಟ್ಟಿತು —
ಕ್ರಮವಾಗಿ ಲೋಧ್ರವನ್ನು ಉಪಯೋಗಿಸುವುದರಿಂದ ಅದು ತನ್ನನ್ನು ಈ ವಯಸ್ಸಿನಲ್ಲಿ ಕೂಡಾ ಆರೋಗ್ಯದಲ್ಲಿಯೂ ತಾರುಣ್ಯದಂತೆ ಆನಂದದಾಯಕವಾಗಿರಿಸುವುದೆಂದು ಅಜ್ಜಿಯು ಶಿಫಾರಸು ಮಾಡುತ್ತಿರುವಳು.
ಆರೋಗ್ಯಕ್ಕೆ, ಸೌಂದರ್ಯಕ್ಕೆ ಗರ್ಭಾಶಯ ರೋಗಗಳಿಗೆ ಟಾನಿಕು: ಲೋಧ್ರ
ಎಲ್ಲಾ ಕೆಮಿಸ್ಟರಲ್ಲಿಯೂ ದೊರಕುತ್ತದೆ

KESARI KUTEERAM
MADRAS

ಲಿಬಿಯದ ಸ್ಥಾನ ಮಹತ್ವವೇನು?

ಭೂಮಧ್ಯ ಸಾಗರದ ಮೇಲೆ ಅಧಿಕಾರ

ಲಿಬಿಯ ಎಂಬುದು ಉತ್ತರ ಆಫ್ರಿಕದಲ್ಲಿ ಭೂಮಧ್ಯ ಸಾಗರಕ್ಕೆ ಒತ್ತಿಕೊಂಡಿರುವ ಒಂದು ರಾಜ್ಯ. ರೋಮ್ ಸಾಮ್ರಾಜ್ಯವು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ, ಅಂದರೆ ಎರಡು ಸಾವಿರ ವರ್ಷಗಳ ಪೂರ್ವದಲ್ಲಿ ಇದು, ಆ ಸಾಮ್ರಾಜ್ಯದ ಒಂದು ಅಂಗವಾಗಿತ್ತು. ಅದರ ರಾಜಧಾನಿ ಪೆರೀಸ ಎಂಬುದು ಜನಬಿಡವಾದ ದೊಡ್ಡ ಪಟ್ಟಣವಾಗಿ ಸಂಪತ್ತಿನಿಂದ ತುಂಬಿ ತುಳುಕುತಿತ್ತು. ಆದರೆ ಆ ಸಾಮ್ರಾಜ್ಯವು ಧೂಳೀಪಟವಾದ ಮೇಲೆ ಲಿಬಿಯವು ಅರಬರ ಕೈಸೇರಿತು. ಅಂದಿನಿಂದ ಅದು ಅವರ ಅಧೀನವಾಗಿಯೇ ಇದ್ದಿತು. ಆದರೆ ಪಲವತ್ತಾದ ಈ ಪ್ರದೇಶದ ಮೇಲೆ ಸಹರಾ ಮರುಭೂಮಿಯ ಮರಳು ಬಂದು ಬೀಳತೊಡಗಿದುದರಿಂದ ಪೂರ್ವದ ಅದರ ಸಂಪತ್ತು ವೈಭವಗಳು ಕಳೆಯುತ್ತ ಬಂದುವು. ೧೯೧೨ರಲ್ಲಿ ಇಟಲಿಯು ಈ ರಾಜ್ಯವನ್ನು ತುರುಕರಿಂದ ಗೆದ್ದುಕೊಂಡ ಬಳಿಕವೂ ಅದರ ಸ್ಥಿತಿಯಲ್ಲಿ ಸುಧಾರಣೆಯಾಗಿರುವುದಿಲ್ಲ. ಸಮುದ್ರ ದಂಡೆಯ ಸ್ವಲ್ಪ ಪ್ರದೇಶವನ್ನು ಬಿಟ್ಟರೆ ಉಳಿದುದೆಲ್ಲವೂ ಮರಳಿನಿಂದ ತುಂಬಿದ ನಿರ್ಜನ ಭೂಮಿಯಾಗಿದೆ.

ವಿಸ್ತಾರ-ಜನಸಂಖ್ಯೆ

ಆ ದೇಶದಲ್ಲಿ ೧೯೩೨ರಲ್ಲಿ ನಡೆದ ಜನಗಣನೆಯ ಪ್ರಕಾರ ೪೦೦೦೦೦ ಚದರ ಮೈಲುಗಳಷ್ಟು ವಿಸ್ತಾರವಾದ ಈ ರಾಜ್ಯದಲ್ಲಿ ಕೇವಲ ಏಳು ಲಕ್ಷ ಮಂದಿ ದೇಶೀಯರೂ ೩೦೦೦೦ ಇಟಾಲಿಯನರೂ ಇರುವರು. ಅದನ್ನು ಪೂರ್ವಸ್ಥಿತಿಗೆ ತರಬೇಕೆಂದು ಮುಸಲೋನಿ ಮಾಡಿದ ಎಲ್ಲಾ ಪ್ರಯತ್ನಗಳು ವ್ಯರ್ಥವಾಗಿವೆ. ಲಿಬಿಯವನ್ನು ಇಟಲಿಯ ವಸಾಹತು ಮಾಡಿ ಇಟಾಲಿಯನರನ್ನು ಅಲ್ಲಿಗೆ ಕಳುಹಿಸುವ ಪ್ರಯತ್ನದಲ್ಲಿಯೂ ಮುಸಲೋನಿ ಕೃತಾರ್ಥನಾಗಿರುವದಿಲ್ಲ. ಯಾಕಂದರೆ ಈ ರಾಜ್ಯದ ಮೇಲೆ ಒಂದು ಬಿದ್ದ ಉಸುಬನ್ನು ಬೇರೆ ಕಡೆಗೆ ಸಾಗಿಸಿ ಅದನ್ನು ಪುನಃ ಬೇಸಾಯಕ್ಕೆ ಯೋಗ್ಯವನ್ನಾಗಿ ಮಾಡುವುದು ಸುಲಭವಾಗಿರುವುದಿಲ್ಲ. ಇಟಾಲಿಯನರು ಈ ದೇಶಕ್ಕೆ ಬಂದ ಹಾಗೆ ಹತ್ತೋತ್ಸಾಹಿಗಳೂ ನಿರಾಶರೂ ಆಗಿ ಅಕಾಲದಲ್ಲಿ ಸಾಯುತ್ತಾರೆ. ಆದ್ದರಿಂದ ಬಲಾತ್ಕಾರವಾಗಿಯೇ ಮುಸಲೋನಿ ಇಟಾಲಿಯನರನ್ನು ಅಲ್ಲಿಗೆ ಕಳುಹಿಸಿ ಕೊಡಬೇಕು.

ಸಮುದ್ರ ದಂಡೆಯ ಮಹತ್ವ

ಆದರೆ ಲಿಬಿಯದ ಸಮುದ್ರ ದಂಡೆಯು ಮಹತ್ವವುಳ್ಳದ್ದಾಗಿರುವುದು. ಆದ್ದರಿಂದಲೇ ಯೂರೋಪಿನ ರಾಜಶಕ್ತಿಗಳ ಕಣ್ಣು ಲಿಬಿಯದ ಮೇಲೆ ಇದೆ. ಲಿಬಿಯವು ಯಾರ ವಶದಲ್ಲಿದೆಯೋ ಅವರು ಈ ಸಮುದ್ರ ದಂಡೆಯ ಮೇಲೆ ವಿಮಾನ ನಿಲ್ದಾಣಗಳನ್ನೂ ನೌಕಾ ನಿಲಯಗಳನ್ನೂ ಕಟ್ಟಿ ಅಪಾರ ಸೇನಾ ಸಂಗ್ರಹ ಮಾಡಿ ಭೂಮಧ್ಯ ಸಮುದ್ರದ ಮೇಲೆ ತಮ್ಮ ಸರ್ವಾಧಿಕಾರವನ್ನು ಸ್ಥಾಪಿಸಬಹುದು. ಬಾರ್ಡಿಯ, ಟೊಬ್ರುಕ, ಡರ್ನಾ, ಸಿರೀನ, ತ್ರಿಪೋಲಿ ಮೊದಲಾದ ಬಂದರುಗಳೆಲ್ಲ ಈ ಕರಾವಳಿಯ ಮೇಲೆಯೇ ಇರುತ್ತವೆ. ಇವುಗಳಲ್ಲಿ ಮೊದಲನ ಎರಡು ಮತ್ತು ತ್ರಿಪೋಲಿ ಟೊಬ್ರುಕ ಮತ್ತು ದೊಡ್ಡ ಬಂದರುಗಳಾಗಿವೆ. ಇಟಾಲಿಯನರು ಇದೇ ಸಮುದ್ರ ಕರಾವಳಿಯ ಮಾರ್ಗದಿಂದ ಸೇನೆಯನ್ನು ಮುಂದೊತ್ತಿ ತೆಗೆದುಕೊಂಡು ಹೋಗಿ ಈಜಿಪ್ತಿನ ಸೀದಿಬರಾನಿಯನ್ನು ಗೆದ್ದಿದ್ದರು. ಆದರೆ ಬ್ರಿಟಿಷರ ಅಪಾರ ಬಲದ ಮುಂದೆ ಅವರ ಯಾವ ಸಾಹಸವೂ ನಡೆಯಲಿಲ್ಲ. ಮುಂದೆ ನಡೆದ ಯುದ್ಧಗಳಲ್ಲಿ ಅವರು ಗೆದ್ದುಕೊಂಡ ಸೀದಿಬರಾನಿಯನ್ನು ಪುನಃ ಬ್ರಿಟಿಷರಿಗೆ ಬಿಟ್ಟುಕೊಡಬೇಕಾಯಿತು, ಮಾತ್ರವಲ್ಲ, ಬಾರ್ಡಿಯ ಮತ್ತು ಟೋಬ್ರುಕದಿಂದಲೂ ಹಿಂದಕ್ಕೆ ಪಲಾಯನ ಮಾಡಬೇಕಾಯಿತು. ಈಗ ಟ್ರಿಪೋಲಿಯೊಂದೇ ಬ್ರಿಟಿಷರ ಅಧೀನವಾಗುವುದು ಉಳಿದಿದೆ. ಆದರೆ ಇಟಾಲಿಯನ್ನರ ಪಲಾಯನ ಕ್ರಮವನ್ನು ನೋಡಿದರೆ, ಲಿಬಿಯವು ಸಂಪೂರ್ಣವಾಗಿ ಬ್ರಿಟಿಷರ ಅಧೀನವಾಗುವುದು ಕೆಲವೇ ದಿನಗಳ ಮಾತು ಎಂದು ಹೇಳಬೇಕಾಗುವುದು. ಅದು ಹೇಗೇ ಇರಲಿ, ಲಿಬಿಯವು ಬ್ರಿಟಿಷರ ವಶವಾದಾಗ ಅವರ ಮರ್ಯಾದೆ ಪ್ರತಿಷ್ಠೆಗಳು ಬೆಳೆಯುವದು ಮಾತ್ರವಲ್ಲದೆ ಯುದ್ಧಕಾರ್ಯವನ್ನು ಜಯಶೀಲವಾಗಿ ಮುಂದೊತ್ತುವುದೂ ಅವರಿಗೆ ಸುಲಭವಾಗುವದೆಂಬ ದರಲ್ಲಿ ಸಂದೇಹವುಂಟಾಗಲಿಕ್ಕಿಲ್ಲ.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O S 411 of 1940

ಲಿಂಗು ಹೆಂಗ್ಸು ವಾದಿ

ಎದುರು

ಉಕ್ಕಂಣಗೌಡ ಕೂಡಾ ಪ್ರತಿವಾದಿರು

2ನೇ ಪ್ರತಿವಾದಿ ದೇನಯ್ಯ ಗೌಡ, ಬೋಳಿಯಣ್ಣ ಯಾನೆ ಸಂಕಪ್ಪಗೌಡರ ಮಗ, ಶಾಣಿಯೂರು ಗ್ರಾಮದ ಬೆಪ್ಪುಂಜ ಪುತ್ತೂರು ತಾಲೂಕಿನಲ್ಲಿರುವವರಿಗೆ—

ದಾವಾ ಆದವಿನ ಅಸಲು ಬಡ್ಡಿ ರೂ. 700 ಕ್ಕೆ ಫಿರ್ಯಾದು ಮಾಡಿದ ಮೇಲಿನ ದಾವೆಯು ತಾ. 21-2-41ಕ್ಕೆ ಇಟ್ಟಿರುವುದರಿಂದ ನಿಮಗೇನಾದರೂ ಆಕ್ಷೇಪಣೆಗಳಿದ್ದರೆ ನೀವು ಆ ದಿನ ಬೆಳಗ್ಗೆ ಗಂಟೆ 10ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಹೇಳದಿದ್ದರೆ ನಿಮ್ಮನ್ನು ಗೈರ್ಹಾಜರು ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಲಾಗಿಯದೆ.

ಪುತ್ತೂರು 27-1-'41 (Sd) H. P. BHAT, Pleader for Plaintiff

ಕೆಮ್ಮು ಕಫ ಮತ್ತು ಎದೆಗೆ ಸಂಬಂಧಪಟ್ಟ ಬಾಧೆಗಳನ್ನು ಗುಣಪಡಿಸಿರಿ

ಕೆಮ್ಮು, ಶೀತ, ಬ್ರೊಂಕ್ಯಾಟಿಸ್, ಗಂಟಲುಬೇನೆ ಮುಂತಾದ ಬಾಧೆಯಿಂದ ನರಳುತ್ತಿರುವಿರಾದರೆ ವಿಷಹಾರಿ ಶ್ವಾಸನೀಯ ಪೆಪ್ಸ ಮಾತ್ರೆಗಳು ಖಂಡಿತ ಗುಣಕಾರಿ ಔಷಧಿ

ಪೆಪ್ಸ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಡುವ ಔಷಧೀಯ ಸತ್ವವು ನೀವು ಸೇವಿಸಿದ ವಾಯುವಿನೊಂದಿಗೆ ಬೆರೆತು ಶ್ವಾಸಕೋಶಗಳನ್ನು ಸೇರಿ ರೋಗಾಣುಗಳನ್ನು ಹುಡುಕಿ ನಾಶಮಾಡುತ್ತದೆ. ಈ ಪ್ರಕಾರವಾಗಿ ಪೆಪ್ಸ ಕಫವನ್ನು ಹೊರಗೆಡವಿ ಗಂಟಲನ್ನು ಗುಣಪಡಿಸಿ ಎದೆಗೂ ಶ್ವಾಸಕೋಶಗಳಿಗೂ ರಕ್ಷಣೆಯನ್ನೀಯುತ್ತದೆ

ಎಲ್ಲಾ ಔಷಧಿವ್ಯಾಪಾರಿಗಳು ಪೆಪ್ಸನ್ನು ರೂ 1 0-0ರಂತೆ ಮಾರುತ್ತಾರೆ

ಏಜಂಟ್ಸ್

ಮೆಸರ್ಸ್ ಧಾದಾ ಎಂಡ್ ಕೋ, ಸಿ. ಟಿ ಮದ್ರಾಸು.

ಪೆಪ್ಸನ್ನು ಉಪಯೋಗಿಸಿರಿ.



PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳು ನಿಯಮಾನುಸಾರವಾಗಿ ನಡೆಯುವ ದೇಶವಾಗಿಲ್ಲ. ಪ್ರತಿಯೊಬ್ಬ ಭಾರತೀಯನ ಮೂಲನಿಯಮವಾಗಿದ್ದ ಬ್ರಹ್ಮಚರ್ಯವೆ ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವಳಿಕೆಯಿಲ್ಲದುದರಿಂದಲೂ ತಕ್ಕ ವ್ಯಾಯಾಮವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ

ಆದುದರಿಂದ ಬಳಲುವ ಬಂಧುಗಳಲ್ಲಿ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರ ಸಂಪೂರ್ಣ ಗುಣವನ್ನು ತೋರಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ಕೊಡುವುದು.

1 ಸೇರಿಗೆ ರೂ 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ ಎ, ಎಫ್ ಸಿ ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)

ಆಯುರ್ವೇದ ಶಾಸ್ತ್ರಿ,

ಭಾಗಲ್ಪುರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ

ಮಂಗಳೂರು ಏಜಂಟ್ಸ್: ಪಾ ಕಂಪೆನಿ, ಹಂಪನಕಟ್ಟಾ, ಮಂಗಳೂರು.

ಬರುವ ಖಾನೇಸುಮಾರಿ

ಮಹಾಜನರಿಗೆ ಸೂಚನೆಗಳು

(ಸರಕಾರೀ ಪ್ರಕಟಣೆಯಿಂದ)

ಬರುವ ಫೆಬ್ರವರಿ ತಿಂಗಳಲ್ಲಿ ಇಡೀ ಇಂಡಿಯಾ ದೇಶದಲ್ಲಿ ಜನರ ಖಾನಸುಮಾರಿ ತೆಗೆಯೋಣಾಗುವುದು. ಕಳೆದ 60 ವರ್ಷಗಳಿಂದ ಪ್ರತಿ ಹತ್ತು ವರ್ಷಕ್ಕೊಮ್ಮೆ ಖಾನಸುಮಾರಿಯು ಕ್ರಮವಾಗಿ ತೆಗೆಯೋಣಾಗುತ್ತಿದೆ

ಖಾನಸುಮಾರಿ ತೆಗೆಯುವ ಕಾಲದಲ್ಲಿ ಜನರ ಒಟ್ಟು ಸಂಖ್ಯೆಯನ್ನು ಮಾತ್ರ ಎಣಿಸುವುದಲ್ಲ, ಆದರೆ ಪ್ರತಿ ಆಸಾಮಿಗೆ ಆತನ ವಯಸ್ಸು ಎಷ್ಟು, ಆತನು ಯಾವ ಕೋಮಿಗೆ (ಜಾತಿಗೆ) ಸೇರಿದವನು, ಆತನ ಮತ, ಭಾಷೆ, ಉದ್ಯೋಗ ಯಾವುವು ಮತ್ತು ಆತನು ಎಷ್ಟರಮಟ್ಟಿಗೆ ವಿದ್ಯಾವಂತನಾಗಿರುತ್ತಾನೆ ಎಂಬುದನ್ನೂ, ಇತರ ಮುಖ್ಯ ವಿವರಗಳನ್ನೂ ಕುರಿತು ಅನೇಕ ಪ್ರಶ್ನೆಗಳು ಕೇಳೋಣಾಗುತ್ತವೆ, ಮತ್ತು ಅವುಗಳಿಗೆ ಆತನು ಕೊಟ್ಟ ಉತ್ತರಗಳು ಬರಕೊಳ್ಳೋಣಾಗುತ್ತವೆ. ಹಾಗೆ ದೊರೆತ ಸಮಾಚಾರವು ಈ ಆಧಿಪತ್ಯದಲ್ಲಿಯ ಪ್ರತಿ ಪ್ರದೇಶದ ಬಗ್ಗೆ ಒಟ್ಟು ಕೂಡಿಸೋಣಾಗುತ್ತದೆ ಮತ್ತು ಈ ಸಮಾಚಾರವು ದೇಶದ ಆಡಳಿತ ನಡೆಸುವವರಿಗೆ ಅಗತ್ಯವಾಗಿ ಬೇಕಾಗಿದೆ. ಒಂದು ರಸ್ತೆಯನ್ನಾಗಲಿ, ಒಂದು ಕೆರೆಯನ್ನಾಗಲಿ, ಒಂದು ಆಸ್ಪತ್ರೆಯನ್ನಾಗಲಿ, ಒಂದು ಶಾಲೆಯನ್ನಾಗಲಿ ಎಲ್ಲಿ ಏರ್ಪಡಿಸಬೇಕು, ನೀರು ಸರಬರಾಯಿಯ ಬಗ್ಗೆ ಕ್ಷಾಮ ನಿವಾರಣೆಯ ಬಗ್ಗೆ ಸಾಂಕ್ರಾಮಿಕ ರೋಗಗಳು ತಲೆದೋರದಂತೆ ಮಾಡುವ ಬಗ್ಗೆ, ಕಕ್ಷಮಾನವಾದ ಇತರ ಏರ್ಪಾಡುಗಳ ಬಗ್ಗೆ ಯಾವ ವ್ಯವಸ್ಥೆ ಮಾಡಬೇಕು ಎಂಬುದನ್ನು ಗವರ್ನಮೆಂಟಿನವರು ತೀರ್ಮಾನಿಸುವುದಕ್ಕೆ ಮುಂಚಿತವಾಗಿ, ಪ್ರತಿ ಪ್ರದೇಶದಲ್ಲಿ ಎಷ್ಟು ಜನರು ವಾಸಮಾಡುತ್ತಾರೆ, ಅವರು ಯಾವ ತರದ ಜನರು ಅವರು ಮಾಡುವ ಕೆಲಸವೇನು, ಇತ್ಯಾದಿಯನ್ನು ಗವರ್ನಮೆಂಟಿನವರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ, ಈ ಸಮಾಚಾರವು ಬೇಕಾಗಿರುವುದು ಗವರ್ನಮೆಂಟಿನವರಿಗೆ ಮಾತ್ರವಷ್ಟೇ ಅಲ್ಲ, ವಿಶ್ವವಿದ್ಯಾಲಯಗಳಿಗೆ, ವಿದ್ವಾಂಸರಿಗೆ ಮತ್ತು ಜನರು ಸುಖವಾಗಿರಬೇಕು, ಜನರು ಅಭಿವೃದ್ಧಿ ಹೊಂದಬೇಕು ಎಂದು ಬಯಸುವವರಾಗಿದ್ದು ಅವರ ಹಿತಕಾಂಕ್ಷಿಗಳಾದ ನಾನಾ ಬಗೆಯ ಇತರ ಮನುಷ್ಯರಿಗೆ ಹಾಗೂ ಸಂಸ್ಥೆಗಳಿಗೆ ಇದು ಅಗತ್ಯವಿದೆ.

ಛಾಪಾಕಾಗದದ ತುಂಡು (ಚೀಟು) ಗಳಲ್ಲಿ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆದುಕೊಳ್ಳುವುದೇ "ಖಾನೆ ಸುಮಾರಿ ತೆಗೆಯೋಣ" ಎಂಬುದಾಗಿ ಕರೆಯಲ್ಪಡುತ್ತದೆ ಮತ್ತು ಈ ಕೆಲಸ ಮಾಡುವ ಆಫೀಸರುಗಳು "ಎನ್ಯುಮರೇಟರು" ಎಂದು ಕರೆಯಲ್ಪಡುತ್ತಾರೆ. ಬೇಕಾದ ಸಮಾಚಾರವನ್ನು ಜನರೇ ಕೊಡಬೇಕಾಗಿದೆ, ಮತ್ತು ಆ ಸಮಾಚಾರವು ನಿಜವಾಗಿರದಿದ್ದ ಪಕ್ಷದಲ್ಲಿ ಅದನ್ನು ಸಂಗ್ರಹಿಸುವುದರಿಂದ ಏನೂ ಪ್ರಯೋಜನವಿಲ್ಲವೆಂಬುದು ಸ್ಪಷ್ಟವೇ ಸರಿ. ಖಾನಸುಮಾರಿಗೆ ಸಂಬಂಧಪಟ್ಟ ಯಾವತ್ತು ಪ್ರೊಸೀಡಿಂಗುಗಳು ಖಾನಸುಮಾರಿಯ ಆಕ್ಟಿನ ಮೇರೆಗೆ ನ್ಯಾಯಸಮ್ಮತವಾಗಿವೆ. ಮತ್ತು ಆ ಆಕ್ಟಿನ ಪ್ರಕಾರ ಪ್ರತಿಯೊಬ್ಬನೂ ಖಾನೆಸುಮಾರಿಗೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಯಥಾರ್ಥವಾದ ಉತ್ತರಗಳನ್ನು ಕೊಡಲು ಬದ್ಧನಾಗಿರುತ್ತಾನೆ, ಮತ್ತು ಅದಕ್ಕೆ ತಪ್ಪಿದರೆ ಆತನು ಶಿಕ್ಷೆಗೆ ಗುರಿಯಾಗುತ್ತಾನೆ. ಈ ಸಮಾಚಾರವನ್ನು ಸಂಗ್ರಹಿಸುವುದು, ಒಂದು ಜನಾಂಗ ಮೆಂಬರುಗಳಾಗಿರುವ ಪ್ರಯುಕ್ತ ತಮಗೇನೆ ನಿಜವಾಗಿಯೂ ಅತ್ಯಮೂಲ್ಯವಾದುದೆಂಬುವನ್ನು ಪ್ರತಿಯೊಬ್ಬನೂ ಮನಗಾಣಬೇಕು. ಏಕೆಂದರೆ ಅವರ ಮುಂದಾಳುಗಳಿಗೆ ಈ ತರದ ಸಮಾಚಾರವು ದೊರೆತ ಪಕ್ಷದಲ್ಲಿ ಮಾತ್ರ ಆ ಜನಾಂಗದ ಏಳಿಗೆಯ ಕುರಿತು ಅವರಿಗೆ ವಿವೇಕಪೂರ್ವಕವಾದ ಏರ್ಪಾಡುಗಳನ್ನು ಕೈಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ

ಖಾನಸುಮಾರಿಯ ಆಕ್ಟಿನ ಮೇರೆಗೆ ಎನ್ಯುಮರೇಟರರು ಗವರ್ನಮೆಂಟಿನವರಿಂದ ಮಂಜೂರು ಮಾಡಲ್ಪಟ್ಟಿರುವ ಪ್ರಶ್ನೆಗಳನ್ನು ಮಾತ್ರ ಕೇಳಲು ಬದ್ಧರಾಗಿರುತ್ತಾರೆ, ಮತ್ತು ಯಾರಿಂದಾದರೂ ಇತರ ಯಾವುದಾದರೂ ಸಮಾಚಾರವನ್ನು ಒತ್ತಾಯದಿಂದ ಪಡೆಯಲು ಅವರು ಯತ್ನಿಸಿದ ಪಕ್ಷದಲ್ಲಿ ಅವರು ಶಿಕ್ಷಿಸಲ್ಪಡುವರು. ಅವರು ಬರೆದುಕೊಳ್ಳುವ ಉತ್ತರಗಳು ಇತರ ಯಾವನೊಬ್ಬ ಖಾಸಗಿ ಮನುಷ್ಯನಿಗೆ ತೋರಿಸಲ್ಪಡುವುದಿಲ್ಲ ಮತ್ತು ಅವನ್ನು ನೋಡಲು ಯಾರಿಗೂ ಹಕ್ಕಿಲ್ಲ. ಇಷ್ಟೇ ಅಲ್ಲದೆ, ಯಾವುದೊಂದು ನ್ಯಾಯಸ್ಥಾನದಲ್ಲಿ ಅವುಗಳನ್ನು ರುಜುವತಾಗಿ ಉಪಯೋಗಿಸಲು ಸಾಧ್ಯವಿಲ್ಲ, ಮತ್ತು ಯಾವುದಾದರೂ ತರದ, ಎಂದರೆ, ಸ್ವತ್ತಿನ ವಿಷಯದಲ್ಲಿಯ ಯಾವುದಾದರೂ ಹಕ್ಕುಗಳು ಅವುಗಳಿಂದ ಬಾಧಕ ಹೊಂದಲಾರವು. ಖಾನಸುಮಾರಿಗೆ ಜನರ ಹೆಸರುಗಳು ಯಾವುವು ಎಂದು ತಿಳಿಕೊಳ್ಳುವ ವಿಷಯದಲ್ಲಿ ಎಷ್ಟುಮಾತ್ರವೂ ಕುತೂಹಲವಿಲ್ಲ, ಮತ್ತು ಈ ಹೆಸರುಗಳನ್ನು ಬರೆದುಕೊಳ್ಳುವುದು ಎನ್ಯುಮರೇಟರುಗಳು ಮಾಡಿದ ಕೆಲಸವು ಸರಿಯುಂಟೋ ಎಂದು ನೋಡುವ ಬಗ್ಗೆ ಮತ್ತು ಯಾವನೊಬ್ಬ ಮನುಷ್ಯನು ಎರಡು ಸಲ ಎಣಿಸಲ್ಪಟ್ಟಿಲ್ಲವೆಂದು ದೃಢಪಡಿಸಿಕೊಳ್ಳುವ ಬಗ್ಗೆ ಮಾತ್ರವೇ ಆಗಿದೆ. ಮದುವೆಮಾಡಿಕೊಂಡವನಾಗಿದ್ದು ಬೇಸಾಯದಿಂದ ತನ್ನ ಜೀವನವನ್ನು ನಡೆಸುವ 40 ವರ್ಷ ವ್ರಾಯದ ಮನುಷ್ಯನು ರಾಮಣ್ಣನೆಂಬುವನೋ ಅಥವಾ ಕೃಷ್ಣನ್ ಎಂಬುವನೋ ಅಥವಾ ಇತರ ಯಾವನೊಬ್ಬನೋ ಎಂಬುದು ಖಾನಸುಮಾರಿಗೆ ಬೇಕಾಗಿಲ್ಲ. ಮದುವೆ ಮಾಡಿಕೊಂಡವನಾಗಿದ್ದು ಬೇಸಾಯದಿಂದ ಜೀವನ ನಡೆಸುವ 40 ವರ್ಷ ವ್ರಾಯದ ಮನುಷ್ಯರು ಪ್ರತಿಯೊಂದು ಸ್ಥಳದಲ್ಲಿ ಎಷ್ಟು ಮಂದಿ ಇದ್ದಾರೆ ಎಂಬಿತ್ಯಾದಿ ಸಮಾಚಾರ ಮಾತ್ರವೇ ಖಾನಸುಮಾರಿಗೆ ಬೇಕಾದದ್ದು. ಆದುದರಿಂದ ಖಾನಸುಮಾರಿ ತೆಗೆಯುವ ಕೆಲಸವು ಒಮ್ಮೆಗೆ ಮುಗಿಯಿತೆಂದರೆ, ಮನುಷ್ಯರ ಹೆಸರುಗಳು ಇತ್ಯಾದಿ ಎಲ್ಲವನ್ನೂ ನಾವು ಮರೆತುಬಿಟ್ಟು, ಅವರನ್ನು ಜನಸಾಮಾನ್ಯರಲ್ಲಿ ಒಬ್ಬೊಬ್ಬರೆಂದು ಮಾತ್ರ ಭಾವಿಸುತ್ತೇವೆ. ಖಾನಸುಮಾರಿಗೂ ಯಾವುದಾದರೂ ತೆರಿಗೆ-ಯಾ-ಹಣ ವಸೂಲಿಗೂ ಯಾವ ಸಂಬಂಧವೂ ಇಲ್ಲ.

ಬರುವ ಫೆಬ್ರವರಿ ತಿಂಗಳಲ್ಲಿ ಒಂದು ದಿನ ಎನ್ಯುಮರೇಟರರು ಜನರು ವಾಸಮಾಡುವ ಪ್ರತಿಯೊಂದು ಮನೆಗೂ ಹೋಗಿ ಅಲ್ಲಿ ವಾಸಮಾಡುತ್ತಿರುವರೆಂದು ಅವರಿಗೆ ಕಂಡುಬಂದವರ ಖಾನೇಸುಮಾರಿ ತೆಗೆಯುವರು. ಖಾನೇಸುಮಾರಿ ಸಂಬಂಧವಾದ ಪ್ರಶ್ನೆಗಳಿಗೆ ಒಂದು ಮನೆಯಲ್ಲಿರುವ ಪ್ರತಿ ಗಂಡಸಿನ ಹೆಂಗಸಿನ ಮತ್ತು ಮಗುವಿನ ವಿಷಯದಲ್ಲಿ ಉತ್ತರಗಳನ್ನು ಬರೆಯಬೇಕಾಗಿದೆ. ಆದರೆ ಸಾಧ್ಯವಿರುವಷ್ಟು ಮಟ್ಟಿಗೆ ಆ ಮನೆಯಲ್ಲಿರುವ ಗಂಡಸರಿಗೆ ಮಾತ್ರ

[೧೯ನೆಯ ಪುಟ ನೋಡಿ]

ನಿಮ್ಮ ಕುಟುಂಬಕ್ಕೆ ಈ ಪ್ರಥಮ ಚಿಕಿತ್ಸೆಯ ಔಷಧಿಯು ಅಗತ್ಯ

ಜಾಂಬಕ್ ಮೋಜಿಕಿನಂತೆ ಗಾಯ ಮತ್ತು ವ್ರಣಗಳನ್ನು ಗುಣಪಡಿಸುವುದು

ಬೆಲೆ 1-0-0 ಅದರ 2 4 0. 1-0-0 1-0-0

ಏಜಂಟ್ಸ್ — ಮೆಸರ್ಸ್ ದಾದಾ ಎಂಡ್ ಕೋ ಪಿ ಟಿ ಮದ್ರಾಸು

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬು ಇರುವುದಿಲ್ಲ

ಡೋಂಗರೆ ಬಾಲಾಮೃತವು



ಮಕ್ಕಳಿಗೆ

ಆರೋಗವನ್ನೂ ಬಲವನ್ನೂ ಕೊಡುತ್ತದೆ

ವಿಜ್ಞಾನಯುಗ

ಕಾಫಿಬೀಜದಿಂದ ಸಾಬೂನು

ಕೋಸ್ಟಿಕ್ ಸೋಡಾ, ಎಣ್ಣೆ, ಕೊಬ್ಬು ಇವೇ ಮೊದಲಾದ ಪದಾರ್ಥಗಳಿಂದ ಸಾಬೂನನ್ನು ತಯಾರಿಸುವದು ಪ್ರಚಲಿತ ಪದ್ಧತಿಯಾಗಿದೆ. ಆದರೆ ಅಮೇರಿಕದ ಕೆಲವು ಜನ ವಿಜ್ಞಾನಿಗಳು ಕಾಫಿಬೀಜದಿಂದ ಸಾಬೂನು ತಯ್ಯಾರಿಸುವುದನ್ನು ಕಂಡುಕೊಂಡಿದ್ದಾರೆ. ದಕ್ಷಿಣ ಅಮೇರಿಕದ ಬ್ರೇಜಿಲಿನಲ್ಲಿ ಮಾರಾಟವಾಗುವುದಕ್ಕಿಂತಲೂ ಬಹಳ ಹೆಚ್ಚಾದ ಕಾಫಿಬೆಳೆಯು ಇದ್ದು, ಅದನ್ನೇನು ಮಾಡುವದೆಂದು ತೋಟಗಾರರೂ ವ್ಯಾಪಾರಿಗಳೂ ತಿಳಿಯಲಾರದಿದ್ದರು. ಮತ್ತೆ ಕಾಫಿದರವು ಇಳಿದು ಹೋಗದ ಹಾಗೆ ಮಾಡುವದಕ್ಕೋಸ್ಕರ ಪ್ರತಿವರ್ಷ ಲಕ್ಷಗಟ್ಟಲೆ ಚೀಲ ಕಾಫಿಯನ್ನು ಸುಟ್ಟು ಹಾಕುತ್ತಿದ್ದರು. ಅಥವಾ ಸಮುದ್ರಕ್ಕೆ ಒಗೆಯುತ್ತಿದ್ದರು. ಈಗ ವಿಜ್ಞಾನಿಗಳು ಕಾಫಿಬೀಜದಿಂದ ಒಂದು ಬಗೆಯ ಅಂಟುಪದಾರ್ಥವನ್ನು ತಯ್ಯಾರಿಸಿ ಅದರಿಂದ ಸಾಬೂನು ಮಾಡಬಹುದೆಂದು ಹೇಳಿದ್ದಾರೆ. ಈ ಉಪಾಯದಿಂದ ಕಾಫಿವ್ಯಾಪಾರಿಗಳಿಗೆ ಲಾಭವಾಗುವದಾದರೂ, ಸಾಬೂನು ಕ್ರಯವು ಇಳಿಯಲಾರದೆ ಎಂಬ ಸಂದೇಹವುಂಟು. ಯಾಂತ್ರಿಕ ಯುಗದಲ್ಲಿ ಇಂಥ ಕಷ್ಟಗಳು ಬಾಕವೆ ಇರುವದಿಲ್ಲ.

ಭೂಮಿಯು ಕಾವು ಏರುತ್ತಾ ಇದೆ

ಕಳೆದ ಒಂದು ಶತಮಾನದಿಂದ ಭೂಮಿಯ ಕಾವು ಏರುತ್ತಾ ಬರುತ್ತಿದೆಯೆಂದು ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ. ಮೊದಲು ಕರಗದೆ ಇದ್ದ ಹಿಮನದಿಗಳು ಈಗ ಕರಗಿ ಹರಿಯುತ್ತೊಡಗಿರುವದು ವಿಜ್ಞಾನಿಗಳ ಈ ಅಭಿಪ್ರಾಯಕ್ಕೆ ಮತ್ತಷ್ಟು ಪುಷ್ಟಿಯನ್ನು ಕೊಡುವದು. ಹೀಗೆ ಕಾವು ಹೆಚ್ಚಾಗುತ್ತಿರುವದು ಕೃಷಿಯ ಮೇಲೆ ಬಹಳ ಪರಿಣಾಮವನ್ನು ಉಂಟುಮಾಡಲಿದೆ. ಮತ್ತು ಅದರಿಂದ ಕೃಷಿಕರಿಗೆ ಬಹಳ ಲಾಭವಾಗಲಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಸಸ್ಯಾದಿಗಳ ಬೆಳವಣಿಗೆಗೆ ಚಳಿಯು ಪ್ರತಿಕೂಲವಾಗಿದೆ, ಉಷ್ಣವು ಅನುಕೂಲವಾಗಿದೆ. ಉಷ್ಣವಲಯದಲ್ಲಿ ದೊಡ್ಡದೊಡ್ಡ ಕಾಡುಗಳು ಬೆಳೆಯಲಿಕ್ಕೆ ಇದೇ ಕಾರಣವಾಗಿದೆ. ಆದುದರಿಂದ ಹಿಂದಿನ ಶತಮಾನದಲ್ಲಿಯಂತೆ ಮುಂದೆಯೂ ಭೂಮಿಗೆ ಸೂರ್ಯನಿಂದ ದೊರೆಯುವ ಕಾವು ಹೆಚ್ಚುತ್ತ ಹೋಗುವದಾದರೆ ಎಲ್ಲಾ ಕಡೆಗಳಲ್ಲಿ ಸಸ್ಯಾದಿಗಳು ಬೆಳೆಯಲಾರಂಭಿಸಿ ಭೂಮಿಯ ರೂಪವೇ ಬದಲಾಗಬಹುದು.

ನೆಲಕೊರೆಯುವ ಟ್ಯಾಂಕು

ಯುದ್ಧವು ಒಂದು ಹೊಸಬಗೆಯ ಟ್ಯಾಂಕಿಗೆ ಜನ್ಮವನ್ನಿತ್ತಿದೆ. ಅಮೇರಿಕದ ವಿಜ್ಞಾನಿಗಳು ಇದನ್ನು ಕಂಡುಹಿಡಿದಿದ್ದಾರೆ. ಈ ಟ್ಯಾಂಕು ನೆಲವನ್ನು ಕೊರೆದು ಅದರಡಿಯಲ್ಲಿ ಬದುಕುವ ಮೊಲ ಇಲಿಗಳಂಥ ಪ್ರಾಣಿಗಳ ಹಾಗೆ ನೆಲವನ್ನು ಕೊರೆದು, ಶತ್ರುದಳಕ್ಕೆ ಕಾಣಿಸದ ಹಾಗೆ ಅಡಿಯಿಂದಲೇ ಹೋಗಿ, ಅದರ ಹಿಂದಿನಿಂದ ಮೇಲಕ್ಕೆದ್ದು ದಾಳಿಮಾಡುವದು. ಈ ಟ್ಯಾಂಕಿನ ರಚನೆ ಇತರ ಸಾಮಾನ್ಯ ಟ್ಯಾಂಕುಗಳಂತೆಯೇ ಇರುವದಾದರೂ ಇದರ ಮುಂದೆ ನೆಲವನ್ನು ಕೊರೆಯುವ ಯಂತ್ರಸಾಧನೆಯೂ ಇತರ ಸಲಕರಣೆಗಳೂ ಇರುತ್ತವೆ. ಯುದ್ಧ ಕಾಲದಲ್ಲಿ ಮಾತ್ರವಲ್ಲದೆ ಶಾಂತಿಯ ಕಾಲದಲ್ಲೂ ಜಾತಿಯ ಟ್ಯಾಂಕುಗಳಿಂದ ಉಪಯೋಗವಾಗಬಹುದೆಂದು ಹೇಳುತ್ತಾರೆ. ಭೂಗರ್ಭ ಶೋಧನ ಮಾಡಲಿಕ್ಕಾಗಿ ಸುರಂಗಗಳನ್ನು ಕೊರೆಯಲಿಕ್ಕೂ, ನೆಲವನ್ನು ತೋಡಲಿಕ್ಕೂ ಇದು ಸಹಾಯವಾದೀತು.

ಹೊಳೆಯುವ ಬಾವುಟಗಳು

ಡಾಕ್ಟರ ಮಾರ್ಗನ್ ಎಂಬ ಅಮೇರಿಕದ ಒಬ್ಬ ವಿಜ್ಞಾನಿಯು ರಾತ್ರಿಕಾಲದಲ್ಲಿ ತಳತಳಿಸಿ ಹೊಳೆಯುವ ಒಂದು ವಿಚಿತ್ರ ರೀತಿಯ ಬಾವುಟವನ್ನು ತಯ್ಯಾರಿಸಿದ್ದಾನೆ. ಹಗಲಿನಲ್ಲಿ ನೋಡುವಾಗ ಈ ಬಾವುಟದ ವಸ್ತ್ರವು ಸಾಮಾನ್ಯ ಬಟ್ಟೆಯಂತೆಯೇ ಇರುತ್ತದೆ. ಆದರೆ ಈ ಬಾವುಟದ ಬಟ್ಟೆಯನ್ನು ಏನೋ ಒಂದು ದ್ರಾವಕದಲ್ಲಿ ಮುಳುಗಿಸಿ ತೆಗೆದಿರುವದರಿಂದ, ರಾತ್ರಿಕಾಲದಲ್ಲಿ ಅದು ತನ್ನಷ್ಟಕ್ಕೆ ಹೊಳೆಯುತ್ತಿರುತ್ತದೆ. ರಾತ್ರಿಕಾಲದಲ್ಲಿ ಬೇರೆಬೇರೆ ಬಣ್ಣಗಳಲ್ಲಿ ಹೊಳೆಯುವ ಹಾಗೆ ಡಾಕ್ಟರ ಮಾರ್ಗನರು ಬಟ್ಟೆಗೆ ಉಪಯೋಗಿಸಬೇಕಾದಂಥ ಬೇರೆಬೇರೆ ದ್ರಾವಕಗಳನ್ನು ಕಂಡು ಹಿಡಿದಿದ್ದಾನೆ.

ಕೂದಲು ಕಪ್ಪಾಗಲಿಕ್ಕೆ

ಮುದುಕರಾದಾಗಲೂ, ಇತರ ಸಮಯಗಳಲ್ಲೂ ತಲೆಕೂದಲು ನರೆಯುತ್ತದೆ. ಹೀಗೆ ಕಪ್ಪಾಗಿರುವ ತಲೆಕೂದಲು ನರೆಯಲಿಕ್ಕೆ ರಕ್ತದಲ್ಲಿ ಕೂದಲಿನ ಬೆಳವಣಿಗೆಗೆ ಪ್ರತಿಕೂಲವಾದ ಒಂದು ಬಗೆಯ ವಿಷವು ಕೂಡಿಕೊಳ್ಳುವದು ಕಾರಣವಾಗಿದೆ ಎಂದು ಹೇಳಲಾಗಿದೆ. ಸರಿಯಾದ ಆಹಾರವನ್ನು ಉಂಡರೆ ರಕ್ತದೊಳಗಿನ ಈ ವಿಷವನ್ನು ನಿವಾರಿಸಿಕೊಳ್ಳಬಹುದಂತೆ. ರಕ್ತದಲ್ಲಿ ಈ ವಿಷವು ಇರುವದಿಲ್ಲವಾದರೆ ಹಣ್ಣುಹಣ್ಣು ಮುದುಕನಾದರೂ ಕೂದಲು ನರೆಯುವದಿಲ್ಲವಂತೆ. ಕೂದಲು ಕಪ್ಪಾಗಿ ಬೆಳೆಯಲಿಕ್ಕೆ ಬಿ. ಎಂಬ ಜೀವಾತೂ ಬೇಕು. ನಾವು ಈ ಜೀವಾತು ಇರುವ ಪುಷ್ಟಿಕ ಆಹಾರವನ್ನು ಉಣ್ಣುತ್ತಿದ್ದರೆ ನಮಗೆ ಕೂದಲು ನರೆಯುವದೆಂಬ ಭಯವೇ ಇರಲಾರದು. ಮತ್ತೆ ಕೂದಲಿಗೆ ಬಣ್ಣ ಕೊಡುವ ಆವಶ್ಯಕತೆಯೂ ಉಳಿಯಲಿಕ್ಕಿಲ್ಲ.

ಭೂಮಿಯಲ್ಲಿ ಅತಿ ಶೀತ ಪ್ರದೇಶ

ಭೂಮಿಯಲ್ಲಿ ಅತಿ ಶೀತವಾದ ಪ್ರದೇಶವು ಯಾವುದೆಂದು ಯಾರಾದರೂ ಕೇಳಿದರೆ ಉತ್ತರ ಅಥವಾ ದಕ್ಷಿಣಧ್ರುವ ಪ್ರದೇಶವೆಂದು ಥಟ್ಟನೆ ಹೇಳಿಬಿಡಬಹುದು. ಆದರೆ ವಾಸ್ತವಾಂಶವು ಹೀಗಿರುವದಿಲ್ಲ. ಸೈಬೀರಿಯಾದ ವರ್ಖೋಯಾನ್ಸ್ಕ ಎಂಬ ಒಂದು ಸಣ್ಣ ಊರಿಗೇ ಈ ಕೀರ್ತಿಯು ಪ್ರಾಪ್ತವಾಗಿದೆ. ಚಳಿಗಾಲದ ಮಧ್ಯದಲ್ಲಿ ಈ ಊರಿನ ಹವಾಮಾನವು 0° ಫೆರನೀಟಿಗಿಂತಲೂ 90° ಗಳಷ್ಟು ಕಡಿಮೆಯಾಗಿ ಇರುತ್ತದೆ. ಇದು ಸಮುದ್ರಕ್ಕೆ ಹತ್ತಿರವಾಗಿಯಂತೂ ಇರುವದಿಲ್ಲ. ಮತ್ತೆ ಉತ್ತರ ಶೀತವಲಯದಲ್ಲಿ ನೋರ್ವೆ ಸ್ವೀಡನುಗಳಿರುವ ೬೭ ಉತ್ತರ ಅಕ್ಷಾಂಶದಲ್ಲಿ ಇರುತ್ತದೆ. ಆಶ್ಚರ್ಯದ ಸಂಗತಿ ಎಂದರೆ, ಬೇಸಿಗೆಯಲ್ಲಿ ಈ ಊರಿನ ಹವಾಗುಣವು 98° ಫೆರನೀಟಿನಷ್ಟು ಇದೆ. ಬಹಳ ದಕ್ಷಿಣದಲ್ಲಿರುವ ಲಂಡನಿನಲ್ಲಿಯೂ ಆಗ ಇಷ್ಟು ಉಷ್ಣವಿರುವದಿಲ್ಲ. ಪರಂತು ಚಳಿಗಾಲದಲ್ಲಿ ಇದು ಪ್ರಪಂಚದ ಅತಿ ಶೀತ ಪ್ರದೇಶವಾಗಿರುವದು!

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ
ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ.

THREE "S"S OF SOUND BANKING
Service! — Safety! — Security!
The Canara Industrial & Banking Syndicate, Limited
Head Office:-UDIPI, (S. India.)
PROVIDES THEM ALL AND INVITES YOU TO ENJOY THEM BY BEING ONE OF ITS OWN CLIENTALE.

ಬರುವ ಖಾನೇಸುಮಾರಿ

[ಹಿಂದಿನ ಪುಟದಿಂದ ಮುಂದುವರಿದುದು]

ಈ ಪ್ರಶ್ನೆಗಳು ಹಾಕಲ್ಪಡುವವು. ವಾಸ ಮಾಡಲಿಕ್ಕೆ ಮನೆಗಳಿಲ್ಲದ ಬಡಜನರೂ ತಿರುಕರಿಗಳೂ ಫೆಬ್ರವರಿ ತಿಂಗಳ ೨೮ನೇ ತಾರೀಕಿನ ರಾತ್ರಿ ಅವರು ಸಿದ್ಧವಸಡುತ್ತಿರುವ ಸ್ಥಳಗಳಲ್ಲಿಯೇ ಲೆಕ್ಕಿಸಲ್ಪಡುವರು. ಆದರೆ ಈ ಸಾರಿ ಯಾವುದಾದರೂ ಒಂದೇ ರಾತ್ರಿಯಲ್ಲಿ ಆಗಲಿ,— ಯಾ ಒಂದೇ ಹಗಲಿನಲ್ಲಿ ಆಗಲಿ ಯಾವತ್ತು ಜನಸಂಖ್ಯೆಯನ್ನು ಲೆಕ್ಕಿಸಲು ನಾವು ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಆದುದರಿಂದ ಒಬ್ಬ ಒಬ್ಬ ಅಸಾಮಿಯ ಖಾನೇಸುಮಾರಿ ತೆಗೆಯಲ್ಪಟ್ಟ ನಂತರ ಬೇರೆ ಇತರ ಯಾವುದಾದರೂ ಸ್ಥಳದಲ್ಲಿ ಯಾವನಾದರೂ ಬೇರೊಬ್ಬ ಎನ್ಯುಮರೇಟರರಿಗೆ ಎರಡನೇ ಸಾರಿ ಆತನ ಖಾನೇಸುಮಾರಿ ತೆಗೆಯಲು ಬಿಟ್ಟುಕೊಡದಂತಿರುವುದೇ ಬಹಳ ಮುಖ್ಯವಾದ ವಿಷಯವಾಗಿದೆ. ಯಾವನೊಬ್ಬ ಅಸಾಮಿಯ ಖಾನೇಸುಮಾರಿ ತೆಗೆದನಂತರ ಆ ಅಸಾಮಿಗೆ ಆತನ ಖಾನೇಸುಮಾರಿ ತೆಗೆಯಲಾಗಿದೆ ಎಂದು ಗೊತ್ತಾಗಿದೆ ಎಂಬುದನ್ನು, ಅದವಾ ಆ ಅಸಾಮಿಯು ಆ ಸಮಯದಲ್ಲಿ ಹಾಜರಿಲ್ಲದಿದ್ದ ಪಕ್ಷದಲ್ಲಿ ಆ ಮನೆಯ ಳಿರುವ ಯಾವನಾದರೂ ಮುಖ್ಯ ಮನುಷ್ಯನಿಗೆ ಆತನ ಖಾನಸುಮಾರಿ ತೆಗೆಯಲ್ಪಟ್ಟಿದೆ ಯೆಂಬುದನ್ನು ಆತನಿಗೆ ಆದಷ್ಟು ಬೇಗನೇ ತಿಳಿಸುತ್ತಾನೆ ಎಂಬುದನ್ನು ಎನ್ಯುಮರೇಟರುಗಳು ದೃಢಪಡಿಸಿಕೊಳ್ಳಬೇಕೆಂದು ಸಮಸ್ತ ಎನ್ಯುಮರೇಟರರಿಗೆ ತಿಳಿಸಲಾಗಿದೆ. ಎನ್ಯುಮರೇಟರರು ಯಾವನೊಬ್ಬನ ಖಾನಸುಮಾರಿಯನ್ನು ತೆಗೆಯುವುದಕ್ಕೆ ಮುಂಚೆ ಬೇರೆಲ್ಲಿಯಾದರೂ ಆ ಮೊದಲೇ ಆತನ ಖಾನಸುಮಾರಿ ತೆಗೆಯಲಾಗಿತ್ತೋ ಎಂದು ಆ ಅಸಾಮಿಗೆ ತಪ್ಪದೇ ಕೇಳಬೇಕೆಂದು ಸಹಾ ಅವರಿಗೆ ಹೇಳಲಾಗಿದೆ. ಆದುದರಿಂದ, 'ಖಾನಸುಮಾರಿ ತೆಗೆಯಲು' ವೆಂದರೆ ಒಂದು ಕಾಗದದ ಚೀಟುಗಳ ಮೇಲೆ ಖಾನಸುಮಾರಿಗೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಅವರು ಕೊಡುವ ಉತ್ತರಗಳನ್ನು ಬರೆಯುವುದೆಂದು ಅವರು ತಿಳಿದುಕೊಳ್ಳಬೇಕು. ತಮ್ಮ ಖಾನಸುಮಾರಿ ಯಾವಾಗ ತೆಗೆಯಲಾಗಿತ್ತು ಎಂಬುದನ್ನು ಅವರು ಜಾಗರೂಕತೆಯಿಂದ ವಿಚಾರಿಸಿ ತಿಳಿದುಕೊಳ್ಳಬೇಕು ಮತ್ತು ತಮ್ಮ ಖಾನಸುಮಾರಿ ತೆಗೆಯಲಾಗಿದೆಯೆಂದು ಅವರಿಗೆ ಒಮ್ಮೆ ತಿಳಿದ ಬಳಿಕ, ಅವರು ಬೇರೆ ಯಾರಿಗೂ ಪುನಃ ತಮ್ಮ ಖಾನಸುಮಾರಿ ತೆಗೆಯಲಿಕ್ಕೆ ಬಿಡಕೂಡದು. ಈ ವಿಷಯದಲ್ಲಿ ಅವರ ಎಚ್ಚರಿಕೆ ತೆಗೆದುಕೊಳ್ಳಬೇಕು.

ಆದರೆ, ಖಾನಸುಮಾರಿ ತೆಗೆಯುವುದರಲ್ಲಿ ಯಾವನೊಬ್ಬ ಅಸಾಮಿಯನ್ನು ಬಿಟ್ಟುಬಿಡಕೂಡದೆಂಬುದು ಸಹಾ ಮುಖ್ಯವಾದ ವಿಷಯವೇ ಆಗಿದೆ. ಆದುದರಿಂದ, ಒಂದು ಮನೆಯಲ್ಲಿ ಒಟ್ಟು ಎಷ್ಟು ಮಂದಿ ವಾಸವಾಡುತಿದ್ದಾರೆ ಎಂಬ ಕುರಿತು ಮತ್ತು ಅಲ್ಲಿ ವಾಡಿಕೆಯಾಗಿ ವಾಸವಾಡುವವರಾಗಿದ್ದು ಪರಂತು ಸಂಗಾಮಿಯಾಗಿ ಗೈರ ಹಾಜರಾಗಿ, ಮಾರ್ಚ ತಿಂಗಳ ೧ನೇ ತಾರೀಕಿನೊಳಗಾಗಿ ಆ ಮನೆಗೆ ವಾಪಾಸು ಬರುವಂತಿರುವ ಅಸಾಮಿಗಳು ಯಾರಾದರೂ ಇದ್ದಾರೋ ಎಂಬ ಕುರಿತ ಯಥಾರ್ಥವಾದ ಸಮಾಚಾರವನ್ನು ಎನ್ಯುಮರೇಟರರಿಗೆ ಕೊಡುವುದು ಪ್ರತಿಮನೆಯ ಯಜಮಾನನ ಕರ್ತವ್ಯವಾಗಿದೆ. ಯಾವನೊಬ್ಬ ಅಸಾಮಿಗೆ ಫೆಬ್ರವರಿ ತಿಂಗಳ ಅಂತ್ಯದೊಳಗಾಗಿ ತನ್ನ ಖಾನಸುಮಾರಿ ತೆಗೆಯಲಾಗಿಲ್ಲವೆಂದು ಕಂಡುಬಂದರೆ ಆತನು ಆ ಸಂಗತಿಯನ್ನು ಆತನ ಗ್ರಾಮದ ಉದ್ಯೋಗಸ್ಥರಿಗೆ ಆಗಲಿ, ಮ್ಯುನಿಸಿಪಲ್ ಉದ್ಯೋಗಸ್ಥರಿಗೆ ಆಗಲಿ ಕೂಡಲೇ ತಿಳಿಸಬೇಕು.

ಮನೆಗಳಿಗೆ ಪೈಂಟ್ ಮೂಲಕ ಕೊಟ್ಟಿರುವ ಖಾನಸುಮಾರಿಯ ನಂಬರುಗಳ ಖಾನಸುಮಾರಿಯ ಲೆಕ್ಕದ ನೇರಿಗೆ ಅಲ್ಲಿ ಹಾಕಲ್ಪಟ್ಟಿವೆ ಮತ್ತು ಯಾವುದೊಂದು ಮನೆಯೂ ಖಾನಸುಮಾರಿಯಿಂದ ಬಿಟ್ಟು ಹೋಗಿಲ್ಲವೆಂದು ದೃಢಪಡಿಸಿಕೊಳ್ಳಲು ಆ ನಂಬರುಗಳೇ ಆಧಾರವಾಗಿವೆ.

ನೋಟೀಸು

ಪುತ್ತೂರು ಡಿ ಮು. ಕೋರ್ಟಿನಲ್ಲಿ

O S 394/40

ಅಲಿಮಂಮ ಕೂಡಾ — ವಾದಿಗಳು

ಪೂವಪ್ಪ ಕೂಡಾ — ಪ್ರತಿವಾದಿಗಳು

ಸದ್ರಿ ವ್ಯಾಜ್ಯದ 1ನೇ ಪ್ರತಿವಾದಿ—ಅಕ್ಕು ಹೆಂಗ್ಸು, ದೇಯಿ ಹೆಂಗ್ಸಿನ ಮಗಳು ಮಂಗಳೂರು ತಾಲ್ಲೂಕು [illegible] ಗ್ರಾಮದಲ್ಲಿರುವವಳು 13ನೇ ಪ್ರತಿವಾದಿ [illegible] ಪೂವಪ್ಪನ [illegible] ಗ್ರಾಮದ [illegible] ಎಂಬಲ್ಲಿ 7ನೇ ಪ್ರತಿವಾದಿ—ಪೂವಪ್ಪ 8ನೇ ಪ್ರತಿವಾದಿ ಮುತ್ತು ಪ್ರಾಯಸ್ಥ ಗಾರ್ಡಿಯನ್ ಆಕ್ಕು [illegible] ಪ್ರತಿವಾದಿ [illegible] ಹೆಂಗ್ಸು [illegible] ತಾಲ್ಲೂಕು [illegible] ಗ್ರಾಮದಲ್ಲಿ ಇರುವವರು ಇವರಿಗೆ [illegible] ತಿಳಿಯಪಡಿಸುವದೇನೆಂದ್ರು—

[illegible] ಕೂಡಾ ಅಡವಿನ [illegible] ವಾದಿಯ [illegible] ದಾವೆಯು [illegible] ತಾರೀಕು 2[illegible]-2-'41 ಕ್ಕೆ ಇಟ್ಟಿರುತ್ತದೆ ಮತ್ತು [illegible] 7 [illegible] ಪ್ರತಿವಾದಿಯ ಗಾರ್ಡಿಯನ್ [illegible] 5ನೇ ಪ್ರತಿವಾದಿ [illegible] ಹೆಂಗ್ಸನ್ನು ಕೋರ್ಟಿನವರು ನೇಮಿಸಿದ್ದಾರೆ [illegible] ದಿವಸ [illegible] 10 ಗಂಟೆಗೆ [illegible] ಕೋರ್ಟಿನಲ್ಲಿ [illegible] ವಕೀಲರ ಮುಖಾಂತ್ರ [illegible] ತಪ್ಪಿದ್ರೆ [illegible] ವಾದಿ ಕೋರ್ಟಿನವರಿಗೆ [illegible] ಕಂಡಂತೆ [illegible] ತೀರ್ಮಾನ [illegible] ನೋಟೀಸು ಕೊಟ್ಟಿದ್ದಾಗಿರುತ್ತದೆ.

Puttur 29-1-41 } B Achutha Baliga, Pleader for Plaintiff

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಮಧ್ಯಾಹ್ನ 1 P. M. ಗೆ ಬಿಡುವ

ಮಂಗಳೂರು — ಚಿಕ್ಕಮಗಳೂರು

ಸರ್ವಿಸು

ತಾರೀಕು 1-2-1941 ರಿಂದ ಪ್ರಾರಂಭವಾಗಿದೆ

ಮಂಗಳೂರಿನಿಂದ 1 P. M. ಗೆ ಹೊರಟರೆ ಅದೇ ದಿನ ಸಾಯಂಕಾಲ 7 P. M. ಗೆ ಚಿಕ್ಕಮಗಳೂರಿಗೆ ತಲಪಬಹುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಅಥವಾ ಸ್ವತಹಾ ಕೇಳಿ ತಿಳಕೊಳ್ಳಬಹುದು.

JOINT MANAGERS.

The Combined Booking Agency, MANGALORE — **The Joint Booking Office,** KODIALBAIL.

[illegible] ವಾರ್ಷಿಕ ಚಂದಾ ರೂ. 3-0-0 ಅಂಚೆ ವೆಚ್ಚ ಸೇರಿ ರೂ. 3-12-0 Regd. No. M 3480

ಸ್ವದೇಶಾಭಿಮಾನಿ

ಸಂಪುಟ 35] ತಾರೀಖು 7—2—1941 [ಸಂಚಿಕೆ 6]

The Bombay Life Assurance Company, Ltd.
(ESTABLISHED 1908)

Death! { **is not a matter of supposition** / **is a matter of Certainty.**

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent write to

KOCHIKAR BROTHERS, LIMITED.

MADRAS BRANCH SECRETARIES.

The Bombay Life Building,

Gandhi Nagar, UDIPI.

OR AT ANY OF THEIR OFFICES AT —

Puthiyara Calicut	Car Street, Mangalore.	Central Station Road Trivandrum
Gautam Nivas, Charni Road Girgaum Bombay No. 4	Post Box No 337 Mount Road, Madras	Visweswarapuram Circle Bangalore City

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷಘಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ತಜ್ಜ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.
ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.



ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಹಿಂದುಸ್ಥಾನದ ವಿರುದ್ಧ ಪಾಕಿಸ್ಥಾನ!

ಭಾರತವು ವಿಭಾಗವಾಗಬೇಕೆ?

ಪಾಕಿಸ್ಥಾನ ವಿರುದ್ಧ ಸಮ್ಮೇಳನ

'ಮುಸಲ್ಮಾನರ ಪಾಕಿಸ್ಥಾನದ ಬೇಡಿಕೆಯನ್ನು ತಿರಸ್ಕರಿಸಿ, ಬ್ರಿಟಿಷ-ಮುಸಲ್ಮಾನ ಸಂಘಟನೆಯನ್ನು ಮುರಿಯಲಿಕ್ಕೆ, ಎಲ್ಲಾ ಜಾತಿಮತ ಸಂಪ್ರದಾಯಗಳ ಹಿಂದುಗಳು ಏಕತ್ರಿತರಾಗಿ, ಒಂದಾಗಿ ಕಲೆತು ಬಲಿಷ್ಠರಾಗುವುದೇ ಏಕಮಾತ್ರ ಉಪಾಯವು ಈ ಕೆಲಸವನ್ನು ಮಾಡುತ್ತಿರುವಾಗ ಖ್ಯಾತಿ ದೊರೆಯದಿರಬಹುದು ಶ್ಲಾಘನೆ ಸಿಕ್ಕದಿರಬಹುದು. ಆದರೂ ಹಿಂದುಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲಿಕ್ಕೆ ಇಷ್ಟನ್ನು ಮಾಡುವುದು ಅತೀ ಅಗತ್ಯವಾಗಿದೆ" ಇದಕ್ಕೆ ಹಿಂದುಗಳು, ಗುಲ್ಲು ಗಲಭೆಗಳಿಲ್ಲದೆ ಮೌನದಿಂದ ಕಾರ್ಯ ಮಾಡಬೇಕು'. ಹೀಗೆಂದು ಪುಣೆಯ ಪ್ರಸಿದ್ಧ ಪತ್ರಿಕೆ 'ಮರಾಠಾ'ದ ಸಂಪಾದಕರಾದ ಶ್ರೀ ಜಿ. ವಿ ಕೇತಕರರು ದಿಲ್ಲಿಯಲ್ಲಿ ನೆರೆದ ಪಾಕಿಸ್ಥಾನ ವಿರೋಧಿಗಳ ಮಹಾಸಭೆಯಲ್ಲಿ ಒಂದು ವಿಚಾರಪರಿಪ್ಲುತ ಭಾಷಣವನ್ನು ಕೊಟ್ಟಿದ್ದಾರೆ.

ಪಾಕಿಸ್ಥಾನ ಎಂದರೇನು?

ಪಾಕಿಸ್ಥಾನವೆಂಬುದು ಇತ್ತೀಚೆಗೆ ಸೃಷ್ಟಿಸಿಯಾದ ಒಂದು ಶಬ್ದ ೧೯೩೩ರ ಮೊದಲು ಈ ಶಬ್ದವನ್ನು ಕೇಳಿದವರು ಒಬ್ಬರೂ ಇಲ್ಲ ಈ ಶಬ್ದಕ್ಕಾಗಲೀ ತತ್ವಕ್ಕಾಗಲೀ ಯಾವ ಇತಿಹಾಸವೂ ಇಲ್ಲ. ಅದಕ್ಕೆ ವಿಷಾದನೀಯ ಗಂಭೀರವಾದ ಅರ್ಥವಿರುವುದೂ ಇಲ್ಲ. ಹಿಂದುಸ್ಥಾನ ಎಂಬ ಶಬ್ದದ ನಕಲು ತೆಗೆದು ಈ ಶಬ್ದವನ್ನು ಎರಕ ಹಾಕಿದ್ದಾರೆ ಆದರೆ ಹಿಂದುಸ್ಥಾನದ ಪವಿತ್ರತೆ ಪಾಕಿಸ್ಥಾನಕ್ಕಿಲ್ಲ ಪೋನಾರ್ಕ ಎಂಬ ಶಬ್ದದ ಪ್ರತಿನಕಲಾಗಿ ಎನಾರ್ಕ ಎಂದು ಮಿಲ್ಟನನು ಒಂದು ಹೊಸ ಶಬ್ದವನ್ನು ಇಂಗ್ಲೀಷ ಭಾಷೆಯಲ್ಲಿ ಎರಕ ಹಾಕಿದಂತೆ ಪಾಕಿಸ್ಥಾನ ಎಂಬ ಶಬ್ದವು ಇರುತ್ತದೆ ಹಿಂದೂ ಹಿಂದುಸ್ಥಾನ ಮತ್ತು ಮುಸಲ್ಮಾನ ಹಿಂದುಸ್ಥಾನವೆಂದು ನಮ್ಮ ಮಾತೃಭೂಮಿಯನ್ನು ಎರಡಾಗಿ ಪಾಲುಮಾಡಬೇಕೆಂಬುದು ಪಾಕಿಸ್ಥಾನದ ಸ್ಥೂಲ ತತ್ವವಾಗಿದೆ ಇದು ಕೆಲವು ಮುಸಲ್ಮಾನರ ರಾಜಕೀಯ ಆಶೆಯು ಈ ದಿನದ ಸ್ವರೂಪವಾಗಿದೆ ಆದರೆ ಇದನ್ನೇ ಅವರ ಕೊನೆಯ ಆಶಯವೆಂದು ತಿಳಿಯುವುದು ಮೂರ್ಖತನವಾದೀತು. ಕಳೆದ ೨೦-೨೫ ವರ್ಷಗಳ ಅವರ ನಡವಳಿಕೆಯು ಇದಕ್ಕೆ ಸಾಕ್ಷಿಯಾಗಿದೆ. ಇಡೀ ದೇಶವನ್ನು ತಮ್ಮದನ್ನಾಗಿ ಮಾಡಿಕೊಳ್ಳಲಿಕ್ಕೆ ಕೆಲವು ಮುಸಲ್ಮಾನರು ಹೂಡಿದ ಹಂಚಿಕೆಯೆಂದೇ ನಾವು ಇದನ್ನು ತಿಳಕೊಳ್ಳಬಹುದು.

ಅಂದು-ಇಂದಿನ ಮನೋವೃತ್ತಿ

ಹಿಂದುಗಳು ವರ್ತಮಾನ ಪರಿಸ್ಥಿತಿಯನ್ನು ಮಾತ್ರ ನೋಡುವದಲ್ಲ. ಭೂತ ಭವಿಷ್ಯತ್ತುಗಳನ್ನೂ ತಿಳಿದುಕೊಳ್ಳಬೇಕು. ಆಗ ಮಾತ್ರ ಪಾಕಿಸ್ಥಾನದ ಈ ರೋಗವು ಎಷ್ಟು ಭಯಂಕರವಾಗಿದೆ ಎಂಬುದು ಅವರಿಗೆ ಗೊತ್ತಾಗಬಹುದು. ೧೯೧೬ರಲ್ಲಿ ಹಿಂದು ಮುಸಲ್ಮಾನರು ಸೇರಿ ಒಮ್ಮತದ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿದ್ದರು. ಅದರಲ್ಲಿ ಹಿಂದುಗಳು ಮುಸಲ್ಮಾನರಿಗೆ, ಅವರಿಗೆ ನ್ಯಾಯವಾಗಿ ದೊರೆಯಲಾರದಂಥ ಅನೇಕ ರಿಯಾಯತಿಗಳನ್ನು ಕೊಟ್ಟಿದ್ದರು. ಆದರೆ ಕೆಲಮುಸಲ್ಮಾನರು ಅಷ್ಟರಿಂದ ತೃಪ್ತರಾಗಲಿಲ್ಲ. ಹಿಂದುಗಳ ಉದಾರತೆಯನ್ನು ಅವರ ದುರ್ಬಲತೆ ಎಂದು ಅವರು ತಿಳಕೊಂಡು ಹೆಚ್ಚೆಚ್ಚು ರಿಯಾಯತಿಗಳನ್ನು ಕೇಳುತ್ತಬಂದರು. ಹಿಂದುಗಳು ಕೊಡುತ್ತ ಬಂದರು. ೧೯೧೬ರ ಲಖ್ನೋ ಒಡಂಬಡಿಕೆಯನ್ನು ಅರ್ಥಮಾರ್ಥತಿದ್ದಬಾರದೆಂದು ಹಲವು ಹಿಂದುಮುಖಂಡರು ಸೂಚಿಸಿದರಾದರೂ ಪ್ರಯೋಜನವಾಗಲಿಲ್ಲ. ಪಾಕಿಸ್ಥಾನವು ಈಗ ಗರ್ಭದಲ್ಲಿ ಮಾತ್ರ ಇದೆ. ಈ ರಾಕ್ಷಸ ಗರ್ಭವನ್ನು ಈಗಲೇ ಹೊಸಗಿ ನಾಶಮಾಡಿ ಬಿಡಬೇಕು. ರಾಕ್ಷಸ ಗರ್ಭವು ಮಗುವಾಗಿ ಹೊರಗೆ ಬಂದರೆ ಮತ್ತೆ ಅದನ್ನು ನಾಶಮಾಡಲು ಬಹಳ ಕಷ್ಟಪಡಬೇಕಾದೀತು. ಆದುದರಿಂದ ಹಿಂದುಗಳು ಸಂಘಟಿತರಾಗಿ ಪಾಕಿಸ್ಥಾನದ ಉಸಿರು ಹೊರಗೆ ಬಾರದ ಹಾಗೆ ಭಗೀರಥ-ಪ್ರಯತ್ನ ಮಾಡಬೇಕು" ಹೀಗೆಂದು ಅವರು ಹೇಳಿದರು.

ಇಂದಿನಿಂದಲೇ ಅವುಗಳಿಗೆ

ಓವಲ್ಟಿನ್

ಕೊಟ್ಟರೆ, ಅವು ಆರೋಗ್ಯವಾಗಿ ಬಲಶಾಲಿಗಳಾಗುವುವು

ಮಕ್ಕಳು ಬೆಳೆಯುವ ಸಮಯದಲ್ಲಿ ಅವುಗಳಿಗೆ ಶಕ್ತಿದಾಯಕ ಮತ್ತು ಸರಿಯಾದ ಪೋಷಣೆಯು ಅವಶ್ಯಕತೆ ಇದೆ. ಈ ಬೆಳವಣಿಗೆಯ ಸಮಯ ಅವುಗಳು ಬೇಗನೇ ತಮ್ಮ ಶಕ್ತಿಯನ್ನು ವ್ಯಯಮಾಡುವುವು. ಅವು ಆರೋಗ್ಯವಂತರಾಗಿಯೂ ಬಲಶಾಲಿಗಳಾಗಿಯೂ ಇರಬೇಕಾದರೆ ಈ ವ್ಯಯವನ್ನು ಕೂಡಲೇ ಭರ್ತಿಮಾಡಬೇಕು.

ಈ ವ್ಯಯವಾದ ಶಕ್ತಿಯನ್ನು ಭರ್ತಿಮಾಡಿ ಬಲವನ್ನೂ, ಸುಖವನ್ನೂ, ಆರೋಗ್ಯವನ್ನೂ ಕೊಡಲು ದೇಹದಾರ್ಢ್ಯಕ್ಕೆ ಉತ್ತಮ ಪೋಷಣೆಯ ಗುಣವುಳ್ಳ 'ಓವಲ್ಟಿನ್' ಒಂದು ಅಮೂಲ್ಯ ಆಹಾರಪಾನೀಯವಾಗಿರುತ್ತದೆ.

'ಓವಲ್ಟಿನ್' ಒಂದು ಉತ್ತಮವಾದ ನೈಸರ್ಗಿಕ ಆಹಾರ-ನೆನೆಹಾಕಿ ಮಾಗಿದ ಬಾರ್ಲಿ, ಹಸಿಹಾಲಿನ ಕೆನೆ, ಅಮೂಲ್ಯ ನೈಸರ್ಗಿಕ ವಿಟಾಮಿನುಗಳು ಮತ್ತು ಇನ್ನಿತರ ಆಹಾರವಸ್ತುಗಳ ತಯಾರಿಕೆಯಾಗಿರುತ್ತದೆ. ಮಕ್ಕಳು ಇದರ ರುಚಿಯನ್ನು ಬಹಳವಾಗಿ ಮೆಚ್ಚುತ್ತವೆ ಇತರ ಸಕಲ ಪಾನೀಯಗಳನ್ನು ವರ್ಜಿಸಿರಿ. 'ಓವಲ್ಟಿನ'ನ್ನೇ ಕೊಂಡುಕೊಳ್ಳಿರಿ

'ಓವಲ್ಟಿನ್' ಒಂದು ಆಹಾರಪಾನೀಯವಾಗಿದ್ದು ಬಿಸಿಯಾ ತಣ್ಣಗಾಗಿ ಸೇವಿಸಬಹುದು. ಇದನ್ನು ತಯಾರಿಸುವ ಕ್ರಮವು ಬಹಳ ಸುಲಭ ಮತ್ತು ಕ್ರಮವು ಪ್ರತೀ ಒಂದು ಟಿನ್ನಿನೊಂದಿಗಿದೆ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

'ಓವಲ್ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

ಡಿಸ್ಟ್ರಿಬ್ಯೂಟರ್ಸ್:—

ಗ್ರೆಹಮ್ಸ್ ಟ್ರೇಡಿಂಗ್ ಕೋ. [ಇಂಡಿಯಾ] ಲಿಮಿಟೆಡ್,

16 ಬೇಂಕ್ ಸ್ಟ್ರೀಟ್, ಬೊಂಬಾಯಿ, ಹಾಗೂ ಕಲ್ಕತ್ತಾ, ಮದ್ರಾಸು, ಕರಾಚಿ ಮತ್ತು ರಂಗೂನು

'ಓವಲ್ಟಿನ್ ಬಿಸ್ಕುಟುಗಳು'— ರುಚಿಕರ, ಜೀರ್ಣಕರ ಮತ್ತು ಪೋಷಣಾಯುಕ್ತ, "ಓವಲ್ಟಿನ್" ಬಿಸ್ಕುಟುಗಳು ಬಹಳ ಉತ್ತಮ. ಅವುಗಳಲ್ಲಿ ಅಮೂಲ್ಯ ಗುಣದ ಓವಲ್ಟಿನ್ ಸೇರಿದೆ 4 ಔನ್ಸು, 8 ಔನ್ಸುಗಳ ಪೆಕೆಟುಗಳಲ್ಲಿಯೂ 1 ಪೌಂಡಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV/42/40

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

14—2—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೪—೨—೧೯೪೧

ಭಾರತದ ವಿಷಯ ವಿಲ್ಕಿಯುವರ ಮೌನವೇ?

ಲಂಡನಿನಿಂದ ಬಂದ ಸುದ್ದಿ

ವಿನೋಬಾಜಿಯರನ್ನು ಆರಿಸಿದ್ದು ತಪ್ಪಾಯಿತೆ?

ಪಾರ್ಲಿಮೆಂಟಿನಲ್ಲಿ ಎಮೆರಿಯುವರೊಡನೆ ಪ್ರಶ್ನೋತ್ತರ.

ಲಂಡನಿಗೆ ಅಮೇರಿಕದ ರ್ಯಾಯಭಾರಿಯಾಗಿ ವೆಂಡಲ್ ವಿಲ್ಕಿಯುವರು ಕಳೆದ ವಾರ ಬಂದಿದ್ದರಷ್ಟೆ? ಅಮೇರಿಕವು ಪ್ರಜಾಪ್ರಭುತ್ವ ಸ್ವತಂತ್ರ ರಾಜ್ಯವಾದುದರಿಂದ ಭಾರತದ ವಿಷಯವಾಗಿ ಹೆಚ್ಚಿನ ಸಹಾನುಭೂತಿಪರವಾದ ಅಭಿಪ್ರಾಯ ಪಡಬಹುದೆಂಬುದು ಹಾರೈಕೆಯಲ್ಲವೆ? ಹಾಗಾದರೆ ವೆಂಡಲ್ ವಿಲ್ಕಿಯುವರು ಭಾರತದ ಕುರಿತು ಏನಾದರೂ ಹೇಳಿದರೇ ಎಂದು ತಿಳಿಯುವುದು ಕುತೂಹಲದ ಸಂಗತಿಯಾಗಿದೆ.

ಹಿಂದೂಸ್ಥಾನ ಸ್ಟೇಂಡಾರ್ಡಿಗೆ ಅದರ ಲಂಡನ್ ಪ್ರತಿನಿಧಿಯು ಒಂದು ಸ್ಪೆಶ್ಯಲ್ ತಂತಿ ಕಳುಹಿಸುತ್ತಾ ವಿಲ್ಕಿಯುವರೊಡನೆ ಆದ ಭೇಟಿಯ ಕುರಿತು ಹೀಗೆಂದು ಬರೆದಿರುವನು.

'ನಾನು ವಿಲ್ಕಿಯುವರನ್ನು ಭೇಟಿಯಾಗಿ ಭಾರತದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಪ್ರಶ್ನಿಸಿದಾಗ ಅವರು ಯಾವುದೇ ಉತ್ತರವನ್ನು ನನಗೆ ಕೊಡಲಿಲ್ಲ. ಭಾರತದ ಪರಿಸ್ಥಿತಿ ಸುಧಾರಿಸಲ್ಪಡಬೇಕೆಂಬ ... ಅಭಿಪ್ರಾಯವುಳ್ಳವರಾಗಲಿ ಅವರು ತಮ್ಮ ಅಭಿಪ್ರಾಯ ಹೇಳಲಿಲ್ಲ. ಇಂದಿನ ಕಾರ್ಯನೀತಿಯನ್ನು ಬಿಟ್ಟುಕೊಟ್ಟು ಕಾಂಗ್ರೆಸ್ಸಾದರೂ ಬ್ರಿಟನಿಗೆ ಸಹಾಯಕೊಡುವುದು ಅವಶ್ಯವಿದೆಯೆಂದಾಗಲೀ ಅವರು ತಿಳಿಸಲಿಲ್ಲ. ಒಟ್ಟು ಭಾರತದ ಕುರಿತು ಕೇವಲ ಮೂಕ ಮೌನವನ್ನು ಅವರು ತಾಳಿದ್ದರು!

ಹೀಗೆಂದು ಪತ್ರಿಕಾ ಬಾತ್ಮೀದಾರನು ಬರೆಯುತ್ತಾನೆ. ಇಂತಹ ಮೌನಕ್ಕೆ ಏನು ಕಾರಣವಿರಬಹುದೋ, ನಮಗಂತೂ ಊಹಿಸಲು ಬರುವುದಿಲ್ಲ.

ಮೊದಲ ಸತ್ಯಾಗ್ರಹಿ ಅಯೋಗ್ಯನೇ?

ಗಾಂಧಿಜಿ ಈ ಸಲದ ಸತ್ಯಾಗ್ರಹದ ಮೊದಲ ಸೇನಾನಿಯಾಗಿ ವಿನೋಬಾ ಬಾವೆಯರನ್ನು ಆರಿಸಿದ್ದು ಅವರ ದೊಡ್ಡ ತಪ್ಪೆ?

ದಿ ಗ್ರೇಟ್ ಬ್ರಿಟನ್ ಎಂಡ್ ದಿ

ಈಸ್ಟ್ ಎಂಬ ಲಂಡನಿನ ಪತ್ರಿಕೆಯು ಮಹಾತ್ಮಾಜಿಯವರು ವಿನೋಬಾಜಿಯವರನ್ನು ಆರಿಸಿದ್ದು ದೊಡ್ಡ ಪ್ರಮಾದದ ಸಂಗತಿಯಾಯಿತು ಎಂದು ಉದ್ಗರಿಸುತ್ತದೆ.

ಅದು ತನ್ನ ಹೇಳಿಕೆಗೆ ಆಧಾರವಾಗಿ ವಿನೋಬಾಜಿ ಕೊಟ್ಟ ಭಾಷಣದ ವರದಿಯ ಮೇಲೆ ಟೀಕೆಮಾಡುತ್ತದೆ.

ಕಾಂಗ್ರೆಸ್ಸು ನಾಜಿ ಪದ್ಧತಿಯನ್ನು ತೀವ್ರ ಖಂಡಿಸಿರುತ್ತಾ ಅದರಿಂದ ಚುನಾಯಿತನಾದ ಪ್ರಥಮ ಸತ್ಯಾಗ್ರಹಿಯು ಹಿಟ್ಲರನನ್ನು ದೂರಲಿಲ್ಲ ಎಂಬುದು ವಿನೋಬಾಜಿಯವರ ಮೇಲೆ ಅಪವಾದ. ವಿನೋಬಾಜಿ ಸತ್ಯಾಗ್ರಹಪ್ರಾರಂಭಕ್ಕಾಗಿ ದಲ್ಲಿ ಮಾಡಿದ ಭಾಷಣದಲ್ಲಿ ಹಿಟ್ಲರನ ಕುರಿತು ಮಾತನಾಡುತ್ತಾ ಆತನನ್ನು ಜರ್ಮನರೆಲ್ಲರೂ ಬಹಳವಾಗಿ ಮೆಚ್ಚುತ್ತಿರುವ ಕಾರಣ ಈ ಜನರು ಹಿಟ್ಲರನನ್ನು ಹೇಗೆ ಚಿತ್ರಿಸಿದ್ದಾರೆಯೋ ಹಾಗೆ ಆತನು ಕೆಟ್ಟವನಲ್ಲವೆಂದೂ ಹೇಳಿದ್ದಾರಾಗಿ ಸರಕಾರದ ವರದಿಗಾರನು ಬರೆದುಕೊಂಡ ಭಾಷಣದ ವರದಿಯಲ್ಲಿರುವುದಂತೆ.

ಹಾಗಾಗಿ ವಿನೋಬಾಜಿಯುವರು ಹಿಟ್ಲರನನ್ನು ಕಂಡಾಬಟ್ಟೆ ದೂಷಿಸಲು ಒಪ್ಪಲಿಲ್ಲವೆಂದು ಅವರು ಇಂದಿನ ಸತ್ಯಾಗ್ರಹದ ಮೊದಲ ಸೇನಾನಿಯಾಗಿ ಆದದ್ದು, ಗಾಂಧಿಜಿ ಅವರನ್ನು ಆರಿಸಿದ್ದು ಗಾಂಧಿಜಿಯವರು ಮಾಡಿದ ದೊಡ್ಡದೊಂದು ತಪ್ಪು ಎಂದು ಆ ಪತ್ರಿಕೆಯು ಅಭಿಪ್ರಾಯಪಡುತ್ತದೆ.

ಕಾಮನ್ಸಿನಲ್ಲಿ ಭಾರತದ ವಿಷಯ ಪ್ರಶ್ನೋತ್ತರಗಳು

ಅಮೆರಿಯವರ ಹೇಳಿಕೆ

ಭಾರತದ ವಿಷಯದಲ್ಲಿ ಹೆಚ್ಚು ನಿಶ್ಚಿತ ಧೋರಣೆಯನ್ನು ಅನುಸರಿಸಬೇಕೆಂದು ಆರ್. ಎ. ಕ್ಯಾರಿಯವರು ಕಾಮನ್ಸಿನಲ್ಲಿ ಅಮೆರಿಯವರಿಗೆ ಹಲವು ಪ್ರಶ್ನೆಗಳನ್ನು ಕೇಳಿದರು. ಅವರಿಬ್ಬರಲ್ಲಿ ಈ ಕೆಳಗಿನಂತೆ ಪ್ರಶ್ನೋತ್ತರಗಳು ನಡೆದವು:—

ಕ್ಯಾರಿ—ಭಾರತದ ಧುರೀಣರು ತಮ್ಮ ತಮ್ಮೊಳಗೆ ಒಪ್ಪಂದ ಮಾಡಿಕೊಂಡ ಹೊರತು ಬ್ರಿಟಿಷ್ ಸರಕಾರದವರು ಒಂದು ಹೆಜ್ಜೆ ಸಹ ಮುಂದಿಡುವದಿಲ್ಲವೆಟೆ ಒಂದು ವೇಳೆ ಭಾರತೀಯರು ಒಪ್ಪಂದ ಮಾಡಿಕೊಂಡು ರಾಜ್ಯಘಟನೆಯನ್ನು ತಯಾರಿಸಿದರೆ ಅದಕ್ಕೆ ಬ್ರಿಟಿಷ್ ಸರಕಾರದ ಸಮ್ಮತಿ ಬೇಕೇ?

ಅಮೆರಿ:—ಆಗಸ್ಟ್ ಮತ್ತು ನವಂಬರ್ ತಿಂಗಳುಗಳ ಘೋಷಣೆಗಳಿಂತ ಹೆಚ್ಚಿಗೇನೂ ಹೇಳುವದಿಲ್ಲೆಂದು ನನಗನಿಸುತ್ತದೆ.

ಕ್ಯಾರಿ:—ಭಾರತವು ಅನಿಯಮಿತ ಅವಧಿಯ ವರೆಗೆ ಇದೇ ಪರಿಸ್ಥಿತಿಯಲ್ಲೆ ಉಳಿಯಬೇಕೇ? ಭಾರತದ ಬಗ್ಗೆ ಹೆಚ್ಚು ನಿಶ್ಚಿತ ಧೋರಣೆ ವಹಿಸಬೇಡವೆ?

ಅಮೆರಿ:—ಇಲ್ಲ; ನಾನು ಈಗ ಅನುಸರಿಸುತ್ತಿರುವ ಧೋರಣೆಯು ಹೆಚ್ಚು ನಿಶ್ಚಿತವಿದ್ದು ಅದು ಪ್ರಗತಿಪರ ಮಾರ್ಗವನ್ನು ಸೂಚಿಸುತ್ತದೆ.

ಸ್ಟೋರಿಸೇನ:—ಯಾವುದೇ ಒಂದು ಪ್ರಜಾಸತ್ತಾತ್ಮಕ ಸಂಸ್ಥೆಯು ಬಹುಮತದ ಅಭಿಪ್ರಾಯಕ್ಕೆ ಅಮೆರಿಯವರು ಮನ್ನಣೆ ಕೊಡುವರೆಂದು ನಾನು ತಿಳಿಯುತ್ತೇನೆ.

ಅಮೆರಿ:—ಅದು ಮತದಾರರ ಸಂಘವನ್ನೂ ಮತದಾರರ ಸಮ್ಮತಿಯನ್ನೂ ಅವಲಂಬಿಸಿರುತ್ತದೆ.

ಕ್ಯಾರಿ:—ಭಾರತದಲ್ಲಿ ಸ್ವರಾಜ್ಯ ಸ್ಥಾಪಿಸುವದರ ಬಗ್ಗೆ ಭಾರತೀಯರಿಗೆ ಹೆಚ್ಚು ತಿಳುವಳಿಕೆಯಾಗುವಂತೆ ಪ್ರಯತ್ನಿಸುವಿರಾ?

ಅಮೆರಿ:—ನಾನು ಅದಕ್ಕೆ ಯಾವಾಗಲೂ ಸಿದ್ಧನಿದ್ದೇನೆ.

ಬೋಸರ ಕುರಿತು ಭವಿಷ್ಯ

ಕರಾಚಿ ಜ್ಯೋತಿಷ್ಯರು

ಬೋಸರು ೧೮ ತಿಂಗಳ ವರೆಗೆ ಸನ್ಯಾಸಿಗಳಾಗಿರುವರೆಂದೂ ೧೦ನೆ ಫೆಬ್ರುವರಿ ಅವರ ಪತ್ತೆಯಾಗುವುದೆಂದೂ, ೧೯೪೩ರಲ್ಲಿ ತಿರುಗಿ ಅವರು ರಾಜಕಾರಣಕ್ಕೆ ಸೇರುವರೆಂದೂ ೧೯೪೨ರಲ್ಲಿ ಪುನಃ ಕಾಂಗ್ರೆಸ್ ಅಧ್ಯಕ್ಷರಾಗುವರೆಂದೂ ಕರಾಚಿಯ ಜ್ಯೋತಿಷ್ಯರೊಬ್ಬರ ಭವಿಷ್ಯವಿದೆ.

ಸ್ವದೇಶಾಭಿಮಾನಿಗೆ

ಚಂದಾದಾರರಾಗಿ!

THE
Canara Banking Corporation Ltd.,
(INCORPORATED IN BRITISH INDIA)
Estd: 1906
Head Office: UDIPI, S. Kanara.
Our attractive Rates on Deposits.
FIXED DEPOSITS

3 to 6 months	2½% p. a.
6 to 12	3% „
One year	3¼% „
Two years	4% „
SHORT TERM Deposits:	2½% p. a.
Current Account:	1% p. a.
Savings Bank:	2½%

Particulars of other kinds of deposits on application.

ಸ್ವದೇಶಾಭಿಮಾನಿ

ತಾರೀಕು 14-2-1941

ಚರ್ಚಿಲ್ಲರ ಭಾಷಣ

'ಸಮುದ್ರ ಮತ್ತು ಆಕಾಶಗಳನ್ನು ಸ್ವಾಧೀನಪಡಿಸಿಕೊಳ್ಳದೆ, ಬ್ರಿಟನಿನಂತಹ ದ್ವೀಪವನ್ನು ಆಕ್ರಮಿಸಿಬಿಡುವುದು ಸಾಧ್ಯವಲ್ಲ. ಆದರೆ ಹೇಡಿತನ, ದೇಶದ್ರೋಹ, ಮಿತಿಮೀರಿದ ನಂಬಿಕೆ, ಉದಾಸೀನತೆ, ಆಲಸ್ಯ ಇಂತಹ ಅನ್ಯಾಯಗಳನ್ನು ಈಗ ಯಾರೂ ಮಾಡಕೂಡದು. ಕಳೆದ ಸಪ್ಟಂಬರಿನಲ್ಲಿಯೇ ಇಂಗ್ಲೆಂಡಿನ ಮೇಲೆ ಧಾಳಿಯಿಡಲು ಹಿಟ್ಲರನ ಹಂಚಿಕೆಯಿತ್ತು; ಆದರೆ ಆತನು ಆ ಪ್ರಯತ್ನದಲ್ಲಿ ನಿರಾಶನಾದನು. ಈಗ ತಿರಿಗಿ ಧಾಳಿಮಾಡುವ ವಿಚಾರವೆದ್ದಿದೆ. ವಿಷವಾಯು ಪ್ರಯೋಗ, ವಿಮಾನದ ಕೊಡೆಗಳ ಹಾರಾಟ, ಹೀಗೆ ಅನೇಕ ತರದಿಂದ ಜರ್ಮನರು ನಮ್ಮ ಮೇಲೆ ಬೀಳಬಹುದು. ನಾವು ಇದಕ್ಕೆಲ್ಲಾ ಎದೆಗೊಡಲು ಸಿದ್ಧರಾಗಿರಬೇಕು.

ಯುದ್ಧ ಪರಿಸ್ಥಿತಿ

ಹೀಗೆಂದು ಬ್ರಿಟಿಷ್ ಪ್ರಧಾನ ಮಂತ್ರಿ ಚರ್ಚಿಲ್ಲರು ಮೊನ್ನೆ ತಮ್ಮ ಆಕಾಶವಾಣಿಯ ಭಾಷಣದಲ್ಲಿ ಹೇಳುತ್ತಾ ಪ್ರಕೃತದ ಯುದ್ಧ ಪರಿಸ್ಥಿತಿಯನ್ನು ಸಾಂಗವಾಗಿ ಗಂಭೀರವಾಗಿ ಆದಷ್ಟು ಸ್ಪಷ್ಟವಾಗಿ ವಿವರಿಸಿ ಹೇಳಿದರು. ಬ್ರಿಟಿಷ್ ಜನತೆಯು ಇನ್ನಷ್ಟು ಧೈರ್ಯದಿಂದ ಆಕ್ರಮಣವನ್ನು ಎದುರಿಸಲು ಸಿದ್ಧವಾಗಿರಬೇಕಾಗಿದೆಯೆಂದು ಎಚ್ಚರಿಸಿದರು. ಬ್ರಿಟಿಷರ ಇಂದಿನ ಈ ದುರಂತ ಸಂಕಟಕಾಲವನ್ನು ಅವರು ತೋರಿಸುವ ಸಾಹಸವನ್ನು ತಮ್ಮ ವೀರ ಸ್ಫೂರ್ತಿಮಯ ವಾಣಿಯಿಂದ ಸಾರಿದರು. ಬ್ರಿಟಿಷರಿಗೆ ಜಯ ಸಿಗುವದೆಂಬ ತಮ್ಮ ನಂಬಿಕೆಯನ್ನು, ಹಂಬಲವನ್ನು ಒತ್ತಿ ಒತ್ತಿ ಹೇಳಿದರು. ಭೀಷಣ ಸಮರಾಸಕ್ತವಾಗಿ ಸಂಕಷ್ಟದಲ್ಲಿರುವ ಬ್ರಿಟಿಷ್ ಜನತೆಗೆ ಪ್ರಧಾನ ಮಂತ್ರಿಗಳ ಈ ಭಾಷಣವು ಆಪ್ಯಾಯನಕರವಾಗಿದ್ದಿತೆನ್ನಬಹುದು.

ಬ್ರಿಟಿಷರ ಸಾಹಸ

ಅವರು ತಮ್ಮ ಸುದೀರ್ಘ ಭಾಷಣದಲ್ಲಿ ಕೊಟ್ಟಿರುವ ಹಲವು ಸಂಗತಿಗಳು ವಾಚನೀಯವೂ ಅತ್ಯಂತ ಮನನೀಯವೂ ಇರುತ್ತದೆ. ಭಾಷಣದ ಪ್ರಾರಂಭದಲ್ಲಿ ಅವರು ಕಳೆದ ಅಗಸ್ಟಿನಿಂದ ಬ್ರಿಟಿಷ್ ವೈಮಾನಿಕರು ಜರ್ಮನ್ ವೈಮಾನಿಕರನ್ನು ಮಾಗಿಸುವ ಸಾಹಸಗಳನ್ನು ತೋರಿಸಿ ವಿಜಯಿಗಳಾಗಿರುವರೆಂದರು. ಇದರಿಂದ ಹಿಟ್ಲರನ ಆರ್ಭಟವು ಸ್ವಲ್ಪ ಕಡಿಮೆಯಾಗಿರುವುದೆಂದೂ ಹೇಳಿದರು. ಬ್ರಿಟನಿನ ಮೇಲೆ ಜರ್ಮನರು ಪ್ರಾರಂಭದಲ್ಲಿ ಧಾಳಿಗಳನ್ನು ಹೆಚ್ಚು ಹೆಚ್ಚಾಗಿ ಮಾಡುತ್ತಿದ್ದಂತೆ ಬ್ರಿಟಿಷರ ಧೈರ್ಯವೂ ಹೆಚ್ಚುಹೆಚ್ಚಾಗುತ್ತಾ ಬಂದಿತೆಂಬುದನ್ನೂ ತಿಳಿಸಿ, ಇದರಿಂದಲೇ ಬ್ರಿಟಿಷರು ಸಕಲರ ಪ್ರೀತಿ ಆದರಗಳಿಗೆ ಪಾತ್ರರಾದರೆಂದೂ ಬಣ್ಣಿಸಿದರು. ಲಂಡನ್ ಮೊದಲಾದ ಪಟ್ಟಣಗಳು ಜರ್ಮನರ ಉಗ್ರವಾದ ಧಾಳಿಗೆ ಗುರಿಯಾಗುತ್ತಿರುವುದನ್ನು ನೋಡಿ, ಅದನ್ನು ತಡೆವ ಬ್ರಿಟಿಷ್ ಸಾಮಾನ್ಯ ಜನತೆಯನ್ನು ವಾಟರ್ಲೂ ಕದನದ ಸೈನಿಕರಿಗೆ ಹೋಲಿಸಿ ಹೇಳಿದರು. ಈ ಜನರಿಗಾದರೂ ಕೊನೆಗೆ ವಾಟರ್ಲೂ ಕದನದ ಸೈನಿಕರಂತೆಯೇ ವಿಜಯವು ದೊರಕಲಿದೆಯೆಂದು ತಮ್ಮ ವಿಶ್ವಾಸವಿರುವುದಾಗಿ ತಿಳಿಸಿದರು.

ಮುಸಲಿನಿಯ ಸೋಲು

ಮತ್ತೆ ಅವರು ಆಫ್ರಿಕದಲ್ಲಿ ದೊರಕಿದ ವಿಜಯಗಳನ್ನು ವಿವರಿಸಿದರು. ಮುಸಲಿನಿಯ ಅನ್ಯಾಯ ಬುದ್ಧಿಯನ್ನು ಖಂಡಿಸಿದರು. ಇಟಲಿಯನರ ಶಕ್ತಿಯು ಸಂಪೂರ್ಣವಾಗಿ ನಾಶವಾದಂತಾಯಿತೆಂದೂ ಆ ಸಾಮ್ರಾಜ್ಯವು ನಾಶವಾಗುವುದೆಂದೂ ಸಾರಿದರು. ಸಿದಿಬರಾನಿಯಿಂದ ಬೆಂಗಾಜಿಯ ತನಕ ಬ್ರಿಟಿಷ್ ಸೈನಿಕರು ತೋರಿಸಿದ ಪರಾಕ್ರಮವನ್ನು ಅವರು ಕೊಂಡಾಡಿದರು. ಅಬಿಸೀನಿಯದಲ್ಲಿಯೂ ಬ್ರಿಟಿಷರಿಗೇ ವಿಜಯವಾಗುತ್ತಿದೆಯೆಂದರು.

ಮುಂದಿನ ಗಂಡಾಂತರ

ಬಳಿಕ ಅವರು, ಇನ್ನು ಹಿಂದಿಗಿಂತಲೂ ಹೆಚ್ಚಿನ ಗಂಡಾಂತರಗಳೊದಗಲಿವೆಯೆಂದರು. ಮುಸಲಿನಿ ಸೋತಿದ್ದರೂ, ಹಿಟ್ಲರನು ಮುಂದೊತ್ತಿ ಬರುತ್ತಿರುವ ಕಡೆಗೆ ಲಕ್ಷ್ಯವಿಡಬೇಕಾಗಿದೆಯೆಂದೂ ಜರ್ಮನರು ಅನೇಕ ರಾಜ್ಯಗಳನ್ನು ಸ್ವಾಧೀನಪಡಿಸಿ ಅಲ್ಲಿನ ಶಸ್ತ್ರಸಾಮಾಗ್ರಿಗಳನ್ನೂ ಕೈವಶಮಾಡಿಕೊಂಡಿರುವುದಾಗಿಯೂ ಅನೇಕ ಬಗೆಯಿಂದ ಇಂಗ್ಲೆಂಡಿನ ಮೇಲೆ ಧಾಳಿಯಿಡುವ ಸಿದ್ಧತೆಗಳು ಈಗ ಆಗಿವೆಯೆಂದೂ ಅವರು ತಿಳಿಸಿದರು.

ಆಗ್ನೇಯ ಯುರೋಪು

ಅನಂತರ ಅವರು ಆಗ್ನೇಯ ಯುರೋಪಿನ ರಾಷ್ಟ್ರಗಳು ಈ ಕಾಲದಲ್ಲಿ ಒಂದಾಗಿ ಇರಬೇಕೆಂದು ಹೇಳಿದರು. ಹಾಗಾದರೆ ಮಾತ್ರ ಈ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಹರಣಮಾಡುವ ಹಿಟ್ಲರನನ್ನು ತಡೆಯಲು ಸಾಧ್ಯವಾಗಬಹುದೆಂದೂ, ಇಲ್ಲವಾದರೆ ಅವುಗಳ ಮೇಲೆ ಆತನು ಬಿಡಿಕ ಆಕ್ರಮಣಮಾಡುವನೆಂದೂ ಮತ್ತೆ ಅವುಗಳು ಚೇತರಿಸಿಕೊಳ್ಳುವುದು ಕಷ್ಟವೆಂದೂ ಸಾರಿದರು. ಭೂಮಧ್ಯ ಸಾಗರದಲ್ಲಿ ಪರಾಕ್ರಮದಿಂದ ತಾವು ಹೋರಾಡುತ್ತಿರುವುದಾಗಿ ತಿಳಿಸಿ ಬಂದುದೆಲ್ಲವನ್ನು ಅನುಭವಿಸಲು ದೃಢನಿಶ್ಚಯ ಮಾಡಿರುವುದಾಗಿ ಹೇಳಿದರು.

ಅಮೇರಿಕದ ಬೆಂಬಲ

ಕೊನೆಗೆ, ಅವರು ಅಮೇರಿಕದ ಬೆಂಬಲದ ವಿಷಯವಾಗಿ ಮಾತನಾಡಿದರು. ಬ್ರಿಟನಿಗೆ ಇಂದು ಯುದ್ಧಸಾಮಾಗ್ರಿಗಳು ಬೇಕಾಗಿವೆಯೆಂದೂ, ಅದು ಅಮೇರಿಕದ ಬೆಂಬಲದಿಂದ ಸಿಗುವುದೆಂದೂ, ಅಮೇರಿಕದ ಅಧ್ಯಕ್ಷರು ಬಹಳ ಉದಾರ ಬುದ್ಧಿಯವರೆಂದೂ, ಮಹಾಪುರುಷರೆಂದೂ ಕೊಂಡಾಡಿದರು. 'ಯುದ್ಧವು ದೀರ್ಘಕಾಲ ನಡೆಯಲಿ, ಏನೇ ಆಗಲಿ, ನಾವು ಹೆದರುವುದಿಲ್ಲ; ಇಟ್ಟ ಹೆಜ್ಜೆ ಹಿಂದಿಡುವುದಿಲ್ಲ. ನಮಗೆ ಶಸ್ತ್ರಗಳನ್ನು ಕೊಡಿರಿ. ನಮ್ಮನ್ನು ಆಶೀರ್ವದಿಸಿರಿ; ನಮ್ಮ ಕೆಲಸವನ್ನು ನಾವು ಸರಿಯಾಗಿ ಮಾಡುತ್ತೇವೆ'' ಎಂದು ಅಮೇರಿಕದ ಅಧ್ಯಕ್ಷರಿಗೆ ತಿಳಿಸಿರುವುದಾಗಿ ಹೇಳಿದರು.

ಮುಂದಪಕ್ಷೀಯರ ಹೇಳಿಕೆ

ಮದ್ರಾಸಿನಲ್ಲಿ, ರಾಷ್ಟ್ರೀಯ ಮುಂದಪಕ್ಷೀಯರ ಸಭೆಯೊಂದು ನೆರೆದು, ಅದರಲ್ಲಿ ರೈಟ್ ಆನರೇಬಲ್ ಶ್ರೀನಿವಾಸ ಶಾಸ್ತ್ರಿಗಳು ಭಾರತದ ಪರಿಸ್ಥಿತಿಯ ಕುರಿತು ಒಂದು ವಿಚಾರಪೂರ್ಣವಾದ ಭಾಷಣವಿತ್ತರು. ಭಾರತವು ವೆಸ್ಟ್‌ಮಿನ್‌ಸ್ಟರ್ ರೀತಿಯ ಸಾಮಂತ ಸ್ವರಾಜ್ಯವನ್ನು ಹೊಂದಿ ತೃಪ್ತಿಪಡಬೇಕೆಂದು ಬ್ರಿಟನು ಹೇಳುತ್ತಿರುವ ಹೇಳಿಕೆಯನ್ನು ವಿವೇಚಿಸುತ್ತಾ, ಶಾಸ್ತ್ರಿಗಳು ಭಾರತಕ್ಕಾದರೂ ಕೆನಡಾ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಗಳಂತಹ ಸಾಮಂತ ಸ್ವರಾಜ್ಯವೇ ಬೇಕಾಗಿದೆಯೆಂದು ಸ್ಪಷ್ಟವಾಗಿ ತಿಳಿಸಿ, ಮುಂದಪಕ್ಷೀಯರೂ ಕಾಂಗ್ರೆಸಿನ ಕೇಳಿಕೆಗಿಂತ ದೂರವಾಗಿಲ್ಲವೆಂಬುದನ್ನು ಸರಕಾರಕ್ಕೆ ತಿಳಿಸಿಕೊಟ್ಟರು.

ಎಮೆರಿಯವರಾದರೂ ಇವರಿಂದ ಹಿತಸೂಚನೆಗಳನ್ನು ತೆಗೆದುಕೊಳ್ಳಬೇಕಾದದ್ದಿದೆ. ಭಾರತದ ಜನರಿಗೆ ಬೇಕಾದದ್ದು, ಬ್ರಿಟಿಷರು ಕೊಡುವೆನಾಗಿ ಹೇಳುವ ಯಾವುದೋ ರೀತಿಯ, ಸಾಮಂತ ಗೀಮಂತ ಸ್ವರಾಜ್ಯವಲ್ಲ; ಪೂರ್ಣ ಸ್ವಾತಂತ್ರ್ಯವಾಗಿದೆಯೆಂದೂ, ಭಾರತದ ರಾಜ್ಯಘಟನೆಯಲ್ಲಿ, ಭಾರತೀಯರಿಗೇ ಪೂರ್ಣ ನಿರ್ಧಾರದ ಸ್ವಾತಂತ್ರ್ಯವು ಇರಬೇಕೆಂದೂ ಮುಂದಪಕ್ಷೀಯರ ಈ ಹೇಳಿಕೆಯೂ ಸ್ಪಷ್ಟವಾಗಿ ತಿಳಿಸಿದೆ. ಹಾಗಾಗಿ, ಎಮೆರಿಯವರು ತಮ್ಮ ಹೇಳಿಕೆಯಲ್ಲಿ ಕಳೆದ ಅಗಸ್ಟ್ ತಿಂಗಳ ವೈಸರಾಯರ 'ಉದಾರ ಸೂಚನೆ'ಯನ್ನು ಎಷ್ಟು ದೊಡ್ಡದುಮಾಡಿ ಮಾತನಾಡಿದರೋ, ಅದರ ತಿರುಳು ಅಷ್ಟು ಸ್ವಾರಸ್ಯಕರವಾಗಿಲ್ಲವೆಂದು ಅವರಿಗೆ ಮುಂದಪಕ್ಷೀಯ ಮಿತ್ರರೂ ಈ ಮೂಲಕ ಸೂಚಿಸಿದ್ದಾರೆ. ಭಾರತದ ಬಿಕ್ಕಟ್ಟನ್ನು ಬಗೆಹರಿಸುವಲ್ಲಿ ಬ್ರಿಟಿಷ್ ರಾಜನೀತಿಜ್ಞರಾಗಲೀ, ಸರಕಾರವಾಗಲಿ ಮನಪೂರ್ವಕ ಸಾಕಷ್ಟು ಕೆಲಸವನ್ನು ಮಾಡಲಿಲ್ಲವೆಂಬುದು ಈ ಮಾತಿನ ಅರ್ಥವಾಗುತ್ತದೆ.

ಭಾರತದ ಮುಂದಪಕ್ಷೀಯರ ಪರವಾಗಿ ಮೊನ್ನೆ ಶಾಸ್ತ್ರಿಗಳು ಈ ಹೇಳಿಕೆಯನ್ನು ಇತ್ತು ಸರಕಾರಕ್ಕೆ ಸಲಹೆಯನ್ನು ಕೊಟ್ಟಿದ್ದಾರೆ. ಭಾರತದ ವಿಚಾರ ಪ್ರವಾಹವು ಯಾವ ಕಡೆಗೆ ಹರಿದಿದೆಯೆಂಬುದು ಹೀಗೆ ಸರ್ವಪಕ್ಷದ ಮುಖಂಡರ ಹೇಳಿಕೆಯಿಂದ ದಿನದಿಂದ ದಿನಕ್ಕೆ ಸ್ಪಷ್ಟವಾಗುತ್ತಾ ಬರುವುದಾದರೂ ಸರಕಾರವು ಅವುಗಳನ್ನು ಸ್ವಲ್ಪವೂ ಮನಸ್ಸಿಗೆ ತಂದುಕೊಳ್ಳದಂತೆ ತೋರುವುದು ಆಶ್ಚರ್ಯವನ್ನುಂಟುಮಾಡುತ್ತದೆ.

ಜನಗಣನೆಯ ಕಾಲದಲ್ಲಿ ಕನ್ನಡಿಗರು

ಈಗ ತಿರಿಗಿ ಅಖಿಲ ಭಾರತದ ಖಾನೇಸುಮಾರಿಯ ಕೆಲಸವು ಆರಂಭವಾಗಿದೆ. ಈ ಸಮಯದಲ್ಲಿ ಕನ್ನಡಿಗರು ತಮ್ಮ ಗಡಿನಾಡುಗಳಲ್ಲಿ ಹೆಚ್ಚು ಜಾಗರೂಕತೆಯಿಂದ ವರ್ತಿಸಬೇಕಾದುದು ಅವಶ್ಯವಿದೆ. ಕನ್ನಡಿಗರು ಬೇರೆ ಬೇರೆ ಆಡಳಿತೆಗೆ ಒಳಪಟ್ಟು ತಮ್ಮ ಏಕೀಕೃತ ಚೈತನ್ಯವನ್ನು ನೀಗಿಕೊಂಡಿರುವರೆಂದೂ, ಸಾಕಷ್ಟು ಅವರಲ್ಲಿ ಭಾಷಾಪ್ರೇಮ ಅಭಿಮಾನವಿಲ್ಲವೆಂದೂ ದೂರು ಇದೆ. ತಾವು ಕನ್ನಡಿಗರೆಂದು ಜನಗಣನೆಯ ಕಾಲದಲ್ಲಿ ಬರೆಸುವುದು, ಅದರಿಂದ ಕನ್ನಡ ಲೋಕವನ್ನು ವಿಸ್ತಾರಗೊಳಿಸುವುದು ಅವರ ಕರ್ತವ್ಯಕರ್ಮವಾಗಿದೆಯೆಂದು ಕನ್ನಡ ಧುರೀಣರು ಒಂದು ಹೇಳಿಕೆಯನ್ನು ಹೊರಡಿಸಿರುತ್ತಾರೆ. ಇದರಿಂದ ಕನ್ನಡಿಗರ ಶಕ್ತಿಯು ಹೆಚ್ಚಾಗುವುದರಲ್ಲಿ ಸಂಶಯವಿಲ್ಲ. ಇಂದಿನ ಈ ಜನಗಣನೆಯ ಕಾಲದಲ್ಲಿ ಕನ್ನಡಿಗರು ತಮ್ಮ ಭಾಷಾಭಿಮಾನವನ್ನು ತೋರಿಸಲು ಮರೆಯದೆ ತಮ್ಮ ಶಕ್ತಿಯನ್ನು ಊರ್ಜಸ್ವಿಗೊಳಿಸುವರಾಗಿ ನಾವು ನಂಬುತ್ತೇವೆ.

ಈ ಬಗ್ಗೆ ಈಗಾಗಲೇ ಕನ್ನಡದ ಧುರೀಣರನೇಕರು, ಪತ್ರಿಕೆಗಳಲ್ಲಿ ಪ್ರಕಟಣೆಗಳನ್ನು ಕೊಟ್ಟದ್ದು ಮಾತ್ರವಲ್ಲದೆ ಅಲ್ಲಲ್ಲಿ ಸಂಚರಿಸಿ ಭಾಷಣಗಳನ್ನೂ ಮಾಡಿರುತ್ತಾರೆ. ಇಂತಹ ಭಾಷಣಗಳು ಕನ್ನಡದ ಗಡಿನಾಡುಗಳಲ್ಲಿಯೇ ಹೆಚ್ಚು ಹೆಚ್ಚಾಗಿ ಆಗಬೇಕಾದುದು ಅವಶ್ಯವಿದೆ. ಅನ್ಯಭಾಷೆಯ ಆಕ್ರಮಣದಿಂದಲೂ, ಸ್ವಭಾಷೆಗೆ ಸಾಕಷ್ಟು ಪ್ರೋತ್ಸಾಹವಿಲ್ಲದಿರುವುದರಿಂದಲೂ ಗಡಿನಾಡಿನಲ್ಲಿರುವ ಕನ್ನಡಿಗರು ತಾವು ಕನ್ನಡಿಗರೆಂಬುದನ್ನು ಮರೆತುಬಿಡಬಹುದಾದ ಸಂಭವವಿದೆ. ಈ ಬಗ್ಗೆ ಅಲ್ಲಲ್ಲಿ ಇರುವ ಕನ್ನಡ ಪ್ರೇಮಿಗಳು, ಕನ್ನಡಿಗರ ಕೂಟಗಳು, ವ್ಯಕ್ತಿ ಹಾಗೂ ಸಮುದಾಯರೂಪವಾಗಿ ಚಳವಳಿಯನ್ನು ತೀವ್ರ ನಡೆಸಿ ಕನ್ನಡಿಗರಲ್ಲಿ ತಮ್ಮ ಅರಿವು ಉಂಟಾಗುವಂತೆ ಮಾಡುವುದೂ ಅವಶ್ಯವಿದೆ. ಈಗಾಗಲೇ ಜನಗಣನೆಯ ಸಮಯವು ಅತ್ಯಂತ ಸಮೀಪಿಸಿರುವುದರಿಂದ ಈ ಕುರಿತು ಎಚ್ಚರಗೊಳ್ಳುವುದು ಸಮಸ್ತ ಕನ್ನಡಿಗರ ಕರ್ತವ್ಯವಾಗಿರುತ್ತದೆ.

ಕಾವಲಿನ ನಾಯಿಗಳು ಬೊಗಳಲಿಲ್ಲವೆ?

ಸಿ. ಐ. ಡಿಗಳು ನೋಡಲಿಲ್ಲವೆ?

— ಬೋಸರು ಮನೆತಪ್ಪಿಸಿ ಹೋದಾಗ —

ಅಮೃತ ಬಜಾರ್ ಪತ್ರಿಕೆಯ ಲೇಖನ

ಅಮೃತ ಬಜಾರ್ ಪತ್ರಿಕೆಯ ಸಂಪಾದಕರಾದ ಶ್ರೀ ತುಷಾರಕಾಂತಿ ಘೋಷರು

ಭಾರತದ ರಾಜಕೀಯ ಇತಿಹಾಸದಲ್ಲಿ ಸುಭಾಸಬೋಸರಂತೆ ಯಾವನೇ ಆದರೂ ಹಿಂದೆ ಅಷ್ಟು ಪ್ರಖ್ಯಾತಿಯ ರಾಜಕೀಯ ಪಟುವು ಕಣ್ಮರೆಯಾಗಿ ಜನತೆಯಲ್ಲಿ ಇಂದು ಆದ ಹಾಗಿರುವ ಉದ್ವೇಗವನ್ನು ಹುಟ್ಟಿಸಿದ್ದಿಲ್ಲ. ಬಂಗಾಳದಲ್ಲಿ ಮಾತ್ರವಲ್ಲ ಅಖಿಲಭಾರತದಲ್ಲಿ ಪ್ರತಿಯೊಬ್ಬರೂ ಈಗ ಸುಬಾಸರ ಅದೃಶ್ಯದ ವಿಷಯವಾಗಿ ಅತ್ಯಂತ ಕಾತರಗೊಂಡಿದ್ದಾರೆ. ಹಲವಾರು ಊಹಾಪೋಹಗಳನ್ನು ಹರಿಯಬಿಟ್ಟಿದ್ದಾರೆ. ಸುಬಾಸರ ಇಂದಿನ ಈ ರೀತಿಯು ಬಹಳ ರಹಸ್ಯಮಯವಾಗಿ ಕುತೂಹಲಕರವಾಗಿ ಕಾಣುತ್ತದೆ. ಊಹಾಪೋಹಗಳಿಗೆ ಕಾರಣವನ್ನು ಒದಗಿಸುತ್ತದೆ.

ಹೀಗೆಂದು ಬಂಗಾಳದ ಅಮೃತ ಬಜಾರ್ ಪತ್ರಿಕೆಯು ಸುಬಾಸರ ಕುರಿತು ಬರೆಯುತ್ತದೆ. ಅದು ಮತ್ತೆ ಹೀಗೆ ಬರೆದಿರುವುದು:—

ಭಾರತದ ರಾಜಕೀಯ ಕ್ಷೇತ್ರದಲ್ಲಿ ಇಷ್ಟು ಕಾಲದವರೆಗೆ ಮಾಡಿದ ಅವರ ಕೆಲಸಗಳೆಲ್ಲವನ್ನೂ ಒಂದೇ ನಿಮಿಷದ ನಿರ್ಧಾರದಿಂದ ಅರ್ಧಮಾರ್ಗದಲ್ಲಿಯೇ ಬಿಟ್ಟುಕೊಟ್ಟು ಬೋಸರು ಎಲ್ಲಿಗೋ ಪಾರಾಗಿ ಹೋಗಿರಬಹುದೆನ್ನುವ ಮಾತು ತೀರಾ ಅಪ್ರಾಸಂಗಿಕವಾಗಿ ತೋರುತ್ತದೆ.

ಸುಬಾಸರಿಗೆ ಮನಸ್ಸನ್ನು ಕಳವಳಗೊಳಿಸುವಷ್ಟು ಚಿಂತೆಗಳು ಇದ್ದುವೆಂಬುದು ಸತ್ಯ. ಆದರೂ ಅವರ ಉದಾತ್ತ ಧೈರ್ಯವು ಇದುವರೆಗೆ ಎಂತಹ ಚಿಂತಾಕಾರಣಗಳಿಗೂ ಎದೆಯೊಡ್ಡಿ ನಿಲ್ಲುವಂತೆ ಮಾಡಿದೆ. ಇತ್ತೀಚೆಗೆ ಅವರು ಓಡಿಹೋದ ಕಾರಣಗಳ ಕುರಿತು ಅನೇಕ ಊಹೆಗಳೆದ್ದಿರುತ್ತವೆ, ಆದರೆ ತನ್ನ ಕಾರ್ಯದ ಕುರಿತು ತೀರಾ ನಿಶ್ಚಯದ ನಿರ್ಧಾರ ಮಾಡುವಷ್ಟು ಮನಃಶಕ್ತಿ ಅವರದಾಗಿರುವುದರಿಂದ, ನಾವಿಂದು ಯಾವುದಾದರೊಂದು ಕಾರಣವನ್ನು ಕಲ್ಪಿಸಿಕೊಂಡು ಅವರ ಕುರಿತು ಬರೆಯಲಾಗುವುದಿಲ್ಲ.

ಪರಿಚಿತ ವ್ಯಕ್ತಿ

ಸೋಮವಾರ ದಿನ ಅವರು, ತಮ್ಮ ಮೇಲಿನ್ನೆ ಬಂದ ರಾಜಕೀಯ ಆರೋಪದ ಕುರಿತು ವಿಚಾರಣೆಗೆ ಮೆಜಿಸ್ಟ್ರೇಟರ ಮುಂದೆ ಹಾಜರಾಗಬೇಕಾಗಿದ್ದಿತ್ತು. ಅದರ ಹಿಂದಿನ ರಾತ್ರಿ ಅವರು ಕಾಣೆಯಾದರು. ಆದರಿಂದಾಗಿ, ತಾನು ಅದೃಶ್ಯನಾದ ಕೂಡಲೇ ತನ್ನ ಮೇಲೆ ಬಂಧಿಸಲು ವಾರಂಟು ಹೊರಡಬಹುದೆಂದು ಬೋಸರಿಗಾದರೂ ಚೆನ್ನಾಗಿ ಗೊತ್ತಿದ್ದೀತಿರಬೇಕು. ಅವರು ಮೀಸೆಗಡ್ಡಗಳನ್ನು ಬೆಳೆಸಿಕೊಂಡಿದ್ದರೂ ಅವರ ಮುಖಸ್ವರೂಪ ಅಖಿಲಭಾರತದಲ್ಲಿ ಎಲ್ಲರಿಗೂ ಸರ್ವಪರಿಚಿತವಾದುದು. ಇಂದಲ್ಲ ಇದ್ದರೆ ನಾಳೆ ಅವರು ಪೋಲೀಸರ ಕೈಸೆರೆಸಿಗಬೇಕಾಗಲೇಬಹುದು. ಅಂತಹ ಸಂದರ್ಭದಲ್ಲಿ ಮಹಾಜನರ ಮನಸ್ಸಿನಲ್ಲಿ ಉಂಟಾಗುವ ಪರಿಣಾಮವು ಬಹಳ ಉದ್ವೇಗಕಾರಿಯಾಗಬಹುದೆಂದೂ ಬೋಸರು ಅರಿತಿರಬಹುದು. ಇಂತಹ ಕಾಲದಲ್ಲಿ ಹೀಗೆ ತಪ್ಪಿಸಿದ ಬೋಸರ ಕೃತ್ಯದ ವಿಷಯದಲ್ಲಿರುವ ತೊಂದರೆಗಳನ್ನು ಅವರಿಗಿಂತ ಹೆಚ್ಚಾಗಿ ಬೇರೆಯಾರೂ ತಿಳಿದಿರಲಾರರು.

ಅರವಿಂದರಂತೆ

ಅವರು ಈ ಸಂಸಾರದ ವಿಷಯಗಳನ್ನು ಪರಿತ್ಯಜಿಸಿದರೆಂದೂ, ಅದರ ಸಲುವಾಗಿ, ಅದೃಶ್ಯರಾಗುವ ಮುನ್ನ ವಾರ ಒಂದರ ಹಿಂದೆಯೇ ಅಂತಹ ಅಕ್ಷರಶಃ ಯಲ್ಲಿದ್ದರೆಂದೂ ಸುದ್ದಿಯಾಗಿದೆ. ಅವರಲ್ಲಿ ಧಾರ್ಮಿಕ ಬುದ್ಧಿಯಿತ್ತೆಂಬುದು ಅವರ ಮಿತ್ರರಿಗೆಲ್ಲರಿಗೂ ಚೆನ್ನಾಗಿ ಅರಿತಿದೆ. ಮನಸ್ಸು ಮಾಡಿದರೆ, ಅರವಿಂದರಂತೆಯಾಗಲಿ ಇನ್ನಾವುದೇ ರೀತಿಯ ಸಂಚಾರಕ ಸನ್ಯಾಸಿಯಂತಾಗಲಿ ಜೀವನ ನಡೆಸಲು ಅವರು ಮಾಡುವ ನಿರ್ಧಾರಕ್ಕೆ ಯಾವನೂ ಅಡ್ಡಿ ಬರಲು ಸಾಧ್ಯವಿಲ್ಲ.

ಆದರೆ ಇಂದಿನ ಈ ಆರಿಸಿದ ಸಮಯವನ್ನು ವಿಚಾರಮಾಡಿದರೆ, ಬೋಸರ ಅಂತಹ ನಿರ್ಧಾರಕ್ಕೆ ಉಚಿತಕಾಲವಾಗಿ ಇದನ್ನು ನಮಗೆ ಎಣಿಸಲು ಆಗುವುದಿಲ್ಲ. ಹಾಗೆಂದು ಒಬ್ಬ ಮನುಷ್ಯನ ನಿರ್ಧಾರದ ಮೇಲೆ ಅವನ ಮನೋಗತಿಯ ಮೇಲೆ ಯಾರಿಗೂ ಏನೂ ಸ್ವತಂತ್ರ ವಿಚಾರಮಾಡಲು ಬಾರದು?

ಬೋಸರು

ವೈದ್ಯರ ಅಭಿಪ್ರಾಯಗಳು

ಸೆರೆಮನೆಯಿಂದ ಬಿಡುಗಡೆಯಾದ ಮೇಲೆ ಅವರು ನಿರಂತರ ಅನಾರೋಗ್ಯದಿಂದಿದ್ದರೆಂದೂ, ಹಾಸಿಗೆ ಹಿಡಿದದ್ದು, ನ್ಯಾಯಸ್ಥಾನಕ್ಕೆ ಹೋಗಲೂ ಅಶಕ್ತರಾಗಿದ್ದರೆಂದೂ ಪ್ರಸಿದ್ಧ ಡಾಕ್ಟರರೇ ಹೇಳುತ್ತಿದ್ದರು. ಇಂತಹ ನಿಕೃಷ್ಟ ಆರೋಗ್ಯ ಸ್ಥಿತಿಯಲ್ಲಿದ್ದ ರೋಗಿಯು ಒಮ್ಮೆಗೇ ಯಾರ ದೃಷ್ಟಿಗೂ ಗೋಚರರಾಗದೆ ತಪ್ಪಿಸಿಬಿಟ್ಟಿರುವರೆಂದರೆ ಅದು ಹೇಗೆ ಸಂಭವವೋ ಎಂದು ಶಂಕಿಸಬೇಕಾಗಿದೆ. ಅವರು ಭಾರತದೊಳಗೇ ಇದ್ದಾರೆಯೇ? ಇದ್ದರೆ ಎಲ್ಲಿರಬಹುದು? ಅವರು ಯಾವಾಗ ಮನೆ ಬಿಟ್ಟರು? ಕೊನೆಗಲ ಯಾರು ಯಾವಾಗ ಅವರನ್ನು ಕಂಡದ್ದು? ಅವರು ತನ್ನೀ ಅದೃಶ್ಯತೆಯ ತಿರುಗಾಟದಲ್ಲಿಯೂ ಡಾಕ್ಟರರು ಹೇಳಿದಂತಹ ನಿಕೃಷ್ಟರೋಗಜೀವನವನ್ನೇ ಅನುಭವಿಸುತ್ತಿದ್ದಾರೆಯೇ? ಇಂತಹ ಹಲವಾರು ಪ್ರಶ್ನೆಗಳು ಸಹಜವಾಗಿ ಹುಟ್ಟುತ್ತವೆ.

ಎರಡು ಕಾವಲು ನಾಯಿಗಳು

ಸಾಮಾನ್ಯ ತಿಳುವಳಿಕೆಯುಳ್ಳ ಒಬ್ಬ ಮನುಷ್ಯನಿಗಾದರೂ, ಬೋಸರು ಮಧ್ಯರಾತ್ರಿಯ ಸಮಯ ಅಂತಹ ರೋಗಿಗಳಾಗಿ ನಿಶ್ಶಕ್ತರಾಗಿದ್ದವರು ತಪ್ಪಿಸಿಹೋಗಿಬಿಟ್ಟರೆಂಬುದು ಅಸಂಭವವಾಗಿಯೇ ತೋರುತ್ತದೆ. ಅವರ ಬಂಧುಗಳು ಹೇಳುವುದು ಶನಿವಾರ ರಾತ್ರಿ ಎಲ್ಲರೂ ಗಾಢ ನಿದ್ರೆಯಲ್ಲಿರುವ ಹೊತ್ತು ಮಧ್ಯರಾತ್ರಿಗೆ ಬೋಸರು ಕಣ್ಮರೆಯಾಗಿರಬೇಕೆಂದು.

ಮನೆಯ ಗೇಟಿನಬಾಗಿಲು ತೆರೆದಿಟ್ಟಿರಬಹುದು; ಆದರೆ ಬಾಗಿಲಬಳಿಯಿದ್ದ ಎರಡು ಕಾವಲು ನಾಯಿಗಳು ಶಬ್ದಮಾಡಿರಲಿಕ್ಕಿಲ್ಲವೆ? ಇಂತಹ ಪರಿಸ್ಥಿತಿಯಲ್ಲಿ ಬೋಸರು ಯಾರಿಗೂ ತಿಳಿಯದೆ ತಪ್ಪಿಸಿ ಹೋದರೆಂಬುದು ಬಹಳ ಆಶ್ಚರ್ಯದ ಸಂಗತಿಯಾಗಿ ತೋರುತ್ತದೆ.



ಜರ್ಮನರ ಸೆರೆಯಲ್ಲಿ ಫ್ರಾನ್ಸಿನ ವೀರರು!

ದೇಶಾಭಿಮಾನಕ್ಕಾಗಿ ಈ ತರದ ಯಮಯಾತನೆ!

ಡಲಾಡಿಯರ್, ಗೆಮುಲಿನ್, ರೇನಾರ ಜೀವನ!



ಡಲಾಡಿಯರು

ಗೆಮುಲಿನ್

ಅಂತರಾಷ್ಟ್ರೀಯ ಪತ್ರಿಕೋದ್ಯಮಿ ಕ್ಸರ್ ಚೀಫ್ ಎಂಬವನು ಜೊನ್ ಎಲ್ ಪತ್ರಿಕೆಯಲ್ಲಿ ಜರ್ಮನಿಯ ಶಿತದಲ್ಲಿ ನರಳುತ್ತಿರುವ ಫ್ರಾನ್ಸಿನ ರುಮಂದಿ ವೀರರ ದುರಂತ ಜೀವ ಚಿತ್ರವನ್ನು ಬರೆಯುತ್ತಾನೆ. ಜರ್ಮನರು ಫ್ರಾನ್ಸಿಗೆ ಪ್ರವೇಶಿಸಿದಾಗ ಚೀಫ್ ತಲೆಮರೆಸಿಕೊಂಡನು ಹಿಟ್ಲರನು ಈತನನ್ನು ಹಿಡಿದುಕೊ ಟ್ಟವರಿಗೆ ಬಹುಮಾನ ಕೊಡುವುದಾಗಿ ಪ್ರಕಟಮಾಡಿದ್ದಾನೆ. ಚೀಫ್ ಲೇಖನದಲ್ಲಿ ಡಲಾಡಿಯರ್ ಪ್ರಭೃತಿಗಳ ಸಂಕಷ್ಟಕರ ಸೆರೆಮನೆ ಕುವಾಸವನ್ನು ಬಹಳ ಕರುಣಾಪೂರ್ಣವಾಗಿ ವಿವರಿಸಿರುವನು.

ಆ ಲೇಖನದಲ್ಲಿ ವಿವರಿಸಿರುವ ಆರು ಜನರಲ್ಲಿ ಮೂವರು ಫ್ರಾನ್ಸಿನ ಹಿಂದಿನ ಪ್ರಧಾನ ಮಂತ್ರಿಗಳು ಡಲಾಡಿಯರ್, ರೇನಾ, ಬ್ಲುಮ್, ಜಾರ್ಜಿಸ್ ಮಂಡಲ್, ಚೇಂಬ್ರೆ, ಗೆಮುಲಿನ್ ಮೊದಲಾದವರೇ ಆ ನಿರ್ಭಾಗ್ಯರಾದ ಜರ್ಮನ್ ಪೀಡಿತ ಫ್ರಾನ್ಸಿನ ದೇಶಾಭಿಮಾನಿಗಳು.

ಕತ್ತಲು ಕೋಣೆಗಳಲ್ಲಿ

ಇವರನ್ನು ಹಿಟ್ಲರನು, ಫ್ರಾನ್ಸಿಗೆ ಪ್ರವೇಶಿಸಿದ ಕೂಡಲೇ ಸೆರೆಮನೆಯೊಳಗಿಟ್ಟನು. ಆ ಸೆರೆಮನೆ ಜನರ, ಅವಗಾಹಕ್ಕೆ ದೂರವಾದ್ದುದು, ಗುಪ್ತವಾದುದು ಮೊತ್ತಮೊದಲು ಈ ಆರು ಜನರನ್ನೂ ಒಂದೇ ಸೆರೆಮನೆಯೊಳಗಿಡಲಾಗಿತ್ತು, ಈಗ ಎಲ್ಲರನ್ನೂ ಬೇರೆ ಬೇರೆ ಕಡೆಗೆ ಹಿಲ್ಲಿಂಸಿ ಅಗಲಿಸಲಾಗಿದೆ

ಅವರನ್ನು ಇಟ್ಟ ಸೆರೆಮನೆಗಳುಳ್ಳ ಸ್ಥಳಗಳಲ್ಲಿ ಸಶಸ್ತ್ರ ಪೋಲೀಸರು ಯಾವಾಗಲೂ ಕಾಯುತ್ತಾ ಇದ್ದಾರೆ ಎಂದಾದರೂ, ಆ ದೇಶಾಭಿಮಾನೀ ವೀರರನ್ನು ಅವರ ಮಿತ್ರರು ಸೆರೆಮನೆಯಿಂದ ಬಿಡಿಸಲು ಪ್ರಯತ್ನಿಸಬಹುದಾಗಿ ಜರ್ಮನರು ಅಂಜಿರುತ್ತಾರೆ. ಮಾತ್ರವಲ್ಲದೆ, ಸೆರೆಮನೆಯೊಳಗೆ ಅವರು ಯಾವ ರೀತಿಯಿಂದ ಜೀವನ ನಡೆಸುತ್ತಿದ್ದಾರೆಯೆಂಬ ಸುದ್ದಿಯು ಹೊರಗಡೆಯವರಿಗೆ ಒಂದಿಷ್ಟೂ ತಿಳಿಯದಂತೆ ಜರ್ಮನರು ಬಹಳ ಜಾಗರೂಕರಾಗಿದ್ದಾರೆ

ಆ ವ್ಯಕ್ತಿಗಳು

ವಿಶಾಲವಾದ, ಎದೆಯುಳ್ಳ, ಕೆಂಪು ಮುಖದ ಸುಮಾರು ೫೦ ವರ್ಷ ಪ್ರಾಯದ, ಹಿಂದಿನ ಪ್ರಧಾನ ಮಂತ್ರಿಗಳಾದ ಡಲಾಡಿಯರವರು ಸೆರೆಮನೆಯೊಳಗೆ ಈಗ ಕೊಳೆಯುತ್ತಿದ್ದಾರೆ

ಮತ್ತೆ ಪಾಲ್ ರೆನಾ ಇವರು. ಸ್ವಲ್ಪ ಕುಳ್ಳಗಿನ ಪ್ರಕೃತಿ ಇವರದು ೬೦ ವರ್ಷ ಪ್ರಾಯದವರು ಹಣೆ ಅಗಲವಾದದ್ದು, ತಲೆ ಉರುಟು. ಮಂಗೋಲಿಯನರ ತೆರದ ಕಣ್ಣುಗಳುಳ್ಳವರು. ತುಟಿಯಲ್ಲಿ ಎಂದೆಂದೂ ಮಿನುಗುವ ಮುಗುಳ್ನಗೆಯುಳ್ಳವರು ಫ್ರಾನ್ಸಿನ ಸುಖದ ದಿನಗಳಲ್ಲಿ ಅವರಿಗೆ 'ಮಿಕ್ಕಿ ಮೌಸ್'' ಎಂಬ ಅಡ್ಡ ಹೆಸರು ಪ್ರಸಿದ್ಧವಾಗಿತ್ತು'

ಲಿಯೋನ್ ಬ್ಲುಮ್ ಇವರಲ್ಲಿ ಒಬ್ಬರು ಉದ್ದವಾದ ಶರೀರ ಪ್ರಕೃತಿ ಇವರದು ಬೂದು ಬಣ್ಣದ ತಲೆಗೂದಲು. ಯೆಹೂದಿಯರು. ಪ್ರಾಯದಲ್ಲಿ ಎಲ್ಲರಿಗಿಂತಲೂ ಹಿರಿಯರಾದರೂ, ಮನಶ್ಶಕ್ತಿಯಲ್ಲಿ ಒಳ್ಳೆಯ ತರುಣರೇ

ಎಲ್ಲರಿಗಿಂತಲೂ ಕಡಿಮೆ ಪ್ರಾಯದವರು ಹಿಂದಿನ ವಿಮಾನಖಾತೆಯ ಮಂತ್ರಿಯಾಗಿದ್ದ ಗೀಲಾ ಚೇಂಬ್ರೆ ಇವರು. ಸುಂದರ ಶರೀರದ ಸೊಬಗುಗಾರರು ಇವರು ಉದ್ದವಾದ ಶರೀರ, ಸಂತೋಷವಿಡನರಂತೆ ಕಾಣುತ್ತಾರೆ. ಪ್ರಸಿದ್ಧ ಸಂಗೀತ ನಟಿ ಕೋರಾ ಮಾಡೋಳನ್ನು ಅವರು ಕೆಲ ವರ್ಷಗಳ ಹಿಂದೆ ವಿವಾಹವಾಗಿರುವರು

ಇನ್ನೊಬ್ಬರು ಜಾರ್ಜ್ ಮಂಡೆಲರು. ಇವರು ಯೆಹೂದಿ ವಸಾಹತು ಮಂತ್ರಿ

ಕೊನೆಯವರೆಂದರೆ ಗೆಮುಲಿನರು. ಫ್ರಾನ್ಸಿನ ಯುದ್ಧದ ಪ್ರಾರಂಭ ಕಾಲದಲ್ಲಿ ಇವರು ಬಹಳ ಪ್ರಖ್ಯಾತಿ ಪಡೆದವರು

ಫ್ಯಾಸಿಸ್ಟ್ ಪತ್ರಿಕೆಯಲ್ಲಿ

ಇವರ ಸೆರೆಮನೆಯ ಜೀವನ ರೀತಿಯ ಕುರಿತು ಫ್ಯಾಸಿಸ್ಟ್ ಪತ್ರಿಕೆಯೊಂದು ಈ ವಿವರಗಳನ್ನು ಕೊಡುತ್ತದೆ.

ಡಲಾಡಿಯರು ಬಹಳವಾಗಿ ಕಂಗಾಲಾಗಿರುವರು. ದಿನದಿಂದ ದಿನಕ್ಕೆ ಅವರ ಶರೀರ ಪ್ರಕೃತಿ ಕೆಡುತ್ತಿದೆ

ಗೆಮುಲಿನರು ತನ್ನ ಕೋಣೆಯಲ್ಲಿ ನಿಕ್ಕ ಬರೆಯುವುದರಲ್ಲಿಯೇ ನಿರತರಾಗಿರುವರು ತನ್ನ ವಿಚಾರಣೆಯ ಸಮಯದಲ್ಲಿ ಅವರ ಆ ಲೇಖನಗಳು ಹೆಚ್ಚಿನ ಸಹಾಯಕಾರಿಗಳಾಗುವವೆಂದು ತಿಳಿಯಲಾಗಿದೆ

ಜಾರ್ಜ್ ಮೊಂಡೇಲರು ತನ್ನ ಆಹಾರ ವಿಹಾರದ ಕುರಿತ ಆಗಾಗ ಕೇಟಳೆಗೊಳ್ಳುತ್ತಾರೆ, ಮಿಕ್ಕ ಸಮಯ ಏನೂ ಮಾತನಾಡುವುದಿಲ್ಲ

ರೇನಾರವರು ಹೆಚ್ಚಾಗಿ! ವ್ಯಾಯಾಮ ಶಾಲೆಯಲ್ಲಿ ಸೈಕಲ್ ಸವಾರಿ ಮಾಡುತ್ತಾ ಇಲ್ಲವೇ ನೆಗೆತ ಮಾಡುತ್ತಾ ಇರುತ್ತಾರೆ

ಬ್ಲುಮ್ ಇವರನ್ನು 'ಅಂತರಾಷ್ಟ್ರೀಯ ಸಮತಾವಾದೀ ಯೆಹೂದಿ'' ಎಂದು ಜರ್ಮನರು ಕರೆಯುತ್ತಾರೆ ಫ್ರಾನ್ಸಿನ ಒಳ್ಳೆಯ ಪ್ರಭಾವಶಾಲೀ ದೇಶಾಭಿಮಾನಿ ಇವರು ಫ್ರಾನ್ಸ್ ಜರ್ಮನರ ವಶವಾದಾಗ ಇವರಿಗೆ ಅಲ್ಲಿಂದ ತಪ್ಪಿಸಿ ಓಡಿಹೋಗಬಹುದಾಗಿತ್ತಾದರೂ ಇವರು ಅದನ್ನು ತಿರಸ್ಕರಿಸಿದರು ಜರ್ಮನರ ಸೆರೆಮನೆಯಲ್ಲಿ ಕೊಳೆಯುವುದು, ಕಡೆಗೆ ಮರಣವೂ ಒದಗಬಹುದೆಂದು ಅವರಿಗೆ ಚೆನ್ನಾಗಿ ತಿಳಿದಿತ್ತು!

ಹೀಗೆ ಉದಾತ್ತ ವೀರರೂ, ದೇಶಾಭಿಮಾನಿಗಳೂ ಆದ ಫ್ರಾನ್ಸಿನ ವೀರರು ಜರ್ಮನರ ಕೈಸೆರೆಯಲ್ಲಿ ಕೊಳೆಯುತ್ತಾರೆ.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶವಾಗಿಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವ್ರತ ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ

ಇದುವರಿಂದ ಬಳಲುವ ಮಂದಿಗೆಲ್ಲ ನನ್ನ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ತೋರಿಸಿ ಕೊಟ್ಟು, ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

1 ಸೇರಿಗೆ ರೂ 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ ಎ., ಎಫ್.ಸಿ ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)

ಆಯುರ್ವೇದ ಶಾಸ್ತ್ರಿ,

ಭಾಗಲ್ಪುರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಢಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು. ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜಂಟ್ಸ್: ಶಾ ಕಂಪೆನಿ, ಹಂಪನಕಟ್ಟಾ ಮಂಗಳೂರು.

HALFTONE & LINE
BLOCK MAKING
UNDERTAKEN

Sharada Press,
MANGALORE

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ

ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ.

ಈ ವಾರದ ಕತೆ:

ಉತ್ತೀರ್ಣ

ಬಡ ತಾಯಿಯ ಒಬ್ಬನೇ ಮಗ—ನಾಣು, ದಾರಿ ನೆಟ್ಟಗೆ, ನಡೆದು ಹೋಗುತ್ತಾ ಇದ್ದ. ಆಚೆ ಈಚೆ, ಹಿಂದೆ ಮುಂದೆ, ಯಾವ ಕಡೆಗೂ ಅವನು ನೋಡುತ್ತಿರಲಿಲ್ಲ. ಅವನ ದೃಷ್ಟಿ, ತನ್ನ ಪ್ರಾರಬ್ಧದ ಕಡೆಗೆ ಇತ್ತು. ಅಂದೇ ಸಾಯಂಕಾಲ ಯುನಿವರ್ಸಿಟಿ ಪರೀಕ್ಷೆಗಳ ಫಲಿತಾಂಶವು ಪತ್ರಿಕೆಗಳಲ್ಲಿ ಪ್ರಕಟವಾಗುವುದು. ಬಿ. ಎ. ಪರೀಕ್ಷೆಯನ್ನು ಕೊಟ್ಟವರಲ್ಲಿ ನಾಣುವೂ ಒಬ್ಬ. ಪರೀಕ್ಷಾಫಲವೇನು ತಿಳಿಯಲಿಕ್ಕೆ ಅವನು ಅತ್ಯಾತುರನಾಗಿದ್ದ; ಈ ಕಾರಣದಿಂದ ಅವನು ತನ್ನನ್ನು ಮರೆತಿದ್ದ. ಹೃದಯ ಸಾಗರದಲ್ಲಿ ತರಂಗಗಳ ಮೇಲೆ ತರಂಗಗಳು ಎದ್ದು ಬೀಳುತ್ತಿದ್ದುವು. ಆಶೆ ನಿರಾಶೆಗಳ ದ್ವಂದ್ವ ಯುದ್ಧವು ಅಲ್ಲಿ ನಡೆಯುತಲಿದ್ದಿತು. ಒಮ್ಮೊಮ್ಮೆ ದಾರಿ ನಡೆಯುತ್ತಾ, ನಾಣು ತನ್ನ ಭವಿಷ್ಯ ಜೀವನದ ಸುಂದರ ಕನಸು ಕಾಣುತಿದ್ದ; ಮತ್ತೊಮ್ಮೆ ದುಃಖಪೂರ್ಣ ಅಂಧಕಾರಮಯ ಜೀವನದ ಭಯಂಕರ ಕಲ್ಪನೆಯು ಅವನ ಶರೀರವನ್ನು ಕಂಪಿಸುತಿತ್ತು.

ಸಾಯಂಕಾಲವಾಯಿತು. ರೈಲ್ವೆ ನಿಲ್ದಾಣದಲ್ಲಿ ವಿದ್ಯಾರ್ಥಿಗಳ ದೊಡ್ಡ ಸಂದಣಿ, ಈ ಹೊತ್ತು ಎಲ್ಲರಲ್ಲಿಯೂ ಪೇಪರನ್ನು ಕೊಂಡುಕೊಳ್ಳುವ ಆತುರವು ಹೊರ ಹೊಮ್ಮಿತು. ಹೃದಯಗಳನ್ನು ಪರೀಕ್ಷಿಸಿದರೆ, ಅಲ್ಲಿ ದೊಡ್ಡ ಪರಿಮಾಣದಲ್ಲಿ ಗುಡುಗುಡಾಟವು ನಡೆಯುವುದು ಗೊತ್ತಾಗುತಲಿತ್ತು. ಸರಿ, ಸಮಯಕ್ಕೆ ಸರಿಯಾಗಿ ರೈಲು ಬಂದಿತು. ವಿದ್ಯಾರ್ಥಿಗಳ ಹಣೆಯ ಮೇಲೆ ಬೆವರ ಹನಿಗಳು ಕಾಣಿಸಿದುವು. ನಡುಗುವ ಕೈಗಳಿಂದ ಪ್ರತಿಯೊಬ್ಬ ಪರೀಕ್ಷಾರ್ಥಿಯೂ ಒಂದೊಂದು ಪೇಪರನ್ನು ಕೊಂಡುಕೊಂಡು ತನ್ನ ಫಲಿತಾಂಶವನ್ನು ನೋಡತೊಡಗಿದನು. ನಾಣುವೂ ನೋಡಿದ, ಎರಡೆರಡು ಭಾರಿ ನೋಡಿದ; ಮತ್ತೊಮ್ಮೆ ನೋಡಿದ. ಆದರೆ ಪಟ್ಟಿಯಲ್ಲಿ ಅವನ ನಂಬರ್ ಇಲ್ಲ! ತಲೆ ಮೇಲೆ ವಜ್ರಘಾತವಾದಂತಾಯಿತು.

ನಾಣುವಿನ ಸ್ಥಿತಿಗತಿಗಳಲ್ಲಿ ಬೇರೊಬ್ಬನಿರುತಿದ್ದರೆ, ಪರೀಕ್ಷಾ ಫಲಿತಾಂಶವನ್ನು ನೋಡಿ ಆತ್ಮಘಾತ ಮಾಡಿಕೊಳ್ಳುತಿದ್ದ. ಆದರೆ ನಾಣುವಿನ ಮನಸ್ಸಿನಲ್ಲಿ ಈ ವಿಚಾರವು ಬಂದರೂ, ಅವನ ಸಬಲ ಹೃದಯವು ದುರ್ಬಲ ಮನಸ್ಸನ್ನು ಗೆದ್ದಿತು. ಧೈರ್ಯ ಸ್ಥೈರ್ಯಗಳು ಅವನನ್ನು ಗುಡಿಸಲು ತನಕ ಹೇಗೂ ಬರಮಾಡಿತು. ಮುರಿದ ಬಾಗಿಲ ಮುಂದೆ ತಾಯಿ ನಿಂತಿದ್ದಳು. ಮಗನನ್ನು ಕಂಡು:—'ಅಪ್ಪಾ, ಪಾಸಾದೆಯಾ?' ಎಂದಳು.

ನಾಣು ಅಳು ಮೋರೆಯಿಂದ ಹೇಳಿದ 'ಇಲ್ಲವಮ್ಮಾ! ಪಟ್ಟಿಯಲ್ಲಿ ನನ್ನ ನಂಬರು ಇಲ್ಲ.'

★

ನಾಲ್ಕು ವರ್ಷಗಳ ಮೊದಲು ನಾಣುವಿನ ತಂದೆಯು ಸ್ವರ್ಗವಾಸಿಯಾಗಿದ್ದನು. ದೇವರ ಕೃಪೆ ಇದ್ದುದರಿಂದ, ಹೇಗೋ ಹಾಗೆ ಈ ನಾಲ್ಕು ವರ್ಷಗಳು ಕಳೆದಿದ್ದುವು. ಭಾವ, ಮೈದುನ, ಅದಿ ಬಹಳ ಮಂದಿ ಇಷ್ಟರಾದರೂ, ತಾಯಿಗೆ ಬಡತನದ ಜೀವನವನ್ನೇ ಕಳೆಯಬೇಕಾಗಿತ್ತು. ಸ್ವಾರ್ಥಪೂರ್ಣ ಸಂಸಾರದ ನಿಯಮವೇ ಹಾಗೆ! ಸುಖಕಾಲದಲ್ಲಿ ಎಲ್ಲರೂ ಬಂದು ನೆರವಾಗುತ್ತಾರೆ. ಆದರೆ ದುಃಖಕಾಲದಲ್ಲಿ ಒಬ್ಬರೂ ಇಲ್ಲ.

ನಾಣು ಪರೀಕ್ಷೆಯಲ್ಲಿ ಫೈಲಾದದ್ದು ಮುದುಕಿಯ ಹೃದಯದ ಮೇಲೆ ಸಿಡಿಲು ಬಡಿದ ಪರಿಣಾಮವನ್ನು ಉಂಟುಮಾಡಿತು. ನಾಣು ಪಾಸಾಗುವನು, ಆ ಮೇಲೆ ನೌಕರಿಯನ್ನು ಸಂಪಾದಿಸುವನು, ಬಡತನದ ಜೀವನವು ಮುಗಿಯುವುದು. ಸುಖ ದಿನಗಳು ಬರುವವು ಎಂದು ಏನೇನೆಲ್ಲಾ ಅವಳು ಕಲ್ಪಿಸಿ ಮನಸ್ಸಿನಲ್ಲಿಯೇ ಮಂಡಿಗೆ ತಿಂದಿದ್ದಳು. ಆದರೆ ಅದೆಲ್ಲಾ ಆಕಾಶದಲ್ಲಿ ಗೋಪುರ ಕಟ್ಟಿದಂತೆಯೇ ಆಯಿತು. ಭವಿಷ್ಯದ ಕಲ್ಪನೆ ಮೂಡಿದಾಗಲೆಲ್ಲ ಅವಳ ಹೃದಯವು ಥರಥರ ನಡುಗಿ ದುರ್ಬಲವಾಗತೊಡಗಿತು.

ನಾಣುವಿನ ಸ್ಥಿತಿ ಇದಕ್ಕೂ ಹೆಚ್ಚಿಗೆ ಶೋಚನೀಯವಾಯಿತು. ಎಲ್ಲರಿಗಿಂತಲೂ ಹೆಚ್ಚಿಗೆ ಪರಿಶ್ರಮ ಮಾಡಿದವ, ಎಲ್ಲರಿಗಿಂತಲೂ ಹೆಚ್ಚಿಗೆ ಸಮಯ ನಷ್ಟ ಮಾಡಿದವ, ಹಣ ಖರ್ಚು ಮಾಡಿದವ, ಪುಸ್ತಕದ ಹುಳು ಆದವ, ಪರೀಕ್ಷೆಯ ಸಿದ್ಧತೆಗಾಗಿ ಹಗಲು ರಾತ್ರಿ ಒಂದು ಮಾಡಿದವ—ಅವನೇ ಇಂದು ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಲಿಲ್ಲ. ಇಂಥ ಮರ್ಮಭೇದಿ ಅನುಭವವು ಅವನಿಗೆ ಇದಕ್ಕೆ ಮೊದಲು ಬೇರೆ ಯಾವಾಗಲೂ ಆಗಿರಲಿಲ್ಲ. ಮುಂದೇನು ಎಂಬ ಚಿಂತೆಯು ಅವನನ್ನು ಸುಟ್ಟು ಸುಣ್ಣಮಾಡಿತು.

★

ದಿನಗಳು ಕಳೆದುವು. ದಿನಗಳು ಕಳೆದಂತೆ ನಾಣು ತನ್ನ ಸ್ವಭಾವಗುಣವನ್ನು ಅನುಸರಿಸಿ ದುಃಖವನ್ನು ಮರೆಯುತ್ತ ಬಂದ. ಅವನು ಮುಂದಿನ ವರ್ಷದ ಪರೀಕ್ಷೆಗೆ ಪುನಃ ಸಿದ್ಧತೆ ಮಾಡಲಾರಂಭಿಸಿದ. ಹಲಕೆಲವು ದಿನಗಳ ಮೇಲೆ ಒಂದು ದಿನ ಸಾಯಂಕಾಲ ಆಸ್ಪತ್ರೆಯಲ್ಲಿ ಪೇಪರು ಓದುತ್ತಾ ಇದ್ದ. ಅಕಸ್ಮಾತ್ತಾಗಿ ಅವನ ಕಣ್ಣು ಒಂದು ತಿದ್ದುಪಡಿಯ ಕಡೆಗೆ ಹೊರಳಿತು. ಪರೀಕ್ಷೆಯಲ್ಲಿ ಪಾಸಾಗಿ, ಪ್ರಕಟವಾಗಲಿಕ್ಕೆ ಉಳಿದ ಪರೀಕ್ಷಾರ್ಥಿಗಳ ನಂಬರುಗಳು ಅಲ್ಲಿದ್ದುವು. ಅವುಗಳಲ್ಲಿ ನಾಣುವಿನ ನಂಬರೂ ಇದ್ದಿತು. ಅವನು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದ. ತಾನು ಎಲ್ಲಿಯಾದರೂ ಕನಸನ್ನು ಕಾಣುತ್ತಿಲ್ಲವಷ್ಟೆ ಎಂದವನಿಗೆ ಸಂದೇಹವಾಯಿತು. ಆದರೆ ಆ ಸಂದೇಹವು ಕೆಲವು ನಿಮಿಷಗಳಲ್ಲಿ ನಷ್ಟವಾಗಿ, ಅವನು ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದು ನಿಜವಾಯಿತು.

ನಾಣು ಎದ್ದು ಆಗಲೇ ಮನೆಕಡೆಗೆ ಹೊರಟ. ಅವನು ವಾಯುವೇಗದಿಂದ ಹೋಗುತ್ತಾ ಇದ್ದ. ಒಂದು ಕೈಯಲ್ಲಿ ಪೇಪರೂ, ಇನ್ನೊಂದರಲ್ಲಿ ಅಸ್ವಸ್ಥಳಾದ ತಾಯಿಗೆ ಮದ್ದಿನ ಬಾಟಲಿಯೂ ಇದ್ದುವು. ಕೈಕಾಲುಗಳು ನಡುಗುತಿದ್ದುವು. ಪ್ರಯತ್ನ ಮಾಡಿ ಮನೆ ಸೇರಿದ. ಅವನ ವಿಚಾರ ಶೃಂಖಲೆಯು ತಾಯ ಸುಖಜೀವನದ ಕಲ್ಪನೆ ಮಾಡುತಿತ್ತು.

ಅವನು ಮದ್ದಿನ ಬಾಟಲಿಯನ್ನು ಬೆಂಚಿಯ ಮೇಲಿಟ್ಟು ತಾಯ ಬಳಿಗೆ ಬಂದ. ಅವಳು ಕಣ್ಣು ಮುಚ್ಚಿ ಧ್ಯಾನಮಗ್ನಳಾದವಳಂತೆ ಹಾಸಿಗೆ ಮೇಲೆ ಬಿದ್ದುಕೊಂಡಿದ್ದಳು. 'ಅಮ್ಮಾ ನಾನು ಪಾಸು' ಎಂದು ನಾಣು ಹೇಳಿ, ಹಾಸಿಗೆ ಬಳಿ ಕೂತ. ತಾಯಿ ಮಾತ್ರ ಈ ಸುದ್ದಿ ಕೇಳಿ ಸಂತೋಷವನ್ನು ತೋರಿಸಲಿಲ್ಲ. ಅವಳು ಮೊದಲು ಹೇಗಿದ್ದಳೋ, ಈಗಲೂ ಹಾಗಿದ್ದಳು. ನಾಣು ಮುಟ್ಟಿ ನೋಡಿದ. ಪ್ರಾಣಪಕ್ಷಿಯು ಹೃದಯ ಗೂಡಿನಿಂದ ಹಾರಿ ಹೋಗಿದ್ದಿತು. ತಾಯಿ ಪರಲೋಕದ ಹಾದಿಯನ್ನು ಹಿಡಿದಿದ್ದಳು. ಈ ಸುಖವಾರ್ತೆಯನ್ನು ಕೇಳಲಿಕ್ಕೆ ಕೇವಲ ಅವಳ ಮೃತ ಶರೀರವು ಮಾತ್ರ ಅಲ್ಲಿ ಬಿದ್ದಿತು.

(ಆಧಾರದಿಂದ)

K. S. S.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

GONO KILLER

ಡಾ। ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ಕಳಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು ಗೊನೊಕಿಲರ್ ಎಂಬ ಸೀಲು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ರೋಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3—0—0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಾಯಿ 4

Sole Manufacturer: **Dr. D. N JASANI, 4** (S.B.M.) Vithalbhai Patel Road, BOMABY

Madras Agent: **Appah & Co, China Bazar Madras.**

ಜನಿವಾರ ತೊಡುವ ವಿದ್ಯಾರ್ಥಿನಿಯರು!

ಆರ್ಯಕನ್ಯಾ ಮಹಾವಿದ್ಯಾಲಯದಲ್ಲಿ

ವೈದಿಕ ರೀತಿಯ ಪವಿತ್ರ ಶಿಕ್ಷಣ

ವಿದ್ಯಾಸಂಸ್ಥೆಯ ಸ್ವಲ್ಪ ಪರಿಚಯ

"ಯಾವ ವಿದ್ಯೆಯಿಂದ ನಮ್ಮಲ್ಲಿ ಸಚ್ಛೀಲವು ಉಂಟಾಗುತ್ತದೋ, ಯಾವ ವಿದ್ಯೆಯಿಂದ ನಮ್ಮ ಬುದ್ಧಿ ಶಕ್ತಿಯು ಬೆಳೆಯುತ್ತದೋ ಯಾವ ವಿದ್ಯೆಯಿಂದ ಸ್ವತಂತ್ರರಾಗಿ ಬಾಳುವ ಆತ್ಮಶಕ್ತಿ ನಮ್ಮಲ್ಲಿ ಅಭಿವೃದ್ಧಿ ಹೊಂದುತ್ತದೋ ಅಂತಹ ವಿದ್ಯೆ ನಮಗೆ ಬೇಕಾಗಿದೆ; ಇಂತಹ ವಿದ್ಯಾಭ್ಯಾಸದಿಂದಲೇ ಮಹಿಳೆಯರೂ ತಮ್ಮ ಮುಂದಿರುವ ಹಲವು ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವರು."

—ಸ್ವಾಮಿ ವಿವೇಕಾನಂದ

ಮಹಿಳೆಯರ ವಿದ್ಯಾಭ್ಯಾಸದ ಕುರಿತು ಸ್ವಾಮಿ ವಿವೇಕಾನಂದರು ಹೇಳಿದ ಈ ಉದಾತ್ತ ತತ್ವಗಳನ್ನು ಇಂದು ಬರೋಡದ ಸ್ವತಂತ್ರ ಮಹಿಳಾ ವಿಶ್ವ ವಿದ್ಯಾಲಯವಾದ, ಆರ್ಯಕನ್ಯಾ ಮಹಾ ವಿದ್ಯಾಲಯದಲ್ಲಿ ನಾವು ಕಾಣಬಹುದು. ಆ ವಿದ್ಯಾಲಯದಲ್ಲಿ ಶಿಕ್ಷಣ ಹೊಂದುತ್ತಿರುವ ವಿದ್ಯಾರ್ಥಿನಿಯರ ಒಂದು ಸಂಗಡವು ಈಗ ಮದ್ರಾಸಿಗೆ ದೇಶಯಾತ್ರೆಗಾಗಿ ಬಂದಿರುತ್ತದೆ.

ಚಲ್ಲಣ ತೊಟ್ಟುಕೊಂಡು ಇರುವ ಈ ವಿದ್ಯಾರ್ಥಿನಿಯರನ್ನು ಕಂಡ ಕೂಡಲೇ ಸಾಮಾನ್ಯನೊಬ್ಬನಿಗೆ ತೋರುವ ಒಂದು ವಿಚಿತ್ರ ಸಂಗತಿಯೆಂದರೆ ಅವರು ಯಜ್ಞೋಪವೀತ ಧರಿಸಿರುವುದು. ಇದನ್ನು ಕಂಡಾಗ ಭಾರತೀಯನ ಬುದ್ಧಿಯು ಪ್ರಾಚೀನ ವೈದಿಕ ಕಾಲದಕಡೆಗೆ ಹರಿಯುತ್ತದೆ. ಅಂದಿನ ಕಾಲದಲ್ಲಿಯೂ ಕೂಡಾ ಸ್ತ್ರೀಪುರುಷ ಭೇದವಿಲ್ಲದೆ, ಜಾತಿಮತ ಭೇದವಿಲ್ಲದೆ ಎಲ್ಲರೂ ಯಜ್ಞೋಪವೀತ ಧಾರಿಗಳಾಗಿ ಸಂಧ್ಯಾಗಾಯತ್ರಿಗಳನ್ನು ಜಪಿಸುತ್ತಿದ್ದುದು ವೈದಿಕ ಸಾಹಿತ್ಯಾಭ್ಯಾಸಿಗಳಿಗೆ ಹೊಸವಿಚಾರವಲ್ಲ.

★

ಸ್ವಾಮಿ ದಯಾನಂದರ ಉಪದೇಶಗಳಿಂದ ಪ್ರಬುದ್ಧರಾದ ಕೆಲಮಂದಿ ತರುಣರು ೧೯೦೫ರಲ್ಲಿ 'ಆರ್ಯಕುಮಾರ ಮಹಾಸಭಾ' ಎಂಬ ಒಂದು ಸಂಸ್ಥೆಯನ್ನು ಪ್ರವರ್ತಿಸಿದರು. ಭಾರತದ ತರುಣರನ್ನು ಹೊಸ ಹಾದಿಯಲ್ಲಿ ಹಳೆಯ ಸಂಸ್ಕೃತಿಯ ಪವಿತ್ರ ಶಿಕ್ಷಣದಲ್ಲಿ ಪಾವನರನ್ನಾಗಿ ಮಾಡುವುದು ಆ ಸಂಸ್ಥೆಯ ಮುಖ್ಯ ಉದ್ದೇಶವಾಗಿತ್ತು.

ಇದೇ ಉದ್ದೇಶದಿಂದಲೇ ಆರ್ಯಕನ್ಯಾ ಮಹಾ ವಿದ್ಯಾಲಯವೂ ಬರೋಡದಲ್ಲಿ ಅಂತಹ ಉತ್ಸಾಹೀ ಕೆಲಸಗಾರರಿಂದ ಪ್ರಾರಂಭಿಸಲ್ಪಟ್ಟಿತು. ದೇಶದ ಅರ್ಧಭಾಗವಾದ ಸ್ತ್ರೀಯರೂ, ರಾಷ್ಟ್ರೀಯ ಜೀವನದಲ್ಲಿ ಸ್ವತಂತ್ರ, ಬುದ್ಧಿಬಲಯುಕ್ತರಾಗಬೇಕಾದುದು ಅವಶ್ಯವಿರುವಾಗ ಅವರಿಗೂ ಅಂತಹ ಶಿಕ್ಷಣ ವ್ಯವಸ್ಥೆಯಾಗುವುದೂ ಅವಶ್ಯವಾಯಿತು. ಈ ವಿದ್ಯಾಲಯದ ಶಿಕ್ಷಣದಿಂದ ಪ್ರತಿಯೊಬ್ಬ ಮಹಿಳೆಯೂ ತಮ್ಮ ಮನೆಗಳಲ್ಲಿ ಮತ್ತು ಹೊರಗಡೆಯಲ್ಲಿ ತನ್ನ ಸ್ಥಾನವನ್ನು ಸರಿಯಾಗಿ ಕಂಡುಕೊಳ್ಳುವಂತಾಗುವುದು ಮಾತ್ರವಲ್ಲದೆ ಸ್ವತಂತ್ರವಾದ ವಿಚಾರ ಕಾರ್ಯಗಳಿಗೆ ಮಹಿಳೆಯರಿಗೂ ಉಚಿತ ಅವಕಾಶಗಳು ಒದಗುವವು.

ವಿದ್ಯಾರ್ಥಿನಿಯರಿಗೆ, ಬರೋಡದ ಈ ವಿದ್ಯಾಲಯದಲ್ಲಿ ಶಿಕ್ಷಣ ವ್ಯವಸ್ಥೆಯು ಬಹಳಸುಸೂತ್ರವಾಗಿ ಸಾಂಗವಾಗಿ ಕೊಡಲ್ಪಡುತ್ತದೆ. ಬ್ರಹ್ಮಚರ್ಯವೇ ಅಲ್ಲಿನ ಶಿಕ್ಷಣದ ತಳಹದಿಯಾಗಿದೆ. ಆ ವಿದ್ಯಾಲಯಕ್ಕೆ ಕಳುಹಿಸಿದ ತಮ್ಮ ಹುಡುಗಿಯರನ್ನು ಶಿಕ್ಷಣದ ಕಾಲದಲ್ಲಿ ಮಧ್ಯೇ ಮನೆಗೆ ತರಿಸಿ ಕರೆಸುವುದಾಗಲಿ, ಮದುವೆ ಮಾಡಿಕೊಡುವುದಾಗಲಿ ಇಲ್ಲವೆಂದು ಹೆತ್ತವರು ವಿದ್ಯಾಲಯಕ್ಕೆ ಕರಾರು ಬರೆದು ಕೊಡಬೇಕಾಗಿದೆ. ಮಾತ್ರವಲ್ಲದೆ ವಿವಾಹಿತರಾದ ಹುಡುಗಿಯರನ್ನು ಸಂಸ್ಥೆಗೆ ವಿದ್ಯಾರ್ಥಿನಿಯರಾಗಿ ತೆಗೆದುಕೊಳ್ಳಲಾಗುವುದಿಲ್ಲ. ಮತ್ತು ವಿದ್ಯಾರ್ಥಿನಿಯರು ಕೊನೆಯ ಪಕ್ಷ ತಮ್ಮ ಹದಿನಾರನೆಯ ವಯಸ್ಸಿನವರೆಗಾದರೂ, ಅಲ್ಲಿ ಶಿಕ್ಷಣ ಹೊಂದಲೇಬೇಕು.

★

ಈ ಕನ್ಯಾವಿದ್ಯಾಲಯವನ್ನು ಬರೋಡದಲ್ಲಿ ಪ್ರಾರಂಭಿಸಿದ್ದು ಕೇವಲ ಆರೇ ಮಂದಿ ವಿದ್ಯಾರ್ಥಿನಿಯರಿಂದ. ಈಗ ಇದೀ ಭಾರತ ದೇಶದ ನಾನಾ ಮೂಲೆಗಳಿಂದ ಬಂದು ಸೇರಿದ ಐಂಬತ್ತಕ್ಕೂ ಮಿಕ್ಕಿದ ವಿದ್ಯಾರ್ಥಿನಿಯರು ಅಲ್ಲಿ ಶಿಕ್ಷಣ ಹೊಂದುತ್ತಿರುವರು.

ಅಲ್ಲಿ ಆಧುನಿಕ ಶಿಕ್ಷಣ ರೀತಿ ಮತ್ತು ಪ್ರಾಚೀನ ಗುರುಕುಲ ಶಿಕ್ಷಣ ರೀತಿಗಳ ಮಧುರ ಮಿಲನವನ್ನು ನಾವು ಕಾಣಬಹುದಾಗಿದೆ. ಗುರುಗಳು ಮತ್ತು ಶಿಷ್ಯೆಯರು ಒಂದು ಕುಟುಂಬದವರ ಹಾಗೆ ಅನ್ಯೋನ್ಯತೆಯಿಂದ ಇರುತ್ತಾರೆ.

ಆಶ್ರಮವಾಸಿನಿಯರಾದ ಹುಡುಗಿಯರು ಹೆಚ್ಚಾಗಿ ಗೃಹಕೃತ್ಯಗಳಲ್ಲಿಯೇ ತಮ್ಮ ಶಿಕ್ಷಣವನ್ನು ಹೊಂದುತ್ತಾರೆ: ಅವರು ಉತ್ತಮ ಆರೋಗ್ಯ ಜೀವನದಿಂದಿರುತ್ತಾರೆ.

ಅನೇಕ ಶಿಕ್ಷಣ ಸಂಸ್ಥೆಗಳಂತೆ, ಅಲ್ಲಿನ ಶಿಕ್ಷಣರೀತಿ ಇರುವುದಿಲ್ಲ. ವಿದ್ಯಾರ್ಥಿನಿಯರಿಗೆ ಕಲಿಯುವಿಕೆಯೆಂದರೆ ಅದೊಂದು ಬಹಳ ಚಿಂತೆಯ ಉದ್ವೇಗದ ವಿಷಯವೇ ಆಗುವುದಿಲ್ಲ. ಅಲ್ಲಿ ಆಗಾಗ ಪರೀಕ್ಷೆಗಳು ನಡೆಯುವುದುಂಟು; ಆದರೆ ಪರೀಕ್ಷೆಗಳೇ ವಿದ್ಯಾರ್ಥಿನಿಯರಿಗೆ ಶಿಕ್ಷಣದ ಉದ್ದೇಶವಾಗಿರುವುದಿಲ್ಲ. ಶರೀರದ ಆರೋಗ್ಯವನ್ನಾದರೂ ಕೆಡಿಸಿ ಬುದ್ಧಿ ಬೆಳೆಸಬೇಕೆಂದು ಅಲ್ಲಿನ ಉದ್ದೇಶವಿರುವುದಿಲ್ಲ. ಅಥವಾ ಶರೀರಾರೋಗ್ಯದ ದೃಷ್ಟಿಯಿಂದ ಶಿಕ್ಷಣವು, ಬುದ್ಧಿವಿಕಾಸವು ಕಡಿಮೆಯಾಗುವಂತೆಯೂ ಇಲ್ಲ. ಬೇರೆ ಬೇರೆ ತರದ ಯೋಗಾಸನಗಳನ್ನು ವಿದ್ಯಾರ್ಥಿನಿಯರು ಮಾಡುತ್ತಿರುವುದನ್ನು ಕಾಣಲು ನಮಗೆ ಬಹಳ ಆನಂದವಾಗುವುದು.

ಅವರು ಭಾಷಾಭ್ಯಾಸದಲ್ಲಿಯೂ ಪರಿಣತರಾಗುತ್ತಾರೆ; ಸಂಸ್ಕೃತ, ಹಿಂದಿ, ಗುಜರಾಥಿ, ಇಂಗ್ಲಿಷ್ ಭಾಷೆಗಳಲ್ಲಿ ಅವರು ಉತ್ತಮ ಭಾಷಣ ಕೊಡಲು ಸಮರ್ಥರಿರುತ್ತಾರೆ. ಮಾತ್ರವಲ್ಲದೆ ಸಂಗೀತ, ಚಿತ್ರಕಲೆ, ನೇಯುವಿಕೆ, ಅಡಿಗೆ ಕೆಲಸ, ಬಣ್ಣ ಬರೆಯುವುದರಲ್ಲಿಯೂ ಅಲ್ಲಿ ಅವರು ಶಿಕ್ಷಣ ಹೊಂದುತ್ತಾರೆ.

★

ದೇಶಯಾತ್ರೆಯೂ ಶಿಕ್ಷಣದ ಒಂದು ಅಂಗವಾಗಿರುವುದರಿಂದ, ಅವರು ಇತ್ತೀಚೆಗೆ ಆಫ್ರಿಕಕ್ಕೂ ಹೋಗಿ ಬಂದಿರುವರು.

ಭಾರತದಲ್ಲಿ ಮಹಿಳೆಯರಿಗಾಗಿ ಇರುವ ಇಂತಹ ವಿದ್ಯಾಭ್ಯಾಸವು ಇದೊಂದೇ ಆಗಿದೆ. ಅಲ್ಲಿನ ಪೂರ್ಣ ಶಿಕ್ಷಣ ಅವಧಿಯು ಹದಿಮೂರು ವರ್ಷಗಳು, ಹತ್ತು ವರ್ಷಗಳು ಶಾಲೆಯಲ್ಲಿ, ಉಳಿದ ಮೂರು ವರ್ಷಗಳು ಕಾಲೇಜಿನಲ್ಲಿ. ಆ ಸಂಸ್ಥೆಗೆ ತಮ್ಮಲ್ಲಿಯ ಹುಡುಗಿಯರನ್ನು ಕಳುಹಿಸದ ಪ್ರಾಂತವು ಭಾರತದಲ್ಲಿ ಇಂದು ಯಾವುದೂ ಇಲ್ಲವೆನ್ನಬಹುದು.

ದಮ್ಮು ನೆಟ್ಟಗೆ ಆಗಲೇ ಬೇಕು

ಇದು ಅಸಾಧ್ಯವೆಂದು ಡಾಕ್ಟರರು ಹೇಳುವುದಿಲ್ಲ

ನಿಮಗೆ ನಿರಾಶೆಯು ಆದರೆ ಅದರ ಕಾರಣ ತಪ್ಪು ಔಷಧ ತೆಗೆದುಕೊಂಡದ್ದು. ಇರಬಹುದು, ದಮ್ಮು ನೆಟ್ಟಗಾಗಬೇಕೆಂಬ ಹಂಬಲದಿಂದ ಕ್ಷಣಿಕವಾಗಿ ಗುಣವಾಗುವ ಔಷಧ ಉಪಯೋಗಿಸಿ ಅನೇಕರಿಗೆ ದುಃಖವಾಗಿದೆ.

ಪುರೋಹಿತ ಶ್ವಾಸಹಾರಿಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೆ ಬೇರು ಸಹಿತ ಕಿತ್ತೊಗೆದು ಗುಣವಾಗುತ್ತದೆ. ಅದನ್ನು ತೆಗೆದುಕೊಳ್ಳ ಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ಏಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ, ಪಚನ ಕ್ರಿಯೆಯು ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸವು ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ನೆಟ್ಟಗಾಗುವುದು.

ರೂ. ೨-೮-೦, ರೂ. ೧-೧೨-೦, ರೂ. ೦-೧೦-೦ ಕ್ರಯಕ್ಕೆ ಸಣ್ಣದೊಡ್ಡ ಬಾಟಲಿಗಳಲ್ಲಿ ಎಲ್ಲಾ ಕಡೆ ಸಿಗುವುದು. ತರಿಸಿಕೊಳ್ಳುವ ವಿಳಾಸ: ಡಾ॥ ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಪುರೋಹಿತ ಶ್ವಾಸಹಾರಿ

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗವನ್ನೂ ಬಲವನ್ನೂ ಕೊಡುತ್ತದೆ



ಜಿಲ್ಲಾ ಸಮಾಚಾರ



ಮಂಗಳೂರು

ತೃತೀಯ ವಿದ್ಯಾರ್ಥಿ ಪರಿಷತ್

ದಕ್ಷಿಣ ಕನ್ನಡ ಜಿಲ್ಲೆಯ ತೃತೀಯ ವಿದ್ಯಾರ್ಥಿ ಪರಿಷತ್ತು, ಕಳೆದ ಶನಿವಾರ ಮತ್ತು ಆದಿತ್ಯವಾರಗಳಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಸದನದಲ್ಲಿ ಡಾ। ಕೆ. ಬಿ. ಕೃಷ್ಣರವರ ಅಧ್ಯಕ್ಷತೆಯಿಂದ ಜರುಗಿತು. ಶನಿವಾರ ಮುಂಜಾನೆ ಪ್ರಭಾತಫೇರಿಯಾಗಿ ಅನಂತರ ಮಿಸೆಸ್ ಮೇರಿ ಜ. ಬ್ರಿಟ್ಟೋರವರು ರಾಷ್ಟ್ರಧ್ವಜವನ್ನು ಏರಿಸಿದರು. ಸಂಜೆ ಮೆರವಣಿಗೆಯಿತ್ತು. ಅಧ್ಯಕ್ಷರು ವಿದ್ಯಾರ್ಥಿ ಧ್ವಜವನ್ನೇರಿಸಿದರು. ಶ್ರೀ. ಜಿ. ವೈಕುಂಠ ಬಾಳಿಗರು ಪರಿಷದದ ಉದ್ಘಾಟನಾ ಭಾಷಣವನ್ನಿತ್ತ ಬಳಿಕ, ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಪಿ. ರಾಘವೇನ್‌ರವರು ಸ್ವಾಗತ ಭಾಷಣವನ್ನು ನಡೆಸಿದರು. ಅಧ್ಯಕ್ಷರು ಮತ್ತೆ ಮಾತನಾಡುತ್ತ, ಇಂದಿನ ಅಂತರ್‌ರಾಷ್ಟ್ರೀಯ ರಾಜಕೀಯ ವಿಚಾರಗಳ ವಿಮರ್ಶೆ ನಡೆಸಿ, ಭಾರತದ ವಿದ್ಯಾರ್ಥಿಗಳ ಇಂದಿನ ಪರಿಸ್ಥಿತಿಯನ್ನೂ ಹಲವು ತರದ ಅಧಿಕಾರಕ್ಕೆ ಒಳಗಾಗಿ ಅವರು ಪಡುತ್ತಿರುವ ಕಷ್ಟಗಳನ್ನೂ ಹೇಳಿದರು. ಆ ಬಳಿಕ ದಿವಂಗತರಾದ ದೀನಬಂಧು ಆಂಡ್ರೂಸ್ ಮತ್ತು ಜನಾಬ್ ಯಾಕೂಬ್ ಹಸನರ ನಿಧನದಲ್ಲಿ ದುಃಖಸೂಚಕ ಠರಾವು ಮಂಜೂರಾಯಿತು.

ಮರುದಿನ ಮುಂಜಾನೆ ಪರಿಷತ್ತಿನ ಮುಂದೆ ಇರಿಸಲಾಗಿದ್ದ ಅಧಿವೇಶನ ನೋಡಲಾಯಿತು. ಸರಕಾರದ ವಿವಿಧ ಉಗ್ರ ಶಾಸನಗಳನ್ನು ಖಂಡಿಸಿ ವಿದ್ಯಾರ್ಥಿ ಸಂಘಗಳನ್ನು ಸರಕಾರವು ಒಪ್ಪಬೇಕೆಂದೂ, ಮಹಾಜನ ಸತ್ಯಾಗ್ರಹ ಆರಂಭಿಸಬೇಕೆಂದೂ ರಚನಾತ್ಮಕ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಕೆಂದೂ, ಬಾಬು ಬೋಸರ ಅನಿರೀಕ್ಷಿತ ಅದೃಶ್ಯದ ವಿಚಾರದಲ್ಲಿ ದುಃಖ ಸೂಚಿಸಿ, ಅವರು ಬೇಗನೇ ಹಿಂತಿರುಗುವಂತಾಗಲೆಂದೂ, ಎಂ. ಎಸ್. ರೈಗಳ ಧೋರಣೆಯ ಖಂಡನೀಯವೆಂದೂ, ಇವೇ ಮುಂತಾದ ಠರಾವುಗಳು ಮಂಜೂರಾದುವು. ಜಗತ್ತಿನ ಶಾಂತಿಗಾಗಿ ಹೋರಾಡುತ್ತಿರುವ ರಾಷ್ಟ್ರವು ಪ್ರಕೃತ ರಷ್ಯವೊಂದೇ ಎಂಬ ಠರಾವು ಬಿದ್ದುಹೋಯಿತು.

ಅಧ್ಯಕ್ಷರ ಮುಕ್ತಾಯ ಭಾಷಣ, ವಂದನಾರ್ಪಣೆ, ವಾಕ್‌ಸ್ಪರ್ಧೆಗಳು - ಮಧ್ಯಾಹ್ನದ ಅನಂತರ ಜರುಗಿತು. ರಾತ್ರಿ ವಿವಿಧ 'ಗುಟ್ಟು' 'ಎಡಲ್ಟ್ ಎಜುಕೇಶನ್' ನಾಟಕಗಳೂ ವಿನೋದಾವಳಿಗಳೂ ನಡೆದುವು. ಪ್ರಗತಿ ನಾಟ್ಯ ಸಂಘದವರ 'ಗಂಡುಕೊಡಲಿ' ಎಂಬ ನಾಟಕವು ಉತ್ಕೃಷ್ಟವಾಗಿತ್ತು. ವಂದನಾರ್ಪಣೆಯೊಡನೆ ಪರಿಷತ್ತು ಕೊನೆಗೊಂಡಿತು.

ಹರಿಕಥೆ:— ಇದೇ ತಾ. 13ರಿಂದ ತಾ. 21ರ ವರೆಗೆ ಶ್ರೀ ನಾರಾಯಣ ಗುರು ವೈದಿಕಾಲಯ, ಕುದ್ರೋಳಿ ಇಲ್ಲಿ ಶ್ರೀ. ಮ। ಶ। ಸಾಮುಗ ನರಿದಾಸರಿಂದ ಶ್ರೀ ದೇವೀ ಮಹಾತ್ಮೆ, ಎಂಬ ಹರಿಕಥೆಯು ನಡೆಯಲಿರುವುದೆಂದೂ ಸರ್ವರಿಗೂ ಸ್ವಾಗತವಿದೆಯೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಹಿಂದೂಮಹಾ ಸಭೆಯ ಶಾಖೆ:— ತಾ. ೧೦ರಲ್ಲು ನೀರೆಶ್ವಾಲ್ಯದಲ್ಲಿಯ ಅರ್ಧಭಜನೆ ಮಂಡಳಿಯ ಮಂದಿರದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಹಿಂದೂ ಮಹಾಸಭೆಯ ಪರವಾಗಿ ಒಂದು ಸಾರ್ವಜನಿಕ ಸಭೆಯು ಜರಗಿತು. ಶ್ರೀಯುತ ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರು ಅಧ್ಯಕ್ಷತೆ ವಹಿಸಿದರು. ನೀರೇಶ್ವಾಲ್ಯದಲ್ಲೊಂದು ಹಿಂದೂ ಮಹಾಸಭೆಯ ಶಾಖೆಯನ್ನು ಸ್ಥಾಪಿಸಬೇಕೆಂದು ೧೧ಮಂದಿಯುಳ್ಳ ಒಂದು ಕಮಿಟಿಯನ್ನು ಚುನಾಯಿಸಲಾಯಿತು.

ಶುದ್ಧಿ ಸಮಾಚಾರ:— ಇದೇ ತಾ. ೧೧-೨-೪೧ನೇ ಪ್ರಾತಃಕಾಲ ಗಂಟೆ ೭-೩೦ಕ್ಕೆ ನೀರೆಶ್ವಾಲ್ಯ ಹಿಂದೂ ಮಹಾಸಭಾಶ್ರಯದಲ್ಲಿ ಕಾಸರಗೋಡು ತಾಲೂಕಿನಲ್ಲಿ ಈ ಮೊದಲು ಮಹಮ್ಮದೀ ಮತಕ್ಕೆ ಸೇರಿದ್ದ ಶಾಂತಪ್ಪ ಸೆಟ್ಟಿ, ಯಾನೆ, ಮಹಮ್ಮದ್ ಎಂಬವನನ್ನು ವೈದಿಕ ವಿಧಿಪೂರ್ವಕ ಶುದ್ಧೀಸಂಸ್ಕಾರ ಮಾಡಿ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳಲಾಯಿತು. ಶುದ್ಧೀ ಸಂಸ್ಕಾರಕ್ಕೆ ಶ್ರೀ. ಬಿ. ಯಲ್. ವಿದ್ಯಾರ್ಥಿ, ಶ್ರೀ. ಯನ್. ಯಸ್. ಕೋಟ್ಯಾನ್ ರಾದಿಯವರು ಪೌರೋಹಿತ್ಯವನ್ನು ವಹಿಸಿದ್ದರು. ಶ್ರೀ. ವಿದ್ಯಾರ್ಥಿಯವರು ಶುದ್ಧೀ ಸಂಘಟನಾ ಕಾರ್ಯದ ಆವಶ್ಯಕತೆಯ ಕುರಿತು ಚಿಕ್ಕ ಭಾಷಣವನ್ನಿತ್ತು. ಶುದ್ಧಿಗೊಳಿಸಲ್ಪಟ್ಟ ವ್ಯಕ್ತಿಗೆ ಮೊದಲಿನ ಶಾಂತಪ್ಪ ಸೆಟ್ಟಿಯೆಂಬ ಹೆಸರನ್ನೇ ಇಡಲಾಯಿತು. ಶ್ರೀ. ಶಾಂತಪ್ಪ ಸೆಟ್ಟಿಯ ಕೈಯಿಂದಲೇ ಫಲಾಹಾರ ಹಂಚಲಾಗಿ ಶಾಂತಿ ಪಾಠದೊಂದಿಗೆ ಸಭಾಂತ್ಯಗೊಂಡಿತು.

ಮೂಲ್ಕಿ:— ಸ್ಥಳೀಕ ಸೆಂಟರಿನ ಉಪಾಧ್ಯಾಯರ ಸಂಘದ ಸಾಧಾರಣ ಮಾಸಿಕ ಸಭೆಯು ತಾ. ೮ಕ್ಕೆ ಚಿತ್ರಾಪುರ ಕೋಡಿ ಗವರ್ನಮೆಂಟ್ ಫಿಷರೀಸ್ ಎಲಿಮೆಂಟರಿ ಶಾಲೆಯಲ್ಲಿ ಸಂಘದ ಅಧ್ಯಕ್ಷ ಹಾಗೂ ಮಂಗಳೂರು ರೇಂಜ್ ಶಾಲೆಗಳ ಜ್ಯೂನಿಯರ್ ಡೆಪ್ಯೂಟಿ ಇನ್ಸ್‌ಪೆಕ್ಟರ್ ಶ್ರೀ. ಟಿ. ಯಲ್. ರಾವ್‌ರವರ ಅಧ್ಯಕ್ಷತೆಯಲ್ಲಿ ಕೂಡಿ ಬಂತು. ಪಠದಿಪಾಠನ ಉಪನ್ಯಾಸ, ಪಾಠ ಸರ್ಕ್ಯೂಲರ್ ಇತ್ಯಾದಿ ಕಾರ್ಯಭಾಗಗಳು ಜರಗಿ ಸಭಾಧ್ಯಕ್ಷರ ಭಾಷಣ, ಉಪಕಾರ ಸ್ಮರಣೆ, ಲಘು ಫಲಾಹಾರ ಇತ್ಯಾದಿಗಳಿಂದ ಸಭಾ ಕಾರ್ಯವು ಕೊನೆಗೊಂಡಿತು.

ಸ್ಥಳೀಕ ಬೋರ್ಡ್ ಹೈಸ್ಕೂಲಿನಿಂದ ಈ ವರ್ಷದ S. S. L. C. ಪರೀಕ್ಷೆಗೆ ಎಲ್ಲಾ ವಿದ್ಯಾರ್ಥಿಗಳನ್ನೂ (೪೦ಮಂದಿ ಹುಡುಗರು ೩ಮಂದಿ ಹುಡುಗಿಯರು) ಕಳುಹಿಸಿರುವರು.

ಕೆಲವು ದಿವಸಗಳಿಂದ ಇಲ್ಲಿಯೂ ಬಾಲಕೇತು ನಕ್ಷತ್ರವು ಕಾಣಬರುತ್ತಿದೆ.

ಬಳ್ಕುಂಜೆ:— ಮೂಲ್ಕಿ ಸಬ್ ಆಫೀಸಿಗೆ ಸೇರಿದ ಬಳ್ಕುಂಜೆ ಗ್ರಾಮದಲ್ಲಿ ಊರವರ ಕೋರಿಕೆ ಮೇರೆಗೆ ಮಾನ್ಯ ಪೋಸ್ಟಲ್ ಇಲಾಖೆಯವರು ಪೋಸ್ಟ್ ಆಫೀಸೊಂದನ್ನು ತೆರೆದಿದ್ದಾರೆ. ಊರ ಪ್ರಮುಖ ಗೃಹಸ್ಥರ ಹಾಗೂ ಹಲವು ಮಹನೀಯರ ಪ್ರೋತ್ಸಾಹದಿಂದ ಇಲ್ಲಿ ಪೋಸ್ಟಾಫೀಸು ತೆರೆಯುವಂತಾಯಿತು.

ರಾಮಕುಂಜ:— ಮದರಾಸ್ ಪ್ರಾಂತದ ಸಂಸ್ಕೃತ ಶಾಲೆಗಳ ಸುಪರಿಂಟೆಂಡೆಂಟರವರು ಕಳೆದ ತಾ. ೩ರಲ್ಲು ರಾಮಕುಂಜ ಎಡ್ವಾನ್ಸ್‌ಡ್ ಸಂಸ್ಕೃತ ಪಾಠಶಾಲೆಗೆ ಬಂದು ಸದ್ರಿ ಶಾಲೆಯ ತಮ್ಮ ವಾರ್ಷಿಕ ಇನ್‌ಸ್ಪೆಕ್ಷನ್ ನಡೆಸಿದರು.

ಕಾರ್ಕಳ

ಹಿಂದೀ ಪರೀಕ್ಷೆಗಳು:— ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ, ಫೆಬ್ರವರಿ ತಿಂಗಳ ಪ್ರಾರಂಭಿಕ ಹಿಂದೀ ಪರೀಕ್ಷೆಗಳು ತಾರೀಕು 9-2-1941ರ ದಿನ ಶ್ರೀ. ಕೆ. ರಾಮಚಂದ್ರ ರಾವ್, ಬಿ. ಎ. ಯಲ್. ಟಿ. ಇವರ ನಿರೀಕ್ಷಣೆಯಲ್ಲಿ, ಬೋರ್ಡ್ ಹೈಸ್ಕೂಲಿನಲ್ಲಿ ನಡೆದುವು.

ಸತ್ಯಾಗ್ರಹಿಗಳ ಬಿಡುಗಡೆ:— ಸ್ಥಳೀಯ ಕಾಂಗ್ರೆಸ್ ಕಮಿಟಿಯ ಜತೆಕಾರ್ಯದರ್ಶಿಗಳಾಗಿದ್ದ ಶ್ರೀ. ಕೆ. ಪಾಂಡುರಂಗ ಶೆಣೈಯವರು ತಾ. 8—2—41ರ ದಿನ ಮೂಡಬಿದರೆಯಲ್ಲಿ ಸತ್ಯಾಗ್ರಹ ಮಾಡಿ ಕೈದಾಗಿರುವರು. ಶ್ರೀ. ಕೆ. ವಾಮನಶೆಣೈಯವರು ಬೈಲೂರಿನಲ್ಲಿಯೂ ಭಾಷಣ ಸ್ವಾತಂತ್ರ್ಯದ ಸತ್ಯಾಗ್ರಹ ಮಾಡಿ ಕೈದಾಗಿರುವರು.

ಅಂತರ್ಜಾತೀಯ ಭೋಜನ:— ತಮ್ಮ ಇಬ್ಬರು ಮಕ್ಕಳ ಉಪನಯನಕ್ಕೆ ಸಂಬಂಧಪಟ್ಟು ಶ್ರೀ. ವೆಂಕಟೇಶ ಪ್ರಭುಗಳು ತಾ. 3—2—41ರ ದಿನ ಒಂದು ಅಂತರ್ಜಾತೀಯ ಭೋಜನ ಸಮಾರಂಭವನ್ನು ಏರ್ಪಡಿಸಿದ್ದರು. ಇದಕ್ಕೆ ಊರ ಪರವೂರ ಎಲ್ಲಾ ಜಾತಿ ಸಂಪ್ರದಾಯ ರಾಜಕೀಯ ಪಕ್ಷವಾದಿಗಳು ಆಮಂತ್ರಿತರಾಗಿ ಬಂದಿದ್ದರು.

ಹಿಂದುಸ್ಥಾನ ಸ್ಕೌಟ್:— ಈ ಚಳವಳಿ ಸಂಬಂಧವಾದ ಸಪ್ತಾಹ ದಿನಗಳು ಇಲ್ಲಿಯೂ ಆಚರಿಸಲ್ಪಟ್ಟವು. ತಾ. 8-4-41ರ ದಿನ ತಾಲೂಕು ಸ್ಕೌಟ್ ಎಸೋಸಿಯೇಶನಿನ ಕಾರ್ಯ ನಿರ್ವಾಹಕ ಸಮಿತಿಯ ಒಂದು ಸಭೆಯು ಶ್ರೀ. ಕೃಷ್ಣ ಪೈಗಳ ಅಧ್ಯಕ್ಷತೆಯಲ್ಲಿ ಕೂಡಿ ಬೋರ್ಡ್ ಪ್ರಾಥಮಿಕ ಶಾಲೆಗಳ ಬಗ್ಗೆ ಜಿಲ್ಲಾ ಬೋರ್ಡ್ ಪಬ್ಲಿ ಸ್ಕೌಟ್, ವ್ಯವಸ್ಥಾಪಕರನ್ನು ನೇಮಿಸುವಂತೆ ಠರಾವು ಆಯಿತು.

ಉಡುಪಿ

ಸತ್ಯಾಗ್ರಹ:— ಶ್ರೀ. ಪಾಂಗಾಳ ಮಂಜುನಾಥನಾಯ್ಕರು ಅವರ ಪತ್ನಿ ಶ್ರೀಮತಿ ಮನೋರಮಾ ಬಾಯಿಯವರು ತಾ. ೧೧ರಂದು ಸತ್ಯಾಗ್ರಹ ಮಾಡಿ ಬಂಧಿತರಾದರು. ಶ್ರೀ. ನಾಯ್ಕರಿಗೆ ೫ ತಿಂಗಳ ಸಜೆಯೂ, ಶ್ರೀಮತಿಯವರಿಗೆ ೩ ತಿಂಗಳ ಸಜೆಯೂ ವಿಧಿಸಲಾಗಿದೆಯೆಂದೂ ಇಬ್ಬರಿಗೂ 'ಬಿ' ಕ್ಲಾಸು ಕೊಡಲಾಗಿದೆಯೆಂದೂ ತಿಳಿಯುತ್ತದೆ.

ಕುಂದಾಪುರ

ಮುದ್ದಣ ಕವಿಯ ಜಯಂತಿ:— ನಮ್ಮ ಜಿಲ್ಲೆಯ ಪ್ರಸಿದ್ಧ ಮಹಾಕವಿಯಾದ ಮುದ್ದಣ (ನಂದಳಿಕೆ ಲಕ್ಷ್ಮೀನಾರ್ಣಪ್ಪ)ನ ಜಯಂತಿಯು ಶ್ರೀ. ಐರೋಡಿ ಶಿವರಾಮಯ್ಯನವರ ಅಧ್ಯಕ್ಷತೆಯಲ್ಲಿ ತಾ. ೧೦ರಲ್ಲು ಬೋರ್ಡ್ ಹೈಸ್ಕೂಲಿನ ವಠಾರದಲ್ಲಿ ಯಶಸ್ವಿಯಾಗಿ ಜರುಗಿತು. ಮೆರವಣಿಗೆ ಮೊದಲಾದ ಹಲವು ಕಾರ್ಯಕ್ರಮಗಳಿದ್ದುವು.

ಮುದ್ದಣ ಕವಿಯ ಗುರುಗಳಾದ ಶ್ರೀಯುತ ಮಳಲಿ ಸುಬ್ರಾಯರ ಜ್ಯೇಷ್ಠಪುತ್ರರಾಗಿರುವ ಶ್ರೀಮಾನ್ ಮುಳಿಯ ಬಾಲಕೃಷ್ಣರಾಯರು ಅದ್ಭುತ ರಾಮಾಯಣ ಮುಂತಾದ ಮೂರು ಮಹಾಕಾವ್ಯಗಳ ಕರ್ತರು ಶ್ರೀ ಲಕ್ಷ್ಮೀನಾರ್ಣಪ್ಪನವರೇ ನಿಶ್ಚಯವೆಂದು ತಾನು ಬಾಲ್ಯದಿಂದಲೂ ಪ್ರತ್ಯಕ್ಷ ನೋಡಿದ ಹಲವು ವಿಷಯಗಳನ್ನೂ, ನಂದಳಿಕೆ ಮತ್ತು ಮಳಲಿ ಸುಬ್ರಾಯರು ಇವರೊಳಗಿದ್ದ ಗುರು-ಶಿಷ್ಯ ಭಾವದ ಪವಿತ್ರ ವರ್ತನೆಯನ್ನೂ ವಿವರಿಸುತ್ತಾ ಅನೇಕ ಅಮೂಲ್ಯ ವಿಷಯಗಳಿಂದ ಕೂಡಿದ ತಮ್ಮ ಸ್ವಾಗತ ಭಾಷಣವನ್ನು ಶ್ರಾವ್ಯವಾಗಿಯೂ ಸುಸ್ಪಷ್ಟವಾಗಿಯೂ ಓದಿಹೇಳಿದರು. ಇವರ ಭಾಷಣದಿಂದ ಕನ್ನಡಿಗರಿಗೆ ಮುದ್ದಣ ಕವಿಯ ವಿಷಯದಲ್ಲಿ ಹೊಸ ಬೆಳಕುಂಟಾದಂತಾಯಿತು.

ಸಭಿಕರಲ್ಲಿ ಶ್ರೀ. ಸೇಡಿಯಾಪು ಕೃಷ್ಣಭಟ್ಟರೂ ಶ್ರೀ. ಯಜ್ಞ ಉಡುಪರೂ, ಶ್ರೀ. ಕೆ. ಎ. ಕಾರಂತರೂ ಕವಿಯ ಕಾವ್ಯ ಪ್ರಶಂಸೆಗಳನ್ನು ಮಾಡಿದರು.

ಅನಂತರ ಅಧ್ಯಕ್ಷರು ಭಾಷಣಮಾಡುತ್ತಾ ನಂದಳಿಕೆಯವರಿಗೂ ತನಗೂ ಇದ್ದ ಆಪ್ತ ಪರಿಚಯ, ಕವಿಯ ವಿಶೇಷವಾದ ಬುದ್ಧಿಶಕ್ತಿ ಅಪಾರವಾದ ವರ್ಣನಾ ಸಾಮರ್ಥ್ಯ ಮುಂತಾದ ಹಲವು ವಿಷಯಗಳನ್ನು ಹೃದಯಂಗಮವಾಗಿ ವಿವರಿಸಿದರು.

ಈ ಸಂದರ್ಭದಲ್ಲಿ ಶ್ರೀ. ಮುದ್ದಣ ಕವಿಯ ಹೆಸರು ನಮ್ಮ ಜಿಲ್ಲೆಯಲ್ಲಿ ಶಾಶ್ವತವಾಗುವಂತೆ ಒಂದು ನಿಧಿಯನ್ನು ಸಂಗ್ರಹಿಸಿ ತನ್ಮೂಲಕ ವಿದ್ಯಾರ್ಥಿಗಳಿಗೆ ಮುದ್ದಣನ ಹೆಸರು ನೆನಪುಗೊಳಿಸುವಂತೆ ಮಾಡಬೇಕೆಂದೂ ಈ ಸತ್ಕಾರ್ಯಕ್ಕೆ ಭಾಷಾಭಿಮಾನಿಗಳೆಲ್ಲರೂ ಮುಕ್ತಹಸ್ತದಿಂದ ಧನಸಹಾಯ ಮಾಡಬೇಕೆಂದೂ ಕೇಳಿಕೊಂಡಲ್ಲಿ ಈ ಸೂಚನೆಯು ಸರ್ವಮಾನ್ಯವಾಯಿತು.

ಸಾದರ ಸ್ವೀಕಾರ

ವಿರಾಗಿಣಿ:—(ಏಕಾಂಕ ನಾಟಕ) ಲೇಖಕರು: ಕಯ್ಯಾರ ಕಿಞ್ಞಣ್ಣ ರೈ. ಪ್ರಕಾಶಕರು:— ಪ್ರೇಮಕುಟಿ, ಪೆರಡಾಲ, ದ. ಕ.

ದರ್ಪಚೂರ್ಣ:—(ಶರಚ್ಚಂದ್ರರ ಕಾದಂಬರಿ) ಅನುವಾದಕರು: ಸಿ. ಕೆ. ನಾಗರಾಜರಾಯರು.

ದೀಪದ ಕೆಳಗೆ:—(ಕಥೆ) ಬರೆದವರು: ಕುಲಕರ್ಣಿ ಶ್ರೀನಿವಾಸ.

ಭಾಷಾಪಾಠ:—ಹೊಸ ಪಾಠ ಪಟ್ಟಿಯ ಕುರಿತು ಶ್ರೀ। ಸರ್ವೋದರ ಭಾಷಣ. ಪ್ರಕಾಶಕರು: ಟೀಚರ್ಸ್ ಗಿಲ್ಡ್, ಮಂಗಳೂರು. ವಿಮರ್ಶೆ ಯಥಾವಕಾಶ.

NOTICE

IN THE COURT OF THE DISTRICT MUNSIF OF MANGALORE

S. E. P. No. 1025/1940

(S. C. 846/38)

Between:—

Municipal Council Mangalore . . . . . *Petitioner*

and :

Muhamad Ghose Khan son of Muhamad Kasim Khan Market Road Mangalore . . . *Respondent*

To

Respondent abovenamed—

Please take notice that the Petitioner (Decree-Holder) has filed the above execution and applied for your arrest and detention in civil prison and that the said execution stands posted to 21—2—194[illegible] for hearing.

(By order of Court)

Mangalore 1-3-1941 } P. D'Souza, Vakil for Petitioner

'ಲೀಸ್ ಎಂಡ್ ಲೆಂಡ್ ಬಿಲ್' ಪಾಸಾಯಿತು

ಅಮೇರಿಕದಿಂದ ಬ್ರಿಟನಿಗೆ ಸಹಾಯ
ಬ್ರಿಟನು ರುಮೇನಿಯಗಳ ಸಂಬಂಧ ಕಡಿಯಿತೆ?
ಇಟಲಿ ಅಪಜಯ ಹೊಂದುತ್ತಿದೆ
ಹಿಟ್ಲರನು ಖಂಡಿತ ಧಾಳಿ ಮಾಡುವನೆ?

ಯುರೋಪಿನಿಂದ ರೋಮಾಂಚಕ ಸುದ್ದಿ ಬರುತ್ತದೆ. ಹಿಟ್ಲರನು ಇಂಗ್ಲೆಂಡಿಗೆ ಖಂಡಿತವಾಗಿ ಧಾಳಿಯಿಡುವನೆಂದು ಬ್ರಿಟಿಷ್ ಪ್ರಧಾನ ಮಂತ್ರಿ ಚರ್ಚಿಲ್ಲರೇ ತಮ್ಮ ಭಾಷಣದಲ್ಲಿ ಹೇಳಿದರು. ಆದರೆ ಬ್ರಿಟಿಷರು ವಿಜಯಿಗಳಾಗಲೇ ಬೇಕೆಂಬುದು ಅವರ ನಿರ್ಧಾರವಾಗಿದೆ. ಇಟಲಿ ಬ್ರಿಟಿಷರೊಡನೆ ಸೋತು ಹಿಂದೆ ಬೀಳುತ್ತಿದೆ. ವಿಚಿ ಸರಕಾರದಲ್ಲಿ ಬದಲಾವಣೆಗಳಾಗುತ್ತಿವೆ. ನಾಜಿಗಳ ಒತ್ತಾಯ ಜೋರಾಗಿದೆ. ಅಮೇರಿಕದಿಂದ ಲಂಡನಿಗೆ ಬಂದ ರಾಯಭಾರಿ ವಿಲ್ಕಿಯು ಲಂಡನಿನಲ್ಲಿ ಕೆಲಸಮುಗಿಸಿದ್ದು ಅಮೇರಿಕಕ್ಕೆ ತೆರಳಿದರು. ಅಮೇರಿಕವು ಬ್ರಿಟನಿಗೆ ಸಹಾಯ ಕೊಡುವ ಬಿಲ್ಲೊಂದನ್ನು ಪಾಸು ಮಾಡಿತು.

ರುಮೇನಿಯಾ ಬ್ರಿಟನುಗಳು ಬೇರಾದುವು

ರುಮೇನಿಯಾದಲ್ಲಿ ಬ್ರಿಟಿಷ್ ಮಂತ್ರಿ ಸರ್. ರೆಜಿನಾಲ್ಡ್ ಹೋರರು ಅಲ್ಲಿಂದ ಬ್ರಿಟನಿಗೆ ಮರಳಿಬರುವರೆ ಪಾಸ್ ಪೋರ್ಟ್ ಕೇಳಿರುವರೆಂದು ತಿಳಿದಿದೆ. ರುಮೇನಿಯವು ನಾಜಿಗಳ ಹೇಳಿಕೆಯಂತಿರುವುದರಿಂದ ಬ್ರಿಟನು ಅದರೊಡನೆ ಮೈತ್ರಿ ಸಂಬಂಧವನ್ನು ಕಡಿದುಕೊಂಡಿತೆಂದು ತಿಳಿಯಲಾಗಿದೆ.

ವಿಲ್ಕಿ-ರೂಸ್‌ವೆಲ್ಟರ ಭೇಟಿ

ಲಂಡನಿಗೆ ತೆರಳಿ ಮರಳಿದ ವೆಂಡಲ್ ವಿಲ್ಕಿಯವರನ್ನು ಪ್ರೆಸಿಡೆಂಟ್ ರೂಸ್‌ವೆಲ್ಟರು ಭೇಟಿಗೆ ಆಮಂತ್ರಿಸಿರುವರೆಂದು ತಿಳಿದಿದೆ.

ಲೀಸ್ ಎಂಡ್ ಲೆಂಡ್ ಬಿಲ್ ಪಾಸಾಯಿತು

ಆರು ದಿನಗಳ ನಿರಂತರ ಚರ್ಚೆಯಾದ ಮೇಲೆ ತಾ ೯ರಂದು ಅಮೇರಿಕದ ಪ್ರಜಾಪ್ರತಿನಿಧಿಯಲ್ಲಿ ಲೀಸ್ ಎಂಡ್ ಲೆಂಡ್ ಬಿಲ್ ಪಾಸಾಯಿತು. ಈ ಬಿಲ್ಲಿನಂತೆ ಬ್ರಿಟನಿಗೆ ವಿಶೇಷ ಸಹಾಯ ಮಾಡಲಾಗುವುದಂತೆ.

ಚರ್ಚಿಲ್ಲರ ಪ್ರಚಂಡ ಭಾಷಣ
ಹಿಟ್ಲರನ ಧಾಳಿಯನ್ನು ಎದುರಿಸಲು ಸಿದ್ಧರಾಗಿರಿ

ಬ್ರಿಟಿಷ್ ಮುಖ್ಯ ಮಂತ್ರಿ ಚರ್ಚಿಲ್ಲರು ಈ ವಾರ ಒಂದು ಪ್ರಚಂಡ ಭಾಷಣಮಾಡಿದರು ಅದರಲ್ಲಿ ಯುದ್ಧದ ವಿಷಯ ವಿವರಿಸಿದರು. ಅವರು ಇಟಲಿಯ ಸೋಲನ್ನು ಎತ್ತಿಹೇಳಿದರು ಹಿಟ್ಲರನು ಬೇಗನೇ ಬ್ರಿಟನಿನ ಮೇಲೆ ಆಕ್ರಮಣ ಮಾಡಬಹುದೆಂದೂ ಎದುರಿಸಲು ಸಿದ್ಧರಿದ್ದೇವೆಂದೂ ಹೇಳಿದರು.

ಇಟಲಿಯನರ ಪಲಾಯನ

ಗ್ರೀಕ್ ಸೈನಿಕರು ಇಟಲಿಯನ್ ಸೈನಿಕರನ್ನು ಅಲ್ಬೇನಿಯಾದಲ್ಲಿ ಮುತ್ತಿ ಓಡಿಸಿ ಬಿಟ್ಟಿರುವರೆಂದೂ ಲಂಡನಿನ ಸುದ್ದಿಯಿದೆ

ನಾಜಿ ಹುಲಿ ಕಾದಿದೆ
ಎಮೆರಿ ಹೇಳಿದರು

ಲಂಡನಿಗೆ ಧಾಳಿಯಿಡಲು ನಾಜಿ ಹುಲಿಯು ಈಗ ಪೊದೆಯೊಳಗೆ ಕುಳಿತು ಹೊಂಚುಹಾಕುತ್ತಿರುವುದೆಂದೂ ಯಾವಾಗಲಾದರೂ ನಮ್ಮ ಮೇಲೆ ಬೀಳಬಹುದೆಂದೂ ಮುಂದಿನ ಹೋರಾಟವು ಉಗ್ರವಾಗಲಿದೆಯೆಂದೂ ಎಮೆರಿ ಹೇಳಿದರು.

ಪಿಟೇನರಿಗೆ ಲಾವಲರ ಸಹಕಾರ

ಮಾರ್ಶಲ್ ಪಿಟೇನರು ಲಾವಲರಿಗೆ ತಮ್ಮ ಸರಕಾರದಲ್ಲಿ ಒಂದು ಸ್ಥಳವನ್ನು ಕೊಡಲು ಮುಂದೆ ಬಂದಿದ್ದರೆಂದೂ ಆದರೆ ಲಾವಲರು ಅದನ್ನು ಸ್ವೀಕರಿಸಲಿಲ್ಲವೆಂದೂ ತಿಳಿದುಬಂದಿದೆ.

ಯುದ್ಧಕ್ಕೆ ಅಗಣಿತ ಖರ್ಚು
೧೬೦ ಪೌಂಡುಗಳು ಮಂಜೂರಾದುವು

ಯುದ್ಧಕಾಲದ ಖರ್ಚಿನ ಬಗ್ಗೆ ಬ್ರಿಟಿಷ್ ಕೋಶಾಧ್ಯಕ್ಷರಾದ ಸರ್. ಕಿಂಗ್ಸ್ಲಿ ವುಡ್‌ರವರು ಹೊಸದಾಗಿ ೧೬೦ ಕೋಟಿ ಪೌಂಡುಗಳ ಹಣವನ್ನು ಮಂಜೂರು ಮಾಡಬೇಕೆಂದು ಕಾಮನ್ಸ್ ಸಭೆಯ ಮುಂದೆ ಸೂಚಿಸುತ್ತಾ ಅನೇಕ ಸ್ವಾರಸ್ಯಾಂಶಗಳನ್ನು ತಿಳಿಸಿದರು

'ಎಲ್ಲಾ ಉದ್ದೇಶಗಳಿಗೂ ವಿನಿಯೋಗವಾಗುವ ಖರ್ಚು ಈಗ ದಿನಕ್ಕೆ ಸುಮಾರು ೧೩½ ಮಿಲಿಯ ಪೌಂಡುಗಳಷ್ಟು ಖರ್ಚಾಗುತ್ತಿದೆ. ಇದೇ ಹಿಂದಿನ ಮಹಾಯುದ್ಧದ ಅತ್ಯಂತ ಹಿರಿದಾದ ಖರ್ಚಿಗಿಂತಲೂ ಜಾಸ್ತಿಯಾಗಿದೆ ಈ ಖರ್ಚು ಇನ್ನೂ ಜಾಸ್ತಿಯಾಗುತ್ತಿದೆ ಕರೆನ್ಸಿಯ ಸ್ಟ್ಯಾಂಡರ್ಡ್ ಕೂಡ ಇಳಿಯುವ ಹೆದರಿಕೆ ಇದೆ ಎಂಬುದು ಸರಕಾರಕ್ಕೆ ಗೊತ್ತಿದೆ.

'ಮಾರ್ಚ್ ೩೧ನೇ ತಾರೀಕಿನೊಳಗಂತ್ಯವಾಗುವ ಒಂದು ವರ್ಷದ ಖರ್ಚನ್ನು ಸಮನ್ವಯಗೊಳಿಸಲು ೬೦ ಕೋಟಿ ಪೌಂಡುಗಳನ್ನು ತೆಗೆದುಕೊಳ್ಳಬೇಕಾಯಿತು. ಮುಂದಿನ ವರ್ಷದ ಆರಂಭಕ್ಕೆ ಪುನಹ ೧೦೦ ಕೋಟಿ ಪೌಂಡುಗಳು ಬೇಕಾಗಿದೆ.

'ಒಂದು ವರ್ಷದೊಳಗೇ ದೈನಂದಿನ ಖರ್ಚು ಎರಡರಷ್ಟಾಗಿ ಬಿಟ್ಟಿದೆ ಕಳೆದ ಅಕ್ಟೋಬರದಲ್ಲಿ ಆಗಿದ್ದ ಖರ್ಚಿನ ಮಂಜೂರಾತಿಗಿಂತ ೧೫ ಲಕ್ಷ ಪೌಂಡುಗಳು ಜಾಸ್ತಿಯಾಗಿವೆ

ಬೆಂಘಾಸಿ ಪತನಾನಂತರ
ಒಟ್ಟು ೧ ಲಕ್ಷ ಇಟಲಿಯನರ ಕೈಸೆರೆ

ಬೆಂಘಾಸಿಯನ್ನು ಈಗ ಬ್ರಿಟಿಷರು ಹಿಡಿದಿರುವುದರಿಂದ, ಬೆಂಘಾಸಿಗೆ ದಕ್ಷಿಣ ಭಾಗದಲ್ಲಿರುವ ಕೆಲವು ಸಣ್ಣ ಬಂದರುಗಳನ್ನು ಬಿಟ್ಟರೆ, ಸಿರೆನೈಕಾ ಪ್ರಾಂತವೆಲ್ಲವೂ ಕೂಡ ಬ್ರಿಟಿಷರ ಕೈಯಲ್ಲಿಯೇ ಇದೆಯೆಂದು ಹೇಳಬಹುದೆಂಬದಾಗಿ ಮಿಲಿಟರಿ ಅಧಿಕಾರಿಯು ತಿಳಿಸಿದರು.

ಬೆಂಘಾಸಿಯು ಬ್ರಿಟಿಷರ ವಶವಾಗಿದೆ. ಡರ್ನಾವಿನಿಂದ ಪಶ್ಚಿಮಕ್ಕೆ ೧೫೦ ಮೈಲುಗಳ ದೂರದಲ್ಲಿ ಈ ಪಟ್ಟಣವಿದೆ. ಲಿಬ್ಯಾದಲ್ಲಿ ಇದು ಬಹು ಮುಖ್ಯವಾದ ಪಟ್ಟಣ. ಇಲ್ಲಿ ೬೫೦೦೦ ಜನರು ವಾಸವಾಗಿದ್ದಾರೆ. ಈಚೆಗೆ ಇಟಲಿ ಸರಕಾರವು ಈ ನಗರದ ಉನ್ನತಿಗಾಗಿ ೫ ಲಕ್ಷ ಪೌಂಡುಗಳನ್ನು ಖರ್ಚು ಮಾಡಿದ್ದಿತು. ಇಲ್ಲಿ ಅನೇಕ ವಿಮಾನ ನಿಲ್ದಾಣಗಳೂ ಒಂದು ಸೀಪ್ಲೇನ್ ನಿಲ್ದಾಣವೂ ಇವೆ.

ಈಗಿನ ವರೆಗೆ ಲಿಬ್ಯಾ ಕಾರ್ಯಾಚರಣೆಯಲ್ಲಿ ೧ ಲಕ್ಷ ಜನ ಇಟಲಿಯನರನ್ನು ಕೈಸೆರೆ ಹಿಡಿಯಲಾಗಿದೆ ಎಂದು ಅಂದಾಜು ಮಾಡಲಾಗಿದೆ.

ಟಿಪ್ಪೆಲಿನಿ ತ್ಯಜಿಸಿದ್ದಾರೆ
ಆಲ್ಬೇನಿಯಾದಲ್ಲಿ ಇಟಲಿಯನರ ಹಿಂದೋಟ
ಗ್ರೀಕರಿಗೆ ವಿಜಯ

ಆಲ್ಬೇನಿಯಾದಲ್ಲಿ ಮುಖ್ಯ ನಿಲ್ದಾಣವಾದ ಟಿಪ್ಪೆಲಿನಿಯನ್ನು ಇಟಲಿಯನರು ತ್ಯಜಿಸಿದ್ದಾರೆ ಎಂದು ಆಲ್ಬೇನಿಯಾ ಸರಹದ್ದಿನಿಂದ ರಾಯಿಟರ್ ಪಾತ್ರಿದಾರನು ತಿಳಿಸುತ್ತಾರೆ.

ಲಾರ್ಡ್ ಲಾಯಿಡ್‌ರವರ ನಿಧನ
ಬೊಂಬಾಯಿಯ ಹಿಂದಿನ ಗವರ್ನರರು

ಕಾಲನಿಗಳ ಮಂತ್ರಿ ಲಾರ್ಡ್ಸ್ ಸಭೆಯ ಮುಖಂಡರಾದ ಲಾರ್ಡ್ ಲಾಯಿಡ್‌ರವರು ಕಳೆದ ತಾ. ೪ರಂದು ಮರಣ ಹೊಂದಿದರು.

ಲಾರ್ಡ್ ಲಾಯಿಡ್‌ರವರಿಗೆ ಮರಣ ಹೊಂದುವಾಗ ೬೧ ವರ್ಷ ವಯಸ್ಸಾಗಿತ್ತು. ಲಾರ್ಡ್ ಹ್ಯಾಲಿಫ್ಯಾಕ್ಸರು ವಾಷಿಂಗ್‌ಟನಿನಲ್ಲಿ ಬ್ರಿಟಿಷ್ ರಾಯಭಾರಿಯಾಗಿ ನೇಮಿಸಲ್ಪಟ್ಟಾಗ, ಜನವರಿ ೧೦ನೇ ತಾರೀಕು ಲಾರ್ಡ್ಸ್ ಸಭೆಯ ಮುಖಂಡರಾಗಿ ನೇಮಿಸಲ್ಪಟ್ಟಿದ್ದರು. ಆದರೆ ಅಸ್ವಸ್ಥರಾಗಿದ್ದುದರಿಂದ ಇವರು ಲಾರ್ಡ್ಸ್ ಸಭೆಗೆ ಹಾಜರಾಗಲಿಲ್ಲ. [illegible] ೧೯೨೩ರ ವರೆಗೆ ಇವರು ಬೊಂಬಾಯಿ ಪ್ರಾಂತ್ಯದ ಗವರ್ನರರಾಗಿದ್ದರು. ೧೯೨೫ರಲ್ಲಿ ಇವರು ಈಜಿಪ್ಟಿನ ಮತ್ತು ಸುಡಾನಿನ ಹೈಕಮಿಷನರರಾಗಿದ್ದರು.

ಪೋಲೆಂಡಿನ ಮುಖ್ಯ ಮಂತ್ರಿಯ ಘೋಷಣೆ
ಬ್ರಿಟನಿನ ಮೇಲೆ ದಂಡಯಾತ್ರೆ ನಡೆಸದೆ ಗತ್ಯಂತರವಿಲ್ಲ

'ಜರ್ಮನ್ ಇಟಲಿ ರಾಷ್ಟ್ರಗಳಿಗೆ ಈಗ ಉಳಿದಿರುವ ಮಾರ್ಗವೊಂದೇ; ಅದು ಬ್ರಿಟನಿನ ಮೇಲೆ ಈ ದಂಡಯಾತ್ರೆಯು. ನ್ನೆದುರಿಸಲು ಮಾಡಿಕೊಳ್ಳಲಾಗಿರುವ ಅಸಾಧಾರಣವಾದ ಸಿದ್ಧತೆಗಳನ್ನು ನೋಡಿದ ಮೇಲೆ ಈ ದಂಡಯಾತ್ರೆಯು ಪ್ರತ್ಯಕ್ಷವಾದರೂ ನಿಷ್ಫಲವಾಗುವುದು ಖಂಡಿತ.'

— ಹೀಗೆಂಬುದಾಗಿ ಪೋಲೆಂಡಿನ ಮುಖ್ಯಮಂತ್ರಿ ಜ. ಸಿಕೋರ್ಸ್ಕಿಯವರು ಬ್ರಾಡ್‌ಕ್ಯಾಸ್ಟ್ ಭಾಷಣಮಾಡುತ್ತಾ ತಿಳಿಸಿದರು.

NOTICE BY SUBSTITUTED SERVICE

IN THE COURT OF THE DISTRICT MUNSIF OF MANGALORE

S. C. No. 513/1940

Between —

P. Narayana *alias* Chenda Bhatta . . *Plaintiff*.

and

Parameshwara Nalluraya . . . . *Defendant*.

To

Defendant Parameshwara Nalluraya son of Urmi Vasudeva Nalluraya, residing at Paivalike Village, Kasargod Taluk.

Please take notice that the plaintiff has filed the above suit against you for recovery of Rs. 253-11-2 being principal and interest up to 23-10-1940 together with future interest in respect of registered pro-note dated 23-10-1934 together with costs of suit with interest and that suit is posted for hearing at 11 a.m. on 17-2-41 in the above court. You may appear either in person or by pleader on or before the said date and contest the suit, failing which the same will be decided *ex parte*.

Mangalore, 6-2-1941 — **N. Keshava Kamath**, Pleader for Plaintiff

ಸತ್ಯಾಗ್ರಹಿಯನ್ನು ಕಟ್ಟಡವಿಯಲ್ಲಿ ಬಿಟ್ಟರು!

ಕೆಲವು ಕಡೆ ಬಂಧನವಾಗುವುದಿಲ್ಲ

ಡಿಲ್ಲಿಗೆ ಸತ್ಯಾಗ್ರಹಿಗಳ ದಂಡಯಾತ್ರೆ

ಮದ್ರಾಸಿನಲ್ಲಿ ಆಚಾರ್ಯ ಕೃಪಲಾನಿಯವರು

ಮಾನ್ಯ ಶ್ರೀನಿವಾಸ ಶಾಸ್ತ್ರಿಗಳ ಹೇಳಿಕೆ

ಭಾರತದ ರಾಜಕೀಯದಲ್ಲಿ ವಿಶೇಷವಾದ ಘಟನೆಗಳು ಈ ವಾರವೇನೂ ನಡೆದಿಲ್ಲ. ಸತ್ಯಾಗ್ರಹ ಹೂಡಿ ದೇಶಾಭಿಮಾನಿಗಳು ಬಂಧಿತರಾಗುತ್ತಿದ್ದಾರೆ. ಸರಕಾರದವರು ಹಲವು ಕಡೆಗಳಲ್ಲಿ ಸತ್ಯಾಗ್ರಹಿಗಳನ್ನು ಬಂಧಿಸುವುದಿಲ್ಲ. ಅಂಥವರೆಲ್ಲರೂ ಗಾಂಧಿಜಿಯವರ ಆದೇಶದಂತೆ ಡಿಲ್ಲಿಯತ್ತ ಕಡೆ ತೆರಳುತ್ತಿದ್ದಾರೆ. ಕೆಲವರನ್ನು ಬಂಧಿಸಿ ಕಟ್ಟಡವಿಯಲ್ಲಿ ಬಿಡುವ ಕೆಲಸವನ್ನೂ ಸರಕಾರವು ನಡೆಸಿದೆ. ಗಡಿನಾಡಿನಲ್ಲಿ ಬಂಧಿ[illegible]ನ ಇರುವುದರಿಂದ ಅಲ್ಲಿ ಸರ್ವತ್ರ ಯುದ್ಧ ಸಹಾಯ ವಿರುದ್ಧವಾಗಿ ಪ್ರಚಂಡ ಪ್ರಚಾರವಾಗುತ್ತದೆ. ರಾಷ್ಟ್ರೀಯ ಮುಂದಪಕ್ಷದ ಮುಖಂಡರೂ ಭಾರತಕ್ಕೆ ಪೂರ್ಣ ಸ್ವಾತಂತ್ರ್ಯ ಕೊಡಬೇಕೆಂದು ಅಭಿಪ್ರಾಯಪಡುತ್ತಾರೆ.

ಫಲಕಾರಿಯಾಗುವುದಾದರೆ ಸಹಿಹಾಕುವೆನು

ಸರ್ ಪಿ. ಸಿ. ರೇರವರ ೮೦ನೆ ವರ್ಷ ವರ್ಧಂತಿ

ನಿಧಿ ಸಂಗ್ರಹದ ಮನವಿ ಬಗ್ಗೆ ಗಾಂಧೀಜೀಯವರ ಉತ್ತರ

ಆಚಾರ್ಯ ಸರ್. ಪಿ. ಸಿ. ರೇಯವರ ೮೦ನೆಯ ವರ್ಷ ವರ್ಧಂತಿ ಸಲುವಾಗಿ ನಿಧಿ ಸಂಗ್ರಹ ಪ್ರಾರ್ಥನಾ ಮನವಿಯನ್ನು ಸರ್ ಎನ್. ಎನ್. ಸರ್ಕಾರರು ಹೊರಡಿಸಿ ಈ ಮನವಿಗೆ ಮಹಾತ್ಮಗಾಂಧಿಯವರು ಸಹಿಹಾಕಬೇಕೆಂದು ಗಾಂಧಿಯವರನ್ನು ಕೇಳಿದ್ದರು.

ಇದಕ್ಕೆ ಗಾಂಧಿಯವರು ಉತ್ತರಕೊಡುತ್ತಾ "ಆಚಾರ್ಯ ಸರ್ ಪ್ರಫುಲ್ಲಚಂದ್ರರಾಯರು ಭಾರತದ ಅದ್ವಿತೀಯ ಟಾನಿಗಳು. ಮಹಾಮಹಿಮರಾದ ವೈಜ್ಞಾನಿಕರು. ಅವರ ಹೆಸರಿನಲ್ಲಿ ನಿಧಿ ಸಂಗ್ರಹ ಮಾಡುವ ಪ್ರಯತ್ನವು ಫಲಕಾರಿಯಾಗದಿರುವುದಕ್ಕಿಂತ, ಈ ಸಂಬಂಧವಾದ ಪ್ರಾರ್ಥನಾ ಮನವಿಯನ್ನು ಹೊರಡಿಸದಿರುವುದೇ ಮೇಲು. ಈ ಪ್ರಾರ್ಥನಾ ಪತ್ರಿಕೆಗೆ ನಾನು ಈಗಲೇ ರುಜು ಮಾಡುವುದಿಲ್ಲ. ಈ ನಿಧಿಗೆ ಚಂದಾಮೊಬಲಗು ಕೊಡಲಿರುವ ಮಹನೀಯರ ಖಾಸಗಿ ಸಭೆಯೊಂದನ್ನು ನೀವು ಮೊದಲಾಗಿ ಸೇರಿಸಬೇಕು. ನಿಧಿಗೆ ದಾನ ಮಾಡುವ ಪ್ರತಿಯೊಬ್ಬ ಮಹನೀಯರೂ ತಮ್ಮ ಶಕ್ತ್ಯನುಸಾರ ತಾವು ಕೊಡಲಿರುವ ಮೊಬಲಗನ್ನು ನಿರ್ಧಾರವಾಗಿ ತಿಳಿಸಬೇಕು. ನಿಧಿ ಸಂಗ್ರಹದ ಇಂತಹ ಕಾರ್ಯಗಳ ಅನುಭವವು ನನಗೆ ಎಷ್ಟೂ ಉಂಟಾಗಿದೆ. ಅನೇಕ ಸಾರಿ ಫಲಕಾರಿಯಾಗದ ಸಂದರ್ಭಯುಂಟಾಗಿದೆ. ಆದ್ದರಿಂದ ಮೊದಲು ಸಭೆ ನಡೆಸಿ ಸಾಧ್ಯವಾದಷ್ಟು ಮೊಬಲಗನ್ನು ಕೇಳಿಕೊಳ್ಳಿ. ಆಮೇಲೆ ನಾನೂ ರುಜು ಮಾಡುವೆನೆಂದು ತಿಳಿದು, ನಿಧಿ ಸಂಗ್ರಹವು ಆಶಾದಾಯಕವಾಗಿ ಸರಿಯಾಗಿ ಪರಿಣಾಮಕಾರಿಯಾದರೆ ನಾನು ಪ್ರಾರ್ಥನಾ ಮನವಿಗೆ ರುಜುಮಾಡುವೆನು; ಇಲ್ಲದಿದ್ದರೆ ಇಲ್ಲ" ಎಂದಿರುತ್ತಾರೆ.

ದಸ್ತಗಿರಿ ಮತ್ತು ಎಟೇಚ್‌ಮೆಂಟ್ ಆರ್ಡರ್

ಶ್ರೀ ಸುಭಾಷ್‌ಚಂದ್ರ ಬೋಸರ ಮೇಲೆ

ಶ್ರೀ ಸುಭಾಷ್‌ಚಂದ್ರ ಬೋಸರ ಮೇಲೆ ದಸ್ತಗಿರಿ ಮತ್ತು ಸೊತ್ತು ಎಟೇಚ್‌ಮೆಂಟ್ ಆರ್ಡರನ್ನು ಸರಕಾರದವರು ಹೊರಡಿಸಿದ್ದಾರೆ.

ಶ್ರೀ ಬೋಸರ ಮೇಲಿನ ದಸ್ತಗಿರಿ ಅವಧಿಯನ್ನು, ಮಾರ್ಚ ಹತ್ತನೆಯ ತಾರೀಕುವರೆಗೆ ಮುಂದುವರಿಸಲಾಯಿತು.

ಈ ಮೊಕದ್ದಮೆ ವಿಚಾರಣೆಯನ್ನು ನೋಡಲು ಕೋರ್ಟಿನಲ್ಲಿ ವಕೀಲ ವರ್ಗದವರೂ, ಸಾರ್ವಜನಿಕನೇಕರೂ ಬಂದಿದ್ದರು. ಪೋಲೀಸರು ಶ್ರೀ ಬೋಸರ ವಿಚಾರವಾಗಿ ಏನಾದರೂ ಪತ್ತೆ ಮಾಡಿ ಹೊಸ ವಿಚಾರ ಹೇಳಬಹುದೆಂದು ಕೋರ್ಟಿನಲ್ಲಿ ಜನರು ಕಾತುರತೆಯಿಂದ ಸೇರಿದ್ದರು. ಆದರೆ ಶ್ರೀ ಬೋಸರ ವಿಚಾರವಾಗಿ ಹೊಸ ಅಂಶವೇನೂ ಕೇಳಬರಲಿಲ್ಲ. ಈ ವಾಯಿದೆಯೊಳಗೆ ಪೋಲೀಸರು ಶ್ರೀ ಬೋಸರನ್ನು ದಸ್ತಗಿರಿ ಮಾಡಬೇಕು. ಮತ್ತು ಮ್ಯಾಜಿಸ್ಟ್ರೇಟರ ಆಜ್ಞೆಯಂತೆ ಶ್ರೀ ಬೋಸರ ಆಸ್ತಿಗಳನ್ನು ಪೋಲೀಸರು ವಶಪಡಿಸಿಕೊಳ್ಳುವರು.

ಬೋಸರ ಮನೆಯಲ್ಲಿ ಪೋಲೀಸರು

ಪೋಲೀಸರು ಸುಭಾಸಬೋಸರ ಮನೆಗೆ ಹೋಗಿ ಅವರ ಅಣ್ಣ ಡಾ| ಸುನೀಲಚಂದ್ರಬೋಸರ ಹೇಳಿಕೆಯನ್ನು ಬರೆದುಕೊಂಡರು. ಮತ್ತು ಮನೆಯ ಬೇರೆ ಕೆಲವರ ಹೇಳಿಕೆಯನ್ನೂ ಬರಕೊಂಡರು.

ಸುಭಾಸ ದಿನಾಚರಣೆ

ಫಾರ್ವರ್ಡ್ ಬ್ಲಾಕಿನ ಕಾರ್ಯದರ್ಶಿಯವರು ಒಂದು ಪ್ರಕಟಣೆ ಹೊರಡಿಸುತ್ತಾ ಫೆಬ್ರುವರಿ ೨೩ರಂದು ಸುಭಾಸದಿನವನ್ನಾಗಿ ಆಚರಿಸಬೇಕೆಂದು ಬಿನ್ನಹಮಾಡಿಕೊಂಡಿರುವರು.

ಆಂಧ್ರ ದೇಶದಲ್ಲಿ ಒಟ್ಟು ೩೨೩ ಮಂದಿ ಸೇರಿದ್ದಾರೆ

ಮೂರನೆ ಪಟ್ಟಿಗೆ ಗಾಂಧಿಜಿಯವರ ಒಪ್ಪಿಗೆ

ಮದ್ರಾಸ್ ಕಾಂಗ್ರೆಸ್ ಶಾಸನ ಸಭಾ ಸದಸ್ಯರೂ, ಆಂಧ್ರ ಪ್ರಾಂತ ಕಾಂಗ್ರೆಸ್ ಕಮಿಟಿ ಜನರಲ್ ಸೆಕ್ರೆಟರಿಯವರೂ ವರ್ಧಾಕ್ಕೆ ಹೋಗಿದ್ದರು. ಆಂಧ್ರ ದೇಶದಲ್ಲಿ ಸತ್ಯಾಗ್ರಹ ಚಳುವಳಿಯು ಎಷ್ಟರ ಮಟ್ಟಿಗೆ ನಡೆದಿದೆ ಎಂದು ಶ್ರೀ ವೆಂಕಟರಾಯರು ಮಹಾತ್ಮರಿಗೆ ವಿವರಿಸಿ ಹೇಳಿದರು.

ಸತ್ಯಾಗ್ರಹಿಗಳ ಮೂರನೆ ಪಟ್ಟಿಯನ್ನು ಶ್ರೀ ವೆಂಕಟರಾಯರು ಗಾಂಧಿಯವರಿಗೆ ಒಪ್ಪಿಸಿದರು. ಆಂಧ್ರದಲಿ ಒಟ್ಟು ೩೨೩ ಮಂದಿ ಸತ್ಯಾಗ್ರಹಿಗಳು ಸತ್ಯಾಗ್ರಹದಲ್ಲಿ ಸೇರಿರುತ್ತಾರೆ.

ಕೇಂದ್ರ ಅಸೆಂಬ್ಲಿಯ ಉಪಚುನಾವಣೆಗೆ ಶ್ರೀ ತಿರುಮಲರಾಯರ ಸ್ಥಾನದಲ್ಲಿ ಶ್ರೀ ಸತ್ಯನಾರಾಯಣರನ್ನು ಕಾಂಗ್ರೆಸ್ ಉಮೇದುವಾರರಾಗಿ ನಿಲ್ಲಿಸುವುದಕ್ಕೆ ಮಹಾತ್ಮಗಾಂಧಿಯವರು ಒಪ್ಪಿರುತ್ತಾರೆ.

ಜಿನ್ನರ ಭೇದೋಪಾಯ

ಸಿಂಧದಲ್ಲಿ ಅಜಾದರ ಯತ್ನಗಳನ್ನು ವ್ಯರ್ಥಮಾಡುವ ಹಂಚಿಕೆ

ಸಿಂಧದಲ್ಲಿ ಶಾಶ್ವತ ಮಂತ್ರಿಮಂಡಳ ವು ಅಜಾದರ ಸತತ ಯತ್ನದಿಂದ ಏರ್ಪಟ್ಟು ಕಾರ್ಯಭಾರ ನಡೆಸುತ್ತಿರುವಾಗ, ಜಿನ್ನರು ಈಗ ಭೇದೋಪಾಯವನ್ನು ಹೂಡಿದ್ದಾರೆ.

ಸಿಂಧದ ಎಸೆಂಬ್ಲಿಯಲ್ಲಿ ಮುಸ್ಲಿಂ ಲೀಗ್ ಸದಸ್ಯರಾರೂ ಇಲ್ಲವೆಂದೂ, ಮುಸ್ಲಿಂ ಲೀಗಿಗೆ ಅಜಾದರ ಒಪ್ಪಂದದ ವಿಷಯ ಏನೂ ಗೊತ್ತಿಲ್ಲವೆಂದೂ ಹೇಳಿದ್ದಾರೆ. ಮಾತ್ರವಲ್ಲದೆ ಪ್ರಧಾನಮಂತ್ರಿ ಮೀರ ಬಾಂದೇಲಿಯವರನ್ನು ಹೊರಗೆ ಹಾಕಿ ಲೀಗ್ ವಿರೋಧಿಗಳಾದ ಅಲ್ಲಾಭಕ್ಷ್ ಮತ್ತು ಗುಲಾಮಹುಸೇನರನ್ನು ಮಂತ್ರಿಮಂಡಳಕ್ಕೆ ತೆಗೆದುಕೊಳ್ಳುವುದೇ ಈ ಒಪ್ಪಂದದ ಉದ್ದೇಶವಿರುವಾಗ, ಇದಕ್ಕೆ ಸಮ್ಮಿಶ್ರಮಂತ್ರಿಮಂಡಳವೆನ್ನಲಾಗುವುದಿಲ್ಲವೆಂದು ಅವರು ಹೇಳುತ್ತಾರೆ. ಮತ್ತೆ ಅದರಲ್ಲಿರುವ ಇಬ್ಬರು ಮಂತ್ರಿಗಳು ಲೀಗಿಗೆ ಸೇರಿದ್ದರೂ, ಅವರಿಗೂ ಲೀಗಿಗೂ ಸಂಬಂಧವಿಲ್ಲವೆಂದೂ ಅವರು ಕೂಡಲೇ ರಾಜಿನಾಮೆ ಕೊಡಬೇಕೆಂದೂ ಹೇಳಿರುವರು.

ಹರಿಜನ ಪತ್ರಿಕೆ ಪ್ರಸಿದ್ಧವಾಗುವುದು

ಮಹಾತ್ಮಾಗಾಂಧಿಜಿಯವರ ಹರಿಜನ ಪತ್ರಿಕೆಯನ್ನು ಪುನಃ ಪ್ರಾರಂಭಿಸುವ ವಿಷಯ, ಮಹಾದೇವ ದೇಸಾಯಿಯವರು ಡಿಲ್ಲಿಯ ಸಂಪಾದಕರ ಪರಿಷತ್ತು ಮುಗಿಸಿಬಂದವರು ಮಾತುಕತೆ ನಡೆಸಿದರೆಂದು ತಿಳಿಯುತದೆ. ಅದು ಪ್ರಕಟವಾದಲಿನಂತೆ ಪುಣೆಯಲ್ಲಿ ಮುದ್ರಿತವಾಗುವ ಬದಲು ವರ್ಧಾದಲ್ಲಿ ಮುದ್ರಿತವಾಗುವುದೆಂದೂ ಸುದ್ದಿಯಿದೆ.

ಸತ್ಯಾಗ್ರಹಿಯನ್ನು ಕಾಡಿನಲ್ಲಿ ಬಿಟ್ಟರು

ಚಿತ್ತೂರಿನಲ್ಲಿ ಸತ್ಯಾಗ್ರಹ ಮಾಡಿದ ಶ್ರೀ. ವೆಂಕಟರಾವು ಎಂಬವರನ್ನು ಪೋಲೀಸರು ಬಂಧಿಸಿ, ಬಸ್ಸಿನಲ್ಲಿ ಕೊಂಡೊಯ್ದು ಒಂದು ಅರಣ್ಯದಲ್ಲಿ ಬಿಟ್ಟರೆಂದಾಗಿ ತಿಳಿಯುತ್ತದೆ.

ಕನ್ನಡ ಪರಿಭಾಷಾ ಶಬ್ದ ರಚನಾ ಸಮಿತಿ

ಮದ್ರಾಸು ಸರಕಾರದವರು ಈ ಕೆಳಗಿನ ಜನಗಳಿಂದ ಕೂಡಿ ಒಂದು ಕನ್ನಡ ಪರಿಭಾಷಾ ಶಬ್ದರಚನಾ ಸಮಿತಿಯನ್ನು ಏರ್ಪಡಿಸಿರುವರೆಂದು ತಿಳಿದಿದೆ.

ರಾ। ಬ। ಎಂ. ಸಿ. ಎಸ್ ಅನಂತ ಪದ್ಮನಾಭರಾಯರು, ವಿದ್ವಾನ್ ಎಚ್. ರಾಮರಾಯರು, ಎಂ. ಮರಿಯಪ್ಪ ಭಟ್ಟರು, ಕೆ. ಮುಕುಂದಶೇಖರರಾಯರು.

ನಮಗೆ ಬೇಕಾದ ಸಾಮಂತ ಸ್ವರಾಜ್ಯ

ಶ್ರೀ. ಶಾಸ್ತ್ರಿಗಳ ಹೇಳಿಕೆ

ರಾಷ್ಟ್ರೀಯ ಮುಂದಪಕ್ಷದ ಆಶ್ರಯದಲ್ಲಿ, ಮದ್ರಾಸಿನಲ್ಲಿ ಸೇರಿದ ಒಂದು ಸಾರ್ವಜನಿಕ ಸಭೆಯಲ್ಲಿ ರೈಟ್ ಓನರೇಬಲ್ ಶ್ರೀನಿವಾಸ ಶಾಸ್ತ್ರಿಗಳು ಮಾತನಾಡುತ್ತಾ, ನಾವು ಕೇಳುವ ಸಾಮಂತ ಸ್ವರಾಜ್ಯವು [illegible]ನೆಯ ಇಸವಿಯ ವೆಸ್ಟ್‌ಮಿನಿಸ್ಟರ್ ಕಾಯಿದೆಯ ಸಾಮಂತ ಸ್ವರಾಜ್ಯವೇ ಆಗಿರತಕ್ಕದ್ದೆಂದೇನೂ ಅವಶ್ಯವಿಲ್ಲವೆಂದೂ, ಕೆನಡಾ, ದಕ್ಷಿಣಾ ಆಫ್ರಿಕಾ ಆಯರ್ ಮೊದಲಾದವುಗಳಿಗೆ ಕೊಟ್ಟ ಸಾಮಂತ ಸ್ವರಾಜ್ಯವೇ ನಮಗೂ ದೊರೆಯಬೇಕಾಗಿದೆಯೆಂದೂ ಹೇಳಿದರು.

ಕೇಂದ್ರ ಎಸೆಂಬ್ಲಿ ಅಧಿವೇಶನ

ತಾ. ೧೧ರಂದು ಪ್ರಾರಂಭವಾಗುವುದು. ಹಿಂದೂಸ್ಥಾನದ ಎರಡನೆಯ ಯುದ್ಧದ ಬಜೆಟ್ ಇದರಲ್ಲಿ ಬರಲಿದೆ.

ಸರದಾರ ಸಂತಸಿಂಗರು ಭಾರತದ ರಾಜಕೀಯ ಬಿಕ್ಕಟ್ಟು ಬಗೆಹರಿಸಲು, ಪ್ರಾಂತಿಕ ಮಂತ್ರಿಗಳ ಹಾಗೂ ಬೇರೆ ಬೇರೆ ಪಕ್ಷದ ಮುಖಂಡರ ಪರಿಷತ್ತು ಕರೆಯಬೇಕೆಂಬ ನಿರ್ಣಯ ತರಲಿರುವರು. ಹಲವು ರಾಜಕೀಯ ಚರ್ಚೆಗಳು ಇದರಲ್ಲಿ ನಡೆಯಲಿವೆಯೆಂದು ತಿಳಿಯುತ್ತದೆ.

ಕರ್ನಾಟಕದಲ್ಲಿ ಸತ್ಯಾಗ್ರಹ

ಜನವರಿ ಕೊನೆಯ ವರೆಗೆ ೧೧೬ ಜನರಿಗೆ ಶಿಕ್ಷೆ

ಹಾಗು [illegible] ರೂಪಾಯಿ ದಂಡ

ಕರ್ನಾಟಕದಲ್ಲಿ ಸತ್ಯಾಗ್ರಹ ಸುರುವಾದಂದಿನಿಂದ ಜನವರಿ ಕೊನೆಯ ವರೆಗೆ ೧೧೬ ಜನರಿಗೆ ಶಿಕ್ಷೆ ವಿಧಿಸಲ್ಪಟ್ಟಿದ್ದು [illegible] [illegible] ದಂಡವನ್ನು ಕೊಡಲು

'ನಾನು ವಿಲ್ಕಿಯಲ್ಲ - ವಿಲ್ಲಿಕ್'

ಜರ್ಮನ್ ರಕ್ತ ನನ್ನಲ್ಲಿಯೂ ಇದೆ

ನಾಜೀ ನೀತಿ ನನಗೆ ಒಪ್ಪುವುದಿಲ್ಲ

ಜರ್ಮನ್ ಜನರಿಗೆ ವಿಲ್ಕಿಯವರ ಸಂದೇಶ

'ನಾನು ಏನೇನು ನೋಡಬೇಕೆಂದು ಇಷ್ಟಪಟ್ಟಿದ್ದೆನೋ ಅದನ್ನೆಲ್ಲಾ ಬಹಳ ಸುಲಭವಾಗಿ ನೋಡಿದೆನು. ಸರಕಾರವೂ ಪ್ರಜೆಗಳೂ ನನಗೆ ಅತ್ಯಂತ ಸಹಾಯ ಮಾಡಿದರು' ಎಂದು ವಿಲ್ಕಿಯವರು ಲಂಡನಿನಿಂದ ಅಮೇರಿಕಕ್ಕೆ ಮರಳುವಾಗ ಒಂದು ಹೇಳಿಕೆಯಲ್ಲಿ ತಿಳಿಸಿದರು.

ಅಮೇರಿಕದಲ್ಲಿ ವಿದೇಶಾಂಗ ಕಮಿಟಿ ಮುಂದೆ ತಾವು ಸಾಕ್ಷ್ಯವನ್ನೀಯುವುದಾಗಿ ವಿಲ್ಕಿಯವರು ತಿಳಿಸಿದರು.

ಬ್ರಿಟನನ್ನು ಬಿಡುವ ಮುನ್ನ ವಿಲ್ಕಿಯವರು ಬ್ರಿಸ್ಟಲಿಗೂ ಮತ್ತು ಮುಖ್ಯವಾಗಿ ಬಾಂಬು ಹಾಕಿರುವ ಪ್ರದೇಶಗಳಿಗೂ ಅವಸರಅವಸರವಾಗಿ ಭೇಟಿಯಿತ್ತು ಬಂದರು.

ಜರ್ಮನರಿಗೆ ಅವರ ಹೇಳಿಕೆ

ಅವರು ಜರ್ಮನ್ ಜನರಿಗೆ ಈ ಕೆಳಗೆ ಕಂಡ ಹೇಳಿಕೆಯನ್ನಿತ್ತರು—

'ನಾನು ಶುದ್ಧವಾಗಿ ಜರ್ಮನ್ ವಂಶಸ್ಥ. ನಮ್ಮ ವಂಶದ ಹೆಸರು ವಿಲ್ಕಿ ಎಂದಲ್ಲ, ಆದರೆ ವಿಲ್ಲಿಕ್ ಎಂದು. ನಮ್ಮ ತಾತ ಮತ್ತು ಅಜ್ಜಿಯವರು ೯೦ ವರ್ಷಗಳ ಹಿಂದೆ ಜರ್ಮನಿಯನ್ನು ಬಿಟ್ಟರು. ಅವರು ಪ್ರಾಟೆಸ್ಟೆಂಟರಾಗಿದ್ದರು ಮತ್ತು ಅವರು ನಿರಂಕುಶಾಡಳಿತಕ್ಕೆ ವಿರೋಧಿಗಳಾಗಿದ್ದರು. ಸ್ವತಂತ್ರರಾಗಿ ಜೀವಿಸುವ ಹಕ್ಕು ಬೇಕೆಂದು ಅವರು ಕೇಳುವವರಾಗಿದ್ದರು. ಆದುದರಿಂದಲೇ ಅವರು ಅಮೇರಿಕಾಕ್ಕೆ ಹೋಗಿ ನೆಲೆಸಿದುದು. ಅದೇ ಹಕ್ಕನ್ನು ನಾನೂ ಕೇಳುತ್ತೇನೆ. ಜರ್ಮನ್ ರಕ್ತ ನನ್ನಲ್ಲಿರುವುದಕ್ಕಾಗಿ ನಾನು ಹೆಮ್ಮೆಪಡುತ್ತೇನೆ. ಆದರೆ ನನಗೆ ಆಕ್ರಮಣ ಮತ್ತು ದೌರ್ಜನ್ಯವು ಒಪ್ಪುವುದಿಲ್ಲ. ನನ್ನ ಈ ಭಾವನೆಯು ಜರ್ಮನ್ ವಂಶಸ್ಥರಾಗಿ ನಮ್ಮ ದೇಶದಲ್ಲಿರುವ ನನ್ನ ದೇಶೀಯರೆಲ್ಲರೂ ಕೂಡ ಪೂರ್ಣವಾಗಿ ಒಪ್ಪಿ ಅದೇ ಅಭಿಪ್ರಾಯವನ್ನು ಅವರು ಹೊಂದಿದ್ದಾರೆ. ಅವರೂ ಕೂಡ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳಲ್ಲಿ ನಂಬಿಕೆಯಿಟ್ಟಿದ್ದಾರೆ. ಜರ್ಮನ್ ಅಮೇರಿಕನರಾದ ನಾವು ಇಂದಿನ ಜರ್ಮನ್ ಸರಕಾರದ ಆಕ್ರಮಣ ನೀತಿಯನ್ನು ತ್ಯಜಿಸುವೆವು, ಆ ನೀತಿಗೂ ನಮಗೂ ವೈರವೇ ಇದೆ. ಅಲ್ಲದೆ ಜರ್ಮನಿಯ ಇಂದಿನ ಸರಕಾರವು ಹೊಂದಿರುವ ಅಧಿಕಾರದ ಲಾಲಸೆಯನ್ನು ನಾವು ದ್ವೇಷಿಸುತ್ತೇವೆ. ಈ ಅಂಶವನ್ನು ಜರ್ಮನ್ ಜನರಿಗೆ ಸ್ಪಷ್ಟಪಡಿಸಬೇಕಾಗಿದೆ.

ಕನ್ನಡಿಗರು ಅಲ್ಪ ಸಂತುಷ್ಟರೆ?

ರೇಡಿಯೋ ಕಾರ್ಯಕ್ರಮದಲ್ಲಿ ಕನ್ನಡಿಗರ ಅಲ್ಪಸಂತುಷ್ಟಿ

ಮರಾಠೀ ಪತ್ರಿಕಾಕರ್ತರ ವಿಮರ್ಶೆ

ಆಕಾಶವಾಣಿಯಲ್ಲಿ ಕನ್ನಡ ಭಾಷೆಗೆ ಸ್ಥಾನ ದೊರೆಯಬೇಕೆಂದು ಕನ್ನಡಿಗರು ನಡೆಸಿದ ಚಳವಳಿಯ ಫಲವಾಗಿ ಮದರಾಸು ಕೇಂದ್ರದಿಂದ ವಾರದಲ್ಲಿ ಮೂರು ದಿನ ಕನ್ನಡದಲ್ಲಿ ಸಮಾಚಾರವನ್ನು ಹೇಳುವ ವ್ಯವಸ್ಥೆಯಾಯಿತಷ್ಟೆ? ಈ ಬಗ್ಗೆ ಟೀಕೆಮಾಡುತ್ತ ಮಹಾರಾಷ್ಟ್ರ ಭಾಷೆಯ 'ಪೂರ್ಣಿಮಾ' ಎಂಬ ವಾರಪತ್ರಿಕೆಯ ಸಂಪಾದಕರಾದ ಶ್ರೀ। ಮಾಮಾ ವರೇರ್ಕರ್ ಅವರು ಒಂದು ಉಪಯುಕ್ತ ಸೂಚನೆ ಮಾಡಿದ್ದಾರೆ.

'ಕನ್ನಡಿಗರಲ್ಲಿ ತಮ್ಮ ಭಾಷೆಯ ಬಗೆಗಿರುವ ಅಭಿಮಾನವನ್ನು ಕಂಡು ನಾನು ಹೆಮ್ಮೆಪಟ್ಟುಕೊಳ್ಳುವ ಹಾಗೆಯೇ ಅವರ ಅಲ್ಪ ಸಂತುಷ್ಟವೃತ್ತಿಯನ್ನು ಕಂಡಾಗ ದುಃಖಿತನಾಗುತ್ತೇನೆ. ಸರ್ಕಾರದವರು ರೇಡಿಯೋದಲ್ಲಿ ಕನ್ನಡ ಭಾಷೆಗೆ ಸಂಪೂರ್ಣ ಬಹಿಷ್ಕಾರ ಹಾಕಿದರು. ಆದರೆ ಈ ಬಹಿಷ್ಕಾರವನ್ನು ತೆಗೆದುಹಾಕಿಸಿ, ಕನ್ನಡಕ್ಕೆ ಸ್ಥಾನ ಸಂಪಾದಿಸಲು ಅವಶ್ಯವಿದ್ದ ಪ್ರಯತ್ನಗಳು ಯೋಗ್ಯಪ್ರಮಾಣದಲ್ಲಿ ನಡೆಯಲಿಲ್ಲ. ತುಂಬಾ ಗಲಾಟೆಯಾದ ತರುವಾಯ ಇದೀಗ ಮದ್ರಾಸ್ ಕೇಂದ್ರದಲ್ಲಿ ವಾರಕ್ಕೆ ಮೂರು ದಿವಸಗಳಲ್ಲಿ ಕನ್ನಡ ಭಾಷೆಯ ಪುಟ್ಟ ಕಾರ್ಯಕ್ರಮವನ್ನಿಟ್ಟಿರುವುದು ಕಂಡುಬಂದಿದೆ. ಇದನ್ನು ಕಂಡು ನನಗಂತೂ ಅವರ ಬಗ್ಗೆ ಕನಿಕರವುಂಟಾಗುತ್ತದೆ.

ಕನ್ನಡಿಗರ ವಸತಿ ಬೊಂಬಾಯಿ ಇಲಾಖೆ ಹಾಗೂ ಮೈಸೂರು ಸಂಸ್ಥಾನದಲ್ಲೇ ದೊಡ್ಡ ಪ್ರಮಾಣದಲ್ಲಿದೆ. ಕನ್ನಡ ಭಾಷೆಯ ಅಧಿಕೃತ ಸಾಹಿತಿಗಳು ಮದ್ರಾಸ್ ನಗರದಲ್ಲಿರುವರೆಂದರೆ ನನಗಂತೂ ನಂಬಿಕೆಯಾಗಲಾರದು. ಮದ್ರಾಸ್ ಸ್ಟೇಷನ್ನಿನಲ್ಲಿ ಕನ್ನಡ ಕಾರ್ಯಕ್ರಮವನ್ನಿರಿಸಿರುವುದರಿಂದ ಬೊಂಬಾಯಿ ಪ್ರಾಂತ್ಯದ ಕನ್ನಡಿಗರಿಗೆ ಸರ್ವವಿಧದಿಂದಲೂ ಹಾನಿಯಾಗುತ್ತಿರುವುದೆಂಬುದರ ಅರಿವು ಕನ್ನಡಿಗರಿಗಾಗಿದೆಯೆಂಬುದು ತೋರುತ್ತಿಲ್ಲ. ಕರ್ನಾಟಕವಿನ್ನೂ ಸ್ವತಂತ್ರ ಪ್ರಾಂತವಾಗಿಲ್ಲ. ಅದುವರೆಗೂ ಕರ್ನಾಟಕ ಬೊಂಬಾಯಿ ಪ್ರಾಂತದ ರೇಡಿಯೋವನ್ನೇ ಅವಲಂಬಿಸಿಕೊಂಡಿರಬೇಕಾಗುವುದು. ಆದುದರಿಂದಲೇ ಕನ್ನಡ ಕಾರ್ಯಕ್ರಮ ಯೋಜಿಸುವ ಕಾರ್ಯವನ್ನು ಬೊಂಬಾಯಿ ಪ್ರಾಂತದ ಕನ್ನಡಿಗರೊಪ್ಪಿಸುವ ವರೆಗೂ ಮದ್ರಾಸಿನಲ್ಲಿ ಪುಟ್ಟದೊಂದು ಕಾರ್ಯಕ್ರಮ ಪ್ರಾರಂಭವಾಗಿದೆಯೆಂದು ಸಂತುಷ್ಟರಾಗದೆ ನಮ್ಮ ಕನ್ನಡಿಗರು ಬೊಂಬಾಯಿ ಸ್ಟೇಶನಿನಿಂದಲೇ ಕನ್ನಡ ಕಾರ್ಯಕ್ರಮವನ್ನು ಪ್ರಾರಂಭಗೊಳಿಸಲು ಬಲವಾದ ಹೋರಾಟ ನಡೆಸಬೇಕಾಗಿದೆ.

(೧೧ನೆಯ ಪುಟದಿಂದ ಮುಂದುವರಿದುದು)

ತ್ಯಾಗ್ರಹಿಗಳಿಗೆ ವಿಧಿಸಲ್ಪಟ್ಟ ದಂಡದ ಹಣವು ಒಟ್ಟು ೪೭೦೫ ರೂಪಾಯಿ ಆಗುವುದು ಎಂದು ತಿಳಿಯುತ್ತದೆ.

ಆ ಜಿಲ್ಲೆಗಳ ಅಂಕಗಳು ಕೆಳಗಿನಂತೆ ಇರುವವು—

ಬೆಳಗಾವಿ—ಶಿಕ್ಷಿಸಲ್ಪಟ್ಟವರು ೪೪, ದಂಡ ೫೫೦ ರೂಪಾಯಿ; ವಿಜಾಪುರ—ಶಿಕ್ಷಿಸಲ್ಪಟ್ಟವರು ೧೮, ದಂಡ ೫೦ ರೂ; ಧಾರವಾಡ—ಶಿಕ್ಷಿಸಲ್ಪಟ್ಟವರು ೧೭, ದಂಡ ೫೫೦ ರೂ.; ಮಂಗಳೂರು—ಶಿಕ್ಷಿಸಲ್ಪಟ್ಟವರು ೧೪, ದಂಡ ೨೦೦೦ ರೂ.; ಕಾರವಾರ—ಶಿಕ್ಷಿಸಲ್ಪಟ್ಟವರು ೧೩, ದಂಡ ೩೦೦ ರೂ. ಕೊಡಗು—ಶಿಕ್ಷಿಸಲ್ಪಟ್ಟವರು ೬, ದಂಡ ೪೦ ರೂ. ಬಳ್ಳಾರಿ—ಶಿಕ್ಷಿಸಲ್ಪಟ್ಟವರು ೫ ದಂಡ ೧೫೦೦ ರೂಪಾಯಿ.

ಮದ್ರಾಸಿನಲ್ಲಿ ಕೃಪಲಾನಿ

ಮದ್ರಾಸಿಗೆ ಬಂದಿದ್ದ ಆಚಾರ್ಯ ಜೆ. ಬಿ. ಕೃಪಲಾನಿಯವರು ಪತ್ರಿಕಾಪ್ರತಿನಿಧಿಗಳಿಗೊಂದು ಭೇಟಿಕೊಟ್ಟು, 'ಸತ್ಯಾಗ್ರಹ ಚಳವಳಿವು ತೃಪ್ತಿಕರವಾಗಿ ಸಾಗುತ್ತಿದೆ; ಕಾಂಗ್ರೆಸಿನ ಶಿಸ್ತು ಬಹಳ ಚೆನ್ನಾಗಿದೆ; ವೈಯುಕ್ತಿಕ ಸತ್ಯಾಗ್ರಹದ ವಿಷಯದಲ್ಲಿ ಅನುಮಾನವಿದ್ದವರ ಆ ಸಂಶಯವೂ ಈಗ ನಿವಾರಣೆಯಾಗಿದೆ; ಕಾಂಗ್ರೆಸ್, ಸರಕಾರದ ದಂಥ ಸ್ವೀಕರಿಸಿದ್ದು, ಕಾಲಗ ಮಾಡುತ್ತಿದೆ; ಗಾಂಧಿಜಿಯವರೇ ಅದರ ನಾಯಕರಾಗಿ ಮುನ್ನಡೆಸುತ್ತಿದ್ದಾರೆ. ಆಗಾಗ ಕೇಳಿ ಬರುವ ಸಂಧಾನದ ಮಾತುಕತೆಗಳು ಸರಿಯಾದ ತಿಳುವಳಿಕೆಗೆ ಎಡೆ ಕೊಡದೆ, ಸತ್ಯಾಗ್ರಹದ ಸ್ವಭಾವದ ಕುರಿತು ಜನಗಳನ್ನು ತಪ್ಪು ಹಾದಿಯಲ್ಲಿ ನಡೆಸುವಂತಿದೆ. ಕಾಂಗ್ರೆಸ್ಸು, ಇಂಡಿಯಾ ಸ್ಟೇಟ್ ಸೆಕ್ರಟರಿಗಳ ಅಥವಾ ಇತರ ಬ್ರಿಟಿಷ್ ರಾಜಕಾರಣಿಗಳ ಹೇಳಿಕೆಗಳಿಗೇನೂ ತಲೆ ಕೆರದು ಮಾಡಿಕೊಳ್ಳುವ ಹಾಗಿಲ್ಲ. ಕಾಂಗ್ರೆಸ್ ತನ್ನ ಸ್ಥಾನದ ಕುರಿತು ಸರಿಯಾಗಿ ಸ್ಪಷ್ಟವಾಗಿ ತಿಳಿಸಿ, ಆ ಧೋರಣೆಯನ್ನೇ ಎದುರಿಗಿಟ್ಟುಕೊಂಡು ಬಿಡದೆ ಅನುಸರಿಸುತ್ತಿದೆ' ಎಂದು ತಿಳಿಸಿದರು.

ಸತ್ಯಾಗ್ರಹ ಹೂಡಿ ಸೆರೆಮನೆಗೆ ಹೋದವರ ಮತ್ತು ಜುಲ್ಮಾನೆ ತೆತ್ತವರ ವರದಿ ಕಳುಹಿಸಿರಿ

ಪ್ರಾಂತಿಕ ಕಮಿಟಿಗಳಿಗೆ ಸೂಚನೆ

ಸೇವಾಗ್ರಾಮದಲ್ಲಿರುವ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಆಫೀಸಿಗೆ, ಸತ್ಯಾಗ್ರಹಮಾಡಿ ಸೆರೆಮನೆಗೆ ಹೋದವರ ಮತ್ತು ಜುಲ್ಮಾನೆ ತೆತ್ತವರ ವರದಿಯು ಬರುತ್ತಿಲ್ಲವೆಂದೂ, ಅದನ್ನು ಕಳುಹಿಸಲು ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ಉದಾಸೀನ ಮಾಡಕೂಡದೆಂದೂ ಕಾಂಗ್ರೆಸಿನ ಪ್ರಕಟನೆ ಹೊರಟಿದೆ.

ನೋಟೀಸು

ದ. ಕ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

(S. C. 745/39)

S. E. P. 1081/1940

ಶ್ರೀ ವಿಶ್ವೇಶ ತೀರ್ಥ ಸ್ವಾಮಿಯು, ವಿಶ್ವಮಾನ್ಯ ತೀರ್ಥ ಸ್ವಾಮಿಯ ಶಿಷ್ಯರು, (ಮೈನರರು) ಇವರ ಹಿತಚಿಂತಕರು ವ ರಕ್ಷಕ ಮಿಯ್ಯಾರು ನರಸಿಂಹಾಚಾರ್ಯ, ವೆಂಕಟ್ರಮಣ ಉಪಾಧ್ಯಾಯರ ಮಗ, ಉಡುಪಿ ತಾಲೂಕು ಉಡುಪಿ ಕಸಬೆಯ ಪೇಜಾವರ ಮಠದಲ್ಲಿರುವವರು—ಅರ್ಜಿದಾರರು,

ಮತು

ಇಸರ ಶೆಟ್ಟಿ, ಮುಂಡೊಟ್ಟು ಪೂವಕ್ಕ ಹೆಂಗ್ಸಿನ ಮಗ, ಮಂಗಳೂರು ತಾಲೂಕು ಮೂಡು ಪೆರಾರ ಗ್ರಾಮದ ಮುಂಡೊಟ್ಟುನಲ್ಲಿರುವವ ... ಕೈಪೋಂದೆಂಟ—(ಪ್ರತಿವಾ...)

ಸದ್ರಿ ಮೇಲ್ಕಾಣಿಸಿದ S. C. 745/39ನೆ ನ್ಯಾಯ್ಯದ ಡಿಕ್ರಿ ಮೇಲೆ ಮೇಲಿನ ಅರ್ಜಿದಾರರು ದಾಖಲುಮಾಡಿದ ಸದ್ರಿ ಮೇಲಿನ ಅಪ್ಲಿಕ್ಯಾಶನ್ ಯಲ್ಲಿ ರೆಸ್ಪೋಂಡೆಂಟನನ್ನು ಕೈಹಿಡಿ ವಾರಂಟಿನಲ್ಲಿ ಹಿಡಿದು ಸಿವಿಲ್ ಜೈಲಿಗೆ ರವಾನಿಸಬೇಕಾಗಿ ವಗೈರೆ ಕಾಣಿಸಿರುವದರಿಂದ ಆ ರೀತಿ ಯಾಕೆ ಮಾಡಕೂಡದು ಎಂಬ ... ಬಗ್ಗೆ ತಾ. 8—3—1941ನೇ ಪೂರ್ವಾಹ್ನ 11 ಘಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಇಟ್ಟಿರುತ್ತದೆ. ಸದ್ರಿ ದಿವಸ ಪ್ರತಿವಾದಿ (ರೆಸ್ಪೋಂಡೆಂಟನು) ಖುದ್ದಾಗಿ ಯಾ ವಕೀಲರ ಮುಖಾಂತರ ಕೋರ್ಟು ಮುಂದೆ ಹಾಜರಾಗಿ ಆಕ್ಷೇಪಗಳಿದ್ದರೆ ಮನವಿಮಾಡಿಕೊಳ್ಳಬಹುದು. ತಪ್ಪಿದ್ದರೆ ಸದ್ರಿ ಅಪ್ಲಿಕ್ಯಾಶನು ಅವನ ಗೈರಹಾಜರಿಯಿಂದ ತೀರ್ಮಾನವಾಗುವುದು—ಎಂದು ಕೋರ್ಟು ಹುಕುಂ ಪ್ರಕಾರ ಪ್ರಕಟಿಸಲಾಗಿಯದೆ.

ಮಂಗಳೂರು } P. Vasudeva Rao.
13-2-41 } Advocate for Petitioner.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ವಿಚಿತ್ರ ಪ್ರಪಂಚ

ಅಡಿಗೆಮಾಡಿ ರೋಗ ಗುಣವಾಯಿತು

ಲಂಡನಿನ ಸೈಂಟ್ ಮೇರೀಸ್ ಆಸ್ಪತ್ರೆಯ ಡಾಕ್ಟರ ಜೇಮ್ಸ್ ಎಂಬವರು ಒಂದು ವಿಚಿತ್ರ ವರದಿಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಅವರ ರೋಗಿಯೊಬ್ಬನಿಗೆ ಒಂದು ಬಗೆಯ ವಾತರೋಗವಿದ್ದಿತು. ಈ ರೋಗದ ದೆಸೆಯಿಂದ ಅವನು ಎಲ್ಲಿ ಹೋಗಲಾಗದವನಾಗಿದ್ದ. ಎಷ್ಟೊಂದು ಮದ್ದು ಔಷಧಿಗಳ ಪ್ರಯೋಗವಾದರೂ ಫಲ ಕಾಣಲಿಲ್ಲ. ದಿನ ಕಳೆಯುತ್ತ ಬಹಳ ನಿಶ್ಶಕ್ತನಾಗಿಬಿಟ್ಟ. ಕೊನೆಗೆ ಅವನು ಮನೆಯಲ್ಲೇ ಇರತೊಡಗಿದ. ಜೀವನದ ಬೇಸರವನ್ನು ಕಳೆಯುವುದಕ್ಕೋಸ್ಕರ ಅಡಿಗೆಮಾಡುವುದು, ಮಕ್ಕಳನ್ನು ಲಾಲಿಸುವುದು ಮೊದಲಾದ ಕೆಲಸಗಳನ್ನು ಮಾಡತೊಡಗಿದ. ಆತನ ಹೆಂಡತಿ ಹೊರಗೆ ಪೇಟೆಗೆ ಹೋಗಿ ಸಂಪಾದಿಸತೊಡಗಿದಳು. ಈಗ ಹೆಂಡತಿಯ ಕೆಲಸಗಳನ್ನು ಗಂಡ ಮಾಡುವುದೂ, ಗಂಡನ ಕೆಲಸಗಳನ್ನು ಹೆಂಡತಿ ಮಾಡುವುದೂ ಈ ದಂಪತಿಗಳಿಬ್ಬರಿಗೂ ಬಹಳ ಅನುಕೂಲವಾಗಿದೆ. ಅವರು ಸಂತೋಷದಿಂದ ತಮ್ಮ ಹೊಸ ಕೆಲಸಗಳನ್ನು ತೃಪ್ತಿಕರವಾಗಿ ಮಾಡುತ್ತ ಇದ್ದಾರೆ. ಎಲ್ಲಕ್ಕೂ ಹೆಚ್ಚಿನ ಆಶ್ಚರ್ಯದ ಸಂಗತಿ ಏನೆಂದರೆ— ಆ ಗಂಡನ ವಾತರೋಗವು ಸಂಪೂರ್ಣ ಗುಣವಾಗಿದೆ—ಮದ್ದು ಔಷಧಿಗಳಿಲ್ಲದೆ!

ಗಂಡ-ಹೆಂಡಿರ ಹೋರಾಟ!

ಅಮೇರಿಕದ ನ್ಯೂಯೋರ್ಕ್ ನಿವಾಸಿನಿಯಾಗಿದ್ದ ಬೆನ್ನಿ ಫೆನಾರ್ಡ ಎಂಬಾಕೆ ತನ್ನ ಮಗುವನ್ನು ತನ್ನ ಸಮ್ಮತಿ ಇಲ್ಲದೆ ಒಂದು ಶಾಲೆಯಲ್ಲಿ ದಾಖಲು ಮಾಡಿದಳೆಂದು ವಿವಾಹ ವಿಚ್ಛೇದವಾದ ಆಕೆಯ ಗಂಡ ಫ್ರೆಂಕನು ಸುಪ್ರೀಂ ಕೋರ್ಟಿನಲ್ಲಿ ದಾವೆ ತಂದನು. ಇದರ ವಿಚಾರಣೆ ಆಗುತ್ತಿದ್ದ ಹಾಗೆಯೇ ಈ ದಂಪತಿಗಳು ಕೋರ್ಟಿನ ಹೊರಗೆ ಬಂದಿರಲು ಫ್ರೆಂಕನು ಬೆನ್ನಿಯ ಕೈಯಲ್ಲಿ ಚಿಕ್ಕಿನ ಎಂಟು ಆ ಮಗು ಇರುವುದನ್ನು ಕಂಡು ಅದನ್ನು ಬಲಾತ್ಕಾರದಿಂದ ಕಿತ್ತುಕೊಳ್ಳಲು ಪ್ರಯತ್ನಿಸಿದ. ಬಹಳ ಸಮಯದ ವರೆಗೆ ಈ ಹೋರಾಟವು ನಡೆಯುತ್ತ ಇದ್ದು, ಸ್ವಲ್ಪ ನಿಮಿಷಗಳಲ್ಲಿ ಮೈ ೫ ವರ್ಷ ಪ್ರಾಯದ ಆ ಮಗುವು ತಾಯಿಯ ಕೈಗೂ ತಂದೆಯ ಕೈಗೂ ಬರುತ್ತಾ ಹೋಗುತ್ತಾ ಇತ್ತು. ಈ ಹೋರಾಟವು ಎಂಥ ಬರ್ಬರ ರೀತಿಯಿಂದ ನಡೆಯುತ್ತಿತ್ತೆಂದರೆ ಆ ಗಂಡ ಹೆಂಡಿರಿಬ್ಬರೂ ಕ್ಷತವಿಕ್ಷತರಾಗಿದ್ದರು ಮಾತ್ರವಲ್ಲದೆ ಪಾಪದ ಮಗುವು ಬದುಕಿ ಉಳಿಯುವುದೇ ಕಷ್ಟವಾಗಿತ್ತು. ವಕೀಲರೆಲ್ಲರೂ ಸುತ್ತ ಹಾಕಿ ಈ ತಮಾಷೆಯನ್ನು ನೋಡುತ್ತಿದ್ದರು ಮತ್ತು ಹೋರಾಡುವ ಈ ಗಂಡ ಹೆಂಡಿರನ್ನು ತಪ್ಪಿಸಲಿಕ್ಕೆ ಹೋದ ಕೆಲವರಿಗೆ ಈ ಸಂಗಾತಿಗಳು ಕಚ್ಚಿ ಪರಚಿ ಗಾಯಮಾಡಿದ್ದರು.

ಎದೆಯೊಳಗೆ ಕೋವಿಗುಂಡು

ಕಳೆದಬಾರಿಯ ಮಹಾಯುದ್ಧದಲ್ಲಿ ಹೋರಾಡುತ್ತಿದ್ದ ಹಾಗೆ ೧೯೧೭ರಲ್ಲಿ ಒಬ್ಬ ಸೈನಿಕನ ಎದೆಗೆ ನಾಟಿಕೊಂಡ ಒಂದು ಕೋವಿಗುಂಡು, ಈಗಲೂ ಅವನ ಎದೆಯಲ್ಲಿಯೇ ಇರುವುದು. ಅಂಗಿ, ಕವಚಗಳನ್ನು ಹೊಕ್ಕು ಅದು ಎದೆಯನ್ನು ಸೇರಿದ್ದರಿಂದ, ಆ ಗುಂಡಿನ ದೆಸೆಯಿಂದ ಆತನಿಗೆ ಅಷ್ಟೊಂದು ನೋವಾಗಿರಲಿಲ್ಲ. ಆದ್ದರಿಂದ ಅವನು ಅದನ್ನು ತೆಗೆಯಲಿಕ್ಕೆ ಯಾವ ಶಸ್ತ್ರಚಿಕಿತ್ಸೆಗೂ ಒಪ್ಪಲಿಲ್ಲ. ಸೈನ್ಯದ ಡಾಕ್ಟರರು ಬಲಾತ್ಕಾರದಿಂದ ಶಸ್ತ್ರಚಿಕಿತ್ಸೆ ಮಾಡಿದರು. ಆದರಿಂದ ಮಾತ್ರ ಎದೆಯ ತೀರ ಒಳಭಾಗವನ್ನು ಸೇರಿಕೊಂಡ ಆ ಗುಂಡನ್ನು ತೆಗೆಯಲು ಅಸಾಧ್ಯವಾದುದರಿಂದ, ಅವರು ತಮ್ಮ ಪ್ರಯತ್ನಗಳನ್ನು ಅಲ್ಲಿಗೇ ಬಿಟ್ಟುಬಿಟ್ಟರು. ಈ ಘಟನೆಯು ನಡೆದು ಈಗ ೨೩ ವರ್ಷಗಳಿಗೆ ಮೇಲಾಯಿತು. ಆದರೂ ಆ ಸೈನಿಕನು ಮದುವೆಯಾಗಿ, ಮಕ್ಕಳು ಮೊಮ್ಮಕ್ಕಳನ್ನು ಪಡೆದು ಸುಖವಾಗಿ ಸಂಸಾರ ಮಾಡಿಕೊಂಡಿದ್ದಾನೆ. ಗುಂಡು ಈಗಲೂ ಅವನ ಎದೆಯಲ್ಲಿಯೇ ಇದೆ!

ಮಂಜುಗಡ್ಡೆಯ ಪೂಜೆ!

ಮಂಜುಗಡ್ಡೆಯಲ್ಲಿ ರೋಗವನ್ನು ಗುಣಮಾಡುವ ಶಕ್ತಿಯಿದೆ. ಆದ್ದರಿಂದ ಅದನ್ನು ಪೂಜಿಸಿದರೆ ರೋಗಿಗಳು ರೋಗಮುಕ್ತರಾಗುವರು ಎಂದು ಅಮೇರಿಕದ ಒಬ್ಬ ನಿಗ್ರೋ ಪಾದರಿ ಜನರಲ್ಲಿ ನಂಬಿಕೆಯನ್ನು ಹುಟ್ಟಿಸಿ ಅವರಿಂದ ವರ್ಷಕ್ಕೊಮ್ಮೆ ತನ್ನ ಇಗರ್ಜಿಯಲ್ಲಿ ಮಂಜುಗಡ್ಡೆಯ ಪೂಜೆ ಪಾರಾಯಣಗಳು ನಡೆಯುವ ಹಾಗೆ ಮಾಡಿರುವನು. ಆ ಸಮಯದಲ್ಲಿ ಉರಿಯುವ ಮೇಣದ ಬತ್ತಿಗಳನ್ನು ಬಿಟ್ಟು ಮಿಕ್ಕ ಎಲ್ಲಾ ಸಾಮಗ್ರಿಗಳೂ, ಪ್ರತಿಮೆಗಳೂ ಮಂಜುಗಡ್ಡೆಯಿಂದಲೇ ಕೊರೆದು ತಯಾರಾಗುತ್ತವೆ. ಮತ್ತು ಜನರು ಮಂಜುಗಡ್ಡೆಯ ಈ ಪ್ರತಿಮೆಗಳಿಗೆ ಬಗ್ಗಿ ನಮಸ್ಕರಿಸಿ ಪೂಜೆಮಾಡುವರು, ಆರತಿ ಎತ್ತುವರು. ನಿಗ್ರೋ ಜನರು ಮಾತ್ರವಲ್ಲ, ಕೆಲವು ಯೂರೋಪಿಯನ್ನರೂ ಈ ಪೂಜೆಯ ಕಡೆಗೆ ಆಕರ್ಷಿತರಾಗಿದ್ದಾರೆ.

ಅಮೇರಿಕದಲ್ಲಿ ವಿಚಿತ್ರ ವಿವಾಹ ಕಾನೂನು

ಸಂಯುಕ್ತ ಅಮೇರಿಕವು ಒಂದು ರಾಜ್ಯವಲ್ಲ. ಅದು ಅನೇಕ ಚಿಕ್ಕ ಚಿಕ್ಕ ಸ್ವತಂತ್ರ ರಾಜ್ಯಗಳ ಒಂದು ಪರಿವಾರ. ಆದ್ದರಿಂದ ಅಲ್ಲಿಯ ಕಾಯಿದೆ ಕಾನೂನುಗಳು ಒಂದೊಂದು ರಾಜ್ಯದಲ್ಲಿ ಒಂದೊಂದು ಪ್ರಕಾರವಾಗಿ ಇರುತ್ತವೆ. ಇವು ಕೆಲವೊಮ್ಮೆ ಕಡೆಗಳಲ್ಲಿ ಒಂದಕ್ಕೊಂದು ವಿರೋಧವಾಗಿರುವುದೂ ಇದೆ. ಮದುವೆಯ ಕಾನೂನು ಇದಕ್ಕೆ ದೃಷ್ಟಾಂತವಾಗಿರುವುದು. ಆದ್ದರಿಂದ ಅಮೇರಿಕದ ನಿವಾಸಿಗಳು ತಮ್ಮ ನಿವಾಸ ಸ್ಥಾನವನ್ನು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಬದಲಾಯಿಸಿಕೊಳ್ಳುತ್ತ ಜೀವಮಾನದಲ್ಲಿ ಹಲವು ಸಲ ಮದುವೆಮಾಡಿಕೊಳ್ಳಬಹುದು. ಕಾನೂನು ಅದನ್ನು ತಡೆಯಲಾರದು. ಈ ದೋಷವನ್ನು ನಿವಾರಿಸಲಿಕ್ಕಾಗಿಯೇ ಈಗ ಅಮೇರಿಕದ ಎಲ್ಲಾ ಸಂಯುಕ್ತ ರಾಜ್ಯಗಳಿಗಾಗಿ ಒಂದೇ ತರದ ವಿವಾಹ ಕಾನೂನನ್ನು ಮಾಡುವ ಪ್ರಯತ್ನಗಳು ಅಲ್ಲಿ ನಡೆಯುತ್ತವೆ.

ದಾಂಪತ್ಯ ವಿಚ್ಛೇದಕ್ಕಾಗಿ ಮುದುಕರ ದಾವೆ!

ನ್ಯೂ ಸೌತ್ ವೇಲ್ಸ್ ಎಂಬಲ್ಲಿಯ ೮೫ ವರ್ಷ ಪ್ರಾಯದ ಮಾರ್ಗರೆಟ್ ಎಂಬ ಹಣ್ಣು ಹಣ್ಣು ಮುದುಕಿ ೮೮ ವರ್ಷ ಪ್ರಾಯದ ತನ್ನ ಮುದುಕ ಗಂಡನು ೭೩ ವರ್ಷ ಪ್ರಾಯದ ಬೇರೆ ವಿವಾಹಿತೆ ಲೂಯಿ ಎಂಬ ಪರನಾರಿಯೊಂದಿಗೆ ಅಕ್ರಮ ಸಂಬಂಧವನ್ನು ಬೆಳೆಸಿದನಾದ್ದರಿಂದ ಆತನೊಡನಿರುವ ತನ್ನ ವಿವಾಹಬಂಧನವನ್ನು ಕಡಿಯಲಿಕ್ಕೆ ಅಪ್ಪಣೆಯಾಗಬೇಕೆಂದು ದಾವೆ ತಂದಳು. ಹಣ್ಣು ಹಣ್ಣು ಮುದುಕ ಮುದುಕಿಯರ ಮೇಲೆ ಈ ಅಪವಾದವೆ? ಎಂದು ಕೋರ್ಟಿನವರು ಕೇಳಿದಾಗ— ನನ್ನ ಮತ್ತು ನನ್ನ ಗಂಡನ ದಾಂಪತ್ಯ ಸಂಬಂಧವು ಆರಂಭವಾಗುವ ಮೊದಲು ತರುಣ ದಂಪತಿಗಳ ಹಾಗೆಯೇ ಇತ್ತು. ಆದ್ದರಿಂದ ಗಂಡನು ಲೂಯಿ ಎಂಬ ವೃದ್ಧೆಯೊಡನೆ ಅಕ್ರಮ ಸಂಬಂಧವನ್ನು ಇಟ್ಟಿರುವುದು ಆಶ್ಚರ್ಯವಲ್ಲ... ಅವರಿಬ್ಬರೂ ಒಂದೆ ಹಾಸಿಗೆಯಲ್ಲಿ ಒತ್ತಾಗಿ ಮಲಗಿಕೊಂಡಿದ್ದುದನ್ನು ನಾನು ಕಣ್ಣಾರೆ ಕಂಡಿದ್ದೇನೆ ಎಂದಳು. ಕೊನೆಗೆ ನ್ಯಾಯವು ಅವಳಿಗೆ ಗುಣವಾಯಿತು.

NACET BLADES

ನೇಸೆಟ್ ಬ್ಲೇಡುಗಳು

ತೃಪ್ತಿಕರವಾಗಿ ಕ್ಷೌರಮಾಡಬೇಕಾದರೆ, ಹರಿತ, ಸುಖ ಮತ್ತು ನಯ ಇವು ಮೂರು ಗುಣಗಳು ಇರಬೇಕು. ನೇಸೆಟ್ ಬ್ಲೇಡುಗಳು ಬಹಳ ಆಶ್ಚರ್ಯಕರವಾದ ನಮ್ಮ ಹದಿನ ಕ್ರಿಯೆಯ ಈ ಮೂರು ಗುಣಗಳನ್ನೂ ಕೊಡುತ್ತವೆ. ಪ್ರತಿಯೊಂದು ಬ್ಲೇಡಿನಿಂದ ಎಷ್ಟು ಸಲ ಕ್ಷೌರಮಾಡಬಹುದಾಗಿದೆಯೆಂಬುದನ್ನು ನೋಡಿ ನೀವು ಆಶ್ಚರ್ಯಪಡುವಿರಿ.



NOTICE

THE BOMBAY LIFE ASSURANCE COMPANY, LIMITED.

Notice having been given of the loss of Policy No. 2718 on the life of Mr. Mangalore Jarappa, Managing Editor The Balavara Bandhu, Mangalore a duplicate policy will be issued unless objection is lodged with us within one month from this date.

Jyotendra L. Mehta,
Managing Director.

ಮೊಹರಮ್ ದುಃಖದ ನೆನಪಾಗಿರುವುದು!

ಹಬ್ಬ ಮಾಡುವುದು ಧರ್ಮವಲ್ಲ

ಅಬ್ದುಲ್ ಗಫರ್ ಖಾನರ ಲೇಖನ

‘ಹಿಂದೂ ಮತ್ತು ಕ್ರಿಶ್ಚಿಯನರ ಸನ್ನಿಧಾನಗಳಲ್ಲಿ ಸಹ ನನ್ನ ವಿಷಯದ ಶಿಂಕೆ ಏನೆಂದರೆ—ಈ ಮೋಹರಂ ಹಬ್ಬವು ನಮ್ಮ ಇಸ್ಲಾಂ ಮತಕ್ಕೆ ಸಂಪೂರ್ಣ ವಿರೋಧವಾಗಿದೆ. ಈ ಭೂಮಿಯ ಮೇಲೆ ಪುಣ್ಯವನ್ನು ಹರಡಿಸುವುದು ಪ್ರತಿಯೊಂದು ಮತಸ್ಥರ ಶ್ರೇಷ್ಠವಾದ ಕಾರ್ಯವಾಗಿದೆ. ಆದ್ದರಿಂದ ತಮ್ಮ ತಮ್ಮ ಜನರು ಇದರಲ್ಲಿ ಯಾವ ತರದ ಭಾಗವನ್ನು ವಹಿಸದಂತೆಯೂ ಮತ್ತು ಸಹಾಯಮಾಡದಂತೆಯೂ ಹಣಕಾಸು ಕೊಡದಂತೆಯೂ ಬೋಧನೆ ಮಾಡಿ ತಡೆಮಾಡಬೇಕಾಗಿ ಅತ್ಯಂತ ವಿನಯದಿಂದ ಅರಿಕೆಮಾಡಿಕೊಳ್ಳುತ್ತೇನೆ.

ಹೀಗೆಂದು ಪ್ರಸಿದ್ಧ ಮುಸ್ಲಿಂ ಮುಖಂಡರೂ, ರಾಷ್ಟ್ರಭಕ್ತರೂ ಆದ ಅಬ್ದುಲ್ ಗಫರ್ ಖಾನರು ಬರೆದಿರುತ್ತಾರೆ.

ಅವರ ಲೇಖನ ಈ ಕೆಳಗಿನಂತಿದೆ:

ಹಿಂದಿನ ಇತಿಹಾಸ

‘ಹಜರತ್ ಮಾಮಿಯನವರ ಮರಣಾನಂತರ ಅವರ ಮಗ ಯಜೀದ್‌ನು ಅರೇಬಿಯದ ದೊರೆಯಾದನು. ಆತನು ಕೆಲವು ಸಂಗತಿಗಳಲ್ಲಿ ಇಸ್ಲಾಂ ಮತಕ್ಕೆ ವಿರೋಧವಾಗಿ ನಡೆಯುತ್ತಿದ್ದನು. ಸಾರಾಯಿ ಸಹ ಕುಡಿಯುತ್ತಿದ್ದನು. ಆದ್ದರಿಂದ ಆತನ ದೊರೆತನಕ್ಕೆ ಹಜರತ್ ಇಮಾಮ್ ಹುಸೇನರು ಒಪ್ಪಲಿಲ್ಲ. ಆ ಸಮಯದಲ್ಲಿ ಮೆಸೆಪೊಟೋಮಿಯದ ಕೂಫಾ ಪಟ್ಟಣದ ಜನರೆಲ್ಲಾ ಸೇರಿ ಹಜರತ್ ಇಮಾಮ್ ಹುಸ್ಸೈನರವರು ಅಲ್ಲಿಗೆ ಬಂದುಬಿಟ್ಟರೆ ಅವರನ್ನು ತಾವು ದೊರೆಯಾಗಿ ಒಪ್ಪಿಕೊಳ್ಳುವೆವೆಂದು ಕಾಗದ ಬರೆದರು. ಕಾಗದದ ನಿಜಸ್ಥಿತಿ ತಿಳಿದುಕೊಂಡು ಬರಲಿಕ್ಕೆ ಹಜರತ್ ಮುಸ್ಲಿಂಯೆಂಬವರನ್ನು ಇಮಾಮ್‌ರವರು ಅಲ್ಲಿಗೆ ಕಳುಹಿಸಿದರು. ಅವರು ಅಲ್ಲಿಗೆ ತಲುಪಿದ ಕೂಡಲೇ ಅಲ್ಲಿಯ ಸಾವಿರಾರು ಮುಸ್ಲಿಮರು ಬಂದು ಹಜರತ್ ಇಮಾಮ್ ಹುಸ್ಸೈನರವರು ಬಂದುಬಿಟ್ಟರೆ ದೊರೆಯಾಗಿ ಮಾಡಿಕೊಳ್ಳುವುದು ಖಂಡಿತವೆಂದು ಪ್ರಮಾಣಪೂರ್ವಕ ಒಪ್ಪಂದ ಮಾಡಿದರು. ಇದರಂತೆ ಹಜರತ್ ಮುಸ್ಲಿಂರವರು ಹುಸ್ಸೈನರವರಿಗೆ ಅಲ್ಲಿಗೆ ಬರಲು ಕಾಗದ ಬರೆದುಬಿಟ್ಟರು.

ಆ ವರ್ತಮಾನವು ಅರಸನಾದ ಯಜೀದನ ಕಡೆಯ ಅಧಿಕಾರಿಯಾಗಿದ್ದ ಜೈಯದ್‌ಯೆಂಬವನಿಗೆ ತಿಳಿಯಿತು. ಆತನು ಕೂಡಲೇ ಹಜರತ್ ಮುಸ್ಲಿಮರನ್ನು ಹಿಡಿಸಿ ಅವರ ಇಬ್ಬರು ಮಕ್ಕಳೊಡನೆ ಕೊಲ್ಲಿಸಿಬಿಟ್ಟನು. ಇದಾದ ಕೂಡಲೇ ಜನರೂ ತಾವು ಮಾಡಿದ ಪ್ರಮಾಣವನ್ನು ಉಲ್ಲಂಘಿಸಿಬಿಟ್ಟರು. ಈ ವಿಷಯವನ್ನು ಹಜರತ್ ಇಮಾಮ್ ಹುಸ್ಸೈನರವರಿಗೆ ಯಾರೂ ತಿಳಿಸಲಿಲ್ಲ. ಅವರು ಮೊದಲಿನ ಕಾಗದದ ಪ್ರಕಾರ ಕರ್‌ಬಲಾಯೆಂಬ ಮೈದಾನಿಗೆ ತಲುಪಿದರು. ಇದನ್ನು ತಿಳಿದ ಅಧಿಕಾರಿ ಆಗಿದ್ದ ಜೈಯಾದನು ಕೂಡಲೇ ೫ ಸಾವಿರ ಸೈನ್ಯವನ್ನು ಕಳುಹಿಸಿ ಮುತ್ತಿಗೆ ಹಾಕಿ ಯಜೀದನನ್ನೇ ದೊರೆಯಾಗಿ ಒಪ್ಪಬೇಕು, ಇಲ್ಲವಾದರೆ ಯುದ್ಧಮಾಡಿ ಎಂದು ಹಜರತ್ ಇಮಾಮ್ ಹುಸ್ಸೈನರವರಿಗೆ ತಿಳಿಸಿದನು. ಇದಕ್ಕೆ ಇವರು, ಯಜೀದ್ ಎಂಬವನು ಇಸ್ಲಾಂ ಮತಕ್ಕೆ ವಿರುದ್ಧ ನಡೆಯುತ್ತಾನೆ, ಇದಕ್ಕಾಗಿ ನಾನು ಅವನನ್ನು ದೊರೆಯಾಗಿ ಒಪ್ಪಲಾರೆನೆಂದರು.

ಯುದ್ಧ ಪ್ರಾರಂಭವಾಯಿತು; ಇಮಾಮ್ ಹುಸೇನರ ಪಕ್ಷಕ್ಕೆ ನೀರು ಆಹಾರವೇ ಸಿಕ್ಕದ ಹಾಗೆ ಮಾಡಿಬಿಟ್ಟರು. ಹೀಗೆ ಯುದ್ಧ ಪ್ರಾರಂಭವಾಗಿ ಹಜರತ್ ಇಮಾಮ್ ಹುಸ್ಸೈನರವರು ಒಬ್ಬೊಬ್ಬರು ಹತರಾಗುತ್ತಾ ಬಂದು ೬೧ನೆ ಹಿಜರಿ ಮೊಹರಂ ೧೦ನೇ ಶುಕ್ರವಾರ ದಿನ ಹಜರತ್ ಇಮಾಮ್ ಹುಸ್ಸೈನರವರೂ ಹತರಾದರು. ಅಧಿಕಾರಿಯಾದ ಜೈಯಾದನು ಇವರ ಕತ್ತನ್ನು ಕೊಯ್ಯಿಸಿ ಆ ತಲೆಯನ್ನು ಕೂಫಾ ಎಂಬ ನಗರದಲ್ಲಿ ಮೆರವಣಿಗೆ ಮಾಡಿಸಿದನು.

ಹೀಗೆ ತಮ್ಮ ಗುರುಗಳ ಮೊಮ್ಮಗನಾದ ಹಜರತ್ ಇಮಾಮ್ ಹುಸ್ಸೈನರವರ ಸಂತತಿಯವರನ್ನು ಮೋಸದಿಂದ ಮತ್ತು ಅನ್ಯಾಯದಿಂದ ಕೊಂದದ್ದು ಮುಸಲ್ಮಾನರಿಗೆ ಅತ್ಯಂತ ದುಃಖಕರವಾದ ವಿಷಯವಾಗಿದೆ.

ಮುಸ್ಲಿಮರಲ್ಲಿ ಬಿನ್ನಹ

ಮುಸ್ಲಿಂ ಸಹೋದರರೇ, ಇಂಥಾ ಘೋರ, ಭಯಂಕರದ ಅತ್ಯಂತ ದುಃಖ ಸಂಗತಿಗೆ ನಾವು ಹಬ್ಬವೆಂದು ಹೇಳಬಹುದೋ? ಕೈಯನ್ನು ಎಷ್ಟೋ ಟಿನ್ನುಗಳಲ್ಲಿ ಕತ್ತರಿಸಿಕೊಂಡು ಇದನ್ನು ಹಜರತ್ ಇಮಾಮ್ ಹುಸ್ಸೈನ್ ಮತ್ತು ಅವರ ಕುಟುಂಬಸ್ಥರ ಕೈಗಳು ಎಂದು ನಾವು ಪೂಜಿಸಬಹುದೋ? ಶವವನ್ನು ಹೊತ್ತುಕೊಂಡು ಹೋಗುವ ಮಂಚವಾದ ತಾಬೂತ್‌ಗಳ ಹಾಗೆಯೇ ನಮ್ಮ ಶವಗಳನ್ನು ಹೊತ್ತುಕೊಂಡು ಹೋಗುವ ಜನಾಜಾನ ಮಂಚ ಇದೆಯೋ? ಈ ತಾಬೂತ್‌ಗಳು ಮದುವೆಗೆ ಹೆಣ್ಣುಗಂಡುಗಳನ್ನು ಅಲಂಕರಿಸಿ ಕುಳ್ಳಿರಿಸುವಂಥ ಮಂಟಪದ ಹಾಗೆ ಇಲ್ಲವೋ? ಜೈಯಾದನು ಇವರ ತಲೆಯನ್ನು ಕತ್ತರಿಸಿ ತನ್ನ ಜಯದ ಸಂತೋಷಕ್ಕಾಗಿ ಮೆರವಣಿಗೆ ಮಾಡಿಸಿದ ಹಾಗೆ ಒಂದು ಬಿದಿರಿಗೆ ನಿಂಬೆ ಹಣ್ಣನ್ನು ಚುಚ್ಚಿಕೊಂಡು ನೇಜಯೆಂದು ಮೆರವಣಿಗೆ ಮಾಡುವುದು ನ್ಯಾಯವೋ? ಹಜರತ್ ಇಮಾಮ್ ಹುಸ್ಸೈನ್‌ರವರು ತಮ್ಮ ಭದ್ರತೆಗೆ ಸುತ್ತು ಬೆಂಕಿ ಹಾಕಿಕೊಂಡಿದ್ದರು. ಇದರ ಬದಲಿಗೆ ಆವಾವ ಮಾಡಿಕೊಂಡು ಅದರಲ್ಲಿ ಬೆಂಕಿ ಹಾಕಿಸುತ್ತಿರುಗುತ್ತಾ ಶವಗಳ ಪೂಜಾರಿಗೆ ಪದರೂಪದಲ್ಲಿ ಶ್ರೇಷ್ಠವಾದ ಬೈಗಳನ್ನು ಬೈಯುವುದು ಇದು ಇಸ್ಲಾಂ ಮತದ ಧರ್ಮವೋ? ವೇಷಗಳನ್ನು ಹಾಕಿಕೊಂಡು ಅವಹೇಳನಗಳನ್ನು ಮಾಡುವುದು ಮತಕ್ಕೆ, ನಾಗರೀಕತನಕ್ಕೆ ಸಹಜವೋ? ಇವು ಪೈಶಾಚಿಕ ಕಾರ್ಯಗಳಲ್ಲವೋ? ಮುಸ್ಲಿಂ ಸಹೋದರರೇ, ಸತ್ಯ, ನ್ಯಾಯ ಮತ್ತು ಮತಧರ್ಮಕ್ಕೆ ಸರಿಯಾಗಿ ಹೇಳಿರಿ. ಇಸ್ಲಾಂ ಮತವು ಇಂಥಾ ಬೋಧನೆಯನ್ನು ನಮಗೆ ಕೊಡುತ್ತದೋ? ೧೧ನೇ ಕುರಾನಿನ ಭಾಗದಲ್ಲಿ ಜಲ್ಲಜಿನಲ್ಲಿ ದೇವರು ಹೀಗೆಂದು ಅಪ್ಪಣೆ ಮಾಡುತ್ತಾನೆ:

ಕುರಾನಿನ ಹೇಳಿಕೆ

‘ಮುಸಲ್ಮಾನರೇ ಖಂಡಿತವಾಗಿ ಸಾರಾಯಿ, ಮತ್ತು ಜೂಜು ಮತ್ತು ಕೈಯಿಂದ ಮಾಡಿದಂಥ ವಸ್ತುಗಳನ್ನು ಪೂಜಿಸುವಂಥಾದ್ದು ಯಾವ ಕೆಲಸಕ್ಕಾಗಲೀ ಯಾವಲ್ಲಿಯಾದರೂ ಹೋಗಬೇಕಾದರೆ ಒಳ್ಳೆ ಸಮಯ ಕೆಟ್ಟ ಸಮಯವೆಂದು ಕಣಿ ನೋಡುವಂಥಾದ್ದು ಇವುಗಳೆಲ್ಲಾ ಪೈಶಾಚಿಕ ಕಾರ್ಯಗಳಾಗಿವೆ. ನೀವು ಇಂಥ ಕಾರ್ಯಗಳನ್ನು ಮಾಡಬೇಡಿ; ಹೀಗಾದರೆ ನಾನು ನಿಮ್ಮನ್ನು ತೇರ್ಗಡೆಪಡಿಸುತ್ತೇನೆ’ ಹೀಗೆಂದು ದೇವರ ಅಪ್ಪಣೆ ಇರುವಾಗ ಮುಸಲ್ಮಾನರು ಈ ಮೋಹರಂನಲ್ಲಿ ನಡೆಸುವಂಥ ಕಾರ್ಯವು ಶುದ್ಧ ಇಸ್ಲಾಂ ಮತಕ್ಕೆ ವಿರೋಧವಾದ ಶೈತಾನ್ ಚೇಷ್ಟೆಯಾಗಿದೆ. ಮತ್ತು ಮಸೀದಿಗಳಲ್ಲಿ ಮೋಹರಂ ೧೦ ದಿನಗಳು ಸಹ ಈ ಎಲ್ಲಾ ವಿಷಯವಾಗಿ ಉಪನ್ಯಾಸ ಹೇಳಬೇಕು ಮತ್ತು ವಿಧವೆಯರಿಗೆ, ಅನಾಥ ಮಕ್ಕಳಿಗೆ ಮತ್ತು ವಿದ್ಯೆಗೆ ದಾನಧರ್ಮ ಮಾಡುವಂತೆ ಬೋಧಿಸಬೇಕು. ಮೋಹರಂ ಸೈತಾನಿಕ ಕಾರ್ಯಗಳನ್ನು ಮಾಡುವಂಥವರ ಸಂಗಡ ಸೇರದಂತೆ ಮಾಡಬೇಕಾಗಿ ಮುಸ್ಲಿಂ ಸಹೋದರರಲ್ಲಿ ಬಹು ವಿನಯದಿಂದ ನಾನು ಅರಿಕೆಮಾಡಿಕೊಳ್ಳುತ್ತೇನೆ.

ನಿಲ್ಲಿಸಬೇಕು

ಮುಸಲ್ಮಾನರಲ್ಲಿ ಕೆಲವು ಹಣವಂತರು ಮತ್ತು ವ್ಯಾಪಾರಸ್ಥರು ಮೋಹರಂ ಹಬ್ಬವೆಂದು ವೇಷ ನಟನೆಗಳನ್ನು ಹಾಕಿಕೊಂಡು ಬಂದವರಿಗೆ ಹಣ ಕೊಡುತ್ತಾರೆ. ಇದನ್ನು ಸಂಪೂರ್ಣ ನಿಲ್ಲಿಸಬೇಕು. ಇಂಥಾ ಹಣ ಸಹಾಯವು ಸೇಂದಿ ಅಂಗಡಿಗಳಿಗೆ ಹೋಗುತ್ತದೆ. ವಿನಾ ಇದರಿಂದ ಸ್ವಲ್ಪವಾದರೂ ಪುಣ್ಯ ಉಂಟಾಗುವುದಿಲ್ಲ.

‘ಭಗವಂತನು, ಹಜರತ್ ಇಮಾಮ್ ಹುಸ್ಸೈನ್‌ರವರಂತೆ ತಮ್ಮ ಮತಕ್ಕಾಗಿ ಮತ್ತು ದೇಶಕ್ಕಾಗಿ ಧೈರ್ಯದಿಂದ ತಮ್ಮ ಇಡೀ ಕುಟುಂಬದೊಡನೆ ಈ ಭೂಲೋಕದ ಬಾಳಿಕೆಯ ವಿಷಯ ಏನೂ ಯೋಚಿಸದೆ ದೇವರ ಹೆಸರಿನಲ್ಲಿ ಜೀವ ಕೊಟ್ಟಂತೆ ಪ್ರತಿ ಮುಸಲ್ಮಾನನಿಗೂ, ದೇಶಿಯರಿಗೂ ಬುದ್ಧಿಯನ್ನು ಮತ್ತು ಮನಸ್ಸನ್ನು ದಯಪಾಲಿಸಲೆಂದು ಭಯಭಕ್ತಿಯಿಂದ ಪ್ರಾರ್ಥಿಸುತ್ತೇನೆ.

THE

BANK OF MANGALORE LTD.,

H. O. MANGALORE

ESTD. 1931

Branches:-

Moodabidri & Padubidri.

NOTICE

On and from 1st January 1941 the following are the revised rates of interest on deposits:

FIXED DEPOSITS:

For 2 years or over	...	5½%
„ 1 „	...	4½%
„ 6 months	...	3½%
„ 3 months	...	3

Interest Payable Quarterly.

SAVINGS BANK DEPOSITS:

On daily balances on balances over Rs. 5-0-0 in multiples of Rs. 5-0-0 @ 3%

All kinds of banking business transacted

★ ಸಿನೆಮಾ ಪುಟ ★

ಬಂಧನ್ ಇಪ್ಪತ್ತೈದನೆಯ ವಾರದಲ್ಲಿ

ಲೀಲಾಚಿಟ್ನಿಸ್, ಅಶೋಕ ಕುಮಾರ್ ಪತ್ತು ಸುರೇಶರ ಅಭಿನಯದಿಂದ ಕೂಡಿದ, ಬೊಂಬೇ ಟಾಕೀಸಿನವರ 'ಬಂಧನ' ಚಿತ್ರವು ೨೫ನೆಯ ವಾರ ಈಗ ಬೊಂಬಯಿಯ ರೋಕ್ಸಿ ಸಿನೆಮಾದಲ್ಲಿ ಪ್ರದರ್ಶಿತವಾಗುತ್ತಿದೆ. ಇದರಿಂದ ೧೯೪೦ರ ಚಿತ್ರಗಳಲ್ಲಿ ಬಂಧನವು ಅತ್ಯಂತ ಜಯಶೀಲವಾದ ಚಿತ್ರವೆಂದು ತಿಳಿಕೊಳ್ಳಲು ಯಾತರ ಅಡ್ಡಿಯೂ ಇರುವುದಿಲ್ಲ.

'ಸ್ವಾಮಿ' ಚಿತ್ರದ ತಯಾರಿಕೆ—

ನಿರ್ದೇಶಕ ಕರ್ದಾರರು ಜನವರಿ ೨೩ರಂದು ಸಿರ್ಕೋ ಸ್ಟುಡಿಯೋದಲ್ಲಿ, ಅವರ ಮುಂದಿನ ಚಿತ್ರವಾದ 'ಸ್ವಾಮಿ'ಯ ಪ್ರಾರಂಭ ಕಾರ್ಯವನ್ನು ಆಚರಿಸಿದರು. ವಾಡಿಯಾದ ಪ್ರಸಿದ್ಧ ನಟಿ, ರಾಧಾರಾಣಿಯು ಇದರಲ್ಲಿ ಪ್ರಮುಖ ಪಾತ್ರವಹಿಸುವಳೆಂಬ ಸುದ್ದಿಯಿದೆ.

ಮಹಾತ್ಮಾ ಅಲೆಕ್ಸಾಂಡರ್

ಮಿನೆರ್ವಾ ಮುವಿಟೋನಿನವರ ಮಹಾತ್ಮಾ ಅಲೆಕ್ಸಾಂಡರ್ ಚಿತ್ರವು ಬಹಳ ಯಶಸ್ವಿಯಾಗಿ ಪ್ರದರ್ಶಿತವಾಗುತ್ತಿದೆ.

ದೇವಕಿ ಬೋಸರ ಚಿತ್ರ

ಶಕುಂತಲಾ ಚಿತ್ರದ ಬದಲು, ನಿರ್ದೇಶಕ ದೇವಕಿಬೋಸರು 'ಹೋಮ್ ಕಾಲ್ಸ್' ಎಂಬ ಚಿತ್ರವನ್ನು ಬೇಗನೇ ತಯಾರಿಸಲು ಪ್ರಾರಂಭ ಮಾಡುವರೆಂದು ಅಧಿಕೃತ ವಾರ್ತೆಯಿದೆ. ಫೆಬ್ರವರಿ ಅಂತ್ಯದಲ್ಲಿ ಇದರ ಕಾರ್ಯವು ಪ್ರಾರಂಭವಾಗಲಿರುವುದಂತೆ. ಹಿಂದೀ ಮತ್ತು ಮರಾಠೀ ದ್ವಿಭಾಷೆಗಳಲ್ಲಿ ಇದರ ರಚನೆಯಾಗಲಿರುವುದೆಂದೂ ತಿಳಿದು ಬರುತ್ತದೆ.

ಕವಿಕಾಳಿದಾಸ

ಬೊಂಬಯಿಯ ಶ್ರೀ ವಿಷ್ಣು ಸಿನೆಟೋನಿನವರು ಭಾರತದ ಪ್ರಸಿದ್ಧ ಕವಿಯಾದ ಕಾಳಿದಾಸನ ಜೀವನ ಚಿತ್ರವೊಂದನ್ನು ತಯಾರಿಸಲಿರುವರು. ಅದರ ಪ್ರಾಥಮಿಕ ಸಿದ್ಧತೆಗಳು ಆಗಿರುತ್ತವೆ.

ಕ್ಲೊಪಾತ್ರ

ನಾಸೀಮ್ ಮತ್ತು ಚಂದ್ರಮೋಹನರ ಅಭಿನಯದಿಂದ ಕೂಡ ಕ್ಲೊಪಾತ್ರ ಚಿತ್ರವು ಬೇಗನೇ ಪ್ರಾರಂಭವಾಗುವುದು. 'ಪುಕಾರ್' ಕಥೆಯನ್ನು ಬರೆದ ಕಮಲ್ ಅಮ್ರೋಹಿಯವರು ಇದರ ಸಂಭಾಷಣೆ ಮತ್ತು ಹಾಡುಗಳನ್ನು ರಚಿಸುತ್ತಿದ್ದಾರೆ.

ಜಂಗೇ ಅಜಾದಿ

ಚಂದ್ರಆರ್ಟ ಪಿಕ್ಚರ್ಸಿನವರ ಜಂಗೇ ಆಜಾದಿ ಚಿತ್ರವು (ಆರ್ಥ್ಯಚಕ್ರ) ಪ್ರದರ್ಶನಕ್ಕೆ ಆರಂಭವಾಗಿದೆ. ಊರ್ಮಿಳಾ, ಶಹಾನವಾಜ್ ಮತ್ತು ಬಾಬುರಾವ್ ಇವರು ಇದರಲ್ಲಿ ಅಭಿನಯಿಸುತ್ತಾರೆ. ಹಾಸ್ಯ, ವೀರ ಅದ್ಭುತ ರಸಗಳಿಂದ ಈ ಚಿತ್ರವು ಅತ್ಯಂತ ಮೋಹಕವಾಗಿರುವುದಾಗಿ ತಿಳಿಯುತ್ತದೆ.

ಬೊಂಬೇ ಟಾಕಿಸ್ ಡಿಸ್ಟ್ರಿಬ್ಯೂಶನ್ ಕಚೇರಿ

ಬೊಂಬೇ ಟಾಕೀಸಿನವರು ತಮ್ಮ ಸ್ವಂತ ಡಿಸ್ಟ್ರಿಬ್ಯೂಶನ್ ಆಫೀಸನ್ನು ತೆರೆಯುವರೆಂದು ಅಧಿಕೃತ ಸುದ್ದಿಯಿದೆ. ಬೊಂಬಯಿ, ಡಿಲ್ಲಿ, ಮತ್ತು ಲಾಹೋರುಗಳಲ್ಲಿ ತೆರೆಯುವರಂತೆ. ರಾಯಲ್ ಫಿಲ್ಮ್ ಸರ್ಕಿಟ್ ಮತ್ತು ಜನರಲ್ ಟಾಕೀಸಿನವರ ಈಗಿನ ಅವಧಿ ಮುಗಿದ ಕೂಡಲೇ ಅವರು ತೆರೆಯುವರಂತೆ.

ರಾಧಿಕಾ, ನೇಶನಲ್ ಚಿತ್ರ

ನಿರ್ದೇಶಕ ವೀರೇಂದ್ರ ದೇಸಾಯಿಯವರು ಧಾರ್ಮಿಕ ಸ್ವರೂಪವುಳ್ಳ 'ರಾಧಿಕಾ' ಎಂಬ ಚಿತ್ರವನ್ನು ನೇಶನಲ್ ಚಿತ್ರ ಕಂಪನಿಯವರ ಸಲುವಾಗಿ ತಯಾರಿಸಲಿರುವರೆಂದು ತಿಳಿಯುತ್ತೇವೆ.

ಉಲ್ಟಿಗಂಗಾ-ವಿಚಿತ್ರಹೆಸರು

ಈ ಹೆಸರಿನ ಹಾಸ್ಯಮಯ ಚಿತ್ರವನ್ನು ಮಿನೆರ್ವಾ ಮುವಿಟೋನಿನವರು ತಯಾರಿಸಿರುವರು.

ಪ್ರಥಮ ಸ್ತ್ರೀಪ್ರಚಾರಗಾರ್ತಿ

ಆಶಾ ಪಿಕ್ಚರ್ಸಿನವರು ಶ್ರೀಮತಿ ಜ್ಯೋತಿ ಇವಳನ್ನು ತಮ್ಮ ಫಿಲ್ಮ್ ಪ್ರಚಾರಗಾರ್ತಿಯಾಗಿ ನೇಮಿಸಿರುವರು. ಇವಳು ಭಾರತದ ಪ್ರಥಮ ಸ್ತ್ರೀಪ್ರಚಾರಗಾರ್ತಿ. ಈಕೆ ಮೊದಲು ಆಲ್ ಇಂಡಿಯಾ ರೇಡಿಯೋದ ಸುದ್ದಿ ಖಾತೆಯಲ್ಲಿ ಕೆಲಸಮಾಡುತ್ತಿದ್ದಳು. ಬೊಂಬಯಿ ವಿಶ್ವವಿದ್ಯಾಲಯದ ಗ್ರ್ಯಾಜ್ಯುವೇಟ್ ಈಕೆ. ಕೆಲ ಸಮಯಗಳ ವರೆಗೆ ಅಧ್ಯಾಪಕಿಯಾಗಿದ್ದಳು. ವಿಲಾಯತಿ ಪ್ರವಾಸ ಮಾಡಿ ಹೆಚ್ಚಿನ ಶಿಕ್ಷಣ ಪಡೆದವಳು.

ಕುಮಾರಿ ವಹಿದನಳು ಬದುಕಿರುವಳು!

ಕುಮಾರಿ ವಹಿದನಳೆಂಬ ನಟಿ ಸತ್ತುಹೋದಳೆಂದು ಹಿಂದೆ ಪ್ರಸಿದ್ಧವಾಗಿತ್ತಷ್ಟೆ? ಇದು ಸರಿಯಲ್ಲವೆಂದು ಬೊಂಬಯಿಯ 'ಸ್ಕ್ರೀನ್' ಪತ್ರಿಕೆ ಬರೆಯುತ್ತದೆ. ಆಕೆ ಜೀವಂತಳಾಗಿಯೇ ಇರುವಳೆಂದು ಅವಳ ಸೋದರಿ ಜ್ಯೋತಿಯು ತಿಳಿಸುತ್ತಾಳೆಂದೂ ಅದರಲ್ಲಿ ಪ್ರಕಟವಾಗಿದೆ. ಬಿಡ್ಡು ಸುದ್ದಿಯಿಂದ ಸತ್ತ ವಹಿದನಳು, ಹಿರಿಯರ ಹೇಳಿಕೆಯಂತೆ ಮುಂದೆ ಶತಾಯು ಪರ್ಯಂತ ಬದುಕುವಳು!

ಛಾಯಾ

ನಾರಾಯಣ ಎಂಡ್ ಕಂಪನಿಯವರ ಮುಂದಿನ ಚಿತ್ರದ ಹೆಸರು 'ಛಾಯಾ' ಎಂದಿರುತ್ತದೆಂದು ಸುದ್ದಿ ಇದೆ.

ಹುಣ್ಣುಗಳನ್ನು ಶೀಘ್ರವಾಗಿ ನಾಶಪಡಿಸಿ

ಅತ್ಯಂತ ಬೇನೆಯ ಹುಣ್ಣು ಮತ್ತು ಚರ್ಮದ ನ್ಯೂನತೆಗಳನ್ನು ಶೀಘ್ರವಾದ ಸುಲಭ ರೀತಿಯಲ್ಲಿ ನಾಶಮಾಡಿರಿ. ಕುರು ಯಾ ಹುಣ್ಣನ್ನು ಬಿಸಿನೀರು ಮತ್ತು ಕುಟಿಕೂರಾ ಸಾಬೂನಿನಿಂದ (cuticura soap) ಚೆನ್ನಾಗಿ ತೊಳೆಯಿರಿ. ನಂತರ ಕುಟಿಕೂರಾ ಮುಲಾಮನ್ನು (cuticura ointment) ಚೆನ್ನಾಗಿ ಅದರ ಮೇಲೆ ಸವರಿ ಬಿಡಿರಿ. ಇದು ಕುರುಹುಣ್ಣು, ಮುದ್ದಣ ಕಾಣಿಸಿಕೊಂಡು ಮುಂತಾದ ಭಯಂಕರ ವ್ರಣಗಳಿಗೂ ಗುಣಕಾರಿಯಾದ ಚಿಕಿತ್ಸೆಯಾಗಿದೆ. ಕುಟಿಕೂರಾ ಮುಲಾಮು (cuticura ointment) ಚರ್ಮವ್ಯಾಧಿಯ ಮೂಲವನ್ನೇ ಹೊಕ್ಕು ಶೀಘ್ರವಾಗಿ ನೋವನ್ನೂ ಬಾತುವಿಕೆಯನ್ನೂ ಗುಣವಾಡುತ್ತದೆ.

ಕುಟಿಕೂರಾ ಮುಲಾಮು (cuticura ointment) ಸಿಡುಬು ಬೀಜದ ಕ್ರಿಮಿಗಳನ್ನು ತಡೆಯುವುದು. ಅದುದರಿಂದ ಕೊಳೆತು ವಿಷಕಾರಿಯಾಗಿ ಪರಿಣಮಿಸದಂತೆ ಇದು ಹುಂಡಿಕ ರಕ್ಷಿಸುವುದು. ರಕ್ಷಣೆಯ ಸಲುವಾಗಿ ಒಂದು ಟಿನ್ನು (cuticura) ಮುಲಾಮನ್ನು ಇಟ್ಟುಕೊಳ್ಳಿರಿ. ಕುಟಿಕೂರಾ (cuticura) ಇತರೆ ಔಷಧಗಳಿಂದ ಗುಣಪಡಿಸಲಾಗದಂಥ ಚರ್ಮವ್ಯಾಧಿಗಳನ್ನು ನಾಶಪಡಿಸುತ್ತದೆ. ಒಂದು ವರ್ಷಕಾಲದಿಂದಿರುವ ಚರ್ಮವ್ಯಾಧಿಯನ್ನು ಒಂದೇ ಟಿನ್ನು ಮುಲಾಮು ಗುಣಪಡಿಸುತ್ತದೆ.

ಕುಟಿಕೂರಾ ಮುಲಾಮನ್ನು (cuticura ointment) ಗಜ್ಜಿ, ಕುರು, ವ್ರಣ, ಹುಣ್ಣು, ಮುದ್ದಣ, ವಿಷಕಾರಿಗಾಯ, ಉರಿ ಮುಂತಾದ ಎಲ್ಲಾ ಚರ್ಮರೋಗಗಳನ್ನು ಗುಣಪಡಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮು
Cuticura Ointmen

ESTD. 1906.

CANARA BANK LIMITED.

ANNOUCEMENT.

On and after February, 1941 Fixed Deposits will be accepted at the following rates

3, 4 & 5 months	2½%
6, 7 & 8 months	2¾%
9, 10 & 11 months	2¾%
12 months*	3%
24 months	3½%

THE PIE-MONEY BANK LTD.,
Maidan Road, MANGALORE.
Undertakes all kinds of Banking Business. Current Account at 2½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public.
Apply for particulars
K. R. GURU, *Managing Director.*

ಮಹಿಳಾಲೋಕ:

'ಗೃಹಲಕ್ಷ್ಮಿಯಾಗು-ತಾಯೇ!'

ಭಾರತ ಮಹಿಳಾ ಧರ್ಮ

ವಧುವಿಗೆ-ಸರೋಜಿನಿ ದೇವಿಯ ಸಂದೇಶ

ವಿಜಯನಗರದ ಮಹಾರಾಜ ಕುಮಾರಿ ವನಲಕ್ಷ್ಮಿ ದೇವಿಗೆ ಆಕೆಯ ವಿವಾಹ ಕಾಲದಲ್ಲಿ ಒಂದು ಸಂದೇಶವನ್ನು ಕೊಟ್ಟು ಕಳುಹಿಸುತ್ತಾ ಅದರಲ್ಲಿ ಆದರ್ಶ ಹಿಂದೂ ಮಹಿಳೆಯ ಧರ್ಮದ ಕುರಿತು ಸರೋಜಿನಿ ದೇವಿ ಹೀಗೆಂದು ಉಪದೇಶಿಸುತ್ತಾರೆ.

'ನಾನು ನಿನಗೆ ನಿನ್ನ ಮದುವೆಯ ಮಂಗಳ ಕಾಲದಲ್ಲಿ ಈ ಆಶೀರ್ವಾದಗಳನ್ನು ಕಳುಹಿಸುತ್ತೇನೆ. ನೀನು ಗುಣವತಿಯರಾದ ಪುಣ್ಯವತಿಯರಾದ ಅಭಿಮಾನವತಿಯರಾದ ಆರ್ಯಮಹಿಳೆಯರಂತೆ ಆದರ್ಶಳಾಗಿ ಬಾಳಮ್ಮಾ. ನಿನ್ನ ನವಗೃಹಕ್ಕೆ ನೀನು ಭಾಗ್ಯಲಕ್ಷ್ಮಿಯಾಗು ತಾಯೇ! ಎಲ್ಲಾ ವಿಧದ ಸೇವೆಯಲ್ಲಿ ನೀನು ಸರಸ್ವತಿಯಾಗು 'ಮಗಳೇ, ಮಾನವಲೋಕದ ಕಡೆಗೆ ನಿನ್ನ ದಯಾದೃಷ್ಟಿ ಪಾರ್ವತಿಯಂತೆ ಇರಲಮ್ಮಾ— ಇದಕ್ಕಿಂತ ಹೆಚ್ಚು ನಿನ್ನ ಬಗೆಗೆ ನಾನೇನನ್ನು ಹೇಳಲಿ?

'ನಿನ್ನೆ ಮೊನ್ನೆ ನಾನು ನಿನ್ನನ್ನು ಕಂಡಾಗ ಸಣ್ಣ ಬಾಲಿಕೆಯಾಗಿದ್ದೆ. ಮುದ್ದಾದ ಹುಡುಗಿಯಾಗಿದ್ದೆ; ಲಂಬಿತವಾದ ದೀರ್ಘ ಕೇಶರಾಶಿಯಿಂದ ಕೂಡಿದ ಕುಮಾರಿಯಾಗಿದ್ದೆ. ಆದರೆ ಈ ಕೆಲವೇ ದಿನಗಳಲ್ಲಿ ನೀನಿಂದು ವಧುವಾಗಿರುವೆ ಹೊಸ ಜೀವನದ ಹೊಸ್ತಿಲಿಗೆ ಕಾಲಿಟ್ಟಿರುವೆ. ಬಾಳುವೆಯ ಹೊಸತನದಲ್ಲಿ ಹೊಸ ಹೊಣೆಗಾರಿಕೆ ನಿನ್ನ ಮೇಲೆ ಬರಲಿದೆಯೆಂಬುದು ನಿನಗೆ ತಿಳಿದಿರಲಿ'

"ಭಾರತಿ ಸ್ವತಂತ್ರಳಾಗುವಳು"

ಶ್ರೀಮತಿ ಅಸಫ್ ಆಲಿಯವರ ಮಾತು

'ಸ್ವಾತಂತ್ರ್ಯದ ಹಾದಿಯಲ್ಲಿ ಎಷ್ಟೊಂದು ವಿಘ್ನಗಳು ತಂದೊಡ್ಡಲ್ಪಟ್ಟರೂ, ಭಾರತಿಯು ಸ್ವತಂತ್ರಳಾಗಲೇ ಬೇಕು. ಕಾಂಗ್ರೆಸ್ಸು ಯಾವ ದೇಶದ ಸ್ವಾತಂತ್ರ್ಯದ ಸಲುವಾಗಿ ಹೋರಾಡುತ್ತದೋ, ಆ ಸ್ವಾತಂತ್ರ್ಯವೊಂದೇ ದೇಶದ ಆರ್ಥಿಕ ಸಾಮಾಜಿಕ ರಾಜಕೀಯ ರೋಗಗಳಿಗೆ ನಿಜವಾದ ಮತ್ತು ಖಂಡಿತವಾದ ಪರಿಣಾಮಕಾರಿಯಾದ ಔಷಧಿಯಾಗಿದೆ' ಹೀಗೆಂದು ಲಾಹೋರಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಶ್ರೀಮತಿ ಅಸಫ್ ಆಲಿಯವರು ಭಾಷಣವಿತ್ತರು.

ವಿದ್ಯಾರ್ಥಿನಿಯ ಮೇಲೆ ಬಲಾತ್ಕಾರಕ್ಕಾಗಿ

ಏಳು ವರ್ಷಗಳ ಸಶ್ರಮ ಶಿಕ್ಷೆ

ಲಾಹೋರಿನ ಮ್ಯಾಜಿಸ್ಟ್ರೇಟರು ಮಹಮದ್ ದಿನ್ ಎಂಬ ಒಬ್ಬ ಬದ್ಮಾಷನು ಶಾಲೆಯಿಂದ ಮರಳಿ ಬರುತ್ತಿರುವ ಹದಿಮೂರು ವರ್ಷ ಪ್ರಾಯದ ವಿದ್ಯಾರ್ಥಿನಿಯೊಬ್ಬಳನ್ನು ಹಿಡಿದು ದಾರಿಯಲ್ಲಿ ಬಲಾತ್ಕರಿಸಿದನೆಂಬ ತಪ್ಪಿಗೆ ಏಳು ವರ್ಷಗಳ ಕಠಿಣ ಶಿಕ್ಷೆಯ ತೀರ್ಮಾನವನ್ನು ಕೊಡುತ್ತಾ ಹೀಗೆಂದು ಬರೆದಿರುವರು.

'ಒಬ್ಬ ನಿರ್ಮಲ ಮನಸ್ಸಿನ ಬಾಲಿಕೆಯು ಶಾಲೆಯಿಂದ ಮರಳಿ ಬರುತ್ತಿರುವಾಗ ಕ್ರೂರ ಬದಮಾಶನೊಬ್ಬನು ಅವಳನ್ನು ತನ್ನ ಪಶುತೃಪ್ತಿಯ ಸಲುವಾಗಿ ಬಲಾತ್ಕರಿಸಿದ ಈ ವಿಷಯವು ಬಹಳ ದುಃಖ ಮತ್ತು ನಾಚಿಕೆಯ ಸಂಗತಿಯಾಗಿದೆ. ಇತ್ತೀಚೆಗೆ ಇಂತಹ ಘಟನೆಗಳು ಅಲ್ಲಲ್ಲಿ ಹಲವು ಕೇಳಬರುತ್ತವೆ. ಸರಕಾರವು ಇಂತಹ ವಿಷಯಗಳ ಕಡೆಗೆ ತೀವ್ರ ಗಮನ ಕೊಟ್ಟು ಈ ತರದ ಅನ್ಯಾಯವನ್ನು ಸಮೂಲ ಕಿತ್ತುಹಾಕಬೇಕು. ಈ ತೆರದ ಸುದ್ದಿಗಳನ್ನು ಅನ್ಯಾಯ ಹೊಂದಿದ ಹುಡುಗಿಯರ ಹೆತ್ತವರಾದರೂ ತಮ್ಮ ಹುಡುಗಿಯರ ಹೆಸರು ಹಾಳಾಗುತ್ತದೆಯೆಂಬ ಕಾರಣದಿಂದ ಸರಕಾರಕ್ಕೆ ತಿಳಿಸಲು ಸಂಕೋಚಪಡುತ್ತಾರೆ. ಹಾಗಾಗಿ ಅನ್ಯಾಯವು ಶಿಕ್ಷಿಸಲ್ಪಡದೇ ಹೋಗುವುದು. ಇಂತಹ ಅಪರಾಧಿಗೆ ಏಳು ವರ್ಷಗಳ ಸಶ್ರಮ ಶಿಕ್ಷೆಯೂ ಬಹಳ ಕಡಿಮೆಯೇ ಆಯಿತೆಂದು ನಾನು ತಿಳಿಯುತ್ತೇನೆ.'

೧೦೫ನೇ ವರ್ಷದಲ್ಲಿ ೫ನೇ ವಿವಾಹ

ಯುರೋಪಿನ ಅತಿ ವೃದ್ಧ ಸ್ತ್ರೀಯರಲ್ಲೊಬ್ಬಳಾದ ಮಗ್ದಲೀನ್ ಎಂಬುವಳು ೪ ವಿವಾಹವಾಗಿ ೪ ಮಂದಿ ಗಂಡಂದಿರನ್ನೂ ಕಳೆದುಕೊಂಡಿರುವಳು. ಈಗ ಇತ್ತಲಾಗಿ ತನ್ನ ೧೦೫ನೇ ವರ್ಷಪ್ರಾಯದಲ್ಲಿ ೫ನೇ ಸಲ ಮದುವೆಯಾಗಲು ವರ ದೊರೆತುದೇ ಮತ್ತೊಂದು ವಿಚಿತ್ರವೇ ಸರಿ [illegible] ಹಣವಿರಬೇಕು

ಸರ್ ಪಿ. ಸಿ. ರೇ

ವೈಜ್ಞಾನಿಕ-ಶೋಧನಗಳಿಗಾಗಿ ಮೆಡಲ್

ಆಚಾರ್ಯ ಸರ್. ಪಿ. ಸಿ. ರೇಯವರಿಗೆ ಬಂಗಾಳದ ರಾಯಲ್ ಏಷಯಾಟಿಕ್ ಸೊಸೈಟಿಯವರು ಸರ್ ವಿಲಿಯಂ ಜೋನ್ಸ್ ಮೆಮೋರಿಯಲ್ ಮೆಡಲನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ. ಸರ್ ಪಿ. ಸಿ. ರೇಯವರು ನಡೆಸಿದ ವೈಜ್ಞಾನಿಕ ಶೋಧನೆಗಳ ಮಹತ್ವದ ಮೆಚ್ಚುಗೆಗಾಗಿ ಈ ಬಹುಮಾನವನ್ನು ಕೊಡಲಾಗಿದೆ.





ಈಗ— ಉಲ್ಲಾಸಿತ ಆಫೀಸು ಕೆಲಸಗಾರ—ಆರೋಗ್ಯವಂತ ಮತ್ತು ಕೆಲಸದಲ್ಲಿ ಸಮರ್ಥ—ಯಾಕಂದರೆ ಆತನ ಅಂತರಂಗವು ನೈರ್ಮಲ್ಯವಾಗಿದೆ.

ಹೊಟ್ಟೆಯ ಅಸ್ವಸ್ಥತೆ, ಪಿತ್ಥಬಾಧೆ ಮತ್ತು ಮಲಬದ್ಧತೆಯ ಬಾಧೆಗಳಿಗೆ ಒಂದು ಗ್ಲಾಸು ನೊರೆ ಬರುವ ಗುಣವುಳ್ಳ ತಂಪಾದ ಎಂಡ್ರೂಸ್ ಲಿವರ್ ಸೋಲ್ಟಿನಷ್ಟು ಉತ್ತಮವಾದ್ದು ಬೇರಾವುದೂ ಇಲ್ಲ. ಇದು ನಿಮ್ಮ ದೇಹದ ಒಳಭಾಗವನ್ನು ನೈರ್ಮಲ್ಯಗೊಳಿಸುತ್ತದೆ—ನಿಮ್ಮ ಅಸ್ವಸ್ಥತೆಗೆ ಕಾರಣವಾದ ಮಲೀನತೆಯನ್ನು ನಾಶಮಾಡುತ್ತದೆ. ಅಂತರಂಗ ನೈರ್ಮಲ್ಯವೇ ಆರೋಗ್ಯದ ಪ್ರಥಮಸೂತ್ರ. ಎಂಡ್ರೂಸ್ ಲಿವರ್ ಸೋಲ್ಟ್ ಅಂತರಂಗವನ್ನು ನೈರ್ಮಲ್ಯಗೊಳಿಸುತ್ತದೆ. ನಾಲಿಗೆಯನ್ನೂ ಬಾಯಿಯನ್ನೂ ಸ್ವಚ್ಛಗೊಳಿಸುತ್ತದೆ. ಯಕೃತ್ತನ್ನು ಸರಿಗೊಳಿಸುತ್ತದೆ ಮತ್ತು ಹೊಟ್ಟೆಯನ್ನು ನಿಧಾನವಾಗಿ ಪೂರ್ಣ ನೈರ್ಮಲ್ಯಗೊಳಿಸುತ್ತದೆ. ಎಂಡ್ರೂಸ್ ಸದಾಕಾಲ ಅಭ್ಯಾಸವಾಗುವಂತಿಲ್ಲ.

ಅಂತರಂಗ ನೈರ್ಮಲ್ಯಕ್ಕೆ ಕ್ರಮವಾಗಿ ಸೇವಿಸಿರಿ

ANDREWS LIVER SALT

ಆರೋಗ್ಯಪಾನೀಯ ಮತ್ತು ವಿರೋಚಕ ಟಾನಿಕು ನೈರ್ಮಲ್ಯಗೊಳಿಸುತ್ತದೆ—ತಂಪನ್ನೀಯುತ್ತದೆ—ಚಣಪಾರಿಸುತ್ತದೆ—ಚೇತನಗೊಳಿಸುತ್ತದೆ

ಸ.ಸೈ. 11 ಆ.

ದೊಡ್ಡ ಸೈಜು 1-1-0

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆತ್ಮಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. [illegible] ಪೂರ್ಣ ವಿಚಾರಮಾಡಿ ಔಷಧ [illegible] ಸರ್ಟಿಫಿಕೆಟು_ಡಾ. ವೈದ್ಯ ಎಲ್. ಸಿ. ಪಿ. ಎಸ್ [illegible] ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ. ಚೂರ್ಣ ಗುಣಕಾರಿ ತಪ್ಪಿಲ್ಲ ಕ್ರಯ ೪-೦-೦

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮುರಡ್ S. M. C.

ನೋಟಗಳು....!

ಮುಂದಿನ ಕೆಲವು ವಾರಗಳಲ್ಲಿ ಯೂರೋಪಿನ ಯುದ್ಧವು ಬಹಳ ಭಯಂಕರ ಪರಿಸ್ಥಿತಿಯನ್ನು ಹೊಂದುವುದೇ ಎಂಬ ಸೂಚನೆಗಳು ತೋರಿಬರುತ್ತಿವೆ.

ಲಂಡನಿನ ಮೇಲೆ ಉಗ್ರ ಧಾಳಿಯೊಂದನ್ನು ಮಾಡಲು ಹಿಟ್ಲರನು ಸರ್ವ ಸಿದ್ಧತೆಗಳನ್ನೂ ಮಾಡುತ್ತಿರುವನೆಂಬ ಸುದ್ದಿಯು ಹಲವು ವಾರಗಳಿಂದ ನಿಶ್ಚಯಾತ್ಮಕವಾಗುತ್ತಾ ಹರಡುತ್ತಿದೆ.

ಇದಕ್ಕೆ ಸಹಕಾರಿಯಾಗಿ, ಬ್ರಿಟಿಷ್ ಪ್ರಧಾನ ಮಂತ್ರಿ ಚರ್ಚಿಲರೂ ತಮ್ಮ ಭಾಷಣದಲ್ಲಿ, ಹಿಟ್ಲರನು ಖಂಡಿತವಾಗಿ ಲಂಡನಿನ ಮೇಲೆ ಭಯಂಕರ ಧಾಳಿ ಮಾಡುವನೆಂದೂ, ಹೆಚ್ಚಿನ ಗಂಡಾಂತರಗಳು ತಮಗೆ ಬೇಗನೇ ಬರಲಿವೆಯೆಂದೂ ಆದರೆ ಇದನ್ನೆಲ್ಲಾ ಧೈರ್ಯದಿಂದ ಬ್ರಿಟಿಷರು ಎದುರಿಸುವರೆಂದೂ ಉದ್ಘೋಷಿಸಿದರು.

ಮೊನ್ನೆ ಭಾರತ ಮಂತ್ರಿ ಅಮೆರಿಯವರೂ ತಮ್ಮ ಒಂದು ಭಾಷಣದಲ್ಲಿ, ನಾಜೀ ಹುಲಿಯು ಪೊದೆಯೊಳಗೆ ಅವಿತುಕೊಂಡಿರುವುದೆನ್ನುತ್ತಾ ಅದು ಲಂಡನಿನ ಮೇಲೆ ಹಾರಿಬೀಳಲು ಹೊಂಚು ಹಾಕುತ್ತಿರುವುದೆಂದೂ, ಮುಂದಿನ ಗಂಡಾಂತರವನ್ನು ಬ್ರಿಟಿಷರು ಹೆಚ್ಚಿನ ಧೈರ್ಯದಿಂದ ಎದುರಿಸಬೇಕಾಗಿದೆಯೆಂದೂ ಹೇಳಿದರು.

ವಿದೇಶೀಯ ಪತ್ರಿಕೆಗಳೂ ಲಂಡನಿನ ಮೇಲೆ ಧಾಳಿಯಿಡುವ ಹಿಟ್ಲರನ ಹಂಚಿಕೆಯನ್ನು ಪ್ರಕಟಿಸುತ್ತಾ ಬರುತ್ತಿವೆ.

ಬರುವ ವಸಂತದಲ್ಲಿ ಅದವಾ ಅದಕ್ಕಿಂತ ಮೊದಲೇ ಇಂತಹ ಒಂದು ಭೀಷಣ ಸಮರ ಚಿತ್ರವನ್ನು ಜಗತ್ತು ನೋಡಲಿರುವುದೇ ಎಂದು ಈಗ ಎಲ್ಲೆಲ್ಲೂ ಊಹಿಸಲಾಗಿದೆ.

ಆದರೆ, ಇಂದು ಬ್ರಿಟನು ಕಳೆದ ಹಲವು ಕಾಲದಿಂದ ಹೆಚ್ಚು ಹೆಚ್ಚು ಬಲಶಾಲಿಯಾಗುತ್ತಾ ಬಂದಿದೆಯೆಂಬುದಕ್ಕೆ ಸಂಶಯವೇನೂ ಇಲ್ಲ.

ಬ್ರಿಟನಿನ ಯುದ್ಧ ಸಿದ್ಧತೆಯು ತೀವ್ರತರವಾಗಿ ನಡೆದಿದ್ದು, ಎಲ್ಲಾ ವಿಧದ ಶಸ್ತ್ರ ಸಾಮಗ್ರಿಗಳಲ್ಲಿಯೂ ಅದು ಇಂದು ತಯಾರಾಗಿದ್ದು ಎಂತಹ ಆಕ್ರಮಣವನ್ನಾದರೂ ಎದುರಿಸಲು ಅನುವಾಗಿಯೇ ಇರುವುದಾಗಿ ತಿಳಿದುಬರುತ್ತದೆ.

ಸಾಲದುದಕ್ಕೆ, ಬ್ರಿಟನಿಗೆ ಅಮೇರಿಕೆಯು ಇಂದು ಹೆಚ್ಚು ಹೆಚ್ಚಿನ ಬೆಂಬಲವನ್ನು ಕೊಡುತ್ತಲಿದೆ.

ಆಫ್ರಿಕಾ ಯುದ್ಧದಲ್ಲಿ, ಬ್ರಿಟನು ಇಟಲಿಯನ್ನು ಪ್ರಚಂಡವಾಗಿ ಎದುರಿಸಿ ಹಿಂ[illegible] ದಕ್ಕಟ್ಟಿರುವುದು ಬ್ರಿಟಿಷ್ ಸೈನಿಕರ ಇಂದಿನ ಪರಾಕ್ರಮವನ್ನೇ ಸ್ಪಷ್ಟಗೊಳಿಸುತ್ತದೆ.

ಇಷ್ಟಲ್ಲದೆ, ಲಂಡನಿನ ಮೇಲೆ ಧಾಳಿಯಾಗುವುದು ಇಂದೋ ನಾಳೆಯೋ ಖಂಡಿತವೆಂದು ಬ್ರಿಟಿಷ್ ಪ್ರಧಾನಮಂತ್ರಿಗಳೇ ತಿಳಿದಿರುವಾಗ, ಅದರ ರಕ್ಷಣೆಗೆ ಎಷ್ಟರ ಮಟ್ಟಿನ ಸರ್ವಸಿದ್ಧತೆಯಾಗಿರಬಹುದೆಂದಾದರೂ ನಾವು ಅರ್ಥ ಮಾಡಿಕೊಳ್ಳಬಹುದಾಗಿದೆ.

ಬ್ರಿಟನು ತನಗೆಬರುವ ಸಂಕಟವನ್ನು ಮೊದಲಾಗಿ ತಿಳಕೊಂಡು ಇಂದು ಸಶಕ್ತವಾಗಿರುವುದೆಂದು ತಿಳಿದು ಬಂದರೂ, ಜರ್ಮನಿಯು ಈಗಲೂ ಹಿಂದಿಗಿಂತ ಕಡಿಮೆ ಬಲಶಾಲಿಯಾಗಿ ನಮಗೆ ತೋರುವುದಿಲ್ಲ.

ಹಿಟ್ಲರನು ಮತ್ತೂ ಕೆಲವು ರಾಷ್ಟ್ರಗಳನ್ನು ಸ್ವಾಧೀನಪಡಿಸಿಕೊಂಡನು.

ಬೇಕಾದ ಯುದ್ಧ ಸಾಮಗ್ರಿಗಳನ್ನೂ ಅಲ್ಲಿಂದ ಆತನು ವಶಪಡಿಸಿಕೊಂಡಿರುವನು.

ಬ್ರಿಟನಿನ ಮೇಲೆ ಧಾಳಿಯಿಡಬೇಕೆಂಬ ಉದ್ದೇಶದಿಂದಲೇ ಸರ್ವಶಕ್ತಿಯನ್ನು ಪ್ರಯೋಗಿಸಿ ಹಲವು ಸಿದ್ಧತೆಗಳನ್ನು ಮಾಡುತ್ತಿರುವನೆಂದು ತಿಳಿಯಬಂದಿದೆ.

ಈ ಪರಿಸ್ಥಿತಿಗಳನ್ನೆಲ್ಲಾ ವಿಮರ್ಶಿಸಿದರೆ, ಮುಂದಿನ ಯುದ್ಧ ದೃಶ್ಯವು ಅತ್ಯಂತ ಭೀಷಣತರವಿರುವುದೆಂದು ಊಹಿಸಲು ಏನೇನೂ ಅಡ್ಡಿಯಿಲ್ಲ.

ಲಂಡನಿನ ಮೇಲೆ ಮಾಡಲಿರುವ ಹಿಟ್ಲರನ ಧಾಳಿ, ಅದನ್ನೆದುರಿಸುವ ಚರ್ಚಿಲರ ಸಾಹಸ ಇವುಗಳೆರಡೂ, ಅವರಿಬ್ಬರ ಭಾಷಣಗಳಂತೆಯೇ ಇದೀ ಜಗತ್ತಿಗೇ ರೋಮಾಂಚನಕಾರಿಗಳಾಗಿ ಪರಿಣಮಿಸದಿರವು.

ಮದ್ರಾಸಿಗೆ ಆಚಾರ್ಯ ಕೃಪಾಲನಿಯವರು ಈ ವಾರ ಬಂದರು.

ಇತರ ಪ್ರಾಂತ್ಯಗಳನ್ನು ಸಂದರ್ಶಿಸಿದಂತೆಯೇ ಅವರು ಮದ್ರಾಸು ಪ್ರಾಂತಕ್ಕೂ ಬಂದಿದ್ದರು.

ಕಾಂಗ್ರೆಸ್ಸಿನ ಅಹಿಂಸಾ ಸಮರವು ಯಶಸ್ವಿಯಾಗುತ್ತದೆಯೋ ಎಂದು ನೋಡಿಕೊಂಡು ಹೋಗಲು ಬಂದಿರುವುದಾಗಿ ಅವರು ಹೇಳಿದರು.

ಸತ್ಯಾಗ್ರಹದ ಸರ್ವಸೇನಾನಿಯಾದ ಗಾಂಧಿಜಿಯವರ ಸೂಚನೆಗಳು ಮತ್ತು ಹೇಳಿಕೆಗಳು ಎಲ್ಲೆಡೆಯಲ್ಲಿಯೂ ತಲಪಿ ಎಲ್ಲೆಲ್ಲಿಯೂ ಕ್ರಮವಾಗಿ ಸತ್ಯಾಗ್ರಹವು ನಡೆಯುತ್ತಿರುವುದೆಂದು ಅವರು, ತೃಪ್ತಿ ಹೊಂದಿದ್ದಾರೆ.

ಅಮೃತ

ರಕ್ತಶುದ್ಧಿಯನ್ನು ಮಾಡುವ ನರಗಳ ದೌರ್ಬಲ್ಯವನ್ನು ಪರಿಹರಿಸುವ ಟಾನಿಕ್!

ಮಲಬದ್ಧತೆ, ಅಜೀರ್ಣ, ಮತ್ತು ಇತರ ಜಠರ ದೋಷಗಳನ್ನು ನಿವೃತ್ತಿಗೊಳಿಸುತ್ತದೆ; ಕ್ಷೀಣಗೊಂಡವರಿಗೆ ತಿರಿಗಿ ಶಕ್ತಿ ಧಾತು ಪುಷ್ಟಿಯನ್ನು ಕೊಡುತ್ತದೆ.

ವಿಶೇಷ ವಿಷಯಗಳಿಗೆ ಯಾವುದೇ ಕೆಮಿಸ್ಟರಲ್ಲಾಗಲಿ, ಇಲ್ಲವೇ ಇವರಲ್ಲಾಗಲಿ ವಿಚಾರಿಸಿ

"ಕೇಸರೀ ಕುಟೀರಂ"

ಇಂಡಿಯನ್ ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್

ರಾಯಪೇಟೆ, ಮದ್ರಾಸು

1941ನೇ ಇಸವಿ ಫೆಬ್ರವರಿ ತಿಂಗಳ ತಾರೀಕು 10ನೇ ಸೋಮವಾರ ದಿವಸದ ಮಂಗಳೂರು ಪೇಟೆಯ ದವಸ ಧಾನ್ಯ ವಸ್ತುಗಳ ಧಾರಣೆಗಳು

		ರಿಂದ	ವರೆಗೆ
1	(a) ಕಜ್ಜೆ ಅಕ್ಕಿ ಒಳ್ಳೆ ತರದ ಗುಡ್ಡ ಮುಡಿಗೆ	2—4—0	
	(b) ,, ಮಧ್ಯಮ ,,	2—1—0	—
2	(a) ಅಕ್ಕಿ ಒಳ್ಳೆ ತರದ ಗುಡ್ಡ ಮುಡಿಗೆ	[illegible]—0—0	3—2—0
	(b) ,, ಮಧ್ಯಮ ,, ,,	1—12—0	
3	(a) ,, ಒಳ್ಳೆ ,, [illegible] ,,	1—12—0	1—14—0
	(b) ,, ಮಧ್ಯಮ ,, ,,	1—[illegible]—0	
4	(a) ತೆಂಗಿನಕಾಯಿ ಸುಲಿದದ್ದು 1000ಕ್ಕೆ	12—[illegible]—0	17—[illegible]—0
	(b) [illegible]	15—0—0	30—0—0
5	(a) ಕೊಬ್ಬರಿ [illegible]	60—0—0	
	(b) [illegible]	65—0—0	—
	(c) [illegible]	[illegible]—0—0	—
6	[illegible] ಎಣ್ಣೆ [illegible]	3—15—0	4—1—0
7	(a) [illegible] ಅಡಿಕೆ 1000ಕ್ಕೆ	2—12—0	[illegible]—1—0
	(b) [illegible] ಅಡಿಕೆ [illegible]	110—0—0	120—0—0
	(ಹೊಸ್ತು)	[illegible]—0—0	105—0—0
8	[illegible] ಮುಡಿಗೆ	1—0—0	4—[illegible]—0
9	[illegible] ಚೀಲ [illegible]	2[illegible]—0—0	[illegible]2—[illegible]—0
10	[illegible]	13—0—0	1[illegible]—[illegible]—0
11	(a) [illegible] ಮಣಕ್ಕೆ	[illegible]—0—0	[illegible]—[illegible]—0
	(b) ಪುಡಿಯ	7—10—0	
12	(a) [illegible] ಮಣಕ್ಕೆ	11—0—0	[illegible]7—[illegible]—0
	(b) ಕೊಡಗಿನ	1[illegible]—0—0	[illegible]2—[illegible]—0
13	(a) [illegible] ಮುಡಿಗೆ	[illegible]—0—0	[illegible]—0—0
	(b) [illegible] ,, ಮಣಕ್ಕೆ	2—0—0	—
	(c) ಉದ್ದಿನ ,,	1—0—0	1—2—0

ತಮ್ಮೊಂದು ಭಾಷಣದಲ್ಲಿ ಕೃಪಲಾನಿಯವರು ಗಾಂಧಿಜಿಯವರ ಹೇಳಿಕೆಗಳನ್ನು ಸರಕಾರವು ಪ್ರಕಟಣೆಗೆ ಕೊಡದೆ ನಿರ್ಬಂಧಿಸಿದ ಕುರಿತು ಬಹಳ ಉದ್ವೇಗದಿಂದ ಕೆಲವು ಮಾತು ಹೇಳಿದರು.

ಗಾಂಧಿಜಿಯು ಬ್ರಿಟಿಷರ ಏಳಿಗೆಯನ್ನೇ ಬಯಸುವರೆಂಬುದನ್ನು ಸಕಾರಣವಾಗಿ ತಿಳಿಸಿ, ಯಾರು ಬ್ರಿಟನಿಗೆ ಬಲವಾಗಿ ಹೊಡೆಯುತ್ತಾರೋ ಅಂತಹ ಹಿಟ್ಲರ್ ಮುಸಲಿನಿಗಳ ಹೇಳಿಕೆಯನ್ನಾದರೂ ಪ್ರಕಟಪಡಿಸುವ ಸರಕಾರವು ಗಾಂಧಿಜಿಯವರ ಹೇಳಿಕೆಯನ್ನು ತಡೆದದ್ದು ಅತ್ಯಾಶ್ಚರ್ಯಕರವೆಂದು ಅಭಿಪ್ರಾಯಪಟ್ಟರು.

ಕೃಪಲಾನಿಯವರು ವಿದ್ಯಾರ್ಥಿಗಳಿಗೂ ಕೂಡಾ, ಕೆಲವು ಕಟುವಾದ ಉಪದೇಶಗಳನ್ನು ಹೇಳಿದ್ದಾರೆ.

ಗಾಂಧಿಜಯವರೇ ಮೊದಲಾದ ಮುಖಂಡರನ್ನು ಟೀಕಿಸುವುದು ಸರಿಯಲ್ಲವೆಂದೂ, ಅದಷ್ಟು ರಚನಾತ್ಮಕ ಕೆಲಸಗಳನ್ನು ವಿದ್ಯಾರ್ಥಿಗಳು ಮಾಡಬೇಕೆಂದೂ ಅವರು ತಿಳಿಸಿದರು.

ಇಟಲಿ ಜರ್ಮನಿಗಳೇ ಮೊದಲಾದ ರಾಷ್ಟ್ರದ ವಿದ್ಯಾರ್ಥಿಗಳಾದರೂ, ಮುಖಂಡರಿಗೆ ಉಪದೇಶಿಸುವ ಕೆಲಸಮಾಡುವುದಿಲ್ಲವೆಂದರು.

ಮಹಾಜನ ಸತ್ಯಾಗ್ರಹವಾಗಬೇಕೆಂದು ವಿದ್ಯಾರ್ಥಿಗಳು ನಿರ್ಣಯಮಾಡುತ್ತಿರುವರಾದರೂ ಅವರಲ್ಲಿ ಎಷ್ಟು ಜನ ಸತ್ಯಾಗ್ರಹಕ್ಕೆ ತಯಾರಿರುವರೆಂದು ಪ್ರಶ್ನಿಸಿದರು.

ಕೇವಲ ಟೀಕೆ, ಪರೋಪದೇಶಗಳಿಂದ ಕೆಲಸವಾಗದೆಂದೂ ಎಚ್ಚರಿಸಿದರು.

ಸ್ವಲ್ಪ, ಕರುಷವಾಗಿದ್ದರೂ, ವಿದ್ಯಾರ್ಥಿಗಳಿಗೆ ಈ ಮಾತು ಅವಶ್ಯ ಹೇಳಬೇಕಿದ್ದಿತು.

ಕಹಿಯಾದರೂ ರೋಗಿಯು ಔಷಧಿ ಕುಡಿಯಲೇ ಬೇಕಾಗಿದೆ.

ವಿಜ್ಞಾನಯುಗ

ಕಣ್ಣುರೆಪ್ಪೆಗಳಿಗೆ ಚರ್ಮದ ಕಸಿ ಕಟ್ಟಿದರು!

ಮಿನ್ನಿಸೋಟಾ ವಿಶ್ವವಿದ್ಯಾಲಯದ ಆಸ್ಪತ್ರೆಯ ಡಾಕ್ಟರರು ಶಸ್ತ್ರಚಿಕಿತ್ಸೆಯ ಅದ್ಭುತವಾದ ಕೌಶಲವನ್ನು ತೋರಿಸಿ ದಿಗಂತವ್ಯಾಪ್ತವಾದ ಕೀರ್ತಿಯನ್ನು ಪಡೆದಿದ್ದಾರೆ. ಕಣ್ಣಿನ ಕೆನ್ಸರ್ ರೋಗದಿಂದ ಪೀಡಿತಳಾದ ಬಾಲಿಕೆ ಆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದಳು. ರೇಡಿಯಂ ಚಿಕಿತ್ಸೆಯಿಂದ ಅವಳ ಕೆನ್ಸರ್ ರೋಗವು ಸಂಪೂರ್ಣ ಗುಣವಾಯಿತಾದರೂ, ಚಿಕಿತ್ಸೆಯ ಪರಿಣಾಮವಾಗಿ ಅವಳ ಕಣ್ಣುರೆಪ್ಪೆಯು ಸುಟ್ಟು ತೂತುಬಿದ್ದಿತು. ಅದರಿಂದ ಆಕೆಗೆ ಬೆಳಕಿನ ಪ್ರತಾಪದಿಂದ ಕಣ್ಣುಗಳನ್ನು ಕಾಪಾಡಿಕೊಳ್ಳಲಿಕ್ಕೆ ರೆಪ್ಪೆಗಳನ್ನು ಮುಚ್ಚಿಕೊಳ್ಳಲಿಕ್ಕೂ ಆಗದಂತಾಗಿ ಅವಳು ಬಹಳ ಕಷ್ಟಪಡುತ್ತಿದ್ದಳು. ಹೀಗೆಯೇ ಬಿಟ್ಟಿದ್ದಲ್ಲಿ ಆಕೆಯು ಕಣ್ಣು ಕುರುಡಾಗಿಯೂ ಹೋಗುತಿತ್ತು. ಆದ್ದರಿಂದ ಚಿಕಿತ್ಸಕರು ಕಣ್ಣುರೆಪ್ಪೆಯನ್ನು ಎರಡಾಗಿ ಕತ್ತರಿಸಿ, ಅಲ್ಲಿ ತೋಳಿನ ಕೆಳಭಾಗದ ಚರ್ಮವನ್ನು ತೆಗೆದು ಕಸಿ ಕಟ್ಟಿದರು. ಇವರ ಈ ಚಿಕಿತ್ಸೆಯು ಸಂಪೂರ್ಣ ಯಶಸ್ವಿಯಾಗಿರುವುದರಿಂದ ಆ ಹೆಂಗಸು ಕುರುಡಾಗದೆ ಇನ್ನೂ ಕೆಲವು ವರ್ಷ ಬದುಕುವಂತಾಗಿದೆ.

ಜೀವಾಣುಗಳ ಸಂಗ್ರಹ

ಹರ್ಟ್‌ಫರ್ಡ್ ಶಾಯರ್ನ ಎಂಬಲ್ಲಿರುವ ಜೀವಾಣುಗಳ ಸಂಗ್ರಹಾಲಯದಲ್ಲಿ ವಿಜ್ಞಾನಿಗಳು ಸುಮಾರು ೨೦೦೦ ಬೇರೆ ಬೇರೆ ಜಾತಿಯ ಅಣುಗಳನ್ನು ಸಂಗ್ರಹಿಸಿ ಹಾಕಿದ್ದಾರೆ. ಮತ್ತು ಅವುಗಳಿಗೆ ವಿಶೇಷ ತರದ ಆಹಾರವನ್ನು ಕೊಟ್ಟು ಸಾಕುತ್ತಿದ್ದಾರೆ. ಒಂದೊಂದು ಜೀವಾಣುವು ಒಂದು ಇಂಚಿನ ೨೫ ಸಾವಿರದ ಒಂದು ಪಾಲಿನಷ್ಟು ಸೂಕ್ಷ್ಮವಾಗಿ ಇರುತ್ತದೆ. ಇಂಥ ಸೂಕ್ಷ್ಮಜೀವಿಗಳನ್ನು ತೆಗೆದುಕೊಂಡು ಸಾಕುವದು ಅಸಾಧಾರಣ ಕೆಲಸವಾಗಿರುವುದು. ಇದಕ್ಕೆ ತುಂಬಾ ಸಾಹಸವೂ ಪರಿಶ್ರಮವೂ ಬೇಕು. ಈ ಅಣುಗಳನ್ನು ವಿಜ್ಞಾನಿಗಳು ಸುಮ್ಮನೆ ಸಾಕುವುದಿಲ್ಲ. ಆಹಾರ ಮೊದಲಾದ ಜೀವನೋಪಯೋಗೀ ವಸ್ತುಗಳು ಕೆಡಲಿಕ್ಕೂ ಕೆಡದಿರಲಿಕ್ಕೂ ಈ ಅಣುಗಳೇ ಕಾರಣವಾಗಿವೆ. ಆದ್ದರಿಂದ ವಸ್ತುಗಳನ್ನು ಕೆಡಿಸುವ ಮತ್ತು ಕೆಡಿಸದಿರುವ ಅಣುಗಳ ಗುಣ ಸ್ವಭಾವಾದಿಗಳನ್ನು ಪರೀಕ್ಷಿಸಿ ಅವುಗಳನ್ನು ವರ್ಗೀಕರಿಸಿ ಯುದ್ಧ ಮೊದಲಾದ ಕಾಲಗಳಲ್ಲಿ ಅವುಗಳ ಪ್ರಯೋಜನವನ್ನು ಪಡೆಯಬೇಕೆಂಬುದೇ ಈ ಸಂಗ್ರಹಾಲಯವನ್ನು ಏರ್ಪಡಿಸಿದ ವಿಜ್ಞಾನಿಗಳ ಉದ್ದೇಶವಾಗಿದೆ.

ರಕ್ತ ಹೊರಕಡೆಗೆ ಒಂದು ಮದ್ದು ಬೇರು

ಸುಲ್ಫಾನಿಲಮೈಡ್ ಕುಟುಂಬಕ್ಕೆ ಸೇರಿದ ಸುಲ್ಫಾಥಿಯಜೋಲ್ ಎಂಬ ಸಣ್ಣ ಜಾತಿಯ ಸಸ್ಯಕ್ಕೆ ರಕ್ತಹೊರಕಡೆಯ ಕೀಟಾಣುಗಳನ್ನು ನಾಶಮಾಡುವ ಬಹಳ ಶಕ್ತಿ ಇರುತ್ತದೆಂದು ವಿಜ್ಞಾನಿಗಳು ಕಂಡುಹಿಡಿದಿರುತ್ತಾರೆ. ಆಕ್ಲಾಂಟಿನ ಒಂದು ಆಸ್ಪತ್ರೆಯಲ್ಲಿ ಈ ರೋಗದಿಂದ ಪೀಡಿತರಾದ ಮಕ್ಕಳ ಮೇಲೆ ಈ ಸಸ್ಯದ ಪ್ರಯೋಗ ಮಾಡಿ ಚಿಕಿತ್ಸಕರು ಆಶ್ಚರ್ಯಕರವಾದ ಸತ್ಫಲಗಳನ್ನು ಪಡೆದಿರುವರು. ರಕ್ತಹೊರಕಡೆಗೆ ಇದು ತಾನೇ ಏಕಮಾತ್ರ ರಾಮಬಾಣ ಔಷಧಿಯಾಗಿರುವುದೆಂದು ವಿಜ್ಞಾನಿಗಳು ದೃಢವಾಗಿ ಹೇಳುವುದಿಲ್ಲವಾದರೂ, ಈ ಸಸ್ಯದಲ್ಲಿ ಆ ರೋಗನಿವಾರಕ ಶಕ್ತಿಯು ಅತಿಶಯವಾಗಿ ಇರುವುದೆಂದು ಅವರು ಸಾರುತ್ತಿರುವರು. ಈ ಔಷಧಿ ಸಸ್ಯಕ್ಕೆ ನಿಮೋನಿಯವನ್ನು ಗುಣಮಾಡುವ ಶಕ್ತಿಯೂ ಬಹಳ ಇರುತ್ತದೆ.

ಆಯುಧ ತಯಾರಿಗೆ ಸತ್ತ ವಿಜ್ಞಾನಿಯ ಸಹಾಯ

ಸ್ವಲ್ಪ ಸಮಯದ ಮೊದಲು ದಿವಂಗತನಾದ ವಿಜ್ಞಾನಿಯೊಬ್ಬನ ಆತ್ಮವು ಬ್ರಿಟಿಷರ ಯುದ್ಧಕಾರ್ಯಗಳಿಗೆ ಬಹಳ ಸಹಕಾರಿಯಾಗಿರುವುದು. ಈ ಆತ್ಮವು ವಿಚಿತ್ರ ರೀತಿಯಿಂದ ಹೊಸ ಆಯುಧಗಳ ನಿರ್ಮಾಣದ ರಹಸ್ಯವನ್ನು ಹೇಳಿಕೊಟ್ಟು ತನ್ನ ದೇಶಪ್ರೇಮವನ್ನು ಪ್ರಕಟಮಾಡಿದೆ. ಈ ಆತ್ಮವು ಸ್ಟೆಲ್ ಹ್ಯೂಸ್ ಎಂಬ ಮಹಿಳೆಯ ಶರೀರ ಪ್ರವೇಶಮಾಡಿ ಅವಳ ಮೂಲಕ ಶಸ್ತ್ರೋಪಕರಣಗಳನ್ನು ತಯಾರಿಸುವ ಕಾರ್ಖಾನೆಯ ಮಾಲಕನಿಗೆ ಕೆಲವು ಹೊಸ ಉಪಕರಣಗಳನ್ನು ತಯಾರಿಸುವ ರಹಸ್ಯಗಳನ್ನು ಹೇಳಿಕೊಟ್ಟಿದೆ. ಈ ರಹಸ್ಯವು ಆಕೆಯ ಬಾಯಿಯಿಂದ ಹೊರಡುವುದಾದರೂ ಅವಳಿಗೆ ಅದರ ಅರ್ಥವೇನೂ ಆಗಿರುವುದಿಲ್ಲ. ಆದರೆ ಕಾರ್ಖಾನೆಯ ಮಾಲಕನು ಎಲ್ಲ ಸಂಗತಿಗಳನ್ನೂ ಅರ್ಥಮಾಡಿಕೊಂಡಿರುವನು. ಸ್ಟೆಲ್ ಹ್ಯೂಸಳು ಈ ರೀತಿ ಹಿಂದೆ ಅನೇಕ ಬಾರಿ ಮೃತ ಆತ್ಮಗಳೊಡನೆ ಮಾತಾಡಿ, ಕೀರ್ತಿ ಸಂಪಾದಿಸಿರುವುದರಿಂದ ಅವಳ ಮಾತುಗಳಲ್ಲಿ ಯಾರಿಗೂ ಸಂದೇಹವುಂಟಾಗಿಲ್ಲ. ಪ್ರಯೋಗ ಮಾಡಿ ನೋಡಿದಾಗ ಮೃತ ಆತ್ಮನು ಬಯಲುಮಾಡಿದ ರಹಸ್ಯಗಳಿಂದ ಪ್ರಯೋಜನವೂ ಆಗಿದೆ.

ಕೂದಲು ಕಪ್ಪಾಗಲಿಕ್ಕೆ ಎಸಿಡಿನ ಪ್ರಯೋಗ

ಪೆಂಥೊಥೆನಿಕ್ ಎಸಿಡ ಎಂಬ ದ್ರಾವಕಕ್ಕೆ ನರೆತ ಕೂದಲನ್ನು ಪುನಃ ಕಪ್ಪಾಗಿ ಮಾಡುವ ಶಕ್ತಿಯು ಇರುವದಾಗಿ ಸಾಯನ್ಸ್ ಎಂಬ ಪತ್ರಿಕೆಯ ಒಂದು ಲೇಖನವು ಹೇಳುತ್ತದೆ. ಇದರಲ್ಲಿ ಬಿ. ಜೀವಾತುವಿನ ಒಂದು ಅಂಶವು ಇರುತ್ತದೆ. ಕೂದಲು ನರೆಯಲಿಕ್ಕೆ ಆಹಾರದಲ್ಲಿ ಬಿ. ಜೀವಾತುವಿನ ಅಂಶವು ಕಡಿಮೆಯಾಗಿರುವುದೇ ಕಾರಣವೆಂದು ವಿಜ್ಞಾನಿಗಳು ಮೊದಲೇ ತಿಳಿದಿದ್ದರು. ಈ ತಿಳುವಳಿಕೆಯನ್ನು ಆಧಾರವಾಗಿಟ್ಟುಕೊಂಡು ವಿಜ್ಞಾನಿಗಳು ಇಲಿ ಮೊದಲಾದ ಪ್ರಾಣಿಗಳ ಮೇಲೆ ಪೆಂಥೊಥೆನಿಕ ಎಸಿಡಿನ ಪ್ರಯೋಗ ಮಾಡಿದರು. ಆಗ ಆ ಪ್ರಾಣಿಗಳ ನರೆ ಕೂದಲುಗಳೆಲ್ಲವೂ ಪುನಃ ಕಪ್ಪಾದುವು. ಇದನ್ನು ಕಂಡು ವಿಜ್ಞಾನಿಗಳು ಈಗ ಕೆಲವು ಮನುಷ್ಯರ ಮೇಲೂ ಈ ಪ್ರಯೋಗವನ್ನು ಮಾಡಿದ್ದಾರೆ. ಮತ್ತು ತುಂಬ ಸಫಲತೆಯನ್ನು ಪಡೆದಿರುತ್ತಾರೆ.

BHUVANENDRA PRODUCTS LTD.,
KATAPADI, S. K.

Why Doctors prescribe

"BHUVANENDRA"

NARAYANA TAILA

Because it sets right
the nervous system and gives good relief
from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರನಾರಾಯಣತೈಲ'

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ,
ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ಟೋಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ರಥಬೀದಿ.
ಡಾ. ಎಮ್. ಎಸ್. ಪ್ರಭು, ... ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಥ್ಯಾಲೇಂಡ್ (ಸಿಯಾಮು) ಮತ್ತು ಇಂಡೋ ಚೀನಗಳೊಳಗೆ ಆರಂಭವಾದ ಯುದ್ಧವು ಜಪಾನಿನ ಮಧ್ಯಸ್ಥಿಕೆಯಿಂದ ರಾಜಿಯಾಗಿ ನಿಲ್ಲುವಂತಿದೆ. ಈ ದೆಸೆಯಿಂದ ಪೌರ್ವಾತ್ಯ ದೇಶಗಳ ಮೇಲೆ ಜಪಾನಿನ ಪ್ರಭಾವವು ಅತಿಶಯವಾಗಿ ಬೆಳೆದು, ಆದರಿಂದ ಅಂತರಾಷ್ಟ್ರೀಯ ರಾಜಕಾರಣಗಳ ಮೇಲೆ ಬಹಳ ಪರಿಣಾಮವಾಗಲಿದೆ ಎಂದು ರಾಜನೀತಿಜ್ಞರು ಹೇಳುತ್ತಾರೆ.

ಜಪಾನಿನ ಮನೋವೃತ್ತಿ

ಪೌರ್ವಾತ್ಯ ದೇಶಗಳಲ್ಲಿ ಶಾಂತಿ ಸಮಾಧಾನಗಳಿರಬೇಕೆಂಬ ಸದುದ್ದೇಶದಿಂದ ಜಪಾನು, ಥ್ಯಾಲೇಂಡ್ ಇಂಡೋ ಚೀನಗಳ ಹೋರಾಟದಲ್ಲಿ ಮಧ್ಯಸ್ಥಿಕೆ ವಹಿಸಿಗೆದುಕೊಂಡಿಲ್ಲ. ಹಾಗಿದ್ದರೆ, ಅದು ಚೀನದ ಮೇಲೆ ಕಳೆದ ನಾಲ್ಕು ವರ್ಷಗಳಿಂದ ಅನ್ಯಾಯವಾಗಿ ಯುದ್ಧ ಮಾಡಿ ಲೋಕಶಾಂತಿಯನ್ನು ಕೆಡಿಸಬೇಕಾಗಿರಲಿಲ್ಲ. ಜಪಾನಿನ ಈ ಮಧ್ಯಸ್ಥಿಕೆಯಲ್ಲಿ ಆದರ ಸ್ವಾರ್ಥವು ತುಂಬಿರುವುದು ಈ ಘಟನೆಯಿಂದ ಸ್ಪಷ್ಟವಾಗುತ್ತದೆ. ಚೀನದಲ್ಲಿ ಜಪಾನು ದುರ್ಬಲವಾಗುತ್ತಿರುವುದರಿಂದ ಅಲ್ಲಿ ತಾನು ಕಳೆದುಕೊಂಡ ಪ್ರತಿಷ್ಠೆಯನ್ನು ಅದು ಬೇರೆ ಉಪಾಯಗಳಿಂದ ಪುನಃ ಗಳಿಸಬೇಕಾಗಿದೆ. ಮತ್ತೆ ಮಲಯ ಮೊದಲಾದ ಶಾಂತ ಸಾಗರದ ದ್ವೀಪ ಸಮುದಾಯಗಳ ಮೇಲೂ ಆದರ ದೃಷ್ಟಿ ಬಹಳ ಕಾಲದಿಂದ ಇದೆ. ಜಪಾನು ಮಧ್ಯಸ್ಥಿಕೆಯಲ್ಲಿ ಸಫಲವಾದರೆ, ಒಂದು ಪ್ರಕಾರದಿಂದ ಆದರ ಮರ್ಯಾದೆಯು ಬೆಳೆಯುವುದು ಮಾತ್ರವಲ್ಲದೆ, ಶಾಂತಸಾಗರದ ದ್ವೀಪ ಸಮುದಾಯಗಳ ಮೇಲೂ ಆದಕ್ಕೆ ಕೈ ಹಾಕಲು ಹಾದಿಲಿಕ್ಕೆ ಸುಲಭವಾಗುತ್ತದೆ.

ಜಪಾನಿನ ದೃಷ್ಟಿ

ಸಿಂಗಾಪುರದ ಮೇಲೆಯೆ?

ಥ್ಯಾಲೆಂಡು - ಇಂಡೋ ಚೈನ ಯುದ್ಧ!

— ಜಪಾನಿನ ಮಧ್ಯಸ್ಥಿಕೆ? —

ಸಿಂಗಾಪುರದ ಮೇಲೆ ಧಾಳಿ?

ಈ ಮಧ್ಯಸ್ಥಿಕೆಯಿಂದ ಇಂಡೋ ಚೀನ, ಥ್ಯಾಲೇಂಡು ಈ ಎರಡು ದೇಶಗಳಲ್ಲಿಯೂ ಜಪಾನಿನ ಬೇಳೆಯು ಚೆನ್ನಾಗಿ ಬೇಯುವುದು. ಯುದ್ಧ ಮಾಡಿ ಸೋತಿರುವ ಈ ದೇಶಗಳು ಜಪಾನಿನ ಸ್ವಾರ್ಥಪೂರ್ಣ ಬೇಡಿಕೆಗಳನ್ನು ತಿರಸ್ಕರಿಸುವ ಸಾಮರ್ಥ್ಯವುಳ್ಳವುಗಳಾಗಿರುವುದಿಲ್ಲ. ಆದುದರಿಂದ ಈ ದೇಶಗಳು ಜಪಾನಿನ ಎಲ್ಲಾ ಕೋರಿಕೆಗಳನ್ನು ಮನ್ನಿಸಲೇ ಬೇಕಾಗುವುದು. ಈಗ ಜಪಾನಿಗೆ ಆ ದೇಶಗಳಲ್ಲಿ ಶಸ್ತ್ರಾಸ್ತ್ರಗಳ ಸಂಗ್ರಹಕ್ಕೂ ವಿಮಾನ ನಿಲ್ದಾಣಗಳನ್ನು ಕಟ್ಟಲಿಕ್ಕೂ, ಇತರ ಮಿಲಿಟರಿ ಅನುಕೂಲತೆಗಳನ್ನು ಹೊಂದಲಿಕ್ಕೂ ಬಹಳ ಸುಲಭವಾಗುತ್ತದೆ. ಇದು ಮಲಯ ಮೊದಲಾದ ದ್ವೀಪ ಸಮುದಾಯದ ಮೇಲೆ ಧಾಳಿಯಿಡಲು ಅನುಕೂಲ ಮಾಡಿ ಕೊಡುವುದು. ಆದುದರಿಂದಲೇ ಜಪಾನು ಥ್ಯಾಲೇಂಡು–ಇಂಡೋ ಚೀನಗಳ ಕಲಹದಲ್ಲಿ ಮಧ್ಯಸ್ಥಿಕೆಗೆ ಹೊರಟಿದೆ. ರಾಜಕೀಯ ಪಂಡಿತರು ಈ ಎರಡು ದೇಶಗಳಿಗೆ ಅನುಕೂಲ ಪ್ರತಿಕೂಲ ಹೇಳಿದ್ದರೂ, ಜಪಾನಿನ ದೃಷ್ಟಿಯಿಂದ ಇವು ಆ ದೇಶಕ್ಕೆ ತುಂಬಾ ಅನುಕೂಲವಾಗಿರುವುದರಲ್ಲಿ ಯಾವ ಸಂದೇಹವೂ ಇಲ್ಲ.

ಆಕ್ರಮಣ—ಪರಿಣಾಮ

ಆದರೆ ಬ್ರಿಟಿಷ್ ಸೇನಾಧಿಕಾರಿಗಳೂ ರಾಜಕಾರಣಿಗಳೂ ಈ ಎಲ್ಲಾ ಸಂಭವಗಳನ್ನು ತಿಳಿದವರಾಗಿಯೇ ಇದ್ದಾರೆ. ಜಪಾನಿನ ಎಲ್ಲಾ ಬಗೆಯ ಆಕ್ರಮಣಗಳನ್ನು ತಡೆಯಲಿಕ್ಕೆ ಅವರು ಸಿಂಗಾಪುರದಲ್ಲಿ ಎಲ್ಲ ಬಗೆಯ ಸಿದ್ಧತೆಗಳನ್ನು ಮಾಡಿದ್ದಾರೆ. ಮಾತ್ರವಲ್ಲ, ಜಪಾನಿನ ಆಕ್ರಮಣಾತ್ಮಕ ಕಾಂಕ್ಷೆಯನ್ನು ನೋಡಿ ಅದನ್ನು ಸನ್ಮಾರ್ಗಕ್ಕೆ ಹಚ್ಚಲಿಕ್ಕೆ ಅಮೇರಿಕವೂ ಸಮಯ ಕಾದಿದೆ. ಆದುದರಿಂದ ಶಾಂತ ಸಾಗರದಲ್ಲಿ ಜಪಾನಿನ ಸಾಮ್ರಾಜ್ಯ ವಿಸ್ತರಣೆಯ ಯಾವ ಆಟವೂ ನಡೆಯಲಾರದಾಗಿ ನಾವು ಖಂಡಿತವಾಗಿಯೂ ಹೇಳಬಹುದು.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

O. S. No. 332/1940

ಪಿರಿಯ ಪ್ರಕ್ಷಳತ್ತು ಅಕ್ಕಮ್ಮ ಕೂಡಾ— ವಾದಿರು

ಪಿರಿಯ ಕೋರನ್ ನಾಯರ್ ಕೂಡಾ — ಪ್ರತಿವಾದಿರು

ಇವರೊಳಗೆ

ಸದ್ರಿ ವ್ಯವಹಾರ್ದ್ದಯ 4ನೇ ಪ್ರತಿವಾದಿಯು ಪೆರಂಬಳೆ ಗ್ರಾಮದಲ್ಲಿರುವ ಪಿರಿಯ ಚೆಂಡನ್ ನಾಯರ ಸೊಸೆ ಉತ್ತೆ ಅಮ್ಮ ಎಂಬವಳ ಮಗಳು ಕುಂಞಮ್ಮರು ಅಮ್ಮನೆ—

ಚೆಂಡನ್ ನಾಯರ್ ಎಂಬವನಿಂದ ಬರತಕ್ಕ ಈ ಕೋರ್ಟು R. I. A. No. 551/31ನೇ ಆರ್ಜಿವ್ಯವಹರಣೆಗೆ ಕಾರಣವಾದ ರೂಪಾಯಿ 1656–10–0ನ್ನು ಜವಾಬು ಕೊಳ್ಳುವದೆ ವಾದಿಯರು ದಾಖಲು ಮಾಡಿದ ವ್ಯಾಜ್ಯವು ಮೇಲೆ ಷ್ಟೆಲು ಕಾಣ್ಸಿದ 4ನೇ ಪ್ರತಿವಾದಿ ಕುಂಞಮ್ಮರು ಅಮ್ಮ ಎಂಬವಳ ಉತ್ತರದ ಬಗ್ಗೆ ತಾ. 14–12–1941ಕ್ಕೆ ಇಟ್ಟಿರುತ್ತದೆಂಬ ಸಂಗ್ತಿ ಈ ಮೂಲಕ ಸರ್ವರಿಗೂ ತಿಳಿಸೋಣಾಗುತ್ತದೆ.

Kasaragod 4–2–1941 } E. R. Othena Menon. Vakil for Plaintiffs.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಮಧ್ಯಾಹ್ನ 1 P. M. ಗೆ ಬಿಡುವ

ಮಂಗಳೂರು — ಚಿಕ್ಕಮಗಳೂರು

ಸರ್ವಿಸು

ತಾರೀಕು 1–2–1941ರಿಂದ ಪ್ರಾರಂಭವಾಗಿದೆ.

ಮಂಗಳೂರಿನಿಂದ 1 P. M. ಗೆ ಹೊರಟರೆ ಅದೇ ದಿನ ಸಾಯಂಕಾಲ 7 P. M. ಗೆ ಚಿಕ್ಕಮಗಳೂರಿಗೆ ತಲಪಬಹುದು

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಅಥವಾ ಸ್ವತಹಾ ಕೇಳಿ ತಿಳಕೊಳ್ಳಬಹುದು.

JOINT MANAGERS.

The Combined Booking Agency, MANGALORE.

The Joint Booking Office, KODIALBAIL.

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 3-0-0 | ಅಂಚೆ ವೆಚ್ಚ ಸೇರಿ ರೂ. 3—12— | Regd. No. M. 3460

ಸ್ವದೇಶಾಭಿಮಾನಿ

ಸಂಪುಟ 35] ತಾರೀಖು 14—2—1941 [ಸಂಚಿಕೆ 7]

The Bombay Life Assurance Company, Ltd.

(ESTABLISHED 1908)

Death! { is not a matter of supposition
is a matter of Certainty.

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES,

The Bombay Life Building,

Gandhi Nagar, UDIPI.

AT ANY OF THEIR OFFICES AT:—

Puthiyara, Calicut | Car Street, Mangalore. | Central Station Road, Trivandrum.

Gautam Nivas, Charni Road, Girgaum, Bombay No. 4. | Post Box No. 337 Mount Road, Madras. | Visweswarapuram Circle Bangalore City.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು; ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಚಾಕುತಗಲುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

(ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.)

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ನರನಾಡಿಗಳ ದೌರ್ಬಲ್ಯತೆಯಿಂದ. ಜೀವವು ಕೆಡದಂತೆ ನೋಡಿಕೊಳ್ಳಿರಿ.

ಅಧಿಕ ಜನರು ಮೊದಲಾಗಲೀ, ಕಡೆಗಾಗಲಿ, ನರಗಳ ದೌರ್ಬಲ್ಯತೆಯಿಂದ ನರಳಿ ಆರೋಗ್ಯವನ್ನು ಕಳೆದುಕೊಂಡು ಖಿನ್ನಚಿತ್ತರಾಗುತ್ತಾರೆ. ಈ ಪ್ರಕಾರವಾಗಿ ನೀವು ನರಳುವಿರಾದರೆ, ಅಮೂಲ್ಯ ಆಹಾರಪಾನೀಯವಾದ 'ಓವಲ್ಟಿನ್'ನ್ನು ಸ್ವಲ್ಪದಿನಗಳ ತನಕ ಕುಡಿದುನೋಡಿರಿ. ಆಗ ಪುನಃ ಎಷ್ಟು ಉತ್ತಮ ಆರೋಗ್ಯದಿಂದಿದ್ದಿರೆಂಬುದು ನಿಮಗೆ ತಿಳಿಯುವದು. ನಿಮ್ಮ ನರನಾಡಿಗಳು ಹೊಸತಾಗಿ ಕಾಣುವವು. ಖಿನ್ನತೆಯು ಮಾಯವಾಗುವುದು. ಸುಖವಾದ ನಿದ್ರೆಯು ಬೀಳುವುದು.

'ಓವಲ್ಟಿನ್' ನರನಾಡಿಗಳಿಗೆ ಪೋಷಕತ್ವವನ್ನೀಯುವುದು. ಜೀರ್ಣಶಕ್ತಿಯನ್ನು ವೃದ್ಧಿಸುವುದು. ಮತ್ತು ಅದೇ ಸಮಯದಲ್ಲಿ ದೇಹವನ್ನೂ, ಮೆದುಳನ್ನೂ ಬಲಗೊಳಿಸುವುದು. 'ಓವಲ್ಟಿನ್'ನ್ನು ಯಾವಾಗಲೂ ಕುಡಿದು, ನಿಮ್ಮ ಆರೋಗ್ಯವನ್ನು ಸರಿಯಾಗಿರಿಸಿರಿ.

ನೆನೆಯಹಾಕಿ ಮಾಗಿದ ಬಾರ್ಲಿ ದನದ ಹಸಿಹಾಲಿನ ಕೆನೆ, ಇತರ ನೈಸರ್ಗಿಕ ವಸ್ತುಗಳಿಂದ ತಯಾರಿಸಲ್ಪಟ್ಟಿದೆ 'ಓವಲ್ಟಿನ್' ಜಗತ್ತಿನ ಒಂದು ಉತ್ತಮ ಆಹಾರಪಾನೀಯ. ಇತರ ಎಲ್ಲಾ ನಕಲಿಯನ್ನು ತ್ಯಜಿಸಿರಿ.

'ಓವಲ್ಟಿನ್' ಒಂದು ರುಚಿಕರವಾದ ಆಹಾರ ಪಾನೀಯ ಟೋನಿಕ್ಕಾಗಿರುತ್ತದೆ. ಇದನ್ನು ತಣ್ಣಗೆಯೂ ಬಿಸಿಯಾಗಿಯೂ ಸೇವಿಸಬಹುದು. ಅಧಲ್ಲದೆ ಇದನ್ನು ತಯಾರಿಸುವುದು ಬಹಳ ಸುಲಭ ಮತ್ತು ತಯಾರಿಸುವ ವಿಧಾನವು ಟಿನ್ನಿನೊಂದಿಗಿದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

'ಓವಲ್‌ಟಿನ್'

OVALTINE ಒಂದು ಪುಷ್ಟಿಕರವಾದ ಆಹಾರಪಾನೀಯ

ಡಿಸ್ಟ್ರಿಬ್ಯೂಟರ್ಸ್:—
ಗ್ರೇಹಮ್ಸ್ ಟ್ರೇಡಿಂಗ್ ಕೋ. (ಇಂಡಿಯಾ) ಲಿಮಿಟೆಡ್.
ಕೈಥನಸ್ ಹೋಲ್, 310/311, ಲಿಂಗಿಚಿಟ್ಟಿಸ್ಟ್ರೀಟ್, ಮದ್ರಾಸು, ಹಾಗೂ ಕಲ್ಕತ್ತಾ, ಬೊಂಬ್ಬಾ, ಕರಾಚಿ ಮತ್ತು ರಂಗೂನ್.

'ಓವಲ್ಟಿನ್' ಬಿಸ್ಕುಟು'ಗಳು

ರುಚಿಕರ, ಜೀರ್ಣಕಾರಿ, ಪೋಷಕ. 'ಓವಲ್ಟಿನ್' ಬಿಸ್ಕುಟುಗಳು ಕೊಂಡುಕೊಳ್ಳಲು ಅತ್ಯುತ್ತಮ. ಅಮೂಲ್ಯ ಗುಣವನ್ನೀಯುವ 'ಓವಲ್ಟಿನ್' ಇದರಲ್ಲಿರುವುದು. 4 ಔನ್ಸ ಮತ್ತು 8 ಔನ್ಸುಗಳ ಪಕೆಟುಗಳಲ್ಲಿಯೂ ಒಂದು ಪೌಂಡಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV/10/40

ಮಕ್ಕಳು ಅನಾವಶ್ಯಕ ಅಳಬಾರದು

ಶರೀರದಷ್ಟು ಭಾರದ ವಸ್ತುವನ್ನು ಇಟ್ಟಿ ಅದಿಗಳನ್ನು ಎತ್ತರಕ್ಕೆ ಎತ್ತಬೇಕಾದರೆ ಎಷ್ಟು ಶಕ್ತಿ ಬೇಕಾಗುವುದೋ, ಅಷ್ಟೇ ಶಕ್ತಿಯು ಗಂಟೆಗಳ ತನಕ ಎಡೆಬಿಡದೆ ಅಳುವದರಿಂದ ವ್ಯಯವಾಗುತ್ತದೆಂದು ವಿಜ್ಞಾನಿಗಳು ಲೆಕ್ಕ ಹಾಕಿ ನೋಡಿದ್ದಾರೆ. ಅಜ್ಞರಾದವರು ಮಕ್ಕಳನ್ನು ಸುಮ್ಮಗೆ ಅಥವಾ ಅನಾವಶ್ಯಕ ಅಳಿಸಿ ಅದರ ವಿನೋದವನ್ನು ನೋಡುತ್ತಾರೆ. ಆದರೆ ಅಳುವಿಕೆಯಿಂದ ಎಷ್ಟು ಶಕ್ತಿಯು ಅತ ವ್ಯಯವಾಗುತ್ತದೆಂದು ಅವರು ತಿಳಿಯುವುದಿಲ್ಲ. ಮಕ್ಕಳನ್ನು ಎಷ್ಟು ಮಾತ್ರಕ್ಕೂ ಅನಾವಶ್ಯಕವಾಗಿ ಅಳಲಿಕ್ಕೆ ಬಿಡಬಾರದು. ಹಾಗೆ ಬಿಟ್ಟದ್ದಾದರೆ ಅವರ ಬೆಳವಣಿಗೆಯನ್ನು ಬೇಕು ಬೇಕೆಂದೇ ಕುಂದಿಸಿದ ಮಹಾಪಾಪಕ್ಕೆ ಅವರು ಗುರಿಯಾಗುವರು.

ನಿಮ್ಮ ವ್ಯಾಪಾರ ಅಭಿವೃದ್ಧಿಯು ಬೇಕಾದರೆ ಇಂದೇ
ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ

“ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ರಾವತರಿಂದ ಸ್ಥಾಪಿಸಲ್ಪಟ್ಟಿತು.

21–2–1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೧—೨—೧೯೪೧

ರಣರಂಗದ ವಿದ್ಯಮಾನಗಳು!

ಇಟೇಲಿಯ ಸೋಲು

ಬಾಲ್ಕನ ರಾಷ್ಟ್ರಗಳ ವಿಪತ್ತು! ಅಮೇರಿಕದ ಸಿದ್ಧತೆ! ಜಪಾನು ರಣರಂಗಕ್ಕಿಳಿಯುವುದೆ?



ಜನರಲ್ ಫ್ರಾಂಕೊ

ದಿನದಿಂದ ದಿನಕ್ಕೆ ಯುರೋಪಿನ ರಾಜಕಾರಣದಲ್ಲಿ ಮಹತ್ವದ ಬದಲಾವಣೆಗಳು ಆಗುತ್ತಲಿವೆ. ಆಫ್ರಿಕದಲ್ಲಿ ಇಟಲಿಯ ಪಾಡು ನಾಯಿಪಾಡಾಗಿದೆ. ಇಟಲಿಯು ಒಪ್ಪದೇ ಮುಖವಾಗಿ ಸೋಲುತ್ತಿದೆ. ಲಿಬಿಯದಲ್ಲಿ ಬೆಂಗಾಝಿಯು ಇಟಲಿಯ ಕೈಬಿಟ್ಟಂದಿನಿಂದ ಮುಸಲನಿಯು ಇನ್ನು ಲಿಬಿಯದ ಆಶೆ ಬಿಟ್ಟಂತೆಯೇ ಸರಿ. ಮೂವತ್ತು ಸಹಸ್ರ ಇಟಾಲಿಯನರು ಸೆರೆಯಾಳುಗಳಾಗಿದ್ದರೆ ಅನೇಕ ಯುದ್ಧದ ಸಾಮಾನುಗಳು ಬ್ರಿಟಿಷರ ವಶವಾಗಿವೆ. ಇನ್ನು ತನ್ನ ಸೈನ್ಯವನ್ನು ಮುಸಲನಿಯು ಆಫ್ರಿಕದಿಂದ ಹಿಂದಕ್ಕೆ ಕರೆಸಿಕೊಳ್ಳುವ ವಿಚಾರ ಮಾಡಬಹುದು. ಮುಸಲನಿಯ ಸೋಲು ಆಫ್ರಿಕದ ಪರಾಜಯದಿಂದಲೇ ಮುಕ್ತಾಯವಾಗಿಲ್ಲ. ಮೆಡಿಟರೇನಿಯನಲ್ಲಿ ಬ್ರಿಟಿಷರು ಮಾಲ್ಟದ ಬಳಿ ಡೊಡೆಕನೀಸ್ ದ್ವೀಪಗಳನ್ನು ಮುತ್ತಿರುವರು ಮಾತ್ರವಲ್ಲದೆ ಮೊನ್ನೆ ತಾನೇ ಬ್ರಿಟಿಷ ಹಡಗಗಳು ಜಿನೀವದಲ್ಲಿ ಒಂದೇ ಸವನೆ ಬಾಂಬಿನ ಮಳೆಯನ್ನು ಸುರಿಸಿರುವರು. ಇತ್ತ ಗ್ರೀಸು, ಇಟಲಿಯನರನ್ನು ಸೋಲಿಸುತ್ತ ಒಂದೇ ಸವನೆ ಮುಂದೊತ್ತುತ್ತಿರುವದು. ಇದರಿಂದ ಹಿಟ್ಲರನಿಗೆ ತುಂಬಾ ತ್ರಾಸವಾಗಿದೆ.

ಪಿಟೇನನನ್ನು ತನ್ನ ಕಡೆಗೆ ಒಲಿಸಿಕೊಳ್ಳಲು ಹಿಟ್ಲರನು ಹೂಡಿದ ಚತುರೋಪಾಯಗಳು ಏನೂ ಸಾಗದಾಯಿತು. ಇದೂ ಅಲ್ಲದೆ ಫ್ರಾಂಕೊವನ್ನು ಒಲಿಸಿಕೊಳ್ಳುವ ಉಪಾಯಗಳು ನಡೆಯುತ್ತಾ ಇವೆ. ಹಿಟ್ಲರ್ ಫ್ರಾಂಕೋ ಭೇಟಿಯು ಮೊನೆ ನಡೆಯಿತು. ಆದರೆ ಫಲಿತಾಂಶವು ಏನಾಯಿತೆಂದು ಇನ್ನೂ ತಿಳಿದುಬಂದಿಲ್ಲ. ಸರ್ವಾಧಿಕಾರಿಗಳು ಆತನನ್ನು ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಕಡೆಗೆ ಒಲಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಫ್ರಾಂಕೊ ಮುಸಲನಿ ಭೇಟಿಯು ಮೊನ್ನೆ ನಡೆಯಿತು. ಆಫ್ರಿಕದಲ್ಲಿ ಪರಾಜಯಗೊಂಡ ಮುಸಲನಿ ಫ್ರಾಂಕೊನ ಮಧ್ಯಸ್ಥಿಕೆಯಿಂದ ಬ್ರಿಟಿಷರೊಡನೆ ಸಂಧಿಗೆ ಯಾಚಿಸುತ್ತಿರುವನೆಂಬ ಊಹಾಪೋಹಗಳು ಒಂದು ಕಡೆಯಿಂದ ಕೇಳಿಬರುತ್ತಿದೆ. ಇನ್ನೊಂದು ಕಡೆಯಿಂದ ಜಿಬ್ರಾಲ್ಟರಿನ ಮೇಲೆ ಫ್ರಾಂಕೊ ಕೈಮಾಡುವಂತೆ ಮಾತುಕಥೆಗಳಾಗಿವೆಯೆಂದು ಸುದ್ದಿ.

ಬಾಲ್ಕನ್ ರಾಷ್ಟ್ರಗಳ ಪರಿಸ್ಥಿತಿಯು ವಿಷಮಾವಸ್ಥೆಗೇರಿದೆ. ರುಮೇನಿಯವು ಜರ್ಮನ ಸೈನ್ಯದ ಕೇಂದ್ರವಾಗಿಬಿಟ್ಟಿದೆ. ವಿಮಾನ ನಿಲ್ದಾಣಗಳನ್ನೆಲ್ಲಾ ಜರ್ಮನರು ಆಕ್ರಮಿಸಿ ಮುಂದಿನ ಚಳುವಳಿಗಳಿಗೆ ಸಜ್ಜಾಗುತಿದ್ದಾರೆ. ಈ ವಿಷಯವನ್ನು ಬ್ರಿಟಿಷ್ ರಾಯಭಾರಿಯು ರುಮೇನಿಯಾ ಸರಕಾರದ ಗಮನಕ್ಕೆ ತಂದರು. ಆದರೆ ಯಾವ ಸದುತ್ತರವೂ ದೊರಕದ್ದರಿಂದ ಮತ್ತು ಜರ್ಮನರ ಆಕ್ರಮಣವನ್ನು ವಿರೋಧಿಸುವ ಮನಸ್ಸನ್ನೇ ವ್ಯಕ್ತಪಡಿಸದ ಕಾರಣ ಬ್ರಿಟಿಷ ಸರಕಾರವು ತನ್ನ ರಾಯಭಾರಿಯನ್ನು ಹಿಂದಕ್ಕೆ ಕರೆಸಿಕೊಂಡಿತು.

ಬಲ್ಗೇರಿಯದಲ್ಲಿ ಕೂಡಾ ಅನೇಕ ಜರ್ಮನ್ ಸೈನಿಕರು ಬಂದು ಸೇರಿರುವರೆಂದು ಸುದ್ದಿ. ಕಪ್ಪುಸಮುದ್ರದ ಬಳಿ ೫೦ ಸಾವಿರಕ್ಕೆ ಮೇಲ್ಪಟ್ಟ ಸೈನ್ಯ ಶಿಬಿರವಾಗಿದೆ ಎಂದು ವರ್ತಮಾನ. ಬಲ್ಗೇರಿಯದ ಮೂಲಕ ಸೈನ್ಯವನ್ನು ಕಳುಹಿಸಬೇಕೆಂದು ಜರ್ಮನಿಯು ಯೋಚಿಸುತ್ತಿದೆಯೆಂದು ತಿಳಿದುಬರುತ್ತದೆ. ಆದರೆ ಜರ್ಮನಿಯ ಈ ಕೃತ್ಯವನ್ನು ರಶ್ಯವು ವಿರೋಧಿಸುವುದು ಮತ್ತು ಜರ್ಮನಿಯೊಡನಾದ ತನ್ನ ಒಪ್ಪಂದವನ್ನು ರದ್ದುಗೊಳಿಸುವುದೆಂದು ಬೆದರಿಸಿದೆ.

ಬಾಯಿಬಡಕ ಮುಸಲನಿಯಿಂದ ಏನೂ ಪ್ರಯೋಜನವಿಲ್ಲವೆಂದು ಮನಗಂಡ ಹಿಟ್ಲರನು, ಬ್ರಿಟನಿನ ಚಟುವಟಿಕೆಗಳು ಇಕ್ಕಡೆಗಳಲ್ಲಿ ಹರಿಯುವಂತೆ ಮಾಡಲು ಪೂರ್ವದಲ್ಲಿ ಜಪಾನಿನ ಬೆನ್ನು ತಟ್ಟುತ್ತಿರುವನು. ಹಿಟ್ಲರನ ಮಾತುಗಳಿಂದ ಹುರುಪುಗೊಂಡ ಜಪಾನು ಅಮೇರಿಕವನ್ನು ಬೆದರಿಸುತ್ತಿದೆ. ಅಮೇರಿಕವು ಜಪಾನಿನಲ್ಲಿದ್ದ ತನ್ನ ರಾಯಭಾರಿ ಹಾಗೂ

ಮುಸಲನಿ

ಪ್ರಜೆಗಳನ್ನು ಹಿಂದೆ ಕರೆದಿದೆಯೆಂದು ತಿಳಿದುಬರುತ್ತದೆ. ಶಾಂತಸಾಗರದಲ್ಲಿ ಅಮೇರಿಕವು ಸರ್ವಬಗೆಯ ಸನ್ನಾಹವನ್ನು ನಡೆಸಿದೆ. ಅದರಿಂದಲೇ ಈಗಾಗಲೇ ಕಳುಹಿಸಲ್ಪಟ್ಟ ವಿಮಾನಗಳಂತೆ ಇನ್ನು ಹೆಚ್ಚಿನವು ಇಂಗ್ಲಂಡಿಗೆ ಕೊಡಲು ಶಕ್ಯವಿಲ್ಲವೆಂದು ಫ್ರೆಂಕ್ ನೋಕ್ಸರು ಹೇಳಿರುವರು.

In the Court of the District Munsif of Mangalore.

O. S. 1/1939

Between:—
Subbanna Shastri— *Plaintiff*
and
Ananthararna Shibaruraya & Others— *Defendants*

To,
5th Deft. K. L. Sundar Rao, Son of Laxminarayana, Shibaruraya. Udipi Ananda Bhavan, Clock Tower Square, Mysore City.

The abovenamed plaintiff has filed the above suit for recovery of possession and arrears of rental due under the registered mulgenichit dated 23-8-1866. Therefore please take notice that the said suit is posted to 26-2-41 for your appearance, you may appear in person or by a vakil and contest the same, failing which it will be heard and decided in your absence.

K. Balakrishna Rao,
Vakil for Plaintiff.

Mangalore, 13-2-41

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಸ್ವದೇಶಾಭಿಮಾನಿ

ತಾರೀಖು 21—2—1941

ಅಹಿಂಸೆ ಮತ್ತು ಸ್ವಾತಂತ್ರ್ಯ

ಮಹಾತ್ಮಾ ಗಾಂಧಿಜಿಯವರು 'ದಿ ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯು ಅವರ ಕುರಿತು ಎತ್ತಿದ ಕೆಲವು ಟೀಕೆಗಳಿಗೆ ಉತ್ತರವೊಂದನ್ನು ಬರೆದಿದ್ದಾರೆ. ಆ ಉತ್ತರದಲ್ಲಿ ಅಹಿಂಸೆಯ ವಿಷಯವಾಗಿ ತನ್ನ ನಿರ್ಧಾರವನ್ನು ವಿವೇಚಿಸುವಾಗ ಕಾಂಗ್ರೆಸ್ಸಿನ ಕೇಳಿಕೆಗಳನ್ನು ಸರಕಾರವು ಮನ್ನಿಸುವಲ್ಲಿ, ಇಂದಿನ ಈ ಹಿಂಸಾಮಯ ಯುದ್ಧಕ್ಕೆ ಭಾರತವು ಸಹಾಯ ಕೊಡುವುದಾಗಿ ಮಾಡಿದ ಪೂನಾದ ನಿರ್ಣಯವು, ತನ್ನ ದೌರ್ಬಲ್ಯದ ನಿಮಿತ್ತವಾಗಿ ಮಂಜೂರಾಯಿತು ಎಂಬ ವಿಷಯವನ್ನು ತಿಳಿಸಿದ್ದರು. ಈ ವಾದವನ್ನು ಎತ್ತಿಕೊಂಡು 'ದಿ ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯು ಬ್ರಿಟನು, ಕಾಂಗ್ರೆಸ್ಸಿನ ಕೇಳಿಕೆಯನ್ನು ಕೊಟ್ಟರೂ ಅಹಿಂಸಾವಾದಿಯಾದ ಗಾಂಧಿಯವರು ಹಿಂಸಾಮಯವಾದೀ ಯುದ್ಧಕ್ಕೆ ಸಹಾಯ ಕೊಡುವಂತೆ ಕಾಂಗ್ರೆಸ್ಸನ್ನು ಪ್ರೇರೇಪಿಸುವುದು ಅಸಾಧ್ಯವಾಗಿದೆಯೆಂಬರ್ಥದಲ್ಲಿ ಬರೆಯುತ್ತದೆ. ಕಾಂಗ್ರೆಸ್ಸಿನ ಪೂನಾ ನಿರ್ಣಯ, ಗಾಂಧಿಜಿಯವರ ಅಹಿಂಸಾವಾದ, 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಈ ಆಕ್ಷೇಪ, ಸರಕಾರದ ತಟಸ್ಥ ಧೋರಣೆ, ಇವುಗಳನ್ನು ಪರಿಶೀಲಿಸಿದ್ದಲ್ಲಿ ನಾವು ಈ ಕುರಿತು ವಿಚಾರಿಸಬೇಕಾದ ಕೆಲವು ವಿಷಯಗಳು ಇವೆ.

ಕಾಂಗ್ರೆಸ್ಸಿನ ತ್ಯಾಗ

ಗಾಂಧಿಜಿಯವರ ಈಗಿನ ಪ್ರಕಟಣೆಯ ಪ್ರಕಾರ, ಕಾಂಗ್ರೆಸ್ಸು ತನ್ನ ಅಹಿಂಸಾ ನೀತಿಗೆ ಅನುಗುಣವಾಗಿ, ಬ್ರಿಟನಿನ ಹಿಂಸಾಮಯ ಯುದ್ಧಕ್ಕೆ ಸಹಾಯ ಕೊಡುವುದು ಸಾಧ್ಯವಿಲ್ಲವೆಂಬ ವಿಷಯವನ್ನು ಒಪ್ಪಿಕೊಂಡರೂ, ಒಮ್ಮೆ ಮಹಾತ್ಮಾ ಗಾಂಧಿಜಿಯವರ ಅಭಿಪ್ರಾಯವನ್ನು ಮೀರಿ, ಅವರ ಸೇನಾಪತಿತ್ವವನ್ನು ತ್ಯಜಿಸಿಕೊಟ್ಟು, ಬಹುಕಾಲದಿಂದ ಕಾಂಗ್ರೆಸು ನಿಶ್ಚಲ ನಂಬಿರುವ ಅಹಿಂಸಾ ತತ್ವವನ್ನೂ ಬದಿಗಿಟ್ಟು, ಅಷ್ಟು ದೊಡ್ಡ ತ್ಯಾಗದಿಂದ ಸರಕಾರವು ಇಂದು ನಡೆಸುವ ಯುದ್ಧದಲ್ಲಿ ಸಹಾಯ ಕೊಡಬಹುದಾಗಿಯೂ, ಕಾಂಗ್ರೆಸ್ಸಿನ ಕೇಳಿಕೆಯನ್ನು ಮನ್ನಿಸುವ ಭರವಸೆ ಕೊಡಬೇಕಾಗಿಯೂ ಪೂನಾದ ನಿರ್ಣಯದಿಂದ ಕಾಂಗ್ರೆಸ್ಸು ಕೇಳಿಕೊಂಡಾಗ ಅದಕ್ಕೆ ಬಂದ ಉತ್ತರವು ಎಷ್ಟರಮಟ್ಟಿಗೂ ಸಮಾಧಾನಕರವಾಗಿರಲಿಲ್ಲ. ಕಾಂಗ್ರೆಸು ತನ್ನ ತತ್ವವನ್ನು ಸಡಿಲಿಸಿ ಪೂನಾ ನಿರ್ಣಯವನ್ನು ಮಾಡಿರುವುದನ್ನು ಈಗ ಬ್ರಿಟನಿನ ರಾಜನೀತಿಜ್ಞರು ಕಾಂಗ್ರೆಸ್ಸಿನ ನಿಶ್ಶಕ್ತತೆಯೆಂದೂ, ಮುಂದೇನೂ ಮಾಡಲು ಸಾಧ್ಯವಿಲ್ಲದೆ, ಕಾಂಗ್ರೆಸ್ಸು ಹೀಗೆ ನಿಂತಿದೆಯೆಂದೂ ಅರ್ಥಮಾಡಿಕೊಂಡರಾಗಿ ಆಗಿನ ಅವರ ಹೇಳಿಕೆಗಳನ್ನು ಪರಿಶೀಲಿಸಿದರೆ ಅರ್ಥವಾಗುತ್ತದೆ.

ನೀತಿನಿಷೇಧಕ್ಕಾಗಿ

ಇದರಿಂದಾಗಿ ಸರಕಾರದ ಈ ವಿಧದ ಧೋರಣೆಯಿಂದಾಗಿ ಕಾಂಗ್ರೆಸ್ಸು ಕೊನೆಗೆ ಒಂದು ನಿರ್ಧಾರಕ್ಕೆ ಬರಬೇಕಾಯಿತು. ಬ್ರಿಟನು ಅಧಿಕಾರವನ್ನು ಬಿಟ್ಟುಕೊಡಲು ಮನಸುಳ್ಳುದ್ದಾಗಿಲ್ಲವೆಂದು ಖಂಡಿತ ಮಾಡಬೇಕಾಯಿತು. ಭಾರತದ ಜನಪ್ರಿಯರಾದ ಮುಂದಾಳುಗಳು ಕೊಟ್ಟ ಸೂಚನೆಗಳನ್ನು ಸಹಕಾರಗಳನ್ನಾದರೂ ಅವರು ಸ್ವೀಕರಿಸಲು ಮನಸ್ಸಿಲ್ಲದವರಾಗಿದ್ದಾರೆಂದು ತಿಳಿದುಕೊಳ್ಳಬೇಕಾಯಿತು. ಇಷ್ಟು ಮಾತ್ರವಲ್ಲದೆ, ಭಾರತವು ತನ್ನ ಸ್ವೇಚ್ಛೆಯಿಂದಲೇ ಬ್ರಿಟನಿನ ಈ ಯುದ್ಧಕ್ಕೆ ಸಹಾಯಕೊಡುತ್ತಿರುವುದಾಗಿ, ಇಡೀ ಜಗತ್ತನ್ನೇ ನಂಬಿಸುತ್ತಿರುವುದಾಗಿ ಕಾಂಗ್ರೆಸ್ಸಿನ ಮುಂದಾಳುಗಳು ಮನಸ್ಸೊಂದರು. ಇಂತಹ ಪ್ರಚಾರವನ್ನು ತಡೆಯುವ ಸಲುವಾಗಿಯೇ ಭಾರತವು ಬ್ರಿಟನಿನ ಯುದ್ಧಕ್ಕೆ ಜನಧನ ಸಹಾಯ ಕೊಡುವುದಿಲ್ಲವೆಂದು ತಿಳಿಸುವ ಉದ್ದೇಶದಿಂದ ಭಾರತದ ಜನಪ್ರಿಯರಾದ ಮುಖಂಡರ ಕೇಳಿಕೆಗಳ ಕಡೆಗೆ ಸರಕಾರವು ಒಂದಿಷ್ಟು ಕಿವಿಗೊಡದೆ ಸ್ವೇಚ್ಛೆಯಿಂದಲೇ ಭಾರತವನ್ನು ಯುದ್ಧಕ್ಕೆಳೆದಿದೆಯೆಂದು ಜಗತ್ತಿಗೆ ಪ್ರಕಟಪಡಿಸುವ ಸಲುವಾಗಿ ಕೊನೆಗೆ ಗಾಂಧಿಜಿಯ ಮುಂದಾಳುತನದಲ್ಲಿ ಇಂದಿನ ವಾಕ್‌ಸ್ವಾತಂತ್ರ್ಯದ ಸತ್ಯಾಗ್ರಹವು ಪ್ರಾರಂಭವಾಯಿತು. ಇಂದಿನ ಯುದ್ಧದಲ್ಲಿ ಭಾರತವು ಸ್ವೇಚ್ಛೆಯಿಂದ ಸೇರಲಿಲ್ಲವೆಂಬುದಾಗಿ ಯಾರು ಹೇಳುತ್ತಾರೋ ಅವರು ಆ ವಿಷಯವನ್ನು ಸಾರುವ ಹಕ್ಕುಳ್ಳವರಾಗಿರುವರೆಂದೂ ಆ ಹಕ್ಕುಳ್ಳವರು ಹಿಂದೆ ಭಾರತದ ಏಳು ಪ್ರಾಂತಗಳಲ್ಲಿಯೂ ಚುನಾಯಿತರಾಗಿ ಆಡಳಿತೆ ನಡೆಸಿದ ಮಂತ್ರಿಗಳು, ಶಾಸನ ಸಭಾಸದಸ್ಯರು ಮಾತ್ರವಲ್ಲದೆ ಇನ್ನನೇಕ ಜನತೆಯ ಮುಂದಾಳುಗಳೇ ಎಂಬುದನ್ನೂ ಸಕಲರಿಗೂ ತಿಳಿಸಲು, ನಿರ್ವಾಹವಿಲ್ಲದೆ, ಕೊನೆಗೆ ಇಂದಿನ ಸತ್ಯಾಗ್ರಹವು ಹೂಡಲಾಯಿತು. ಕಾಂಗ್ರೆಸ್ ಇಂತಹ ಸಂದರ್ಭದಲ್ಲಿ ಪುನಃ ಗಾಂಧಿಜಿಯವರ ಸೇನಾನಿತ್ವವನ್ನು ಒಪ್ಪಿಕೊಂಡದ್ದು ಎಲ್ಲಾ ವಿಷಯಗಳಲ್ಲಿಯೂ ಅವರ ಅಭಿಪ್ರಾಯವನ್ನು ತಿಳಕೊಳ್ಳದೆ ಆಗಿರುವುದಿಲ್ಲ; ಅವರಿಗೆ ಇಂದಿನ ಸಮಸ್ಯೆಗಳ ಕುರಿತು ಹೇಳುವಂಥ ಯೋಗ್ಯತೆಯು ಹೇಳಿ ಜನತೆಯನ್ನು ಸಂದಾರಿಯಲ್ಲಿ ಮುನ್ನಡೆಸುವಂಥ ಯೋಗ್ಯತೆಯು ಇದೆಯೆಂಬುದನ್ನು ತಿಳಿದೇ ಕಾಂಗ್ರೆಸು ಇಂದು ದೂರನಿಂತಿದ್ದ ಅವರನ್ನೂ ಪುನಃ ಕರೆದು ಸೇನಾಪತಿತ್ವವನ್ನು ಒಪ್ಪಿಸಿತು.

ತತ್ವ ಹೊರಿಸುವುದಿಲ್ಲ

ಇತ್ತೀಚೆ 'ದಿ ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಗೆ ಅವರು ಬರೆದ ಒಂದು ಪತ್ರದಲ್ಲಿ, ಗಾಂಧಿಜಿಯವರು, ಯುದ್ಧವು ನಡೆಯುತ್ತಿರುವಂತೆ, ಬ್ರಿಟನು ಕಾಂಗ್ರೆಸುಗಳೊಳಗೆ ಸಂಧಿಯಾಗುವ ಸಂಭವವಿರುವುದಾಗಿ ತಾನು ತಿಳಿಯುವುದಿಲ್ಲವೆಂದೂ, ಕಾಂಗ್ರೆಸು ಇಂದು ಸಂಧಿಮಾಡಿಕೊಂಡರೆ, ಬ್ರಿಟನಿಗೆ ಹಿಂಸಾಯುದ್ಧದಲ್ಲಿ ಹಿಂಸಾಮಯ ಸಹಕಾರಕೊಡಬೇಕಾಗುತ್ತದೆಂದೂ, ಕಾಂಗ್ರೆಸು ಹಿಂಸಾಮಯವಾದ ಸಹಕಾರವನ್ನು ಕೊಡುವುದೆಂದರೆ ಅದು ಕಳೆದ ಇಪ್ಪತ್ತು ವರ್ಷಗಳಿಂದ, ನಿಷ್ಠಾಪೂರ್ವಕವಾಗಿ ಅನುಸರಿಸಿದ ಅಹಿಂಸಾ ತತ್ವಕ್ಕೆ ವಿರೋಧವಾಗುವುದೆಂದೂ ಹೇಳಿರುತ್ತಾರೆ. ಕಾಂಗ್ರೆಸ್ಸು ಇಂದು ಬ್ರಿಟನಿನ ಅಹಿಂಸಾಸಮರದಲ್ಲಿ ಸಹಾಯ ಮಾಡುವುದು ಸಾಧ್ಯವಿಲ್ಲವೆಂಬುದಾಗಿ ಗಾಂಧಿಜಿ ಈಗ ಹೇಳಿದರೂ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವರ್ಧಾದಲ್ಲಿ ಸೇರಿ, ಅಹಿಂಸೆಯ ಕುರಿತು ನಿರ್ಣಯ ಮಾಡಿದಾಗ, ಅವರ ಅಭಿಪ್ರಾಯವು ಹಾಗಿರಲಿಲ್ಲವೆಂದು ಹೇಳಬಹುದು. ಗಾಂಧಿಜಿ ವ್ಯಕ್ತಿಶಃ ಅಹಿಂಸೆಯಲ್ಲಿ ಬದ್ಧ ನಿಷ್ಠೆಯವರಾದರೂ, ಇತರರ ಮೇಲೆ ತನ್ನ ಅಭಿಪ್ರಾಯವನ್ನು ಹೊರಿಸುವ ಇಚ್ಛೆಯವರಾಗಿಲ್ಲ. ವರ್ಕಿಂಗ್ ಕಮಿಟಿಯವರು ತಮ್ಮ ಮನಸ್ಸಿಗೆ ಸರಿಯಾಗಿ ನಿರ್ಣಯ ಮಾಡುವುದು ಉಚಿತವೆಂದು ಅವರು ವಿಚಾರಿಸಿದರು. ತಿರಿಗ ವರ್ಕಿಂಗ್ ಕಮಿಟಿಯು ಡೆಲ್ಲಿಯಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕಾಗಿ ನಿರ್ಣಯ ಮಾಡಿದಾಗ ಹಾಗೆ ಮಾಡಿದರೆ ಸರಕಾರಕ್ಕೆ ಸಹಾಯ ಕೊಡುವುದಾಗಿ ಕಾಂಗ್ರೆಸು ಒಪ್ಪಿಕೊಂಡಾಗ, ವೈಸರಾಯರು ಕಾಂಗ್ರೆಸ್ಸಿನ ಈ ಕೇಳಿಕೆಯನ್ನು ಅಂಗೀಕರಿಸಿಕೊಳ್ಳಬೇಕಾಗಿ ಹೇಳಿದ್ದರು. "ಬ್ರಿಟನಿಗೆ ಭಾರತವು ಪರಿಣಾಮಕಾರಿಯಾದ ಸಹಾಯ ಕೊಡಬೇಕಾದರೆ, ಅದು ಸ್ವತಂತ್ರಗೊಂಡ ಭಾರತದಿಂದಲೇ ಆಗಬೇಕಾಗಿದೆ' ಮತ್ತೆ ಪುನಃ ಅಖಿಲಭಾರತ ಕಾಂಗ್ರೆಸ್ ಕಮಿಟಿಯು ಪೂನಾದಲ್ಲಿ ಇದೇ ನಿರ್ಣಯವನ್ನು ಸಾರಿದಾಗ ಗಾಂಧಿಜಿಯವರು ಹೀಗೆಂದು ಬರೆದರು.—"ಭಾರತದ ಸ್ವಾತಂತ್ರ್ಯವನ್ನು ಸರಕಾರವು ಒಪ್ಪಿದರೆ, ನಿರ್ಣಯದ ಮುಂದಿನ ವಿಚಾರವು ತನಗೆ ತಾನಾಗಿಯೇ ಒದಗುತ್ತದೆ. ಆದರೆ ಇಲ್ಲಿನ ಪ್ರಶ್ನೆಯೆಂದರೆ, ಬ್ರಿಟಿಷರು, ತಾವು ಭಾರತದ ದೊರೆಗಳೆಂದು ಇಲ್ಲಿಂದ ಸಹಾಯ ಪಡೆಯಲಿಚ್ಛಿಸುತ್ತಾರೋ ಅಥವಾ ಸ್ವತಂತ್ರವಾದ ಭಾರತದಿಂದ ಅವರು ಸಹಾಯ ಹೊಂದಲು ಆಶಿಸುತ್ತಾರೋ ಎಂಬುದು. ಇಂತಹ ಸಂದರ್ಭದಲ್ಲಿ, ಈ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಇಲ್ಲದಿರುವನಾದರೂ, ಅತ್ಯಂತ ಮಿತ್ರನಾಗಿ ಕಾಂಗ್ರೆಸ್ಸಿನ ಈ ಕೇಳಿಕೆಯನ್ನು ಸರಕಾರವು ಅಂಗೀಕರಿಸಬೇಕಾಗಿ ನಾನು ಸರಕಾರಕ್ಕೆ ಸೂಚಿಸುತ್ತೇನೆ.' ಇದರಿಂದಾಗಿ ನಾವು ಗಾಂಧಿಜಿಯವರು ಸ್ವಕೀಯವಾಗಿ ಹಿಂಸಾಮಯ ಕೃತ್ಯದಲ್ಲಿ, ಹಿಂಸಾಮಯ ಸಮರದಲ್ಲಿ ಭಾಗವಹಿಸಲು ಸಿದ್ಧರಿಲ್ಲದಿದ್ದರೂ ಭಾರತಕ್ಕೆ ಸ್ವಾತಂತ್ರ್ಯವು ದೊರಕುವಲ್ಲಿ ಕಾಂಗ್ರೆಸ್ಸಿನವರು ನಿರ್ಣಯಮಾಡಿದಂತೆ ಅವರಾದರೂ ಹಿಂಸಾಮಯ ಸಹಾಯವನ್ನು ಕೊಡುವಲ್ಲಿ ಆಕ್ಷೇಪವುಳ್ಳವರಾಗಿಲ್ಲವೆಂದು ಅರ್ಥಮಾಡಿಕೊಳ್ಳಬಹುದು.

ಗಾಂಧಿಜಿ ಮತ್ತು ಕಾಂಗ್ರೆಸು

ಬ್ರಿಟಿಷ್ ಸರಕಾರವು ಕಾಂಗ್ರೆಸ್ಸಿನ ಆ ಸಹಕಾರ ಹಸ್ತವನ್ನು ತಿರಸ್ಕರಿಸಿತು; ಪೂನಾ ನಿರ್ಣಯವನ್ನು ಮನ್ನಿಸದೆ ಬಿಟ್ಟುಬಿಟ್ಟಿತು. ಅದರ ಫಲವಾಗಿ ಪೂನಾ ನಿರ್ಣಯವು ಮತ್ತೆ ಹಿಂದೆಗೆಯಲ್ಪಟ್ಟಿತು. ಹೀಗೆ ಪೂನಾ ನಿರ್ಣಯವನ್ನು ಹಿಂದೆಗೆವಾಗ, ಕಾಂಗ್ರೆಸು ಆ ನಿರ್ಣಯವನ್ನು ಹಿಂತೆಗೆದದ್ದು, ಬ್ರಿಟಿಷ್ ಸರಕಾರವು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಲು ತಿರಸ್ಕರಿಸಿದ ಕಾರಣ ಹಾಗೆ ಮಾಡಿರುವುದಾಗಿ ಸ್ಪಷ್ಟವಾಗಿ ಸಾರಿತು. ಅಗಲೇ ಅಹಿಂಸೆಯು ಕಾಂಗ್ರೆಸಿನ ತತ್ವ ಮತ್ತು ಆಚರಣೆಯಾಗಿದೆಯಲ್ಲದೆ, ಅದು ಕಾಂಗ್ರೆಸಿನ ಧರ್ಮವಾಗಿಲ್ಲವೆಂದು ಸ್ಪಷ್ಟಗೊಳಿಸಿತು. ಸ್ವರಾಜ್ಯಕ್ಕಾಗಿ ಹೂಡುವ ಹೋರಾಟದಲ್ಲಿ ಮಾತ್ರವಲ್ಲ, ಎಷ್ಟರ ಮಟ್ಟಿಗೆ ಇದನ್ನು (ಅಹಿಂಸೆಯನ್ನು) ಉಪಯೋಗಿಸಲು ಸಾಧ್ಯವೋ ಅಲ್ಲಿವರೆಗೆ ಸ್ವತಂತ್ರವಾದ ಭಾರತದಲ್ಲಿಯೂ ಅಹಿಂಸೆಯೇ ಉಪಯೋಗಿಸಲಾಗುವುದೆಂದೂ ತಿಳಿಸಿತು. 'ಸ್ವತಂತ್ರವಾದ ಭಾರತವು ಶಸ್ತ್ರತ್ಯಾಗಕ್ಕೆ ಸಹಕರಿಸುವುದು; ಜಗತ್ತಿಗೇ ಆ ದಾರಿಯಲ್ಲಿ ಆದರ್ಶಕರವಾಗಿ ವರ್ತಿಸುವುದು' ಎಂದೂ ಕಾಂಗ್ರೆಸು ಸ್ಪಷ್ಟಪಡಿಸಿತು. ಹೀಗಾಗಿ ಗಾಂಧಿಜಿ ಮತ್ತು ಕಾಂಗ್ರೆಸಿನವರು ಅಹಿಂಸೆಯನ್ನು ಅನುಸರಿಸುವ ರೀತಿ ಎರಡು ವಿಧದ ಮಾರ್ಗಗಳಲ್ಲಿ, ಗಾಂಧಿಜಿ ಒಬ್ಬ ಪ್ರವಾದಿಯಾಗಿ, ಸಂತನಾಗಿ ಅಹಿಂಸೆಯನ್ನು ಸಾರುತ್ತಾನೆ, ಕಾಂಗ್ರೆಸು, ರಾಜಕೀಯ ಪಟುವಿನಂತೆ, ರಾಜಕಾರಣ ನಿಪುಣನಂತೆ ಅಹಿಂಸೆಯನ್ನು ಅಂಗೀಕರಿಸಿದೆ.

ಬ್ರಿಟನಿಗೆ ಕಾಂಗ್ರೆಸಿನಿಂದ ಸಹಾಯವು ಸಿಗಲಿಕ್ಕಿಲ್ಲ, ಅದು ಅಹಿಂಸಾತತ್ವದ್ದು ಎಂಬುವ ಮಾತಿನಲ್ಲಿ ಏನೂ ಅರ್ಥವಿರುವುದಾಗಿ ನಾವು ತಿಳಿಯಲಾಗುವುದಿಲ್ಲ. ಗಾಂಧಿಜಿಯವರು ಇಂದು ಸತ್ಯಾಗ್ರಹ ನಡೆಸಲು ಸೇನಾನಿಯಾಗಿದ್ದಾರೆ. ಆದರೆ ಅವರ ಧರ್ಮವಾದ ಅಹಿಂಸೆಯನ್ನು, ಕಾಂಗ್ರೆಸಿನವರ ವಿರೋಧವಾಗಿ ಹೇರಲು ಅವರು ಇಷ್ಟಪಡುವುದಿಲ್ಲ. ಕಾಂಗ್ರೆಸಾದರೂ ಸಾಧ್ಯವಾದ ಮಟ್ಟಿಗೆ ಅಹಿಂಸೆಯನ್ನೇ ಎತ್ತಿ ಹಿಡಿಯುವುದೆಂದು ಹೇಳಿದ್ದರೂ, ರಾಜಕಾರಣದಲ್ಲಿ ಅದು ಯಶಸ್ವಿಯೆನಿಸದಿದ್ದರೆ ಕಾಂಗ್ರೆಸು ನ್ಯಾಯದ ರಕ್ಷಣೆಯ ಸಲುವಾಗಿ ಹಿಂಸೆಯನ್ನು ಹಿಂಬಾಲಿಸದೆ, ನಿರ್ವಾಹವಿರಲಾರದು; ಆ ಸಂದರ್ಭದಲ್ಲಿ ಬ್ರಿಟನು ಕಾಂಗ್ರೆಸಿನಿಂದ ಸಹಾಯ ಪಡೆಯಲು ಅಸಾಧ್ಯವಿರುವುದಾಗಿ ಟೀಕಿಸುವುದು ನ್ಯಾಯವಾಗಿಲ್ಲ. ಬ್ರಿಟನು ಕಾಂಗ್ರೆಸಿಗೆ ಬೇಕಾದ ಜನತೆಗೆ ಬೇಕಾದ, ಭಾರತದ ಸ್ವಾತಂತ್ರ್ಯವನ್ನು ಮನ್ನಿಸುವ, ಕೊಡುವ ಇಚ್ಛೆಯುಳ್ಳದ್ದಾಗಬೇಕಾಗಿದೆಯೆಂಬುದೆ ಅದಕ್ಕೆ ಕಾಂಗ್ರೆಸು ಇಂದಿನ ಸಹಾಯ ಕೊಡುವರೆ ತರತವಾಗಿ ನಿಂತಿದೆ. ಕಾಂಗ್ರೆಸಿಗೆ ಬೇಕಾದುದು ಎಲ್ಲದಕ್ಕಿಂತಲೂ ಮಿಗಿಲಾಗಿ ರಾಷ್ಟ್ರದ ಸ್ವಾತಂತ್ರ್ಯ.

ಜೈಲಲ್ಲಿ ಮನುಷ್ಯತ್ವಕ್ಕೆ ತಡೆಯುಂಟೆ?

ರಶ್ಯದ ಕಡೆಗೆ ಪಟ್ಟಾಭಿಯವರ ದೃಷ್ಟಿ

ಸೆರೆಮನೆಯಲ್ಲಿ ಸುಧಾರಣೆ ಮಾಡಬೇಕು

(ಪಟ್ಟಾಭಿ ಸೀತಾರಾಮಯ್ಯನವರ ಲೇಖನ)

ವಿಶೇಷವಾಗಿ ತ್ರಿಚಿನಾಪಳ್ಳಿಯಂತಹ ಸ್ಥಳಗಳಲ್ಲಿ, ಲೋಕಪ್ಪಿನಲ್ಲಿ ಸತ್ಯಾಗ್ರಹೀ ಕೈದಿಗಳನ್ನಿಡುವುದು ಅನಗತ್ಯವಾದುದು. ವೆಲ್ಲೂರಿನಂತಹ ಸ್ಥಳಗಳಲ್ಲಿ, ಹೊರಗಡೆಗೆ ಭದ್ರವಾದ ಕೋಟೆಯಿದ್ದು, ಒಳಗಡೆಯ ಆವರಣದೊಳಗೆ ಕೈದಿಗಳು ತಮಗಿಷ್ಟ ಬಂದಲ್ಲಿ ಮಲಕ್ಕೊಳ್ಳುವಂತೆ ಸರಕಾರವು ಮಾಡಬಹುದಾಗಿದೆ. ಆದರೆ ಹೊರಗಡೆ ಭದ್ರವಾದ ಕೋಟೆಯಿರದ ಸ್ಥಳಗಳಲ್ಲಿ ಕೈದಿಗಳು ಹೇಗೆ ಇರಬೇಕೆಂಬುದನ್ನು ತಿಳಕೊಳ್ಳಬಹುದು. ಅಮೆರಿಯವರು ತಮ್ಮ ಭಾಷಣದಲ್ಲಿ ಬಹುಮಂದಿ ಸತ್ಯಾಗ್ರಹಿಗಳು ತಮ್ಮ ಇಷ್ಟಪ್ರಕಾರ ಸೆರೆಮನೆಯಲ್ಲಿ ಇದ್ದಾರೆ ಎಂದು ಹೇಳಿದರು. ಸರಕಾರಕ್ಕೆ ಯಾರಾದರೂ ಒಂದು ಸೂಚನೆ ಕೊಡಬಹುದು; ಅದೇನೆಂದರೆ, ಸತ್ಯಾಗ್ರಹೀ ಕೈದಿಗಳನ್ನು ವಿಚಾರಣೆ ಮಾಡಿ ಶಿಕ್ಷೆ ವಿಧಿಸಿದ ನಂತರ ಅವರನ್ನು ಸೆರೆಮನೆಗೆ ಪೋಲೀಸರು ತೆಗೆದುಕೊಂಡು ಹೋಗುವ ಖರ್ಚಿಗಿಂತ ಸರಕಾರವು ಯಾವ ಸೆರೆಮನೆಗೆ ಆ ಕೈದಿಯನ್ನು ಕಳುಹಿಸುತ್ತದೋ, ಅಲ್ಲಿಗೆ ಇರುವ ಟಿಕೇಟನ್ನು ಕೊಟ್ಟು ಸತ್ಯಾಗ್ರಹಿಯನ್ನು ಅಲ್ಲಿಗೆ ಹೋಗಿ ಸೆರೆಮನೆಯಲ್ಲಿ ಸೇರಿಕೊಳ್ಳುವಂತೆ ಕಳುಹಿಸಬಹುದು. ಭಾರತದಲ್ಲಿ, ಸೆರೆಮನೆಗೆ ಕರಕೊಂಡು ಹೋಗುವ ರಾಜಕೀಯ ಕೈದಿಗಳು ಪೋಲೀಸರಿಗೆ ಪೆಟ್ಟುಕೊಟ್ಟು ತಪ್ಪಿಸಿ ಹೋದ ಎರಡು ಉದಾಹರಣೆಗಳಿವೆ. ಅಂಥಾದ್ದು ಯಾವ ದೇಶಕ್ಕಾದರೂ ಅವಮಾನಕರ. ಇದರಿಂದ, ರಾಜಕೀಯ ಕೈದಿಗಳನ್ನು ಅವರ ಇಷ್ಟದಂತೆಯೇ ಸೆರೆಮನೆಗೆ ಹೋಗಲು ಬಿಟ್ಟುಬಿಟ್ಟಲ್ಲಿ, ಅವರು ತಪ್ಪಿಸಿ ಹೋದಾರೆಂದು ತಿಳಕೊಳ್ಳಲು ಆಗುವುದಿಲ್ಲ. ಯಾರಾದರೂ ತಪ್ಪಿಸಬೇಕೆಂದು ಕೈದಿಯು ಅಪೇಕ್ಷಿಸುವುದಿದ್ದರೆ, ಆತನು ತನ್ನನ್ನು ಕೈದುಮಾಡುವುದನ್ನೂ ತಪ್ಪಿಸುವವನಾಗಿರಬೇಕು. ಅಥವಾ ಸತ್ಯಾಗ್ರಹ ಮಾಡದೆ ಇರುವಾಗ ಕೈದು ಮಾಡಿದವನಾಗಿರಬೇಕು.

ಕ್ರಮತಪ್ಪಿದೆ

ಸತ್ಯಾಗ್ರಹಿಯು ಹಾಗೇನೂ ಮಾಡಲಾರನು. ಸೆರೆಮನೆಗೆ ಸತ್ಯಾಗ್ರಹಿಗಳನ್ನು ಕರೆದುಕೊಂಡು ಹೋಗುವ ವಿಷಯದಲ್ಲಿ ಹಣವು ದುರ್ವ್ಯಯವಾಗುತ್ತದೆ. ಸತ್ಯಾಗ್ರಹಿಗೆ ಟಿಕೇಟು ಕೊಟ್ಟು ಅವನನ್ನು ಕಳುಹಿಸಲಿ. ಇಂದು ಮಾಡುವ ಕ್ರಮಗಳೆಲ್ಲಾ ತಿದ್ದಬೇಕಾಗಿದೆ. ಯುದ್ಧವಿರುದ್ಧ ಕೆಲಸಕ್ಕೆ ಸರಕಾರವು ಅನುಸರಿಸುವ ರೀತಿ ತಪ್ಪು, ಅದರ ನ್ಯಾಯ ವಿಚಾರಣೆ ತಪ್ಪು; ಅದರ ಕ್ರಮವು ತಪ್ಪು. ಕೈದಿಯ ಮೇಲೆ ಅಪರಾಧದ ಆರೋಪ ಹೊರಿಸಲಾಗುತ್ತಿದೆ. ಇದು ಮಾನಪೂರ್ವಕವಾಗಿ ಮಾಡಿದ್ದಲ್ಲವೆಂದು ನಾವು ಒಪ್ಪಬಹುದು. ಇದು ಬಹುಕಾಲದಿಂದ ಸಾಮಾನ್ಯ ಕೈದಿಗಳೆಂಬವರ ವಿಷಯದಲ್ಲಿ ಅನುಸರಿಸಿದ ರೀತಿಯಾಗಿ ಇದನ್ನು ಬೇಗನೇ ಬದಲುಮಾಡಲು ಆಗಲಿಲ್ಲ. ಸರಕಾರವಾದರೂ ಸತ್ಯಾಗ್ರಹಿ ಕೈದಿಗಳ ವಿಷಯವಾಗಿ ಹೊಸರೀತಿಯನ್ನು ಕೈಕೊಳ್ಳಬೇಕಾಗಿದೆ. ಏಕೆಂದರೆ ಸರಕಾರಕ್ಕೂ ಸತ್ಯಾಗ್ರಹೀ ಕೈದಿಗಳಿಗೂ ಇರುವ ವ್ಯತ್ಯಾಸವೆಂದರೆ ನೈತಿಕ ಮಾರ್ಗಭೇದದಲ್ಲಿ ಅಲ್ಲದೆ ಶಾರೀರಿಕ ಶಕ್ತಿಪ್ರದರ್ಶನದಲ್ಲಲ್ಲ. ಹಲವು ಕಾಲದಿಂದ ಇಂಥಾ ಚರ್ಚಾಸ್ಪದ ವಿಷಯದಲ್ಲಿ ನಾವು ಸರಕಾರಕ್ಕೆ ಅಭಿಪ್ರಾಯ ಹೇಳತಕ್ಕದ್ದೋ ಬೇಡವೋ ಎಂದು ಕಾದಿದ್ದೆವು. ಆದರೆ ಸಿ. ಕ್ಲಾಸಿನಲ್ಲಿರಿಸಲಾದ ರಾಜಕೀಯ ಕೈದಿಗಳ ವಿಷಯದಲ್ಲಿ ಸರಕಾರವು ಕೈಕೊಳ್ಳುವ ರೀತಿಯು ಸಮಾಧಾನಕರವಾಗಿಲ್ಲವೆಂಬ ವಿಷಯದಲ್ಲಿ ಆಗುವ ಚಳವಳಿಯು ಈ ಸೂಚನೆ ಕೊಡುವಲ್ಲಿ ಪ್ರೋತ್ಸಾಹ ಕೊಟ್ಟಿತು. ಅವರಿಗೆ ಅಲ್ಲಿ ಯಾವ ರೀತಿಯ ಸೌಕರ್ಯ, ಅಸೌಕರ್ಯಗಳಿವೆಯೆಂಬ ವಿಷಯವು ಹೊರಗಿನ ಜನರಿಗೆ ಸ್ಪಷ್ಟವಾಗಿ ಗೊತ್ತಾಗಿಲ್ಲ.

ಎ. ಬಿ. ಸಿ. ಕ್ಲಾಸುಗಳಲ್ಲಿ

ಸರಕಾರವು ಈಗ ಮಾಡಿದ ವ್ಯವಸ್ಥೆ ಪ್ರಕಾರ, ಎ. ಮತ್ತು ಬಿ. ಕ್ಲಾಸು ಕೈದಿಗಳು ತಮ್ಮ ತಮ್ಮ ವಸ್ತ್ರಉಡುಪುಗಳನ್ನು ತೊಟ್ಟುಕೊಳ್ಳಬಹುದು. ಅದಕ್ಕಿಂತ ಹೆಚ್ಚಿನ ಕೆಲವು ರಿಯಾಯಿತಿ ವಿಷಯ ಅದು ಆಯಾಯ ಕೈದಿಯನ್ನು ಅನುಸರಿಸಿಕೊಂಡಿರುತ್ತದೆ. ಮೆಜಿಸ್ಟ್ರೇಟರು ಯಾವ ಕೈದಿಗೆ ಯಾವ ಹೆಚ್ಚಿನ ಸೌಕರ್ಯ ಒದಗಿಸಬೇಕಾಗಿದೆಯೆಂದು ತಿಳಕೊಳ್ಳುತ್ತಾರೆ. ಎ. ಬಿ. ಸಿ. ಕ್ಲಾಸುಗಳ ಕೈದಿಗಳೆಲ್ಲರೂ ಪುಸ್ತಕಗಳನ್ನು ಓದಬಹುದು; ಆದರೆ ಅದು ಜೈಲಿನ ಅಧಿಕಾರಿಗಳು ಆಕ್ಷೇಪವಿಲ್ಲವೆಂದು ಬಿಟ್ಟ ಪುಸ್ತಕಗಳಾಗಿರಬೇಕು. ಕ್ರಾಂತಿಕಾರರ ಪುಸ್ತಕಗಳನ್ನು ಅವರು ತಡೆಯುತ್ತಾರೆ. ಹಾಗಾಗಿ 'ಚಿತ್ರಗಾರಿಕೆಯಲ್ಲಿ ಕ್ರಾಂತಿ' ಎಂಬ ಪುಸ್ತಕವನ್ನೂ ಒಮ್ಮೆ ಜೈಲಿನ ಅಧಿಕಾರಿಗಳು ತಡೆದದ್ದುಂಟು; ಏಕೆಂದರೆ ಆ ಪುಸ್ತಕದಲ್ಲಿ 'ಕ್ರಾಂತಿ' ಎಂಬ ಶಬ್ದವು ಇತ್ತು. ರಶ್ಯಾ ಎಂಬ ಶಬ್ದವು ಅಲ್ಲಿನ ಅಧಿಕಾರಿಗಳಿಗೆ ಬಹಳ ಭಯಸೂಚಕವಾದದ್ದು. ಡಾಲ್ಟನ್ ಎಂಬವರು ಬರೆದ 'ರಶ್ಯದಲ್ಲಿ ಹನ್ನೆರಡು ಅಭ್ಯಾಸಗಳು' ಎಂಬ ಪುಸ್ತಕವನ್ನು ಒಮ್ಮೆ ಒಬ್ಬ ಸತ್ಯಾಗ್ರಹಿ ಪಡೆಯಬೇಕಾದರೆ ಬಹಳ ಕಷ್ಟಪಡಬೇಕಾಯಿತು. ರಶ್ಯದ ಬೇರೆ ಬೇರೆ ಇಲಾಖೆ ಸರಕಾರ ಕ್ರಮಗಳ ಕುರಿತು ಬರೆದ ಪುಸ್ತಕ ಅದಾಗಿದ್ದರೂ ರಶ್ಯವೆಂಬ ಶಬ್ದವೇ ಅಷ್ಟು ಗಲಭೆಗೆ ಕಾರಣವಾಯಿತು. ಗುಪ್ತಕಾರಸ್ಥಾನ ಮಾಡಲಿಕ್ಕೆ ಪುಸ್ತಕಗಳು ಯಾರಿಗೂ ಬೇಡ. ಗುಪ್ತಕಾರಸ್ಥಾನವನ್ನು ಸೆರೆಮನೆಯೊಳಗೆ ಮಾಡಬೇಕೆಂದು ಮನಸ್ಸಿದ್ದರೆ ಅದನ್ನು ಸುಲಭವಾಗಿ ಮಾಡಬಹುದು. ಅಂಥಾದ್ದನ್ನು ತಪ್ಪಿಸಲು ಸುಲಭೋಪಾಯವೆಂದರೆ, ತರುಣರನ್ನು ಸ್ವಲ್ಪ ಪ್ರಾಯಕ್ಕೆ ಹಿರಿಯರಾದವರೊಡನೆ ಬೆರಸಲು ಬಿಡುವುದೇ ಆಗಿದೆ. ಹೀಗೆ ಮಾಡದಿರುವುದರಿಂದಲೇ ತರುಣರಾದವರು ಒಟ್ಟುಸೇರಿ ತಮ್ಮೊಳಗೆ ದುರಾಗ್ರಹಿ ಭಯಾನಕವಾದ ಕ್ರಾಂತಿಕಾರಕವಾದ ವಿಚಾರಗಳನ್ನು ಮಾಡುತ್ತಾರೆ. ಯಾವುದೇ ಕ್ಲಾಸಿನಲ್ಲಿಟ್ಟವರಾಗಲಿ, ಈಗ ಅನ್ಯೋನ್ಯ ವಿಚಾರವಿನಿಮಯ ಮಾಡಿಕೊಳ್ಳಬೇಕಾಗಿದೆ.

ರಶ್ಯದಲ್ಲಿ ಸೆರೆಮನೆಯ ಜೀವನ

ರಶ್ಯದ ಸೆರೆಮನೆಯಲ್ಲಿ, ಜುಲುಮಾನೆ, ಒತ್ತಾಯದ ಕೆಲಸ ಮೊದಲಾದವು ಉಂಟು. ಕೈದಿಯು ಸಂಪಾದನೆಯಲ್ಲಿ ಹೆಚ್ಚಿನ ಪಾಲು ಸರಕಾರಕ್ಕೂ ಕಡಿಮೆ ಪಾಲು ಕೈದಿಗೂ ಕೊಡಲಾಗುತ್ತದೆ. ಇಂಗ್ಲೆಂಡಿನಲ್ಲಿರುವುದಕ್ಕಿಂತ ಶಿಕ್ಷೆಯ ಅವಧಿ ಅಲ್ಲಿ ಕಡಿಮೆ. ಶಿಕ್ಷೆಯಿಂದ ಸಮಾಜ ಸುಧಾರಣೆ ಮಾಡುವುದು ಅವರ ಉದ್ದೇಶ. ಕೈದಿಗಳು ತಮ್ಮಲ್ಲಿರುವ ಕೆಟ್ಟ ಅಭ್ಯಾಸಗಳನ್ನು ಬಿಟ್ಟುಬಿಡಲಿಕ್ಕೆ ಅನ್ಯೋನ್ಯ ಸಹಕಾರ ಸಂಘವನ್ನೇ ಸೆರೆಮನೆಯಲ್ಲಿ ಏರ್ಪಡಿಸಿಕೊಳ್ಳುತ್ತಾರೆ. ಹಲವು ತೆರೆದ ಸೆರೆಮನೆಗಳು ಅಲ್ಲಿ ಇವೆ. ಬಹಳ ಮುಚ್ಚಿರುವವು, ಅರ್ಧ ತೆರೆದಿರುವವು, ಮೊದಲಾದವು. ಮುಚ್ಚಿರುವ ಸೆರೆಮನೆಯ ಕೈದಿಗಳಿಗಾದರೂ ರಿಯಾಯತಿ ಕಡಿಮೆಯಿಲ್ಲ. ಏಕೆಂದರೆ ಅವನೂ ಸಂಪಾದನೆ ಮಾಡಿ, ತಾನೇ ತನ್ನ ದುಡಿತದಿಂದ ಜೀವನ ಮಾಡುತ್ತಾನೆ; ಕೈದಿಗೂ ವಾರ್ಡರನಿಗೂ ಸಮೀಪ ಸಂಬಂಧವಿರುತ್ತದೆ. ಸ್ವತಂತ್ರ ಸರಕಾರದ ತತ್ವ ಅಲ್ಲಿಯೂ ಅನ್ವಯಿಸಿರುತ್ತದೆ. ಅವರು ದಿನದಲ್ಲಿ ಏಳೆಂಟು ತಾಸು ದುಡಿಯುತ್ತಾರೆ; ಸಾಧಾರಣ ರೀತಿಯ ದುಡಿತ ಅದು; ಆ ಮೇಲೆ ಆಟ, ವಿದ್ಯಾಭ್ಯಾಸ, ವ್ಯಾಯಾಮ, ಭಾಷಣ, ಪುಸ್ತಕಗಳು, ನಾಟಕಗಳು, ಪತ್ರಿಕಾ ಪಠನ ಮೊದಲಾದವು ಆಗುತ್ತವೆ. ಸೆರೆಮನೆಯ ಕಾವಲಿನವರೊಡನೆ ಅವರಿಗೆ ಬೇಕಾದಂತೆ ಸಂಭಾಷಣೆ ಮಾಡಬಹುದು. ಅವರು ಕೆಲಸ ಮಾಡುವ ಸಮಯ ಬಿಟ್ಟು, ಉಳಿದ ಹೊತ್ತು ಹೊರಗೆ ಸೇರಬಹುದು. ಅವರನ್ನು ಬೇಕಾದಂತೆ ಹೊರಗಿನವರು ಕಂಡು ಮಾತನಾಡಬಹುದು; ಅವರ ಕಾಗದ ಪತ್ರಗಳನ್ನು ಒಡೆದು ನೋಡುವುದಿಲ್ಲ. ಅವರಿಗೆ ವಾರದ ಕಡೆಯ ದಿನ ರಜೆಯಾಗಿದೆ. ಮೂರು ನಾಲ್ಕು ತಿಂಗಳಿಗೊಮ್ಮೆ ಒಂದು ಪಕ್ಷದ ರಜೆಯಿರುತ್ತದೆ. ಹೀಗಾಗಿ ಅಲ್ಲಿನ ಸೆರೆಮನೆಗಳಲ್ಲಿ ಮಾನುಷ ಸಹಜವಾದ ವಾತಾವರಣವಿರುತ್ತದೆ. ಮನುಷ್ಯನ ಬುದ್ಧಿಯನ್ನು ಅಲ್ಲಿ ಶಿಕ್ಷಿಸುವುದಿಲ್ಲ. ಮನುಷ್ಯನು ಮನುಷ್ಯತ್ವವನ್ನು ಸಂಪಾದಿಸಲು ಅಲ್ಲಿ ತಡೆಯೇನೂ ಇಲ್ಲ. ಮಗುವಿದ್ದ ಒಬ್ಬ ಸ್ತ್ರೀ ಕೈದಿಯು, ತನ್ನ ಮಗುವನ್ನು ಪೋಷಿಸಲು ಮನೆಗೆ ದಿನಒಂದಕ್ಕೆ ಹಲವು ಸಲ ಹೋಗಬಹುದು. ಅಲ್ಲಿ ಕೆಲಸಗಳಿಗೆ ತೊಂದರೆಯಿಲ್ಲ. ಒಳ್ಳೆಯ ನುರಿತ ಕೆಲಸಗಾರರಿದ್ದಾರೆ. ಆಗಾಗ ಮೇಲ್ವಿಚಾರಣೆಯು ನಡೆಯುತ್ತದೆ. ಸೆರೆಮನೆಯೊಳಗೆ ಮದ್ಯಪಾನವು ಕೂಡದು; ಆದರೆ ಅವರು ರಜೆಯಲ್ಲಿದ್ದು, ಉತ್ಸವಗಳಲ್ಲಿದ್ದ ಇಲ್ಲ.. ಅವರು ನಾಗರಿಕ ಹಕ್ಕನ್ನು ಸ್ವಲ್ಪಕಾಲಕ್ಕೆ ಕಳಕೊಂಡರೂ, ಕೂಲಿಗಾರ ಸಂಘಕ್ಕೆ ಅವರು ಸೇರಿದವರಾಗಿರುತ್ತಾರೆ. ಅವರು ಮತ್ತೆ ಕೆಲವೇ ಸಮಯದಲ್ಲಿ ನಾಗರಿಕ ಹಕ್ಕನ್ನು ಪಡೆಯುತ್ತಾರೆ; ಮತ್ತು ತಮ್ಮ ಪಕ್ಷದ ಸದಸ್ಯರೂ ಆಗುತ್ತಾರೆ. ಒಬ್ಬ ಮಂತ್ರಿಯನ್ನು ಅಲ್ಲಿ ಸೆರೆಮನೆಗೆ ಕಳುಹಿಸಿದರು; ಏಕೆಂದರೆ ಸೆರೆಮನೆಯ ಜೀವನ ಹೇಗಾಗುತ್ತದೆಂದು ತಿಳಿದುಕೊಳ್ಳಲು.

ಇಂತಹ ಎಲ್ಲಾ ಸುಧಾರಣೆಗಳು ನಮಗೆ ಈ ಊರಲ್ಲಿ ಇಲ್ಲ. ಇವುಗಳೆಲ್ಲಾ ಮುಂದೆ ಕಾಂಗ್ರೆಸು ಸರಕಾರವನ್ನು ನಡೆಸುವಾಗ ಇರುವವುಗಳು. ಆದರೆ, ಈಗಿನ ಈ ಕಾಲಕ್ಕೆ ರಾಜಕೀಯ ಕೈದಿಗಳ ಮಟ್ಟಿಗಾದರೂ ಒಂದು ಸುಧಾರಣೆ ಆಗಬೇಕಾದದ್ದು ಅತ್ಯಾವಶ್ಯಕವಾಗಿದೆ.

ನೋಟೀಸು

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. C. No 881/1940.

ಅಡ್ಯಾರು ಅಹ್ಮದ್ ಬ್ಯಾರಿ— ವಾದಿ.

ಮತ್ತು

ಪಿ. ಅಬ್ದುಲ್ ಖಾದರ್ ಅಮು-ಬೋಟು ಕಂಟ್ರಾಕ್ಟರ್, ಕಣ್ಣಾನ್ನೂರು-ನೋರ್ತು ಮಲಬಾರು— ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ, ಮೇಲ್ಕಂಡ ವಾದಿಯು ಪ್ರತಿವಾದಿಯ ಮೇಲೆ ವಾಕ್ಯ ಮಾಡಿದ ಮೇಲ್ಕಂಡ ದಾವೆಯು ತಾರೀಕು 3—3—1941 ನೇ ದಿನ ಪೂರ್ವಾಹ್ನ 10½ ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆ ಬರುತ್ತದೆ. ಆದ್ದರಿಂದ ಸದ್ರಿ ದಿವಸ ಸದ್ರಿ ಗಂಟೆಗೆ ಪ್ರತಿವಾದಿಯು ಕೋರ್ಟಿಗೆ ಖುದ್ದಾಗಲೀ ಯಾ ವಕೀಲರ ದ್ವಾರವಾಗಲೀ, ಹಾಜರಾಗಿ [illegible]ಯನ್ನು ವಾಕ್ಯ ಮಾಡದೆ ಇದ್ರೆ ಪ್ರತಿವಾದಿಯ ಗೈರಹಾಜರಿಯಲ್ಲಿ ಸದ್ರಿ ವ್ಯಾಜ್ಯವನ್ನು ತನಿಖೆ ಮಾಡಲಾದೀತು, ತಿಳಿದಿರಲಿ.

(By the Order of the Court

A. Moosabba,
Vakil for Petitione

Mangalore, 13-2-1941

ಹಿಟ್ಲರನ ಧಾಳಿಯೆತ್ತ ಕಡೆ?

ಈ ಮಹಾಯುದ್ಧವು ಆಸ್ಯಾಖಂಡಕ್ಕೂ ಹರಡುವುದೆ

ಬಲ್ಗೇರಿಯಾ ಪ್ರಕರಣದ ರಹಸ್ಯ?

ಬಹುದಿನಗಳಿಂದ ಜಗತ್ತು ನಿರೀಕ್ಷಿಸುತ್ತಿರುವ ಹಿಟ್ಲರನ ದಾಳಿ ಇನ್ನು ಕೆಲವೇ ದಿನಗಳಲ್ಲಿ ಆಗುವ ಸಂಭವವಿದೆ. ಬ್ರಿಟಿಷ ಸಾಮ್ರಾಜ್ಯವನ್ನು ನಿರ್ನಾಮ ಮಾಡಿ ಅದರ ಸ್ಥಳದಲ್ಲಿ ತನ್ನ ಸಾಮ್ರಾಜ್ಯವನ್ನು ಕಟ್ಟಬೇಕೆಂದು ಹಿಟ್ಲರನು ಸಾಹಸಪಡುತ್ತಿದ್ದರೂ ಇಷ್ಟು ಬೇಗನೆ ಎರಡನೇ ದಾಳಿಯನ್ನು ಪ್ರಾರಂಭಿಸುವ ಇಚ್ಛೆ ಹಿಟ್ಲರನಿಗೆ ನಿಜವಾಗಿಯೂ ಇಲ್ಲವೆಂದು ಧೈರ್ಯದಿಂದ ಊಹಿಸಬಹುದು. ಯಾಕೆಂದರೆ ಕಳೆದ ೨-೩ ವರ್ಷಗಳಿಂದ ಗೆದ್ದ ರಾಷ್ಟ್ರಗಳನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡು, ಅವು ತನ್ನ ವಿರುದ್ಧ ಬಂಡೆಬ್ಬಿಸದಂತೆ ಮಾಡಬೇಕಾಗಿದ್ದರೆ ಹಿಟ್ಲರನಿಗೆ ಕನಿಷ್ಠ ಒಂದೆರಡು ವರ್ಷಗಳಾದರೂ ಬೇಕು. ಆದುದರಿಂದ ಸದ್ಯಕ್ಕೆ "ಘೋರ ಗಂಡಾಂತರ" ಪ್ರಸಂಗ ಬರದೆ ಇರದಿದ್ದರೆ ಅವನು ಖಂಡಿತವಾಗಿಯೂ ದಾಳಿ ಮಾಡುತ್ತಿರಲಿಲ್ಲ ಎಂದು ಊಹಿಸಬಹುದು.

ಆ 'ಘೋರ ಪ್ರಸಂಗ'ವೆಂದರೆ ಇಟಲಿಯ ಪರಾಭವು. ಇಟಾಲಿಯನ್ ದಂಡುಗಳು ಇಷ್ಟು ಬೇಗನೆ ಪರಾಜಯ ಹೊಂದುವವೆಂದು ಹಿಟ್ಲರನಿಗೆ ಅನಿಸಿರಲಿಲ್ಲ. ಗ್ರೀಸ, ಅಲ್ಬೇನಿಯ ಮತ್ತು ಲಿಬಿಯಗಳಲ್ಲಿ ಇಟಾಲಿಯನರು ಒಂದೊಂದು ದುರ್ಗಗಳನ್ನು ವೈರಿಗಳಿಗೆ ಒಪ್ಪಿಸಿ ಹಿಂದೆ ಸರಿಯುತ್ತಿರುವುದನ್ನು ಕಂಡು ಹಿಟ್ಲರನು ಗಾಬರಿಯಾದ. ಇಟಲಿಯ ಪರಾಜಯಕ್ಕಿಂತ ಹಿಟ್ಲರನಿಗೆ ಮತ್ತೊಂದು ಯೋಚನೆ ಬಾಧಿಸುತಿತ್ತು. ಅದೆಂದರೆ ಇಟಲಿಯ ಪರಾಜಯದ ಲಾಭ ಪಡೆದು ಬ್ರಿಟಿಷ ದಂಡುಗಳು ಇಟಲಿಯಲ್ಲಿ ನುಗ್ಗಬಹುದೆಂದು ಹಿಟ್ಲರನಿಗೆ ಅಂಜಿಕೆಯಿತ್ತು. ಆದ್ದರಿಂದಲೇ ಅವನು ಇಟಲಿಗೆ ಜರ್ಮನ ದಂಡುಗಳನ್ನು ಕಳಿಸಿ ಅದನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿರುವನು.

ಆದರೆ ಇಷ್ಟರಿಂದ ಹಿಟ್ಲರನ ಧ್ಯೇಯ ಕೈಗೂಡುವಂತಿಲ್ಲ. ಅತ್ತ ದಿನದಿನಕ್ಕೆ ಪರಾಭವ ಹೊಂದುತ್ತಿರುವ ಇಟಲಿಯ ಮರ್ಯಾದೆ ಉಳಿಯಬೇಕಾಗಿದ್ದರೆ, ಭೂಮಧ್ಯ ಸಮುದ್ರದಿಂದ ಬ್ರಿಟಿಷರನ್ನು ಓಡಿಸುವುದು ಅತ್ಯಗತ್ಯವಿದೆ. ಈ ಉದ್ದೇಶದಿಂದಲೇ ಹಿಟ್ಲರನು ಇತ್ತೀಚೆಗೆ ಅನೇಕ ಮುತ್ಸದ್ದಿತನದ ಕಾರ್ಯಗಳಲ್ಲಿ ಕೈಹಾಕಿರುವನು. ಬಾಲ್ಕನ್ ರಾಷ್ಟ್ರಗಳನ್ನೆಲ್ಲ ತನ್ನೆಡೆಗೆ ಎಳೆದುಕೊಳ್ಳಲು ಸಾಹಸಪಡುತ್ತಿರುವನು. ಫ್ರೆಂಚರಿಂದ ನೌಕಾಬಲವನ್ನು ಪಡೆಯಲು ಪ್ರಯತ್ನಿಸುತ್ತಿರುವನು. ಜಿಬ್ರಾಲ್ಟರದ ಮೇಲೆ ಹಲ್ಲೆ ಮಾಡಲು ಸೂಚಿಸುತ್ತಿರುವನು; ಇತ್ತ ಜಪಾನದ ಮೇಲೂ ಒತ್ತಾಯ ಮಾಡುತ್ತಿರುವಂತೆ ಸುದ್ದಿ ಬಂದಿದೆ. ಇದರಿಂದ ಹಿಟ್ಲರನ ಉದ್ದೇಶವೇನಿದೆಯೆಂಬುದು ಸ್ಪಷ್ಟವಾಗುವುದು. ಅವನೇ ಮೊನ್ನೆ ತಿಳಿಸಿರುವ ಹೊಸ ಯುದ್ಧವು ಪ್ರಾರಂಭವಾಗುವ ಕಾಲಕ್ಕೆ ಸ್ಪೇನ, ಫ್ರಾನ್ಸ, ಜಪಾನ ಮತ್ತು ಬಾಲ್ಕನ ರಾಷ್ಟ್ರಗಳೆಲ್ಲವೂ ಒಟ್ಟಿಗೇ ಯುದ್ಧದಲ್ಲಿ ಸೇರಬೇಕು. ಹಿಟ್ಲರನ ಯೋಜನೆಗಳು ಯಶಸ್ವಿಯಾಗಬೇಕಾದರೆ, ಜರ್ಮನಿಗೆ ರಶಿಯದ ಬೆಂಬಲವಿರಲೇ ಬೇಕು. ಯಾಕೆಂದರೆ ಇಂದಿನ ಪರಿಸ್ಥಿತಿಯಲ್ಲಿ ರಶಿಯವನ್ನು ಎದುರಿಸುವ ಇಚ್ಛೆ ಜರ್ಮನಿಗಿಲ್ಲ. ಆದ್ದರಿಂದ ಜರ್ಮನಿಯು ಮಾಡುವ ಪ್ರತಿಯೊಂದು ಕಾರ್ಯಕ್ಕೆ ರಶ್ಯದ ಬೆಂಬಲ ಇದ್ದೇ ಇದೆಯೆಂದು ಊಹಿಸಲು ಅಡ್ಡಿಯಿಲ್ಲ.

★

ಬಲ್ಗೇರಿಯವೂ ಬರ್ಲಿನ ಒಪ್ಪಂದಕ್ಕೆ ಸಹಿ ಹಾಕುವಂತೆ ಮಾಡಬೇಕೆಂದು ಜರ್ಮನರು ತವಕಪಡುತಿದ್ದಾರೆ. ಯಾಕೆಂದರೆ ರುಮಾನಿಯದಂತೆ ಬಲ್ಗೇರಿಯವೂ ಒಮ್ಮೆ ಹಿಟ್ಲರನ ಬಲೆಯೊಳಗೆ ಬಿದ್ದರೆ ಇದ್ದಾರೆ. ಪ್ರಸಂಗ ಬಂದ ಕೂಡಲೇ ಈ ಜನರು ಜರ್ಮನ ಸೈನ್ಯದ ದಾಳಿಗೆ ಎಲ್ಲ ಬಗೆಯ ಸಹಾಯಗಳನ್ನು ಒದಗಿಸಿಕೊಡುವರೆಂಬುದರಲ್ಲಿ ಏನೂ ಸಂದೇಹವಿಲ್ಲ.

ಆದರೆ ತುರ್ಕಸ್ಥಾನದ ಧೋರಣವು ನಿಶ್ಚಿತವಾಗಿ ಗೊತ್ತಾಗುವ ವರೆಗೆ ಬಲ್ಗೇರಿಯವು ಯುದ್ಧದಲ್ಲಿ ಬೀಳಲಿಕ್ಕಿಲ್ಲ. ಯಾಕೆಂದರೆ ಬಲ್ಗೇರಿಯದಲ್ಲಿ ವಿದೇಶಿ ದಂಡುಗಳು ನುಗ್ಗಿದರೆ, ಆ ಬಗ್ಗೆ ತುರ್ಕಸ್ಥಾನವು ಗಂಭೀರವಾಗಿ ವಿಚಾರ ಮಾಡಲೇಬೇಕಾಗುವುದು. ಅಷ್ಟೇಕೆ ಜರ್ಮನ ದಂಡುಗಳು ಟರ್ಕಿ-ಬಲ್ಗೇರಿಯ ಗಡಿನಾಡಿಗೆ ಬರುವಷ್ಟರಲ್ಲಿ ತುರ್ಕಸ್ತಾನದ

ದಂಡುಗಳು ಅವನ್ನು ಎದುರಿಸಬಹುದು. ಈ ರೀತಿ ಅಲ್ಲಿ ಗಡಿನಾಡಿನಲ್ಲಿ ಹೊಡೆದಾಟ ಪ್ರಾರಂಭವಾದರೆ, ಬಲ್ಗೇರಿಯನ ಸರಕಾರವು 'ಸಹಾಯ' ಕೇಳಬಹುದು. ಇಂಥ ಪ್ರಸಂಗ ಬರಲೆಂದು ಹಾದಿ ಕಾಯುತ್ತ ಕುಳಿತ ಜರ್ಮನಿಯು ಈ ಸುಸಂಧಿ ಬಿಟ್ಟುಕೊಡಲಾರದು.

ಆದರೆ ಬಲ್ಗೇರಿಯದಲ್ಲಿ ಈ ರೀತಿ ಯುದ್ಧದಲ್ಲಿ ಸಿಕ್ಕಿಬೀಳುವುದಕ್ಕೆ ಆ ದೇಶದಲ್ಲಿಯೂ ಕೆಲವರು (ಹೆಚ್ಚಾಗಿ ಕಮ್ಯುನಿಸ್ಟರು ಮತ್ತು ಮಂದಗಾಮಿಗಳು) ವಿರುದ್ಧರಿದ್ದಾರೆಂಬ ಮಾತನ್ನು ನಾವು ಲಕ್ಷ್ಯದಲ್ಲಿಟ್ಟಿರಬೇಕು. ಬಲ್ಗೇರಿಯವು ಮೊದಲು ರಶ್ಯದೊಡನೆ ಪರಸ್ಪರ ಸಹಾಯಕ ಒಪ್ಪಂದ ಮಾಡಿಕೊಳ್ಳಬೇಕೆಂದು ಈ ಜನರ ಅಭಿಪ್ರಾಯಪಡುತ್ತಾರೆ. ಆದರೆ ಸೈನ್ಯವು ಮಾತ್ರ ಇದಕ್ಕೆ ಒಪ್ಪು

ಈಗ ಡ್ಯಾನ್ಯೂಬ ನದಿಯ ದಂಡೆಯ ಮೇಲೆ ಸಂಗ್ರಹವಾಗಿರುವ ಜರ್ಮನ ದಂಡುಗಳು ಸುಲಭವಾಗಿ ಬಲ್ಗೇರಿಯದಲ್ಲಿ ನುಗ್ಗಬಹುದು. ಈ ಉದ್ದೇಶವನ್ನಿಟ್ಟುಕೊಂಡು ಜರ್ಮನರು ಕಳೆದ ೨-೩ ತಿಂಗಳಿಂದ ಅನೇಕ ಬಗೆಯ ಸಿದ್ಧತೆಗಳನ್ನು ಮಾಡಿದ್ದಾರೆ. ಡ್ಯಾನ್ಯೂಬ ನದಿಯ ಬಂದರಗಳಲ್ಲಿ ಅಸಂಖ್ಯಾತ ಜರ್ಮನ ಮಿಲಿಟರಿ ಲಾರಿಗಳು ಸಿದ್ಧವಾಗಿ ನಿಂತಿವೆ; ಡ್ಯಾನ್ಯೂಬ ನದಿಯನ್ನು ದಾಟುವುದಕ್ಕಾಗಿ ಸೇತುವೆ ಪೂಲುಗಳೂ ಸಿದ್ಧವಾಗಿವೆ.

ಬಲ್ಗೇರಿಯದ ಪ್ರತಿಯೊಂದು ಹಳ್ಳಿ ಪಟ್ಟಣಗಳಲ್ಲಿಯೂ ಜರ್ಮನ ತಜ್ಞರು ತುಂಬಿದ್ದಾರೆ; ಇದಲ್ಲದೆ 'ಪ್ರವಾಸಿಕರ' ವೇಷದಲ್ಲಿ ನೂರಾರು ಜರ್ಮನರು ಪ್ರತಿದಿನವೂ ಬಲ್ಗೇರಿಯಕ್ಕೆ ಬರುತ್ತಲೇ

ತ್ತಿಲ್ಲ. ಅದು ಸಂಪೂರ್ಣವಾಗಿ ಜರ್ಮನರ ಸ್ವಾಧೀನವಲ್ಲಿದೆ.

★

'ತನ್ನ 'ಮಹಾಯುದ್ಧ'ವು ಪ್ರಾರಂಭವಾಗುವ ಸಮಯದಲ್ಲಿಯೇ, ಜಪಾನ ಯುದ್ಧದಲ್ಲಿ ಸೇರಬೇಕೆಂದು ಹಿಟ್ಲರನು ಪ್ರಯತ್ನ ಪಡುತ್ತಿರುವುದಾಗಿ ರಾಯಟರ ರಾಜಕೀಯ ಸುದ್ದಿಗಾರನೊಬ್ಬನು ಊಹಿಸುತ್ತಾನೆ. ಜಪಾನವು ಕಳೆದ ಅಕ್ಟೋಬರ ತಿಂಗಳಲ್ಲಿ ಬರ್ಲಿನ ಒಪ್ಪಂದಕ್ಕೆ ಸಹಿ ಹಾಕಿದಾಗಲೆ, ಅದು ಎಂದಾದರೊಂದು ದಿನ, ಬ್ರಿಟನ ಅಮೇರಿಕಗಳ ವಿರುದ್ಧ ಯುದ್ಧ ಹೂಡುವುದೆಂದು ಊಹಿಸಲಾಗಿತ್ತು; ಮತ್ತು ಬರ್ಲಿನ ಒಪ್ಪಂದದಲ್ಲಿಯಾದರೂ ಜಪಾನರು, ಪ್ರಸಂಗ ಬಂದರೆ ಇಟಲಿ-ಜರ್ಮನಿಗಳಿಗೆ ಸಹಾಯ ಮಾಡಬೇಕೆಂದು ಸ್ಪಷ್ಟವಾಗಿ ಹೇಳಲಾಗಿದೆ. ಆ ಒಪ್ಪಂದದ ಪ್ರಕಾರ ಜಪಾನ ಇಂದು ಯುದ್ಧಕ್ಕೆ ಸಿದ್ಧವಾಗುತ್ತಿದೆ. ಆದ್ದರಿಂದ ಈ ಬಗ್ಗೆ ಆಶ್ಚರ್ಯಪಡಬೇಕಾದುದೇನೂ ಇಲ್ಲ. ಜಪಾನು ಯುದ್ಧದಲ್ಲಿ ಬೀಳುವುದು ಖಂಡಿತವಾದರೂ ಯಾವಾಗ ಮತ್ತು ಹೇಗೆ ಎಂಬ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದೀತು. ಸದ್ಯದ ಪರಿಸ್ಥಿತಿಯು ತುಂಬಾ ಅಸ್ಪಷ್ಟವಾಗಿರುವುದರಿಂದ ಇವೆರಡು ಪ್ರಶ್ನೆಗಳಿಗೂ ಉತ್ತರ ಕೊಡುವುದು ಕಷ್ಟ. ಜಪಾನದ ವಿದೇಶ ಮಂತ್ರಿಗಳು ಮೇಲಿಂದ ಮೇಲೆ ಮಾಡುತ್ತಿರುವ ಭಾಷಣಗಳು, ಜಪಾನ ಪತ್ರಿಕೆಗಳ ಆಕ್ರೋಶ, ಚೀನದೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂದು ಜಪಾನ ಸರಕಾರದವರು ಪ್ರಯತ್ನಿಸುತ್ತಿರುವುದು, ಹೈನಾನ ದ್ವೀಪದಲ್ಲಿ ಸೈನ್ಯ ಮತ್ತು ವಿಮಾನ ಕೇಂದ್ರಗಳನ್ನು ಕಟ್ಟುತ್ತಿರುವುದು ಇವೇ ಮೊದಲಾದುವನ್ನು ನೋಡಿದರೆ ಜಪಾನವು ಯುದ್ಧಕ್ಕಾಗಿ ಗಡಿಬಿಡಿಯಿಂದ ಸಿದ್ಧವಾಗುತ್ತಿದೆಯೆಂದು ಊಹಿಸಬಹುದು. ಆದರೆ ಈ ಪ್ರಯತ್ನಗಳಲ್ಲಿ ಜಪಾನಿಗೆ ಯಶಸ್ಸು ಸಿಕ್ಕಿಲ್ಲ. ಚೀನದೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂಬ ಆದರ ಪ್ರಯತ್ನ ವ್ಯರ್ಥವಾಗಿದೆ. ಅಮೇರಿಕವನ್ನು ಬೆದರಿಸಬೇಕೆಂಬ ಚಳವಳಿಯೂ ನಿರುಪಯೋಗಿಯಾಗಿದೆ. ರಶ್ಯದೊಡನೆ ಇನ್ನೂ ಒಪ್ಪಂದವಾಗಿಲ್ಲ. (ಜಪಾನದಲ್ಲಿಯೂ ಸಾಕಷ್ಟು ಸಿದ್ಧತೆಯಾಗಿಲ್ಲ. ಮೂರೂವರೆ ವರ್ಷಗಳಿಂದ ನಡೆದರೂ, ವ್ಯರ್ಥವಾಗಿರುವ ಚೀನಿ ಯುದ್ಧದಿಂದ ಜಪಾನರಿಗೆ ತುಂಬ ಬೇಸರವಾಗಿದೆ; ಯುದ್ಧದ ಸಲುವಾಗಿ ಹಣವನ್ನು ಕಟ್ಟಿ ಕೊಟ್ಟು ಅವರ ಆರ್ಥಿಕ ಪರಿಸ್ಥಿತಿ ಕೆಟ್ಟಿದೆ. ವ್ಯಾಪಾರ ಕೈಗಾರಿಕೆಗಳು ಮಂದವಾಗಿವೆ; ಆಹಾರಸಾಮಗ್ರಿಗಳು ಸಿಗುವುದು ದುಸ್ತರವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಚೀನಿ ಯುದ್ಧವನ್ನು ನಡೆಸುವುದೇ ಸಾಧ್ಯವಿಲ್ಲದಂತಾಗಿದೆ. ಹೀಗಿರುವಾಗ, ಈ ಯುದ್ಧದ ಜೊತೆಗೆ ಮತ್ತೊಂದು ಯುದ್ಧವನ್ನು ಪ್ರಾರಂಭಿಸಲಿಕ್ಕೆ ಜನರು ಬಹಳ ಮಟ್ಟಿಗೆ ಒಪ್ಪುತ್ತಿಲ್ಲ.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/- to Rs. 5000 run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director.*

ವಸಂತಕಾಲ. ಶುಭ್ರವಾದ ಬೆಳದಿಂಗಳು ಸರ್ವತ್ರ ಬಿದ್ದಿತ್ತು. ನಾನು ನಟ್ಟ ದೃಷ್ಟಿಯಿಂದ ಮೀನುವನ್ನು ಹುಚ್ಚನಂತೆ ನೋಡುತ್ತಿದ್ದೆ. ಅದೇ ಸಮಯ ಮೀನು ಸುಂದರವಾದ ಮಂದ ಮಸನಗೆಯಿಂದ ಪ್ರಶ್ನೆ ಕೇಳಿದಳು—'ಏನನ್ನು ನೋಡುತ್ತಿದ್ದೀಯೆ? ನನ್ನ ಮೋರೆಯನ್ನೇ ನೋಡುತ್ತಿರಲಿಕ್ಕೆ ಅದೇನು ಪ್ರದರ್ಶನದ ವಸ್ತುವೆ ಎಂದು ತಿಳಿದೆಯಾ?'

'ಮೀನು! ನಿನ್ನ ಮೋರೆ ಪ್ರದರ್ಶನದ ವಸ್ತುವೆ ಅಲ್ಲ, ಆದರೆ ನನಗದು ನಿಜವಾಗಿಯೂ ಚುಂಬಕವಾಗಿರುವುದಲ್ಲ! ಹಾ! ಮೀನು ನೀನೆಂಥ ಸುಂದರಿ! ದರ್ಶನದ ಒಡವೆಯನ್ನು ನೋಡಿ ಕಣ್ಣುಗಳು ದಣಿಯುವುದೇ ಇಲ್ಲ ಮೀನು!'

'ಶೀನೂ, ಚೆನ್ನಾಗಿ ಮಾತಾಡಿದೆ. ಹೇಳುವದೆಲ್ಲಾ ಸುಳ್ಳು. ಉತ್ಪ್ರೇಕ್ಷೆಯಿಂದ ಪ್ರಯೋಜನ ಏನೂ ಇಲ್ಲ ಶೀನು.'

'ಮೀನಾ, ನಾನು ನೀನಾಗಿದ್ದರೆ, ಮತ್ತೆ ನೀನು ನಾನಾಗಿದ್ದರೆ ಇಂಥ ಮಾತುಗಳನ್ನು ನೀನೆಂದೂ ಹೇಳುತ್ತಿದ್ದಿಲ್ಲ, ಅಲ್ಲ; ಮೀನೂ ನೀನಿನ್ನೂ ಪ್ರಪಂಚ ವ್ಯಾಪಾರವನ್ನು ತಿಳಿಯದ ಭೋಳೆಯಾಗಿದ್ದಿ. ನಿನ್ನ ಕಣ್ಣಿನ ಮೋಹನಶಕ್ತಿಯು ಎಷ್ಟು ಎನೆಂದು ಹೇಳಲಿ ಮೀನ! ನಿನ್ನ ಮಾತುಗಳಿಂದ ನನ್ನ ಹೃದಯವು ಒಡೆದು ಚೂರುಚೂರಾಗುತ್ತದೆ. ಇದನ್ನೆಲ್ಲ ನೀನು ತಿಳಿದಿಯಾದರೆ, ಅನುಭವ ಮಾಡಿದೆಯಾದರೆ, ನನ್ನ ಜೀವನವು ಇಂದೇ ಫಲವಾಗುವುದು, ಮೀನು.'

'ಶೀನು, ಇವೆಲ್ಲ ನಿನ್ನ ಹೃದಯದಿಂದ ಹೊರಟ ಉದ್ಗಾರಗಳೆಂದು ನಾನು ತಿಳಿಯಲೆ? ನೀನು ಈ ಮಾತುಗಳಿಂದ ಮುಂದೆ ಎಂದಾದರೂ ಪಶ್ಚಾತ್ತಾಪ ಪಡುವುದಿಲ್ಲವಷ್ಟೆ!'

'ಮೀನು, ನನ್ನ ಮೋಹಿನಿ! ಹೇಳು, ಯಾವ ಬಗೆಯಿಂದ ನನ್ನ ಮಾತುಗಳ ಮೇಲೆ ನಿನಗೆ ವಿಶ್ವಾಸವಾಗುವುದೋ ಅದನ್ನು ಹೇಳು!'

'ಸರಿ, ಶೀನು ಹಾಗಿದ್ದ ಮೇಲೆ, ಈ ಕ್ಷಣದಿಂದಲೇ ನಾನು ' ಹೇಳುತ್ತ ಹೇಳುತ್ತ ಮೀನುವಿನ ಕಂಠವು ಉಜ್ಜಿ ಮತ್ತು ಸಂಕೋಚದಿಂದ ಬಿಗಿದು ಬಂದಿತು. ಮತ್ತೆ ತನ್ನ ಚಂಚಲ ನೇತ್ರಗಳಿಂದ ಒಮ್ಮೆಗೆ ನನ್ನನ್ನು ನೋಡಿ ಕೊರಳಿಗೆ ಒಂದು ಹೂಮಾಲೆಯನ್ನು ಹಾಕಿದಳು. ಮೀನು, ನನ್ನ ಹೃದಯದ ರಾಣಿ, ಇನ್ನು ನನ್ನವಳಾದಳು. ಪ್ರಪಂಚದ ಪಾಪ ಪೂರಿತ ನೇತ್ರಗಳಿಂದ ಅವಳನ್ನು ಕಾಪಾಡುವುದು ನನ್ನ ಕರ್ತವ್ಯವಾಯಿತು. ಮೀನು ತನ್ನನ್ನು ನನಗೆ ಒಪ್ಪಿಸಿ ತನ್ನ ಭಾವೀ ಜೀವನದಿಂದ ನಿಶ್ಚಿಂತಳಾದಳು.

ಇದುವೇ ನನ್ನ ಜೀವನದ ಚಿರಸ್ಮರಣೀಯವಾದ ಆ ಮೊದಲ ದಿನವಾಗಿತ್ತು. ಆ ಮೇಲೆ?

— ೨ —

ಜೀವನದ ಎರಡನೆಯ ದಿನವು ಆರಂಭವಾಯಿತು.

ಅದನ್ನು ನೆನಪಿಗೆ ತಂದುಕೊಂಡು ನನ್ನ ತಲೆಯು ಲಜ್ಜೆಯಿಂದಲೂ ದುಃಖ

ಈ ವಾರದ ಕತೆ:

ಜೀವನದ ಆ ಮೂರು ದಿನಗಳು!

ಬರೆದವರು: ಕೆ. ಶ್ರೀನಿವಾಸ ಶೆಣೈ, ಕಾರ್ಕಳ.

ದಿಂದಲೂ ತಗ್ಗುತ್ತದೆ. ಜೀವನದ ಮೇಲೆ ಒಂದು ಬಗೆಯ ಜುಗುಪ್ಸೆ ಹುಟ್ಟುತ್ತದೆ. ಭೂಮಿಯು ಒಡೆದು ಹೋಗಲಿ ಮತ್ತು ನಾನು ಅದರೊಳಗೆ ಕುಸಿದುಹೋಗಲಿ—ಎಂದು ಎನ್ನಿಸುತ್ತದೆ. ಮೆಟ್ರಿಕ್ಯುಲೇಶನ್ ಪರೀಕ್ಷೆ ಕೊಟ್ಟ ತರುವಾಯ ನಾನು ಗವರ್ನಮೆಂಟ ಕಾಲೇಜನ್ನು ಸೇರಿದೆ. ಅಲ್ಲಿ ನನ್ನ ಕಣ್ಣುಗಳು ತೆರೆದುವು. ಅದು ಸೌಂದರ್ಯದ ಸಾಮ್ರಾಜ್ಯವೇ ಆಗಿತ್ತು. ನೋಡಿ ನಾನು ಬೆರಗಾದೆ. ಆ ಸೌಂದರ್ಯದ ಮುಂದೆ ಮೀನು ಮಂದಪ್ರಕಾಶದಂತೆ ತೋರಿದಳು. ಸಂಸಾರವೆಂದರೆ ಸ್ವರ್ಗ—ಹೀಗೆಂದು ನಾನೆಣಿಸಿದೆ. ಒಮ್ಮೆಗೆ ತಪ್ಪಿಬಿಟ್ಟೆ. ಆದರೆ ಜ್ಞಾನಕ್ಕೆ ಬಂದ ನಂತರವೂ ತಪ್ಪನ್ನು ಯಾಕೆ ಸ ಧಾರಿಸಿಕೊಳ್ಳಬಾರದು?—ಹೀಗೆ ನಾನು ಊಹಿಸಿದೆ.

ಸರಿ, ನನ್ನದೇ ಕ್ಲಾಸಿನಲ್ಲಿ ಓದುತ್ತಿದ್ದ ರಮಣಿ ನನ್ನ ಪ್ರೇಮಿಕೆಯಾದಳು. ನನ್ನ ಹೃದಯಪಟಲದಿಂದ ಮೀನ ಳ ಚಿತ್ರವು ಮೆಲ್ಲ ಮೆಲ್ಲಗೆ ಅಳಿಸಿಹೋಗುತ್ತ ಬಂದಿತು. ನಾನು ಅವಳಿಂದ ದೂರ ದೂರ ಇರಹತ್ತಿದೆ. ಅವಳ ವಿಷಯವಾಗಿ ಆಲೋಚಿಸುವುದು ಪಾಪವಾಗಿ ತೋರಿತು. ನನ್ನ ಈ ಮನೋಭಾವ ಅವಳಿಗೆ ತಿಳಿಯದೆ ಇರಲಿಲ್ಲ. ನನಗೂ ಅವಳಿಗೂ ಸಮಾಗಮವಾದಾಗ ಸುಮ್ಮಗೆ ಅವಳು ತಲೆತಗ್ಗಿಸಿ ಹೋಗುತ್ತಿದ್ದಳು. ಅವಳ ಆ ಹತ ಹೃದಯದಿಂದ ದೀರ್ಘ ಶ್ವಾಸವೊಂದು ಹೊರಟು ಹೋಗುತ್ತಿದ್ದಿತು.

ಒಂದು ದಿನ ಕಾಲೇಜಿನಲ್ಲಿ ಓದುತ್ತಿದ್ದಾಗ ಅವಳ ಒಂದು ಪತ್ರವು ಬಂದಿತು. ಅದರಲ್ಲಿ ಈ ಕೆಲವು ಸಾಲುಗಳಿದ್ದುವು—'ಪ್ರಿಯ ಶೀನು, ನಿನ್ನ ಚರಣಗಳಲ್ಲಿ ಅರ್ಪಿತವಾದ ಈ ಶರೀರವು ಇತರರಿಗೆ ಮಾರಿಹೋಗದ ಹಾಗೆ ನಾನು ಅನೇಕ ಬಾರಿ ಕಾಪಾಡಿದೆ. ಆದರೆ ಈಗ ಪುನಹ ನನ್ನನ್ನು ಒಬ್ಬ ವೃದ್ಧನ ಕೊರಳಿಗೆ ಕಟ್ಟಿಹಾಕಬೇಕೆಂದು ಸಮಾಜವು ಭಗೀರಥ ಪ್ರಯತ್ನ ಮಾಡಿದೆ. ನಾನದನ್ನು ತಪ್ಪಿಸಲಿಕ್ಕೆ ಅಸಮರ್ಥಳಾಗಿದ್ದೇನೆ. ಈ ಪತ್ರ ಮುಟ್ಟುತ್ತಲೇ ನೀನು ಬರುವಿಯಾಗಿ ನಂಬಿದ್ದೇನೆ.'

ಪತ್ರವನ್ನು ಪಡೆದ ಮೇಲೆ ನಾನು ಅದಕ್ಕೆ ಉತ್ತರವನ್ನು ಕೊಡಲೂ ಇಲ್ಲ, ಅವಳನ್ನು ಕಾಣಲು ಹೋಗಲೂ ಇಲ್ಲ. ಮೀನ ಳ ವಿವಾಹವು ಮೊದಲೇ ಹೇಳಿದ ಪ್ರಕಾರ ಒಬ್ಬ ವೃದ್ಧನೊಡನೆ ಆಗಿ ಹೋಯಿತು. ಮದುವೆಗೆ ನಾನು ಹೋಗಿದ್ದೆ. ಅವಳನ್ನು ನೋಡಿದೆ. ಯಾವ ಹೃದಯದಲ್ಲಿ ಪ್ರೇಮ ಮತ್ತು ಸಂತೋಷದ ಪ್ರವಾಹವು ಉಕ್ಕಿಹರಿಯುತ್ತಿತ್ತೋ ಅದೇ ಹೃದಯದಲ್ಲಿ ಇಂದು ಕರುಣೆಯ ಹೊಳೆಯು ಹರಿಯುತ್ತಿತ್ತು.

ಆ ಮೇಲೆ..?

— ೩ —

ಇದಾದ ಮೇಲೆ ಜೀವನದ ಮೂರನೆಯ ದಿನವು ಬಂದಿತು.

ಗ್ರೀಷ್ಮಕಾಲದ ಒಂದು ಸಂಧ್ಯಾಕಾಲ. ಎರಡು ವರ್ಷಗಳ ದೀರ್ಘಕಾಲವು ಕಳೆದ ಮೇಲೆ, ಮೀನು ತಾಯಿ ಮನೆಗೆ ಬಂದು ಎರಡು ದಿನಗಳು ತಾನೇ ಆಗಿದ್ದುವು. ಈಗ ಅವಳು ವಿಧವೆಯಾಗಿದ್ದಳು. ಇದೇ ವಿಷಯವಾಗಿ ನಾನು ಆಲೋಚಿಸುತ್ತಿದ್ದೆ. ನನ್ನ ಜೀವನದ ಆ ಎರಡು ಮಹತ್ವಪೂರ್ಣ ದಿನಗಳ ಘಟನೆಗಳ ಒಂದರ ಮೇಲೊಂದಾಗಿ ನನ್ನ ನೆನಪಿಗೆ ಬಂದುವು. ನನಗೆ ಪಶ್ಚಾತ್ತಾಪವಾಯಿತು. ಅವಳ ಜೀವನವನ್ನು ವ್ಯರ್ಥ ಮಾಡಿದ ಸಂಪೂರ್ಣ ಉತ್ತರದಾಯಿತ್ವವು ನನ್ನದು ಎಂದು ನನಗನ್ನಿಸಿತು.

ಒಂದು ದಿನ ಅವಳು ಹಳ್ಳಿಯ ಬಾವಿಯಿಂದ ನೀರು ತರುತ್ತಾ ಇದ್ದಳು. ಅವಳ ಉದಾಸ ಹಾಗೂ ನಿಷ್ಪ್ರಭ ನೇತ್ರಗಳು ಆಕಾಶದ ಕಡೆಗೆ ತಿರುಗಿದ್ದುವು. ಅವುಗಳಲ್ಲಿ ಆಕಾಂಕ್ಷೆ ಆದವಾ ಆಶೆ, ಯಾವುದೂ ಇದ್ದಿಲ್ಲ. ಅವಳು ಪ್ರಾಯಶಃ ನನ್ನನ್ನೇ ಕುರಿತು ಆಲೋಚಿಸುತ್ತಿದ್ದಿರಬಹುದು. ಅಷ್ಟರಿಂದಲೇ ದಾರಿ ಮೇಲೆ ನಡೆಯುವ ನನ್ನನ್ನು ನೋಡಿ ಅವಳ ಮುಖದ ಮೇಲೆ ತಿರಸ್ಕಾರ ಮತ್ತು ಉಪೇಕ್ಷೆಯ ತಾಂಡವ ನೃತ್ಯವಾಗಲು ಆರಂಭವಾಗುತ್ತಿತ್ತು.

ಇದ ನನ್ನ ಜೀವನದ ಮೂರನೆ ದಿನ ಮೀನುವಿನ ಮನೋಭಾವನೆಗಳಲ್ಲಿ ಒಂದು ಘೋರ ಪರಿವರ್ತನೆ ಆಗಿತ್ತು.

— ೪ —

ದಿನಗಳ ಮೇಲೆ ದಿನಗಳು ಕಳೆದುವು. ಮೀನು ದಿನದಿಂದ ದಿನಕ್ಕೆ ಕೃಶಳಾಗುತ್ತಾ ಬಂದಿದ್ದಳು. ಅವಳು ಮೇಲಿಂದ ಮೇಲೆ ದೀರ್ಘ ಶ್ವಾಸವನ್ನು ಬಿಡುತ್ತಿದ್ದಳು. ಅವಳ ಈ ನಿಟ್ಟುಸಿರುಗಳಲ್ಲಿ ಎಷ್ಟೋ ಹಳೆಯ ನೆನಹುಗಳು ಸುಟ್ಟು ಭಸ್ಮೀಭೂತವಾಗುತ್ತಿರುವುವೋ ಎಂಬಂತೆ ಭಾಸವಾಗುತ್ತ. ಅವನ್ನು ನೋಡಿ ನನ್ನ ಹೃದಯಕ್ಕೂ ಆಘಾತವಾಯಿತು. ಮತ್ತು ಅಲ್ಲಿಂದ ಬಿರುಗಾಳಿ ಏಳತೊಡಗಿತು. ಇದು ನನ್ನ ಜೀವನದ ಮೂರನೆಯ ಮಹತ್ವಪೂರ್ಣ ದಿನವನ್ನು ಪ್ರಕಾಶಮಯವಾಗಿ ಮಾಡಿದ ಅದೇ ಪ್ರಣಯದ ಬಿರುಗಾಳಿ ಆಗಿದ್ದಿತು. ನಾನು ಹೋಗಿ ಮೀನ ಳ ಚರಣಗಳಲ್ಲಿ ಬಿದ್ದು ಮೊರೆಯಿಟ್ಟೆ. ಮೀನು ಉಪೇಕ್ಷಾಪೂರ್ಣ ಭಾವದಿಂದ ತನ್ನ ಕಾಲುಗಳನ್ನು ಸೆಳೆದುಕೊಂಡಳು. ನನ್ನ ತಲೆ ಹೋಗಿ ಒಂದು ಕಲ್ಲಿಗೆ ಬಡೆಯಿತು. ನಾನು ಎಚ್ಚರತಪ್ಪಿ ಬಿದ್ದುಕೊಂಡೆ. ಎಚ್ಚತ್ತಾಗ ನನ್ನ ತಲೆಯು ಮೀನುವಿನ ಮಡಿಲಲ್ಲಿತ್ತು.

ಅವಳು ಕೇಳಿದಳು—'ನೋವಾಗುತ್ತದೆಯೆ?'

ನಾನು ಕೂಗಿದೆ—'ಮೀನು, ನನ್ನ ಅಪರಾಧವನ್ನು ಕ್ಷಮಿಸು.' ಅವಳು ಅತ್ತಳು. ನನ್ನ ಧೈರ್ಯದ ಕಟ್ಟೆಯು ಕಡಿದುಹೋಯಿತು. ನಾವಿಬ್ಬರೂ ಬಹಳ ಸಮಯದ ತನಕ ಕಣ್ಣೀರನ್ನು ಸುರಿಸುತ್ತ ಇದ್ದೆವು. ಕಣ್ಣೀರಿನ ಕೋಶವು ಬರಿದಾಗಿ ಹೋದ ಬಳಿಕ ನಾವು ಮಾತಾಡತೊಡಗಿದೆವು. ಮೀನು ನನ್ನನ್ನು ಕ್ಷಮಿಸಿದ್ದಳು. ಪ್ರಾಯಶ್ಚಿತ್ತವಾಗಿ ನಾನು ಆಜನ್ಮ ಅವಿವಾಹಿತನಾಗಿ ಇರುವ ಪ್ರತಿಜ್ಞೆ ತಗೆದುಕೊಂಡೆ. ಅವಳು ಬೇಡವೆಂದಳು, ಪರಂತು ನಾನು ಕೇಳಲಿಲ್ಲ. ನಮ್ಮ—ಜೀವನದ ಆ ಮೂರು ದಿನಗಳನ್ನು ಮರೆತು ನಾವೀಗ ಸಹೋದರ, ಸಹೋದರಿಯರಾಗಿ ಇರತೊಡಗಿದ್ದೇವೆ.

—ಆಧಾರದಿಂದ.

THE
Canara Banking Corporation Ltd.,
(INCORPORATED IN BRITISH INDIA)
Estd: 1906
Head Office: UDIPI, S. Kanara.
Our attractive Rates on Deposits.

FIXED DEPOSITS

3 to 6 months	$2\frac{1}{2}$% p. a.
6 to 9 ,,	3% ,,
One year	$3\frac{1}{2}$% ,,
Two years	4% ,,
SHORT TERM Deposits	$2\frac{1}{2}$% p. a.
Current Account	1% p. a.
Savings Bank	$2\frac{1}{2}$% ,,

Particulars of other kinds of deposits on application.

ಹಿಂದುಸ್ಥಾನದಿಂದ ಪಾಕಿಸ್ತಾನಕ್ಕೆ

ಲೀಗ್ ಮುಸಲ್ಮಾನರ ದೇಶವಿಘಾತ್ಮಕ ಮನೋವೃತ್ತಿ

[ಲೇಖಕರು: ಶ್ರೀ. ಜಗನ್ನಾಥ ಪ್ರಸಾದ ಶರ್ಮಾ]

ಹಿಂದುಸ್ಥಾನವನ್ನು ಪಾಕಿಸ್ತಾನ ಮಾಡಬೇಕೆಂದು ಮುಸ್ಲಿಂ ಲೀಗು ಪ್ರತಿಜ್ಞೆಯನ್ನು ತೆಗೆದುಕೊಂಡಿದೆ. ಈ ಲೀಗಿನ ಸರ್ವಾಧಿಕಾರಿಗಳಾದ ಜಿನ್ನಾ ಸಾಹೇಬರು ಹಿಂದುಸ್ಥಾನವನ್ನು ಹಿಂದೂಭಾರತ-ಮುಸಲ್ಮಾನ ಭಾರತ ಎಂದು, ಎರಡಾಗಿ ವಿಭಾಗಿಸಬೇಕೆಂದು ಬಹಳ ಪೇಚಾಡುತ್ತಾರೆ. ಪರಂತು ಇದೆಂದ್ಯಾದರೂ ಸಂಭವವೆ? ಹಾಗೆಂದಾದರೂ ಆದರೆ ಸಮಗ್ರ ಭಾರತದಲ್ಲಿ ಸುಖಶಾಂತಿಗಳು ನೆಲೆಗೊಂಡಾವೆ? ಇದನ್ನು ಪ್ರತಿಯೊಬ್ಬ ದೇಶಹಿತೈಷಿಯು ಚಿಂತಿಸಬೇಕು. ಪಾಕಿಸ್ತಾನ ಯೋಜನೆಯು ಕಾರ್ಯರೂಪಕ್ಕೆ ಬರುವದಾದರೆ ಮುಸ್ಲಿಂ ಜನತೆಯ ಬಾಹುಳ್ಯವಿರುವ ಹಿಂದುಸ್ಥಾನದ ಪ್ರಾಂತ್ಯಗಳು ಈ ಪಾಕಿಸ್ತಾನದಲ್ಲಿ ಅಡಕವಾಗುವವು ಮತ್ತು ಪೂರ್ವದಿಂದಾರಂಭಿಸಿ ದಕ್ಷಿಣಕ್ಕೆ ಬಂದು, ಅಲ್ಲಿಂದ ಪಶ್ಚಿಮಕ್ಕಿರುವ ಎಲ್ಲ ಮುಸ್ಲಿಂ ರಾಷ್ಟ್ರಗಳೊಂದಿಗೆ ಸಂಬಂಧವನ್ನಿಟ್ಟುಕೊಂಡು ಈ ಯೋಜನೆಯು ಕಾಲಕ್ರಮದಲ್ಲಿ ಸಮಸ್ತ ಹಿಂದುಸ್ಥಾನವನ್ನು ಪಾಕಿಸ್ತಾನದೊಳಗೆ ಅಡಗಿಸಿಕೊಳ್ಳುವದು. ಸದ್ಯಕ್ಕೆ ಅರ್ಧದಷ್ಟು ಹಿಂದುಸ್ಥಾನದಲ್ಲಿ ಮುಸಲ್ಮಾನ ಅಧಿಕಾರ ಸತ್ತೆಯನ್ನು ಸ್ಥಾಪಿಸಿಕೊಂಡು ಉಳಿದ ಕಡೆಗಳ ಹಿಂದುಗಳು ಯಾವಾಗಲೂ ಈ ಸತ್ತೆಗೆ ಹಲಿಬಾಗಿ ಇರುವಂತೆ ಮಾಡುವದೇ ಈ ಯೋಜಕರ ಮುಖ್ಯೋದ್ದೇಶವಿರುತ್ತದೆ. ಇದರಿಂದ ಈಗ ಸಿಂಧದಲ್ಲಿ ಸಾಧಾರಣ ಸಣ್ಣ ರೂಪದಲ್ಲಿ ತೋರಿಕೊಂಡಿರುವ ವಿಷಮ ಸಮಸ್ಯೆಯು ಮತ್ತೆ ವಿಶಾಲ ಹಿಂದುಸ್ಥಾನದಲ್ಲಿ ಬ್ರಹ್ಮರಾಕ್ಷಸನ ಭಯಂಕರ ರೂಪವನ್ನು ತಾಳುವದು. ಶಾಂತಿಪ್ರಿಯರಾದ ಹಿಂದುಗಳು ಆಗ ಮುಸ್ಲಿಂ ಅಧಿಕಾರ ಸತ್ತೆಯ ಅನ್ಯಾಯ ಅತ್ಯಾಚಾರಗಳಿಗೆ ಬಲಿಯಾಗಿ ಕಷ್ಟನಷ್ಟಗಳನ್ನು ಅನುಭವಿಸುವದು ಮಾತ್ರವಲ್ಲ, ತಮ್ಮ ಅಸ್ತಿತ್ವವನ್ನೇ ಕಳಕೊಳ್ಳಬೇಕಾದ ದುರ್ಧರ ಪ್ರಸಂಗಕ್ಕೆ ಈಡಾಗಬೇಕಾಗುವದು.

ಹಿಂದುಸ್ಥಾನದ ನಾಮಕರಣ

ಭಾರತವನ್ನು ಹಿಂದುಸ್ಥಾನವೆಂದು ಹೆಸರಿಟ್ಟವರು ಮುಸಲ್ಮಾನರು. ಈಗ ಅವರೇ ಮುಸಲ್ಮಾನರು ಭಾರತವನ್ನು ಪಾಕಿಸ್ತಾನವೆಂದು ಕರೆಯಲಿಕ್ಕೆ ಉದ್ಯುಕ್ತರಾಗಿದ್ದಾರೆ. ಆದರೆ ಹಿಂದುಸ್ಥಾನವೆಂದು ಹೆಸರಿಟ್ಟವರು ವಿದೇಶೀಯರಾಗಿದ್ದರಾದರೆ, ಈಗ ಪಾಕಿಸ್ತಾನವೆಂದು ಕರೆಯುವವರು ಸ್ವದೇಶೀಯರಾಗಿರುವರು! ಹಿಂದಿನ ಆಕ್ರಮಣಕಾರಿಗಳು ಭಾರತವನ್ನು ಗೆದ್ದು ಅದನ್ನು ಸಂಪೂರ್ಣ ಮುಸಲ್ಮಾನಮಯವನ್ನಾಗಿ ಮಾಡಬೇಕೆಂದು ಬಯಸಿದ್ದರು. ಆದರೆ ಅವರ ಆ ದುರಾಶೆಯು ಕೊನೆತನಕವೂ ಫಲಕೊಡಲಿಲ್ಲ. ಆದ್ದರಿಂದಲೇ ಅವರನಂತರದ ಈ ಸ್ವದೇಶೀಯ ಮುಸಲ್ಮಾನರು ಹಿಂದುಸ್ಥಾನವನ್ನು ಪಾಕಿಸ್ತಾನ ಮಾಡಲು ಹೊರಟಿದ್ದಾರೆ.

ಇಂಗ್ಲೀಯರು ಹಿಂದುಸ್ತಾನಕ್ಕೆ ಬರುವ ಮೊದಲು ಇಲ್ಲಿ ಮುಸಲ್ಮಾನರ ಶಾಸನಾಧಿಕಾರವು ಸಂಪೂರ್ಣ ಮುಗಿದು ಹೋಗಿತ್ತು ಮತ್ತು ಹಿಂದುಸ್ಥಾನವನ್ನು ಹಿಂದುಗಳೇ ಆಳಲಾರಂಭಿಸಿದರು. ಕರ್ಮಧರ್ಮಸಂಯೋಗದಿಂದ ಮತ್ತಿನ ವರ್ಷಗಳಲ್ಲಿ ಹಿಂದುಗಳ ಸ್ಥಾನವನ್ನು ಆಂಗ್ಲೇಯರು ಆಕ್ರಮಿಸಿಕೊಂಡು ಈ ಹೊತ್ತಿನ ತನಕ ಅವರೇ ಅದನ್ನು ದಕ್ಕಿಸಿಕೊಂಡಿದ್ದಾರೆ. ಮುಂದೆ ಬಹು ಸಂಖ್ಯಾಕರಾಗಿ ಉಳಿದಿರುವ ಹಿಂದುಗಳ ಕೈಗೆ ರಾಜ್ಯಾಧಿಕಾರವು ಹೋಗಿ, ಅವರು ಮುಸಲ್ಮಾನರ ಹಿಂದಿನ ಅತ್ಯಾಚಾರಗಳ ಪ್ರತಿಕಾರಕಕೊಳ್ಳುವರೋ ಎಂಬ ವ್ಯರ್ಥ ಭಯವು ಅವರನ್ನು ಬಹಳ ಪೀಡಿಸುತ್ತದೆ. ಆದ್ದರಿಂದಲೇ ಅವರು ಭಾರತವನ್ನು ಪಾಲುಮಾಡಿಕೊಳ್ಳಲಿಕ್ಕೆ ಹವಣಿಸಿದ್ದಾರೆ. ಪರಂತು ಪಾಲಾದರೆ ಭಾರತವು ಯಾವ ದುರ್ಗತಿಗೆ ಬರುವದೆಂಬುದನ್ನು ಯಾರೂ ಊಹಿಸುವ ಗೋಜಿಗೆ ಹೋಗಿರುವದಿಲ್ಲ.

ಆಂದೋಲನದ ಮೂಲ

ಅರೇಬಿಯಾ, ಪರ್ಶಿಯಗಳಿಂದ ಬಂದು ಇಲ್ಲಿ ನೆಲೆಯಾಗಿರುವ ಮುಸಲ್ಮಾನರ ಸಂಖ್ಯೆ ಸೇಕಡಾ ೧೦ರಷ್ಟು ಇರುವದಿಲ್ಲ. ಉಳಿದ ಸೇಕಡಾ ೯೦ರಷ್ಟು ಮುಸಲ್ಮಾನರು ಹಿಂದೂ ವಂಶಜರಾಗಿ ಇರುತ್ತಾರೆ. ಆದರೂ ಧರ್ಮಾಂತರ ಹೊಂದಿದುದರಿಂದ ಹಿಂದೂವಂಶಜರಾದ ಈ ಮುಸಲ್ಮಾನರೇ ಈಗ ಭಾರತೀಯ ವೇಷ ಭಾಷೆ, ಸಭ್ಯತೆ ಸಂಸ್ಕೃತಿ, ಭಾವ ಇತಿಹಾಸಗಳ ಪರಮಶತ್ರುಗಳಾಗಿ ಪರಿಣಮಿಸಿದ್ದಾರೆ. ಅವರು ಹಿಂದುಗಳನ್ನು ಕಾಫರರೆಂದೂ, ಹಿಂದೂದೇಶವನ್ನು ಕಾಫರರ ದೇಶವೆಂದೂ ತಿಳಿಯುತ್ತಾರೆ. ಆದ್ದರಿಂದಲೇ ಹಿಂದೂಸ್ಥಾನವನ್ನು ಪಾಕಿಸ್ತಾನವನ್ನಾಗಿ ಮಾಡುವ ಆಂದೋಲನವಿರುತ್ತದೆ. ಹೀಗಿದ್ದ ಮೇಲೆ ಪಾಕಿಸ್ತಾನವಾದ ಮೇಲೂ ಈ ಮುಸಲ್ಮಾನರು ಹಿಂದುಗಳನ್ನು ಯಾವ ರೀತಿಯಿಂದ ನೆಮ್ಮದಿಯಲ್ಲಿ ಇರಬಿಡುವರೋ, ಅದನ್ನು ಹೇಳಲಾಗುವುದಿಲ್ಲ. ಮುಸಲ್ಮಾನರ ಆಕಾಂಕ್ಷೆಯು

ಎಂಥಹದಿರಬಹುದೆಂಬುದನ್ನು ಸಿಂಧವು ಚೆನ್ನಾಗಿ ತೋರಿಸಿಕೊಟ್ಟಿದೆ. ಪ್ರಾಚೀನ ಭಾರತದಲ್ಲಾದರೆ ಹೊರಗಿನ ಜಾತಿಗಳು ಇಲ್ಲಿಗೆ ಬಂದು, ಇಲ್ಲಿಯವರುಗಳೊಡನೆ ಕೂಡಿಕೊಂಡು ಒಂದಾದುವು. ಆದರೆ ಮುಸಲ್ಮಾನರು ಮಾತ್ರ ಇಲ್ಲಿಯವರಾಗಿದ್ದೂ ಹಿಂದುಗಳು ಮತ್ತು ಹಿಂದಸ್ಥಾನದೊಡನೆ ಘೋರ ವಿರೋಧವನ್ನು ತೋರಿಸುತ್ತಾರೆ. ಭಾರತೀಯ ಮುಸಲ್ಮಾನರ ಈ ದೂಷಿತ ಮನೋವೃತ್ತಿಯು ಬೇರೆ ಯಾವ ದೇಶದ ಮುಸಲ್ಮಾನರಲ್ಲಿಯೂ ಕಂಡುಬರುವುದಿಲ್ಲ. ಜಾತಿಮತಗಳು ಯಾವದಿದ್ದರೂ ವಿದೇಶಿಯರು ದೇಶಾಭಿಮಾನಿಗಳೂ ದೇಶಭಕ್ತರೂ ಆಗಿರುತ್ತಾರೆ. ಎಲ್ಲರೂ ಸೇರಿಕೊಂಡು ಬಂಧು ಜನಾಂಗವಾಗಿ ಅವರು ತಮ್ಮ ದೇಶದ ಸೇವೆಯನ್ನು ಮಾಡುತ್ತಾರೆ. ಆದರೆ ಭಾರತದ ಮುಸಲ್ಮಾನರ ಸ್ಥಿತಿಯೇ ಬೇರೆ. ಅವನು ಹಿಂದುವಾಗಿದ್ದು ಹಿಂದುಗಳನ್ನು ವಿಜಾತೀಯರೆಂದು ತಿಳಿಯುತ್ತಾನೆ ಮತ್ತು ತನ್ನ ಪುರಾತನ ಸಭ್ಯತೆ ಸಂಸ್ಕೃತಿ ಇತಿಹಾಸವನ್ನು ಮರೆತು ಅವುಗಳ ವಿರೋಧಿಯಾಗುತ್ತಾನೆ. ಈ ಮುಸಲ್ಮಾನರು ಇತರ ಮುಸಲ್ಮಾನ ರಾಷ್ಟ್ರಗಳ ನಾಗರಿಕರಂತೆ ಇರಬೇಕೆಂದಿದ್ದರು. ಆದರೆ ಅಲ್ಲಿ ಎಲ್ಲಿಯೂ ಅವರಿಗೆ ಪ್ರೋತ್ಸಾಹ ದೊರೆಯದಿದ್ದುದರಿಂದ ಈಗ ಅವರು ಸ್ವದೇಶದಲ್ಲಿಯೇ ತಮ್ಮ ಬಿಡಾರ ಬೇರೆ ಮಾಡಿಕೊಳ್ಳುವ ಕನಸು ಕಾಣುತ್ತಾರೆ. ಯಾವ ದೇಶದಲ್ಲಿಯೂ ಅಲ್ಪ ಸಂಖ್ಯಾಕರಿಗೆ ವಿರೋಧವಾಗಿ ನಡೆಯುವದಿಲ್ಲ. ಕೇವಲ ಭಾರತೀಯ ಮುಸಲ್ಮಾನರು ಮಾತ್ರ ಈ ದುಷ್ಟ ಹವ್ಯಾಸಕ್ಕೆ ಬಿದ್ದು ದೇಶದ ಶಾಂತಿಯನ್ನು ಕೆಡಿಸುತ್ತಿದ್ದಾರೆ.

ಹಿಂದುಗಳು ಎಚ್ಚರರಾಗಬೇಕು

ಮುಸಲ್ಮಾನ ಈ ಸ್ವಭಾವ ಗುಣಗಳನ್ನು ಚೆನ್ನಾಗಿ ಪರೀಕ್ಷಿಸಿ ತಿಳಿದು ಹಿಂದುಗಳು ಬಹಳ ಎಚ್ಚರರಾಗಿ ಇರಬೇಕಾಗಿದೆ, ಮತ್ತು ಈ ಮುಸಲ್ಮಾನರು ತಮ್ಮ ದೂಷಿತ ವಿಚಾರಗಳಿಗೆ ತಿಲಾಂಜಲಿ ಕೊಟ್ಟು ಶುದ್ಧ ರಾಷ್ಟ್ರೀಯ ರೂಪವನ್ನು ಧರಿಸುವಂತೆ ಅವರು ಪ್ರಯತ್ನಿಸಬೇಕಾಗಿದೆ. ಮುಸಲ್ಮಾನರಿಗೆ ಭಾರತೀಯರಾಗಿ ಇರಲು ಸಾಧ್ಯವಿಲ್ಲವೆಂದಾದರೆ ಹಿಂದುಸ್ಥಾನವನ್ನು ಹಿಂದುಗಳಾಗಿಯೇ ಬಿಟ್ಟು ಅವರು ತಮ್ಮ ಪುಣ್ಯ ಭೂಮಿಯಾದ ಅರೇಬಿಯಕ್ಕೋ, ಪರ್ಶಿಯಕ್ಕೋ, ತುರುಕಸ್ಥಾನಕ್ಕೋ ಹೋಗುವದು ಉತ್ತಮ. ಹಿಂದುಸ್ಥಾನವು ಹಿಂದುಗಳ ರಾಷ್ಟ್ರೀಯ ನಿವಾಸಸ್ಥಾನವಾಗಿದೆ. ಹಿಂದುಸ್ಥಾನದ ಮೇಲೆ ಹಿಂದುಗಳಿಗಿರುವ ಮೂಲಭೂತಹಕ್ಕು ಬೇರೆ ಯಾರಿಗೂ ಇರುವದಿಲ್ಲ. ಆದ್ದರಿಂದ ಹಿಂದೀಯರಾಗಿ ಇರಲಾರದವರಿಗೆ ಹಿಂದುಸ್ಥಾನದಲ್ಲಿ ಬೇರೆ ಯಾವ ಹಕ್ಕು ಅಧಿಕಾರಗಳೂ ಪ್ರಾಪ್ತವಾಗಲಾರವು. ಅಂಥವರು ಎಷ್ಟು ಬೇಗ ತಮ್ಮ ಸಾಮಾನುಗಳನ್ನು ಬೇರೆ ದೇಶಗಳಿಗೆ ಸಾಗಿಸುತ್ತಾರೋ, ಅಷ್ಟು ಉತ್ತಮವಾಗಿದೆ. ದೇಶಹಿತಕ್ಕೆ ವಿರೋಧವಾಗಿ ನಡೆಯುವ ದೇಶದ್ರೋಹಿಗಳಿಗೆ ಈ ದೇಶದಲ್ಲಿ ಎಲ್ಲಿಯೂ ನೆಲೆ ಇರಬಾರದು.

ಜಿಲ್ಲಾ ಸಮಾಚಾರ

ಮಂಗಳೂರು

ಜಿ. ಕಾ. ಕಮಿಟಿ ಅಧ್ಯಕ್ಷರ ಸೆರೆ: ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ. ಯಮ್. ಧರ್ಮರಾಜ ಅಧಿಕಾರಿಯವರು ಕಳೆದ ತಾರೀಕು ೧೫ನೇ ಶನಿವಾರ ಕಾರ್ಕಳ ಗಾಂಧಿ ಮೈದಾನಿನಲ್ಲಿ ಸತ್ಯಾಗ್ರಹ ಹೂಡಿದರು. ಮುದ್ರಬಿದ್ರೆಯ ಸರ್ಕಲ್ ಇನ್ಸ್‌ಪೆಕ್ಟರರು ಇವರನ್ನು ಸೆರೆಹಿಡಿದಿರುವರು.

ಯೂನಿಯನ್ ಸೋಶಿಯಲ್:- ಸೈಂಟ್ ಎಲೋಸಿಯಸ್ ಕಾಲೇಜಿನ ಯೂನಿಯನ್ ಸೋಶಿಯಲ್ ಕಳೆದ ತಾರೀಕು ೧೯ನೇ ಬುಧವಾರ ಶ್ರೀ. ಜಿ. ಸೋಮಶೇಖರರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಇದೇ ಕಾಲೇಜಿನ ಮಲಯಾಳ ಎಸೋಸಿಯೇಷನಿನ ವಾರ್ಷಿಕ ಸೋಶಿಯಲ್ ಕಳೆದ ತಾರೀಕು ೧೮ರಲ್ಲಿ ಶ್ರೀ. ಜೋಬರ ಅಧ್ಯಕ್ಷತೆಯಲ್ಲಿ ಕೇರಳಾ ಕ್ಲಬ್ಬಿನಲ್ಲಿ ಜರಗಿತು.

ಕೆನರಾ ಗರ್ಲ್ಸ್ ಸ್ಕೂಲ್:- ಕೆನರಾ ಗರ್ಲ್ಸ್ ಸ್ಕೂಲಿನ ವಾರ್ಷಿಕ ವರ್ಧಂತಿ ಉತ್ಸವವು ಕೆನರಾ ಗರ್ಲ್ಸ್ ರೇಂಜಿನ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರರಾದ ಮಿಸ್ ಇ ಬ್ರಿಟ್ಟೋರವರ ಅಧ್ಯಕ್ಷತೆಯಲ್ಲಿ ಕಳೆದ ಶನಿವಾರ ತಾ. ೧೫ರಂದು ನಡೆಯಿತು. ಪ್ರಾರ್ಥನೆ, ಅಧ್ಯಕ್ಷರ ಪ್ರಾರಂಭ ಭಾಷಣವಾದ ನಂತರ ಶ್ರೀಮತಿ ಬಿ. ಲೀಲಾಬಾಯಿ ಕೈ ಬಾಗಾ ಇವರು ಶಾಲೆಯ ಸ್ಥಿತಿ ಭಾಷಣವನ್ನು ಮಾಡಿದರು. ಶಾಲಾವರದಿ ವಾಚನ ಬಹುಮಾನ ವಿತರಣೆ ಅಧ್ಯಕ್ಷರ ಭಾಷಣ ಧನ್ಯವಾದ ಅರ್ಪಣೆಗಳಾದ ನಂತರ ವಿದ್ಯಾರ್ಥಿನಿಯರಿಂದ ಮಾರ್ಕಾಂಡೇಯ ಎಂಬ ನಾಟಕವು ಅಭಿನಯಿಸಲ್ಪಟ್ಟಿತು.

ವೋಲಿ ಬೋಲ್:- ಜಿಲ್ಲಾ ಎತ್ಲೆಟಿಕ್ ಎಸೋಸಿಯೇಷನಿನವರಿಂದ ನಡೆಸಲ್ಪಟ್ಟ ವೋಲಿಬೋಲ್ ಫೈನಲ್ ಪಂದ್ಯಾಟದಲ್ಲಿ ಕೆನರಾ ಕ್ರಿಕೆಟ್ ಕ್ಲಬ್ಬಿನವರು ಪೆಂಟ್ಲೆಂಡ್ ಪೇಟೆ ಸ್ಪೋರ್ಟ್ಸ್ ಎಸೋಸಿಯೇಷನಿನವರನ್ನು ಸೋಲಿಸಿದರು.

ಪಾಣೆಮಂಗಳೂರು

ಸತ್ಯಾಗ್ರಹವನ್ನು ಆಚರಿಸಲು ಸ್ವಲ್ಪ ಸಮಯದಲ್ಲಿ ಗಾಂಧೀಜಿಯವರಿಂದ ಆರಿಸಲ್ಪಟ್ಟು ಅನುಮತಿಹೊಂದಿದ ಪಾಣೆಮಂಗಳೂರು ಸರ್ಕಲಿನ ೧೯ಮಂದಿ ಸತ್ಯಾಗ್ರಹಿಗಳ ಸಭೆಯು ಇದೇ ತಾ. ೧೯ನೇ ದಿನ ಶ್ಯಾಮ ಫೆಂಟ ಮೂರಕ್ಕೆ ಪಾಣೆಮಂಗಳೂರು ಕಾಂಗ್ರೆಸ್ ಆಫೀಸಿನಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ. ಎಂ. ಡಿ. ಅಧಿಕಾರಿಗಳವರ ನೇತೃತ್ವದಲ್ಲಿ ಜರಗಿ ಆರಿಸಲ್ಪಟ್ಟ ೧೯ ಮಂದಿಗಳ ಸತ್ಯಾಗ್ರಹವು ೧೭-೨-೪೧ರಿಂದ ಆರಂಭಿಸಿ ತಾ ೩-೩-೪೧ರ ತನಕ ನಡೆಯುವಂತೆ ೧೯ ಜನರ ಕಾರ್ಯಕ್ರಮವು ನಿಶ್ಚಯಿಸಲ್ಪಟ್ಟಿತು. ಒಬ್ಬ ಸತ್ಯಾಗ್ರಹಿಯ ಆರೋಗ್ಯವು ನೆಟ್ಟಗಿಲ್ಲದ್ದಕಾರಣ ಅವರ ಕಾರ್ಯಕ್ರಮವು ನಿಶ್ಚಿತವಾಗಲಿಲ್ಲ. ಸಂಜೆ ೫ ಗಂಟೆಗೆ ಸ್ಥಳೀಯ ಶ್ರೀ ವೀರವಿಠಲ ದೇವಸ್ಥಾನದ ಎದುರಿನಲ್ಲಿ ಡಿ. ಬೊ ಮಂಜರಾಜರ ಶ್ರೀ. ಕೆ. ಜತ್ತಪ್ಪರೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಕಾಂಗ್ರೆಸಿನ ಸಂದೇಶವನ್ನು ಸಾರಿದರು.

ಶಿರ್ವ ಶಾಲಾ ರಜತೋತ್ಸವ:- ಶಿರ್ವದ ಡೊನ್ ಬೊಸ್ಕೊ ಹಾ. ಎ. ಶಾಲೆಯ ರಜತೋತ್ಸವವು ಕಳೆದ ತಾ ೯ರಲ್ಲು ಶ್ರೀ. ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲೆಯ ವರ್ಧಂತಿ ಉತ್ಸವವು ಕೂಡಾ ಇದೇ ಸಮಯದಲ್ಲಿ ಆಚರಿಸಲ್ಪಟ್ಟಿತು. ಮುಖ್ಯೋಪಾಧ್ಯಾಯರ ವರದಿವಾಚನದ ನಂತರ ಅಧ್ಯಕ್ಷರು ಶಾಲೆಯ ಇತಿಹಾಸವನ್ನು ನೆನೆದು ಶ್ಲಾಘಿಸಿದರು. ಶಾಲಾ ವ್ಯವಸ್ಥಾಪಕರ ಪರವಾಗಿ ಮಿ. ಯಂ. ಸಿ. ಫರ್ನಾಂಡೀಸರೂ, ವೆರಿರೆವರೆಂಡ್ ಫಾ. ಯಚ್. ಗೊನ್ಸಾಲ್ವಿಸರೂ ಭಾಷಣಮಾಡಿದರು. ವಿವಿಧ ವಿನೋದಾವಳಿಗಳ ನಂತರ ಉತ್ಸವವು ಸಮಾಪ್ತವಾಯಿತು.

ಕಾರ್ಕಳ

ಸತ್ಯಾಗ್ರಹ ಸಂದೇಶ:- ತಾ. ೧೫ನೇ ... ೧೯ನೇ ತಾರೀಕು ೭ ಗಂಟೆಗೆ ಇಲ್ಲಿಯ ಗಾಂಧಿ ಮೈದಾನಿನಲ್ಲಿ ಕೂಡಿದ್ದ ಸಾವಿರಾರು ಮಂದಿಯ ಸಾರ್ವಜನಿಕ ಸಭೆಯು ಮುಂದೆ ಜಿಲ್ಲಾ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ. ಯಂ. ಡಿ. ಅಧಿಕಾರಿಯವರು ಭಾಷಣ ಸ್ವಾತಂತ್ರ್ಯದ ಸತ್ಯಾಗ್ರಹವನ್ನು ಹೂಡಿದರು. 'ಮಹಾತ್ಮಾಜಿಯವರ ಈ ಸತ್ಯಾಗ್ರಹ ಸಮರಕ್ಕೆ ಜಿಲ್ಲೆಯ ದೇಶಾಭಿಮಾನಿಗಳೆಲ್ಲರು ಸಂಪೂರ್ಣ ಬೆಂಬಲ ಕೊಟ್ಟು ಅದು ಯಶಸ್ವಿಯಾಗಿ ಕೊನೆಗೊಳ್ಳುವ ತನಕ ಅವರು ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಬಾರದೆಂದು ಜಿಲ್ಲೆಯ ಜನರನ್ನುದ್ದೇಶಿಸಿ ಪತ್ರಿಕಾ ಪ್ರತಿನಿಧಿಗಳೊಡನೆ ಸಂದೇಶ ಕೊಟ್ಟ ಬಳಿಕ ಊರಜನರು ನೂರಾರು ಪುಷ್ಪಹಾರಗಳನ್ನು ಸಮರ್ಪಿಸಿ ಅವರನ್ನು ಪ್ರೇಮಪೂರ್ವಕ ಬೀಳ್ಕೊಟ್ಟರು. ಅನಂತರ ಶ್ರೀ ಅಧಿಕಾರಿಯವರು ಯುದ್ಧವಿರೋಧ ಘೋಷಣೆಗಳನ್ನು ಮಾಡಿದರು. ಪೋಲೀಸ ಸರ್ಕಲ್ ಮತ್ತು ಸಬ್‌ಇನ್ಸ್‌ಪೆಕ್ಟರರು ಆಗಲೇ ಅವರನ್ನು ಕೈದುಮಾಡಿ ವಿಚಾರಣೆಗಾಗಿ ಕುಂದಾಪುರ ಸಬ್ ಕಲೆಕ್ಟರರಲ್ಲಿಗೆ ಕೊಂಡುಹೋಗಿದ್ದಾರೆ. ಈ ಕೈದಿನ ಸಂಬಂಧ ವಾಗಿ ತಾ. ೧೭-೨-೪೧ರ ದಿನ ಹರತಾಳವಿದ್ದಿತು.

ಸತ್ಕಾರಕೂಟ:- ಇಲ್ಲಿಯ ಲೋಕಲ್ ಸಂಘದವರು ಶ್ರೀ. ವಕೀಲ ಕೆ. ಲಕ್ಷ್ಮಣ ಕಾಮ್ತರ ಅಧ್ಯಕ್ಷತೆಯಲ್ಲಿ ಶ್ರೀ ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯಲ್ಲಿಯೂ, ಡಾಕ್ಟರ ಕೆ. ವಿ ಕೆ ಉಪಾಧ್ಯಾಯರವರು ತಮ್ಮ ಶ್ರೀ ಕೃಷ್ಣಾಯುರ್ವೇದಿಕ ಫಾರ್ಮಸಿಯಲ್ಲಿ ಯೂ ಶ್ರೀ. ಕೆ. ವೆಂಕಟೇಶ ಪ್ರಭುಗಳೇ ಮೊದಲಾದ ಸತ್ಯಾಗ್ರಹಿಗಳನ್ನು ಫೋಟೋ, ಲಘು ಉಪಹಾರಾದಿ ಉಪಚಾರ ಸಂಭ್ರಮಗಳಿಂದ ಸತ್ಕರಿಸಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ಗೋಪಾಲಕೃಷ್ಣ ಕೆ. ಗೋಪಾಲ ಪ್ರಭು, ಯಂ. ಯಸ್. ಅಧಿಕಾರಿ, ಕೆ ಯಲ್ ಯನ್ ಉಪಾಧ್ಯಾಯ, ಎಫ್. ಸುಕೂರ ಮೊದಲಾದವರು ಸದ್ಯದ ರಾಜಕೀಯ ಪರಿಸ್ಥಿತಿ ಮತ್ತು ಜನರು ಕಾಂಗ್ರೆಸಿಗೆ ಬೆಂಬಲವಾಗಿ ನಿಲ್ಲಬೇಕಾದ ಅವಶ್ಯಕತೆಯ ಕುರಿತು ಸಂದರ್ಭೋಚಿತ ಭಾಷಣಗಳನ್ನೂ ಕೊಟ್ಟು ಸತ್ಯಾಗ್ರಹಿಗಳು ಕೈಕೊಂಡ ಕಾರ್ಯವು ಉತ್ತಮ ರೀತಿಯಿಂದ ಕೊನೆಗಾಣಲೆಂದು ಹರಸಿರುತ್ತಾರೆ.

ದಿಲ್ಲಿ ಕಡೆಗೆ ಪ್ರಯಾಣ:- ತಾ ೧೩ರ ದಿನ ಮೂಡಬಿದ್ರೆಯಲ್ಲಿಯೂ ಅನಂತರ ಮುನಿಯಾಲು, ಅಜೆಕಾರು, ಎಣ್ಣೆಹೊಳೆ, ಹೂದರು, ಜೋಡುಕಟ್ಟೆಗಳಲ್ಲಿಯೂ, ಅಮೇಲೆ ತಾ. ೧೫ರ ದಿನ ಕಾರ್ಕಳದ ಗಾಂಧಿ ಮೈದಾನಿನಲ್ಲಿಯೂ ಕೂಡಿದ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಕೊಟ್ಟು ಯುದ್ಧವಿರೋಧ ಘೋಷಣೆಗಳನ್ನು ಮಾಡಿ ಸತ್ಯಾಗ್ರಹವನ್ನಾಚರಿಸಿದರೂ ಕೈದಾಗದಿರುವ ಶ್ರೀ. ಮುದ್ರಾಡಿ ಕೃಷ್ಣಯ್ಯ ಶೆಟ್ಟರು, ಮಹಾತ್ಮಾಜಿಯವರ ಅನುಜ್ಞೆ ಮೇರೆಗೆ ದಾರಿಯುದ್ದಕ್ಕೂ ಇದೇ ಕಾರ್ಯಕ್ರಮವನ್ನು ಇಟ್ಟುಕೊಂಡು ಮೊದಲು ನಮ್ಮ ಜಿಲ್ಲೆಯನ್ನು ಸಂಚರಿಸಿ, ಆಗಲೂ ಕೈದಾಗದಿದ್ದರೆ ದಿಲ್ಲಿಯ ಕಡೆಗೆ ಪ್ರಯಾಣ ಮಾಡಲಿದ್ದಾರೆ. ಶ್ರೀ ಶೆಟ್ಟರು ಕಳೆದ ೧೫ ವರ್ಷಗಳಿಂದ ಕಾಂಗ್ರೆಸ ಕೆಲಸಗಾರರಿದ್ದು, ಈ ತಾಲೂಕಿನ ಒಂದು ದೊಡ್ಡ ಬಂಟ ಮನೆತನಕ್ಕೆ ಸೇರಿದವರಾಗಿರುವರು.

ಶಾಲಾವರ್ಧಂತಿ:- ಕಾರ್ಕಳ ಬೋರ್ಡು ಹೈಸ್ಕೂಲಿನ ವರ್ಧಂತಿ ಉತ್ಸವವು ಇದೇ ತಾ. ೨೨ರ ದಿನ ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ವಿ. ಪೋಲ್ರಾಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯುವದು. ಡಾಕ್ಟರ ಯಂ. ವಿ ಅರಬ್ಬಿಯವರು ಶಾಲೆಯ ಸ್ಥಿತಿವಾಚನ ಮಾಡಲಿದ್ದಾರೆ.

ಕುಂದಾಪುರ

ಈ ವರ್ಷ ಇಲ್ಲಿನ ಹೈಸ್ಕೂಲಿನ ಎಸ್. ಎಸ್. ಎಲ್. ಸಿ. ಕ್ಲಾಸಿನ ಎಲ್ಲಾ ವಿದ್ಯಾರ್ಥಿಗಳನ್ನೂ (೩೦ಮಂದಿ) ಸರಕಾರಿ ಪರೀಕ್ಷೆಗೆ ಚುನಾಯಿಸಿದ್ದಾರೆ.

ಬಳ್ಕುಂಜೆ

ಮೂಲ್ಕಿ ಫಿರ್ಕಕ್ಕೆ ಸೇರಿದ ಬಳ್ಕುಂಜೆ ಗ್ರಾಮದಲ್ಲಿ ೧೯೩೯ನೇ ಇಸವಿ ದಶಂಬರ ತಾ. ೪ರಲ್ಲು ಪರೀಕ್ಷಾರ್ಥವಾಗಿ ತೆರೆಯಲ್ಪಟ್ಟ ಬ್ರಾಂಚ್ ಪೋಸ್ಟ್ ಆಫೀಸ್, ಇಲ್ಲಿಯ ಕೆಲವು ಮಹನೀಯರ ಪ್ರಯತ್ನದಿಂದಾಗಿ ೧೯೪೦ನೇ ದಶಂಬರ ತಿಂಗಳ ತಾರೀಕು ೪ರಿಂದ ಖಾಯಂ ಮಾಡಲಾಗಿದೆಯೆಂದು ತಿಳಿದುಬರುತ್ತದೆ.

ವಿಟ್ಲ

ಕಳೆದ ತಾರೀಕು ೧೩ರಂದು ಇಲ್ಲಿಯ ಸತ್ಯಾಗ್ರಹಿಗಳಾದ ಶ್ರೀ. ಜಿ. ವಿಠ್ಠಲದಾಸ ಶೆಟ್ಟಿ ಮತ್ತು ಶ್ರೀ. ಎ. ಟಿ ತಿರುಮಲೇಶ್ವರ ಭಟ್ಟರಿಗೆ ಒಂದು ಸತ್ಕಾರ ಕೂಟವನ್ನು ಕೊಡಲಾಯಿತು. ಶ್ರೀ. ಪಾಣಾಜೆ ವೈದ್ಯ ಶಂಕರನಾರಾಯಣ ಭಟ್ಟರು ಅಧ್ಯಕ್ಷತೆಯನ್ನು ವಹಿಸಿದ್ದರು. ಸತ್ಯಾಗ್ರಹಿಗಳ ಭಾಷಣಗಳಾದ ತರುವಾಯ ಅಧ್ಯಕ್ಷರು ಸತ್ಯಾಗ್ರಹಿಗಳನ್ನು ಆಶೀರ್ವದಿಸುತ್ತ ಕಾಂಗ್ರೆಸಿನ ರಚನಾತ್ಮಕ ಕಾರ್ಯಗಳಲ್ಲಿ ಸರ್ವರೂ ಭಾಗಿಗಳಾಗಬೇಕೆಂದು ನೆರೆದವರನ್ನು ಕೇಳಿಕೊಂಡರು.

ಸತ್ಯಾಗ್ರಹ:- ಪೆರಡಾಲಿನ ಡಾ। ಪಿ. ಯಸ್. ಶಾಸ್ತ್ರಿಗಳು ಬದಿಯಡ್ಕದಲ್ಲಿ ಕಳೆದ ತಾ ೧೪ರಂದು ಸತ್ಯಾಗ್ರಹ ಹೂಡಿ ಸೆರೆಹಿಡಿಯಲ್ಪಟ್ಟರು. ಇವರನ್ನು ಕಾಸರಗೋಡಿನಲ್ಲಿ ಹತ್ತು ದಿನಗಳ ತನಕ ರಿಮಾಂಡಿನಲ್ಲಿರಿಸಲಾಗಿದೆ.

ಕಲ್ಲಿಕೋಟೆ

ಸಾರಸ್ವತ ಎಸೋಸಿಯೇಶನ್:- ೧೯೪೦ಕ್ಕೆ ಅಂತ್ಯವಾಗುವ ವಾರ್ಷಿಕ ವರದಿಯು ಪ್ರಸ್ತುತವಾಗಿದೆ. ಇದರ ವಾರ್ಷಿಕ ಸಭೆಯು ಲೆಫ್ಟಿನೆಂಟ್ ಕರ್ನಲ್ ಬಿ ಜಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಸಾಧಾರಣ ೪೦೦ ಜನರು ನೆರೆದಿದ್ದರು. ಹೊಸವರ್ಷದ ಮೆನೇಜಿಂಗ್ ಕಮಿಟಿಗೆ ಈ ಕೆಳಗಿನ ಮಹನೀಯರು ಆರಿಸಲ್ಪಟ್ಟಿರುವರು. ಶ್ರೀಗಳಾದ ಪಿ. ಕೆ. ಭಂಡಾರ್ಕಾರ ಅಧ್ಯಕ್ಷ, ಎಮ್. ಶ್ರೀಧರ್ ರಾವ್ ಉಪಾಧ್ಯಕ್ಷ, ಎಮ್. ಶ್ರೀಪಾದ ರಾವ್ ಹೊನರರಿ ಟ್ರೆಜರರ್, ಎಮ್. ಶಂಕರ ರಾವ್ ಮತ್ತು ಬಿ. ಪಿ. ಬಾಳಿಗ ಜ್ಯೋಂಟ್ ಹೊನರರಿ ಸೆಕ್ರೆಟರಿಗಳು.

NOTICE.

The ryots are informed that the Government have in their G. O. no. 3163 misdated 20-12-40 ordered the alteration in the Kistubadi of the villages in Hosdurg Sub Taluk from one of four equal instalments in February, March, April and May to one of four equal instalments in December, January, February, and March with effect from fasli 1351.

Sri. B Ganesh B. A.
Tahasildhar of Kasaragod Taluk.

ಈ ಮೂಲಕ ಎಲ್ಲಾ ರೈತರಿಗೆ ತಿಳಿಯಪಡಿಸುವುದೇನೆಂದರೆ:—

1351ನೇ ಫಸಲಿ ಆರಭ್ಯ ಹೊಸದುರ್ಗ ಸಬ್ ತಾಲೂಕಿಗೆ ಒಪ್ಪಿದ ಗ್ರಾಮಗಳ ಜಮೀನು ಕಂದಾಯ ಕಿಸ್ತು ಬದಿಯು ಫೆಬ್ರುವರಿ, ಮಾರ್ಚಿ, ಎಪ್ರಿಲ್ ಮತ್ತು ಕಿಸ್ತುಗಳ ಬದಲಿಗೆ ದಶಂಬರ ಜನವರಿ, ಫೆಬ್ರುವರಿ, ಮಾರ್ಚಿ, ಎಪ್ರಿಲ್ ಮತ್ತು ಮೇ ಕಿಸ್ತುಗಳ ಬದಲಿಗೆ ದಶಂಬರ, ಜನವರಿ, ಫೆಬ್ರುವರಿ ಮತ್ತು ಮಾರ್ಚಿ ಕಿಸ್ತುಗಳಾಗಿ ಕಟ್ಟಲು ಮಾಡಲಾಗಿದೆಯೆಂದು ನಂಬ್ರ 3163 ರವಿನ್ಯೂ 20-12-40ನೇ ಗವರ್ನಮೆಂಟು ಹುಕ್ಕುಂ ತಪ್ಪಿರುತ್ತದೆ.

ಕಾಸರಗೋಡು, ತಾಲೂಕು ಕಚೇರಿ,
ತಾ. 11-2-41.

ಶ್ರೀ। ಬಿ. ಗಣೇಶ್, ಬಿ. ಎ.,
ಕಾಸರಗೋಡು ತಹಶೀಲ್ದಾರರವರು.

ನಿಮ್ಮ ದೇಹವು ಆರೋಗ್ಯದಿಂದಿದ್ದರೆ ನೀವು ತರುಣರಂತೆ ಕಾಣುವಿರಿ. ದೇಹದ ಒಳಭಾಗವನ್ನು ನೈರ್ಮಲ್ಯದಲ್ಲಿರಿಸಿ ಮಲಬದ್ಧತೆಯನ್ನು ಉಂಟುಮಾಡುವ ಮಲೀನ ಪದಾರ್ಥ, ಅಜೀರ್ಣ, ಕಲೆಸಿದಿತ ಮುಂತಾದ ಬಾಧೆಗಳಿಂದ ನಿವೃತ್ತರಾಗಿರಿ. ಅಂತರಂಗ ನೈರ್ಮಲ್ಯವು ನಿಮ್ಮನ್ನು ತರುಣರಂತೆ ಮಾಡುವುದು. ಒಂದು ಗ್ಲಾಸು ನೊರೆಬರುವ ಗುಣವುಳ್ಳ ತಂಪಾದ ಏಂಡ್ರೂಸ್ ಲಿವರ್ ಸಾಲ್ಟ್ ದೇಹದ ಒಳಭಾಗವನ್ನು ನೈರ್ಮಲ್ಯಗೊಳಿಸುವುದು. ಇದೀ ದೇಹವನ್ನು ಬಲಪಡಿಸುತ್ತದೆ.

ದೇಹದ ಒಳಶುದ್ಧಿಗೆ ಯಾವಾಗಲೂ ಏಂಡ್ರೂಸ್ ಲಿವರ್ ಸಾಲ್ಟನ್ನು ಸೇವಿಸಿರಿ

ANDREWS LIVER SALT

ಆರೋಗ್ಯದಾಯಿಯು ಮತ್ತು ಹಿರೋಗಗ್ರಾಹಿಕ
ತಂಪುಮಾಡುವುದು
ಶುದ್ಧಗೊಳಿಸುವುದು
ಪಚನಮಾಡಿಸುವುದು
ಬಲಪಡಿಸುವುದು
ಸಣ್ಣ ಸೈಜು 11 ಆಣೆ
ದೊಡ್ಡ ಸೈಜು
ರೂ. 1-4-0

ಭಾರತದ ಕೇಳಿಕೆಯನ್ನು ಮನ್ನಿಸುವುದು

ಇಟಾಲಿಯನ್ ಕೈದಿಗಳು ಹಿಂದೂದೇಶಕ್ಕೆ!

ಧೂಮಕೇತು ಕಾಣುತ್ತದೆ! ರಾಜಕೀಯ ಕೈದಿಗಳ ವಿಚಾರ

ಭಾರತದ ಕೇಳಿಕೆಯನ್ನು ಮನ್ನಿಸುವುದು

ಹಿಂದೂ ಲೀಗಿನ ಸೂಚನೆ ರಾಜಕೀಯ ಕೈದಿಗಳ ವಿಚಾರ

ನ್ಯೂ ಡಿಲ್ಲಿಯಲ್ಲಿ ಎಂ. ಎಸ್. ಆಣೆಯವರ ಅಧ್ಯಕ್ಷತೆಯಿಂದ ನೆರೆದ ಅಖಿಲ ಭಾರತ ಹಿಂದೂ ಲೀಗಿನ ಸಭೆಯಲ್ಲಿ ಸರಕಾರವು ಭಾರತದ ಅಖಿಲ ಮುಖಂಡರನ್ನು ಸೇರಿಸಿ ಮಾತುಕತೆ ಮಾಡಿ ಕೇಂದ್ರ ಸರಕಾರವನ್ನು ಏರ್ಪಡಿಸಬೇಕೆಂದು ಸರಕಾರಕ್ಕೆ ಸೂಚಿಸುವ ಒಂದು ನಿರ್ಣಯಮಾಡಿದೆ. ಮಾತ್ರವಲ್ಲದೆ, ಸರಕಾರವು ಸತ್ಯಾಗ್ರಹೀ ಕೈದಿಗಳ ವಿಚಾರವಾಗಿ ನಡೆಸುವ ವರ್ತನೆಯು ನ್ಯಾಯವಾಗಿಲ್ಲವೆಂದೂ, ರಾಜಕೀಯ ಕೈದಿಗಳನ್ನು ಸರಕಾರವು ಆ ರೀತಿಯಾಗಿ ಅಗಾರವವಾಗಿ ಅಮಾನುಷವಾಗಿ ನಡೆಸುವುದು ಸರಿಯಲ್ಲವೆಂದೂ ತಿಳಿಸಿದೆ.

ಇಟಲಿಯನ್ ಕೈದಿಗಳು ಹಿಂದೂದೇಶಕ್ಕೆ

ಬೊಂಬಯಿಗೆ ತಾ. ೧೭ರಂದು ೨,೮೦೦ ಇಟಲಿಯನ್ ಕೈದಿಗಳನ್ನು ತರಲಾಗಿದೆಯಂತೆ.

ಧೂಮಕೇತು ಕಾಣುತ್ತದೆ

ಧೂಮಕೇತು ಇತ್ತೀಚೆಗೆ ಹಲವು ಕಡೆಗಳಲ್ಲಿ ಕಾಣುತ್ತದೆ. ನ್ಯೂಜಿಲೇಂಡಿನಲ್ಲಿ ಇದು ಮೊದಲಾಗಿ ಕಂಡಿತು. ಆ ಮೇಲೆ ಸಿಲೋನಿನಲ್ಲಿ, ಮದ್ರಾಸಿನಲ್ಲಿ, ಕೊಡಿಯಾಕನಾಲ್, ಬೊಂಬಾಯಿ, ಹೈದರಬಾದ್ ಮೊದಲಾದ ಕಡೆಗಳಲ್ಲಿಯೂ ಕಂಡಿದೆಯೆಂದು ಸುದ್ದಿಯಿದೆ. ಇಲ್ಲಿಯೂ ಧೂಮಕೇತು ಕಾಣುತ್ತದೆ ಎಂದು ಜನರು ಹೇಳುತ್ತಿದ್ದಾರೆ.

ನೂತನ ಕೇಂದ್ರ ಮಂತ್ರಿ ಮಂಡಳ ರಚನೆಯೇ?

ಸರ್ ಮಿರ್ಜಾ ಮತ್ತು ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರುಗಳ ಸೂಚನೆ

ಪಕ್ಷರಹಿತ ಮುಖಂಡರುಗಳ ಮಂತ್ರಿಮಂಡಳ ರಚನೆಯ ಸೂಚನೆ

ಯಾವ ಪಕ್ಷಕ್ಕೂ ಸೇರದ ಕೆಲವು ಪ್ರಮುಖ ಮುಖಂಡರುಗಳನ್ನೊಳಗೊಂಡ ಒಂದು ಕೇಂದ್ರ ಮಂಡಳವನ್ನು ರಚಿಸಬೇಕೆಂದು ಒಂದು ಹಂಚಿಕೆಯನ್ನು ಈಗಾಗಲೇ ವೈಸರಾಯರ ಮುಂದೆ ಇಡಲಾಗಿದೆ. ಈ ಅಂಶವನ್ನು ಕಲ್ಕತ್ತದ ಹೊಸ ಇಂಗ್ಲಿಷ್ ದಿನಪತ್ರಿಕೆಯಾದ ದಿ ಟೆಲಿಗ್ರಾಫ್ ಪತ್ರಿಕೆಯ ರಾಜಕೀಯ ಬಾತ್ಮೀದಾರರು ತಿಳಿಸುತ್ತಾರೆ.

ವೈಸರಾಯರು ಇಂಡಿಯಕ್ಕೆ ಯುದ್ಧಾನಂತರ ಒಂದು ವರ್ಷದೊಳಗೆ ಪೂರ್ಣ ಡೊಮಿನಿಯನ್ ಸ್ಥಿತಿಯನ್ನು ಕೊಡುವುದಾಗಿ ಘೋಷಿಸಿ ಮೇಲೆ ಕಂಡ ರೀತಿಯ ಮಂತ್ರಿ ಮಂಡಳವನ್ನು ರಚಿಸುವುದಾದರೆ ಆಗ್ಗೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗುಗಳು ತಮ್ಮ ಈಗಿನ ಮನೋಭಾವವನ್ನು ಬದಲಾಯಿಸಲು ಒಪ್ಪಬಹುದು ಎಂದು ಆ ಬಾತ್ಮೀದಾರರು ಹೇಳುತ್ತಾರೆ.

ಈ ಸಂದರ್ಭದಲ್ಲಿ ಮಂತ್ರಿಮಂಡಳಕ್ಕೆ ಸೂಚಿಸಲಾದ ಹೆಸರುಗಳು ಈ ರೀತಿ ಇವೆ. ಸರ್. ಸಿಕಂದರ್ ಹಯಾತ್ ಖಾನ್—ರಕ್ಷಣಾ ಮಂತ್ರಿ; ಸರ್ ಎಸ್. ರಾಧಾಕೃಷ್ಣನ್—ಶಿಕ್ಷಣ ಮಂತ್ರಿ; ಸರ್ ಎಂ. ವಿಶ್ವೇಶ್ವರಯ್ಯ—ಕೈಗಾರಿಕಾ ಮಂತ್ರಿ; ಸರ್ ಸುಲ್ತಾನ್ ಅಹಮ್ಮದ್, ಸರ್ ಪುರುಶೋತ್ತಮದಾಸ್ ಥಾಕೂರ್‌ದಾಸ್ ಮತ್ತು ಸರ್ ಮಿರ್ಜಾ ಇಸ್ಮೈಲ್ ಇವರು ಇತರ ಇಲಾಖೆಗಳಿಗೆ.

ಭಾರತವೂ ಚಿನ್ನವೂ

ಅಮೇರಿಕವು ಇವತ್ತು ಪ್ರಪಂಚದ ಚಿನ್ನದ ಪೈಕಿ ಶೇಕಡ ೭೦ರಷ್ಟು ಚಿನ್ನವನ್ನು ಪಡೆದಿದೆಯೆಂದೂ ಸುಮಾರು ೨೦ ಕೋಟಿ ಲಕ್ಷ ಡಾಲರುಗಳ ಬೆಲೆಬಾಳುವ ಚಿನ್ನವು ಅದರ ಭಂಡಾರದಲ್ಲಿದೆಯೆಂದೂ ಅಂದಾಜು ಹಾಕಿದೆ. ಇವತ್ತು ಅಮೇರಿಕದ ದಶಾಕಾಲ!

ಭಾರತವೂ ಒಮ್ಮೆ ಚಿನ್ನದ ಆಗರವಾಗಿತ್ತು. ಕ್ರಿಸ್ತಶಕ ಮೊದಲನೆಯ ಶತಮಾನದಲ್ಲೇ ಭಾರತವು ತನ್ನ ಸಾಂಬಾರದ ಪದಾರ್ಥಗಳು, ಢಾಕಾ ಮುಸ್ಲಿನ್ ಬಟ್ಟೆಗಳು, ಹವಳ ರತ್ನ ಮುತ್ತುಗಳನ್ನು ಪರದೇಶಗಳಿಗೆ ರಫ್ತುಮಾಡಿ ಅದಕ್ಕೆ ಪ್ರತಿಯಾಗಿ ಚಿನ್ನವನ್ನು ಪಡೆಯುತ್ತಿತ್ತೆಂದು ಹೇಳಲಾಗಿದೆ. ೪॥ ಲಕ್ಷ ಪೌಂಡುಗಳಿಗೆ ಕಡಿಮೆಯಲ್ಲದೆ ಚಿನ್ನವು ಪ್ರತಿವರ್ಷವೂ ಭಾರತವನ್ನು ಸೇರುತ್ತಿತ್ತೆಂದು ತಿಳಿದುಬರುತ್ತದೆ.

ಭಾರತದಲ್ಲಿ ಚಿನ್ನವು ಕೇವಲ ಆಭರಣಗಳಿಗಲ್ಲದೆ ಮತಸಂಬಂಧವಾದ ಆಚಾರ ವ್ಯವಹಾರಗಳಿಗೂ ಬಹಳ ಮುಖ್ಯವಾಗಿ ಬಳಸಲಾಗುತ್ತದೆ. ಇಷ್ಟುಮಟ್ಟಿಗೆ ಚಿನ್ನವು ಭಾರತದಲ್ಲಿ ಬಳಕೆಯಲ್ಲಿದ್ದು ಜನರು ಚಿನ್ನವನ್ನು ಶೇಖರಿಸಿಕೊಂಡಿದ್ದರು. ಆದರೆ ೧೯೩೧ರಿಂದ ಈಚೆಗೆ ಕಳೆದ ವರ್ಷದ ಅಂತ್ಯದ ವರೆಗೆ ೩೩೦ ಕೋಟಿ ರೂ.ಗಳಷ್ಟು ಚಿನ್ನವು ಭಾರತದಿಂದ ಹೊರಕ್ಕೆ ಹೋಗಿದೆ.

ಬಹುಕಾಲದಿಂದ ನಿರೀಕ್ಷಿಸುತ್ತಲಿದ್ದ

ಸಂತ ಜ್ಞಾನದೇವನು

ನ್ಯೂ ಚಿತ್ರಾ ಟೋಕೀಸ್ ಮಂಗಳೂರು

ಇವರ ಪವಿತ್ರ ಚಿತ್ರಪಟದಲ್ಲಿ

ತಾ. 21—2—1941ರಿಂದ

"ಮಾನವ ಸಮಾನತೆ"ಯ ತತ್ವವನ್ನು ಉಪದೇಶಿಸಲು ಚಿತ್ರಯಿಸಿರುವನು.

ನಟವರ್ಗ: ಶಾಹೂ ಮೋಡಕ್-ಮಾಸ್ಟರ್ ಯಶವಂತ್-ಸುಮತಿ ಗುಪ್ತೆ ಮೊದಲಾದವರು ಪ್ರಭಾತ ಕಂಪೆನಿಯಲ್ಲಿ ದಾಮ್ಲೆ ಫತೆಲಾಲ್ ವಿರಚಿತ ಅಲೌಕಿಕವಾದ ಸತ್ಸಂಗವನ್ನು ಸುಲಭವಾಗಿ ಗಳಿಸಿ

ನೋಟೀಸು

The Attur & Jawahar Bank Ltd. Mangalore.

ದಿ. ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್,

ಕೆನರಾ ಹೈಸ್ಕೂಲ್ ರೋಡ್, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಅತ್ತೂರು ವೈಕುಂಠ ಪ್ರಭು ಬೇಂಕಿನಲ್ಲಿ ಮತ್ತು [illegible] ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್‌ನಲ್ಲಿ ನಗದ [illegible] ಮೇಲೆ [illegible] ಕ್ಲಿಪ್ತ ವಾಯಿದೆಗೆ ಅಸಲು ಬಡ್ಡಿ ಕೊಡದೆ ಈವರೇಗೆ ಬಾಕಿ ಮಾಡಿರುವುದರಿಂದಲೂ, ಸದ್ರಿ ಸಾಲಗಳನ್ನು ಬರಮಾಡಿಕೊಳ್ಳುವರೇ ಅವರಿಗೆ ರಿಜಿಸ್ಟ್ರಿ ನೋಟೀಸು ಕೆಲವು ದಾರಿಯಾಗಿಯೂ ಕೆಲವರ [illegible] ಕಾರಿಯಾಗದೆಯೂ, ಹಲವರು ಊರು ಬಿಟ್ಟು ಹೋಗಿರುವುದರಿಂದ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ಈಡಾಗಿಟ್ಟ ನಗಗಳನ್ನು ಇದೇ 1941ನೇ ಇಸವಿ ಮಾರ್ಚ ತಾ. 4ನೇ ಮಂಗಳವಾರದೊಳಗೆ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಚಾರ್ಜು ಇತ್ಯಾದಿಗಳನ್ನು ಸಲ್ಲಿಸಿ ಬಿಡಿಸಿಕೊಂಡು ಹೋಗದೆ ಇದ್ದರೆ ಸದ್ರಿಯವರು ಈಡಾಗಿಟ್ಟ ನಗಗಳನ್ನು ಇದೇ 1941ನೇ ಇಸವಿ ಮಾರ್ಚ ತಾ. 8ನೇ ಶನಿವಾರ ಯಾ ಅನಂತರ ನಮ್ಮ ಯುಕ್ತಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ ಘಂಟೆ 2ಕ್ಕೆ ಬಹಿರಂಗವಾಗಿ ಏಲಂ ಮಾಡಲ್ಪಡುವುದು.

	ಸಾಲದ ನಂಬ್ರ ಮತ್ತು ಅಡವಿಟ್ಟ ತಾರೀಕು	ಸಾಲ ಪಡೆಕೊಂಡವರ ಹೆಸರು ಮತ್ತು ವಿಳಾಸ	ಅಸ್ಲು ಮೊಬಲಗು ರೂ.
1	521—37 24-4-37	ಗೋಪಾಲ ಕುರುಪ್ಪು S/o ಕಣ್ಣನ್ ನಂಬಿಯಾರ್; ಜೈಲ್ ವಾರ್ಡರ್ ಮಂಗಳೂರು	12
2	1246—39 17-6-39	ಅಬ್ದುಲ್ಲ ಮುಕ್ರಿಬ್ಯಾರಿ S/o ಬಾವ ಯಾನೆ ಸೀದಿಬ್ಯಾರಿ; C/o ಬಿ. ರಾಮಯ್ಯಶೆಟ್ಟಿ ಬಂಟರಪಾದೆ, ಹೊಸಮನೆ ಅಂಬಳಮೊಗ್ರುಗ್ರಾಮ ಉಳ್ಳಾಲ	31
3	2003—39 6-9-39	ಹಸನ್ ಖಾನ್ S/o ಇಸ್ಮಾಯಿಲ್ ಖಾನ್; ಪಡು ಪೆರಾರು ಗ್ರಾಮ. ಕೊಂಚಕಂಬ್ಲ ಪೋಸ್ಟು ಬಜ್ಪೆ	28
4	2122—39 20-9-39	ಜೇರಮ್ ರೇಗೊ S/o ಪಾಸ್ಕಲ್ ರೇಗೊ, ಬಜ್ಪೆ ಬೋರ್ಡು ಶಾಲೆಯ ಬಳಿ, ಮಗ್ಗದ ಕೆಲಸ ಪೋಸ್ಟು ಬಜ್ಪೆ	12
5	2132—39 21-9-39	ಸೋಮಪ್ಪ N/o ಸಂಕಪ್ಪ ಮೊಯ್ಲಿ ಕುದ್ರೋಳಿ, ಕೋಮನ್‌ವೆಲ್ ಟೈಲ್ ಫೆಕ್ಟರಿ ಮಂಗಳೂರು	6
6	2138—39 22-9-39	ಜಾರು ಪೂಜಾರಿ S/o ಮುಂಡ ಪೂಜಾರಿ ಅರ್ಕುಳ, ಪುದುಗ್ರಾಮ ಮಾರಿಪಳ್ಳ ಪೋಸ್ಟು, ಆರ್ಕುಲ	5
7	2201—39 30-9-39	ಕೆ. ವೆಂಕಟ್ರಾಯ S/o ಶೇಷಪ್ಪಯ್ಯ, ಕರಂಬಾರುಗ್ರಾಮ ಪೋಸ್ಟು ಬಜ್ಪೆ	12
8	2521—39 30-11-39	ಮೋನಪ್ಪ N/o ಮುಂಡಪ್ಪ, ಕೊಡಿಯಾಲಬೈಲು, ತಿಮ್ಮಪ್ಪ ಹೆಗ್ಡೆಯವರ ಭಂಡಸಾಲೆ ಬಳಿ ಮಂಗಳೂರು	7
9	2714—39 20-12-39	ಉಮ್ಮರಬ್ಬ S/o ಅಹಮ್ಮದ್ ಬ್ಯಾರಿ, ನಡಿಗ್ರಾಮ, ಕೋಳಿಕೆ, ಪೋಸ್ಟು ಉಳ್ಳಾಲ	5
10	2757—39 27-12-39	ಕರಿಯಪ್ಪ S/o ಮುಂಜಪ್ಪ ಪೂಜಾರಿ C/o ದಿ. ಸಿಕೇರ ಎಂಡ್ ಸನ್ಸ್ ವೀವಿಂಗ್ ಫೆಕ್ಟರಿ ಪಳ್ನೀರು ಮಂಗಳೂರು	10
11	2764—39 28-12-39	ಬಿ. ಲಕ್ಷ್ಮಣ S/o ಮೋನಯ್ಯ ಬೋಳಾರ ಪಾದೆಕಲ್ಲು ಬಳಿ, ಮಂಗಳೂರು	7
12	69—40 11-1-40	ಎಂ. ಸದಾಶಿವ ನಾಯ್ಕ S/o ಲಕ್ಷ್ಮಣ ನಾಯ್ಕ ಮೊಂಗ್ರಿಕೇರಿ, ದಾಸಪ್ಪಾಚಾರಿ ಅಂಗಡಿ ಬಳಿ ಮಂಗಳೂರು	8
13	89—40 15-1-40	ಗುರುವ S/o ತನಿಯ; ಸೂಟ್‌ಕೇಸ್ ಪೇಟಿ, ಇಲೆಕ್ಟ್ರಿಕ್ ಕಂಪೆನಿಯಲ್ಲಿ ಕೆಲಸ, ಪೋಸ್ಟು ಕಂಕನಾಡಿ	5
14	139—40	ಉಗ್ರಾಣಿ ಮಾರ್ಸೆಲ್ ಸೋಜ S/o ಪೋರ್ಸೆಲ್ ಸೋಜ, ಜಪ್ಪು ಮೊಗ್ರುಗ್ರಾಮ; ಪೋಸ್ಟು ಕಂಕನಾಡಿ	5
15	541—40 27-3-40	ಪುತ್ತು ಸಾಹೇಬ್ S/o ಫಕೀರ ಸಾಹೇಬ್; ಮಂಜುನಾಡಿ ಗ್ರಾಮ, ಕಟ್ಟಿಮಾರ ಮನೆ, ಪೋಸ್ಟು ಮಂಜೇಶ್ವರ	5
16	429—40 11-3-40	ಬೆಯ್ಯಬ್ಬಬ್ಯಾರಿ S/o ಹುಸನೆಬ್ಯಾರಿ; ಬೈಕಂಡಿ, ತೋಟ; ಪೋಸ್ಟು ಪಣಂಬೂರು	6
17	521—40 25-3-40	ಹಾಜಬ್ಯಾರಿ S/o ಅಮದ್ ಕುಂಞಬ್ಯಾರಿ; ಎತ್ತೂರು, ಓಬಳಿ, ಹೊಂಗಡ ಹಳ್ಳಿ ಗ್ರಾಮ, ಹಾಸನ್ ಡಿಸ್ಟ್ರಿಕ್ಟ್, ಪೋಸ್ಟು ಎತ್ತೂರು	12
18	421—40 9-3-40	ಮಹಾಮ್ಮಾಯಿಯಮ್ಮ D/o ವಾಸುನಾಯ್ಕ; ಸಮುಗಾರಗಲ್ಲಿ, ರಾಧಾಬ್ಬಾ ಮನೆಯಲ್ಲಿ ಬಸವನಗುಡಿ ಮಂಗಳೂರು	6
19	165—40 24-1-40	ದೂಮಪ್ಪ ಶೆಟ್ಟಿ S/o ಹೂವಯ್ಯ ಶೆಟ್ಟಿ, ಬರ್ಕೆ, ದೇವಾಲಯದ ಬಳಿ, C/o ಸೊವರಿನ್ ಟೈಲ್ ವರ್ಕ್ಸ್ ಬೊಕ್ಕಪಟ್ಣ, ಮಂಗಳೂರು	18
20	125—40 19-1-40	ಮಹಮ್ಮದ್ ಕಾಸಿಮ್ S/o ಬಿ. ಮುಹಮ್ಮದಾಲಿ ಉರ್ವ, ಮಂಗಳೂರು	9
21	135—40 20-1-40	ಕೆ. ಪದ್ಮನಾಭ ಕಾಮತ್ S/o ನಾರಾಯಣ ಕಾಮತ್ ಪ್ಲವರ್ ಮಾರ್ಕೆಟ್ ರೋಡ್ ಮಂಗಳೂರು	5
22	456—40 14-3-40	ಚಂದು ಮೊಯ್ಲಿ N/o ದೇವು ಮೊಯ್ಲಿ ಗಾಣದ ಕೊಟ್ಯ ಮನೆ, ಕಾರ್ವಾರ್ ಗ್ರಾಮ, ಪೋಸ್ಟು ಬಜ್ಪೆ	5
23	598—40 5-4-40	ಅಪ್ಪಣ್ಣಗಟ್ಟಿ S/o ದೂಮುಗಟ್ಟಿ ಪೆರ್ಮಾದ ಗ್ರಾಮ, ಪಾಲ್‌ದಾರ್ ಮನೆ ಬಂಡಾರದ ಒಕ್ಲು ಪೋಸ್ಟು ಸುಂಕದಕಟ್ಟೆ	5
24	705—40 20-4-40	ಅಬ್ದುಲ್ ಖಾದರ್ S/o ಹಾಜಬ್ಯಾರಿ ಪಣಂಬೂರು ಕಸ್ಬಾ, ಬೈಕಂಪಾಡಿ ಪೋಸ್ಟು ಪಣಂಬೂರು	5
25	739—40 25-4-40	ಬಿ. ಗೋಪಾಲ S/o ಬೂದ, ಜೈಲಿನ ಹಿಂದೆ, ಟಿಯೋನು ಮುನ್ಸಿಪಾಲ್ ಹಾಲ್ ಆಫೀಸ್ ಮಂಗಳೂರು	5
26	812—40 7-5-40	ಮಯ್ಯದ್ ಬ್ಯಾರಿ S/o ಉಮ್ಮರಬ್ಯಾರಿ ತುಪ್ಪದ ವ್ಯಾಪಾರಿ, ಬೈಕಂಪಾಡಿ ಪೋಸ್ಟು ಪಣಂಬೂರು	7
27	850—40 13-5-40	ಕೆ. ಉಮ್ಮರಬ್ಬ S/o ಫಲಾಲ್ ಹುಸೇನ್‌ಬ್ಯಾರಿ ಕಂದಕ, ಹಜಾರು ಕಚೇರಿ ಕೆಳಗೆ ಮಂಗಳೂರು	13
28	863—39 3-5-39	ಕ್ರಿತ S/o ಮುದ್ದ; ಸೂಟ್‌ಕೇಸ್ ಪೇಟಿ, ಜಪ್ಪು, ಮೊಗ್ರುಗ್ರಾಮ, ಮಂಗಳೂರು ಪೋಸ್ಟು ಕಂಕನಾಡಿ	11

Office of the Bank
Canara High School Road
Mangalore
18—2—41

A. Vaikunta Prabhu.
Managing Director
The Attur & Jawahar Bank Ltd.
Canara High School Road,

ಜಿನೊವಾದಲ್ಲಿ ಬ್ರಿಟಿಷರ ಸಾಹಸ

ರುಮೇನಿಯದಲ್ಲಿ ಬಲವಾದ ಸಿದ್ಧತೆ!

ಇಟೆಲಿಗೆ ಸ್ಪೆಯಿನಿನ ಸಹಾಯ!

ಬಲ್ಗೇರಿಯದಿಂದ ಗ್ರೀಕ್ ಜನರ ರವಾನೆ!

ಜಿನೊವಾದಲ್ಲಿ ಬಾಂಬು

೧೪೪ ಜನರು ಸತ್ತರು

೨೭೨ ಜನರಿಗೆ ಗಾಯ!

ಬ್ರಿಟಿಷರು ಜಿನೆವಾಕ್ಕೆ ಬಾಂಬೆಸೆದರು ಅನೇಕ ಇಟಲಿಯನರಿಗೆ ಗಾಯ ಮರಣಗಳಾಗಿವೆ. ೧೪೪ ಜನರು ಸತ್ತಿರುವರೆಂದೂ ೨೭೨ ಜನರಿಗೆ ಗಾಯಗಳಾಗಿವೆಯೆಂದೂ ವಾರ್ತೆ.

ಬಲ್ಗೇರಿಯಾದಿಂದ ಗ್ರೀಕ್ ಜನರ ರವಾನೆ

ಬಲ್ಗೇರಿಯಾದಲ್ಲಿರುವ ಗ್ರೀಕ್ ಹೆಂಗಸರೂ, ಮಕ್ಕಳೂ ಗ್ರೀಸಿಗೆ ಹಿಂದಿರುಗಿ ಹೋಗಬೇಕೆಂದು ಸೋಫ್ಯಾದಲ್ಲಿರುವ ಗ್ರೀಕ್ ರಾಯಭಾರಿಯು ಸೂಚಿಸಿದ್ದಾರೆ, ಎಂದು ಆಫಿಷಿಯಲ್ ಫ್ರೆಂಚ್ ಏಜನ್ಸಿಗೆ ಸೋಫ್ಯಾದಿಂದ ಸುದ್ದಿ ಬಂದಿದೆ. ಬಾಲ್ಕನ್ ರಾಷ್ಟ್ರಗಳಲ್ಲಿಯ ಸ್ಥಿತಿ ಕೆಡುತ್ತಾ ಬಂದಿರುವುದರಿಂದಲೂ, ಅಲ್ಲಿನ ಸ್ಥಿತಿ ಬಿಗಡಾಯಿಸಿಕೊಳ್ಳುವ ಸಂಭವವಿರುವುದರಿಂದಲೂ ಈ ಮುಂಜಾಗ್ರತೆ ಕ್ರಮವೆಂದು ಹೇಳಲಾಗಿದೆ

ಹೆಚ್ಚು ಡಿಸ್ಟ್ರಾಯರ್ ಕೊಡಲು ಸಾಧ್ಯವಿಲ್ಲ

ಸಂಯುಕ್ತ ಸಂಸ್ಥಾನದ ನೌಕಾ ಮಂತ್ರಿ ಕರ್ನಲ್ ನಾಕ್ಸ್‌ರವರು ತಮ್ಮ ನೌಕಾ ಪಡೆಯಿಂದ ಇನ್ನೂ ಹೆಚ್ಚು ಡಿಸ್ಟ್ರಾಯರ್‌ಗಳನ್ನು ಕೊಡುವುದು ಸಾಧ್ಯವಾಗುವುದಿಲ್ಲ ಎಂಬುದಾಗಿ ಪತ್ರಿಕಾ ಪ್ರತಿನಿಧಿಗಳ ಸಮ್ಮೇಳನದಲ್ಲಿ ತಿಳಿಸಿದರು.

ಪ್ರತ್ಯೇಕ ಶಾಂತಿಗೆ ಇಟೆಲಿ ಬರುವುದಿಲ್ಲ

'ಸಿನಾರ್ ಮುಸಲೋನಿಯವರು ಹೆರ್ ಹಿಟ್ಲರ್‌ರವರ ಪೂರ್ಣ ಹತೋಟಿಯಲ್ಲಿದ್ದಾರೆ. ಆದ್ದರಿಂದ ಪ್ರತ್ಯೇಕ ಶಾಂತಿಗಾಗಿ ಅವರು ಪ್ರಶ್ನಿಸುವುದು ಅಸಂಭವ' ಎಂಬುದಾಗಿ ಲಂಡನಿನ ಅಧಿಕಾರಿ ವೃತ್ತದಲ್ಲಿ ಅಭಿಪ್ರಾಯವಿದೆ

ಮುಸಲೋನಿಯವರಿಗೂ ಜ। ಫ್ರಾಂಕೋರವರಿಗೂ ಮಾತುಕತೆಯು ನಿರ್ದಿಷ್ಟವಾಗಿ ಯಾವ ವಿಷಯದ ಮೇಲೆ ನಡೆಯಿತು ಎಂಬುದು ಇಲ್ಲಿ ಸರಿಯಾಗಿ ಗೊತ್ತಾಗುತ್ತಿಲ್ಲ. ಆದರೆ ಈ ಮಾತುಕತೆಯಿಂದ ಅಂತಹ ಹಿರಿದಾದ ಪರಿಣಾಮವೇನೂ ಆಗುವಂತೆ ನಿರೀಕ್ಷಿಸುವ ಕಾಗಿಲ್ಲ.

ಈ ಭೇಟಿಗೆ ಮುಸೋಲಿನಿಯವರೇ ಮುಂದು ಬಂದರೆಂದು ಹೇಳಲಾಗಿದೆ.

ಇಟೆಲಿಗೆ ಸ್ಪೆಯಿನ್ನಿನ ಸಹಾಯ

ತಮ್ಮ ಈಗಿನ ಆಪತ್ತಿನಲ್ಲಿ ಸ್ಪೆಯಿನಿನ ಸಹಾಯ ಕೇಳುವುದಕ್ಕಾಗಿಯೇ ಸಿನಾರ್ ಮುಸೋಲಿನಿಯವರು ಈ ಪ್ರವಾಸವನ್ನು ಮಾಡಿದರೆಂಬುದು ಈಗ ಚೆನ್ನಾಗಿ ಗೊತ್ತಾಗಿದೆ. ಜ। ಫ್ರಾಂಕೋರವರು ಬಹಳ ಎಚ್ಚರಿಕೆಯ ಮನುಷ್ಯರೆಂದೂ ಆಕ್ಸಿಸ್ ರಾಷ್ಟ್ರಗಳ ಆಜ್ಞೆಯ ಮೇರೆಗೆ ಅವರು ತಮ್ಮ ರಾಷ್ಟ್ರವನ್ನು ಯುದ್ಧಕ್ಕೆ ಸಮ್ಮುಖಿಸುವುದಿಲ್ಲವೆಂದೂ ಅಮೆರಿಕದ ಪತ್ರಿಕೆಗಳು ಭರವಸಾಪೂರ್ಣವಾಗಿ ಹೇಳುತ್ತಿವೆ.

ಬಲ್ಗೇರಿಯಾದಲ್ಲಿ ವಿದೇಶ ಸೈನ್ಯವಿಲ್ಲ

ಬಲ್ಗೇರಿಯಾವು ಪೂರ್ಣ ತಾಟಸ್ಥ್ಯವಾಗಿಯೇ ಇರುವುದು

ಬಲ್ಗೇರಿಯಾ ಪತ್ರಿಕೆಗಳ ಘೋಷಣೆ

ಬಲ್ಗೇರಿಯಾವು ಪೂರ್ಣವಾಗಿ ತಾಟಸ್ಥ್ಯದಿಂದ ಇರುವುದು. ಯುಗೋಸ್ಲೇವಿಯಾ, ರುಮೇನಿಯಾ, ಮತ್ತು ಇತರ ಬಾಲ್ಕನ್ ರಾಷ್ಟ್ರಗಳೊಡನೆ ಸ್ನೇಹಪೂರ್ಣವಾಗಿಯೇ ಇರುವುದು ಎಂಬುದಾಗಿ ಬಲ್ಗೇರಿಯಾದ ಪತ್ರಿಕೆಗಳು ಘೋಷಿಸುತ್ತವೆ.

ಬಲ್ಗೇರಿಯಾದಲ್ಲಿ ವಿದೇಶಿ ಸೈನಿಕರಾರೂ ಇಲ್ಲ ಎಂದು ಆ ಪತ್ರಿಕೆಗಳು ಸ್ಪಷ್ಟವಾಗಿ ಹೇಳುತ್ತವೆ

ಚೀನಾದಿಂದ ಅಮೇರಿಕನರು ಹೊರಟು ಬರಬೇಕೆಂದು ಅಮೇರಿಕನ್ ರಾಯಭಾರಿಯ ಸೂಚನೆ

ಚೀಣಾದಲ್ಲಿರುವ ಅಮೇರಿಕನರು ಅದರಲ್ಲಿಯೂ ಹೆಂಗಸರೂ, ಮಕ್ಕಳೂ ಚೀಣಾದಲ್ಲಿ ತುರ್ತು ಕೆಲಸವಿಲ್ಲದಿದ್ದಲ್ಲಿ ಚೀಣಾವನ್ನು ಬಿಟ್ಟು ಸ್ವದೇಶಕ್ಕೆ ಹೋಗಬೇಕೆಂದು ಅಮೇರಿಕನ್ ಕಾನ್ಸಲ್ ಜನರಲರು ಸೂಚಿಸುತ್ತಿದ್ದಾರೆ. ಇದು ದೂರ ಪ್ರಾಚ್ಯದಲ್ಲಿಯ ಅಸ್ಥಿರ ಸ್ಥಿತಿಗಾಗಿ ಎಚ್ಚರಿಕೆ ಕ್ರಮವೇ ಹೊರತು ಅಂತರಾಷ್ಟ್ರೀಯ ಪರಿಸ್ಥಿತಿಯು ಭೀತಿದಾಯಕವಾಗಿ ಬೆಳೆದಿದೆ ಎಂಬುದಕ್ಕಲ್ಲ ಎಂಬುದಾಗಿ ತಿಳಿಸಲಾಗಿದೆ

ರುಮೇನಿಯದಲ್ಲಿ ಬಹಳ ಬಲವಾದ ಸಿದ್ಧತೆ

ಬಲ್ಗೇರಿಯಾದ ಎಚ್ಚರಿಕೆ

ಬಾಲ್ಕನ್ ರಾಷ್ಟ್ರಗಳಲ್ಲಿ ಜರ್ಮನರು ಬಹಳ ಬಲವಾದಂತಹ ಮಿಲಿಟರಿ ಕಾರ್ಯಾಚರಣೆಗೆ ಸಿದ್ಧರಾಗುತ್ತಿರುವರು ಎಂಬುದು ಸ್ಪಷ್ಟವಾಗುತ್ತಿದೆ

ರುಮೇನಿಯಾದಲ್ಲಿ ಮಿಲಿಟರಿ ಕ್ರಮಗಳೆಲ್ಲ ಬಹಳ ಕಠಿದಾಗುತ್ತಿವೆ ಜರ್ಮನ್ ನರ್ಸ್‌ಗಳು ಕೂಡ ರುಮೇನಿಯಾಗೆ ಬಂದಿದ್ದಾರೆ.

ಬಲ್ಗೇರಿಯಾದಲ್ಲಿ ಜರ್ಮನ್ ಸೈನಿಕರಿರುವರೆಂಬುದನ್ನು ಸೋಫಿಯಾದಲ್ಲಿ ಸುಳ್ಳೆಂದು ಸಾರಿದರೂ ಬೆಲ್‌ಗ್ರೇಡಿನಲ್ಲಿರುವ ರಾಯಿಟರ್ ಬಾತ್ಮೀದಾರರ ವರದಿ ಪ್ರಕಾರ ನಿನ್ನೆಯ ವರೆಗೆ ಒಂದು ಸಾವಿರ ನಾಜೀ ವಿಮಾನಗಳು ಬಲ್ಗೇರಿಯಾಕ್ಕೆ ಬಂದವೆಂದು ಹೇಳಲಾಗಿದೆ

ಬಲ್ಗೇರಿಯಾದಲ್ಲಿರುವ ಬಹುಭಾಗದ ವೈಮಾನಿಕ ನಿಲ್ದಾಣಗಳಲ್ಲವೂ ಈಗ ಜರ್ಮನರ ಕೈಯ್ಯಲ್ಲಿದೆಯೆಂದು ಬಾತ್ಮೀ ಬಂದಿದೆ.

ಸಾವಿರಾರು ಜರ್ಮನ್ ಸೈನಿಕರು ಸಿವಿಲಿಯನ್ ಉಡುಪುಗಳಲ್ಲಿ ರುಮೇನಿಯಾದಿಂದ ಬಲ್ಗೇರಿಯಾಕ್ಕೆ ಬಂದಿದ್ದಾರೆ

ಬರ್ಮಾದ ಮೇಲೆ ಧಾಳಿ ನಡೆದರೆ ಚೀಣದ ಸಹಾಯ

ಬರ್ಮಾ ಮತ್ತು ಸಿಂಗಪುರಗಳ ಮೇಲೆ ಜಪಾನರು ಏನಾದರೂ ಧಾಳಿ ನಡೆಯುವುದಾದರೆ ಆಗ್ಗೆ ಚೀಣಾ ಸರಕಾರವು ಬ್ರಿಟಿಷ್ ಸರಕಾರಕ್ಕೆ ಚಟುವಟಿಕೆಯ ಸಹಾಯವನ್ನು ಕೊಡುವುದಾಗಿ ಸಲಹೆಯುತ್ತಿದೆ

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ— ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ, ಛಿದ್ರ ಮುಂತಾದುವನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು.

ಪಾರದರ್ಶಕ—ಶುದ್ಧ—

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು

ಮಂಗಳೂರಿನ ಡಿಸ್ಟ್ರಿಬ್ಯೂಟರರು — ದಿ. ಕೊರನೇಷನ್ ಟ್ರೇಡಿಂಗ್ ಕೋ।

ಮುಹಮ್ಮದಾಲಿ ರೋಡ್, ಮಂಗಳೂರು.

ಪ್ರಕಟಣೆ

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನಂದರೆ, ನಮ್ಮ ಕುಟುಂಬದ ವಾಸ್ತವ್ಯ ಪೆರಡಾಲ ಗ್ರಾಮದಲ್ಲಿರುತ್ತಿರುವ ಪಟ್ಟಾಜೆ ಶಂಭಟ್ಟರ ಮಕ್ಕಳು ವೆಂಕಪ್ಪ ಭಟ್ಟ ಒಂದು, ಶಂಭಟ್ಟ ಒಂದು ಕೂಡಾ 2 ಜನರಿಂದ ನಮ್ಮ ಕುಟುಂಬಕ್ಕೆ ಅಂದರೆ, ಅಡ್ಕತ್ತಬೈಲು ಗ್ರಾಮದ ಪಟೇಲ್ ಪಟ್ಟ ಒಂಟರ ಸೊಸೆ, ಅಕ್ಕು ಹೆಂಗ್ಸು, ವ ಅವರ ಮಕ್ಕಳ, ವ ಮೊಮ್ಮಕ್ಕಳ ಪಕ್ಷದ ಬಾಬ್ತು ನನ್ನ ಅಜ್ಜಿ ಅಕ್ಕು ಹೆಸರಿಗೆ ವ ಮೃತಪಟ್ಟ ಪಟೇಲ್ ವೆಂಕಪ್ಪ ಶೆಟ್ಟರ ಮಾವನ ಹೆಸರಿಗೆ ಇರುತ್ತಿದ್ದ ಆದವ್ವ ದಸ್ತವೇಜುಗಳ ಮೊಬಲಗುಗಳನ್ನು ನನ್ನ ಅಜ್ಜಿ ಅಕ್ಕು ಹೆಂಗ್ಸು ವ ಮಕ್ಕಳು, ಐದು ಜನರೂ ಕೂಡಿ ಈ ಪ್ರಕಟಣೆಯಲ್ಲಿ ಹಿರಿಯವರಾದ ಅಡ್ಕತ್ತಬೈಲು ಕಾಯಂ ಪಟೇಲ್ ನನ್ನ ಮಾವನಾದ ಮಾಚ ಬಲ ಶೆಟ್ಟರ ಹೆಸರಲ್ಲಿ, ಮೇಲಿನ ಹಣವನ್ನು ಪಡೆದು ಚನ್ನಿಲ್ ಶಂಕರನಾರಾಯಣ ಭಟ್ಟರಿಗೆ ಕೊಟ್ಟು ಅವರಿಗೆ ಸಂ। 1931 ಯಿಸವಿ ಜೂನ್ ತಾ 9ರಲ್ಲು, ಆವರಿಂದ ಇಳಿವಾರು ವಾರು ದಸ್ತವೇಜು ಬರೆಸಿಕೊಂಡು ಇರುತ್ತಿರುವಲ್ಲಿ ಕಾಯಂ ಪಟೇಲ ಮಾಚಬಲ ಶೆಟ್ಟರು ಯಾವ ವಾಸ್ತದಿಂದಲೂ ಅನ್ಯ ಜನರ ಹೆಸರಲ್ಲಿ ಕೊಟ್ಟು, ಕುಟುಂಬಕ್ಕೆ ದ್ರೋಹವಾಗುವಂತೆ ಪರಭಾರೆ ಮಾಡ್ತು ಇರಾದೆಯಲ್ಲಿ ಇರುತ್ತಾರಾಗಿ ಕೇಳಬರುವುದರಿಂದ, ಈ ಕೆಳಗೆ ಬರೆದ ಆಸ್ತಿಗಳನ್ನು ಯಾರು ಪಡೆಯುವವರಾಗಿಯೂ, ಹಾಗೆ ಪಡೆದರೆ, ನಮ್ಮ ಅಳಿಯಸಂತಾನ ಹಕ್ಕಿನ ಈ ಕೆಳಗಿನ ಆಸ್ತಿಗೆ ಯಾವ ವಿಧದಿಂದಲೂ ಬಾಧಕ ತಕ್ಕದಲ್ಲವಾಗಿ ತಿಳಿಸುತ್ತೇನೆ.

ಆಸ್ತಿ ವಿವರ

ಕುಂಬ್ಡಾಜೆ ಗ್ರಾಮ ರಿ. ಸ. ನಂಬ್ರ 120/6, 65/3-6-7-8 ಮತ್ತು ನೆಟ್ಟಣಿಗೆ ಗ್ರಾಮದ ರಿ. ಸ. ನಂಬ್ರ 7 3/8, 75/4-5-6-9-12-13-ವ 118/10, 119/4-5,-96/7, 39/10, 75/7 ನೇ ಸಬ್ ಡಿವಿಜನ್ ಸ್ಥಳಗಳು ಆಗುತ್ತವೆ

A. Sankappa Alva

Acting Potail of Adkathabail Village, Kasaragod Taluk.

ಮುಸ್ಲಿಂ ಪಂಚಾಂಗದ ಪರಿಷ್ಕರಣ

ಮುಸ್ಲಿಂ ಜನಾಂಗದ ಹಬ್ಬಗಳೇ ಮುಂತಾದ ವಿಶೇಷ ದಿನಗಳನ್ನೆಲ್ಲ ಮುಸಲ್ಮಾನರು ಒಂದೇ ದಿವಸ ಆಚರಿಸುವಂತೆ ಮಾಡಲು ಅನುಕೂಲಿಸುವಂತೆ ಮುಸ್ಲಿಂ ಪಂಚಾಂಗವನ್ನು ಅಖಿಲ ಭಾರತದ ದೃಷ್ಟಿಯಿಂದ ಪರಿಷ್ಕರಿಸಬೇಕೆಂದು ಹೈದರಾಬಾದು ಸರಕಾರದವರು ಒಂದು ಪ್ರಯತ್ನವನ್ನು ಕೈಕೊಂಡಿದ್ದಾರೆ. ನಿಜಾಂ ರಾಷ್ಟ್ರದ ಮಂತ್ರಿಗಳಾದ ಶ್ರೀ. ಸಯಾದ್ ಅಬ್ದುಲ್ ಅಜೀಜ್ ಎಂಬವರನ್ನು ಈ ಕಾರ್ಯಕ್ಕೆ ನಿಯಮಿಸಿದೆ.

ಒಂದೇ ಮುಸ್ಲಿಂ ಹಬ್ಬವು ಈಗ ಭಾರತದ ಹಲವು ಪ್ರಾಂತ್ಯಗಳಲ್ಲಿ ಬೇರೆ ಬೇರೆ ದಿನಗಳಲ್ಲಿ ನಡೆಯುತ್ತವೆ. ಇದಕ್ಕೆ ಕಾರಣ ಮುಸ್ಲಿಂ ಪಂಚಾಂಗಗಳು ಭಿನ್ನ ಭಿನ್ನವಾಗಿವೆ. ಆದ್ದರಿಂದ ಇವೆಲ್ಲ ಪಂಚಾಂಗಗಳನ್ನು ಅಖಿಲ ಭಾರತ ದೃಷ್ಟಿಯಿಂದ ಏಕೀಕರಿಸಬೇಕೆಂಬುದೇ ನಿಜಾಮ ಸರಕಾರದ ಆಶಯ.

ಇಂತಹ ಅಖಿಲ ಭಾರತದ ಪಂಚಾಂಗದ ರಚನೆಗೆ ಅನುಕೂಲವಾಗುವಂತೆ ಭಾರತದ ಎಲ್ಲಾ ಪ್ರಾಂತ್ಯಗಳಿಂದಲೂ ಪಾಡ್ಯದ ಚಂದ್ರನು ಕಾಣುವ ಕಾಲವನ್ನು ಹೈದರಾಬಾದಿಗೆ ತಿಳಿಸುವಂತೆ ಏರ್ಪಡಿಸಿದೆ. ಹೈದರಾಬಾದು ರೇಡಿಯೋ ಯಂತ್ರದಿಂದ ಆ ಕಾಲವನ್ನು ಪ್ರಕಟಿಸಲಾಗುತ್ತದೆ.

ಹಳ್ಳಿಗಾಡಿನವರ ಶಿಕ್ಷಣ

ಹಳ್ಳಿಗಾಡಿನವರ ಶಿಕ್ಷಣವು ಎಷ್ಟು ಅಗತ್ಯವಾದದು ಎಂಬುದನ್ನು ಕುರಿತು ಹೇಳುತ್ತ ಶ್ರೀ ಎಫ್. ಎಂ. ಸ್ಮಿತ್‌ರವರು ಬಳ್ಳಾರಿಯ ವಾರ್ಡ್ಲಾ ಹೈಸ್ಕೂಲಿನಲ್ಲಿ ಭಾಷಣಮಾಡಿದರು.

"ಇಂಗ್ಲೆಂಡಿನಲ್ಲಿ ನೋಡಿ. ಇಂಗ್ಲಿಷ್ ರೈತರು ಅಕ್ಷರಸ್ಥರಾದ ಕಾರಣ, ಇಂಗ್ಲಿಷ್ ಭಾಷೆಯಲ್ಲಿರುವ ವ್ಯವಸಾಯ ಸಾಹಿತ್ಯದ ಫಲವನ್ನೆಲ್ಲ ಅವರು ಪಡೆಯುತ್ತಿದ್ದಾರೆ. ಭಾರತದ ರೈತ ವರ್ಗವೆಲ್ಲ ನಿರಕ್ಷರಸ್ಥರು ಈ ಪ್ರಯೋಜನವು ಅವರಿಗೆ ಲಭಿಸುವಂತಿಲ್ಲ. ಆದ್ದರಿಂದ ಭಾರತದ ಅತ್ಯಧಿಕ ಜನರಾದ ಹಳ್ಳಿಗಾಡಿನವರ ಅಭಿವೃದ್ಧಿಯಾಗಬೇಕಾದರೆ ಅವರಿಗೆಲ್ಲ ಶಿಕ್ಷಣವನ್ನು ಕೊಡಬೇಕು. ಈ ಉದ್ದೇಶಸಾಧನೆಗಾಗಿ ಶಾಲಾ ಕಾಲೇಜುಗಳನ್ನು ತೆಗೆಯುವ ವಿಪರೀತ ಪ್ರಯತ್ನಕ್ಕೆ ಹೋಗಬಾರದು. ಇಂಗ್ಲೆಂಡಿನಲ್ಲಿರುವಂತೆ ರೈತಾಪಿ ಜನರ ಸಂಘಗಳನ್ನು ಸ್ಥಾಪಿಸುವುದು ಸೂಕ್ತ. ಆ ಸಂಘಗಳ ಮೂಲಕ ಶಿಕ್ಷಣವನ್ನು ಸುಲಭವಾಗಿ ಹರಡಬಹುದು. ರೈತರೆಲ್ಲರಿಗೂ ಪರಿಚಿತವಾದ ವ್ಯವಸಾಯವೇ ಇವರ ಶಿಕ್ಷಣದ ಸಾಧನವಾಗಬೇಕು. ಆಗಾಗ್ಗೆ ಪ್ರದರ್ಶನಗಳನ್ನೇರ್ಪಡಿಸಿ ಅನೇಕ ವಿಷಯಗಳನ್ನು ರೈತರಿಗೆ ತಿಳಿಸಬಹುದು. ಪಕ್ಕ ವ್ಯವಸಾಯ ಸಂಸ್ಥೆಗಳನ್ನು ಸ್ಥಾಪಿಸಬಹುದು. ಮುಂಬಯಿ ಪ್ರಾಂತದಲ್ಲಿ ಕೈಕೊಂಡಿರುವಂತೆ ಸಿನಿಮಾ ಮೂಲಕ

ಇಷ್ಟು ಮುಖ್ಯವಾದ ರೈತಾಪಿ ಜನರ ಶಿಕ್ಷಣವನ್ನು ಯುದ್ಧವೆಂಬ ನೆಪದಿಂದ ಸರಕಾರದವರು ಕಡೆಗಾಣುವುದಿಲ್ಲವೆಂದು ನಾನು ನಂಬಿದ್ದೇನೆ. ಸರಕಾರವು ಸರ್ವಗ್ರಾಹ್ಯವಾದ ಒಂದು ಪ್ರಯತ್ನವನ್ನು ಮಾಡದೆ ಹೋದರೆ ಈ ಕಾರ್ಯವು ಕೈಗೂಡುವುದಿಲ್ಲ"ವೆಂದು ಸ್ಪಷ್ಟ ಅಭಿಪ್ರಾಯವನ್ನು ತಿಳಿಸಿದರು.

ಚೀಣಾ-ಭಾರತ ವ್ಯಾಪಾರ

ಕಳೆದ ವರ್ಷ ಭಾರತದಿಂದ ಚೀಣಕ್ಕೆ ಹತ್ತಿಯ ರಫ್ತು ಬಹಳ ಅಧಿಕವಾಗಿ ಆಯಿತು. ೬೬೮ ಲಕ್ಷ ರೂ ಗಳ ಬೆಲೆ ಬಾಳುವ ೧೨೨ ಸಹಸ್ರ ಟನ್‌ಗಳಷ್ಟು ಹತ್ತಿಯನ್ನು ಭಾರತದಿಂದ ಚೀಣಕ್ಕೆ ಕಳಿಸಲಾಯಿತು. ಹಿಂದಿನ ವರ್ಷ ೧೬೮ ಲಕ್ಷ ರೂ ಗಳ ಬೆಲೆ ಬಾಳುವ ೩೪ ಸಹಸ್ರ ಟನ್‌ಗಳಷ್ಟು ಹತ್ತಿಯನ್ನೂ ಕಳಿಸಲಾಗಿತ್ತು.

೧೮ ಲಕ್ಷ ರೂ ಗಳಿಗೆ ಗೋಣಿಚೀಲಗಳನ್ನೂ ೫ ಲಕ್ಷ ರೂ ಗಳಿಗೆ ಬಟ್ಟೆಯನ್ನು ರಫ್ತುಮಾಡಲಾಯಿತು.

ಚೀಣದಿಂದ ಭಾರತಕ್ಕೆ ಆದ ರಫ್ತು ವ್ಯಾಪಾರವು ೧೬೩ ಲಕ್ಷದಿಂದ ೨೬೧ ಲಕ್ಷ ರೂ.ಗಳಿಗೂ ಭಾರತದಿಂದ ಚೀಣಕ್ಕೆ ಆದ ರಫ್ತು ವ್ಯಾಪಾರವು ೨೫೦ರಿಂದ ೮೫೧ ಲಕ್ಷ ರೂ.ಗಳಿಗೂ ಅಭಿವೃದ್ಧಿಗೊಂಡಿತ್ತು.

ಭಾರತಕ್ಕೆ ಚೀಣದಿಂದ ಆದ ಹತ್ತಿಯ ಬಟ್ಟೆಯ ಆಮದು ೩೦೮ ಲಕ್ಷ ಪೌಂಡುಗಳಷ್ಟು ಆಗಿತ್ತು. ರೇಷ್ಮೆಯು ೧೦ ಲಕ್ಷ ರೂ.ಗಳಷ್ಟು ಹೆಚ್ಚಿತ್ತು. ರೇಷ್ಮೆಬಟ್ಟೆಯು ೨ ಲಕ್ಷ ರೂ.ಗಳಷ್ಟು ಹೆಚ್ಚಿತ್ತು. ಟೀಸೊಪ್ಪಿನ ಆಮದೂ ಅಧಿಕವಾಗಿತ್ತು.

ತುರ್ಕಿಯ ಸ್ತ್ರೀಯರು

ತುರ್ಕಿಯು ಸುಲ್ತಾನರ ಆಳ್ವಿಕೆಯಲ್ಲಿ ಇದ್ದಾಗ ಹೆಂಗುಸರೆಲ್ಲರೂ ಜನಾನಾಗಳಲ್ಲಿದ್ದರು. ಕೆಮಾಲ್ ಎಂಬ ಸೈನಿಕನು ತುರ್ಕಿಯಲ್ಲಿ ಕ್ರಾಂತಿನಡೆಸಿ, ಸುಲ್ತಾನರನ್ನು ಹೊರಗಟ್ಟಿ ರಾಜ್ಯದಲ್ಲೆಲ್ಲ ಮಹತ್ತರವಾದ ಬದಲಾವಣೆಗಳನ್ನು ನಡೆಸಿದ. ಇದರಲ್ಲಿ ಸ್ತ್ರೀಯರ ಸ್ವಾತಂತ್ರ್ಯವು ಬಹಳ ಮುಖ್ಯವಾದ ವಿಚಾರ. ಕೆಮಾಲನು ಅಧಿಕಾರಕ್ಕೆ ಬರುತ್ತಲೇ ಸ್ತ್ರೀಯರ ಜನಾನಾಗಳನ್ನು ರದ್ದುಗೊಳಿಸಿದ. ಅವರು ಬುರ್ಕಿ ಹಾಕಿಕೊಳ್ಳಕೂಡದೆಂದು ಸಾರಿದ.

ಇದರ ಫಲವಾಗಿ ಇವತ್ತು ತುರ್ಕಿಯಲ್ಲಿ ನೋಡಿ ರಾಷ್ಟ್ರಜೀವನದ ಎಲ್ಲಾ ರಂಗಗಳಲ್ಲೂ ಸ್ತ್ರೀಯರು ಪ್ರಧಾನವಾಗಿ ಕಂಡುಬರುತ್ತಿದ್ದಾರೆ. ಎಲ್ಲ ವೃತ್ತಿಶಿಕ್ಷಣ ಶಾಲೆಗಳಲ್ಲೂ ಸ್ತ್ರೀಯರಿದ್ದಾರೆ. ಡಾಕ್ಟರರೂ ನರ್ಸುಗಳೂ ಅಗಾಧ ಸಂಖ್ಯೆಯಲ್ಲಿದ್ದಾರೆ. ಸಾಹಿತ್ಯ, ಕಲೆ ಇತ್ಯಾದಿ ಕುಶಲವಿದ್ಯೆಗಳಲ್ಲೂ ಅವರು ಪ್ರಮುಖರಾಗಿದ್ದಾರೆ. ಕಡೆಗೆ ವ್ಯವಸಾಯದಲ್ಲೂ ಅವರು ಹಿಂದೆಬಿದ್ದಿಲ್ಲ. ಅವರ ವೇಷಭೂಷಣಗಳೇ ಬದಲಾಯಿಸಿಹೋಗಿವೆ. ಅವರ ದೃಷ್ಟಿಕೋನವೇ ಬದಲಾಗಿದೆ.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳು ನಿಯಮಗಳಿಗನುಸಾರವಾಗಿ ನಡೆಯುವ ದೇಶಗಳಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವಳಿಕೆ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು

೧ ಸೇರಿಗೆ ರೂ ೩



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ ಎ, ಎಫ್ ಸಿ ಎಸ್ (ಲಂಡನ್) ಎಂ ಸಿ ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಢಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜಂಟ್ಸ್ ಷಾ। ಕಂಪೆನಿ, ಹಂಪನಕಟ್ಟೆ, ಮಂಗಳೂರು

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ। ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಮಾಡುವ, ಶಾಸ್ತ್ರೀ ಈ ಚೂರ್ಣದಿಂದ ಯಾವತರದ ಅಪಾಯವೂ ಇಲ್ಲ. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪-೦-೦ ವಿ ಪಿ

ವಿಳಾಸ .ಸಂಜೀವಿನೀ ಔಷಧಾಲಯ ಮು. ಪೋ. ವಿರಜಿ, S. M C

ಮಿಡತೆಗಳ ಹಾವಳಿ ಉಂಟಾದೀತು!

ಲಕ್ಷೋಪಲಕ್ಷ ಮಿಡತೆಗಳು ಬಂದು ದೊಡ್ಡ ಹಾನಿಯನ್ನುಂಟುಮಾಡಿದವೆಂದು ಹಿಂದಿನವರು ಹೇಳುತ್ತಾರೆ. ಅಂತಹ ಮಿಡತೆಗಳ ಹಾವಳಿಯು ಮತ್ತೆ ಒದಗಬಹುದೆಂದು ವೈಜ್ಞಾನಿಕರು ಎಚ್ಚರಿಕೆ ಕೊಡುತ್ತಿದ್ದಾರೆ.

ಜಿಸ್ಸಾರ್, ಡೆಹಲಿ, ಗುರ್ಗಾಂವ್, ಡೆಹ್ರಾಡೂನ್, ಬುಲಂಡ್‌ಷಹರ್, ಅಲ್ಲಿ ...

... ಸಿಂಧುದೇಶ, ಧಾರ್ ಪಾರ್ಕರ್ ಜಿಲ್ಲೆಗಳಲ್ಲಿ ಮಿಡತೆಗಳ ಹಿಂಡುಹಿಂಡುಗಳು ಕಾಣಬರುತ್ತಿವೆಯಂತೆ.

ಆ ಮಿಡತೆಗಳಿನ್ನೂ ಬಾಲ್ಯಾವಸ್ಥೆಯಲ್ಲಿವೆ. ಚಳಿಗಾಲ ಕಳೆದು ಬೇಸಿಗೆಯು ಪ್ರಾಪ್ತವಾದಂತೆಲ್ಲ ಅವು ಬೆಳೆದು ಸಂತಾನ ವೃದ್ಧಿಯಾಗುತ್ತದೆಂದೂ ಆಗ ಅವುಗಳ ಹಾವಳಿಯು ಪ್ರಾರಂಭವಾಗುತ್ತದೆಂದೂ ಎಚ್ಚರಿಸಲಾಗಿದೆ.

ಮೇಲೆ ಕಂಡ ಕಡೆಯಲ್ಲೆಲ್ಲ ಈ ಮಿ...

ವಿಚಿತ್ರ ಪ್ರಪಂಚ

ವಜ್ರದ ತುಲಾಭಾರ

ಶ್ರೀಮಾನ್ ಆಗಾಖಾನರು ಖೋಜಾ ಜಾತಿಯ ಮುಸಲ್ಮಾನರ ಮುಖಂಡರೂ ಧಾರ್ಮಿಕ ಗುರುಗಳೂ ಆಗಿದ್ದಾರೆ. ಆಗಾಖಾನರಂತೆ ಈ ಮುಸಲ್ಮಾನರೂ ಬಹಳ ಶ್ರೀಮಂತರಿದ್ದಾರೆ. ಅವರು ಧರ್ಮದ ಮೇಲೂ ಗುರು ಪರಂಪರೆಯ ಮೇಲೂ ಅತಿಶಯ ಶ್ರದ್ಧೆ ಉಳ್ಳವರೂ ಆಗಿರುವರು. ಈ ಜನರು ೧೯೩೬ರಲ್ಲಿ ಆಗಾಖಾನರ ೫೦ನೇ ವರ್ಷದ ಸ್ವರ್ಣೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಿ ಚಿನ್ನದ ತುಲಾಭಾರ ಮಾಡಿದ್ದರು. ಅಂದರೆ ಆಗಾಖಾನರ ತೂಕದಷ್ಟೇ ಚಿನ್ನವನ್ನು ಸಂಗ್ರಹಿಸಿ ಅದನ್ನು ಅವರಿಗೆ ದಾನ ಮಾಡಿದ್ದರು. ಈಗ ೧೯೪೫ರಲ್ಲಿ ಆಗಾಖಾನರು ೬೦ ವರ್ಷ ಪ್ರಾಯದವರಾಗುವರು. ಆಗ ಅವರ ವಜ್ರೋತ್ಸವವು ಆಚರಿಸಲ್ಪಡುವುದು. ಆ ಸಂದರ್ಭದಲ್ಲಿ ಅವರ ಶರೀರ ತೂಕದಷ್ಟು ವಜ್ರಗಳ ತುಲಾಭಾರ ಮಾಡಬೇಕೆಂದು ಕೆಲವು ಜನ ಖೋಜಾ ಜಾತಿಯವರು ಎಣಿಸಿ ಕಾರ್ಯಾರಂಭ ಮಾಡಿರುವರು. ಇನ್ನು ನಾಲ್ಕು ವರ್ಷಗಳಲ್ಲಿ ನಡೆಯುವ ಈ ತುಲಾಭಾರಕ್ಕೆ ೫೦ ಲಕ್ಷ ಪವನುಗಳ ವಜ್ರಗಳು ಬೇಕಾಗಬಹುದೆಂದು ಅಂದಾಜಾಗಿದೆ.

ಗಾಯಕವಾಡರ ವೈಭವ ಜೀವನ!

ನಮ್ಮ ದೇಶದ ಅತ್ಯಂತ ಶ್ರೀಮಂತ
ಲ್ಲಿ ಬರೋಡದ ಗಾಯಕವಾಡರು
ಬ್ಬರಾಗಿರುವರು. ಅವರ ಪರಿವಾರ
ವರ ಮಕ್ಕಳು, ರಾಜಕುಮಾರರು ಮೊ
ಲಾದವರು ಪಾಠಶಾಲೆಗಳಿಗೆ ಹೋಗ
ು ಅನುಕೂಲವಾಗುವಂತೆ ಈ ಮಹಾ
ಜರು ೬೦೦೦೦ ರೂಪಾಯಿಗಳ ಖರ್ಚು
ಡಿ ಒಂದು ರೈಲು ಗಾಡಿಯನ್ನು ತರಿ
ದ್ದಾರೆ. ಈ ಮಕ್ಕಳ ಶಾಲೆ ದೂರ
ಲ್ಲಿಯೂ ಅಲ್ಲ. ಅರಮನೆಗೆ ಸಮೀಪ
ಾಗಿ, ಅದರ ತೋಟದೊಳಗೆಯೇ ಇದೆ.
ಶಾಲೆಗೆ ಹೋಗಲಿಕ್ಕಾಗಿ ಈ ರೈಲು
ಡಿ ಇರುತ್ತದೆ. ಬ್ರಿಟಿಷ್ ಸಾರ್ವ
ಮರ ನೂತನದವರಿಗಾಗಿ ಬ್ರಿಟನಿನ
ವು ರೈಲು ಕಂಪನಿಗಳು ಕೂಡಿ ತಮ್ಮ
ನಿಂದ ಇಂಥ ಒಂದು ಗಾಡಿಯನ್ನು
ಯಾರಿಸಿ ಸಾರ್ವಭೌಮರಿಗೆ ಒಪ್ಪಿಸಿ
ರು. ಆದರೆ ಈ ಪ್ರಕಾರದ ವೈಭವವು
ಗೆ ಬೇಡವೆಂದು ಸಾರ್ವಭೌಮರು
ಕಾಣಿಕೆಯನ್ನು ನಿರಾಕರಿಸಿದ್ದರು.
ರೆ ನಮ್ಮ ಗಾಯಕವಾಡರು ಮಾತ್ರ
ಗಾಡಿಯನ್ನು ಇತರರ ಖರ್ಚಿನಿಂದ
ಡೆಯಾಗ ಅಲ್ಲ. ಅವರ ತಮಗೇ
ಬೇಕಾಗಿ ತಾವೇ ಖರ್ಚು ಮಾಡಿ ತರಿಸಿದ್ದಾರೆ. ಬ್ರಿಟಿಷ್ ಸಾರ್ವಭೌಮರಿಗೆ ಬೇಡವಾದ ವೈಭವವೂ ನಮ್ಮ ದೇಶೀ ಅರಸರಿಗೆ ಬೇಕಾಗುತ್ತದೆಂಬುದು ಎಷ್ಟು ವಿಚಿತ್ರವಾಗಿದೆ!

ಪ್ರಪಂಚದ ಅತಿವೃಷ್ಟಿ ಪ್ರದೇಶ

ಪ್ರಪಂಚದಲ್ಲಿ ಅತಿ ಹೆಚ್ಚು ಮಳೆಬೀಳುವ ಪ್ರದೇಶವು ನಮ್ಮ ಹಿಂದುಸ್ಥಾನದಲ್ಲಿ ಇದೆ. ಅಸ್ಸಾಮಿನ ಚಿರಾಪುಂಜಿ ಎಂಬಲ್ಲಿ ಬೀಳುವಷ್ಟು ಮಳೆ, ಜಗತ್ತಿನ ಇನ್ನಾವ ಭಾಗದಲ್ಲಿಯೂ ಬೀಳುವುದಿಲ್ಲ. ಇಲ್ಲಿ ವರ್ಷಾವಧಿ ಬೀಳುವ ಮಳೆಯು ಸರಾಸರಿ, ೪೫೮ ಇಂಚುಗಳಷ್ಟು ಇರುತ್ತದೆ! ೧೮೬೧ರಲ್ಲಿ ಈ ಸ್ಥಳದಲ್ಲಿ ೯೦೦ ಇಂಚುಗಳಷ್ಟು ಮಳೆ ಬಿದ್ದಿತ್ತು. ಈ ವರ್ಷದ ಜೂನ್ ತಿಂಗಳ ೧೪ರಲ್ಲಿ ೨೪ ತಾಸುಗಳ ಅವಧಿಯೊಳಗೆ ಇಲ್ಲಿ ೪೧ ಇಂಚುಗಳಷ್ಟು ಮಳೆ ಬಿದ್ದಿರುತ್ತದೆ.

ಮನೆಕೆಲಸಮಾಡಿ ಅಶನಾರ್ಥಕ್ಕೆ ದಾವೆ

ಬಡವನೊಬ್ಬನು ಶ್ರೀಮಂತ ಹುಡುಗಿಯನ್ನು ಮದುವೆಯಾದರೆ ಏನಾಗುತ್ತದೆ ಎಂಬುದಕ್ಕೆ ಒಂದು ಉದಾಹರಣೆ. ಲಂಡನಿನ ಸಿಲ್ವೆಸ್ಟರ ಎಂಬ ಸಾಧಾರಣ ದರ್ಜೆಯ ಕಂಪೆನಿ ಮೆನೇಜರನೊಬ್ಬನು ಒಬ್ಬ ಶ್ರೀಮಂತೆಯನ್ನು ಮದುವೆಯಾಗಿದ್ದನು. ಮನೆಕೆಲಸಕ್ಕೆ ಅವಳು ನೌಕರನನ್ನು ಇಟ್ಟುಕೊಳ್ಳಲು ಒಪ್ಪದುದರಿಂದ ಸಿಲ್ವೆಸ್ಟರ ತನ್ನ ಕಂಪೆನಿ ಮೆನೆಜರಿಕೆಗೆ ರಾಜಿನಾಮೆ ಕೊಟ್ಟು ತನ್ನ ಆಕೆಯ ಮನೆ ನೌಕರನಾಗಿ ದಿನ ಕಳೆಯಬೇಕಾಯಿತು. ಮನೆ ಕೆಲಸಗಳನ್ನೆಲ್ಲಾ ಇವನೇ ಮಾಡಬೇಕಾಗಿದ್ದಿತು. ಹೆಂಡತಿ ಹಾಸಿಗೆ ಹಿಡಿದಿದ್ದಾಗ ಇವನೇ ಅವಳ ಕಾಲು ತಿಕ್ಕಿ, ಶಾಖಕೊಟ್ಟು ಸೇವೆಮಾಡಬೇಕಾಗಿದ್ದಿತು. ಮತ್ತೆ ಹಣವಂತನಾದರೆ ಎಲ್ಲಿಯಾದರೂ ತಪ್ಪಿಸಿಕೊಂಡು ಹೋಗಬಹುದೆಂದು ಈ ತಾಟಕಿ ಹಣ ಸಂಗ್ರಹ ಮಾಡಿ ಇಡಲಿಕ್ಕೂ ಆತನನ್ನು ಬಿಡುತ್ತಿರಲಿಲ್ಲ. ಕೊನೆಗೆ ಸಾಯುವಾಗ ತನ್ನ ಸಂಪತ್ತನ್ನಾದರೂ ಪಾಪದ ಗಂಡನಿಗೆ ಬಿಟ್ಟು ಹೋದಳೆ? ಸಂಪತ್ತನ್ನು ಬೇರೆಯವರ ಹೆಸರಿನಲ್ಲಿ ಬರೆದಿಟ್ಟು, ಈ ನೌಕರ ಗಂಡನಿಗೆ ವಾರಕ್ಕೆ ಒಂದು ಪವನು ಅಶನಾರ್ಥ ಮಾತ್ರ ಕೊಟ್ಟರೆ ಸಾಕೆಂದು ವಿಲ್ಲು ಬರೆದಿದ್ದಳು. ಈಗ ೬೯ ವರ್ಷ ಪ್ರಾಯದ ಮುದುಕ ಸಿಲ್ವೆಸ್ಟರ ಕೋರ್ಟಿನಲ್ಲಿ ದಾವೆ ಮಾಡಿ ವಾರದ ಅಶನಾರ್ಥ ಒಂದು ಪವನು ಇದ್ದುದನ್ನು ನಾಲ್ಕು ಪವನಿಗೆ ಹೆಚ್ಚಿಸಿಕೊಂಡಿದ್ದಾನೆ ಅಷ್ಟೆ!

ಜೈನರ ಅತಿ ದೊಡ್ಡ ಪ್ರತಿಮೆ

ಜೈನರು ನಮ್ಮ ದೇಶದ ಅಲ್ಲಲ್ಲಿ ಸಣ್ಣ
ದೊಡ್ಡ ಅನೇಕ ತೀರ್ಥಂಕರ ಪ್ರತಿಮೆ
ನ್ನು ಸ್ಥಾಪಿಸಿದರಷ್ಟೆ! ಇವುಗಳಲ್ಲಿ
ದೊಡ್ಡದಾದ ಒಂದು ಪ್ರತಿಮೆಯು
ಬರವಾನಿ(?) ಪಾಲಿಟಾನ ಎಂಬಲ್ಲಿ
ಪಾಲಿಟಾನವು ಜೈನರ ಒಂದು ಪ್ರ
ಯಾತ್ರಾ ಸ್ಥಾನವಾಗಿರುವುದು.
ರೇವ ಈ ತೀರ್ಥಂಕರ ಪ್ರತಿಮೆಯು
ಅಡಿ ಎತ್ತರವೂ ೨೫ ಅಡಿ ಅಗಲ
ಇದೆ. ಇದಕ್ಕೆ ವರ್ಷಕ್ಕೊಮ್ಮೆ ಬ
ವಿಜೃಂಭಣೆಯಿಂದ ಮಹಾ ಮಸ್ತಕಾ
ಷೇಕವು ನಡೆಯುತ್ತದೆ. ಆಗ ಲಕ್ಷಾ
ತರ ಜೈನ ಯಾತ್ರಿಕರು ಅಲ್ಲಿಗೆ ಹೋ
ಈ ಅದ್ಭುತ ದೃಶ್ಯವನ್ನು ಕಂಡು ಪು
ವನ್ನು ಸಂಪಾದಿಸಿಕೊಳ್ಳುತ್ತಾರೆ.

ತಂತಿ ಕೊಟ್ಟು ರಾಜನಾದ

ಅಲ್ಬೇನಿಯದ ವಸ್ತು ಸಂಗ್ರಹಾ
ಯದಲ್ಲಿ ಒಂದು ಹಳೆಯ ತಂತಿ ಪ್ರತಿ
ನ್ನು ಈಗಲೂ ಪ್ರದರ್ಶನಕ್ಕಿಟ್ಟಿರುತ್ತಾ
ಈ ತಂತಿಯನ್ನು ನೂರಾರು ವರ್ಷಗ
ಹಿಂದೆ ಒಟ್ಟೊಮಿಟ್ಟೆ ಎಂಬ ಐಂದ್ರಜಾಲ
ನೊಬ್ಬನು ಟರ್ಕಿ ರಾಜ್ಯದ ಒಂದು ಸ್ಥ
ಕ್ಕೆ ಇಲಾಖೆಗೆ ಕಳುಹಿಸಿದ್ದ. ಸಂಚಾರ
ಲ್ಲಿದ್ದ ರಾಜಕುಮಾರ ಹಲೀಮನು ರಾ
ಧಾನಿಗೆ ಮರಳುತ್ತಿರುವನೆಂದೂ, ಆತ
ಪಟ್ಟಾಭಿಷೇಕಕ್ಕೆ ಸಿದ್ಧತೆಗಳಾಗಲೆಂದ
ಆ ತಂತಿಯಲ್ಲಿ ಬರೆದಿದ್ದಿತು. ಅದಕ್ಕನ
ಸಾರವಾಗಿ ಸಿದ್ಧತೆಗಳಾದುವು. ಒಟ್ಟೊ
ಮಿಟ್ಟೆಯು ಹಲೀಮನಂತೆ ವೇಷಹಾಕಿಕೊ
ಡ್ಡು ಬಂದ. ಮೋಸವನ್ನು ತಿಳಿಯದೆ
ಅಧಿಕಾರಿಗಳು ಆತನಿಗೆ ಪಟ್ಟಾಭಿಷೇ
ಮಾಡಿದರು. ಆದರೆ ಕೆಲವು ದಿನಗಳಲ್ಲಿ
ಗುಟ್ಟು ರಟ್ಟಾಯಿತು. ಈ ಐಂದ್ರಜಾಲ
ಕನು ತನ್ನ ಸ್ವಭಾವಗುಣದಂತೆ ಕತ್ತಿಯ
ನ್ನು ನುಂಗುವ ಅಭ್ಯಾಸ ಮಾಡುತ್ತಿದನ್ನು
ಅಧಿಕಾರಿಗಳು ಮರೆಯಲ್ಲಿದ್ದು ನೋಡಿ
ದರು. ಪಂಪ್ರಜಾಲಕನು ಅರಸನಾಗು
ಮೊದಲು ಇದೇ ವಿದ್ಯೆಯನ್ನು ತೋರಿ
ಸಿ ಜೀವನೋಪಾರ್ಜನೆ ಮಾಡುತಿದ್ದ.
ರಹಸ್ಯವು ಬಯಲಾದೊಡನೆ ಅವನು
ತಲೆ ಮರಸಿ ಪಲಾಯನ ಮಾಡಿದ.
ಮತ್ತೆ ನಿಜವಾದ ಹಲೀಮನು ರಾಜಧಾ
ನಿಗೆ ಬಂದ ತರುವಾಯ ಪುನಃ ಆತನ
ಪಟ್ಟಾಭಿಷೇಕವಾಯಿತು.

THE
BANK OF MANGALORE LTD.,
H. O. MANGALORE.
ESTD. 1931

Branches:-
Moodabidri & Padubidri.

NOTICE

On and from 1st January 1941 the following are the revised rates of interest on deposits:

FIXED DEPOSITS:

For 2 years or over	...	5½%
„ 1 „	...	4½%
„ 6 months	...	3½%
„ 3 months	...	3

Interest Payable Quarterly.

SAVINGS BANK DEPOSITS:

On daily balances on balances over Rs. 5-0-0 in multiples of Rs. 5-0-0 @ 3%.

All kinds of banking business transacted.

HALFTONE & LINE BLOCK MAKING UNDERTAKEN
Sharada Press, MANGALORE

ಪತ್ರಿಕೋದ್ಯಮಿಯಾದ ಗಾಂಧಿಜಿ-

ಅಂತರ್ರಾಷ್ಟ್ರೀಯ ಜನತೆಗೆ ಅವರ ಲೇಖನ

ಭಾಷಾಂತರವಾಗದ ಭಾಷೆಯಿಲ್ಲ; ಓದದಿರುವ ರಾಷ್ಟ್ರವಿಲ್ಲ.

ಭಾರತಕ್ಕೆ ಪತ್ರಿಕಾ ಸ್ವಾತಂತ್ರ್ಯವೂ ಬೇಕಾಗಿದೆ

ಗಾಂಧಿಜಿ ಒಬ್ಬ ಪ್ರಸಿದ್ಧ ಹಾಗೂ
ಭಾವಶಾಲಿಯಾದ ಪತ್ರಿಕೋದ್ಯ
ಮಿಯೂ ಆಗಿದ್ದಾರೆಂಬುದು ಪತ್ರಿ
ಕೋದ್ಯೋಗಿಗಳಿಗೆ ಮತ್ತೊಂದು ಸಂ
ತೋಷದ ವಿಷಯ. ಕೆಲವರು ಅವ
ರನ್ನು ಮಹಾತ್ಮನೆನ್ನುತ್ತಾರೆ; ಇನ್ನು
ಕೆಲವರು ಅವತಾರ ಪುರುಷನೇ
ಎಂದು ಕರೆಯುತ್ತಾರೆ; ಹೆಚ್ಚಿನವ
ರು ಅವರು ಪ್ರಸಿದ್ಧ ರಾಜನೀತಿಜ್ಞನೆ
ನ್ನುತ್ತಾರೆ; ಅವರು ಒಬ್ಬ ಹುಚ್ಚನೆ
ನ್ನುವವರೂ ಕೆಲವರು ಇಲ್ಲದೆ ಇಲ್ಲ
ವಾದರೂ ಪತ್ರಿಕಾ ಲೋಕದಲ್ಲಿ ಮ
ಹಾತ್ಮಾಜಿ ಮಾಡಿದ ಸೇವೆ, ಮಹತ್ವ
ವಾದುದು ಚಿರಸ್ಮರಣೀಯವಾ
ದುದು ಎಂಬುದು ನಿರ್ವಿವಾದ
ವಿಷಯವಾಗಿದೆ. ಕಣ್ಣು ಮುಂದಿ
ರುವ ಬೆಳಕಿನಷ್ಟು ಸತ್ಯವಾಗಿದೆ.

ಕಳೆದ ಇಪ್ಪತ್ತು ವರ್ಷಗಳಿಂದ ಅವ
ರು ಪತ್ರಿಕೋದ್ಯಮಿಯಾಗಿದ್ದಾರೆ; ಹಲ
ವಾರ ಪತ್ರಿಕೆಗಳ ಸಂಪಾದಕರಾಗಿ
ದ್ದಾರೆ. ೧೯೨೦, ೨೧ರ ಇಸವಿಗಳಲ್ಲಿ
ಅವರ 'ಯಂಗ್ ಇಂಡಿಯಾ' ಎಷ್ಟರ
ಮಟ್ಟಿಗೆ ಜನಪ್ರಿಯವಾಗಿತ್ತೆಂದರೆ, ಅದರ
ಷ್ಟು ಪ್ರಚಾರವುಳ್ಳ ದಿನ ಪತ್ರಿಕೆಗಳೇ
ಆಗ ಭಾರತದಲ್ಲಿ ಬೇರೆ ಇರಲಿಲ್ಲ.
ಪ್ರತಿಯೊಬ್ಬ ರಾಜಕೀಯ ಅಭ್ಯಾಸಿಯು
ಕೈಯಲ್ಲಿಯೂ ಆ ಪತ್ರಿಕೆಯನ್ನು ಕಾಣ
ಬಹುದಿತ್ತು. ಎಲ್ಲರೂ ಗಾಂಧಿಜಿಯವ
ರ ಕತೆಯೇ ವಿಚಾರ ಮಾಡುವವರು ಇ
ದ್ದವರೆಂದಲ್ಲ; ಆದರೆ ಗಾಂಧಿಜಿ ಬರೆದು
ದನ್ನು ಓದುವ ಆಗ್ರಹ ಪ್ರತಿಯೊಬ್ಬರಿ
ಗೂ ಇದೆ. ಪರದೇಶಗಳಲ್ಲಿಯೂ ಕೂ
ಡ ಅವರ ಪತ್ರಿಕೆಗಳನ್ನು ಅನೇಕ ಜನರು
ಅತ್ಯಾಗ್ರಹದಿಂದ ಓದುತ್ತಿದ್ದಾರೆ. ಗಾಂ
ಧಿಜಿ ಅಂತರ್‌ರಾಷ್ಟ್ರೀಯ ವ್ಯಕ್ತಿಯಾದು
ದರಿಂದ ಅವರ ವಿಚಾರಗಳನ್ನು ಅಂತರ್‌
ರಾಷ್ಟ್ರೀಯ ಜನತೆ ಓದುತ್ತಿದೆ. ಅವರು
ಯಾವುದೇ ವಿಷಯದಲ್ಲಿ ಏನು ಹೇಳು
ತ್ತಾರೆಂಬುದನ್ನು ಪ್ರಪಂಚದ ಮೂಲೆ
ಮೂಲೆಗಳಲ್ಲಿ ಕಾದು ಕೇಳುವ ಮಂದಿ
ಎಂದು ಹಲವರಿದ್ದಾರೆ.

ಚರ್ಚಿಲರಂತವರು ಗಾಂಧಿಜಿಯನ್ನು
ಅರ್ಧ ನಗ್ನ ಫಕೀರನೆನ್ನಬಹುದು; ರಾಜ
ದ್ರೋಹಿಯೆಂದು ಬಯ್ಯಬಹುದು; ಆದ
ರೆ ಅವರ ಪ್ರಭಾವವು ಇಡೀ ಜಗತ್ತಿನ
ಮೇಲೆ ಬಹಳವಿದೆ. ವಿದೇಶೀಯವಾದ
ಆ ಆಂಗ್ಲ ಭಾಷೆಯಲ್ಲಿ ಅವರಿಗಿರುವ
ಹಾಗೆ ಪ್ರಭುತ್ವ ಭಾರತದ ಹಲವು

ಮಂದಿ ವಿದ್ವಾಂಸರಿಗೆ ಇಲ್ಲ. ಅವರ ಶೈಲಿಯು ಅವರದೇ ಆದ ಒಂದು ವಿಶಿಷ್ಟತೆಯಿಂದ ಕೂಡಿದೆ; ಅದರಲ್ಲಿ ಹೃದಯವನ್ನು ಮುಟ್ಟುವ ಶಕ್ತಿಯಿದೆ; ಮಾತಿಗೆ ಅಲಂಕಾರವಿಲ್ಲದಿರಬಹುದು; ಸಹಜ ಸೌಂದರ್ಯವಿದೆ. ನೆಹರು ಉತ್ಕೃಷ್ಟ ಆಂಗ್ಲ ಭಾಷೆಯ ಬರಹಗಾರರೆಂದು ಪ್ರಸಿದ್ಧರು. ಅವರ ಲಕ್ನೋ ಕಾಂಗ್ರೆಸ್ಸಿನ ಅಧ್ಯಕ್ಷ ಭಾಷಣ ಉತ್ಕೃಷ್ಟವಾದ ಇಂಗ್ಲೀಷಿನಲ್ಲಿದೆಯೆಂದು ಎಲ್ಲರೂ ಕೊಂಡಾಡಿದ್ದಾರೆ, ಆದರೆ ಗಾಂಧಿಜಿಯ ಶೈಲಿಯ ಮುಂದೆ, ನೆಹರು ಬರವಣಿಗೆಯೂ ತಲೆ ತಗ್ಗಿಸಿದೆ. ರೈಟ್ ಆನರೇಬಲ್ ಶಾಸ್ತ್ರಿಗಳ ಲೇಖನ ಅಲಂಕಾರಮಯವಾಗಿರುತ್ತದೆ; ಒಳ್ಳೆಯ ಆಂಗ್ಲ ಭಾಷಾಭ್ಯಾಸಿಗಳು ಅದನ್ನು ಬಹಳ ಕೊಂಡಾಡುತ್ತಾರೆ ಆದರೆ ಗಾಂಧಿಜಿಯ ಶೈಲಿಯನ್ನು ಮೀರುವ ಶೈಲಿ ಶಾಸ್ತ್ರಿಗಳದೂ ಆಗಿಲ್ಲ.

ಇದಕ್ಕೆ ಕಾರಣ; ಗಾಂಧಿಜಿ ಮಾನವ ಮನಶ್ಶಾಸ್ತ್ರಜ್ಞರು. ಮನುಷ್ಯನ ಹೃದಯವನ್ನು ಪರೀಕ್ಷಿಸಿ ಅದಕ್ಕೆ ಬೇಕಾದ ಹಾಗೆ ಮಾತನಾಡುವವರು, ಅವರು ತಮ್ಮ ಶೈಲಿಯನ್ನು ಒಂದು ಸಿದ್ಧಿಗೆ ತಂದಿದ್ದಾರೆ. ಉತ್ತಮ ಮೇಧಾವಿಗಳಾದ ಪಂಡಿತರಿಂದ ಹಿಡಿದು ಸಾಮಾನ್ಯ ತಿಳುವಳಿಕೆಯ ಹೆಸ್ತರ ತನಕ ಅವರ ಬರವಣಿಗೆಯು ಆಕರ್ಷಣೀಯವಾಗಿದೆ. ಒಂದು ಕ್ಷಣ ತಡೆದು ಗಾಂಧಿಜಿ ಏನು ಹೇಳುತ್ತಾರೆಯೆಂದು ತೀವ್ರ ಕುತೂಹಲ ಹುಟ್ಟಿಸುತ್ತದೆ.

ಹಾಗೆಂದು ಗಾಂಧಿಜಿಯು ಪತ್ರಿಕೋದ್ಯೋಗ ಅವರದೇ ಒಂದು ವಿಧವಾಗಿ ಬಿಟ್ಟಿದೆ. ಲೋಕಮಾನ್ಯ ತಿಲಕರು ಪ್ರಸಿದ್ಧ ಪತ್ರಿಕೋದ್ಯಮಿಗಳು ಕೇಸರಿ, ಮರಾಠಾ ಪತ್ರಿಕೆಗಳ ಸಂಪಾದಕರಾಗಿದ್ದರು. 'ಹಿಂದೂ' ಪತ್ರಿಕಾ ಸ್ಥಾಪಕರಾದ ಸುಬ್ರಹ್ಮಣ್ಯ ಅಯ್ಯರ್ ಪ್ರಸಿದ್ಧ ಪತ್ರಿಕೋದ್ಯಮಿಗಳು. ತಿಲಕರು ಮತ್ತು ಅಯ್ಯರರು ಹಲವು ವಿಷಯಗಳಲ್ಲಿ ಹೋಲುತ್ತಾರೆ; ಆದರೆ ಗಾಂಧಿಜಿ ಈ ಇಬ್ಬರಿಂದಲೂ ಭಿನ್ನರು; ಅವರಿಗಿಂತ ಕಡಿಮೆ ಪತ್ರಿಕೋದ್ಯಮಿಯೇನೂ ಅಲ್ಲ. ಆದರೆ ಅವರ ಮುಖ್ಯ ವ್ಯಾಪ್ತಿ ಪತ್ರಿಕೋದ್ಯಮವೇ ಆಗಿಲ್ಲ. ಹಾಗಾಗಿ ಅವರು ಪತ್ರಿಕೋದ್ಯಮಿಯಾಗಿ ಪ್ರಭಾವಶಾಲಿಯಾದರೂ ಅವರ ರೀತಿ ಅವರಂದೇ ಆಗಿದೆ.

ದೇಶದ ಮುಂದಾಳುವಾಗಿ, ತನ್ನ ಪಕ್ಷದ ಸಿದ್ಧಾಂತವನ್ನು ಜನತೆಗೆ ತಿಳಿಸಲು ಅವರು ಪತ್ರಿಕಾ ಲೇಖಕರಾಗಿದ್ದಾರೆಂದು ಹಲವರು ಹೇಳುವುದಿದೆ. ಆದರೆ ಪತ್ರಿಕಾ ಸಂಪಾದಕರಾಗದೇ ಭಾರತದಲ್ಲಿ ರಾಜಕೀಯ ಪ್ರಸಿದ್ಧಿ ಪಡೆದವರು ಹಲವರಿದ್ದಾರೆ. ಆದರೆ ಗಾಂಧಿಜಿಯ ವಿಚಾರಲಹರಿ ಒಂದು ವಿಶಿಷ್ಟವಾದುದು; ಯಾವುದನ್ನು ಅವರು ಯೋಚಿಸುತ್ತಾರೋ ಅದನ್ನು ಜನತೆಗೆ ಹೇಳದಿರಲು ಅವರಿಂದ ಸಾಧ್ಯವಾಗುವುದಿಲ್ಲ.

ಗಾಂಧಿಜಿ ತನ್ನ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಿಸುವುದಿಲ್ಲ. ಸಂಪಾದಕೀಯ ಲೇಖನ ಮಾತ್ರವಲ್ಲ; ತನ್ನ ಹೆಸರಿನಿಂದ ಅನೇಕ ಲೇಖನಗಳನ್ನು ಅವರು ಅವರ ಪತ್ರಿಕೆಯಲ್ಲಿ ಬರೆಯುತ್ತಾ ಇರುತ್ತಾರೆ. ಅವರು ರಾಷ್ಟ್ರದ ಪ್ರಪಂಚದ ಪ್ರತಿಯೊಂದು ವಿಷಯವನ್ನು ಉಲ್ಲೇಖಿಸಿ ತನ್ನ ಅಭಿಪ್ರಾಯವನ್ನು ಕೊಡುತ್ತಾರೆ; ರಾಷ್ಟ್ರವಾಗಲಿ ಜಗತ್ತಾಗಲಿ ತನ್ನ ವಿಚಾರ ಸಿದ್ಧಾಂತವನ್ನು ನಂಬುವುದೆಂಬ ಭರವಸೆ ಅವರಿಗಾದರೂ ಇರಲಾರದು, ಆದರೆ ಅಷ್ಟನ್ನು ಹೇಳದಿರಲು ಅವರಿಂದ ಸಾಧ್ಯವಿಲ್ಲ. ಜನರಿಗಾದರೂ ಅವರು ಬರೆದುದನ್ನು ಓದಲೇ ಬೇಕಾದ ಅತ್ಯಾಗ್ರಹ ದಿನಹೋದಂತೆ ಹೆಚ್ಚುತ್ತಾ ಇದೆ. ಗಾಂಧಿಜಿ ಬರೆದುದನ್ನು ಇಂದು ಪ್ರಪಂಚದ ಅಸಂಖ್ಯ ಭಾಷೆಗಳ ಮಿಲಿಯಾಂತರ ಮಂದಿ ಓದುತ್ತಾರೆ. ಅಸೋಸಿಯೇಟೆಡ್ ಪ್ರೆಸ್ ವಾರ್ತಾ ಪ್ರಸಾರಕ ಸಂಘವು ಅವರು ಹರಿಜನಕ್ಕೆ ಬರೆದ ಲೇಖನಗಳನ್ನು ಪ್ರಪಂಚದ ಮೂಲೆ ಮೂಲೆಗೆ ತಂತಿ ಮೂಲಕ ಕಳುಹಿಸುತ್ತದೆ, ಏಕೆಂದರೆ ಅವರ ಲೇಖನ ಅಖಿಲ ಪ್ರಪಂಚಕ್ಕೇ ಸಂಬಂಧಿಸಿದುದಾಗಿದೆ.

ಆದರೂ, ಸರಕಾರವು ಇಂತಹ ಮಹನೀಯರ ಪತ್ರಿಕೆಯನ್ನು ನಿಲ್ಲಿಸುವಂತೆ, ತನ್ನ ಶಾಸನಗಳ ಮೂಲಕ ಮಾಡಿತು. ಸರಕಾರದ ಮುಂದೆ ಪತ್ರಿಕಾ ಸ್ವಾತಂತ್ರ್ಯವಿಲ್ಲವೆಂಬುದು ಇದರಿಂದ ಪ್ರಪಂಚಕ್ಕೇ ಜಾಹೀರವಾಯಿತು. ಇದೇ ವಿಷಯವನ್ನೇ ಹರಿಜನ ನಿಲ್ಲಿಸುವಾಗ ಗಾಂಧಿಜಿಯು ಹೇಳಿದ್ದರು.

ಭಾರತದ ಪತ್ರಿಕೆಗಳಿಗೂ ಸ್ವಾತಂತ್ರ್ಯ ಬೇಕಾಗಿದೆ; ಅದಕ್ಕಾಗಿ ಹೋರಾಡಬೇಕಾಗಿದೆ; ಅಂತಹ ಸ್ವತಂತ್ರ ವಾತಾವರಣದಲ್ಲಿ ಗಾಂಧಿಜಿಯವರ ಪತ್ರಿಕೋದ್ಯಮದ ಪ್ರಭಾವವು ಜಗತ್ತಿಗೆ ತಿಳಿಯುವುದು. ಅಂತಹ ಕಾಲವು ಬೇಗನೇ ಬರಲೆಂದು ನಾವು ಹಾರೈಸಬೇಕಾಗಿದೆ. ಗಾಂಧಿಜಿ ತಿರಿಗಿ ಈಗ ನಿಲ್ಲಿಸಿದ ಹರಿಜನವನ್ನು ಪ್ರಕಟಿಸುತ್ತಾರೆಂಬ ಸಂತೋಷದ ಸುದ್ದಿಯೊಂದು ಯಾರನ್ನು ತಾನೇ ಆನಂದ ಸಾಗರದಲ್ಲಿ ಮುಳುಗಿಸಲಾರದು?

★ ಸಿನೇಮಾ ಪುಟ ★

ಹನ್ಸಾ ವಾಡ್ಕರ್

ಬೊಂಬೆ ಟಾಕೀಸಿನ ಹೆಸರುವಾಸಿ ನಟಿ ಹನ್ಸಾ ವಾಡ್ಕರಳು ಪ್ರಭಾತ ಕಂಪೆನಿಯನ್ನು ಸೇರಿರುವಳು. ಷತ್ತೆಲಾಲ ಮತ್ತು ದಾಮ್ಲೆಯರ ನಿರ್ದೇಶಕತ್ವದಲ್ಲಿ ತಯಾರಾಗುತ್ತಿರುವ "ಸಂತ ಸಖು" ಚಿತ್ರದಲ್ಲಿ ಈಕೆಯು ಪ್ರಧಾನ ಪಾತ್ರವನ್ನು ವಹಿಸುವಳು.

ನಾರಾಯಣ ಕಾಳೆ

ಹಿಂದೆ ಪ್ರಭಾತ ಕಂಪೆನಿಯಲ್ಲಿದ್ದ ಶ್ರೀ ನಾರಾಯಣ ಕಾಳೆಯವರು ಬೊಂಬಾಯಿಯ ಮೋಹನ ಪಿಕ್ಚರ್ಸನ್ನು ಸೇರಿರುವರು.

ನರಸಿ ಭಗತ್

ಪ್ರಕಾಶ ಕಂಪೆನಿಯವರ ಯಶಸ್ವಿ ವಾಕ್ಚಿತ್ರಗಳಲ್ಲೊಂದು. ದುರ್ಗಾ ಖೋಟೆ, ವಿಷ್ಣುಪಂತ ಪಗ್ನೀಸ್, ವಿಮಲಾ ಸರ್ ದೆಸಾಯಿ, ರಾಮಮರಾಠೆ ಮೊದಲಾದವರು ಅಭಿನಯಿಸಿರುವರು.

ನರಸಿಮ್ಹೆತಾ ಎಂಬವನು ಗುಜರಾಥದ ಸಾಧುಸಂತರಲ್ಲಿ ಹೆಸರಾದವನು. ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದನು. ಹಿಂದುಳಿದ ವರ್ಗದವರ ಏಳಿಗೆಗಾಗಿ ದುಡಿದವನು. ಇದರಿಂದ ಇವನು ಜನರ ಪ್ರೀತಿ ಆದರಗಳಿಗೆ ಪಾತ್ರನಾಗುವನು. ಇವನ ಈ ಉನ್ನತಿಯು ನಾರಂಗದರ ಮೆಂಟೆಹೋರ್ವನಿಗೆ ಸಹಿಸಲಾಯಿತು. ಉತ್ತಮ ವರ್ಗದ ಬ್ರಾಹ್ಮಣರೆಲ್ಲರೂ ಕೂಡಿ ನರಸಿ ಭಗತನಿಗೆ ಅನೇಕ ತರದ ಕಷ್ಟಗಳನ್ನೀಯುವರು. ಆದರೆ ನರಸಿಯು ಎಲ್ಲಾ ಕಷ್ಟಗಳಿಂದಲೂ ಪಾರಾಗುವನು ಎಂಬುದೇ ಕಥಾಸಾರಾಂಶ.

ವಿಷ್ಣುಪಂತ ಪಗ್ನೀಸ್, ರಾಮಮರಾಠೆಯರ ಹಾಡುಗಳು ಬಹಳ ಉತ್ತಮವಾಗಿದೆ. ದುರ್ಗಾಖೋಟೆಯ ಅಭಿನಯವೂ, ವಿಜಯಾಭಟ್ಟರ ದಿಗ್ದರ್ಶಕತ್ವವೂ ಯಶಸ್ವಿಯಾಗಿದೆ.

ಶಾಂತಾ ಹುಬ್ಳಿಕರ್

ಈಕೆಯು ತರುಣ ಪಿಕ್ಚರ್ಸ್ ಕಂಪೆನಿಯನ್ನು ಸೇರಿರುವಳು. ಜೈರಾಜನೊಂದಿಗೆ "ಪ್ರಭಾತ" ಎಂಬ ಚಿತ್ರದಲ್ಲಿ ಅಭಿನಯಿಸುವಳು.

ರಾಜನರ್ತಕಿ

ವಾಡಿಯಾ ಕಂಪೆನಿಯ ರಾಜನರ್ತಕಿ ಚಿತ್ರವು ಬೊಂಬಾಯಿಯಲ್ಲಿ ಪ್ರದರ್ಶಿತವಾಗುತ್ತಿದೆ. ಇದರಲ್ಲಿ ಸಾಧನಾಬೋಸ್, ಪೃಥ್ವಿರಾಜ, ಜಹೀನ್ ಚೌಧುರಿ ಮೊದಲಾದವರು ಅಭಿನಯಿಸಿರುವರು. ಈ ಚಿತ್ರವನ್ನು ನೋಡಲು ಜನಸಂದಣಿಯು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದರ ಈ ಯಶಸ್ಸಿನಿಂದ ಈ ಕಂಪೆನಿಯ ಪಾಲುಗಾರರಲ್ಲೊಬ್ಬರಾದ ಜಮ್ಸೆದ್ ವಾಡಿಯಾರವರು ಸಂತೋಷಪಟ್ಟು, ದಿಗ್ದರ್ಶಕರಾದ ಮಾಧು ಬೋಸರನ್ನೂ ನಟನಟಿಯರನ್ನೂ ಬಹಳ ಶ್ಲಾಘಿಸಿದರು. ರಾಜನರ್ತಕಿಗೆ ಬೊಂಬಾಯಿಯಲ್ಲಿ ಸಿಕ್ಕಿದ ಸ್ವಾಗತವನ್ನು ನೋಡಿದರೆ ಹಿಂದೀ ಚಿತ್ರಪಟದಲ್ಲಿಯೇ ಇದು ಅತ್ಯುತ್ತಮ ಚಿತ್ರವೆಂದು ಪರಿಗಣಿಸಲ್ಪಡಬಹುದೆಂದು ನಂಬಲಾಗಿದೆ.

ಪರ್ದೇಸಿ

ರಣಜಿತ ಚಿತ್ರ. ಮುಂಬಾಯಿಯ ಲಿಮಿಂಗ್ಟನ್ ಥಿಯೇಟರಿನಲ್ಲಿ ಪ್ರದರ್ಶಿತವಾಗುತ್ತಿದೆ. ದಿಗ್ದರ್ಶಕರು ಚತುರ್ಭುಜ ಜೋಷಿ, ಮೋತಿಲಾಲ್, ಖುರ್ಶಿದ್, ಸ್ನೇಹಪ್ರಭಾ, ಇ. ಬಿಲ್ಲಿಮೋರಿಯಾ ಮೊದಲಾದವರು ಅಭಿನಯಿಸಿರುವರು.

ಪಡೋಸಿ

ಬೊಂಬಾಯಿಯಲ್ಲಿ ಮೂರು ವಾರಗಳಿಂದ ಪ್ರದರ್ಶಿತವಾಗುತ್ತಿದೆ. ಶಾಂತಾರಾಮರ ಈ ಚಿತ್ರಕ್ಕೆ ಸಿಕ್ಕಿದಷ್ಟು ಪ್ರಚಂಡ ಸ್ವಾಗತವು ಬೇರಾವ ಚಿತ್ರಕ್ಕೂ ಸಿಕ್ಕಿರುವುದಿಲ್ಲ. ಅನಿಸ್, ಗಜ್ಜಾರ್ ಮತ್ತು ಜಗೀರದಾರ್ ಮುಖ್ಯ ನಟರು.

ಲೀಲಾ ದೇಸಾಯಿ

ಅನೇಕ ಸ್ಥಳಗಳಲ್ಲಿ ನೃತ್ಯ ಪ್ರದರ್ಶನಗಳನ್ನೀಯಲು ಸಂಚರಿಸುತ್ತಿರುವ ನ್ಯೂ ಥಿಯೇಟರ್ಸಿನ ಲೀಲಾ ದೇಸಾಯಿ ಮತ್ತು ಆಕೆಯ ಸಂಗಡದವರ ನೃತ್ಯಪ್ರದರ್ಶನವು ಇದೇ ತಿಂಗಳ ತಾ. ೨೨ಕ್ಕೆ ಹುಬ್ಬಳ್ಳಿಯ ಮಲ್ಲಿಕಾರ್ಜುನ ಥಿಯೇಟರಿನಲ್ಲಿಯೂ ತಾ. ೨೪ಕ್ಕೆ ಬೆಳಗಾವಿಯ ರಿಟ್ಜ ಟೋಕಿಸಿನಲ್ಲಿಯೂ ನಡೆಯುವುದು.

ಚಿತ್ರಲೇಖಾ

ಫಿಲ್ಮ್ ಕೊಪರೇಶನ್ನವರ ಚಿತ್ರಲೇಖಾ ಎಂಬ ಚಿತ್ರವು ಬೇಗನೇ ಹೊರಬೀಳಲಿದೆ. ಇದು ಮೌರ್ಯ ವಂಶದ ಚಂದ್ರಗುಪ್ತ ಚಕ್ರವರ್ತಿಯ ಆಳ್ವಿಕೆಯನ್ನು ಚಿತ್ರಿಸುವ ಚಿತ್ರವಾಗಿರುತ್ತದೆ. ವಸ್ತ್ರಅಲಂಕಾರಗಳಿಗೆ ಬಹಳ ಹಣವನ್ನು ವೆಚ್ಚಮಾಡಲಾಗಿದೆ. ಮೆಹ್ತಾಬ್, ನಂದ್ರೇಕರ್ ಮೊದಲಾದವರು ಅಭಿನಯಿಸಿರುವರು. ದಿಗ್ದರ್ಶಕರು ಕೇದಾರ ಶರ್ಮಾರು.

ನವಯುಗ ಚಿತ್ರಪಟ

ಇವರ "ಲಗ್ನ ನ ಪಾಪೆ" ಎಂಬ ಚಿತ್ರವು ಮುಂಬಾಯಿಯಲ್ಲಿ ಪ್ರದರ್ಶಿತವಾಗಿರುವುದು. ದಿಗ್ದರ್ಶಕ ವಿನಾಯಕರು ಬಾಬುರಾವ್ ಪೆಂಡಾರ್ಕರ್, ಮತ್ತು ಮಿನಾಕ್ಷಿಯರನ್ನು ಕೂಡಿಕೊಂಡು "ಅಮೃತ" ಎಂಬ ಚಿತ್ರವನು ತಯಾರಿಸುತ್ತಲಿರುವರು.

ಸಿಕೋರ್

ಗಳಗನೇ ವರ್ಷದಲ್ಲಿ ೬ ಚಿತ್ರಗಳನ್ನು ತಯಾರಿಸುವಂತೆ ಈ ಕಂಪೆನಿಯವರು ಕಾರ್ಯಕ್ರಮವನ್ನು ಮಾಡಿಕೊಂಡಿರುವರು. ಶ್ರೀಗಳಾದ ಬಲವಂತ ಭಟ್ಟರು ಮದುಸೂದನ, ಗುಂಜಾಳರು ತುಳ್ಸಿ ಮತ್ತು ಭಕ್ತವಿಧುರ (ಹಿಂದಿ, ಮರಾಠಿ) ಮೋಹನಸಿಂಹರು ವನಮಾಲಾ, ಕೋಸಲರು ಕ್ಲಿಯೋಪಾತ್ರ, ಎ. ಆರ್. ಕರ್ದಾರರು ಸ್ವಾಮಿ ಮತ್ತು ಅಕ್ಬರ್ ಚಕ್ರವರ್ತಿ, ದೇವಕಿ ಬೋಸರು ದಿ ಹೋಲ್ ಕೋಲ್ಸ್ (ಹಿಂದಿ ಮತ್ತು ಮರಾಠಿ) ಮತ್ತು ಇನ್ನೊಂದು ಚಿತ್ರವನ್ನು ಕ್ರಮವಾಗಿ ದಿಗ್ದರ್ಶಿಸುವರು.

ಸೆಂಟ್ರಲ್ ಟೋಕಿಸ್

ಮಂಗಳೂರು

ಇದರ ಕಟ್ಟಡದ ಕೆಲಸವು ಭರದಿಂದಸಾಗುತ್ತಿದೆ. ಆಧುನಿಕ ಸಲಕರಣೆಗಳಿಂದ ಈ ಥಿಯೇಟರನ್ನು ಮಂಗಳೂರಿನ ಆದರ್ಶ ಚಲಚ್ಚಿತ್ರ ಮಂದಿರವನ್ನಾಗಿ ಮಾಡಲು ಮಾಲಕರು ಸಾಹಸಪಡುತ್ತಿರುವರು.

ಮಗುವನ್ನು ಮಿಂದಿಸಿದ ನಂತರ ಇದೀಗ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಸವರಿರಿ, ಆಗ ಮಗುವಿಗೆ ರಾತ್ರಿ ಎಚ್ಚರವಾಗದು — ಆದರೆ ನಿದ್ರೆ ಕೂಡಾ, ತೊಂದರೆಯಾಗದೆ ನಿದ್ರಿಸುವುದು. ಕುಟಿಕೂರಾ ಟಾಲ್ಕಮಿನ ಗುಣವು ಎಲ್ಲ ವಿಶಿಷ್ಟ ಮತ್ತು ಕ್ರಿಮಿನಾಶಕವೆಂದರೆ, ತುರಿಸುವಿಕೆ ಯಾ ತುರಿಗಜ್ಜಿಗಳಿಂದ ಮಗುವಿನ ನಿದ್ರೆಯು ಹಾಳಾಗದು, ಇದು ಬೆವರನ್ನು ಹೀರಿಕೊಂಡು ಚರ್ಮಕ್ಕೆ ಆಹ್ಲಾದಕರವಾದ ಪರಿಮಳವನ್ನು ಕೊಡುವುದು. ಎಲ್ಲಾ ಕಡೆಗಳಲ್ಲಿಯೂ ಡಾಕ್ಟರುಗಳು ಮಕ್ಕಳಿಗೆ ಕುಟಿಕೂರಾ ಟಾಲ್ಕಮನ್ನು (Cuticura Talcum) ಶಿಫಾರಸು ಮಾಡುತ್ತಾರೆ, ತುರಿಗಜ್ಜಿ ಮತ್ತು ತುರಿಸುವಿಕೆಯನ್ನು ತಡೆಗಟ್ಟಲು ಇದಕ್ಕೆ ಸಮಾನವಾದುದಿಲ್ಲ.

ಮಕ್ಕಳ ಸ್ನಾನಕ್ಕೆ ಕುಟಿಕೂರಾ ಸಾಬೂನನ್ನು (Cuticura Soap) ಉಪಯೋಗಿಸಿ ಇದು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛವಾಗಿರಿಸುವುದು. ಕುಟಿಕೂರಾ ಮುಲಾಮು (Cuticura Ointment) ಗಾಯಗಳನ್ನೂ ವ್ರಣಗಳನ್ನೂ ಕೂಡಲೇ ಗುಣಪಡಿಸುವುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

ಮಕ್ಕಳಿಗೆ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ESTD. 1906.

♣ CANARA BANK LIMITED. ♣

ANNOUCEMENT.

On and after February, 1941 Fixed Deposits will be accepted at the — following rates —

3, 4 & 5 months	2½%.
6, 7 & 8 months	2¾%.
9, 10 & 11 months	2¾%.
12 months	3%.
24 months	3½%.

ಉತ್ತರ ಆಫ್ರಿಕದ ರಣಾಂಗಣದಲ್ಲಿ
ಹಿಂದೀ ಸೈನಿಕರ ಅದ್ಭುತ ಸಾಹಸ

ಉತ್ತರ ಆಫ್ರಿಕದಲ್ಲಿ ಮುಸಲೋನಿಯ ಸರ್ವಸೇನಾಧಿಪತಿಯಾದ ಮಾರ್ಶಲ್ ಗ್ರೇಜಿಯಾನಿಯನ್ನು ಮುಸಲೋನಿ ಇಟಲಿಗೆ ಕರೆಸಿಕೊಂಡಿರುವನೆಂದು ಸುದ್ದಿ ಉಂಟಾಗಿದೆ. ಮುಸಲೋನಿಯ ಆಶೆ ಭರವಸೆಗಳೆಲ್ಲ ಗ್ರೇಜಿಯಾನಿಯನ್ನು ಹೊಂದಿಕೊಂಡಿದ್ದುವು. ಬ್ರಿಟಿಷರು ಅವನ ಕೊನೆಯ ಠಾಣೆಯಾದ ಬೆಂಗ್ಹಾಜಿಯನ್ನೂ ಹಿಡಿದು, ಅವನ ತೇಜೋಭಂಗ ಮಾಡಿದ್ದಾರೆ. ಆದ್ದರಿಂದ ಇಟಲಿಯು ಹೋದಲ್ಲಿ ಸೋಲು ಎಂಬ ಮಾತು ನಿಜವಾದಂತಾಗಿದೆ. ಹಿಟ್ಲರನು ಮುಸಲೋನಿಯ ಕೈಬಿಟ್ಟ. ಜಪಾನ, ಸ್ಪೈನು ಅಥವಾ ಫ್ರಾನ್ಸನ್ನು ತನ್ನ ಪರವಾಗಿ ಯುದ್ಧರಂಗದಲ್ಲಿ ಹೋರಾಡಲಿಕ್ಕೆ ಕರೆಯಲೇ ಬೇಕಾದ ದಿನಗಳು ಬಂದಿವೆ.

ಬೆಂಗ್ಹಾಜಿಯ ಪತನದ ಪರಿಣಾಮ

ಇಟಲಿಯ ಅಧಿಕಾರದಲ್ಲಿದ್ದ ಲಿಬಿಯದಲ್ಲಿ ಬೆಂಗ್ಹಾಜಿಯು ಒಂದು ಉತ್ಕೃಷ್ಟ ಬಂದರು. ಅದು ಕೋಟೆಕೊತ್ತಳಗಳಿಂದ ಸುರಕ್ಷಿತವಾದ ಊರು. ಅಲ್ಲಿ ಜನವಸತಿ ೩೫೦೦೦ದಷ್ಟು ಇದೆ. ಹೀಗಿದ್ದರೂ ಸೈನಿಕ ದೃಷ್ಟಿಯಿಂದ ಅದು ಸಂದುಕಟ್ಟಿನ ಸ್ಥಾನದಲ್ಲಿದ್ದು ಮಹತ್ವವುಳ್ಳದ್ದಾಗಿದೆ. ಅಂಥ ಬೆಂಗ್ಹಾಜಿಯು ಪತನವಾದುದರಿಂದ ಇಟಲಿಗೆ ಅಪಾರವಾದ ನಷ್ಟವುಂಟಾಗಿದೆ. ಮತ್ತು ಅದರ ಬಲವು ಒಂದಕ್ಕೆ ಅರ್ಧದಷ್ಟು ಕುಂದಿತು ಎನ್ನಬಹುದು.

ಬೆಂಗ್ಹಾಜಿಯು ಬ್ರಿಟಿಷರ ಕೈಗೆ ಬಂದುದರಿಂದ ಅವರ ಯುದ್ಧಪ್ರಯತ್ನಗಳಿಗೆ ಬಹಳ ಸಹಾಯವಾಗುವದು. ಬ್ರಿಟಿಷರ ಭೂಮಧ್ಯ ಸಮುದ್ರದೊಳಗಿನ ಯುದ್ಧನಾವೆಗಳು ಬಂದು ಅಲ್ಲಿ ತಂಗಲಿಕ್ಕೂ ಶಸ್ತ್ರಾಸ್ತ್ರ ಯುದ್ಧೋಪಕರಣಗಳ ಉಗ್ರಾಣವನ್ನು ಸದಾ ಕಾಲ ಉಪಯೋಗಕ್ಕೆ ಬರುವಂತೆ ಸಿದ್ಧವಾಗಿಡಲಿಕ್ಕೂ ಬೆಂಗ್ಹಾಜಿಯು ಬ್ರಿಟಿಷರಿಗೆ ಅನುಕೂಲ ಮಾಡಿಕೊಡುವುದು. ಯಾವ ಸಮಯಕ್ಕೆ ಬೇಕಾದರೂ ಯುದ್ಧನಾವೆಗಳೂ, ಜಲಾಂತರ್ಗಾಮಿಗಳೂ ಕ್ರೂಯಿಜರುಗಳೂ ಬಂದು ತಂಗಲಿಕ್ಕೆ ಬೇಕಾದಷ್ಟು ಬೆಂಗ್ಹಾಜಿ ಸಮುದ್ರವು ಆಳವಾಗಿದೆ.

ಬ್ರಿಟಿಷ ಸೈನಿಕರ ಅದ್ಭುತ ಸಾಹಸ

ಬಂದರವನ್ನು ವಶಮಾಡಿಕೊಳ್ಳಲಿಕ್ಕೆ ಬ್ರಿಟಿಷ್ ಸೈನಿಕರು ಅದ್ಭುತ ಸಾಹಸವನ್ನು ತೋರಿಸಿದ್ದಾರೆ. ಈ ಪಟ್ಟಣವು ಬ್ರಿಟಿಷರ ಕೈವಶವಾದುದರಿಂದ ಲಿಬಿಯದ ಸಿರೆನೈಕಾ ಇಡೀ ಪ್ರದೇಶವು ಬ್ರಿಟಿಷರ ಅಂಕಿತಕ್ಕೆ ಒಳಪಟ್ಟಂತಾಯಿತು. ಜಗತ್ತಿನ ಇತಿಹಾಸದಲ್ಲಿ ಬ್ರಿಟಿಷ್ ಸೈನಿಕರು ಇಲ್ಲಿ ತೋರಿಸಿದಂಥ ಅಪ್ರತಿಮ ಸಾಹಸವನ್ನು ಬೇರೆ ಯಾವ ರಣಾಂಗಣದಲ್ಲಿಯೂ ತೋರಿಸಿರುವದಿಲ್ಲ. ಬೆಂಗ್ಹಾಜಿಯನ್ನು ಹಿಡಿಯಲಿಕ್ಕೆ ಬ್ರಿಟಿಷ್ ಸೈನಿಕರು ೧೫೦ ಮೈಲುಗಳಷ್ಟು ಉದ್ದ ಪ್ರದೇಶವನ್ನು ಒಂದು ವಾರದ ಅವಧಿಯಲ್ಲಿ ಅತಿಕ್ರಮಿಸಬೇಕಾಯಿತು. ಈ ಪ್ರಯತ್ನದಲ್ಲಿ ಜಲ ನೆಲ ಮತ್ತು ವಾಯುಸೇನೆಯವರು ಎಷ್ಟೊಂದು ಪೂರ್ವಾಲೋಚನೆ ಮತ್ತು ಸಿದ್ಧತೆಯನ್ನು ಮಾಡಿಕೊಂಡು ಇಟಾಲಿಯನರ ವಿರುದ್ಧ ಯುದ್ಧಗಳನ್ನು ಮಾಡಿ ಜಯಶೀಲರಾದರೆಂದರೆ, ಅವರ ಊಹನೆಯನ್ನು ಮಾಡುವದು ಕೂಡ ನಮಗೆ ಕಷ್ಟವಾಗುವದು. ಮೊದಮೊದಲು ಇಟಾಲಿಯನರು ಬ್ರಿಟಿಷ ಸೇನೆಗಳನ್ನು ಎಲ್ಲ ಕಡೆಗಳಿಂದ ಪ್ರತಿಭಟಿಸಿದ್ದರು. ಅವರ ಪ್ರತಿಭಟನೆಯನ್ನು ಮುರಿಯುವದು ಸಾಮಾನ್ಯ ಕೆಲಸವಾಗಿರಲಿಲ್ಲ. ಅದಕ್ಕೆ ಭಗೀರಥ ಪ್ರಯತ್ನವೇ ಬೇಕಾಗಿದ್ದಿತು. ಪರಂತು ಬ್ರಿಟಿಷರು ಇಟಾಲಿಯಾನರ ಪ್ರತಿಭಟನೆಯನ್ನು ಮುರಿದು ಮುಂದರಿದ ಬಳಿಕ ಪಲಾಯನ ಮಾಡುವದೇ ಉತ್ತಮವೆಂದು ಇಟಾಲಿಯಾನರಿಗೆ ತೋರಿತು.

ಇಟಾಲಿಯಾನರ ನಷ್ಟ

ಬೆಂಗ್ಹಾಜಿಯನ್ನು ಕಳಕೊಂಡುದರಿಂದ ಮುಸಲೋನಿಯು ಇನ್ನು ಸಮುದ್ರಮಾರ್ಗವಾಗಿ ಲಿಬಿಯಕ್ಕೆ ಸೇನೆಯನ್ನು ಕಳುಹಿಸಿ ಕೊಡಲಾಗದ ಹಾಗೆ ಆಗಿದೆ. ಅವನಿನ್ನು ಉತ್ತರ ಆಫ್ರಿಕಕ್ಕೆ ತನ್ನ ಸೇನಾಸಹಾಯವನ್ನು ಸಿರ್ಟೆಯ ದುರ್ಗಮವಾದ ನೆಲಮಾರ್ಗದಿಂದ ಕಳುಹಿಸಿಕೊಡಬೇಕಾದ ಮಹಾಕಷ್ಟಕ್ಕೆ ಗುರಿಯಾಗಿರುವನು.

ಐದು ದಿನಗಳ ಕಾಳಗ

ಈಗ ಬ್ರಿಟಿಷ ಸೇನಾಪಡೆಗಳು ಮುಂದೊತ್ತುತ್ತ ಬೆಂಗ್ಹಾಜಿಯಿಂದಲೂ ಮುಂದರಿದಿರುವವು. ಮುಂದರಿದ ಸೇನೆಗಳು ಬೆರೆಂಟು ಎಂಬ ಇನ್ನೊಂದು ಊರನ್ನು ಸ್ವಾಧೀನ ಮಾಡಿಕೊಂಡಿವೆ. ಈ ಸೇನಾಪಡೆಗಳಲ್ಲಿ ಪಂಜಾಬಿಗಳು, ಪುರವಾಲರು, ಬಲೂಚಿಗಳು ಮತ್ತು ಗಡಿನಾಡಿನ ಯುದ್ಧವೀರರು ಸೇರಿಕೊಂಡಿರುವರು. ಈ ಕಚ್ಚೆದೆಯ ಭಾರತೀಯ ದಂಡಾಳುಗಳು ಹೋರಾಟದಲ್ಲಿ ತೋರಿಸಿರುವ ಅಪ್ರತಿಮವಾದ ಧೈರ್ಯ ಸ್ಥೈರ್ಯ ಸಾಹಸ ಬಲಗಳನ್ನು ನೋಡಿ ಬ್ರಿಟಿಷ ಸೇನಾಪಡೆಗಳೆಲ್ಲಾ ಅತ್ಯಂತ ಉತ್ಸಾಹ ಆನಂದ ಸ್ಫೂರ್ತಿಗಳು ಹರಡಿರುವವು. ಬೆರೆಂಟುದ ರಕ್ಷಣೆಗಿದ್ದ ಇಟಾಲಿಯನ ಸೈನಿಕರೆಲ್ಲ ಪೂರ್ವಕ್ಕೆ ಓಡಿಹೋಗಿರುವರು.

ಭಾರತೀಯ ಸೈನಿಕರು ತೋರಿಸಿದ ಸಾಹಸವು ಭಾರತದ ಗೌರವವನ್ನು ಅತ್ಯುಚ್ಚ ಮಟ್ಟಕ್ಕೆ ಏರಿಸಿರುವದು ಮಾತ್ರವಲ್ಲದೆ, ಅವರ ಸೈನಿಕ ಶಕ್ತಿ ಯೋಗ್ಯತೆಗಳ ಕುರಿತು ಕೆಲವರು ಇಟ್ಟುಕೊಂಡಿದ್ದ ಸಂದೇಹವನ್ನು ಪೂರ್ಣನಷ್ಟಮಾಡಿದೆ. ಬೆರೆಂಟುವನ್ನು ಸ್ವಾಧೀನ ಮಾಡಿಕೊಳ್ಳಲಿಕ್ಕಾಗಿ ಈ ಭಾರತೀಯ ಸೈನಿಕರು ಎಕೆಥೀಟಾ-ಬೆರೆಂಟು ದಾರಿಯಲ್ಲಿ ಹತ್ತು ದಿನಗಳ ಕಾಳಗವನ್ನು ಮಾಡಬೇಕಾಯಿತು; ಅಷ್ಟು ತಾನೇ ಅಲ್ಲ; ಇಕ್ಕಟ್ಟಾದ ಮತ್ತು ದುರ್ಗಮವಾದ ಕಣಿವೆಯಲ್ಲಿ ಆಹಾರ, ನಿದ್ರೆ, ಆರಾಮವಿರಾಮಗಳಿಲ್ಲದೆ ಅವರು ಐದು ದಿನಗಳ ತನಕ ಪ್ರಬಲ ಹೋರಾಟವನ್ನು ನಡೆಸಿ ಉಚ್ಚಸ್ಥಾನದಲ್ಲಿದ್ದ ಇಟಾಲಿಯಾನರನ್ನು ಹಿಮ್ಮೆಟ್ಟಿಸಬೇಕಾಯಿತು. ಭಾರತೀಯ ಸೈನಿಕರ ಬಲವಾದ ಆಘಾತಗಳನ್ನು ಸಹಿಸಲಿಕ್ಕಾಗದೆ ಇಟಾಲಿಯಾನರು ಗುಡ್ಡಕಾಡುಗಳ ಶರಣು ಪಡೆಯಬೇಕಾಯಿತು. ಬೆರೆಂಟು ಪ್ರದೇಶವು ನಮ್ಮ ದೇಶದ ಪೇಶಾವರ ಪ್ರಾಂತವನ್ನು ಚೆನ್ನಾಗಿ ಹೋಲುತ್ತದೆ. ಇಲ್ಲಿಯ ಅನುಭವವು ಭಾರತೀಯ ಸೈನಿಕರಿಗೆ ಚೆನ್ನಾಗಿ ಇದ್ದುದರಿಂದ ಅವರು ಇಟಾಲಿಯಾನರನ್ನು ಗುಡ್ಡಕಾಡುಗಳಿಗೂ ಬೆನ್ನಟ್ಟಿ ಹೋಗಿ ಪ್ರಾಣಕೊಡುವಂತೆ ಅಥವಾ ಕೈಸೆರೆಗೆ ಒಪ್ಪುವಂತೆ ಬಲಾತ್ಕರಿಸಿದರು. ಒಂದೇ ಒಂದು ಭಾರತೀಯ ಸೇನಾಪಡೆಯು ಇಟಾಲಿಯಾನರ ಹಲವು ಪಡೆಗಳನ್ನು ಚೂರುಮಾಡಿ ಭಾರತಕ್ಕೆ ಅಮರ ಗೌರವವನ್ನು ತಂದುಕೊಟ್ಟಿದೆ.

ಶ್ವಾಸಕೋಶಗಳ ಬಾಧೆಯಿಂದ ದೂರವಾಗಿರಿ

ಶ್ವಾಸಕೋಶಗಳನ್ನು ನಿತ್ರಾಣಗೊಳಿಸುವ ಶೀತ, ಬಹುಕಾಲದ ಕೆಮ್ಮು, ಗಂಟಲು ಬೇನೆಯಿಂದ ನರಳುವಿರಾದರೆ ವಿಷಹಾರಿ ಶ್ವಾಸನೀಯ ಪೆಪ್ಸ ಮಾತ್ರೆಗಳನ್ನು ಸೇವಿಸಿರಿ. ಈ ಮುಂಜಾಗ್ರತೆಯೇ ನಿಮ್ಮನ್ನು ಶ್ವಾಸಕೋಶದ ಬಾಧೆಯಿಂದ ರಕ್ಷಿಸಿ ನ್ಯುಮೋನಿಯವು ಬಾರದಂತೆ ಮಾಡುವುದು.

ಪೆಪ್ಸ ಬಾಯೊಳಗೆ ಕರಗುತ್ತಿರುವಾಗ, ಅದರಿಂದ ಹೊರಟ ಔಷಧೀಯ ಎಸೆನ್ಸು ಶ್ವಾಸಕೋಶಗಳನ್ನು ಸೇರುವುದು. ಈ ಪ್ರಕಾರವಾಗಿ ಪೆಪ್ಸ ಉಸಿರಾಟದ ನಾಳಗಳನ್ನೂ ಗಂಟಲನ್ನೂ ಗುಣಪಡಿಸಿ, ಬ್ಯಾತುಗೊಂಡ ಚರ್ಮದ ಪರೆಯನ್ನು ಗುಣಪಡಿಸುವುದು. ಪೆಪ್ಸ ಶೀತ ಮತ್ತು ಕಫದ ಕ್ರಿಮಿಗಳನ್ನು ನಾಶಗೊಳಿಸಿ ಶ್ವಾಸಕೋಶವನ್ನು ಆರೋಗ್ಯದಲ್ಲಿರಿಸಿ ಎಂತಹ ಶೀತವನ್ನಾಗಲೀ ಕೆಮ್ಮನ್ನಾಗಲೀ ನಿಲ್ಲಿಸುವುದು.

ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂ. 1ರಂತೆ ಮಾರುತ್ತಾರೆ.

ಏಜಂಟ್ಸ್:
ಮೆಸರ್ಸ್ ದಾಧಾ ಎಂಡ್ ಕೋ.,
ಪಿ. ಟಿ. ಮದ್ರಾಸು.



ಪೆಪ್ಸನ್ನುಪಯೋಗಿಸಿರಿ.

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಡೋಂಗರೆ
ಬಾಲಾಮೃತವು

ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ವಿಜ್ಞಾನಯುಗ

ಪಾರಿವಾಳಗಳಿಗೆ ಕಪಟ ರೂಪ

ಯುದ್ಧ ಸಮಯದಲ್ಲಿ ಗುಪ್ತವಾರ್ತೆಗಳನ್ನು ಕಳುಹಿಸುವುದಕ್ಕೋಸ್ಕರ ಸೇನೆಯವರು ಪಾರಿವಾಳಗಳನ್ನು ಉಪಯೋಗಿಸುತ್ತಿದ್ದರೆಂಬ ಸಂಗತಿ ಎಲ್ಲರಿಗೆ ತಿಳಿದಿರುವುದೇ ಆಗಿದೆ. ವೈಜ್ಞಾನಿಕ ಪ್ರಪಂಚದಲ್ಲಿ ಬಹಳ್ಳ ಉನ್ನತಿಯಾಗಿ, ಈಗಿನ ಯುದ್ಧಕ್ರಮವು, ಹಿಂದಿನ ಯುದ್ಧಕ್ರಮಗಳಿಂದ ಸಂಪೂರ್ಣ ಭಿನ್ನವಾಗಿರುವುದಾದರೂ, ಪಾರಿವಾಳಗಳ ಕಾಲುಗಳಿಗೆ ಸಂದೇಶಗಳನ್ನು ಬರೆದು ಕಳುಹಿಸುವ ಈ ಒಂದು ವಿಷಯದಲ್ಲಿ ಮಾತ್ರ ನಿನ್ನೆ ಮೊನ್ನೆಯ ತನಕ ವಿಶೇಷ ಪರಿವರ್ತನೆಗಳಾಗಿರಲಿಲ್ಲ. ಆದುದರಿಂದ ಆಕಾಶದಲ್ಲಿ ಹಾರುತ್ತಿರುವ ಈ ಪಾರಿವಾಳಗಳನ್ನು ಗುರುತಿಸಿ ಹಿಡಿದು, ಸಂದೇಶಗಳು ವಿಳಾಸದಾರರಿಗೆ ಮುಟ್ಟದ ಹಾಗೆ ಮಾಡುವುದು ಶತ್ರುಪಕ್ಷದವರಿಗೆ ಸುಲಭವಾಗಿದ್ದಿತು. ಈಗ ಮಾತ್ರ ಹೀಗೂ ಶತ್ರುಗಳು ಕೆಲಸ ಮಾಡಿ ಪ್ರಯೋಜನ ಪಡೆಯದ ಹಾಗೆ ವಿಜ್ಞಾನಿಗಳು ಉಪಾಯ ಮಾಡಿದ್ದಾರೆ ಈ ಪಾರಿವಾಳಗಳಿಗೆ ಬಣ್ಣದ ರೆಕ್ಕೆಗಳನ್ನು ಕಟ್ಟಿ ಹಾರಬಿಡುವರು ಆಗ ಆಕಾಶದಲ್ಲಿ ಹಾರಿಹೋಗುತ್ತಿರುವ ಇವುಗಳನ್ನು ಗುರುತಿಸಲಿಕ್ಕೆ ಯಾರಿಂದಲೂ ಆಗುವುದಿಲ್ಲ

ಕುಷ್ಠರೋಗಕ್ಕೆ ಹೊಸ ಚಿಕಿತ್ಸೆ

ಕುಷ್ಠರೋಗಿಗಳ ಸಂಪರ್ಕದಲ್ಲಿ ಬರುವುದರಿಂದ ಈ ರೋಗವು ಒಬ್ಬರಿಂದೊಬ್ಬರಿಗೆ ಹರಡುತ್ತದೆಂದು ಈ ವರೆಗೆ ಜನರು ಗ್ರಹಿಸಿದ್ದರು ಆದರೆ ಆಹಾರದೋಷವೂ ಈ ರೋಗದ ಹರಡುವಿಕೆಗೆ ಕಾರಣವಾಗಿರುವುದೆಂದು ಈಗ ಕಂಡುಹಿಡಿಯಲಾಗಿದೆ. ಅಕ್ಕಿಯ ಊಟದಲ್ಲಿ ಹಿಟ್ಟು ಪದಾರ್ಥಗಳೇ ಹೆಚ್ಚಾಗಿ ಶರೀರವನ್ನು ಸೇರಿಕೊಳ್ಳುವುದರಿಂದ, ಈ ರೋಗನಿವಾರಕ ಶಕ್ತಿಯು ಜನರಲ್ಲಿ ಕಡಿಮೆಯಾಗುತ್ತದೆ. ಆದುದರಿಂದ ಕೆಲವು ತಜ್ಞರು ಕುಷ್ಠರೋಗಿಗಳಿಗೆ ಗೋದಿಯ ಆಹಾರವನ್ನು ಕೊಟ್ಟು ಪರೀಕ್ಷಿಸಿದರು. ಅದರಿಂದ ಉತ್ಕೃಷ್ಟ ಫಲವು ಕಂಡುಬಂದಿತು ಮತ್ತು ರೋಗದ ನಿಮಿತ್ತ ಗಂಟುಗಳ ನೋವೂ ಕಡಿಮೆಯಾದುದು ಗೊತ್ತಾಯಿತು ಆದುದರಿಂದ ಈ ರೋಗ ನಿವಾರಣೆಯಲ್ಲಿ ತೊಡಗಿರುವವರೆಲ್ಲರೂ ರೋಗಿಗಳಿಗೆ ಪರೀಕ್ಷಾರ್ಥವಾಗಿ ಗೋದಿಯ ಆಹಾರವನ್ನು ಕೊಟ್ಟು ಪರೀಕ್ಷಿಸಬೇಕೆಂದು ತಜ್ಞರು ಹೇಳಿದ್ದಾರೆ

ಕಲ್ಪವೃಕ್ಷದಂತಿರುವ ವಿಚಿತ್ರ ಕೊಡೆ

ಅಮೇರಿಕದ ಕೆಲವು ವಿಜ್ಞಾನಿಗಳು ಒಂದು ವಿಚಿತ್ರ ಪ್ರಕಾರದ ಕೊಡೆಯನ್ನು ತಯಾರಿಸಿದ್ದಾರೆ. ಇದು ಬಿಸಿಲು ಮಳೆಗಳಿಂದ ಮನುಷ್ಯನನ್ನು ಕಾಪಾಡುವುದು ಮಾತ್ರವಲ್ಲದೆ, ಇತರ ಅನೇಕ ಕೆಲಸಗಳಿಗೂ ಬರುವಂತಿದ್ದು ಕಲ್ಪವೃಕ್ಷದಂತೆ ಅತ್ಯುಪಯುಕ್ತವೆಂದು ಖಚಿತವಾಗಿದೆ ಈ ಕೊಡೆಯ ಕೋಲಿನಲ್ಲಿ ಸಿಗರೇಟು ಪೆಟ್ಟಿಗೆ, ವಿದ್ಯುದ್ದೀಪ, ಬಲ್ಬು, ಬೆಟರಿ, ಕನ್ನಡಿ, ನೀರಿನ ತಟ್ಟೆ ಮತ್ತು ನಿತ್ಯೋಪಯೋಗದ ಇನ್ನೂ ಹಲವು ಸಾಮಗ್ರಿಗಳನ್ನು ಇಡಲಿಕ್ಕೆ ಬೇರೆ ಬೇರೆ ಅರೆಗಳು ಇರುತ್ತವೆ ಕೊಡೆಯ ಕೋಲನ್ನು ಊರುಗೋಲಾಗಿಯೂ ಉಪಯೋಗಿಸಬಹುದಾಗಿದೆ ಮಾತ್ರವಲ್ಲದೆ, ಅದನ್ನು ಫೊಟೋ ಕೆಮರವನ್ನು ಇಡುವ ಮುಕ್ಕಾಲಿಕೆಯಾಗಿಯೂ ಮಾಡಬಹುದು. ಮತ್ತು ಅದನ್ನು ವಿಸ್ತಾರ ಗಾಳದಂತೆಯೂ ಉಪಯೋಗಿಸಬಹುದು. ಹೀಗೆ ಒಂದೇ ಕೊಡೆಯಿಂದ ಹತ್ತು ಹಲವು ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಲು ಆಗುತ್ತದೆ ಎಂದು ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಉಕ್ಕಿನ ಬದಲು ಗಾಜು

ಯುದ್ಧಕಾಲವಾದುದರಿಂದ ಉಕ್ಕಿಗೆ ಬಹಳ ಕ್ರಯ ಏರಿದೆ ಆದುದರಿಂದ ಕಟ್ಟಡ ಮೊದಲಾದ ಕಾರ್ಯಗಳಿಗೆ ಕಾಂಕ್ರೀಟಿನೊಂದಿಗೆ ಉಕ್ಕನ್ನು ಉಪಯೋಗಿಸುವುದು ಕಠಿಣವಾಗಿ ಕಂಡುಬಂದಿದೆ. ವಿಜ್ಞಾನಿಗಳು ಅನೇಕ ಪರಿಶೋಧನೆಗಳನ್ನು ನಡೆಸಿ ಉಕ್ಕಿನ ಬದಲಿಗೆ ಗಾಜನ್ನೂ ಕಾಂಕ್ರೀಟಿನೊಂದಿಗೆ ಉಪಯೋಗಿಸಲಿಕ್ಕಾಗುತ್ತದೆಂದು ಹೇಳಿದ್ದಾರೆ. ಗಾಜಿನ ಈ ಒಂದು ಉಪಯೋಗವು ತಿಳಿದುದರಿಂದ ಚೂರು ಚೂರಾಗಿ ಬಿಸಾಡಲ್ಪಡುವ ಗಾಜು ಈಗ ಉಪಯೋಗಕ್ಕೆ ಬೀಳುವಂತಾಯಿತು ಮಾತ್ರವಲ್ಲ, ಗಾಜಿನ ಕಾಂಕ್ರೀಟು, ಉಕ್ಕಿನ ಕಾಂಕ್ರೀಟಿನಿಂದ ಹೆಚ್ಚು ಉತ್ಕೃಷ್ಟವೂ ಕಡಿಮೆ ಖರ್ಚಿನದ್ದೂ ಎಂದು ಹಲವು ಪರಿಶೋಧನೆಗಳನ್ನು ಮಾಡಿ ಪರೀಕ್ಷಕರು ಹೇಳಿದ್ದಾರೆ ವಿಲಾಯತಿಯಲ್ಲಿ ಎಲ್ಲಾ ಜಾತಿಯ ಕಟ್ಟಡ ಕಾರ್ಯಗಳಿಗೆ ಈಗ ಉಕ್ಕಿನ ಬದಲಿಗೆ ಗಾಜಿನ ಕಾಂಕ್ರೀಟನ್ನೇ ಉಪಯೋಗಿಸಲಾರಂಭಿಸಿರುವರು

ಚಿತ್ರತೆಗೆಯಲು ಹೊಸ ಹಂಚಿಕೆ

ಶತ್ರುಪಕ್ಷವನ್ನು ಸೋಲಿಸಬೇಕಾದರೆ ಯುದ್ಧಾಸಕ್ತ ಮಿತ್ರಮಂಡಲಿಯು ಹಲವು ಉಪಾಯಗಳನ್ನು ಅನುಸರಿಸಬೇಕು, ಹಲವು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಶತ್ರುಗಳ ವ್ಯೂಹರಚನೆಗಳನ್ನು ತಿಳಕೊಳ್ಳುವುದೂ ಆ ಉಪಾಯ ಸಿದ್ಧತೆಗಳಲ್ಲಿ ಒಂದು ಕ್ರಮವಾಗಿದೆ. ಇದಕ್ಕಾಗಿ ಅಮೇರಿಕದ ವಿಜ್ಞಾನಿಗಳು ಒಂದು ಬಾಂಬನ್ನು ತಯಾರಿಸಿದ್ದಾರೆ. ರಾತ್ರಿ ಕಾಲದಲ್ಲಿ ಇದನ್ನು ವಿಮಾನದಿಂದ ಕೆಳಕ್ಕೆ ಹಾಕಿಸಿದಾಗ, ಅದು ಸಿಡಿದು ಐದು ಮೈಲು ವಿಸ್ತೀರ್ಣದೊಳಗಿನ ಎಲ್ಲ ಪ್ರದೇಶಗಳು ಹಗಲಿನಂತೆ ಪ್ರಕಾಶಮಾನವಾಗುವವು ಕೂಡಲೇ ವಿಮಾನದೊಳಗಿದ್ದ ಚಿತ್ರಗಾರರು ಕೂಡಲೇ ಕೆಮರಗಳ ಮೂಲಕ ಆ ಪ್ರದೇಶಗಳ ಚಿತ್ರ ತೆಗೆಯುವರು ಎಲ್ಲ ವ್ಯೂಹರಚನೆಗಳನ್ನು ಸುಲಭವಾಗಿ ತಿಳಿಯಲಿಕ್ಕಾಗುವಷ್ಟು ಈ ಚಿತ್ರಗಳು ಅತ್ಯಂತ ಸ್ಪಷ್ಟವಾಗಿ ಇರುತ್ತವೆ

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ

BHUVANENDRA PRODUCTS LTD.,
KATAPADI, S. K.

Why Doctors prescribe

"BHUVANENDRA"
NARAYANA TAILA

Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರನಾರಾಯಣತೈಲ'

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ.
ಎಲ್ಲಾ ಬಗೆಯ ವಾತಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ಟೋಕಿಸ್ಟರು.—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ರಥಬೀದಿ.
ಡಾ। ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಅಮೇರಿಕದಲ್ಲಿ ಅತ್ಯಧಿಕ ಉಕ್ಕಿನ ತಯಾರಿಕೆ

ಹಿಂದೆಂದೂ ಮಾಡದಷ್ಟು ಉಕ್ಕಿನ ತಯಾರಿಕೆಯನ್ನು ಅಮೇರಿಕದಲ್ಲಿ ಮಾಡಲಾಗುತ್ತಿದೆ. ೧೯೪೦ರಲ್ಲಿ ೬೬,೫೦೦,೦೦೦ ಟನ್‌ಗಳಷ್ಟು ಉಕ್ಕನ್ನು ತಯಾರಿಸಿತು. ಇದು ೧೯೩೯ನೆಯ ವರ್ಷಕ್ಕಿಂತ ಶೇಕಡ ೭೦ರಷ್ಟು ಅಧಿಕವಾಗಿದೆ. ೧೯೨೯ರಲ್ಲಿ ಅತ್ಯಧಿಕವಾಗಿ ತಯಾರಿಸಿದ್ದರೆಂದರೆ ೧೯೪೦ರ ತಯಾರಿಕೆಯು ಆ ವರ್ಷಕ್ಕಿಂತ ಶೇಕಡ ೬೦ರಷ್ಟು ಅಧಿಕವಾಗಿದೆ.

ಅಮೇರಿಕದ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯ ಸಂಸ್ಥೆಯ ಅಧ್ಯಕ್ಷರಾಧ ಶ್ರೀ ಡಬ್ಲ್ಯು. ಎಸ್. ಟವರ್‌ರವರ ಹೇಳಿಕೆಯ ಪ್ರಕಾರ, ಅಮೇರಿಕವು ಇನ್ನು ಮುಂದೆ ಪ್ರತಿವರ್ಷವೂ ೮೫೦ ಲಕ್ಷ ಟನ್‌ಗಳಷ್ಟು ಉಕ್ಕನ್ನು ತಯಾರಿಸಲ್ಲುದಾಗಿದೆ.

ಈ ಕೈಗಾರಿಕೆಯನ್ನು ಇಷ್ಟು ಪರಿಷ್ಕರಗೊಳಿಸಲು ೧೫೦ ಲಕ್ಷ ಡಾಲರುಗಳನ್ನು ವೆಚ್ಚಮಾಡಿದೆ.

ಮಿಷನರಿಗಳ ಶಿಕ್ಷಣಸೇವೆ

ತ್ರಿಚನಾಪಳ್ಳಿಯ ಸ್ಯೆಂಟ್ ಜೋಸೆಫ್ ಕಾಲೇಜಿನ ಇಂಗ್ಲಿಷ್ ಭಾಷಾಧ್ಯಾಪಕರಾದ ರಿವರೆಂಡ್ ಟಿ. ಎನ್. ಸಕ್ವೇರಾರವರು ಭಾರತದಲ್ಲಿ ಶಿಕ್ಷಣಪ್ರಚಾರಕ್ಕೆ ಮಿಷನರಿಗಳು ಮಾಡಿರುವ ಅಪಾರ ಪ್ರಯತ್ನವನ್ನು ಕುರಿತು ಹೇಳುತ್ತಾರೆ:

ಭಾರತದಲ್ಲಿ ಮುಂಬೈ, ಅಹ್ಮದಾಬಾದ್, ಪೂನ, ಬೆಳಗಾಂ, ಗೋವ, ಕಲಿಕತ್ತ, ಡಾರ್ಜಿಲಿಂಗ್, ರಾಂಚಿ, ಮದರಾಸು, ಟ್ರಿಚಿ, ಮಂಗಳೂರು, ಬೆಂಗಳೂರು, ಕಲ್ಲಿಕೋಟೆ, ಅಲ್ಲೆಪ್ಪೆ, ಪಾಲಂಕೋಟೆ, ದಿಂಡಿಗಲ್, ತುತ್ತುಕುಡಿ ಸಿಲೋನಿನಲ್ಲಿ ಗಾಲೆ ಮತ್ತು ಬಟ್ಟಿಕಲೋವ ಈ ಸ್ಥಳಗಳಲ್ಲಿ ಜೆಸೂಟ್ ಕಾಲೇಜುಗಳೂ ಪಾಠಶಾಲೆಗಳೂ ಇವೆ.

ಮಿಕ್ಕ ದೇಶಗಳ ಅಂಕೆ ಅಂಶಗಳನ್ನು ತೆಗೆದುಕೊಂಡರೆ, ೧೯೪೦ನೆಯ ವರ್ಷಾಂತ್ಯದ ವರೆಗೆ ೨೬,೩೯೯ ಜೆಸೂಟ್ ಜನರು ೫೦ ದೇಶಗಳಲ್ಲಿದ್ದುಕೊಂಡು ೪೨೧ ಸೆಕೆಂಡರಿ ಶಾಲೆಗಳನ್ನೂ ಕಾಲೇಜುಗಳನ್ನೂ ೧೫ ವಿಶ್ವವಿದ್ಯಾನಿಲಯಗಳನ್ನೂ ನಡೆಸುತ್ತಿದ್ದರು. ಒಟ್ಟು ೧೫೭೦೦೦ ವಿದ್ಯಾರ್ಥಿಗಳು ಜೆಸೂಟ್ ಶಿಕ್ಷಣಸಂಸ್ಥೆಗಳಲ್ಲಿ ಓದುತ್ತಿದ್ದರು.

ಸುಮಾರು ೪೦೦೦ ಮಂದಿ ಜೆಸೂಟ್ ಮಿಷನರಿಗಳು ೧೦೦೦ ಪತ್ರಿಕೆಗಳನ್ನು ನಡೆಸುತ್ತಿದ್ದರು.

ಬಾಲಕಿಯರಿಗೆ ವ್ಯಾಯಾಮ - ಶಿಕ್ಷಣ

ಬರೋಡ ಆರ್ಯಕನ್ಯಾ ವಿದ್ಯಾಲಯದ ಬಾಲಕಿಯರು ನಡೆಸಿದ ವ್ಯಾಯಾಮ ಪ್ರದರ್ಶನವನ್ನು ಮೆಚ್ಚಿ ಭಾಷಣ ಮಾಡುತ್ತ ಮದರಾಸಿನ ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್‌ರವರು,

"ಬರೋಡದ ಆರ್ಯಕನ್ಯಾ ವಿದ್ಯಾಲಯದವರಿಗೆ ಕೊಟ್ಟಿರುವ ಶಿಕ್ಷಣವನ್ನು ನಮ್ಮ ಸ್ತ್ರೀ ಜನರಿಗೆಲ್ಲ ಕೊಟ್ಟರೆ, ಅವರನ್ನು ಕೆಣಿಸಲು ಬರುವ ಪುರುಷರಿಗೆ ಎಂಟೆದೆಯಿರಬೇಕಾಗುತ್ತದೆ. ಈ ಯಾವ ಶಿಕ್ಷಣವೂ ಇಲ್ಲದ ಕಾರಣವೇ ಅವರಷ್ಟು ಕೀಳಾಗಿದ್ದಾರೆ. ನಮ್ಮ ಬಾಲಕಿಯರಿಗೆಲ್ಲ ಈ ಶಿಕ್ಷಣ ಕೊಡುವುದಕ್ಕೆ ಅಷ್ಟೇನೂ ಹೆಚ್ಚು ವೆಚ್ಚವೂ ಆಗುವುದಿಲ್ಲ. ಹಲವಾರು ಸುಲಭದ ಆಟಪಾಟಗಳನ್ನು ಏರ್ಪಡಿಸುವುದರಿಂದ ಎಷ್ಟೋ ಅನುಕೂಲವುಂಟು. ನಮ್ಮ ನಾಡಿನ ಮತ್ತು ನಮ್ಮ ಸ್ವಭಾವದ ಅನುರೂಪವಾದ ಆಟಪಾಟಗಳೆಷ್ಟೋ ಇವೆ. ಅವನ್ನು ನಮ್ಮ ಪಾಠಶಾಲೆಗಳಲ್ಲಿ ಆಚರಣೆಗೆ ತರುವುದರಿಂದ ನಾಡಿನ ಮತ್ತು ಜನಾಂಗದ ಪುರೋಭಿವೃದ್ಧಿಗೆ ಮಹೋಪಕಾರ ಮಾಡಿದಂತೆ ಆಗುತ್ತದೆ. ಜೀರ್ಣವಾಗುತ್ತಿರುವ ನಮ್ಮ ನಾಗರಿಕತೆಯು ಪುನರುಜ್ಜೀವನಗೊಳ್ಳುತ್ತದೆ" ಎಂದರು.

ಆರ್ಯ ಕನ್ಯಾ ವಿದ್ಯಾಲಯದ ಬಾಲಕಿಯರ ವ್ಯಾಯಾಮ ಪ್ರದರ್ಶನದಿಂದ ನಮ್ಮ ಪುರಾಣಗಳ ಕಾಲದಲ್ಲಿ ಕೈಕೆಯಿ, ಸುಭದ್ರ ಮುಂತಾದ ಸ್ತ್ರೀಯರು ಎಷ್ಟು ಪರಾಕ್ರಮಿಗಳಾಗಿದ್ದರೋ ಅದರ ಕಲ್ಪನೆಯು ನಮಗುಂಟಾಗುತ್ತದೆಂದು ಸರ್. ಸಿ. ಎಸ್. ಶಿವಸ್ವಾಮಿ ಅಯ್ಯರ್‌ರವರು ಹೇಳಿದರು.

ಫ್ರಾನ್ಸಿನ ಹಣಕಾಸಿನ ಪಿಕಲಾಟ

ಫ್ರೆಂಚ್ ಸರಕಾರದ ಹಣಕಾಸಿನ ಪೀಕಲಾಟವು ಬಹಳ ದುಸ್ಸಹವಾಗುತ್ತಿದೆ. ಅಲ್ಲಿರುವ ಜರ್ಮನ್ ಸೈನ್ಯಕ್ಕೆ ಹೊಟ್ಟೆಗೆ ಹಾಕಿ ಅದನ್ನು ಕಾಪಾಡಲು ದಿನಕ್ಕೆ ೩೦ ಲಕ್ಷ ಪೌಂಡುಗಳ ವೆಚ್ಚವಾಗುತ್ತಿದೆ. ಫ್ರೆಂಚ್ ಸರಕಾರದ ವೆಚ್ಚವೂ ಅಷ್ಟೇ ಆಗುತ್ತಿದೆ. ಜತೆಗೆ ಹೊರದೇಶಗಳ ವ್ಯಾಪಾರ ಸಾಪಾರಗಳೆಲ್ಲ ಹಾಳಾಗಿ ಹೋಗಿವೆ. ದೇಶದಲ್ಲಿದ್ದ ಕೈಗಾರಿಕೆಗಳಲ್ಲಿ ಅರ್ಧಭಾಗ ಜರ್ಮನಿಯ ಕೈಗೆ ಹೋಗಿವೆ. ಅಲ್ಲಿ ಸಿಕ್ಕುವ ಆಹಾರವೂ ಅರ್ಧದಷ್ಟು ಜರ್ಮನರ ಪಾಲಾಗುತ್ತಿದೆ.

ಹೀಗೆ ಯುದ್ಧದಲ್ಲಿ ಸೋತು, ಆಕ್ರಾಂತವಾದ ಫ್ರಾನ್ಸು ದಿನವಹೀ ೫೦ ಲಕ್ಷ ಪೌಂಡುಗಳನ್ನು ಅಂದರೆ ವರ್ಷಕ್ಕೆ ೧೮೦೦ ಕೋಟಿ ಪೌಂಡುಗಳಷ್ಟು ಹಣವನ್ನು ಹವಣಿಸಬೇಕಾಗಿ ಬಂದು, ದೊಡ್ಡ ಹಣಕಾಸಿನ ಪೀಕಲಾಟವೇ ಅದಕ್ಕೆ ಪ್ರಾಪ್ತವಾಗಿದೆ. ಅವರ ನಾಣ್ಯಕ್ಕೆ ಇದ್ದ ಅಷ್ಟಿಷ್ಟು ಭದ್ರತೆಯೂ ಕಳೆಚಿಕೊಳ್ಳುತ್ತಿದೆ. ಅದರ ಬೆಲೆಯು ಕ್ಷೀಣಮುಖವಾಗಿದೆ.

ಜನರೆಲ್ಲರೂ ತಮ್ಮ ಹತ್ತಿರ ಉಳಿದಿರುವ ಅಲ್ಪ ಸ್ವಲ್ಪ ಹಣವನ್ನೆಲ್ಲ ಮನೆ ಮಠ, ಭೂಮಿಕಾಣಿಗಳನ್ನು ಕೊಂಡು ಪಕ್ಕ ಆಸ್ತಿ ಮಾಡುತ್ತಿದ್ದಾರೆ. ಕಡೆಗೆ ತಮ್ಮ ಮೋಟಾರು ಕಾರುಗಳನ್ನು ಸಹ ಮಾರುತ್ತಿದ್ದಾರೆ. ಚರ ಆಸ್ತಿಗಳ ಮೇಲೆ ಅವರಿಗೆ ನಂಬಿಕೆಯು ಹೋಗಿದೆ. ಎಲ್ಲರೂ ಸ್ಥಿರ ಆಸ್ತಿಗಳನ್ನು ಮಾಡುತ್ತಿದ್ದಾರೆ.



ಶಾಂತಿಸ್ಥಾಪನೆಯ ಮುಖಂಡರ ಪ್ರಯತ್ನಗಳು ವ್ಯರ್ಥವಾದುವು

ಮುಸಲ್ಮಾನ ಮುಖಂಡರ ಅರಣ್ಯ ರೋದನ

ಈ ಬಾರಿ ಕಲ್ಕತ್ತೆಯಲ್ಲಿ ಅಲಿಬಂಧುಗಳ ದಿನಾಚರಣೆ ಮಾಡಲಿಕ್ಕಾಗಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಕಲ್ಕತ್ತಾ ಕಾರ್ಪರೇಶನಿನ ಮುಸ್ಲಿಂ ಲೀಗ್ ಮೇಯರರೂ, ಮುಸಲ್ಮಾನ ಮುಖಂಡರೂ ಆದ ಮಿ ಎ ಸಿದ್ದಿಕರವರು ಒಂದು ಸ್ವಾರಸ್ಯದ ಭಾಷಣವನ್ನು ಕೊಟ್ಟಿದ್ದರು. ಅದರಲ್ಲಿ ಅವರು—'ತಮ್ಮನ್ನು ಮುಖಂಡರೆಂದು ಹೇಳಿಸಿಕೊಳ್ಳುವ ಮಹಾನ ಭಾವರು ದೇಶದಲ್ಲಿ ಶಾಂತಿಸ್ಥಾಪನೆಗಾಗಿ ಮಾಡಿದ ಪ್ರಯತ್ನಗಳೆಲ್ಲಿ ನೀರಿನಲ್ಲಿ ಹೋಮಿದ ಹೋಮದಂತೆ ವ್ಯರ್ಥವಾದುವು' ಎಂದು ಒಂದೆಡೆ ಹೇಳಿದ್ದರು.

ಇದನ್ನು ಓದಿದ ಒಬ್ಬ ಮಹಾಶಯರು ಹೀಗೆ ಪ್ರಶ್ನಿಸಿದ್ದಾರೆ—'ತಮ್ಮ ಸಹಾಯಕರಾದ ಮಿ ಸಿದ್ದಿಕಿಯವರು ಹೇಳಿದ ಈ ನುಡಿಗಳನ್ನು ಮಿ ಮಹಮ್ಮದಾಲಿ ಜಿನ್ನರು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು ಜಿನ್ನಾ ಸಾಹೇಬರು 'ರಂ ಮಿ ಲಿಯ ಮುಸಲ್ಮಾನರ ಮುಖಂಡರೆ ಅಥವಾ ಅಲ್ಲವೆ? ಅವರು ಮುಖಂಡರು ಹೌದಾದರೆ ಮಿ ಸಿದ್ದಿಕಿಯವರು ಹೀಗೆ ಹೇಳಬಹುದಾಗಿತ್ತೆ? ಮುಖಂಡರು ಅಲ್ಲವಾದರೆ, ಮುಸ್ಲಿಂ ಜನತೆಯ ಪರವಾಗಿ ಮಾತನಾಡುವ ಹುಚ್ಚು ಮಿ ಜಿನ್ನರಿಗೆ ಯಾಕೆ?'

ಈ ಮಹಾಶಯರು ಸಾರ್ಥಕವಾದ ಪ್ರಶ್ನೆಗಳನ್ನೇ ಕೇಳಿದ್ದಾರೆ ಜಿನ್ನರು ನಮ್ಮ ಭಾಗ್ಯದೇವತೆ ಎಂದು ಅವರನ್ನು ಎತ್ತಿ ಹಾರಾಡಿಸುವ ಮುಸಲ್ಮಾನರ ವರ್ತನವು ಎಷ್ಟು ತಿಳಿಗೇಡಿತನದ್ದೆಂಬುದು ಈ ಪ್ರಶ್ನೆಗಳಿಗೆ ಬರುವ ಉತ್ತರದಿಂದ ಚೆನ್ನಾಗಿ ತಿಳಿಯುತ್ತದೆ

ಮುಸಲ್ಮಾನರ ಕರ್ತವ್ಯ

'ಸ್ವಾತಂತ್ರ್ಯ ಸಂಪಾದನೆಯ ಮಾರ್ಗದಲ್ಲಿ ನಡೆಯಲಿಕ್ಕೆ ಹಿಂದುವು ತಿರಸ್ಕರಿಸುತ್ತಾನಾದರೆ ಅವನನ್ನು ಬೆನ್ನ ಮೇಲೆ ಹೊತ್ತುಕೊಂಡಾದರೂ ಸ್ವಾತಂತ್ರ್ಯದೇವಿಯ ಮಂದಿರಕ್ಕೆ ನಡೆಯುವುದು ಮುಸಲ್ಮಾನನ ಕರ್ತವ್ಯವಾಗಿದೆ' ಎಂದ ಸಿದ್ದಿಕಿಯವರು ತಮ್ಮದೇ ಭಾಷಣದಲ್ಲಿ ಒಂದು ಉದ್ಗಾರವನ್ನು ತೆಗೆದಿದ್ದರು

ಸಿದ್ದಿಕಿಯವರ ಈ ಮಾತುಗಳು ಅತ್ಯಂತ ಶ್ಲಾಘನೀಯವಾಗಿವೆ, ಎಲ್ಲರೂ ಮೆಚ್ಚುವಂತವಾಗಿವೆ ಆದರೆ ಮುಸಲ್ಮಾನರು ಸ್ವಾತಂತ್ರ್ಯ ಸಂಪಾದನೆಯ ಮಾರ್ಗದಲ್ಲಿ ಎಷ್ಟಕ್ಕೆ ತಾವು ನಡೆಯಲು ಸಮರ್ಥರೆ? ಒಂದೇ ಒಂದು ಹೆಜ್ಜೆ ಮುಂದಿಟ್ಟಿದ್ದರೂ ಬ್ರಿಟಿಷ ಸಾಮ್ರಾಜ್ಯ ಸರ್ಕಾರದ ಸಹಾಯವು ಅವರಿಗೆ ಅಗತ್ಯವೆನಿಸುವುದಿಲ್ಲವೆ? ಮಾತುಗಳನ್ನು ಆಡುವ ಮೊದಲು ಸಿದ್ದಿಕಿಯವರು ಈ ಪ್ರಶ್ನೆಗಳಿಗೆ ಯಥಾರ್ಥ ಉತ್ತರಗಳನ್ನು ಯಾಕೆ ಯೋಚಿಸಲಿಲ್ಲವೋ ಗೊತ್ತಾಗುವುದಿಲ್ಲ

ಹಿಟ್ಲರನ ಥಾಳಿಯತ್ತ ಕಡೆ

(೭ನೆಯ ಪುಟದಿಂದ ಮುಂದುವರಿದುದು)

ಆದರೆ ಜಪಾನದಲ್ಲಿ ಈಗಿರುವ ಸರಕಾರವು ಸೈನಿಕ ಸರಕಾರ, 'ಮಹತ್ವಾಕಾಂಕ್ಷಿ'ಗಳ ಸರಕಾರ ಎಂಬುದನ್ನು ನಾವು ಮರೆಯಬಾರದು. ಮಹತ್ವಾಕಾಂಕ್ಷೆಯನ್ನು ಸಾಧಿಸುವ ಸಲುವಾಗಿ ಈ ಸರಕಾರವು, ಯುದ್ಧದಲ್ಲಿ ಸೇರುವ ಸಂಭವವೂ ಇದೆ ಇತ್ತ ಹಿಟ್ಲರನ 'ಥಾಳಿ'ಯಿಂದ ರಶ್ಯ ಜಪಾನಗಳಿಗೆ ಒಪ್ಪಂದವಾಗಬಹುದೆಂದು ಊಹಿಸಲಾಗಿದೆ. ಈ ಒಪ್ಪಂದವಾದರೆ, ರಶ್ಯವು ಚೀನಕ್ಕೆ ಯುದ್ಧಸಾಮಗ್ರಿಗಳನ್ನೊದಗಿಸುವುದನ್ನು ನಿಲ್ಲಿಸಬಹುದಲ್ಲದೆ, ದಕ್ಷಿಣ ಚೀನಿ ಸಮುದ್ರದ ಕಡೆಗೆ ದಾಳಿ ಮಾಡಲು ಜಪಾನಕ್ಕೆ ಅವಕಾಶ ಕೊಡಬಹುದು. ಜಪಾನಾದರೂ ಇದನ್ನೇ ಎದುರುನೋಡುತ್ತಿದೆ. ಈ ಒಪ್ಪಂದವಾದ ಕೂಡಲೇ, ಅದು ಹೈನಾನ ದ್ವೀಪದಿಂದ ಡಚ್ ಈಸ್ಟ ಇಂಡೀಜ, ಮಲಯ, ಹಾಂಕಾಂಗ ಮತ್ತು ಫಿಲಿಪಾಯಿನಗಳ ಮೇಲೆ ಹಲ್ಲೆ ಮಾಡಬಹುದು. ಆದರೆ ಮೊದಲು ಅದು ಬ್ರಿಟಿಷ ಅಮೇರಿಕನ ವಸಾಹತುಗಳ ಮೇಲೆ ದಾಳಿ ಮಾಡುವ ಸಾಹಸಕ್ಕೆ ಕೈಹಾಕದೆ, ಡಚ್ ಈಸ್ಟ ಇಂಡೀಜ ಮತ್ತು ಇಂಡೋ ಚೀನಗಳ ಮೇಲೆ ಹಲ್ಲೆ ಮಾಡಬಹುದು, ಯಾಕೆಂದರೆ ಈ ದೇಶಗಳು ಒಂದೊಂದೇ ಜಪಾನನ್ನು ಎದುರಿಸುವಷ್ಟು ಸಮರ್ಥವಾಗಿಲ್ಲ. ಅದ್ದರಿಂದ ಇವನ್ನು ಸುಲಭವಾಗಿ ಆಕ್ರಮಿಸಿಕೊಳ್ಳಬಹುದು. ಮತ್ತು ಇವನ್ನು ಆಕ್ರಮಿಸಿಕೊಂಡ ಮೇಲೆ ಅತ್ತ ಯುರೋಪದಲ್ಲಿ ಯುದ್ಧ ಏನಾಗುವುದೆಂಬುದನ್ನು ನೋಡುತ, ದಿನ ಕಳೆಯಬಹುದು. ಅತ್ತ ಹಿಟ್ಲರನು ಬ್ರಿಟನು ಅಮೇರಿಕಗಳ ಮೇಲೆ ಉಗ್ರ ಕಾಳಗ ಪ್ರಾರಂಭಿಸಿದ ನಂತರ, ಇತ್ತ ಜಪಾನು ಫಿಲಿಪಾಯಿನ, ಹಾಂಕಾಂಗ ಮತ್ತು ಸಿಂಗಾಪುರಗಳ ಮೇಲೆ ಹಲ್ಲೆ ಮಾಡಬಹುದು.

ಆದರೆ ಈ ಕನಸುಗಳು, ರಶಿಯದ ಧೋರಣವನ್ನು ಅವಲಂಬಿಸಿವೆ

ಕರ್ಮವೀರ

ಧಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸ

ಮಂಗಳೂರು. ಕೊಡಿಯಾಲಬೈಲು.

ಮಧ್ಯಾಹ್ನ 1 P. M.ಗೆ ಬಿಡುವ

ಮಂಗಳೂರು — ಚಿಕ್ಕಮಗಳೂರು

ಸರ್ವಿಸು

ತಾರೀಕು 1-2-1941ರಿಂದ ಪ್ರಾರಂಭವಾಗಿದೆ

ಮಂಗಳೂರಿನಿಂದ 1 P. M. ಗೆ ಹೊರಟರೆ ಅದೇ ದಿನ ಸಾಯಂಕಾಲ 7 P. M. ಗೆ ಚಿಕ್ಕಮಗಳೂರಿಗೆ ತಲಪಬಹುದು

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಅಥವಾ ಸ್ವತಹಾ ಕೇಳಿ ತಿಳಕೊಳ್ಳಬಹುದು.

JOINT MANAGERS:

The Combined Booking Agency, MANGALORE.

The Joint Booking Office, KODIALBAIL.

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 3-0-0 | ಅಂಚೆ ವೆಚ್ಚ ಸೇರಿ ರೂ. 3-13-0 | Regd. No. M 3461

ಸ್ವದೇಶಾಭಿಮಾನಿ

[ಸಂಪುಟ 35] ತಾರೀಕು 21-2-1941 [ಸಂಚಿಕೆ 8]

The Bombay Life Assurance Company, Ltd.

(ESTABLISHED 1908)

Death! is not a matter of supposition
is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES,

The Bombay Life Building,

Gandhi Nagar, UDIPI.

OR AT ANY OF THEIR OFFICES AT:—

Puthiyara, Calicut	Car Street, Mangalore.	Central Station Road, Trivandrum.
Gautam Nivas, Charni Road, Girgaum, Bombay No. 4.	Post Box No. 337, Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಜಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ತಜ್ಜಿ, ತುರಿಕಜ್ಜಿ, ಹುಳುಕಡ್ಡಿ, ವಿಷ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ. ಬೊಂಬ್ಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್.

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. C. ನಂಬ್ರ 653/40

ದಿ ಪ್ರಾವಿನ್ಸಿ ಬೇಂಕ್ ಲಿಮಿಟೆಡ್, ಮಂಗಳೂರು- ಇದ್ರ ಮೇನೇಜಿಂಗ್ ಡೈರೆಕ್ಟರ್ ಕೆ. ಆರ್. ಗುರ್ರ್ಯ — ವಾದಿ

ಮತ್ತು

1 ಯಂ. ಆದಮ್ಮದ ಸಾಹೇಬ 2. ಪಿ. ಅಪ್ಪ (ಈಗ ತೀರ್ತ್ತ) 3. ಬಿ. ರಾಮ 4. ಅಮ್ಮು ಹೆಂಗ್ಸು 5. ಕ್ರಿಷ್ಣ 6. ಲಕ್ಷ್ಮಿ 7. ಜಾನಕಿ 8. ಭವಾನಿ 9. ಮಾಧವ 10. ಗಿರಿಜಾ 11. ಮುತ್ತಪ್ಪ 10ನೇ 11ನೇ ಪ್ರಾಪ್ತರು ಇವರ ಕೋರ್ಟುಗಾರ್ಡಿಯನ್ ಯೆಡವಿನಮ್ ಎಡ್ವೋಕೇಟ್ ಶ್ರೀ. ಸಿ ವಿ ಕೃಷ್ಣಯ್ಯ. ಸಪ್ಲಿಮೆಂಟ್ ಪ್ರತಿವಾದಿಯು— ಪ್ರತಿವಾದಿಗಳು

ಮೇಲ್ಕಂಡ 5ನೇ ಸಪ್ಲಿಮೆಂಟ್ ಪ್ರತಿವಾದಿ ಕ್ರಿಷ್ಣ—ಪಿ. ಅಪ್ಪನವರ ಅಳಿಯ ಮಂಗಳೂರು ಶಹಾರ ಬೋಳಾರದಲ್ಲಿರುವವರಿಗೆ—

ವಾದಿಯು ಸದ್ರಿ ಪ್ರತಿವಾದಿರ ಮೇಲೆ ದಾಖಲ್ಲುಮಾಡಿದ ಮೇಲ್ಕಂಡ ವ್ಯಾಜ್ಯದಲ್ಲಿ 5ನೇ ಪ್ರತಿವಾದಿಗೆ ಸಬ್ಸ್ಟಿಟ್ಯೂಟೆಡ್ ಸರ್ವಿಸ್ ಹುಕ್ಕುಂ ಆಗಿ ನಂಬ್ರವು 17ನೇ ಮಾರ್ಚಿ 1941ನೇ ಇಸವಿಯಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತಪ್ಪಿ ಒಗ್ಗೆ ಇಟ್ಟಿರುತ್ತದೆ. 5ನೇ ಪ್ರತಿವಾದಿಗೆ ಏನಾದರೂ ಉದಾಹರಣೆ ಕೊಡುವದಿದ್ದರೆ ಇದ್ರೆ ಆತನು ಖುದ್ದಾಗಿ ಯಾ ವಕೀಲದ್ವಾರವಾಗಲೀ ಸದ್ರಿ ತಾ. 17—3—41ರಲ್ಲು ಪಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಹೇಳಿ ಕೊಳ್ಳದಿದ್ರೆ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು—ತಿಳಿದಿರುವದು—

Mangalore, 22-2-1941. } **G. Narayana Rao**, Vakil for plaintiff

ಪ್ರಕಟಣೆ

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ— ನಮ್ಮ ಕುಟುಂಬದ ಖಾಬ್ತು ಅಡಕತ್ತಬೈಲು ಗ್ರಾಮದಲ್ಲಿರುತ್ತಿರುವ ಪಟ್ಟಾಜೆ ಶಂಭಟ್ಟರ ಮಕ್ಕಳು-ವೆಂಕಪ್ಪ ಭಟ್ಟ ಎಂದು, ಶಂಭಟ್ಟ ಎಂದು ಕೂಡಾ 2 ಜನರಿಂದ ನಮ್ಮ ಕುಟುಂಬಕ್ಕೆ ಅಂದರೆ ಅಡ್ಕತ್ತಬೈಲು ಗ್ರಾಮದ ಮಾಜಿ ಪಟೇಲ್ ಮಾಚ ಬಂಟರ ಸೊಸೆ, ಅಕ್ಕು ಹೆಂಗ್ಸು, ವ ಅವರ ಮಕ್ಕಳ, ವ ಮೊಮ್ಮಕ್ಕಳ ಹಕ್ಕಿನ ಬಾಬ್ತು ನನ್ನ ಅಜ್ಜ, ಅಕ್ಕ ಹೆಸರಿಗೆ, ವ ಮೃತಪಟ್ಟ ಪಟೇಲ್ ವೆಂಕಪ್ಪ ಶೆಟ್ಟರ ಮಾವನ ಹೆಸರಿಗೆ ಇರುತಿದ್ದ ಆಸ್ತಿ ದಸ್ತವೇಜುಗಳ ಮೊಬಲಗುಗಳನ್ನು ನನ್ನ ಅಜ್ಜಿ ಅಕ್ಕು ಹೆಂಗ್ಸು, ವ ಮಕ್ಕಳು, ಇದು ಜನರೂ ಕೂಡಿ ಈ ಪೈಕಿ ಗಂಡಸರಲ್ಲಿ ಹಿರೇಯವರಾದ ಅಡ್ಕತ್ತಬೈಲು ಕಾಯಂ ಪಟೇಲ್ ನನ್ನ ಮಾವನಾದ ನಾಪ ಒಲ ಶೆಟ್ಟರ ಹೆಸರಲ್ಲಿ, ಮೇಲಿನ ಹಣಗಳನ್ನು ಪಡೆದು ಜನ್ನಿಲ್ ಶಂಕರನಾರಾಯಣ ಭಟ್ಟರಿಗೆ ಕೊಟ್ಟು, ಅವರಿಗೆ ಸನ 1932 ಇಸವಿ ಜೂನ್ ತಾ 9ರಲ್ಲು, ಅವರಿಂದ ಇಳಿವಾರು ವಾರು ದಸ್ತವೇಜು ಬರಸಿಕೊಂಡು ಇದ್ದುತ್ತಿದ್ದು ವಲ್ಲಿ ಕಾಯಂ ಪಟೇಲ ಮಾಪಲ ಶೆಟ್ಟರು ಯಾವ ವಾದದಿಂದಲೂ ಅನ್ಯ ಜನರ ಹೆಸರಲ್ಲಿ ಕೊಟ್ಟು, ಕುಟುಂಬಕ್ಕೆ ದ್ರೋಹವಾಗುವಂತೆ ವರ್ತುಕಿ ಮಾಡ್ಲು ಇರಾದೆಯಲ್ಲಿ ಇರುತ್ತಾರಾಗಿ ಕೇಳಿಬರುವುದರಿಂದ, ಈ ಕೆಳಗೆ ಬರೆದ ಆಸ್ತಿಗಳನ್ನು ಯಾರು ಪಡೆಯಬಾರದವಾಗಿಯೂ, ಹಾಗೆ ಪಡೆದರೆ, ನಮ್ಮ ಅಳಿಯಸಂತಾನ ಹಕ್ಕಿನ ಈ ಕೆಳಗಿನ ಆಸ್ತಿಗೆ ಯಾವ ವಿಧದಿಂದಲೂ ಬಾಧಿಸತಕ್ಕದಲ್ಲವಾಗಿ ತಿಳಿಸುತ್ತೇನೆ.

ಆಸ್ತಿ ವಿವರ

ಕುಂಬ್ಡಾಜೆ ಗ್ರಾಮ, ರಿ. ಸ. ನಂಬ್ರ 120/6, 65/3—6—7—8 ಮತ್ತು ನೆಟ್ಟಣಿಗೆ ಗ್ರಾಮದ ರಿ. ಸ. ನಂಬ್ರ 73/8, 75/4—5—6—9—12—13 ವ 118/10, 119/4—5, 96/7—30/10, 75/7ನೇ ಸಬ್ ಡಿವಿಜನ್ ಸ್ಥಳಗಳಾಗಿರುತ್ತವೆ.

A. Sankappa Alva
Acting Potail of Adkathabail Village, Kasaragod Taluk.

TENDER NOTICE.

Sealed tenders from registered contractors will be received up to 3 P. M. on the 12th day of March 1941 for constructing additional blocks to the Board High School, Moolki—estimate Rs. 9200. Tender documents plans etc., can be seen in the District Board Engineer's office Mangalore during office hours and can be obtained on payment of Rs 5/— per set which amount will on no account be refunded.

Mangalore, 23-2-41 } **P. T Narayanan Nayar**, District Board Engineer

ನೋಟೀಸು,

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಸ್ಮಾಲ್ ಕೋಜ್ ನಂಬ್ರ 653/40

I A. ನಂಬ್ರ 432/40

ದಿ, ಪ್ರಾವಿನ್ಸಿ ಬೇಂಕ್ ಲಿಮಿಟೆಡ್ ಮಂಗಳೂರು ಇದ್ರ ಮೇನೇಜಿಂಗ್ ಡೈರೆಕ್ಟರ್ ಕೆ. ಆರ್. ಗುರ್ರ್ಯ — ವಾದಿ — ಅರ್ಜಿದಾರ

ಮತ್ತು

1. ಬಿ. ರಾಮ 2. ಅಮ್ಮು ಹೆಂಗ್ಸು 3. ಕ್ರಿಷ್ಣ 4. ಲಕ್ಷ್ಮಿ 5. ಜಾನಕಿ 6. ಭವಾನಿ. 7. ಮಾಧವ 8. ಗಿರಿಜಾ 9. ಮುತ್ತಪ್ಪ 8ನೇ 9ನೇ ಯವರು ಪ್ರಾಪ್ತರು, ಇವರ ಗಾರ್ಡಿಯನ್ ಯೆಡವಿನಮ್ ಎಡ್ವೋಕೇಟ್ ಶ್ರೀ ಜಿ. ವಿ ಕೃಷ್ಣಯ್ಯ—

3ನೇ ರೆಸ್ಪೋಂಡೆಂಟ್ ಕ್ರಿಷ್ಣ—ಪಿ. ಅಪ್ಪನವರ ಅಳಿಯ, ಮಂಗಳೂರು ಶಹಾರ ಬೋಳಾರದಲ್ಲಿರುವವರಿಗೆ—

ಮೇಲ್ಕಂಡ ಅರ್ಜಿಯಲ್ಲಿ ವಾದಿಯು ಮೃತಪಟ್ಟ 2ನೇ ಪ್ರತಿವಾದಿ ಪಿ. ಅಪ್ಪನವರ ಬಾಬ್ತು ದಿ ಬೊಂಬ್ಬಾ ಗವರ್ಮೆಂಟ್ ಸೆಕ್ಯೂರಿಟಿ ಲೈಫ್ ಎಷ್ಯುರೆನ್ಸ್ ಕಂಪೆನಿ-ಲಿಮಿಟೆಡ್‌ಯವರಲ್ಲಿರುವ ನಂಬ್ರ 106304ನೇ ಪೋಲಿಸಿ ಹಣ ರೂಪಾಯಿ 500/— ಡಿಕ್ರಿ ಮುಂಚೆ ಜಪ್ತಿ ಮಾಡಬೇಕೆಂತ ಮಾಡಿದ ಮೇಲ್ಕಂಡ ಅರ್ಜಿಯಲ್ಲಿ ಯಿಂಟೆರಿಮ್ ಜಪ್ತಿ ಹುಕ್ಕುಂ ಆಗಿ ತಾರೀಕು 17—3—41ಕ್ಕೆ ತಪ್ಪಿ ಒಗ್ಗೆ ಇಟ್ಟಿರುವುದರಿಂದ 3ನೇ ರೆಸ್ಪೋಂಡೆಂಟನಿಗೆ ಏನಾದರೂ ಉದಾಹರಣೆ ಕೊಡುವದಿದ್ದರೆ ಆ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಆತನು ಖುದ್ದಾಗಿ ಯಾ ವಕೀಲ ದ್ವಾರವಾಗಿ ಹಾಜರಾಗಿ ಹೇಳಿಕೊಳ್ಳದಿದ್ರೆ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು—ತಿಳಿದಿರಲಿ.

Mangalore, 22-2-41. } **G. Narayana, Rao.**, Vakil for Plaintiff

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮನಂಬ್ರ 660/1940

1 ವಾದಿ ಹಾಜಿ ಹಬೀಬ ಅಮ್ಮದ ಮುಸಾ ಶಿವಮೊಗ್ಗಾ ಇವರ ಪವರ್ ಓಫ್ ಎಟೋರ್ನಿ ಪಡೆದ ಆಲಿ ಮುಹಮ್ಮದ್, ಹಾಜಿಗನ್ನ ಜ್ಯಾದರ ಮಗ ಶಿವಮೊಗ್ಗಾದಲ್ಲಿರುವವ

2, 2ನೇ ಪ್ರತಿವಾದಿ ತಂಡೇಲಆಲಿಮ್ಮ— ಮಂಗಳೂರು ಶಹಾರ ತಂಡೆಲ್ಬೈಲಲ್ಲಿರುವವ

3. ವಾದಿಯು ಮೇಲ್ಕಂಡ ಪ್ರತಿವಾದಿ ವಗೈರರ ಮೇಲೆ ಸಾಮಾನಿನ ನಷ್ಟದ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 4—3—41ಕ್ಕೆ ತಸ್ಕಿಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪ ಇದ್ದರೆ ಸದ್ರಿ ತಾರೀಕಿಗೆ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಹೇಳತಕ್ಕದ್ದು. ಇಲ್ಲದಿದ್ದರೆ ಸದ್ರಿ ಮೇಲ್ಕಂಡ ಪ್ರತಿವಾದಿಯನ್ನು ಎಕ್ಸ್‌ಪಾರ್ಟಿಯಾಗಿ ಮಾಡಿ ದಾವೆಯನ್ನು ತೀರ್ಮಾನಿಸಲಾಗುವುದು.

ತಾ. 20-2-41 | **K. Raghunath Shenoy**
ಕುಂದಾಪುರ | ವಾದಿಯ ಕಡೆ ವಕೀಲ.

ನೋಟೀಸು

ಕಾರ್ಕಳ ಡಿಸ್ಟ್ರಿಕ್ ಮುನ್ಸೀಫ್ ಕೋರ್ಟಿನಲ್ಲಿ

O. S. No. 640/37

G W. ಮೆಯ್ಯೊ . . . . ವಾದಿ.

ವ

ದ್ಯಾಮು ಯಾನೆ ದೇವಮ್ಮಾ ಹೆಗಡ್ತಿ ಕೂಡಾ . ಪ್ರತಿವಾದಿರು

ಸದರಿ ದಾವೆಯಲ್ಲಿ ನೇಮಕಪಟ್ಟ ರಿಸೀವರ್ ಕಾರ್ಕಳ ಕಸಬೆಯಲ್ಲಿರುವ ವಕೀಲ್-ದುರ್ಗ ವೆಂಕಟೇಶ ಭಟ್ಟನು ಸರ್ವರಿಗೂ ತಿಳಿಯಪಡಿಸುವುದೇನೆಂದರೆ—

ಕಲ್ಯಾ ಗ್ರಾಮದ ಕುಂಟಾಡಿ ಮಾಗಣೆಗುತ್ತು ಸೂರ್ಯಣ್ಣ ಹೆಗಡೇರ ಹಕ್ಕಿನ ಬಾಬ್ತು ಈ ಕೆಳಗೆ ವಿವರಿಸಿರುವ ಪಕ್ಷಗಳಿಂದ ಬರತಕ್ಕ ಗೇಣಿ ವಸೂಲಿ ಹಕ್ಕುಗಳನ್ನು ವ ಎರ್ಲಪಾಡಿಬಾವದ ಮನೆ ಅಂತಯ್ಯ ಹೆಗಡೆಯಿಂದ ಬಹಾ ಸಲುವಳಿ ಯಾನೆ ವರ್ಷಾಸನ ವಸೂಲಿ ಹಕ್ಕನ್ನು ತಾರೀಕು 15—3—1941ರಲ್ಲು ಮಧ್ಯಾಹ್ನ 11 ಘಂಟೆಗೆ ಕಾರ್ಕಳ ಕಸಬೆಯಲ್ಲಿರುವ ನನ್ನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ. ಏಲಮಿನಲ್ಲಿ ಪಡೆಯಲು ಅಪೇಕ್ಷೆಯುಳ್ಳವರು ಸದ್ರಿ ತಾ. 15—3—41ರಲ್ಲು ಮಧ್ಯಾಹ್ನ 11 ಘಂಟೆಗೆ ಠೇವಣಿ ಸಹಿತ ಹಾಜರಾಗತಕ್ಕದ್ದು. ಅವಶ್ಯವಿರುವ ಮಾಹಿತಿಯನ್ನು ನನ್ನಿಂದ ಪಡೆಯಬಹುದು.

ಪಕ್ಷಗಳ ವಿವರ	ಅಂದಾಜು ಕ್ರಯ.
1. ಕಲ್ಯಾ ಗ್ರಾಮದ ಕುಪ್ಪ ಪೂಜಾರಿಯಿಂದ ಈಶ್ವರ ಬಹುಧಾನ್ಯ ವ ಪ್ರಮಾಥಿ ಸಂವತ್ಸರಗಳ ಬಾಬ್ತು ಬಹಾ ಬಾಲಗೇಣಿ ವಸೂಲಿ ಹಕ್ಕು—ರೂ	10—0—0
2. ಸದ್ರಿ ಗ್ರಾಮದ ತೂಕ್ರ ಪೂಜಾರಿಯಿಂದ ಸದ್ರಿ 3 ವರ್ಷಗಳ ಬಾಬ್ತು ಬಾಲಗೇಣಿ ವಸೂಲಿ ಹಕ್ಕು—ರೂ	10—0—0
3 ಸದ್ರಿ ಗ್ರಾಮದ ಸೀಲು ಹೆಂಗಸು ಪೊರಳ ಪೂಜಾರಿ, ದೇಜು ಪೂಜಾರಿ ಕೂಡಾ 3 ಜನರಿಂದ ಸದ್ರಿ 3 ವರ್ಷಗಳ ಬಾಬ್ತು ಬಹಾ ಬಾಲಗೇಣಿ ವಸೂಲಿ ಹಕ್ಕು—ರೂ	10—0—0
4. ಸದ್ರಿ ಗ್ರಾಮದ ಏಂಬುಡೆ ಕೊರಗ ಶೆಟ್ಟಿಯಿಂದ ಈಶ್ವರ ಬಹುಧಾನ್ಯ ವ ಪ್ರಮಾಥಿ ಸಂವತ್ಸರದ ಆದಿಯಿಂದ ತಾ. 21 12-'39ರ ವರೇಗಿನ ಬಾಲಗೇಣಿ ವಸೂಲಿ ಹಕ್ಕು—ರೂ	3—0—0
5 ಸದ್ರಿ ಗ್ರಾಮದ ಸಿದ್ಧಾರ್ಥಿ ಶೀತು ಹೆಂಗಸಿನಿಂದ ಸದ್ರಿ ವ್ಯಾದೆಗಳಿಗೆ ಬಹಾ ಗೇಣಿ ವಸೂಲಿ ಹಕ್ಕು—ರೂ	3—0—0
6 ಸದ್ರಿ ಗ್ರಾಮದ ಕೇಡಿ ಬಾಕ್ಯಾರು ಶೀತಮ್ಮನಿಂದ ಸದ್ರಿ ವ್ಯಾದೆಗಳಿಗೆ ಬಹಾ ಮೂಲಗೇಣಿ ವಸೂಲಿ ಹಕ್ಕು—ರೂ.	5—0—0
7. ಸದ್ರಿ ಗ್ರಾಮದ ಕಲ್ಕಾರು ಜನಾರ್ದನ ಪೈಗಳಿಂದ ಸದ್ರಿ ವ್ಯಾದೆಗಳಿಗೆ ಬಹಾ ಬಾಲಗೇಣಿ ವಸೂಲಿ ಹಕ್ಕು—ರೂ.	2—0—0
8. ಎರ್ಲಪಾಡಿ ಗ್ರಾಮದ ಗೋಳಿಬೆಟ್ಟು ವಿಜಾ ಹೆಗಡೆಯಿಂದ ಇದೇ ಕಳೆದ ಈಶ್ವರ ಬಹುಧಾನ್ಯ ವ ಪ್ರಮಾಥಿ ಸಂವತ್ಸರಗಳಿಗೆ ಬಹಾ ಬಾಲಗೇಣಿ ವಸೂಲಿ ಹಕ್ಕು—ರೂ.	10—0—0
9. ಸದ್ರಿ ಗ್ರಾಮದ ಬಾವದ ಮನೆ ಜಾಣಿ ಹೆಗಡ್ತಿ ವ ವಾಸು ಹೆಗಡೆ ಕೂಡಾ 2 ಜನರಿಂದ ಸದ್ರಿ ವ್ಯಾದೆಗಳಿಗೆ ವಸೂಲು ಬರತಕ್ಕ ಗೇಣಿ ವಸೂಲಿ ಹಕ್ಕು—ರೂ	5—0—0
10 ಸದ್ರಿ ಗ್ರಾಮದ ಚನ್ನಕ್ಕ ಹೆಗಡ್ತಿಯಿಂದ ಸದ್ರಿ ವ್ಯಾದೆಗಳಿಗೆ ಬರತಕ್ಕ ಗೇಣಿ ವಸೂಲಿ ಹಕ್ಕು—ರೂ.	3—0—0
11. ಸದ್ರಿ ಗ್ರಾಮದ ಪೆಕ್ಕದ್ದ ಶ್ರೀನಿವಾಸ ಭಟ್ಟರಿಂದ ಈಶ್ವರ ಸಂವತ್ಸರದ ವ್ಯಾದೆಗೆ ಬಹಾ ಮೂಲಗೇಣಿ ವಸೂಲಿ ಹಕ್ಕು—ರೂ.	5—0—0
12 ಉಡುಪಿ ತಾಲ್ಲೂಕು ಬೊಮ್ಮರಬೆಟ್ಟು ಗ್ರಾಮದ ಹಿರಿಯಡ್ಕ ಬಸ್ತಿ ನಾಗಪ್ಪ ಪೈಗಳ ಮನೆಯಲ್ಲಿರುವ ನರಸಿಂಹ ಮಲ್ಯ ವ ಕಮಲಾಪತಿ ಯಾನೆ ಶಾರದೆ ಅಮ್ಮನಿಂದ ಬಹಾ ಸದ್ರಿ ಈಶ್ವರ ಬಹುಧಾನ್ಯ ವ ಪ್ರಮಾಥಿ ಸಂವತ್ಸರದ ಮೂಲಗೇಣಿ ವಸೂಲಿ ಹಕ್ಕು—ರೂ.	5—0—0
13. ಎರ್ಲಪಾಡಿ ಗ್ರಾಮದ ಬಾವದ ಮನೆ ಅಂತಯ್ಯ ಹೆಗಡೆಯಿಂದ ಬರತಕ್ಕ ಸದ್ರಿ 3 ವರ್ಷಗಳ ಸಲುವಳಿ ಯಾನೆ ವರ್ಷಾಸನ ವಸೂಲಿ ಹಕ್ಕು—ರೂ.	5—0—0

ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಕೊಟ್ಟಿರುತ್ತದೆ.

ಕಾರ್ಕಳ } **D Venkatesh Bhat**,
ತಾ. 23-2-1941 } Receiver.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಶುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್ ಕೆಳವಾದಮಾಹಿವಾ ಕಾಣೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ. 4—0—0

ವಿಳಾಸ:- ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

28—2—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೮—೨—೧೯೪೧

ಸತ್ಯಾಗ್ರಹಕ್ಕೆ ಅಪ್ಪಣೆ ಕೇಳಿದ್ದರು ಬೋಸರು!

ಆಗುವುದಿಲ್ಲವೆಂದರು ಗಾಂಧೀಜಿ!

ಮೂಲಭೂತ ಮತಭೇದವೇ ಇದರ ಕಾರಣ

ಗಾಂಧಿ-ಬೋಸರೊಳಗೆ ನಡೆದ ಪತ್ರವ್ಯವಹಾರ

ಇಂದಿನ ಸತ್ಯಾಗ್ರಹ ಚಳವಳದಲ್ಲಿ ಸೇರಿ ಗಾಂಧೀಜಿ ಹೇಳಿದಂತೆ ನಡೆದುಕೊಳ್ಳಲು ತಯಾರಿರುವುದಾಗಿ ಸುಭಾಸಚಂದ್ರ ಬೋಸರು ಮಹಾತ್ಮಾ ಗಾಂಧಿಯವರಿಗೆ ಒಂದು ಪತ್ರ ಬರೆದಿದ್ದರು ಆದರೆ ತಮ್ಮಿಬ್ಬರಲ್ಲಿ ಮಹತ್ವದ ಮತ್ತು ಮೂಲಭೂತ ಮತಭೇದಗಳಿದ್ದುದರಿಂದ ಈ ಚಳವಳದಲ್ಲಿ ಅವರ ಸಹಕಾರವನ್ನು ಸ್ವೀಕರಿಸಲು ಶಕ್ಯವಿಲ್ಲೆಂದು ಗಾಂಧಿಯವರು ಅವರಿಗೆ ತಿಳಿಸಿದರು ಸುಭಾಸರು ಮನೆಯಿಂದ ಅದೃಶ್ಯರಾಗುವ ಮೊದಲು ಗಾಂಧಿಜಿ ಮತ್ತು ಅವರಲ್ಲಿ 'ಈ ಪತ್ರವ್ಯವಹಾರ ನಡೆದಿದ್ದಿತು' ಫಾರ್ವರ್ಡ್ ಬ್ಲಾಕಿನ ಜನರಲ್ ಸೆಕ್ರೆಟರಿಗಳಾದ ಮುಕುಂದಲಾಲ ಸರ್ಕಾರರು ಮಹಾತ್ಮರ ಅಪ್ಪಣೆ ಪಡೆದು ಆ ಪತ್ರವ್ಯವಹಾರವನ್ನು ಪ್ರಸಿದ್ಧಿಸಿದ್ದಾರೆ

ಬೋಸರ ಪತ್ರ

ದಶಂಬರ ೨೩ನೇ ತಾರೀಕು ಸುಭಾಸರು ಗಾಂಧಿಜಿಯವರಿಗೆ ಒಂದು ಪತ್ರ ಬರೆದರು ಅದರ ಅಭಿಪ್ರಾಯ ಹೀಗಿದೆ—

"ಸದ್ಯದ ಸತ್ಯಾಗ್ರಹ ಚಳವಳವು ರಾಷ್ಟ್ರದ ಸ್ವಾತಂತ್ರ್ಯ ಸಂಪಾದನೆಗಾಗಿ ಇರುವುದಿಲ್ಲ ಇಲ್ಲವೆ ಸಾರ್ವತ್ರಿಕ ಚಳವಳವೂ ಆಗಿಲ್ಲ. ಆದರೂ ನಾವು ಈ ಆಂದೋಲನದಲ್ಲಿ ಭಾಗವಹಿಸಲು ಬಯಸುತ್ತೇವೆ. ನಮ್ಮ ರಾಜಕೀಯ ಧೋರಣವು ತಮಗೆ ಗೊತ್ತಿದೆ ಈ ರಾಜಕೀಯ ಧೋರಣಕ್ಕೆ ತಪ್ಪಾಗದಂತೆ ನಾವು ಸಲ್ಲಿಸುವ ಈ ಸೇವೆಯನ್ನು ತಾವು ಸ್ವೀಕರಿಸುವರೆಂದು ನಂಬಿದ್ದೇನೆ ಕಾಂಗ್ರೆಸ್ ಪ್ರಮುಖರ ಬಗ್ಗೆ ನಮ್ಮ ಅಭಿಪ್ರಾಯ ಹೇಗಿದ್ದರೂ ನಾವು ಸಲ್ಲಿಸುವ ಈ ಸೇವೆಗೆ ಅವು ಆತಂಕವನ್ನುಂಟುಮಾಡಲಾರವು ಯಾವುದೇ ಶರತ್ತುಗಳನ್ನು ಹಾಕದೆ ನಾವು ಈ ಸೇವೆಯನ್ನು ಸಲ್ಲಿಸುತ್ತಿರುವೆವು ರಾಷ್ಟ್ರಪತಿಗಳಾದ ಅಜಾದರು ನಮ್ಮ ಮೇಲೆ ಶಿಸ್ತು ಜಾರಿಮಾಡಿದ್ದರೂ ಅದರಿಂದ ದೇಶದ ಮುಂದಿರುವ ಮಹತ್ವದ ಮತ್ತು ವ್ಯಾಪಕ ಪ್ರಶ್ನೆಗಳ ಬಗ್ಗೆ ನಮ್ಮ ಕಣ್ಣುಗಳು ಮುಚ್ಚಲಾರವು. ಆದುದರಿಂದ ನೀವು ನಮ್ಮ ಸಹಕಾರವನ್ನು ಸ್ವೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ"

ಬೋಸರು ಆ ಪತ್ರದ ಕೊನೆಯಲ್ಲಿ ಬಂಗಾಲದ ಪರಿಸ್ಥಿತಿಯನ್ನು ವಿವರಿಸಿ ಮಹಾತ್ಮರ ಆರೋಗ್ಯವು ಹೇಗಿರುವದೆಂದು ಕೇಳಿರುವರು

ಗಾಂಧಿಜಿಯವರ ಉತ್ತರ

ಗಾಂಧಿಜಿಯವರು ದಶಂಬರ ೨೯ನೇ ತಾರೀಕಿಗೆ ಅದಕ್ಕೆ ಬರೆದ ಉತ್ತರದ ಅಭಿಪ್ರಾಯ ಹೀಗಿದೆ —

"ಅಜಾದರ ... ವಿಷಯ ವಿಚಾರವನ್ನು ... ಮಾಡಿರುವುದಿಲ್ಲ ಆದರೆ ಆ ಬಗ್ಗೆ ... ಕೊಟ್ಟ ... ವನ್ನು ಪತ್ರಿಕೆಗಳಲ್ಲಿ ಓದಿದ ಮೇಲೆ ಅದಕ್ಕೆ ... ಉಪಾಯವಿರಲಿಲ್ಲ ... ನಿಮ್ಮ ಪಕ್ಷದವರು ಸದ್ಯದ ಸತ್ಯಾಗ್ರಹ ಚಳವಳದಲ್ಲಿ ಭಾಗವಹಿಸುವ ವಿಷಯ.

ನಮ್ಮಿಬ್ಬರಲ್ಲಿ ಈ ರೀತಿ ಮೂಲಭೂತ ಮತಭೇದಗಳಿರುವ ವರೆಗೆ ಸಹಕಾರವು ಶಕ್ಯವಿಲ್ಲೆಂದು ನನಗನಿಸುತ್ತದೆ ನಮ್ಮಿಬ್ಬರಲ್ಲಿ ... ಬ್ಬರ ಮತಕ್ಕೆ ಒಲಿವ ವರೆಗೆ ಈ ರೀತಿ ಸಹಕಾರವು ಶಕ್ಯವಿಲ್ಲ ಅಲ್ಲಿಯವರೆಗೆ ನಾವು ನಮ್ಮ ಧ್ಯೇಯ ಸಾಧನೆಗಾಗಿ ... ಧ್ಯೇಯ ಇಬ್ಬರದೂ ಒಂದೇ, ಎಂದು ತೋರಿದರೂ ಬೇರೆ ಬೇರೆ ಮಾರ್ಗ ... ವಲ್ಲ

ತಿರುಗಿ ಬೋಸರ ಪತ್ರ

ಈ ಪತ್ರವು ತಲುಪಿದ ಬಳಿಕ ಅದಕ್ಕೆ ಉತ್ತರವಾಗಿ ... ಜನವರಿ ೧೦ನೇ ತಾರೀಕಿಗೆ ಪತ್ರವೊಂದು ಬರೆದರು. ಅದರ ಅಭಿಪ್ರಾಯವು ಹೀಗಿದೆ —

'ನೀವು ನಿಮ್ಮ ಪತ್ರದಲ್ಲಿ ಒಂದು ಮಹತ್ವದ ವಾಕ್ಯದ ... ನಗೆ ತಿಳಿಯದಾಗಿದೆ 'ನಮ್ಮಿಬ್ಬರಲ್ಲಿ ಒಬ್ಬರು ಇನ್ನೊಬ್ಬರ ಪಕ್ಷಕ್ಕೆ ಬರುವ ವರೆಗೆ ನಾವು ನಮ್ಮ ಧ್ಯೇಯ ಸಾಧಿಸಬೇಕು ... ಧ್ಯೇಯವು ಒಂದೇ ಎಂದು ತೋರಿದರೂ, ಎಂದು ಬರೆದಿದ್ದೀರಿ ನಮ್ಮಿಬ್ಬರ ರಾಜಕೀಯ ಗುರಿಯು ಭಿನ್ನವಾಗಿದೆಯೆಂದು ಇದರ ಅರ್ಥವಾಗುವುದೇ? ನಮ್ಮಿಬ್ಬರ ಗುರಿ ಹೇಗೆ ಭಿನ್ನವಾಗಬಲ್ಲದು? ... ದರಿಂದ ಈ ವಾಕ್ಯದ ಅರ್ಥವೇನೆಂಬುದನ್ನು ದಯವಿಟ್ಟು ತಿಳಿಸುವಿರಾ?'

ಈ ಪತ್ರವ್ಯವಹಾರವನ್ನು ಪ್ರಸಿದ್ಧಿಸಲು ಬೋಸರು ಗಾಂಧಿಯವರೊಡನೆ ಕೇಳಿದ್ದರು. ಮಹಾತ್ಮಾಜಿಯವರಿಗೆ ಈ ಪತ್ರವು ... ಲಿಲ್ಲ ... ಸರಕಾರ ... ಅನೇಕ ... ಇದರ ಪ್ರತಿಯನ್ನು ಮಹಾತ್ಮರಿಗೆ ಕಳಿಸಿಕೊಟ್ಟರು.

ಮಹಾತ್ಮರ ಹೇಳಿಕೆ

ಇದಕ್ಕೆ ಮಹಾತ್ಮರು ಮಿ. ಸರ್ಕಾರರಿಗೆ ಹೀಗೆ ಬರೆದಿರುವರು—ನಮ್ಮಿಬ್ಬರಲ್ಲಿಯ ಭಿನ್ನ ಅಭಿಪ್ರಾಯಗಳು ಮಹತ್ವದವು. ... ಬೋಸರಿಗೆ ಅವು ಗೊತ್ತಿವೆ ... ಗೊತ್ತಿರುವವೆಂದು ನನಗನಿಸುತ್ತದೆ. ಬೋಸರು ಎಲ್ಲಿರುವರೆಂಬುದು ಗೊತ್ತಾದ ಕೂಡಲೆ ನನಗೆ ತಿಳಿಸಬೇಕು.'

ಸರಕಾರರ ಪತ್ರ

ಸರಕಾರರು ಈ ಪತ್ರಕ್ಕೆ ಉತ್ತರಕೂಡ ಬರೆದಿರುವರು —

'ದೇಶದ ಸ್ವಾತಂತ್ರ್ಯಕ್ಕಾಗಿ ಅಹಿಂಸಾತ್ಮಕ ಸಮುದಾಯ ಹೋರಾಟ ಹೂಡುವದೊಂದೇ ಪರಿಣಾಮಕಾರಕವಾದ ಮಾರ್ಗವೆಂದು ಸುಭಾಸರು ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷದ ಅವರ ಸಹಕಾರಿಗಳೂ ಎಂದಿನಿಂದಲೂ ಹೇಳುತ್ತ ಬಂದಿದ್ದಾರೆ ಆದುದರಿಂದ ಈ ರೀತಿಯಾಗಿ ಸಂಪಾದಿಸಿದ ಸ್ವಾತಂತ್ರ್ಯವು ಅಹಿಂಸಾ ಮಾರ್ಗದಿಂದ ಸಂಪಾದಿಸಿದ್ದೇ ಆಗುವದು.'

SEASON-DEPOSITS

Season Deposits are accepted at all branches at very favourable rates

Please enquire at the nearest branch.

CANARA BANK LIMITED.

Estd 1906

Members: Reserve Bank of India and Bombay Clearing House.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ

ಸ್ವದೇಶಾಭಿಮಾನಿ

ತಾರೀಕು 28—2—1941

ರಾಜಕೀಯ ಕೈದಿಗಳ ಸಂಕಷ್ಟಗಳು

ಭಾರತದ ರಾಜಕೀಯ ಕೈದಿಗಳು ಪಡುತ್ತಿರುವ ನಿಷ್ಠುರ ಸಂಕಷ್ಟದ ಕುರಿತು ಕೇಳಿಬರುವ 'ಚುಟುಕು ಸುದ್ದಿ'ಗಳೇ ಹೃದಯವನ್ನು ನಡುಗಿಸುವಂತಿವೆ. ಪ್ರಮುಖ ಪತ್ರಿಕೆಗಳು ಸರಕಾರದ ಈ ರೀತಿ ನೀತಿಗಳನ್ನು ಈಗಾಗಲೇ ನಿಷೇಧಿಸಿವೆ; ಸಾರ್ವಜನಿಕರೂ ಅಲ್ಲಲ್ಲಿ ಸಭೆಗೂಡಿಸಿ ವೇದಿಕೆಗಳಿಂದ ಇದನ್ನು ಖಂಡಿಸಿ ತಮ್ಮ ಹೃದಯದ ಸಂತಾಪವನ್ನು ಸಾರಿದ್ದಾರೆ. ಕೇವಲ ರಾಜಕೀಯ ಭಿನ್ನಾಭಿಪ್ರಾಯದ ದೆಸೆಯಿಂದ ಸತ್ಯ ಅಹಿಂಸಾಮಾರ್ಗವನ್ನವಲಂಬಿಸಿ ನಿಷೇಧ ತೋರಿಸಿದ ದೇಶಪ್ರೇಮಿಗಳ ವಿಷಯವಾಗಿ ಸರಕಾರವು ಈ ತರದ ಯಾತನೆಗಳನ್ನು ಕೊಡುವುದು ನ್ಯಾಯಸಮ್ಮತವಾಗಿಲ್ಲವೆಂದು ದೇಶ ಸರ್ವತ್ರ ಕಳವಳವುಂಟಾಗಿದೆ.

ಯಾವುದೇ ಸರಕಾರವಾಗಲಿ, ರಾಜಕೀಯ ಕೈದಿಗಳನ್ನು, ಯುದ್ಧದಲ್ಲಿ ಸೆರೆ ಸಿಕ್ಕಿದ ಬಂಧಿಗಳನ್ನು ಗೌರವದಿಂದಲೇ ನೋಡುವುದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದ ಕ್ರಮವಾಗಿರುವುದು. ಇದು ಯುದ್ಧದಂತಹ ವಿಷಯದಲ್ಲಾದರೂ, ಅನುಸರಿಸತಕ್ಕ ಧರ್ಮವೆಂದೇ ಎನ್ನಬಹುದು. ಇಂದು ನಿರ್ದಯ ಹತ್ಯಾಕಾಂಡಕ್ಕಿಳಿದ ಯುರೋಪಿನ ರಾಷ್ಟ್ರಗಳಾದರೂ ಅನ್ಯೋನ್ಯ ಕೈದಿಗಳ ಕುರಿತು ಈ ನೀತಿಯಿಂದಲೇ ನಡೆದುಕೊಂಡಿವೆಯೆಂಬ ಸುದ್ದಿ ಕೇಳಿಬರುವುದು ಸಂತೃಪ್ತಿಯನ್ನುಂಟುಮಾಡುತ್ತದೆ.

ಪರಸ್ಪರ ಕತ್ತಿ ಕಟ್ಟಿಕೊಂಡು ಮಸೆದು ನಿಂತ ರಾಷ್ಟ್ರದವರೇ ತಮ್ಮ ಕೈಯಲ್ಲಿ ಸಿಕ್ಕಿದ ಸೈನಿಕರನ್ನು ನಿಷ್ಠುರವಿಲ್ಲದೆ ನಡೆಸುತ್ತಿರುವರಾದರೆ, ಇಂದಿನ ಈ ಯುದ್ಧದಲ್ಲಿ ಬ್ರಿಟನಿಗೆ ಸಂಪೂರ್ಣ ವಿಜಯವನ್ನು ಹಾರೈಸಿದ, ಕೇವಲ ತಮ್ಮ ಹಕ್ಕಿಗಾಗಿ, ಜೀವಂತಸ್ಥಿತಿಗಾಗಿ ಸರಕಾರದ ವರ್ತನೆಯನ್ನು ಅಹಿಂಸೆಯ ಮೂಲಕ ನಿಷೇಧ ತೋರಿಸಿದ ಕಾಂಗ್ರೆಸಿನ ಸತ್ಯಾಗ್ರಹಿಗಳಿಗೆ ಮನುಷ್ಯಯೋಗ್ಯ ಸೌಕರ್ಯಗಳಿಲ್ಲವೆಂದರೆ, ಯಾರೂ ನ್ಯಾಯವೆನ್ನಲಾರರು.

ಭಾರತದ ರಾಜಕೀಯ ಕೈದಿಗಳಲ್ಲಿ ಸ್ಥಾನಬದ್ಧರಾಗಿ ಸೆರೆಮನೆಯ ಕತ್ತಲು ಕೋಣೆಗಳಲ್ಲಿ ಹಲಕಾಲದಿಂದ ಸಂಕಷ್ಟ ಪಡುತ್ತಿರುವ 'ಡೆಟೆನ್ಯು'ಗಳ ವಿಚಾರವಾಗಿ ಸರಕಾರವು ನಡೆಸುವ ವರ್ತನೆಗಳು ನ್ಯಾಯಕರವಾಗಿಲ್ಲವೆಂದು ಕೇಂದ್ರ ಅಸೆಂಬ್ಲಿಯಲ್ಲಿ ಶ್ರೀ. ಎಂ. ಎಸ್. ಜೋಶಿಯವರು ನಿರ್ಣಯವನ್ನು ತಂದು ಪ್ರಬಲವಾಗಿ ವಾದಿಸಿದರು. ಈ ಸಂದರ್ಭದಲ್ಲಿ ಹೋಮ್ ಮೆಂಬರರು ಕೊಟ್ಟ ಉತ್ತರವು ರಾಷ್ಟ್ರೀಯ ಮನೋಭಾವದವರನ್ನು ನೋಯಿಸುವಂತಿದೆ. 'ಡೆಟೆನ್ಯು'ಗಳಾದವರು, ಗೌರವವಿಲ್ಲದವರೆಂದೂ, ಮರ್ಯಾದಿವಂತರಲ್ಲವೆಂದೂ, ಸಮಾಜದ್ರೋಹಿಗಳೆಂದೂ ಹೋಮ್ ಮೆಂಬರರು ವಿಚಾರಮಾಡುವುದೂ, ಅಂತಹ ವಿಚಾರದಿಂದ ಸರಕಾರವು 'ಡೆಟೆನ್ಯು'ಗಳನ್ನು ನಡೆಸುತ್ತಿರುವುದೆಂದು ತಿಳಕೊಳ್ಳುವುದೂ, ಆಶ್ಚರ್ಯವನ್ನೂ ರೋಮಾಂಚನವನ್ನೂ ಹುಟ್ಟಿಸುತ್ತಿದೆ. ಸ್ವಾತಂತ್ರ್ಯವಿಲ್ಲದ ರಾಷ್ಟ್ರದಲ್ಲಿ ಹುಟ್ಟಿದ್ದರೆ, ಇಂದು, ಬ್ರಿಟನಿನ ಪ್ರಧಾನ ಮಂತ್ರಿಗಳಾಗಿ, ರಾಷ್ಟ್ರವನ್ನು ಹುರಿದುಂಬಿಸುವ ಸ್ಫೂರ್ತಿಚೇತನರಾದ ಚರ್ಚಿಲ್ಲರೇ ಬಹಳ ದೊಡ್ಡ 'ಡೆಟೆನ್ಯು' ಆಗುತ್ತಿದ್ದರೆಂದು ಹೇಳುವ ಮಾತನ್ನು ಬ್ರಿಟಿಷ್ ಸರಕಾರವು ಯೋಚಿಸಬೇಕಾಗಿದೆ. 'ಡೆಟೆನ್ಯು'ಗಳಾಗಿ ಸೆರೆಮನೆ ಸೇರಿಸಲ್ಪಟ್ಟವರು ಅನುಸರಿಸಿದ ಧಾರಿಯು ಸಮರ್ಪಕವೆಂದು ಸಮರ್ಥಿಸುವುದಿಲ್ಲವಾದರೂ, ಅವರು ದಾರಿ ತಪ್ಪಿದರೆಂದು ಹೇಳುವುದು ಸರಿಯಾಗಬಹುದಾದರೂ, ರಾಷ್ಟ್ರದ ಸ್ವಾತಂತ್ರ್ಯದ ಉದ್ದೇಶದಿಂದ ಮುಂದುವರಿದವರನ್ನು ಅವರು ಸಂಬಳದ ಸಲುವಾಗಿ ಆ ತೆರದಿಂದ ಜೀವಿಸುವವರೆಂದು ತಿಳಕೊಳ್ಳುವುದು ತಿರಸ್ಕರಿಸಿ ಮಾತನಾಡಿದಂತಾಗುತ್ತದೆ.

ಸತ್ಯಾಗ್ರಹಿಗಳಲ್ಲಿ ಕೆಲವರನ್ನು ಬಂಧಿಸದೆ ಬಿಡುವುದು, ಬಿಟ್ಟವರನ್ನು ತಿರುಗಿ ಬಂಧಿಸುವುದು, ಕೆಲವರನ್ನು ಹಲವು ದಿನಗಳ ವರೆಗೆ ರಿಮಾಂಡಿನಲ್ಲಿ ಹಾಕುವುದು, ಇನ್ನು ಕೆಲವರ ಮೇಲೆ 'ನ್ಯೂಸೆನ್ಸ್' ಚಾರ್ಜುಮಾಡುವುದು, ಹೀಗೆ ಸತ್ಯಾಗ್ರಹಿಗಳ ವಿಷಯವಾಗಿ ಇತ್ತೀಚೆಗೆ ಸರಕಾರವು ನಡೆಸುವ ರೀತಿನೀತಿಯ ವಿಚಾರಗಳು ಜನತೆಯ ಮನಸ್ಸಿನಲ್ಲಿ ಸಾಕಷ್ಟು ಗಲಭೆಯನ್ನು ಹುಟ್ಟಿಸಿವೆ. ಇಂತಹ ಸಂದೇಹಕರವಾದ ರೀತಿಯನ್ನು ಬಿಟ್ಟು ಸತ್ಯಾಗ್ರಹಿಗಳೆಲ್ಲರ ವಿಷಯವಾಗಿ ಜನತೆಗೆ ಅರ್ಥವಾಗುವಂತಹ, ಸಾಮಾನ್ಯವಾಗಿ ಒಂದೇ ತರದ, ನ್ಯಾಯವಾದ ಧೋರಣೆಯನ್ನು ವಹಿಸುವುದು ಯೋಗ್ಯವಾಗಿದೆ. ರಿಮಾಂಡಿನಲ್ಲಿ ಸತ್ಯಾಗ್ರಹಿಗಳನ್ನಿಡುವ ವಿಷಯದ ಸುದ್ದಿಗಳೂ ಈಗೀಗ ಹೆಚ್ಚಾಗಿ ಕೇಳುತ್ತಾ ಇವೆ. ಸತ್ಯಾಗ್ರಹಿಗಳು ತಾವು ಸತ್ಯಾಗ್ರಹ ಹೂಡುವ ವಿಚಾರವಾಗಿ ಎರಡು ದಿನಗಳ ಮೊದಲೇ ಸರಕಾರಕ್ಕೆ ತಿಳಿಸುತ್ತಿರುವಾಗ, ಅವರನ್ನು ಆದಷ್ಟು ಕಡಿಮೆ ದಿನಗಳು ರಿಮಾಂಡಿನಲ್ಲಿರಿಸಿ ಬೇಗನೇ ವಿಚಾರಣೆ ನಡೆಸುವುದು ತಕ್ಕುದಾಗಿದೆ. ಇಂತಹ ವರ್ತನೆಯಿಂದ, ಮೊದಲೇ ಕಳವಳಗೊಂಡ ಜನತೆಯ ರಾಷ್ಟ್ರೀಯ ಮನೋಭಾವನೆಯನ್ನು ಮತ್ತಷ್ಟು ಕೆರಳಿಸಿದಂತಾಗುವುದೆಂಬುದನ್ನು ಸರಕಾರವಾದರೂ ತಿಳಕೊಳ್ಳಬೇಕು.

ರಾಜಕೀಯ ಕೈದಿಗಳ ವಿಷಯವಾಗಿ, ಸತ್ಯಾಗ್ರಹಿ ಬಂಧಿಗಳ ವಿಷಯವಾಗಿ ಸರಕಾರವು ಮಾನುಷ ಸಹಜವಾದ ಸೌಕರ್ಯಗಳನ್ನು ಒದಗಿಸಿ ಕೊಡಬೇಕೆಂದು ವಾದಿಸುವುದು ಕಾಂಗ್ರೆಸಿನವರು ಮಾತ್ರವಲ್ಲ, ಪ್ರತಿಯೊಬ್ಬ ಭಾರತೀಯನ ಕರ್ತವ್ಯವೇ ಆಗಿದೆ. ಯಾವ ಪಕ್ಷದವರೇ ಆಗಲಿ ತಮ್ಮ ದೇಶೀಯ ಬಂಧುಗಳು ಪಡುವ ಸಂಕಷ್ಟಗಳ ಕಡೆಗೆ ಕಣ್ಣು ಮುಚ್ಚಿ ಕುಳಿತುಕೊಳ್ಳುವುದು ಮಹಾ ಅಪರಾಧವಾಗುವುದು. ಸರಕಾರವಾದರೂ ಇಂತಹ ನಿಷ್ಠುರಗಳಾಗದಂತೆ ನಡೆಸುವುದು ಅದರ ನ್ಯಾಯಕ್ಕೂ, ರಾಷ್ಟ್ರದ ಕ್ಷೇಮಕ್ಕೂ, ಜನತೆಯ ಹಿತಕ್ಕೂ ಅವಶ್ಯವಾಗಿದೆ.

ಜಿನ್ನಮಂಡಳಿಯ ಕೂಗು

ದಿಲ್ಲಿಯಲ್ಲಿ ಈ ವಾರ ಜಿನ್ನರ ಮುಸ್ಲಿಂ ಲೀಗಿನ ಕಾರ್ಯಕಾರೀ ಮಂಡಳಿಯ ಅಧಿವೇಶನವು ಸೇರಿತು. ಪಾಕಿಸ್ಥಾನವೊಂದೇ ತಮ್ಮ ಎಲ್ಲಾ ಚಳವಳಿಗಳ ಸಾರವೆಂಬುದನ್ನು ಸಾರಲಾಯಿತು. ಭಾರತವು ಇಂದು ಅಭಿನ್ನ ಏಕರಾಷ್ಟ್ರವಾಗಿ ಐಕ್ಯದಲ್ಲಿರುವುದನ್ನು ಸಹಿಸದೆ ಭಿನ್ನವಾಗಿ ಅನೈಕ್ಯವಾಗತಕ್ಕ ತಮ್ಮ ಅರಾಷ್ಟ್ರೀಯ ಮನೋಭಾವವನ್ನು ಹೀಗೆ ಜನತೆಯ ಎದುರು ಜಿನ್ನರ ಮಂಡಳಿಯು ಮಂಡಿಸಲ್ಪಟ್ಟಿತು.

ಕಾಂಗ್ರೆಸಿನ ಇಂದಿನ ಸತ್ಯಾಗ್ರಹದ ವಿಷಯದಲ್ಲಿ ಲೀಗು ಮಾಡಿದ ನಿರ್ಣಯವು ಇವುಗಳಲ್ಲಿ ಎಲ್ಲದಕ್ಕಿಂತಲೂ ಪ್ರಧಾನವಾದುದು. ಸಿಂಧದ ಮಹನೀಯರಾದ ಸಯ್ಯದ್ ಅಲಿ ಮೊಹಮ್ಮದ್ ರಾಶಿದರು, ಕಾಂಗ್ರೆಸಿನ ಸತ್ಯಾಗ್ರಹವು ಅಲ್ಪಸಂಖ್ಯಾಕರ ವಿಷಯ ಬ್ರಿಟನನ್ನು ಬಗ್ಗಿಸಬೇಕೆಂದು ಹೂಡಿದುದರಿಂದ ಈ ಸತ್ಯಾಗ್ರಹ ಮುಸ್ಲಿಮರೊಡನೆ ಸಂಘ ಹೂಡಿದಂತಾಗುತ್ತದೆಂದೂ, ಕಾಂಗ್ರೆಸು ಸತ್ಯಾಗ್ರಹವನ್ನು ಮುಂದುವರಿಸಿದಲ್ಲಿ ಜಾತೀಯ ಜಗಳವು ಹೆಚ್ಚುವುದೆಂದೂ, ಕಾಂಗ್ರೆಸು ಸತ್ಯಾಗ್ರಹವನ್ನು ನಿಲ್ಲಿಸದಿದ್ದರೆ ಅದನ್ನು ನಿಷೇಧಿಸಲು ಮುಸ್ಲಿಮ ಲೀಗು ಆಂದೋಲನ ಆರಂಭಿಸತಕ್ಕುದೆಂದೂ ಒಂದು ಠರಾವು ತಂದರು. ಇದಕ್ಕೆ ಬರಿಲಿಯ ಸಜ್ಜದ್ ಅಹಮ್ಮದ ದುರು, ಉಪಸೂಚನೆಯೊಂದನ್ನು ತರುತ್ತಾ ಕಾಂಗ್ರೆಸು ತಪ್ಪು ದಾರಿ ಹಿಡಿದಿದೆಯೆಂದೂ ಅದು ಲೀಗಿನೊಡನೆ ರಾಜಿಮಾಡಿಕೊಳ್ಳತಕ್ಕದೆಂದೂ ಸೂಚಿಸಿದರು.

ಕೊನೆಗೆ ಈ ವಿಷಯದಲ್ಲಿ ಸಯ್ಯದ್ ಅಲಿ ಮಹಮ್ಮದರು ಮುಂದಿಟ್ಟ ಉಪಸೂಚನೆಯು ಮಂಜೂರಾಯಿತು. ಅದರಲ್ಲಿ ಸತ್ಯಾಗ್ರಹದಿಂದ ಮುಸಲ್ಮಾನರಿಗೆ ಹಾಗೂ ಅಲ್ಪಸಂಖ್ಯಾಕರಿಗೆ ಹಾನಿಯುಂಟೆಂದೂ, ಗಾಂಧಿಜಿಯು ಲೀಗಿನೊಡನೆ ರಾಜಿಮಾಡಿಕೊಳ್ಳದೆ ಕೂಡಲೆ ಆಂದೋಲನವನ್ನು ಆರಂಭಿಸಿದ್ದು ತಪ್ಪೆಂದೂ, ಬ್ರಿಟಿಷ ಸರಕಾರವು ಕಾಂಗ್ರೆಸಿನೊಡನೆ ರಾಜಿಮಾಡಿಕೊಂಡಲ್ಲಿ ಅದನ್ನು ಲೀಗು ಸರ್ವ ವಿಧದಿಂದಲೂ ವಿರೋಧಿಸುವುದೆಂದೂ ಸಾರಲಾಗಿದೆ.

ಮತ್ತೆ ಜಿನ್ನರು ಗಾಂಧಿಜಿಯವರ ವಿಷಯವಾಗಿ ಬಹಳ ಕರ್ಕಶವಾದ ಕ್ರ... ಗೆಬ್ಬಿಸಿದರು. ಗಾಂಧಿಜಿ ಹಿಂದೂ ರಾಜ್ಯಕ್ಕಾಗಿ ಹೋರಾಡುವವರೆಂದರು. ಗಾಂಧಿಜಿಯವರು ಕೇಳುವ ವಾಕ್ ಸ್ವಾತಂತ್ರ್ಯವನ್ನು ಯಾವುದೇ ಸರಕಾರವಾದರೂ ಕೊಡಲಸಾಧ್ಯವಿಲ್ಲವೆಂದರು. ಪಾಕಿಸ್ಥಾನವು ಲೀಗಿನ ಉದ್ದೇಶಸಾರವೆಂದು ಹೇಳಿದರು.

ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಇಂದು ಜಾತಿಮತಗಳ ಭಿನ್ನಭಾವ ಮರೆತು ಭಾರತೀಯರು ನ್ಯಾಯಮಾರ್ಗದಿಂದ ಹೋರಾಡಬೇಕಾದ ಸಂದರ್ಭದಲ್ಲಿ, ಲೀಗಿನ ಅಪಸ್ವರದಿಂದ ನಿಜವಾಗಿಯೂ ಕೆಡುಕಿದೆ. ಈಗಾಗಲೇ ಅಲ್ಲಲ್ಲಿ ಹಿಂದೂ ಮುಸ್ಲಿಂ ಜಗಳಗಳು ತಲೆಯೆತ್ತಿವೆ. ದೇಶದಲ್ಲಿ ಪ್ರಭಾವಶಾಲಿಗಳಾದ ಜನಪ್ರಿಯರಾದ ಮುಖಂಡರಲ್ಲಿ ಹಲವರು ಇಂದು ಸೆರೆಮನೆಯೊಳಗೆ ಸೇರಿರುವಾಗ ಮುಸ್ಲಿಂ ಲೀಗು ತಲೆಯೆತ್ತಿಕೊಂಡು ಗಲಭೆ ಹುಟ್ಟಿಸುವಂತಾಗಿದೆ. ಜನತೆಗಾದರೂ ತಮ್ಮ ನಿಜವಾದ ನಾಯಕರು ಇಲ್ಲದಿರುವಾಗ ... ದಲ್ಲಿ ಸಂದೇಹಗಳು ಉಂಟಾಗಿ ಅನರ್ಥ ... ವೊದಗುವುದು ಸಾಧ್ಯವಿದೆ. ಇದೇ ಸಮಯವನ್ನು ಸಾಧಿಸಿಕೊಂಡು ಹಲವರು ತಮ್ಮ ಮಾಟವನ್ನು ನಡೆಸಲು ಸೊಂಟ ಕಟ್ಟಿದ್ದಾರೆ. ಕಾಂಗ್ರೆಸು ಹೂಡಿದ ಇಂದಿನ ಸತ್ಯಾಗ್ರಹಕ್ಕೆ ಅಪ್ರತ್ಯಕ್ಷ ಸಂಬಂಧಿ ... ಜಿನ್ನರ ಮುಸ್ಲಿಂ ಲೀಗು ಹೀಗೆ ನಿರ್ಣಯ ಮಾಡಿರುವುದರಲ್ಲಿ ಇಂತಹ ಅಭಿಪ್ರಾಯ ... ಅಡಕವಾಗಿಲ್ಲವೆಂದು ಹೇಗೆ ಹೇಳಬಹುದು?

ತಾತ್ಕಾಲಿಕವಾಗಿ ಜಿನ್ನಮಂಡಳಿಯು ದೇಶದ ಪ್ರಗತಿಗೆ ಹೀಗೆ ಆತಂಕತರಲು ಸಮರ್ಥವಾಗಬಹುದು. ಆದರೆ ಇಂತಹ ಸಂಕುಚಿತ ರೀತಿಯು ರಾಷ್ಟ್ರೀಯ ಜೀವನದಲ್ಲಿ ಪರಿಣಾಮಕಾರಿಯಾದ ಫಲಿತಾಂಶವನ್ನು ಕೊಡಲಾರದು. ಜಿನ್ನರ ಪಾಕಿಸ್ಥಾನಕ್ಕೆ ಸರ್ ಸಿಕಂದರ ಹಯಾತರಂತಹ ಮುಖಂಡರ ಸಮ್ಮತವಿಲ್ಲ. ಮುಸ್ಲಿಂ ಬಹುಮತವಿರುವ ಗಡಿನಾಡು ಪಂಜಾಬು ಮತ್ತು ಸಿಂಧಗಳಲ್ಲಿಯೂ ಲೀಗಿನ ಮಾತಿಗೆ ಬೆಂಬಲವಿಲ್ಲ. ಹೀಗಾಗಿ ಭಾರತದ ರಾಜಕೀಯದಲ್ಲಿ ಹಾಗೂ ಭಾರತದ ಜನತೆಯಲ್ಲಿ ಮತ್ತು ಬ್ರಿಟಿಷ ಸರಕಾರದ ವಿಷಯದಲ್ಲೇ ಆಗಲಿ ಜಿನ್ನರ ಪ್ರಭಾವವು ಅಷ್ಟೇನೂ ಗಣನೀಯವಾಗಿ ನಿಲ್ಲಲು ಸಾಧ್ಯವಿಲ್ಲ. ಲೀಗಿನ ಇಂದಿನ ನಡತೆ ಭಾರತದ ಬಿಕ್ಕಟ್ಟಾಗಿ ತೊಂದರೆಯನ್ನುಂಟುಮಾಡಲು ಸಾಕಾಗಿದೆಯಾದರೂ ಜಿನ್ನರ ಹಾಗೂ ಅವರ ಮಂಡಳಿಯ ... ವಿರೋಧಗಾಮಿ ಧೋರಣೆಯನ್ನು ... ತಿ ಪಕ್ಷದ ಮುಸಲ್ಮಾನರು ... ಬಂದು ನಿಷೇಧಿಸದಿರಲಾರರೆಂದು ... ತವಾಗಿ ತಿಳಿದುಕೊಳ್ಳಬಹುದು. ಜಿನ್ನರ ಹಾಗೂ ಅವರ ಮಂಡಳಿಯ ಇಂದಿನ ಇಂತಹ ವರ್ತನೆಗಳೇ ಮುಂದಿನ ಅವರ ರಾಜಕೀಯ ಪತನಕ್ಕೆ ನೆಲೆಯಾಗಿ ಪರಿಣಮಿಸುವವು.

ಹಿಟ್ಲರನನ್ನು ಎದುರಿಸಲು ಅಹಿಂಸೆಗೆ ಸತ್ವವಿದೆ.

ಗಾಂಧಿಜಿ ಹೇಳುತ್ತಾರೆ

ಸತ್ಯಾಗ್ರಹಿಗಳಲ್ಲಿ ಕಪಟಿಗಳು ಇರಬಹುದು. ಆದರೆ, ಬಹುಮಂದಿ ಪ್ರಾಮಾಣಿಕರಾಗಿರುವರು.

— ಮಹಾತ್ಮರ ಲೇಖನ —

ಮಹಾತ್ಮಾ ಗಾಂಧೀಜೀಯವರ ಅಹಿಂಸಾ ತತ್ವದ ಕುರಿತು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ನೊಡಿದ ಟೀಕೆಗೆ ಪ್ರತ್ಯುತ್ತರವಾಗಿ ಬರೆದ ಪತ್ರದಲ್ಲಿ ಗಾಂಧೀಜೀಯವರು [illegible] ಅಹಿಂಸೆಯಲ್ಲಿ ತನಗಿರುವ ನಂಬಿಕೆಯನ್ನು [illegible] ಹಿಟ್ಲರನ ಉಕ್ಕಿನ [illegible] ಅದರಲ್ಲಿ [illegible] ದೃಢಪಡಿಸುತ್ತಾರೆ.

'ಪತ್ರದ ವಿವರವು ಹೀಗಿದೆ.

'ಫೆಬ್ರುವರಿ ತಾ. ೭ರ ಸಂಚಿಕೆಯಲ್ಲಿ ತಮ್ಮ ಮನಃಪೂರ್ವಕವಾಗಿ ಪ್ರಶ್ನೆ ಎಸೆದ ಮಾತುಗಳು ಉತ್ತರವನ್ನು ಅಪೇಕ್ಷಿಸುತ್ತವೆ.

'ನಿಮ್ಮಲ್ಲಿ ಅನುಮಾನವಿರುವುದಾದರೂ, ಅತ್ಯಂತ ಹೀನ ಮಾನವ ಪ್ರಕೃತಿಯೂ ಅಹಿಂಸೆಗೆ ತಲೆಬಾಗುವುದರಲ್ಲಿ ನನಗಿರುವ ವಿಶ್ವಾಸಕ್ಕೆ ನಾನು ಅಂಟಿಕೊಂಡಿರಲೇ ಬೇಕು. ಎಲ್ಲಾ ವಿರೋಧವನ್ನು ಜಯಿಸ [illegible] ಅಹಿಂಸೆಯು. [illegible] ಅಹಿಂಸೆಯ ಆ ವಿಧಾನವನ್ನು ಕುರಿತಾಗಿ ಇತರರು ಕಲಿತು ಯಾಗಿ ಮಾಡಿಕೊಳ್ಳುವರೆಂಬ ಎಣಿಕೆಯಿಂದ ನಾನು ಸ್ವತಃ ಹೇಳದಿರುವುದು. ಹೆಚ್ಚಿನ ಮಟ್ಟಿಗೆ ಸಂಭವನೀಯವು. ಆದರೆ ನಾನೆಂದಿಗೂ ಅಹಿಂಸೆಯ ಶಕ್ತಿಯನ್ನು ಕುಂದಿಸಲಾರೆನು. ಇಲ್ಲವೆ "ಅಹಿಂಸೆಗೆ ಸೋತುಹೋಗುವ ಕಠಿಣ ವಿರೋಧಿ ಶಕ್ತಿಯಲ್ಲಿ ಅಪನಂಬಿಕೆಯನ್ನು ಇಡೆನು.

'ನಿಮ್ಮ ಅಪನಂಬಿಕೆಗೆ ಆಧಾರವಾಗಿ ನೀವು ಕೊಟ್ಟ ದೃಷ್ಟಾಂತಗಳು ತೀರಾ ಯುಕ್ತವಲ್ಲವಾದ ಕಾರಣ ಸರಿಹೋಗಲಾರವು. ಜೆಕ್ಕರು ಪೋಲರು ಶಸ್ತ್ರ ಕೆಳಗಿಡುವುದರಿಂದ ಅಗತ್ಯವಾಗಿ ಅಹಿಂಸಾವಾದಿಗಳಾಗುವುದಿಲ್ಲ. ಜೆಕ್ಕರು, ಚೀನರು, ಅಬಿಸೀನಿಯಾನರು ಮತ್ತು ಪೋಲರು ಬಹು ಜಾಣ್ಮೆಯಿಂದ ವರ್ತಿಸುತ್ತಾರೆ. ಆದರೆ ಬಂಡಾಯವಾಗಿಯೂ ಅಹಿಂಸೆಯಿಂದಲ್ಲ. ಅವರು ಜಘನ್ಯವಾಗಿ ಶಸ್ತ್ರಗಳಿಂದ ಹೋರಾಡ ಬಲವರಾಗಿರುತ್ತಿದರೆ

ಅಂತೆಯೇ ಮಹಾತ್ಮರು ತಮ್ಮ ದೇಶದ ಜನರ ಹಿತವನ್ನು ಸಾಧಿಸು[illegible] [illegible] ರಕ್ಷಣೆಯ ಬಗ್ಗೆ [illegible] [illegible] ನಾನಲ್ಲ.

'[illegible] ಅಂತಹ ಸಂದರ್ಭಗಳನ್ನು ಎದುರಿಸಲು ಶಕ್ತಿ [illegible] ಬಲವಿಲ್ಲದವರು ವಿನಾಶಕಾರಕವಾದ [illegible] ಸುಸಜ್ಜಿತವಾದ [illegible] [illegible] ದಕ್ಷಿಣ ಆಫ್ರಿಕದ [illegible] ಉಪಯೋಗಿಸಲ್ಪಟ್ಟಿದೆ. [illegible] ಜಯಪ್ರದವಾಗಿ [illegible] ಮತ್ತು [illegible]

ಸತ್ಯಾಗ್ರಹ ಮತ್ತು ಹಿಟ್ಲರ್

'ನಾನು ಇದ ವರೆಗೆ ಎದುರಿಸಲಿಲ್ಲ [illegible] ಭಯಂಕರ [illegible] [illegible] ಒಂದಾಗ [illegible] ಶಕ್ತಿ [illegible]

[illegible] ಬಗ್ಗೆ ನೀವು ನನ್ನನ್ನು ಕ್ಷಮಿಸುವಿರೆಂದು [illegible] ಸತ್ಯಾಗ್ರಹಿಯನ್ನು [illegible] ಕೊಲ್ಲುವ ಸಂಭವವು [illegible] ಹಿಂದೂದೇಶವು ಅಂತಹ ಕ್ಷುದ್ರಕಾರಕ ಸಂಸ್ಥೆಯನ್ನು ಹೊಂದಬೇಕೆಂದಾದರೆ [illegible] ಸತ್ಯಾಗ್ರಹಿಗಳು ವಿನಾಶಕಾರಕನ [illegible] ಹೃದಯ [illegible] ಎದುರಿಸಬೇಕಾಗಿದೆ. ಆದ ಸತ್ಯಾಗ್ರಹಿಗಳಿಗೆ [illegible] ಅನುಭವವಾಗಬಹುದು [illegible] ಸತ್ಯಾಗ್ರಹಿಗಳು [illegible] ಕಥೆಗಳಲ್ಲಿ ಇಲ್ಲದೆ [illegible] ಚರಿತ್ರೆಯಲ್ಲಿ [illegible] [illegible]

'ನನ್ನ ಪಕ್ಷದಲ್ಲಿರುವ ಅಹಿಂಸಾವಾದಿ ಅಪ್ರಾಮಾಣಿಕತನದ ಮೇಲೆ ನೀವು ಸಂಶಯಪಡುವಾಗ [illegible] ಇನ್ನಷ್ಟು [illegible] ನೀವು ಪೂರ್ವನಿರ್ಣಯವನ್ನು [illegible]

[illegible]ರಿಗೆ ತಂದುಹಾಕಬಹುದು. ನನ್ನ ಕ್ಷಣಿಕ ದೌರ್ಬಲ್ಯವಲ್ಲದಿದ್ದರೆ ಪೂನಾ ನಿರ್ಣಯವು ಮಂಜೂರಾಗುತ್ತಿರಲಿಲ್ಲ. ಪ್ರಾಮಾಣಿಕತನದ ಅಭಾವ ಇಲ್ಲವೆ ದೋಷಯುಕ್ತವಾದ ಅಹಿಂಸೆಯು ವಿಷಯದಲ್ಲಿ ಭವಿಷ್ಯತ್ತೇ ಸತ್ಯಾಗ್ರಹಿಗಳು [illegible] ಸಾಧ್ಯವಿರ [illegible] ಎಂದು [illegible] ಮಾತ್ರ [illegible] ಅಹಿಂಸಾ [illegible] ಕಾಲದಲ್ಲಿ ಎಲ್ಲ ವಿಧದ ಉಗ್ರತೆಯನ್ನು ವಹಿಸಲಾಗಿದೆ. ಕಪಟಿಗಳು [illegible] ಸೇರಿದ್ದಾರೆಂದು ನಾನು ಒಪ್ಪುತ್ತೇನೆ. ಆದರೆ ಬಹುಮಂದಿಯು [illegible] ಅಹಿಂಸಾತ್ಮಕ [illegible] ಎನಿಸುತ್ತೇನೆ.

'ಕಾಂಗ್ರೆಸ್ ಅಧ್ಯಕ್ಷರು ತಮ್ಮ ಅಹಿಂಸೆಯ [illegible] ದ ವಾರ್ತಾಪಾದಿಗಳಾಗಿದ್ದಾರೆ. [illegible] ಅವರ [illegible] [illegible] ಅವರು [illegible] ಅವರ ಅಹಿಂಸೆಯು [illegible] ಶುದ್ಧವಾಗಿದೆ [illegible] ಅಹಿಂಸಾತ್ಮ (ಇನ್ನೊಂದು ಪುಟ ನೋಡಿರಿ)

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ

ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಮುದ್ರೆಯನ್ನು ಮತ್ತು ಗೊನೊಕಿಲರ್ ಎಂಬ ಹೆಸರು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತವೆ. [illegible] ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಸೋರುವುದು, [illegible] ಮೂತ್ರ ಸಣಸಣನೆಯಾಗಿ ಹೋಗುವುದು ಮತ್ತು ಉರುಪು ಹೀಳುವುದು ಮೂತ್ರ ಮಾರ್ಗದ ಒಳಗೆ ಆಗಿರುವ ಗಾಯ ಅಥವಾ [illegible] ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ ಗೊನೊಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲ ನಾಶವಾಗುವುವು.

ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ 3-0-0 (ವಿ. ಪಿ ಚಾರ್ಜು 8 ಆಣೆ ಬೇರೆ) ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer: Dr. D. N. JASANI, 4 (S.B.M.) Vithalbhai Patel Road, BOMBAY

Madras Agent Appah & Co, China Bazar Madras.

ಎಣ್ಣೆ ಬೇಕೇ ಜಪಾನ್ ನಿನಗೆ?

ನೆದರ್‌ಲೆಂಡ್ ಹಂಗಿಸಿಬಿಟ್ಟಿತು

ಜಪಾನು ರಾಯಭಾರಿಗೆ ಭಾರೀ ಅಪಮಾನ

ನೆದರ್‌ಲೆಂಡ್ ಎಂದು ಕರೆಯಲ್ಪಡುವ ಶಾಂತಸಾಗರದೊಳಗಿನ ಡಚ್ ಇಂಡೀಸ್ ದ್ವೀಪಗಳಲ್ಲಿ ಎಣ್ಣೆಯು ಈಗ ಅಗತ್ಯ ಬೇಕು. ಅದು ಇಲ್ಲದೆ ಆಧುನಿಕ ಯುದ್ಧಗಳು ಮುಂದೊತ್ತುವ ಹಾಗೇ ಇಲ್ಲ. ಆದ್ದರಿಂದ ಜಪಾನು ನಾನಾ ತರದ ಸೋಗುಹಾಕಿಕೊಂಡು ಡಚ್ ಇಂಡೀಸ್‌ಗಳೊಡನೆ ಪ್ರೇಮವ್ಯವಹಾರಕ್ಕೆ ಆರಂಭಿಸಿತು. ಆದರೆ ಹೋದಾಗಲೆಲ್ಲ ತಿದರ ಮುಖಭಂಗವಾಯಿತೆಂದು ಅಮೇರಿಕದ ಒಂದು ಪತ್ರಿಕೆಯು ಬರೆದಿದೆ.

ರಾಯಭಾರಿಯ ನೇಮಕ

ಮೊತ್ತಮೊದಲು ವ್ಯಾಪಾರದ ಒಂದು ಕರಾರು ಮಾಡಿಕೊಳ್ಳುವುದಕ್ಕೋಸ್ಕರ ಜಪಾನು ಜನರಲ್ ಕುನಿಯಾಕಿ ಕೊಇಸೋ ಎಂಬಾತನನ್ನು ಈ ದ್ವೀಪಗಳಿಗೆ ರಾಯಭಾರಿಯನ್ನಾಗಿ ನೇಮಿಸಿತು. ಆವರೆ ಹಿಂದೊಮ್ಮೆ ಇದೇ ಮನುಷ್ಯ ಈ ದ್ವೀಪಗಳ ಸಂಚಾರಮಾಡಿ ಹಾಲನ್ನುಂಡು, ಜಪಾನಿಗೆ ಮರಳಿದ ತರುವಾಯ ಈ ದ್ವೀಪಗಳನ್ನು ಬಾಯಿ ತುಂಬಾ ತೆಗಳಿ ನಿಂದಿಸಿದ್ದನು. ಆದ್ದರಿಂದ ಆತನು ಬರುವುದೇ ಬೇಡವೆಂದು ನೆದರಲೆಂಡ ಸರಕಾರವು ಸ್ಪಷ್ಟ ಉತ್ತರವನ್ನು ಕೊಟ್ಟಿತು. ಆ ಮೇಲೆ ಜಪಾನು ಇಚಿಜೋ ಕೊಬಯಾಶಿ ಎಂಬ ವಾಣಿಜ್ಯ ಮಂತ್ರಿಯನ್ನು ಅಲ್ಲಿಗೆ ರಾಯಭಾರಿಯಾಗಿ ಕಳುಹಿಸಿಕೊಡಬೇಕಾಯಿತು.

ದುರದೃಷ್ಟ

ನೆದರಲೆಂಡಿನ ಗವರ್ನರ ಜನರಲನು ಈ ರಾಯಭಾರಿಯನ್ನು ಒಂದು ಸಮ್ಮಾನದ ಊಟಕ್ಕೆ ಕರೆಸಿದ್ದನು. ಆಮಂತ್ರಿತರು ಇಂಥ ಊಟಗಳಿಗೆ ಯುರೋಪಿಯನ್ ಉಡಿಗೆಯಲ್ಲಿ ಹೋಗಬೇಕೆಂಬುದು ಆ ಸರಕಾರದ ನಿಯಮ. ಹೀಗಿದ್ದರೂ ಕೂಡ ರಾಯಭಾರಿಯು ದೇಶೀ ಉಡುಗೆಯಲ್ಲಿ ಹೋಗಲು ನಿರ್ಧರಿಸಿದನು. ಅದು ನೆದರಲೆಂಡ ಸರಕಾರಕ್ಕೆ ತಿಳಿದು ದೇಶೀ ಉಡುಗೆಯಲ್ಲಿ ಬರುವವರಿಗೆ ಭೋಜನಶಾಲೆಗೆ ಪ್ರವೇಶವಿಲ್ಲವೆಂದಿತು. ಬೇರೆ ಉಪಾಯವಿಲ್ಲದೆ ರಾಯಭಾರಿಯು ಯುರೋಪಿಯನ್ ಉಡುಗೆಯಲ್ಲಿ ಹೋಗಬೇಕಾಯಿತು.

ರಾಯಭಾರಿಯೊಂದಿಗೆ ಹೋದ ಕರ್ನಲ್ ಇಟುಸುಮೋ ಇತಿಪೊಟೊ ಎಂಬ ಜಪಾನ ಅಧಿಕಾರಿಯೊಬ್ಬನು ಮಿತಿಮೀರಿ ಕುಡಿದುಬಿಟ್ಟ. ಭೋಜನಾಲಯದಲ್ಲಿ ದೇಶೀ ರಾಜಕುಮಾರನೊಬ್ಬನು ಸೊಂಟಕ್ಕೆ ಕಟ್ಟಿಕೊಂಡ ಚಿಕ್ಕ ಕತ್ತಿಯ ಕಡೆಗೆ ಅವನ ಮನಸ್ಸು ಹರಿಯಿತು. ಅದನ್ನು ತೆಗೆದುಕೊಂಡು ಆಚೆ ಈಚೆ ಬೀಸಿದ. ದೇಶೀಯರಿಗೆ ಈ ಕತ್ತಿಯು ಪ್ರಾಣಕ್ಕಿಂತಲೂ ಪವಿತ್ರವಾದದ್ದು. ಶ್ರದ್ಧಭಕ್ತಿಗಳಿಂದ ಪೂಜಿಸಿ ಯಾರು ಅದನ್ನು ಉಪಯೋಗಿಸುವುದಿಲ್ಲವೋ ಅವರಿಗೆ ಅಪಮೃತ್ಯು ಬರುವುದೆಂಬುದು ದೇಶೀಯರ ವಿಶ್ವಾಸ. ಅದರಂತೆ ಒಂದು ದಿನ ಈ ಜಪಾನಿ ಅಧಿಕಾರಿ ಥಕ್ಕನೆ ನೆಲಕ್ಕೆ ಬಿದ್ದು ರಕ್ತಕಾರಿ ಸತ್ತ. ಕರ್ಮದ ಫಲವೆಂದು ದೇಶೀಯರು ಆಡಿಕೊಂಡರು.

ಬಹಿಷ್ಕಾರ

ರಾಯಭಾರಿ ಕೊಬಯಾಶಿಗೆ ಜರ್ಮನ್ ಅಲ್ಲದೆ ಬೇರೆ ಯಾವ ದೇಶೀಯ ಭಾಷೆಯೂ ಬರುತ್ತಿದ್ದಿಲ್ಲ. ನೆದರಲೆಂಡ ಸರಕಾರವು ಆ ಭಾಷೆಯಲ್ಲಿ ಮಾತುಕತೆ ನಡೆಸಲಿಕ್ಕೆ ತಿರಸ್ಕರಿಸಿತು. ಅಲ್ಲಿಯ ರಾಜಕಾರಣಗಳಲ್ಲಿ ಜರ್ಮನ್ ಭಾಷೆಗೆ ಪ್ರವೇಶವಿಲ್ಲವೆಂದು ಸರಕಾರದ ಅಧಿಕಾರಿಗಳು ಹೇಳಿದರು, ಯಾಕೆಂದರೆ ಅದು ಯೂರೋಪಿನ ಅವರ ಪರಮ ಶತ್ರುಗಳ ಭಾಷೆ. ಕೊನೆಗೆ ಕಾರ್ಯಕಲಾಪಗಳು ಇಂಗ್ಲಿಷಿನಲ್ಲಿ ನಡೆದುವು. ಕೊಬಯಾಶಿಗೆ ಒಂದು ಮಾತೂ ತಿಳಿಯಲಿಲ್ಲ. ಸ್ವಲ್ಪ ಸಮಯವನ್ನು ಅವನು ನಿದ್ದೆಯಲ್ಲಿ ಕಳೆದನು, ಉಳಿದ ಸ್ವಲ್ಪವನ್ನು ಜಪಾನಿ ಭಾಷೆಯಲ್ಲಿ ಈ ಅಧಿಕಾರಿಗಳನ್ನು ಬೈಯುತ್ತ ಕಳೆದ.

ಸಭೆ ಕೂಡಿದಾಗ ಕಾರ್ಯಕ್ರಮವಿದೆಯೋ? ಎಂದು ರಾಯಭಾರಿಯನ್ನು ಪ್ರಶ್ನಿಸಿದರು. ಅವನು ಇಲ್ಲವೆಂದ. ಕಾರ್ಯಕ್ರಮವಿಲ್ಲದೆ ನಾವು ಸಭೆ ಕೂಡುವುದಿಲ್ಲ ಎಂದು ಅಧಿಕಾರಿಗಳು ಹೇಳಿದರು. ಆಗ ರಾಯಭಾರಿ 'ನಮಗೆ ಎಣ್ಣೆಬೇಕು—೩೮೦೦೦೦೦ ಟನ್ನುಗಳಿಗೆ ಕಡಿಮೆಯಾಗದಷ್ಟು. ಅದಕ್ಕಾಗಿ ಬಂದಿದ್ದೇವೆ ಎಂದ. ಅವನ ದರ್ಪಪೂರ್ಣ ಮಾತಿಗೆ ಅಧಿಕಾರಿಗಳು ಚೆನ್ನಾಗಿಯೇ ಉತ್ತರಕೊಟ್ಟರು. 'ಓಹೋ! ನೀವು ಇಲ್ಲಿಗೆ ಬಂದುದು ತಪ್ಪಾಯಿತು. ನಾವು ಎಣ್ಣೆ ಸಾಹುಕಾರರಲ್ಲ, ಸರಕಾರದ ಅಧಿಕಾರಿಗಳು. ಎಣ್ಣೆ ಬೇಕಾಗಿರುವುದಾದರೆ, ನೀವು ವ್ಯಾಪಾರಿಗಳೆದ್ದಲ್ಲಿಗೆ ಹೋಗಿ!' ಬೈದ ಬಾಯಿಗೆ ಹೊಡೆದ ಪೆಟ್ಟಾಯಿತು. ಸಾವಮಾನ್ಯ ಒಬ್ಬ ಗಿರಾಕಿಯಂತೆ ರಾಯಭಾರಿ ಎಣ್ಣೆ ವ್ಯಾಪಾರಿಗಳಿದ್ದಲ್ಲಿಗೆ ಹೋಗಿ ವ್ಯಾಪಾರದ ಪ್ರಸ್ತಾಪವನ್ನು ಎತ್ತಬೇಕಾಯಿತು. ಕೊಬಾಶಾಯಿ ಭಗ್ನಮನೋರಥನಾಗಿ ಜಪಾನಿಗೆ ಮರಳಿದ.

ವಿಮಾನಕ್ಕೆ ಎಣ್ಣೆ ಇಲ್ಲ

ಎಣ್ಣೆ ಕಂಪೆನಿಗಳೊಡನೆ ಕರಾರು ಮಾಡಿಕೊಳ್ಳುವುದು ಜಪಾನಿಗೆ ಕಷ್ಟವಾಯಿತು. ಜಪಾನಿಗೆ ಬೇಕಾದಷ್ಟು ಎಣ್ಣೆಯನ್ನು ಯಾವ ಕಂಪೆನಿಯೂ ಕೊಡಲೊಪ್ಪಲಿಲ್ಲ. ಜಪಾನಿಗೆ ವಿಮಾನದೆಣ್ಣೆಯು ಅತ್ಯಗತ್ಯ ಬೇಕಾಗಿತ್ತು. ಅದನ್ನೇ ಕಂಪೆನಿಯವರು ಕೊಡುವುದಿಲ್ಲ ಎಂದರು. ಕೊಟ್ಟ ಎಣ್ಣೆಯ ಕ್ರಯವನ್ನು, ಜಪಾನು ತನ್ನ ದೇಶದ ಯೆನ್ ನಾಣ್ಯಗಳ ಮೂಲಕ ಕೊಡುವೆನೆಂದಿತು. ವ್ಯಾಪಾರಿಗಳು ಅದಕ್ಕೂ ಒಪ್ಪಲಿಲ್ಲ. ಮತ್ತೆ ಡಾಲರುಗಳನ್ನು ಕೊಟ್ಟೇ ಜಪಾನು ಎಣ್ಣೆಕೊಂಡಿತು. ೧೧,೪೦,೦೦೦ ಟನ್ ಶುದ್ಧಮಾಡಿದ ಚಿಮಣಿ ಎಣ್ಣೆ, ೭೬೦೦೦ ಟನ್ ಕ್ರೂಡ್ ಎಣ್ಣೆ; ಆದರೆ ವಿಮಾನದೆಣ್ಣೆ ೦ ಟನ್! ಈ ವ್ಯಾಪಾರದ ಕರಾರಿಗೆ ದಸ್ಕತುಹಾಕುತ್ತ ಜಪಾನಿನ ಟಿ. ಮು. ಕಾಯಿಯು—'ಟೋಕಿಯೋಕ್ಕೆ ಹೋದ ಮೇಲೆ ನಾನು ಈ ವಿಷಯವಾಗಿ ಬಹಳ ವಿವರಿಸಬೇಕಾಗುವುದು. ಆದರೂ ಸರಕಾರವು ನಂಬಲಿಕ್ಕಿಲ್ಲ' ಎಂದು ದುಃಖೋದ್ಗಾರ ತೆಗೆದಿದ್ದನಂತೆ!

ಶೀತ ಮತ್ತು ನೆಗಡಿಗಳಿಂದ ದೂರವಾಗಿ

ಜ್ಯಾಂಬಕನ್ನು ಎದೆಗೆ ಚೆನ್ನಾಗಿ ತಿಕ್ಕಿರಿ!

ಜ್ಯಾಂಬಕನ್ನು ಚೆನ್ನಾಗಿ ಎದೆಗೆ ...ುವುದರಿಂದ ಶೀತ, ನೆಗಡಿ ಮತ್ತು ...ವನ್ನು ದೂರವಿರಿಸಿರಿ. ಈ ಅಮು...ವಾದ ಮುಲಾಮಿಗೆ ಎರಡು ತರದ ...ವಿದೆ. ಎದೆಯ ನೋವನ್ನು ಹೋಗ...ಸಿ ಎದೆಯನ್ನು ಸಡಿಲಾಗಿಸುತ್ತದೆ. ಮ... ಜ್ಯಾಂಬಕಿನಲ್ಲಿರುವ ಔಷಧಿಯ ...ಯು ಎದೆಯನ್ನು ಸೇರಿದೊ... ಉಸಿರಾಡಲು ಸುಲಭವಾಗುವುದು. ...ತ್ತು ತಲೆಯ ಭಾರವಾದಂತಿರುವುದೂ ಮಾಯವಾಗುವುದು. ...ಔಷಧವ್ಯಾಪಾರಿಗಳು ಜ್ಯಾಂಬಕನ್ನು ರೂ. 1. ಮತ್ತು ...-0-0ಕ್ಕೆ ಮಾರುತ್ತಾರೆ.

ಏಜಂಟ್ಸ್:

ಮೆಸರ್ಸ್ ದಾದಾ ಮತ್ತು ಕಂಪೆನಿ, ಪಿ. ಬಿ. ಮದ್ರಾಸು

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

THE

BANK OF MANGALORE LTD.,

H. O. MANGALORE.

ESTD. 1931

Branches:-

Moodabidri & Padubidri.

NOTICE

On and from 1st January 1941 the following are the revised rates of interest on deposits:

FIXED DEPOSITS:

For 2 years or over	...	5½%
" 1 "	...	4½%
" 6 months	...	3½%
" 3 months	...	3

Interest Payable Quarterly.

SAVINGS BANK DEPOSITS:

On daily balances on balances over Rs. 5-0-0 in multiples of Rs. 5-0-0 @ 3%.

All kinds of banking business transacted.

ಈ ವಾರದ ಕಥೆ

ದೇವರ ದಾನ

["ಕತೆಗಾರ"]

ಬಾಯಿಬಾರದ ಲಲಿತೆಯನ್ನು ಮದುವೆ ಮಾಡಿಕೊಂಡುದರಿಂದ ಮನೆಯ ಎಲ್ಲ ಜನರಿಗೂ ಬಹಳ ಬೇಸರವಿದ್ದಿತು. ಅಮರನಾಥನಿಗೆ ಮಾತ್ರ ಇದರ ಯಾವ ಗೊಡವೆಯೂ ಇದ್ದಿಲ್ಲ. ಅವನು ಸ್ವೇಚ್ಛೆಯಿಂದ ಆಕೆಯನ್ನು ವಿವಾಹವಾಗಿದ್ದನು. ಅವಳು ಗೃಹಕಾರ್ಯಗಳಲ್ಲಿ ಚತುರೆಯಾಗಿದ್ದಳು. ತುಂಬಾ ಗುಣವಂತಳೂ ಆಗಿದ್ದಳು. ಆದುದರಿಂದ ಬಾಯಿಬಾರದಿದ್ದ ಆ ಒಂದು ವಿಷಯವು ಅಮರನಾಥನಿಗೆ ವ್ಯಸನವನ್ನುಂಟು ಮಾಡಿರಲಿಲ್ಲ.

ಒಂದು ದಿನ ಲಲಿತೆ ಹರಿವಾಣದಲ್ಲಿ ವೀಳ್ಯವನ್ನಿಟ್ಟು ಪತಿಯನ್ನು ಕಾದಿದ್ದಳು. ಅಷ್ಟರಲ್ಲಿಯೇ ಅಮರನಾಥನು ಮೆಲ್ಲಗೆ ಬಂದು ಅವಳ ಹಿಂದೆ ನಿಂತುಕೊಂಡನು. ಅದು ಅವಳಿಗೆ ತಿಳಿಯದಿರಲಿಲ್ಲ. ಅವಳೂ ಅವನಿಗೆ ಸಮ್ಮುಖಳಾಗಿ ನಿಂತು ಮರ್ಯಾದೆಯಿಂದ ನಸುನಕ್ಕಳು. ಮತ್ತೆ ಇಬ್ಬರೊಳಗೆ ಸಂಜ್ಞೆಯಿಂದಲೇ ಏನೋ ಕೆಲವು ಸರಸ ಮಾತುಗಳು ನಡೆದುಬಿಟ್ಟವು. ಅವನು ಹೊರಗೆ ಹೋದನು. ಅವಳು ತನ್ನ ಶಯನಾಗಾರಕ್ಕೆ ನಡೆದಳು.

ಪೇಟೆಯಿಂದ ಮರಳುವಾಗ ಸುಮಾರು ಒಂದು ತಾಸಿನ ಸಮಯವು ಕಳೆದುಹೋಗಿದ್ದಿತು. ಅದರಲ್ಲಿ ಲಲಿತೆ ಅಮರನಾಥನ ಬರವನ್ನು ಕಾಯುತ್ತ ಶಯನಾಗಾರದಲ್ಲಿ ಸುಮ್ಮಗೆ ಬಿದ್ದುಕೊಂಡಿದ್ದಳು. ಬರುವಾಗ ಅವನು ವಸ್ತ್ರದ ಒಂದು ಕಟ್ಟನ್ನೂ ಕೆಲವು ಪುಸ್ತಕಗಳನ್ನೂ ತಂದಿದ್ದನು. ನೋಡಿ ಲಲಿತೆಯ ಕಮಲದಂಥ ಮುಖವು ಚಂದ್ರಬಿಂಬದಂತೆ ಅರಳಿತು. ಅದನ್ನು ನೋಡಿ ಅಮರನಾಥನ ಮೋರೆಯೂ ಪ್ರಫುಲ್ಲಿತವಾಯಿತು. 'ಹಾಗಾದರೆ ನಾಳೆಯಿಂದ ಓದು ಕಲಿಯುವಿಯಲ್ಲವೆ?' ಎಂದವನು ಸಂಜ್ಞೆಯಿಂದ ಕೇಳಿದ. ಅವಳು ಮಂದಹಾಸದಿಂದಲೇ ತಲೆಯಾಡಿಸಿ ತನ್ನ ಪೂರ್ಣ ಸಮ್ಮತಿಯನ್ನು ಕೊಟ್ಟಳು. ವಸ್ತ್ರದ ಕಟ್ಟಿನಲ್ಲಿ ಅವಳಿಗೊಂದು ಸುಂದರವಾದ ಸೀರೆ ಇದ್ದಿತು. ಅದು ಅವಳಿಗೆ ಅಕ್ಷರಾಭ್ಯಾಸದ ಉಡುಗೊರೆ.

ಮರುದಿನ ಒಂದು ಆಮಂತ್ರಣವಿದ್ದುದರಿಂದ ಅಮರನಾಥನು ಮನೆಗೆ ಬರುವಾಗ ರಾತ್ರಿ ಬಹಳ ವೇಳೆಯಾಗಿದ್ದಿತು. ಅಷ್ಟು ಹೊತ್ತಿಗೆ ಎಲ್ಲರೂ ಊಟ ತೀರಿಸಿ ಮಲಗಿದ್ದರು. ಲಲಿತೆಯೂ ಮಲಗಿದ್ದಳು. ಆದರೆ ಅವಳ ಮಾತ್ರ ಊಟವಾಗಿರಲಿಲ್ಲ. ಅಮರನಾಥನು ಶಯನಾಗಾರವನ್ನು ಪ್ರವೇಶಿಸಿ ಅಲ್ಲಿ ಪಲ್ಲಂಗದ ಮೇಲೆ ಮಲಗಿದ್ದ ಲಲಿತೆಯ ಮೋರೆಯನ್ನು ನೋಡಿದ. ಅವಳ ಮನೋಹರ ರೂಪರಾಶಿಯ ಮೇಲೆ ನೆಟ್ಟು ಹೋದ ಅವನ ದೃಷ್ಟಿ ಮತ್ತೆ ಬೇರೆ ಕಡೆಗೆ ಹರಿಯಲಿಲ್ಲ. ನೋಡುತ್ತ ಇದ್ದ. ಹಾಗೆ ಅವನಲ್ಲಿ ಬಗೆಬಗೆಯ ವಿಚಾರಗಳು ಉದ್ಭವಿಸಿದುವು– 'ಪರಮಾತ್ಮನು ಯಾರಿಗೂ ಎಲ್ಲಾ ಸುಖಗಳನ್ನು ಕೊಡುವುದಿಲ್ಲ. ಒಬ್ಬೊಬ್ಬರಿಗೆ ಒಂದೊಂದು ಬಗೆಯ ದುಃಖವು ಇದ್ದೇ ಇರುತ್ತದೆ. ಇದೇ ಅವನ ಸೃಷ್ಟಿಯ ವಿಶೇಷತೆ ಮತ್ತು ಮಹತ್ವವಾಗಿದೆ' ಆಲೋಚಿಸುತ್ತಿದ್ದ ಹಾಗೆ ಲಲಿತೆ ಪಕ್ಕನೆ ಎಚ್ಚತ್ತು ನಿಂತುಕೊಂಡಳು. ಬೆಳ್ದಿಂಗಳ ಪ್ರಕಾಶದಲ್ಲಿ ಉಜ್ವಲ್ಯಮಾನವಾದ ಅವಳ ದಿವ್ಯ ಮುಖಕಮಲವನ್ನು ನೋಡಿ ಅವನು ಹೇಳಿದ–'ಲಲಿತೆ'

ಲಲಿತೆ ಮತ್ತು ಅಮರನಾಥ ಇಬ್ಬರಿಬ್ಬರ ಮನೋಭಾವಗಳನ್ನು ಸಂಪೂರ್ಣವಾಗಿ ತಿಳಿಯಲಾರದವರಾಗಿದ್ದರೂ, ಪ್ರೇಮಪ್ರವಾಹದ ಮೂಲಕ ಅವರ ಎರಡು ಹೃದಯಗಳು ಒಂದಾಗುತ್ತ ನಡೆದಿದ್ದುವು. ಲಲಿತೆ ಗಡಿಯಾರದ ಕಡೆಗೆ ನೋಡಿ–'ಬಂದು ಎಷ್ಟು ಸಮಯವಾಯಿತು?' ಎಂದು ಅವನನ್ನು ಸಂಜ್ಞೆಯಿಂದ ಪ್ರಶ್ನಿಸಿದಳು. ಅವಳ ಪ್ರೇಮವಾತ್ಸಲ್ಯಗಳನ್ನು ನೋಡಿ ಅಮರನಾಥನ ಸಂತೋಷಕ್ಕೆ ಪಾರವುಳಿಯಲಿಲ್ಲ. ಕೈತೊಳೆದಾದ ಮೇಲೆ ಇಬ್ಬರೂ ಊಟಕ್ಕೆ ಹೋದರು.

★

ಲಲಿತೆಯ ಜೀವನವು ಪೂರ್ಣ ಸುಖಮಯವಾಗಲಿ ಎಂಬುದಕ್ಕೋಸ್ಕರ ಅಮರನಾಥನು ಹಿಡಿದು ಓದು ಕಲಿಸಿ ಅವಳನ್ನು ವಿದ್ಯಾವತಿಯನ್ನಾಗಿ ಮಾಡಬೇಕೆಂದಿದ್ದ. ಲಲಿತೆಗೆ ಬಾಯಿ ಬಾರದಿದ್ದುದರಿಂದ ಎಲ್ಲರೂ ದುಃಖಿತರಾಗಿದ್ದರು. ಸ್ವತಃ ಅವಳೂ ದುಃಖಿಯಾಗಿ ಇದ್ದಳು. ಇದು ಅಮರನಾಥನಿಗೆ ಅಸಹನೀಯವಾಗಿದ್ದಿತು. ಅಮರನಾಥನ ಸದಿಚ್ಛೆ ಮತ್ತು ಲಲಿತೆಯ ಪರಿಶ್ರಮದ ಮೂಲಕ ಕೆಲವೇ ದಿನಗಳಲ್ಲಿ ಅವಳು ಓದಲಿಕ್ಕೂ ಬರೆಯಲಿಕ್ಕೂ ಸಮರ್ಥಳಾದಳು.

ಒಂದು ದಿನ ಬೆಳಗ್ಗೆ ಮೋರೆ ತೊಳಕೊಂಡು ಅಮರನಾಥನು ಎಲ್ಲಿಗೋ ಹೋಗಲಿಕ್ಕಿದ್ದನು–ತನ್ನ ಕೋಣೆಯಲ್ಲಿ ಲಲಿತೆ ಒಂದು ಹೂಮಾಲೆಯನ್ನು ಪೋಣಿಸಿ ನಿಂತಿರುವುದನ್ನು ನೋಡಿದ. ಅವಳೊಡನೆ ಒಂದೆರಡು ಮಾತು ಆಡದೆ ಹಾಗೆಯೇ ಹೊರಗೆ ಹೋಗುವುದು ಅವನಿಂದ ಸಾಧ್ಯವಾಗಲಿಲ್ಲ. ಅವನು ಕೋಣೆಯೊಳಗೆ ಹೋದ. ಎಲ್ಲಾ ಸುಖಸಾಮಗ್ರಿಗಳು ಉಪಸ್ಥಿತವಾಗಿರುವವಾದರೂ ಲಲಿತೆ ಜೀವನದ ಒಂದೇ ಒಂದು ಅಭಾವಕ್ಕಾಗಿ ಜೀವಮಾನವೆಲ್ಲ ದುಃಖಿನಿಯಾಗಿರುವಳು. ಪುರುಷನಾದರೋ ತನ್ನ ಸುಖದುಃಖಗಳನ್ನು ಎಲ್ಲರೊಡನೆಯೂ ಹೇಳಿ ಹೋಗುವನು. ಆದರೆ, ಸ್ತ್ರೀ–ಅವಳು ಒಂದೆರಡು ಮಾತುಗಳನ್ನು ಹೇಳಲಿಕ್ಕೂ ಸಂಕೋಚಪಡುತ್ತಾಳೆ. ದುಃಖದ ಪರ್ವತವೇ ಕೆಳಗೆ ಉರುಳಿ ಬಂದು ಬಿದ್ದರೂ ಅವಳು ಮಾತನಾಡದೆ ಮೌನವಾಗಿ ಎಲ್ಲವನ್ನು ಸಹಿಸಿಕೊಳ್ಳುತ್ತಾಳೆ. ಲಲಿತೆಯಾದರೋ ಬಾಯಿಬಾರದವಳು' ಹೀಗೆಂದು ಆಲೋಚಿಸುತ್ತಾ ಒಳಗೆ ಕಾಲಿಡುವಾಗ ಅಮರನಾಥನ ಷರಟಿನಿಂದ ಚೀಟಿಯೊಂದು ಹೊರಟುಹೋಯಿತು. ಮೇಜಿನ ಮೇಲೆ ಬರೆದಿಟ್ಟಿದ್ದ ಪತ್ರವನ್ನು ತೆಗೆದು ಲಲಿತೆ ಅಮರನಾಥನ ಕೈಯಲ್ಲಿಟ್ಟಳು. ಅವನು ಓದತೊಡಗಿದ. ಓದುತ್ತ ಅವನ ಕಣ್ಣುಗಳಿಂದ ದುಃಖಾಶ್ರುಗಳು ಸುರಿಯತೊಡಗಿದುವು. 'ಪ್ರಿಯತಮ! ನಾನು ನಟ್ಟ ಗುಲಾಬಿ ಗಿಡದ ಮೊದಲನೇ ಹೂವಿನಿಂದ ಮಾಡಿದ ಹಾರವಿದು. ಇದನ್ನು ಸ್ವೀಕರಿಸುವಿಯಾದರೆ ನನ್ನ ಸಂತೋಷಕ್ಕೆ ಪಾರವಿರಲಾರದು. ಇಷ್ಟರ ತನಕ ನಾನು ನಿಮಗೆ ಏನು ಕೊಡಲಿಕ್ಕೆ ಕೊಡಬಹುದಾಗಿತ್ತಾದರೂ ಏನನ್ನು? ನೀನು ನನ್ನನ್ನು ಪ್ರೀತಿಸುತ್ತಿರುವುದರಿಂದಲೇ ಪರ್ವತದಂತಿರುವ ದುಃಖವು ನನಗೆ ಅರಳಿನಷ್ಟು ಹಗುರವಾಗಿ ತೋರಿದೆ. ಒಂದೆರಡು ಪ್ರೀತಿಯ ಮಾತುಗಳನ್ನಾಡಿ ತನ್ನ ಪ್ರಿಯತಮನನ್ನು ಸಂತುಷ್ಟನನ್ನಾಗಿ ಮಾಡುವ ಅಲ್ಪ ಸಾಮರ್ಥ್ಯವನ್ನು ಸ್ತ್ರೀಯಲ್ಲಿರುತ್ತದೆ. ನನ್ನಲ್ಲಿ ಆ ಸಾಮರ್ಥ್ಯವೂ ಇಲ್ಲ!'

ಪತ್ರವನ್ನು ಓದುತ್ತ ಅಮರನಾಥನಿಂದ ಸಹಿಸಲಾಗಲಿಲ್ಲ. ಅವನು ಒಂದು ಪತ್ರವನ್ನು ಬರೆದು ಆಕೆಗೆ ಹೇಳಿದ–'ಲಲಿತೆ! ನಾನು ನಿನ್ನಿಂದ ಸುಖವನ್ನಲ್ಲದೆ ಬೇಡೆ. ನೀನು [illegible] ದೇವರಾಣೆಯಾಗಿಯೂ ನಾನು ನಿನಗೆ ಪ್ರಸನ್ನನಾಗಿದ್ದೇನೆ. ಯಾವುದು ಮನುಷ್ಯನ ವಶದಲ್ಲಿ ಇಲ್ಲವೋ, ಅದನ್ನು ಕುರಿತು ಚಿಂತಿಸಿ ಫಲವಿಲ್ಲ. ತನ್ನ ತನ್ನ ಪ್ರಾಪ್ತಿಯಿಂದ ತೃಪ್ತರಾಗಿರುವುದರಲ್ಲಿಯೇ ಮನುಷ್ಯನಿಗೆ ಯಥಾರ್ಥ ಸುಖವು ದೊರೆಯುತ್ತದೆ'

★

ಇಂದು ಲಲಿತೆಗೆ ಒಂದು ಪುತ್ರರತ್ನದ ಲಾಭವಾಗಿದೆ. ಎಲ್ಲರೂ ಪ್ರಸನ್ನಚಿತ್ತರಾಗಿದ್ದಾರೆ. ಆದರೆ ಲಲಿತೆ ಮಾತ್ರ ಮ್ಲಾನವದನಳಾಗಿರುವಳು. ಅವಳ ಬಾಡಿದ ಮೋರೆಯನ್ನು ನೋಡಿ ಅಮರನಾಥ ಕೇಳಿದ–'ಲಲಿತೆ! ಯಾವ ಅಜ್ಞಾತ ಭಯದಿಂದ ಪೀಡಿತಳಾಗಿರುವಿ?' ದುಃಖಭಾರದಿಂದ ಮೆಲ್ಲಮೆಲ್ಲಗೆ ಬರೆದಳು– 'ನನ್ನಂತೆ ಈ ಮಗುವೂ ಬಾಯಿಬಾರದಾಗುವುದಾದರೆ. ಅದು ನನ್ನನ್ನು 'ಅಮ್ಮಾ!' ಎಂದು ಕರೆಯಲೊಲ್ಲದ ಇದೇ ದುಃಖವು'

ಅಮರನಾಥ ಅವಳಿಗೆ ಧೈರ್ಯ ಕೊಟ್ಟು, ಬಹಳ ಸಮಜಾಯಿಸಿದ. ಅವಳು ಭವಿಷ್ಯದ ಚಿಂತೆಯನ್ನು ಮರೆಯ ಪ್ರಯತ್ನಿಸಿದಳು. ಪ್ರಸನ್ನಳಾಗಿ ಇರಹತ್ತಿದಳು. ಅಮರನಾಥನು ಯಾವ ಮಾತಿನ ಧೈರ್ಯ ಕೊಟ್ಟಿದ್ದನೋ, ಏನೆಂದು ಸಮಜಾಯಿಸಿದ್ದನೋ, ಕೊನೆಗೆ ಅದುವೇ ಆಯಿತು. ಒಂದು ದಿನ ಶುಭ ಮುಹೂರ್ತದಲ್ಲಿ ಅವರ ಮಗು 'ಅಮ್ಮಾ ಅಮ್ಮಾ' ಎಂದು ತಾಯಿಯನ್ನು ಕರೆಯಿತು. ಮಗುವಿನ ಆರಂಭದ ಈ ನುಡಿಗಳನ್ನು ಕೇಳಿ ಎಲ್ಲರಿಗೆ ದಿವ್ಯಾನಂದವು ಪ್ರಾಪ್ತವಾಯಿತು. ಲಲಿತೆಯ ಪರಮ ಸಾಧನೆ ಮತ್ತು ಅಮರನಾಥನ ದೀನರ ಪ್ರೇಮ ಇವುಗಳ ಫಲವೇ ದೇವರ ವರದಾನವಾಗಿ ಅವರಿಗೆ ಈ ಮಗುವು ಹುಟ್ಟಿತೆಂದು ಎಲ್ಲರ ಬಾಯಿಯಿಂದ ಮಾತುಗಳು ಹೊರಟವು.

ಡೋಂಗರೆ ಬಾಲಾಮೃತವು



ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಢಾಳಿಗಾರರ ಕೈಯಲ್ಲಿ ಕಲೆಯ ಕೊಳೆ!

ನೆಪೋಲಿಯನನ ಲೂಟಿ! ಅಲೆಕ್ಸಾಂಡರನ ಸುಲಿಗೆ!
ಹಿಟ್ಲರನ ಲಾಭದೃಷ್ಟಿ!
ಯುದ್ಧದಿಂದ ಕಲೆಗಾಗುವ ಹಾನಿ!

ಚಾರಿತ್ರಿಕ ವಿಷಯಗಳು, ವೈಜ್ಞಾನಿಕ ಕಾರ್ಯಗಳು ಮತ್ತು ಕಲಾವಿಶೇಷಗಳು ಢಾಳಿಗಾರರ ಸುಲಿಗೆಯ ವಸ್ತುಗಳಾಗಿವೆ. ನೆಪೋಲಿಯನನು ಕಲಾಭಿರುಚಿಯುಳ್ಳವನಲ್ಲವಾಗಿದ್ದರೂ, ಇಟಲಿಯ ಮೂಸಿಯುಮಿನಿಂದ ಬೇಕಾದಷ್ಟು ಅಮೂಲ್ಯ ವಸ್ತುಗಳನ್ನು ಕೊಂಡೊಯ್ದು ತುಂಬಾ ಹಣವನ್ನು ಗಳಿಸಿದನು. ಇದರಲ್ಲಿ ಆತನಿಗೆ ಲಾಭಮಾಡುವ ದೃಷ್ಟಿಯೇ ವಿಶೇಷವಾಗಿತ್ತು. ಇಂದು ಹಿಟ್ಲರನು ಹಿಂದೆ ನೆಪೋಲಿಯನನು ಹಾಕಿದ ಹೆಜ್ಜೆಯನ್ನೇ ಅನುಸರಿಸುತ್ತಿರುವನಾಗಿ ಸುದ್ದಿ ಕೇಳುತ್ತಿದೆ. ತಾನು ಆಕ್ರಮಿಸಿದ್ದ ರಾಷ್ಟ್ರಗಳಲ್ಲಿ ಸಿಕ್ಕಿದ ಕೆಲವು ಅಮೂಲ್ಯ ವಸ್ತುಗಳನ್ನು ಅಮೇರಿಕದಲ್ಲಿ ಮಾರಾಟ ಮಾಡಿ ಹಣ ಮಾಡುವ ಹಂಚಿಕೆಗಳನ್ನು ಆತನೂ ಮಾಡುತ್ತಿರುವನೆಂದು ವಾರ್ತೆ.

ಈಜಿಪ್ಟಿನ ಖೆಡಿವನ ಕಾಣಿಕೆಯಾದ ಸುಪ್ರಸಿದ್ಧ ಒಬೆಲಿಸ್ಕನ್ನು ಪ್ಯಾರಿಸಿನ ಅರಮನೆಯಿಂದ ಹಿಟ್ಲರನು ಲೋಳಿಯಲ್ಲಿ ಹಾಕಿ ಜರ್ಮನಿಗೆ ಒಯ್ದಿರುವನೆಂದು ಈಗ ಸುದ್ದಿಯುಂಟು. ಅದರ ಕಲಾಕುಶಲತೆಯನ್ನು ಪರಿಶೀಲಿಸಲು ಕಲಾಭಿಮಾನಿಯಾದ ಹಿಟ್ಲರನು ಜರ್ಮನಿಗೊಯ್ದಿರಬಹುದೇ ಎಂದು ಹಲವರು ಶಂಕಿಸಬಹುದು. ಆದರೆ ಅದರ ನಿಜಸ್ಥಿತಿಯು ಹಿಟ್ಲರನಿಗೂ, ಆತನ ಗುಟ್ಟನ್ನು ತಿಳಿದ ರಾಜನೀತಿಜ್ಞರಿಗೂ ಗೊತ್ತು. ಇಂದಿನ ಈ ಯುದ್ಧಕಾಲದಲ್ಲಿ ಕಲಾವಿಷಯಗಳನ್ನು ನೋಡಿ ಆನಂದಪಡಲು ಕಲಾಭಿರುಚಿಯಿದ್ದರೂ ಸಮಯವಿಲ್ಲದ ಹಿಟ್ಲರನು, ಅದರಿಂದ ಏನಾದರೂ ಲಾಭವಪಡೆಯುವ ತೀವ್ರ ಆಲೋಚನೆಯಲ್ಲಿರುವನಾಗಿ ಎಲ್ಲರೂ ತಿಳಕೊಂಡಿದ್ದಾರೆ.

ಇತ್ತೀಚೆಗೆ ಭೂಲೋಕದ ಅನೇಕ ಸುಪ್ರಸಿದ್ಧ ಕಲಾಕೃತಿಗಳು ಸಂಚಾರಕ ಪರಿಸ್ಥಿತಿಯಲ್ಲಿವೆ. ಸಣ್ಣ ಬಾಲಕರು, ಅಟಪ ಸಾಮಗ್ರಿಗಳಿಗೆ ಎಷ್ಟರಮಟ್ಟಿಗೆ ಆಶೆಗೊಳ್ಳುತ್ತಾರೋ, ಅದಕ್ಕಿಂತಲೂ ವಿಶೇಷ ಆಶೆಯಿಂದ, ಇಂದು, ಯುದ್ಧಮಾಡುವ ರಾಷ್ಟ್ರಗಳು ಅಮೂಲ್ಯ ವಸ್ತುಗಳನ್ನು ಸ್ವಾಧೀನಪಡಿಸಿಕೊಂಡು ಅದರ ಲಾಭವನ್ನು ಮಾರಾಟ ಮಾಡಿ ಹಣಮಾಡುವ ಹಂಚಿಕೆಯನ್ನು—ಮಾಡುತ್ತಿರುವನಾಗಿ ವಿಚಾರಿಸಬೇಕಾಗಿದೆ.

ಹಿಂದೆ ನೆಪೋಲಿಯನನು ಯುದ್ಧಕಾಲದಲ್ಲಿ ಅಮೂಲ್ಯ ವಸ್ತುಗಳನ್ನು ಹೀಗೆ ಸ್ವಾಧೀನಪಡಿಸಿಕೊಳ್ಳುವುದರಲ್ಲಿ ಬಹಳ ಪ್ರಸಿದ್ಧಿ ಪಡೆದನು. ರೋಮಿನಿಂದ, ವಿಯೆನ್ನಾದಿಂದ, ಮಾಡ್ರಿಡಿನಿಂದ ಎಲ್ಲೆಲ್ಲಿ ಆತನ ಸೈನ್ಯವು ದಂಡಯಾತ್ರೆ ಮಾಡಿತೊ ಅಲ್ಲಿಂದೆಲ್ಲಾ ಚಿತ್ರ ಕಾರ್ಯಗಳನ್ನು ಕಲಾಕೃತಿಗಳನ್ನು, ಅಮೂಲ್ಯ ಹಸ್ತಪ್ರತಿಗಳನ್ನು ಸುಲಿಗೆ ಮಾಡಿಕೊಂಡು ಆತನು ಅವುಗಳನ್ನು ಪ್ಯಾರಿಸಿನಲ್ಲಿ ಕೂಡಿಸಿಟ್ಟನು! ಮೈಕಲ್ ಏಂಗೆಲೋ, ಗೋರ್ಜಿನಾ, ಟಿಟಾನ್, ಪಾಲ್ ವೆರೊನೆಸ್, ಕೊರಿಜಿಯೋ, ಅಲ್ಬಾನೋ, ಕೆರಿಚಿ, ರಾಫೆಲ್, ಲಿಯೊನಾರ್ಡೋಡಿವಿನ್ಸಿ ಇವರ ಅಮೂಲ್ಯ ಕೃತಿಗಳನ್ನೆಲ್ಲಾ ನೆಪೋಲಿಯನನು ಪ್ಯಾರಿಸಿಗೆ ಸೂರೆಮಾಡಿ ಕಳುಹಿಸಿದ್ದನು. ಈಜಿಪ್ಟಿನೊಡನೆ ನೆಪೋಲಿಯನನು ಯುದ್ಧ ಮಾಡಿ ಈಜಿಪ್ಟಿನ ಶ್ರೇಷ್ಠ ಕಲಾಕೃತಿಗಳನ್ನೂ ತಂದನು. ಅವುಗಳಲ್ಲಿ ಹಲವು ಚಾರಿತ್ರಿಕ ಮಹತ್ವವುಳ್ಳವುಗಳಾಗಿದ್ದವು.

ನೆಪೋಲಿಯನನ ಲಾಭ ಬುದ್ಧಿ!

ನೆಪೋಲಿಯನನು ಇವುಗಳನ್ನೆಲ್ಲಾ ಸುಲಿಗೆ ಮಾಡಿ ಸ್ವಾಧೀನಪಡಿಸಿಕೊಂಡದ್ದು ಅವುಗಳನ್ನು ನೋಡಿ ಆನಂದಪಡುವ ಕಲಾ ಕುತೂಹಲದಿಂದಲ್ಲ. ಕಲಾವಿಷಯಗಳಲ್ಲಿ ಆತನು ಏನೇನೂ ರಸಿಕನಾಗಿರಲಿಲ್ಲ. ಆದರೆ, ಅಮೂಲ್ಯವಸ್ತುಗಳನ್ನು ಮಾರಾಟ ಮಾಡಿ, ಅಪರಿಮಿತ ಹಣವನ್ನು ಹೊಂದಬಹುದೆಂಬ ಬುದ್ಧಿವಂತಿಕೆ ಆತನಿಗೆ ಚೆನ್ನಾಗಿತ್ತು. ಇಟಲಿಯ ಮೂಸಿಯಮಿನಿಂದ ಕೊಂಡುಹೋದ ಅನೇಕ ವಸ್ತುಗಳಿಂದ ತಾನು ಹೇಗೆ ಬೇಕಾದಷ್ಟು ಹಣಮಾಡಿಕೊಂಡೆನೆಂಬ ವಿಚಾರವನ್ನು ಆತನು ಬರೆದ ಒಂದು ಪತ್ರದಲ್ಲಿ ವಿವರಿಸಿರುವನು. ರೋಮಿನಲ್ಲಿ, ವೆಟಿಕನ್ ಸಿಟಿಯಲ್ಲಿ ಒಬ್ಬ ಫ್ರೆಂಚ್ ರಾಜಕೀಯ ಏಜೆಂಟನನ್ನು ಕೊಂದ ತಪ್ಪಿಗಾಗಿ ಆತನು ಪೋಪರಿಂದ ಹಲವು ಅಮೂಲ್ಯ ಕಲಾಕೃತಿಯನ್ನು ಕೊಡಬೇಕಾಗಿ ಕೇಳಿ ಪಡಕೊಂಡಿದ್ದನು.

ಹೀಗೆ ಲೂಟಿ ಮಾಡಿ ಬಂದ ಬಳಿಕ, ನೆಪೋಲಿಯನನು ಸೈಂಟ್ ಹೆಲೆನದಲ್ಲಿ ಬಂದು ಬಿಳಕೊಂಡ ಮೇಲೆ, ಆತನು ತಂದ ಹಲವು ಅಮೂಲ್ಯ ವಸ್ತುಗಳು ತಿರುಗಿ ಪ್ರಯಾಣವನ್ನು ಆರಂಭಿಸಿದವು. ಅಪರೂಪವಾದ ಪುಸ್ತಕಗಳು ಮತ್ತು ಹಲವು ಹಸ್ತಪ್ರತಿಗಳು ಕಲಾಕೃತಿಗಳಂತೆಯೇ ಕೈಯಿಂದ ಕೈಗೆ ವಿಶೇಷ ವಿಷಯಗಳಾಗಿ ಅಲೆದಾಡಿದವು. ಲೆನಿನ್‌ಗ್ರಾಡಿನಲ್ಲಿರುವ, ಪ್ರಪಂಚದಲ್ಲಿಯೇ ಬಹಳ ದೊಡ್ಡದಾದ ಪುಸ್ತಕ ಭಂಡಾರವು ಯುದ್ಧದ ಸುಲಿಗೆಯಿಂದಲೇ ಕಟ್ಟಲ್ಪಟ್ಟಿದೆ. ಪೋಲೆಂಡಿನ ಕೌಂಟ್ ಒಬ್ಬನಿಂದ ಲೇಟಿವಿಯದ ಪೀಟರ್ ದಿ ಗ್ರೇಟನು ೧೦,೦೦೦ ಅಮೂಲ್ಯ ಹಸ್ತಪ್ರತಿಗಳನ್ನು ಸ್ವಾಧೀನ ಪಡಿಸಿಕೊಂಡಿದ್ದನು. ಮಹಾಯುದ್ಧವು ಮುಗಿದು ಅವುಗಳನ್ನು ತಿರುಗಿ ಪೋಲೆಂಡಿಗೆ ಕಳುಹಿಸಲಾಗಿತ್ತು.

ಕೈಕಾಲುಗಳನ್ನು ಕಳೆದುಕೊಂಡ, ಹಲವು ಪ್ರತಿಮಾ ಮೂರ್ತಿಗಳು ಯುದ್ಧಕಾಲದಲ್ಲಿ ತಮಗಾದ ನೋವುಗಳನ್ನು ಇಂದೂ ಜಗತ್ತಿಗೆ ಸಾರುತ್ತಿವೆ. ರೋಮನ್ ಸೈನಿಕರು ಹಲವು ಅಮೂಲ್ಯ ಕಲಾಕೃತಿಗಳಿಂದಲೇ ಪಗಡೆಯಾಡುತ್ತಿದ್ದಾರೆಂದು ಅಲ್ಲಿನ ಇತಿಹಾಸದಲ್ಲಿ ಉಲ್ಲಿಖಿತವಾಗಿದೆ.

ಯುದ್ಧಕಾಲದಲ್ಲಿ ಲೂಟಿ ಮಾಡಿದ ಹಲವು ಅತ್ಯಮೂಲ್ಯ ವಿಷಯಗಳು ಇಂದು ಯಾವುದೋ ಮೂಲೆಯಲ್ಲಿ ಭಗ್ನವಾದ ಮನೆಗುಡಿಸಲುಗಳೊಳಗೆ ಎಲ್ಲಿಯೋ ಇರುವೆ, ಹಾವು, ಹಲ್ಲಿಗಳ ಸಹವಾಸದಲ್ಲಿ ಕೊಳೆಯುತ್ತಿವೆ.

ಅಲೆಕ್ಸಾಂಡರನ ಲೂಟಿ

ಅಲೆಕ್ಸಾಂಡರನೂ ಹೀಗೆ ದಂಡೆಯಾತ್ರೆ ಮಾಡಿದವರಲ್ಲಿ ಪ್ರಸಿದ್ಧನಷ್ಟೆ? ತನ್ನ ದಂಡಯಾತ್ರೆಯಲ್ಲಿ ಸಿಕ್ಕಿದ ಹಲವು ಅಮೂಲ್ಯ ವಿಷಯಗಳನ್ನು ಆತನು ತನ್ನ ಗುರುವಾದ ಅರಿಸ್ಟೋಟ್ಲನಲ್ಲಿಗೆ ಕಳುಹಿಸುತ್ತಿದ್ದನು. ಅಲೆಕ್ಸಾಂಡರನ ಸೇನಾನಿಯೊಬ್ಬನಾದ ಪ್ಟೊಲೆಮಿ ಸೋಟೆರನು ಸಂಗ್ರಹಿಸಿದವುಗಳು, ಅಲೆಕ್ಸಾಂಡರನು ಸಂಗ್ರಹಿಸಿದವುಗಳೂ ಸೇರಿ 'ಅಲೆಕ್ಸಾಂಡ್ರಿಯ ಲೈಬ್ರರಿ'ಯೆಂಬ ಸಂಗ್ರಹವೊಂದು ನಿರ್ಮಾಣವಾಯಿತು.

ಯುದ್ಧವು ಹಾಗಾದರೆ ಏನು ಮಾಡಿತು? ಯುದ್ಧವು ಅಮೂಲ್ಯವಾದ ಹಲವು ವಿಷಯಗಳನ್ನು ಹಾಳುಗೆಡವಿತು. ಕ್ರಿ.ಶ. ೩ನೆಯ ಶತಮಾನದಲ್ಲಿ ಆ ಪಟ್ಟಣವು ಅರಬರಿಂದ ಮುತ್ತಲ್ಪಟ್ಟು, ಧಾರ್ಮಿಕನಾದ ಖಲೀಫ ಉಮರನಿಂದ ಆ ಲೈಬ್ರರಿಯೂ ಸುಟ್ಟು ಭಸ್ಮಮಾಡಲ್ಪಟ್ಟಿತು! ಆ ಭಸ್ಮದ ರಾಶಿಯಿಂದ ಯಾವುದನ್ನು ಎಷ್ಟು ಅಮೂಲ್ಯವೆನ್ನಬಹುದಾದುದನ್ನೂ ಹಿಂದೆ ತೆಗೆಯುವುದು ಯಾರಿಗೆ ಸಾಧ್ಯ?

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶಗಳಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯು ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ—"ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಆವರಿಗೆ ಸಂಪೂರ್ಣ ಗುಣವನ್ನು ತೋರಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೆಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್. (ಲಂಡನ್) ಎಂ.ಸಿ.ಎಸ್. (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪುರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜಂಟ್ಸ್:— ಶಾ ಕಂಪೆನಿ, ಹಂಪನಕಟ್ಟಾ, ಮಂಗಳೂರು.

ಜಿಲ್ಲಾ ಸಮಾಚಾರ

ಜಿಲ್ಲೆಯಲ್ಲಿ ಸತ್ಯಾಗ್ರಹ

ಮಂಗಳೂರು

ಸತ್ಯಾಗ್ರಹಿಗಳ ಸಾಲ್ಕನೆಯ ಪಟ್ಟಿ

ದಕ್ಷಿಣ ಕನ್ನಡದ ಸತ್ಯಾಗ್ರಹಿಗಳ ನಾಲ್ಕನೆಯ ಪಟ್ಟಿಯಲ್ಲಿ ೩೯ ಸತ್ಯಾಗ್ರಹಿಗಳು ಚುನಾಯಿತರಾಗಿರುವರೆಂದು ತಿಳಿದು ಬಂದಿದೆ. ಅವರಲ್ಲಿ ಡಿ. ಬೋ. ಪ್ರೆಸಿಡೆಂಟ್ ಡಾ। ವಿಟ್ಠಲ್ ಶೆಟ್ಟಿ, ಡಿ. ಬೋ. ಮೆಂಬರ್ ಶ್ರೀ ...ತಪ್ಪ ಶೈ. ಇವರ ಹೆಸರುಗಳೂ, ಮೂಲ್ಕಿಯಿಂದ ಕ್ರಿಶ್ಚಿಯನ್ ಒಂಧುಗಳೊಬ್ಬರಾದ ಶ್ರೀ ಶಿಲ್ವೆಸ್ಟರ್ ಆರ್ ಸೆರಾವೋ ಇವರ ಹೆಸರೂ ಇರುವುದಾಗಿ ಕೇಳುತ್ತೇವೆ.

ರಿಮಾಂಡಿನಲ್ಲಿ—ಮಂಗಳೂರಿನ ಕದ್ರಿಯಲ್ಲಿ ತಾ. ...ರಂದು ಶ್ರೀ ಪ್ರಭಾಕರ ಶೇಟ್ ಇವರು ಸತ್ಯಾಗ್ರಹ ಹೂಡಿ ಕೈದುಮಾಡಲ್ಪಟ್ಟಿರು. ಅವರನ್ನು ರಿಮಾಂಡಿನಲ್ಲಿರಿಸಲಾಗಿದೆ.

ಸತ್ಯಾಗ್ರಹಿ ಮೇಲೆ ನ್ಯೂಸೆನ್ಸ್ ಚಾರ್ಜು:—೨೫ ...ರಂದು ಮಂಗಳೂರು ...ಬೀದಿಯ ತಾಜಮಹಾಲ್ ಹೋಟೇಲಿನ ಎದುರಲ್ಲಿ ಯುದ್ಧ ವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಹೂಡಿದ ಶ್ರೀ ಪದ್ಮನಾಭ ಶೆಣೈಯವರನ್ನು ಈಗ ಸೆರೆಹಿಡಿಯಲಿಲ್ಲ. ಮುಂದೆ ನರ್ ... ಕಾಗಿ ವೆಂಕಿನ ಒಳ ಒಂಗಿರದು. ... ವರ ಮೇಲೆ ನ್ಯೂಸೆನ್ಸ್ ... ಜಾರ್ಜ ಹಾಕಿದೆ ... ದಿನಗಳ ಶಿಕ್ಷೆ ಕೊಡಲಾಯಿತೆಂದು ತಿಳಿಯು ತ್ತದೆ.

ಕಾಸರಗೋಡು ತಾಲೂಕಿನಲ್ಲಿ ಸತ್ಯಾಗ್ರಹ

ಪೆರಡಾಲ:—ಕಾಸರಗೋಡ ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ದ ... ಎಸ್. ಬಾಸ್ತಿ ಇವರು ... ರಂದು ಸತ್ಯಾಗ್ರಹ ಹೂಡಿ ಬಂಧಿತರಾದರು. ಅವರನ್ನು ಕೂಡ್ಲು ... ದುವಾಗಿ ಕಾಸರಗೋಡಿನಲ್ಲಿ ಇಡಲಾಗಿದೆ ... ಲಾಗಿತ್ತಷ್ಟೆ? ಕಾಸರಗೋಡಿನ ರಿಮಾಂಡಿನಲ್ಲಿ ಕೈದಿಗಳಿಗೆ ಮನುಷ್ಯೋಚಿತ ಸೌಕರ್ಯಗಳು ದೊರಕುವುದೇ ಕಷ್ಟಕರವಾಗಿಲ್ಲ. ಅವರು ರಿಮಾಂಡಿನಲ್ಲಿರಿಸಿದ ಮೇಲೆ ಊಟವಾದ ... ಅಸಾಧ್ಯವಾದ ... ಅಲ್ಲಿನ ಆಹಾರವನ್ನು ... ನವರ ತನಕ ತೆಗೆದುಕೊಳ್ಳದೆ ಉಪವಾಸ ಮಾಡಿದರೆಂದೂ, ಆ ಮೇಲೆ ಅವರ ದೇಹಾರೋಗ್ಯ ... ಟ್ಟು ಹೋದುದನ್ನು ತಿಳಿದು ... ಆಸ್ಪತ್ರೆ ... ಯಲ್ಲಿರಾಯಿತೆಂದೂ ಅಲ್ಲಿ ಆರೋಗ್ಯ ಹೊಂದಿದ ನಂತರ ರಿಮಾಂಡಿನ ಅವಧಿ ಮು ... ಗಿದ ಬಳಿಕ ... ದಿನ ... ಪ್ರಾರಂಭ ... ಕದ್ದು ಕೊಂಡು ಹೋಗಿ ಅಲ್ಲಿನ ಮೆಜಿಸ್ಟ್ರೇಟರು ಮತ್ತೆ ಎಂಟು ದಿನ ... ವರೆಗೆ ರಿಮಾಂಡು ... ನಾಗಿ ತಿಳಿಯಬರುತ್ತದೆ. ಪ್ರಸ್ತುತ ರಿಮಾಂಡಿ ... ಲ್ಲಿ ಈಗ ಇರಿಸಲ್ಪಟ್ಟಿದೆ.

ಹರಿಜನ ಸತ್ಕಾರ:—ಒದಿಯಡ್ಕದಲ್ಲಿ ಶ್ರೀ ಬಾಸ್ತಿಯವರು ಸತ್ಯಾಗ್ರಹ ಹೂಡಿದ ದಿನ ಮಾವಿನಾಡು ಮಂದಿ ಹರಿಜನರಿಗೆ ಭೋಜನ ಸತ್ಕಾರವು ಕೊಡಲಾಯಿತು. ಊರಿನ ಗೃಹಸ್ಥರು ... ಈ ಏರ್ಪಾಡು ಮಾಡಿದ್ದರು. ಇಲ್ಲಿನ ... ಪಾಠಶಾಲೆಯ ... ವಾದ ಶ್ರೀ ಎಂ ... ಯವರು ಇದರಲ್ಲಿ ಮುಂದಾಳುತನ ವಹಿಸಿ ಪಟ್ಟ ಪರಿಶ್ರಮವೇ ... ದಿರುವುದು ... ಯವಾಗಿದೆ.

ಬಾಡೂರು:—ಕಾಸರಗೋಡು ತಾಲೂಕಿನ ಪ್ರಸಿದ್ಧ ಬಂಟ ಮನೆತನಕ್ಕೆ ಸೇರಿದವರೂ, ಬಾಡೂರು ಗ್ರಾಮದ ಪಟೇಲರೂ ಆದ ಶ್ರೀ ... ಜಗನ್ನಾಥ ರೈಗಳು ತಾ. ... ರಂದು ಆ ... ಧನೆಯ ವಠಾರದಲ್ಲಿ ಯುದ್ಧವಿರುದ್ಧ ಘೋಷಿಸಿ ಸತ್ಯಾಗ್ರಹ ಮಾಡಿದರು. ಸುತ್ತು ಮುತ್ತಿಂದ ... ಜನರು ಸಂಖ್ಯೆಯಲ್ಲಿ ಎರಡು ಮಾರು ಸಾವಿರಕ್ಕೂ ಮಿಕ್ಕಿ ಇತ್ತು. ಅವರು ... ಮನೆಯಾಳ, ಕನ್ನಡ ಭಾಷೆಗಳಲ್ಲಿ ... ಬೋಧನೆ ಮಾಡಿ ... ಬಂಧಿತರಾಗದಿದ್ದಲ್ಲಿ ... ಲ್ಲಿವರೆಗೆ ಸಾಗುವೆನೆಂದು ಹೇಳಿ ಮುಂದೆ ... ವಾಗ ಅವರನ್ನು ಪೋಲೀಸರು ಬಂಧಿಸಿದರು ... ವರನ್ನು ... ಕಾಸರಗೋಡಿಗೆ ... ರ ... ಹತ್ತು ದಿನಗಳ ತನಕ ರಿಮಾಂಡಿನಲ್ಲಿರಿಸ ...

ಉಕ್ಕಿನಡ್ಕ:—ಪೆರಡಾಲ ಗ್ರಾಮದ ಉಕ್ಕಿನಡ್ಕದಲ್ಲಿ ತಾ ... ರಂದು ಇಲ್ಲಿನ ಪ್ರಸಿದ್ಧ ಬಂಟ ಮನೆತನದವರಾದ ಶ್ರೀ ಬೀರಣ್ಣ ಶೆಟ್ಟರು ಯುದ್ಧ ವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಹೂಡಿದರು. ದೂರ ಸಮೀಪದ ಹಳ್ಳಿಗಳಿಂದ ಅಪರಿಮಿತ ಜನಸಂದಣಿ ಕೂಡಿತ್ತು. ಶ್ರೀಯುತರನ್ನು ಬಂಧಿಸದೆ ಬಿಟ್ಟಿರುವುದರಿಂದ ಅವರು ಡಿಲ್ಲಿ ... ನಾಗಿ ಜಿಲ್ಲೆಯುದ್ದಕ್ಕೂ ಸಾಗುತ್ತಿರುವರು.

ಶ್ರೀಯುತರು ಹಿಂದಿನ ಸತ್ಯಾಗ್ರಹದಲ್ಲಿಯೂ ಭಾಗವಹಿಸಿ ಸೆರೆಮನೆಯ ವಾಸವನ್ನನುಭವಿಸಿದವರು. ನಿಸ್ವಾರ್ಥ ದೇಶಪ್ರೇಮಿಗಳು, ಡಾಂಭಿಕ ಮನೋಭಾವವಿಲ್ಲದ ಸರಳ ಹೃದಯರು. ಒಳ್ಳೆಯ ಕಾರ್ಯಕರ್ತರು, ಉತ್ಸಾಹೀ ... ರುವರು.

ಕಾಸರಗೋಡು ತಾಲೂಕಿನ ಪರಡಾಲ ಗ್ರಾಮದಲ್ಲಿ ಶ್ರೀಗಳಾದ ಕಮಲಾಕ್ಷನ್ ಮತ್ತು ... ಪಕಿ ಆದ ಶ್ರೀ ... ಕವಂಬಳಿ ... ಈ ದಿನ ಸತ್ಯಾಗ್ರಹ ಹೂಡುವರಾಗಿ ತಿಳಿದುಬರುತ್ತದೆ.

ಮಂಜೇಶ್ವರ:—ತಾ. ... ರಂದು ಶ್ರೀ ... ಮಂಜೇಶ್ವರ ದೇವಸ್ಥಾನದ ಒಳ ಶ್ರೀಯುತ ಶೆ ... ಪದ್ಮನಾಭ ... ಸತ್ಯಾಗ್ರಹವನ್ನು ಹೂಡಿದರು. ... ಅದೇ ದಿನ ... ಸಾರ್ವಜನಿಕ ಸಭೆಯು ... ಯುವಕ ... ಪರಿಸರದಲ್ಲಿ ಜರುಗಿ ಶ್ರೀಯುತ ... ಕಾಂಗ್ರೆಸ್ ಪ್ರಚಾರ ... ಸಂತರ ಶ್ರೀ ಪದ್ಮನಾಭ ... ಯುದ್ಧವಿರೋಧ ಘೋಷಣೆ ... ಯನ್ನು ಕೂಗಿದರು.

ಕುಂದಾಪುರ

ಶ್ರೀ ಸುಬ್ಬಣ್ಣ ಗುಪ್ತರ ಕೈದು ಮತ್ತು ಬಿಡುಗಡೆ—ಕುಂದಾಪುರ ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಮುಂದಾಳುಗಳಲ್ಲೊಬ್ಬರಾದ ಶ್ರೀ ಸುಬ್ಬಣ್ಣ ಗುಪ್ತರು ತಾ. ... ರಂದು ... ಪ್ರಚಾರ ... ಕೈದುಮಾಡಿ ... ದೇವಸ್ಥಾನದ ಮುಂದುಗಡೆ ಯುದ್ಧವಿರೋಧ ಘೋಷಣೆ ಮಾಡಿ ಸತ್ಯಾಗ್ರಹ ಹೂಡಿದರು. ಶ್ರೀ ಗುಪ್ತರನ್ನು ಕೈದುಮಾಡಿ ಸ್ಟೇಷನಿಗೆ ಕೊಂಡೊಯ್ದು ಸ್ವಲ್ಪ ಬಿಡುಗಡೆ ಮಾಡಿದರು. ಅವರು ಪುನಃ ಸ್ಟೇಷನ್ ಸಮೀಪದಲ್ಲಿಯೇ ... ಯುದ್ಧವಿರುದ್ಧ ಘೋಷಣೆ ಮಾಡುತ್ತಾ ... ದ ... ಕಾಂಗ್ರೆಸ್ ಪ್ರಚಾರ ಕಾರ್ಯ ನಡೆಸುತ್ತಾ ... ಯಲ್ಲಿ ತೆರಳುತ್ತಾರೆ.

ಶ್ರೀ ಎನ್. ಶೇಷಗಿರಿರಾಯರಿಗೆ ಶಿಕ್ಷೆ:—ತಾ ... ರಂದು ಸತ್ಯಾಗ್ರಹ ಹೂಡಿದ ಶ್ರೀ ಎನ್ ಶೇಷಗಿರಿರಾಯರನ್ನು ಕೈದುಮಾಡಿ ಸ್ಟೇಷನಿಗೆ ಕೊಂಡೊಯ್ದು ತಾ ... ರಂದು ವಿಚಾರಣೆ ನಡೆಸಿ ಕುಂದಾಪುರ ಸಬ್ ಮೆಜಿಸ್ಟ್ರೇಟರು ಆರ ... ಶಿಕ್ಷೆ ... ಕ್ಲಾಸು ಕೊಡಲಾಗಿದೆ.

ಉಡುಪಿ

ಸತ್ಯಾಗ್ರಹ:—ಶ್ರೀ ... ಕಾಂಗ್ರೆಸ್ ಕಮಿಟಿ ... ಯುದ್ಧ ... ಹೂಡಿದರು. ಅವರನ್ನು ಬಂಧಿಸಿ ವಿಚಾರಣೆ ನಡೆಸಿ ಕುಂದಾಪುರ ಸಬ್‌ಮೆಜಿಸ್ಟ್ರೇಟರಾದ ಶ್ರೀ ಅನಂತ ... ಯವರು ೪ ತಿಂಗಳ ಸಾದಾ ಶಿಕ್ಷೆ ಮತ್ತು 'ಬಿ' ಕ್ಲಾಸು ಕೊಟ್ಟಿರುವರು.

ಕೈದು ಮಾಡಲಿಲ್ಲ—ಕಟ್ಪಾಡಿ ನಾಯಕ ಮನೆತನದ ಶ್ರೀ ... ರಾಯರು ... ಅಧ್ಯಕ್ಷರು ... ಯುದ್ಧ ವಿರುದ್ಧ ಘೋಷಣೆ ನಡಿಸಿ ಸತ್ಯಾಗ್ರಹ ಹೂಡಿದರು. ಆದರೆ ಇಷ್ಟರವರೆಗೆ ಅವರನ್ನು ಕೈದು ಮಾಡಲಿಲ್ಲ ... ದಿಲ್ಲಿಯ ... ತೆರಳಿದರು.

ಕಾರ್ಕಳ

ಕೈದುಮಾಡಿ ಬಿಟ್ಟರು:—ಇದೇ ತಿಂ ...

... ಳ ... ರಂದು ಸತ್ಯಾಗ್ರಹವಮಾಡಿದ ಶ್ರೀ ... ನಿವಾಸ ಕಾಮತರನ್ನು ಪೋಲೀಸರು ಅದೇ ದಿನ ಕೈದುಮಾಡಿ ರಿಮಾಂಡಿನಲ್ಲಿ ಇಟ್ಟಿದ್ದರಾದರೂ ತಾ ... ರಂದು ಅವರನ್ನು ವಿಚಾರಣೆ ಮಾಡದೆ ಬಿಟ್ಟು ಬಿಟ್ಟಿದ್ದಾರೆ. ಶ್ರೀ ಕಾಮತರು ಕಾಂಗ್ರೆಸ್ ಕಾರ್ಯಕ್ರಮವನ್ನು ಮುಂದರಿಸುವರೆಂದು ತಿಳಿದುಬರುತ್ತದೆ.

ಪುತ್ತೂರು

ವಿಟ್ಲ:—ಶ್ರೀ ವಿಠ್ಠಲದಾಸ್ ಶೆಟ್ಟಿರು ತಾ ... ರಲ್ಲಿ ವಿಟ್ಲದಲ್ಲಿ ಸತ್ಯಾಗ್ರಹ ಹೂಡಿದರು. ಇವರನ್ನು ಆ ದಿನ ಕೈದು ಮಾಡದೆ ಬಿಟ್ಟದ್ದರಿಂದ ಊರೂರುಗಳಲ್ಲಿ ಘೋಷಣೆ ಮತ್ತು ... ಮಾಡುತ್ತ ಮುಂದರಿಯುವಾಗ ಬಂ ... ದಲ್ಲಿ ಬಂಧಿಸಲ್ಪಟ್ಟಿರುವರು.

ಕೋಲ್ನಾಡು—ಇಲ್ಲಿಯ ಪ್ರಥಮ ಸತ್ಯಾಗ್ರಹಿಯಾದ ಶ್ರೀ ... ರಾಮಯ್ಯ ... ಯವರು 21ನೇ ತಾರೀಕಿನಂದು ಪತ್ತಗಿರಿಯಾದರು ... ಮತ್ತೊಬ್ಬ ಸತ್ಯಾಗ್ರಹಿಯಾದ ಶ್ರೀ ... ಪದ್ಮನಾಭ ರೈಯವರು ಇನ್ನೆರಡು ದಿನಗಳಲ್ಲಿ ... ರಲ್ಲಿ ಯುದ್ಧವಿರುದ್ಧ ಘೋಷಣೆ ಮಾಡಿ ... ದಸ್ತಗಿರಿಯಾದ್ದರಿಂದ ಪ್ರಚಾರ ನಡೆಯುತ್ತಿದೆಯೆಂದೂ ತಿಳಿದುಬರುತ್ತದೆ.

ಮಂಗಳೂರು

ಸಾರ್ವಜನಿಕ ಸಭೆಗಳು:—ಕರ್ನಾ ... ಪ್ರಾಂತೀಯ ಕಾಂಗ್ರೆಸ್ ಕಮಿಟಿ ಉಪಾಧ್ಯಕ್ಷರೂ ... ದ ಶ್ರೀಮಾನ್ ... ಪೆಂಡೆಕರರು ... 2 ... ರಂದು ಸಂಜೆ ... ಶ್ರೀ ಎಂ ... ಶೇರಿಗಾರರ ಅಧ್ಯಕ್ಷತೆಯಿಂದ ಕಾಂಗ್ರೆಸ್ ... ಯ ... ಪ್ರಚಾರ ... ಭಾಷಣ ... ಸಾರ್ವಜನಿಕ ... ಕಾಂಗ್ರೆಸಿನ ಇಂದಿನ ಕಾರ್ಯಕ್ರಮವನ್ನು ... ಇಸಿದರು.

ವೈದ್ಯ ಸಂಘ:—ದ ... ವೈದ್ಯ ಸಂಘದ ... ರಂದು ... ದ ... ಅಧ್ಯಕ್ಷತೆಯಲ್ಲಿ ಸಭೆ ... ಕಾಂಗ್ರೆಸ್ ... ದಿ ... ಸಂಪ್ರದಾಯ ... ಆಯುರ್ವೇದ ... ಸಂಘದ ಸಂರಕ್ಷಣೆಯ ... ವೈದ್ಯರ ... ಸಂದರ್ಭದಲ್ಲಿ ... ವೈದ್ಯರನ್ನು ... ಸಭೆ ... ಮಾಡಲಾಯಿತು.

ಶ್ರೀ ಬಾಲಮಾರುತಿ ವ್ಯಾಯಾಮ ಮಂಡಲ ಮಂಗಳೂರು, ವ್ಯಾಯಾಮ ಶಿಕ್ಷಣ ಶಿಬಿರ—ಈ ವರ್ಷದ ಶಿಕ್ಷಣ ಶಿಬಿರವು ಬರುವ ಎಪ್ರಿಲ್ 1ನೇ ತಾ॥ದಿಂದ ಮೇ 15ರ ವರೆಗೆ ನಡೆಸಲ್ಪಡುವುದು. ಸದ್ರಿ ಶಿಕ್ಷಣ ಶಿಬಿರದ ವಿಷಯ ಸಂಬಂಧಪಟ್ಟ ಸಕಲ ... ಶ್ರೀ ... ವ್ಯಾಯಾಮ ಮಂಡಲ ... ದೇವಸ್ಥಾನ ... ಮಂಗಳೂರು ... ವರಿಗೆ ಬರೆದು ತಿಳಿಯುವುದು.

ಮೋಟರ್ ಯೂನಿಯನ್:—ದಿ ಸೌತ್ ಕೆನರಾ ಮೋಟರ್ ಎಂಪ್ಲೋಯಿಸ್ ಯೂನಿಯನಿನ ಕಾರ್ಯಕಾರಿ ಮಹಾಸಭೆಯು ... 17ರಲ್ಲು ಜರಗಿತ್ತು. ಆ ಸಮಯ 1—1—41ರ ವರೆಗಿನ ಬಾಕಿಯಿದ್ದ ಚಂದಾದಾರರನ್ನು ರದ್ದು ಮಾಡಿ, 1—2—41ರಿಂದ ಕ್ರಮವಾಗಿ ಚಂದಾ ಹಣವನ್ನು ವಸೂಲು ಕೊಡಬೇಕಾಗಿಯೂ 1941ನೇ ... ತಿಂಗಳ ಚಂದಾ ... ನ್ನು ಕೊಡಲು ತಪ್ಪಿದವರ ... ರದ್ದುಗೊಳಿಸಲಾಗುವುದೆಂದೂ ... ತಾ ೧೯ ... 1—2—1941ರಿಂದ ... ೨ ... ಯಿಂದ 1—ಆನೆಗೆ ... ನಿಷ್ಕರ್ಷಿಸಲಾಯಿತು. ಮುಂಬಿನ ಅಧಿಕಾರ ವರ್ಗವೂ ಆರಿಸಲ್ಪಟ್ಟಿತು.

ಕೃತಜ್ಞತಾ ಸೂಚನೆ:—ಮಂಗಳೂರು ... ಪ್ರೆಸ್ಸಿನ ಖಾಯಂ ಕೆಲಸಗಾರರಾದ ಶ್ರೀ ಎ ... ವಾಸು ಇವರನ್ನು ಕೆಲಸದಿಂದ ತೆಗೆದು ಹಾಕಿದ ವಿಷಯದಲ್ಲಿ ಜಿಲ್ಲಾ ಕಲೆಕ್ಟರರು ಮಂಗಳೂರು ಸ್ಟೇಶನರಿ 2 ಕ್ಲಾಸ್ ಮ್ಯಾಜಿಸ್ಟ್ರೇಟರ ಮೂಲಕ ವಿಚಾರಿಸಿ ಶ್ರೀ ವಾಸು ಇವರಿಗೆ ಕೆಲಸವನ್ನು ಪುನಃ ಅದೇ ಪ್ರೆಸ್ಸಿನಲ್ಲಿ ಕೊಡಿಸಿದ್ದಾರೆ ... ದ ಕ ಪ್ರೆಸ್ ಕೆಲಸಗಾರರ ಸಂಘವು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ.

ಕ್ರಿಕೆಟ್ ಟೂರ್ನಮೆಂಟ್—... ಜೈಪ್ಪುದಾನಿನ ಶ್ರೀ ಕೆ ದತ್ತಾತ್ರೇಯ ರಾವ್ ಸ್ಮಾರಕ ಈ ಕ್ರಿಕೆಟ್ ಟೂರ್ನಮೆಂಟು ... ತಾ 19ನೇ ಪ್ರಾರಂಭವಾಗಿ ಫೆಬ್ರವರಿ ತಾ 23ರ ವರೆಗೆ, ಪ್ರತಿ ಆದಿತ್ಯವಾರ ... ಮೈದಾನದಲ್ಲಿ ಜರಗಿತು.

ಈ ಪಂದ್ಯಾಟದಲ್ಲಿ ... ಟೀಮುಗಳು ... ಸೆಂಟ್ ... ಕಾಲೇಜ್ ... ಕ್ರಿಕೆಟ್ ಕ್ಲಬ್, ಮತ್ತು ... ಕ್ರಿಕೆಟ್ ಕ್ಲಬ್‌ನವರಲ್ಲಿ ... ನವರು ಗೆದ್ದು ... ಪಡೆದರು.

ಯಕ್ಷಗಾನ—... ಶ್ರೀ ... ಹಾಸ್ ... ಶ್ರೀ ... ಯಕ್ಷ ... ಬಾಲಕೃಷ್ಣರಾವ್ ... ಇವರಿಂದ ... ತಾ ... ಕಾಂಗ್ರೆಸ್‌ಗಳೇ ... ಯಕ್ಷಗಾನ ... ವಿತು.

ಸುರತ್ಕಲ್—... ಯವರ ನಿಧನ ... ಸಂತಾಪ ... ಇಲ್ಲಿಯ ... ಗರಡಿ ... ಮೌಲಾನಾ ... ರಾಯಸ್ಥ ... ಪ್ರಸಾರಕ್ಕೆ ... ಸ್ಥಳೀಯ ... ಒಂಧು ... ಈ ... ಸಭೆ ... ಇವರ ... ನಡೆಸಿದರು.

ಉಡುಪಿ

ಉಪನ್ಯಾಸಗಳು—ಶ್ರೀ ಕೋಟ ... ರವರು ... ಶ್ರೀ ... ಸರ್ ... ವರ ... ಶ್ರೀ ... ಯವರ ಅಧ್ಯಕ್ಷತೆಯಲ್ಲಿ ... ಶ್ರೀ ... ಪ್ರಾರಂಭ ... ವರ್ಷದ ... ಇವರ ... ಆಸಕ್ತಿ ... ದಿನ ... ಕಾರ್ಯಗಳ ... ದಿರು.

ಬಳ್ಕುಂಜೆ

... "ರಿಮಂಟ್ ... ಕ್ಲಬ್ಬಿನ ... ಸ್ಥಾಪನೆ ... ಕೆಬ್ರವರಿ ... ರಂದು ... ಇಲ್ಲಿನ ... ಯ ... ಅಧ್ಯಕ್ಷತೆಯಲ್ಲಿ ... ಚಿಟ್ಟಾರು ... ಮಂದಿ ಸಂಬಂಧ ... ಕಾರ್ಯದರ್ಶಿ ... ಶ್ರೀಯುತ ... ವರನ್ನು ಅಧ್ಯಕ್ಷರನ್ನಾಗಿಯೂ ಶ್ರೀಯುತ ಎಂ ... ಕಾರ್ಯದರ್ಶಿಯನ್ನಾಗಿ ... ಆರಿಸಿರುತ್ತಾರೆ.

ಪುತ್ತೂರು—ಇಲ್ಲಿಯ ಗೌಡ ಸಾರಸ್ವತ ಸಮಾಜದ ಯುವಕರು ಇದೇ ... ಬುಧವಾರ ಕೆನರಾ ಟ್ರೇಡ್ಸ್ ಲಿಮಿಟೆಡ್ ಈ ನಾಟಕದಲ್ಲಿ ... ಪ್ರತ್ಯೇಕ ... ಗೌಡ ಸಾರಸ್ವತ ಸಮಾಜವು ... ಯನ್ನು ... ವರು.

ಕಾರ್ಕಳ

ಕಾಂಗ್ರೆಸ್ ಪ್ರಚಾರಕಾರ್ಯ:—... ರಂದು ... ಯಲ್ಲಿ ... ಶ್ರೀ ... ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ... ಕಾಂಗ್ರೆಸಿನ ಕಾರ್ಯಕ್ರಮಗಳ ಕುರಿತು ಭಾಷಣಕೊಟ್ಟು ಪ್ರಚಾರಮಾಡಿದರು.

ಮಾರ್ಚಿಯಲ್ಲಿ ಪ್ರಚಂಡ ನೌಕಾಯುದ್ಧವಂತೆ!

ಹಿಟ್ಲರನು ಹೇಳುತ್ತಾನೆ!

ಮುಸಲನಿ ಸೋಲನ್ನು ಒಪ್ಪಿಕೊಂಡನು

ರಶ್ಯಾ ಜಪಾನುಗಳೊಳಗೆ ಒಪ್ಪಂದವಾಗಿದೆ ಹಿಟ್ಲರನ ಮಧ್ಯಸ್ಥಿಕೆಯಲ್ಲಿ!

ಗ್ರೀಸಿನ ಮೇಲೆ ಜರ್ಮನ್ ವಿಮಾನಗಳು

ಯೂರೋಪಿನಿಂದ ಈ ವಾರ ಬಹಳ ಉದ್ವೇಗ ಕುತೂಹಲ ಜನಕವಾದ ವಾರ್ತೆಗಳು ಬರುತ್ತಿವೆ. ರಶ್ಯಾ ಜಪಾನುಗಳೊಳಗೆ ಒಪ್ಪಂದವಾಯಿತು. ಬಾಲ್ಕನುಗಳ ಅವಸ್ಥೆ ವಿಷಮತೆಯಲ್ಲಿದೆ. ಟರ್ಕಿ ಬಲ್ಗೇರಿಯ ಒಪ್ಪಂದ ಮಾಡಿಕೊಂಡವು. ಹಿಟ್ಲರನು ಒಂದು ಭಾಷಣ ಮಾಡುತ್ತಾ ಮಾರ್ಚ ತಿಂಗಳಲ್ಲಿ ಹಿಂದೆ ಎಂದೂ ಕಂಡುಬರದ ರೀತಿಯ ನೌಕಾಯುದ್ಧ ಪ್ರಾರಂಭಿಸುವೆನೆಂದನು; ಮಾತ್ರವಲ್ಲದೆ ಮುಸಲನಿಯನ್ನು ತಾನು ಬಿಡುವುದಿಲ್ಲವೆಂದನು. ಬ್ರಿಟಿಷರನ್ನು ಎಲ್ಲೆಡೆಯಲ್ಲಿಯೂ ವಿರೋಧಿಸುವೆನೆಂದನು. ಗ್ರೀಸಿನಲ್ಲಿ ಜರ್ಮನ್ ವಿಮಾನಗಳು ಹಾರಾಡಿವೆ. ಮುಸಲನಿಯು ಒಂದು ಭಾಷಣ ಮಾಡುತ್ತಾ ತನ್ನ ಸೋಲನ್ನು ಒಪ್ಪಿಕೊಂಡಿದ್ದಾನೆ. ಆದರೆ ಬ್ರಿಟಿಷರು ವಂಚಕರೆಂದಿದ್ದಾನೆ.

ರಶ್ಯ—ಜಪಾನು ಒಪ್ಪಂದ ಹಿಟ್ಲರನ ಮಧ್ಯಸ್ಥಿಕೆ

ರಶ್ಯ ಜಪಾನುಗಳೊಳಗೆ ಆರ್ಥಿಕ ಒಪ್ಪಂದವು ಮಾಸ್ಕೋದಲ್ಲಿ ಸಹಿಯಾಯಿತೆಂದೂ, ಇದಕ್ಕೆ ಜರ್ಮನಿಯು ಮಧ್ಯಸ್ಥಿಕೆಯಿತ್ತೆಂದೂ ತಿಳಿದಿದೆ. ಸ್ಟಾಲಿನ್ ದ್ವೀಪದ ದಕ್ಷಿಣಭಾಗವನ್ನು ರಶ್ಯಕ್ಕೆ ಕೊಡಿಸಿ ರಶ್ಯ ಜಪಾನುಗಳಲ್ಲಿ ಅನಾಕ್ರಮಣ ಒಪ್ಪಂದವಾಗುವಂತೆ ಹಿಟ್ಲರನು ಯತ್ನಿಸುತ್ತಿರುವನಾಗಿಯೂ ವಾರ್ತೆಯಿದೆ.

ಜಪಾನು ರಾಜಿಮಾಡುವುದೆ?

ಹಾಗೆಂದು ಜಪಾನು ವಿದೇಶಮಂತ್ರಿ ಹೇಳಲಿಲ್ಲವಂತೆ. ಬ್ರಿಟನಿಗೆ ಮನಸ್ಸಿದ್ದರೆ, ತಾನು ಯುರೋಪಿನ ಕಲಹದ ವಿಷಯ ರಾಜಿಪ್ರಸ್ತಾಪ ಮಾತನಾಡುವುದಾಗಿ ಜಪಾನ್ ವಿದೇಶಮಂತ್ರಿ ಬ್ರಿಟಿಷ ಸರಕಾರಕ್ಕೆ ತಿಳಿಸಿರುವನಾಗಿ ಒಂದು ಸುದ್ದಿ ಬಂದಿತ್ತು. ಮರುದಿನದ ಪತ್ರಿಕೆಯಲ್ಲಿ ಜಪಾನ್ ವಿದೇಶಮಂತ್ರಿಯು ತಾನು ಹಾಗೆ ಹೇಳಲಿಲ್ಲವೆಂದು ಸುದ್ದಿಯನ್ನು ನಿರಾಕರಿಸಿದ್ದಾನೆ. ಹಾಗಾದರೆ ಮೊದಲಿನ ಸುದ್ದಿ ಹರಡಿಸಿದವರು ಯಾರೆಂದೂ, ಯಾವ ಉದ್ದೇಶದಿಂದ ಹರಡಿಸಿದರೆಂದೂ ತಿಳಿಯದ ಸಂಗತಿಯಾಗಿದೆ.

ಬಲ್ಗೇರಿಯದ ಮೇಲೆ ಜರ್ಮನಿ ಧಾಳಿ? ಜರ್ಮನ್ ಸೈನ್ಯ ನುಗ್ಗಿತು

ಜರ್ಮನ್ ಸೈನ್ಯದ ಚಲನವಲನದ ಕುರಿತು ಕೋಲಾಹಲದ ಸುದ್ದಿ ಬರುತ್ತಿದೆ. ಜರ್ಮನ್ ಸೈನ್ಯವು ಬಲ್ಗೇರಿಯದ ಗಡಿನಾಡನ್ನು ದಾಟಿ ಬರುತ್ತಿರುವುದೆಂದು ವಾರ್ತೆ. ರ್ಯೂಟರ್ ಸುದ್ದಿಗಾರನು ಜರ್ಮನ್ ಸೈನ್ಯಗಳು ಇದುವರೆಗೂ ಬಂದಿಲ್ಲವೆಂದೂ, ಆದರೆ ಬೇಗನೆ ಬರಬಹುದೆಂದೂ ಬರೆಯುತ್ತಾನೆ.

ಟರ್ಕಿ-ಬಲ್ಗೇರಿಯ ಅನಾಕ್ರಮಣ ಒಪ್ಪಂದ

ಸೋವಿಯಟ್ ರಶ್ಯದ ಬೆಂಬಲ

ಸದ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ಟರ್ಕಿ ಬಲ್ಗೇರಿಯ ಸರಕಾರಗಳು ಅನಾಕ್ರಮಣ ಒಪ್ಪಂದ ಮಾಡಿಕೊಂಡವೆಂದು ಸೋಫಿಯಾದ ವಾರ್ತೆ ಬಂದಿದೆ.

ಒಪ್ಪಂದದ ಅಂಶ ಹೀಗಿವೆ:

೧. ಒಂದು ರಾಷ್ಟ್ರದ ಮೇಲೆ ಇನ್ನೊಂದು ರಾಷ್ಟ್ರವು ಧಾಳಿಮಾಡಕೂಡದು. ೨. ಪರಸ್ಪರ ಸಹಕಾರ, ವಿಶ್ವಾಸಗಳಿಂದ ಅನ್ಯೋನ್ಯ ಇರಬೇಕು. ೩. ತಮ್ಮ ತಮ್ಮ ವ್ಯಾಪಾರವಾಣಿಜ್ಯಗಳನ್ನು ಹೆಚ್ಚಿಸಬೇಕು. ೪. ಈ ಸ್ನೇಹ ಸಹಕಾರಗಳನ್ನು ಇನ್ನೂ ಹೆಚ್ಚಿಸಬೇಕು.

ಈ ಒಪ್ಪಂದಕ್ಕೆ ರಶ್ಯವು ಬೆಂಬಲ ಕೊಟ್ಟಿರುವುದೆಂದು ಸುದ್ದಿ.

ಹಿಟ್ಲರ್ ಆತ್ಮಹತ್ಯೆ ಮಾಡಿಕೊಳ್ಳುವನೆ?

ಬ್ರಿಟಿಷ ರಾಯಭಾರಿಯ ಊಹನೆ.

"ಜರ್ಮನರ ಆಶೆಯನ್ನು ತೃಪ್ತಿಗೊಳಿಸುವುದು ಅಥವಾ ಮೋಸಗೊಳಿಸುವುದು ಅಸಾಧ್ಯವಾಗಿ, ಇನ್ನು ಮುಂದೆ ಬದುಕಿರಲು ಅಶಕ್ಯವೆಂದು ಹಿಟ್ಲರನು ಆತ್ಮಹತ್ಯೆ ಮಾಡಿಕೊಳ್ಳುವನು" ಎಂದು ಯುದ್ಧ ಪ್ರಾರಂಭವಾದಾಗ ಜರ್ಮನಿಯಲ್ಲಿ ಬ್ರಿಟಿಷ್ ರಾಯಭಾರಿಯಾಗಿದ್ದ ಸರ್ ನೆವಿಲ್ ಹೆಂಡರ್ಸನ್ನರು ಹೇಳಿದರು. ಅವರು ಮುಂದುವರಿಸುತ್ತಾ, "ಹಿಟ್ಲರನೊಬ್ಬನೇ ಜರ್ಮನ್ ಮುಖಂಡನಲ್ಲ; ಅಥವಾ ಹಿಟ್ಲರನು ನಿಜವಾದ ಮುಖಂಡನೇ ಅಲ್ಲ, ನಿಜವಾದ ಮುಖಂಡರೆಂದರೆ ಹಿಮ್ಲರ್, ರಿಬನ್‌ಟ್ರಾಫರು; ಅವರು ಹೇಳಿದಂತೆ ಹಿಟ್ಲರ್ ಕುಣಿಯುತ್ತಾನೆ" ಎಂದರು.

ಜರ್ಮನಿ ಗೆದ್ದರೆ? ಅಮೇರಿಕಕ್ಕೆ ಸಂಕಟವಿದೆ.

"ಜರ್ಮನಿ ಗೆದ್ದರೆ ಅಮೇರಿಕವು ಜರ್ಮನಿಯನ್ನು ಮಾತ್ರವಲ್ಲ, ಇಡೀ ಜಗತ್ತನ್ನೇ ಇದಿರಿಸಬೇಕಾಗುವುದು" ಎಂದು ವಾಶಿಂಗ್‌ಟನಿನಲ್ಲಿ ಸಿನೆಟರ್ ಬೌರ್ಕ್ಲೆಯವರು ಹೇಳಿದರು. ಅವರು ಮುಂದುವರಿಸುತ್ತಾ "ಆರ್ಥಿಕ ಸಾಮ್ರಾಜ್ಯವನ್ನು ಕಟ್ಟುವುದೇ ಈ ಯುದ್ಧದ ಉದ್ದೇಶ. ಇದರಿಂದ ರಾಜಕೀಯ ಸ್ವಾತಂತ್ರ್ಯವೂ ಹಾಳಾಗುವುದು. ಹಿಟ್ಲರನು ಗೆದ್ದರೆ ಇಡೀ ಯುರೋಪು ಖಂಡವೇ ಅವನ ಕೈಯೊಳಗಾಗುವುದು. ಆಫ್ರಿಕೆಯು ಅವನ ಸ್ವಾಧೀನವಾಗುವುದು. ಹಿಟ್ಲರನನ್ನು ಸೋಲಿಸಲೇ ಬೇಕು" ಎಂದರು.

ಟರ್ಕಿ ಬಲ್ಗೇರಿಯ ಒಪ್ಪಂದದ ಪ್ರತಿಧ್ವನಿ

ಟರ್ಕಿ ವಿದೇಶಮಂತ್ರಿ ಹೇಳಿಕೆ.

"ಸಣ್ಣ ಸಣ್ಣ ಕಾರಣಗಳಿಂದ ಭೀಷಣ ಘಟನೆಗಳು ಏಳುತ್ತವೆ. ಅಪಾರ ಹಾನಿಯೊದಗುತ್ತದೆ. ಈಗ ಆದ ಟರ್ಕಿ—ಬಲ್ಗೇರಿಯ ಒಪ್ಪಂದದಿಂದ ಬಾಲ್ಕನಿನಲ್ಲಿ ಹೆಚ್ಚಿನ ತೊಡಕುಗಳಾಗುವ ಪ್ರಸಂಗ ತಪ್ಪುವುದು" ಎಂದು ಟರ್ಕಿಯ ವಿದೇಶಮಂತ್ರಿ ಸರೋಜೋಗ್ಲು ಇವರು ಹೇಳಿದರು.

ಗ್ರೀಸಿನ ಮೇಲೆ ಜರ್ಮನ್ ವಿಮಾನಗಳು

ಜರ್ಮನ್ ವಿಮಾನಗಳು ಗ್ರೀಸಿನ ಮೇಲೆ ಹಾರಾಡಿದವೆಂದೂ ಆದರೆ ಬಾಂಬುಗಳನ್ನು ಸುರಿಸುವ ಆನಾಹುತ ನಡೆದಿಲ್ಲವೆಂದೂ, ಅವುಗಳು ಸ್ಥಳಪರೀಕ್ಷೆಯ ಸಲುವಾಗಿ ಹೀಗೆ ಬಂದಿರುವವೆಂದೂ ತಿಳಿಯಲಾಗಿದೆ. ಗ್ರೀಕರು ವಿಮಾನ ತೋಪುಗಳನ್ನು ಎಸೆಯಲಿಲ್ಲವೆಂದೂ, ಗ್ರೀಸಿನ ಮೇಲೆ ಬೇಗನೆ ಜರ್ಮನಿಯು ಧಾಳಿಯಿಡುವುದೆಂದೂ ಊಹಿಸಲಾಗಿದೆ.

ಯುದ್ಧ ಬೇಗನೇ ಮುಗಿವುದು

ರೂಸ್‌ವೆಲ್ಟರ ಅಭಿಪ್ರಾಯ

ಈಗಿನ ಯುದ್ಧವು ಬೇಗನೇ ಮುಗಿವುದೆಂದೂ, ಜರ್ಮನ್ ಧಾಳಿಯನ್ನು ಹಿಂದೂಡಿದರೆ ಬ್ರಿಟನಿಗೆ ಜಯವಾಗುವುದೆಂದೂ ರೂಸ್‌ವೆಲ್ಟರು ಹೇಳಿಕೆಯಿತ್ತಿರುವರು.

ಗ್ರೀಸನ್ನು ಪುಡಿಮಾಡಲು ಹಿಟ್ಲರನ ಯೋಚನೆ

ಬಲ್ಗೇರಿಯಾ ಮಾರ್ಗವಾಗಿ ಗ್ರೀಸಿನ ಮೇಲೆ ಧಾಳಿಮಾಡುವುದಕ್ಕೆ ಜರ್ಮನಿಯು ಪ್ರಯತ್ನಮಾಡುತ್ತಿರುವುದೆಂದೂ ಡೆನ್ಯೂಬ್ ನದಿಯನ್ನು ದಾಟಿದ ಕೂಡಲೆ ಜರ್ಮನರು ತೀವ್ರವಾಗಿ ಗ್ರೀಕನ್ನು ಆಕ್ರಮಿಸುವರೆಂದೂ ತಿಳಿದಿದೆ.

ಅಮೇರಿಕದಿಂದ ಜರ್ಮನರು ಮರಳುತ್ತಾರೆ

ಚಿಕಾಗೋದಲ್ಲಿರುವ ಜರ್ಮನ್ ರಾಯಭಾರಿಯು ತನ್ನ ಪರಿವಾರಸಮೇತವಾಗಿ ಹೋಗಬೇಕಾದ ಸಂಭವವಿರುವುದಾಗಿ ತಿಳಿದಿದೆ. ಹಾಗಾಗಿ ಅಮೇರಿಕ ಜರ್ಮನಿಗಳೊಳಗೆ ತಿಕ್ಕಾಟವು ಬೇಗನೇ ಬರಬಹುದೆಂಬ ಬಗ್ಗೆ ಇದು ಸೂಚನೆಯೋ ಎಂದು ಊಹಿಸಲಾಗಿದೆ.

ಮಾಲ್ಟಾದ ಮೇಲೆ ಧಾಳಿ

ಈ ವಾರ ಮಾಲ್ಟಾದ ಮೇಲೆ ಅನೇಕ ಸಲ ಜರ್ಮನ್ ವಿಮಾನಗಳು ಬಾಂಬುಗಳನ್ನೆಸೆದುವು. ಲಂಡನಿನ ಮೇಲೆ ಆಗಾಗ ಎಡೆಬಿಡದೆ ಬಾಂಬುಗಳು ಸು... ಯುತ್ತಿವೆ.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ

ಕ್ರಮಸಂಖ್ಯೆ 848/194..

ಕೆ. ಭೋಜರಾವ್ ... ವಾ...

ಸುತ್ತು

1. ಮುಗ್ಗಂಮ ಶೆಟ್ಟಿ 2. ರತ್ನಾವತಿ 3. ಸಂಕ... ಶೆಟ್ಟಿ 4. ಪೂವಕ್ಕೆ 5. ನೇಕಮ್ಮ 6. ... ಯ ನ್ಯಾಕ 7. ಪುಷ್ಪಾವತಿ (ಮೈನರ್, ಗಾರ್ಡಿಯನ್ 1ನೇ ಪ್ರತಿವಾದಿ) 8. ವೆಂಕಟ್ರಮ... ಪೋತಿ 9. ರಾಮಚಂದ್ರರಾವ್ 10. ... ಗಿರಿ ರಾವ್ ಯಾನೆ ಕೇಶಗಿರಿ ಪೋತಿ 11. ಪಿ. ನರಸಿಂಗ ರಾವ್ 12. ಕೃಷ್ಣರಾವ್ 1... ರಾಮಕೃಷ್ಣ 14. ನರಹರಿ ಮೈನರ್ ಗಾರ್ಡಿಯನ್ 11ನೇ ಪ್ರತಿವಾದಿ —ಪ್ರತಿವಾದಿರ...

6ನೇ ಪ್ರತಿವಾದಿ ಚಿಕ್ಕಯ್ಯ ನ್ಯಾಕನಿಗೆ

8ನೇ ಪ್ರತಿವಾದಿ ವೆಂಕಟ್ರಮಣ ಪೋತಿರಿ...

ಮೇಲ್ಕಂಡ ವಾದಿಯು ದಾಖಲುಮಾಡಿ... ಸೋಲಿನ ವ್ಯಾಜ್ಯವು ತಾ. 6—3—1941 ತನಗೆ ಇಟ್ಟಿರುತ್ತದೆ. ಆ ದಿವಸ ... ಕೋರ್ಟಿನ ಮುಂದೆ ಹಾಜರಾಗಿ ವ್ಯವಹರಿಸುವ... ತಪ್ಪಿನಲ್ಲಿ ಸದ್ರಿ 6ನೇ 8ನೇ ಪ್ರತಿವಾದಿ... ಯನ್ನು ಸಂಬಂ ತೀರ್ಮಾನಿಸಲ್ಪಡುವುದು ಎಂ... ಸಂಗ್ತಿ ಈ ಮೂಲಕ ತಿಳಿಸಲಾಗಿಯ...

(By order of Court).

Mangalore, 25-2-1941. B. Vyasarayachar... Advocate for plainti...

ನೋಟೀಸು.

ದ. ಕ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S. 3/19..

R. I. A. 33/19..

ಇದ್ದಿ ಬ್ಯಾರಿ—ಪಕ್ಕಿಬ್ಯಾರಿಗಳ ಮಗ, ಮಂ... ...ರು ತಾಲೂಕು ಪೆರ್ಮನ್ನೂರು ಗ್ರಾಮ... ಅರ್ಜಿದಾರ—(ವಾದಿ...

ಸುತ್ತು

1. ಪಸಬ್ಯಾರಿ—ಪಕ್ಕಿಬ್ಯಾರಿಗಳ ಮಗ, ... ಆದಂ ಬ್ಯಾರಿ—ಹಾಜಿ ಅಬ್ದುಲ್ಲ ಸ್ಯಾ... ದರ ಮಗ. ಸದ್ರಿ ಪೆರ್ಮನ್ನೂರು ಗ್ರಾ... ಸ್ತವ್ಯ, ರೆಸ್ಪಾಂಡೆಂಟರು(ಪ್ರತಿವಾದಿ... ಮೇಲೆ ಬರೆದು ಕಾಣಿಸಿದ 1ನೇ ಪ್ರತಿ... ದಿಯು ತನ್ನ ಎಲ್ಲಾ ಆಸ್ತಿಗಳ ಕುರಿತು ... ಪ್ರತಿವಾದಿಗೆ ಮಾಡಿಕೊಟ್ಟ ಸರಾಭಾರೆಗಳ... ರದ್ದುಗೊಳಿಸಬೇಕಾಗಿ ಸೋಲಿನ ವಾದಿ... ಮಾಡಿದ ಸೋಲಿನ ದಾವೆಯನ್ನು ತಾನು ... 1ನೇ ಪ್ರತಿವಾದಿ ಬಾಬ್ತು ಎಲ್ಲಾ ಕ್ರೆಡಿಟ... ಪರವಾಗಿ ದಾಖಲು ಮಾಡಿ ನಡಸುವರೇ ... ಹುಕ್ಕುಂ ಕೊಡಬೇಕಾಗಿ ವಾದಿಯು ... ಹೇಳಿದ ಅರ್ಜಿ ಮಾಡಿದುದರಿಂದ ಆ... ಆಕ್ಷೇಪ ಹೇಳಲಿಕ್ಕೆ ಇರುವವರು ಮೇ... ಕೋರ್ಟಿನ ಮುಂದೆ ಸ್ವತಹ ಅಥವಾ ವಕೀ... ಮುಖಾಂತರ ತಾ. 3-3-41ನೇ ಪೂರ್ವಾ... 10½ ಘಂಟೆಗೆ ಹಾಜರಾಗಿ ತಮ್ಮ ಆಕ್ಷೇ... ಬರಹಮೂಲಕ ಹೇಳಿಕೊಳ್ಳಬೇಕಾಗಿಯೂ ... ವಾದ್ರೆ ಅರ್ಜಿ ಪ್ರಕಾರ ಹುಕ್ಕುಂ ಆದೀ... ಗ್ಳಿಯೂ ಈ ಮೂಲಕ ಸರ್ವರಿಗೂ ತಿಳಿಸ... ಲಾಗಿದೆ.

ಮಂಗಳೂರು, ತಾ. 20-2-41. K. Balakrishna Ra... ಅರ್ಜಿದಾರ (ವಾದಿಯ) ಎಡ್ವೋಕೇ...

ಆಂಗ್ಲ ಮಹಿಳೆಯು ಸತ್ಯಾಗ್ರಹವನ್ನು ಹೂಡಿದರು!

ಭಾರತದ ರಾಜಕೀಯದಲ್ಲಿ ವಿಶೇಷ ಬದಲಾವಣೆ ಆಗಿಲ್ಲ. ಸತ್ಯಾಗ್ರಹವು ಹಿಂದಿನಂತ ತೀವ್ರವಾಗುತ್ತದೆ. ಸರಕಾರದವರು ಸತ್ಯಾಗ್ರಹಿಗಳ ವಿಷಯದಲ್ಲಿ ಅನೇಕ ರೀತಿಗಳನ್ನು ಅನುಸರಿಸುತ್ತಿದ್ದಾರೆ. ಹಲವರನ್ನು ಅನೇಕ ದಿನಗಳ ತನಕ ರಿಮಾಂಡಿನಲ್ಲಿರಸಲಾಗುತ್ತದೆ. ಹಲವರನ್ನು ಕೈದು ಮಾಡುವುದಿಲ್ಲ; ಹಲವರ ಮೇಲೆ 'ನ್ಯೂ ಸೆನ್ಸ್' ಜಾರಿಯಾಗುತ್ತದೆ. ಹಲವು ಕಡೆ ಲಾಥಿ ಚಾರ್ಜು ಮಾಡಿದ್ದರೆಂದು ಸುದ್ದಿ. ಕೈದು ಮಾಡದೆ ಬಿಟ್ಟ ಸತ್ಯಾಗ್ರಹಿಗಳು ರಥದಿಂದ ಕಾಂಗ್ರೆಸು ಪ್ರಚಾರ ಮಾಡಿ ಡಿಲ್ಲಿಯತ್ತ ಕಡೆ ತೆರಳುತ್ತಿರೆ; ಜಿನ್ನರ ಮುಸ್ಲಿಂ ಲೀಗು ಡಿಲ್ಲಿಯಲ್ಲಿ ಠರಾವೊಂದನ್ನು ಮಾಡಿ ಕಾಂಗ್ರೆಸನ್ನು ಟೀಕಿಸಿದೆ. ಬ್ರಿಟನು ಲೀಗಿನೊಡನೆ ಕೇಳದೆ ಕಾಂಗ್ರೆಸಿನೊಡನೆ ರಾಜಿಮಾಡಿಕೊಳ್ಳ ಬಾರದೆಂದು ಕೇಳಿದೆ. ಎಮೆರಿಯವರು ಪುನಃ ಒಂದು ಹೇಳಿಕೆಯಿತ್ತು ಅದರಲ್ಲಿ ಕಾಂಗ್ರೆಸಿನ ಇಂದಿನ ಮಾರ್ಗವನ್ನು ಟೀಕಿಸಿದ್ದಾರೆ ಹಿಂದೀ ಸೈನಿಕರನ್ನು ಹೊಗಳಿದ್ದಾರೆ.

ಆಂಗ್ಲ ಮಹಿಳೆಯ ಸತ್ಯಾಗ್ರಹ

ಮಿಸೆಸ್ ಫ್ರೀಡಾವೇದಿ

೬ ತಿಂಗಳ ಶಿಕ್ಷೆ

ಲಾಹೋರಿನ ಸಮತಾವಾದಿಗಳಾದ ಶ್ರೀ. ಬಿ. ಪಿ. ಎಲ್. ವೇದಿಯವರ ಪತ್ನಿ ಮಿಸೆಸ್ ಫ್ರೀಡಾ ವೇದಿಯವರು ತ್ರಾ. ... ರಂದು ಸತ್ಯಾಗ್ರಹ ಹೂಡಿ ಬಂಧಿತರಾಗಿ ೬ ತಿಂಗಳ ಶಿಕ್ಷೆಗೊಳಗಾಗಿರುವರು. ಇವರು ಆಂಗ್ಲ ಮಹಿಳೆ.

ರಾಜಕೀಯ ಕೈದಿಗಳ ಭೇಟಿಗೆ ಪ್ರತಿಬಂಧ

ಅವರನ್ನು ಪಂಜರದಲ್ಲಿ ನಿಲ್ಲಿಸುವರು

ರತ್ನಾಗಿರಿಯ ಕಾಂಗ್ರೆಸ ಮುಂದಾಳುಗಳಾದ ಶ್ರೀ. ಅಪ್ಪಾಸಾಹೇಬ ಪಟವರ್ಧನರು ಹಿಂಡಲಗಿ ಸೆರೆಮನೆಯಲ್ಲಿ ಓರ್ವ ರಾಜಕೀಯ ಕೈದಿಯನ್ನು ಕಾಣಲು ಬಂದಿದ್ದರು; ಆದರೆ ತುರಂಗದ ಅಧಿಕಾರಿಗಳು ಆ ಕೈದಿಯನ್ನು ಪಂಜರದಲ್ಲಿ ನಿಲ್ಲಿಸಿ ಭೇಟಿ ತೆಗೆದುಕೊಳ್ಳಲು ಹೇಳಿದ್ದರಿಂದ ಅಪ್ಪಾಸಾಹೇಬರು ಅದನ್ನು ನಿರಾಕರಿಸಿ ಹಾಗೇ ಹೋಗಿಬಿಟ್ಟರು.

ಕಾಂಗ್ರೆಸ್ಸಿನ ಮೇಲೆ ಮುಸ್ಲಿಂ ಲೀಗಿನ ಟೀಕೆ

ತಮ್ಮ ಕೇಳಿಕೆಯನ್ನು ಇಂದು ಸತ್ಯಾಗ್ರಹ ಹೂಡುವ ಮೂಲಕ ಮುಂದಿಟ್ಟು, ಬ್ರಿಟಿಷ ಸರಕಾರವನ್ನು ಒತ್ತಾಯಪಡಿಸಿ, ತಮ್ಮ ಹಿತವನ್ನು ಪಡೆಯುವರೆ ಕಾಂಗ್ರೆಸು ಚಳವಳ ನಡೆಸಿರುವುದೆಂದಲ್ಲ, ಮುಸ್ಲಿಂ ಲೀಗಿನೊಡನೆ ಒಪ್ಪಂದಮಾಡಿ...

ಸತ್ಯಾಗ್ರಹ ಕಾಲದಲ್ಲಿ ಲಾಥೀಚಾರ್ಜು

ಕಾಂಗ್ರೆಸಿನ ಮೇಲೆ ಲೀಗಿನ ದುರಭಿಪ್ರಾಯ!

ವೈಸರಾಯರಲ್ಲಿ ಶಿಷ್ಟಮಂಡಳಿಯೆ?

ಜಸ್ಟಿಸ್ ಪಾರ್ಟಿಯೊಡನೆ ಎಂ. ಎನ್. ರೋಯ್

ಕೊಳ್ಳದೆ ಕಾಂಗ್ರೆಸು ವಾಕ್‌ಸ್ವಾತಂತ್ರ್ಯದ ನೆವದಿಂದ ಸತ್ಯಾಗ್ರಹ ಹೂಡಿದುದು ಸರಿಯಾಗಿಲ್ಲವೆಂದು ಗಾಂಧಿಜಿಯವರನ್ನು ದೂರುತ್ತಾ ಸರಕಾರವು ಕಾಂಗ್ರೆಸಿನ ಕೇಳಿಕೆಯನ್ನು ಮನ್ನಿಸಿದರೆ ಮುಸ್ಲಿಂ ಲೀಗು ಅದನ್ನು ವಿರೋಧಿಸಬೇಕಾಗುವುದೆಂಬ ಅರ್ಥದ ಠರಾವೊಂದನ್ನು ಡಿಲ್ಲಿಯಲ್ಲಿ ಕೂಡಿದ ಮುಸ್ಲಿಂ ಲೀಗಿನ ವರ್ಕಿಂಗ್ ಕಮಿಟಿ ಸಭೆಯಲ್ಲಿ ಜಿನ್ನಮಂಡಳಿಯವರು ಪಾಸುಮಾಡಿದರು.

ಭೋಸರ ಮೇಲೆ ಮತ್ತೊಂದು ವಾರಂಟು!

ಸರಕಾರದವರು ಹಿಂದೆ ಎರಡು ವಾರಂಟು ಹೊರಡಿಸಿದಲ್ಲದೆ ಬೋಸರ ಮೇಲೆ ಈಗ ಮತ್ತೊಂದು ವಾರಂಟು ಹೊರಡಿಸಿರುವರು. ಆದರೆ ಅವರ ಪತ್ತೆ ಎಲ್ಲಿಯೂ ಸಿಗುವುದಿಲ್ಲ. ಪೋಲೀಸರು ಹುಡುಕುತ್ತಾ ಅಲೆದಾಡುತ್ತಾರೆ.

ಮದ್ರಾಸಿನಲ್ಲಿ ಎಂ. ಎನ್. ರಾಯ್.

ಜಸ್ಟಿಸ್ ಪಾರ್ಟಿಯವರೊಡನೆ

ರೇಡಿಕಲ್ ಕಾಂಗ್ರೆಸಿನ ಮುಖಂಡರಾದ ಎಂ. ಎನ್. ರಾಯರವರು ಪತ್ನೀ ಸಮೇತರಾಗಿ ಮದ್ರಾಸಿಗೆ ಬಂದರು. ಅವರ ಕೆಲ ಅನುಯಾಯಿಗಳೂ ಜಸ್ಟಿಸ ಪಾರ್ಟಿಯವರೂ ಅವರನ್ನು ಸ್ವಾಗತಿಸಿ ಸಭೆ ಭಾಷಣಗಳನ್ನೇರ್ಪಡಿಸಿದರು. ರಾಯರವರು ಸಭೆಯಲ್ಲಿ ಮಾತನಾಡುತ್ತಾ ಕಾಂಗ್ರೆಸನ್ನು ಇಂದಿನ ಸತ್ಯಾಗ್ರಹದ ವಿಷಯದಲ್ಲಿ ಟೀಕಿಸಿ, ನಾಜಿಸಂ, ಫೇಸಿಸಂಗಳ ವಿರುದ್ಧವಾಗಿ ನಾವಿಂದು ಹೋರಾಡಬೇಕೆಂದೂ, ಬ್ರಿಟನಿಗೆ ಜನ ಧನಸಹಾಯ ಕೊಡಬೇಕೆಂದೂ ಹೇಳಿದರು.

ಎಲ್ಲಾ ಸರಿಯಿರುವ 24 ಮಂದಿಗೆ ಬಹುಮಾನ ಕೊಡಲಾಗುವುದು

ಭದ್ರತೆಯ ಇನಾಮುಗಳು ಸ್ಪರ್ಧೆ ನಂಬ್ರ 22.

ಮಾತ್ರವಲ್ಲದೆ, ಪಟ್ಟಿನ ರೂ ... ಇನಾಮುಗಳು ಯಾರ ಮೊದಲನೆಯ ಅಡ್ಡಗೆರೆಯ ಮೊದಲನೆಯ ಎರಡು ಅಂಕೆಗಳು ನಮ್ಮ ಉತ್ತರಕ್ಕೆ ಸರಿಯಾಗಿವೆಯೋ ಅವರಿಗೆ ಕೊಡಲಾಗುವುದು. ಮತ್ತೆ ... ಯಾವುದಾದರೊಂದು ಸಾಲಿನ ನಮ್ಮ ಉತ್ತರದ ಸಾಲಿಗೆ ಸಮವಿದ್ದರೂ ಅವರಿಗೆ ರೂ 20ರ ಕನ್ಸೋಲೇಶನ್ ಪ್ರೈಸ್ ಕೊಡಲಾಗುವುದು 1 ಮೊದಲನೆಯ ಎರಡು ಅಡ್ಡಗೆರೆಯ ಸಾಲುಗಳಿಗೆ ಸಮವಿದ್ದರೆ ಅಥವಾ 2, ಮೊದಲನೇ ಎರಡು ಮೇಲಿಂದ ಕೆಳಗಿನ ಗೆರೆಯ ಸಾಲುಗಳು ನಮ್ಮ ಉತ್ತರದಂತಿದ್ದರೆ ಎರಡು ಮೇಲಿಂದ ಕೆಳಗಿನ ಗೆರೆಯ ಸಾಲುಗಳಿಗೆ ಅಧಿಕವಾಗಿ ರೂ. 300 ಕೊಡಲಾಗುವುದು. ಹೆಚ್ಚು ಉತ್ತರ ಕಳುಹಿಸಿದವರಿಗೆ ರೂ. 1,0 ಪ್ರತ್ಯೇಕ ಇನಾಮು. ಮುಂದೆ ಹಾಕಿ ಇಡಲಾಗಿದೆ 1ರಿಂದ 18ರ ವರೆಗೆ ಅಂಕೆಗಳನ್ನು ಈ ಚಕ್ರಾಕಾರದಲ್ಲಿ ಪ್ರತಿಯೊಂದು ಸಾಲಿನ ಅಂಕೆಗಳು ಮತ್ತು ಎರಡು ಮೂಲೆಯಿಂದ ಎದುರು ಮೂಲೆಗೆ ಹೋಗುವ ... 42 ಆಗುವಂತೆ ಜೋಡಿಸಿರಿ. ಪ್ರತಿಯೊಂದು ಅಂಕೆಯನ್ನು ಒಂದುಸಲ ಮಾತ್ರ ಉಪಯೋಗಿಸಬಹುದು. ಉತ್ತರ ಕಳುಹಿಸುವ ಕಡೆಯ ತಾರೀಕು 14—3—41 ಫಲಿತಾಂಶವು ಪ್ರಕಟವಾಗುವ ತಾರೀಕು 24—3—41

ಪ್ರವೇಶ ಫೀಸು ಪ್ರತಿಯೊಂದಕ್ಕೆ ರೂ. 1 ... ಉತ್ತರಗಳಿಗೆ ರೂ. 2 8 ಉತ್ತರಗಳಿಗೆ ರೂ ...

ಮೇಲೆ ಹೇಳಿದ ನಿಯಮದಂತೆ ಎಷ್ಟೇ ಉತ್ತರಗಳನ್ನು ಕಾಗದದಲ್ಲಿ ಬರೆದು ಕಳುಹಿಸಿದರೂ ಸ್ವೀಕರಿಸಲಾಗುವುದು. ಹಣವನ್ನು ಮನಿ ಆರ್ಡರ್ ಮೂಲಕ ಇಲ್ಲವೇ ಇಂಡಿಯನ್ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸುವುದು. ಕಡಿಮೆ ಪಕ್ಷದಲ್ಲಿ ಎರಡು ಸಾವಿರ ರೂಪಾಯಿಗಳ ಇನಾಮು ಪ್ರತಿಯೊಂದು ಶುದ್ಧ ಉತ್ತರಕ್ಕೆ ಕೊಡಲಾಗುವುದು. ಶುದ್ಧ ಉತ್ತರದ ಪೆಟ್ಟಿಗೆಯ ಪ್ರಾಮಿಸ್ಸರಿ ಬೇಂಕು ಒಂದರಲ್ಲಿ ಡಿಪೋಜಿಟ್ ಇಡಲಾಗಿದೆ.

ಮೇಲಿನ ಇನಾಮುಗಳು ರೂ. 48,000 ಆಗುತ್ತವೆ. ಇದನ್ನು ಇನಾಮು ಪಡೆದ ಜನರ ಸಂಖ್ಯೆಯನ್ನು ಹೊಂದಿಕೊಂಡು ಕಡಿಮೆ ಅಥವಾ ಹೆಚ್ಚುಮಾಡಲಾಗುವುದು. ಫಲಿತಾಂಶ ತಿಳಿಯುವರೆ ನಿಮ್ಮ ಎಡ್ರೆಸು ಬರೆದ ಸ್ಟಾಂಪು ಹಚ್ಚಿದ ಲಕೋಟೆಯೊಂದನ್ನು ಉತ್ತರದೊಡನೆ ಕಳುಹಿಸಿ. ಮೆನೇಜರರ ನಿರ್ಧಾರವೇ ಕೊನೆಯ ನಿರ್ಧಾರ.

ಪಟ್ಟಿ ಸಂಖ್ಯೆ 46ರ ಉತ್ತರ.	ಪ್ರವೇಶ ಮತ್ತು ಹಣ ಕಳುಹಿಸುವ ವಿಳಾಸ —
1ನೆಯ ಸಾಲು 9, 4, 15, 18	The Manager,
2ನೆಯ ಸಾಲು 19, 14, 5, 8	Presidency Commercial Syndicate
3ನೆಯ ಸಾಲು 12, 17, 10, 7	Mumbadevi, Bombay 2.
4ನೆಯ ಸಾಲು 6, 11, 16, 13	

ಸತ್ಯಾಗ್ರಹಿಗಳು ಡಿಲ್ಲಿಗೆ ಹೋಗುವ ವಿಷಯವಾಗಿ ಮಹಾತ್ಮರ ಸಲಹೆ

ಸರಹದ್ದಿನಲ್ಲಿ ಇರುವ ಸತ್ಯಾಗ್ರಹಿಗಳು ಹಲವರು ಒಟ್ಟಾಗಿ ಡಿಲ್ಲಿಗೆ ಹೊರಡದೆ ಒಬ್ಬೊಬ್ಬರಾಗಿ ಹೋಗಬೇಕೆಂದೂ, ಅವರು ಡಿಲ್ಲಿಗೆ ಹೋಗುವ ಹೊತ್ತು ... ತಿಂಗಳು ಜಿಲ್ಲೆಯಲ್ಲಿ ಸಂಚರಿಸಬೇಕೆಂದೂ ಡಿಲ್ಲಿಗೆ ಹೋಗಲು ಅಸಮರ್ಥರಾದವರು ಮತ್ತು ರೋಗಿಗಳು ಡಿಲ್ಲಿಯತ್ತ ಕಡೆ ಹೋಗದೆ ಊರಲ್ಲಿ ರಚನಾತ್ಮಕ ಕಾರ್ಯ ಮಾಡಬಹುದಾದರೂ ಅಲ್ಲಿ ಏನು ಬರಹ ... ಅವರು ಕಲಿಯಬೇಕೆಂದು ಮಹಾತ್ಮರು ಸೂಚಿಸಿರುವರು.

ಸತ್ಯಾಗ್ರಹ ಸಭೆಯಲ್ಲಿ ಲಾಥೀ

ಲಾಹೋರಿನ ಹೊಶಿಯಾರ ಜಿಲ್ಲೆಯ ... ಎಂಬಲ್ಲಿ ಸತ್ಯಾಗ್ರಹ ಮಾಡಲಿದ್ದ ... ಎಂಬವರನ್ನು ಸರೆಹಿಡಿಯುವಾಗ ಪೋಲೀಸರು ಅಲ್ಲಿ ನೆರೆದಿದ್ದ ಜನಸಮೂಹದ ಮೇಲೆ ಲಾಠೀ ಪ್ರಯೋಗ ಮಾಡಿದರೆಂದೂ ಈ ಸಂಬಂಧದಿಂದ ... ಜನರನ್ನು ಕೈದು ಮಾಡಿರುವರೆಂದೂ ತಿಳಿದಿದೆ.

ಭಾರತದ ಬಿಕ್ಕಟ್ಟು ಬಗೆಹರಿಸಲು ಪ್ರಾಗತಿಕರು ಯತ್ನಿಸುತ್ತಾರ

ಮುಂಬೈಯಲ್ಲಿ ಸಭೆ— ವೈಸರಾಯರಲ್ಲಿ ಶಿಷ್ಟಮಂಡಳ

ಪ್ರಾಗತಿಕ ಪಕ್ಷದ ಕೆಲವು ಮುಖಂಡರು ಬೇಗನೇ ಮುಂಬೈಯಲ್ಲಿ ಸಭಸೇರಿ ಭಾರತದ ಇಂದಿನ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸುವ ಕುರಿತು ವಿಚಾರ ಮಾಡಿ ವೈಸರಾಯರಿಗೆ ನಿವೇದಿಸಲು ಒಂದು ಶಿಷ್ಟಮಂಡಳಿಯನ್ನು ಕಳುಹಿಸುವರೆಂದು ತಿಳಿದುಬಂದಿದೆ. ಇದಕ್ಕೆ ಸುಮಾರು ೩೦ ಜನರನ್ನು ಎಲ್ಲಾ ರಾಜಕೀಯ ಪಕ್ಷದವರನ್ನೂ ಆಮಂತ್ರಿಸಲಾಗಿದೆ.

ರಾಜಕೀಯ ಕೈದಿಯ ಕೈಗೂ ಕೋಳ!

ಧಾರವಾಡ ತಾಲೂಕಿನ ಲೋಕೂರು ಎಂಬಲ್ಲಿನ ಸತ್ಯಾಗ್ರಹಿ ಶ್ರೀ ಈಶ್ವರಪ್ಪ ಬಡಿಗೇರರನ್ನು ಹಿಂಡಲಗಿ ಸೆರೆಮನೆಗೆ ಕೊಂಡೊಯ್ಯುವಾಗ, ಇನ್ನೊಬ್ಬ ಕ್ರಿಮಿನಲ್ ಕೈದಿಯೊಡನೆ ಇವರ ಕೈಗೂ ಕೋಳ ಹಾಕಿದ್ದು ಮಾತ್ರವಲ್ಲದೆ ರಟ್ಟೆಗೆ ಹಗ್ಗಗಳನ್ನೂ ಬಿಗಿದಿರುವರೆಂದು ತಿಳಿದು ಬರುತ್ತದೆ. ರಾಜಕೀಯ ಕೈದಿಯನ್ನು ಈ ರೀತಿ ಅಪಮಾನಕರವಾದ ರೀತಿಯಲ್ಲಿ ನಡೆಸಿದ ಬಗ್ಗೆ ಜನತೆಯಲ್ಲಿ ಬಹಳ ಅಶಾಂತತೆಯುಂಟಾಗಿದೆಯೆಂದು ತಿಳಿದುಬರುತ್ತದೆ.

ಕರ್ನಾಟಕದ ಸತ್ಯಾಗ್ರಹಿಗಳ ನಾಲ್ಕನೆ ಪಟ್ಟಿಗೆ ಗಾಂಧಿಜಿಯವರ ಅನುಮತಿ ಸಿಕ್ಕಿದೆ

ಒಟ್ಟು ೩೬೩ ಸತ್ಯಾಗ್ರಹಿಗಳು

ದಕ್ಷಿಣ ಕನ್ನಡದಲ್ಲಿ ೨೯ ಜನರು

ಸತ್ಯಾಗ್ರಹಿಗಳಿಗೆ ಸೂಚನೆಗಳು

ಗಾಂಧಿಜಿಯವರ ಕಡೆಗೆ ಕಳಿಸಿಕೊಟ್ಟ ೩೬೩ ಸತ್ಯಾಗ್ರಹಿಗಳ ನಾಲ್ಕನೇ ಪಟ್ಟಿಯಲ್ಲಿ ಎರಡು ಹೆಸರುಗಳನ್ನು ಮಾತ್ರ ಬಿಟ್ಟು ಉಳಿದವುಗಳಿಗೆ ಗಾಂಧೀಜಿಯವರು ಒಪ್ಪಿಗೆಯನ್ನು ಕೊಟ್ಟಿರುವರು.

ಸತ್ಯಾಗ್ರಹಿಯು ಪ್ರತಿದಿನ ನೂಲಲೇಬೇಕು

ಸತ್ಯಾಗ್ರಹಿಗಳು ಪ್ರತಿದಿವಸ ನೂಲಲೇಬೇಕೆಂದು ಮಹಾತ್ಮಾಜಿಯವರು ಕಟ್ಟಿನ ಆಜ್ಞೆಯನ್ನು ಹೊರಡಿಸಿರುವರು. ಪ್ರತಿನಿತ್ಯ ನೂಲುವದಿಲ್ಲವೆಂದು ಕಂಡುಬಂದ ಸತ್ಯಾಗ್ರಹಿಗಳಿಗೆ ಸತ್ಯಾಗ್ರಹ ಮಾಡಲು ಒಪ್ಪಿಗೆಕೊಡಬಾರದೆಂದು ಮಹಾತ್ಮರ ಇಚ್ಛೆ ಇರುವದು. ಸತ್ಯಾಗ್ರಹ ಮಾಡಲು ಒಪ್ಪಿಗೆ ಕೊಡುವ ಪೂರ್ವದಲ್ಲಿ ಸತ್ಯಾಗ್ರಹಿಗೆ ಕನಿಷ್ಟ ಅರ್ಧ ಘಂಟೆಯಾದರೂ ಕಾಂಗ್ರೆಸ್ ಕಚೇರಿಯಲ್ಲಿ ನೂಲಲು ಹೇಳಬೇಕು. ಒಂದು ವೇಳೆ ಆತನಿಗೆ ನೂಲಲಿಕ್ಕೆ ಬಾರದೇ ಇದ್ದಲ್ಲಿ ಆತನ ಹೆಸರನ್ನು ಪ್ರಾಂತೀಯ ಸಮಿತಿಗೆ ಕಳಿಸಿಕೊಡಬೇಕು.

ಪುನಃ ಪುನಃ ಸತ್ಯಾಗ್ರಹ

ಒಮ್ಮೆ ಸತ್ಯಾಗ್ರಹಿಯು ಪ್ರತಿಜ್ಞಾಪತ್ರಕ್ಕೆ ಸಹಿಹಾಕಿ ಸಿದ್ಧನಾದನೆಂದರೆ ಸತ್ಯಾಗ್ರಹ ಸಮರವು ಮುಗಿಯುವ ವರೆಗೆ ಪುನಃ ಪುನಃ ಸತ್ಯಾಗ್ರಹ ಮಾಡಲೇಬೇಕಾಗುವುದು. ಕೈದಾಗದ ಇದ್ದ ಸತ್ಯಾಗ್ರಹಿಯು ಸತ್ಯಾಗ್ರಹವನ್ನು ಮಾಡುತ್ತ ದಿಲ್ಲಿಯ ಕಡೆಗೆ ಹೊರಡಬೇಕು. ಆಗ್ಗೆ ರಚನಾತ್ಮಕ ಕಾರ್ಯದ ಮಹತ್ವವನ್ನು ತಿಳಿಸಿಹೇಳಬಹುದು. ಒಮ್ಮೆ ಜೈಲಿಗೆ ಹೋಗಿಬಂದರೆ ತನ್ನ ಕೆಲಸ ಮುಗಿಯಿತೆಂದು ತಿಳಿಯಕೂಡದು. ಪುನಃ ಸತ್ಯಾಗ್ರಹವನ್ನು ಮಾಡಬೇಕು.

ಸತ್ಯಾಗ್ರಹ ಪದ್ಧತಿ

ಈ ಮೊದಲೇ ಕೊಟ್ಟ ಯುದ್ಧವಿರೋಧಕ ಘೋಷಣೆಯನ್ನೆ ಮಾಡಿ ಸತ್ಯಾಗ್ರಹ ಮಾಡಬೇಕು. ಆದರೆ ಈ ಘೋಷಣೆಯನ್ನು ಹೇಳುವ ಪೂರ್ವದಲ್ಲಿ ಅಥವಾ ನಂತರ ಅದನ್ನು ಜನತೆಗೆ ತಿಳಿಸಿ ಹೇಳಬಹುದು. ಈ ವಿಷಯವಾಗಿ ಜನರು ಏನಾದರೂ ಪ್ರಶ್ನೆ ಕೇಳಿದಲ್ಲಿ ಸತ್ಯಾಗ್ರಹಿಯು ಅದಕ್ಕೆ ಸಮರ್ಪಕ ಉತ್ತರವನ್ನು ಕೊಡಬಹುದು. ಇಷ್ಟು ಮುಂದೆ ಯುದ್ಧವಿರೋಧಕ ಪತ್ರಗಳನ್ನು ಬರೆದು ಯಾರೂ ಸತ್ಯಾಗ್ರಹ ಮಾಡತಕ್ಕದ್ದಲ್ಲ.

ಸತ್ಯಾಗ್ರಹಿಯು ಯಾವುದಾದರೊಂದು ನೌಕರಿಯ ಮೇಲೆ ಇದ್ದರೆ ಆತನು ಸತ್ಯಾಗ್ರಹ ಮಾಡುವ ಪೂರ್ವದಲ್ಲಿ ತನ್ನ ಜಾಗೆಗೆ ರಾಜಿನಾಮೆಯನ್ನು ಕೊಡತಕ್ಕದ್ದು.

ವಿದೇಶಿ ವಸ್ತು ಅಥವಾ ವಿದೇಶಿ ಅರಿವೆಗಳ ವ್ಯಾಪಾರಸ್ಥರು ಸತ್ಯಾಗ್ರಹಿಗಳಾಗಬಾರದು. ಅಂಥವರಿಂದ ಪ್ರತಿಜ್ಞಾಪತ್ರಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ.

ಸ್ತ್ರೀ ಸತ್ಯಾಗ್ರಹಿ

ಗರ್ಭಿಣಿ ಸ್ತ್ರೀಯರು ಅಥವಾ ಮೂರು ವರ್ಷಕ್ಕೆ ಚಿಕ್ಕದ ಮಕ್ಕಳುಳ್ಳವರು ಸತ್ಯಾಗ್ರಹ ಮಾಡತಕ್ಕದ್ದಲ್ಲ. ಯಾವ ಕಾರಣದಿಂದಲೂ ಸ್ತ್ರೀಯರು ತಮ್ಮ ಮಕ್ಕಳನ್ನು ಜೈಲಿನಲ್ಲಿ ತೆಗೆದುಕೊಂಡು ಹೋಗತಕ್ಕದ್ದಲ್ಲ. ಸ್ತ್ರೀ ಸತ್ಯಾಗ್ರಹಿಗಳು ಕೈದಾಗದೇ ಇದ್ದಲ್ಲಿ ಅವರು ಜಿಲ್ಲಾ ಅಥವಾ ಪ್ರಾಂತದಲ್ಲಿ ಪ್ರವಾಸ ಮಾಡಬಹುದು. ಜಿಲ್ಲೆಯೊಳಗಿನ ಪ್ರತಿಯೊಂದು ಹಳ್ಳಿಗೆ ಹೋಗಿ ಸತ್ಯಾಗ್ರಹ ಮಾಡುವದಲ್ಲದೆ ಕಾಂಗ್ರೆಸ್ ಸಂದೇಶ, ವಿಧಾಯಕ ಕಾರ್ಯಕ್ರಮ ಮುಂತಾದವುಗಳನ್ನು ತಿಳಿಸಿಹೇಳಬಹುದು. ಈ ಪ್ರಕಾರ ಕೈದಾಗುವ ವರೆಗೆ ಕಾರ್ಯಕ್ರಮವನ್ನು ಮಾಡುತ್ತ ಹೋಗಬೇಕು. ಜಿಲ್ಲೆಯಲ್ಲಿ ಪ್ರವಾಸಮಾಡಿದರೂ ಅವರು ದಿಲ್ಲಿಗೆ ಹೋಗುವ ಧ್ಯೇಯವನ್ನು ಇಟ್ಟುಕೊಳ್ಳಬೇಕು.

ಕ್ಯಾಂಟೋನ್‌ಮೆಂಟ್ ವಿಭಾಗದಲ್ಲಿ ಸತ್ಯಾಗ್ರಹ ಮಾಡತಕ್ಕದ್ದಲ್ಲ. ಹಾಗು ಅಲ್ಲಿ ಸತ್ಯಾಗ್ರಹ ಸಮಿತಿಯೂ ಇರತಕ್ಕದ್ದಲ್ಲ. ಒಂದು ವೇಳೆ ಈಗಾಗಲೇ ಸತ್ಯಾಗ್ರಹ ಸಮಿತಿಗಳು ಇದ್ದಲ್ಲಿ ಅವು ರದ್ದಾದುವೆಂದು ತಿಳಿದುಕೊಳ್ಳಬೇಕು. ಮತ್ತು ಆ ಸ್ಥಳದಲ್ಲಿ ಮೊದಲಿನ ಕಾಂಗ್ರೆಸ್ ಸಮಿತಿಯು ಉಳಿಯುವದು.

ಅವಧಿ

ಈ (ನಾಲ್ಕನೇ) ಪಟ್ಟಿಯಲ್ಲಿ ಮಂಜೂರಾದ ಸತ್ಯಾಗ್ರಹಿಗಳು ಇಂದಿನಿಂದಲೇ ಸತ್ಯಾಗ್ರಹ ಮಾಡಬಹುದು. ಹೀಗೆಂದು ಕ. ಪ್ರಾಂ. ಕಾಂ. ಕಮಿಟಿ ಅಧ್ಯಕ್ಷರು ತಾ. ೨೧ರ ಪ್ರಕಟಣೆಯ ಮೂಲಕ ತಿಳಿಸುತ್ತಾರೆ.

ಕೈದಾಗದಿದ್ದರೆ ದಿಲ್ಲಿಗೆ ನಡೆಯಿರಿ

— ಕೆ. ಪಿ. ಸಿ. ಸಿ. ಪ್ರಕಟಣೆ —

ನಮ್ಮ ಪ್ರಾಂತದಲ್ಲಿ ಬಳ್ಳಾರಿ ಕೊಡಗು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಕಡೆಯಲ್ಲಿ ಸತ್ಯಾಗ್ರಹ ಮಾಡಿದ್ದವರನ್ನು ಕೈದು ಮಾಡುತ್ತಿರುವರು. ಆದರೆ ಇತ್ತಲಾಗಿ ಬಳ್ಳಾರಿ ಹಾಗು ಕೊಡಗು ಜಿಲ್ಲೆಗಳಲ್ಲಿ ಕೆಲ ಸತ್ಯಾಗ್ರಹಿಗಳು ಯುದ್ಧವಿರೋಧಕ ಘೋಷಣೆ ಹಾಗು ಭಾಷಣಗಳನ್ನು ಮಾಡಿದಾಗ್ಯೂ ಸರಕಾರದವರು ಅವರನ್ನು ಬಂಧಿಸಿರುವುದಿಲ್ಲ. ಈ ಬಗ್ಗೆ ಹಲವರು ಅಸಮಾಧಾನ ಉಳ್ಳವರಾಗಿರುವದು ನಮಗೆ ತಿಳಿದುಬಂದಿದೆ. ಆದರೆ ಇದಕ್ಕೆ ಅಸಮಾಧಾನ ಪಡುವ ಕಾರಣವಿಲ್ಲ. ಎಲ್ಲಿ ಸತ್ಯಾಗ್ರಹ ಮಾಡಿದರೂ ಕೈದು ಮಾಡುವುದಿಲ್ಲವೋ ಆ ವಿಭಾಗದಲ್ಲಿ ನಾವು ಯಾವ ಭಾಷಣ ಸ್ವಾತಂತ್ರ್ಯದ ಸಲುವಾಗಿ ಹೋರಾಡುತ್ತಿರುವೆವೋ ಅದೇ ಭಾಷಣ ಸ್ವಾತಂತ್ರ್ಯವೇ ನಮಗೆ ಸಿಕ್ಕಿದಂತಾಯಿತು. ಇಂಥ ಭಾಷಣ ಸ್ವಾತಂತ್ರ್ಯ ಸಿಕ್ಕಿದ ಸುಸಂಧಿಯನ್ನು ನಾವು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕು. ಕೈದಾಗದೇ ಇದ್ದ ಸತ್ಯಾಗ್ರಹಿಗಳು ಯುದ್ಧವಿರೋಧಕ ಘೋಷಣೆ ಹಾಗು ಭಾಷಣಗಳನ್ನು ಮಾಡುತ್ತ ದಿಲ್ಲಿಯ ಕಡೆಗೆ ಕಾಲುನಡಿಗೆಯಿಂದ ಹೊರಡಬೇಕೆಂದು ಗಾಂಧಿಜಿಯವರು ಆಜ್ಞೆಮಾಡಿರುವರು. ಇಂಥ ಸತ್ಯಾಗ್ರಹಿಗಳು ದಿಲ್ಲಿಗೆ ಹೊರಡುವ ಪೂರ್ವದಲ್ಲಿ ಅಥವಾ ಸತ್ಯಾಗ್ರಹ ಮಾಡುವ ಮುಂಚಿತ ತಮ್ಮಲ್ಲಿಯ ಜಿಲ್ಲಾ ಮೆಜಿಸ್ಟ್ರೇಟರಿಗೆ ತಾವು ದಿಲ್ಲಿಗೆ ಹೊರಟಿರುವರೆಂದು ತಿಳಿಸಬೇಕು. ದಿಲ್ಲಿಗೆ ಹೋಗುವ ಮೊದಲು ತಮ್ಮ ಜಿಲ್ಲೆಯಲ್ಲಿಯೂ ಪ್ರಚಾರವನ್ನು ಮಾಡಬಹುದು. ಒಮ್ಮೆ ಸತ್ಯಾಗ್ರಹಿಯು ಯುದ್ಧವಿರೋಧಕ ಘೋಷಣೆಯನ್ನು ಮಾಡಿದನೆಂದರೆ, ಅವನು ಜೈಲಿನಲ್ಲಿಯೇ ಇರುವನೆಂದು ತಿಳಿದುಕೊಳ್ಳಬೇಕು. ಅಂದರೆ ಜಿಲ್ಲೆಯಲ್ಲಿ ತಿರುಗಾಡುವಾಗ್ಗೆ ಆಗಾಗ್ಗೆ ಅವನು ತನ್ನ ಮನೆಯ ಕಡೆಗೆ ಹೋಗುವ ಅವಶ್ಯಕತೆ ಇಲ್ಲ. ದಿಲ್ಲಿಗೆ ಹೊರಟಾಗ್ಗೆ ಹಳ್ಳಿ ಹಳ್ಳಿಗೆ ವಸತಿ ಮಾಡುತ್ತ ಹಳ್ಳಿಗರು ಕೊಡಬಹುದಾದ ಆಹಾರವನ್ನು ಸೇವಿಸುತ್ತ ಸಾಗಬೇಕು. ತಮ್ಮ ಜತೆಗೆ ತಮಗೆ ತೆಗೆದುಕೊಳ್ಳಲು ಶಕ್ಯವಿದ್ದಷ್ಟು ಸಾಮಾನುಗಳನ್ನು ತೆಗೆದುಕೊಳ್ಳಲು ಅಡ್ಡಿ ಇಲ್ಲ. ಈ ಪ್ರಕಾರ ಹೊರಟಾಗ ಸತ್ಯಾಗ್ರಹಿಯು ತಾನಾಗಿಯೇ ಮಾರ್ಗದಲ್ಲಿ ಬರಬಹುದಾದ ವಾಹನಗಳಲ್ಲಿ ಕೂಡುವ ಇಚ್ಛೆಯನ್ನು ತೋರಿಸಬಾರದು. ಒಂದು ವೇಳೆ ಯಾರಾದರೂ ವಾಹನದಲ್ಲಿ ಕೂಡಲು ವಿನಂತಿ ಮಾಡಿಕೊಂಡಲ್ಲಿ ಅದನ್ನು ನಿರಾಕರಿಸಬೇಕಾಗಿಲ್ಲ. ಮಾರ್ಗದಲ್ಲಿ ದೊರಕಬಹುದಾದ ದೇಶೀಯ ಸಂಸ್ಥಾನಗಳಲ್ಲಿಯೂ ಕೂಡಾ ಸತ್ಯಾಗ್ರಹಿಯು ಕಾಲು ನಡಿಗೆಯಿಂದಲೇ ಹೊರಡಬೇಕು. ಆದರೆ ಅಲ್ಲಿ ಯುದ್ಧವಿರೋಧಕ ಘೋಷಣೆ ಅಥವಾ ಭಾಷಣಗಳನ್ನು ಮಾಡಕೂಡದು.

NACET BLADES

ಮೂರು ಗೂಟಗಳ ರೇಜರು



ನೆಸೆಟ್ ಬ್ಲೇಡುಗಳು

ಮೂರು ಗೂಟದ ರೇಜರುಗಳಿಗೆ ನೆಸೆಟ್ ಬ್ಲೇಡುಗಳನ್ನು ಉಪಯೋಗಿಸಿ ನೂತನತೆಯಲ್ಲಿ ದಿನ ಪ್ರತಿ ಬ್ಲೇಡು ಅದರ ಕಡಿಮೆ ಬೆಲೆಗಿಂತ ಮಿಕ್ಕಿದ ನುಣುಪನ್ನೂ ನಯವನ್ನೂ ಉತ್ತಮವಾದ ಕ್ಷೌರವನ್ನು ಉಂಟುಮಾಡುವುದು.

ಈ ಸ್ಟಾಂಪುಗಳು,



ಹಣ ಉಳಿಸಲು ನಿಮಗೆ ಸಹಾಯ ಮಾಡುವುವು.

ಯಾವುದಾದರೊಂದು ಪೋಸ್ಟಾಫೀಸಿನಲ್ಲಿ ಸೇವಿಂಗ್ಸ್ ಕಾರ್ಡ್ ಕೇಳಿ ತೆಗೆದುಕೊಳ್ಳಿ. ಅದರ ಮೇಲೆ ೪ ಆಣೆ, ೮ ಆಣೆ ಅಥವಾ ೧ ರೂಪಾಯಿನ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪುಗಳನ್ನು ಅಂಟಿಸಿರಿ.

ನಿಮ್ಮ ಕಾರ್ಡಿನ ಮೇಲೆ ೧೦ ರೂಪಾಯಿ ಬೆಲೆಯ ಸ್ಟಾಂಪುಗಳು ಅಂಟಿಸಲ್ಪಟ್ಟಮೇಲೆ ಅದನ್ನು ಪೋಸ್ಟಾಫೀಸಿನಲ್ಲಿ ಕೊಟ್ಟು ಅದರ ಬದಲು ಒಂದು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟನ್ನು ತೆಗೆದುಕೊಳ್ಳಿ. ಅದು ಹತ್ತು ವರ್ಷಗಳಲ್ಲಿ ರೂ. ೧೪॥ ಬೆಲೆಯುಳ್ಳದ್ದಾಗುತ್ತದೆ.

ನೀವು ಕೇಳಿದಾಗ ಹಣವನ್ನೂ ಆ ವರಿಗಿನ ಬಡ್ಡಿಯನ್ನೂ ಸೇರಿಸಿ ಹಿಂದಕ್ಕೆ ಕೊಡಲಾಗುವುದು.

ರಕ್ಷಣೆಗಾಗಿ ಉಳಿಸಿರಿ

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

G. I. K. N. 25



ವಿಚಿತ್ರ ಪ್ರಪಂಚ

ಮದುವೆಯೆಂದರೆ ನಾಚಿಕೆ! ಹುಡುಗಿಗಲ್ಲ; ಹುಡುಗನಿಗೆ!

ಸಾಮಾನ್ಯ ಎಲ್ಲ ಕಡೆಗಳಲ್ಲಿ ಹುಡುಗ ಅಥವಾ ಅವನ ಪಕ್ಷದವರು ಹುಡುಗಿಯನ್ನು ವಿವಾಹಕ್ಕಾಗಿ ಹುಡುಕಿ ಹೋಗುತ್ತಾರೆ. ಮತ್ತೇ ಹುಡುಗ ಅಥವಾ ಅವನ ಪಕ್ಷದವರು ತಾವು ಆರಿಸಿದ ಹುಡುಗಿಯೊಂದಿಗೆ ವಿವಾಹಾಪೇಕ್ಷೆಯನ್ನು ಸೂಚಿಸುತ್ತಾರೆ. ಇದರಲ್ಲಿ ಹುಡುಗಿಯು ಲಜ್ಜಿತಳಾಗಿ ಸಂಕೋಚಪಡುವದೂ ...ವಿಸಿಕೊಳ್ಳುವುದೂ ಮತ್ತೆ ಹುಡುಗನು ಹುಡುಗನಂತೆ ವರ್ತಿಸುವುದೂ ಹೆಚ್ಚು. ...ದರೆ ದಕ್ಷಿಣ ಅಮೇರಿಕದ ಬ್ರೆಜಿಲಿನಲ್ಲಿ ಹರಿಯುವ ಅರಗ್ವಾಯ ನದಿದಂಡೆಯ ಒಂದು ಪ್ರದೇಶದ ವಿವಾಹ ಪದ್ಧತಿಯು ಇದಕ್ಕೆ ತೀರಾ ವಿಪರೀತವಾಗಿರುತ್ತದೆ. ಹುಡುಗಿ ಅಥವಾ ಆಕೆಯ ಕಡೆಯವರು ಹುಡುಗನನ್ನು ಹುಡುಕಿ ಹೋಗುತ್ತಾರೆ. ಯೋಗ್ಯನಾದ ಹುಡುಗನನ್ನು ಹುಡುಕಿದ ಮೇಲೆ ಅವನೊಡನೆ ವಿವಾಹಾಪೇಕ್ಷೆಯನ್ನು ಸೂಚಿಸುತ್ತಾರೆ. ಹುಡುಗನು ನಾಚಿಕೆಯಿಂದ ಮನಸಿದ್ದರೂ ಹುಡುಗಿ ಬೇಡವೆನ್ನುವನು. ಲಜ್ಜೆಯಿಂದ ತಲೆ ತಗ್ಗಿಸಿಕೊಳ್ಳುವನು. ಆದರೂ ಹುಡುಗಿಯ ಕಡೆಯವರು ಅವನ ಬಿಲ್ಲು ಬಾಣ ಮೊದಲಾದ ಸೊತ್ತನ್ನು ಹೊತ್ತುಕೊಂಡು ಅವನನ್ನು ಹುಡುಗಿಯ ಮನೆಗೆ ಮೆರವಣಿಗೆ ಮಾಡಿ ತರುವರು. ಅವನಿಗೆ ಆ ಹುಡುಗಿ ಬೇಡವೇ ಬೇಡವೆಂದಾದರೆ ಮಾತ್ರ ಅವನ ಸೊತ್ತನ್ನು ಅವನಿಗೆ ಮರಳಿ ಕೊಡುವರು. ಆಗ ಹುಡುಗ ತನ್ನ ಗ್ರಾಮವನ್ನು ಬಿಟ್ಟು ಎಲ್ಲಿಗಾದರೂ ಹೋಗಿ ಬಿಡುವನು. ಆ ಹುಡುಗಿ ಬೇರೊಂದು ಮದುವೆಯಾಗಿ, ಅವಳಿಂದ ಇನ್ನು ತನಗೆ ಉಪದ್ರವವಿಲ್ಲ ಎಂದು ಖಚಿತವಾದ ಅನಂತರವೇ ಅವನು ತನ್ನ ಮೊದಲಿನ ಮನೆಗೆ ಮರಳುವನು. ಆ ದೇಶದಲ್ಲಿ ಮದುವೆ ಪ್ರಸ್ತಾಪ ಬಂದಾಗ ಲಜ್ಜೆ—ಸಂಕೋಚಗಳ ಕಾರಣದಿಂದ ಹುಡುಗಿಯ ಮೋರೆ ಕೆಂಪಾಗುವದಕ್ಕಿಂತ ಹುಡುಗನ ಮೋರೆ ಕೆಂಪಾಗುವದೇ ಹೆಚ್ಚು.

ಮನೆಯಲ್ಲಿ ಮೈದುನ ಇರಕೂಡದು

ಮನೆಯಲ್ಲಿ ಮೈದುನ ಇರಲಿಕ್ಕೇ ಕೂಡದು ಎಂದು ಹಟಹಿಡಿದಿದ್ದ ಒಬ್ಬ ಫ್ರೆಂಚ ಮಹಿಳೆ, ಈಗ ಅವಕ್ಕೆ ಒಪ್ಪದಿದ್ದ ಗಂಡನನ್ನು ಬಿಟ್ಟು ಎಲ್ಲಿಗೋ ಹೊರಹೊರಟಿದ್ದಾಳೆ. ಅವಳ ಮನೋರಂಜಕ ಕತೆ ಬಹಳ ಸ್ವಾರಸ್ಯವಾಗಿರುವದು. ಅವಳಿಜವಳಿ ಇಬ್ಬರು ಸಹೋದರರಲ್ಲಿ ಅವಳು ಒಬ್ಬನನ್ನು ಮದುವೆಯಾಗಿದ್ದಳು. ಆದರೆ ಈ ಇಬ್ಬರು ಸಹೋದರರು ರೂಪು ಆಕಾರ ಬಣ್ಣ ಗುಣಗಳಲ್ಲಿ ಏಕಸ್ವರೂಪರಾಗಿ ಇದ್ದುದರಿಂದ ತನ್ನ ಗಂಡ ಯಾರು ಮೈದುನ ಯಾರು ಎಂದು ಗುರುತಿಸುವುದೇ ಅವಳಿಗೆ ಕಷ್ಟವಾಗುತ್ತಿತ್ತು. ಅವಳು ತನ್ನ ಗಂಡನೊಂದಿಗೆ ಸರಸಸಲ್ಲಾಪಗಳಿಗೆ ಹೋದ ಹಲವು ಸಂದರ್ಭಗಳಲ್ಲಿ 'ನಾನು ನಿನ್ನ ಗಂಡನಲ್ಲ—ಮೈದುನ' ಎಂದು ಹೇಳಿ ಅವಳನ್ನು ನಿರಾಶೆಗೊಳಿಸಿದ ಹಲವು ಪ್ರಸಂಗಗಳಿದ್ದುವು. ಮತ್ತೆ ಮೈದುನನ ಪ್ರೇಯಸಿ ಎಂದು ಅವರ ಮನೆಗೆ ಬಂದು ಹೋಗುತ್ತಾ, ಸರಸ ಆಡುತ್ತಾ ಇದ್ದವಳು—ಒಬ್ಬಾಕೆ. ಅವಳೊಡನೆ ಸರಸವಾಡುತ್ತಿದ್ದವನು ತನ್ನ ಗಂಡನೋ ಮೈದುನನೋ ಎಂದು ಗುರುತಿಸುವುದು ಅವಳಿಗೆ ಬಹಳ ಕಷ್ಟವಾಗುತ್ತಿತ್ತು. ಆದ್ದರಿಂದ ಬಹಳ ಪೇಚಿಗೆ ಬಿದ್ದು 'ಈ ಮನೆಯಲ್ಲಿ ನಿನ್ನೊಂದಿಗೆ ಒಂದೇ ನಾನಿರಬೇಕು, ಅಥವಾ ಮೈದುನನಿರಬೇಕು,' ಎಂದು ಅವಳು ಗಂಡನೊಡನೆ ಛಲಹಿಡಿದಳು. ಗಂಡನು ಮೈದುನನನ್ನು ಬಿಟ್ಟಿರಲಿಕ್ಕೆ ಒಪ್ಪಲಿಲ್ಲ. ಆದ್ದರಿಂದ ದಾಂಪತ್ಯ ವಿಚ್ಛೇದಮಾಡಿಕೊಂಡು ಅವಳು ಹೊರಹೊರಟಿದ್ದಾಳೆ.

ಮನುಷ್ಯವಾಸವಿಲ್ಲದ ಗವಿಗಳು!

ನಮ್ಮ ದೇಶದಲ್ಲಿ ಮನುಷ್ಯರು ವಾಸವಾಗಿಲ್ಲದ ಅತ್ಯಂತ ಪ್ರಾಚೀನ ನಿವಾಸಸ್ಥಾನಗಳೆಂದರೆ—ಒರಿಸ್ಸದಲ್ಲಿರುವ ಖಂಡಗಿರಿಯ ಗವಿಗಳೆಂದು ಹೇಳುವರು. ಭುವನೇಶ್ವರದಿಂದ ೪ ಮೈಲುಗಳ ಸಮೀಪದಲ್ಲಿ ಎರಡು ಶಿಖರಗಳ ಒಂದು ಬೆಟ್ಟದ ಪಡಿಯಲ್ಲಿ ಈ ಗವಿಗಳು ಇವೆ. ಇವು ಹೆಸರಿಗೆ ತಕ್ಕಂತೆ ಗವಿಗಳಾಗಿಯೇ ಇರುವವು. ಆಕಾರದಲ್ಲಿ ಬಹಳ ಸಣ್ಣದಾಗಿಯೂ ಇರುತ್ತವೆ. ಕೆಲವುಗಳಿಗೆ ಮಾತ್ರ ಎದುರಿಗೆ ಸಣ್ಣ ಜಗಲಿಗಳೂ ಆಧಾರವಾಗಿ ಕಂಭಗಳೂ ಇರುತ್ತವೆ. ಮತ್ತೆ ಕೆಲವೆಡೆಗಳಲ್ಲಿ ಈ ಗವಿಗಳು ಒಂದರ ಮೇಲೊಂದರಂತೆ ಎರಡು ಸಾಲುಗಳಾಗಿ ಇರುತ್ತವೆ. ಜೈನಸಾಧುಗಳು ತಮ್ಮ ಧರ್ಮಾಚರಣೆಗಾಗಿ ಇವುಗಳನ್ನು ಕಟ್ಟಿಸಿರಬಹುದೆಂದು ಕೆಲವು ಇತಿಹಾಸಜ್ಞರ ಅಭಿಪ್ರಾಯವಿರುವದು. ಅನೇಕ ಶತಮಾನಗಳ ತನಕ ಇವುಗಳಲ್ಲಿ ಜೈನಸಾಧುಗಳು ವಾಸವಾಗಿದ್ದರೆಂಬುದಕ್ಕೆ ಅನೇಕ ಆಧಾರಗಳು ಕಾಣಸಿಗುತ್ತವೆ.

ಪುರಾತನ ಜೀವಿಗಳ ವಿಚಿತ್ರ ಸಂಗ್ರಹಾಲಯ

ಹಿಮಾಲಯದ ಕೆಲವು ಪ್ರದೇಶಗಳು—ಅದರಲ್ಲೂ ಮುಖ್ಯವಾಗಿ, ಸಿವಾಲಿಕ ಎನ್ನುವಂಥ ಭೂಮಿಯು ಪ್ರಪಂಚದ ಪುರಾತನ ಜೀವಿಗಳ ವಿಚಿತ್ರ ಸಂಗ್ರಹಾಲಯವಾಗಿರುವದು. ಈ ಪ್ರದೇಶದಲ್ಲಿ ಶಿವಥೇರಿಯಂ ಎಂಬ ಪ್ರಾಚೀನ ಕಾಲದಲ್ಲಿ ಬದುಕಿದ್ದ ಒಂದು ವಿಚಿತ್ರ ಪ್ರಾಣಿಯ ತಲೆಬುರುಡೆ ಮೊದಲಾದ ಅವಶೇಷಗಳು ಕಾಣಸಿಗುತ್ತವೆ. ಈ ಪ್ರಾಣಿಗೆ ತಲೆ ಮೇಲೆ ನಾಲ್ಕು ಕೊಂಬುಗಳೂ ಬಾಯಿಯಲ್ಲಿ ಒಂದು ಸೊಂಡಿಲೂ ಇದ್ದುವು. ಸೂಕ್ಷ್ಮದಲ್ಲಿ ಮಾತ್ರ ಅಂತರವಿದ್ದ ಇದೇ ಜಾತಿಯ ಬೇರೆ ಪ್ರಾಣಿಗಳೂ ಈ ಪ್ರದೇಶದಲ್ಲಿ ಆ ಕಾಲದಲ್ಲಿ ವಾಸವಾಗಿದ್ದುವು. ಅವುಗಳನ್ನು ಜನರು 'ಇಂದ್ರಥೇರಿಯಂ', ಬ್ರಹ್ಮಥೇರಿಯಂ ಮತ್ತು ವಿಷ್ಣುಥೇರಿಯಂ ಎಂದು ಕರೆಯುತ್ತಿದ್ದರು.

ತಲೆ ತೋಳುಗಳಿಲ್ಲದ ಲೋಹ ಪ್ರತಿಮೆ

ಮಥುರೆಯ ಪುರಾತನ ವಸ್ತು ಸಂಗ್ರಹಾಲಯದಲ್ಲಿ ತಲೆ ತೋಳುಗಳಿಲ್ಲದ ಒಂದು ಪುರಾತನ ಲೋಹ ಪ್ರತಿಮೆಯು ಇದೆ. ಹೀಗಿದ್ದರೂ ಆ ಪ್ರತಿಮೆಯು ಉಡುಗೆಯ ಸರಿ ಅದಕ್ಕೆ ಬಾಹ್ಯ ಆಕಾರಗಳಲ್ಲಿ—'ರಾಜರಾಜೇಂದ್ರ ಮಹಾರಾಜ ಕನಿಷ್ಕ' ಎಂದು ಕೆತ್ತಲ್ಪಟ್ಟಿರುತ್ತದೆ. ಹಿಂದುಸ್ಥಾನದ ಪುರಾತನ ಪ್ರತಿಮೆಗಳಲ್ಲಿ ಇದನ್ನು ಒಂದಾಗಿ ತಿಳಿಯುತ್ತಾರೆ.

BHUVANENDRA PRODUCTS LTD.,

KATAPADI, S—K

Why Doctors prescribe

"BHUVANENDRA"

NARAYANA TAILA

Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರ ನಾರಾಯಣ ತೈಲ'

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ,

ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ಟೋಕಿಸ್ಟರು:—

ಯು. ಪಾಂಡುರಂಗ ನಾಯಕ್, ರಥಬೀದಿ.

ರಾಘವೇಂದ್ರ ರಂಗ ಶೈ, ರಥಬೀದಿ.

ಡಾ॥ ಎಮ್. ಎಸ್. ಪ್ರಭು, ಸಿ. ವಿ. ಸಿ. ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಅರಸುಮನೆತನವನ್ನು ಆಕೆ ಉಳಿಸಿದಳು!

ಪನ್ನಾ ದಾಸಿಯ ಅತುಲ ಬಲಿದಾನ!

ಭಾರತದ ಇತಿಹಾಸದಲ್ಲಿ ಒಂದು ರೋಮಾಂಚಕ ಘಟನೆ

ಐನೂರು ವರ್ಷಗಳ ಹಿಂದೆ . . . ಕೀರ್ತಿಶಾಲಿಯಾದ ರಾಣಾಸಿಂಗನ ನಿಷ್ಪ್ರಯೋಜಕ ಪುತ್ರನಾದ ವಿಕ್ರಮಜಿತು ಚಿತ್ತೂರಿನ ಸಿಂಹಾಸನವೇರಿದ್ದನು. ಅವನ ಹಿರಿಯರ ಕೀರ್ತಿಪ್ರಭಾವಗಳು ಆತನ ದುರ್ಬಲವಾದ ಆಳುವಿಕೆಯಲ್ಲಿ ಕ್ಷೀಣವಾಗುತ್ತ ಬರುತ್ತಿದ್ದವು. ಬಾಪ್ಪಾರಾವಳ ವಂಶದ ಗುಣ ಗಂಭೀರತೆಗಳು ಆತನಲ್ಲಿ ಒಂದೇ ಒಂದಾದರೂ ಉಳಿದಿರಲಿಲ್ಲ. ಅವನ ಕೆಟ್ಟ ಆಡಳಿತೆಯಲ್ಲಿ ಮೇವಾರವು ದೌರ್ಬಲ್ಯದಿಂದ ಕಂಪಿಸಿತು. ಹಿತಚಿಂತಕರಾದ ಹಿರಿಯರು, ರಾಜಕಾರಣ ಪಟುಗಳೂ ಹೇಳಿದ ಬುದ್ಧಿವಾದಗಳು ಹಟಮಾರಿಯಾದ ಆತನ ಕಿವಿಗಳಿಗೆ ಹಿತವೆನಿಸಲಿಲ್ಲ. ಹೀಗೆ ರಾಷ್ಟ್ರವು ಪತನದ ಕಡೆಗೆ ತತ್ತರಿಸಿ ನಿಂತಿತ್ತು!

ಚಿತ್ತೂರಿನ ಮೇಲೆ ಆಕ್ರಮಣ

ಗುಜರಾತಿನಿಂದ ಬಹು ದೂರದಲ್ಲಿ, ತನ್ನ ಸಾಮ್ರಾಜ್ಯಲಾಲಸೆಯ ದೃಷ್ಟಿಗಳಿಂದ ಸುಲ್ತಾನ್ ಬಹದೂರನು ಚಿತ್ತೂರಿನ ಈ ಪರಿಸ್ಥಿತಿಯನ್ನು ಪರಿಶೀಲಿಸಿಕೊಂಡಿದ್ದನು. ಆತನ ಹೃದಯಾಂತರಾಳದಲ್ಲಿ ಪ್ರತೀಕಾರದ ಪ್ರಬಲ ಆಕಾಂಕ್ಷೆಯೂ ಅಡಗಿತ್ತು! ಆತನ ವಂಶಸ್ಥನಾದ ಮುಜಾಫರನನ್ನು ಪೃಥ್ವಿರಾಜ ಮತ್ತು ರಾಣಾ ರಾಮೋಲರು ಸೆರೆಹಿಡಿದು ಕಷ್ಟಕೊಟ್ಟಿದ್ದರು. ಅದರ ಪ್ರತೀಕಾರಕ್ಕೆ ಅವನು ಹೀಗೆ ಸಮಯ ಕಾಯುತ್ತಿರುವಾಗಲೇ ಮೇವಾರದಲ್ಲಿ ಈಗ ಅವನಿಗೆ ಒಂದು ಸುವರ್ಣ ಸಂಧಿ ಒದಗಿದಂತೆ ಕಂಡುಬಂತು: ರಜಪೂತರಲ್ಲಿ ಅಲ್ಲಲ್ಲಿ ಅನೈಕ್ಯತೆ ಹೆಚ್ಚಿತ್ತು! ಈಗ ಬಹದೂರನು ತನ್ನ ಕಾರ್ಯವನ್ನು ಸಾಧಿಸಬಹುದಾಗಿ ತಿಳಿದನು. ಅಮಿತ ಸೈನ್ಯದೊಡನೆ ಆತನು ಚಿತ್ತೂರನ್ನು ಆಕ್ರಮಿಸಲು ಹೊರಟನು. ಆಕ್ರಮಣ ಮಾಡಲು ಬಂದ ಆ ಸೈನ್ಯದ ಪದಹತಿಯು ಪರ್ವತ ಮಾಲಾಮಯವಾದ ಚಿತ್ತೂರನ್ನು ನಡುಗಿಸುವಂತಿತ್ತು! ಬುದ್ಧಿಹೀನನಾದ ಅರಸನಿಗೆ ಈಗ ಒಳ್ಳೆಯ ವಿಚಾರಾಸ್ಪದವಾದ ಸಂದರ್ಭವು ಒದಗಿತೆಂದು ರಜಪೂತರು ಸ್ವಲ್ಪ ಸಂತೋಷಪಟ್ಟರು. ಆದರೆ, ತಮ್ಮ ರಾಜನು ಎಷ್ಟು ನಿಷ್ಪ್ರಯೋಜಕನಿದ್ದರೂ, ಪರರು ತಮ್ಮ ರಾಷ್ಟ್ರವನ್ನು ಮುತ್ತಿ ಸ್ವಾಧೀನಗೊಳಿಸುವುದನ್ನು ಅವರು ಸಹಿಸಲಾರರು. ಚಿತ್ತೂರೆಂಬುದು ಅವರಿಗೆ ಬರಿಯ ಒಂದು ರಾಷ್ಟ್ರಮಾತ್ರವಲ್ಲ, ತಮ್ಮದೇ ಕುಟುಂಬವೆಂಬಂತಾಗಿತ್ತು. ಚಿತ್ತೂರಿನ ರಜಪೂತರಿಗೆ ಸಾಹಸದ, ಪರಾಕ್ರಮದ, ಗುಣಗಂಭೀರತೆಯ ನೆನಪಾಗಿತ್ತು. ಮುಂದಿನ ಮಂಗಲದ ಕುರುಹಾಗಿತ್ತು. ಇಂದಿನ ಸ್ಫೂರ್ತಿ ಚೇತನವಾಗಿತ್ತು. ಅದರ ಸ್ವಾತಂತ್ರ್ಯ ರಕ್ಷಣೆಗಾಗಿ ಜೀವ ಧಾರೆಯೆರೆಯಲು ಅವರು ಆತ್ಮ ಸಂತೋಷಗೊಂಡಿದ್ದರು. ಒಂದೇ ಒಂದು ನಿಮಿಷಮಾತ್ರದಲ್ಲಿ ಅವರು ಅಡಗಿದ್ದ ಹುರುಪನ್ನು ಕೂಡಿಸಿಕೊಂಡು ಆಕ್ರಮಿಸಿ ಬರುವ ಶತ್ರುಸೈನ್ಯದ ಹೃದಯ ಕಂಪನವಾಗುವಂತೆ ಎದುರಿಸಲು ಮುನ್ನಡೆದರು.

ರಾಣಿಯ ಸಾಹಸ

ಭಯಂಕರ ಕಾಳಗ ನಡೆಯಿತು! ಶಿಸ್ತಿನಿಂದ, ಆವೇಶದಿಂದ, ರಜಪೂತರು ಮುಂದೊತ್ತಿ, ನುಡಿಯುತ್ತಿದ್ದರೂ ಆವೇಶಗೊಂಡು ಕಾದಾಡುತ್ತಿದ್ದರು. ರಾಜಮಾತೆ ಜವಾಹರ್ ಬಾಯಿಯು, ಸೈನಿಕವೇಷ ಧರಿಸಿ, ರಣರಂಗಕ್ಕೆ ದುಮುಕಿದಳು! ಹೋರಾಟದಲ್ಲಿ ಮಡಿದಳು! ಅರಿಗಳು ಆದರೂ ಒಂದಡಿ ಹಿಂದೆ ಹೋಗಲಿಲ್ಲ. ಎಲ್ಲಾ ಆಶೆಗಳು ಅಳಿಯಲು, ಸಿಂಹಾಸನದ ಮುಂದಿನ ಅಧಿಕಾರಿಯು, ರಾಣಾಸಿಂಗನ ಪುತ್ರನೂ ಆದ ಉದಯಸಿಂಗನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ, ರಾಣೀ ಕರ್ಣಾವತಿಯೊಡನೆ ಮೂವತ್ತು ಸಾವಿರ ರಜಪೂತ ಸ್ತ್ರೀಯರು ಬೆಂಕಿಗೆ ಬಿದ್ದು ಮಡಿದರು. ಶತ್ರುಗಳ ಕೈವಶವಾಗುವ ಅಪಮಾನಕ್ಕಿಂತ ಉರಿವ ಬೆಂಕಿಯಲ್ಲಿ ಬಿದ್ದು ಸಾಯುವುದು ಅವರಿಗೆ ಸಾವಿರಪಾಲು ಗೌರವದ ಮರಣವಾಗಿತ್ತು.

ಚಿತ್ತೂರಿನ ಭದ್ರವಾದ ಬಾಗಿಲು ತೆರೆಯಲ್ಪಟ್ಟಿತು. ಬಹದೂರನು ವಿಜಯಸಂಭ್ರಮದಿಂದ ದುರ್ಗವನ್ನು ಹೊಕ್ಕನು. ಅಲ್ಲಿನ ಭಗ್ನಾವಶೇಷಗಳನ್ನು ನೋಡುತ್ತಾ ಬಹದೂರನು ಹದಿನೈದು ದಿನಗಳ ವರೆಗೆ ಅಲ್ಲಿದ್ದು, ಕಡೆಗೆ, ವಿಕ್ರಮಜಿತುವನ್ನೇ ಅಲ್ಲಿ ಇರಿಸಿ ಚಿತ್ತೂರನ್ನು ತಿರುಗಿ ಹಿಂದಿನಂತೆ ನಿರ್ಮಾಣ ಮಾಡುವುದಾಗಿ ಆತನಿಗೇ ಅದನ್ನು ಒಪ್ಪಿಸಿ ತೆರಳಿದನು. ಚಿತ್ತೂರಿನ ರಾಣನಿಗೆ ಇದರಿಂದಲೂ ಬುದ್ಧಿ ಬರಲಿಲ್ಲ. ಹಲವು ರಜಪೂತ ವೀರರು ಇಷ್ಟಾದರೂ ಮುಂದೆ ಕೀರ್ತಿಗಳಿಸಬೇಕೆಂದು ಸಮಯ ಕಾದಿದ್ದರು. ದುಷ್ಟನಾದ ರಾಣನು, ಇದರ ಮಧ್ಯೆ ರಾಣಾವಂಶಕ್ಕೆ ಅಲಂಕಾರಪ್ರಾಯನಾಗಿದ್ದ ಪ್ರಧಾನನಾದ ಅಜಮೀರದ ಕರಮಚಂದನನ್ನು ಆಸ್ಥಾನದಲ್ಲಿಯೇ ಅಪಮಾನಗೊಳಿಸಿದನು. ಇದರಿಂದ ರಜಪೂತವಂಶವೇ ಕಳವಳಗೊಂಡಿತು. ಕರಮಚಂದನ ಕಣ್ಣುಗಳು ರೋಷ ಆವೇಶದಿಂದ ಕಿಡಿಕಾರುತ್ತಿದ್ದವು. ಇದರ ಫಲವನ್ನು ರಾಣನು ಬೇಗನೇ ಅನುಭವಿಸುವನೆಂದು ಅಲ್ಲಲ್ಲಿ ಜನರು ಮಾತನಾಡತೊಡಗಿದರು.

ವಿಕ್ರಮಜಿತನ ಪದತ್ಯಾಗ

ಕೂಡಲೇ ರಜಪೂತರು, ರಾಣನಾದ ವಿಕ್ರಮಜಿತನನ್ನು ಸಿಂಹಾಸನದಿಂದ ತಳ್ಳಿಬಿಟ್ಟರು. ಅದಕ್ಕಿಂತ ಹೆಚ್ಚೇ ಮಾಡಲಿಲ್ಲ—ಏಕೆಂದರೆ ರಾಜಪಟ್ಟದ ಮೇಲೆ ಅವರಿಗಿರುವ ದೈವಸಮಾನ ಭಕ್ತಿ ಅಚಲವಾದುದು. ಬಾಲರಾಜನು ಸಿಂಹಾಸನವೇರಿ ಅಧಿಕಾರ ನಡೆಸುವ ತನಕ ಯಾರು ಸಿಂಹಾಸನವೇರುವುದೆಂಬ ಸಮಸ್ಯೆ ಈಗ ಅವರಿಗೆ ಒದಗಿತು. ಬಹುಕಾಲ ಈ ಕುರಿತು ವಿಚಾರ ನಡೆದ ಮೇಲೆ, ಪೃಥ್ವಿರಾಜನ ಪುತ್ರನಾದ ವನವೀರನನ್ನು ಪಟ್ಟದಲ್ಲಿ ಕುಳ್ಳಿರಿಸುವ ನಿರ್ಧಾರಕ್ಕೆ ಅವರೆಲ್ಲರೂ ಸಮ್ಮತಿಗೊಂಡರು. ವನವೀರನು ಸಿಂಹಾಸನವೇರಿ ಕುಳಿತನು!

ಪನ್ನೆಯ ಬಲಿದಾನ

ಲೋಕವನ್ನು ಕವಿದುಕೊಂಡಿದ್ದ ತಮಸ್ಸಿನ ಹಿಡಿತ ಕಡಿಮೆಯಾಗುತ್ತಾ ಬರುತ್ತಿತ್ತು. ಪ್ರಕಾಶವನ್ನು ಕಾಣುವ ಆಶೆಯು ಜಗತ್ತಿನೇ ಮೆಲ್ಲಮೆಲ್ಲನೆ ಸಮೀಪಿಸುತ್ತಿತ್ತು. ರಾಜಪುತ್ರನನ್ನು ತನ್ನ ಮಡಿಲಲ್ಲಿ ಮಲಗಿಸಿ, ದಾಸಿ ಪನ್ನೆಯು ಮಧುರವಾಗಿ ಹಾಡುತ್ತಿದ್ದಳು. ರಾತ್ರಿಯ ಆ ಭೀಷಣ ನೀರವವನ್ನು ಭೇದಿಸಿ ..ಭಯದ ಕಿರುಚು ದನಿಯೊಂದು ಅವಳ ಕಿವಿಗಳಿಗೆ ಬಿತ್ತು. ಕ್ಷಣಹೊತ್ತು ಕಳೆದಿರಲಿಲ್ಲ; ಬಾಗಿಲಿಗೆ ಯಾರೋ ಬಂದು ಬಲವಾಗಿ ಬಡಿದಂತೆ ಕೇಳಿಸಿತು. ಪನ್ನೆ ಚಕಿತಳಾಗಿ ಎದ್ದು ಬಾಗಿಲು ತೆರೆದಳು. ಅರಮನೆಯ ಕ್ಷೌರಿಕನೊಬ್ಬನು ನಡುಗುತ್ತಾ ಬಂದಿದ್ದನು! ಬಂದವನೇ ತೆರೆದ ಬಾಗಿಲನ್ನು ಹಿಂದಕ್ಕೆ ಮುಚ್ಚಿ 'ಶಬ್ದ ಮಾಡಬೇಡ, ಕೊಲೆಯ ಯತ್ನ ನಡೆದಿದೆ; ಇಂದು ಈಗಲೇ ರಾಣನನ್ನು ವನವೀರನು ವಧಿಸುವನು!' ಎಂದು ಹೇಳಿದನು. ಪನ್ನೆ ಭಯಗೊಂಡರೂ ಧೈರ್ಯಗೆಡಲಿಲ್ಲ. 'ಈ ಬುಟ್ಟಿಯಲ್ಲಿಟ್ಟು ಯಾರಿಗೂ ಸಂಶಯವಾಗದಂತೆ, ಸ್ವಾಮಿ ಪುತ್ರನನ್ನು ದಯಮಾಡಿ ಇಲ್ಲಿಂದ ಹೊರಗೆ ಕೊಂಡೊಯ್ಯಲಾರೆಯಾ?' ಪನ್ನೆ ಆತನೊಡನೆ ಕೇಳಿದಳು. ವಿಶಾಲ ಹೃದಯಿಯಾದ ಕ್ಷೌರಿಕನು ಒಪ್ಪಿದನು. ಪನ್ನೆ ರಾಜಪುತ್ರನನ್ನು ಬುಟ್ಟಿಯಲ್ಲಿಟ್ಟಳು. ಆತನು ತಲೆಮೇಲೆ ಬುಟ್ಟಿಯನ್ನಿಟ್ಟು ಅಲ್ಲಿಂದ ಹೊರಬಿದ್ದನು. ಎಷ್ಟು ತೀವ್ರ ನಡೆಯಲು ಸಾಧ್ಯವೋ ಅಷ್ಟು ತೀವ್ರನಾಗಿ ಹೋದನು. ಕವಿದ ಕತ್ತಲೆಯಲ್ಲಿ ಆತನು ಐದು ಮೈಲುಗಳನ್ನು ಕಳೆದನು. ಪನ್ನೆ ತನ್ನ ಮಗುವನ್ನೆತ್ತಿ ರಾಜಪುತ್ರನು ಮಲಗುವ ತೊಟ್ಟಿಲಲ್ಲಿ ಇಟ್ಟಳು! ಕಂಬನಿತುಂಬಿ ಮುತ್ತಿಕ್ಕುತ್ತಿದ್ದವಳು, ಮುಗಿಸಿತ್ತಿರಲಿಲ್ಲ; ಕ್ರೂರನಾದ ವನವೀರನು ಒಳಹೊಕ್ಕವನೇ ರಾಜಪುತ್ರನೆಲ್ಲಿರುವನೆಂದು ಕೇಳಿದನು. ಆತನನ್ನು ಕಾಲಿಂದ ತಲೆವರೆಗೆ ಪನ್ನೆ ನೋಡಿದಳು. ನೋಡಿದವಳೇ ಮಗು ಮಲಗಿದ್ದ ತೊಟ್ಟಿಲನ್ನು ತೋರಿಸಿದಳು! ಆಕೆಯ ಹೃದಯದಲ್ಲಿ ವಜ್ರಕಠಿಣವಾದ ಧೈರ್ಯವು ಕೂಡಿತ್ತು; ಪರುಷ ಪಾಷಾಣ ಹೃದಯಿಯಾದ ವನವೀರನ ಕೈಯ ಕಠಾರಿಯು ತೊಟ್ಟಿಲ ಮಗುವಿನ ಎದೆಯನ್ನು ಸೀಳಿಬಿಟ್ಟಿತು! ಅಂತಹ ಭಯಂಕರ ಕಾರ್ಯವನ್ನು ಅನುಪಮ ತ್ಯಾಗಬುದ್ಧಿಯಿಂದ, ನಿಷ್ಠುರವಾದ ಧೈರ್ಯದಿಂದ, ಭೀಷಣ ಮೌನದಿಂದ ಆಕೆ ಸಹಿಸಿದಳು. ಸುಳ್ಳು ಸುದ್ದಿ ಮುಂದೆ ಊರಿಡೀ ಹರಡಿತು. ಆದರೆ ಆ ಬಡಸೇವಕಳ ಹೊಟ್ಟೆಯುರಿ, ತನ್ನ ಮಗುವನ್ನು ಬಲಿಗರ್ಪಿಸಿದ ಆ ನೋವು, ಆ ಯಮಯಾತನೆ ಯಾರಿಗೂ ತಿಳಿಯಲಿಲ್ಲ.

ರಾಜರಕ್ಷಿತನು

ಒಂದು ಮುಂಜಾನೆ ಆಕೆ ಚಿತ್ತೂರನ್ನು ಬಿಟ್ಟಳು. ದಾರಿಯಲ್ಲಿ ನಿಶ್ಚಿತ ಸ್ಥಳದಲ್ಲಿ ಆ ಕ್ಷೌರಿಕನು ಮಗುವನ್ನು, ರಾಜಪುತ್ರನನ್ನು ಅವಳಿಗೊಪ್ಪಿಸಿದನು. ಆಕೆ ಏನು ಮಾಡಬೇಕು? ಕಾಡು, ನದಿಗಳನ್ನು, ವನ ಪರ್ವತಗಳನ್ನು ದಾಟಿ ಮುಂದುವರಿದಳು. ಕೊನೆಗೆ ಕುಂಬಾಲ್ಮೀರನ್ನು ಸೇರಿ ಅಲ್ಲಿ ಅರಸನ ಮುಂದೆ ರಾಜಪುತ್ರನನ್ನು ಒಪ್ಪಿಸಿ ಕಂಬನಿ ತುಂಬಿಸಿ ಈ ಕರುಣಾಜನಕ ಕಥೆಯನ್ನು ಹೇಳಿದಳು. ಅಲ್ಲಿನ ದೊರೆಯು ರಾಜಪುತ್ರನನ್ನು ರಕ್ಷಿಸುವುದಾಗಿ ಭರವಸೆ ಕೊಟ್ಟನು.

ಈ ಸುದ್ದಿಯು ಊರೂರು ಹರಡಿತು! ರಾಜಲಕ್ಷಣಪೂರ್ಣನಾಗಿ ಉದಯಸಿಂಗನು ಅಲ್ಲಿ ಬೆಳೆಯುತ್ತಿದ್ದನು. ವನವೀರನು ಇದರಿಂದ ಹಗಲಿರುಳು ಭಯಚಕಿತನಾಗಿ ಜೀವಿಸುತ್ತಿದ್ದನು. ಒಂದು ದಿನ ಚಿತ್ತೂರಿನ ಪ್ರಧಾನರು ವನವೀರನನ್ನು ಪಟ್ಟದಿಂದ ಕೆಳತಳ್ಳಿದರು. ಆತನನ್ನು ವಧಿಸದೆ, ಅಗೌರವದ, ಕಲಂಕ ಜೀವನ ನಡೆಸುವಂತೆ ಜೀವದಿಂದ ಬಿಟ್ಟುಬಿಟ್ಟರು. ಕ್ರಿ. ಶ. ೧೫೪೧ರ ವರ್ಷ ಒಂದು ಶುಭ್ರ ಸೂರ್ಯೋದಯದ ದಿನ, ರಾಣಾ ಉದಯಸಿಂಗನು ತನ್ನ ಹಿರಿಯರ ಸಿಂಹಾಸನವೇರಿ ವಿರಾಜಮಾನನಾದನು! ಚಿತ್ತೂರಿನ ವೀರ ಪತಾಕೆ ಮುಗಿಲನ್ನು ಮುಟ್ಟಿ ಮತ್ತೊಮ್ಮೆ ಕಳೆಗೂಡಿ ಹಾರಾಡಿತು. ಬಹುಶಃ ಇಂಥ ಸಂದರ್ಭದಲ್ಲಿ; ತನ್ನ ಒಬ್ಬ ಮಗನನ್ನು ಬಲಿದಾನ ಕೊಟ್ಟಾದರೂ, ರಾಜವಂಶವನ್ನುಳಿಸಿದ ಕಾರಣ, ಅಂದು ಅತುಲ ಸಂತೋಷಗೊಂಡ ಮಹಿಳೆಯು—ಸ್ವಾಮಿಭಕ್ತೆ ಪನ್ನೆಯೊಬ್ಬಳೇ—ಇರಬೇಕು.

HALFTONE & LINE
BLOCK MAKING
UNDERTAKEN
Sharada Press,
MANGALORE

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ

★ ಸಿನೆಮಾ ಪುಟ ★

ನಲಿನೀಜಯವಂತ್

ನಿರ್ದೇಶಕ ವೀರೇಂದ್ರದೇಸಾಯಿಯವರು, ತಮ್ಮ 'ರಾಧಿಕಾ' ಚಿತ್ರದ ನಾಯಕಿಯಾಗಿ ಆರಿಸಿದ ಶಾಲಾ ಬಾಲಿಕೆ ನಲಿನೀಜಯವಂತಳು ಇನ್ನೊಂದು ಚಿತ್ರದಲ್ಲಿಯೂ ನಾಯಕಿ ಪಾತ್ರವನ್ನೇ ವಹಿಸುವಳಾಗಿ ತಿಳಿದಿದೆ

ನಿರ್ದೇಶಕ ಮೆಹಬೂಬರು ಅವಳನ್ನು 'ಅಮರಕೀ ಬೀನಾ' ಎಂಬ ತನ್ನ ಹೊಸ ಚಿತ್ರದಲ್ಲಿ ನಾಯಕಿಯಾಗಿ ನಟಿಸುವರೆ ಆರಿಸಿರುವರೆಂದು ತಿಳಿಯುತ್ತದೆ

ವೀರೇಂದ್ರ ದೇಸಾಯಿಯವರ ಹೊಸತೊಂದು ದ್ವಿಭಾಷಾ ಚಿತ್ರದಲ್ಲಿಯೂ ಆಕೆ ಪ್ರಾಮುಖ್ಯ ಪಾತ್ರವನ್ನೇ ವಹಿಸಲಿದ್ದಾಳೆಂದು ಸುದ್ದಿ.

ನಲಿನೀಜಯವಂತಳು, ಈಗ ಕೆಲವೇ ತಿಂಗಳುಗಳ ಹಿಂದೆ ಸಿನೆಮಾದಲ್ಲಿ ನಟಿಯಾಗಿ ಸೇರಿದ್ದಳು ಮಾತ್ರ. ಆದರೆ ಇಂದು ಚಲಚ್ಚಿತ್ರ ಲೋಕದಲ್ಲಿ ಒಬ್ಬ ಪ್ರಾಮುಖ್ಯ ನಟಿಯಾಗಿರುವಳು. ವೀರೇಂದ್ರ ದೇಸಾಯಿಯವರ ನಿರ್ದೇಶಕತ್ವದಲ್ಲಿ 'ರಾಧಿಕಾ' ಚಿತ್ರಕ್ಕೆ ಆಕೆ ಅಭಿನಯಿಸಿದಾಗ ಪಡೆದ ಅನುಭವವೇ ಈ ಕೀರ್ತಿಗೆ ಕಾರಣವೆಂದು ಹೇಳಬಹುದು

ಗೋವಿಂದರಾವ್ ತೆಂಬೆ

ಮೈಸೂರಿನ ಯುವರಾಜರೊಂದಿಗೆ ಯೂರೋಪು ಪ್ರಯಾಣ ಮಾಡಿ ಮರಳಿ ಬಂದ ಮಹಾರಾಷ್ಟ್ರದ ಪ್ರಸಿದ್ಧ ಸಂಗೀತಜ್ಞರಾದ ಶ್ರೀ ಗೋವಿಂದರಾವ್ ತೆಂಬೆ ಇವರು ನೇಶನಲ್ ಸ್ಟುಡಿಯೋದಲ್ಲಿ ತಯಾರಾಗುವ ಮರಾಠೀ ಚಿತ್ರವೊಂದರ ಸಂಗೀತ ನಿರ್ದೇಶಕರಾಗಿ ಸೇರಿರುವರು. ಆ ಚಿತ್ರದ ನಿರ್ದೇಶಕರು ವೀರೇಂದ್ರ ದೇಸಾಯಿಗಳು

ಜಂಗಲ್-ಪ್ರಿನ್ಸೆಸ್

ನಾಡಿಯಾ ಚಿತ್ರ

ನಾಡಿಯಾಳ ಅಭಿನಯದಿಂದ ಕೂಡಿದ 'ಜಂಗಲ್ ಪ್ರಿನ್ಸೆಸ್' ಎಂಬ ರೋಮಾಂಚಕ ಚಿತ್ರವೊಂದನ್ನು ನಾಡಿಯಾ ಚಲಚ್ಚಿತ್ರ ಕಂಪನಿಯನ್ನು ತಯಾರಿಸುತ್ತಿರುವರು

ಸಿರ್ಕೋ ಕಂಪೆನಿಯಲ್ಲಿ ಯಾರಿಗೆ ಎಷ್ಟು ಸಂಬಳ

ಕಲ್ಕತ್ತದ ವಾರ ಪತ್ರಿಕೆಯೊಂದು ಸಿರ್ಕೋ ಚಲಚ್ಚಿತ್ರ ಕಂಪೆನಿಯಲ್ಲಿ ನಟನಟಿಯರಿಗೆ ಕೊಡಲಾಗುವ ಸಂಬಳದ ಪಟ್ಟಿಯೊಂದನ್ನು ಕೊಟ್ಟಿರುತ್ತದೆ. ಅದು ಈ ಕೆಳಗಿನಂತಿದೆ

ನಾಶೀಮಳಿಗೆ ತಿಂಗಳೊಂದರ ೩,೪೩೭ ರೂ.

ಶಾಂತಾಆಪ್ಟೆಗೆ ತಿಂಗಳೊಂದರ ೪,೦೦೦ ರೂ. (ಬೇಗನೇ ಶಾಂತಾಆಪ್ಟೆ ಸಿರ್ಕೋವನ್ನು ಸೇರಲಿರುವಳೆಂದು ಸುದ್ದಿ)

ಪ್ರಾಯಾ ಚಿನಾಯಿಗೆ ತಿಂಗಳೊಂದರ ಈಗ ೧,೫೦೦ ರೂ. ಆದರೆ ನಷಾಚರ್ ಯಿಂದ ೧,೫೦೦ ರೂ ಕೊಡಲಾಗುವುದಂತೆ.

ಚಂದ್ರಮೋಹನನಿಗೆ ತಿಂಗಳೊಂದರ ೩,೦೦೦ ರೂ

ದೇವಕೀಬೋಸರಿಗೆ ತಿಂಗಳೊಂದರ ೩,೦೦೦ ರೂ

ಕರ್ದಾರರಿಗೆ ವರ್ಷವೊಂದರ ೧೫,೦೦೦ ರೂ

ಕರ್ದಾರರು ವರ್ಷವೊಂದರಲ್ಲಿ ಎರಡು ಚಿತ್ರಗಳನ್ನು ನಿರ್ದೇಶಿಸಬೇಕಾಗಿದೆ ಹಾಗಾಗಿ ಇದು ತಿಂಗಳ ೧,೨೫೦ ರೂ ಯಂತೆ ಆಗುತ್ತದೆ

—ಉಮರ್ ಖಯ್ಯಾಂ—

ಶಾಂತಾರಾಮರ ಮುಂದಿನ ಚಿತ್ರ ಉಮರ್ ಖಯ್ಯಾಮಿನ ಚಲನಚಿತ್ರದ ಪ್ರತಿಯನ್ನು ಬಾಬುರಾವ್ ಪಟೇಲ್ ಮತ್ತು ಕೆ. ಎ. ಅಬ್ಬಾಸ್ ಇವರು ಬರೆದಿರುವರು.

ಮನೋಮತಿ

ಅಸಾಮಿ ಚಿತ್ರ

ರೋಹಿಣೀ ಕುಮಾರ ಬರುವಾ ಎಂ. ಎ. (ಎಡಿನ್) ಇವರು (ಅಸಾಮಿನ ಪ್ರಸಿದ್ಧ ವ್ಯಾಪಾರ ಕುಶಲರು) 'ಮನೋಮತಿ' ಎಂಬ ಅಸಾಮಿನ ಚಿತ್ರವೊಂದನ್ನು ತಯಾರಿಸುವುದರಲ್ಲಿರುವರು. ಶ್ರೀ ಜಗದೀಶ ಚಕ್ರವರ್ತಿಗಳು ನಿರ್ದೇಶಕತ್ವ ವಹಿಸುವರು. ಅಸಾಮಿಗೆ ಮೂರನೆಯ ಸಲ ಬರ್ಮೀಯರು ಆಕ್ರಮಿಸಿದ ಕಾಲದ ಪ್ರೇಮಕಥೆಯೊಂದನ್ನು ಆಧರಿಸಿರುವ ಕಥೆಯಿದು. ಅಸಾಮಿ ಪ್ರಸಿದ್ಧ ನಟನಟಿಯರನ್ನು ಇದರಲ್ಲಿ ಸೇರಿಸಲಾಗಿದೆ. ಅನೇಕ ಕಲೀನ ಮಹಿಳೆಯರೂ ಸದ್ಗೃಹಸ್ಥರೂ ಪಾತ್ರವಹಿಸುವರು. ರಾಗೋರ್ ವಾಸೆ ತನಕ್ಕೆ ಸೇರಿದ ಶ್ರೀ ಬರುವಾರವರ ಪತ್ನಿಯೂ ನಟಿಸುವಳು. ಮಾರ್ಚಿಯಲ್ಲಿ ಈ ಚಿತ್ರವು ಸಿದ್ಧವಾಗಲಿರುವುದಾಗಿ ತಿಳಿಯುತ್ತದೆ

ಚಿತ್ರ ಮಂದಿರದಲ್ಲಿ

ಆಶಾ ಮತ್ತು ಅತ್ರೆ ಪಿಕ್ಚರ್ಸಿನವರ ಚಿತ್ರಗಳು ತಯಾರಾಗುವ ಚಿತ್ರ ಮಂದಿರದಲ್ಲಿ ಈಗ ಕೆಲಸವು ಅತ್ಯಂತ ರಭಸದಿಂದ ಸಾಗುತ್ತಿದೆ

ಅತ್ರೆ ಪಿಕ್ಚರ್ಸಿನ 'ಚರಣ ಕೀ ದಾಸೀ' ಚಿತ್ರವು ಅರ್ಧಕ್ಕಿಂತ ಹೆಚ್ಚು ಈಗಾಗಲೇ ಮುಗಿಯುತ್ತಾ ಬಂದಿತೆಂದು ತಿಳಿಯುತ್ತದೆ. ದುರ್ಗಾಖೋಟೆ, ವನಮಾಲಾ, ಜಾಗೀರ್ದಾರ್, ಅವಿನಾಶ್ ಮತ್ತು ಕುಸುಮದೇಶಪಾಂಡೆ ಇವರು ಇದರಲ್ಲಿ ನಟಿಸುವರು. ದುರ್ಗಾಖೋಟೆಯ ಇದರ ಅಭಿನಯ ಆಕೆಯ ಹಿಂದಿನ ಹಲವು ಅಭಿನಯಗಳಿಂದ ಹೊಚ್ಚ ಹೊಸತಾಗಿದೆಯೆಂದು ಕೇಳುತ್ತೇವೆ

'ಚರಣ ಕೀ ದಾಸೀ' ಎಂಬುದೊಂದು ಸಾಮಾಜಿಕ ಚಿತ್ರ. ಇದು ಶುದ್ಧ ಭಾರತ ಜೀವನವನ್ನು ಚಿತ್ರಿಸುವುದು. ಭಾರತದ ಸ್ತ್ರೀಯರ ಜೀವನ ಸಮಸ್ಯೆಯನ್ನು ಈ ಕಥೆಯು ಪ್ರೇಕ್ಷಕರ ಕಣ್ಣ ಮುಂದಿಡುತ್ತದೆ

ಆರೋಗ್ಯ ಮತ್ತು ಸೌಂದರ್ಯಕ್ಕೆ

ಈ ಇಮ್ಮಡಿ ಗುಣದ ಸಾಬೂನನ್ನೇ ಉಪಯೋಗಿಸಿ

ಶಾಂತಿಯನ್ನುಂಟುಮಾಡುವ ಮತ್ತು ಔಷಧಿಯುಕ್ತವಾದ ಇಮ್ಮಡಿ ಗುಣಗಳಿರುವ ಸಾಬೂನ ಕುಟಿಕೂರಾ ಟಾಯ್ಲೆಟ್ ಸಾಬೂನ (Cuticura Toilet Soap) ನಿಮ್ಮ ಮೈಯ ಚರ್ಮವನ್ನು ಸೌಂದರ್ಯಮಯವಾಗಿಯೂ ಆರೋಗ್ಯ ಸ್ಥಿತಿಯಲ್ಲಿರಿಸುವಂತೆಯೂ ಔಷಧೀಕರಿಸಿರುತ್ತದೆ. ಈ ಸಾಬೂನಿನಿಂದ ಹೊರಟ ಮಹತ್ತಾದ ನೊರೆಯು ಚರ್ಮರಂಧ್ರಗಳಿಂದ ಕಲ್ಮಶಗಳನ್ನು ತೆಗೆಯುತ್ತದೆ. ಈ ಇಮ್ಮಡಿ ಗುಣಗಳಿರುವ ಸೌಂದರ್ಯಯುಕ್ತವಾದ ಸಾಬೂನನ್ನು ಉಪಯೋಗಿಸಿ ಸೌಂದರ್ಯವನ್ನು ಗಳಿಸಿರಿ

ಕುಟಿಕೂರಾ ಸಾಬೂನು (Cuticura Soap) ಒಣಗಿದ ಚರ್ಮವನ್ನು ಮೃದುವಾಗಿರಿಸುತ್ತದೆ

ಸೌಮ್ಯ ಕ್ರಿಮಿನಾಶಕ ಗುಣವುಳ್ಳದ್ದು — ಚರ್ಮವನ್ನು ಸ್ವಚ್ಛವಾಗಿರಿಸುವುದು. ಮುಖದ ಮೇಲೆ, ಚರ್ಮವ್ಯಾಧಿಗಳಿದ್ದರೆ ಕುಟಿಕೂರಾ ಮಲಾಮನ್ನು (Cuticura Ointment) ಉಪಯೋಗಿಸಿರಿ. ಇದರ ಕ್ರಿಮಿನಾಶಕ ಗುಣಯುಕ್ತವಾದ ಔಷಧಿಯು ಚರ್ಮವ್ಯಾಧಿಯನ್ನು ಕೂಡಲೇ ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಉತ್ತಮವಾದದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಸಾಬೂನು

CUTICURA SOAP

ಸಾಧನಬೋಸ್ ದಂಪತಿಗಳು

ಸುಪ್ರಸಿದ್ಧ ಸಿನೆಮಾತಾರೆಗಳಾದ ಸಾಧನಬೋಸ್ ಮತ್ತು ಆಕೆಯ ಪತಿ ಮಾಧುಬೋಸ್ ಇವರು ತಮ್ಮ ಮುಂದಿನ ಚಿತ್ರವನ್ನು ನ್ಯೂಥಿಯೇಟರ್ಸ್‌ನಲ್ಲಿ ನಟಿಸುವರೆಂದು ತಿಳಿಯುತ್ತದೆ

ಯಾಕೂಬ್

ನೇಶನಲ್ ಸ್ಟುಡಿಯೋದವರ 'ಸ್ತ್ರೀ' ಎಂಬ ಚಿತ್ರದಲ್ಲಿ ಅಭಿನಯಿಸಿದ ಯಾಕೂಬನು ಈಗ ಆ ಕಂಪೆನಿಯನ್ನು ಬಿಟ್ಟು ಸಿರ್ಕೋವನ್ನು ಸೇರಿರುವುದಾಗಿ ಸುದ್ದಿ

ಶಾಂತಾಆಪ್ಟೆ ಮತ್ತು ಚಂದ್ರಮೋಹನ್

ಸಿರ್ಕೋ ಪ್ರೊಡಕ್ಷನ್ಸಿನವರು ತಯಾರಿಸುವ (ಹಿಂದೀ ಮರಾಠೀ ದ್ವಿಭಾಷಾ ಚಿತ್ರವೊಂದರಲ್ಲಿ) ಶಾಂತಾಆಪ್ಟೆ ಮತ್ತು ಚಂದ್ರಮೋಹನರು ಜತೆಯಲ್ಲಿ ಅಭಿನಯಿಸುವರು. ದೇವಕೀಬೋಸರ ನಿರ್ದೇಶಕತ್ವ

ಹುಮಾಯೂನ್

ನಿರ್ದೇಶಕ ಮೆಹಬೂಬರು ನೇಶನಲ್ ಸ್ಟುಡಿಯೋದವರಿಗಾಗಿ ತಯಾರಿಸುವ ಮೂರನೆಯ ಚಿತ್ರದ ಹೆಸರು 'ಹುಮಾಯೂನ್' ಎಂದು ತಿಳಿಯುತ್ತದೆ.

ಉಲ್ಟಿಗಂಗಾ

ಸಿನೆವಾಣಿ ಮುವಿಟೋನಿನವರ ಸಮಾಜವಾದ ಚಿತ್ರ ಉಲ್ಟಿಗಂಗಾ ತಯಾರಾಗಿದೆ. ಪ್ರಮೀಳಾ ಸರ್ದಾರ್ ಅಲಿ ಗುಲಾಬ್, ರಮೇಶ ವಿಜಾನಿ ಮೊದಲಾದವರು ಅಭಿನಯಿಸುವರು.

ಪುರುಷನ ಮೇಲೆ ಸ್ತ್ರೀಯು ತನ್ನ ಪ್ರಭಾವವನ್ನು ಬೀರಲು ಹೇಗೆ ಹೋರಾಡಬೇಕಾಯಿತು, ಸ್ತ್ರೀ ಜಾತಿಯನ್ನು ಪುರುಷ ಜಾತಿಯು ನಿತ್ಯ ಆಳಲು ಸಾಧ್ಯವೇ ಎಂಬೀ ಸಮಸ್ಯೆಗಳನ್ನು ಈ ಚಿತ್ರವು ಬಿಡಿಸುತ್ತದೆ

ಜಾಡನ್‌ಬಾಯಿ ಮತ್ತು ಸುಲೋಚನಾ

ಪ್ರಸಿದ್ಧ ನಟಿಯರಾಗಿ ಕೀರ್ತಿ ಪಡೆದ ಜಾಡನ್‌ಬಾಯಿ ಮತ್ತು ಸುಲೋಚನಾ ಇವರು ತಿರುಗಿ ಈಗ ಸಿನೆಮಾಲೋಕಕ್ಕೆ ಬರುವರೆಂದು ವಾರ್ತೆಯಿದೆ. ಜಾಡನ್‌ಬಾಯಿಯು ಚಲಚ್ಚಿತ್ರ ನಿರ್ಮಾಪಕಳಾಗಲು ಇಚ್ಛಿಸುತ್ತಿರುವಳಂತೆ. ಪ್ರಸಿದ್ಧ ನಿರ್ದೇಶಕರೊಬ್ಬರನ್ನು ಆರಿಸುವುದರಲ್ಲಿದ್ದಾಳೆಂದು ಸುದ್ದಿ. ಸುಲೋಚನಾ ನೇಶನಲ್ ಸ್ಟುಡಿಯೋದಲ್ಲಿ ಮೆಹಬೂಬರು ನಿರ್ದೇಶಿಸುವ ಅಮರ ಕೀ ಬಿನಾದಲ್ಲಿ ಪಾತ್ರವಹಿಸುವಳೆಂದು ತಿಳಿಯುತ್ತದೆ

ಧಾರ್ಮಿಕ ವಿಚಾರ:

ಮಹಾಶಿವರಾತ್ರಿ

ಈ ತಿಂಗಳ ೨೪ರಂದು ಮಹಾ ಶಿವರಾತ್ರಿ ಉತ್ಸವವು ನಡೆಯಿತು. ಮಹಾ ಶಿವರಾತ್ರಿಗೆ ಭಾರತೀಯರ ಹಬ್ಬಗಳಲ್ಲಿ ಒಂದು ವಿಶಿಷ್ಟಸ್ಥಾನವಿದೆ. ಉಪವಾಸ ಪ್ರಾರ್ಥನೆಗಳಿಂದ ಮನುಷ್ಯನು ದೇವರ ಸಾಮೀಪ್ಯವನ್ನು ಹೊಂದುವ ಆಚರಣೆಯು ಈ ಉತ್ಸವದ ತತ್ವದಲ್ಲಿ ಅಡಕವಾದ ವಿಷಯವಾಗಿದೆ. ಲೋಕದಲ್ಲಿ ಸಂಸಾರಿಯಾಗಿರುವ ಸಾಮಾನ್ಯ ಮಾನವನಾದರೂ, ತನ್ನ ಜೀವನದಲ್ಲಿ ಒಮ್ಮೆ ಸಾಂಸಾರಿಕ ವಿಷಯಗಳಿಂದ ದೂರವಾಗಿ ದೇವರನ್ನು ಕಠಿಣ ಪ್ರತಿನಿಯಮಗಳಿಂದ ಆರಾಧಿಸಲು ಅನುಕೂಲವು ಹೀಗೆ ಪೂರ್ವಿಕರಿಂದ ಒದಗಿಸಲ್ಪಟ್ಟಿದೆ.

ಹಿಂದುಗಳು ನಂಬುವ ತ್ರಿಮೂರ್ತಿಗಳಲ್ಲಿ ಶಿವನು ಕಠಿಣ ನಿಯಮದ, ಅತುಲ ತ್ಯಾಗದ, ಅನುಪಮ ಬಲಿದಾನದ ಕುರುಹಾಗಿದ್ದಾನೆ. ಹಣೆಯ ದತೆಯು, ಉಟ್ಟ ಗಜಚರ್ಮವು, ಮೈಗೆ ಮೆತ್ತಿದ ಭಸ್ಮವು ಶಿವನ ಸ್ವರೂಪವನ್ನು ಕಠಿಣನಿರ್ಧಾರವನ್ನೂ ತಿಳಿಸುತ್ತವೆ. ಕ್ರೂರ ಕಪ್ಪು ವಿಷದ ಕಂಠವು—ಆತನು ಲೋಕದ ಉಪಕಾರಕ್ಕಾಗಿ ಮಾಡಿದ ಅತುಲ ಸ್ವಾರ್ಥತ್ಯಾಗವನ್ನು ತೋರಿಸುತ್ತದೆ. ಶಿವನ ಕಡೆಗೆ ಹಿಂದುಗಳಿಗಿರುವ ಭಕ್ತಿಯು ಈ ತರದ ಆತನ ಧೈರ್ಯ—ಕಠಿಣ ವ್ರತ—ಸ್ವಾರ್ಥತ್ಯಾಗಗಳ ಸಲುವಾಗಿಯೇ ಆಗಿದೆ.

★

ಹಿಂದಿನ ಋಷಿಗಳು ಅನೇಕ ತತ್ವಗಳನ್ನು ಕಥೆಗಳ ಮೂಲಕ ಜನತೆಯಲ್ಲಿ ಪ್ರಚಾರಮಾಡಿದರು. ಶಿವರಾತ್ರಿಯ ಕುರಿತೂ ಅಂತಹ ಕಥೆಗಳು ಅನೇಕ ಪ್ರಚಾರದಲ್ಲಿವೆ.

ದೇವರಲ್ಲಿ ಭಕ್ತಿ ವಿಶ್ವಾಸಗಳನ್ನು ಮನುಷ್ಯನು ತೋರಿಸುವುದೆಂದರೆ, ಅದಕ್ಕಾಗಿ ಕಷ್ಟಗಳನ್ನು ತಾಳ್ಮೆಯಿಂದ ಸಹಿಸುವ ಮೂಲಕವೇ. ಉಪವಾಸ, ಜಾಗರ, ಪ್ರಾರ್ಥನೆಗಳು ಇದರ ಸಲುವಾಗಿಯೇ ಏರ್ಪಟ್ಟಿವೆಯೆನ್ನಲು ಅಡ್ಡಿಯಿಲ್ಲ.

ಒಬ್ಬ ಬೇಡನು ಬಿಲ್ಲು ಬಾಣಗಳನ್ನು ಹಿಡಕೊಂಡು ಬೇಟೆಗಾಗಿ ಕಾಡಿಗೆ ತೆರಳಿದನು. ಅಲೆದಾಡಿ ಅಲೆದಾಡಿ ಆತನಿಗೆ ಒಂದು ಬೇಟೆಯೂ ದೊರಕಲಿಲ್ಲ. ಮನೆಯಲ್ಲಿ ಹೆಂಡತಿ ಮಕ್ಕಳು ಉಪವಾಸಬೀಳಬೇಕಾಗುವುದೆಂದು ಸಂಜೆಯಾದರೂ ಮನೆಗೆ ಮರಳದೆ ರಾತ್ರಿ ಹೊತ್ತು ಏನಾದರೂ ಬೇಟೆ ಸಿಗುವುದೇ ಎಂದು ಒಂದು ಕೊಳದ ಬಳಿ ಮರವೊಂದನ್ನು ಹತ್ತಿ ಮೃಗಗಳಿಗಾಗಿ ಕಾದು ಕುಳಿತನು.

ಹೊಟ್ಟೆಯು ಹಸಿವು, ರಾತ್ರಿಯ ನಿದ್ದೆ ಇವುಗಳಿಂದ ಆಯಾಸಗೊಂಡಿದ್ದರೂ, ಎಚ್ಚರದಿಂದಿರಬೇಕಾಗಿ, ಆತನು ಮರದ ಮೇಲಿಂದ ಒಂದೊಂದೇ ಎಲೆಗಳನ್ನು ಕೊಯ್ದು ಕೆಳಗೆ ಬಿಸಾಡುತ್ತಿದ್ದನು.

ಒಂದು ಜಿಂಕೆ ನೀರು ಕುಡಿಯಲು ಬಂತು; ಬೇಡನು ಬಿಲ್ಲು ಬಾಣಗಳನ್ನು ಜೋಡಿಸಿದನು. ಅದು ಮನುಷ್ಯ ಸ್ವರದಲ್ಲಿ ಮಾತನಾಡಿತು. 'ತನ್ನ ಪ್ರಿಯನನ್ನೂ ಮಗುವನ್ನೂ ನೋಡಿ ಮರಳಿ ಬರಲು ನನಗೆ ಅನುಮತಿ ಕೊಡಲಾರೆಯಾ?' ಎಂದಿತು. ಬೇಡನು ಹೃದಯ ಕರಗಿ ಆಗಬಹುದೆಂದು ಬಿಟ್ಟನು.

ಕೆಲ ನಿಮಿಷಗಳಲ್ಲಿಯೇ ಮತ್ತೊಂದು ಜಿಂಕೆ ಬಂತು. ಬಿಲ್ಲುಬಾಣಗಳನ್ನು ಬೇಡನು ಜೋಡಿಸುತ್ತಿದ್ದಾಗ, ಅದೂ ಮನುಷ್ಯ ಭಾಷೆಯಲ್ಲಿ 'ತನ್ನ ಪ್ರಿಯಳನ್ನೂ, ಮಗುವನ್ನೂ ನೋಡಿ ಮರಳಲು ಸಮ್ಮತಿ ಕೊಡಲಾರೆಯಾ?' ಎಂದಿತು. ಬೇಡನು ಆಗಲೂ ದಯೆ ತೋರಿಸಿದನು.

ಹೆಚ್ಚು ಹೊತ್ತು ಕಳೆದಿರಲಿಲ್ಲ. ಜಿಂಕೆ ಮರಿಯೊಂದು ಬಂದಿತು. ಬೇಡನು ಬಾಣ ಬಿಡಲು ಸಿದ್ಧನಾದನು. ಅದೂ ಮಾನುಷ ವಾಣಿಯಲ್ಲಿಯೇ ಕೂಗಿತು. 'ನನ್ನ ಹೆತ್ತವರನ್ನು ಕಂಡು ಮರಳಲು ದಯೆ ತೋರಿಸುವೆಯಾ?' ಬೇಡನ ಮನದ ಕ್ರೌರ್ಯ ನಿಲ್ಲಲಿಲ್ಲ. ಜಿಂಕೆ ಮರಿ ತೆರಳಿತು.

ಅಷ್ಟರಲ್ಲಿ ಬೆಳಗಾಗಿತ್ತು. ಬರಿಗೈಯಿಂದ ಬೇಡನು ಮನೆಯತ್ತ ಕಡೆ ಮರಳಿ ಬಂದನು. ಆತನ ಹೆಂಡತಿ ಮಕ್ಕಳು ಓಡಿಬರುತ್ತಿದ್ದರು ಆತನನ್ನು ಹುಡುಕಿಕೊಂಡು. ಆಕಾಶದಿಂದ ವಿಮಾನವೊಂದು ಇಳಿದು ಬಂದಿತು. ಅವರನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗಲು.

★

ಬೇಡನು ಅನ್ನವಿಲ್ಲದೆ ನಿದ್ದೆಯಿಲ್ಲದೆ ಕಳೆದ ರಾತ್ರಿ ಮಹಾಶಿವರಾತ್ರಿಯಾಗಿತ್ತು. ಆತನು ಕುಳಿತ ಮರವು ಬಿಲ್ವಮರವಾಗಿತ್ತು. ನಿದ್ದೆ ಕೆಡಲೆಂದು ಆತನು ಎಸೆದ ಬಿಲ್ವಪತ್ರಗಳು ಕೆಳಗಿದ್ದ ಶಿವಲಿಂಗದ ಮೇಲೆ ಬಿದ್ದವು. ಹೀಗೆ ತನಗೆ ತಿಳಿಯದೆಯೇ ಆತನು ಶಿವರಾತ್ರಿಯಲ್ಲಿ ಉಪವಾಸ ಜಾಗರ ಶಿವಪೂಜೆ ಮಾಡಿದನು. ಶಿವರಾತ್ರಿಯಲ್ಲಿ ಈ ವಿಧವಾಗಿ ಮಾಡಿದ ಆತನ ಕೃತಿಗಳಿಂದಲೇ ಅವನಿಗೆ ಮೋಕ್ಷಕ್ಕೆ ಹೋಗಲು ವಿಮಾನ ಬಂದಿತ್ತು.

ಅವರು ವಿಮಾನವೇರಿ ಸ್ವರ್ಗದತ್ತ ಕಡೆ ತೆರಳಿದರು.

ಶಿವರಾತ್ರಿಯ ಮಹತ್ವವು—ಹಿಂದೂ ಹಬ್ಬಗಳ ಮಹತ್ವವು—ಇಂತಹ ಅನೇಕ ಕಥೆಗಳಿಂದ ಹೆಚ್ಚು ಜನಪ್ರಿಯವಾಗಿವೆ.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ.

ಪ್ರಕಾಶಿಸುವ ನೇತ್ರಗಳು ಆರೋಗ್ಯ ಜೀವನದ ಚಿಹ್ನೆ

ವಿಪರೀತವಾದ ಸೆಕೆ, ಮತ್ತು ಸರಿಯಾದ ಪೋಷಣೆಯಿಲ್ಲದಿರುವಿಕೆ, ಇವುಗಳೇ ನರಗಳ ದೌರ್ಬಲ್ಯಕ್ಕೂ ಮತ್ತು ಸಾಮಾನ್ಯ ನಿಶ್ಶಕ್ತಿಗೂ ಕಾರಣ. ಜೀವಾಮೃತಂ ಸೇವಿಸಿ ನಿಮ್ಮ ದೇಹವನ್ನು ಬೆಳೆಸಿರಿ. ಜೀವಕ್ಕಿದೊಂದು ಸಂಜೀವಿನಿ.

ಬಲಿದ ನರಗಳಿಗೆ ಜೀವಾಮೃತಂ

ಜೀವಾಮೃತಂ

ನರಗಳಿಗೆ ಅತ್ಯುತ್ತಮ ಟಾನಿಕ್.

K. A 2

ಎಲ್ಲಾ ಕೆಮಿಸ್ಟರಲ್ಲಿಯೂ ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಅಮೃತ

ರಕ್ತಶುದ್ಧಿಯನ್ನು ಮಾಡುವ ನರಗಳ ದೌರ್ಬಲ್ಯವನ್ನು ಪರಿಹರಿಸುವ ಟಾನಿಕ್!

ಮಲಬದ್ಧತೆ, ಅಜೀರ್ಣ, ಮತ್ತು ಇತರ ಜಠರ ದೋಷಗಳನ್ನು ನಿವೃತ್ತಿಗೊಳಿಸುತ್ತದೆ; ಕ್ಷೀಣಗೊಂಡವರಿಗೆ ತಿರಿಗಿ ಶಕ್ತಿ ಧಾತುಪುಷ್ಟಿಯನ್ನು ಕೊಡುತ್ತದೆ.

ವಿಶೇಷ ವಿಷಯಗಳಿಗೆ ಯಾವುದೇ ಕೆಮಿಸ್ಟರಲ್ಲಾಗಲಿ, ಇಲ್ಲವೇ ಇವರಲ್ಲಾಗಲಿ ವಿಚಾರಿಸಿರಿ.

"ಕೇಸರೀ ಕುಟೀರಂ"

ಇಂಡಿಯನ್ ಕೆಮಿಸ್ಟ್ ಎಂಡ್ ಡ್ರಗ್ಗಿಸ

ರಾಯಪೇಟೆ, ಮದ್ರಾಸು.

ಜೆಕೊಸ್ಲೊವೇಕಿಯ, ಪೋಲಾಂಡ, ಹೊಲ್ಲಾಂಡ, ಡೆನ್ಮಾರ್ಕ್, ನೋರ್ವೆ, ಬೆಲ್ಜಿಯಂ ಮೊದಲಾದ ಯುರೋಪಿನ ಅನೇಕ ಚಿಕ್ಕ ದೊಡ್ಡ ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯವನ್ನು ಕಳಕೊಂಡು, ಹಿಟ್ಲರನಿಗೆ ಅಧೀನವಾಗಲಿಕ್ಕೆ, ಅವನ ಪೆರಚೂಟು ಸೇನೆಯೇ ಬಹಳ ಕೆಲಸಮಾಡಿ ಸಹಾಯ ಕೊಟ್ಟವು. ೧೯೩೫ರಿಂದಲೇ ಹಿಟ್ಲರನು ಈ ವಿಧದ ಸೇನೆಗಳಿಗೆ ಅಗತ್ಯವುಳ್ಳ ಶಿಕ್ಷಣ ತರಬೇತಿಗಳನ್ನು ಕೊಟ್ಟು ಅವುಗಳಿಗೆ ಕಾರ್ಯಪದ್ಧತಿಯನ್ನು ಕಲಿಸುತ್ತಾ ಬಂದಿರುವನು.

ಈ ಸೇನೆಗೆ ಸೇರಿದ ಸೈನಿಕರು ಮೊದಲು ಕೃತ್ರಿಮ ಸಾಧನಗಳ ಮೂಲಕ ಹಾರಲಿಕ್ಕೂ ಎತ್ತರದಿಂದ ಕೆಳಗೆ ಬಿದ್ದು ಇಳಿಯಲಿಕ್ಕೂ ಅಭ್ಯಾಸ ಮಾಡುವರು. ಒಬ್ಬ ಪೆರಚೂಟು ಸೈನಿಕನು ಮೇಲಿನಿಂದ ಕೆಳಗಿಳಿಯುವ ವೇಗದಲ್ಲಿ ಅವನು ಕೈಕಾಲುಗಳನ್ನು ಮುರಿದುಕೊಳ್ಳುವ ಮತ್ತು ಅಂಗೋಪಾಂಗಗಳಲ್ಲಿ ಗಾಯಗೊಳ್ಳುವ ಸಂಭವಗಳು ಬಹಳ ಇರುತ್ತವೆ. ಇದರಿಂದ ಯಾವ ಕೆಲಸಕ್ಕಾಗಿ ಅವನು ಹೊರಟಿದ್ದನೋ ಆ ಕೆಲಸವು ಹಿಂದೆ ಬೀಳುತ್ತದೆ. ಆದ್ದರಿಂದ ಪ್ರತಿಯೊಬ್ಬ ಪೆರಚೂಟು ಸೈನಿಕನೂ, ಯಾವ ಎತ್ತರದಿಂದಲೂ ಕೈ-ಕಾಲು ಮುರಿದುಕೊಳ್ಳದೆ ಮತ್ತು ಗಾಯಗೊಳ್ಳದೆ ಆಕಾಶದಿಂದ ನೆಲಕ್ಕಿಳಿಯುವ ಅಭ್ಯಾಸವನ್ನು ಬಹು ಚೆನ್ನಾಗಿ ಮಾಡಿಕೊಂಡಿರಬೇಕು, ಅವನು ಗಾಳಿಯ ಗತಿಯನ್ನು ತಿಳಕೊಂಡು, ಅದರ ವೇಗಕ್ಕೆ ಸಿಲುಕದೆ, ನೆಟ್ಟಗೆ ತನ್ನ ನಿರ್ದಿಷ್ಟ ಸ್ಥಾನದಲ್ಲಿ ಇಳಿಯಲಿಕ್ಕೂ ಕಲಿಯಬೇಕು. ಮತ್ತೆ ಪೆರಚೂಟು ಎಂಬ ತನ್ನ ಆ ವಾಯುಕೊಡೆಯನ್ನು ತಾನು ಕೆಳಕ್ಕೆ ಇಳಿದ ಹಾಗೆ ಮೆಲ್ಲಮೆಲ್ಲಗೆ ಮಡಚಿಕೊಳ್ಳಲಿಕ್ಕೂ ಅಭ್ಯಾಸಮಾಡಬೇಕು. ಮತ್ತೆ ಆಯಾ ದೇಶದ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಶಸ್ತ್ರಾಸ್ತ್ರಗಳ ಉಪಯೋಗ ಕ್ರಮವನ್ನೂ ಅವನು ಅರಿತಿರಬೇಕು. ಇವೆಲ್ಲ ಅಭ್ಯಾಸಗಳನ್ನು ಬಹು ಚೆನ್ನಾಗಿ ಮಾಡಿದ ಅನಂತರವೇ ಅವನು ಮೇಲಧಿಕಾರಿಗಳ ಅಪ್ಪಣೆಯಂತೆ ಕಾರ್ಯಪ್ರವೃತ್ತನಾಗುವನು.

ಒಂದು ಕಡೆ ಇಳಿದ ಬಳಿಕ ಈ ಸೈನಿಕನು ಕಾರ್ಯಪ್ರವೃತ್ತನಾಗುವ ತನಕ ಎಲ್ಲಿಗಾದರೂ ಹೋಗಿ ತಲೆಮರೆಸಿಕೊಂಡಿರಬೇಕಷ್ಟೆ. ಅದಕ್ಕೋಸ್ಕರ ಸೈಕಲ್ಲು, ಮೋಟರ ಸೈಕಲು ಮೊದಲಾದವುಗಳನ್ನು ಉಪಯೋಗಿಸಲಿಕ್ಕೂ ಈ ಸೈನಿಕನಿಗೆ ತಿಳಿದಿರಬೇಕಾಗಿದೆ. ಅವನು ಆಕಾಶದಿಂದ ಕೆಳಗಿಳಿಯುವಾಗ ಮಡಚಿಟ್ಟ ಹಗುರವಾದ ಈ ವಾಹನಗಳನ್ನು ತೆಗೆದುಕೊಂಡೇ ಕೆಳಗಿಳಿಯುವನು. ಪಿಸ್ತೂಲು, ರೈಫಲು ಮೊದಲಾದ ಶಸ್ತ್ರಾಸ್ತ್ರಗಳೂ ಅವನ ಬಳಿ ಇರುತ್ತವೆ.

ಪ್ರತ್ಯಕ್ಷ ಬೋಧನೆ

ಈ ಎಲ್ಲ ವಿಷಯಗಳಲ್ಲಿ ಶಿಕ್ಷಣವು

ಹಿಟ್ಲರನ ಕೈಯ ಬ್ರಹ್ಮಾಸ್ತ್ರವಿದು!

—ಈ ಪೆರೆಚ್ಯೂಟ್ ಸೈನ್ಯವೆಂದರೆ!

ಆ ಸೈನಿಕರ ಅದ್ಭುತ ತರಬೇತಿ

ಶತ್ರುರಾಷ್ಟ್ರಗಳಲ್ಲಿ ಅವರ ಹಾವಳಿ!

ಮುಗಿದ ಬಳಿಕ, ಈ ಸೈನಿಕನಿಗೆ ಪ್ರತ್ಯಕ್ಷ ಬೋಧನೆಯನ್ನು ಕೊಡಲಾಗುತ್ತದೆ. ಬೇರೆಬೇರೆ ದೇಶಗಳ ಭಾಷೆಗಳನ್ನು ಅವನು ಕಲಿಯುವನು. ಮತ್ತೆ ಶತ್ರುಪಕ್ಷದ ಹೋರಾಟ ಪದ್ಧತಿಗಳನ್ನು ಅರಿಯುವನು. ಅವರ ಪದ್ಧತಿಯಲ್ಲಿಯೇ ನಕಲಿ ಯುದ್ಧಗಳು ಆಗುವವು. ಶತ್ರುಪಕ್ಷದ ಯುದ್ಧವ್ಯೂಹಗಳ ಪ್ರತಿಕೃತಿಗಳನ್ನೂ, ಊರು ಬೀದಿಗಳ ಮಾದರಿಗಳನ್ನು ತಯಾರಿಸಿ, ಶತ್ರುಪಕ್ಷ ಮತ್ತು ಅವರ ವೇಷ, ಜನರು, ರೀತಿ ನೀತಿ, ಉಡುಗೆ ತೊಡಿಗೆ, ಆಚಾರ ವ್ಯವಹಾರ ಮೊದಲಾದ ಎಲ್ಲ ವಿಷಯಗಳ ಪ್ರತ್ಯಕ್ಷ ಅನುಭವವನ್ನು ಈ ಸೈನಿಕರಿಗೆ ಕೊಡುವರು. ಇದಕ್ಕಾಗಿ ತಯಾರಿಸುವ ಪ್ರತಿಕೃತಿಗಳು ಬಹಳ ಸೂಕ್ಷ್ಮ ವಿಚಾರಗಳಲ್ಲಿ ಕೂಡ ಮೂಲವನ್ನು ಹೋಲುತ್ತವೆ. ಆದ್ದರಿಂದ ಶತ್ರುಪಕ್ಷದ ಸಂಪೂರ್ಣ ಜ್ಞಾನವು ಪೆರಚೂಟ ಸೈನಿಕನಿಗೆ ಇರುತ್ತದೆ.

ಈ ಸೈನಿಕರು ಮಾಡಬೇಕಾದ ಆರಂಭದ ಕೆಲಸಗಳು ಯಾವುವೆಂದರೆ ಶತ್ರು ಪ್ರದೇಶಗಳಿಗೆ ಇಳಿದು ಅಲ್ಲಿಯ ಪ್ರಾಮುಖ್ಯವಾದ ರೈಲ್ವೆ, ಸೇತುವೆ ಮೊದಲಾದುವನ್ನು ಕೆಡವಿಹಾಕಿ ಶತ್ರುಪಕ್ಷದ ಸೇನೆಗಳ ಚಲನವಲನ ಮತ್ತು ಶಸ್ತ್ರಾಸ್ತ್ರ ಆಹಾರಸಾಮಗ್ರಿಗಳ ಸಾಗಿಸುವಿಕೆಯು ಕಾಲಕ್ಕೆ ಸರಿಯಾಗಿ ಆಗದಂತೆ ತಡೆಯುವುದೂ, ಶತ್ರುಪಕ್ಷದೊಳಗೆ ಸಂದೇಹ, ಭಯ, ಗೊಂದಲಗಳ ವಿಷಬೀಜವನ್ನು ಬಿತ್ತುವುದೂ ಆಗಿದೆ. ಈ ಸೈನಿಕರು ಪ್ರತ್ಯಕ್ಷ ಹೋರಾಟದಲ್ಲಿ ಭಾಗ ತೆಗೆದುಕೊಳ್ಳಬೇಕಾಗಿರುವುದಿಲ್ಲ. ಆದರೂ ಆ ಹೋರಾಟಕ್ಕಿಂತ ಇವರು ಮಾಡುವ ಈ ಕೆಲಸಗಳು ಭಯಂಕರವಾಗಿಯೂ ಮಹತ್ವದ್ದಾಗಿಯೂ ಇರುತ್ತವೆ. ಆದ್ದರಿಂದ ಇವರ ಈ ಕಾರ್ಯಗಳಿಗೆ ಯಾವ ಭಂಗವೂ ಬಾರದ ಹಾಗೆ ಇವರ ಅಗತ್ಯವುಳ್ಳ ಸಂರಕ್ಷಣೋಪಾಯಗಳನ್ನು ಮೊದಲಿನಿಂದಲೂ ಚಿಂತಿಸಿರುತ್ತಾರೆ.

ಅವರ ಕಾರ್ಯಪದ್ಧತಿ

ಪೆರಚೂಟ ಸೈನಿಕರ ಕಾರ್ಯಪದ್ಧತಿಯು ಬಹು ರೋಮಾಂಚನಕಾರಿಯಾಗಿಯೂ ವಿಸ್ಮಯದಾಯಕವಾಗಿಯೂ ಇರುತ್ತದೆ. ಒಂದು ಬಾರಿ ಹೊಲ್ಲೆಂಡಿನ ಒಂದು ವಿಮಾನ ನಿಲ್ದಾಣದ ಮೇಲೆ ಜರ್ಮನ್ ಪೆರಚೂಟ್ ಸೈನಿಕರ ಮುಹರು ಕಡೆಯ ಆಕ್ರಮಣವು ನಡೆದಿದ್ದಿತು. ಆಕಾಶದ ಮಾರ್ಗವಾಗಿ ಕೆಲವು ವಿಮಾನಗಳು ಬಂದು ಅನೇಕ ಪೆರಚೂಟು ಸೈನಿಕರನ್ನು ಕೆಳಗಿಳಿಸಿತು. ಈ ಸೈನಿಕರೆಲ್ಲರೂ ಡಚ್ಚರ ಪೋಷಾಕಿನಲ್ಲಿದ್ದರು; ಡಚ್ ಭಾಷೆಯನ್ನು ಆಡುತ್ತಿದ್ದರು; ಡಚ್ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಂಡಿದ್ದರು. ಆದ್ದರಿಂದ ಮಿತ್ರವರ್ಗದಿಂದ ಈ ಶತ್ರುಪಕ್ಷವನ್ನು ಬೇರೆಮಾಡಿ ಅದನ್ನು ನಾಶಮಾಡುವುದು ಅಸಾಧ್ಯವಾಯಿತು. ಡಚ್ ಪಾಳೆಯದಲ್ಲಿ ಗೊಂದಲವೆದ್ದಿತು. ಎಲ್ಲೆಲ್ಲಿಯೂ ಹಾಹಾಕಾರವುಂಟಾಯಿತು. ಈ ಸೇನೆಯವರು ಎಲ್ಲಿ ಎಷ್ಟು ಮಂದಿ ಯಾವ ಸಿದ್ಧತೆಯಿಂದ ಇದ್ದಾರೆಂಬುದನ್ನು ತಿಳಿಯುವುದು ಕಠಿನವಾಗಿತ್ತು.

ಒಮ್ಮೆ ಒಬ್ಬ ಪೆರಚೂಟು ಸೈನಿಕನು ಒಂದು ಬೀದಿಯ ಮನೆಯೊಳಗಿನ ಅಂಗಳದ ಹುಲ್ಲುರಾಶಿಯ ಮೇಲೆ ಪ್ರತ್ಯಕ್ಷನಾದನು; ಕ್ಷಣಾರ್ಧದಲ್ಲಿ ಮಾಯವಾಗಿಬಿಟ್ಟನು.

ಎಲ್ಲೆಲ್ಲಿ ಹುಡುಕಿದರೂ ಅವನು ಕಾಣಸಿಗಲಿಲ್ಲ. ಜನರ ಗುಂಪು ಈ ಅದ್ಭುತವನ್ನು ನೋಡುತ್ತಿದ್ದ ಹಾಗೆಯೇ ಒಬ್ಬ ಕ್ರೈಸ್ತ ಪಾದರಿ ಬೈಬಲು ಓದುತ್ತಾ ಆ ಮಾರ್ಗವಾಗಿ ಬಂದನು. "ಇವನೇ ಆ ಸೈನಿಕನಾಗಿರಬಹುದೇ" ಎಂದು ಜನರು ತರ್ಕಿಸುತ್ತಿದ್ದ ಹಾಗೆಯೇ, ಅದು ಗೊತ್ತಾಗಿ ಸೈನಿಕನು ಸಮೀಪದಿಂದ ಚಲಿಸುತ್ತಿದ್ದ ಒಂದು ಮೋಟರಿನೊಳಗೆ ನುಗ್ಗಿಬಿಟ್ಟನು. ಪೋಲೀಸರು ಮೋಟರನ್ನು ಮುತ್ತಿ ಪಾದರಿಯನ್ನು ಹಿಡಿದರು. ಆಗ ಅವನು 'ಇದು ವ್ಯರ್ಥ ಪ್ರಯತ್ನ. ನನ್ನಂಥ ಬೇರೆ ೭೦೦೦ ಮಂದಿ ಹಿಟ್ಲರನಿಗಾಗಿ ಪ್ರಾಣಕೊಡಲು ಇದೇ ಈ ಊರಿನಲ್ಲಿ ಸಿದ್ಧರಾಗಿ ನಿಂತಿದ್ದಾರೆ!' ಎಂದನು.

ಜರ್ಮನ್ ಪೆರಚೂಟು ಸೈನಿಕರು ಟಪ್ಪಾಲು ಪೇದೆ, ಪೋರ್ಟರ್, ಗಾರ್ಡ್, ಸ್ಟೇಶನ್ ಅಧಿಕಾರಿಗಳು ಮೊದಲಾದ ನೌಕರ ಚಾಕರರ ಉಡುಗೆಯಲ್ಲಿ ಮಾತ್ರವಲ್ಲ, ಡಚ್, ಬೆಲ್ಜಿಯನ್, ಫ್ರೆಂಚ್ ಮತ್ತು ಬ್ರಿಟಿಷ್ ಸೈನಿಕರ ಪೋಷಾಕಿನಲ್ಲಿಯೂ ಹೊಲ್ಲೆಂಡನ್ನು ಸೇರಿದರು. ಈ ಸೈನಿಕರು ಸ್ವಲ್ಪ ಅಥವಾ ಹೆಚ್ಚಿನ ಯಾವ ಸಂಖ್ಯೆಯಲ್ಲಿ ಬಂದರೂ ಶತ್ರುಪಕ್ಷದಲ್ಲಿ ಗೊಂದಲವನ್ನುಂಟುಮಾಡಿ, ಮುಂದೇನಾಗುವದೆಂಬುದು ತಿಳಿಯದ ಹಾಗೆ ಮಾಡುವುದರಲ್ಲಿ ಪೂರ್ಣ ಸಮರ್ಥರಿರು

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —
ಎಲ್ಲವುಗಳಿಂದಲೂ ಶ್ರೇಷ್ಠವಾಗಿಯೇ ಇದೆ. ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಮೊದಲಾದವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ—

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು

ಮಂಗಳೂರಿನ ಡಿಸ್ಟ್ರಿಬ್ಯೂಟರರು:— ದಿ. ಕೊರನೇಶನ್ ಟ್ರೇಡಿಂಗ್ ಕೋ
ಮಹಮ್ಮದಾಲಿ ರೋಡ್, ಮಂಗಳೂರು.

ವಿಜ್ಞಾನಯುಗ

ಆಕಾಶದಲ್ಲಿ ತೋರುವ ಬಾಲ ಚುಕ್ಕಿಗಳು

ಇದೇ ಕೆಲವು ದಿನಗಳಿಂದ ರಾತ್ರಿ ಕಾಲದಲ್ಲಿ ಆಕಾಶದ ನಿರೀಕ್ಷಣೆ ಮಾಡಿದವರು ಅಲ್ಲಲ್ಲಿ ಬಾಲಚುಕ್ಕಿಯನ್ನು ಕಂಡಿದ್ದರೆಂದು ವಾಚಕರು ಪತ್ರಿಕೆಗಳಲ್ಲಿ ಓದಿದ್ದಿರಬಹುದು. ಬಾಲಚುಕ್ಕಿಗಳು ಒಂದೊಂದು ಸಮಯದಲ್ಲಿ ಮಾತ್ರ ಕಾಣಿಸಿಕೊಳ್ಳುವದರಿಂದ, ನೋಡುವವರಲ್ಲಿ ಅವು ವಿಶೇಷ ಕೌತುಕವನ್ನು ಉಂಟುಮಾಡುತ್ತವೆ. ಸಹಸ್ರಾರು ವರ್ಷಗಳಿಂದ ಸರ್ವಸಾಧಾರಣ ಜನರೂ ವಿಜ್ಞಾನಿಗಳೂ ಈ ಬಾಲಚುಕ್ಕಿಗಳನ್ನು ಕಾಣುತ್ತಾ ಬಂದಿದ್ದಾರೆಂಬುದಕ್ಕೆ ಇತಿಹಾಸದಿಂದ ಪ್ರಮಾಣಗಳು ದೊರೆಯುತ್ತವೆ. ಆದರೂ ಅವುಗಳ ವಿಷಯವಾದ ಜ್ಞಾನವು ವಿಜ್ಞಾನಿಗಳಿಗೆ ಕೂಡ ಸಂಪೂರ್ಣ ಇರುವದಿಲ್ಲ. ಬಾಲಚುಕ್ಕಿಗಳ ವಿಷಯವಾಗಿ ಅವರು ಹೇಳುವದೆಲ್ಲ, ಸಾಮಾನ್ಯ ಕಪೋಲ ಕಲ್ಪನೆಗಳಾಗಿ ಇವೆ.

ಬಾಲಚುಕ್ಕಿಗಳ ರಚನೆ

ಬಾಲಚುಕ್ಕಿಗಳಲ್ಲಿ ಮೂರು ಭಾಗಗಳು ಇರುತ್ತವೆ. ಒಂದು ತಲೆ, ಒಂದು ಬಾಲ ಮತ್ತು ಇವೆರಡರ ನಡುವೆ ಜಾಜ್ವಲ್ಯಮಾನವಾಗಿ ಪ್ರಕಾಶಿಸುವ ಒಂದು ಚುಕ್ಕಿ ಇವೇ ಮೂರು ಭಾಗಗಳಾಗಿವೆ. ಈ ಬಾಲಚುಕ್ಕಿಗಳು ಸೂರ್ಯನ ಸುತ್ತು ತಿರುಗುವ ಗ್ರಹ ಉಪಗ್ರಹಗಳಂತೆ ಇರುವದಿಲ್ಲ. ಬಾಲಚುಕ್ಕಿಗಳು ಸ್ವಯಂ ಪ್ರಕಾಶವನ್ನು ಕೊಡುವಂಥವುಗಳಾಗಿ ಇರುವವು. ಪರಂತು ಗ್ರಹಗಳು ಸೂರ್ಯನಿಂದ ಪ್ರಕಾಶವನ್ನು ಪಡೆಯುತ್ತವೆ. ಪ್ರಕಾಶದ ಮಟ್ಟಿಗೆ ಬಾಲಚುಕ್ಕಿಗಳು ನಕ್ಷತ್ರಗಳನ್ನು ಹೋಲುತ್ತವೆ. ಆದರೆ ರಚನಾ ಕ್ರಮದಲ್ಲಿ ಅವುಗಳಿಗೂ ನಕ್ಷತ್ರಗಳಿಗೂ ಬಹಳ ಭೇದವುಂಟು. ನಕ್ಷತ್ರಗಳ ಅಣುಗಳು ಅತ್ಯಂತ ನಿಬಿಡವಾಗಿ ಒಂದನ್ನೊಂದು ಅಂಟಿಕೊಂಡಿರುವದರಿಂದ ಅವುಗಳ ಘನತ್ವವು ಬಹಳ ವಿದ್ದರೂ, ಇರಲಿಕ್ಕೆ ಅವುಗಳಿಗೆ ಸ್ವಲ್ಪವೇ ಸ್ಥಳವು ಸಾಕು. ಆದರೆ ಬಾಲಚುಕ್ಕಿಗಳ ಅಣುಗಳು ದೂರದೂರವಾಗಿ ಹರಡಿರುವದರಿಂದ ಸಣ್ಣ ಪರಿಮಾಣದ ಬಾಲಚುಕ್ಕಿಗೂ ಇರಲಿಕ್ಕೆ ಅತ್ಯಂತ ವಿಶಾಲವಾದ ಸ್ಥಳಾವಕಾಶವು ಬೇಕಾಗಿದೆ.

ಅವುಗಳ ಸಾಂದ್ರತೆ

೧೮೧೧ನೆ ಇಸವಿಯಲ್ಲಿ ನೋಡಿದ ಒಂದು ಬಾಲಚುಕ್ಕಿಯ ತಲೆಯು ೧,೨೦೦,೦೦೦ ಮೈಲು ಅಗಲವಾಗಿದ್ದಿತು. ಮತ್ತೆ ೧೮೪೩ರಲ್ಲಿ ನೋಡಿದ ಒಂದು ಬಾಲಚುಕ್ಕಿಯ ಬಾಲವು ೨೦೦,೦೦೦,೦೦೦ ಮೈಲುಗಳಷ್ಟು ಉದ್ದವಾಗಿದ್ದಿತೆಂದು ವಿಜ್ಞಾನಿಗಳು ಹೇಳುತ್ತಾರೆ. ಹೀಗಿರುವದರಿಂದಲೇ ಈ ಬಾಲಚುಕ್ಕಿಗಳ ಸಾಂದ್ರತೆಯು ಬಹಳ ಕಡಿಮೆ ಇರುತ್ತದೆಂದು ನಾವು ಊಹಿಸಿಕೊಳ್ಳಬಹುದು. ನಿಜಕ್ಕೂ ಅವುಗಳ ಸಾಂದ್ರತೆಯು ನಮ್ಮ ಸುತ್ತಮುತ್ತಲಿನ ಗಾಳಿಯ ೬೦೦೦ದಲ್ಲಿ ಒಂದು ಪಾಲೂ ಇರುವದಿಲ್ಲ. ಆದುದರಿಂದ ಬಾಲಚುಕ್ಕಿಗಳು ನಮ್ಮ ಕಲ್ಪನೆಗೆ ಬಾರದಷ್ಟು ಹಗುರವಾಗಿ ಇರುತ್ತವೆ.

ಗ್ರಹಗಳ ಮೇಲೆ ಪ್ರಭಾವ

ಆದುಹರಿಂದ ಈ ಬಾಲಚುಕ್ಕಿಗಳು ಆಕಾಶ ಮಾರ್ಗದಲ್ಲಿ ಸಂಚರಿಸುತ್ತಿರುವಾಗ, ಮಾರ್ಗದಲ್ಲಿ ಅಡ್ಡವಾದ ಗ್ರಹಗಳ ಮೇಲೆ ಅವು ಯಾವ ಪ್ರಭಾವವನ್ನೂ ಉಂಟುಮಾಡುವದಿಲ್ಲ. ಅವುಗಳ ಪರಸ್ಪರ ಢಿಕ್ಕಿಯಾಗುವದಿಲ್ಲ. ೧೮೮೬ರಲ್ಲಿ ಒಂದು ಬಾಲಚುಕ್ಕಿಯು ಬೃಹಸ್ಪತಿಯನ್ನು ಎಡತಾಕಿತ್ತು. ಈ ಢಿಕ್ಕಿಯಿಂದ ಬೃಹಸ್ಪತಿಗಾಗಲೀ ಅದರ ಸುತ್ತು ತಿರುಗುವ ಚಂದ್ರರಿಗಾಗಲೀ ಯಾವ ಅನಿಷ್ಟವೂ ಉಂಟಾಗಲಿಲ್ಲ. ಆದರೆ ಬದಲಿಗೆ ಈ ಬಾಲಚುಕ್ಕಿಯೇ ತನ್ನ ಹಿಂದಿನ ದಾರಿಯನ್ನು ಬಿಟ್ಟು ಸ್ವಲ್ಪ ಬೇರೆದಾರಿ ಹಿಡಿಯಬೇಕಾಯಿತು.

ಹೇಲೆಯ ಆವಿಷ್ಕಾರ

ಕೆಲವು ಬಾಲಚುಕ್ಕಿಗಳು ಕ್ರಮಪ್ರಕಾರ ಆಕಾಶ ಮಂಡಲದಲ್ಲಿ ಕಾಣಿಸಿಕೊಳ್ಳುತ್ತವೆಂದು ಎಲ್ಲರಿಗಿಂತ ಮೊದಲು ಹೇಲೀ ಎಂಬ ಬ್ರಿಟಿಷ ಖಗೋಳ ಶಾಸ್ತ್ರಜ್ಞನು ೧೭೦೫ರಲ್ಲಿ ಸಂಶೋಧನೆಮಾಡಿ ಹೇಳಿದನು. ಅವನು ಹೇಳಿದಂತೆ ಮುಂದಿನ ೭೫ ವರ್ಷಗಳಲ್ಲಿ ಪುನಃ ಕಾಣಿಸಿಕೊಂಡ ಬಾಲಚುಕ್ಕಿಯನ್ನು ಅವನ ಹೆಸರಿನಿಂದ ಕರೆಯುತ್ತಾರೆ. ಹೇಲೀ ಎಂಬ ಈ ಬಾಲಚುಕ್ಕಿಯು ಈಗಲೂ ಸುಮಾರು ೭೫ ವರ್ಷಗಳಿಗೊಮ್ಮೆ ಆಕಾಶದಲ್ಲಿ ಕಾಣಿಸಿಕೊಳ್ಳುತ್ತದೆ. ೧೭೫೮ರಲ್ಲಿ ಹೇಲೀ ವಿಜ್ಞಾನಿಗೆ ಕಾಣಿಸಿದ ಈ ಬಾಲಚುಕ್ಕಿಯು ಮತ್ತೆ ೧೮೩೫ರಲ್ಲಿಯೂ ೧೯೧೦ರಲ್ಲಿಯೂ ಕ್ರಮವಾಗಿ ಕಾಣಿಸಿದೆ. ಆದ್ದರಿಂದ ಅದು ಇನ್ನು ಪುನಃ ೧೯೮೫ರ ಸುಮಾರಿಗೆ ಕಾಣಿಸಿಕೊಳ್ಳುವದೆಂದು ಹೇಳಬಹುದು. ಚೀನಿಯರು ಮತ್ತು ಜಪಾನಿಗಳು ಬರೆದಿಟ್ಟದನ್ನು ಪ್ರಮಾಣ ಗ್ರಂಥಗಳೆಂದು ನಂಬಬಹುದಾದರೆ, ಕಳೆದ ೨೦೦೦ ವರ್ಷಗಳಿಂದ ಈ ಹೇಲೀ ಬಾಲಚುಕ್ಕಿಯು ೭೫ ವರ್ಷಗಳಿಗೊಮ್ಮೆ ಆಕಾಶದಲ್ಲಿ ತನ್ನನ್ನು ತೋರಿಸಿಕೊಳ್ಳುತ್ತಾ ಬಂದಿದೆ. ಹೇಲೀ ಬಾಲಚುಕ್ಕಿ ಮಾತ್ರವಲ್ಲದೆ ಇನ್ನೂ ಹಲವು ಬಾಲಚುಕ್ಕಿಗಳು ತಮ್ಮ ಬೇರೆ ಬೇರೆ ಅವಧಿಗಳಲ್ಲಿ ಕ್ರಮಪ್ರಕಾರ ಕಾಣಿಸಿಕೊಳ್ಳುತ್ತಾ ಇರುವವು. ಕಾಣಿಸಿಕೊಳ್ಳುವ ಕಾಲಾವಧಿಯು ಈ ಬೇರೆ ಬೇರೆ ಬಾಲಚುಕ್ಕಿಗಳಿಗೆ ಬೇರೆ ಬೇರೆಯಾಗಿದೆಯಾದರೂ, ಅವುಗಳ ಕ್ರಮ ತಪ್ಪುವದಿಲ್ಲ. ಹೀಗೆ ಕ್ರಮಶಃವಾದ ಬಾಲಚುಕ್ಕಿಗಳು ಗೊತ್ತಾದ ಮಾರ್ಗದಲ್ಲಿ ಸಂಚರಿಸುತ್ತಿರುತ್ತವೆ. ಆದರೆ ಅಕ್ರಮವಾಗಿ ಸಂಚರಿಸುವ ಬೇರೆ ಬಾಲಚುಕ್ಕಿಗಳ ದಾರಿಗಳು ಬೇರೆ ಬೇರೆಯಾಗಿದ್ದು ಅವು ಎಲ್ಲಿಯಾದರೂ ಸಾವಿರ—ಎರಡು ಸಾವಿರ ವರ್ಷಗಳಿಗೊಮ್ಮೆ ಕಾಣುತ್ತವೆ.

ಕೆಲವು ವೈಚಿತ್ರ್ಯ ವಿಶೇಷಗಳು

ಈ ಬಾಲಚುಕ್ಕಿಗಳು ದಿನದಿನಕ್ಕೂ ತಮ್ಮ ರೂಪು ಆಕಾರಗಳನ್ನು ಸ್ವಲ್ಪ ಸ್ವಲ್ಪ ಬದಲಾಯಿಸಿಕೊಳ್ಳುತ್ತವೆ. ಕೆಲವುಗಳು ಆಶ್ಚರ್ಯಕರವಾಗಿಯೂ ಅನಿರೀಕ್ಷಿತವಾಗಿಯೂ ಎಲ್ಲಿಂದಲೋ ಬಂದು ಎಲ್ಲಿಗೋ ಮಾಯವಾಗುತ್ತವೆ. ೧೮೪೬ರಲ್ಲಿ ಒಂದು ಬಾಲಚುಕ್ಕಿಯ ಗತಿಯನ್ನು ನಿರೀಕ್ಷಿಸಿಕೊಂಡಿದ್ದಾಗ, ಅದು ಎರಡಾಗಿ ಒಡೆದು ಹೋಗಿರುವದನ್ನು ವಿಜ್ಞಾನಿಗಳು ಕಂಡು ಆಶ್ಚರ್ಯಭರಿತರಾದರು. ಇದಕ್ಕೂ ಹೆಚ್ಚಿನ ಆಶ್ಚರ್ಯವು ಯಾವುದೆಂದರೆ ಒಂದು ಬಾಲಚುಕ್ಕಿಯ ಎರಡು ತುಂಡುಗಳು ೧೮೫೨ರಲ್ಲಿ ಪುನಃ ಕಾಣಿಸಿಕೊಂಡವು. ಆ ಮೇಲೆ ಅವು ಆಕಾಶದಲ್ಲಿ ತೋರಿ ಬರಬೇಕಾಗಿದ್ದ ಯಾವ ವರ್ಷದಲ್ಲಿಯೂ ತೋರಿಸಿಕೊಂಡಿಲ್ಲ. ಪರಂತು ಆ ವರ್ಷಗಳಲ್ಲಿ ಈ ಜೋಡಿ ಬಾಲಚುಕ್ಕಿಗಳು ಇರಬೇಕಾದ ಸ್ಥಾನದಲ್ಲಿ ಉಲ್ಕಾಪಾತಗಳಾಗುತ್ತಿರುವದನ್ನು ಮಾತ್ರ ವಿಜ್ಞಾನಿಗಳು ಕಂಡಿದ್ದಾರೆ. ಹೀಗೆ ಆ ಬಾಲಚುಕ್ಕಿಗಳು ನಷ್ಟವಾಗಿ ಹೋಗಿರಬಹುದೆಂದು ಅವರು ಊಹಿಸಿರುವರು.

ಆರು ಬಾಲಗಳ ಬಾಲಚುಕ್ಕಿ

೧೮೪೪ರಲ್ಲಿ ತೋರಿದ ಒಂದು ಬಾಲಚುಕ್ಕಿಗೆ ಆರು ಬಾಲಗಳಿದ್ದುವು. ಕೆಲವು ಕೆಲವು ಬಾಲಚುಕ್ಕಿಗಳು ಹಳೆಯ ಬಾಲಗಳನ್ನು ಕಳಕೊಂಡು ಹೊಸಬಾಲಗಳನ್ನು ಹುಟ್ಟಿಸುತ್ತಿರುವುದನ್ನು ವಿಜ್ಞಾನಿಗಳು ನೋಡಿದ್ದಾರೆ. ೧೯೧೦ರಲ್ಲಿ ಕಾಣಿಸಿದ ಹೇಲೀ ಬಾಲಚುಕ್ಕಿಯಲ್ಲಿ ಈ ಒಂದು ವಿಶೇಷವು ತೋರಿತು.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/- to Rs. 5000 run regularly on systematic lines. Unique Banking faciliti to Businessmen and interested Public.

Apply for particulars—

K. R. GURU, *Managing Director.*

THE

Canara Banking Corporation Ltd.,

(INCORPORATED IN BRITISH INDIA)

Estd: **1906**

Head Office: UDIPI, S. Kanara.

Our attractive Rates on Deposits.

FIXED DEPOSITS

3 to 6 months	2½% p. a.
6 to 9 „	3% „
One year	3½% „
Two years	4% „
SHORT TERM Deposits:	2½% p. a.
Current Account:	1% p. a.
Savings Bank:	2½% *

Particulars of other kindsof depositson application.

ಹಿಟ್ಲರನನ್ನು ಎದುರಿಸಲು ಅಹಿಂಸೆಗೆ ಸತ್ವವಿದೆ

(೫ನೆಯ ಪುಟದಿಂದ ಮುಂದುವರಿದುದು)

ಸಮರ ಹೂಡಲು ಮೌಲಾನ ಸಾಹೆಬರಷ್ಟು ಕಟ್ಟುನಿಟ್ಟಿನ ಅನುಯಾಯಿಗಳಿದ್ದರೆ ನನಗೆ ಮುಂದಾಗಲು ಮನಸ್ಸಿದೆ. ಅಂತಹ ಅಹಿಂಸೆಯು ಪರೀಕ್ಷೆಗೆ ಒಳಪಡಬಹುದೇ ಇಲ್ಲವೇ ಎಂಬುದು ಚರ್ಚಿಸತಕ್ಕ ಪ್ರಶ್ನೆ.

ವಾಕ್‌ಸ್ವಾತಂತ್ರ್ಯ ಮತ್ತು ಲೇಖನ ಸ್ವಾತಂತ್ರ್ಯ

'ನಿರಾತಂಕವಾದ ವಾಕ್‌ಸ್ವಾತಂತ್ರ್ಯ ಇಲ್ಲವೆ ಲೇಖನಸ್ವಾತಂತ್ರ್ಯವನ್ನು ನಾನು ಕೇಳುತ್ತೇನೆಂದು ಆರೋಪಣೆ ಹೊರಿಸುವುದು ಸರಿಯಲ್ಲ. ಅಹಿಂಸೆಗೆ ವಿರೋಧವಲ್ಲದಿರುವ ಸ್ವಾತಂತ್ರ್ಯವೇ ಬೇಕಾದುದೆಂದು ನಾನು ಹೇಳಿದುದು. ಕಾಂಗ್ರೆಸ್ ಮಂತ್ರಿಗಳ ಮೇರೆಯುಳ್ಳ ಕಾರ್ಯವು ಕಾನೂನಿಗೆ ವಿರೋಧವಿದ್ದ ಸಂಗತಿ ನನಗೆ ಗೊತ್ತಿಲ್ಲ. ಅದು ಹಾಗೆ ಮಾಡಿದ್ದರೆ ಅದು ನಿಜವಾಗಿಯೂ ಕಾಂಗ್ರೆಸಿನ ತತ್ವಕ್ಕೆ ವಿರೋಧವಾಗಿಯೇ ಇದ್ದಿತು ಮತ್ತು ಅದು ನನಗೊಪ್ಪದು. ಮಾದರಿಯು ಪ್ರಮಾಣವಾಗಲಾರದು. ಹೇಳಿದ ಕಾನೂನಿಗೆ ಒಳಪಟ್ಟ ವಾಕ್‌ಸ್ವಾತಂತ್ರ್ಯಕ್ಕಾಗಿ ನನ್ನ ಕೇಳಿಕೆಯು ಬ್ರಿಟಿಷರಿಂದ ರಾಜಕೀಯ ನಿಯಾಮಿತಿಗಳನ್ನು ಹಿಂತಲೆಂದೆನ್ನುವ ಸೂಚನೆಯು ನಿರ್ದಯೆಯುಳ್ಳ ಸೂಚನೆಯಾಗಿದೆ. ಸತ್ಯಾಗ್ರಹದ ವಿಷಯದಲ್ಲಿ ರಾಜಕೀಯ ನಿಯಾಮಿತಿಗಳನ್ನು ಕೇಳಿದರೇನೂ ತಪ್ಪಾಗಲಾರದು. ಪೂನಾ ನಿರ್ಣಯವು ರದ್ದಾಗಿದೆಯೆಂಬುದು ಎಲ್ಲರೂ ತಿಳಿದಿರುವ ವಿಷಯ. ಆದರೆ ಅದು ನನ್ನ ಮಟ್ಟಿಗೆ ಯುದ್ಧ ಮುಂದರಿಯುವ ತನಕ ರದ್ದು.

ಮಾತಿನ ಸ್ವಾತಂತ್ರ್ಯವು ಕೊಡಲ್ಪಟ್ಟ ಯಥಾಪ್ರಕಾರದ ಸ್ಥಿತಿಯು ನೆಲೆಗೊಳಿಸಲ್ಪಟ್ಟಲ್ಲಿ ಸತ್ಯಾಗ್ರಹವು ನಿಜವಾಗಿಯೂ ಹಿಂತೆಗೆಯಲ್ಪಡುವುದು. ಹಿಂದಿನ ಚಳವಳಿ ಕಾಲದಲ್ಲಿ ಅವು ನಿಧಾನವಾಗಿ ಸಾಗತಕ್ಕವೆಂದು ಹೇಳಲಿಲ್ಲ. ಈಗ ನಾನು ಹಾಗೆ ಮಾಡಿದುದು ಏಕೆಂದರೆ ಯುದ್ಧವು ಮುಂದರಿಯುತ್ತಿರುವಾಗ ಸಂಪೂರ್ಣ ಸ್ವಾತಂತ್ರ್ಯಕ್ಕೆ ಕನಿಷ್ಠವಾದ ರೀತ್ಯಾ ಕಾಂಗ್ರೆಸಿನೊಡನೆ ಸಂಧಾನವು ಸಾಗಲಾರದು. ಏಕೆಂದರೆ ಯುದ್ಧಕ್ಕೆ ಜನ ಧನ ಸಹಾಯ ಮಾಡುವ ಮೂಲಕ ಸೇರಿಯಾದ ಸಹಾಯವೆಸಗುವ ತಪ್ಪು ಅಪರಾಧವನ್ನು ಅದು ಮಾಡಲಾರದೆಂಬುದರಿಂದಲೇ. ಒಂದು ವೇಳೆ ಹಾಗೆ ಮಾಡಿದರೆ ಕಳೆದ ಇಪ್ಪತ್ತು ವರ್ಷಗಳಿಂದ ಕಾಂಗ್ರೆಸು ಅನುಸರಿಸಿದ ಅಹಿಂಸಾತತ್ವವನ್ನು ಬದಲಾಯಿಸಿದಂತಾಗುವುದು. ಯುದ್ಧವು ಮುಂದರಿಯುತ್ತಿರುವಾಗ ಯಾವುದೋ ದು ತೀರ್ಮಾನದಿಂದ ಸ್ವಾತಂತ್ರ್ಯ ಲಭಿಸದು. ಆದ್ದರಿಂದ, ನಾನು ತಿಳಿಯುವ ಮಟ್ಟಿಗೆ, ಅಹಿಂಸೆಯಲ್ಲಿ ಮುಂದೆ ಸಾಗಲು ಸಂಪೂರ್ಣ ಸ್ವಾತಂತ್ರ್ಯದಿಂದ ನಾನು ತೃಪ್ತನಾಗುವೆನು. ಕಾಂಗ್ರೆಸಿನ ಕೇಳಿಕೆಯು ಎಲ್ಲ ಜನರಿಗೂ ಸಂಘಗಳಿಗೂ ಸಂಬಂಧಿಸಿದುದು.

ಕ್ರಮದ ಕಾರ್ಯ ಸಾಧಕತ್ವ

ಸಂಗತಿಗಳು ಹೀಗಿರುವಾಗ "ನನ್ನ ಈಗಿನ ಸಮರವನ್ನು ಮುಂದರಿಸುವುದು ಸರಿಯೆ? ಸ್ವಾತಿಕವೇ?" ಎಂದು ನನ್ನನ್ನು ನೀವು ಕೇಳುತ್ತೀರಿ. ಈ ಪ್ರಶ್ನೆಯನ್ನು ನಿಮ್ಮ ಪ್ರಶ್ನೆ ಸರಿಯಲ್ಲವೆಂದು ಉತ್ತರಿಸುತ್ತೇನೆ. ಆದರೆ ನಿಮ್ಮ ಉತ್ತರವನ್ನು ನಾನು ಅಂಗೀಕರಿಸದಿರಬಹುದು. ಮೊದಲನೆಯದಾಗಿ ಮೇಲೆ ತೋರಿಸಿದಂತೆ ನೀವು ಸಂಗತಿಗಳನ್ನು ಒಪ್ಪಿಕೊಳ್ಳುವುದಿಲ್ಲ. ಎರಡನೆಯದಾಗಿ ನಿಮ್ಮ ಉತ್ತರವನ್ನು ಒಪ್ಪಿಕೊಳ್ಳುವುದೆಂದರೆ ನನ್ನ ಸಂಪೂರ್ಣ ನೋಟವನ್ನು ಒಪ್ಪಿಕೊಂಡಂತೆ. ಅದು ಸುಮಾರು ಅರ್ಧಶತಮಾನದಿಂದ ನಾನು ದೃಢವಾಗಿ ನಂಬಿರುವ ಅಹಿಂಸೆಯ ಕಾರ್ಯಶೀಲತೆಗೆ ವಿರೋಧವಾಗಿದ್ದೀತು. ನಾನು ಹಿಂದೆ ಬೀಳುವೆನೆಂದು ಕಂಡರೂ ನನ್ನನ್ನು ಸಂಪೂರ್ಣವಾಗಿ ತಪ್ಪಾಗಿ ತಿಳಿದುಕೊಳ್ಳುವರೆಂದಿದ್ದರೂ ನಾನು ನನ್ನ ನಂಬಿಕೆಗೆ ಸರಿಯಾಗಿ ನಡೆದುಕೊಂಡು ಜೀವಿಸಬೇಕು ಮತ್ತು ನಾನು ಹಿಂದೂದೇಶ, ಬ್ರಿಟನ್ ಮತ್ತು ಮಾನವ ಕೋಟಿಯ ಸೇವೆಯನ್ನು ಮಾಡುತ್ತೇನೆಂದು ನಂಬಬೇಕು.

"ಜರ್ಮನಿಗೆ ದ್ರೋಹವನ್ನೆಸಗಿ ಬ್ರಿಟಿಷರ ನಾಶವನ್ನು ಬಯಸದಿರುವಂತೆ ಬ್ರಿಟಿಷರ ಸೋಲನ್ನು ಬಯಸಿ ಹಿಂದೂದೇಶಕ್ಕೆ ಒಳ್ಳೆಯದನ್ನು ನಾನು ಎಣಿಸಲಾರೆ. ಹಿಟ್ಲರನು ಬರುವನು, ಕೊಲ್ಲುವನು, ಕ್ರಾಂತಿಕಾರಕನು ಸತ್ತೊಡನೆ ಇಲ್ಲವೆ ನಾಶಪಡಿಸಲ್ಪಟ್ಟಾಗ ಅವನ ಸ್ವಭಾವವು ಹೋಗುವುದೆಂದು ಎಣಿಸುವವರು ದೊಡ್ಡ ತಪ್ಪನ್ನು ಮಾಡುತ್ತಾರೆ. ಅಂತಹ ಸ್ವಭಾವಕ್ಕೆ ಎದುರಾಗಿ ನಾವೇನು ಮಾಡುತ್ತೇವೆ, ಹಿಂಸಾಮಯರಾಗಿಯೇ ಅಹಿಂಸಾಮಯರಾಗಿಯೇ ಎಂಬುದು ಪ್ರಶ್ನೆ. ನಾವು ಹಿಂಸೆಯಿಂದ ಎದುರಿಸಿದರೆ ಅದು ಸ್ವಭಾವವನ್ನು ಪೋಷಿಸಿದಂತೆ. ನಾವು ಅಹಿಂಸಾತ್ಮಕವಾಗಿ ಕಾರ್ಯವೆಸಗಿದರೆ ಅದನ್ನು ನಿರ್ಜೀವಗೊಳಿಸಿದಂತೆ.

ಐಕ್ಯ ಪ್ರಯತ್ನ

ನಾನು ದೇಶದೊಳಗಿನ ಐಕ್ಯಕ್ಕೆ ಗಮನವೀಯಬೇಕೆಂದು ನೀವು ನನ್ನನ್ನು ಕೇಳುತ್ತೀರಿ. ಒಳ್ಳೆಯದು, ಅದಕ್ಕಾಗಿ ನನ್ನ ಆಸೆಯು ಅಹಿಂಸೆಗಾಗಿರುವ ನನ್ನ ಆಸೆಯಷ್ಟೇ ಇರುತ್ತದೆ. ನಿಜವಾಗಿಯೂ ಕುಟುಂಬದ ಹೊರಗೆ ನನ್ನ ಮೊದಲನೆಯ ಅಹಿಂಸಾ ಪರಿಶೋಧನೆಯು ಆ ಐಕ್ಯಸಾಧನೆಗಾಗಿಯೇ ಇತ್ತು. ಮತ್ತು ನನ್ನ ದೊಡ್ಡ ಜಯವಿತ್ತು. ಐಕ್ಯಕ್ಕಾಗಿ ನನ್ನ ಪ್ರಯತ್ನವು ನಿಲ್ಲಿಸಲ್ಪಡಲಿಲ್ಲ; ಈಗಿನ ಚಳವಳಿಯಿಂದಾಗಿ ವೃದ್ಧಿ ಪಡೆದಿದೆ ಎಂದು ನನ್ನನ್ನು ನಂಬಬೇಕಾಗಿ ನಾನು ನಿಮ್ಮನ್ನು ಕೇಳುತ್ತೇನೆ. ಅಹಿಂಸಾತ್ಮಕ ಪ್ರಯತ್ನದಲ್ಲಿರುವ ವಿಶೇಷ ಸೌಂದರ್ಯವೆಂದರೆ ಅದರ ನೆಲೆಯು ಅದರಲ್ಲಿರುವವನ್ನೇ ಆಧಾರಕ್ಕೆ ಗುರಿಪಡಿಸಬಲ್ಲುದು. ಆದರೆ ಅದರ ಲಾಭವು ಎಲ್ಲವನ್ನು ಉತ್ತಮಗೊಳಿಸುವುದು ಖಂಡಿತ."

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸ

ಮಂಗಳೂರು. ಕೊಡಿಯಾಲಬೈಲು.

ಮಧ್ಯಾಹ್ನ 1 P. M. ಗೆ ಬಿಡುವ

ಮಂಗಳೂರು — ಚಿಕ್ಕಮಗಳೂರ

ಸರ್ವಿಸು

ತಾರೀಕು 1-2-1941ರಿಂದ ಪ್ರಾರಂಭವಾಗಿದೆ

ಮಂಗಳೂರಿನಿಂದ 1 P. M. ಗೆ ಹೊರಟರೆ ಅದೇ ದಿನ ಸಾಯಂಕಾಲ
7 P. M. ಗೆ ಚಿಕ್ಕಮಗಳೂರಿಗೆ ತಲಪಬಹುದು

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಅಥವಾ ಸ್ವತಹಾ ಕೇಳಿ ತಿಳಕೊಳ್ಳಬಹುದು.

JOINT MANAGERS,

The Combined Booking Agency, MANGALORE.

The Joint Booking Office KODIALBAIL.

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2—13—0   *Regd. No M 3460*

ಸ್ವದೇಶಾಭಿಮಾನಿ

ಸಂಪುಟ 35]   ತಾರೀಕು 28—2—1941   [ಸಂಚಿಕೆ ೯]

The Bombay Life Assurance Company, Ltd.

(ESTABLISHED 1908)

Death! is not a matter of supposition
is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection

BUSINESS IN FORCE EXCEEDS EIGHT CRORES.

To Insure or to represent write to

KOCHIKAR BROTHERS, LIMITED.

MADRAS BRANCH SECRETARIES

The Bombay Life Building,

Gandhi Nagar, UDIPI.

OR AT ANY OF THEIR OFFICES AT

Puthiyara	Car Street,	Central Station Road
Calicut	Mangalore	Ernakulam
Gautam Nivas, Churni Road,	Post Box No. 337	Visvesvarapuram Circle
Bombay No. 4	Mount Road, Madras	Bangalore City

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಚಾಕುಕೊಳ್ಳುವುದು ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ... ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS

ಇಂದು ಮಿತಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತು ಯೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street. Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಪಾಕಿಸ್ಥಾನದ ಮಿತಿಯೆಲ್ಲಿ?
ಮುಸ್ಲಿಂಸಾಮ್ರಾಜ್ಯಸ್ಥಾಪನೆಯೆ
ಹಾರೂನ್ ಕಮಿಟಿಯ ವರದಿ

ಮುಸ್ಲಿಂ ಲೀಗಿನಿಂದ ರಚಿತವಾದ ಹಾರೂನು ಕಮಿಟಿಯು ಪಾಕಿಸ್ತಾನದಿಂದ ಮುಸಲ್ಮಾನರಿಗೆ ಏನಾಗಬೇಕೆಂಬುದನ್ನು ಸ್ಪಷ್ಟಮಾಡಿ ವರದಿ ಬರೆದಿದೆ. ಈ ವರದಿಯನ್ನು ಪರಿಶೀಲಿಸಿದಾಗ ಮುಸಲ್ಮಾನ ಮುಖಂಡರ ಅಂತರಂಗದ ಉದ್ದೇಶವು ಏನಿದೆ ಎಂಬುದು ಗೊತ್ತಾಗುತ್ತದೆ. ಅವರಿಗೆ ಪಾಕಿಸ್ಥಾನವು ಮಾತ್ರ ಬೇಕಾಗಿರುವುದಿಲ್ಲ. ಅಷ್ಟರಿಂದಲೂ ಅವರು ತೃಪ್ತರಾಗುವುದಿಲ್ಲ. ಹೈದರಾಬಾದಿನ ನಿಜಾಮರನ್ನು ಮುಸಲ್ಮಾನ ಸಮ್ರಾಟರನ್ನಾಗಿ ಮಾಡಿ ಹಿಂದುಸ್ಥಾನದಲ್ಲಿ ಮುಸಲ್ಮಾನ ಸಾಮ್ರಾಜ್ಯ ಸ್ಥಾಪನೆ ಮಾಡಬೇಕೆಂಬುದೇ ಈ ಲೀಗ್ ಮುಖಂಡರ ಉದ್ದೇಶವಾಗಿದೆ.

ಆದ್ದರಿಂದಲೇ ಪಾಕಿಸ್ಥಾನದ ನಕ್ಷೆಯಲ್ಲಿ, ಸುತ್ತಲೂ ಮುಸಲ್ಮಾನ ರಾಷ್ಟ್ರಗಳನ್ನು ಇಟ್ಟುಕೊಂಡು ಅವುಗಳ ನಡುವೆ ಹಿಂದೂಗಳಿಗೆ ಸ್ಥಾನಗಳನ್ನು ಪ್ರತ್ಯೇಕಿಸಿ ಇಟ್ಟಿದ್ದಾರೆ. ಈ ನಕಾಶೆಯಲ್ಲಿ ತೋರಿಸಿದ ಹಾಗೆ ಪಾಕಿಸ್ಥಾನದ ಸ್ಥಾಪನೆಯಾದರೆ ಮತ್ತೆ ಈ ಹಿಂದೂ ಪ್ರಾಂತ್ಯಗಳನ್ನು ಒಂದೊಂದಾಗಿ ನೀರು ಕುಡಿಯುವುದು ಪಾಕಿಸ್ಥಾನದ ಪ್ರಾಂತ್ಯಗಳಿಗೆ ಕಷ್ಟದ ಕೆಲಸವೇನೂ ಅಲ್ಲ. ಹಿಂದುಗಳ ರಕ್ತಬಲ ಮತ್ತು ಹಣಬಲದಿಂದ ತಮ್ಮ ಸ್ವಾರ್ಥವನ್ನು ಸಾಧಿಸಲಿಕ್ಕಾಗಿ ಮಾತ್ರ ಮುಸ್ಲಿಂ ಲೀಗಿಗೆ ಒಂದು ಕೇಂದ್ರ ಸರಕಾರವು ಬೇಕೆನ್ನಿಸಿದೆ. ಆದ್ದರಿಂದಲೇ ಪಾಕಿಸ್ಥಾನವು ಕೇಂದ್ರ ಸರಕಾರಕ್ಕೆ ಜವಾಬುದಾರವಾಗಿರತಕ್ಕದ್ದಲ್ಲ ಎಂದು ಹಾರೂನು ಕಮಿಟಿಯು ಹೇಳಿರುವುದು.

ಸ್ವಾರ್ಥದ ಪರಮಾವಧಿ

ಹಾರೂನು ಕಮಿಟಿಯು ವರದಿಯನ್ನು ಓದಿದರೆ, ಮುಸಲ್ಮಾನ ಮುಖಂಡರ ಸ್ವಾರ್ಥವು ಪರಮಾವಧಿಯನ್ನು ಮುಟ್ಟಿದೆ ಎಂದು ಸ್ಪಷ್ಟವಾಗುವುದರಲ್ಲಿ ಸಂದೇಹವಿಲ್ಲ. ಪಾಕಿಸ್ಥಾನದ ಮುಸ್ಲಿಂ ಪ್ರಾಂತ್ಯಗಳು ಕೇಂದ್ರ ಸರಕಾರಕ್ಕೆ ಜವಾಬುದಾರವಲ್ಲ. ಅವು ಸಂಪೂರ್ಣ ಸ್ವತಂತ್ರವಾಗಿರಬೇಕು ಎಂದು ಈ ಮುಖಂಡರು ಹೇಳುವಾಗ ಮುಸಲ್ಮಾನ ಪ್ರಾಂತ್ಯಗಳಲ್ಲಿ ವಾಸವಾಗಿರಬಹುದಾದ ಹಿಂದೂ ಅಲ್ಪ ಸಂಖ್ಯಾಕರಿಗೆ ಯಾವ ತರದ ಸಂರಕ್ಷಣೆ, ವಿಶೇಷತರದ ಹಕ್ಕು ಅಧಿಕಾರಗಳನ್ನು ಕೊಡುವವರು ಎಂಬ ಕುರಿತು ವರದಿಯು ಒಂದು ಅಕ್ಷರವನ್ನು ಕೂಡಾ ಬರೆದಿರುವುದಿಲ್ಲ! ಶೇಕಡಾ ಎಂಭತ್ತು ಇರುವ ಪಾಕಿಸ್ತಾನದಲ್ಲಿ ಹಿಂದುಗಳು ಸೇಕಡಾ ಇಪ್ಪತ್ತು ಇರುವರಾದರೂ ಈ ಹಿಂದುಗಳ ಪ್ರಸ್ತಾಪವೇ ವರದಿಯಲ್ಲಿಲ್ಲ! ಆದರೆ ಹಿಂದೂ ಪ್ರಾಂತ್ಯಗಳಲ್ಲಿರುವ ಮುಸಲ್ಮಾನ ಅಲ್ಪಸಂಖ್ಯಾಕರಿಗೆ ಪ್ರಪಂಚದ ಯಾವ ಭಾಗದ ಅಲ್ಪಸಂಖ್ಯಾತರಿಗೂ ಇಲ್ಲದ ಸಂರಕ್ಷಣೆಯು ಬೇಕೆಂದು ಇದೇ ಮುಸಲ್ಮಾನ ಮುಖಂಡರು ಆಕಾಶ ಪಾತಾಳ ಒಂದು ಮಾಡಿ ಬೊಬ್ಬಿಡುತ್ತಿದ್ದಾರೆ.

ಹಿಂದುಗಳು ಒಂದು ಜಾತಿಯಲ್ಲ

ಮತ್ತೆ ಹಾರೂನು ಕಮಿಟಿಯು ಪ್ರತಿಪಾದಿಸಿರುವ ಇನ್ನೊಂದು ಮುಖ್ಯ ವಿಷಯವೇನೆಂದರೆ, ಹಿಂದುಗಳು ಒಂದು ಜಾತಿಯಲ್ಲ ಎಂಬುದಾಗಿದೆ! ಹಿಂದುಗಳನು ಅಂತ್ಯಜರು ಮತ್ತು ಇತರರು ಎಂದು ವರದಿಯು ಬರೆದಿದೆ. ಪಾಕಿಸ್ಥಾನದ ಮುಸಲ್ಮಾನ ಪ್ರಾಂತ್ಯಗಳೊಳಗಿನ ಹಿಂದುಗಳ ಸಂಘಟಿತ ಶಕ್ತಿಯನ್ನು ಮುರಿಯಲಿಕ್ಕಾಗಿಯೇ ಮುಸಲ್ಮಾನ ಮುಖಂಡರು ಈ ಭೇದೋಪಾಯವನ್ನು ಹೂಡಿರುತ್ತಾರೆ. ಈ ಕುಹಕತನವು ಮುಸಲ್ಮಾನ ಮುಖಂಡರಲ್ಲಿ ಇರದೆ, ಹಿಂದುಗಳನ್ನು ಅಂತ್ಯಜರು ಮತ್ತು ಇತರರು ಎಂದು ವಿಭಾಗ ... ಆಗ ಇವರಿಗೆ ಹಿಂದೂ ಭಾರತ, ಮುಸಲ್ಮಾನ ಭಾರತವೆಂದು ವಿಂಗಡಿಸಬೇಕೆಂದು ಹೇಳುವ ಅವಶ್ಯಕತೆಯು ಇರುತ್ತಿದ್ದಿಲ್ಲ. ಹೀಗೆಂದು ಸಂಯುಕ್ತ ಪ್ರಾಂತೀಯ ಹಿಂದೂಮಹಾಸಭೆಯ ಅಧ್ಯಕ್ಷ ರಾಜಾ ಮಹೇಶ್ವರ ದಯಾಳ ಸೇಠ್ ಯವರು ಎಚ್ಚರಿಕೆ ಕೊಟ್ಟಿದ್ದಾರೆ.

ಮಕ್ಕಳಿಂದ ಹಿಡಿದು ಮುದುಕರ ವರೆಗೆ

ಇಡೀ ಕುಟುಂಬದವರಿಗೆಲ್ಲಾ ಇದು ಉತ್ತಮ ಪಾನೀಯವಾಗಿದೆ. ಆರೋಗ್ಯ — ಶಕ್ತಿ ಮತ್ತು ಧಾತುಪುಷ್ಟಿಕರವಾಗಿದೆ!

ಓವಲ್ಟಿನನ್ನು ಪ್ರತಿಯೊಬ್ಬನೂ ಪ್ರೀತಿಸುತ್ತಾನೆ. ಅಜ್ಜ ಅಜ್ಜಿಯರು, ತಂದೆತಾಯಂದಿರು ಮಾತ್ರವಲ್ಲದೆ, ಮಕ್ಕಳಿಗೂ ಇದು ಹಿತಕರವಾಗಿದೆ. ಓವಲ್ಟಿನಿನಲ್ಲಿ ಪೂರ್ಣ ಆರೋಗ್ಯದ ವಸ್ತುಗಳಿರುವುದರಿಂದ ಇದು ಬಾಲಕರಿಂದ ಹಿಡಿದು ಮುದುಕರ ವರೆಗೂ ಪಾನಯೋಗ್ಯವಾಗಿಯೂ ಇರುವುದು.

ನಿಮ್ಮ ಕುಟುಂಬದಲ್ಲಿ ಓವಲ್ಟಿನನ್ನು ದಿನನಿತ್ಯ ಉಪಯೋಗಿಸಿ ನೋಡಿ. ಪ್ರತಿಯೊಬ್ಬರೂ ಹೇಗೆ ಸಂಪೂರ್ಣ ಆರೋಗ್ಯದಿಂದಿರುವರೆಂದು ಮತ್ತೆ ವಿಚಾರಿಸಿರಿ. ಅನಾರೋಗ್ಯದೆದುರು ಓವಲ್ಟಿನ್ ರಕ್ಷಾಕವಚವಾಗಿದೆ. ... ರೋಗಗಳನ್ನು ಅದು ತಡೆಯುತ್ತದೆ.

ಓವಲ್ಟಿನ್ನು ಸಂಪೂರ್ಣ ನೈಸರ್ಗಿಕ ಆಹಾರ. ಪಕ್ವವಾದ ಬಾರ್ಲಿಯಿಂದ ಮತ್ತು ಹೊಸ, ದನದ ಹಾಲಿನಿಂದ ಈ ವಿಟಮಿನ್ ಮತ್ತು ಇನ್ನೂ ಅನೇಕ ಇತರ ಆಹಾರ ಸ್ವರ್ಶಗಳಿಂದ ಕೂಡಿದ ಓವಲ್ಟಿನನ್ನು ಮಾಡಲಾಗಿದೆ. ಓವಲ್ಟಿನನ್ನು ಕೊಂಡುಕೊಳ್ಳಿರಿ. ಟಿಕಾರಿಗಳನ್ನು ಕುರಿತು ಜಾಗ್ರತೆಯಿಂದಿರಿ

ಓವಲ್ಟಿನ್ನು ಕುಡಿಯಲು ಹಿತಕರವೂ ಆಗಿದೆ. ಬಿಸಿಯಾಗಿಯೂ, ತಣ್ಣಗಾಗಿಯೂ ಇದನ್ನು ತೆಗೆದುಕೊಳ್ಳಬಹುದು. ಇದನ್ನು ತಯಾರಿಸುವುದೂ ಬಹೂ ಸುಲಭದ ಕೆಲಸವಾಗಿದೆ. ಪ್ರತಿಯೊಂದು ಡಬ್ಬಿಯಲ್ಲಿಯೂ ತಯಾರಿಸುವ ಕ್ರಮವು ಬರೆದಿದೆ

ಓವಲ್ಟಿನ್ ಬಿಸ್ಕಿಟು
ಆರೋಗ್ಯಕರ, ಜೀರ್ಣಕರ ಮತ್ತು ಶಕ್ತಿಕರವಾದುದು. ಬಿಸ್ಕಿಟುಗಳಲ್ಲಿ ಇರುವ ಉತ್ತಮವೆನಿಸಿದೆ. ಅದೇ ಈ ಬಿಸ್ಕಿಟುಗಳಲ್ಲಿ ಓವಲ್ಟಿನ್ ಇರುವುದರಿಂದ ಬಹಳ ಹಿತವನ್ನುಂಟು ಮಾಡುತ್ತದೆ.
4 ಔನ್ಸ ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿಯೂ 1 ರಾತ್ತಲ ಟಿನ್ನುಗಳಲ್ಲಿಯೂ ಮಾರಾಟಮಾಡಲಾಗುತ್ತದೆ.

‘ಓವಲ್‌ಟಿನ್’

OVALTINE

ಎಲ್ಲಾ ವ್ಯಾಪಾರಿಗಳಲ್ಲಿಯೂ ಮಾರಾಟಕ್ಕೆ ಇದು ಸಿಗುತ್ತದೆ.
ಗ್ರೇಹಮ್ಸ್ ಟ್ರೇಡಿಂಗ್ ಕೊ. (ಇಂಡಿಯಾ) ಲಿಮಿಟೆಡ್
ಕೈತ್‌ನೆಸ್ ಹೋಲ್, 310/311 ಲಿಂಗಿಚೆಟ್ಟಿ ಸ್ಟ್ರೀಟ್, ಮದರಾಸು, ಹಾಗೂ ಕಲ್ಕತ್ತಾ, ಬೊಂಬಾಯಿ ಕರಾಚಿ ಮತ್ತು ರಂಗೂನ್
OV/53/40

"ನಿಶ್ಚಿತಾರ್ಥಾನ್ನ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

7-3-1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೭—೩—೧೯೪೧

ಕಾಂಗ್ರೆಸನ್ನು ಮುಳುಗಿಸಲು ಈ ಪ್ರಯತ್ನವೆ?

ಕಾಮ್ರೇಡ್ ಎಂ. ಎನ್. ರಾಯ್‌ಗಳ ಹುಚ್ಚುತನ

ರಾಯ್-ಕಂಬಳಿಗಳು ಮಾತನಾಡಿದರು

ಕಾಮ್ರೇಡ್ ಎಂ. ಎನ್. ರಾಯಿಗಳ ಹಿಂದಿನ ಜೀವನ ಸಾಹಸಮಯವಾಗಿತ್ತು; ಕ್ರಾಂತಿಪೂರ್ಣವಾಗಿತ್ತು; ಮತ್ತೆ ಅವರು ಕಾಂಗ್ರೆಸಿನ ಶಿಸ್ತಿಗೆ ಬಾಗಿ ನಿಂದ ಕಾಲದಲ್ಲಿ ದೇಶಕ್ಕೆ ದೇಶವೇ ತರುಣ ಹೃದಯವು ಅವರ ಕಡೆಗೆ ಒಲಿಯುತ್ತು. ಆದರೆ ಇಂದಿನ ಅವರ ರೀತಿನೀತಿಗಳು ಅವರ ಬಹುಮಂದಿ ಆರಾಧಕರನ್ನೇ ನಿರಾಶೆಗೊಳಿಸಿವೆ; ಕಾಂಗ್ರೆಸನ್ನು ದೂರುವುದು ಅವರ ಇಂದಿನ ಧರ್ಮವಾಗಿದೆ; ಅದರ ಫಲುವಾಗಿ ಅವರು ದೇಶದ್ರೋಹ ಚಿಂತನೆಯಲ್ಲಿರುವ ಪಕ್ಷಗಳ ಸ್ನೇಹ ಸಹಕಾರವನ್ನೂ ಪಡೆಯುತ್ತಾರೆ. ಕಾ। ರಾಯ್ ಹೋದ ಹೋದ ಕಡೆ ಜನತೆ ಅವರ ಕೃತಿಯನ್ನು ನಿಂದಿಸುತ್ತಿದೆ; ಭಾರತದ ರಾಜಕೀಯದಲ್ಲಿ ಈಗ ಅವರು ಅಪಹಾಸ್ಯಕಾರಣ ವ್ಯಕ್ತಿಯಾಗಿದ್ದಾರೆ.

ಅವರು ಪತ್ನೀ ಸಮೇತ ಮದ್ರಾಸಿಗೆ ಬಂದು ಜಸ್ಟಿಸ್ ಪಾರ್ಟಿಯೊಡನೆ ಕೂಡಿಕೊಂಡು ಕಾರ್ಯಕಲಾಪಗಳನ್ನು ನೆರವೇರಿಸಿದ್ದರು. ಬೆಂಗಳೂರಿಗೆ ಬಂದಾಗ ಹುಬ್ಬಳ್ಳಿಯ ಸರ್ ಸಿದ್ದಪ್ಪ ಕಂಬಳಿಯವರಲ್ಲಿ ಬಂದಿದ್ದರು. ಅಂತರಾಳ ಮಂತ್ರಿ ಪದವು ಹೋದಂದಿನಿಂದ ಸರ್ ಕಂಬಳಿಯವರು ರಾಜಕಾರಣದಲ್ಲಿ ಭಾಗವಹಿಸುವುದು ಇದೇ ಮೊದಲನೆಯ ಸಲವಾಗಿದೆಯೆಂದೂ, ಅವರಿಬ್ಬರೊಳಗೆ ಈ ತರದಲ್ಲಿ ಮಾತುಕತೆ ನಡೆಯಿತೆಂದೂ 'ಸಂಯುಕ್ತ ಕರ್ನಾಟಕ'ದ ಸುದ್ದಿಗಾರರು ಬರೆಯುತ್ತಾರೆ:—

ಶ್ರೀಮಾನ್ ಕಂಬಳಿಯವರು ನ್ಯಾಶನಲ್ ಡೆಮೊಕ್ರ್ಯಾಟಿಕ್ ಪಕ್ಷದ ಧ್ಯೇಯ ಮತ್ತು ಕಾರ್ಯದ ದೂರ ರೀತಿಗಳನ್ನು ಕೇಳಿದರು...

ಶ್ರೀ. ರಾಯರು ಅದಕ್ಕೆ ಉತ್ತರ ಕೊಡುತ್ತ, ಕಾಂಗ್ರೆಸ್ಸು ಈಗ ಜನರ ಹಿತದೃಷ್ಟಿಯಿಂದ ಕಾರ್ಯ ಮಾಡುತ್ತಿರದೆ ಬಿಟ್ಟಿ... ಅದರ ಧೋರಣೆಯು ವಿನಾಶಕವಿದೆ. ದೇಶದಲ್ಲಿ ಅದರದೇ ಪ್ರಭಾವವಿರುವುದರಿಂದ ಅದು ಹೇಳಿದ್ದ ಶಿಫಾರಸು ಮಾಡುವ ಕಾಂಗ್ರೆಸ್ಸನ್ನು ನಾನು ದ್ವೇಷಿಸುವುದಿಲ್ಲ. ನಮ್ಮ ಪಕ್ಷದ ಮುಂದಿನ ಮಾರ್ಗವೇ ನನ್ನ ಉದ್ದೇಶವಾಗಿದೆಯೆಂದರು...

ಸರ್ ಕಂಬಳಿ:—ನಿಮ್ಮ ಅಭಿಪ್ರಾಯದಲ್ಲಿ ಕಾಂಗ್ರೆಸ್ಸನ್ನು ವಿರೋಧಿಸದೆ ಪಕ್ಷ ಸಂಘಟಿಸುವುದು ಶಕ್ಯವಿಲ್ಲವೆಂದೆನಿಸುವುದು; ಬಿಟ್ಟುದನ್ನು ವಿರೋಧಿಸದೆ ಹೆಸರತು ಹೋರಾಟಕ್ಕೆ ಪ್ರೋತ್ಸಾಹ ಬರುವುದಿಲ್ಲ.

ಸರ್ ಕಂಬಳಿಯವರ ಮಾತಿಗೆ ರಾಯರು ಸಮ್ಮತಿ ಸೂಚಿಸಿದರು.

ರಾಯ:—ಅಲ್ಲಿ ವ್ಯಕ್ತಿಸ್ವಾತಂತ್ರ್ಯಕ್ಕೆ ಸ್ಥಳವಿಲ್ಲ. ಮಹಾತ್ಮಾ ಗಾಂಧಿಯವರು ಹೇಳಿದ್ದೇ ವೇದವಾಕ್ಯ. ಇದು ನನ್ನ ಮನಸ್ಸಿಗೆ ಬರುವುದಿಲ್ಲ. ಮೊದಲು ಕಾಂಗ್ರೆಸ್ಸಿಗೆ ಬಹಳ ಬೆಂಬಲವಿದ್ದದ್ದರಿಂದ ಜನರಿಗೆ ಏನಾದರೂ ಹಿತವಾಗುವುದೆಂದು ನಾನು ಬಯಸಿ ಅದನ್ನು ಸೇರಿದ್ದೆ. ಆದರೆ ಈಗ ಅದು ಸಾಧ್ಯವಾಗದ್ದರಿಂದ ಬಿಟ್ಟುಬಿಟ್ಟೆ.

ಸರ್ ಕಂಬಳಿ:—ಗಾಂಧಿಯವರೆಂದರೆ ಕಾಂಗ್ರೆಸ್ಸು, ಕಾಂಗ್ರೆಸ್ಸೆಂದರೆ ಗಾಂಧಿಯವರು ಎಂಬುದು ಮೊದಲಿನಿಂದಲೂ ಗೊತ್ತಿತ್ತು. ಕಾರಣ ನೀವು ಮೊದಲು ಕಾಂಗ್ರೆಸ್ಸು ಸೇರಿದ್ದೇಕೆ?

ಉತ್ತರ:—ಪ್ರಜೆಯ ಸೇವೆ ಮಾಡಬೇಕೆಂದು ಸೇರಿದೆನು. ಅಲ್ಲಿ ಸಮಾಜವಾದಿ ಪಕ್ಷದ ಪ್ರಾಬಲ್ಯ ಸಿದ್ಧತೆಯೆಂದು ಉಗ್ರಗಾಮಿ ಕಾಂಗ್ರೆಸ್ಸಿಗರ ಒಳಪಂಗಡ ಸ್ಥಾಪಿಸಿದ್ದೇನೆ. ಅವರು ಈಗ ನಮಗೆ ಬೆಂಬಲ ಕೊಡುತ್ತಿದ್ದಾರೆ.

ಕಾಂಗ್ರೆಸ್ಸಿನಲ್ಲಿ ಒಳಪಂಗಡವಿದ್ದುದು ನನಗೆ ಕಾಣಿಸುವುದಿಲ್ಲ. ಗಾಂಧೀಯವರಿರುವ ವರೆಗೆ ಕಾಂಗ್ರೆಸಿನೊಡನೆ ಹೋರಾಡುವುದು ಬಹಳ ಕಠಿಣ. ಆದುದರಿಂದ ಕೇವಲ ಕಲ್ಪನೆಯಿಂದ ಭ್ರಮೆಗೊಳ್ಳಬಾರದೆಂದು ಸರ್ ಕಂಬಳಿಯವರು ಸಹಜವೆ ಪ್ರಶ್ನಿಸಿದರು. ಆಗ ಶ್ರೀ. ರಾಯರು ಸ್ವಲ್ಪ ಗಡುಸು ದನಿಯಿಂದ ಇದು ಭ್ರಮೆಯಲ್ಲ, ಕಾಂಗ್ರೆಸ್ ಧೋರಣೆಯ ಬಗ್ಗೆ ಅಸಮಾಧಾನಗೊಂಡ ಜನರು ಅನೇಕರು ಇರುವರು. ನನ್ನ ಪ್ರವಾಸದಲ್ಲಿ ಈ ಅನುಭವವು ಕಂಡುಬಂದಿದೆ. ಅವರೆಲ್ಲರೂ ಒಂದೆಡೆ ಸಂಘಟಿತರಾದರೆ ಕಾಂಗ್ರೆಸನ್ನು ಮುಳುಗಿಸಬಹುದು. ನನ್ನ ಹೇಳಿಕೆಯಲ್ಲಿ ಕೇಳುವಂಥವರು ಏನೂ ಅರಿವಿದ್ದರೆ ನೀವೆಲ್ಲರೂ ಇಲ್ಲಿ ಸೇರುತ್ತಿರಲಿಲ್ಲ ಎಂದರು.

ಸರ್ ಕಂಬಳಿ:— ಈ ಪ್ರವಾಸದಲ್ಲಿ ನಿಮಗೆ ಕಂಡುಬಂದ ಅನುಭವವೇನು?

ರಾಯ:—ಕಾಂಗ್ರೆಸ್ಸು ಈಗ ಸತ್ತಿರುವುದೆಂದ...

ಕಂಬಳಿ:—ಕಾಂಗ್ರೆಸ್ಸು ಸತ್ತಿರುವುದಿಲ್ಲ.

ರಾಯ:—ಕಾಂಗ್ರೆಸ್ಸು ನಿಷ್ಕ್ರಿಯಾತ್ಮಕ ಸಂಸ್ಥೆಯಾಗಿದೆ. ಆದುದರಿಂದ ನಮ್ಮ ಪಕ್ಷಕ್ಕೆ ಬೆಂಬಲ ದೊರೆಯುವುದು.

ಪಕ್ಷದ ಸಂಘಟನೆಗೆ ಅವಶ್ಯವಿದ್ದ ಹಣದ ವಿಷಯ ಕೇಳಲಾಗಿ ಅದೊಂದು ತಮಗೆ ಗೊತ್ತಿಲ್ಲೆಂದೂ, ಇನ್ನು ಮೇಲೆ ವಿಚಾರಿಸಬೇಕಾಗಿದೆಯೆಂದೂ ರಾಯರು ಉತ್ತರ ಕೊಟ್ಟರು.

ಅನಂತರ ಸರ್ ಕಂಬಳಿಯವರು ಸದ್ಯದ ಕಾರ್ಯಕ್ರಮ ಕೇಳಲಾಗಿ ಮಂತ್ರಿಮಂಡಲಗಳನ್ನು ರಚಿಸುವುದು ಎಂದು ರಾಯ್ ಹೇಳಿದರು.

ಕಂಬಳಿ:—ಸಾಕಷ್ಟು ಬೆಂಬಲವಿಲ್ಲದೆ ಮಂತ್ರಿಮಂಡಲ ರಚಿಸಬಹುದೇ?

ರಾಯ:—ಬಜೆಟ್ ಅಧಿವೇಶನ ಮುಗಿದ ನಂತರ ರಚಿಸಿದರೆ ಅಸೆಂಬ್ಲಿ ಅಧಿವೇಶನಗಳನ್ನು ಕರೆಯುವ ಕಾರಣವಿಲ್ಲ.

ಕಂಬಳಿ:—ಇದು ಕಠಿಣ. ಕಾಂಗ್ರೆಸಿನ ವಿರೋಧ ಪಕ್ಷಕ್ಕೂ ಇದೆ.

ಕಂಬಳಿಯವರ ಮುಖಭಾವಗಳನ್ನು ನೋಡಿದರೆ ರಾಯರು ಕೊಟ್ಟ ಉತ್ತರಗಳಿಂದ ಅವರಿಗೆ ಸಮಾಧಾನವಾಗಲಿಲ್ಲವೆಂದು ಹೇಳಬಹುದು.

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪನಿ, ಲಿಮಿಟೆಡ್.

ಸ್ಥಾಪನೆ: ೧೮೭೪. ಹೆಡ್ ಆಫೀಸ್: ಮುಂಬಾಯಿ.

ವಿವರಗಳಿಗಾಗಿ ಇವರಿಗೆ ಬರೆಯಿರಿ:—

ಇನ್ಸ್‌ಪೆಕ್ಟರ್,	ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್,	ಓರಿಯಂಟಲ್ ಲೈಫ್ ಆಫೀಸ್,
ಕಾರ್ನಾಡ್ ಸದಾಶಿವರಾವ್ ರೋಡ್,	ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್,
ಮಂಗಳೂರು.	ಬೆಂಗಳೂರು.

ಅಥವಾ

ಸ್ವದೇಶಾಭಿಮಾನಿ

ತಾರೀಕು 7—3—1941

ಬಲ್ಗೇರಿಯಾ ಬಗ್ಗಿತು!

ತ್ರಿರಾಷ್ಟ್ರಗಳ ಒಪ್ಪಂದಕ್ಕೆ ಸಹಿಹಾಕಿ ಬಲ್ಗೇರಿಯವು ಜರ್ಮನಿಯ ಬೆದರಿಕೆಗೆ ಬಗ್ಗಿ ಶರಣಾಯಿತು ಅದರೊಡನೆ, ಜರ್ಮನ್ ಸೈನ್ಯವು ಬಲ್ಗೇರಿಯವನ್ನು ಬಂದು ಸೇರಿದ ಸುದ್ದಿಯೂ ಈಗ್ಗ ಕೇಳಿಬರುತ್ತಿದೆ. ಬಾಲ್ಕನಿನ ಪರಿಸ್ಥಿತಿಯು ಇದರಿಂದ ವಿಷಮತೆಗೆ ಬಂದಿದೆ; ಅಲ್ಲಿ ಯುದ್ಧರಂಗವು ಬೇಗನೇ ಪ್ರಚಂಡರೂಪದಲ್ಲಿ ಆರಂಭವಾಗುವುದೇ ಎಂಬ ಬಲವಾದ ಊಹನೆಯೂ ಲೋಕ ಸರ್ವತ್ರ ಉಂಟಾಗಿದೆ.

ನಾಜಿಗಳ ಈ ಹೊಸ ಕಾರ್ಯಕ್ರಮವು ಅಷ್ಟೇನೂ ಆಕಸ್ಮಿಕವೆನುವಂತಿಲ್ಲ. ಬಹುಕಾಲದಿಂದ, ಹಿಟ್ಲರನು ಬಾಲ್ಕನಿನ ಮೇಲೆ ಕಣ್ಣಿಟ್ಟು ಕಾಯುತ್ತಿದ್ದನು. ಗ್ರೀಕರ ಜಯದ ಮೇಲಂತೂ ಹಿಟ್ಲರನು ಸ್ವಲ್ಪ ಅಶಾಂತನಾಗಿದ್ದನೆಂದರೂ ಸರಿಯಾದೀತು ಹಿಂದೆ ತನ್ನ ಪ್ರಚಾರ ವಿಶೇಷಗಳಿಂದ ಯಾವ ಬಲ್ಗೇರಿಯವನ್ನು ಹತ್ತಿರಮಾಡಿಕೊಳ್ಳಲು ಹಿಟ್ಲರನು ಅಸಮರ್ಥನಾದನೋ ಆ ದೇಶವನ್ನು ಇಂದು ಬಲವಂತದಿಂದ—ಕೈಮ್ಯಲ್ಲಿ ಕೋವಿ ಹಿಡಿದು ಹೇಳುವ ರಾಜಿಯ ಮಾತಿನಿಂದ—ಬಗ್ಗಿಸಿ ಶರಣುಗೊಳಿಸಿದ್ದಾನೆ.

ಇದರ ಪಲಿತಾಂಶವು ಬಹಳ ರೀತಿಗಳಿಂದ ಯೋಜಿಸಿದರೂ ವಿಶೇಷವಿದೆ ಯುರೋಪಿನ ರಾಜಕಾರಣವನ್ನು ತಲೆಕೆಳಗು ಮಾಡುವ ಹಲವು ಸಂಭವಗಳಿಂದ ಕೂಡಿದೆ ತಟಸ್ಥವಾಗಿರುವ ಯುಗೋಸ್ಲೇವಿಯದ ಮೇಲೆಯೂ ನಾಜಿ ಆಕ್ರಮಣವು ಬೇಗನೇ ಆಗಬಹುದಾದ ಸುದ್ದಿ ಇಷ್ಟರಲ್ಲಿಯೇ ಕೇಳಿಬರುತ್ತದೆ ಹತ್ತಿರದ ಸಣ್ಣ ಪುಟ್ಟ ರಾಷ್ಟ್ರಗಳು ಸ್ವತಂತ್ರದಿಂದ ಮುಂದೆ ಬಾಳುವಂತೆ ತೋರುವುದಿಲ್ಲ ಬ್ರಿಟಿಷರು ಸುಮ್ಮಗೆ ಇರಲಾರರು ಖಂಡಿತ. ಆದರೆ ಗ್ರೀಸಿನಲ್ಲಿ ಬ್ರಿಟಿಷರು ಎಷ್ಟು ಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಸಹಾಯವಿತ್ತರೋ, ಯುಗೋಸ್ಲೇವಿಯದಲ್ಲಿ ಅವರ ಕೈಯು ಅಷ್ಟು ನಡೆದೀತೇ ಎಂಬುದು ಮಾತ್ರ ನೋಡತಕ್ಕದ್ದಿದೆ.

ಮತ್ತೊಂದು ಮುಖ್ಯ ವಿಷಯವೆಂದರೆ ಹಿಟ್ಲರನು ಗ್ರೀಸಿನ ಮೇಲೆ ಧಾಳಿಮಾಡಬಹುದೆಂಬುದು. ಅದು ಬಹುಬೇಗನೇ ಆಗುವುದೋ ಅಥವಾ ಸಮಯ ಹೋಗಬಹುದೋ ಎಂದು ಖಂಡಿತ ಹೇಳಬರುವುದಿಲ್ಲವಾದರೂ, ಗ್ರೀಸು ಹಿಟ್ಲರನ ಹೊಡೆತಕ್ಕೆ ಸಿಕ್ಕಿಬೀಳುವ ಸಂಭವವುಂಟು. ಯುದ್ಧ ಮಾಡದೇನೇ ಹಿಟ್ಲರನು ಸ್ವಾಧೀನ ಮಾಡಲು ಮರ್ಥನೇ ಎಂಬುದೂ ವಿಚಾರಣೀಯವಾಗಿದೆ. ಹಿಟ್ಲರನು ರಣರಂಗಕ್ಕಿಳಿದು ಕಾದಾಡಿದರೆ ಒಬ್ಬ ಸರ್ವಾಧಿಕಾರಿಯೊಡನೆ, ಮುಸಲಿನಿಯೊಡನೆ, ನಾಲ್ಕು ತಿಂಗಳ ನಿರಂತರ ಮಾಡಿದ ಹೋರಾಟದ ಸಾಮರ್ಥ್ಯವು, ಗ್ರೀಕರನ್ನು, ಹಿಟ್ಲರನನ್ನೂ ಎದುರಿಸಲು ಉತ್ಸಾಹಪಡಿಸಿದರೆ ಅದರ ಫಲಿತಾಂಶವು ಹಿಂದಿನ ಯುದ್ಧದಂತೆಯೇ ಒದಗಬಹುದೇನೂ ಖಂಡಿತ ಹೇಳಬರುವುದಿಲ್ಲ

ಇಷ್ಟು ಪರಿಸ್ಥಿತಿಗಳು ಬಂದೊದಗಿದಾಗ, ಬ್ರಿಟನಾಧರೂ ನಾಜಿಗಳ ಈ ಮುಂದೊತ್ತುವಿಕೆಯನ್ನು ಮೌನದಿಂದ ನೋಡಿ ಸುಮ್ಮಗಿರುವುದು ಸಾಧ್ಯವುಂಟೆ? ಹಾಗೆಂದರೆ ಬಾಲ್ಕನು ಯೂರೋಪಿನ ಯುದ್ಧದ ಕುರುಕ್ಷೇತ್ರವಾಗಿ ಪರಿಣಮಿಸುವ ಸಂಭವವು ಬಹು ಪಾಲಿಗೆ ಇದೆ ಈ ವಿಷಮ ಕಾಳಗದಲ್ಲಿ ಜರ್ಮನಿಗೆ ವಿಜಯದಾಶೆಯೂ ಕಠಿಣವಾಗಬಹುದಾಗಿದೆ ಗ್ರೀಕರೂ ಜರ್ಮನರನ್ನು ತಡೆಯಲು ನಿಂತರೆ, ಬ್ರಿಟನೂ ಮಹಾಕಾಳಗಕ್ಕೆ—ಇಳಿಯದೆ ಸಾಧ್ಯವಿಲ್ಲದಿರಲು—ಇಳಿದರೆ, ಮಹಾಯುದ್ಧವನ್ನು ಬಾಲ್ಕನು ನೋಡಬೇಕಾಗಿದೆ

ಬಾಲ್ಕನಿನ ಈ ಹೋರಾಟದಲ್ಲಿ ಟರ್ಕಿಯ ಬಾಗವು ಪ್ರಾಮುಖ್ಯವಿರುವುದು ಇಂದಿನ ತನಕ ಟರ್ಕಿಯ ಸ್ಥಾನಮಾನಕ್ಕೆ ಯಾವ ಆತಂಕವೂ ಬಂದಿಲ್ಲ. ಆದರೂ ಟರ್ಕಿಯ ಮೇಲೆ ಬಹಳ ಹೊಡಗಾಂಕೆಗಳು ಬಿದ್ದಿವೆ, ಸುತ್ತಲಿನಿಂದಲೂ ಪ್ರಬಲ ಶಕ್ತಿಗಳ ಸೆಳೆತವೂ ಉಂಟಾಗಿದೆ. ಇದುವರೆಗೆ ಅದು ತಟಸ್ಥವೇ ಇದ್ದು, ಯೂರೋಪಿನ ರಾಷ್ಟ್ರಗಳ ಯುದ್ಧದಲ್ಲಿ ಪ್ರಾಮುಖ್ಯಸ್ಥಳದಲ್ಲಿ ನೆಲೆಸಿದ್ದರೂ ಯಾವುದೇ ರಾಷ್ಟ್ರಕ್ಕೆ ವಿರೋಧವಿಲ್ಲದೆ ಮುಂದೆಯೂ ತನ್ನ ತಾಟಸ್ಥ್ಯಕ್ಕೆ ಭಂಗಬರದಂತೆ ನಡೆದುಕೊಂಡು ಬರಬೇಕೆಂದೇನೋ ಇಚ್ಛೆಪಡುತ್ತದೆ. ಆದರೆ ಬಲ್ಗೇರಿಯವನ್ನು ಈಗ ಆಕ್ರಮಿಸಿ, ಗ್ರೀಸನ್ನು ಮುತ್ತುವ ಹಿಟ್ಲರನ ಮಹತ್ವಾಕಾಂಕ್ಷೆಯಿಂದ ಟರ್ಕಿಯ ತಾಟಸ್ಥ್ಯಕ್ಕೆ ಭಂಗ ಬರುವ ಲಕ್ಷಣವುಂಟು. ಬ್ರಿಟನಂತೂ ತನ್ನ ಹಿಂದಿನ ಸಂಬಂಧದಂತೆ, ಯುದ್ಧವು ಬೆಳೆದಲ್ಲಿ ಜತೆಗೂಡಿ ಕಾಳಗ ಹೂಡಲು ಟರ್ಕಿಯೊಡನೆ ಸಮಾಧಾನದ ಮಾತುಕತೆ ಮಾಡುತ್ತಿರಬಹುದು, ಆದರೆ ಅತ್ತಕಡೆಯಿಂದ ರಷ್ಯವು ಪ್ರಭಾವಶಾಲಿಯಾಗಿ ಟರ್ಕಿಯನ್ನು ತಾಟಸ್ಥ್ಯ ಮುರಿಯದಂತೆ ಎಚ್ಚರಿಸುವ ಸಂಭವವೂ ಇದೆ, ಏಕೆಂದರೆ ಟರ್ಕಿಯು ತಾಟಸ್ಥ್ಯ ಭಂಗದಿಂದ ರಕ್ಷೆಕ್ಕೆ ಅಪಾಯ ಸೂಚನೆಯುಂಟು. ಹೇಳಿದ್ದರೂ ಮುಂದಿನ ಕಾಳಗದಲ್ಲಿ ತನ್ನ ಅವಸ್ಥೆಯನ್ನು ನಿರ್ಧರಿಸಿಕೊಳ್ಳುವ ಕಾಲವು ಟರ್ಕಿಗೂ ಹತ್ತಿರ ಹತ್ತಿರ ಬರುತ್ತಿದೆ.

ಬಲ್ಗೇರಿಯದ ಪತನವು, ಬಾಲ್ಕನಿನ ಪರಿಸ್ಥಿತಿಯನ್ನು, ಹೀಗೆ ಯೂರೋಪಿನ ರಾಜಕಾರಣದಲ್ಲಿ ಬಹಳ ಮಹತ್ವವಾದ ಸಂಭವಗಳಿಂದ ಕೂಡಿರುತ್ತದೆ.

ಬೆರಗುಗೊಳಿಸುವ 'ಬಜೆಟ್'

ಕೇಂದ್ರ ಶಾಸನ ಸಭೆಯಲ್ಲಿ, ಆರ್ಥಿಕ ಸಚಿವರಾದ ಸರ್ ರೈಸ್‌ಮೇನರು ಮಂಡಿಸಿದ ಭಾರತದ ಆದಾಯ ವೆಚ್ಚದ ಅಂದಾಜು ಪತ್ರಿಕೆ (ಬಜೆಟ್) ಕುರಿತು ಕೌನ್ಸಿಲ್ ಒಫ್ ಸ್ಟೇಟಿನ ಸದಸ್ಯರಾದ ಹುಸೇನ್ ಇಮಾಮರು ಅದು ಭಾರತೀಯರನ್ನು ಬೆರಗುಗೊಳಿಸುವುದು ಎಂದರು. ಯುದ್ಧದ ಕಾರಣದಿಂದ ಭಾರತೀಯರ ಮೇಲೆ ಇನ್ನೂ ಹೆಚ್ಚಿನ ತೆರಿಗೆಯ ಭಾರವನ್ನು ಹೊರಿಸುವುದು ನ್ಯಾಯವಾಗಿಲ್ಲವೆಂದು ಅವರು ನಿರ್ದಾಕ್ಷಿಣ್ಯವಾಗಿ ಟೀಕಿಸಿರುವರು. ಇವರಂತೆ ಇನ್ನೂ ಹಲವು ಮುಖಂಡರು, ಮತ್ತು ದೇಶದ ಪ್ರಮುಖ ಪತ್ರಿಕೆಗಳು ಈ ಬಜೆಟಿನ ರೀತಿ ನೀತಿಗಳನ್ನು ಕಡುತರವಾಗಿ ಟೀಕಿಸಿರುತ್ತವೆ. ೧೯೪೧–೪೨ರ ವರ್ಷದಲ್ಲಿ ೨೦ ಕೋಟಿ ರೂಪಾಯಿಗಳ ಕೊರತೆಯಿರುವುದೆಂದೂ, ಅದರಲ್ಲಿ ಮೂರನೆಯ ಒಂದಂಶದಷ್ಟು ಹೊಸತಾಗಿ ತೆರಿಗೆ ಏರಿಸುವುದರಿಂದಲೇ ತುಂಬತಕ್ಕದ್ದಿದೆಯೆಂದೂ ಸರ್ ರೈಸ್‌ಮೇನರು ಅಂದಾಜು ಪತ್ರಿಕೆಯನ್ನು ಮಂಡಿಸುತ್ತಾ ವಿಶದೀಕರಿಸಿದ್ದಾರೆ

ಯಾವುದೇ ತರದಲ್ಲಾಗಲಿ ಯಾವುದೇ ಸರಕಾರವಾಗಲಿ ಹೆಚ್ಚಿನ ತೆರಿಗೆಯನ್ನು ಹೊರಿಸಬೇಕಾದರೆ, ಹಾಗೆ ತೆರಿಗೆ ಹೇರುವುದರಲ್ಲಿ ನ್ಯಾಯನೀತಿಗಳನ್ನು ಖಂಡಿತವಾಗಿ ತಪ್ಪಬಾರದು ಹೆಚ್ಚಿನ ಲಾಭ ಮತ್ತು ಉತ್ಪನ್ನಗಳ ಮೇಲೆ ತೆರಿಗೆ ಮಾಡುವ ವಿಷಯದಲ್ಲಿ ಒಂದು ಸಮಾಧಾನವಿದೆ, ಏನೆಂದರೆ, ಹಾಗೆ ಹಾಕಿದ ತೆರಿಗೆಯು, ತೆರಿಗೆ ತೆರಲು ಯೋಗ್ಯರಾದವರಿಂದ ಎಂದರೆ ಉತ್ಪತ್ತಿ ಲಾಭಗಳಿರುವವರಿಂದ ಮಾತ್ರ ವಸೂಲಾಗುತ್ತದೆ. ಮೋಟರು ಟಯರುಗಳ ಮೇಲೆ ಹಾಕಿದ ತೆರಿಗೆಯ ವಿಷಯದಲ್ಲಿಯೂ ಅದೇ ನ್ಯಾಯವನ್ನು ಹೇಳಲು ಬರುವುದಿದ್ದರೂ, ಇದರಿಂದ ಸಹಜವಾಗಿ ಜನರಿಗೆ ಪ್ರವಾಸ ಸೌಕರ್ಯವು ಅಪ್ರತ್ಯಕ್ಷವಾಗಿಯಾದರೂ ಕಷ್ಟಕರವಾಗುವುದು. ಮತ್ತೆ ಬೆಂಕಿಪೆಟ್ಟಿಗೆಯ ಮೇಲೆ ಹೊರಿಸಿದ ತೆರಿಗೆಯ ವಿಷಯದಲ್ಲಿ ಏನೂ ನ್ಯಾಯ ಕಾಣುವುದಿಲ್ಲ. ಈಗಾಗಲೇ ಬೆಂಕಿಪೆಟ್ಟಿಗೆಯ ಕ್ರಯವು ಇಮ್ಮಡಿಗೊಂಡು ಸಕಲರೂ ಅದರಿಂದ ತೊಂದರೆಗೀಡಾಗಿರುತ್ತಾರೆ ರೇಶ್ಮೆಯ ವಿಷಯದಲ್ಲಿ ಹಾಕಿದ ತೆರಿಗೆಯಾದರೂ ಒಂದು ವಿಧದಲ್ಲಿ ಅಸಮಂಜಸವೆನ್ನಲು ಬರುವುದಿಲ್ಲ. ಏಕೆಂದರೆ ರೇಶ್ಮೆಯ ಉಪಯೋಗವೆಂದರೆ ಸುಖಲಾಲಸೆಗಾಗಿ, ಆಡಂಬರಕ್ಕಾಗಿ. ಆದಕಾರಣ ಆಡಂಬರ ಮಾಡುವವರಿಗೆ ತೆರಿಗೆ ಬೀಳುವುದು ನ್ಯಾಯವೇ ಆಗಿದೆಯೆಂದೇನೋ ಹೇಳಬಹುದು.

ಆದರೆ, ಭಾರತದಂತಹ ದೇಶದಲ್ಲಿ ಈಗಾಗಲೇ ದರಿದ್ರವಾಗಿ ಬಡವಾಗಿರು ದೇಶದಲ್ಲಿ ಹೊಸ ಹೊಸ ತೆರಿಗೆಗಳನ್ನು ದಿನದಿನಕ್ಕೆ ಹೆಚ್ಚಿಸುವುದರಿಂದ, ಇಂದಿ ಯುದ್ಧಕಾಲದಲ್ಲಾದರೂ, ದೇಶದ ಗಾರಿಕೆಗೆ ಪ್ರೋತ್ಸಾಹವಿತ್ತು ಔದ್ಯೋಗಿಕ ಉನ್ನತಿಮಾಡುವ ಕಡೆಗೆ ಸರಕಾರ ವಿಶೇಷ ಗಮನಕೊಡುವುದು ಅವಶ್ಯವಿತ್ತು. ಹಾಗೆ ಗಮನವೀಯದೆ, ಈ ಹೊರಿಸುವ ಈ ಎಲ್ಲಾ ತರದ ತೆರಿಗೆಗಳಿಂದಲೂ ಅಪ್ರತ್ಯಕ್ಷವಾಗಿ, ದೇಶದ ಔದ್ಯೋಗಿಕ ಉನ್ನತಿಗೇ ತಡೆ ಬಿದ್ದಂತಾಗುತ್ತದೆ. ದೇಶದ ಐಶ್ವರ್ಯವಂತರ ಮೇಲಾದರೂ ಬೀಳುವ ಹೆಚ್ಚಿನ ತೆರಿಗೆಯಿಂದ, ಅವರ ಮೂಲಕ ನಡೆಯುವ ಮತ್ತು ಮುಂದಕ್ಕೆ ವಿಶೇಷವಾಗಿ ನಡೆಯಬಹುದಾದ ಹಲವು ತರದ ಔದ್ಯೋಗಿಕ ಸಾಹಸಗಳಿಗೆ ತಡೆಯಾಗುವುದು

ಯುದ್ಧಕಾರ್ಯದಲ್ಲಿ ಬ್ರಿಟನ್ನಿನಂಯೇ ಸಾಮಂತರಾಜ್ಯಗಳಾದರೂ ಕುತ ಹಲವುಳ್ಳವುಗಳಾಗಿರುತ್ತವೆ. ಅಲ್ಲಿಯ ಯುದ್ಧತೆರಿಗೆಗಳನ್ನು ಹೊರಿಸಲಾಗಿ ಆದರೆ, ಇತರ ವಸಾಹತುಗಳಿಂದ ಭಾರತದ ವಿಷಯದಲ್ಲಿ ಹೊರಿಸುವ ತೆರಿಗೆಂ ರೀತಿಯೇ ವಿಪರೀತವಾಗಿದೆ. ಕೆನಡ ಆಸ್ಟ್ರೇಲಿಯಾ, ನ್ಯೂಜಿಲೇಂಡ್‌ಗಳ ಯುದ್ಧತೆರಿಗೆಗಳನ್ನು ಹಾಕಿರುತ್ತವೆ ಆದರೆ ಅವುಗಳ ಪಲಿತಾಂಶವು ನ್ಯಾಯಯುಕ್ತ ದೇಶದ ಅಭಿವೃದ್ಧಿಗೆ ಹಾನಿಕಾರಕವಾಗದೆಯೂ ಇರುವ ತೆರದಲ್ಲಿ ಆಗಿದೆ. ಯುದ್ಧಕಾಲದಲ್ಲಿ ಅಲ್ಲಿನ ರಾಷ್ಟ್ರೀಯ ಔದ್ಯೋಗಿಕ ರಣಸಾಹಸದಲ್ಲಿ ಪ್ರಚಂಡವಾದ ಕಾರ್ಯ ನಡೆದು ದೇಶದ ಉತ್ಪನ್ನ ಬಹಳ ಹೆಚ್ಚಿನದಾಗುವ ಸಂದರ್ಭವೂ ಒದಗಿದೆ. ಇಂತಹ ಸಂದರ್ಭದಲ್ಲಿ ಯುದ್ಧದ ನಿಮಿತ್ತವಾಗಿ ಹೊರಿಸಿದ ಹೆಚ್ಚಿನ ತೆರಿಗೆಯದರೂ ಅದು ದೇಶದ ಸಾಂಪತ್ತಿಕ ಸ್ಥಿತಿ ನ್ಯಾಯವಾಗಿಯೇ ತೋರುವಂತಿತ್ತು ಆದರೆ ಭಾರತದ ಪರಿಸ್ಥಿತಿಯು ಇಂದು ಹೇಗಿದೆ? ಇಲ್ಲಿ ಏನಾದರೂ ಔದ್ಯೋಗಿಕ ಅಭಿವೃದ್ಧಿಯು ಆಗಿದೆಯೇ? -ಆ ಕಡೆ ಸರಕಾರವಾದರೂ ಸ್ವಲ್ಪವಾದರೂ ಗಮನ ಕೊಟ್ಟಿದೆಯೇ? — ಈ ವಿಷಯಗಳನ್ನು ಲಕ್ಷ್ಯಯಿಂದ ಹೊಸ ತೆರಿಗೆಗೆ ರಾಷ್ಟ್ರ ಎಷ್ಟರ ಮಟ್ಟಿಗೆ ತಲೆಬಗ್ಗಿಸಲು ಸಮರ್ಥವಾಗಿದೆಯೆಂದು ನಾವು ಅರ್ಥಮಾಡಿಕೊಳ್ಳಬೇಕಾಗಿದೆ.

೧೯೪೦—೪೧ನೆಯ ವರ್ಷದಲ್ಲಿ ೮೭ ಲಕ್ಷ ರೂಪಾಯಿಗಳಷ್ಟು, ೧೯೪೧–೪೨ರಲ್ಲಿ ೨೦೪೭ ಲಕ್ಷ ರೂಪಾಯಿಗಳಷ್ಟು ಕೊರತೆಯೂ ಆಗುವುದಾಗಿ ಅಂದಾಜು ಪತ್ರಿಕೆಯಲ್ಲಿ ತೋರಿಸಿದ್ದಾರೆ. ಈ ಭಾರವು ಭಾರತೀಯರ ಮೇಲೆ ಬಿದ್ದಿದೆ. ಅದನ್ನು ಹೊರುವ ತ್ರಾಣ ಮಾತ್ರ ನಮಗೆ ಕ್ಷೀಣವಾಗಿದೆ!

ಬ್ರಿಟಿಷರ ಸಂತಾಪವೂ ದೂರವಾಗುತ್ತದೆ!

ಗಾಂಧೀಜಿ ಕಾಂಗ್ರೆಸಿನ ಅಧಿಕಾರ ವಹಿಸಿದಾಗ

ಮಹಾತ್ಮರ ನಂತರದಲ್ಲಿ?

ಸತ್ಯಾಗ್ರಹದ ಕುರಿತು ಬ್ರಿಟಿಷ್ ಲೇಖಕರ ಲೇಖನ

ಆಂಗ್ಲೇಯರು ಗಾಂಧಿಜಿಯವರ ಆತ್ಮಶಕ್ತಿಯ ಪ್ರಭಾವವನ್ನು ಸಾರ್ವಜನಿಕ ಅಭಿಪ್ರಾಯದ ಬಗ್ಗೆ ಅವರಿಗಿರುವ ಪ್ರತ್ಯೇಕ ಧೋರಣೆಯನ್ನು ಅರ್ಥಮಾಡಿಕೊಳ್ಳಬೇಕು. ಗಾಂಧೀಜಿ ಹುಚ್ಚನೆಂದು ಅವರು ತಿಳಿದರೆ ಅದರಿಂದೇನೂ ಪ್ರಯೋಜನವಿಲ್ಲ. ಗಾಂಧಿಜಿ ಯಾವುದನ್ನು ಸತ್ಯವೆಂದು ನಂಬುತ್ತಾರೋ ಅದನ್ನು ಸ್ಪಷ್ಟವಾಗಿ ಹೇಳುತ್ತಾರೆ. ಗಾಂಧಿಜಿ ಬದುಕಿ ಇರುವ ವರೆಗೆ, ಅವರ ಅಹಿಂಸೆಯು ಭಾರತದಲ್ಲಿ ಪ್ರಬಲವಾಗಿರುವ ವರೆಗೆ ಅಲ್ಲಿ ಹಿಂದೂ ಮುಸ್ಲಿಂ ಗೊಂದಲವು ಹುಟ್ಟುವುದೂ ಅಸಾಧ್ಯವೆಂದು ಆಂಗ್ಲೇಯರು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು, ಅವರಂತೆ ಜರ್ಮನಿಯೆದುರು ಬ್ರಿಟನು ಯುದ್ಧ ಮಾಡುವಲ್ಲಿ ಕಾಂಗ್ರೆಸು ಸಹಕರಿಸುವುದೂ ಸಾಧ್ಯವಿಲ್ಲವೆಂದು ತಿಳಕೊಳ್ಳಬೇಕು ಹೀಗೆಂದು ಪ್ರಸಿದ್ಧ ಆಂಗ್ಲೇಯ ಲೇಖಕರಾದ ರೋಬರ್ಟ್ ಸ್ಟಿಮ್ಸನ್ ಇವರು ಲಂಡನಿನ 'ಪಿಕ್ಚರ್ ಪೋಸ್ಟ್' ಎಂಬ ಪತ್ರಿಕೆಯಲ್ಲಿ ಒಂದು ಆಮೂಲ್ಯ ಲೇಖನ ಬರೆಯುತ್ತಾ ಹೇಳುತ್ತಾರೆ.

ಅವರ ಲೇಖನದ ಸಾರವು ಹೀಗಿದೆ

ಭಾರತದಲ್ಲಿ ಹಲವಾರು ಕಾಂಗ್ರೆಸು ಮುಖಂಡರು ಇಂದು ಸೆರೆಮನೆಯ ಕತ್ತಲು ಕೋಣೆಯೊಳಗೆ ಸೇರಿದ್ದಾರೆ. ಇದರ ಎಲ್ಲಾ ಮುಖ್ಯ ಹೊಣೆಗಾರಿಕೆ, ಅಲ್ಲಿನ ಒಬ್ಬ ಮನುಷ್ಯನನ್ನು ಹೊಂದಿಕೊಂಡಿದೆ. ಆತನೇ ಎಪ್ಪತ್ತು ವರ್ಷಗಳ ಮುದುಕ ಗಾಂಧಿ!

ಗಾಂಧಿ ತನ್ನ ಆಶ್ರಮ ಬಿಟ್ಟು ಹೊರಟಾಗ ಅವರಲ್ಲಿರುವ ಅದ್ಭುತವೇ ಒಡೆದಿ. ಜಗತ್ತೇ ಆ ಆಶ್ಚರ್ಯವನ್ನು ನೋಡಿ ಬೆರಗುಪಡಬೇಕು. ಮೊನ್ನೆ ಬೊಂಬಯಿಯಲ್ಲಿ ನೆರೆದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ಗಾಂಧಿ ತೆರಳಿದಾಗಲೂ ಅದೇ ವಿಷಯವು ಪುನರಾವೃತ್ತವಾಯಿತು. ಅಲ್ಲಿ ಅಖಿಲ ಭಾರತದಲ್ಲಿ ಪ್ರಭಾವಶಾಲೀ ಪಕ್ಷವಾದ ಕಾಂಗ್ರೆಸು ಗಾಂಧಿಜಿಯನ್ನು ತಮ್ಮ ಸರ್ವ ಸೇನಾಪತಿಯನ್ನಾಗಿ ಆರಿಸಿತು. ಭಾರತದ ಮೂಲೆಮೂಲೆಗಳಲ್ಲಿ ಇದ್ದ ಜನತೆ ಗಾಂಧಿಜಿ ಹೇಳಿದ ಪ್ರತಿಯೊಂದು ಮಾತನ್ನು ಗಂಭೀರ ಮೌನದಿಂದ ಶಿಸ್ತು ವಿಧೇಯತೆಗಳಿಂದ ಆಲಿಸಿತು.

ಬ್ರಿಟನನ್ನು ಅದರ ಇಂದಿನ ಕಷ್ಟಕಾಲದಲ್ಲಿ ಪೇಚಾಟದಲ್ಲಿ ಹಾಕುವುದು ನಮ್ಮ ಗುರಿಯಲ್ಲ, ಕಾಂಗ್ರೆಸು ಅಹಿಂಸಾ ಮೂಲಕ ಕಾರ್ಯಮಾಡಲು ಪಣತೊಟ್ಟಿರುವ ಕಾರಣ ಇಂದಿನ ಹಿಂಸಾ ಯುದ್ಧದಲ್ಲಿ ಅದು ಪ್ರತ್ಯಕ್ಷ ಸಹಾಯ ಕೊಡಲಾರದು. (ಭಾರತದ ಹನ್ನೊಂದು ಪ್ರಾಂತ್ಯಗಳಲ್ಲಿ, ಎಂಟು ಪ್ರಾಂತ್ಯಗಳ ಆಡಳಿತ ವಹಿಸಿ ಅಧಿಕಾರ ನಡೆಸುತ್ತಿದ್ದ ಕಾಂಗ್ರೆಸು ಮಂತ್ರಿಮಂಡಲಗಳು, ವೈಸರಾಯರು ಭಾರತದ ಜನತೆಯೊಡನೆ ಕೇಳದೆ ದೇಶವು ಜರ್ಮನ್ ವಿರುದ್ಧ ಯುದ್ಧ ಹೂಡಲು ಸಾರಿದ ಕಾರಣ ರಾಜಿ ಕೊಟ್ಟು ಮರಳಿದ್ದವು). ಗಾಂಧಿಜಿ ತನ್ನ ಮಾತನ್ನು ಮುಂದುವರಿಸುತ್ತಾ, ವೈಸರಾಯರು ಹೀಗೆ ಮಾಡಿದ ವಿಷಯದಲ್ಲಿ 'ಯುದ್ಧದಲ್ಲಿ ಜನಧನ ಸಹಾಯ ಕೊಡಲು ಸಾಧ್ಯವಿಲ್ಲವೆಂಬ ವಿಷಯವಾಗಿ, ವಾಕ್ ಸ್ವಾತಂತ್ರ್ಯಕ್ಕಾಗಿ ಹೋರಾಡುವುದೆಂದರು.

ಗಾಂಧಿಜಿ ವಾಕ್ ಸ್ವಾತಂತ್ರ್ಯಕ್ಕಿಂತ ಹೆಚ್ಚಿನ ದನ್ನು ಆಗ ಅಪೇಕ್ಷಿಸಲಿಲ್ಲ. ಏಕೆಂದರೆ ಈ ಸಮಯ ಭಾರತವು ಸ್ವಾತಂತ್ರ್ಯವನ್ನು ಕೇಳುವ ಕಾಲವಾಗಿರಲಿಲ್ಲ. ಆಗವಾ ಬ್ರಿಟಿಷರು ಭಾರತವನ್ನು ಸ್ವತಂತ್ರ ಮಾಡಲೂ ಸಾಧ್ಯವಿರಲಿಲ್ಲ, ಏಕೆಂದರೆ ಬಲಶಾಲಿಗಳಾದ ಭಾರತೀಯರೇ ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳಬೇಕಾಗಿದೆಯೆಂದು ಅವರು ಹೇಳಿದರು. ಬಲಶಾಲಿಗಳೆಂದರೆ ಗಾಂಧಿಜಿ, ಆತ್ಮಬಲಶಾಲಿಗಳೆಂದೇ ತಿಳಿದಿರುವರಲ್ಲದೆ ದೈಹಿಕ ಭೌತಿಕ ಬಲಶಾಲಿಗಳಲ್ಲ.

ಹೀಗೆ ಬೊಂಬಯಿಯಲ್ಲಿ ನೆರೆದ ಈ ಸಭೆಯು ಬ್ರಿಟನು ಮತ್ತು ಭಾರತದ ಸಂಬಂಧಗಳ ವಿಷಯದಲ್ಲಿ ಬಹು ಮಹತ್ವದ ನಿರ್ಣಯವನ್ನೇ ಮಾಡಿತು. ಒಂದೇ ತಿಂಗಳ ಹಿಂದೆ, ಗಾಂಧಿಜಿ ಕಾಂಗ್ರೆಸಿನ ತತ್ವಕ್ಕೆ ಭಿನ್ನರಾಗಿ ದೂರ ನಿಂತಿದ್ದರು, ವಾರ್ಧಾದ ಪರ್ಣಕುಟೀರವನ್ನು ಸೇರಿದ್ದರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಆಗ ದೇಶದ ರಕ್ಷಣೆಗಾಗಿ ಹಿಂಸೆಯು ತಡೆಯಬೇಕಾಗಿದೆಯೆಂಬ ನಿರ್ಣಯವನ್ನು ಮಾಡಿತ್ತು.

ವರ್ಕಿಂಗ್ ಕಮಿಟಿಯು ವಾರ್ಧಾದಲ್ಲಿ ನೆರೆದ ಅದಕ್ಕಿಂತ ಮೊದಲೇ ವೈಸರಾಯ್ ಪ್ರಪೋಸಲನ್ನು ಕಾಂಗ್ರೆಸು ತಿರಸ್ಕರಿಸಿತ್ತು. ರಾಷ್ಟ್ರಕ್ಕೆ ಸಾಮಂತ ಸ್ವರಾಜ್ಯವನ್ನು ಕೊಡುವ ವಿಷಯವು ಬ್ರಿಟನಿನ ಉದ್ದೇಶವೆಂದೂ ಆ ಕುರಿತು ಯುದ್ಧ ಮುಗಿದ ಮೇಲೆ ವಿಚಾರಿಸಲಾಗುವುದೆಂದೂ ಈಗ ಭಾರತೀಯರ ಸಹಾಯ ಬೇಕೆಂದೂ ಈಗಿನ ಇತ್ಯರ್ಥಕ್ಕಾಗಿ ವೈಸರಾಯರ ಮಂತ್ರಿಮಂಡಳದಲ್ಲಿ ಎಲ್ಲಾ ಪಕ್ಷದವರಿಗೂ ಸ್ಥಾನಗಳು ಕೊಡಲಾಗುವುದೆಂದೂ ವೈಸರಾಯರು ಸೂಚಿಸಿದ್ದನ್ನು ಕಾಂಗ್ರೆಸು ತಿರಸ್ಕರಿಸಿ ಬಿಟ್ಟಿತ್ತು.

ಈ ವೈಸರಾಯರ ಸೂಚನೆಯಲ್ಲಿ ಸ್ವಾತಂತ್ರ್ಯದ ಬೇಡಿಕೆಗೆ ಯೋಗ್ಯ ಉತ್ತರವಿರಲಿಲ್ಲವೆಂದು ಅದನ್ನು ಕಾಂಗ್ರೆಸು ತಿರಸ್ಕರಿಸಿತು. ವೈಸರಾಯರ ಹೇಳಿಕೆಯಲ್ಲಿ 'ವಿಭಾಗಿಸಿ ಆಳುವ' ಅಣುಗಳು ಅಡಕವಾಗಿವೆಯೆಂದೂ ಕಾಂಗ್ರೆಸು ಅದರಲ್ಲಿರುವ ಮಾತುಗಳಿಂದ ತಿಳಕೊಂಡಿತು.

ಇಲ್ಲಿ ವಿಚಾರಿಸತಕ್ಕ ಇನ್ನೊಂದು ವಿಷಯವಿದೆ. ಜನಸಂಖ್ಯೆಯ 1/4 ಅಂಶದಷ್ಟು ಇರುವ ಮುಸಲ್ಮಾನರು ಜಿನ್ನರ ಮುಂದಾಳುತನದ ಮುಸ್ಲಿಂ ಲೀಗಿನ ಮೂಲಕ ಪ್ರತಿಸ್ಥಾನವನ್ನು ಕೇಳುತ್ತಿರುವರು. ಆದರೆ ಹಲವರು ಕಾಂಗ್ರೆಸಿನಲ್ಲಿಯೇ ಸೇರಿ, ಜಾತಿ ಮತಭೇದವು ಕಾಂಗ್ರೆಸಿನಲ್ಲಿಲ್ಲವೆಂದು ಮನಗಂಡು ಒಟ್ಟುಗೂಡಿದವರೇ ಇದ್ದಾರೆ. ಉದಾಹರಣೆಯೆಂದರೆ, ಈ ವರ್ಷದ ರಾಷ್ಟ್ರಪತಿಯಾದ ಅಜಾದರೇ, ಇವರು ಅಖಿಲ ಪ್ರಪಂಚದಲ್ಲಿಯೇ ಹೆಸರುವಾಸಿಯಾದ ಮುಸ್ಲಿಮ್ ಮುಖಂಡರುವರು.

ಕಾಂಗ್ರೆಸು ಹಿಂದುಗಳದ್ದೆಂದೂ, ಕಾಂಗ್ರೆಸು ಅಧಿಕಾರಕ್ಕೆ ಬಂದರೆ, ಅಲ್ಪಸಂಖ್ಯಾಕರಾದ ಮುಸ್ಲಿಮರಿಗೆ ಅನ್ಯಾಯವಾಗುವುದೆಂದೂ ಸಂಶಯಗೊಳ್ಳುವವರು ಜಿನ್ನರ ಲೀಗಿನವರು. ಜಿನ್ನರು ಗಾಂಧಿಗೆ ವಿರುದ್ಧವಾಗಿ ಪ್ರಧಾನರಾಗಿದ್ದಾರೆ. ಹೊಸ ಕಾಲದ ಮುಗಲ ಚಕ್ರವರ್ತಿಯಂತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಬೊಂಬಯಿಯ ಸಭೆಯು ಮೊದಲು ದೇಶಸರ್ವತ್ರ ಕಳವಳವಿತ್ತು. ಬೊಂಬಯಿ ಸಭೆಯ ಮೇಲೆ ರಾಜಕೀಯದಲ್ಲಿ ಬೆಳೆದ ಉಷ್ಣವು ಸಮಾನತೆಗೆ ಇಳಿದಂತಾಯಿತು. ಗಾಂಧಿಜಿ ಕಾಂಗ್ರೆಸಿನ ಅಧಿಕಾರ ವಹಿಸಿದರು.

ಈ ವಿಷಯವನ್ನು ಸಲಿಯಿ ಆದ ವೆ ೧೯ ನಾನು ಗಾಂಧಿಜಿಯನ್ನು ಭಾರತದ ಮಹಾ ಐಶ್ವರ್ಯಶಾಲಿ ಶ್ರೀ ರಮೇಶ್ವರ ದಾಸ ಬಿರ್ಲರ ಮನೆಯಲ್ಲಿ ಕಂಡೆನು. 'ಇಪ್ಪತ್ತು ನಿಮಿಷ ನನಗಾಗಿ ನೀವು ವ್ಯಯಿಸಬಹುದು, ಇದು ಬಹಳ ಅನಾನುಕೂಲದ ಕಾಲ' ಎಂದರು ಗಾಂಧಿಜಿ. ನನಗೆ ನಿಜವಾಗಿಯೂ ಅದು ಅನಾನುಕೂಲದ ಕಾಲವೇ ಆಗಿತ್ತು. ಆತನು ಕೋಣೆಯಿಂದ, ರಾಷ್ಟ್ರದ ಮುಂದಿರುವ ಮಹತ್ವದ ಪ್ರಶ್ನೆಗಳನ್ನು ವಿಚಾರಿಸಲು ಮುಖಂಡರು 'ಮಹಾತ್ಮಾಜೀ' ಎಂದು ಕರೆಯುತ್ತಿದ್ದರು. ಅಲ್ಲಿ ಆಗಲೂ ನಾನಾ ತೆರದ ಜನರು ಅವರೊಡನೆ ನಾನಾ ತರದ ಪ್ರಶ್ನೆಗಳನ್ನು ಕೇಳುತ್ತಿದ್ದರು. ಗಾಂಧಿಜಿ ಬಹಳ ವಿವೇಕಪೂರ್ಣವಾದ ಉತ್ತರ ಹೇಳುತ್ತಿದ್ದರು.

ಇಬ್ಬರೂ ಕಾರ್ಯದರ್ಶಿಗಳು ಗಾಂಧಿಜಿಯವರು ಹೇಳಿದ ಮಾತುಗಳನ್ನು ಪ್ರತಿಯೊಂದನ್ನು ಬರಕೊಳ್ಳುತ್ತಿದ್ದರು. ಕಾಲಿಗೆ ಚಪ್ಪಲಿಯೂ ಇಲ್ಲದೆ, ಬಿಳಿ ಸೀರೆಯನ್ನು ಉಟ್ಟುಕೊಂಡು, ಅಲ್ಲಿ ಒಬ್ಬಳು ಶುಭ್ರ ಮುಖದ ಹೆಂಗುಸು ನಿಂತುಕೊಂಡಿದ್ದಳು!

ಗಾಂಧಿಜಿ ಹೇಳಿದರು: ಬ್ರಿಟನು ತಿಳಿಯಬೇಕಾದ್ದು ಕಾಂಗ್ರೆಸು ತನ್ನ ಅಹಿಂಸಾ ತತ್ವದಿಂದಾಗಿ, ಜರ್ಮನಿಯ ವಿರುದ್ಧ ಮಾಡುವ ಈ ಹೋರಾಟದಲ್ಲಿ ಬ್ರಿಟನಿಗೆ ಬೆಂಬಲ ಕೊಡಲಾರದೆಂದು. ಆದರೆ ಕಾಂಗ್ರೆಸು ಕೊನೆಗೆ ಬ್ರಿಟನಿಗೇ ಸಹಾಯ ಕೊಡುವುದು. ಲೋಕದ ಈ ಪಶು ಹಿಂಸ್ರ ಕರ್ಮವನ್ನು ಅಹಿಂಸೆಯಿಂದ ತಡೆಯಲು ಕಾಂಗ್ರೆಸು ಸಮರ್ಥವಾದರೆ, ನರಳುವ ಲೋಕವೇ ಒಮ್ಮೆ ಸುಖದ ಶ್ವಾಸ ಬಿಡಬಹುದು.

ಗಾಂಧಿಜಿಗೆ ಭಾರತದಲ್ಲಿ ಅಂಧಾನುಯಾಯಿಗಳೂ ಕೆಲವರು. ಹಲವು ಆಶ್ರಿತ ರಾಜರು, ತಮ್ಮ ಪ್ರಜೆಗಳಲ್ಲಿಯೂ ಗಾಂಧಿರೋಗ ಬರಬಹುದೆಂದು ಬಹಳ ಎಚ್ಚರದಿಂದ ಇದ್ದಾರೆ. ಕೆಲವರು ಅವರು ಬಚ್ಚ ಕನಸುಗಾರ ಹುಚ್ಚನೆಂದು ತಮಾಷೆ ಮಾಡುತ್ತಾರೆ. ಹಲವರು ಅವರು ಅಹಿಂಸೆಯಿಂದ ಭಾರತವನ್ನು ಹೊಸತಾಗಿ ನಿರ್ಮಿಸಬಲ್ಲ ಸಾಮರ್ಥ್ಯ ಪಡೆದು ಬಂದವರೆಂದು ಗೌರವಿಸುತ್ತಾರೆ. ಅನೇಕರು ಅವರ ದಯೆ ದಾಕ್ಷಿಣ್ಯಕ್ಕಾಗಿ, ದಲಿತರ ಅಸ್ಪೃಶ್ಯರ ಮೇಲೆ ಅವರಿಗಿರುವ ಪ್ರೀತಿಗಾಗಿ ಮನ್ನಿಸುತ್ತಾರೆ. ಬ್ರಿಟಿಷರಾದರೂ ಅವರು ಕಾಂಗ್ರೆಸಿನ ಅಧಿಕಾರ ಪದವಿ ತ್ಯಾಗ ಒಮ್ಮೆ ಸುಖದ ಶ್ವಾಸ ಬಿಡುತ್ತಾರೆ. ಏಕೆಂದರೆ ಕಾಂಗ್ರೆಸಿನಲ್ಲಿರುವವರಲ್ಲಿ ಬ್ರಿಟಿಷರ ಮೇಲೆ ಹೆಚ್ಚಿನ ಪ್ರೀತಿಯುಳ್ಳವರು ಗಾಂಧಿ ಎಂದು ಅವರಿಗೆ ಗೊತ್ತಿದೆ. "ನಾನು ಭಾರತದಲ್ಲಿ ಬ್ರಿಟನಿನ ಕಡೆಯಿಂದ ಉತ್ತಮ ಪ್ರತಿನಿಧಿಯಾಗಿ ನಿಂತಿದ್ದೇನೆ" ಎಂದು ಒಮ್ಮೆ ಗಾಂಧಿಜಿಯೇ ಹೇಳಿದ್ದರು.

ನಾಜಿಗಳು ಮುಂದ ವರಿಯುತ್ತಿರುವ ಈ ಕಾಲದಲ್ಲಿ ಗಾಂಧಿಜಿಯ ಅಹಿಂಸೆಯ ಉಪದೇಶ ಹುಚ್ಚುತನದ್ದೆಂದು ಬ್ರಿಟಿಷರು ಸಹಜವಾಗಿ ವಿಚಾರಿಸಬಹುದು. ಗಾಂಧಿಜಿ ತೀರಿಹೋದ ಮೇಲೆ ಅವರ ಈ ತತ್ವವು ಉಳಿದೀತೇ ಎಂದು ಹೇಳುವುದೂ ಸಂಶಯವೇ ಆಗಿದೆ. ಅವರ ಮುಂದೆ ಪ್ರಸಿದ್ಧರಾಗಿ ಬರಲಿರುವ ನಾಯಕರುಗಳಾದರೂ ಗಾಂಧಿಜಿಯ ಈ ತತ್ವಕ್ಕೆ ಸಂಪೂರ್ಣ ಒಪ್ಪಿಲ್ಲ. ಆದರೆ ನೆಹರೂ ಗಳಾದರೂ ತನ್ನ ಮೇಲೆ ಗಾಂಧಿಜಿಯ ಮಾಂತ್ರಿಕ ವ್ಯಕ್ತಿತ್ವವನ್ನು ಹರಿಯಬಿಟ್ಟಿದ್ದಾರೆ. ಆದರೆ ಗಾಂಧಿಜಿಯ ಅನಂತರ ಏನೆಂದು ಯಾರು ಹೇಳಬಲ್ಲರು?

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O S 92/1940
R. L. A. 1126/1940

ನ. ಕ. ಕೊಡ... ವಾದಿ. *Petitioner*

ಸಂಕಪ್ಪ ಪೂಜಾರಿ ಹಾಗು ಜನರು ಪ್ರತಿವಾದಿ *Respondents*

1 ನೇ ಪ್ರತಿವಾದಿ ಸಂಕಯ್ಯ ಪೂಜಾರಿ ತಮ್ಮ ಪೂಜಾರಿ ಅಳಿಯ-ಶಾಂತಿಬಾರು ಗ್ರಾಮದ ಮರಕೂರು ಎಂಬಲ್ಲಿ—

ಸದ್ರಿ ಹಾನಿಯಲ್ಲಿ ಆದ ಪ್ರೀಲಿಮಿನರಿ ಡಿಕ್ರಿ ಪ್ರಕಾರ ದಾವಾ ಆಸ್ತಿ ಮೇಲಿಂದ ಐವಜ ವಸೂಲು ಹೊಂದುವಷ್ಟಕ್ಕೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಾದಿಯ ಕಡೆಯಿಂದ ಬರಕೊಂಡ ಪೀಟಿಷನ್ ಅರ್ಜಿ ವ್ಯವಹರಣೆಯಲ್ಲಿ ನೋಟೀಸಿನ ತನ್ನ ನ್ಯಾಯ ತಾ 11-3-1941ಕ್ಕೆಂತ ನ್ಯಾಯ ನಿಶ್ಚಯಿಸಿರುತ್ತವೆ. ಆ ನ್ಯಾಯಕ್ಕೆ ಎದುರು ತಮ್ಮ ಆಕ್ಷೇಪಗಳೇನಾದರೂ ಹೇಳುವದಿದ್ದರೆ ಈ ಕೋರ್ಟಿಗೆ 11 ಘಂಟೆಗೆ ತಪ್ಪದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಅವರನ್ನು ಗೈರುಹಾಜರು ಎಂತ ಮಾಡಿ ಈ ವ್ಯವಹರಣೆಯನ್ನು ಮುಂದಿನ ತನ್ನದಿಂದ ತೀರ್ಮಾನಿಸಲಾಗುವುದು ಎಂತ ಈ ಕೋರ್ಟಿನವರ ಹುಕ್ಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

ತಾ. 19-2-41 } B Ramachandra Rao,
Puttur. } pleader for Petitioners

ಮಹಾಪುರುಷರಿಗೆ ನಿದ್ರೆಯಿಲ್ಲ!

— ನಿದ್ರೆ ಮಾಡಲು ಸಮಯವೂ ಇಲ್ಲ! —

ನೆಪೋಲಿಯನ್, ಶಿವಾಜಿ, ಚರ್ಚಿಲ್ ಮೊದಲಾದವರ ಜೀವನ

ನಿದ್ರೆಯಿಲ್ಲದಿರುವುದಕ್ಕೆ ಮನಸ್ಸಿನ ಚಿಂತೆಯೇ ಕಾರಣ. ಇಂದು ಬ್ರಿಟನಿನ ಮಹಾ ಪ್ರಧಾನರಾದ ಚರ್ಚಿಲ್ಲರಿಗಿಂತ ಹೆಚ್ಚು ಕಳವಳವುಳ್ಳವರು ಬೇರೆ ಇರಲಾರರೆಂದರೂ ಹೆಚ್ಚಾಗದು. ಆದರೂ ಅವರು ಸಂಜೆ ೬ ಗಂಟೆಯಿಂದ ೭॥ ಗಂಟೆಯ ವರೆಗೆ ೧॥ ತಾಸುಗಳ ತನಕ ಸುಖವಾಗಿ ನಿದ್ದೆ ಮಾಡಿ ಮತ್ತೆ ಬೆಳಗಂಜಾವದ ವರೆಗೆ ಬಿಡುವಿಲ್ಲದೆ ಕೆಲಸ ಮಾಡುತ್ತಾರೆ; ಮತ್ತೆ ಹಗಲು ಹೊತ್ತು ಕೂಡಾ ಆಯಾಸವಿಲ್ಲದೆ ತನ್ನ ಕಾರ್ಯವನ್ನು ಎಸಗುತ್ತಿರುವರು. ನಿದ್ರೆಯಿಲ್ಲದೆ ಉತ್ಸಾಹದಿಂದ ದುಡಿವ ಮಹನೀಯರು ಇತಿಹಾಸದಲ್ಲಿ ಕೆಲವರು ಕೇಳಸಿಗುತ್ತಾರೆ.

ಕಳೆದ ಮಹಾಯುದ್ಧದಲ್ಲಿ

ಕಳೆದ ಮಹಾಯುದ್ಧದ ಕಾಲದಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿಗಳಾಗಿದ್ದ ಎಸ್ಕ್ವಿತ್ ಮತ್ತು ಲೋಯಿಡ್ ಜಾರ್ಜರು ಇವರಿಬ್ಬರೂ ಬಹಳ ವಿಶ್ರಾಂತಿಯಿಲ್ಲದೆ ದುಡಿದರೂ ಅವರಿಗೆ ನಿದ್ರಾಹೀನತೆಯ ರೋಗವು ಬರಲಿಲ್ಲ. ತಮ್ಮ ಸಹೋದ್ಯೋಗಿಗಳನ್ನು ಉತ್ಸಾಹಿತರನ್ನಾಗಿ ಮಾಡುವ ರಾಷ್ಟ್ರವನ್ನು ಜಯದಿಂದ ವಿಜಯದ ಕಡೆಗೆ ಸಾಗಿಸುವ ಆತುರ ಆವೇಶವು ಏನೇನೂ ಕಡಿಮೆಯಾದುದೂ ಇಲ್ಲ.

ಗತಿಸಿದ ಲಾರ್ಡ್ ರೋಸ್ ಬರಿ ಇವರೂ ಕೂಡಾ ನಿರಂತರ ಗೊಂದಲದಲ್ಲಿಯೇ ಜೀವಮಾನವನ್ನು ಕಳೆದವರು. ಪ್ರಧಾನ ಮಂತ್ರಿಯಾಗಿದ್ದಾಗಲೂ ಅವರು ನಿದ್ರಾಹೀನತೆಗೆ ಗುರಿಯಾದುದಿಲ್ಲ. ಒಂದೇ ಒಂದು ರಾತ್ರಿಯನ್ನು ನಿದ್ರೆಯಿಲ್ಲದೆ ಕಳೆದುದೂ ಇಲ್ಲ. ಮತ್ತೆ ವಿಶ್ರಾಂತಿ ಹೊಂದಿ ಅವರು ಮಿಡ್ಲೋಥಿಯನ್ ಮತ್ತು ಸರ್ರಿ ಎಂಬಲ್ಲಿ ವಾಸಮಾಡುತಿದ್ದಾಗಲೂ ಸುಖ ನಿದ್ದೆಯಿಂದಲೇ ಇದ್ದರು. ಒಮ್ಮೊಮ್ಮೆ ನಿದ್ದೆ ಬರದೆ ಇದ್ದರೆ ಮಧ್ಯ ರಾತ್ರಿಯಲ್ಲಿ ಕುದುರೆಗಾಡಿಯಲ್ಲಿ ಕುಳಿತು ನಗರ ಸಂಚಾರ ಹೊರಡುತ್ತಿದ್ದರು. ಹೊರಗಿನ ಪ್ರಶಾಂತ ವಾತಾವರಣ, ಅದರಲ್ಲಿ ಗಾಡಿಗೆ ಕಟ್ಟಿದ ಕುದುರೆಗಳ ಖುರಪುಟ ಧ್ವನಿಗಳು ಸೇರಿ ಆನಂದದಾಯಕವಾದ ನಿದ್ರೆ ಬೀಳುತಿತ್ತು ಅವರಿಗೆ.

ಗತಿಸಿದ ಬೋನರ್ ಲಾ ಇವರೂ ಕೂಡಾ ಕಡಿಮೆ ನಿದ್ರೆಯವರು. ಆದರೆ ಅವರು ಅದಕ್ಕೆ ನಿವಾರಣೋಪಾಯವನ್ನು ಕಂಡುಕೊಂಡಿದ್ದರು. ಮೂರು ರಾತ್ರಿ ಬಿಡದೇ ನಿದ್ರಾಹೀನರಾಗಿ ಕಳೆದ ಮೇಲೆ ನಾಲ್ಕನೆಯ ದಿನ ಅವರು ಲೇಖನಿ ಹಿಡಿದು ರಾತ್ರಿ ಕಾಲದಲ್ಲಿ ಬರೆಯಲು ಆರಂಭಿಸಿದರು. ಮತ್ತೆ ಅರ್ಧ ತಾಸಿನೊಳಗೆ

ನೆಪೋಲಿಯನನ ನಿದ್ರೆ

ನೆಪೋಲಿಯನನ ಪ್ರಕೃತಿ ಒಂದು ವಿಚಿತ್ರ ರೀತಿಯದು. ಅವನು ಪ್ರಸಿದ್ಧನಾದ ಕಡಿಮೆ ನಿದ್ರೆಗಾರನು. ಅವನು ತನ್ನ ೫೨ನೆಯ ಪ್ರಾಯದಲ್ಲಿಯೇ ತೀರಿಹೋದನು. ಅವನ ಜೀವನದ ದಿನಗಳನ್ನು ಆತನು ಸ್ವಲ್ಪ ಹೆಚ್ಚಿನ ವಿಶ್ರಾಂತಿಯಿಂದ ಕಳೆದಿದ್ದರೆ, ಸ್ವಲ್ಪ ದೀರ್ಘಕಾಲದ ವರೆಗೆ ಬದುಕಲೂ ಬಹುದಿತ್ತು. ದಿನಕ್ಕೆ ಐದು ತಾಸುಗಳಿಂದ ಹೆಚ್ಚಾಗಿ ಆತನು ಎಂದೂ ನಿದ್ರಿಸಿದ್ದರಲಿಲ್ಲ. ಮತ್ತೆ ಪ್ರಾಯಕ್ಕೆ ಬಂದು ಇತರ ಹಲವು ಚಟುವಟಿಕೆಗಳನ್ನು ಆರಂಭಿಸಿದ ಮೇಲೆ ದಿನವೊಂದರ ಎರಡು ಮೂರು ತಾಸುಗಳ ಮೇಲೆ ಆತನು ನಿದ್ರಿಸಿದ್ದು ಇಲ್ಲವೇ ಇಲ್ಲ. ಹೀಗೆ ಅಭ್ಯಾಸ ಬಂದಂದಿಂದಲೇ ಹೊಸ ಬಗೆಯ ಒಂದು ಜೀವನವನ್ನು ಆತನು ತನ್ನಷ್ಟಕ್ಕೇ ಕಲ್ಪಿಸಿಕೊಂಡನು.

ಚರಿತ್ರೆಯೇ ಆತನ ಕಾರ್ಯಶಕ್ತಿಯನ್ನು ವಿಶದಿಸುತ್ತದೆ. ಆತನು ಅನೇಕ ಅದ್ಭುತಗಳನ್ನು ಮಾಡಿದವನು. ಮನ ಬಂದಾಗ ಕುದುರೆಯ ಮೇಲೆಯೋ, ಆಫೀಸಿನಲ್ಲಿಯೋ, ಕೆಲಸದ ಸಮಯದಲ್ಲಿಯೋ ಕೆಲವು ನಿಮಿಷಗಳ ಸುಖನಿದ್ರೆಯನ್ನು ಮಾಡಿಬಿಡುತ್ತಿದ್ದನು. ಇಂದು ಚರ್ಚಿಲ್ಲರೂ ಅಂತೆಯೇ ಮಾಡುತಿದ್ದಾರೆ. ಕಾರಿನಲ್ಲಿ ಮತ್ತೆ ಆಫೀಸಿನ ಒರಗು ಕುರ್ಚಿಯಲ್ಲಿ ಕೆಲ ನಿಮಿಷ ಸುಖನಿದ್ರೆ ತೆಗೆದು ಮತ್ತೆ ಕೆಲಸಗಳಿಗೆ ಆರಂಭಿಸುತ್ತಾರೆ.

ಲೋರ್ಡ್ ನಫೀಲ್ಡನೂ ಬಹಳ ಕಡಿಮೆ ನಿದ್ರೆಗಾರ. ಮತ್ತೆ ನೆಪೋಲಿಯನನ ಅನೇಕ ಗುಣಗಳಿಂದ ಕೂಡಿದ ನೋರ್ಥ್‌ಕ್ಲಿಪ್ಪನೂ ನಿದ್ರಾಹೀನನಿದ್ದನು. ಲಾರ್ಡ್ ರೀಡಿಂಗನೂ ಅಂತೆಯೇ ನಿದ್ರಾಹೀನರಾದ ದುರ್ಭಾಗ್ಯರಲ್ಲಿ ಒಬ್ಬ. ಮಧ್ಯ ರಾತ್ರಿಗಿಂತ ಮೊದಲು ಮಲಗುವುದು ಅವನಿಗೆ ಅಭ್ಯಾಸವೇ ಇರಲಿಲ್ಲ.

ಸರ್ ಪಾಟ್ರಿಕ್ ಹೇಸ್ಟಿಂಗನೂ ಇವರ ಸಾಲಿಗೇ ಸೇರಿದವನು.

ಶಿವಾಜಿಯೂ ಬಹಳ ಕಡಿಮೆ ಕಾಲಗಳ ನಿದ್ರೆ ಮಾಡುತಿದ್ದನು.

ಮಹಾ ಪುರುಷರಿಗೆ ಕೆಲಸ ಮುಗಿಸಿ ಸುಖವಾಗಿರಲು ಸಮಯವಿಲ್ಲ. ದೇಹಕ್ಕೆ ಅವಶ್ಯವಾದ ನಿದ್ರೆಯ ಸಮಯವೂ ಇವರಿಗೆ ಕೆಲಸ ಮಾಡಲು ಬೇಕಾಗುತ್ತದೆ. ಅವರು ನಿದ್ದೆ ಮಾಡದಿದ್ದರೆ, ಅದರ ಬದಲು ಕೆಲಸ ಮಾಡುತ್ತಲೇ ಇರುತ್ತಾರೆ. ಅವರ ಜೀವನದ ಪ್ರತಿಯೊಂದು ನಿಮಿಷವೂ ದೇಶದ ಹಿತಕ್ಕೆ ಅವಶ್ಯವಾಗಿ ಬೇಕಾಗಿದೆ.

— ರಹಸ್ಯವು ಪ್ರಕಟಮಾಡಲ್ಪಟ್ಟಿತು —
ಕ್ರಮವಾಗಿ ಲೋಧ್ರವನ್ನುಪಯೋಗಿಸುವುದರಿಂದ ಅದು ತನ್ನನ್ನು ಈ ಮುದಿ ಪ್ರಾಯದಲ್ಲಿ ಕೂಡಾ ಆರೋಗ್ಯದಲ್ಲಿಯೂ, ತಾರುಣ್ಯದಂತೆ ಆನಂದದಾಯಕವಾಗಿರಿಸುವುದೆಂದು ಅಜ್ಜಿಯು ಶಿಫಾರಸು ಮಾಡುತ್ತಿರುವಳು.
ಆರೋಗ್ಯಕ್ಕೆ, ಸೌಂದರ್ಯಕ್ಕೆ, ಗರ್ಭಾಶಯ ರೋಗಗಳಿಗೆ ಟಾನಿಕು ಲೋಧ್ರ
ಎಲ್ಲಾ ಕೆಮಿಸ್ಟರಲ್ಲಿಯೂ ದೊರೆಯುತ್ತದೆ.
KESARI KUTEERAM
MADRAS

SEASON-DEPOSITS
Season Deposits are accepted at all branches at very favourable rates.
Please enquire at the nearest branch.
CANARA BANK LIMITED.
ESTD. 1906
Members: Reserve Bank of India and Bombay Clearing House.

THE PIE-MONEY BANK LTD.,
Maidan Road, MANGALORE.
Undertakes all kinds of Banking Business. Current account at 2½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/- to Rs. 5000 run regularly on systematic lines. Unique Banking facilities to Businessmen and interested Public.
Apply for particulars—
K. R. GURU, *Managing Director*

ಕ್ರೈಸ್ಟ್ ಹೋಲಿನಲ್ಲಿ ಇಂದು ಸಂಗೀತ ಸ್ಪರ್ಧೆ ನಡೆಯುವುದಿತ್ತು. ಸ್ವತಃ ತೃತೀಯ ಜಾರ್ಜ ಸಾರ್ವಭೌಮರೇ ಅಗ್ರಾಸನವನ್ನಲಂಕರಿಸುವವರಿದ್ದರು. ಸ್ಪರ್ಧೆಯಲ್ಲಿ ಉತ್ತೀರ್ಣರಾದವರಿಗೆ 'ಸಂಗೀತಾಚಾರ್ಯ' ಎಂಬ ಬಿರುದೂ, ಇಪ್ಪತ್ತು ಸಾವಿರ ಪವನುಗಳ ಬಹುಮಾನವೂ ಕೊಡಲಾಗುವುದೆಂದು ಈ ಮೊದಲೇ ನಿಶ್ಚಯವಾಗಿತ್ತು.

ಸಾಯಂಕಾಲ ನಾಲ್ಕು ಗಂಟೆಯಾದೊಡನೆ ಹೋಲು ಜನರಿಂದ ತುಂಬಿತ್ತು. ಊರಿನ ಪ್ರಮುಖರನೇಕರಿಗೆ ಆಮಂತ್ರಣ ಪತ್ರಿಕೆಗಳು ಕಳುಹಿಸಲ್ಪಟ್ಟಿದ್ದವು. ಅಲ್ಲದೆ ರಾಜದರ್ಬಾರದವರು ಕೂಡಾ ಅಲ್ಲಿ ಕೂತಿದ್ದರು. ಲಾರ್ಡ್, ಜಡ್ಜ, ಬಿಶಪ್ ಮೊದಲಾದ ಅಧಿಕಾರಿಗಳು ತಂತಮ್ಮ ಯೋಗ್ಯತೆಗೆ ತಕ್ಕಂತೆ ಉಚಿತಾಸನಗಳನ್ನಲಂಕರಿಸಿದ್ದರು.

ಸಮಯಕ್ಕನುಸಾರವಾಗಿ ಸಾರ್ವಭೌಮರು 'ಹೋಲ'ನ್ನು ಪ್ರವೇಶಿಸಿದರು. ಎಲ್ಲರೂ ಎದ್ದು ನಿಂತು ಮುಜುರೆ ಸಲ್ಲಿಸಿ ತಂತಮ್ಮ ಸ್ಥಾನಗಳಲ್ಲಿ ಕುಳಿತರು.

ಅಧ್ಯಕ್ಷ ಸಾರ್ವಭೌಮರು ಪೀಠವನ್ನಲಂಕರಿಸಿದೊಡನೆ ಒಮ್ಮೆ ಸುತ್ತಲೂ ತೀಕ್ಷ್ಣ ದೃಷ್ಟಿಯನ್ನು ಪಸರಿಸಲಾರಂಭಿಸಿದರು. ಆ ಸಭೆಯೋ! ಅದರ ವೈಭವವೇನು? ಹೋಲಿನ ವೈಖರಿಯನ್ನು ಕಂಡು ಬಹು ಸಂತೋಷಗೊಂಡರು. ವಿದ್ಯುದ್ದೀಪಗಳ ಪ್ರಕಾಶದಿಂದಾಗಿ ಕೋಣೆ ಎಲ್ಲಾ ಬೆಳಗುತ್ತಿತ್ತು. ಇತಿಹಾಸಿಕ ಚಿತ್ರಪಟಗಳನೇಕ ತೂಗಾಡಿಸಲ್ಪಟ್ಟಿದ್ದವು. ಇಪ್ಪತ್ತು ಮಂದಿ ಸ್ಪರ್ಧೆಗಾರರು ಕುಳಿತುಕೊಂಡು ತಮ್ಮ ಸರತಿಯನ್ನೇ ಇದಿರು ನೋಡುತ್ತಿದ್ದರು. ಹತ್ತು ಹದಿನೈದು ಮಂದಿ ವಯೋವೃದ್ಧರು, ಸಂಗೀತ ಶಾಸ್ತ್ರದಲ್ಲಿ ಪಳಗಿದವರು. ಉಳಿದವರು ಉತ್ಸಾಹೀ ತರುಣರು. ಆದರೆ ಕೊನೆಯವನೊಬ್ಬ ಮಾತ್ರ ಕೇವಲ ಬಾಲಕ, ಸಂಸಾರಸಾಗರದಲ್ಲಿ ಕಾಲಿಕ್ಕಲು ಇನ್ನೂ ಸಮಯವಿದ್ದ

ಈ ವಾರದ ಕತೆ:

ಬಹುಮಾನ!

ವನು. ಮುಖದಲ್ಲಿ ಅದೊಂದು ತೇಜಸ್ಸು ತುಂಬಿ ತುಳುಕಾಡುತ್ತಿತ್ತು. ಮುಖಮುದ್ರೆಯೋ? ಗಂಭೀರ. ಇಷ್ಟೊಂದು ಜನರ ನಡುವೆ ಇರುವೆನೆಂದು ಒಂದಿಷ್ಟಾದರೂ ಕಂಪನವಿಲ್ಲ.

ಸಾರ್ವಭೌಮರಿಗೆ ಬಾಲಕನನ್ನು ಕಂಡು ಆನಂದವಾಯಿತು. ಹತ್ತಿರವೇ ಕುಳಿತಿದ್ದ ಪ್ರೈವೇಟ್ ಸೆಕ್ರೆಟರಿಯನ್ನು ಕುರಿತು, "ಆ ತರುಣ ಸ್ಪರ್ಧೆಗಾರನ್ಯಾರು? ಇನ್ನೂ ಕೇವಲ ಬಾಲಕ" ಎಂದರು. ಸೆಕ್ರೆಟರಿಯು, ಆತನೇ ವಿಂಚೆಸ್ಟರ್ ಡ್ಯೂಕ್ ಪೆಸ್ಸಿಲೋವಿನ ದತ್ತಪುತ್ರ ಓಟಸ್ ಎಂದನು. ಸಾರ್ವಭೌಮರು ಬಾಲಕನ ಕಡೆಗೊಮ್ಮೆ ನೋಡಿ, ಆತನ ಗಂಭೀರತೆಗೆ ಮೆಚ್ಚಿ, ಮನಸ್ಸಿನಲ್ಲಿಯೇ ನಕ್ಕರು.

ಸರಿ, ಸ್ಪರ್ಧಾ ಸಮಯವು ಬಂತು. ಕಾರ್ಯಕ್ರಮದಂತೆ ಒಬ್ಬೊಬ್ಬರಾಗಿ ಹದಿನೆಂಟು ಮಂದಿ ಗಾಯನ ಕಲೆಯಲ್ಲಿ ತಂತಮ್ಮ ಸಾಮರ್ಥ್ಯ ಅನುಭವಗಳನ್ನು ತೋರಿಸಿದರು. ಒಬ್ಬರಿಗಿಂತೊಬ್ಬರ ಗಾಯನವು ಉತ್ತಮವಿತ್ತು.

ಅನಂತರ ಉಳಿದವರಿಬ್ಬರೇ. ಸಂಗೀತ ವಿಶಾರದ ಕ್ಯಾಂಟನ್ ಮತ್ತು ಬಾಲಕ ಓಟಸ್. ಇಬ್ಬರೂ, ಒಬ್ಬರನ್ನೊಬ್ಬರು ಅಸೂಯಾ ಪರದೃಷ್ಟಿಯಿಂದ ನೋಡುತ್ತಿದ್ದರು.

ಹತ್ತೊಂಬತ್ತನೆಯ ಸರತಿಯು ಕ್ಯಾಂಟನ್ನನಿಗೆ ಬಂತು. ಆತನೆದ್ದು ಬಂದು ಸ್ಪರ್ಧೆಯ ಸ್ಥಳದಲ್ಲಿ ಕುಳಿತುಕೊಂಡನು. ಪ್ರಾರಂಭವಾಯಿತು ಗಾಯನಕ್ಕೆ. ಇಂಗ್ಲೆಂಡಿನಲ್ಲಿ ಈ ಮೊದಲಿನ ಸಂಗೀತ ಸ್ಪರ್ಧೆಗಳ ಬಹುಮಾನಗಳು ಕ್ಯಾಂಟನ್ನನಿಗೆ ದೊರಕಿತ್ತು. ಅಂದ ಮೇಲೆ ಆತನನ್ನು ಸಂಗೀತದ ವಿಷಯದಲ್ಲಿ ಅರಿಯದಿರುವವರು ಇಲ್ಲವೆನ್ನಬಹುದು.

ಕ್ಯಾಂಟನ್ನನ ಸಂಗೀತವೋ!—ಅದರ ಆನಂದವನ್ನು ಸ್ವತಃ ಅನುಭವಿಸಿದ್ದಲ್ಲದೆ ಬೇರೆ ತಿಳಿಯಲಾಗದು. ಪ್ರೇಕ್ಷಕರೆಲ್ಲರೂ ತಲೆದೂಗಲಾರಂಭಿಸಿದರು. ಅಂಥಾ ಗಾಯನವನ್ನು ಕೇಳಿದ ತಾವೇ ಧನ್ಯರಾದೆವೆಂದರು.

ಆತನ ಸಂಗೀತವು ಮುಗಿಯಿತು. ಇನ್ನೇನು? ಸ್ಪರ್ಧೆಯ ಬಿರುದೂ, ಬಹುಮಾನವೂ ಕ್ಯಾಂಟನ್ನನಿಗಲ್ಲವೇ? ಮತ್ತಿನ್ನಾರು? ಆತನನ್ನು ಸಂಗೀತದಲ್ಲಿ ಸೋಲಿಸುವವರು? ಎಲ್ಲರೂ ನಿಶ್ಚಯಿಸಿದರು ಬಹುಮಾನ ಕ್ಯಾಂಟನ್‌ನಿಗೆಂದು.

ಕೊನೆಯದಾಗಿ ಬಾಲಕ ಓಟಸ್ಸನು ಎದ್ದನು. ಈಗ ಆತನ ಸರತಿಯೂ ಬಂತು.

ಆತನೂ ಸಂಗೀತವಿದ್ಯೆಯಲ್ಲಿ ತನ್ನ ಅನುಭವವನ್ನು ಪ್ರಕಟಿಸಲನುವಾದನು. ಆತನು ಹಾಡುತ್ತಿದ್ದಂತೆ ಪ್ರೇಕ್ಷಕರು ಯಾವ ಸದ್ದನ್ನೂ ಮಾಡದೆ, ಕಣ್ಣಿನ ರೆಪ್ಪೆ ಕೂಡಾ ಮುಚ್ಚದೆ ಆತನನ್ನೇ ನೋಡಲಾರಂಭಿಸಿದರು. ಕೇವಲ ಬಾಲಕ! ಆದರೂ ಆತನ ಬಾಯಿಂದ ಹೊರಟ ಆ ಮಧುರ ಸಂಗೀತವೋ—ಆಹಾ! ಅದನ್ನೇನು ತಿಳಿಸುವದು? ಬಾಲಕ! ಎಷ್ಟು ಚೆನ್ನಾಗಿ ಹಾಡುತ್ತಿದ್ದಾನೆ? ಸ್ಪರ್ಧೆಗಾರರೂ ಕೂಡಾ ಆತನ ಗಾಯನಕ್ಕೆ, ಮಧುರ ಕಂಠಕ್ಕೆ ತಲೆದೂಗಲಾರಂಭಿಸಿದರು. ಧನ್ಯ! ಬಾಲಕ ಧನ್ಯ! ಎನ್ನುವ ಶಬ್ದಗಳು ಕೂಡಾ ಅವರಿಗೆ ತಿಳಿಯದಂತೆಯೇ ಅವರ ಬಾಯಿಂದ ಹೊರಬಿದ್ದವು.

ಕ್ರಮವಾಗಿ ಹಾಡಿನ ಮಟ್ಟವು ಮೇಲಕ್ಕೇರಿತು. ಹಾಡುತ್ತಿದ್ದಂತೆಯೇ ಪ್ರೇಕ್ಷಕರು ಆತನ ಗಾನ ಸಾಗರದಲ್ಲಿ ಮೀಸಿ ಬಾಹ್ಯಜಗತ್ತನ್ನೇ ಮರೆತರು.

ಹಾಡಿನ ವಿಷಯವೋ? ಕೇವಲ ಕರುಣಾಮಯ.

'ಓ ನನ್ನ ಮಾತಾಪಿತರೇ, ನೀವು ಸ್ವರ್ಗದಲ್ಲಿದ್ದಿರೋ ಭೂಮಿಯಲ್ಲಿಯೇ ಇದ್ದಿರೋ? ಜಗತ್ತೆಲ್ಲಾ ನನ್ನನ್ನು ಅನಾಥನೆನ್ನುತ್ತಿದೆ. ಇದು ನಿಜವೇ ಹಾ ಪಿತನೇ, ಹಾ ಮಾತೇ!' ಎಂಬರ್ಥವು ಹಾಡಿನಲ್ಲಿ ವ್ಯಕ್ತವಾಗುತ್ತಿತ್ತು.

ಪ್ರೇಕ್ಷಕರಿನ್ನೂ ಸಂಗೀತ ಸಾಮ್ರಾಜ್ಯದಲ್ಲಿದ್ದರು. ಓಟಸನ ಹಾಡು ನಿಂತದ್ದು ಅವರಿಗೆ ತಿಳಿಯಲೇ ಇಲ್ಲ. ಎಲ್ಲರ ಕಣ್ಣುಗಳಲ್ಲಿಯೂ ಅಶ್ರುಪ್ರವಾಹ, ಅಂತಹ ಕರುಣಾಮಯ ಹಾಡದು!

ತರುವಾಯ ಏಳು ಮಂದಿ ಸಂಗೀತ ಪರೀಕ್ಷಕರು ತಮ್ಮಲ್ಲಿಯೇ ತರ್ಕಿಸಿ, ಬಹುಮಾನ ಬಿರುದುಗಳನ್ನು ಓಟಸನಿಗೆ ಕೊಡುವುದೆಂದು ನಿಶ್ಚಯಿಸಿದರು.

ಸಾರ್ವಭೌಮರು ಪರೀಕ್ಷಕರ ನಿಶ್ಚಯಕ್ಕೆ ಸಂತೋಷಿಸಿ, ಓಟಸನನ್ನು ಕರೆದು ಸನ್ಮಾನಪೂರ್ವಕವಾಗಿ ಬಹುಮಾನವನ್ನರ್ಪಿಸಿದರು. ಸುವರ್ಣಾಕ್ಷರಗಳಿಂದಲಂಕೃತವಾದ ಬಹುಮಾನ ಪತ್ರ ಮತ್ತು ಇಪ್ಪತ್ತು ಸಾವಿರ ಪವನುಗಳ ಚೆಕ್ಕು.

ನಂತರ ಸಭಾ ವಿಸರ್ಜನವಾಯಿತು. ಸರ್ವರ ಬಾಯಲ್ಲೂ ಓಟಸನ ಪ್ರಶಂಸೆ. ಆತನ ಮಧುರ ಗಾಯನ ರೀತಿ ಇತ್ಯಾದಿಗಳ ವಿಷಯವೇ.

ಸಂಗೀತ ವಿಶಾರದ ಕ್ಯಾಂಟನ್ನನ ಪರಿಸ್ಥಿತಿಯನ್ನು ವಿವರಿಸುವದು ಉಚಿತವಲ್ಲ. ಇಷ್ಟು ವರ್ಷಗಳಿಂದ ತನ್ನ ಪಾಲಿಗೆ ಬರುತ್ತಿದ್ದ ಬಹುಮಾನವನ್ನು ಇಂದು ಯಾರೋ ಅನಾಥ ಬಾಲಕನು ಎತ್ತಿಕೊಂಡು ಹೋಗುವುದೆಂದರೇ ಛೀ! ಇದಕ್ಕಿಂತ ಹೆಚ್ಚಿನ ಅಪಮಾನವಿದೆಯೇ!

ಆತನ ಸಂತಾಪಕ್ಕೆ ಮಿತಿಯಿಲ್ಲ. ಸಂಗೀತ ಶಾಸ್ತ್ರದಲ್ಲಿ ತನ್ನ ಪ್ರತಿಸ್ಪರ್ಧಿಯೊಬ್ಬನು ತನಗಿಂತಲೂ ಮಿಗಿಲಾದುದನ್ನು ಆತನು ತಾಳಲಾರನು. ಅದೂ ಒಬ್ಬ ಬಾಲಕ!—ಆತನಿಗೇನೋ ಒಂದು ಉಪಾಯ ತೋಚಿತು, ಆತನೊಮ್ಮೆ ನಕ್ಕನು. ನಂತರ ಅಲ್ಲಿಂದೆದ್ದು ಹೊರಟನು.

(೧೯ನೆಯ ಪುಟವನ್ನು ನೋಡಿ)

BHUVANENDRA PRODUCTS LTD.,

KATAPADI, S. K.

Why Doctors prescribe

"BHUVANENDRA"

NARAYANA TAILA

Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರ ನಾರಾಯಣ ತೈಲ'

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ,
ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ಟೋಕಿಸ್ಟರು —
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ರಥಬೀದಿ.
ಡಾ. ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ. ದ. ಕನ್ನಡ.

ಉನ್ನತಿಯ ನೆಲೆಯಿಂದ ಪತನದ ಪರಿಸ್ಥಿತಿಗೆ-

ಭಾರತವು ಬಂದ್ಯು ಮುಟ್ಟಿತೆ?

— ಆಂಗ್ಲಪತ್ರಿಕೆಯಲ್ಲಿ ಆಂಗ್ಲೇಯರೊಬ್ಬರ ಲೇಖನ —

ಭಾರತದ ಜನರು ತಮ್ಮ ಕಳೆಕೊಂಡ ಹಕ್ಕು ಅಧಿಕಾರಗಳನ್ನು ಪುನಃ ಪಡೆಯಲು ಉದ್ಯುಕ್ತರಾಗಿರುವುದರಿಂದಲೂ, ಪ್ರಜಾ ಸ್ವಾತಂತ್ರ್ಯದ ರಕ್ಷಣೆಗಾಗಿ ತಾವು ಯುದ್ಧಾಸಕ್ತರಾಗಿರುವುದಾಗಿ ಬ್ರಿಟಿಷರು ಹೇಳುತ್ತಿರುವುದರಿಂದಲೂ ಭಾರತದ ಸಮಸ್ಯೆಯು ಈಗ ಬಹಳ ಪ್ರಾಮುಖ್ಯತೆಯನ್ನು ಪಡೆದಿರುತ್ತದೆ. ಬ್ರಿಟಿಷರು ಭಾರತವನ್ನು ಆಳಲಾರಂಭಿಸಿ ೧೮೦. ವರ್ಷಗಳು ಕಳೆದುವು. ಆ ಮೇಲೆ ಈ ದೇಶವು ಈಗ ಸಂಪೂರ್ಣ ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತದೆ. ಇಂದು ಅದು ಪಡೆದಿರುವುದು ಸ್ವಾತಂತ್ರ್ಯದ ತಿರುಳನ್ನಲ್ಲ, ಕೇವಲ ಅದರ ಛಾಯೆಯನ್ನು ಮಾತ್ರ ಪಡೆದಿದೆ. ಆರ್ಥಿಕ ಅಥವಾ ರಾಜಕೀಯ ಯಥಾರ್ಥವಾದ ಯಾವ ಅಧಿಕಾರವೂ ಅದಕ್ಕೆ ಪ್ರಾಪ್ತವಾಗಿರುವುದಿಲ್ಲ. ಇಂಥ ಪರಿಸ್ಥಿತಿಯು ಯಾಕೆ ಉಂಟಾಯಿತು? ಅದನ್ನು ಪರಿಹರಿಸುವುದೆಂತು? ಹೀಗೆಂದು ಕೋಮನ್ ವ್ಹೀಲ್ ಎಂಬ ಒಂದು ಆಂಗ್ಲೇಯ ಪತ್ರಿಕೆಯಲ್ಲಿ ಆರ್. ಜಿ. ಎಮ್. ರವರು ಪ್ರಶ್ನಿಸುತ್ತಾರೆ.

ಹಿಂದಿನ ಇತಿಹಾಸ

ಮೊತ್ತಮೊದಲು ಬಂಗಾಳದಲ್ಲಿ ಕಂಪನಿಯ ಆಳಿಕೆಯು ಆರಂಭವಾಯಿತು. ಅದು ಆಳಿಕೆಯಲ್ಲ; ಪ್ರಜೆಗಳಿಗೆ ಕಷ್ಟವೇ ಆಗಿದ್ದಿತು. ಆದುದರಿಂದಲೇ ಈ ಆಳಿಕೆಯನ್ನು ಅಂತ್ಯಪಡಿಸುವ ಅಗತ್ಯವು ಬ್ರಿಟಿಷ್ ಸರಕಾರಕ್ಕೆ ತೋರಿತು. ಈ ಆಳಿಕೆ ಮತ್ತು ಸುಲಿಗೆಯ ಪರಿಣಾಮವಾಗಿಯೇ ೧೭೭೦ರಲ್ಲಿ ದೊಡ್ಡ ಬರಗಾಲವು ಬಂದಿತು. ಅದರಲ್ಲಿ ೧೦ ಮಿಲಿಯ ಬಂಗಾಳಿಗಳು ಅನ್ನಾಹಾರಗಳಿಲ್ಲದೆ ಸತ್ತರು. ೧೭೮೯ರಲ್ಲಿ ಗವರ್ನರ್ ಜನರಲ್‌ರಾಗಿ ಲೋರ್ಡ್ ಕಾರ್ನವಾಲೀಸರು, ಕೊಡೆ-'ಕಂಪನಿಯ ಆಡಳಿತಕ್ಕೆ ಒಳಪಟ್ಟ ಭಾರತದ ಮೂರನೆಯ ಒಂದಂಶ ಪ್ರದೇಶವು ಈಗ ಗೊಂಡಾರಣ್ಯವಾಗಿದೆ. ಅದರಲ್ಲೀಗ ಹಿಂಸಕ ಮೃಗಪಕ್ಷಿಗಳು ಮಾತ್ರ ವಾಸವಾಗಿರುವವು' ಎಂದು ಇಲ್ಲಿಯ ಸತ್ಯಪರಿಸ್ಥಿತಿಯ ಕುರಿತು ವರದಿ ಬರೆಯಬೇಕಾಯಿತು.

ಕಂಪನಿಯ ಕಾಲ

ಕಂಪನಿಯ ಈ ಕಾಲದಲ್ಲಿ ಬ್ರಿಟಿಷರಿಗೆ ಅಪಾರ ಲಾಭವಾಯಿತು. ಈ ಸುಲಿಗೆಯ ದ್ರವ್ಯವೇ ಬ್ರಿಟನಿನಲ್ಲಿ ಯಾಂತ್ರಿಕ ಕೈಗಾರಿಕೆಗಳನ್ನು ಸ್ಥಾಪಿಸಲಿಕ್ಕೆ ಅಗತ್ಯವಾದ ಭಂಡವಾಳವನ್ನು ಒದಗಿಸಿಕೊಟ್ಟಿತು. ಕ್ರಮೇಣ ಈ ಕೈಗಾರಿಕೆಗಳಲ್ಲಿ ತೊಡಗಿದ ಭಂಡವಾಳಿಗರೂ ಹಿಂದೂಸ್ಥಾನದೊಡನೆ ವ್ಯಾಪಾರಮಾಡುವ ಅಧಿಕಾರಗಳನ್ನು ಕೇಳತೊಡಗಿದರು. ಆ ಸಮಯ ಹಿಂದುಸ್ಥಾನವು ಅನೇಕಾನೇಕ ಕೈಗಾರಿಕೆಯ ಸಾಮಗ್ರಿಗಳನ್ನು ಸಿದ್ಧಗೊಳಿಸಿ ಮಾರುವ ಒಂದು ದೊಡ್ಡ ದೇಶವಾಗಿದ್ದಿತು. ಜಗತ್ತಿನಲ್ಲಿ ಅದಕ್ಕೆ ಗಣನೀಯ ಸ್ಥಾನವಿದ್ದಿತು. ಜಗತ್ತಿನ ಪ್ರಾಯಶಃ ಎಲ್ಲಾ ದೇಶಗಳೊಡನೆ ಅದು ವ್ಯಾಪಾರಮಾಡುತ್ತಿದ್ದಿತು. ಆದರೆ ಈಗ ಬ್ರಿಟಿಷರು ಈ ವ್ಯಾಪಾರದ ಹಕ್ಕನ್ನು ತಮಗಾಗಿ ಮಾತ್ರ ಇಟ್ಟುಕೊಳ್ಳಲು ಹವಣಿಸಿದರು. ಹಿಂದುಸ್ಥಾನವು ತಮಗೆ ಕೇವಲ ಹಸಿ ಪದಾರ್ಥಗಳನ್ನು ಮಾರಬೇಕು, ಮತ್ತು ತನಗೆ ಬೇಕಾದ ಸಿದ್ಧ ಸಾಮಗ್ರಿಗಳನ್ನು ಕೇವಲ ತಮ್ಮಿಂದಲೇ ಕೊಂಡುಕೊಳ್ಳಬೇಕು ಎಂದು ಅವರು ಪ್ರಯತ್ನಿಸಿದರು. ಭಂಡವಾಳಿಗರ ಈ ಪ್ರಯತ್ನಗಳಿಂದಾಗಿ ೧೮೧೩ರಲ್ಲಿ ಕಂಪನಿ ಆಡಳಿತವು ಮುಗಿಯಿತು. ಬ್ರಿಟಿಷರೇ ಹಿಂದುಸ್ಥಾನದ ಅಧಿಕಾರಿಗಳಾದರು.

ದೇಶದ ಮೇಲೆ ಪರಿಣಾಮ

ಈ ಪರಿವರ್ತನೆಗಳ ದೆಸೆಯಿಂದ ಈ ದೇಶದ ಮೇಲೆ ಮಹತ್ತರವಾದ ಪರಿಣಾಮವಾಯಿತು. ಹಿಂದುಸ್ಥಾನದೊಡನೆ ಯಾವ ಬ್ರಿಟಿಷನೂ ಸ್ವೇಚ್ಛೆಯಿಂದ ವ್ಯಾಪಾರ ಮಾಡಬಹುದೆಂದಾಯಿತು. ಹಿಂದುಸ್ಥಾನದಿಂದ ಬ್ರಿಟನಿಗೆ ಹೋಗುವ ಸರಕುಗಳ ಮೇಲೆ ತುಂಬಾ ಸುಂಕವಿದ್ದಿತು. ಆದರೆ ಅಲ್ಲಿಂದ ಇಲ್ಲಿಗೆ ಬರುವವುಗಳ ಮೇಲೆ ಯಾವ ಸುಂಕವೂ ಇರಲಿಲ್ಲ. ಬ್ರಿಟನಿನ ಕಾರಖಾನೆಗಳಲ್ಲಿ ತಯಾರಾಗಿ ಸುಂಕವಿಲ್ಲದೆ ಮಾರುವ ಪದಾರ್ಥಗಳೊಂದಿಗೆ ಹಿಂದುಸ್ಥಾನವು ಸ್ಪರ್ಧೆಗೆ ನಿಲ್ಲಲಾರದಾಯಿತು. ಆದುದರಿಂದ ಇಲ್ಲಿಯ ಕೈಗಾರಿಕೆಗಳು ಕ್ರಮೇಣ ಶಿಥಿಲವಾಗಿ ನಾಮಾವಶೇಷವಾದುವು. ದೊಡ್ಡ ದೊಡ್ಡ ನಗರಗಳು ಚಿಕ್ಕ ಚಿಕ್ಕ ಊರುಗಳಾದುವು. ೧೮೩೪ರಲ್ಲಿ ಗವರ್ನರ ಜನರಲ್‌ರು ನುಡಿದದ್ದೇನಂದರೆ:— 'ವ್ಯಾಪಾರ ಕ್ಷೇತ್ರದಲ್ಲಿ ಬೇರೆ ಯಾವ ದೇಶಕ್ಕೂ ಇಂಥ ದುರ್ಗತಿಯು ಪ್ರಾಪ್ತವಾಗಲಾರದು. ಹಿಂದುಸ್ಥಾನದ ನೇಕಾರರೆಲ್ಲರೂ ಮರಣೋನ್ಮುಖರಾಗಿರುವರು.'

ಇದರ ಪರಿಣಾಮವಾಗಿ ಕೈಗಾರಿಕೆ ವೃತ್ತಿ ಉದ್ಯೋಗಗಳನ್ನು ಆಶ್ರಯಿಸಿದ್ದ ಜನರೆಲ್ಲರೂ ಕೃಷಿಕಾರ್ಯದಲ್ಲಿಯೇ ತೊಡಗಿ ಹಳ್ಳಿಹಳ್ಳಿಗಳಿಗೆ ಹೋಗಿ ನೆಲಸಿದರು. ಅಲ್ಲಿ ಅವರು ತಮ್ಮ ಕಾಲಮೇಲೆ ತಾವು ನಿಲ್ಲಲಾರದಾದರು. ಕೃಷಿಯು ಪ್ರಾರಂಭಿಕ ಸ್ಥಿತಿಯಲ್ಲೇ ಇದ್ದುದರಿಂದ ಕೃಷೀವಲರು ನಿರ್ಗತಿಕರಾದರು. ಅವರು ಪುನಃ ಇಲ್ಲಿಯ ಹಣವಂತರ ಆಶ್ರಯದಲ್ಲಿ ದಾಸ್ಯಜೀವನವನ್ನು ಕಳೆಯಬೇಕಾಯಿತು. ೧೮೪೦ರಲ್ಲಿ ಹೊಲವಿಲ್ಲದ ಕೃಷಿಕನು ಯಾರೂ ಇರಲಿಲ್ಲವೆನ್ನುತ್ತಾರೆ. ಆದರೆ ೧೮೯೧ರಲ್ಲಿ ಇವರ ಸಂಖ್ಯೆ ೭ ಮಿಲಿಯವಾಯಿತು. ೧೯೨೧ರಲ್ಲಿ ಅದು ೨೧ ಮಿಲಿಯು ಮತ್ತು ೧೯೩೧ರಲ್ಲಿ ೩೩ ಮಿಲಿಯು ಆಗಿದ್ದಿತು. ಒಟ್ಟು ಕೃಷಿಕರ ಸಂಖ್ಯೆಯಲ್ಲಿ ಸುಮಾರು ೩ರಷ್ಟು ನಿರುದ್ಯೋಗಿಗಳಾಗಿದ್ದರು. ಈಗ ಇವರಲ್ಲಿ ಅರ್ಧದಷ್ಟು ಮಂದಿ ಉದ್ಯೋಗವಿಲ್ಲದೆ ಅಲೆಯುತ್ತಾರೆಂದು ಹೇಳಬಹುದು.

ಅಶಿಕ್ಷರ ಅಭಿವೃದ್ಧಿ

ಇದರ ಪರಿಣಾಮ-ದೇಶದ ದಾರಿದ್ರ್ಯವು ಹೆಚ್ಚಿತು. ಅಕಾಲ ಮರಣಗಳಿಗೆ ಪಾರವೇ ಇಲ್ಲ. ಕಳೆದ ಒಂದು ಶತಮಾನದಲ್ಲಿಯೇ ಮೊದಲಿನ ೨೫ ವರ್ಷಗಳಲ್ಲಿ ಒಂದು ಮಿಲಿಯು, ಮತ್ತಿನ ೨೫ ವರ್ಷಗಳಲ್ಲಿ ಅರ್ಧ ಮಿಲಿಯು, ಆ ಮೇಲಿನ ೨೫ ವರ್ಷಗಳಲ್ಲಿ ೫ ಮಿಲಿಯು ಮತ್ತು ಕೊನೆಯ ೨೫ ವರ್ಷಗಳಲ್ಲಿ ೧೫ ಮಿಲಿಯ ಜನರು ಬರಗಾಲಗಳಿಂದಲೇ ಸತ್ತರು.

ಇವೆಲ್ಲವುಗಳೊಂದಿಗೆ ಅಂದಿನ ಆಡಳಿತದಲ್ಲಿ ಶಾಲೆಗಳೂ ಅಳಿದುಹೋಗಿವೆ. ಹಿಂದಿನ ಕಾಲಗಳಲ್ಲಾದರೆ ಒಂದೊಂದು ಹಳ್ಳಿಗೆ ಒಂದೊಂದು ಶಾಲೆ ಇರುತಿತ್ತು. ಈ ಶಾಲೆಗಳಲ್ಲಿ ಕೆಲವು ಉತ್ತಮ ಸ್ಥಿತಿಯಲ್ಲಿ ಇಲ್ಲದಿರಬಹುದು. ಆದರೂ ಕೂಡ ೧೮೩೫ರಲ್ಲಿ ಮದ್ರಾಸಿನ ಗವರ್ನರನಾಗಿದ್ದ ಮನ್ರೋ ಹೇಳುವ ಪ್ರಕಾರ ಆ ಸಮಯದಲ್ಲಿ ಮೂವರಲ್ಲಿ ಒಂದೊಂದು ಮಗುವಿಗೆ ಓದಲಿಕ್ಕೂ ಬರೆಯಲಿಕ್ಕೂ ಕೂಡಿಸಲಿಕ್ಕೂ ಕಳೆಯಲಿಕ್ಕೂ ಗೊತ್ತಿರುತಿತ್ತು. ಇದು ಆಗಿನ ಯೂರೋಪಿನ ಸ್ಥಿತಿಗಿಂತ ಎಷ್ಟೋ ಉತ್ತಮವಾಗಿತ್ತು. ಆ ಸಮಯ ಬಂಗಾಳವೊಂದರಲ್ಲೇ ೮೦೦೦೦ ಐಗಳ ಮಠಗಳಿದ್ದುವು. ಈಗ ೭೦೦೦೦೦ ಹಳ್ಳಿಗಳ ೩/೪ ಪ್ರದೇಶದಲ್ಲಿ ಶಾಲೆಗಳೇ ಇರುವುದಿಲ್ಲ. ಶೇಕಡಾ ೫ಕ್ಕಿಂತಲೂ ಕಡಿಮೆಯಾಗಿ ಶಾಲೆಗಳಲ್ಲಿ ಓದುತ್ತಾರೆ. ಶೇಕಡಾ ೯೨ರಷ್ಟು ಅಶಿಕ್ಷಿತರಾಗಿದ್ದಾರೆ. ೧೯೧೧ರಲ್ಲಿ ೯೪ರಷ್ಟು ಅಶಿಕ್ಷಿತರಾಗಿದ್ದರು. ಆದರೆ ಇದೇ ಅವಧಿಯಲ್ಲಿ ಸೋವಿಯಟ್ ರಶ್ಯದಲ್ಲಿ ಅಶಿಕ್ಷಿತರ ಸಂಖ್ಯೆ ಶೇಕಡಾ ೭೮ರಿಂದ ೮ಕ್ಕೆ ಇಳಿಯಿತು.

ಸಮಸ್ಯೆ ಬಿಡಿಸಬೇಕಾದವರು

ಇಂದಿನ ಈ ವಿಷಮ ಸಮಸ್ಯೆಯನ್ನು ಉಂಟುಮಾಡಿದವರೇ ಬ್ರಿಟಿಷರು. ಅವರೇ ಅದನ್ನೀಗ ಬಿಡಿಸಲು ಸಮರ್ಥರೂ ಇದ್ದಾರೆ—ದೇಶದಲ್ಲಿ ಇಂದು ಸ್ವಾತಂತ್ರ್ಯದಾಹವು ಹೆಚ್ಚಿದೆ. ಅಲ್ಲಸಲ್ಲದ ನೆವನಗಳನ್ನೊಡ್ಡಿ ಹಿಂದುಸ್ಥಾನದ ಸ್ವಾತಂತ್ರ್ಯವನ್ನು ಬ್ರಿಟನು ಅಲ್ಲಗಳೆಯುತ್ತಿದೆ. ಭಾರತವು ಸ್ವತಂತ್ರವಾಗದೆ ಅದರ ಇಂದಿನ ಹಲವಾರು ಸಮಸ್ಯೆಗಳನ್ನು ಬಿಡಿಸಲಿಕ್ಕಾಗುವುದಿಲ್ಲ.

ಜಿಲ್ಲಾ ಸಮಾಚಾರ

ಮಂಗಳೂರು

ಸತ್ಯಾಗ್ರಹ ಸಮಾಚಾರ

ಶ್ರೀ. ಕೆ. ಶೀನಶೆಟ್ಟರನ್ನು ಬಂಧಿಸಲಿಲ್ಲ:—ಕಾಂಗ್ರೆಸ್ ಕಚೇರಿಯಲ್ಲಿ ಅನೇಕ ವರ್ಷಗಳಿಂದ ಸ್ವಯಂ ಸೇವಕರಾಗಿದ್ದ ಶ್ರೀ. ಕೆ. ಶೀನಶೆಟ್ಟರು ತಾ. ೩ರಂದು ಮಂಗಳೂರಿನ ಪ್ರಸಿದ್ಧ ಸಾಹುಕಾರರೂ ವಾರ್ ಕಮಿಟಿ ಮೆಂಬರರೂ ಆದ ಶ್ರೀ. ಎಂ. ವೆಂಕಟೇಶ ಪೈಗಳ ಮನೆಯ ಮುಂದುಗಡೆ ಗುಳಿಗ ಹಿತ್ತಿಲಿನಲ್ಲಿ ಪೂರ್ವಾಹ್ನ ಗಂಟೆ ೯-೩೦ಕ್ಕೆ ಯುದ್ಧವಿರುದ್ಧ ಘೋಷಣೆಮಾಡಿ ಸತ್ಯಾಗ್ರಹ ಹೂಡಿದರು. ಪೋಲೀಸರು ಅಲ್ಲಿಗೆ ಬಂದಿದ್ದರೂ ಅವರನ್ನು ಬಂಧಿಸಲಿಲ್ಲ. ಅವರು ಯುದ್ಧವಿರುದ್ಧ ಘೋಷಣೆ ಮಾಡುತ್ತಾ ಮುಂದುವರಿದಿರುವರು.

ಕಾಂಗ್ರೆಸ್ ಕಚೇರಿಯಿಂದ ಶ್ರೀ ಶೀನಪ್ಪ ಶೆಟ್ಟರನ್ನು ಕೂಲಿಗಾರರು ಅನೇಕ ಮಂದಿ ಅವರ ಮಿತ್ರರು, ಕಾಂಗ್ರೆಸು ಪ್ರಮುಖರು ಮೆರವಣಿಗೆಯಿಂದ ಜಯಘೋಷಮಾಡಿ ಕರತಂದರು. ಡಿ[illegible] ಪ್ರೆಸಿಡೆಂಟ್ ಡಾ॥ ವಿಟ್ಠ[illegible] ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ॥ [illegible] ಪಿ. ಮ[illegible]ದವರೂ ನಗರದ ಪತ್ರಿಕಾಪ್ರತಿನಿಧಿಗಳೂ [illegible] ಬಂದು ಸೇರಿದ್ದರು. ಶ್ರೀ [illegible] ಶೀನಪ್ಪಶೆಟ್ಟರಿಗೆ [illegible] ಮಾಲೆ ಹಾಕಲು ಹೋಗುವಲ್ಲಿ ಹಲವರು ಹೂ[illegible] ಹೂವಮಾಲೆ ಹಾಕುವುದು [illegible] ಅವರು ತನಗೆ [illegible] ಪ್ರೀತಿಯನ್ನು ನಾನು [illegible] ದೂ, ನಿಮ್ಮ [illegible] ಸ್ವೀಕರಿಸಿಕೊಳ್ಳುತ್ತೇನೆಂದೂ ಮನಃ ಪೂರ್ವಕ [illegible] ಇಂತಹ [illegible] ಹೂವಮಾಲೆ ಧರಿ[illegible] ತನ ಸಂದರ್ಭದ[illegible] [illegible]ಪತ್ರವಲ್ಲವೆ [illegible] ಗಿಷ್ಟವಿಲ್ಲವೆಂದೂ [illegible] ಗದಿದ್ದರೆ ತನ್ನನ್ನು ಯಾ[illegible] ಬಾರದೆಂದೂ ಹಾಗೆಮಾಡಿ ಸ್ವ[illegible] ಶಿಸ್ತ[illegible] ಪಾಲಿಸಬೇಕೆಂದೂ ಕೇಳಿ[illegible]ಕೊಂಡರು. ಸ[illegible] ಸಭಿಕರು ಉತ್ಸಾಹಿತರಾಗಿ ಅವರು ಹಿಡಿದಿದ್ದ ರಾಷ್ಟ್ರ ಧ್ವಜಕ್ಕೆ ಹೂವ[illegible]ಲೆಗಳನ್ನು ಹಾಕಿದರು. ಶ್ರೀ. ಶೆಟ್ಟರು ಗಂಭೀರವಾಗಿ ಮೊದಲು ಕನ್ನಡದಲ್ಲಿಯೂ ಮತ್ತೆ ತುಳ[illegible]ದಿನಲ್ಲಿಯೂ ಯುದ್ಧವಿರುದ್ಧಘೋಷಣೆಗೈದು [illegible]ಮುಂದುವರಿದರು. ಅವರು ಅಲ್ಲಿಂದ ತೆರಳಿ [illegible] ನಗರದ ವಾರ್ ಕಮಿಟಿಯ ಸದಸ್ಯರ ಮನೆಮ[illegible]ನೆಗಳಿಗೆ ಹೋಗಿ ಅವರ ಮನೆ ಮುಂದೆ ಯುದ್ಧವಿರುದ್ಧ ಘೋಷಣೆಮಾಡುತ್ತಾ ಕಾಂಗ್ರೆಸ್ ಪ್ರ[illegible]ಟಣೆಗಳನ್ನು ಹಂಚುತ್ತಾ ಕೂಳೂರು ಕಡೆಗೆ ತೆರ[illegible]ವರೆಂದು ತಿಳಿಯುತ್ತೇವೆ.

ಶ್ರೀ ಶೀನಶೆಟ್ಟರು ಕಳೆದ ಸತ್ಯಾಗ್ರಹ ಕಾಲದಲ್ಲಿಯೂ ಸೆರೆಮನೆಯ ವಾಸವನ್ನನುಭವಿಸಿದವರು. ಬಹಳ ಸಂ[illegible] ಸ್ವಭಾವದ ಉತ್ಸಾಹೀ ತರುಣರು; ಚಟುವಟಿಕೆ [illegible] ಕಾಂಗ್ರೆಸ್ ಕೆಲಸಗಾರರು, ಕಾಂಗ್ರೆಸ್ ಸ[illegible]ಯೇ ಬಹು ಕಾಲದಿಂದ ಇವರು ತನ್ನ ಜೀವನವನ್ನು[illegible] ಕಾಂಗ್ರೆಸಿನ ಶಿಸ್ತಿಗೆ ಸರಿಯಾಗಿ ಮಾರ್ಪಡಿಸಿಕೊಂಡಂತ ನಿಷ್ಠಾವಂತ ಸತ್ಯಾಗ್ರಹಿಗಳು.

ವಿಚಾರಣೆ ಇಲ್ಲದೆ ಬಿಡುಗಡೆ:—ಸತ್ಯಾಗ್ರಹ ಹೂಡಿ ಕಳೆದ ತಾ ೨ನೆ[illegible] ಸೆರೆ[illegible] ಒಳಗಾ[illegible] ಶ್ರೀ. ಪ್ರಭಾಕರ ಶೇಣೈರವರು ರಿಮಾಂಡ್[illegible] ಇಡ[illegible]ಸಲ್ಪಟ್ಟದ್ದು ವಿಚಾರಣೆ ಇಲ್ಲದೆ ಕಳೆದ [illegible]ವಾರ ಸಂಜೆ ಬಿಡುಗಡೆಮಾಡಲ್ಪಟ್ಟಿದ್ದಾರೆ.

[illegible]ದು ಮಾಡಲಿಲ್ಲ:—ಮಂಗಳೂರಿನ ಡೋಂಗರಕೇರಿಯಲ್ಲಿ ತಾ. ೪ರಂದು ಬೆಳಗ್ಗೆ ಸತ್ಯಾಗ್ರಹಮಾಡಿದ ಶ್ರೀ. ರಾಮರಾಯ ಕಿಣಿ ಇವರನ್ನು ಬಂಧಿಸಲಿಲ್ಲ. ಅವರು ಯುದ್ಧ ವಿರುದ್ಧ ಘೋಷಣೆ ಮಾಡುತ್ತ ಸಂಚಾರ ಮಾಡುತ್ತಾರೆ. ಸತ್ಯಾಗ್ರಹ ಮಾಡುವ ಸಂದರ್ಭದಲ್ಲಿ ಜನರು ಗುಂಪುಕೂಡಿ "ನ್ಯೂಸೆನ್ಸ್" ಮಾಡಲಾಗ[illegible] ಕಾಂಗ್ರೆಸ್ ಕೆಲಸಗಾರರು ವಿಶೇಷ ಜಾಗ್ರತೆ ವಹಿಸಿದ್ದರು.

ಕಾಸರಗೋಡು ತಾಲೂಕಿನಲ್ಲಿ ಸತ್ಯಾಗ್ರಹ

ಡಾ॥ ಶಾಸ್ತ್ರಿಗಳಿಗೆ ೪ ತಿಂಗಳ ಕಠಿಣ ಶಿಕ್ಷೆ, ೨೦೦ ರೂ ಜುಲ್ಮಾನೆ:—ಪೆರಡಾಲ ಗ್ರಾಮದ ಬದಿಯಡ್ಕದಲ್ಲಿ ತಾ. ೧೪ರಂದು ಸತ್ಯಾಗ್ರಹ ಹೂಡಿದ್ದಾದ ಡಾ. ಪಿ. ಎಸ್. ಶಾಸ್ತ್ರಿಗಳನ್ನು ಹದಿನೇಳು ದಿನಗಳ ವರೆಗೆ ರಿಮಾಂಡಿನಲ್ಲಿರಿಸಿ ತಾ. ೪ರಂದು ಪುತ್ತೂರಿನಲ್ಲಿ ವಿಚಾರಣೆ ಮಾಡಿ ನಾಲ್ಕು ತಿಂಗಳ ಕಠಿಣ ಶಿಕ್ಷೆ ಮತ್ತು ೨೦೦ ರೂ. ಜುಲ್ಮಾನೆ ವಿಧಿಸಿರುವರೆಂದೂ, ಜುಲ್ಮಾನೆ ವಿಧಿಸಲು ತಪ್ಪಿದರೆ ಮತ್ತೆ ೩ ತಿಂಗಳ ಶಿಕ್ಷೆಯಾಗುವುದಾಗಿ ವಿಧಿಸಿರುವರೆಂದೂ ತಿಳಿದಿದೆ. ಅವರನ್ನು 'ಸಿ' ಕ್ಲಾಸಿನಲ್ಲಿರಿಸಲಾಗಿದೆ.

ಕೈದು ಮಾಡಲಿಲ್ಲ:—ಪೆರಡಾಲ ಗ್ರಾಮದ ಬದಿಯಡ್ಕ ಮತ್ತು ಉಕ್ಕಿನಡ್ಕ ಎಂಬಲ್ಲಿ ತಾ. ೨೮ರಂದು ಸತ್ಯಾಗ್ರಹ ಹೂಡಿದ ಶ್ರೀಗಳಾದ ಕಮಲಾಕ್ಷ ಪೈ ಮತ್ತು ವಿಷ್ಣು ಕಡಂಬಳಿತ್ತಾಯರನ್ನು ಬಂಧಿಸಲಿಲ್ಲ. ಅವರು ಪುತ್ತೂರು ಮಾರ್ಗವಾಗಿ ಯುದ್ಧವಿರುದ್ಧ ಘೋಷಣೆ ಮಾಡುತ್ತಾ ಕಾಂಗ್ರೆಸ್ ಪ್ರಚಾರಕ್ಕೆ ಹೊರಟಿರುತ್ತಾರೆ.

ಕಾಸರಗೋಡಿನಲ್ಲಿ ಸತ್ಯಾಗ್ರಹ ಮಾಡಿದ ಶ್ರೀ. ಎಂ ಕೆ. ರಾಮನ್ ಎಂಬವರನ್ನೂ ಬಂಧಿಸಲಿಲ್ಲ. ಅವರು ಪುತ್ತೂರು ಮಾರ್ಗವಾಗಿ ಯುದ್ಧವಿರುದ್ಧ ಘೋಷಣೆಮಾಡುತ್ತಾ ಮುಂದುವರಿಯುತ್ತಾರೆ.

ಕಾರ್ಕಳ

ಸತ್ಯಾಗ್ರಹ:—ತಾ. ೨೪-೨-೧೯೪೧ರ ದಿನ ಸಾಯಂಕಾಲ ಇಲ್ಲಿಯ ಡಾಕ್ಟರ್ ಕೆ. ಜಿ. ಕಾಮತರವರು ಮಿಯ್ಯಾರಿನಲ್ಲಿ ಸತ್ಯಾಗ್ರಹ ಮಾಡಿದರು. ಪೋಲೀಸರು ಒಡನೆಯೇ ಅವರನ್ನು ಕೈದುಮಾಡಿದರು. ಮರುದಿನ ಇಲ್ಲಿ ಕೇಂಪ್ ಮಾಡಿದ ಕುಂದಾಪುರ ಸಬ್ ಕಲೆಕ್ಟರರ ಮುಂದೆ ಅವರ ವಿಚಾರಣೆಯಾಗಿ ೪ ತಿಂಗಳ ಶಿಕ್ಷೆ ವಿಧಿಸಿ 'ಬಿ' ತರಗತಿಯಲ್ಲಿ ಇಡಲ್ಪಟ್ಟಿದೆ. ಈ ಮೊದಲು ಕೈದಾಗಿ ಅನಂತರ ಬಿಟ್ಟುಬಿಡಲ್ಪಟ್ಟ ಶ್ರೀ. ಕೆ. ನರಸಿಂಹ ಕಾಮತರು ತಾ. ೨೮-೨-೪೧ರ ದಿನ ಸಾಣೂರಲ್ಲಿಯೂ, ಶ್ರೀ. ಕೆ. ವಾಮನ ಶರ್ಮರವರು ತಾ ೧-೩-೪೧ರ ದಿನ ಬೆಳ್ಮಣ್ಣಿನಲ್ಲಿಯೂ ಸತ್ಯಾಗ್ರಹ ಮಾಡಿದರು. ಪೋಲೀಸರು ಹಾಜರಿದ್ದರೂ ಅವರನ್ನು ಕೈದುಮಾಡಲಿಲ್ಲ.

ಉಡುಪಿ

ಕಟಪಾಡಿಯಲ್ಲಿ ಸತ್ಯಾಗ್ರಹ.—ತಾ ೧ರಂದು ಇಲ್ಲಿ ಸತ್ಯಾಗ್ರಹ ಮಾಡಿದ ಶ್ರೀ ದಾಮೋದರ ನಾಯ[illegible]ರನ್ನು ಬಂಧಿಸಲಿಲ್ಲ. ಇವರು ಯುದ್ಧವಿರುದ್ಧ ಘೋಷಣೆ ಮಾಡುತ್ತಾ ಹಳ್ಳಿಹಳ್ಳಿಗಳಲ್ಲಿ ಪ್ರಚಾರ ಕೊರಟಿದ್ದಾರೆ.

ಮಂಗಳೂರು

ವಿದ್ಯಾರ್ಥಿ ವೃಂದದ ಸಭೆ:—ಮಂಗಳೂರು ವಿದ್ಯಾರ್ಥಿ ವೃಂದದ ಮಹಾಸಭೆಯೊಂದು ಕಳೆದ ಶನಿವಾರ ಸಂಜೆ ಸಂಘದ ಆಫೀಸಿನಲ್ಲಿ ಶ್ರೀ ಬಿ ಎಸ್. ಭಾಸ್ಕರ[illegible] ಅಧ್ಯಕ್ಷತೆಯಲ್ಲಿ ಜರಗಿ, ಗಿಂಡಿಯ ಇಂಜಿನಿಯರಿಂಗ್ ಕಾಲೇಜಿನಿಂದ ಕೆಲ ವಿದ್ಯಾರ್ಥಿಗಳನ್ನು ಹೊರತಳ್ಳಿದ ಅಧಿಕಾರಿಗಳ ವರ್ತನೆಯನ್ನು ಖಂಡಿಸಿ, ಆ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸ ಪೂರ್ತಿಗೊಳಿಸಲು ಎಡೆಕೊಡುವಂತೆ ಕಾಲಾಧಿಕಾರಿಗಳನ್ನು ಕೇಳಿಕೊಳ್ಳುವ ಠರಾವನ್ನು ಮಂಜೂರು ಮಾಡಿತು.

ಜೀವಾವಧಿ ಶಿಕ್ಷೆ.—ಕಳೆದ ಅಕ್ಟೋಬರ ೨೬ರಂದು ರಾತ್ರಿ, ಕಂಕನಾಡಿಯಲ್ಲಿ ಜೋನ್ ರೊಡ್ರಿಗಸ್ ಎಂಬಾತನನ್ನು ನಿವೃತ್ತ ರೇಂಜರ್ ಪಿಯಾದಾದ ಮಿರಾಂಡ ಎಂಬವನು ತಿವಿದು ಕೊಂದನೆಂಬ ಆರೋಪಣೆಯ ವಿಚಾರಣೆ ಜಿಲ್ಲಾ ಸೆಶನ್ಸ್ ಜಡ್ಜರಾದ ಶ್ರೀ ಕೆ. ಎಸ್. ಗೋಪಾಲನ್‌ರವರ ಮುಂದೆ ನಡೆದು, ಜಡ್ಜರು ಕಳೆದ ೨೬ರಲ್ಲು ತೀರ್ಪು ಕೊಟ್ಟರು. ಅಸೌಖ್ಯದ ನಿಮಿತ್ತ ೧೯೩೮ರಲ್ಲಿ ನಿವೃತ್ತನಾಗಿದ್ದ ಆಪಾದಿತನನ್ನು ಆ ಬಳಿಕ ಸಂಸಾರಿಕ ಕಲಹದಿಂದಾಗಿ ಹೆಂಡತಿಯೂ ಬಿಟ್ಟಳೆಂದೂ, ಆ ನಂತರ ಆಪಾದಿತನು ಫ್ಲೋರಿನ್ ಕ್ರಾಸ್ತ ಎಂಬಾಕೆಯೊಡನೆ ಇರುತ್ತಿದ್ದನೆಂದೂ, ಅಪರಾಧ ನಡೆದಂದು, ಆಪಾದಿತನು ಆಕೆಯ ಮನೆಗೆ ರಾತ್ರಿ ಹೋದಾಗ, ಬಾಗಿಲು ಮುಚ್ಚಿರಲು, ಅದನ್ನು ಒಡೆದು ತೆರೆಯಲು ಮೃತನು ಇದಿರಾದನೆಂದೂ, ಆಪಾದಿತನು ಈ ಸಂದರ್ಭದಲ್ಲಿ ಚೂರಿಯಿಂದ ತಿವಿದುದರ ಪರಿಣಾಮವಾಗಿ, ಮೃತನು ಎರಡು ದಿನಗಳ ಅನಂತರ ಆಸ್ಪತ್ರೆಯಲ್ಲಿ ತೀರಿಕೊಂಡನೆಂದೂ ಹೇಳಲಾಗಿದೆ. ಆಪಾದಿತನು ಆತ್ಮ ರಕ್ಷಣೆಗಾಗಿ ತಾನು ತಿವಿದೆನೆಂದು ವಾದಿಸಿದನು. ಜೂರರಲ್ಲಿ ಮೂವರು ಆಪಾದಿತ ನಿರಪರಾಧಿ ಎಂದರೂ, ಜಡ್ಜರು ಒಪ್ಪದೆ, ಆಪಾದಿತ ಅಪರಾಧಿ ಎಂದು ತೀರ್ಮಾನಿಸಿ, ಜೀವಾವಧಿ ಸಜೆ ವಿಧಿಸಿದರು.

ಪ್ರೆಸ್ ಕೆಲಸಗಾರರ ಯೂನಿಯನಿನ ಸಭೆ:—ಸೌತ್ ಕೆನರಾ ಪ್ರೆಸ್ ವರ್ಕರ್ಸ್ ಯೂನಿಯನಿನ ಆರು ತಿಂಗಳ ಮಹಾಸಭೆಯು ಇದೇ ತಾ. 8-3-1941ನೇ ಶನಿವಾರ ಸಂಜೆ ಗಂಟೆ 5-30ಕ್ಕೆ ಸದ್ರಿ ಯೂನಿಯನ್ ಕಾರ್ಯಾಲಯದಲ್ಲಿ ಜರಗಲಿರುವುದೆಂದು ಕಾರ್ಯದರ್ಶಿಯವರು ತಿಳಿಸುತ್ತಾರೆ.

ಬರ್ಮಾಶೆಲ್ ಫಿಲ್ಮುಗಳ ಪ್ರದರ್ಶನ—ಸ್ಥಳೀಕ ಬರ್ಮಾಶೆಲ್ ಏಜಂಟರಾದ ಶ್ರೀ. ಎಂ. ಪದ್ಮನಾಭ ಪೈ ಎಂಡ್ ಕೋರವರೂ ಸ್ಥಳೀಯ ಬರ್ಮಾಶೆಲ್ ಡೀಲರುಗಳಾದ 'ದಿ ಕೆನರಾ ಸೇಲ್ಸ್ ಕಾರ್ಪೋರೇಶನ್ ಲಿಮಿಟೆಡ್'ನವರೂ, ಮೆಸರ್ಸ್ ಬರ್ಮಾಶೆಲ್ ಆಯಿಲ್ ಸ್ಟೋರೇಜ್ ಎಂಡ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ ಆಫ್ ಇಂಡಿಯಾ ಲಿಮಿಟೆಡ್' ಇವರೊಡನೆ ಕೂಡಿ ಸ್ಥಳೀಕ "ನ್ಯೂಚಿತ್ರಾ ಟಾಕೀಸ್" ಮಂದಿರದಲ್ಲಿ ತಾ. ೨ನೆಯ ಆದಿತ್ಯವಾರ ಸ್ಪೆಶಲ್ ಫಿಲ್ಮ್ ಪ್ರದರ್ಶನವನ್ನು ಮಾಡಿದರು. ಈ ಪ್ರದರ್ಶನಕ್ಕೆ ಅನೇಕ ಮಂದಿ ಮಹನೀಯರು ಆಗಮಿಸಿದ್ದರು.

ಮೋಟರು ವಾಹನಗಳ ಬೇರೆ ಬೇರೆ ವಿಭಾಗಗಳು, ಅವುಗಳಲ್ಲಿ ಯಂತ್ರದ ಎಣ್ಣೆಯು ಮಾಡತಕ್ಕ ಅದ್ಭುತಕಾರ್ಯ ಇವೇ ಮೊದಲಾದ ಔದ್ಯೋಗಿಕ ಪ್ರಪಂಚದ ವಿವರಗಳನ್ನೂ ಇದರಲ್ಲಿ ಮನೋರಂಜಕವಾಗಿ ಪ್ರದರ್ಶಿಸಲಾಗಿದೆ. ಈ ತರದ ಫಿಲ್ಮ್‌ಗಳ ಪ್ರದರ್ಶನದಿಂದ ಜನತೆಗೆ ಔದ್ಯೋಗಿಕ ವಿಷಯಜ್ಞಾನವು ಆಗುವುದರಿಂದ ಇಂತಹ ಕಾರ್ಯವು ಸ್ತುತ್ಯವಾಗಿದೆ.

ಯಕ್ಷಗಾನ:—ಇದೇ ತಾ ೩ರಲ್ಲಿ ಗ. ಹಾ. ಟ್ರೈನಿಂಗ್ ಶಾಲೆಯಲ್ಲಿ ಅಲ್ಲಿಯ ಸುಪ್ರಸಿದ್ಧ ಹಾಡುಗಾರರಾದ ಶ್ರೀ. ಸ್ಕಂದಪ್ಪ ರೈಗಳ ಹಾಡುವಿಕೆಯಿಂದಲೂ ದಯಾನಂದ ರಾಯರ ಮೃದಂಗವಾದನದಿಂದಲೂ, ನಾರಾಯಣ ಕಿಲ್ಲೆ, ಎಡ್ವೋಕೇಟ್ ಬಾಲಕೃಷ್ಣರಾವ್, ಸುಬ್ರಾಯ ಆಚಾರ್, ವಿದ್ವಾನ್ ಎಂ. ಆರ್. ಶಾಸ್ತ್ರಿಗಳಿಂದಲೂ ಕೂಡಿದ ಯಕ್ಷಗಾನ ಕೂಟವು ಜರಗಿತು. ನೂರಾರು ಜನರು ನೆರೆದಿದ್ದರು. 'ವಾಲಿ ಸಂಹಾರ'ವೆಂಬ ಕಥಾಭಾಗವನ್ನು ಜನರ ಮನಮೆಚ್ಚುವಂತೆ ಯಶಸ್ವಿಯಾಗಿ ಕೊನೆಗಾಣಿಸಿದರು.

ಸತ್ಯಾಗ್ರಹಿಗಳಿಗೆ ಶಿಕ್ಷೆ

ಶ್ರೀ ಕುಳಾಯಿ ಮೋಗಿನ ಮನೆ ಪದ್ಮನಾಭ ಆಳ್ವರು ತಾ ೨೭-೩-೪೧ರಲ್ಲಿ ಕನ್ನಾಡಿಲ್ಲಿ ಸತ್ಯಾಗ್ರಹ ಮಾಡಿದವರಿಗೆ ಡಿ. ಕಲೆಕ್ಟರರವರು ೩ ತಿಂಗಳ ಸಾದಾ ಸಜೆ ವಿಧಿಸಿ 'ಸಿ' ಕ್ಲಾಸಿನಲ್ಲಿರಿಸಿದ್ದಾಗಿ ವಾರ್ತೆ.

ಕೊಂಚಾಡಿ:—ಶ್ರೀ ರಾಮಾಶ್ರಮ ಹಾಯರ್ ಎಲಿಮೆಂಟರಿ ಶಾಲೆಯ ವರ್ಷಾಂತ್ಯೋತ್ಸವವು ತಾ. ೧೬ನೇ ಆದಿತ್ಯವಾರ ಅಪರಾಹ್ನ ಘಂಟೆ ೫ಕ್ಕೆ ಮಂಗಳೂರು ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ. ಹೊಸಬೆಟ್ಟು ರಾಮರಾವ್. ಏಂ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಶ್ರೀ ರಾಮಾಶ್ರಮ ಸೇವಾಸಂಘದ ವರ್ಷಾಂತ್ಯೋತ್ಸವವು ತಾ. ೧೫ನೇ ಶನಿವಾರ ಅಪರಾಹ್ನ ಘಂಟೆ ೫-೩೦ಕ್ಕೆ ಜರಗುವುದು ಎಂದು ಸಂಬಂಧಿಸಿದವರು ಹೇಳುತ್ತಾರೆ.

ಕಾರ್ಕಳ

ವರ್ಧಂತಿ ಉತ್ಸವ:—ಕಾರ್ಕಳ ಬೋರ್ಡ್ ಹೈಸ್ಕೂಲಿನ ವರ್ಧಂತಿ ಉತ್ಸವವು ಜಿಲ್ಲಾ ಮುನ್ಸೀಫ ಶ್ರೀ. ವಿ. ಪೋಲಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನೆರೆಯಿತು.

7 o'clock

7 ಓ'ಕ್ಲೋಕ್

ಮನ್ನಣೆ ಪಡೆದ ರೇಜರ್ ಸೆಟ್

7 ಓ'ಕ್ಲೋಕ್ ಸೆಟ್ಟಿನ ಕ್ರಯವು ಹೇಗೆ ಕಡಿಮೆಯೋ ಅದರಿಂದ ಮಾಡಿದ ಕ್ಷೌರವು ಅದಕ್ಕಿಂತಲೂ ಉತ್ತಮ. ಈ 7 ಓ'ಕ್ಲೋಕ್ ಸೆಟ್ಟಿನಲ್ಲಿ ಒಂದು ಅಚ್ಚುಕಟ್ಟಾದ ರೇಜರು ಒಂದು ಪೆಟ್ಟಿಗೆಯಲ್ಲಿ ಎರಡು ಹೆಸರಿಂತ ನಡುವೆ ಸಿಗಿಯಲ್ಪಟ್ಟು ಇಕ್ಕೆಗಳಲ್ಲಿಯೂ ಹರಿತವಿರುವ ಎರಡು 7 ಓ'ಕ್ಲೋಕ್ ಬ್ಲೇಡುಗಳು. ರೇಜರಿಗೆ ಹೊಸ ಮಾದರಿಯ ರಕ್ಷಾ ಕವಚವಿದ್ದು, ಇದರ ಹಿಡಿಯು ಜಾರದಂತೆ ಮಾಡಲ್ಪಟ್ಟಿದೆ. ಸಿಗಿಯಲ್ಪಟ್ಟ ಬ್ಲೇಡುಗಳು ಅತೀ ತ್ವರೆಯಲ್ಲಿ ಅನೇಕ ನುಣುಪಾದ ಸುಖಕ್ಷೌರವನ್ನುಂಟುಮಾಡುವುದು

14 ಆಣೆ.

ಸತ್ಯಾಗ್ರಹಿಗಳನ್ನು ಬಂಧಿಸದೆ ಬಿಡುತ್ತಾರೆ!

ಗಾಂಧಿಜಿ ಅಜಾದರನ್ನು ಕಂಡರು.

ಅಲ್ಲಾಬಾದಿನಲ್ಲಿ ಗಾಂಧಿ-ಸಪ್ರು ಭೇಟಿ

ನೆಹರುಗಳನ್ನು ಡೆಹ್ರಾಡೂನಿನಿಂದ ಒಯ್ದರು!

ಈ ವಾರದ ಭಾರತದ ರಾಜಕೀಯದಲ್ಲಿ ಕೆಲವು ವಿಶೇಷಗಳಿವೆ. ಸತ್ಯಾಗ್ರಹಿಗಳ ವಿಷಯದಲ್ಲಿ ಸರಕಾರವು ಕೈದುಮಾಡದೆ ಬಿಡುವ ಧೋರಣೆಯನ್ನು ವಹಿಸಿದೆ. ಕೆಲವರನ್ನು ಮಾತ್ರ ಬಂಧಿಸಲಾಗುತ್ತದೆ. ಬಂಧಿತರಾಗದ ಸತ್ಯಾಗ್ರಹಿಗಳು ತಮಗೆ ದೊರಕಿತ ವಾಕ್ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಂಡು ನಗರ ಗ್ರಾಮಗಳಲ್ಲಿ ಯುದ್ಧವಿರುದ್ಧ ಘೋಷಣೆಮಾಡುತ್ತಾ ಸಂಚರಿಸುತ್ತಿದ್ದಾರೆ. ಗಾಂಧಿಜಿಯವರು ಕಮಲಾ ನೆಹರು ಸ್ಮಾರಕ ವೈದ್ಯಾಲಯದ ಉದ್ಘಾಟನೆಗಾಗಿ ಅಲಹಾಬಾದಿಗೆ ಬಂದರು. ಸರ್. ಸಪ್ರುಗಳನ್ನು ಕಂಡರು. ಸೆರೆಮನೆಗೆ ಹೋಗಿ ಅಜಾದರನ್ನೂ, ವಿಜಯಲಕ್ಷ್ಮಿ ಪಂಡಿತರನ್ನೂ, ಭೇಟಿಯಾದರು. ಕೇಂದ್ರ ಅಸೆಂಬ್ಲಿಯ ಬಜೇಟಿನಲ್ಲಿ ಬಂದ ನ್ಯೂನತೆಗಳ ಸಲುವಾಗಿ ಹಲವು ವಿಧದ ಹೊಸ ತೆರಿಗೆಗಳು ಹೆಚ್ಚಿಸಲಾಗುವುದೆಂದು ತಿಳಿದಿದೆ. ಯುದ್ಧವಿರುದ್ಧ ಸುದ್ಧಿಗಳನ್ನು ಕೊಡದಿದ್ದರೆ ಪತ್ರಿಕಾ ಸ್ವಾತಂತ್ರ್ಯಕ್ಕೆ ಅಡ್ಡಿ ಬರುವುದಿಲ್ಲವೆಂದು ಸರಕಾರವು ಪತ್ರಿಕಾಕರ್ತರಿಗೆ ಭರವಸೆ ಕೊಡುತ್ತದೆ! ಕೇಂದ್ರ ಎಸೆಂಬ್ಲಿಯಲ್ಲಿ ಭಾರತೀಯರನ್ನು ಬೆರಗುಗೊಳಿಸುವ ಅಂದಾಜು ಪತ್ರಿಕೆ ಮುಂಡಿಸಲಾಗಿದೆ!

ದಿವಾಕರ ಮತ್ತು ಬೆಳಮಕರ ಸತ್ಯಾಗ್ರಹ

ಸತ್ಯಾಗ್ರಹ ಹೂಡುವ ಮೊದಲೇ ಕೈದು

ಶ್ರೀ ದಿವಾಕರ ರಂಗರಾಯರನ್ನೂ, ಶ್ರೀ ಬೆಳಮಕರ ನಾರಾಯಣ ರಾಯರನ್ನೂ ಅವರು ಸತ್ಯಾಗ್ರಹ ಹೂಡುವ ಮೊದಲೇ ಬಂಧಿಸಿ ಸ್ಥಾನಬದ್ಧತೆಯಲ್ಲಿಟ್ಟಿರುರುವರು

ಸಿಂಧದ ಕಾಂಗ್ರೆಸಿನವರಿಗೆ ಮಹಾತ್ಮರ ಸಂದೇಶ

"ಒಪ್ಪಂದ ಪಾಲಿಸದಿದ್ದರೆ: ಮಂತ್ರಿಮಂಡಳ ಉಳಿಸಿರಿ"

ಅಜಾದ್ ಒಪ್ಪಂದವನ್ನು ಪಾಲಿಸಬೇಕು; ಇಲ್ಲವಾದರೆ, ಸಿಂಧದಲ್ಲಿ ಈಗಿರುವ ಮಂತ್ರಿಮಂಡಳವು ಹೋದ ಮೇಲೆ ಅಲ್ಲಾಭಕ್ಷರು ಮಾಡುವ ಮಂತ್ರಿಮಂಡಳಕ್ಕೆ ಕಾಂಗ್ರೆಸಿನವರು ಸಹಕರಿಸಬೇಕಪ್ಪೆ ಹೀಗೆಂದು ಮಹಾತ್ಮರು ಸಿಂಧದ ಕಾಂಗ್ರೆಸಿನವರಿಗೆ ಸಂದೇಶವಿತ್ತಿರುವರು.

...ವಿಜಯ ಇವರಿಗೆ ...ತ್ಯಾಗ್ರಹ ಮಾಡುವ ಬಯಕೆ

ಗಾಂಧಿಜಿಯವರಿಂದ ಅಪ್ಪಣೆ ದೊರಕಲಿಲ್ಲ

ಗಾಂಧಿಜಿಯವರು ವರ್ಧಾದಿಂದ ಅಲ್ಲಹಾಬಾದಕ್ಕೆ ಹೊರಡುವ ಪೂರ್ವದಲ್ಲಿ ವಿಜಯನಗರದ ಮಹಾರಾಜಕುಮಾರರಾದ ಸರ್ ವಿಜಯಕುಮಾರರು ಗಾಂಧಿಜಿಯವರನ್ನು ಭೆಟ್ಟಿಯಾಗಿ ಸತ್ಯಾಗ್ರಹ ಮಾಡಲು ತಮಗೆ ಅಪ್ಪಣೆ ಕೊಡಬೇಕಾಗಿ ಕೇಳಿಕೊಂಡರು.

ರಾಜಕುಮಾರರ ಸಂಬಂಧಿಕರಿಗೆ ಹಾಗು ಸ್ವತಃ ರಾಜಕುಮಾರರಿಗೆ ಅದು ಮನಸ್ಸಿಗೆ ಬರಲಿಲ್ಲವಾದ್ದರಿಂದ ಹಾಗೂ ಸತ್ಯಾಗ್ರಹ ಪ್ರತಿಜ್ಞೆಗೆ ಸಂಬಂಧಪಟ್ಟ ಎಲ್ಲ ಶರ್ತಗಳನ್ನು ರಾಜಕುಮಾರರು ಪೂರೈಸದಿದ್ದುದರಿಂದ ಗಾಂಧಿಜಿಯವರು ಸತ್ಯಾಗ್ರಹ ಮಾಡಲಿಕ್ಕೆ ಅವರಿಗೆ ಅಪ್ಪಣೆ ಕೊಡಲಿಲ್ಲ.

ನೆಹರುಗಳನ್ನು ಸ್ಥಳಾಂತರ ಮಾಡಿದರು

ಡೆಹ್ರಾಡೂನಿನಿಂದ ಅಲ್ಲಾಬಾದಿಗೆ?

ಪಂಡಿತ ನೆಹರುಗಳನ್ನು ಡೆಹ್ರಾಡೂನಿನಿಂದ ತಾ. ೨೪ರಂದು ಬೇರೆ ಕಡೆ ಕರೆದುಕೊಂಡು ಹೋದರು. ಅಲ್ಲಾಬಾದಿಗೆ ಕಳುಹಿಸುವರೆಂದು ಸುದ್ದಿ.

ಗಾಂಧಿ-ಸಪ್ರು ಭೇಟಿ

ಒಂದು ತಾಸು ಚರ್ಚೆ

ಮಹಾತ್ಮಾ ಗಾಂಧಿಯವರು ಅಲ್ಲಾಬಾದಿಗೆ ಬಂದವರು ಸರ್ ತೇಜಬಹದ್ದೂರ್ ಸಪ್ರುಗಳ ಮನೆಗೆ ಹೋಗಿ ಅವರೊಡನೆ ಮಾತನಾಡಿದರೆಂದು ತಿಳಿದಿದೆ. ಅವರು ಸದ್ಯದ ರಾಜಕೀಯ ಪರಿಸ್ಥಿತಿಯ ಕುರಿತು ಮಾತುಕತೆ ನಡೆಸಿದರಂತೆ. ಮಾತುಕತೆಯ ಕಾಲದಲ್ಲಿ ಸರ್ ಜಗದೀಶ ಪ್ರಸಾದರೂ ಹಾಜರಿದ್ದರು. ಸಪ್ರುಗಳು ಆರೋಗ್ಯದಿಂದಿಲ್ಲವಾಗಿ ಅವರು ಆನಂದ ಭವನಕ್ಕೆ ಹೋಗಲಿಲ್ಲ. ಮಾಲವೀಯರನ್ನು ಗಾಂಧಿಜಿಯವರು ಕಂಡು ಮಾತನಾಡಿದರು.

ಭಾರತೀಯರನ್ನು ಬೆರಗುಗೊಳಿಸುವ ಅಂದಾಜುಪತ್ರಿಕೆ

೨೦ ಕೋಟಿ ರೂ. ಸಾಕಾಗಲಿಲ್ಲ!

ಯುದ್ಧಕ್ಕೆ ೮೪ ಕೋಟಿ ರೂ. ವೆಚ್ಚ! ರೇಶ್ಮೆ, ಬೆಂಕಿಪೆಟ್ಟಿಗೆ, ಟಯರುಗಳ ಮೇಲೆ ತೆರಿಗೆ.

ಹೆಚ್ಚಿನ ಲಾಭ ಮತ್ತು ಆದಾಯ ತೆರಿಗೆಗಳೂ ಹೆಚ್ಚಾದವು.

ಕೇಂದ್ರ ಸರಕಾರದ ಆರ್ಥಿಕ ಸಚಿವರಾದ ಸರ್ ರೀಜಮನ್ನರು ಕೇಂದ್ರ ಎಸೆಂಬ್ಲಿಯಲ್ಲಿ ಅಂದಾಜು ಪತ್ರಿಕೆ (ಬಜೆಟ್) ಯನ್ನು ಮಂಡಿಸುತ್ತ ೧೯೪೦-೪೧ರಲ್ಲಿ ೮೪೨ ಲಕ್ಷ ರೂ. ಮತ್ತು ೧೯೪೧-೪೨ರಲ್ಲಿ ೨೦೪೬ ಲಕ್ಷ ರೂಪಾಯಿ ಕೊರತೆಯಾಗುವುದೆಂದು ಹೇಳಿದರು.

ಯುದ್ಧದ ಸಲುವಾಗಿ ಈ ವರ್ಷ ೫೪ ಕೋಟಿ ರೂ. ಮತ್ತು ಬರುವ ವರ್ಷ ೮೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುವುದೆಂದರು.

ಮತ್ತೆ ಬೆಂಕಿಪೆಟ್ಟಿಗೆಯ ಮೇಲೆ ಎರಡರಷ್ಟು ಅಬಕಾರ ತೆರಿಗೆ ಹೊರಿಸಲಾಗುವುದೆಂದೂ, ಇದರಿಂದ ೧೫೦ ಲಕ್ಷ ರೂ. ಉತ್ಪನ್ನವಾಗುವುದೆಂದೂ, ಕೃತಕ ರೇಶ್ಮೆಯ ಮೇಲೆ ಕರ ಹೇರಿಸಲಾಗುವುದೆಂದೂ ಇದರಿಂದ ೩೬ ಲಕ್ಷ ರೂ. ಉತ್ಪನ್ನವಾಗುವುದೆಂದೂ, ಟಾಯರು ಮತ್ತು ಟ್ಯೂಬುಗಳ ಮೇಲೆ ಸೇಕಡಾ ೧೦ರಷ್ಟು ಕರ ಹೇರಲಾಗುವುದೆಂದೂ ಇದರಿಂದ ೩೫ ಲಕ್ಷ ರೂ. ಉತ್ಪನ್ನವಾಗುವುದೆಂದೂ ಮಾತ್ರವಲ್ಲದೆ ಉತ್ಪನ್ನವಾದ ಮೇಲೆ ಮತ್ತು ಆದಾಯದ ಮೇಲೆ ತೆರಿಗೆ ಹೆಚ್ಚಿಸಲಾಗುವುದೆಂದೂ ಹೇಳಿದರು.

ಕಮಲಾ ನೆಹರು ಸ್ಮಾರಕ ವೈದ್ಯಾಲಯವು ಮಹಾತ್ಮರಿಂದ ತೆರೆಯಲ್ಪಟ್ಟಿತು.

ಕಮಲಾ ನೆಹರು ಸ್ಮಾರಕ ವೈದ್ಯಾಲಯದ ಉದ್ಘಾಟನೆಯ ಸಲುವಾಗಿ ಮಹಾತ್ಮರು ಅಲ್ಲಹಾಬಾದಿಗೆ ... ತಾ. ೨೪ರಂದು ಅದರ ... ಸಮಾರಂಭವನ್ನು ನೆರವೇರಿ... ಅಲ್ಲಿ ಮಹಾತ್ಮರು ಹರಿಜನ ...ಯವನ್ನು ಸಂದರ್ಶಿಸಿದರು.

ಕೆಂಪಂಗಿಗಳಿಗೆ ಶಿಕ್ಷಣಶಿಬಿರ

ತಮ್ಮ ಅನುಯಾಯಿಗಳಾದ ಕೆಂಪಂಗಿಗಳನ್ನು ಆದರ್ಶ ಸತ್ಯಾಗ್ರಹಿಗಳಾಗಿ ಮಾಡುವರೆ ಗಜನಾದಿನಲ್ಲಿ ಅಬ್ದುಲ್ ಗಫರ್ ಖಾನರು ಒಂದು ಶಿಕ್ಷಣಶಿಬಿರವನ್ನು ತೆರೆಯುವರು.

ಗಾಂಧಿಜಿಯವರು ಅಜಾದರನ್ನು ಕಂಡರು, ಸೆರೆಮನೆಯಲ್ಲಿ.

ವಿಜಯಲಕ್ಷ್ಮಿ ಪಂಡಿತರೂ ಇದ್ದರು

ಅಲ್ಲಹಾಬಾದಿಗೆ ತೆರಳಿದ ಗಾಂಧಿಜಿ ನೈನಿ ಕೇಂದ್ರ ಸೆರೆಮನೆಯಲ್ಲಿರುವ ಮೌಲಾನಾ ಅಬುಲ್ ಕಲಂ ಅಜಾದರನ್ನೂ ವಿಜಯಲಕ್ಷ್ಮಿ ಪಂಡಿತರನ್ನೂ ಕಂಡು ಮಾತನಾಡಿದರು. ಡಾ. ರಾಜೇಂದ್ರ ಪ್ರಸಾದರನ್ನೂ ಕಂಡರು.

ವೈಸರಾಯರ ಸಭೆಯಲ್ಲಿ ಆಶ್ರಿತ ರಾಜರಿಗೆ ಮನ್ನಣೆಯಿಲ್ಲವೆ?

ಗವರ್ನರರಿಗಿಂತ ಗೌರವಬೇಕು

ಆಶ್ರಿತ ರಾಜರ ಮಂಡಳದ ಚರ್ಚೆ

ಹೊಸ ದಿಲ್ಲಿಯಲ್ಲಿ ಸೇರಿದ ಆಶ್ರಿತ ರಾಜರ ಮಂಡಳದ ಸಭೆಯಲ್ಲಿ ಮುಖ್ಯವಾಗಿ ವೈಸರಾಯರ ಸಭೆಯಲ್ಲಿ ಆಶ್ರಿತ ರಾಜರಿಗೆ ಹಾಗೂ ದಿವಾನರಿಗೆ ಸಿಗುವ ಮನ್ನಣೆಯ ಕುರಿತು ಚರ್ಚೆಯಾಯಿತು. ಸಂಸ್ಥಾನಗಳ ಗವರ್ನರರಿಗಿಂತ ಹೆಚ್ಚಿನ ಗೌರವವು ತಮಗೆ ಕೊಡತಕ್ಕದ್ದು ಎಂದು ಅವರ ಕೇಳಿಕೆಯಾಗಿರುತ್ತದೆ.

ಪತ್ರಿಕೆಗಳು ಮತ್ತು ಡೆಲ್ಲಿ ಒಪ್ಪಂದ

ಈ ಬಗ್ಗೆ ಇಂಡಿಯಾ ಸರಕಾರದ ವರ್ತನೆಯ ವಿವರ

ಇಂಡಿಯಾ ಸರಕಾರದ ಎಡಿಷನಲ್ ಸೆಕ್ರೆಟರಿ ಸರ್ ರಿಚರ್ಡ್ ಟ್ಯಾಟನ್ ಹ್ಯಾಮರು ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನದ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆದು ಪತ್ರಿಕೆಗಳ ಬಗ್ಗೆ ಸರಕಾರದ ನೀತಿಯನ್ನು ಕುರಿತು ಈ ರೀತಿ ತಿಳಿಸುತ್ತಾರೆ:–

ವರ್ತಮಾನಗಳನ್ನು ಪ್ರಕಟಿಸುವ ವಿಚಾರದಲ್ಲಿ ಪತ್ರಿಕೆಗಳಿಗೆ ನ್ಯಾಯವಾಗಿರಬೇಕಾದ ಸ್ವಾತಂತ್ರ್ಯವು ಅವಶ್ಯಕವೆಂದು ಇಂಡಿಯಾ ಸರಕಾರ... ಒಪ್ಪುತ್ತಾರೆ. ಪತ್ರಿ... ತಮ್ಮ ಕರ್ತವ್ಯವನ್ನು ಪಾಲಿ... ಈ ಸ್ವಾತಂತ್ರ್ಯವು ... ಡೆಲ್ಲಿ ಸಮ್ಮೇಳನದ ಅಗತ್ಯವನ್ನು ಸರಕಾರದವರು ... ಒಪ್ಪಂದ ಪಾಲಿಸುವರು. ಆದರೆ ಆ ಒಪ್ಪಂದದಂತೆ ... ಯುದ್ಧ ಸಹಾಯ... ಪತ್ರಿಕೆಗಳ ಬಂಧಕವಾಗ... ಸಿದ್ಧತೆಗಳ ... ಯಾವ ... ಅಭಿಪ್ರಾಯವನ್ನು ಪ್ರಕಟಿಸಕೂಡದು. ಯುದ್ಧ ಯಥುರುದ್ಧ ಚಳವಳಿಗೇಗೆ ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ಸಹಾಯವಾಗುವಂತೆ ಪತ್ರಿಕೆಗಳವರು ವರ್ತಿಸಕೂಡದು. ಈ ಸಂಬಂಧವಾದ ಪ್ರಕಟನೆ ಕಾರ್ಯದಲ್ಲಿ ಪತ್ರಿಕೆಗಳು ಕಾಯಿದೆಬದ್ಧವಾಗಿ ವರ್ತಿಸಬೇಕು. ಪತ್ರಿಕೆಗಳವರು ಈ ರೀತಿ ನಡೆದರೆ ಸರಕಾರಕ್ಕೂ ಪತ್ರಿಕೆಗಳಿಗೂ ಇರತಕ್ಕ ಸೌಹಾರ್ದತೆಯನ್ನು ಪಾಲಿಸಿಕೊಂಡು ಬರಲಾಗುವುದು. ಡೆಲ್ಲಿ ಒಪ್ಪಂದದಂತೆ ನಡೆದುಕೊಳ್ಳಲಾಗುವುದು.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

O. S. No 423/1940.

ವೆಂಕಟೇಶ ಉಪಾಧ್ಯಾಯ— ವಾದಿ

ಮತ್ತು

ಶ್ರೀನಿವಾಸ ಜಿಜತ್ತಾಯ ಕೂಡಾ ಪ್ರತಿವಾದಿಗಳು

ಮಂಗಳೂರು ತಾಲೂಕು ಕೊಂಚಾಡಿ ಗ್ರಾಮದ ಕಟೀಲಿನಲ್ಲಿರುವ ಮುಖ್ಯಪ್ರಾಣಿತ್ತಾಯರ ವಿಧವೆ 2ನೇ ಪ್ರತಿವಾದಿ ಭೂಮಯಮ್ಮನವರಿಗೆ ತಿಳಿಯಪಡಿಸುವುದೇನೆಂದರೆ,–

ತಾ. 26–7–1929ರಲ್ಲು ನೀವು ಮತ್ತು ಬಾಕಿ ಪ್ರತಿವಾದಿರು ಕೂಡಾ ವಾದಿಗೆ ಬರಕೊಟ್ಟ ಅಡವು ದಸ್ತಾವೇಜಿನ ಪ್ರಕಾರ ಬರತಕ್ಕ ಅಸಲು ಬಡ್ಡಿ ಸ್ಯಾವಜಿಗೆ ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಿದ ದಾವೆಯು ತಾರೀಕು 29—3—1941ಕ್ಕೆ ತನಿಖೆ ಬಗ್ಗೆ ಇಟ್ಟಿರುತ್ತದೆ. ಆದ್ದರಿಂದ ನೀವು ಸದ್ರಿ ದಿವಸ ಸ್ವತಹವಾಗಲೀ ವಕೀಲರ ಮುಖಾಂತರವಾಗಲೀ ಕೋರ್ಟು ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದ್ರಿ ವ್ಯಾಜ್ಯವು ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನವಾಗುವುದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

ಮಂಗಳೂರು, 6-3-1941. B. V. Krishnaya, Advocate for Plaintiff.

ಹಿಟ್ಲರನ ಸೈನ್ಯ ಬಲ್ಗೇರಿಯವನ್ನು ನುಗ್ಗಿತು!

ಯುಗೊಸ್ಲವಿಯದ ಮೇಲೆ ದೃಷ್ಟಿಯೇ?

ಗ್ರೀಸು ನಾಜಿ ಆಕ್ರಮಣವನ್ನು ನೋಡುವುದೆ?

ಯೂರೋಪಿನ ರಾಜಕೀಯದಲ್ಲಿ ಗೊಂದಲ!

ಯೂರೋಪಿನ ರಾಜಕಾರಣದಲ್ಲಿ ಅತ್ಯಂತ ತೀವ್ರವಾದ ಮಾರ್ಪಾಟುಗಳು ಆಗಿವೆ. ಬಲ್ಗೇರಿಯವು ಜರ್ಮನ್ ಸ್ವಾಧೀನವಾಗಿದೆ. ಹಿಟ್ಲರನು ಬಾಲ್ಕನಿನಲ್ಲಿ ಹೆಚ್ಚಿನ ಚಟುವಟಿಕೆಯಲ್ಲಿದ್ದಾನೆ. ಮುಂದೆ ಗ್ರೀಸು ಟರ್ಕಿ ಯುಗೊಸ್ಲವಿಯಗಳ ಮೇಲೆ ಅವನ ದೃಷ್ಟಿ ಇದೆಯೆಂದು ಸುದ್ದಿ. ಬಾಲ್ಕನು ರಣಕ್ಷೇತ್ರವಾಗುವ ಸಂಭವವಿದೆ. ಜಪಾನು ಇಂಡೋಚೈನ ಸಯಾಮ್ ರಾಜಿಯಲ್ಲಿದೆ. ಯೂರೋಪಿನಲ್ಲಿ ಬಹಳ ಪ್ರಚಂಡವಾದ ಕಾರ್ಯಕಲಾಪಗಳು ನಡೆಯುತ್ತಿವೆ

ಹಿಟ್ಲರ್ ಜಪಾನ್ ರಾಯಭಾರಿ ಯೊಡನೆ ... ಭೇಟಿ

ಜಪಾನಿನ ರಾಯಭಾರಿ ಜನರಲ್ ಓಶಿಮಾ ಇವರನ್ನು ಹಿಟ್ಲರನು ಬರಮಾಡಿಕೊಂಡು ಭೇಟಿಯಿತ್ತಿರುವನೆಂದೂ ಅವರ ಮಾತುಕತೆಯ ಕಾಲದಲ್ಲಿ ರಿಬನ್‌ಟ್ರಾಪನೂ ಹಾಜರಿದ್ದನೆಂದೂ ತಿಳಿದು ಬರುತ್ತದೆ.

ಬ್ರಿಟನು ಟರ್ಕಿಗಳ ... ಒಪ್ಪಂದ

ಬ್ರಿಟನ್ ಮತ್ತು ಟರ್ಕಿಗಳ ನಡುವೆ ಒಪ್ಪಂದವಾಯಿತೆಂದೂ, ಈಡನನು ಟರ್ಕಿಯ ಅಧ್ಯಕ್ಷ ಇನ್ನೋನನೊಡನೆ ಮಾತುಕತೆ ನಡೆಸಿದರೆಂದೂ, ಬಳಿಕ ಅವರು ಪತ್ರಿಕೋದ್ಯೋಗಿಗಳನ್ನು ಕಂಡಾಗ, ಟರ್ಕಿಯ ಜನರು ಬ್ರಿಟಿಷರ ಬಗ್ಗೆ ಸ್ನೇಹದಿಂದಿರುವರೆಂದು ಹೇಳಿದರಾಗಿ ತಿಳಿಯುತ್ತದೆ

ಜಪಾನಿನ ಸೂಚನೆಗೆ ಪಿಟೇನರ ಒಪ್ಪಿಗೆ?

ಜಪಾನನು ಇಂಡೋಚೈನಕ್ಕೆ ಕೊಟ್ಟ ಸೂಚನೆಗೆ ಉತ್ತರ ಬಂದಿಲ್ಲವಾದರೂ ಪಿಟೇನ್ ಸರಕಾರವು ಒಪ್ಪಿಗೆಯಿಂದಿರುವುದೆಂದೂ ತಿಳಿದಿದೆ. ಆದರೆ ಜಪಾನರು ಮಾತ್ರ ಚಟುವಟಿಕೆ ಸಲ್ಲಿಸದೆ ಧಾಳಿ ಮುಂದುವರಿಸುವರೆಂದು ಸುದ್ದಿ.

ಬಲ್ಗೇರಿಯವು ಜರ್ಮನಿಯೊಡನೆ ಒಪ್ಪಂದಮಾಡಿತು

ಬಲ್ಗೇರಿಯವು ತ್ರಿರಾಷ್ಟ್ರ ಒಪ್ಪಂದಕ್ಕೆ ರುಜುಹಾಕಿರುವುದು. ರುಮೇನಿಯಾ, ಹಂಗೇರಿ, ಯುಗೊಸ್ಲೋವಿಯಗಳಂತೆ ಬಲ್ಗೇರಿಯವೂ ಒಪ್ಪಂದ ಶರ್ತಗಳಿಗೆ ಅನುಮತಿಸಿದೆ.

ಇಂಡೋಚೀನ ಜಗಳದಲ್ಲಿ ಹಿಟ್ಲರನ ಮಧ್ಯಸ್ಥಿಕೆಯೇ?

ಸಯಾಮಿನ ಸಂಧಾನದಲ್ಲಿ ತಾನು ಮಾಡಿದ ಸೂಚನೆಗಳನ್ನು ಸ್ವೀಕರಿಸಲೇಬೇಕೆಂದು ಜಪಾನು ಇಂಡೋಚೈನಕ್ಕೆ ಎಚ್ಚರಿಕೆ ಕೊಟ್ಟಿರುವುದಷ್ಟೆ? ಆದರೆ ಇವುಗಳಲ್ಲಿ ಜರ್ಮನಿಯು ಮುಂದೆ ಬಂದು ಮಧ್ಯಸ್ಥಿಕೆ ನಡೆಸುವುದಾಗಿ ಸುದ್ದಿಯಿದೆ. ಜರ್ಮನ್ ರಾಯಭಾರಿಯು ಜಪಾನು ವಿದೇಶಮಂತ್ರಿಯನ್ನು ಕಂಡು ಈ ಕುರಿತು ಮಾತುಕತೆ ನಡೆಸಿದನಾಗಿ ತಿಳಿದುಬರುತ್ತದೆ.

ಜರ್ಮನಿಯು ಯುಗೊಸ್ಲೋವಿಯವನ್ನು ಮುತ್ತುವುದೆ?

ಬಲ್ಗೇರಿಯದೊಡನೆ ಒಪ್ಪಂದಮಾಡಿದ ಕೂಡಲೆ ಜರ್ಮನಿಯ ದೃಷ್ಟಿ ಈಗ ಯುಗಸ್ಲೇವಿಯದ ಕಡೆಗೆ ತಿರುಗಿದಂತಿದೆ. 'ಈ ರಾಷ್ಟ್ರವೂ ಜರ್ಮನಿಯೊಡನೆ ಸಹಕರಿಸುವಂತೆ ಮಾಡಬೇಕೆಂದು ಜರ್ಮನ ಪತ್ರಿಕೆಗಳು ಸಾರುತ್ತಿವೆ.

ಜರ್ಮನ್ ಸೈನ್ಯಗಳು ಬಲ್ಗೇರಿಯವನ್ನು ಪ್ರವೇಶಿಸಿತು

ಜರ್ಮನ್ ಸೈನ್ಯವು ಬಲ್ಗೇರಿಯದ ಸಂರಕ್ಷಣೆಯ ಸಲುವಾಗಿ ಬಲ್ಗೇರಿಯಕ್ಕೆ ಮುತ್ತಿಗೆ ಹಾಕಿರುವುದೆಂದು ಜರ್ಮನ್ ಪರರಾಷ್ಟ್ರ ಮಂಡಲ ಕಚೇರಿಯ ಪ್ರಕಟಣೆಯೊಂದು ತಿಳಿಸುತ್ತದೆ. ಬಲ್ಗೇರಿಯವನ್ನು ಬ್ರಿಟಿಷರ ಬಲೆಯಿಂದ ಬಿಡಿಸುವುದು ಜರ್ಮನರ ಉದ್ದೇಶವಂತೆ.

ಲಂಡನಿನ ಬಳಿ ಬಾಂಬಿನ ಮಳೆ

ಬ್ರಿಟನಿನ ಬೇರೆ ಬೇರೆ ಭಾಗಗಳಲ್ಲಿ ಬಾಂಬಿನ ಸುರಿಮಳೆಯಾಗಿರುವುದು. ಹಲವರು ಇದರಿಂದ ನಾಶಹೊಂದಿರುವರು. ಬೇರೆ ಅನಾಹುತಗಳೂ ಆಗಿವೆ.

ಇಟಲಿಯ ಸೋಲಿಗೆ ಕಾರಣ? ಮುಸಲಿನಿ ಹೇಳುತ್ತಾನೆ

ಸ್ಪೈನಿನ ದಂಗೆಯ ಕಾಲದಲ್ಲಿ ಇಟಲಿಯು ಸಹಾಯಮಾಡಿ ಮತ್ತು ಅಬಿಸೀನಿಯ ಕಾಳಗದಲ್ಲಿ ಬಹಳ ಶಸ್ತ್ರಾಸ್ತ್ರಗಳ ವೆಚ್ಚಮಾಡಿದ ಕಾರಣವಾಗಿ ಇಟಲಿಯ ಯುದ್ಧಸಾಮಗ್ರಿಗಳು ಕಡಿಮೆಯಾದುದರಿಂದ ಹೀಗೆ ಸೋಲಾಯಿತು ಎಂದು ಮುಸಲಿನಿ ಪ್ರಕಟಿಸಿದ್ದಾನೆ.

ಟರ್ಕಿಯಲ್ಲಿ ಈಡನರ ಸಂಧಾನ

ಕ್ರಿಪ್ಸರೂ ರಷ್ಯದಿಂದ ಬರುವರು

ಬ್ರಿಟಿಷ ವಿದೇಶ ಮಂತ್ರಿ ಈಡನರು ಟರ್ಕಿಗೆ ತೆರಳಿ ಅಲ್ಲಿನ ಪ್ರಮುಖರನ್ನು ಕಂಡು ಸಂಧಾನದ ಮಾತುಕತೆಗೆ ಆರಂಭಿಸಿದ್ದಾರೆ. ರಷ್ಯದಲ್ಲಿ ಬ್ರಿಟಿಷ ರಾಯಭಾರಿಯಾಗಿರುವ ಕ್ರಿಪ್ಸರೂ ಅಲ್ಲಿಗೆ ಬರುವರೆಂದು ತಿಳಿದಿದೆ. ರಶಿಯಾ, ಯುಗೋಸ್ಲೇವಿಯಾ, ಬಲ್ಗೇರಿಯಾ ರಾಯಭಾರಿಗಳೂ ಟರ್ಕಿಗೆ ಮೊದಲು ಬಂದಿದ್ದರು.

ಇಂಡೋಚೈನ್ಯಕ್ಕೆ ಕೊನೆಯ ಎಚ್ಚರಿಕೆ

ಕರಾರುಗಳಿಗೆ ಒಪ್ಪಲೇಬೇಕು!

ಸಿಂಗಾಪುರದ ಪೂರ್ವದ್ವಾರ ಮುಚ್ಚಲಾಯಿತು!

ಸಯಾಮ್ ಇಂಡೋಚೈನಗಳೊಳಗೆ ಸಂಧಾನವು ಆಗುತ್ತಿರುವ ವಿಷಯದಲ್ಲಿ ಫ್ರೆಂಚ ಸರಕಾರವು ಯಾವುದೇ ರೀತಿಯ ಉತ್ತರವನ್ನೂ ಕೊಡದೆ ಇರುವುದರಿಂದ ಜಪಾನು ಕೊನೆಯ ಎಚ್ಚರಿಕೆಯೊಂದನ್ನು ಕೊಟ್ಟಿರುವುದಾಗಿ ತಿಳಿದಿದೆ.

ಸಯಾಮ್ ಇಂಡೋಚೈನಗಳಲ್ಲಿ ಸಂಧಾನವಾಗಬೇಕೆಂದು ಜಪಾನು ಕೈಹಾಕಿ, ನ್ಯಾಯವಾದ ಕರಾರುಗಳನ್ನು ಮುಂದಿಟ್ಟುದರಿಂದ ಅದನ್ನು ಸಯಾಂ ಇಂಡೋಚೈನಗಳು ಒಪ್ಪಲೇಬೇಕೆಂದು ಜಪಾನು ಅಭಿಪ್ರಾಯಪಡುತ್ತದೆ.

ಸಿಂಗಾಪುರದ ಪೂರ್ವದ್ವಾರದಲ್ಲಿ ತೋಟೆಗಳನ್ನು ಹಾಕಿರುವುದರಿಂದ ಅಲ್ಲಿ ಹಡಗುಗಳು ಸಂಚರಿಸದಂತೆ ಮುಚ್ಚಲಾಗಿದೆ.

ಇಂಗ್ಲೆಂಡಿಗೆ ಧಾಳಿಮಾಡಲು ಹಿಟ್ಲರನ ಪ್ರಚಂಡ ಸಿದ್ಧತೆ

೨೦೦,೦೦೦ ಬ್ರಿಟಿಷ್ ವೇಷಧಾರಿಗಳು; ಅಷ್ಟೇ ವಿಮಾನ ಕೊಡೆಗಳು!

ಇಂಗ್ಲೆಂಡಿನ ಮೇಲೆ ಧಾಳಿಮಾಡಲು ಹಿಟ್ಲರನು ಈಗ ಪ್ರಚಂಡ ಸಿದ್ಧತೆಗಳನ್ನು ಮಾಡಿರುವನು. ೨೦೦,೦೦೦ ಮಂದಿ ಬ್ರಿಟಿಷರಂತೆಯೇ ಉಡುಪು ಧರಿಸಿದವರನ್ನೂ, ವಿಮಾನ ಕೊಡೆಗಳನ್ನೂ ತಯಾರಿಸಿರುವನಂತೆ. ಒಂದೇ ಸಮಯದಲ್ಲಿ ಇವರು ಹಾರಿಬಂದು ಎಸೆದು ಇಂಗ್ಲೆಂಡಿಗೆ ಇಳಿಯುವರು. ಬ್ರಿಟಿಷರ ಉಡುಪಿನಲ್ಲಿಯೇ ಇರುವುದರಿಂದ ವೈರಿಗಳು ಯಾರೆಂದು ಬ್ರಿಟಿಷರಿಗೆ ಬಂದಿಳಿದ ವೇಳೆ ಗುರುತಿಸುವುದು ಸಾಧ್ಯವಾಗಿಲ್ಲ.

ಆಫ್ರಿಕದಲ್ಲಿ ಬ್ರಿಟಿಷರನ್ನು ಜರ್ಮನರು ಎದುರಿಸಿದರು

ಜರ್ಮನ್ ಸೈನ್ಯಗಳು ಈಗ ಆಫ್ರಿಕದಲ್ಲಿ ಮುಂದೊತ್ತುವೆಯಂತೆ. ಅಲ್ಲಿನ ಬ್ರಿಟಿಷಸೈನ್ಯಗಳನ್ನು ಎದುರಿಸುವವೆಂದು ಸುದ್ದಿ.

ಟರ್ಕಿ ಗಡಿನಾಡಿಗೆ ಜರ್ಮನ್ ಸೈನ್ಯಗಳು

ಜರ್ಮನ್ ಸೈನ್ಯಗಳು ಬಲ್ಗೇರಿಯದ ಮುಖ್ಯ ಊರುಗಳಲ್ಲಿ ಹೋಗಿ ಅಲ್ಲಿನ ಆಯಕಟ್ಟಿನ ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡಿರುವುದೆಂದೂ ಜರ್ಮನ್ ಸೈನ್ಯಗಳು ಟರ್ಕಿ ಗಡಿನಾಡಿಗೂ ಹೋಗಿರುವುದರಿಂದ ಹೆಚ್ಚಿನ ಯೋಚನೆಗೆ ಅವಕಾಶವಾಗಿದೆಯೆಂದೂ ತಿಳಿದು ಬರುತ್ತದೆ.

ಜರ್ಮನ್ ದೂತನ ಆಗಮನ

ತಾ. ೩ರಂದು ಅಂಕಾರದ ಇಸ್ತಂಬೂಲಿಗೆ ಒಂದು ವಿಮಾನದಲ್ಲಿ ಒಬ್ಬ ಜರ್ಮನ್ ದೂತನು ಬಂದಿಳಿದನು. ಅವನು ಪ್ರೆಸಿಡೆಂಟ್ ಇನ್ನೋನುರವರನ್ನು ಕಂಡನು.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯೌವನ ಕಲೆ, ಮೊಡವೆ, ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ—

ಕೋಮಲವಾದ ಮಳ



ಮಾನನೀಯ ವ್ಯಾಪಾರಸ್ಥರು

ಮಂಗಳೂರಿನ ಡಿಸ್ಟ್ರಿಬ್ಯೂಟರರು — ದಿ. ಕೊರನೇಷನ್ ಟ್ರೇಡಿಂಗ್ ಕೋ

ಮುಹಮ್ಮದಾಲಿ ರೋಡ್, ಮಂಗಳೂರು.

"...'ಪದ್ಯಮಂಜರಿ'ಯಲ್ಲಿಯ ಎಲ್ಲಾ ಪದಗಳನ್ನೂ ಬಹಳ ಉತ್ಸಾಹದಿಂದ ಓದಿದೆ. ಮಗುವಿನುಲ್ಲಾಸದಿಂದ ಓದಿದೆ. ಆಗ, ನಾನು ಚಿಕ್ಕ ಬಾಲಕನಾಗಿರುತ್ತಿದ್ದರೆ ನನಗಾಗುತ್ತಿದ್ದ ಆಲ್ಹಾದವನ್ನು, ಅನುಭವಿಸಿದ ನನ್ನೆದೆಗೆ ನಾಲಗೆಯಿದ್ದರೆ ಅದೇ ಹೇಳುತ್ತಿತ್ತು. ನಿಜವಾಗಿಯೂ ಕೆಲವು ಹಾಡುಗಳು ಅಷ್ಟು ಹೃದಯಂಗಮವಾಗಿವೆ.

ಮಕ್ಕಳು ನಕ್ಕರೆ ಸ್ವರ್ಗದ ಸವಿ ಸವಿದಂತೆ. ಅವರ ಲೀಲಾವಿನೋದದಲ್ಲಿ ಅಷ್ಟು ಸೊಗಸಿದೆ, ಆನಂದವಿದೆ. ಮಗು ಚೆಲಿದು ನಕ್ಕರೆ "ಹಾಲುಮಳೆಯೊ ಬೆಳದಿಂಗಳೊ ಜೇನೊ? ಅಮೃತವು ಸುರಿವುದು ನಿನ್ನಿಂದೇನೋ?" ಎಂದು ಆಗ ನಾನೇ ಪ್ರಶ್ನೆಹಾಕುತ್ತಿದ್ದೆ. ಮಗುವಿನ ಭಾವನೆಯೋಟ. ಇಷ್ಟು ದೂರವ್ಹೋದಲ್ಲವಾದರೂ, ಆದರ ಅನುಭವದ ಉಲ್ಲಾಸದ ಸೊಗಸು ಅದಕ್ಕಿಂತಲೂ ದೂರದಲ್ಲಿಯನ್ನು ವಿಹರಿಸುವುದು. 'ಚುಟುಕ'ವನ್ನು ಹಾಡಿ ಮನದ ಚಿಂತೆ ಕಳೆವಾಗ ನ್ಯಾಯವಾಗಿ ಆ ಅನುಭವ ಅದಕ್ಕೆ ಬರತಕ್ಕದ್ದೇ. ಕಾಗೆಯನ್ನು ಪದ ಹೇಳಿಸುವ ನರಿಯಣ್ಣನಾಗುವಾಗ ಮಕ್ಕಳ ಚಪಲಕ್ಕೆ ನಾವು ಇಣಿಕಿನೋಡಬೇಕು; ಆಗಿನ ಅವರ ಮುಖನೋಡಬೇಕು. ಬೆಲ್ಲ ಕದ್ದ ಹಲ್ಲು ಮುರಿದಣ್ಣನ ನೆನಪಾಗುವಾಗ, ದುಡ್ಡು ಕದ್ದು ಅಂಗಡಿಗೋಡಿದ ಎಳವೆಯ ಕೃತಿ ನೆನಪಿಗೆ ಬರುತ್ತದೆ. 'ಒಮ್ಮೆಗೆ ಒಂದೇ ಕೆಲಸ'ಕ್ಕೆ ಇನ್ನೂ ಸ್ವಲ್ಪ ಕಳೆಕೊಡಿಸಬಹುದಿತ್ತು ಎಂದು ನನ್ನಭಿಪ್ರಾಯ. ಇಷ್ಟರಲ್ಲಿ 'ನಾದ'ಗಳೇ ಚೆಲು. ಶಬ್ದಗಳ ಓಟದೊಂದಿಗೆ ಓಡಲಾರದಾದರೂ ಮುಗ್ಗರಿಸಿ ಬಿದ್ದದ್ದು ಹಿಂಬಾಲಿಸುವ ಮೋಜು ಅಂದವಾಗಿ ತೋರಬಹುದು ಮಗುವಿಗೆ. 'ಚುಕುಗಳು—ತಿಂಗಳುಗಳು' ಹೀಗೆ ಕಳೆದುಬಂದಂತೆ ಮಗುವು ಬೆಳೆದು

ಪುಸ್ತಕಾವಲೋಕನ:

ಮಕ್ಕಳ ಪದ್ಯಮಂಜರಿ

[ಮಕ್ಕಳ ಪದ್ಯಮಂಜರಿ. ಬರೆದವರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ, ವಿದ್ವಾನ್. ಮೊದಲನೆಯ ಪುಸ್ತಕ—೧, ೨ ಮತ್ತು ೩ನೆಯ ತರಗತಿಗಳ ಶಿಶುಗಳಿಗಾಗಿ, ಕ್ರೌನ್ ೧/೮, ೪೦ ಪುಟಗಳು; ಎರಡನೆಯ ಪುಸ್ತಕ—೪ ಮತ್ತು ೫ನೆಯ ತರಗತಿಗಳ ಬಾಲಕರಿಗಾಗಿ, ಕ್ರೌನ್ ೧/೮, ೪೦ ಪುಟಗಳು. ಹೊಸ ಪಾಠಪಟ್ಟಿಗೆ ಅನುಗುಣವಾಗಿ ಸಂಗ್ರಹಿಸಿದುದು. ಪ್ರಕಾಶಕರು: ಶಾರದಾ ಛಾಪಖಾನೆ ಮಂಗಳೂರು.]

ಬಂದು 'ಇಷ್ಟು ಇದು ಏನು ಗುಣ?' ಎನ್ನುವ 'ಒಗಟು' ಬಿಡಿಸಬಹುದು. ಅದರೊಂದಿಗೆ 'ಭಟ್ಟನು ಕಣ್ಣನ್ನು ತೆರೆಯಿಸಿ ಬಿಡು'ವುದೆಂದರೆ ಪರಮಾನ್ನ. 'ಲೆಕ್ಕ ಕಲಿಯದ ದಡ್ಡ'ರಿಗೆ 'ಆಟದ ಬಯಲು' ರುಚಿಸೀತು! 'ಮಂಗನನ್ನು ಕುಣಿಸುವುದು' ಮುದ್ದು ಮುದ್ದಾಗಿದೆ. ಕುಂಟ ಕುರುಡರ ಕತೆ ಕರುಣಾಜನಕ. 'ಒಬ್ಬರಿಗೊಬ್ಬರು ಸಹಕಾರದ ಮಾತು ನಮ್ಮನ್ನೂ ನವಿರೇಳಿಸುತ್ತದೆ; ತತ್ವವೇ ತುಂಬಿದೆಯೇನೋ ಅನಿಸುತ್ತದೆ. ಈ ಮಧ್ಯೆ ಎಲ್ಲಿಂದ ಬಂತೋ 'ಸುಂಟರ ಗಾಳಿ!' ಆ ಚಿತ್ರ! 'ಬಾನಿನ ಬಯಲಿಂದಿಳಿಯುತ ಬಂತೋ? ಪಾತಾಳದ ಹೊಟ್ಟೆಯೊಳಡಗಿತ್ತೋ? ಕಡಲನು ಕಡೆಯುತಲಿರೆ ಹುಟ್ಟಿತ್ತೋ?' ಎನ್ನುವಾಗ ಹುಡುಗರೂ ಭಯಗೊಳ್ಳಬೇಕು. ಮತ್ತೆ ಅಳತೊಡಗಿದರೆ 'ಕೈಗೆ ಗೊಂಬೆ' ಕೊಟ್ಟರೂ ಕೇಳುವರೋ ತಿಳಿಯಲಾರೆ.

ಎರಡನೆಯ ಪುಸ್ತಕದ 'ಉದಯರಾಗ' ಪಂಜೆಯವರ ಹಾಡನ್ನು ನೆನಪಿಗೆ ತರುತ್ತದೆ. 'ಬಂಗಾರದ ಚೆಲ್ವು ಬಿಸಿಲ ಕಿರೀಟದಿ ಶೃಂಗಾರದ ತಲೆಯೆತ್ತುವನು' ಎಂಬ ಮಾತು ಇಲ್ಲಿಯೂ ನಳನಳಿಸುತ್ತಿದೆ; ಮೊದಲಿನದಕ್ಕಿಂತಲೂ ಚೆಲುವು. ಇದರೊಂದಿಗೆ 'ಕನಸು' ಹಾಸಿಗೆಯಲ್ಲಿ ಹಿಂಗತೆಯ ಮುಸುಕೆತ್ತಿ ಹೆಂಗರುಳ ಬಸಿರು ತಂಪುಗಾಣಬೇಕು ಹೇಗೆ? ತಾಯ ಹೃದಯದ ತಳಮಳದ ಚಿಂತೆ, ಮಗುವಿನ ಮೇಲಿನ ಪ್ರೀತಿ ತುಂಬಿ ಹರಿದಾಗ ಕೊಡುವ ಆಶಿಷದ ಮಾತು ಭಾಷೆಯ ಮರೆಯಲ್ಲಿಯೇ ಕಾಣೆಯಾಗಿದೆ. ಕುಸು ವಿವರಣೆ ಕೊಡಿದ್ದರೆ ಈ 'ಕನಸು' ಅದರ ಪರಿಪೂರ್ಣತೆಯನ್ನು ಹೊಂದುತ್ತಿದ್ದಿತು.

'ತಾಯಿ'ಯ ನೆನಪು ನಿಜವಾಗಿಯೂ ಮಗುವಿಗೆ ಬರತಕ್ಕದ್ದೇ! ತಾಯಿ ನೆಲವೇ 'ಪನ್ನೆಯ ಕಥೆ'ಗೆ ಜನನಿ. 'ಸತ್ಯ'ಕ್ಕೆ ಮಡಿಲು, ಶಾಂತಿಗೆ ತರುಳು. 'ನಮ್ಮ ಮೊರೆ'ಯನ್ನು ಕೇಳುವವರಾರು? 'ಪಂ... ಜರದ ಪಕ್ಷಿ'ಯ ಗತಿ ನಮಗೇ ಈಗ ಆ... ಗಿದೆ. 'ಯಾರನ್ನು ಹೊಲೆಯ'ನೆಂದಿಳ್ಳಲಿ! ಕೊಳುಸಿಕೊಂಡಾರು! 'ಈ ನಾಡಿ'ನ ವಿಪುಲ ವೈಭವಗಳೊಂದಿಗೆದೆಲ್ಲವು ಬ... ಕನಸಾ'ದ ಮೇಲೆ ನಮ್ಮದಿದು ಒಂದೇ ಹಾಡಾಗಬೇಕೆ? ಇವೆಲ್ಲಾ ಮಕ್ಕಳಾ... ಯೇ ಓದಿದರೆ ತಿಳಿಯಬೇ... ಅಲ್ಲಲ್ಲಿ ಚಿತ್ರಗಳು ... ತಮ್ಮ ಕಕ್ಕ... ವೆ. ಕತೆಯ ... ಈ ಸ್ವಾತ... ಡಿಚನ್ನಾಗಿ ...ಗಿದೆ. ಡಿಲ್ಲಿ ... ವನ್ನು ಸರಕಾರದವರು ... ಟ್ಟಾದ ... ಆದರೆ ಆ ಒಪ್ಪ... ವುದು! ... ಯುದ್ಧ ಸಹಾಯ... ಪ್ರತಿಬಂಧಕವಾಗ... ಮುಕೃ...

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಕೋಟೆಯ ಗುಡಿಯಲ್ಲಿ ತೀರ್ಥಂಕರ ಪ್ರತಿಮೆಗಳು

ಗ್ವಾಲಿಯರದಲ್ಲಿ ಒಂದು ಕೋ... ಇದೆ. ಇದು ಈಗಲೂ ಭದ್ರವಾಗಿರು... ಒಂದು ಪುರಾತನ ಕೋಟೆ. ಸುಮಾ... ೩೦೦ ಅಡಿ ಎತ್ತರವಾಗಿರುವ ಬಂ... ಇಳಿಜಾರು ಬಂಡೆಯ ಮೇಲೆ ಈ ಕೋ... ಕಟ್ಟಲ್ಪಟ್ಟಿರುತ್ತದೆ. ಬಂಡೆಯ ಉದ್ದ ಎರಡು ಮೈಲುಗಳಷ್ಟಾಗಿರುವುದು. ಕೋ... ಟೆಯ ಒಳಗೆ ಒಂದು ಸುಂದರವಾದ ಅ... ಮನೆಯಿದೆ. ಭಾರತೀಯ ಶಿಲ್ಪಕಲೆ... ವಿಶೇಷತೆಗಳನ್ನು ಇಲ್ಲಿ ಕಾಣಬಹುದು. ಇದು ಅಷ್ಟು ಸುಂದರವೂ ಭವ್ಯವೂ ಆ... ರುವದು ೧೪೮೬-೧೫೧೬ರ ಕಾಲಕ್ಕೆ ಗ... ಲಿಯರನ್ನು ಆಳಿದ ರಾಜಾಮಾನಸಿಂ... ನು ಈ ಅರಮನೆಯನ್ನು ಕಟ್ಟಿಸಿದ... ಇತಿಹಾಸವು ಹೇಳುತ್ತದೆ. ಎಲ್ಲಕ್ಕೂ ಹೆ... ನದಾಗಿ ಆಶ್ಚರ್ಯವನ್ನುಂಟುಮಾಡು... ಸಂಗತಿ ಯಾವುದೆಂದರೆ, ಈ ಕೋಟೆ... ಅಡಿಭಾಗದಲ್ಲಿ ಸುತ್ತಲೂ ಜೈನ ತೀರ್ಥ... ಕರರ ಸುಂದರ ಪ್ರತಿಮೆಗಳು ಕಂಗೊ... ಸುತ್ತವೆ. ಇವುಗಳಲ್ಲಿ ಒಂದು ವ... ವು ೫೭ ಅಡಿಗಳಷ್ಟು ಎತ್ತರವಾಗಿ... ಅದಕ್ಕೆ ಸರಿಯಾಗಿ ಉದ್ದಗಲ ಉಳ್ಳ... ಗಿರುವದು!

THREE "S"S OF SOUND BANKING

Service! — *Safety!* — *Security!*

The Canara Industrial & Banking Syndicate, Limited

Head Office:-UDIPI, (S. India.)

PROVIDES THEM ALL AND INVITES YOU TO ENJOY THEM BY BEING ONE OF ITS OWN CLIENTALE.

ಸ್ವದೇಶಾಭಿಮಾನಿಯ...

ನಿಮ್ಮ ಜಾಹೀರಾತುಗಳನ್ನು ಕೊಡಿರಿ.



ಗಂಡಂದಿರನ್ನು ಪೀಡಿಸುವ ಹೆಂಡಂದಿರ ಕ್ಲಬ್ಬು

ಅಮೇರಿಕವು ಹೊಸ ಪ್ರಪಂಚಕ್ಕೆ ಸೇರಿದ್ದು. ಆದ್ದರಿಂದ ಅಲ್ಲಿ ಆಗುತ್ತಿರುವ ದೆಲ್ಲ ಹೊಸಹೊಸತಾಗಿಯೂ ಚಿತ್ರವಿಚಿತ್ರವಾಗಿಯೂ ಇರುತ್ತದೆ. ಈ ಅಮೇರಿಕದ ನ್ಯೂಯೋರ್ಕ ನಗರದಲ್ಲಿ ಹೆಂಡಂದಿರ ಒಂದು ವಿಚಿತ್ರ ಸಂಸ್ಥೆ ಇರುತ್ತದೆ. ಈ ಸಂಸ್ಥೆಯ ಹೆಸರು-'ಗಂಡಂದಿರನ್ನು ಪೀಡಿಸುವ ಹೆಂಡಂದಿರ ಕ್ಲಬ್ಬು'. ಈ ಸಂಘದ ಸದಸ್ಯೆಯರು ತಮ್ಮ ಗಂಡಂದಿರನ್ನು ಬಗೆಬಗೆಯಿಂದ ಪೀಡಿಸುವುದನ್ನು ತಮ್ಮ ವ್ರತವನ್ನಾಗಿಟ್ಟುಕೊಂಡಿದ್ದಾರೆ. ಅದಕ್ಕೆ ಬೇಕಾದ ಶಿಕ್ಷಣವೂ ಅನುಭವವೂ ಅವರಿಗೆ ಈ ಕ್ಲಬ್ಬಿನಲ್ಲಿ ದೊರೆಯುತ್ತದೆ. ಗಂಡಂದಿರನ್ನು ಪೀಡಿಸಿಯೇ ಈ ಹೆಂಡಂದಿರು ಜೀವನದ ಆನಂದವನ್ನು ಅನುಭವಿಸುತ್ತಾರೆ! ಸ್ವಲ್ಪ ದಿನಗಳ ಮೊದಲು ಒಬ್ಬ ಗಂಡ ದಾಂಪತ್ಯ ವಿಚ್ಛೇದಕ್ಕಾಗಿ ಕೋರ್ಟಿನಲ್ಲಿ ಒಂದು ದಾವೆ ತಂದಿದ್ದ. ಅವನ ಹೆಂಡತಿ ಈ ಕ್ಲಬ್ಬಿನ ಸದಸ್ಯೆಯಾಗಿದ್ದಳು. ಅವಳು ಯಾವ ಯಾವ ರೀತಿಯಲ್ಲಿ ಗಂಡನನ್ನು ಪೀಡಿಸುತ್ತಿದ್ದಳೆಂದು ಅವನು ಆ ದಾವೆಯಲ್ಲಿ ಹೇಳಿದ್ದಾನೆ—ಮೋಟರ ಕಾರಿನ ಎದುರು ಗಾಜನ್ನು ಒಡೆದು ಹಾಕಿದ್ದಾಳೆ. ಸಿಗರೇಟು ನಳಿಗೆಯನ್ನು ಮುರಿದುಹಾಕಿದ್ದಾಳೆ. ಪಾದರಕ್ಷೆಗಳನ್ನು ಹರಿದುಹಾಕಿದ್ದಾಳೆ; ತನಗೆ ಮಾತ್ರ ಅಡಿಗೆ ಮಾಡಿ ಅವನನ್ನು ಉಪವಾಸ ಹಾಕಿದ್ದಾಳೆ. ರಾತ್ರಿ ಕೋಣೆಗೆ ಕೀಲು ಹಾಕಿ ಒಬ್ಬಳೇ ಮಲಗಿದ್ದಾಳೆ. ಹಾಸಿಗೆ ಅಡಿಯಲ್ಲಿ ಬೆಕ್ಕನ್ನು ಅಡಗಿಸಿಟ್ಟು ಕೆದರಿಸಿದ್ದಾಳೆ. ಮಲಗಿದ್ದಾಗ ವಿದ್ಯುತ್ತಿನ ಟೋರ್ಚನ್ನು ಬೆಳಗಿಸಿ ಕಣ್ಣನ್ನು ಕುಕ್ಕಿಸಿದ್ದಾಳೆ. ಬಹಳ ದಿನಗಳು ಕಳೆದರೂ ಅವಳ ಮೈ ಮುಟ್ಟದ ಹಾಗೆ ಇರಗಿದ್ದಾಳೆ.... ಇವೇ ಮೊದಲಾದ ಕಾರಣಗಳಿಂದ ದಾಂಪತ್ಯ ವಿಚ್ಛೇದವಾಗಬೇಕೆಂದು ಆತನು ಹೇಳಿದ್ದಾನೆ.

ಸ್ಪರ್ಧೆಯಲ್ಲಿ ಗೆದ್ದವಳಿಗೆ ಗಂಡ ದೊರೆತ

ಜೇಮ್ಸ ಎಂಬ ಗಟ್ಟಿಮುಟ್ಟಾದ ಮೈಕಟ್ಟಿನ ಸುಂದರ ಸೈನಿಕನೊಬ್ಬನು ಅಮೆರಿಕದ ಒಂದು ಹೊಟೆಲಿನಲ್ಲಿ ಊಟಕ್ಕೆ ಕೂತಿದ್ದ. ಅವನ ಇದಿರಿನಲ್ಲಿಯೇ ಮತ್ತೊಂದು ಮೇಜಿನ ಮಗ್ಗುಲಲ್ಲಿ ಇಬ್ಬರು ಹುಡುಗಿಯರು ಕೂತು ಊಟಮಾಡುತ್ತಿದ್ದರು. ಆ ಹುಡುಗಿಯರು ಈ ಸೈನಿಕನ ರೂಪ ಲಾವಣ್ಯ ಮತ್ತು ಮೈಕಟ್ಟನ್ನು ನೋಡಿ ಅವನಿಗೆ ಸೋತುಹೋದರು. ಇವನೂ ಅವರನ್ನು ನೋಡಿ ಸ್ವಲ್ಪ ಸ್ವಲ್ಪ ಮೆಚ್ಚಿದ ಹಾಗೆ ಕಾಣುತ್ತದೆ. ಮೂವರೂ ತಮ್ಮ ತಮ್ಮ ಕುರ್ಚಿಗಳನ್ನು ಹತ್ತಿರತ್ತಿರ ಸೆಳೆಕೊಂಡು ಮಾತನಾಡಿದರು; ಪರಸ್ಪರ ಪರಿಚಯ ಮಾಡಿಕೊಂಡರು. ಇಬ್ಬರು ಹುಡುಗಿಯರಿಗೂ ಅವನೊಂದಿಗೆ ಸಂಸಾರ ಮಾಡಿಕೊಂಡಿರಬೇಕೆಂದು ಆಸೆಯಾಯಿತು. ಆದರೆ ಇಬ್ಬರು ಹುಡುಗಿಯರು ಒಬ್ಬನನ್ನು ಹೇಗೆ ಕೂಡಿಕೊಂಡು ಇರಬಹುದು? ಕೊನೆಗೆ ಇಬ್ಬರೊಳಗೂ ಒಂದು ಒಡಂಬಡಿಕೆಯಾಗಿ ಇಸ್ಪೀಟಾಟದ ಸ್ಪರ್ಧೆಯಲ್ಲಿ ಯಾರು ಗೆಲ್ಲುವಳೋ, ಅವಳು ಅವನನ್ನು ಮದುವೆಯಾಗುವುದೆಂದು ನಿರ್ಧಾರವಾಯಿತು. ಒಬ್ಬಳು ಗೆದ್ದಳು. ಅವಳು ಅವನನ್ನು ಮದುವೆಯಾದಳು. ಆದರೆ ಅವನ ಮನಸ್ಸು ಅವಳ ಮೇಲೆ ಅಷ್ಟು ಚೆನ್ನಾಗಿ ಊರಲಿಲ್ಲ. ಬೇಗನೇ ದಾಂಪತ್ಯ ವಿಚ್ಛೇದ ಮಾಡಿಕೊಂಡು ಅವರು ಪುನಃ ಬೇರೆಯಾದರು.

ಉಪವಾಸದಿಂದ ಜೀವನ

ಹಂಗೇರಿಯದ ನಿವಾಸಿ ಹ್ಯೂ ಗೋಗ್ರೇಟರ ಎಂಬಾತನು ಉಪವಾಸ ಮೂಲಕವಾಗಿಯೇ ಜೀವನೋಪಾರ್ಜನೆ ಮಾಡಿ ಕೆಲವು ದಿನಗಳ ಹಿಂದೆ ಕಾಲವಶನಾಗಿದ್ದಾನೆ. ಇವನು ಯುರೋಪಿನಲ್ಲೆಲ್ಲ ಉಪವಾಸದ ಮನುಷ್ಯನೆಂದು ಹೆಸರಾಗಿದ್ದ ಮತ್ತು ಯುರೋಪದ ಎಲ್ಲ ಭಾಗಗಳಿಂದ ಈ ವಿಚಿತ್ರ ಮನುಷ್ಯನನ್ನು ಕಾಣಲಿಕ್ಕೆ ಜನರು ಬರುತ್ತಿದ್ದರು. ಇವನು ಗಾಜಿನ ಒಂದು ದೊಡ್ಡ ಪೆಟ್ಟಿಗೆಯನ್ನು ಮಾಡಿ ಅದರೊಳಗೆ ಕೂತು ಉಪವಾಸ ಮಾಡುತ್ತಿದ್ದ. ದಿನೇ ದಿನೇ ಕೃಶವಾಗುತ್ತಿರುವ ಅವನ ಶರೀರವನ್ನು ನೋಡಿ ಪ್ರೇಕ್ಷಕರು ಅವನಿಗೆ ಕಾಸು ದುಗ್ಗಾಣಿಗಳನ್ನು ಕೊಡುತ್ತಿದ್ದರು. ಈ ಹಣದಿಂದ ಅವನ ಜೀವನವಾಗುತ್ತಿತ್ತು ಮತ್ತು ಜೀವನಕ್ಕೆ ಹಣವಿಲ್ಲದಿದ್ದಾಗ ಅವನು ಪುನಃ ಪುನಃ ಉಪವಾಸ ಮಾಡುತ್ತಿದ್ದ. ಇವನು ಈ ತರದ ಜೀವನದಿಂದ ಹೆಚ್ಚು ಹಣ ಸಂಪಾದನೆ ಮಾಡುವದನ್ನು ನೋಡಿ ಹೊಲ್ಲೆಂಡಿನವನೊಬ್ಬನಿಗೆ ಹೊಟ್ಟೆ ಉರಿ ಎದ್ದಿತು. ಅವನೂ ಇವನೊಡನೆ ಪಂಥ ಹಾಕಿ ಉಪವಾಸ ಹಿಡಿದ. ಆದರೆ ೩೦ ದಿನಗಳ ತನಕ ಮಾತ್ರ ಉಪವಾಸವಿರಲು ಸಾಧ್ಯವಾಗಿ ಅವನು ಗ್ರೇಟರನೊಂದಿಗೆ ಸೋತನು. ಈ ಪಂಥದಲ್ಲಿ ಗ್ರೇಟರನಿಗೆ ೨೦೦ ಪವನುಗಳು ದೊರೆತುವು. ಗ್ರೇಟರನು ೩೧ ದಿನಗಳ ತನಕ ಅನ್ನ ನೀರುಗಳಿಲ್ಲದೆ ಉಪವಾಸ ಮಾಡಿದ್ದಾನೆ. ಕೊನೆಗೆ ಉಪವಾಸದಲ್ಲಿಯೇ ಅವನ ಜೀವಮಾನವು ಮುಗಿಯಿತೆಂದು ಹೇಳುತ್ತಾರೆ.

ಯಂತ್ರದ ಸಹಾಯದಿಂದ ವ್ಯಭಿಚಾರದ ಪತ್ತೆ

ಅಮೆರಿಕದಲ್ಲಿ, ಗಂಡನೊಬ್ಬನು ತನ್ನ ಹೆಂಡತಿಯ ದುರ್ನಡತೆಯನ್ನು ಯಂತ್ರದ ಮೂಲಕ ಪತ್ತೆಹಚ್ಚಿದ್ದಾನೆ. ಈ ಗಂಡನು ಸಸ್ಯಶಾಸ್ತ್ರಜ್ಞ. ಅದಕ್ಕೆ ಸಂಬಂಧವಿರುವ ಒಂದು ಪರಿಶೋಧನಾಲಯದಲ್ಲಿ ಅವನು ಕೆಲಸಕ್ಕಿದ್ದ. ಸಸ್ಯಗಳ ಸೂಕ್ಷ್ಮ ಬೆಳವಣಿಗೆಯ ಚಿತ್ರಗಳನ್ನು ತೆಗೆಯುವ ಒಂದು ಕೆಮರವು ಅವನ ಬಳಿಯಲ್ಲಿದ್ದಿತು. ಕೆಲಸದ ಮೇಲೆ ಹೋಗಿದ್ದಾಗ ಅವನ ಬಂದರ ಹಿಂದೆ ಬಂದರಂತೆ ಅನೇಕ ದಿನಗಳ ತನಕ ಮನೆಯಿಂದ ಅಗಲಿರಬೇಕಾಗಿದ್ದಿತು. ಈ ಸಮಯದಲ್ಲಿ ಅವನ ಹೆಂಡತಿ ತನಗೆ ಬೇಕಾದ ವಿಟಪುರುಷರನ್ನು ಕರೆಸಿಕೊಂಡು ಅವರೊಡನೆ ರಮಿಸುತ್ತಿದ್ದಳು. ಗಂಡನು ಒಮ್ಮೆ ಕೆಲಸದ ಮೇಲೆ ಹೋಗಿದ್ದಾಗ ತನ್ನ ಕೆಮರವನ್ನು ಮಲಗುವ ಕೋಣೆಯಲ್ಲೇ ಬಿಟ್ಟುಹೋದ. ಇದು ಅವಳಿಗೆ ಗೊತ್ತಾಗಲಿಲ್ಲ. ಅವನ ಗೈರಹಾಜರಿಯಲ್ಲಿ ಆ ಕೆಮರವು ವಿಟಪುರುಷರೊಡನೆ ಆತನ ಹೆಂಡತಿಯ ಆಲಿಂಗನ ಚುಂಬನ ಇತ್ಯಾದಿ ಎಲ್ಲಾ ಕೆಲಸಗಳ ಚಿತ್ರಗಳನ್ನು ತೆಗೆದಿಟ್ಟಿತು. ಗಂಡನು ಅವನ್ನು ನೋಡಿ ದಾಂಪತ್ಯ ವಿಚ್ಛೇದನಕ್ಕೆ ಅವಳ ಮೇಲೆ ದಾವೆ ಹೂಡಿದ. ದಾವೆಯಲ್ಲಿ ಅವನಿಗೆ ಬಹು ಸುಲಭದಲ್ಲಿ ಜಯವೂ ಸಿಕ್ಕಿತು.

ಸತ್ತ ಮುದುಕಿ ಬದುಕಿದಳು!

ಕಲ್ಕತ್ತದಿಂದ ೧೮ ಮೈಲು ದೂರದ ಒಂದು ಹಳ್ಳಿಯಲ್ಲಿ ೬೨ ವರ್ಷದ ಒಬ್ಬ ಮುದುಕಿಯು ವಾಸವಾಗಿದ್ದಳು. ಅವಳು ಕಠಿನ ಮಲೇರಿಯಜ್ವರದಿಂದ ಪೀಡಿತಳಾಗಿದ್ದಳು. ಒಂದು ದಿನ ಜೋರು ಜ್ವರ ಬಂದು ಅವಳು ಬೋಧತಪ್ಪಿದಳು. ಸತ್ತಳೆಂದೇ ಕಲ್ಪಿಸಿಕೊಂಡು ಊರ ಜನರು ಅವಳನ್ನು ಸ್ಮಶಾನಕ್ಕೆ ಹೊತ್ತುಕೊಂಡು ಹೋದರು. ಕಾಷ್ಟದ ಮೇಲಿಟ್ಟು ಬೆಂಕಿ ಕೊಡುವಾಗ ಮುದುಕಿ ಎಚ್ಚೆತ್ತು ಕೂತಳು. ಯಾವುದೋ ಪ್ರೇತವು ಬಂದು ಮುದುಕಿಯ ಶರೀರದೊಳಗೆ ಪ್ರವೇಶಿಸಿತೆಂದು ಜನರು ಕಕ್ಕಾವಿಕ್ಕಿಯಾಗಿ ಓಡಿದರು. ಕೆಲವರು ಧೈರ್ಯದಿಂದ ಹೋಗಿ ಆಕೆಯನ್ನು ಹೊಡೆದು ಬಡೆದು ಹಿಂಸಿಸಿದರು. ಆಗಲೂ ಕೂಡ ಅವಳು ಸತ್ತಿರಲಿಲ್ಲ. ಜ್ವರದ ದೆಸೆಯಿಂದ ಎಚ್ಚರ ತಪ್ಪಿದ್ದಳು ಎಂಬುದು ಅವರಿಗೆ ತಿಳಿಯಲಿಲ್ಲ. ಕೊನೆಗೆ ಪೋಲೀಸರಿಗೆ ಸುದ್ದಿ ಹೋಗಿ ಅವರು ಬಂದು ಆಕೆಯನ್ನು ಕಾಪಾಡಿದರು. ಮುದುಕಿ ಆಸ್ಪತ್ರೆಯಲ್ಲಿ ಬದುಕಿದ್ದಾಳೆ. ಅವಳನ್ನು ಹಿಂಸಿಸಿದ ಕೆಲವರ ಮೇಲೆ ಪೋಲೀಸರ ಫಿರ್ಯಾದಿ ಆಗಿದೆ.

THE
BANK OF MANGALORE LTD.,
H. O. MANGALORE.
ESTD. 1931.

Branches:-
Moodabidri & Padubidri.

NOTICE.

On and from 1st January 1941 the following are the revised rates of interest on deposits:

FIXED DEPOSITS:

For 2 years or over	...	5½%
„ 1 „	...	4½%
„ 6 months	...	3½%
„ 3 months	...	3

Interest Payable Quarterly.

SAVINGS BANK DEPOSITS:

On daily balances on balances over Rs. 5-0-0 in multiples of Rs. 5-0-0 @ 3%.

All kinds of banking business transacted.

ಪುಣ್ಯಾತ್ಮಳ ಹೆಸರಲ್ಲಿ ವೈದ್ಯಾಲಯವಾಯಿತು!

ಕಮಲಾ ನೆಹರುಗಳ ಕೀರ್ತಿ ಶಾಶ್ವತವಾಯಿತು!

— ಗಾಂಧಿಜಿ ವೈದ್ಯಾಲಯವನ್ನು ತೆರೆದರು —

ಆ ದೇಶಭಕ್ತಳ ಜೀವನದ ನೆನಹು!

ಭರತ ಮಾತೆಯ ವೀರ ಪುತ್ರಿಯೆನಿಸಿದ ದಿವಂಗತಾ ಕಮಲಾ ನೆಹರುಗಳ ಸ್ಮಾರಕ ವೈದ್ಯಾಲಯದ ಉದ್ಘಾಟನಾ ಸಮಾರಂಭವು ಅಲ್ಲಾಹಾಬಾದಿನಲ್ಲಿ ತಾ. ೨೪ರಂದು ಮಹಾತ್ಮಾಜಿಯವರ ಅಮೃತಹಸ್ತದಿಂದ ನೆರವೇರಿತು! ತನ್ನ ಇಡೀ ಜೀವಮಾನವನ್ನು, ಆಗರ್ಭ ಐಶ್ವರ್ಯ ಶಾಲಿನಿಯಾಗಿ, ಸಂಪತ್ಸುಖದಲ್ಲಿಯೇ ಕಳೆಯಬಲ್ಲ ಭಾಗ್ಯವತಿಯಾಗಿದ್ದರೂ, ರಾಷ್ಟ್ರದ ಬಡಬಗ್ಗರಿಗಾಗಿ, ದೀನರಿಗಾಗಿ, ಸಂಕಷ್ಟದಿಂದ ನರಳುವ ಸಾವಿರಾರು ಸೋದರರಿಗಾಗಿ ಮರುಗುತ್ತಿದ್ದ ಅವರ ಪುಣ್ಯಾತ್ಮಕ್ಕೆ ಇದು ಶ್ರೇಷ್ಠ ಸ್ಮಾರಕ ಕಾರ್ಯವೇ ಆಯಿತು! ತನ್ನ ವೀರಪತಿಯಾದ ಜವಾಹಿರಲಾಲರಂತೆ, ಅವರೂ ಕೂಡ ರಾಷ್ಟ್ರದ ಸಲುವಾಗಿ ಧೈರ್ಯಪೂರ್ವಕ ಹೋರಾಡಿದರು. ರಾಷ್ಟ್ರದ ಈ ಮಹಾ ಯಜ್ಞದಲ್ಲಿ ಸಾವಿರಾರು ಮಂದಿಯೊಡನೆ ಅವರ ದೇಹವೂ ಆಹುತಿಯಾಯಿತು! ಭಾರತದ ಭವ್ಯ ಭವಿಷ್ಯತ್ತಿನ ಸಲುವಾಗಿ ಅವರ ಹೃದಯವು ನಿರಂತರ ಆಶಾಮಯವಾಗಿತ್ತು; ಆವೇಶಪೂರ್ಣವಾಗಿತ್ತು!

ಸೀತೆಯಂತೆ

ಪಶ್ಚಿಮದ ಸ್ವತಂತ್ರ ವಾತಾವರಣವನ್ನು ಕಂಡು ಹುರಿಗೊಂಡ ವೀರ ಜವಾಹಿರಲಾಲ ನೆಹರುಗಳು ಲಂಡನಿನಿಂದ ವಿದ್ಯಾಭ್ಯಾಸ ಮುಗಿಸಿ ಮರಳಿ ಬಂದವರೇ ಸ್ವಾತಂತ್ರ್ಯ ಸಮರದಲ್ಲಿ ಧುಮುಕಿ ಸೆರೆಮನೆಗೆ ತೆರಳಿದರು. ಉತ್ತಮ ಆದರ್ಶವತಿಯಾದ ಆಕೆಯು, ಭಾರತೀಯ ಸ್ತ್ರೀಯರ ಸರಣಿ ಹಿಡಿದು ಕಷ್ಟಸುಖಗಳೆರಡರಲ್ಲಿಯೂ ಪತಿಯನ್ನು ಹಿಂಬಾಲಿಸಿ ಹೋಗುವುದು ತನ್ನ ಕರ್ತವ್ಯವೆಂದು ತಾನೂ ಸತ್ಯಾಗ್ರಹಕ್ಕಿಳಿದರು; ಅಖಿಲಭಾರತವೇ ಆ ದೃಶ್ಯದಿಂದ ಬೆರಗಾಯಿತು! ಪತಿಯಲ್ಲಿ ಇರುವ ಅತ್ಯಂತ ಪ್ರೇಮ ಭಕ್ತಿಗಳೊಡನೆ ಅವರಿಗೆ ಭರತಮಾತೆಯ ಬವಣೆಯ ದೃಶ್ಯವೂ ಸ್ಫೂರ್ತಿ ಕೊಟ್ಟಿತು. ತನ್ನ ಮರಣ ಶಯ್ಯೆಯಲ್ಲಿಯೂ ಭರತಮಾತೆಯ ಸ್ವಾತಂತ್ರ್ಯವೇ ಅವರ ಏಕಮಾತ್ರ ಮಂತ್ರವಾಗಿತ್ತು!

ಯೂರೋಪಿಗೆ ಅಸ್ವಸ್ಥರಾಗಿ ಹೋಗಿದ್ದಾಗ, ಅಲ್ಲಿ ತನ್ನ ಕೊನೆಯ ಕಾಲದಲ್ಲಿ ಪತಿಯು ತನ್ನ ಬಳಿಯಿರಬೇಕೆಂದು ಅವರು ಬಯಸಬಹುದಾಗಿದ್ದರೂ ಅವರ ಕಾರ್ಯಭಾಗವು ಭಾರತದಲ್ಲಿ ಬಹಳ ಉಳಿದಿದೆಯೆಂದೂ ನೆಹರು ಭಾರತಕ್ಕೆ ತೆರಳಬೇಕಾಗಿದೆಯೆಂದೂ ತಿಳಿಯಬಂದಾಗ ತನ್ನ ರುಗ್ಣ ಪರಿಸ್ಥಿತಿಯನ್ನು ಗಮನಿಸದೆ, ರಾಷ್ಟ್ರಕಾರ್ಯದ ಸಲುವಾಗಿ, ಬೇಗನೆ ಮಾತೃಭೂಮಿಗೆ ತೆರಳಿರೆಂದು ಪತಿಯನ್ನು ಅಂದು ಬೀಳ್ಕೊಟ್ಟರು. ಅವರಿಗೆ ಆಗಲೂ ಮಾತೃಭೂಮಿಯ ಸೇವೆಯೇ ಅಲ್ಲದೆ ಬೇರೊಂದೂ ಹೆಚ್ಚಿನದೆನಿಸತ್ತು.

> "ಕಮಲೆಯು ಗಣನೀಯ ಸ್ತ್ರೀಯಾಗಿದ್ದಳು; ಆದರ್ಶ ಹಿಂದೂ ಮಹಿಳೆಯಂತೆ ಪತಿಭಕ್ತಿ ಪರಾಯಣೆಯಾಗಿದ್ದುದು ಮಾತ್ರವಲ್ಲದೆ, ತನ್ನ ಜನ್ಮಭೂಮಿಯನ್ನು ಅವಳು ಬಹಳವಾಗಿ ಪ್ರೀತಿಸುತ್ತಿದ್ದಳು. ಆ ಪ್ರೇಮವು ಅಪಾರವಾಗಿತ್ತು; ಅವಳ ಧ್ಯೇಯವು ಉದಾತ್ತವಾಗಿತ್ತು; ಯಾವ ಕೆಲಸವನ್ನಾದರೂ ಅವಳು ಮಾಡುತ್ತಿದ್ದರೆ ಅದು ನಿಸ್ವಾರ್ಥಕವಾಗಿತ್ತು; ಜನತೆಯ ಕೀರ್ತಿ ಲಾಲಸೆಯು ಅಲ್ಲಿ ಲವಲೇಶವೂ ಇರಲಿಲ್ಲ. ಕಮಲೆಯ ಜೀವಕ್ಕೆ ಭಗವಂತನು ಶಾಂತಿ ವಿಶ್ರಾಂತಿಗಳನ್ನು ದಯಪಾಲಿಸಲಿ!"
>
> ಗಾಂಧಿಜಿ.

ಜವಾಹಿರಲಾಲರು ನೈನಿ ಜೈಲಿನಲ್ಲಿ ಬಂಧಿತರಾಗಿದ್ದರು. ಕಮಲಾ ನೆಹರುಗಳಿಗೆ ಪ್ರಾಣಾಂತಿಕ ಅಸ್ವಸ್ಥವಾಗಿತ್ತು. ರಾಜಕೀಯ ವಿಷಯದಲ್ಲಿ ಮುಂದಕ್ಕೆ ಪ್ರವೇಶಿಸುವುದಿಲ್ಲವೆಂದು ಬರೆಕೊಟ್ಟರೆ, ನೆಹರುಗಳನ್ನು ಬಿಡಬಹುದಾಗಿ ಸರಕಾರವು ಹೇಳಿತು! ಈ ಮಾತು ಕಮಲಾ ನೆಹರುಗಳನ್ನು ಎಷ್ಟು ವ್ಯಥೆಗೊಳಿಸಲಿಕ್ಕಿಲ್ಲ? ಒಂದು ಸಲ ಪತ್ನಿಯನ್ನು ನೋಡುವಂತೆ ನೆಹರುಗಳಿಗೆ ಒಪ್ಪಿಗೆಯೇನೋ ಸಿಕ್ಕಿತು. ಅವರು ರುಗ್ಣಶಯ್ಯೆಯಲ್ಲಿರುವ ಪತ್ನಿಯನ್ನು ಬಂದು ಕಂಡರು. ಜ್ವರವು ವಿಪರೀತಕ್ಕೇರಿತ್ತು. ತನ್ನ ಪ್ರಾಣೇಶನು ತನ್ನ ಬಳಿ ಇರಬೇಕೆಂದು ಆಕೆಗೆ ಎಷ್ಟೊಂದು ಆತುರವಿರಲಾರದು? ತಿರುಗಿ ಸೆರೆಮನೆಗೆ ಹೋಗುವ ಸಮಯ ಪತಿಯನ್ನು ಅಗಲಬೇಕಾಯಿತು! ಆದರೆ ಕಮಲಾನೆಹರುಗಳು ಮುಗುಳು ನಗುತ್ತಾ ಹೇಳಿದರು: 'ಇದೇನು ದೊಡ್ಡದು! ಸರಕಾರಕ್ಕೆ ನೀವು ಹಾಗೆಂದು ನನ್ನಾಣೆ ಬರೆಕೊಡಬೇಡಿ! ನನ್ನ ಜೀವವು ಮಾತೃಭೂಮಿಯ ಸೇವೆಗಿಂತ ದೊಡ್ಡದಲ್ಲ!' ಅದೆಂತಹ ಧೈರ್ಯ! ಎಂತಹ ದೇಶಾಭಿಮಾನ! ಎಂತಹ ಸ್ಫೂರ್ತಿಮಯ ವಾಣಿ!

ಅವರು ಅತುಲ ಸಂಪತ್ತಿನಲ್ಲಿ ಅಮಿತ ಸುಖದಲ್ಲಿ ಬೆಳೆದವರು; ಪ್ರಪಂಚದಲ್ಲಿಯೇ ಮಹಾಮೇಧಾವಿಯೆನಿಸಿದವನನ್ನು ಆಗರ್ಭ ಶ್ರೀಮಂತನನ್ನು ಮಹಾಪ್ರಭಾವಶಾಲಿಯನ್ನು ಕೈಹಿಡಿದವರು; ಆದರೆ ಒಂದರೆ ಕ್ಷಣ ಶಾಂತಿಯಿಲ್ಲದೆ, ತನ್ನ ಜೀವನದಲ್ಲಿ ಎದುರಿಸಬೇಕಾಗಿದ್ದ ಒಂದೊಂದೇ ವಿಪತ್ಪರಂಪರೆಗಳನ್ನು ವಿಚಾರಿಸಿದರೆ, ಅದರಿಂದ, ಸಾಮಾನ್ಯ ಸ್ತ್ರೀಯೊಬ್ಬಳ ಹೃದಯವೂ ವಿದೀರ್ಣವಾಗುವಂತಿದೆ! ಆದರೆ ಎಂತಹ ನಿಷ್ಠುರ ಕಷ್ಟಕಾಲಗಳಲ್ಲಿಯೂ ಅವರ ಮುಖದ ಕಳೆ ಪ್ರಸನ್ನತೆಗಳು ಎಮ್ಮೆಯೂ ಕಟ್ಟರಲಿಲ್ಲ!

ನೆಹರುಗಳ ನೆನಹು

ಪಂಡಿತ ನೆಹರುಗಳು ತನ್ನ ಆತ್ಮಚರಿತ್ರೆಯಲ್ಲಿ, ತನ್ನ ಸೌಭಾಗ್ಯವತಿಯ ನೆನಹನ್ನು ಹೀಗೆ ಮಾಡುತ್ತಾರೆ:— 'ನನಗೆ ಮದುವೆಯಾದಾಗ ಇಪ್ಪತ್ತಾರು ವರ್ಷ; ಆಕೆಗೆ ಹದಿನೇಳು ವರ್ಷ; ಆಕೆ ಕೇವಲ ಮುಗ್ಧ ಬಾಲಿಕೆ. ಜಗತ್ತಿನ ವಿಷಯ ಅವರಿಗೆ ಹೆಚ್ಚಿನ ಅನುಭವವಿರಲಿಲ್ಲ. ನಮ್ಮಿಬ್ಬರ ವಿಚಾರಗಳಲ್ಲಿ ಬಹಳ ಅಭ್ಯಂತರವಿತ್ತು. ಆದರೆ ಆಕೆಯ ಮುಗ್ಧ ಭಾವದಲ್ಲಿ, ಮುದುಡಿದ ಹೂವಿನಲ್ಲಿರುವಂತೆ, ಮುಂದಿನ ಪ್ರಸನ್ನತೆಯಿತ್ತೆಂದೂ, ಅದುದರಿಂದ ಜಾಗರೂಕತೆಯಿಂದ ಅವಳನ್ನು ನೋಡಿಕೊಳ್ಳಬೇಕೆಂದೂ ನಾನು ತಿಳಿದೆನು. ನಾವಿಬ್ಬರೂ ಅನ್ಯೋನ್ಯ ಆಕರ್ಷಿತರಾದೆವು. ಮುಂದೆ ನಾವು ಸುಖದಿಂದ ಸಂಸಾರಮಾಡಿದೆವು. ಮದುವೆಯಾದ ಇಪ್ಪತ್ತಮೂರನೆಯ ತಿಂಗಳಲ್ಲಿ ಮಗಳು ಇಂದಿರೆಯು ಹುಟ್ಟಿದಳು. ದೇಶದ ರಾಜಕೀಯ ವಿಷಯಗಳಲ್ಲಿ ಪ್ರಬಲ ಮಾರ್ಪಾಟಾಗುತ್ತಿದ್ದಂತೆ ನನ್ನ ಮನಸ್ಸು ರಾಜಕೀಯದ ಕಡೆ ತೀರಾ ಆಕರ್ಷಿತವಾಯಿತು. ಸಾರ್ವಜನಿಕ ಕಾರ್ಯಗಳಲ್ಲಿಯೇ ನಾನು ಸಂಪೂರ್ಣ ಸೇರಿಹೋದೆನು.

'ಸಾರ್ವಜನಿಕ ಕಾರ್ಯದಲ್ಲಿ ನಾನು ಆಸಕ್ತನಾಗುತ್ತಿದ್ದಂತೆ ಅವಳ ಸಹವಾಸದಿಂದ ದೂರ ದೂರವಿರಬೇಕಾಯಿತು. ಸಹಜವಾಗಿ ಅಂತಹ ಸಮಯ ಆಕೆ ಬಹಳ ಬೇಸರಗೊಂಡಿರಬಹುದು. ಆದರೆ ನನ್ನ ಪ್ರೀತಿ ಆವಳಿಗೆ ಗೊತ್ತು. ಅವಳು ನನಗೆ ಆಗಾಗ ಆವೇಶವನ್ನು ತುಂಬಿಸಿದಳು. ಆಮೇಲೆ ಆಕೆ ಅಸೌಖ್ಯದಿಂದ ಬಿದ್ದಳು. ನಾನು ಹಲಗಾಲ ಸೆರೆಮನೆಯಲ್ಲಿಯೇ ಕಳೆಯಬೇಕಾಯಿತು. ಸತ್ಯಾಗ್ರಹವು ಆಕೆಯನ್ನೂ ರಣಕ್ಷೇತ್ರಕ್ಕೆ ಸೆಳೆಯಿತು. ಆಕೆಯೂ ಸತ್ಯಾಗ್ರಹ ಸಮರದಲ್ಲಿ ನನ್ನೊಡನೆ ಸೆರೆಮನೆಗೆ ಹೋಗಬೇಕಾಗಿ ಬಂದಾಗ ಸಹಜವಾಗಿ ಬಹಳ ಅಮಿತ ಆನಂದಪಡುತ್ತಿದ್ದಳು.......

'....ನಾವು ಒಮ್ಮೊಮ್ಮೆ ಮಾತ್ರ ಒಂದಾಗುತ್ತಿದ್ದೆವು! ಆದರೆ ಆ ಮುಹೂರ್ತಗಳು ಅಮೂಲ್ಯವಾಗಿದ್ದುವು. ಮದುವೆಯಾಗಿ ಹದಿನೆಂಟು ಸಂವತ್ಸರಗಳು ದಾಟಿದ್ದರೂ ಅವಳಲ್ಲಿ ಹಿಂದಿನ ಆ ಮುಗ್ಧ ಬಾಲಿಕಾ-ಚಪಲತೆಯೇ ಇತ್ತು!

'ಆದರೆ ನಾನು ಬದಲಾಗಿದ್ದೆ. ನನ್ನ ತಲೆಯ ಕೂದಲು ನರೆತು, ಹಲವು ಕೂದಲುಗಳು ಉದುರಿ ಹೋಗಿದ್ದವು. ನನ್ನ ಮುಖದಲ್ಲಿ ನೆರಿಗೆ ಬಿದ್ದಿತ್ತು. ಕಣ್ಣಿನ ಕತ್ತಲು ಕಟ್ಟಿತ್ತು! ಕಳೆದ ನಾಲ್ಕು ವರ್ಷಗಳೊಂದಲಿಂದ ನಾನು ತುಂಬಾ ಬಳಲಿದ್ದೆ. ಆದರೆ ಮಗಳು ಇಂದಿರೆ ಮತ್ತು ಅವಳು ಇಬ್ಬರು ಅಕ್ಕತಂಗಿಯರಂತೆಯೇ ಕಾಣುತ್ತಿದ್ದರು.

'ಆಕೆ, ತನ್ನ ಅನಾರೋಗ್ಯದ ಕುರಿತು ಜಾಗರೂಕತೆ ತೆಗೆದುಕೊಳ್ಳದ ವಿಷಯ ನಾನು ಸ್ವಲ್ಪ ಸಿಡಿದುಕೊಂಡ್ರೆ, ಆದರೆ ರಾಷ್ಟ್ರದ ಸಮರದಲ್ಲಿ ತಾನು ಪ್ರವೇಶಿಸಲಾರೆನಲ್ಲಾ ಎಂದು ವ್ಯಥೆಗೊಂಡ ಆಕೆಯನ್ನು ನಾನು ಹೇಗೆ ನೋಯಿಸಲಿ? ಅದೇ ಚಿಂತೆಯಿಂದ ಅವಳು ತನ್ನ ಶರೀರದ ಕುರಿತೂ ಸರಿಯಾಗಿ ಶ್ರದ್ಧೆ ತೆಗೆದುಕೊಳ್ಳಲಿಲ್ಲ.... ಖಂಡಿತವಾಗಿ ಆಕೆ ನನ್ನ ಕೈ ಬಿಟ್ಟು ಹೋಗಲಾರಳು! ಈಗ ಕಮಲೆಯ ಸಹಾಯ ನನಗೆ ಬೇಕಾಗಿದೆ. ನನ್ನ ವಿವಾಹ ಜೀವನವು ಈಗ ಆರಂಭವಾಗಿದೆ.... ಹೀಗೆ ನಾನು ಯೋಚಿಸಿ, ದಿನದಿನ ಅವಳನ್ನೇ ಅವಲೋಕಿಸುತ್ತೇನೆ.'

ಕೈ ಹಿಡಿದಾಕೆಯೊಬ್ಬಳು ತನ್ನ ಪತಿಯಿಂದ ಇದಕ್ಕಿಂತ ಹೆಚ್ಚಿನ 'ಪ್ರೇಮಸಂಭಾವನೆ'ಯನ್ನು ಬೇರೆ ಪಡೆಯಲಿಕ್ಕುಂಟೆ?

ಭಾರತದ ಇಂದಿನ ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಹಲವು ವೀರರ ಹಲವು ಮಹಿಳೆಯರ ಜೀವನ ಚರಿತ್ರೆಗಳನ್ನು ಕಂಬನಿ ತುಂಬುತ್ತಾ ಬರೆಯಬೇಕಾಗಿದೆ; ಕಂಬನಿ ಸುರಿಸಿಯೇ ಓದಬೇಕಾಗಿದೆ; ರಾಷ್ಟ್ರದ ಇಂತಹ ಸಂದಿಗ್ಧಕಾಲದಲ್ಲಿ ಜನ್ಮವೆತ್ತಿದ ಬಗ್ಗೆ ಸಂತೋಷಪಡಬೇಕೋ ಸಂಕಟಪಡಬೇಕೋ ಹೇಳಲು ಬರುವುದಿಲ್ಲ. ಕಮಲಾನೆಹರು ಅಕಾಲದಲ್ಲಿ ಅಸ್ತಂಗತರಾದರು! ನೆಹರುಗಳ ಹೃದಯವು ಇದರಿಂದ ಎಷ್ಟರಮಟ್ಟಿಗೆ ಸಂತಾಪಗೊಂಡಿತು ಎಂಬುದನ್ನು ಅವರು ತನ್ನ ಪತ್ನಿಯ ಕುರಿತು ಆತ್ಮಚರಿತ್ರೆಯಲ್ಲಿ ಬರೆದ ಮೇಲಿನ ಮಾತುಗಳಿಂದಲೇ ಅರ್ಥಮಾಡಿಕೊಳ್ಳಬಹುದು.

ಭಾರತದ ರಾಷ್ಟ್ರೀಯ ಕಾರ್ಯದಲ್ಲಿ ಕಮಲಾ ನೆಹರುಗಳ ಕಾರ್ಯವು ಎಷ್ಟು ಮಹತ್ವವಾದುದು ಎಂಬುದು ನಾವೀಯೊಂದು ಘಟನೆಯಿಂದಲೂ ಅರಿತುಕೊಳ್ಳಬಹುದು; ಕಳೆದ ವರ್ಷ ಈ ಸ್ಮಾರಕ ವೈದ್ಯಾಲಯದ ಅಸ್ತಿವಾರ ಶಿಲೆಯನ್ನು ಹಾಕಲು ಸ್ವತಃ ಮಹಾತ್ಮಾಜಿಯೇ ಆಮಂತ್ರಿತರಾಗಿ ಬಂದಿದ್ದರು; ಮತ್ತೆ ಇಂದು, ಸತ್ಯಾಗ್ರಹದ ಸರ್ವಸೇನಾನಿಯಾಗಿ ಬಹಳ ಹೊಣೆಗಾರಿಕೆ ಹೊತ್ತಿರುವ ಗಾಂಧಿಜಿ, ತನ್ನ ಜೀವನದ ಪ್ರತಿಯೊಂದು ನಿಮಿಷವೂ ಅಮೂಲ್ಯವಾಗಿರುವಾಗ, ಅಂತಹ ಪುಣ್ಯಕಾರ್ಯದಲ್ಲಿ ಇದೂ ಒಂದೆಂದು, ಕಮಲಾ ನೆಹರುಗಳ ಸ್ಮಾರಕ ವೈದ್ಯಾಲಯದ ಉದ್ಘಾಟನೆಗೂ ಬಂದು ಅದನ್ನು ನೆರವೇರಿಸಿದರು; ಸಾವಿರಾರು ಮಂದಿ ದೀನರು, ದಲಿತರು, ಅನಾಥರು ಮುಂದೆ ಎಂದೆಂದಿಗೂ ಈ ಮಹಿಳೆಯನ್ನು, ಉಜ್ವಲ ದೇಶಭಕ್ತಳನ್ನು ನೆನೆವಂತೆ ಈ ಸ್ಮಾರಕ ವೈದ್ಯಾಲಯವು ಮಾಡುವುದರಲ್ಲಿ ಸಂಶಯವುಂಟೆ?

K. K. Rai.

★ ಸಿನೇಮಾ ಪುಟ ★

ನರಶೀ ಭಗತ್ ಚಿತ್ರ

ಪ್ರಕಾಶ ಕಂಪೆನಿಯವರು ನರಶೀಭಗತ್ ಎಂಬೀ ಹೊಸ ಭಕ್ತಿ ಚಿತ್ರವನ್ನು ತಯಾರಿಸಿದ್ದಾರೆ ಸಂತ ತುಳಸೀದಾಸ, ತುಕಾರಾಮ್, ಜ್ಞಾನೇಶ್ವರ ಮೊದಲಾದ ಚಿತ್ರಗಳ ಸಾಲಿನಲ್ಲಿ, ಈ ಚಿತ್ರವೂ ಮೆರೆಯುತ್ತಿದೆ. ಈಗಾಗಲೀ ಒಳ್ಳೆಯ ಜನಪ್ರಿಯವಾಗಿದೆ. ಸಂತರ ಪಾತ್ರ ವಹಿಸುವುದರಲ್ಲಿ ಪ್ರಸಿದ್ಧಿ ಪಡೆದ ನಟ ಮತ್ತು ನಾಯಕರಾದ ವಿಷ್ಣುಪಂತ ಪಗ್ನೀಸರೀ ಮುಖ್ಯ ಪಾತ್ರವನ್ನು ವಹಿಸಿದ್ದಾರೆ ದುರ್ಗಾಖೋಟೆ ನಾಯಕಾ ಪಾತ್ರ ವಹಿಸಿರುವಳು. ರಾಮ್‌ಮರಾಠೆಯೂ ಇದರಲ್ಲಿ ನಟಿಸುವನು.

ನರಶೀ ಭಗತ್ ಯಾರು?

ಗುಜರಾಥಿನ ಸಂತ ವಿಖ್ಯಾತರುಗಳಲ್ಲಿ ಹೆಸರುವಾಸಿ ಪಡೆದವನು ನರಶೀ ಮೆಹತಾ ಇವನು. ಬ್ರಾಹ್ಮಣನಿದ್ದು, ಕುಲೀನನಿದ್ದು, ಒಳ್ಳೆಯ ಸಂಸ್ಕೃತಿಯುಳ್ಳವನೂ ಆಗಿದ್ದನು ಅವನಿಗೆ ದೀನದಲಿತರ ಮೇಲೆ ಕರುಣೆ ಬಹಳ ದೀನದಲಿತರಲ್ಲಿ ಈತನು ಹಾಗೆ ಪ್ರೀತಿ ತೋರಿಸುತ್ತಿದ್ದುದರಿಂದಲೇ ಜನತೆಯ ಮೆಚ್ಚುಗೆಗೆ ಅವನು ಪಾತ್ರನಾದನು ಇದು ಆ ಕಾಲದಲ್ಲಿ ಪ್ರಸಿದ್ಧಿಗೆ ಬಂದ ಮಹಾಶಯನಾದ ಸಾರಂಗಧರ ಎಂಬವನಿಗೆ ಸಹಿಸಲಿಲ್ಲ. ನರಶೀ ಮೆಹತನ ಕೀರ್ತಿಶಾಲಿಯಾಗುವುದರಿಂದ ಈತನು ಮತ್ಸರಗೊಂಡನು ಈತನು ಸನಾತನಿಗಳನ್ನು—ಕುಲೀನರೆಂಬುವರನ್ನು, ಒಟ್ಟುಗೂಡಿಸಿ ನರಶೀಮೆಹತನ ವಿರುದ್ಧ ಚಳವಳ ಹೂಡುವನು ದಿನದಿನ ಪೀಡೆ ಕೊಡುತ್ತಿರುವನು ನರಶೀ ಭಗತನು ಅನೇಕ ಸಂಕಷ್ಟಗಳನ್ನು ಎದುರಿಸಬೇಕಾಗುವುದು. ಜೀವನದಲ್ಲಿ ಅಗ್ನಿಪರೀಕ್ಷೆಗೆ ಗುರಿಯಾಗಬೇಕಾಗುವುದು ಆದರೆ ದೇವರ ದಯೆಯಿಂದ ನರಶೀ ಭಗತನು ಎಲ್ಲಾ ತರದ ಯಾತನೆಗಳನು ಎದುರಿಸಿ ಗಂಡಾಂತರಗಳಿಂದ ಪಾರಾಗುವನು. ಹೀಗೆ ತನ್ನ ಅಪ್ರತಿಮ ದೈವಭಕ್ತಿಯನ್ನು — ಸಹನಾಶಕ್ತಿಯನ್ನು - ಮೆರೆಸಿ ಮತ್ತಷ್ಟು ಜನಪ್ರಿಯನಾಗುವನು. ಆತನ ಹೆಸರು ಮತ್ತೆ ಮತ್ತೆ ಮನೆಮನೆಯ ಮಾತಾಗುವುದು, ಆತನು ಬಹಳ ಪ್ರಸಿದ್ಧ ಸಂತನಾಗುವನು — ದೈವಭಕ್ತಿಯನ್ನು ಲೋಕದಲ್ಲಿ ಸಾರುವನು.

ವಿಷ್ಣುಪಂತ ಪಗ್ನೀಸ್, ದುರ್ಗಾಖೋಟೆ ಮತ್ತು ರಾಮ ಮರಾಠೆಯರು ಇವರ ಅಪ್ರತಿಮ ಅಭಿನಯಗಳಿಂದ ಈ ಚಿತ್ರಕ್ಕೆ ಹೊಸತೊಂದು ಕೀರ್ತಿ ತಂದರುವರು.

ಲೀಲಾದೇಸಾಯಿ- ಕರ್ನಾಟಕದಲ್ಲಿ

ಪ್ರಸಿದ್ಧ ನಟಿ ಮತ್ತು ನರ್ತಕಿಯಾದ ಕುಮಾರಿ ಲೀಲಾ ದೇಸಾಯಿಯು ಈಗ ಕರ್ನಾಟಕದಲ್ಲಿ ನರ್ತನ ಪ್ರವಾಸ ಮಾಡುತ್ತಿದ್ದಾಳೆ. ಮೈಸೂರು, ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ ಮೊದಲಾದ ದೊಡ್ಡ ದೊಡ್ಡ ನಗರಗಳಲ್ಲಿ ಆಕೆ ಸಂಚರಿಸುತ್ತಿರುವಳು ಕಲಾವಂತರಿಗೆ, ರಸಿಕರಿಗೆ ಕಣ್ಣು ಹಬ್ಬವಾಡುತ್ತಿದ್ದಾಳೆ ಭಾರತೀಯ ನೃತ್ಯಕಲೆಯ ಸೊಬಗನ್ನು ಜನತೆಗೆ ಸಾರುವುದೇ ಆಕೆಯ ಈ ಪ್ರವಾಸದ ಉದ್ದೇಶವಂತೆ

ಪರ್ದೇಶಿ

ರಣಜಿತ್ ಕಂಪನಿಯವರು ತಯಾರಿಸಿದ ಚಿತ್ರವಿದು. ಸ್ನೇಹಪ್ರಭಾ, ಡಿಲ್ಲಿ ಮೋರಿಯಾ, ಕುರ್ಶಿದ್ ಇವರು ಇದರಲ್ಲಿ ಅಭಿನಯಿಸುವರು

ಸಂತ ಸಖು

ಪ್ರಭಾತ ಕಂಪನಿಯವರು ತಯಾರಿಸಲಿರುವ ಇನ್ನೊಂದು ಭಕ್ತಿ ಚಿತ್ರ, ಮಹಾಪುರುಷಳಾದ ಸಂತ ಸಖುವಿನ ಅದ್ಭುತ ರಮ್ಯ ಜೀವನ ಕಥೆ ಹಂಸಾ ವಾಡಕರ ಇದರಲ್ಲಿ ಪ್ರಧಾನ ಪಾತ್ರ ವಹಿಸುವಳೆಂದು ತಿಳಿದಿದೆ

ಅಪ್ಪುತ

ವಿನಾಯಕ ಮೀನಾಕ್ಷಿ ಇವರು ಅಭಿನಯಿಸಿದರು

ನವಯುಗ ಚಿತ್ರಪಟದವರು ಅಪ್ಪುತವೆಂಬೀ ಹೊಸ ಚಿತ್ರವೊಂದನ್ನು ತಯಾರಿಸಿರುವರು ವಿನಾಯಕ್ ಮತ್ತು ಮೀನಾಕ್ಷಿ ಇವರಲ್ಲಿ ಪ್ರಮುಖ ಪಾತ್ರ ವಹಿಸಿ ಅಭಿನಯಿಸುವರೆಂದು ತಿಳಿದಿದೆ

ಕಾನನ್ ದೇವಿಗೆ- ಮೋಟರು ಅಪಘಾತ

ಕಾನನ್ ದೇವಿಯು ಮೋಟರು ಅಪಘಾತದಿಂದ ಗಾಯಗೊಂಡು ಈಗ ಕ್ಷೇಮವಾಗಿರುವಳೆಂದು ತಿಳಿದಿದೆ

ಶಾಂತಾರಾಮ್

ನಿರ್ದೇಶಕ ಶಾಂತಾರಾಮರ ಮಾರ್ಚಿ ಎರಡನೆಯ ವಾರದಲ್ಲಿ ಡಿಲ್ಲಿಯಲ್ಲಿ ಪ್ರದರ್ಶಿಸಲ್ಪಡುವ ಅವರ ಪಡೋಸಿ ಚಿತ್ರದ ಪ್ರದರ್ಶನ ಕಾಲದಲ್ಲಿ ಡಿಲ್ಲಿಗೆ ಪ್ರಯಾಣ ಬೆಳಸಲಿರುವರೆಂದು ತಿಳಿದಿದೆ.

ನಿರ್ದೋಷ

ನೇಶನಲ್ ಸ್ಟುಡಿಯೋದವರು, ನಿರ್ದೇಶಕ ವೀರೇಂದ್ರ ದೇಸಾಯಿಯವರಿಂದ ನಿರ್ದೇಶಿಸಲ್ಪಡುವ 'ನಿರ್ದೋಷ' ಎಂಬೀ ಚಿತ್ರವನ್ನು ತಯಾರಿಸುವರೆಂದು ಸುದ್ದಿ ಇದು ಹಿಂದೀ ಮತ್ತು ಮರಾಠೀ ಈ ಉಭಯ ಭಾಷೆಗಳಲ್ಲಿರುತ್ತದೆ. ಹೊಸ ನಟಿ ನಲಿನೀ ಜಯವಂತಳು ಇದರಲ್ಲಿ ಪ್ರಮುಖ ನಾಯಿಕಾ ಪಾತ್ರ ವಹಿಸುವಳಂತೆ.

ಶಾಹು ಮೋಡಕ್

ಶಾಹು ಮೋಡಕ್ ಈಗ ಪ್ರಕಾಶ ಕಂಪನಿಯನ್ನು ಸೇರಿರುವುದಾಗಿಯೂ, ಅದರ 'ಭಾರತ ಮಿಲಾಪ್' ಚಿತ್ರದಲ್ಲಿ ಮುಖ್ಯ ಪಾತ್ರ ವಹಿಸುವುದಾಗಿಯೂ ತಿಳಿದು ಬಂದಿದೆ.

ಇಂದ್ರಜಾಲದಂತೆ ಚರ್ಮದ ರೋಗಗಳು ಮಾಯವಾಗುವುದು

ಕುಟಿಕೂರಾ ಮುಲಾಮು (Cuticura Ointment) ತನ್ನ ವಾಸಿಮಾಡುವಗುಣದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು ತ್ರಾಸದಾಯಕವಾಗಿ ವೇದನೆಗೊಳಿಸಿ ತೊಂದರೆಪಡಿಸುವ ದೀರ್ಘಕಾಲದ ಕಾಲುಗಳನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ (Cuticura)ವು ಕ್ರಿಮಿಗಳನ್ನು ನಾಶಮಾಡಿ ಕ್ಷಾಲ್ಯುರಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾಕ್ಕುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಪಟ್ಟಿದ ಚರ್ಮದ ಬದಲಿಗ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು.

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು. ಇದು ಗಣನೀಯವಾಗಿ ಕೊಡುವುದು ಮತ್ತು ಕ್ರಿಮಿನಾಶಕ ಗುಣ ಉಳ್ಳದ್ದು

ಕಜ್ಜಿ, ಕುರು, ತುರಿಕಜ್ಜಿ, ಗಾಯ, ಮಚ್ಚೆ, ಪರಚುವಿಕೆ, ಸುಟ್ಟಗಾಯ, ಮುಖ್ಯವಾದ ಎಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಾಮನ್ನೇ (Cuticura Ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ... ಎಲ್ಲಿಯೂ ದೊರೆಯುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ಡೋಂಗರೆ ಬಾಲಾಮೃತವು



ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಶಿರಾಜ್ ಅಲಿ

ಶಿರಾಜ್ಅಲಿಯು ತಾಜ್‌ಮಹಾಲ್ ಎಂಬೀ ಚಿತ್ರವನ್ನು ತಯಾರಿಸುವ ಹಂಚಿಕೆಯಲ್ಲಿರುವನೆಂದು ಗೊತ್ತಾಗಿದೆ ಬೀ ಚಿತ್ರ ಸಿದ್ಧತೆಯು ಮುಗಿಯುತಾ ಬಂತು. ಲೀಲಾ ಚಿಟ್ನೀಸಳು ಇವರಲ್ಲಿ ತನ್ನ ಅಪ್ರತಿಮ ಅಭಿನಯವನ್ನು ತೋರಿಸಿರುವಳೆಂದು ತಿಳಿದುಬರುತ್ತದೆ

ಕಾಂಚನ

ಚಿತ್ರಾ ...

ಭಾರತಕ್ಕೆ

ಹಿಟ್ಲರನು ಧಾಳಿಮಾಡುವನೆ?

ಸದ್ಯಕ್ಕೆ ಸಾಧ್ಯವಾಗಲಾರದು —

ಮಿಲಿಟರಿ ತಜ್ಞರ ಅಭಿಪ್ರಾಯ

ಜನರಲ್ ಕರ್ಕ ಎಂಬವರು ಯುದ್ಧವ್ಯೂಹ ಮತ್ತು ಸೈನಿಕ ವಿಷಯಗಳಲ್ಲಿ ಅವರು ಅಧಿಕಾರವಾಣಿಯಿಂದ ಮಾತನಾಡ ಬಲ್ಲರೆಂದು ಮಾನ್ಯತೆಯನ್ನು ಪಡೆದಿರುತ್ತಾರೆ. ಬಹು ಪುರಾತನ ಕಾಲದಿಂದಲೂ ಶತ್ರುಗಳ ದಂಡುಗಳನ್ನು ಕೊಂಡುಬಂದು ವಾಯುವ್ಯದ ನೆಲ ಮಾರ್ಗಗಳಿಂದ ಜರ್ಮನಿಯು ಹಿಂದುಸ್ಥಾನವನ್ನು ಆಕ್ರಮಿಸುವ ಭಯವು ಇರುವುದಿಲ್ಲವೆಂದು ಅವರು ಅಂದಿದ್ದಾರೆ ಈ ದಾರಿಯ ನಡುವೆ ಇರುವ ಈರಾನ, ಅಫಘಾನಿಸ್ಥಾನ ಮೊದಲಾದ ರಾಜ್ಯಗಳು ಬ್ರಿಟನಿನೊಂದಿಗೆ ಸ್ನೇಹದಿಂದಿರುವುದು ಮಾತ್ರವಲ್ಲ, ಬ್ರಿಟನು ಯಾವ ಸಂಗತಿಗಾಗಿ ಜರ್ಮನಿಯೊಡನೆ ಯುದ್ಧವನ್ನು ಆರಂಭಿಸಿದೆಯೋ, ಅದರೊಂದಿಗೆ ಈ ರಾಜ್ಯಗಳ ಸಂಪೂರ್ಣ ಸಹಾನುಭೂತಿಯು ಇರುತ್ತದೆ ಈ ರಾಜ್ಯಗಳನ್ನು ಆಕ್ರಮಿಸಿ, ಸೋಲಿಸಿ, ಪಾದಾಕ್ರಾಂತ ಮಾಡಿದ ಬಳಿಕವೇ, ಜರ್ಮನಿಯು ನೆಲಮಾರ್ಗದಿಂದ ಹಿಂದುಸ್ಥಾನವನ್ನು ಆಕ್ರಮಿಸುವ ಪ್ರಶ್ನೆಯು ಬರುವುದೆಂದು ಅವರು ಹೇಳುತ್ತಾರೆ

ಪರ ಜಲಸೇನೆಯ ಶಕ್ತಿಯು ಕುಂಠಿತವಾಗುವುದು, ಮತ್ತು ಅದು ಬೇರೆ ಕೇಂದ್ರಗಳಿಗೆ ಹಂಚಿಹೋಗಿ ದುರ್ಬಲವಾಗುವುದು. ಆದ್ದರಿಂದ ಪಾರಸೀ ಕೊಲ್ಲಿಯ ಸುತ್ತುಮುತ್ತಲಿರುವ ಸಿರಿಯ, ಪೆಲೆಸ್ತೀನ ಮೊದಲಾದ ರಾಷ್ಟ್ರಗಳು ಹಿಟ್ಲರನ ದವಡೆಯೊಳಗೆ ಸಿಕ್ಕಿ ನಷ್ಟವಾಗದ ಹಾಗೆ ನೋಡಿಕೊಳ್ಳಬೇಕಾದ್ದು ಅತೀ ಅಗತ್ಯವಾಗಿದೆ. ಈ ಸಂಗತಿಯು ಆ ರಾಷ್ಟ್ರಗಳಿಗೆ ಎಷ್ಟು ಅಗತ್ಯವಾಗಿರುವದೋ, ಹಿಂದುಸ್ಥಾನಕ್ಕೂ ಅಷ್ಟೇ ಪ್ರಾಮುಖ್ಯವಾಗಿರುವುದು ಹಿಟ್ಲರನು ಪಾರಸೀ ಕೊಲ್ಲಿಯಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಲು ಸಮರ್ಥನಾಗುವುದಿಲ್ಲವಾದರೂ ಒಮ್ಮೆಗಾದರೂ ಅದಕ್ಕಾಗಿ ಭಗೀರಥ ಪ್ರಯತ್ನವನ್ನು ಮಾಡದಿರಲಾರನು ಹಿಟ್ಲರನು ಬಾಲ್ಕನ್ ರಾಷ್ಟ್ರಗಳಿಂದ ಮುಂದರಿಯುವನಾದರೆ ಟರ್ಕಿಯು ಬ್ರಿಟನಿನ ಪಕ್ಷದಲ್ಲಿದ್ದು ಯುದ್ಧ ಮಾಡದೆ ನಿರ್ವಾಹವಿರುವದಿಲ್ಲ. ಇದು ಹಿಟ್ಲರನ ಭಾರತದ ಆಕ್ರಮಣವನ್ನು ಬಹಳ ಸಮಯದ ತನಕ ಮುಂದೆಹಾಕುವುದು

ಆಕ್ರಮಣವಾದರೂ ಭಯವಿಲ್ಲ

ಟರ್ಕಿಯ ಪರಾಭವವಾಗಿ ಹಿಟ್ಲರನು ಪಾರಸೀ ಕೊಲ್ಲಿಯ ತನಕ ಬರುವನಾ

ಪಾರಸೀ ಕೊಲ್ಲಿಯಿಂದ ಆಕ್ರಮಣ

ಆದರೆ ಹಿಂದುಸ್ಥಾನಕ್ಕೆ ಜರ್ಮನಿಯ ಆಕ್ರಮಣದ ಭಯವು ಏನೇನೂ ಇರುವುದಿಲ್ಲವೆಂದು ಯಾರೂ ತಿಳಕೊಳ್ಳಬಾರದು ಪಾರಸೀ ಕೊಲ್ಲಿಯಲ್ಲಿ ಹಿಟ್ಲರನು ತನ್ನ ಅಧಿಕಾರಬಲವನ್ನು ಕೇಂದ್ರೀಕರಿಸಬಲ್ಲನಾದರೆ ಅಲ್ಲಿಂದ ಸಮುದ್ರಮಾರ್ಗವಾಗಿ ಹಿಂದುಸ್ಥಾನದ ಮೇಲೆ ದಂಡಯಾತ್ರೆಯನ್ನು ಹೂಡಲಿಕ್ಕೆ ಅವನು ಪ್ರಾಯಶಃ ಸಮರ್ಥನಾಗಬಹುದು ಪಾರ್ಸಿಕೊಲ್ಲಿಯಲ್ಲಿ ಶತ್ರುಪಕ್ಷದ ಸಬ್‌ಮೇರಿನುಗಳ ನಿಲ್ದಾಣವು ಭದ್ರವಾಗುವುದಾದರೆ, ಹಿಂದುಸಾಗರದಲ್ಲಿ ಬ್ರಿಟಿ

ದರೆ ಅವನ ಹಿಂದುಸ್ಥಾನವನ್ನು ಆಕ್ರಮಿಸುವದು ಬಹಳ ಮಟ್ಟಿಗೆ ಖಂಡಿತವೇ ಸರಿ ಆದರೆ ಆಕ್ರಮಣ ಮಾಡಿದ ಮಾತ್ರಕ್ಕೆ ಅವನು ಇಲ್ಲಿ ಯಶಸ್ವಿಯಾಗುವನೆಂದು ಹೇಳಲಾಗುವುದಿಲ್ಲ ಚೀನ ಜಪಾನುಗಳ ಸ್ಥಿತಿಯನ್ನೇ ನೋಡುವ ಜರ್ಮನಿಯಂತೆ ಜಪಾನು ಅತ್ಯಾಧುನಿಕ ಯುದ್ಧಸಾಮಗ್ರಿಗಳಿಂದ ಸುಸಜ್ಜಿತವಾದದ್ದು ಆದರೂ ವರ್ಷಗಳ ಮೇಲೆ ವರ್ಷಗಳು ಕಳೆದರೂ ಜಪಾನಿಗೆ ಚೀನವನ್ನು ಸೋಲಿಸುವುದು ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಇಷ್ಟೇ ಹಿಂದುಸ್ಥಾನದಂತೆ ಚೀನವು ವೈಜ್ಞಾನಿಕ ಯುದ್ಧದಲ್ಲಿ ಸಮರ್ಥವಲ್ಲವಾದರೂ ಅದು ವಿಶಾಲ

ವಾಗಿದೆ ಅದರ ಭೌಗೋಲಿಕ ಸನ್ನಿವೇಶಗಳು ಆಕ್ರಮಣಕಾರಿಗಳಿಗೆ ಪ್ರತಿಕೂಲವಾಗಿವೆ ಜನಸಂಖ್ಯೆಯೂ ಅಪಾರವಾಗಿದೆ. ಹಿಂದುಸ್ಥಾನವು ಈ ವಿಷಯಗಳಲ್ಲಿ ಚೀನವನ್ನು ಹೋಲುವುದು ಮಾತ್ರವಲ್ಲ, ಹಿಂದುಸ್ಥಾನದ ಸೇನೆಯು ಈಗಿರುವಂತೆ ಕೂಡ ಚೀನದ ಸೇನೆಗಿಂತ ಉತ್ತಮವೂ ಶಿಕ್ಷಿತವೂ ಸಮರ್ಥವೂ

ಆಗಿದೆ. ಆದ್ದರಿಂದ ಹಿಟ್ಲರನು ಹಿಂದುಸ್ಥಾನವನ್ನು ಗೆಲ್ಲುವುದು ಮಂಡಿತಿಂದ ಹಾಗೆ ಸುಲಭವಿರುವುದಿಲ್ಲ. ಅಂತೂ ಹಿಂದುಸ್ಥಾನದ ಸೈನಿಕ ತಯಾರಿಯು ಪ್ರಚಂಡ ವೇಗದಿಂದ ನಡೆಯುತ್ತಲಿರುವುದು ಎಂದು ಅವರು ಅಭಿಪ್ರಾಯಪಡುತ್ತಾರೆ.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳು ನಿಯಮಗಳಿಗನುಸಾರವಾಗಿ ನಡೆಯುವ ದೇಶಗಳಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

½ ಸೇರಿಗೆ ರೂ 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ ಎ., ಎಫ್ ಸಿ ಎಸ್ (ಲಂಡನ್) ಎಂ. ಎಸ (ಅಮೇರಿಕ

ಆಯುರ್ವೇದ ಶಾಸ್ತ್ರಿ,

ಭಾಗಲ್ಪುರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೇ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ

ಮಂಗಳೂರು ಏಜಂಟ್ಸ್ ಷಾ ಕಂಪೆನಿ, ಹಂಪನಕಟ್ಟಾ ಮಂಗಳೂರು

THE

Canara Banking Corporation Ltd.,

(INCORPORATED IN BRITISH INDIA)

Estd: 1906

Head Office UDIPI, S Kanara.

Our attractive Rates on Deposits.

FIXED DEPOSITS

3 to 6 months	2½% p. a.
6 to 9 ,,	3% ,,
One year	3½% ,,
Two years	4% ,,
SHORT TERM Deposits	1½% p. a
Current-Account	1% p. a
Savings Bank	2½% *

Particulars of other kinds of depositson application.

ಯುದ್ಧಗಳಲ್ಲಿ ಆಗುವ ದ್ರವ್ಯಹಾನಿ!

ಕೇಳಿದರೆ ತಲೆ ತಿರುಗುವುದು

ಚೀನಕ್ಕೂ ಜಪಾನಿಗೂ ಯುದ್ಧವು ಆರಂಭವಾಗಿ ನಾಲ್ಕು ವರ್ಷಗಳಾದುವು. ಈ ನಾಲ್ಕು ವರ್ಷಗಳಲ್ಲಿ ಜಪಾನು ಯುದ್ಧ ಸಂಬಂಧವಾಗಿ ಮಾಡಿದ ಖರ್ಚೆಷ್ಟೆಂದು ತಿಳಿದಿದೆಯೆ? ಅದು ಹದಿನೇಳುವರೆ ಸಾವಿರ ಮಿಲಿಯ ಎನ್ನುಗಳು ಆಗುತ್ತದೆ. ಹೀಗೆಂದು ಜಪಾನ ಸರಕಾರದ ಮಿಲಿಟರಿ ಖಾತೆಯೇ ಪ್ರಕಟಮಾಡಿದೆ. ಅನ್ಯಾಗ ಈ ಖರ್ಚು ಮೇಲೆ ಕೊಟ್ಟ ಸಂಖ್ಯೆಗಿಂತ ಎಷ್ಟು ಮಾತ್ರಕ್ಕೂ ಕಡಿಮೆಯಾಗಿರುವ ಕಾರಣವಿಲ್ಲ. ಪ್ರಾಯಶಃ ಅದು ಇನ್ನೂ ಹೆಚ್ಚಾಗಿಯೇ ಇರಬಹುದು ಇಷ್ಟು ಹಣದಲ್ಲಿ ಹದಿನೈದುವರೆ ಸಾವಿರ ಎನ್ನುಗಳ ಹಣವು ಸರಕಾರಕ್ಕೆ ಬೋಂಡುಗಳನ್ನು ಮಾರಿ ದೊರಕಿತು.

ಬ್ರಿಟಿಷ್ ಸರಕಾರದ ವೆಚ್ಚ

ಈಗ ಬ್ರಿಟನು ಜರ್ಮನಿಯೊಂದಿಗೆ ಯುದ್ಧಾಸಕ್ತವಾಗಿದೆ ಸದ್ಯದಲ್ಲಿಯೇ ಬ್ರಿಟಿಷ್ ಸರಕಾರವು ಅನೇಕ ಮಿಲಿಯ ಪವನುಗಳ ಯುದ್ಧ ವೆಚ್ಚಕ್ಕೆ ಪಾರ್ಲಿಮೆಂಟಿನ ಅನುಮತಿಯನ್ನು ಕೇಳಲಿಕ್ಕೆ ಇದೆ ಪ್ರಾಯಶಃ ಈ ಅನುಮತಿಯು ೧,೦೦೦,೦೦೦,೦೦೦ ಪವನುಗಳಿಗೆ ಇರಬಹುದೆಂದು ಊಹಿಸಲಾಗಿದೆ. ಹೀಗೆ ಖರ್ಚಿಗೆ ಅನುಮತಿಯನ್ನು ಕೇಳಿದ್ದು ಈ ವರ್ಷದಲ್ಲಿ ಇದು ಮೂರನೆಯ ಬಾರಿ. ಹಿಂದೆ ಎರಡು ಬಾರಿಗೆ ೨,೦೦೦,೦೦೦,೦೦೦ ಪವನುಗಳ ವೆಚ್ಚಕ್ಕೆ ಪಾರ್ಲಿಮೆಂಟಿನ ಮಂಜೂರಾತಿ ದೊರಕಿದೆ ಈ ಬಾರಿಯ ಅನುಮತಿಯನ್ನು ಕೇಳುವಾಗ ಬ್ರಿಟಿಷ ಸರಕಾರದ ಕೋಶಾಧ್ಯಕ್ಷರಾದ ಸರ್ ಕಿಂಗ್‌ಸ್ಲೆ ಉಡ್‌ರವರು ಬ್ರಿಟನಿನ ಆರ್ಥಿಕ ಸ್ಥಿತಿಗತಿಗಳ ಸಿಂಹಾವಲೋಕನವನ್ನು ಮಾಡಲೂ ಬಹುದು ಆಗ ಜನತೆಯ ಮೇಲೆ ಹೊಸ ಕಂದಾಯಗಳು ಬೀಳುವ ಸಂಭವವು ಗೊತ್ತಾಗುತ್ತದೆ

ಇತರ ರಾಷ್ಟ್ರಗಳಲ್ಲಿ

ಜಪಾನಿನಂತೆ ಚೀನ, ಬ್ರಿಟನಿನಂತ ಜರ್ಮನಿ ಇಟಲಿಗಳೂ ಯುದ್ಧಾಸಕ್ತವಾಗಿವೆ. ಅಂತರ್ರಾಷ್ಟ್ರೀಯ ಪರಿಸ್ಥಿತಿ ಸ್ಫೋಟದಾಗಿ, ಯುದ್ಧಾಸಕ್ತವಾಗಿರದಿದ್ದರೂ ಸೈನ್ಯ ಸರಂಜಾಮು, ಶಸ್ತ್ರೋಪಕರಣ ಇತ್ಯಾದಿ ಸೈನಿಕ ಸಿದ್ಧತೆಗಳಿಗಾಗಿ ಹಣ ಖರ್ಚುಮಾಡದಿರುವ ರಾಷ್ಟ್ರವು ಒಂದೂ ಇರುವುದಿಲ್ಲ. ಹೀಗೆಂದ ಮೇಲೆ ಯುದ್ಧ ಅಥವಾ ಯುದ್ಧಭಯದಿಂದ ಮಾಡುವ ಖರ್ಚು ಅದೆಷ್ಟೋ,—ಇದನ್ನು ಮೇಲಿನ ಎರಡು ಉದಾಹರಣೆಗಳಿಂದಲೇ ತಿಳಿಯಬಹುದು. ಈ ಖರ್ಚನ್ನು ಅಂಕೆಗಳಿಂದ ಬರೆದು ತೋರಿಸುವುದು ವ್ಯರ್ಥ ಪ್ರಯಾಸವೇ ಸರಿ. ಯುದ್ಧಗಳಂಥ ವಿನಾಶಕಾರಿ ಯೋಜನೆಗಳಿಗಾಗಿ ಸಂಪತ್ತು ಸೂರೆಯಾಗುತ್ತಿರುವುದರಿಂದಲೇ ಪ್ರಪಂಚದಲ್ಲಿ ದುಃಖ ದಾರಿದ್ರ್ಯಗಳು ಬೆಳೆಯುತ್ತಿವೆ. ಸ್ವರ್ಗದಂಥ ಪ್ರಪಂಚವು ನರಕಸಮಾನವಾಗಿದೆ.

ಡಿಫೆನ್ಸ್ ಓಫ್ ಇಂಡಿಯಾ ಏಕ್ಟಿಗೆ ಬಲಿ!

೧೩೮೩೧ ಜನರು

ಸತ್ಯಾಗ್ರಹದಲ್ಲಿ ೩೧೮೧ ಜನರಿಗೆ ಶಿಕ್ಷೆ

ಅಸೆಂಬ್ಲಿಯಲ್ಲಿ ಮಾಕ್ಸವೆಲ್ಲರ ಹೇಳಿಕೆ

ಡಿಫೆನ್ಸ್ ಓಫ್ ಇಂಡಿಯಾ ಏಕ್ಟಿನಂತೆ ಕೇಂದ್ರ ಸರಕಾರದವರು ೪೫, ಮದ್ರಾಸ್ ಸರಕಾರದವರು (ಜನವರಿ ೩೧ರ ವರೆಗೆ) ೯೨, ಮುಂಬಯಿಯವರು ೧೨೬, ಬಿಹಾರ ೭೭೫, ಮಧ್ಯಪ್ರಾಂತ ೨೬, ಗಡಿನಾಡ ೨, ಆಸಾಮು ೯ ಇಷ್ಟು ಜನರನ್ನು ಸ್ಥಾನಬದ್ಧತೆಯಲ್ಲಿ ಇರಿಸಿರುವರೆಂದು ಸರದಾರ ಸಂತಸಿಂಗರ ಕೇಳಿಕೆಗೆ ಉತ್ತರರೂಪವಾಗಿ ಕೇಂದ್ರ ಎಸೆಂಬ್ಲಿಯಲ್ಲಿ ಗೃಹಮಂತ್ರಿಗಳಾದ ಸರ್ ರಜಿನಾಲ್ಡ ಮಾಕ್ಸವೆಲ್ಲರು ಹೇಳಿಕೆ ಕೊಟ್ಟರು.

ಸಿಂಧ ಮತ್ತು ಒರಿಸಾಗಳಲ್ಲಿ ಯಾರೂ ಸ್ಥಾನಬದ್ಧತೆಯಲ್ಲಿ ಇಲ್ಲ. ಈ ಅಂಕೆಗಳು ಬಹಿವಾರು ಗೊತ್ತಿಲ್ಲೆಂದು ಅವರು ಹೇಳಿದರು. ಒಟ್ಟು ಇಲ್ಲಿಯ ವರೆಗ ಈ ಏಕ್ಟಿನಂತೆ ಕೈದು ಮಾಡಿದ ಖಟ್ಲೆಗೆ ಗುರಿಯಾದ ಹಾಗೂ ಸದ್ಯಕ್ಕೆ ಶಿಕ್ಷೆಯನ್ನು ಅನುಭವಿಸುತ್ತಿರುವವರ ಸಂಖ್ಯೆ ಅನುಕ್ರಮವಾಗಿ ೫,೭೦೭,೯೩೮ ಮತ್ತು ೭೯೮ ಇರುವರು. ಅಲ್ಲದೆ ಯುಕ್ತಪ್ರಾಂತ ಮತ್ತು ಬಿಹಾರಗಳಲ್ಲಿ ಖಟ್ಲೆಗೆ ಗುರಿಮಾಡಲ್ಪಟ್ಟವರ ಸಂಖ್ಯೆ ಹಾಗೂ ಗಡಿನಾಡು, ಬಲೂಚಿಸ್ತಾನ ಮತ್ತು ಒರಿಸಾಗಳಲ್ಲಿ ಶಿಕ್ಷೆಯಾದವರ ಅಂಕೆಗಳು ತಿಳಿದು ಬಂದಿಲ್ಲವಂತೆ

ಸತ್ಯಾಗ್ರಹದಲ್ಲಿ ೧೫-೨-೪೧ರ ವರೆಗ ಕೆಳಗೆ ತೋರಿಸಿದಂತೆ ಜನರು ಶಿಕ್ಷೆಗೊಳಗಾಗಿರುವರೆಂದು ಹೇಳಲ್ಪಟ್ಟಿತು — ಮದ್ರಾಸ ೭೨೦, ಮುಂಬಯಿ ೫೨೨ ಬಂಗಾಲ ೫೫, ಯುಕ್ತಪ್ರಾಂತ ೧೬೭, ಪಂಜಾಬ ೩೭೭ ಬಿಹಾರ ೧೧೭, ಮಧ್ಯಪ್ರಾಂತ ೨೦೩, ಆಸಾಮ ೯೩೭, ಗಡಿನಾಡ ೧, ಒರಿಸಾ ೨೭೪, ಸಿಂಧ ಯಾರೂ ಇಲ್ಲ ಕೊಡಗು ೬ ದಿಲ್ಲಿ ೬೭ (ಅಜ್ಮೀರವನ್ನು ಹಿಡಿದು) ಅಜಮೀರ ಮಾರವಾಡ ೫ ಮತ್ತು ಬಲೂಚಿಸ್ತಾನ ಯಾರೂ ಇಲ್ಲ

ನೋಟೀಸು

ಪುತ್ತೂರು ಡಿ ಮು. ಕೋರ್ಟಿನಲ್ಲಿ
O. S. No 39/41

ವಾದಿ— ವಾದಿಳು,
ರತಿದೇವಿ, ನಗರೇಶ್ವರ ಅಧಿರಾಜಶೆಟ್ಟಿಯ ಹೆಂಡತಿ
ವ ದೇವಶಿ ವರ್ಣಯ ಹೆಂಗಸಿನ ಮನೆ
ಮೂಡಬಿದ್ರೆ ಜೈನರ ಪೇಟೆ, ಪ್ರಾಂತ್ಯ ಗ್ರಾಮ, ಕಾರ್ಕಳ ತಾಲೂಕು

— ಪ್ರತಿವಾದಿಳು

ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನೆಂದರೆ, ಸದರಿ ವಾದಿಳು ಪುತ್ತೂರು ಡಿ. ಮು. ಕೋರ್ಟಿನಲ್ಲಿ ಪ್ರತಿವಾದಿಯಿಂದ ಬರತಕ್ಕ ರೂ. 188-0-0 ನ ಕೋರ್ಟಿ ಖರ್ಚಿಗೂ ಮಾಡಿದ ಮೇಲಿನ ದಾವೆಯು ತಾ. 26-8-41ಕ್ಕೆ ಹತ್ತು ಘಂಟೆ ಮುಂಜಾನೆಗೆ ಕಡೇ ತೀರ್ಪಿಗೆ ಇಟ್ಟಿದೆ. ಆ ದಿವಸ ಆ ಸಮಯ ಪ್ರತಿವಾದಿಳು ಕೋರ್ಟಿನಲ್ಲಿ ಹಾಜರಾಗದಿದ್ದರೆ ಅವಳನ್ನು ಗೈರ್ಹಾಜರಿ ಮಾಡಿ ತೀರ್ಮಾನಿಸಲಾಗುತ್ತದೆ.

ಪುತ್ತೂರು } (sd) M. Pundarika Bhat,
3-8-41 }

ನಿಮಗೆ ಮಲಬದ್ಧತೆಯು ಬಾಧಿಸುತ್ತಿದ್ದರೆ ... ಗ್ಲಾಸ್ ... ಲಿವರ್ ಸಾಲ್ಟನ್ನು ತೆಗೆದುಕೊಂಡು ... ಪಿತ್ತಕೋಶವನ್ನು ಸಂಪೂರ್ಣವಾಗಿ ಶುದ್ಧಿಗೊಳಿಸುತ್ತದೆ ... ರಕ್ತವನ್ನು ಶುದ್ಧಿಗೊಳಿಸುವುದು ಮತ್ತು ... ಹೊಸ ಚೈತನ್ಯವನ್ನು ತರುತ್ತದೆ
... ಎಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಳ್ಳಿ

ANDREWS LIVER SALT



ಆರೋಗ್ಯಕರ ... ಮತ್ತು ... ಆರೋಗ್ಯ ...
... ರೂ. 11
... ರೂ. 1

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹೆರಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಸಿರಿನಲ್ಲಿ ವಿಶೇಷ ಮಕ್ಕಳಾಗುವುದರಿಂದ ಹಾನಿಯಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಪಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರಿಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗುವುದು. ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ನೋಡಲೇ ಪೂರಾ ವಿಚಾರವಾದಿ ಔಷಧ, ಬೇರಿಂ. ಮ. ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಮೂಹಿಮ, ಪಾಸೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ೪-೦-೦

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C

ವಿಜ್ಞಾನಯುಗ

ಶರೀರವೇಗಗಳನ್ನು ತಡೆದರೆ ಪ್ರಾಣಹಾನಿ ಆಗುವದು

ಅಧೋವಾಯು, ಮಲವಿಸರ್ಜನೆ, ಮೂತ್ರವಿಸರ್ಜನೆ, ಆಕಳಿಕೆ, ಅಶ್ರುನಿಪಾತ, ಸೀನುವುದು, ತೇಗುವುದು, ಕಾರುವುದು, ವೀರ್ಯಸ್ಖಲನ, ಹಸಿವು, ಬಾಯಾರಿಕೆ, ಶ್ವಾಸೋಚ್ಛ್ವಾಸ ಮತ್ತು ನಿದ್ರೆ ಇವು ಹದಿಮೂರನ್ನು ಶರೀರದ ವೇಗಗಳೆಂದು ಕರೆಯುತ್ತಾರೆ. ಲಜ್ಜೆ, ಪ್ರಮಾದ, ಸಂಕೋಚ, ಅಥವಾ ಬೇರೆ ಯಾವ ಕಾರಣದಿಂದಲಾದರೂ ಈ ವೇಗಗಳನ್ನು ತಡೆಯಕೂಡದೆಂದು ಶರೀರ ಶಾಸ್ತ್ರಜ್ಞರು ಹೇಳುವರು. ಇವುಗಳನ್ನು ತಡೆಯುತ್ತಿರುವುದರಿಂದ ಅನೇಕ ಬಗೆಯ ಶರೀರ ಶಿಥಿಲತೆಗಳೂ, ರೋಗವ್ಯಾಧಿಗಳೂ ಕಾಣಿಸಿಕೊಂಡು ಜನರು ತುಂಬಾ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಮತ್ತೆ ಅಕಾಲದಲ್ಲಿಯೇ ಮೃತ್ಯುವಶರಾಗಬೇಕಾಗುತ್ತದೆ. ಆದ್ದರಿಂದ ಶರೀರಾರೋಗ್ಯವನ್ನು ಎಲ್ಲಕ್ಕಿಂತ ಹೆಚ್ಚಿನದನ್ನಾಗಿ ತಿಳಿದಿರುವವರು ಈ ಶರೀರ ವೇಗಗಳನ್ನು ಎಷ್ಟುಮಾತ್ರಕ್ಕೂ ತಡೆಯಕೂಡದು. ಅವರು ಅವುಗಳ ಸ್ವಾಭಾವಿಕ ನಿವಾರಣೆಗೆ ಬೇಕಾದ ಅವಕಾಶವನ್ನು ಅವು ಕಾಣಿಸಿಕೊಂಡಂತೆ ಕಲ್ಪಿಸಿಕೊಡಬೇಕು.

ಭಾರತೀಯ ವಿಜ್ಞಾನಿಯ ಅಮೂಲ್ಯ ಶೋಧ

ಪೆಟ್ಟು ಮಾಡಿಕೊಳ್ಳುವುದು, ಗಾಯ ಮೊದಲಾದ ಕಾರಣಗಳಿಂದ ರಕ್ತವು ದೊಡ್ಡ ಪರಿಮಾಣದಲ್ಲಿ ಹೊರಗೆ ಹರಿದು ಹೋಗಿ ಮನುಷ್ಯನು ಸಾಯುತ್ತಾನೆ. ರಣರಂಗಗಳಲ್ಲಿ ಕತ್ತಿ ತುಪಾಕಿಗಳ ಪೆಟ್ಟಿನಿಂದ ಇಂಥ ಅಪಘಡಗಳಾಗುವುದು ಹೆಚ್ಚು. ಕಳೆದ ಮಹಾಯುದ್ಧದಲ್ಲಿ ರಕ್ತಸ್ರಾವದಿಂದ ದುರ್ಬಲನಾಗಿ ಸಾಯಲಿಕ್ಕಾದವನ ಶರೀರದೊಳಗೆ ದೃಢಕಾಯನಾದ ಮತ್ತೊಬ್ಬನ ರಕ್ತವನ್ನು ತುಂಬಿಸಿ ಅವನನ್ನು ಬದುಕಿಸುತಿದ್ದರು. ಆದರೆ ಈ ರೀತಿ ರಕ್ತವು ಕೆಡದಂತೆ ಅದನ್ನು ತೆಗೆದು ಒಂದು ಕಡೆಯಿಂದ ಒಂದು ಕಡೆಗೆ ಒಯ್ಯಲಿಕ್ಕೆ ಬಹಳ ಹಣವನ್ನು ಖರ್ಚು ಮಾಡಬೇಕಾಗಿದ್ದಿತ್ತು. ಬಹಳ ಪರಿಶ್ರಮ ಪಡಬೇಕಾಗಿದ್ದಿತು. ಸಕಾಲದಲ್ಲಿ ರಕ್ತವು ಒದಗಿ ಬಾರದೆ ಅನೇಕರು ಸಾಯುತಿದ್ದರು. ಈ ಎಲ್ಲ ಕಷ್ಟಗಳಿಂದ ಪಾರಾಗುವುದಕ್ಕೋಸ್ಕರ ಭಾರತೀಯ ವಿಜ್ಞಾನಿಯೊಬ್ಬನು ಕೆಲವು ಶೋಧಗಳನ್ನು ಮಾಡಿ ರಕ್ತಸ್ರಾವದಿಂದ ದುರ್ಬಲರಾದವರಿಗೆ ರಕ್ತದ ಇಂಜೆಕ್ಷನನ್ನೇ ಕೊಡಬೇಕಾಗಿಲ್ಲವೆಂದೂ, ರಕ್ತವನ್ನು ಹೆಪ್ಪುಕಟ್ಟುವ ಪ್ಲಾಸ್ಮಾ ಎಂಬ ಬಣ್ಣವಿಲ್ಲದ ರಕ್ತದೊಳಗಿನ ದ್ರಾವಕವನ್ನು ಇಂಜೆಕ್ಟ್ ಮಾಡಿದರೂ, ಅದು ರಕ್ತದ ಇಂಜೆಕ್ಷನಿನಷ್ಟೇ ಫಲದಾಯಕವಾಗಿರುವುದೆಂದೂ ಕಂಡುಕೊಂಡಿರುವನು. ರಕ್ತದೊಳಗಿನ ಹೆಪ್ಪುಕಟ್ಟುವ ಈ ದ್ರಾವಕವನ್ನು ಒಂದು ಕಡೆಯಿಂದ ಒಂದು ಕಡೆಗೆ ಸಾಗಿಸುವುದೂ, ಅದನ್ನು ರಕ್ತದಿಂದ ಬೇರೆ ಮಾಡಿ ಗಟ್ಟಿ ಕಟ್ಟುವುದೂ ಸುಲಭವಾಗಿದೆ. ಈಗ ಈ ವಿಷಯವಾದ ಇನ್ನೂ ಕೆಲವು ಪರಿಶೋಧನೆಗಳು ಕಲ್ಕತ್ತದ ಟ್ರಾಪಿಕಲ್ ಸ್ಕೂಲ್ ಆಫ್ ಮೆಡಿಸಿನ್ ಎಂಬ ಸಂಶೋಧನಾಲಯದಲ್ಲಿ ನಡೆದಿದ್ದು ದಿನಸಕ್ಕೆ ೧೦೦—೧೫೦ ಪಿಂಟುಗಳಷ್ಟು ಪ್ಲಾಸ್ಮಾ ದ್ರಾವಕವನ್ನು ಒಣಗಿಸುವ ಒಂದು ಕಾರ್ಖಾನೆಯನ್ನು ಅಲ್ಲಿ ತೆರೆಯುವ ಏರ್ಪಾಡುಗಳು ಆಗಿವೆ.

ಕ್ಷಯರೋಗಕ್ಕೆ ಗುಪ್ತ ಚಿಕಿತ್ಸೆ

ಬ್ಯೂನೋಸ್ ಏರಿಸ್ ಎಂಬ ದಕ್ಷಿಣ ಅಮೇರಿಕದ ಒಂದು ನಗರದ ಒಬ್ಬ ವೈದ್ಯತಜ್ಞರು ಕ್ಷಯರೋಗಕ್ಕೆ ಒಂದು ಇಂಜೆಕ್ಷನ ದ್ರಾವಕವನ್ನು ಕಂಡುಹಿಡಿದಿದ್ದಾರೆ. ಇದು ಕ್ಷಯಕ್ಕೆ ರಾಮಬಾಣ ಔಷಧಿಯಾಗಿರುವುದಂತೆ. ಅನೇಕರ ಮೇಲೆ ಅದರ ಪ್ರಯೋಗ ನಡೆದು, ಅದು ಫಲಕಾರಿ ಎಂಬುದು ಸಿದ್ಧವಾಗಿದೆ. ಈ ಔಷಧಿಯೊಂದು ತಯಾರಾಗಿರುವುದೆಂದು ಒಂದು ಪತ್ರಿಕೆಯಲ್ಲಿ ಪ್ರಕಟವಾದುದೇ ತಡ, ಸಾವಿರಾರು ಕ್ಷಯರೋಗಿಗಳು ಅವರ ವೈದ್ಯಾಲಯವನ್ನು ಮುತ್ತಿ ತಮಗೆ ಆ ಚಿಕಿತ್ಸೆ ಮಾಡಿರೆಂದು ಬಹಳ ಗಲಭೆ ಮಾಡಿದರು. ಪೋಲೀಸರು ಬಂದು ಶಾಂತಿಸ್ಥಾಪನೆ ಮಾಡಬೇಕಾಯಿತು. ಈ ವೈದ್ಯತಜ್ಞರು ತಮ್ಮ ಪರಿಶೋಧನೆಯ ರಹಸ್ಯವನ್ನು ಬಯಲುಮಾಡಿರುವುದಿಲ್ಲ. ಅಮೇರಿಕದ ಆರೋಗ್ಯ ಇಲಾಖೆಯವರೂ ಇತರ ಸರ್ವಜನೋಪಕಾರಿ ಸಂಸ್ಥೆಗಳೂ ಕೇಳಿದ್ದಾದರೂ ಕೂಡ ಈ ವೈದ್ಯರು ಔಷಧಿಯನ್ನು ಗುಟ್ಟಾಗಿಯೇ ಇಟ್ಟುಕೊಂಡಿದ್ದಾರೆ. ಈ ಔಷಧವನ್ನು ಇಂಜೆಕ್ಷನ ಮಾಡಿದಲ್ಲಿ ಕ್ಷಯರೋಗಾಣುಗಳನ್ನು ನಿರೋಧಿಸುವ ಅಣುಗಳು ಶರೀರದಲ್ಲಿ ವೃದ್ಧಿಯಾಗುವವು. ಇದೇ ಈ ಔಷಧಿಯ ಗುಟ್ಟಾಗಿರುವುದು.

ಪ್ರತಿಯೊಬ್ಬರೂ ಹಣವನ್ನು ಉಳಿಸುತ್ತಿದ್ದಾರೆ ಈ ರೀತಿಯಲ್ಲಿ



ನೀವು ಮಾಡಬೇಕಾದದ್ದು ಇಷ್ಟೇ ಇಷ್ಟು:

ಪೋಸ್ಟಾಫೀಸಿಗೆ ಹೋಗಿ, ಡಿಫೆನ್ಸ್ ಸೇವಿಂಗ್ಸ್ ಕಾರ್ಡ್ ಬೇಕೆಂದು ಕೇಳುವುದು—ಅದು ನಿಮಗೆ ಉಚಿತವಾಗಿ ಕೊಡಲ್ಪಡುವುದು. ಅನಂತರ ನಿಮಗೆ ಎಷ್ಟು ಸಾಧ್ಯವೋ ಅಷ್ಟು, ೪ ಆಣೆ, ೮ ಆಣೆ, ೧ ರೂಪಾಯಿ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪುಗಳನ್ನು ನಿಮ್ಮಲ್ಲಿ ಹಣವಿದ್ದಾಗ ಕೊಳ್ಳುವುದು. ಕಾರ್ಡಿನ ಮೇಲೆ ೧೦ ರೂಪಾಯಿ ಬೆಲೆಯಾಗುವಷ್ಟು ಸ್ಟಾಂಪುಗಳನ್ನು ಅಂಟಿಸಿದ ಮೇಲೆ ಅದನ್ನು ಸೇವಿಂಗ್ಸ್ ಬ್ಯಾಂಕ್ ವ್ಯವಹಾರ ಮಾಡುವ ಯಾವುದಾದರೂ ಪೋಸ್ಟಾಫೀಸಿಗೆ ಕೊಟ್ಟರೆ; ನಿಮಗೆ ೧೦ ರೂಪಾಯಿನ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ ಕೊಡಲ್ಪಡುವುದು. ಈ ಸರ್ಟಿಫಿಕೇಟು ಹತ್ತು ವರ್ಷಗಳಲ್ಲಿ ರೂ. ೧೪—೮—೦ ಬೆಲೆಯದಾಗುತ್ತದೆ. ಇದರ ಮೇಲೆ ಆದಾಯ ತೆರಿಗೆ ಇಲ್ಲ. ಹತ್ತು ವರ್ಷಕ್ಕೆ ಮೊದಲೇ ನಿಮಗೆ ಎಂದಾದರೂ ಹಣ ಬೇಕಾದಲ್ಲಿ, ಅಂದಿನವರೆಗಿನ ಬಡ್ಡಿ ಸಮೇತ ಅದು ನಿಮಗೆ ಹಿಂದಕ್ಕೆ ಕೊಡಲ್ಪಡುವುದು.

ರಕ್ಷಣೆಗಾಗಿ ಹಣ ಉಳಿಸಿರಿ

ಕೊಳ್ಳಿರಿ:

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

GI Hn-22

ನೋಟೀಸು.

ಮಂಗಳೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ

R. E. P. No. 698/40
in O. S. No. 337/28.

ಶ್ರೀ ಕಾವಿ ಸುಬ್ರಾಯ ದೇವರ ಭಂಡಾರ, ಇದ್ರ ಟ್ರಸ್ಟಿ ಬಜ ಅನಂತ ಭಟ್ಟ—ಅರ್ಜಿದಾರ.

ಮತ್ತು

ಪದ್ಮನಾಭ ಹೊಳ್ಳ ಕೂಡಾ—ರೆಸ್ಪೊಂಡೆಂಟರು

ಇವರೊಳಗೆ

1. ಪದ್ಮನಾಭ ಹೊಳ್ಳ ಸುಬ್ರಾಯ ಹೊಳ್ಳರ ಮಗ, 2. ಸುಬ್ರಾಯ ಹೊಳ್ಳ, 3. ಶಂಕರನಾರಾಯಣ ಹೊಳ್ಳ, ಮ್ಯಾನರು ಗಾರ್ಡಿಯನ್ ತಾಯಿ ಗೌರಮ್ಮ, 4. ನರಸಿಂಹ ಹೊಳ್ಳ—ಮಹಾಲಿಂಗ ಹೊಳ್ಳರ ಮಗ, ಮ್ಯಾನರ ಗಾರ್ಡಿಯನ್ ತಾಯಿ ಕಾವೇರಮ್ಮ.

ಎಲ್ಲರೂ ಕಾಸ್ರಗೋಡು ತಾಲೂಕು ಪಾಪ್ಪದ ಗ್ರಾಮದ ಪೆರ್ಲಾಡಿಯಲ್ಲಿರುವವರು.

ಇವರಿಗೆ ತಿಳಿಯಪಡಿಸುವದೇನಂದರೆ:—

ಅರ್ಜಿದಾರ-ಟ್ರಸ್ಟಿ ಬಜ, ಅನಂತ ಭಟ್ಟನು ಮೇಲಿನ ಕೋರ್ಟಿಗೆ O. S. No. 338/28 ನೇ ನಂಬ್ರದಲ್ಲಿ ಆಸ್ತಿಗಳ ಮಾರಾಟದ ಬಗ್ಗೆ ಮೇಲಿನ ಅಮ್ಲುಜ್ಯಾರಿಯನ್ನು ವಾಕ್ಲು ಮಾಡಿರುತ್ತಾನೆ. ಸದ್ರಿ ಅರ್ಜಿಯು ತಾ. 15—3—41ಕ್ಕೆ ಇಟ್ಟಿರುತ್ತದೆ. ಈ ಕುರಿತು ನಿಮ್ಮ ಆಕ್ಷೇಪವೇನಾದರೂ ಇದ್ದಲ್ಲಿ ಆ ದಿವಸಕ್ಕೆ ಸದ್ರಿ ಕೋರ್ಟಿನ ಮುಂದೆ ಮಧ್ಯಾಹ್ನ ಗಂಟೆ 10-30ಕ್ಕೆ ಹಾಜರಾಗಿ ಜ್ಯಾಬೀತು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಉಜ್ರು ಶಿವಾಯ ಸದ್ರಿ ಅರ್ಜಿ ಸಂಬ್ರನ್ನ ತೀರ್ಮಾನಿಸಲ್ಪಡುವುದು.

ಮಂಗಳೂರು
6—3—41

ಎಸ್. ವೆಂಕಟ್ರಾವ್,
ಅರ್ಜಿದಾರನ ಕಡೆ ವಕೀಲ

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ

HALFTONE & LINE
BLOCK MAKING
UNDERTAKEN

Sharada Press,
MANGALORE

ಬಹುಮಾನ

[ಕಳೆದ ಪುಟದಿಂದ ಮುಂದುವರಿದುದು]

ಒಟಸನು ಅನಾಥ ಬಾಲಕ. ತಂದೆ ತಾಯಿಗಳು ಯಾರೆಂಬುದು ಆತನಿಗೆ ತಿಳಿಯದು. ಚಿಕ್ಕಂದಿನಿಂದಲೂ ಅನಾಥಾಲಯದಲ್ಲಿ ಬೆಳೆದಿದ್ದನು. ಆತನಿಗೆ ಚಿಕ್ಕಂದಿನಿಂದಲೂ ಹಾಡುವುದರಲ್ಲಿ ಪ್ರೀತಿ. ಕಂಠವೂ ಮಧುರವಾಗಿತ್ತು. ಆಗಾಗ ತನ್ನ ಹಾಡಿನಿಂದ ಜನರನ್ನು ಸಂತೋಷಗೊಳಿಸಿ ಅನಾಥಾಲಯಕ್ಕೆ ಚಂದಾಹಣವನ್ನು ಕೂಡಿಹಾಕುತ್ತಿದ್ದನು

ಅದೊಂದು ದಿನ ಮೆಂಚೆಸ್ಟರಿನ ಡ್ಯೂಕ್ ವೆನ್ಸಿಲೋ ಆ ಬಾಲಕನ ಸುಮಧುರ ಹಾಡಿಗೂ, ಕಂಠಕ್ಕೂ ಮೆಚ್ಚಿ, ಬಾಲಕನನ್ನು ಅನಾಥಾಲಯದಿಂದ ದತ್ತಕ್ಕೆ ಪಡೆಕೊಂಡನು. ಡ್ಯೂಕನಿಗೂ ಮಕ್ಕಳಿರಲಿಲ್ಲ. ಸಂತೋಷದಿಂದ ಒಟಸನಿಗೆ ಗಾನ ವಿದ್ಯೆಯಲ್ಲಿ ಉತ್ತಮ ಶಿಕ್ಷಣಕೊಡಿಸಿದನು ಒಟಸನೂ ಡ್ಯೂಕನಿಗೆ ವಿಧೇಯನಾಗಿ ನಡೆದುಕೊಂಡು ಗಾನ ವಿದ್ಯೆಯಲ್ಲಿ ಅಸಮಾನನಾದನು. ವಯಸ್ಸಿನಲ್ಲಿ ಕೇವಲ ಬಾಲಕನಾದರೂ ಕೂಡಾ ಹಾಡುಗಾರಿಕೆಯಲ್ಲಿ ಪಂಡಿತನಾದನು

ತನ್ಮಧ್ಯೆ ಇಂಗ್ಲೆಂಡಿನಲ್ಲಿ ತೃತೀಯ ಜಾರ್ಜ್ ಸಾರ್ವಭೌಮರ ನೇತೃತ್ವದಲ್ಲಿ ಸಂಗೀತ ಅಧಿವೇಶನವು ನಡೆಯುವುದೆಂಬ ವಿಷಯವು ಪ್ರಕಟವಾಯಿತು. ವೆನ್ಸಿಲೋ ತನ್ನ ದತ್ತ ಪುತ್ರನನ್ನೂ ಅಧಿವೇಶನಕ್ಕೆ ಸ್ಪರ್ಧೆಗಾರನಾಗಿ ಕಳುಹಿಸಿದನು

ಸಾಯಂಕಾಲದ ಸಮಯದಲ್ಲಿ ಒಟಸನು ಕೊಳದ ತೀರಕ್ಕೆ ವಿಹಾರಕ್ಕಾಗಿ ಹೊರಟನು. ಅತ್ತಿತ್ತ ತಿರುಗಾಡಿ ಕೊನೆಗೆ ಅದೊಂದು ಉದ್ಯಾನವನದಲ್ಲಿನ ಶಿಲಾಸನದ ಮೇಲೆ ಕುಳಿತ್ತನು ಮನಸ್ಸಿಗೆ ಹರ್ಷ ತೋರಿತು. ಹಾಡಲಾರಂಭಿಸಿದನು ಅಂದಿನ ಸ್ಪರ್ಧೆಯಲ್ಲಿ ಹಾಡಿದ ಹಾಡನ್ನೇ ಪುನಃ ಹಾಡಿದನು ಹಾಡುತ್ತಾ ಕಣ್ಣುಗಳು ಅಶ್ರುವಿನಿಂದ ತುಂಬಿದವು

ಅಷ್ಟರಲ್ಲಿ ಮರಗಳ ಹಿಂದಿನಿಂದ ವ್ಯಕ್ತಿಯೊಂದು ಒಟಸನ ಹಿಂದೆ ಬರದು ನಿಂತಿತು ಮುಖದಲ್ಲಿ ಅದೊಂದು ತರದ ಗೆಲವು ಇದ್ದಿತು ಸ್ವಕಾರ್ಯ ಸಿದ್ಧಿಯಾಗುವುದೆಂಬ ಭಾವವೊಂದು ತೋರಿಬರುತ್ತಿದ್ದಿತು

ವ್ಯಕ್ತಿಯ ಕೈಯಲ್ಲಿದ್ದ ಚೂರಿಯೊಂದನ್ನೆತ್ತಿ ಒಟಸನ ಬೆನ್ನಿಗೆ ಇರಿಯಿತು ಕೂಡಲೇ ಟಿಪ್ಪೊಂದು ಬಾಲಕನ ಮೈಯಿಂದ ನೆತ್ತರು ಚಿಮ್ಮಿತು

ಒಟಸನಿಗೆ ಹಿಂತಿರುಗಿ ನೋಡಲಾಗಲಿಲ್ಲ 'ಹಾಯ್' ತಂದೆ–ಕ್ಯಾಪ್ಟನ್ ಹಾ ತಾಯೀ . . ಡೋರಾ ನವೆಲ್ಲಿರುವಿರಿ? ಅಯ್ಯೋ' ಎಂಬ ಮಾತುಗಳು ಆತನ ಬಾಯಿಂದ ಹೊರಟವು ಮರುಕ್ಷಣದಲ್ಲಿ ಆತನು ನೆಲಕ್ಕುರುಳಿದನು.

ತನ್ನ ಮತ್ತು ತನ್ನ ಪತ್ನಿಯ ಹೆಸರನ್ನು ಕರೆಯುವ ಈ ಬಾಲಕನು ಯಾರು? ಛೆ! ಕ್ಯಾಪ್ಟನನಿಗೆ ಒಮ್ಮೆ ಮೈಯೆಲ್ಲ ರೋಮಾಂಚಿತವಾಯಿತು. ಡೋರಾ ಎಂದಾತನ ಪತ್ನಿಯ ಹೆಸರು ಹಲವು ವರ್ಷಗಳ ಹಿಂದೆ ಕ್ಯಾಪ್ಟನನೂ ಸಂಸಾರಿಯಾಗಿದ್ದನು. ಸುಂದರವಾದೊಂದು ಮಗವನ್ನೂ ಜನಿಸಿತು. ಆದರೆ ಸಂಸಾರ ತಾಪತ್ರಯಗಳಿಂದಾಗಿ ಆ ಮಗುವನ್ನು ಅನಾಥಾಲಯಕ್ಕೊಪ್ಪಿಸಿ, ದಾರಿದ್ರ್ಯಾಣದ ಎತ್ತಲೋ ಹೊರಟು ಹೋಗಿ, ಜೀವನ ವ್ಯವಸಾಯ ನಡೆಯಿಸಲು ಕಷ್ಟಪಟ್ಟು ಕೊನೆಗೆ ಸಂಗೀತಗಾರನಾಗಿದ್ದನು. ಕೊನೆಗೆ ಡೋರಾಳು ಮೃತಳಾದಳು

ಆ ಚಿಕ್ಕ ಮಗುವೇ ಒಟಸನೇನೊ? ಕ್ಯಾಪ್ಟನನಿಗೆ ಏನೋ ಕಣ್ಣುಕತ್ತಲೆ ಬಂದಂತಾಯಿತು. ಹಲವು ವರ್ಷಗಳ ಹಿಂದಿನ ಆ ಚಿತ್ರವು ಆತನ ಕಣ್ಣಮುಂದೆ ಸುಳಿಯಲಾರಂಭಿಸಿತು

ಮೂರ್ಛೆಯಲ್ಲಿದ್ದ ಒಟಸನು ಹಾಗೆಯೇ, "ಹಾ ಪಾಲಕ ಪಿತಾ ವೆನ್ಸಿಲೋ, ನೀನಾದರೂ ಇಲ್ಲಿ ಬಾರದಿತ್ತೇ? ನನ್ನ ತಂದೆತಾಯಿಗಳವರೋ ಎಲ್ಲಿರುವರೋ? ಹಾ! ಅಮ್ಮಾ ಡೋರಾ!" ಎಂದು ಕೂಗಲಾರಂಭಿಸಿದನು

ಕ್ಯಾಪ್ಟನನಿಗೆ ಇನ್ನು ಸಂದೇಹ ತೋರಲಿಲ್ಲ ಒಟಸನು ತನ್ನ ಪುತ್ರ, ಅನಾಥಾಲಯದಲ್ಲಿ ಬಿಟ್ಟ ಮಗು ಎಂದು ಖಚಿತವಾಯಿತು 'ಹಾ' ಮಗೂ ಒಟಸ್, ನಿನ್ನ ಪಾಪಿ ತಂದೆಯಾದ ಕ್ಯಾಪ್ಟನ್ ನಾನೇ ಆಗಿರುವೆನು ನಿನ್ನ ವಿನಾಶಕ್ಕೂ ನಾನೇ ಕಾರಣನಾದೆನಲ್ಲಾ" ಎಂದು ಆತನ ಮೇಲೆ ಬಿದ್ದು ಗೋಳಿಡಲಾರಂಭಿಸಿದನು .

ಚೂರಿಯ ಇರಿತದಿಂದ ನೆತ್ತರು ಧಾರಾಕಾರವಾಗಿ ಹರಿಯುತ್ತಿತ್ತು ಕ್ಷಣಕ್ಷಣಕ್ಕೂ ನಿತ್ರಾಣ ಹೊಂದಲಾರಂಭಿಸಿದನು. "ಹಾ ಅಮ್ಮಾ, ನಾನು ನಿನ್ನನ್ನು ಹುಡುಕಲು ಬರುತ್ತೇನೆ ಅಪ್ಪಾ ನನ್ನ ಅಮ್ಮನನ್ನು ಹುಡುಕಲು ಹೋಗುತ್ತೇನೆ. ಆಕೆ ಎಲ್ಲಿರುವಳು" ಕ್ಯಾಪ್ಟನನ ಕಣ್ಣುಗಳಿಂದ ನೀರು ಸುರಿಯುತ್ತಿತ್ತು "ಆಕೆ ದೇವರ ಬಳಿ ಹೋಗಿರುವಳು 'ಮಗೂ'" ಎಂದು ಹೇಳಿದನು. ಒಟಸನು ಒಮ್ಮೆ ಕಣ್ಣುಬಿಟ್ಟು ಕ್ಯಾಪ್ಟನನ ಕಡೆ ನೋಡಿದನು ಮತ್ತು–"ಅಮ್ಮಾ ನಾನೂ ನಿನ್ನಲ್ಲಿ ಬರುತ್ತೇನೆ" ಎಂದು ಹೇಳುತ್ತಿದ್ದಂತೆ ಆತನ ಜೀವನ ಜ್ಯೋತಿ ನಂದಿ ಹೋಯಿತು

ಕ್ಯಾಪ್ಟನನಿಗೆ ದಿಕ್ಕು ತೋರಲಿಲ್ಲ. ತನ್ನ ಸ್ವಪುತ್ರನನ್ನು ಅಂತಹ ಸುಂದರ ಮಗುವನ್ನು ತನ್ನ ಕೈಯಿಂದಲೇ ಕೊಂದೆನಲ್ಲಾ ಎಂದಾತನಿಗೆ ದುಃಖವಾಯಿತು ಹತ್ತಿರದಲ್ಲಿದ್ದ ಶಿಲಾಸನಕ್ಕೆ ತಲೆಬಡೆದು ಕೊಂಡನು ತಲೆಯೊಡೆದು ನೆತ್ತರು ಹರಿಯಿತು "ಹಾ ಕ್ಯಾಪ್ಟನ್ ನಿನಗೇನು ಬೇಕಾಗಿತ್ತು? ಸಂಗೀತಾಧಿವೇಶನದ ಬಹುಮಾನವಲ್ಲವೇ ಇಗೋ ಆ ಬಹುಮಾನ . . ನ ಹ್ಯಾಪಿ ಟಸ್ ಮಗೂ . . ಬಾಬಾ"

ಮರುದಿನ ಉದ್ಯಾನದ ಬಳಿ ಜನಸಂದಣಿಯು ಸೇರಿತ್ತು ಡ್ಯೂಕ್ ವೆನ್ಸಿಲೋ ಕೂಡಾ ಬಂದಿದ್ದನು ಮೃತದೇಹಗಳೆರಡನ್ನೂ ಕಂಡನು ಆತನರಿಯದಂತೆ ಎರಡು ಹನಿಗಳು ಆತನ ಕಣ್ಣುಗಳಿಂದ ಉದುರಿ ಶವದ ಮೇಲೆ ಬಿದ್ದವು.

(ಅನುವಾದಕ. ಪಿ. ನಾಗೇಶ ಭಂಡಾರಿ)

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೋಂಟ್ ಬುಕ್ಕಿಂಗ್ ಆಫೀಸ

ಮಂಗಳೂರು. ಕೊಡಿಯಾಲಬೈಲು.

DEAR ADAREITU
9—8—1940

FROM

Sri K. Shivarama Nair,
Kerikcundah, Estate,
Post Devegadabettu
KADUR DISTRICT

To,

The Joint Managers,
C. P. C Motor Service Ltd,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair.

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 3-0-0 | ಅಂಚೆ ವೆಚ್ಚ ಸೇರಿ ರೂ. 3-12-0 | Regd. No. M 3460

ಸ್ವದೇಶಾಭಿಮಾನಿ

ಸಂಪುಟ ೩೬] ತಾರೀಕು 7-3-1941 [ಸಂಚಿಕೆ 10]

The Bombay Life Assurance Company, Ltd.

(ESTABLISHED 1908)

Death! { is not a matter of supposition / is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES,

The Bombay Life Building,

Gandhi Nagar, UDIPI.

OR AT ANY OF THEIR OFFICES AT:—

Puthiyara, Calicut

Car Street, Mangalore.

Central Station Road, Trivandrum.

Gautam Nivas, Charni Road, Bombay No. 4.

Post Box No. 337 Mount Road, Madras.

Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕ್ರಾತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ... ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ -ಶಾ. ಕಂಪೆನಿಯಲ್ಲಿ ದೊರೆಯುವುದು.

ಇಂದು ಹಳ್ಳಿಗಳಲ್ಲಿ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಸ್ವದೇಶಾಭಿಮಾನಿ

ಸಂಪುಟ ೩೦] ತಾರೀಖು 7—3—1941 [ಸಂಖ್ಯೆ 10]

The Bombay Life Assurance Company, Ltd.

(ESTABLISHED 1908)

Death! is not a matter of supposition / is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection

BUSINESS IN FORCE EXCEEDS EIGHT CRORES

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES

The Bombay Life Building,

Gandhi Nagar, UDIPI.

OR AT ANY OF THEIR OFFICES AT

Puthivari Calicut	Car Street Mangalore	[illegible] Station Road Trivandrum
Gautam Nivas, Charni Road Bombay No. 4	Post Box No. 337 Mount Road Madras	[illegible]warapuram Circle, Ba[illegible]lore City

ಅಮೃತಾಂಜನ

ತಲೆನೋವು, ಶಿರೋವೇದನೆ, ಸಳುಕು ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು; [illegible], ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, [illegible] ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಗಜ್ಜಿ, ಹುಳುಕಡ್ಡಿ, [illegible] [illegible], [illegible], [illegible] ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

[illegible] ಈ ಕಂಪೆನಿಯಲ್ಲಿ ದೊರೆಯುವುದು.

[illegible]

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

[illegible]

ESTD. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಒಂದು ಸಂಚಿಕೆಯ ಬೆಲೆ ... ವಾರ್ಷಿಕ ಚಂದಾ ರೂ. 3-0-0 ಅಂಚೆವೆಚ್ಚ ಸೇರಿ ರೂ. 3—12—0 Regd. No. M. 3461

ಸ್ವದೇಶಾಭಿಮಾನಿ

ಸಂಪುಟ 85] ತಾರೀಖು 7—3—1941 [ಸಂಚಿಕೆ 10]

The Bombay Life Assurance Company, Ltd.

(ESTABLISHED 1908)

Death! { is not a matter of supposition / is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES,

The Bombay Life Building,

Gandhi Nagar, UDIPI.

OR AT ANY OF THEIR OFFICES AT:—

Puthiyara, Calicut.

Car Street, Mangalore.

Central Station Road, Trivandrum.

Gautam Nivas, Charni Road, Bombay No. 4.

Post Box No. 337 Mount Road, Madras.

Visweswarapuram Circle, Bangalore City.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಆ ಕರ್ಣನಿಯಲ್ಲಿ ದೊರೆಯುವುದು.

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S No 40/41

1 ಅಪ್ಪಳಿಯನ್ ಅಕ್ಕು ಅಂಮ, 2 ಕೃಷ್ಣ 3 ಕುಂಞರಾಮನ್, 4. ತಂಬಾಯಿ, ಮ್ಯಾನರು, ಕ್ಷೇಮ ಚಿಂತಕಳು/ ತಾಯಿ, 1ನೇ ಅರ್ಜಿದಾರಳು, 5. ಪೆರಿಯ ಕೋರನ್‌ನ್ಯಾರ ಅರ್ಜಿದಾರರು,

ಮತ್ತು

1. ತಳಾಪನ್ ಶ್ರೀದೇವಿ ಅಂಮ, ಅಕ್ಕಮ್ಮನ ಮಗಳು, 2 ಉಂಗಾಂಗ ಅಂಮ, 3 ಕಲ್ಯಾಣಿ ಅಂಮ, 4 ಕೇಳು ನಾಯರ, 5 ರಾಮನ್ ನಾಯರ, 6 ಉತ್ತ ಅಂಮ, 7. ಲಕ್ಷ್ಮಿ ಅಂಮ, 1ನೇ ರೆಸ್ಪೊಂಡೆಂಟಳ ಮಕ್ಕಳು ಚಿತ್ತಾರಿ ಗ್ರಾಮದ ರಾಮನೇಶ್ವರದಲ್ಲಿರುವವರು ರೆಸ್ಪೊಂಡೆಂಟರು.

ಇವರೊಳಗೆ

ಸದ್ರಿ ಅರ್ಜಿದಾರರು ತಿಳಿಸುವುದೇನೆಂದರೆ –

1ನೇ ಅರ್ಜಿದಾರಳ ಗಂಡ ವ 2ರಿಂದ 4ನೇ ಅರ್ಜಿದಾರರ ತಂದೆ ಮೃತಪಟ್ಟ ತಳಾಪನ್ ಕೃಷ್ಣನ್ ನಾಯರರಿಗೆ ಅಡ್ಯಾಡ್ಕ ಉಚ್ಚಿರ ಅಂಮ ವಗೈರರು ರೂಪಾಯಿ 80ಕ್ಕೆ ಬರಕೊಟ್ಟ ಪ್ರೊ ನೋಟು ಪ್ರಕಾರ ಬರಬೇಕಾದ ಹಣವನ್ನು ವಸೂಲು ಮಾಡುವ ಹಕ್ಕನ್ನು ಮೃತನ ಪ್ರತಿನಿಧಿ ವಾರಿಸ್ದಾರ್ರು ನೆಲೆಯಲ್ಲಿ 1ರಿಂದ 4ನೇ ಅರ್ಜಿದಾರರು 5ನೇ ಅರ್ಜಿದಾರಗೆ ನೋಟೀಸು ಕೊಟ್ಟಿರುವುದರಿಂದ ಆ ನೋಟಿಗೆ ಹಣವು ವಸೂಲು ಪಡಿಯುವರೇ 5ನೇ ಅರ್ಜಿದಾರಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕೆಂದು ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ 2-4-41ಕ್ಕೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ಮೇಲ್ಕಂಡ ಕೋರ್ಟಿನಲ್ಲಿ ಬೆಳಿಗ್ಗೆ 11 ಗಂಟೆಗೆ ಹಾಜರಾಗತಕ್ಕದ್ದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ

Kasaragod } V K KunhiRaman Nayar
10– –41 } Advocate for petitioners

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫಾ ಕೋರ್ಟಿನಲ್ಲಿ

ಕ್ರಮಸಂಖ್ಯೆ 91/ 9
R E P 1128/40

R ಶ್ರೀನಿವಾಸ ಶ್ಯಾನುಭೋಗ — ವಾದಿ ಅರ್ಜಿದಾರ

ಮಜಾರಿರ್ಯೋ ಡಿ ಸೋಜ ಸಿಡ್ಲಾ ಡಿ ಸೋಜರ ಮಗ — ಕಾರ್ಕಳ ತಾಲೂಕು ಕಾರ್ಕಳ ಕಸಬಾ ರಾಮಸಮುದ್ರದ ಬಳಿಯಲ್ಲಿರುವವರು ಪ್ರತಿವಾದಿ — ಎದ್ರಿ

ಮೇಲ್ಕಂಡ ಅಮ್ಲಜಾರಿಯಲ್ಲಿ ವಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿರುವ ಎದ್ರಿಯ ಹಕ್ಕಿನ ಸ್ಥಿರಾಸ್ತಿಗಳನ್ನು ವಿಲೆಫಿಗೆ ಇಡಬೇಕೆಂದು ಅರ್ಜಿದಾರನು ದಾಖಲು ಮಾಡಿದ ಅರ್ಜಿಂ ಇತ್ಯಾದಿ ಪ್ರೇಷ್ಟ ಮಂಜೂರು ಮಾಡುವರೇ ಮತ್ತು ಸದ್ರಿ ಸ್ಥಿರಾಸ್ತಿಗಳು ಏಲಂ ಸಮಯ ಅರ್ಜಿದಾರಗೆ ಬಿಡ್‌ಮಾಡುವರೇ ಪರ್ಮಿಶನ್ ಕೇಳಿ ಕೊಟ್ಟ R P C 1628/40ನೇ ಅರ್ಜಿ ಕೂಡಾ ತನ್ನ ಬಗ್ಗೆ ತಾ. 20-3-41ಕ್ಕೆ ಇಟ್ಟಿರುವುದರಿಂದ ಸದ್ರಿ ದಿವಸ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಎದ್ರಿಯು ಹಾಜರಾಗಿ ಉತ್ತರಿಸದಿದ್ದರೆ ಕೋರ್ಟಿನವರಿಗೆ ಯುಕ್ತ ಕಂಡ ರೀತಿ ತೀರ್ಮಾನಿಸಲಾದೀತು ಎಂತ ಎದ್ರಿಗೆ ಈ ಮೂಲಕ ಕೋರ್ಟು ಹುಕ್ಕುಂ ಪ್ರಕಾರ ತಿಳಿಸಲಾಗುತ್ತದೆ

ಕಾರ್ಕಳ, } K. Venkatesha Pai, B.A.
ತಾ. 9-3-41 } ಅರ್ಜಿದಾರನ ಕಡೆ ವಕೀಲ್



ಓವಲ್ಟಿನು ನಿಮಗೆ ಶಕ್ತಿ ಮತ್ತು ಆರೋಗ್ಯವನ್ನು ಕೊಡುತ್ತದೆ

ನಿಮ್ಮ ಶರೀರವನ್ನು ಬಲಪಡಿಸಿಕೊಂಡರೆ ನೀವು ಶಕ್ತಿಶಾಲಿಗಳಾಗಿ ಸುಖಿಗಳಾಗಿ ಇರಬಹುದು. ಒಳ್ಳೆಯ ಆಹಾರದಿಂದ ಬುದ್ಧಿಯೂ ಬೆಳೆಗೊಳ್ಳುತ್ತದೆ

ದಿನನಿತ್ಯ ಒಂದು ಕಪ್ಪು ಓವಲ್ಟಿನು ತೆಗೆದುಕೊಳ್ಳುವುದರಿಂದ ಶರೀರವು ಬಲಗೊಳ್ಳಲು ಬೇಕಾದ ಸತ್ವಗಳು ಸಿಗುತ್ತವೆ. ಹಾಗಾಗಿಯೇ ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಸಾವಿರಾರು ಮನೆಗಳಲ್ಲಿ ಓವಲ್ಟಿನನ್ನು ಉಪಯೋಗಿಸುತ್ತಾರೆ ಅದರಿಂದ ಅವರಿಗೆ ಆರೋಗ್ಯ, ಬಲ ಶಕ್ತಿಗಳು ಕೂಡುತ್ತವೆ, ಕೆಲ ದಿನಗಳ ತನಕ ಓವಲ್ಟಿನ್ನು ಸೇವಿಸಿ ನೋಡಿ ಮತ್ತೆ ಶರೀರ ವಿರಿ ಆರೋಗ್ಯವನ್ನು ಪಡೆಯಲು ಓವಲ್ಟಿನ್ನು ಅತ್ಯುತ್ತಮ

ಓವಲ್ಟಿನು ಶುದ್ಧ ನೈಸರ್ಗಿಕ ಆಹಾರ ಇದನ್ನು ಬಾರ್ಲಿ ಹಾಲು, ಮೊಟ್ಟೆ ಅನೇಕ ಉತ್ತಮ ಆಹಾರ ಸತ್ವಗಳನ್ನು ಸೇರಿಸಿ ತಯಾರಿಸಲಾಗಿದೆ ಕೃತ್ರಿಮ ಸ್ವಾದವುಗಳನ್ನು ಕೊಂಡುಕೊಳ್ಳಬೇಡಿರಿ

ಓವಲ್ಟಿನ್ನು ಹಿತಕರವಾದ ಆರೋಗ್ಯಕರ ಪಾನೀಯ ಇದನ್ನು ತಣ್ಣಗಾಗಲಿ ಬಿಸಿಯಾಗಲಿ ತೆಗೆದುಕೊಳ್ಳಬಹುದು ಇದನ್ನು ತಯಾರಿಸುವುದೂ ಬಹಳ ಸುಲಭ ತಯಾರಿಸುವ ರೀತಿಯು ಪ್ರತಿಯೊಂದು ಡಬ್ಬಿಯಲ್ಲಿಯೂ ಬರೆದಿದೆ

ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ

ಡಿಸ್ಟ್ರಿಬ್ಯೂಟರ್: ಗ್ರಹಮ್ಸ್ ಟ್ರೇಡಿಂಗ್ ಕೊ. (ಇಂಡಿಯಾ) ಲಿಮಿಟೆಡ್

ಕೈತ್‌ನೆಸ್ ಹೌಸ್, 310-311 ಲಿಂಘಿ ಚೆಟ್ಟಿ ಸ್ಟ್ರೀಟ್ ಮದರಾಸು ಹಾಗೂ ಕಲ್ಕತ್ತ ಬೊಂಬಾಯಿ, ಕರಾಚಿ ಮತ್ತು ರಂಗೂನ್.

'ಓವಲ್‌ಟಿನ್'

'OVALTINE ಎಂದು ಹೆಸರಿರುವುದನ್ನು ನೋಡಿ ಕೊಳ್ಳಿ'

ಓವಲ್ಟಿನ್ ಬಿಸ್ಕತ್ತುಗಳು:

ಓವಲ್ಟಿನ್ ಬಿಸ್ಕತ್ತುಗಳು ಹಿತಕರ, ಜೀರ್ಣಕರ ಮತ್ತು ಆರೋಗ್ಯಕರ ಇರುವ ಬಿಸ್ಕತ್ತುಗಳಲ್ಲೆಲ್ಲಾ ಹೆಸರು ಪಡೆದದ್ದು. ಅದರಲ್ಲಿ ಪ್ರತ್ಯೇಕ ಗುಣವೇ ಇದೆ. 4 ಔನ್ಸಿನ ಮತ್ತು 8 ಔನ್ಸಿನ ಕಟ್ಟುಗಳು ಮತ್ತು 1 ರಾತಲು ಟಿನ್ನುಗಳಲ್ಲಿ ಸಿಕ್ಕುತ್ತವೆ

OV/49/40

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

14—3—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೪—೩—೧೯೪೧

ಭಾರತ ಸಚಿವರಾಗಿ ಎಮೆರಿಯವರು ಕೃತಾರ್ಥರಾಗಿಲ್ಲ

ಬ್ರಿಟನು ಕಣ್ಣು ಮುಚ್ಚಿ ನೋಡುತ್ತದೆಯೆ?

ಲಾರ್ಡ್ ಹೆಲಿಫಾಕ್ಸರು ಸಚಿವರಾಗಲಿ!

ಬ್ರಿಟಿಷ್ ಗ್ರಂಥಕರ್ತರು - ಪತ್ರಿಕೆಗಳು ಟೀಕಿಸುತ್ತವೆ

ಲಾರ್ಡ್ ಹೆಲಿಫಾಕ್ಸರು

ಲಂಡನಿನ ಡೈಲಿ ಹೆರಾಲ್ಡ್ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆಯುತ್ತಾ ಸುಪ್ರಸಿದ್ಧ ಗ್ರಂಥಕಾರರೂ ಲೇಖಕರೂ ಆಗಿರುವ ಮೋರಿಸ್ ವೆಬ್‌ರವರು ಭಾರತ ಸಚಿವರಾಗಿರುವ ಎಮೆರಿಯವರ ಕುರಿತು, ಹಿಂದುಸ್ಥಾನದ ರಾಜ್ಯಕೀಯ ಪರಿಸ್ಥಿತಿಯನ್ನು ನೋಡಿದರೆ, ಎಮೆರಿಯವರು ಭಾರತಸಚಿವರಾಗಿ ಕೃತಾರ್ಥರಾಗಿಲ್ಲವೆಂದು ಧಾರಾಳ ಹೇಳಬಹುದಾಗಿ ಬರೆದಿರುತ್ತಾರೆ

ಅವರ ಲೇಖನದ ಅಭಿಪ್ರಾಯವು ಹೀಗಿದೆ—

ಬಿಕ್ಕಟ್ಟಿನ ಮೂಲ

ಹಿಂದುಸ್ಥಾನದ ಈಗಿನ ಪರಿಸ್ಥಿತಿಗೆ ಎಮೆರಿಯವರ ಭಾರತ ನೀತಿಯೇ ಕಾರಣವೆಂದು ಹೇಳಲಿಕ್ಕೆ ಬರುವುದಿಲ್ಲ. ಎಮೆರಿಯವರು ಭಾರತ ಸಚಿವರಾಗುವ ಅನೇಕ ವರ್ಷಗಳ ಹಿಂದಿನಿಂದ ಬ್ರಿಟಿಷ ಸರಕಾರವು ಆತ್ಮವಿಘಾತುಕ ಕುರುಡುನೀತಿಯನ್ನು ಅನುಸರಿಸಿಕೊಂಡು ಬಂದಿದೆ ಭಾರತದ ಮಟ್ಟಿಗೆ ಬ್ರಿಟಿಷ ರಾಜನೀತಿಜ್ಞರು ದೂರದೃಷ್ಟಿಯನ್ನಾಗಲಿ, ಸೂಕ್ಷ್ಮದೃಷ್ಟಿಯನ್ನಾಗಲೀ ಇಟ್ಟುಕೊಂಡಿಲ್ಲ. ಬ್ರಿಟಿಷ ರಾಜಕಾರಣಿಗಳ ಈ ದೃಷ್ಟಿಯ ಅಭಾವದಿಂದಲೇ ಭಾರತದಲ್ಲಿ ಇಂದು ಪ್ರತಿಕೂಲ ಪರಿಸ್ಥಿತಿಯು ಉಂಟಾಗಿದೆ.

ಎಮೆರಿಯವರ ಯೋಗ್ಯತೆ

ಎಮೆರಿಯವರು ಉತ್ತಮ ವರ್ಗದ ರಾಜಕಾರಣಪಟುಗಳಾಗಿದ್ದಾರೆ. ಅವರು ಬ್ರಿಟಿಷರ ಹಿಂದಿನ ತಪ್ಪುಗಳನ್ನು ಸರಿಪಡಿಸಲಿಕ್ಕೆ ಭಗೀರಥ ಪ್ರಯತ್ನಗಳನ್ನು ಮಾಡಿದ್ದಾರೆ. ಆದರೂ ಅವರು ಸಫಲರಾಗಿರುವುದಿಲ್ಲ ಕಾರಣವೇನೆಂದರೆ ಭಾರತದೊಡನೆ ಬ್ರಿಟಿಷರು ಮಾಡಿದ ತಪ್ಪುಗಳು ಎಮೆರಿಯಂಥವರಿಂದಲೂ ಸರಿಪಡಿಸಲಿಕ್ಕಾಗದಷ್ಟು ದೊಡ್ಡವಾಗಿರುವವು, ಬಹಳವಾಗಿರುವವು ಈಗಿನ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಎಮೆರಿಯವರು ಅಸಮರ್ಥರಾಗಿದ್ದಾರಾದರೂ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಎಮೆರಿಯವರಂಥ ಸಮರ್ಥ ರಾಜಕಾರಣಪಟುಗಳು ಬಹಳ ವಿರಳರಾಗಿದ್ದಾರೆ

ಲೋರ್ಡ್ ಹೆಲಿಫೆಕ್ಸರು ಭಾರತ ಸಚಿವರಾಗಲಿ

ನಾನು ಬ್ರಿಟಿಷ ಸಾಮ್ರಾಜ್ಯ ಸರಕಾರದ ಪ್ರಧಾನ ಮಂತ್ರಿಯಾಗಿ, ಎಲ್ಲ ಅಧಿಕಾರಗಳು ನನಗಿದ್ದುವಾದರೆ ಎಮೆರಿಯವರನ್ನು ನಾನು ವಿದೇಶ ಮಂತ್ರಿಯಾಗಿ ನೇಮಿಸುತ್ತಿದ್ದೆ. ಆ ಪದವಿಯಲ್ಲಿರಲು ಅವರು ತುಂಬಾ ಯೋಗ್ಯರಿದ್ದಾರೆ ಅದರಿಂದ ಬ್ರಿಟನಿನ ಹೊರದೇಶ ಸಂಬಂಧಗಳಲ್ಲಿ ಮಹಾ ಕ್ರಾಂತಿ ಉಂಟಾಗಲು ಸಾಧ್ಯವಿದೆ. ಈಗ ಹೊರದೇಶ ಮಂತ್ರಿಗಳಾಗಿರುವ ಲೋರ್ಡ್ ಹೆಲಿಫಾಕ್ಸರು (ಹಿಂದೆ ಭಾರತದ ವಾಯ್ಸರಾಯರಾಗಿದ್ದ ಲೋರ್ಡ ಇರ್ವಿನರು) ಭಾರತದ ಸಚಿವರಾಗುವರಾದರೆ, ಭಾರತದ ಪರಿಸ್ಥಿತಿಯು ಸುಧಾರಿಸಿಕೊಂಡು ಬಿಕ್ಕಟ್ಟಿನ ನಿವಾರಣೆಯಾಗಬಹುದು ಎಂದು ವೆಬ್‌ರವರು ಬರೆಯುತ್ತಾರೆ

ಗಾರ್ಡಿಯನ ಪತ್ರಿಕೆಯ ಟೀಕೆ

ಪೂರ್ವಾಪರ ಚೆನ್ನಾಗಿ ಆಲೋಚಿಸಿಕೊಂಡು ಬರೆಯುವ ಪತ್ರಿಕೆಯೆಂದು 'ಮಂಚೆಸ್ಟರ ಗಾರ್ಡಿಯನ್' ಪ್ರಸಿದ್ಧವಾಗಿದೆ ಇದು ತಾತ್ಕಾಲಿಕ ಉದ್ವೇಗ ಆತುರಗಳಿಗೆ ಬಲಿಯಾಗಿ ಏನನ್ನೂ ಬರೆಯುವುದಿಲ್ಲ. ಆ ಪತ್ರಿಕೆಯು ಕೂಡ ಎಮೆರಿಯವರ ಅಸಫಲತೆ ಮತ್ತು ಭಾರತದ ಪ್ರತಿಕೂಲ ಪರಿಸ್ಥಿತಿಯ ಕುರಿತು ತನ್ನ ಅಸಮಾಧಾನವನ್ನು ವ್ಯಕ್ತಮಾಡಿದೆ. 'ಹಿಂದುಸ್ಥಾನಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೊಡುವುದೇ ಸಾರ್ವಭೌಮ ಸರಕಾರದ ಸನ ಉದ್ದೇಶವಾಗಿದೆ, ಹಿಂದುಸ್ಥಾನದೊಳಗಿನ ಮತ ಕಲಹಗಳನ್ನು ನಿವಾರಿಸಿ, ಬೇರೆ ಬೇರೆ ಜಾತಿ ಮತಗಳ ಜನರೊಳಗೆ ಐಕ್ಯತೆಯನ್ನುಂಟುಮಾಡಿ, ಹಿಂದುಸ್ಥಾನವನ್ನು ಸ್ವರಾಜ್ಯಕ್ಕೆ ಯೋಗ್ಯವನ್ನಾಗಿ ಮಾಡಲಿಕ್ಕೆ ಬ್ರಿಟಿಷ ಸರಕಾರವು ಎಲ್ಲಾ ಸಹಾಯವನ್ನು ಕೊಡುವುದು' ಎಂದು ಹಿಂದಿನಿಂದ ಇಂದಿನ ತನಕ ಒಂದೇ ಹಾಡನ್ನು ಹಾಡುತ್ತ ಬಂದಿದ್ದಾರೆ. ಆದರೆ ಮಾತಿನಂತೆ ಅವರು ಯಾವ ಕೆಲಸವನ್ನೂ ಮಾಡಿಲ್ಲ. ಅದರ ಬದಲಿಗೆ ಪ್ರತ್ಯಕ್ಷವಾಗಿ ಇಲ್ಲಿಯು ಕಾಣುವ ಬೇರೆ ಬೇರೆ ಜಾತಿಗಳನ್ನು ಕೆಣಕಿ ಅವು ಒಂದಾಗದ ಹಾಗೆ ಪ್ರೋತ್ಸಾಹಿಸಿದ್ದಾರೆ' ಆ ಕುರಿತು ಗಾರ್ಡಿಯನ ಪತ್ರಿಕೆಯು ಹೀಗೆ ಕೇಳಿದೆ—

ಸರಕಾರವೇನು ಮಾಡುತ್ತದೆ?

'ಉದ್ದೇಶಸಾಧನೆಗಾಗಿ ಸರಕಾರವು ಏನು ಮಾಡಿದೆ? ಏನು ಮಾಡುತ್ತಿದೆ? ಏನು ಮಾಡುವ ಅಭಿಪ್ರಾಯದಲ್ಲಿದೆ? ಮುಸ್ಲಿಂಲೀಗು ಮತ್ತು ಕಾಂಗ್ರೆಸು ತಮ್ಮೊಳಗೆ ಒಂದು ಒಡಂಬಡಿಕೆ ಮಾಡಿಕೊಳ್ಳುವ ತನಕ ಬ್ರಿಟಿಷ ಸರಕಾರವು ದೂರದಲ್ಲಿ ನಿಂತು ತಮಾಷೆ ನೋಡುತ್ತಿರುವುದು ಅದರ ಘನತೆಗೆ ಒಪ್ಪುವುದಿಲ್ಲ. ಯಾವಾಗ ಅದು ಈ ಒಡಂಬಡಿಕೆಯಾಗಲಿಕ್ಕೆ ಕ್ರಿಯಾತ್ಮಕ ಸಹಾನುಭೂತಿಯನ್ನು ತೋರಿಸುವುದೋ, ಆಗ ಮಾತ್ರ ಬ್ರಿಟಿಷ ಸರಕಾರವು ವಿಭಾಗಿಸಿ ಆಳುವ ನೀತಿಯನ್ನು ಅನುಸರಿಸುತ್ತಿರುವುದಿಲ್ಲವೆಂದು ಜನರು ಎಣಿಸಬಹುದು.'

ಮಂಚೆಸ್ಟರ ಗಾರ್ಡಿಯನಿನ ಈ ಮಾತುಗಳಂತೆಯೇ ಭಾರತೀಯರ ಭಾವನೆಗಳೂ ಇರುತ್ತವೆ.

THE

BANK OF MANGALORE LTD.,

H. O. MANGALORE

ESTD 1931

Branches—

Moodabidri & Padubidri.

NOTICE

On and from 1st January 1941 the following are the revised rates of interest on deposits

FIXED DEPOSITS:

For 2 years or over		5%
„ 1 „	..	4½%
„ 6 months	..	3½%
„ 3 months		3

Interest Payable Quarterly.

SAVINGS BANK DEPOSITS:

On daily balances on balances over Rs. 5-0-0 in multiples of Rs. 5-0-0 @ 3%

All kinds of banking business transacted.

ಸ್ವದೇಶಾಭಿಮಾನಿ

ತಾರೀಕು 14—3—1941

ಬೊಂಬಯಿಯಲ್ಲಿ ಮುಖಂಡರ ಸಮ್ಮೇಳನ

ಭಾರತದ ಇಂದಿನ ರಾಜಕೀಯ ವಿಷಮತೆಯನ್ನು ಪರಿಹರಿಸುವ ಉದ್ದೇಶದಿಂದ ಬೊಂಬಯಿಯಲ್ಲಿ ಭಾರತದ ಮುಖಂಡರು ಹಲವರು ಈ ವಾರದಲ್ಲಿಯೇ ಕೂಡಿ ವಿಚಾರ ಮಾಡುವರಿದ್ದಾರೆ. ಈ ಕುರಿತು ಹೆಚ್ಚಿನ ಆಶಾತುರರಾಗುವುದು ಅವಶ್ಯವಿಲ್ಲವಾದರೂ ಅವರ ಮುಂದಿರುವ ವಿಷಯದ ಘನತೆಯಿಂದ, ಅದನ್ನು ನಿಷ್ಕರ್ಷಿಸಲು ಕೂಡಿದ ಸಮಯದ ಮಹತ್ವದಿಂದ ಮತ್ತು ಅಲ್ಲಿ ಕೂಡಿದ ಜನರ ಯೋಗ್ಯತೆಯಿಂದ ಈ ಸಮ್ಮೇಳನವು ಯಶಸ್ವಿಯಾಗಲು ಸಾಧ್ಯವಿರುವುದೆಂದು ಯೋಚಿಸಲು ಅವಕಾಶವಿದೆ. ಅಲ್ಲಿ ಸೇರಿದ ಮುಖಂಡರಲ್ಲಿ ಮಂದಪಕ್ಷದವರು ಬಹುಮಂದಿಯಿರುವರಾದರೂ ಅಲ್ಲಿಗೆ ಆಮಂತ್ರಿತರಾಗಿ ಬಂದ ಜನರ ಮತ್ತು ಅಲ್ಲಿನ ಸಮ್ಮೇಳನದ ಉದ್ದೇಶಗಳನ್ನು ವಿಚಾರಿಸಿದರೆ, ಯಾವುದೇ ಒಂದು ಪಕ್ಷದ ಪ್ರತ್ಯೇಕ ರಾಜಕೀಯಾಭಿಪ್ರಾಯವು ಚರ್ಚಿಸಲ್ಪಡುವುದಾಗಿ ತಿಳಿಯಲು ಸಂದರ್ಭವಿಲ್ಲ. ಹೀಗಾಗಿ ರಾಷ್ಟ್ರೀಯ ಪ್ರಗತಿಯ ಕಾರ್ಯದಲ್ಲಿ ಸಂಯುಕ್ತ ಯೋಜನೆಯನ್ನು ಅಳವಡಿಸಲು ಸಕಲ ಸಮ್ಮತವಾದೊಂದು ನಿರ್ಧಾರ ಮಾಡಲು ಮುಂಬಯಿ ಸಮ್ಮೇಳನವು ಕೂಡಿದೆಯೆಂಬ ಮಟ್ಟಿಗೆ ವಿರುದ್ಧವಾದವಿರಲಾರದು.

ಈ ಸಮ್ಮೇಳನವು ಯಾವುದೇ ಒಂದು ರಾಜಕೀಯ ಪಕ್ಷವನ್ನು ಆದರಿಸಿರದಂತೆ ಯಾವುದೇ ಒಂದು ಜಾತಿ ಮತವನ್ನೂ ಕೂಡಿಕೊಂಡಿಲ್ಲ. ರಾಜಕೀಯ ಪ್ರಗತಿ ಕಾರ್ಯದಲ್ಲಿ ಘಟನಾತ್ಮಕವಾದ ಕೆಲಸಗಳನ್ನು ಮಾಡುವರೆ ಉತ್ಸಾಹಿತರಾದ ಅನುಭವಶಾಲಿಗಳಾದ ಮುಖಂಡರು ಈ ಸಮ್ಮೇಳನಕ್ಕೆ ಕೂಡುವವರಿದ್ದಾರೆ. ಇದರಲ್ಲಿ ಹಲವರು ಅಧಿಕಾರವಹಿಸಿ ಆಡಳಿತದ ಅನುಭವ ಪಡೆದವರಿದ್ದಾರೆ. ಹೀಗಾಗಿ ಇಂದು ಭಾರತದಲ್ಲಿರುವ ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸು ಹಿಂದೂ ಮಹಾಸಭೆ ಮತ್ತು ಮುಸ್ಲಿಂ ಲೀಗು ಇವುಗಳೆಲ್ಲವುಗಳಿಗೂ ಸಮ್ಮತವಾದೊಂದು ಕಾರ್ಯಕ್ರಮವನ್ನು ಮುಂದಿಟ್ಟು ಸರಕಾರದ ನೀತಿಯನ್ನು ಈ ಕಾರ್ಯಕ್ರಮಕ್ಕೆ ಅನುಗೊಳಿಸುವಂತೆ ಸಾಧಿಸುವ ಪ್ರಯತ್ನದಲ್ಲಿ ಹಾಗೂ ಇಂದು ಭಾರತದಲ್ಲಿ ಬಂದೊದಗಿದ ಬಿಕ್ಕಟ್ಟನ್ನು ಬಗೆಹರಿಸುವಲ್ಲಿ ಇವರು ಉತ್ಸಾಹಿತರಾಗಿರುವರೆಂದು ಭರವಸೆ ಪಡೆಬಹುದಾಗಿದೆ. ಸರಕಾರವೇ ಇಂತಹ ಸಮ್ಮೇಳನವನ್ನು ಜರಗಿಸಿ, ಭಾರತದ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಬೇಕೆಂದು ಮನಮಾಡಿದ್ದರೆ, ನಿಜವಾಗಿಯೂ—ಆಗ ಸಮ್ಮೇಳನಕ್ಕೆ ಇದಕ್ಕಿಂತ ಹೆಚ್ಚಿನ ಮಹತ್ವವಿತ್ತು. ಎಲ್ಲಾ ರಾಜಕೀಯ ಪಕ್ಷದ ಮುಖಂಡರ ವಿಚಾರಗಳ ಮಂಥನವಾಗಿ ಯೋಗ್ಯ ಫಲಿತಾಂಶವು ಖಂಡಿತವಾಗಿ ಸಿಗಬಹುದೆಂದು ಊಹಿಸಲು ಸಾಧ್ಯವಿತ್ತು, ಮಾತ್ರವಲ್ಲದೆ ಇಂದು ಬೊಂಬಯಿಯಲ್ಲಿ ನೆರೆದ ಈ ಕೆಲವು ಮುಖಂಡರ ಸಮ್ಮೇಳನಕ್ಕಿಂತ ಅಂತಹ ಸಮ್ಮೇಳನವು 'ಅಖಿಲ ಪಕ್ಷಗಳ ಪ್ರಾತಿನಿಧ್ಯ'ವುಳ್ಳದ್ದಾಗಿ ಹೆಚ್ಚಿನ ಗಂಭೀರವೂ, ಪ್ರಭಾವಪೂರ್ಣವೂ ಆಗುತಿತ್ತೆಂದು ಹೇಳಬಹುದು. ಭಾರತದ ಮಾನ್ಯರಾದ ಹಲವು ಮುಖಂಡರು ಈಗ ಸೆರೆಮನೆಯಲ್ಲಿರುವಾಗ ಅವರೊಡನೆ ವಿಚಾರಮಾಡಲೂ ಅವಕಾಶ ಕಲ್ಪಿಸಿಕೊಡದೆ, ಈ ಸಮ್ಮೇಳನವು ಒಂದು ಇತ್ಯರ್ಥಕ್ಕೆ ಬರಲು ಎಷ್ಟರ ಮಟ್ಟಿಗೆ ಸಾಧ್ಯವೋ ತಿಳಿಯುವುದಿಲ್ಲ. ಸರಕಾರವು ಮನಮಾಡಿದ್ದರೆ ಸೆರೆಮನೆಯೊಳಗಿದ್ದರೂ ದೇಶದ ಪ್ರಗತಿಗೆ ಸಹಾಯವಾಗುವಂತಹ ಮಾತುಕತೆಗಳನ್ನು ಮಾಡಲು ಧಾರಾಳವಾಗಿ ಅವಕಾಶ ಕಲ್ಪಿಸಲು ಸಾಧ್ಯವಾಗುತ್ತಿತ್ತೆಂಬುದು ಖಂಡಿತ. ಆದರೆ, ಆ ರೀತಿಯ ಸಹಕಾರವು ಸಿಗದಿರುವುದು ಶೋಚನೀಯವಾದರೂ, ಮಂದಪಕ್ಷದ ಮುಖಂಡರು ಕೆಲವರಾದರೂ ಕೂಡಿ ಈ ಕಾಲದಲ್ಲಿ ಇಂತಹ ಸಮ್ಮೇಳನವನ್ನು ಕರೆದು ಗಹನವಿಚಾರ ಮಾಡಲು ತೊಡಗಿರುವುದು ತುಂಬಾ ಅಭಿನಂದನೀಯವೇ ಆಗಿದೆ.

ಈ ಸಮ್ಮೇಳನದ ಉದ್ದೇಶವು ಭಾರತದ ರಾಜಕೀಯ ಸಮಸ್ಯೆಯನ್ನು ಪರಿಹರಿಸಲು ಯೋಗ್ಯವಾದ ಕಾರ್ಯಯೋಜನೆಯನ್ನು ಅಳವಡಿಸುವುದೆಂಬುದು ಈಗಾಗಲೇ ವಿದಿತವಾಗಿದೆ. ಬ್ರಿಟಿಷ ಸರಕಾರವಾದರೂ, ಇಂದು ಹೋರಾಟಕ್ಕಿಳಿದು ಪರಕೀಯರೊಡನೆ ಸಂಗ್ರಾಮ ಹೂಡುತ್ತಿರುವ ಕಾಲದಲ್ಲಿ, ತನ್ನ ಸ್ವಾಧೀನದಲ್ಲಿರುವ ಭಾರತೀಜನಾಂಗದ ಯೋಗ್ಯ ಸಹಕಾರವನ್ನು ಪಡೆವ ಕಾರ್ಯಕ್ರಮವನ್ನು ಮಾಡದೆ ತನಗಿಷ್ಟಬಂದಂತೆ ನಿರ್ಲಕ್ಷಭಾವದಿಂದ ವರ್ತಿಸುತ್ತಿರುವುದೆಂಬುದು ನಿಜವಾಗಿಯೂ ಖೇದಾಸ್ಪದವಾದುದೇ ಆಗಿದೆ. ಇಂದು ಜನತೆಯ ಪ್ರತಿನಿಧಿಗಳೆಂಬವರು ಯಾರೂ ಅಧಿಕಾರಗಳಲ್ಲಿ ಶಾಸನ ಸಭೆಗಳಲ್ಲಿ ಇಲ್ಲದೆ ಇರುವ ಈ ಕಾಲ, ಆ ಸಮಸ್ಯೆಯನ್ನು ಬಗೆಹರಿಸದೆ ವೈಸರಾಯರೊಬ್ಬರೇ ತನ್ನ ಸರ್ವತಂತ್ರಸ್ವಾತಂತ್ರ್ಯದಿಂದ ಭಾರತದ ಆಡಳಿತ ನಡೆಸುತ್ತಿರುವರೆಂಬುದೂ ಜನತೆಯ ಅಭಿಮತವನ್ನು ಅಲಕ್ಷಿಸುತ್ತಿರುವರೆಂಬುದೂ ನಿರ್ವಿವಾದವಿದೆ. ಇಂತಹ ಸರಕಾರದ ಮನೋನೀತಿಯನ್ನಾದರೂ ಬದಲಾಯಿಸತಕ್ಕದ್ದು ಅವಶ್ಯವು. ತತ್ಕಾಲದ ಮಟ್ಟಿಗೆ ವೈಸರಾಯರ ಮಂತ್ರಿಮಂಡಲದಲ್ಲಾದರೂ ಜನತೆಗೆ ಸಮ್ಮತರಾದ ಮುಖಂಡರನ್ನು ಸೇರಿಸಿ ಅಧಿಕಾರ ನಡೆಸುವುದು ಹಿತವಾದುದಾಗಿದೆ. ಮಾತ್ರವಲ್ಲದೆ ಬ್ರಿಟನಿನ ಈ ಯುದ್ಧದಲ್ಲಿ ಭಾರತದ ಜನತೆಯು ಸಹಕರಿಸಿ ಬ್ರಿಟಿಷರಿಗೆ ಜಯವನ್ನುಂಟುಮಾಡುವಂತೆ ಪ್ರಯತ್ನಿಸುವುದೂ ತಕ್ಕುದೇ ಆಗಿದೆ. ಇಂತಹ ಸಂದರ್ಭದಲ್ಲಿ ಯುದ್ಧ ಮುಗಿದ ಕೂಡಲೇ ಭಾರತಕ್ಕೆ ಸಾಮಂತ ಸ್ವರಾಜ್ಯವನ್ನು ಕೊಡುವೆವೆಂದು ಬ್ರಿಟಿಷ ಪ್ರಭುತ್ವದವರಾದರೂ ಸಾರತಕ್ಕದ್ದು ನ್ಯಾಯವಾಗಿದೆ. ಇಂತಹ ಉದ್ದೇಶಗಳಿರುವ ಒಂದು ನ್ಯಾಯವಾದ ಸರ್ವಸಮ್ಮತವಾಗುವ ಕಾರ್ಯಯೋಜನೆಯನ್ನು ಸಮ್ಮೇಳನವು ತಯಾರಿಸುವುದೆಂದು ನಾವು ನಿರೀಕ್ಷಿಸುತ್ತೇವೆ.

ಲಾಹೋರಿನಲ್ಲಿ ಐಕ್ಯ ಪರಿಷತ್ತು

ಭಾರತದ ರಾಜಕೀಯದಲ್ಲಿ ಬಹಳ ಅನರ್ಥಕಾರಿಯಾಗಿ ಇರುವ ಹಿಂದೂ—ಮುಸ್ಲಿಂ ತೊಡಕನ್ನು ಬಗೆಹರಿಸಿ, ರಾಷ್ಟ್ರದಲ್ಲಿ ಐಕ್ಯವನ್ನು ನೆಲೆಗೊಳಿಸುವುದು ನಮ್ಮ ಪ್ರಗತಿಗೆ ಸಹಾಯಕಾರಿಯಾಗಿದೆಯೆಂದು ದೇಶದ ಮುಖಂಡರು ಹಲವರು ಹಗಲಿರುಳು ಶ್ರಮಿಸುತ್ತಿದ್ದಾರೆ. ಆದರೆ ಕೆಲಮಂದಿ ದುರುಳರ ಹಾಗೂ ಸ್ವಾರ್ಥ ಸಾಧಕರ ಕೌಟಿಲ್ಯದಿಂದ ಈಗ ಅಲ್ಲಲ್ಲಿ ಗೊಂದಲಗಳುಂಟಾಗಿ ದೇಶದ ಶಾಂತಿಯು ಕದಡುವ ಕಾಲವು ಬಂದಂತಾಗಿದೆ. ಇಂತಹ ಸಂದರ್ಭದಲ್ಲಿ ಪಂಜಾಬಿನಲ್ಲಿ ಹಿಂದೂ ಮುಸ್ಲಿಂ ಐಕ್ಯಸಾಧಕವಾಗಿ ಒಂದು ಪರಿಷತ್ತನ್ನು ಕರೆದು ಎಲ್ಲರೂ ಏಕ ಸೋದರರೆಂದು ತಿಳಿಸುವ ಯತ್ನಮಾಡಿದುದು ಅತ್ಯಂತ ಸ್ತುತ್ಯವೂ ಸಂದರ್ಭೋಚಿತವೂ ಆಗಿದೆ.

ಈ ಸಮ್ಮೇಳನಕ್ಕಾಗಿ ಭಾರತದ ಪ್ರಸಿದ್ಧ ರಾಷ್ಟ್ರೀಯ ಮುಸ್ಲಿಂ ಮುಖಂಡರಾದ ಗಡಿನಾಡಿನ ಖಾನ್ ಅಬ್ದುಲ್ ಗಫರ್ ಖಾನರೂ ಆಮಂತ್ರಿತರಾಗಿದ್ದರು. ದೇಶದ ನಾನಾ ಭಾಗಗಳಿಂದ ಹಲವು ಮಂದಿ ಮುಂದಾಳುಗಳು ಬಂದು ನೆರೆದಿದ್ದರು. ತುಂಬಿದ ಸಭೆಯಲ್ಲಿ ಗಡಿನಾಡಿನ ಮುಸ್ಲಿಂ ಮುಖಂಡರಾದ ಗಫರ್ ಖಾನರು ಹೇಳಿದ ಕೆಲವು ಮಾತುಗಳು ಬಹಳ ಉದಾತ್ತವೂ ವಿಚಾರಗರ್ಭಿತವೂ ಆಗಿವೆ.

'ಹಿಂದುಗಳು ಮತ್ತು ಮುಸ್ಲಿಮರು ಅನ್ಯೋನ್ಯ ಧರ್ಮ ಸಂಸ್ಕೃತಿಗಳನ್ನು ಅಭ್ಯಾಸಿಸಿಕೊಂಡ ಹೊರತು ಜಾತೀಯ ಐಕ್ಯವೆಂಬುದು ಸಾಧ್ಯವಾಗಲಾರದು' ಎಂದು ತಮ್ಮ ಭಾಷಣವನ್ನು ಆರಂಭಿಸುತ್ತಾ ಅವರು, ಹಲಕಾಲದಿಂದ ಹಿಂದು ಮುಸ್ಲಿಂ ಐಕ್ಯ ಕಾರ್ಯವು ನಡೆಯುತ್ತಾ ಬಂದಿದ್ದರೂ, ಇಂದು ಹಲವು ಕಡೆಗಳಲ್ಲಿ ಆಗುತ್ತಿರುವ ಅನಾಹುತಗಳನ್ನು ಎತ್ತಿತೋರಿಸಿ, ಹಿಂದುಗಳು ಮತ್ತು ಮುಸ್ಲಿಮರು ಅನ್ಯೋನ್ಯರನ್ನು ಪ್ರೀತಿಯಿಂದ ವಿಶ್ವಾಸದಿಂದ ನೋಡುವುದಿಲ್ಲವೆಂಬ ಬಗ್ಗೆ ತಮ್ಮ ಅತ್ಯಂತ ವಿಷಾದವನ್ನು ವ್ಯಕ್ತಪಡಿಸಿದರು. ಬರಿಯ ದೀರ್ಘ ನಿರ್ಣಯಗಳನ್ನೋ ಉದ್ದವಾದ ಭಾಷಣಗಳನ್ನೋ ಕೊಡುವುದರಿಂದ ನಾವು ಐಕ್ಯವಾಗುವುದು ಸಾಧ್ಯವಿಲ್ಲವೆಂದೂ, ಜನತೆಯು ಅನ್ಯೋನ್ಯ ಧರ್ಮ ಸಂಸ್ಕೃತಿಗಳನ್ನು ಚನ್ನಾಗಿ ಪರಿಶೀಲಿಸಿ ಸಂಸ್ಕೃತಿ ಪಡೆಯಬೇಕೆಂದೂ, ಯಾವುದೇ ಧರ್ಮವಾದರೂ ಯಾರನ್ನೂ ದ್ವೇಷಿಸಲು ಬೋಧಿಸುವುದಿಲ್ಲವೆಂದೂ ವಿವರಿಸಿದರು.

ಈ ಸಮ್ಮೇಳನದಿಂದ ಪಂಜಾಬಿನಲ್ಲಿ ಬಹಳ ಪರಿಣಾಮವು ಆಗುವುದೆಂಬುದರಿಂದ ಸಂಶಯವಿಲ್ಲ. ದೇಶ ಸರ್ವತ್ರ ಮುಖಂಡರು ಈ ರೀತಿ ಪರಿಷತ್ತುಗಳನ್ನು ಕರೆದು ತಮ್ಮ ತಮ್ಮೊಳಗಿನ ಭಾತೃಭಾವನೆಯನ್ನು ಬಲಪಡಿಸುವುದು ಅವಶ್ಯವಾಗಿದೆ. ಇದರಿಂದ ಮಾತ್ರ ಸ್ವರಾಜ್ಯವು ಸಮೀಪಿಸಲು ಸಾಧ್ಯವಾಗುವುದು. ಮತ್ತು ದೊರಿತರೂ ಸ್ವರಾಜ್ಯದ ಸುಖವನ್ನು ಸರಿಯಾಗಿ ಅನುಭವಿಸಲು ನಾವು ಸಮರ್ಥರಾಗುವೆವು.

ನೋಟೀಸ

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S C. 2/1941

ವಿಷ್ಣುಮೂರ್ತಿ ಮಂಜತ್ತಾಯ —ವಾದಿ

ಎದ್ರಿ

ಶ್ರೀನಿವಾಸ ಅಂಬರ್ಡತ್ತಾಯ ನಾರಾಯಣ ಅಂಬರ್ಡತ್ತಾಯರ ಮಗ ಪಾರಂತಿ ಗ್ರಾಮದ ಅಳ್ಳಾನ ಎಂಬಲ್ಲಿರುವ ಪುತ್ತೂರು ತಾಲೂಕು. ಪ್ರತಿವಾದಿ

ವಾದಾ ನೋಟಿನ ಮೊಬಲಗು ರೂಪಾಯಿ 236-11-0 ನ ಕೋರ್ಟ ಖರ್ಚ ಬಡ್ಡಿಗೆ ಕೂಡಾ ವಾದಿಯು ಮಾಡಿದ ಮೇಲಿನ ದಾವೆಯು ತಾ. 3-4-41ಕ್ಕೆ ಇಟ್ಟಿರುವುದರಿಂದ ಆ ದಿನ ಬೆಳಿಗ್ಗೆ ಘಂಟೆ 10ಕ್ಕೆ ನೀವು ಹಾಜರಾಗಿ ಉತ್ತರಕೊಡದಿದ್ದರೆ ನಿಮ್ಮನ್ನು ಶಿಕ್ಷಾವಾದಿ ತೀರ್ಮಾನಿಸಲಾಗುವದೆಂತ ಈ ಮೂಲಕ ತಿಳಿಸಿಯದೆ.

ಪುತ್ತೂರು, 5-3-41 — H Pundarik Bhat, Pleader for Plaintiff

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O S 176/1040 R I A 16/1941

ಅಲ್ಬರ್ಟ ಡಿ ಸೋಜ—ವಾದಿ *Petitioner*

ಹಾಜಿ ಇಸ್ಮಾಯಿಲ್ ಕೂಡಾ 3 ಜನರು

ಪ್ರತಿವಾದಿರು—*Respondents*

1ನೇ ಪ್ರತಿವಾದಿ—ಹಾಜಿ ಇಸ್ಮಾಯಿಲ್, ಉಪ್ಪಾವರ ಕುಂಞ ಪಮ್ಮದ ಬ್ಯಾರಿ ಮಗ—ಪುತ್ತೂರು ಕಸಬು ಪರ್ಲಡ್ಕ

ಮೇಲಿನ ವ್ಯವಹರಣೆಯಲ್ಲಿ ವಾದಿ ಕಡೆಯಿಂದ ದಾವಾ ಆಸ್ತಿ ವಾರಾಟದಿಂದ ವಸೂಲು ಹೊಂದುವಂತೆ ಫೈನಲ ಡಿಕ್ರಿ ಕೊಡಿಸಬೇಕಾಗಿ ಬರಕೊಂಡ ಮೇಲಿನ ಅರ್ಜಿಯ ನೋಟೀಸಿನ ತನಿಖೆ ನ್ಯಾವೆಯು ತಾರೀಕು 26-3-41ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಈ ನ್ಯಾವೆಗೆ ಎದ್ರಿರ ಆಕ್ಷೇಪಗಳೇನಾದರೂ ಹೇಳುವದಿದ್ದರೆ—ಕೋರ್ಟಿಗೆ 11 ಘಂಟೆಗೆ ತಪ್ಪದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದರೆ ಅಜವನ್ನು ಶಿವಾಯಿ ಎಂತ ಮಾಡಿ ಈ ವ್ಯವಹರಣೆಯನ್ನು ಮುಂದಿನ ತನಿಖೆಯಿಂದ ತೀರ್ಮಾನಿಸಲಾಗುವದು ಎಂತ ಈ ಕೋರ್ಟಿನವರ ಹುಕ್ಕುಂ ಪ್ರಕಾರ ಈ ನೋಟೀಸು ಮಾಡಿಸಲ್ಪಡುದೆ.

ತಾ. 5-3-41, Puttur — G. Ramachandra Rao, Pleader for Plaintiff.

ಬೊಂಬಯಿ ನಿರ್ಣಯವು ಕಾಂಗ್ರೆಸಿನವರ ಮುಂದಿರಬೇಕು

ಅದರ ವಿವರಣೆಗೆ ನಾನು ಅಧಿಕೃತನಾಗಿಲ್ಲ

ರಾಜಕೀಯ ಮಾತುಕತೆಗಾಗಿ ಹೋದುದಲ್ಲ

— ಗಾಂಧಿಜಿ ಹೇಳುತ್ತಾರೆ —

ಬೊಂಬಯಿ ನಿರ್ಣಯದ ವಿಷಯದಲ್ಲಿ ನಾನು ಹೇಳಿದ ವಿವರಣೆಯು ಸರಿಯಾಗಿಲ್ಲವೆಂದು ಕಠಿಣ ಆಕ್ಷೇಪಗಳು ಎತ್ತಲಾಗಿವೆ. ಅದೇ ಆ ನಿರ್ಣಯದ ಸರಿಯಾದ ವಿವರಣೆಯೆಂದು ನಾನು ತಿಳಿಯುತ್ತೇನೆ. ಆದರೆ ಅದು ವ್ಯಕ್ತಿಯ ಅಭಿಪ್ರಾಯ. ನಿರ್ಣಯದ ವಿವರಣೆ ಕೊಡಲು ಅಥವಾ ಬದಲಾಯಿಸಲೂ ನಾನು ಕಾಂಗ್ರೆಸಿನಿಂದ ಅಧಿಕೃತನಾಗಿಲ್ಲ. ಅದು ಸಂಪೂರ್ಣವಾಗಿ ಕಾಂಗ್ರೆಸು ಪ್ರೆಸಿಡೆಂಟರ, ವರ್ಕಿಂಗ್ ಕಮಿಟಿಯ ಕಡೆಗೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಕೆಲಸವಾಗಿದೆ. ನನಗೆ ಇರುವ ಒಂದೇ ಒಂದು ಅಧಿಕಾರವೆಂದರೆ ಶಾಸನಭಂಗ ಚಳವಳಿಯನ್ನು ಮುನ್ನಡೆಸುವುದು. ರಾಜಿಯ ಮಾತು ಬಂದಾಗ, ಯಾವ ಶರತ್ತಿನಲ್ಲಿ ರಾಜಿಯಾಗಬೇಕೆಂದು ನಿರ್ಣಯಿಸುವ ಕೆಲಸವು ವರ್ಕಿಂಗ್ ಕಮಿಟಿಯದಾಗಿದೆ. ನನ್ನ ಸಹಾಯವೆಂದರೆ ಕಮಿಟಿಗೆ ಹಿತಸೂಚನೆ ಕೊಡುವುದಷ್ಟೇ. ನಾನು ಕೊಟ್ಟ ಮುಂಬಯಿ ನಿರ್ಣಯದ ವಿವರಣೆಯನ್ನು ವರ್ಕಿಂಗ್ ಕಮಿಟಿಯು ತಿರಸ್ಕರಿಸಬಹುದು. ಅಥವಾ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಅವರು ಮಾಡಿದ ನಿರ್ಣಯವನ್ನೇ ಮತ್ತೆ ಬದಲಾಯಿಸಲೂ ಬಹುದು. ಹಾಗಾದ ಕಾರಣ ಕಾಂಗ್ರೆಸಿನವರಾಗಲಿ, ಇತರರಾಗಲಿ, ಅಲ್ಲಿಯ ಆಸಕ್ತ ಪ್ರತಿಯೊಬ್ಬರೂ ಬೊಂಬಯಿ ನಿರ್ಣಯವನ್ನು ಮುಂದಿಟ್ಟುಕೊಂಡಿರಬೇಕಲ್ಲದೆ ಅದಕ್ಕೆ ನಾನು ಮಾಡಿದ ವಿವರಣೆಯನ್ನಲ್ಲ. ಆದ್ದರಿಂದ, ಯುದ್ಧವಿರುವವರೆಗೆ ಸ್ವಾತಂತ್ರ್ಯಕ್ಕಿಂತ ಒಂದಂಶ ಕಡಿಮೆಯಾಗಿ ತೀರ್ಮಾನವಾಗುವುದು ಸಾಧ್ಯವಿಲ್ಲವೆಂಬ ನನ್ನ ಹೇಳಿಕೆಯಿಂದ ಈಗ ಯಾಕೆ ಗಲಿಬಿಲಿಗೊಳ್ಳಬೇಕೋ ನನಗೆ ತಿಳಿಯದಾಗಿದೆ.

—ಹೀಗೆಂದು ಗಾಂಧಿಜಿಯವರು ಭಾರತದ ರಾಜಕೀಯ ವಿಚಾರಿಗಳ ಮನಸ್ಸಿನಲ್ಲಿ ಕ್ಷಣ ಒಂದು ಪ್ರಬಲವಾದ ಸಂದೇಹವನ್ನು ನಿವೃತ್ತಿಪಡಿಸುವ ಸಲುವಾಗಿ ಹೇಳಿಕೆಯೊಂದನ್ನು ಕೊಟ್ಟಿರುವರು. ಆ ಹೇಳಿಕೆಯಲ್ಲಿಯೇ ಅವರು ಅಲ್ಲಾಬಾದಿಗೆ ಕಮಲಾ ನೆಹರು ಸ್ಮಾರಕ ವೈದ್ಯಾಲಯವನ್ನು ತೆರೆಯಲು ಹೋದ ಸಂದರ್ಭದಲ್ಲಿ ಸರ್ ಸಪ್ರು, ಮಾಲವೀಯ, ರಾಷ್ಟ್ರಪತಿ ಮೊದಲಾದವರನ್ನು ಕಂಡದ್ದು ಪ್ರಕೃತದ ರಾಜಕೀಯ ಸಮಸ್ಯೆಯ ತೀರ್ಮಾನದ ಸಲುವಾಗಿರಬಹುದೆಂದು ಕೆಲವು ಕಡೆ ಎದ್ದ ಊಹಾಪೋಹೆಗಳು ನಿರಾಧಾರವಾದವುಗಳೆಂದೂ ತಿಳಿಸಿದ್ದಾರೆ.

ರಾಜಕೀಯ ಮಾತುಕತೆಯಲ್ಲ

ಅವರ ಹೇಳಿಕೆಯ ವಿವರವು ಹೀಗಿದೆ.

ಪತ್ರಿಕೆಗಳಲ್ಲಿ ನಾನು ಅಲ್ಲಾಬಾದಿಗೆ ಹೋದ ವಿಚಾರದಲ್ಲಿ ಎದ್ದ ಹಲವು ಊಹಾಪೋಹೆಗಳ ವಿಷಯದಲ್ಲಿ ಸಾರ್ವಜನಿಕರು ತಪ್ಪು ತಿಳಕೊಳ್ಳದಂತೆ ಎಚ್ಚರಿಸಬೇಕಾಗಿದೆ. ನಾನು ಅಲ್ಲಿ ಸರ್ ತೇಜ ಬಹದ್ದೂರ್ ಸಪ್ರು, ಅಲ್ಲಿಯೇ ಆಕಸ್ಮಾತ್ ಸರ್ ಜಗದೀಶ ಪ್ರಸಾದ್ ಮತ್ತೆ ಮಾಲವೀಯಜಿ ಹಾಗೂ ಆ ದಿನ ಬೆಳಿಗ್ಗೆ ಸೆರೆಮನೆಯಲ್ಲಿ ಬಿಡುಗಡೆಯಾದರು ಹಾಗೂ ವಿಜಯಲಕ್ಷ್ಮಿ ಪಂಡಿತರನ್ನು ಕಂಡು ಮಾತನಾಡಿದ ಕುರಿತು ವಿಶೇಷ ಮಹತ್ವಾಂಶಗಳೇನೂ ಇರವು. ಅವೆಲ್ಲಾ ವ್ಯಕ್ತಿಯ ಸಂದರ್ಶನಗಳಲ್ಲದೆ ಬೇರಲ್ಲ. ಅಲ್ಲಾಬಾದಿಗೆ ಸೇವಾಗ್ರಾಮದಿಂದ ಹೊರಟಮೇಲೆ ವಿಚಾರಿಸಿದವುಗಳು.

'ನಾನು ಅಲ್ಲಿಗೆ ಹೋದದ್ದು ಒಂದೇ ಒಂದು ಕೆಲಸದ ಸಲುವಾಗಿ. ನಾನು ಅಲ್ಲಿ ಬೇರೆ ಸ್ವಲ್ಪ ಕೆಲಸವೇನಾದರೂ ಮಾಡಿದ್ದರೆ ಅವೆಲ್ಲವೂ ಅಪೇಕ್ಷಿತವಾಗಿ. ಕೆಲವು ವಿದ್ಯಾರ್ಥಿಗಳನ್ನು ಮತ್ತು ಗ್ರಾಮಪಾಲಿ ಕೆಲಸಗಾರರನ್ನು ನಾನು ಸಂದರ್ಶಿಸಿದ. ಸರ್ ಸಪ್ರುಗಳನ್ನು ಕಂಡದ್ದೇಕೆಂದರೆ ಅವರು ಬೇನೆ ಬಿದ್ದಿದ್ದರು. ನಾವು ಹಳೆಕಾಲದ ಮಿತ್ರರು. ಅವರು ನನ್ನನ್ನು ನೋಡಲು ಬರಬೇಕೆಂದಿದ್ದರು. ಆದರೆ ಅವರಿಗೆ ಸೌಖ್ಯವಿಲ್ಲವೆಂಬುದನ್ನು ಕೇಳಿ ನಾನಾಗಿಯೇ ಅವರಲ್ಲಿ ಹೋದೆನು. ನಾವು ಅಲ್ಲಿ ಭಾರತದ ಪ್ರಕೃತದ ರಾಜಕೀಯ ವಿಚಾರಗಳ ಕುರಿತು ಮಾತನಾಡಿದೆನೆಂಬುದು ಖಂಡಿತ. ರಾಜಕೀಯಕ್ಕಿಂತಲೂ ಹೆಚ್ಚಾಗಿ ನಾವು ಹಿಂದೂ–ಮುಸ್ಲಿಂ ಐಕ್ಯದ ವಿಚಾರದ ಮಾತನಾಡಿದೆವು. ಅದೇ ಅಲ್ಲಿಗೆ ಬಂದ ಸರ್ ಸಪ್ರುಗಳಲ್ಲಿ ಭೋಜನಕ್ಕೆ ಆಮಂತ್ರಿತರಾಗಿದ್ದ ಸರ್ ಜಗದೀಶ ಪ್ರಸಾದರೂ ನಮ್ಮ ಮಾತುಕತೆಯಲ್ಲಿ ಸೇರಿದರು. ಆದರೆ ಈ ಮಾತುಕತೆಗಳಿಗೆ ಯಾವುದೇ ರೀತಿಯ ರಾಜಕೀಯ ಪ್ರಾಧಾನ್ಯತೆಯು ಒಂದಿಷ್ಟಾದರೂ ಸೇರಿಸಲಿಲ್ಲ. ನಾವು ವ್ಯಕ್ತಿಗಳಾಗಿ ಮಾತನಾಡಿದೆವಲ್ಲದೆ ಯಾವುದಾದರೂ ಕೆಲಸಕ್ಕಾಗಿ ಉದ್ಯುಕ್ತರಾದವರಂತೆ ಮಾತನಾಡಲಿಲ್ಲ.

ಸರ್ ಸಪ್ರುಗಳು ಇಂದಿನ ಭಾರತದ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಲು ಬಹಳ ಉತ್ಸುಕರಾಗಿದ್ದಾರೆ (ಯಾರು ತಾನೇ ಉತ್ಸುಕರಾಗಿಲ್ಲ?) ಹಿಂದೂ–ಮುಸ್ಲಿಂ ಒಕ್ಕಟ್ಟು ಆಗುವುದಿದ್ದರೆ ಅದಕ್ಕಾಗಿ ಅವರು ಏನನ್ನು ಕೊಡಲೂ ಸಿದ್ಧರಿರುವರು. ಹಿಂದೂ ಮುಸ್ಲಿಂ ಐಕ್ಯಕ್ಕೆ ನಾನು ಹೆಚ್ಚಿನ ಪ್ರಾಮುಖ್ಯವುಳ್ಳವನೆಂದು ಅವರು ತಿಳಿದುಕೊಳ್ಳುತ್ತಾರೆ. ಸರ್ ಜಗದೀಶರಾದರೂ ಆ ಆಶಯಕ್ಕೆ ಕಡಿಮೆ ಉತ್ಸುಕರಾಗಿಲ್ಲ. ಆದರೆ ಎಲ್ಲಾ ಮಾತುಕತೆಗಳೂ ಕೇವಲ ವ್ಯಕ್ತಿಯ ಸಂಭಾಷಣೆಗಳಾಗಿದ್ದುವಲ್ಲದೆ ವಿಶೇಷ ತರದವುಗಳಾಗಿರಲಿಲ್ಲ.

ಮಾಲವೀಯಜಿಯವರನ್ನು ಸಂದರ್ಶಿಸಿದ ವಿಷಯದಲ್ಲಿ ಅದೇ ತರದ ಸಂಬಂಧವೇ ಇತ್ತು. ಅವರು ಬಹಳ ಪ್ರಾಯ ಹೋದವರಾಗಿದ್ದಾರೆ. ಇಂದಿನ ವಿಷಯಗಳ ಕುರಿತು ಅವರು ಹೆಚ್ಚು ಮಾತನಾಡಶಕ್ತರಲ್ಲ. ಅವರು ಬಹಳ ಸೊರಗಿದ್ದಾರೆ. ಆದರೆ ದೇಶದ ಸಂಗತಿಗಳು ಅವರಿಗೆ ಮತ್ತದೇ ಆಹಾರವಾಗಿವೆ. ಅವರು ಓದುವುದನ್ನು ಬಿಟ್ಟು ಭಗವದ್ಗೀತೆಯಲ್ಲಿ ಮಗ್ನರಾದಾಗ ಅವರು ಇದನ್ನಲ್ಲದೆ ಮರೆಯಲಿಲ್ಲ. ಈ ವಿಷಯಗಳು ಅವರ ಜೀವನದ ಶ್ವಾಸಗಳು. ಅವರ ಶ್ವಾಸವು ನಿಂತಾಗ ಅವುಗಳೂ ನಿಲ್ಲುವವು. ಯಾರಿಗೆ ಗೊತ್ತು, ಅವರ ಆತ್ಮವು ಹೋದಲ್ಲಿ ಅವರು ಇದನ್ನೂ ತಗೆದುಕೊಂಡು ಹೋಗುವರೋ ಇಲ್ಲವೋ ಎಂಬುದ. ಹೇಗಿದ್ದರೂ ಇಂತಹ ಮಿತ್ರರೊಡನೆ ಮಾತುಕತೆ ನಡೆದದ್ದು ನನಗೆ ಒಂದು ಆನಂದವಾಗಿದೆ. ಆದರೆ ನಮ್ಮ ಮಾತುಕತೆಗಳು ದೇಶದ ರಾಜಕೀಯ ಪರಿಸ್ಥಿತಿಗೆ ಸಂಬಂಧಿಸಿದವುಗಳಾಗಿರಲಿಲ್ಲ. ಮಾತ್ರವಲ್ಲದೆ ಆಜಾದರನ್ನು ಮತ್ತು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ಸಂದರ್ಶಿಸಿದ್ದು ಸೆರೆಮನೆಯ ಭೇಟಿಗಿಂತ ಬೇರೆ ಏನೂ ವಿಶೇಷವಾಗಿಯಲ್ಲ.

ಊಹಾಪೋಹೆಗೆ ಕಾರಣ

ಇಂತಹ ಭೇಟಿಯ ವಿಷಯದಲ್ಲಿ ಹಲವು ಊಹಾಪೋಹಗಳೇಳುವುದರ ಕಾರಣವೆಂದರೆ ಸಾರ್ವಜನಿಕರು ರಾಜಕೀಯ ಐಕ್ಯವನ್ನು ಸಾಧಿಸಲು, ಹಾಗೂ ಪ್ರಕೃತದ ರಾಜಕೀಯ ಬಿಕ್ಕಟ್ಟನ್ನು ಒಗೆಹರಿಸಲು ಆತುರರಾಗಿರುವುದೇ ಆಗಿದೆಯೆಂದು ನಾನು ಬಲ್ಲೆ. ಆದರೆ ಈ ಕಾರ್ಯವನ್ನು ಕೊನೆಗಾಣಿಸುವಲ್ಲಿ ಒರಿಯ ನಮ್ಮ ಮನಸ್ಸಿನ ಆತುರ ಮಾತ್ರವೇ ಸಹಾಯಕವಾಗಲಾರದು. ಇಂತಹ ಕಾರ್ಯವಾಗಬೇಕಾದರೆ ಕೆಲಸಕ್ಕೆ ಕೈಹಚ್ಚಬೇಕು. ಮತ್ತು ಅಂತಹ ಉತ್ಸಾಹವನ್ನು ಹಂಚಿಕೊಳ್ಳಬೇಕು. ಎಲ್ಲರೂ ಸರ್ವಸಾಧಾರಣವಾದ ಕಾರ್ಯಪ್ರವೃತ್ತಿ ಯಾವುದೆಂದು ಹುಡುಕುತ್ತಿದ್ದಾರೆ. ಬರಿಯ ಕಲ್ಪನೆಯಲ್ಲಿಯೇ ಸಮಯ ಹೋಗುತ್ತದೆ. ಕಾಂಗ್ರೆಸ್ಸಿನ ವಿಷಯ ಹೇಳುವದಿದ್ದರೆ ಅದರ ಕಾರ್ಯಕ್ರಮಗಳು ಈಗಾಗಲೇ ನಿಶ್ಚಿತವಾಗಿವೆ, ಎಲ್ಲರಿಗೂ ತಿಳಿದಿದೆ. ಕಾಂಗ್ರೆಸ್ಸು ತನಗಾಗಿಯೇ ಹೀಗೆ ಕೆಲಸಮಾಡುತ್ತಿದೆಯೆಂದು ಹೇಳುವುದು ಅಸಂಬದ್ಧವಾಗಿದೆ. ಸ್ವಾತಂತ್ರ್ಯವು ಸಿಕ್ಕಿದರೆ ಅದು ಎಲ್ಲರಿಗೂ. ಹೇಗೋ ಹಾಗೆಯೇ ವಾಕ್‌ಸ್ವಾತಂತ್ರ್ಯ ಸಿಕ್ಕಿದರೂ ಅದ ಎಲ್ಲರಿಗೂ ಆಗಿದೆ. ಸ್ವಾತಂತ್ರ್ಯದ ವಿಚಾರವು ಹೇಗೆ ಎಂಬುದನ್ನು ನಿರ್ಧರಿಸುವುದು ಕಾಂಗ್ರೆಸ್ಸು ಮಾತ್ರವಲ್ಲ. ಸರ್ವರೂ ತಮ್ಮ ಮತದಾನದಿಂದ [illegible] ಅದನ್ನು ಅಹಿಂಸೆಯಿಂದಲೇ ಪಡೆಯಬೇಕೆಂದು ನಿರ್ಣಯ ಮಾಡುವುದಿದ್ದರೆ ಬಹುಮತದ ಮಾತಿಗೆ ಹೆಚ್ಚಿನ ಬಲ ಬರಲಿಕ್ಕಿಲ್ಲ. ಭಾರತದ ಸ್ವಾತಂತ್ರ್ಯ ಶಾಸನವೆಂಬುದು ಎಲ್ಲಾ ಅಲ್ಪಸಂಖ್ಯಾತರ ಒಪ್ಪಿಗೆಯಿಂದಲೇ ಮತ್ತು ಸಂಬಂಧಿಸಿದ ಇತರ ಅನೇಕ ವಿಚಾರಗಳ ಕೂಡ [illegible] ಭಾರತದ ಸಕಲ ಜನತೆಯು [illegible] ನಿರ್ಣಯಿಸಲ್ಪಡಬೇಕಾಗಿದೆ.

ಇದು ಹೇಗಿದ್ದರೂ ಭಾರತದ ಎಲ್ಲಾ ಪಕ್ಷದವರಿಗೂ ಪ್ರಕೃತ ಯುದ್ಧವಿಷಯದಲ್ಲಿಯೇ ಆದರೂ, ಸ್ವತಂತ್ರ ಮಾತನಾಡಲು ಅಧಿಕಾರ ದೊರಕಬೇಕೆಂದು ಕಾಂಗ್ರೆಸ್ಸು ಶಾಸನಭಂಗ ಚಳವಳವನ್ನು ಮಾಡುತ್ತಿದೆ. ಇದೆಂದರೆ ಜನಸಾಮಾನ್ಯದ ಅಭಿಪ್ರಾಯಕ್ಕೆ ಅನುಗುಣವಾಗಿ ಕಾಂಗ್ರೆಸ್ಸು ಮಾಡುವ ಕಾರ್ಯವಾಗಿದೆ. ಪ್ರತ್ಯಕ್ಷ ತಳಹದಿಯ ವಿಚಾರವಾಗಿ ಇನ್ನೊಂದು ವಿಧಾನವು ಹೊಳೆವ ತನಕ ಕಾಂಗ್ರೆಸ್ಸು ಈ ರೀತಿಯಲ್ಲಿಯೇ ಮುಂದುವರಿಯಬೇಕಾಗಿದೆ.

ನೋಟೀಸು

ದ ಕ್ಷಿ ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R F P 609/1941

O S 173/37

ಹಮ್ಮಬ್ಬ ಬ್ಯಾರಿ, ಹಸನ್ ಬ್ಯಾರಿ
ಅರ್ಜಿದಾರ್ರು—ವಾದಿರು

ಮತ್ತು

1 ಸುಬ್ರಾಯ ಕೊಡಿಬೆಟ್ಟು ಕ್ರಿಷ್ಣಯ್ಯನವರ ಮಗ 2 ಕೃಷ್ಣಯ್ಯ 3 ಕೇಶವಯ್ಯ 1ನೇ ಸುಬ್ರಾಯರ ಮಕ್ಕಳು 4 ಸುಬ್ರಾಯ ಪ್ರಭುನವರ ಗಾರ್ಡಿಯನ್ ತಂದೆ 1ನೇಯವ ಮಂಗಳೂರು ತಾಲ್ಲೂಕು ಅಡ್ಯೂರು ಗ್ರಾಮಸ್ಥರು

ರೆಸ್ಪೊಂಡೆಂಟರು.

ರೆಸ್ಪೊಂಡೆಂಟರಿಗೆ—

ಅರ್ಜಿದಾರರ ನಿಮ್ಮ ಮೇಲೆ ದಾಖ್ಲು ಮಾಡಿದ ಪೇಟಿನ ಅಮ್ಲುಜಾರಿಯಲ್ಲಿ ಜಪ್ತಿ ಮಾಡಲ್ಪಟ್ಟ ಸ್ಥಿರಾಸ್ತಿಯ ಏಲಂನ ಶರ್ತಗಳನ್ನು ಮಂಜೂರುಪಡಿಸುವರೆ ಇದೇ ತಾ 19–3–'41ನೇ ತಕ್ಕಿಗೆ ಇಟ್ಟಿರುತ್ತದೆ. ಆ ಕುರಿತು ನಿಮಗೇನಾದ್ರು ಆಕ್ಷೇಪಣೆ ಇದ್ರೆ ಸದ್ರಿ ತಾರೀಕಿನ ಬೆಳಗ್ಗೆ 10½ ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರುಪಡಿಸಿಕೊಳ್ಳಬಹುದು

ಕೋರ್ಟು ಹುಕ್ಮುಂ ಪ್ರಕಾರ

ಮಂಗಳೂರು } B. R. Vyasaraya Achar,
25–2–'41 } ಅರ್ಜಿದಾರ್ರರ ವಕೀಲ

ಹಿಂದೂ ಮಹಾಸಭೆಯು ಹೋರಾಟವನ್ನು ಹೂಡುವುದೆ?

ಮಾರ್ಚಿಯ ಅಂತ್ಯದೊಳಗೆ ನಿರ್ಣಯ

ಬ್ರಿಟಿಷ್ ವಸ್ತುಗಳಿಗೆ ಬಹಿಷ್ಕಾರವೆ?

—ಸಾವರ್ಕರ್—

ಹಿಂದೂಮಹಾಸಭೆಯು ಕೇಳಿದ ಪ್ರಶ್ನೆಗಳಿಗೆ ಈ ತಿಂಗಳ ಅಂತ್ಯದೊಳಗಾಗಿ ಸರಕಾರದಿಂದ ತೃಪ್ತಿಕರವಾದ ಉತ್ತರವು ಬಾರದಿರುವುದಾದರೆ ಯಾವುದಾದರೊಂದು ಪ್ರಕಾರದ ಹೋರಾಟವನ್ನು ಆರಂಭಿಸಬೇಕಾಗುವುದು. ತಕ್ಕ ಪರಿಣಾಮವು ಆಗುವುದೆಂದಾದರೆ ಬ್ರಿಟಿಷ ವಸ್ತುಗಳ ಸಾರ್ವತ್ರಿಕ ಬಹಿಷ್ಕಾರವನ್ನು ಆರಂಭಿಸಬೇಕೆಂದಿದೆ. ಯುದ್ಧದ ದೆಸೆಯಿಂದಾಗಿ ಬ್ರಿಟಿಷ್ ವಸ್ತುಗಳು ಇಲ್ಲಿಗೆ ಬರುವುದು ಬಹಳ ಕಡಿಮೆಯಾಗಿದೆ ಎಂಬುದು ನಿಜ. ಆದರೂ ಕೂಡ ಅಗತ್ಯ ಬಿದ್ದರೆ ಸಂಪೂರ್ಣವಾಗಿ ಬ್ರಿಟಿಷ ವಸ್ತುಗಳ ಬಹಿಷ್ಕಾರ ಮಾಡಲಿಕ್ಕೆ ಇಲ್ಲಿ ಅವಕಾಶವಿದೆ. ಮಾತ್ರವಲ್ಲ ಬ್ರಿಟಿಷರ ಸಂಘ ಸಂಸ್ಥೆಗಳನ್ನು ಬಹಿಷ್ಕರಿಸಬಹುದಾಗಿದೆ. ಉದಾಹರಣೆಗೆ–ಬ್ರಿಟಿಷ ವಿಮಾ ಕಂಪೆನಿಗಳು, ಸ್ಕೂಲುಗಳು, ಜವುಳಿ, ಪ್ರಿಂಟಿಂಗ ಪ್ರೆಸ್ಸುಗಳು, ಕೆಲವು ಔಷಧಿಗಳು— ಇವೇ ಮೊದಲಾದವನ್ನು ಬಹಿಷ್ಕರಿಸುವುದರಿಂದ ಪ್ರಯೋಜನವುಂಟು ಎಂದು ಶ್ರೀ. ಸಾವರಕರರು ಹಿಂದೂ ಮಹಾಸಭೆಯ ಶಾಖಾಧಿಕಾರಿಗಳಿಗೆ ಪತ್ರ ಬರೆದಿರುತ್ತಾರೆ.

ಮಹಾಸಭೆಗೆ ಏನು ಬೇಕು

ಹಿಂದಿನ ಮಹಾಸಭೆಯ ಅಧಿವೇಶನದಲ್ಲಿಯ ಕೆಲವು ಠರಾವುಗಳನ್ನು ಮಾಡಿ ಅವುಗಳಿಗೆ ಸರಕಾರವು ಮಾರ್ಚ ಅಂತ್ಯದೊಳಗಾಗಿ ಉತ್ತರಕೊಡಬೇಕೆಂದು ಆಗ ಅಪೇಕ್ಷಿಸಿತ್ತು. ಯುದ್ಧ ಮುಗಿದೆ ಒಂದು ಅವಧಿಯೊಳಗಾಗಿ ಸಾಮಂತ ಸ್ವರಾಜ್ಯವನ್ನು ಕೊಡುವುದು, ಪಾಕಿಸ್ತಾನದ ಯೋಜನೆಗೆ ಸರಕಾರವು ಒಪ್ಪುವುದಿಲ್ಲವೆಂದು ಸ್ಪಷ್ಟವಾಗಿ ಹೇಳುವುದು ಮತ್ತು ಕೇಂದ್ರದಲ್ಲಿ ತಾತ್ಕಾಲಿಕ ಪ್ರಜಾ ಸರಕಾರವನ್ನು ಸ್ಥಾಪಿಸುವದು; ಇವೇ ಮಹಾಸಭೆಯ ಕೇಳಿಕೆಗಳು. ಈ ಕೇಳಿಕೆಗಳಿಗೆ ಸರಕಾರವು ತನ್ನ ಸಂಪೂರ್ಣ ಉತ್ತರವನ್ನು ಇನ್ನೂ ಕೊಟ್ಟಿರುವುದಿಲ್ಲ.

ತಜ್ಞರ ಅಭಿಪ್ರಾಯ

ತೃಪ್ತಿಕರವಾದ ಉತ್ತರವು ಬಾರದ ಸಂದರ್ಭದಲ್ಲಿ ಬ್ರಿಟಿಷ ವಸ್ತು ಬಹಿಷ್ಕಾರವನ್ನು ಮಾಡಿದರೆ ಅದು ಸಫಲವಾಗಬಹುದೇ ಎಂಬ ಕುರಿತು ಶ್ರೀ. ಸಾವರಕರರು ಈಗ ತಜ್ಞರ ಅಭಿಪ್ರಾಯ ಸಂಗ್ರಹಮಾಡುತ್ತಾ ಇದ್ದಾರೆ. ಮತ್ತು ಬ್ರಿಟಿಷರ ಯಾವ ಯಾವ ಸಂಘ ಸಂಸ್ಥೆಗಳನ್ನೂ ವಸ್ತು ಒಡವೆಗಳನ್ನೂ ಬಹಿಷ್ಕರಿಸಬಹುದೆಂಬ ಕುರಿತು ಅವರು ವಿವರಗಳನ್ನೂ ಕೇಳಿದ್ದಾರೆ. ಮಹಾಸಭೆಯ ಅಧೀನ ಸಂಬಂಧಿತ ಸಂಸ್ಥೆಗಳು ಸ್ಥಳೀಯ ವ್ಯಾಪಾರ ಉದ್ಯೋಗಿಗಳೊಡನೆ ವಿಚಾರವಿನಿಮಯ ಮಾಡಿಕೊಂಡು ಬೇಕಾದ ಸಲಹೆಗಳನ್ನು ಕಳುಹಿಸಕೊಡಬೇಕೆಂದು ಸರ್ಕಲಾರಿನಲ್ಲಿ ಬರೆದಿದೆ.

ತಿಂಗಳ ಅಂತ್ಯದಲ್ಲಿ ನಿರ್ಣಯ

ಮಹಾಸಭೆಯ ಕಾರ್ಯನಿರ್ವಾಹಕ ಸಮಿತಿಯ ಮುಂದಿನ ಅಧಿವೇಶನವು ಈ ತಿಂಗಳಅಂತ್ಯದಲ್ಲಿ ಪ್ರಾಯಶಃ ಬೊಂಬಾಯಿಯಲ್ಲಿ ಕೂಡಲಿದೆ. ಅಷ್ಟರೊಳಗಾಗಿ ಪ್ರಾಂತ್ಯಗಳಿಂದ ತಜ್ಞರ ಅಭಿಪ್ರಾಯಗಳನ್ನು ಸಂಗ್ರಹಿಸಿ ಶ್ರೀ. ಸಾವರ್ಕರರಿಗೆ ಕಳುಹಿಸುವರು. ಆದ್ದರಿಂದ ಈ ಬಾರಿಯ ಅಧಿವೇಶನವು ಮಹತ್ವಪೂರ್ಣವಾಗಿದ್ದು ಅದರಲ್ಲಿ ಮಹತ್ವದ ನಿರ್ಣಯಗಳು ಆಗಲಿವೆ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 25/1941

ಅರ್ಜಿದಾರರು:—1. ಮಹಾಕಮ್ಮ,
2. ಮ್ಯಾನರ ರಾಮಚಂದ್ರ
3. ಮ್ಯಾನರ ಲಕ್ಷ್ಮೀನಾರಾಯಣ

ಎದ್ರಿ:—ಸುಬ್ಬಾಭಟ್ಟ

ಮೇಲಿನ ಅರ್ಜಿ ವ್ಯವಹರಣೆಯಲ್ಲಿ ಈ ಮೂಲಕ ಜಾಹೀರುಮಾಡುವುದೇನೆಂದರೆ,

ಕುಂದಾಪುರ ತಾಲೂಕು ಹಬ್ಬಿಗೆ ಗ್ರಾಮದಲ್ಲಿರುವ 1ನೇ ಅರ್ಜಿದಾರಳ ಗಂಡ ವ 2, 3ನೇ ಅರ್ಜಿದಾರರ ತಂದೆಯಾದ ದೇವರುಭಟ್ಟರು ಮತ್ತು ಅರ್ಜಿದಾರರು ಕೂಡಾ ಹಿಂದೂ ಮಿತಾಕ್ಷರಿ ಶಾಸ್ತ್ರ ಆಚರಿಸುವವರಾಗಿದ್ದು ಸದ್ರಿ ದೇವರುಭಟ್ಟರು ತಾ. 17-10-40ರಲ್ಲು ಮೃತಪಟ್ಟದ್ದರಿಂದ ಸದ್ರಿಯವರಿಗೆ ಅರ್ಜಿದಾರರು ವಾರಿಸುದಾರರಾಗಿದ್ದು ಅವರ ವಿಶಿಷ್ಟ ಸ್ಥಿರಚರ ಸೊತ್ತುಗಳಿಗೂ ವ ಅವರಿಗೆ ಹೊರಗಿನಿಂದ ಬರತಕ್ಕ ಸಾಲ ವಸೂಲುಮಾಡಲಿಕ್ಕೂ ಅರ್ಜಿದಾರರು ತಾವು ಅರ್ಹರಾಗಿರುತ್ತೇವೆಂತಲೂ ಆ ಪ್ರಕಾರ ಮೇಲ್ಕಂಡ ಅರ್ಜಿಯಲ್ಲಿ ಕಾಣಿಸಿದ ಸಾಲ ವಸೂಲು ಮಾಡುವ ಹಾಗೆ ತಮಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿಯೂ ಸದ್ರಿ ಅರ್ಜಿ ದಾಖಲುಮಾಡಿರುತ್ತಾರೆ. ಆ ಅರ್ಜಿಯು ತಾರೀಕು 20-3-41 ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ಕಿಗೆ ಇಡೋಣಾಗಿಯದೆ. ಈ ವಿಷಯದಲ್ಲಿ ಯಾರದ್ದಾದರೂ ಆಕ್ಷೇಪ ಇದ್ದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

ತಾ. 5-3-41, ಕುಂದಾಪುರ } B. Mahabala Hebbar, Advocate for pe titioner.

ಪಾಕಿಸ್ಥಾನವು ಮುಸಲ್ಮಾನರ ಹಿತಕ್ಕಾಗಿಯಲ್ಲ!

ಲೀಗಿನ ಉದ್ದೇಶವೇನು?

ಮೌಲಾನಾ ಹಬಿಬುಲ್ ರಹಮಾನರ ಲೇಖನ

ಸಂಪೂರ್ಣ ಸ್ವಾತಂತ್ರ್ಯವನ್ನು ಸಂಪಾದಿಸುವುದೇ ತನ್ನ ಗುರಿಯಾಗಿರುತ್ತದೆಂದು ಮುಸ್ಲಿಂ ಲೀಗು ತನ್ನ ಧೋರಣೆಯನ್ನು ಸ್ಪಷ್ಟಮಾಡಿತ್ತು. ಈ ಧೋರಣೆಯನ್ನು ಸ್ಪಷ್ಟಮಾಡಿ ಒಂದೆರಡು ವರ್ಷಗಳು ಕೂಡ ಕಳೆಯಲಿಲ್ಲ. ಅಷ್ಟರಲ್ಲೇ ಅದು 'ಪಾಕಿಸ್ತಾನ ಸ್ಥಾಪನೆ'ಯೇ ತನ್ನ ಧ್ಯೇಯವೆಂದಿತು. ಹೀಗೆ ಅದು ತನ್ನ ಧೋರಣೆಯನ್ನು ಯಾಕೆ ಬದಲಾಯಿಸಿತೆಂಬುದನ್ನು ಯಾರಿಗೂ ಹೇಳಲಿಲ್ಲ. ಮುಸಲ್ಮಾನ ಜನತೆಯ ಮುಖಂಡರು ಬಾಯಿಯಲ್ಲಿ ಕಡ್ಡಿಹಾಕಿ ಪ್ರಶ್ನಿಸಿದರೂ, ಲೀಗು ಬಾಯಿಗೆ ಬೀಗಮುದ್ರೆ ಹಾಕಿ ಮೌನ ತಾಳಿತು. ತಾವು ಹೇಳುವುದು ಅಥವಾ ಮಾಡುವುದು ಯಾಕೆಂಬುದನ್ನು ಸ್ಪಷ್ಟಮಾಡುವ ಸುದ್ದಿಗೆ ಲೀಗಿನ ಮುಖಂಡರು ಹೋಗುವುದಿಲ್ಲ. ಆದ್ದರಿಂದ ಅವರ ಹೃದಯದಲ್ಲಿ ಏನೋ ಒಂದು ದೊಡ್ಡ ಸ್ವಾರ್ಥವು ಅಡಗಿದೆ ಎಂಬ ಸಂದೇಹವುಂಟಾಗುತ್ತದೆ.

ಲೀಗಿನ ಉದ್ದೇಶ

ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸುತ್ತಿರುವ ಎಲ್ಲಾ ಮಹನೀಯರನ್ನೂ, ಎಲ್ಲಾ ಸಂಘ ಸಂಸ್ಥೆಗಳನ್ನೂ ವಿರೋಧಿಸಿ ಬ್ರಿಟಿಷ ಸಾಮ್ರಾಜ್ಯ ಸತ್ತೆಯ ಕೈಗಳನ್ನು ಬಲಪಡಿಸುವುದೇ ಲೀಗಿನ ಉದ್ದೇಶವಾಗಿದೆ ಎಂಬುದು ಅದರ ವರ್ತನದಿಂದ ಯಾರಿಗೂ ತಿಳಿಯುವಂತಿರುವುದು. ಕಾಂಗ್ರೆಸ್ಸು ಸ್ವಾತಂತ್ರ್ಯ ಸಾಧನೆಗಾಗಿ ಮಹಾ ಪ್ರಯತ್ನಗಳನ್ನು ಮಾಡಿರುವುದರಿಂದ ಅದರ ಮೇಲೆ ಲೀಗಿನ ವಕ್ರದೃಷ್ಟಿ ಪ್ರಬಲವಾಗಿದೆಯೆಂಬುದರಲ್ಲಿ ಆಶ್ಚರ್ಯವಿಲ್ಲ. ಕಾಂಗ್ರೆಸಿನ ಮೇಲೆ ಮುಸಲ್ಮಾನರ ಸಹಾನುಭೂತಿಯು ನಷ್ಟವಾಗುವಂತೆ ಲೀಗು ಮುಸಲ್ಮಾನರೊಳಗೆ ಕಾಂಗ್ರೆಸಿನ ಪ್ರತಿಕೂಲವಾದ ಅಪಪ್ರಚಾರ ಮಾಡುತ್ತಲಿದೆ. ಅದು ಕಾಂಗ್ರೆಸಿನ ಕುರಿತು ಹೇಳುವುದು ಸುಳ್ಳಿನ ಕಂತೆಯಲ್ಲದೆ ಮತ್ತೇನೂ ಆಗಿರುವುದಿಲ್ಲ. ಬ್ರಿಟಿಷರ ಮನ ಒಲಿಸಿ ಜಹಗೀರ್ದಾರರು, ತಾಲೂಕುದಾರರು, ನವಾಬರು, ಸುಭೇದಾರರು ಮತ್ತು ಮುಸಲ್ಮಾನ ಬಂಡವಾಳಿಗರು– ಇವರ ದೌಲತ್ತಿಗೆ, ಇವರ ಸ್ವಚ್ಛಂದ ಜೀವನಕ್ಕೆ ಭಂಗಬಾರದ ಹಾಗೆ ಅವರ ಹಕ್ಕು ಅಧಿಕಾರಗಳಿಗೆ ರಕ್ಷಣೆ ಕೊಡುವುದಷ್ಟೇ ಲೀಗಿನ ಉದ್ದೇಶವಾಗಿದೆ. ಆದ್ದರಿಂದಲೇ ನಾವು ಲೀಗಿನಿಂದ ಮುಸಲ್ಮಾನ ಜನತೆಯ ಹಿತಸಾಧನೆಯಾಗುವುದಿಲ್ಲವೆಂದು ಪದೇ ಪದೇ ಮುಸಲ್ಮಾನ ಜನತೆಗೆ ಎಚ್ಚರಿಕೆ ಕೊಡುವುದಾಗಿದೆ.

ಪಾಕಿಸ್ತಾನ ಯಾರಿಗಾಗಿ

ಪಾಕಿಸ್ತಾನವು ಕೂಡ ಈ ನವಾಬ ಸುಬೇದಾರರಿಗಾಗಿಯೂ ಮುಸಲ್ಮಾನ ಭಂಡವಾಳಿಗರಿಗಾಗಿಯೂ ಇರುತ್ತದಲ್ಲದೆ, ಅದು ಮುಸಲ್ಮಾನ ಜನತೆಗಾಗಿ ಇರುವುದಿಲ್ಲ. ಸ್ವಾತಂತ್ರ್ಯ ಚಳವಳವು ಪ್ರಬಲವಾಗಿ ಬ್ರಿಟಿಷರು ಇಲ್ಲಿ ಅಧಿಕಾರವನ್ನು ನಡೆಸಲು ಸಮರ್ಥರಾದಾಗ, ಪಾಕಿಸ್ತಾನದ ಮರೆಯಲ್ಲಿ ಬ್ರಿಟಿಷ ಸಾಮ್ರಾಜ್ಯಶಾಹಿಯನ್ನೂ ತಮ್ಮನ್ನೂ ಕಾಪಾಡಿಕೊಳ್ಳಲಿಕ್ಕೆ ಈ ಲೀಗು ಮುಖಂಡರು ದೊಡ್ಡ ಪಿತೂರಿಮಾಡುವರು. ಅದಕ್ಕಾಗಿಯೇ ಪಾಕಿಸ್ತಾನ ಆಂದೋಲನವು ನಡೆದಿರುತ್ತದೆ. ಮುಸಲ್ಮಾನರು ಈ ರಹಸ್ಯವನ್ನು ಚೆನ್ನಾಗಿ ತಿಳಿದಿರಬೇಕು. ಅವರ ಲೀಗಿನ ಮುಖಂಡರ ಪೊಳ್ಳಿಗೆ ಜೇನು ಸವರುವ ಸಿಹಿಯಾದ ಮಾತುಗಳಿಗೆ ಎಂದೂ ಬಲಿಯಾಗಬಾರದು.

ಮುಸಲ್ಮಾನರಿಗೆ ಎಚ್ಚರಿಕೆ

ಲೀಗಿನ ಮಾತುಗಳನ್ನು ನಂಬಿ ಮೋಸಹೋಗುವ ಮುಸಲ್ಮಾನರಿಗೆ ಒಂದು ಎಚ್ಚರಿಕೆಯನ್ನು ಕೊಡುತ್ತೇವೆ. ಹಿಂದೂ ಸಿಖ ಮೊದಲಾದ ಇತರರು ಪಾಕಿಸ್ತಾನವನ್ನು ವಿರೋಧಿಸುವ ಆ ಮಾತು ಹಾಗಿರಲಿ, ಪಾಕಿಸ್ತಾನವನ್ನು ವಿರೋಧಿಸುವವರು ಮುಸಲ್ಮಾನರೊಳಗೂ ಅಸಂಖ್ಯಾಕರಾಗಿ ಇದ್ದಾರೆ ಎಂಬುದನ್ನು ಅವರು ಮರೆಯಬಾರದು. ಮುಸಲ್ಮಾನರೇ ಆಗಿರುವ ಶೀಯರು, ಸುನ್ನಿಗಳು, ಅಲ್-ಇ-ಹಾಡಿಗಳು ಮೊದಲಾದ ಅನೇಕ ಜಾತಿಗಳೊಳಗೆ ಧಾರ್ಮಿಕ ಮತಭೇದಗಳಿರುತ್ತವೆ. ಅನೇಕ ವಿಷಯಗಳಲ್ಲಿ ಮುಸಲ್ಮಾನ ಜಾತಿಗಳೊಳಗಿನ ಈ ಮತಭೇದಗಳು ಒಂದುಗೂಡಿಸಲಿಕ್ಕಾಗದಂಥವುಗಳಾಗಿವೆ. ಪಾಕಿಸ್ತಾನವು ಆದರೆ, ಇವುಗಳಲ್ಲಿ ಯಾವ ಜಾತಿಯ ಮುಸಲ್ಮಾನರ ಮತಧರ್ಮಕ್ಕೆ ಅನುಸಾರವಾಗಿ ಆಡಳಿತವು ನಡೆಯುವುದು? ಮುಸ್ಲಿಂ ಲೀಗಾಗಲೀ, ಅದರ ಅಖಂಡ ಮುಖಂಡರಾದ ಜಿನ್ನಾ ಸಾಹೇಬರಾಗಲಿ ಇದನ್ನು ಬೇರೆ ಬೇರೆ ಮುಸಲ್ಮಾನ ಜಾತಿಗಳಿಗೆ ಸ್ಪಷ್ಟಮಾಡುವರೆ?

ಇಲ್ಲ, ಆ ಸಾಹಸವು ಅವರಿಗೆ ಇಲ್ಲವೇ ಇಲ್ಲ. ಯಾಕೆಂದರೆ ಇದನ್ನು ಹೇಳಹೋದರೆ ಪಾಕಿಸ್ತಾನದೊಳಗೆಯೇ ಮತ್ತೆ ಶೀಯಾಸ್ತಾನ, ಸುನ್ನಿಸ್ತಾನ, ಹಾಡಿಸ್ತಾನ ಮೊದಲಾದ ನೂರಾರು ಸ್ತಾನಗಳು ಆಗಬೇಕಾಗುವುವು. ಹರಿದುಹೋದ ಪಾಕಿಸ್ತಾನದ ಆ ನಕಾಶದಲ್ಲಿ ಜಿನ್ನಾ ಸಾಹೇಬರ ಚಿತ್ರವನ್ನು ಗುರುತಿಸಲಿಕ್ಕೆ ಆಗಲಿಕ್ಕಿಲ್ಲ!

'ತಮ್ಮೊಡನೆ ನನ್ನ ಒಂದು ಮಾತು.'

'ಏನದು, ಹೇಳು.'

'ಹರಿಜನ ಸೇವಾಕಾರ್ಯದಲಿ ತಾವೂ ಒಂದು ಪಾಲು.'

'ಅದು ಹೇಗಾಗುತ್ತೆ ಶ್ರೀಕರ? ನಾನು ವೈದಿಕ'

'ತಾವು ತಮ್ಮ ದೇವಾಲಯದೊಳಗೆ ಹರಿಜನರಿಗೆ ಪ್ರವೇಶವನ್ನೀಯಬೇಕು.'

'ರಾಮ, ರಾಮ! ನಿನ್ನ ಬುದ್ಧಿ ಭ್ರಷ್ಟವಾಯಿತ್ತೆ ಶ್ರೀಕರ? ಇದು ತೀರಾ ಅಸಂಭವ!'

'ಕಾರಣ ಏನಾದರೂ ತಿಳಿಯಬಹುದ?'

'ಹಿಂದೆ ಎಂದೂ ಈ ಪ್ರಕಾರ ನಡೆದಿಲ್ಲ.'

'ಆಚಾರ್ಯರೇ ಈಗ ನಡೆಯುವುದೆಲ್ಲವೂ ಹಿಂದೆ ನಡೆದಂತೆ ಇರುತ್ತವೆಯೇ? ಅಥವಾ ಹಿಂದೆ ನಡೆಯದ್ದುದು ಈಗ ಯಾವುದೂ ನಡೆಯುವುದಿಲ್ಲವೆ? ತಾವು ವಿಧರ್ಮಿಗಳಾದ ಮುಸಲ್ಮಾನರಿಗೂ ಕ್ರಿಸ್ತರಿಗೂ ಯುರೋಪಿಯನ್ನರಿಗೂ ದೇವಸ್ಥಾನದೊಳಗೆ ಬರಬಿಡುತ್ತೀರಿ. ಆದರೆ ಹಿಂದೂ ಹರಿಜನರಿಗ ಮಾತ್ರ.'

'ಶ್ರೀಕರ! ಅದು ಪೂರ್ವಾಚಾರ ಸಂಪ್ರದಾಯ.'

'ಆಚಾರ್ಯರೇ ಅಷ್ಟು ಸಟ್ಟಗೇಕೆ ಮರವೆಂದು ನೇಣುಹಾಕಿಕೊಳ್ಳಲಾಗುತ್ತದೆಯೇ? ಪೂರ್ವಾಚಾರ ಸಂಪ್ರದಾಯವು ಜಾತಿಗೆ ಅಹಿತವೆಂದು ಸ್ಪಷ್ಟವಾದ ಮೇಲೂ ಅದನ್ನು ಅನುಸರಿಸುತ್ತಿರಬೇಕೆ? ಸ್ವಾಮಿ! ನಾವು ವಿಧರ್ಮಿಯರಾದ ಮುಸಲ್ಮಾನ ಕ್ರಿಸ್ತರಿಗೆ ಹಸರಿ, ಬಗ್ಗಿ ನಮಸ್ಕರಿಸುತ್ತೇವೆ. ಅವರಿಗೆ ಇಲ್ಲದ ಹಕ್ಕು ಅಧಿಕಾರಗಳನ್ನು ಕೊಡುತ್ತೇವೆ. ಆದರೆ ಸ್ವಧರ್ಮಿಯರೇ ಆದ ಹರಿಜನರನ್ನು ಹೀನವಾಗಿ ಕಾಣುತ್ತೇವೆ, ಅವರ ಮನುಷ್ಯೋಚಿತ ಅಧಿಕಾರಗಳನ್ನೂ ಕಿತ್ತುಕೊಂಡು ವಂಚಿಸುತ್ತೇವೆ. ಇದು ಯಾವ ಧರ್ಮ, ಆಚಾರ್ಯರೆ?'

'ಶ್ರೀಕರ, ನೀನು ಯುಕ್ತಿಯುಕ್ತವಾದ ಮಾತುಗಳನ್ನೇ ಆಡುತ್ತೀ. ಆದರೆ ನನ್ನ ದೇವಸ್ಥಾನದೊಳಗೆ ಹರಿಜನರಿಗೆ ಪ್ರವೇಶ ಎಷ್ಟು ಮಾತ್ರಕ್ಕೂ ಕೊಡಲಾರೆ.'

ಶ್ರೀಕರನು ನಮಸ್ಕಾರ ಮಾಡಿ ಹೊರಟುಹೋದ. ಆಚಾರ್ಯರು ಮನಸ್ಸಿನಲ್ಲೇ ಎಣಿಸಿದರು—'ನಿನ್ನೆಯ ಹುಡುಗ ನನಗೆ ಹೊತ್ತು ಉಪದೇಶ ಕೊಡಲಿಕ್ಕೆ ಬಂದಿದ್ದಾನೆ. ನಾಲ್ಕು ದಿನಗಳ ಮೊದಲು ಕೊರಗ ಮತ್ತು ಮಾದ ದೇವರಿಗೆ ಹಣ್ಣುಕಾಯಿ ಕೊಡಲು ಬಂದಿದ್ದರು. ಕೊರಗನ ಮಗನಿಗೆ ಕಾಯಿಲೆ. ಆದರೆ ದಕ್ಷಿಣೆ ಕೊಡದೆ ಹಣ್ಣುಕಾಯಿ ಮಾಡುವುದಿಲ್ಲವೆಂದು ಅವರನ್ನು ಹಿಂದೆ ಕಳುಹಿಸಿದ್ದೆ. ಅವರೇ ಶ್ರೀಕರನ ಬುದ್ಧಿ ಹಾಳು ಮಾಡಿದ್ದಾರೆ. ಶ್ರೀಕರನು ಸ್ವಭಾವ

ವಾರದ ಕತೆ!

ಆಚಾರ್ಯರ ದೃಷ್ಟಿ ತೆರೆಯಿತು!

ದಿಂದ ಕೆಟ್ಟವನಲ್ಲ. ಕೊರಗನಿಗೆ ಬುದ್ಧಿ ಕಲಿಸದಿದ್ದರೆ ಮತ್ತೆ ನಾನೇಕೆ? ಇದೆಲ್ಲ ಆ ಗಾಂಧಿಯ ಬೋಧನೆಯ ಫಲ. ಏನಾದರೂ ಮಾಡಿ ಅವನ ಮುಖಭಂಗ ಮಾಡದಿದ್ದರೆ ನಾನು ವೈದಿಕ ಬ್ರಾಹ್ಮಣ ಅಲ್ಲವೇ ಅಲ್ಲ.' ಹೀಗೆಂದು ಯೋಚಿಸುತ್ತ ರಾತ್ರಿ ಆಗಿತ್ತು. ಆಚಾರ್ಯರು ಹತ್ತೇ ನಿಮಿಷಗಳಲ್ಲಿ ಸ್ನಾನ ಸಂಧ್ಯಾವಂದನೆ, ಪೂಜೆ-ಪಾರಾಯಣ ಎಲ್ಲಾ ಮುಗಿಸಿ ಮನೆಗೆ ಮರಳಿದರು.

— ೨ —

ಮೂರು ದಿನಗಳ ಅನಂತರ, ಆಚಾರ್ಯರು ಬೆಳಗ್ಗೆ ಎದ್ದು ನದೀಸ್ನಾನಕ್ಕೆ ಹೊರಟಿದ್ದರು. ಅವರಿಗೂ ಮಹಮ್ಮದಾಲಿಗೂ ಬಹಳ ಸಮಯದಿಂದ ಶತ್ರುತ್ವವಿತ್ತು. ಯಾವದೋ ಒಂದು ದಿನ ಮಹಮ್ಮದಾಲಿ ಇಟ್ಟುಕೊಂಡವಳ ಮೇಲೆ ಆಚಾರ್ಯರು ಕ್ಯ ಮಾಡಿದ್ದಾರಾಗಿ ವರ್ತಮಾನವಿತ್ತು. ಅಂದಿನಿಂದ ಮಹಮ್ಮದಾಲಿಗೆ ಆಚಾರ್ಯರನ್ನು ಕೆಡಹಿ ಹಗೆ ಮುಯ್ಯಿ ತೀರಿಸಲಿಕ್ಕೆ ಅವನು ಸಮಯ ಸಾಧಿಸಿ ಇದ್ದ. ಈಗ ಅವನಿಗೆ ಇದುವೇ ಅನುಕೂಲ ಸಮಯವಾಯಿತು. ನದೀಮಾರ್ಗದಲ್ಲಿಯೇ ಧಡಿಯ ಹೊಸ್ತಿಲು ಗಟ್ಟಿ ಶರೀರದ ಆಚಾರ್ಯರಿಗೂ ಭೀಮಕಾಯನಾದ ಮಹಮ್ಮದಾಲಿಗೂ ಹೋರಾಟವು ಆರಂಭವಾಯಿತು. ಆಚಾರ್ಯರು ಬಿದ್ದರು. ಈ ನಡುವೆ ಮಗನನ್ನು ಆಸತ್ರೆಗೆ ಸಾಗಿಸಿ ಮರಳುತ್ತಿದ್ದ ಕೊರಗ ಮತ್ತು ಮಾದ ಎದುರಾಗಿ ಸಿದ್ದಲ್ಲವಾದರೆ, ಆಚಾರ್ಯರ ಜೀವನ ಅಲ್ಲಿಗೇ ಮುಗಿಯುತ್ತಿತ್ತು. ಅವರನ್ನು ಕಾಣುತ್ತಿದ್ದ ಹಾಗೆ ವೇಷವಲ್ಲಿ ಓಡಿದ ಮಹಮ್ಮದಾಲಿ ಎಲ್ಲೋ ಮರೆಯಾದ. ಅವರು ಆಚಾರ್ಯರನ್ನು ಹೊತ್ತು ಮನೆಗೆ ಸಾಗಿಸಿದರು.

ಈಗ ಆಚಾರ್ಯರ ದೃಷ್ಟಿ ತೆರೆಯಿತು.

ಅವರು ಎಲ್ಲವನ್ನೂ ಇದ್ದಕ್ಕಿದ್ದ ಹಾಗೆ ಕಾಣತೊಡಗಿದರು. ಕೊರಗ ಮತ್ತು ಮಾದ, ಹರಿಜನರಾಗಿದ್ದರೂ ಆಚಾರ್ಯರು ಅವರನ್ನು ತಿರಸ್ಕರಿಸಿ ಅವಮಾನಿಸಿದ್ದರೂ, ಆಪತ್ಕಾಲದಲ್ಲಿ ಜೀವರಕ್ಷಣೆಗೆ ಅವರೇ ಒದಗಿಬಂದರು. ಜಾತಿಯಿಂದ ಹೊಲೆಯರಾದರೂ ಅವರ ಹೃದಯಗಳಲ್ಲಿ ದಯೆ, ಪ್ರೇಮ, ಸೇವೆ ಮೊದಲಾದ ಉತ್ಕೃಷ್ಟ ಭಾವನೆಗಳನ್ನು ಕಂಡರು. ಮಾದ ಕೊರಗರ ಕಾಲುಗಳ ಮೇಲೆ ಬಿದ್ದು ಕ್ಷಮೆಯನ್ನು ಕೇಳಬೇಕೆಂದು ಆಚಾರ್ಯರಿಗೆ ಅನ್ನಿಸಿತು.

ಮರುದಿನ ಊರಿನಲ್ಲಿ ಹರಿಜನ ಸೇವಾ ಸಂಘದ ಕಡೆಯಿಂದ ಒಂದು ಸಾರ್ವಜನಿಕ ಸಭೆಯಾಯಿತು. ಸಭೆಯಲ್ಲಿ ಆಚಾರ್ಯರ ತಮ್ಮ ವೆಂಕಟ್ರಮಣ ದೇವಾಲಯದಲ್ಲಿ ಹರಿಜನರಿಗೆ ಪ್ರವೇಶ ಕೊಟ್ಟಿರುವುದನ್ನು ಸಾರಲಾಯಿತು. ಆದರೆ ದೇವಸ್ಥಾನ ಪ್ರವೇಶದ ಸಂತೋಷವನ್ನು ಅನುಭವಿಸಲಿಕ್ಕೆ ಕೊರಗನು ಇರಲಿಲ್ಲ. ಅವನ, ಇದ್ದ ಒಬ್ಬನೇ ಒಬ್ಬ ಮಗನ ಹಿಂದಿನ ರಾತ್ರಿ ಕಾಯಿಲೆಯಿಂದ ಸತ್ತುಹೋಗಲು ಪುತ್ರಶೋಕದಿಂದ ಕೊರಗನೂ ಆತ್ಮಹತ್ಯೆಮಾಡಿಕೊಂಡಿದ್ದನು!

ಕುಗ ದ

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ

ಜಗತ್ಪ್ರಸಿದ್ಧ

GONO KILLER

ಗೊನೊಕಿಲರ್ (ರಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ನೋಡಿರಿ.

... ವಿಧದ ಮೂತ್ರರೋಗಗಳ ಮೇಲೆ ಮತ್ತು ... ಸಂಬಂಧದ ರೋಗಗಳ ಮೇಲೆ ಗೊನೊಕಿಲರ್ ಉತ್ಕೃಷ್ಟ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧದ ಪ್ರಾರಂಭದ ಮೂರು ದಿವಸಗಳಲ್ಲಿಯೇ ಇದರ ಆಶ್ಚರ್ಯಕರವಾದ ಗುಣದ ಅನುಭವವು ... ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಕೀವು, ಮೂತ್ರದ್ವಾರದಿಂದ ಕೀವು ಹೋಗುತ್ತಿರುವದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುತ್ತಿರುವದು ಮತ್ತು ಉರಿಯುತ್ತಿರುವದು, ಮೂತ್ರ ಮಾರ್ಗದ ಒಳಗೆ ಆಗಿರುವ ... ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ-ಕೊಕಸ್ ಎಂಬ ವಿಷಜಂತುಗಳಿಂದ ... ಸ್ತ್ರೀಯರಿಗಾಗುವ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ಮೂತ್ರಸಂಬಂಧದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲ ನಾಶವಾಗುವವು. ಬಳಿ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ.ಪಿ. ಚಾರ್ಜು ಆಣೆ ಬೇರೆ) ... ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4

Sole Manufacturer **Dr D. N JASANI,** Vithalbhai Patel Road, BOMBAY 4

Madras Agent **Appah & Co, China Bazar Madras**

ಭಾರತದ ಆರ್ಥಿಕ ದುಸ್ಥಿತಿಗೆ ಕಾರಣವೇನು?

ಅದರ ನಿವಾರಣೋಪಾಯಗಳಿವೆಯೆ?

ಸರ್ ವಿಶ್ವೇಶ್ವರಯ್ಯನವರು ತಿಳಿಸುತ್ತಾರೆ

ಪರರಾಷ್ಟ್ರಗಳೊಂದಿಗೆ ಭಾರತದ ತುಲನ

ಒಂದು ಯೋಜನೆ, ಅದಕ್ಕೆ ತಕ್ಕ ಮುಂದಾಳುತ್ವ ಮತ್ತು ಆರ್ಥಿಕ ಕ್ಷೇತ್ರದ ಪ್ರಗತಿಗೆ ಬೇಕಾದ ಹುರುಪು, ಇವುಗಳೇ ಇಂದಿನ ನಮ್ಮ ಕೈಗಾರಿಕೆಯ ಕ್ಷೇತ್ರಕ್ಕೆ ಬೇಕಾದ ವಸ್ತುಗಳು. ಇವುಗಳ ಕೊರತೆಯೇ ಇಂದಿನ ದುಸ್ಥಿತಿಗೆ ಕಾರಣವೆಂಬ ಅಂಶವನ್ನು ಸಂಖ್ಯಾಂಶಗಳಿಂದ ಸೂಚಿಸುವ ಒಂದು ಅಮೋಘ ಭಾಷಣವನ್ನು ಅಖಿಲಭಾರತ ಕೈಗಾರಿಕೆಯ ಉದ್ಯಮಿಗಳ ಸಮ್ಮೇಳನದ ಅಧ್ಯಕ್ಷಪೀಠದಿಂದ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಮಾಡಿದರು.

ಭಾರತದ ನಾನಾ ಪ್ರಾಂತಗಳಿಂದಲೂ ಮತ್ತು ಮದ್ರಾಸ್, ಕೊಯಮತ್ತೂರು, ಲಕ್ನೊ, ಪೂನಾ, ಡೆಲ್ಲಿ, ಲಾಹೋರು, ಕಲ್ಕತ್ತೆಗಳಿಂದಲೂ ಕೈಗಾರಿಕೆಯ ಪ್ರತಿನಿಧಿಗಳು ಬಂದಿದ್ದರು.

ಅವರ ಭಾಷಣದ ಸಾರಾಂಶವು ಹೀಗಿದ್ದಿತು:

'ಇಂದು ನಮ್ಮ ಆರ್ಥಿಕ ದುರ್ಬಲತೆಗೂ ಮತ್ತು ಬಡತನಕ್ಕೂ ಕೈಗಾರಿಕೆಯ ವಿಚಾರದಲ್ಲಿ ನಮ್ಮ ಜನರಿಗಿರುವ ಅನಾದರಣೆಯೂ ಮತ್ತು ವ್ಯವಸಾಯದಲ್ಲಿ ಜನಸಂರಕ್ಷಣೆಯ ಹೆಚ್ಚು ಹೊರೆಯು ಬಿದ್ದಿರುವುದೂ ಮುಖ್ಯ ಕಾರಣವಾಗಿದೆ. ಹೆಚ್ಚು ಜನರು ಅನಕ್ಷರಸ್ಥರಾಗಿರುವುದು ಮತ್ತೊಂದು ಕಾರಣ. ಜನಸುಖಕ್ಕೆ ಬೇಕಾದ ವೃತ್ತಿಗಳು, ತಯಾರಿಕೆಯು ಉತ್ಪತ್ತಿ (Production) ಮತ್ತು ಆದಾಯ ಇವುಗಳನ್ನು ಇಮ್ಮಡಿಪಡಿಸುವ ಯೋಜನೆಗಳಿಲ್ಲದಿರುವುದು ಮೂರನೆಯ ಕಾರಣವಾಗಿದೆ.

ಭಾರತದಲ್ಲಿ ವ್ಯವಸಾಯ ವೃತ್ತಿಯು ಮಿತಿಮೀರಿ ಅಸಂಖ್ಯಾತ ಪ್ರಜಾಸಂಖ್ಯೆಯ ಉದರಭರಣದ ಹೊರೆಯನ್ನು ಹೊತ್ತಿದೆ. ಇದರಿಂದ ವರ್ಷದ ಮುಕ್ಕಾಲು ಪಾಲು ದಿನಗಳಲ್ಲಿ ನಮ್ಮ ಜನರು ನಿರುದ್ಯೋಗಿಗಳಾಗಿರುತ್ತಾರೆ. ಈ ನಿರುದ್ಯೋಗವನ್ನು ಕಡಿಮೆಮಾಡಿ, ಜನರ ಕರ್ಮಶಕ್ತಿಯನ್ನು ಹೆಚ್ಚಿಸಿ ಜನಜೀವನವನ್ನು ಉತ್ತಮ ಸ್ಥಿತಿಗೆ ತರಬೇಕಾದರೆ ಕೈಗಾರಿಕೆಗಳೇ ನಮ್ಮ ಗತಿ.

ಕೈಗಾರಿಕೆಗಳು ಮತ್ತು ತಯಾರಿಕೆಯ ಉದ್ಯಮಗಳು

ಭಾರತದಲ್ಲಿ ಅನೇಕ ದೊಡ್ಡ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟಿವೆ. ಆದರೆ ಅವುಗಳ ಉತ್ಪತ್ತಿಯು ಒಟ್ಟಿನಲ್ಲಿ ಬಹಳ ಕಡಿಮೆ.

ವ್ಯಾಪಾರದೃಷ್ಟಿಯಿಂದ ಈ ಕೈಗಾರಿಕೆಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು: (೧) ೧ ಲಕ್ಷ ರೂಪಾಯಿಗಳಿಗಿಂತ ಕಡಿಮೆ ಬಂಡವಾಳವುಳ್ಳ ಸಣ್ಣ ಕೈಗಾರಿಕೆಗಳು; (೨) ೧ ಲಕ್ಷದಿಂದ ೩೦ ಲಕ್ಷ ರೂಪಾಯಿಗಳ ಬಂಡವಾಳವಿರುವ ಮಾಧ್ಯಮಿಕ ಕೈಗಾರಿಕೆಗಳು; (೩) ೩೦ ಲಕ್ಷ ರೂಪಾಯಿಗಳಿಗಿಂತ ಹೆಚ್ಚಿರುವ ಬಂಡವಾಳವುಳ್ಳ ದೊಡ್ಡ ಸಂಸ್ಥೆಗಳು.

ಮೂರನೆಯ ಸಾಲಿಗೆ ಸೇರಿದ ದೊಡ್ಡ ಕೈಗಾರಿಕೆ ಸಂಸ್ಥೆಗಳು ದೇಶಕ್ಕೆ ಕ್ಷೇಮವನ್ನು ತರುತ್ತವೆ. ಇವುಗಳಿಂದ ಹಣವು ಚಲಾವಣೆಯಲ್ಲಿರುತ್ತದೆ. ಆಮದನ್ನು ಕಡಿಮೆಮಾಡುತ್ತವೆ. ಹೊರದೇಶಗಳಿಗೆ ಹೋಗುವ ಹಣವನ್ನು ನಿಲ್ಲಿಸುತ್ತವೆ. ಸರಕಾರಕ್ಕೆ ತೆರಿಗೆರೂಪವಾಗಿ ಹೆಚ್ಚು ಆದಾಯವನ್ನು ತರುತ್ತವೆ. ಬಟ್ಟೆ, ಸಿಮೆಂಟ್, ಉಕ್ಕು, ಸಕ್ಕರೆ ಇವುಗಳು ಬದುಕಿರುವುದು ಸರಕಾರವು ಕೊಟ್ಟಿರುವ ಸುಂಕರಕ್ಷಣೆಯಿಂದ.

ಆಧುನಿಕ ತಯಾರಿಕೆಯ ಉದ್ಯಮಗಳನ್ನು (manufactures) ೨೪ ವಿಧಗಳಾಗಿ ವಿಂಗಡಿಸಬಹುದು. ಇವುಗಳನ್ನು (೧) ಇಂಜನೀಯರಿಂಗ್, (೨) ಕೆಮಿಕಲ್ಸ್ ಮತ್ತು (೩) ಇತರ ಜಾತಿಗಳೆಂದು ಮೂರು ಗುಂಪುಗಳನ್ನಾಗಿ ವಿಭಾಗಿಸಬಹುದು. ಕೆಮಿಕಲ್ ಕೈಗಾರಿಕೆಗಳಲ್ಲಿ ಮಾತ್ರ ಸಂಶೋಧನೆ ನಡೆಯುತ್ತಿದೆ. ಇಂಜನೀಯರಿಂಗ್ ಕೈಗಾರಿಕೆಗಳು ಬಹಳ ಮುಖ್ಯವಾದವು. ಆದರೆ ಅದಕ್ಕೆ ಸರಿಯಾದ ಗಮನವಿಲ್ಲ. ಅಮೇರಿಕಾದಲ್ಲಿ ಬ್ಯಾಂಕಿಂಗ್, ಪ್ರಯಾಣ, ಮತ್ತು ಹೋಟೇಲುಗಳನ್ನು ಸಹಾ ಕೈಗಾರಿಕೆಗಳೆಂದು ಭಾವಿಸಿ ಜನರಿಗೆ ಶಿಕ್ಷಣಗಳನ್ನು ಇವುಗಳಲ್ಲಿ ಕೊಡುತ್ತಾರೆ.

ಕೈಗಾರಿಕೆಯ ಉತ್ಪತ್ತಿ ಮತ್ತು ಉದ್ಯೋಗ

ಭಾರತದ ಕೈಗಾರಿಕೆಗಳನ್ನು ಸ್ಥಿಮಿತಕ್ಕೆ ಬಂದಿರುವವು ಮತ್ತು ಸ್ಥಿಮಿತಕ್ಕೆ ಬಾರದಿರುವವು ಎಂದು ಎರಡು ವಿಧವಾಗಿ ಎಣಿಸಬೇಕಾಗಿದೆ. ಮೊದಲನೆ ಸಾಲಿಗೆ ಸೇರಿದುದರಲ್ಲಿ ಕಾರ್ಮಿಕ ಜನಸಂಖ್ಯೆಯಲ್ಲಿ ಶೇಕಡ ಎರಡರಷ್ಟು ಜನ ಉದ್ಯೋಗಸ್ಥರಿದ್ದಾರೆ. ಇನ್ನೊಂದು ಶೇಕಡ ೮ ಮಾತ್ರ.

ಕೈಗಾರಿಕೆಗಳಿಂದ ಭಾರತದಲ್ಲಿ ಬರುವ ಆದಾಯವು ತಲೆಒಂದಕ್ಕೆ ೧೨ ರೂಪಾಯಿ ಮಾತ್ರ. ಇಂಗ್ಲೆಂಡಿನಲ್ಲಿ ತಲೆಒಂದಕ್ಕೆ ೪೧೨ ರೂ.ಗಳೂ ಅಮೇರಿಕಾದಲ್ಲಿ ೭೧೧ ರೂಪಾಯಿಗಳೂ ಬರುತ್ತವೆ.

ಭಾರತದಲ್ಲಿ ಕೈಗಾರಿಕೆ ಮತ್ತು ವ್ಯಾಪಾರವು ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೧೬ರಷ್ಟು ಜನಗಳಿಗೆ ವೃತ್ತಿಯನ್ನು ಕೊಟ್ಟಿವೆ. ಇಂಗ್ಲೆಂಡಿನಲ್ಲಿ ಈ ಬಾಬ್ತು ಶೇಕಡ ೬೭ ಮತ್ತು ಅಮೇರಿಕಾದಲ್ಲಿ ಶೇಕಡ ೨೫. ನಮ್ಮ ದೇಶದಲ್ಲಿ ವ್ಯವಸಾಯ ವೃತ್ತಿಗೂ ಕೈಗಾರಿಕೆಯ ವೃತ್ತಿಗೂ ಸಮತುಲನವಿಲ್ಲ. ಈ ಎರಡು ವೃತ್ತಿಗಳಿಂದಲೂ ಭಾರತದಲ್ಲಿ ತಲೆಒಂದಕ್ಕೆ ೭೦ ರೂಪಾಯಿಗಳ ಆದಾಯವಿದೆ, (೧೨ ರೂ. ಕೈಗಾರಿಕೆ; ೫೮ ರೂ. ವ್ಯವಸಾಯ) ಇಂಗ್ಲೆಂಡಿನಲ್ಲಿ ೪೧೨ ರೂ. ಕೈಗಾರಿಕೆ ಮತ್ತು ೬೮ ರೂ. ವ್ಯವಸಾಯದಿಂದ. ಒಟ್ಟು ತಲೆಒಂದಕ್ಕೆ ವ್ಯವಸಾಯದಿಂದ ರೂ. ೨೧೯. ಕೈಗಾರಿಕೆಯಿಂದ ರೂ. ೮೩೦ ಒಟ್ಟು ೧೦೪೯ ರೂ. ಆದಾಯವಿದೆ. ಅಮೇರಿಕಾದಲ್ಲಿ ವ್ಯವಸಾಯದಿಂದ ಭಾರತದಲ್ಲಿ ಬರುವದಕ್ಕಿಂತ ೮ರಷ್ಟು ಹೆಚ್ಚು ಆದಾಯ ಬರುತ್ತಿದೆ.

ಕೈಗಾರಿಕೆಗಳಲ್ಲಿ ಹಾಕಿರುವ ಬಂಡವಾಳವು ತಲೆಒಂದಕ್ಕೆ ಅಮೇರಿಕಾದಲ್ಲಿ ರೂ. ೧೮೦೦, ಇಂಗ್ಲೆಂಡಿನಲ್ಲಿ ರೂ. ೧೬೦೦; ಆದರೆ ಭಾರತದಲ್ಲಿ ಬರೀ ೨೫ ಮಾತ್ರ.

ಅನಕ್ಷರತೆ, ಜನಸಾಮಾನ್ಯರಲ್ಲಿ ಶಿಕ್ಷಣ ಇಲ್ಲದಿರುವುದು, ಆರ್ಥಿಕ ಪ್ರಗತಿಗೆ ಬೇಕಾದ ನೀತಿಗಳನ್ನು ಹೊಂದದಿರುವುದು; ಸರಕಾರದ ಸೂಕ್ತ ಸಹಾಯದ ಕೊರತೆಯಿರುವದೂ ಎಲ್ಲವೂ ಸೇರಿ ಜನರನ್ನು ವ್ಯವಸಾಯಕ್ಕೆ ಎಳೆದಿವೆ.

ಮೋಟಾರು ಕೈಗಾರಿಕೆ

ಈ ಯೋಜನೆಯು ಈಗ ೭ ವರ್ಷಗಳಿಂದ ಇನ್ನೂ ಯೋಚನಾ ಮತ್ತು ಬಾಲ್ಯಾವಸ್ಥೆಯಲ್ಲಿಯೇ ಇದೆ. ಸರಕಾರದ ಮುಂದಿಟ್ಟು ವರ್ಷಗಳಾದುವು; ಇನ್ನೂ ಏನೂ ಆಗಿಲ್ಲ.

ಅಮೇರಿಕಾದಲ್ಲಿ ಭಾರತದಲ್ಲಿನ ೧/೩ ರಷ್ಟು ಜನಸಂಖ್ಯೆ ಇದೆ. ಆದರೆ ಅಲ್ಲಿ ಮೂವತ್ತು ಮಿಲಿಯ ಕಾರುಗಳಿವೆ. ಭಾರತದಲ್ಲಿರುವುದು ೧೮೦,೦೦೦ ಕಾರುಗಳು ಮಾತ್ರ.

ಈಗ ೫ ವರ್ಷಗಳಿಂದ ಒಂದು ಮೋಟಾರು ಕಾರ್ಖಾನೆಯ ಯೋಜನೆಯು ಜನರ ಮುಂದಿಟ್ಟಿದೆ. ಬೊಂಬಾಯಿ ಸರಕಾರವು ಶೇಕಡ ೩॥ ಬಡ್ಡಿಯನ್ನು ಬಂಡವಾಳದ ಮೇಲೆ ಕೊಡುವುದೆಂದು ಭರವಸೆ ಕೊಟ್ಟಿದೆ. ಈ ಯೋಜನೆಯು ಅಭಿವೃದ್ಧಿಗೆ ಬರುವುದರಲ್ಲಿ ಯಾವ ಸಂಶಯವೂ ಇಲ್ಲ. ಈ ಯುದ್ಧಕಾಲದಲ್ಲಿ ಇದನ್ನು ಸ್ಥಾಪಿಸಿದರೆ ಯುದ್ಧಕ್ಕೂ ಅನುಕೂಲವಾಗುವುದಲ್ಲದೆ ಜನಕ್ಕೂ ಕ್ಷೇಮವಾಗುವುದು. ಕಡಮೆ ಬೆಲೆಗೂ ಸಹ ಮಾರಬಹುದು. ಸರಕಾರವು ಸಹಾಯ ಮಾಡಲಿ, ಬಿಡಲಿ, ನಾವೇನೋ ಆ ಕಾರ್ಯವನ್ನು ಬಿಡಲಾಗುವುದಿಲ್ಲ. ಆ ಯೋಜನೆಯು ಪ್ರಕಟನೆಯಾದಾಗ ಜನರ ಬೆಂಬಲ ಸಿಕ್ಕುವುದೆಂದು ನಂಬಿಕೆಯಿದೆ.

ನಿವಾರಣೋಪಾಯಗಳು

ಹೀನಸ್ಥಿತಿಯಲ್ಲಿರುವ ನಮ್ಮ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರಬೇಕಾದರೆ ಕೆಲವು ಮುಖ್ಯ ನಿವಾರಣೆಗಳನ್ನು ಸೂಚಿಸಬೇಕಾಗಿದೆ. ಈ ನಿವಾರಣೆಗಳು ಈಗಾಗಲೇ ಆಚರಣೆಗೆ ಬರಬೇಕಾಗಿತ್ತು. ಆದರೂ ಚಿಂತೆಯಿಲ್ಲ. ಈಗಲಾದರೂ ಅವನ್ನು ಜಾರಿಗೆ ತಂದರೆ ನಮಗೆ ಕ್ಷೇಮ.

(೧) ಕೈಗಾರಿಕೆಗಳ ಸಂಖ್ಯಾಂಶವನ್ನು ಇಂಗ್ಲೆಂಡಿನಲ್ಲಿ ಸರಕಾರವು ಎಲ್ಲ ಕೈಗಾರಿಕೆಗಳ ವಿಷಯವಾಗಿ ಜನರಿಗೆ ಬೇಕಾಗುವ ತಿಳುವಳಿಕೆಯನ್ನು ಹಸ್ತಪತ್ರಿಕೆಗಳಲ್ಲಿ ಅಚ್ಚು ಹಾಕಿಸಿ ಹಂಚುತ್ತದೆ. ಇಲ್ಲಿ ಅದು ಇಲ್ಲ. ಒಂದುವೇಳೆ ಮಾಡಿದರೂ ಬಹಳ ನಿಧಾನ. ಹಾಗಾದರೂ ಅಂಶಗಳು ಸಂಪೂರ್ಣವಾಗಿರುವುದಿಲ್ಲ.

(೨) ಸುಂಕರಕ್ಷಣಾ (Protection) ನೀತಿಯ ಬದಲಾವಣೆ. ಇಲ್ಲಿ ೧೯೨೨ ರಿಂದಲೂ ಒಂದೇ ನೀತಿ ಇದೆ. ಹೊರಗಡೆಯಿಂದ ಬರುವ ಸಾಮಾನುಗಳಿಗೆ ತೆರಿಗೆ ಸಾಲದು. ಇಂಗ್ಲೆಂಡಿನಲ್ಲಿ ಆಮದು ಪದಾರ್ಥಗಳಿಗೆ ಶೇಕಡ ೧೦೦ರಷ್ಟು ಸುಂಕ ಹಾಕಿ ರಕ್ಷಣೆ ಕೊಡುತ್ತಾರೆ.

(೩) ಬ್ಯಾಂಕುಗಳ ಸಹಾಯವಿಲ್ಲದಿದ್ದರೆ ಕೈಗಾರಿಕೆಗಳು ಬದುಕುವುದಿಲ್ಲ. ಜಪಾನಿನ ಬ್ಯಾಂಕುಗಳ ಬಂಡವಾಳ ಭಾರತದ ೧೫ರಷ್ಟಿದೆ.

(೪) ಇಂಜಿನ್‌ಗಳ ಮತ್ತು ಉತ್ಕೃಷ್ಟ ಯಂತ್ರಗಳ ತಯಾರಿಕೆಗೆ ಈ ದೇಶದಲ್ಲಿ ವಿಪರೀತ ಗಿರಾಕಿಯಿದೆ. ಬಟ್ಟೆ ಗಿರಣಿಗಳ ಯಂತ್ರಗಳ ತಯಾರಿಕೆ ಎಂದೋ ಆಗಬೇಕಾಗಿತ್ತು.

(೫) ಪ್ರತಿ ಪ್ರಾಂತ ಸರಕಾರವೂ ಒಂದೊಂದು ದೊಡ್ಡ ಕೈಗಾರಿಕೆಯನ್ನು ಸ್ಥಾಪಿಸಬೇಕು. ಎಲ್ಲಿ ಸಾಹುಕಾರ ಪ್ರಯತ್ನ ಮುಂದಕ್ಕೆ ಬರುತ್ತಿಲ್ಲವೋ ಅಲ್ಲಿ ಸರಕಾರವು ಬೆಂಬಲ ಕೊಡಬೇಕು.

(೬) ಸಾಧ್ಯವಾದೆಡೆಯಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಪ್ರತಿ ಜಿಲ್ಲೆಯಲ್ಲಿಯೂ ಒಂದು ಕೈಗಾರಿಕೆ ಬೆಳೆಯಬೇಕು.

(೭) ಕೈಗಾರಿಕೆಗಳನ್ನು ಸ್ಥಾಪಿಸಿ ಅದರ ಅಭಿವೃದ್ಧಿಯಾಗಬೇಕಾದರೆ ಮುಂದಾಳುಗಳು ಬೇಕು. ಇದಕ್ಕಾಗಿ ವಿಶ್ವವಿದ್ಯಾನಿಲಯಗಳ ವಿದ್ಯಾದೃಷ್ಟಿಯು ಮಾರ್ಪಾಡಾಗಬೇಕು.

ಈಗ ಬೊಂಬಾಯಿಯಲ್ಲಿರುವ ಅಸೋಸಿಯೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಸ್ ಸಂಸ್ಥೆಯು ಈ ಸಮ್ಮೇಳನವನ್ನು ನಡೆಸಿರುವುದು ಸಮಂಜಸವಾಗಿದೆ. ಅವರ ಧ್ಯೇಯಗಳು ಗಮನಾರ್ಹವಾಗಿವೆ. ಸರಕಾರವು ಸಹಾಯಮಾಡಲಿ, ಬಿಡಲಿ ನಾವು ಸುಮ್ಮನೆ ಕುಳಿತುಕೊಳ್ಳುವ ಕಾಲವು ಇದಲ್ಲ.'

(ಕ. ಕ.)

ಜಿಲ್ಲಾ ಸಮಾಚಾರ

ಸತ್ಯಾಗ್ರಹ ಸಮಾಚಾರ

ಮಂಗಳೂರಲ್ಲಿ ಸತ್ಯಾಗ್ರಹಿಗಳು:— ಮಂಗಳೂರಿಗೆ ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ಕೈದಾಗದೆ ಇರುವ ಸತ್ಯಾಗ್ರಹಿಗಳು ಬಂದಿರುವರು. ಇವರಿಗೆ ಕಾಂಗ್ರೆಸ್ ಕಚೇರಿಯಲ್ಲಿ ಅಧ್ಯಕ್ಷ ಡಾ। ಯು. ಪಿ. ಮಲ್ಯರು ಯುಕ್ತವಾದ ಸಲಹೆ ಸೂಚನೆಗಳನ್ನು ಕೊಟ್ಟರೆಂದು ತಿಳಿದು ಬರುತ್ತದೆ. ಮತ್ತೆ ಇಲ್ಲಿಂದ ಅವರು ಹಳ್ಳಿಗಳಿಗೆ ಯುದ್ಧ ವಿರುದ್ಧ ಪ್ರಚಾರವಮಾಡಲು ತೆರಳಿರುವರಾಗಿ ಗೊತ್ತಾಗಿದೆ.

ಶ್ರೀ ಪ್ರಭಾಕರ ಶೇಟರ ಸತ್ಯಾಗ್ರಹ:— ಒಮ್ಮೆ ಸತ್ಯಾಗ್ರಹ ಮಾಡಿ ೨ವರ್ಷ ದಿನಲ್ಲಿಟ್ಟು ಬಿಡುಗಡೆ ಹೊಂದಿದ ಶ್ರೀ ಪ್ರಭಾಕರ ಶೇಟರು ತಿರಿಗಿ ಸತ್ಯಾಗ್ರಹ ಮಾಡಿದರು. ಅವರನ್ನು ಬಂಧಿಸಲಿಲ್ಲ.

ನ್ಯೂಸೆನ್ಸ್ ಕಾಯಮಾಯಿತು:— ಮಂಗಳೂರು ರಥಬೀದಿ ತಾಜಮಹಾಲಿನ ಮುಂದುಗಡೆ ಸತ್ಯಾಗ್ರಹ ಮಾಡಿದ್ದ ಶ್ರೀ ಪದ್ಮನಾಭ [illegible]ಯವರ ಮೇಲೆ ನ್ಯೂಸೆನ್ಸ್ ಜಾರಿಯಾದ್ದಕ್ಕೆ ಬಗ್ಗೆ ಮಾಡಿದ್ದ ಅಪೀಲು ತೆಗೆದು ಹಾಕಲ್ಪಟ್ಟಿತೆಂದು ತಿಳಿದುಬರುತ್ತದೆ. ಅವರು ತಿರಿಗಿ ಸತ್ಯಾಗ್ರಹ ಮಾಡಿದರು.

ಸತ್ಯಾಗ್ರಹಿಗಳನ್ನು ಒಯ್ದರು:— ಉಡುಪಿಯ ಶ್ರೀ ಕೊಟ್ಟ ಕಾರ್ ನಾರಾಯಣ ಪೈಗಳನ್ನೂ, ಕಾರ್ಕಳದ ಡಾ। ಕೆ. ಜಿ. ಕಾಮತರನ್ನೂ, ಪೆರಡಾಲಿನ ಡಾ। ಪಿ. ಎಸ್. ಶಾಸ್ತ್ರಿಗಳನ್ನೂ ಕನ್ನಾನ್ನೂರು ಜೈಲಿಗೆ ಒಯ್ದರುವರೆಂದು ತಿಳಿಯಬರುತ್ತದೆ.

ಪುನಃ ಸತ್ಯಾಗ್ರಹ:— ಸತ್ಯಾಗ್ರಹ ಮಾಡಿ ಕೈದಾಗದೆ, ಪ್ರಚಾರಮಾಡುತ್ತಿರಲು, ಬಂಧಿಸಿ ಮಂಗಳೂರಲ್ಲಿ ೨ವರುಂದಿನಲ್ಲಿರಿಸಿದ ಶ್ರೀ ಗಳಿದ ವಿಟ್ಟಲದಾಸ ಶೆಟ್ಟಿ ಮತ್ತು ಕುಳಾಳು ನಾಸ್ತಾ ಯ ರೈಗಳನ್ನು ವಿಚಾರಣೆ ಮಾಡದೆ ಬಿಡುಗಡೆ ಮಾಡಿದರು. ಅವರು ತಿರಿಗಿ ಯುದ್ಧ ವಿರುದ್ಧ ಘೋಷಣೆ ಮಾಡುತ್ತಾ ಪ್ರಚಾರಕ್ಕೆ ಹೊರಟಿದ್ದಾರೆ.

ಕಾಸರಗೋಡು

ಪೆರ್ಲದಲ್ಲಿ ಸತ್ಯಾಗ್ರಹ:— ಶ್ರೀ. ಎ. ಜಿ. ತಿರುಮಲೇಶ್ವರ ಭಟ್ಟರು ಪೆರ್ಲದಲ್ಲಿ ಸತ್ಯಾಗ್ರಹ ಮಾಡಿದರು. ಅವರ ಪೋಲೀಸರು ಬಂಧಿಸಲಿಲ್ಲ. ಅವರು ಯುದ್ಧ ವಿರುದ್ಧ ಘೋಷಣೆ ಮಾಡುತ್ತಾ ಹೊರಟಿದ್ದಾರೆ.

ಹಾಣೆಮಂಗಳೂರು:— ಶ್ರೀ. ಐಲ ಸುಬ್ರಾಯ ಪೈಗಳು ತಾ. ೧೦ರಂದು ಹಾಣೆಮಂಗಳೂರಲ್ಲಿ ಸತ್ಯಾಗ್ರಹ ಮಾಡಿದರು. ಅವರನ್ನು ಬಂಧಿಸಲಿಲ್ಲ. ಇವರು ಯುದ್ಧವಿರುದ್ಧ ಪ್ರಚಾರ ಕಾರ್ಯ ಮಾಡುತ್ತಾ ಹೊರಟಿದ್ದಾರೆ.

ಅಲ್ಲ:— ಶ್ರೀ. ಬಾಮಿ ರಘುನಾಥ ಶೆಣ್ಯೆಯವರು ತಾ. ೧೦ರಂದು ಸತ್ಯಾಗ್ರಹ ಅಲ್ಲದಲ್ಲಿ ಸತ್ಯಾಗ್ರಹ ಮಾಡಿದರು. ಬಂಧಿತರಾಗಲಿಲ್ಲ. ಇವರು ಪ್ರಚಾರಕಾರ್ಯ ಮಾಡುತ್ತಿದ್ದಾರೆ.

ಮಂಚಿ:— ಶ್ರೀ. ಕುಳಾಲು ಅಣ್ಣಪ್ಪ ಭಂಡಾರಿಗಳು ತಾ. ೧೦ರಂದು ಸತ್ಯಾಗ್ರಹ ಮಾಡಿದರು.

ಪುಂಜಲಕಟ್ಟೆ:— ಶ್ರೀ. ಪುಂಡಲೀಕ ಕಾಮತರು ತಾ. 10ರಂದು ಪುಂಜಲಕಟ್ಟೆಯಲ್ಲಿ ಸತ್ಯಾಗ್ರಹ ಮಾಡಿದರು.

ಕುಂಭಕಾಶಿ:— ಶ್ರೀ. ಶಿವರಾಮ ಶೆಟ್ಟರು ತಾ. 10ರಂದು ಕುಂಭಕಾಶಿಯಲ್ಲಿ ಸತ್ಯಾಗ್ರಹ ಮಾಡಿದರು. ಬಂಧಿತರಾಗಲಿಲ್ಲ.

ಕಾರ್ಕಳ

ಸತ್ಯಾಗ್ರಹ:— ಇಲ್ಲಿಯ ಆರ್ಯ ಸಮಾಜದ ಅಧ್ಯಕ್ಷರಾಗಿದ್ದ ಶ್ರೀ. ಕೆ. ವೆಂಕಟೇಶ ಪ್ರಭುಗಳವರು ತಾ. ೧೦—೩—೪೧ರ ದಿನ ಇಲ್ಲಿ ಸತ್ಯಾಗ್ರಹ ಮಾಡಿ ಕೈದಾಗಿರುವರು. ಅವರನ್ನು ಬೀಳ್ಕೊಡಲಿಕ್ಕೆ ತಾ. ೯ರ ದಿನ ಸಾಯಂಕಾಲ ಆರ್ಯ ಸಮಾಜಮಂದಿರದಲ್ಲಿ ಒಂದು ಸತ್ಕಾರಕೂಟವು ನಡೆದಿದ್ದಿತು.

ಉಡುಪಿ

ಕಾಪಿನಲ್ಲಿ ಸತ್ಯಾಗ್ರಹ:— ತಾರೀಕು ೫ನೇ ಬುಧವಾರ ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿ ಮೆಂಬರರಾದ ಕಾಪು ನರಸಿಂಹ ಮರ್ತಿ ಶೆಟ್ಟಿಯವರು ಕಾಪು ಶ್ರೀ ಜನಾರ್ಧನ ದೇವಸ್ಥಾನದ ಮುಂದೆ ಸತ್ಯಾಗ್ರಹ ಮಾಡಿದರು. ಸತ್ಯಾಗ್ರಹಿಯು ಯುದ್ಧವಿರುದ್ಧ ಘೋಷಣೆ ಮಾಡಿದರು. ಸಭೆಯಲ್ಲಿ ಕಾಪುಬೀಡು ಶಾಂತಿರಾಜಯ್ಯನವರು, ಇಲ್ಲಿಯ ಸರ್ಕಲ್ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್ ಡಾ. ರಾಮಣ್ಣ ಶೆಟ್ಟರು, ಡಿ. ಬೋ. ಮೆಂಬರ್ ಮಹಾಲಿಂಗ ಶೆಟ್ಟರು ವಗೈರೆ ಊರ ಇದ್ದ ಮಹನೀಯರುಗಳು ಮತ್ತು ಉಡುಪಿ ಪೋಲೀಸ್ ಸ್ಟೇಶನ್ ಹೌಸ್ ಆಫೀಸರ್ ಫ್ರರ್ಟಾಡೋರವರು ಹಾಜರಿದ್ದರು. ಸತ್ಯಾಗ್ರಹಿಯು ದಸ್ತಗಿರಿಯಾಗದ್ದರಿಂದ ಜಿಲ್ಲಾ ಸಂಚಾರಮಾಡಿ ಡಿಲ್ಲಿಯತ್ತ ಕಡೆ ಹೋಗುತ್ತೇನಾಗ ಹೇಳಿ ಉಡುಪಿಯತ್ತ ಹೊರಟುಹೋಗಿರುತ್ತಾರೆ.

ಕುಂದಾಪುರ

ಬೈಂದೂರು:— ತಾ. ೨೧—೨—೪೧ರಲ್ಲಿ ಸತ್ಯಾಗ್ರಹ ಮಾಡಿ ಕೈದಾಗದೆ ಇರುವ ಶ್ರೀ। ಐಂ. ನಾ. ಸುಬ್ಬಣ್ಣ ಗುಪ್ತರು ಯುದ್ಧವಿರುದ್ಧ ಘೋಷಣೆ ಮಾಡುತ್ತಾ ಉಪ್ಪುಂದಕ್ಕೆ ಬಂದರು. ಮರುದಿನ ಅಲ್ಲಿಂದ ಘೋಷಣೆಮಾಡುತ್ತಾ ಕಂಬದಕೋಣೆಗೆ ಬಂದು ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತರು. ಗ್ರಾಮ ಕೈಗಾರಿಕೆ ಕೈಕೊಳ್ಳಬೇಕಾಗಿ ಸಭಿಕರೊಡನೆ ವಿಜ್ಞಾಪಿಸಿಕೊಂಡರು. ಮಾರನೆ ದಿನ ಅಲ್ಲಿಂದ ಘೋಷಣೆ ಮಾಡುತ್ತಾ ಮರವಂತೆಗೆ ಬಂದು ಅಲ್ಲಿ ಸಾರ್ವಜನಿಕ ಸಭೆಯಲ್ಲಿ ಯುದ್ಧವಿರುದ್ಧ ಘೋಷಣೆಯ ಅಂತರ್ಯವನ್ನು ವಿವರಿಸಿ ಹೇಳಿದರು. ಮರು ದಿವಸ ಅಲ್ಲಿಂದ ಘೋಷಣೆಮಾಡುತ್ತಾ ಅರೆ ಹೊಳೆ ಕಡೆಗೆ ಬಂದು ತಾ. ೨೬ರಲ್ಲಿ ಗುಜ್ಜಾಡಿ ಅಂಗಡಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದರು. ಸಂಜೆಗೆ ಕಟ್ಟೋಲಿಗೆ ಘೋಷಣೆ ಮಾಡುತ್ತಾ ದಾರಿಯಲ್ಲಿ ಸಿಕ್ಕಿದವರಿಗೆ ಸತ್ಯಾಗ್ರಹ ಮಾಡಿದ ಮಹತ್ವವನ್ನು ಹೇಳುತ್ತಾ ಸಾಯಂಕಾಲಕ್ಕೆ ಪಟ್ಟ ಅಂಗಡಿಗಾಗಿ ತಲ್ಪಿದರು. ತಾ. ೨೮ರಲ್ಲಿ ಘೋಷಣೆಮಾಡುತ್ತಾ ಬಸ್ರೂರು ಸಟ್ಟಿಹಾಡಿಯಲ್ಲಿ ಭಾಷಣಕೊಟ್ಟು ಕಂಪಾವರಕ್ಕೆ ಘೋಷಣೆಮಾಡುತ್ತಾ ರಾತ್ರೆ ಹೊರಟು ಹೋದರು. ತಾ. ೧—೩—೪೧ನೇ ದಿನ ಕಂಪಾವರದಿಂದ ಘೋಷಣೆಮಾಡುತ್ತಾ ಕೋಟೇಶ್ವರ ಮಾರ್ಗವಾಗಿ ತಾ. ೩ನೇ ಸಾಯಂಕಾಲ ಮಂಗಳೂರಿಗೆ ತಲ್ಪಿದರು. ಕಲ್ಯಾಣಪುರ, ಕಟಪಾಡಿ, ಕಾಪು, ಪಡುಬಿದ್ರಿ ಮೂಲ್ಕಿ ಈ ಸ್ಥಳಗಳಲ್ಲಿ ಪ್ರಚಾರಮಾಡುತ್ತಾ ಬಂದಿರುವರು. ಇವರು ಇಲ್ಲಿಂದ ಕಾಸರಗೋಡು ಮಾರ್ಗವಾಗಿ ತೆರಳುವವರು.

ಮಂಗಳೂರು

ಸ್ವಾಸ್ಥ್ಯ ಸಂಘ ವ್ಯಾಯಾಮ ಶಿಕ್ಷಣ ಶಿಬಿರ ಮಂಗಳೂರು:— ಪ್ರತಿ ವರ್ಷ ನಡೆಸುವ ಹಾಗೇ ಈ ಸಲದ ಬೇಸಿಗೆಯ ರಜೆಯಲ್ಲಿ ಮೇಲಿನ ಸಂಸ್ಥೆಯ ವಾರ್ಷಿಕ ವ್ಯಾಯಾಮ ಶಿಕ್ಷಣ ಶಿಬಿರವು ಈ ಕೆಳಗಿನ ತಾರೀಕುಗಳಲ್ಲಿ ಮಂಗಳೂರಿನಲ್ಲಿ ನಡೆಸಲ್ಪಡುವುದು. ಮೇ. 2ನೇ ತಾರೀಕಿನಿಂದ ಮೇ 16ನೇ ತಾರೀಕು ವರೆಗೆ ಸ್ತ್ರೀ ಅಧ್ಯಾಪಕಿಯರ ಶಿಬಿರ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿಯೂ, ಮೇ 2ನೇ ತಾರೀಕಿನಿಂದ ಮೇ 16ನೇ ತಾರೀಕುವರೆಗೆ ಅಧ್ಯಾಪಕರ ಶಿಬಿರ ಸ್ವಾಸ್ಥ್ಯ ಸಂಘದಲ್ಲಿಯೂ ನಡೆಸಲ್ಪಡುವುದು. ಹೆಚ್ಚಿನ ವಿವರಕ್ಕೆ ಮತ್ತು ಸರ್ಕ್ಯುಲರುಗಳಿಗೆ ಆರ್ಗನೈಜರ್, ಸ್ವಾಸ್ಥ್ಯ ಸಂಘ, ಮಂಗಳೂರು, ಇವರಿಗೆ ಬರೆದು ತಿಳಿಯಬಹುದು.

ಧಾರಣೆ ಹೆಚ್ಚುವುದರ ಕುರಿತು ಅಸಮಾಧಾನ:— ಈಗ ಒಂದೇ ಸವನೆ ವಸ್ತುಗಳ ಬೆಲೆಯೇರುತ್ತಿದ್ದು ಬಡಜನರಿಗೆ ಜೀವನ ನಡೆಸುವುದು ಕಷ್ಟವಾಗಿದೆ. ಬೆಲೆಯನ್ನು ಏರದಂತೆ ಅದನ್ನು ತಡೆಯಬೇಕಾಗಿ ಸರಕಾರಕ್ಕೆ ವಿಜ್ಞಾಪಿಸಿಕೊಳ್ಳಲು ಸ್ಥಳೀಯ ಮಜೂರ ಸಂಘದವರು ಒಂದು ಸಾರ್ವಜನಿಕ ಸಭೆಯು ತಾ. ೯ರಂದು ಮೈದಾನದಲ್ಲಿ ಜರಗಿತು.

ಶಿಶುಹತ್ಯೆ:— ಮೋಳಾರ ಗ್ರಾಮದ ಚೀಯಮ್ಮ ಎಂಬವಳನ್ನು ಆಕೆಯು ಆಳಿದ ತಾ. ೧೨—೧೨—೪೦ರಲ್ಲು ತಾನು ಅದೇ ದಿವಸ ಪ್ರಸವಿಸಿದ ಕೂಸನ್ನು ಗುಜ್ಜರ ಕೆರೆಗೆ ಬಿಸಾಡಿ ಶಿಶುಹತ್ಯೆಯನ್ನು ಮಾಡಿದ್ದಾಳಾಗಿ ಸೆಶನ್ಸ್ ಕೋರ್ಟಿಗೆ ಕಮಿಟು ಮಾಡಲಾಗಿತ್ತು. ಆಕೆಯು ವಿಧವೆಯಾಗಿದ್ದು ಜಾರತನದಿಂದ ಗರ್ಭಿಣಿಯಾದ ಕಾರಣ ತನ್ನ ಪ್ರಸವವನ್ನು ಗುಟ್ಟಿನಲ್ಲಿಡುವುದಕ್ಕೋಸ್ಕರ ಈ ರೀತಿ ಮಾಡಿದ್ದಾಗಿ ಹೇಳಲಾಗಿತ್ತು. ಆಲೆಯು ತಾನು ತಾ. ೧೨—೧೨—೪೦ನೇ ರಾತ್ರಿ ಬಾಣಂತಿಯಾದುದನ್ನು ಒಪ್ಪಿದಳು. ಆದರೆ ಮಗುವು ಹುಟ್ಟುವಾಗಲೇ ನಿರ್ಜೀವವಾಗಿತ್ತೆಂದೂ ತನಗೆ ಕೂಡಲೇ ಮೂರ್ಛೆ ಬಂದು ಮರುದಿವಸ ಮೂರ್ಛೆಯಿಂದ ಎಚ್ಚರವಾಗುವಾಗ ಮಗುವಿನ ದೇಹವು ಅಲ್ಲಿರಲಿಲ್ಲ ಎಂತಲೂ ಆಕೆಯ ಕಡೆಯಿಂದ ಸಾಧಿಸಲಾಗಿತ್ತು. ಇಬ್ಬರು ಎಸೆಸರರು ಆಲೆಯು ತಪ್ಪುಗಾರಳಲ್ಲವೆಂತಲೂ ಅಭಿಪ್ರಾಯಪಟ್ಟಿದ್ದರು. ಮಂಗಳೂರು ಸೆಶನ್ಸ್ ಜಡ್ಜರಾದ ಶ್ರೀ। ಕೆ. ಯಸ್. ಗೋಪಾಲನ್‌ರವರು ಆಲೆಯು ತಪ್ಪುಗಾರಳಲ್ಲವೆಂತ ವಿಧಿಸಿ ೩—೩—೪೧ರಲ್ಲಿ ಬಿಡುಗಡೆ ಮಾಡಿದರು.

ಹರಿಕಥೆ:— "ಶ್ರೀಮನ್ಮಹಾಭಾರತ" ತಾ. 15ರಿಂದ 24 ದಿನಗಳ ವರೆಗೆ ಜಿಲ್ಲಾ ಮುನ್ಸಿಪಲ್ ಮೈದಾನಿನಲ್ಲಿ ರಾತ್ರಿ 8 ಘಂಟೆಗೆ ದಕ್ಷಿಣ ಕನ್ನಡ ಜಿಲ್ಲಾ ತೀಯಾ ಶಕ್ತಿ ಸಂಘದ ನೇತೃತ್ವದಲ್ಲಿ ಶ್ರೀ. ಮ. ಶ. ೩೦ಮಗ ಹರಿದಾಸರಿಂದ 'ಶ್ರೀ ಮನ್ಮಹಾಭಾರತ' ಹರಿಕಥೆ ಜರಗಿಸಲ್ಪಡುವುದು.

ಪೆರಡಾಲ. ಲಕ್ಷ್ಮೀಶ ಕವಿಉತ್ಸವ:— ಇದೇ ಮಾರ್ಚ ತಾ. ೯ರಲ್ಲಿ ಇಲ್ಲಿಯ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಮಹಾಕವಿ ಲಕ್ಷ್ಮೀಶನ ಉತ್ಸವವು ಮಂಗಳೂರು ಗವರ್ನ್‌ಮೆಂಟ್ ಕಾಲೇಜಿನ ಶ್ರೀ. ಕೆ. ವಿ. ಕೃಷ್ಣ ಭಟ್ಟ, ವಿದ್ವಾನ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಭಾಷಣವು ಶ್ರೀ. ಎ. ಯಂ. ಮುತ್ತಣ್ಣನವರಿಂದ ಮಾಡಲ್ಪಟ್ಟನಂತರ ವಿದ್ಯಾರ್ಥಿಗಳಿಗಾಗಿ ಇಟ್ಟ ಜೈಮಿನಿ ವಾಚನ ಸ್ಪರ್ಧೆಯು ನೆರವೇರಿತು. ಶ್ರೀ. ವಿ. ಮಹಾಲಿಂಗ ಭಟ್ಟ, ವಿದ್ವಾನ್ ಇವರು ಕವಿ, ಕಾವ್ಯ ಮತ್ತು ಇತರ ವಿಷಯಗಳನ್ನು ಕುರಿತು ಮಾತಾಡಿದರು. ಜೈಮಿನಿ ಭಾರತದ ಪ್ರಾಶಸ್ತ್ಯ ಇತ್ಯಾದಿ ವಿಷಯಗಳ ಕುರಿತು ಶ್ರೀ. ಪಿ. ಗೋಪಾಲಕೃಷ್ಣ, ಮತ್ತು ಕೆ. ವೆಂಕಟಕೃಷ್ಣ ಇವರೂ ಭಾಷಣ ಮಾಡಿದರು. ಅನಂತರ ಅಧ್ಯಕ್ಷರ ಸರಸಭಾಷಣವಾಗಿ ಅಂದಿನ ಉತ್ಸವವು ಕೊನೆಗೊಂಡಿತು.

1941ನೇ ಇಸವಿ ಮಾರ್ಚ ತಿಂಗಳ ತಾರೀಕು 10ನೇ ಸೋಮವಾರ ದಿವಸದ ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆಗಳು.

			ರಿಂದ	ವರೆಗೆ
1.	(a)	ಛತ್ರ ಅವ್ವಲ್ ತರದ ಸುಡು ಮುಡಿಗೆ	2— 6—0	—
	(b)	„ ಮಧ್ಯಂ „ „ „	2— 4—0	—
2.	(a)	ಅಕ್ಕಿ ಅವ್ವಲ್ ತರದ ಸುಡು ಮುಡಿಗೆ	5—12—0	5—14—0
	(b)	„ ಮಧ್ಯಂ „ „ „	5— 8—0	5—10—0
3.	(a)	„ ಅವ್ವಲ್ „ ಸುಗ್ಗಿ „	5— 4—0	5— 6—0
	(b)	„ ಮಧ್ಯಂ „ „ „	5— 0—0	—
4.	(a)	ತೆಂಗಿನಕಾಯಿ ಸುಲಿದದ್ದು 1000ಕ್ಕೆ	37— 8—0	42— 8—0
	(b)	„ ಸಿಪ್ಪೆಯಿದ್ದದ್ದು „	40— 0—0	45— 0—0
5.	(a)	ಕೊಬ್ಬರಿ ಆಫೀಸು ಖಂಡಿಗೆ	56— 4—0	—
	(b)	„ ದೀವಿ „	60— 0—0	—
	(c)	„ ದಿಲ್‌ಪಸಂದ್ „	58—12—0	—
6.		ತೆಂಗಿನ ಎಣ್ಣೆ ಮುಡಿಕ್ಕೆ	3—15—0	3—15—0
7.	(a)	ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2— 8—0	3— 4—0
	(b)	ಸುಲಿದ ಅಡಿಕೆ ಖಂಡಿಗೆ (ಹಳತು)	110— 0—0	128— 0—0
		(ಹೊಸತು)	60— 0—0	110— 0—0
8.		ಗೇರುಬೀಜ ಮುಡಿಗೆ	3— 8—0	3— 8—0
9.		ಕಬ್ಬಿನ ಬೆಲ್ಲ ಖಂಡಿಗೆ	22— 8—0	27— 8—0
10.		ಒಳ್ಳೆ ಮೆಣಸು ಹಂಡ್ರೆಡ್ ವೇಟೇಗೆ	13— 0—0	13— 8—0
11.	(a)	ಘಟ್ಟದೆಲೆಯ ಹೊಗೆಸೊಪ್ಪು ಮಣಕ್ಕೆ	4— 0—0	5— 8—0
	(b)	ಹುಡಿಯ „ „	7— 0—0	10— 0—0
12.	(a)	ಮೈಸೂರು ಏಲಕ್ಕಿ ಮಣಕ್ಕೆ	44— 0—0	57— 8—0
	(b)	ಕೊಡಗಿನ „ „	58— 0—0	63— 0—0
13.	(a)	ಕುಮಟೆಯ ಮೆಣಸು ಖಂಡಿಗೆ	60— 0—0	70— 0—0
	(b)	ಕಾಸರಗೋಡು „ ಮಣಕ್ಕೆ	3— 0—0	—
	(c)	ಘಟ್ಟದ „ „	8—12—0	

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

R. I. A. 1045/40 in
O. S. 369/38

ಸುಬ್ರಾಯ ಕಾರಂತ . ಅರ್ಜಿದಾರ.

ಮತ್ತು

ನರ್ಸಪ್ಪಯ್ಯ ಹೊಳ್ಳ ಕೂಡಾ . ಎದುರಿರು.

ಮಂಗಳೂರು ತಾಲ್ಲೂಕು ಕುರ್ನಾಡು ಗ್ರಾಮದ ಕುರ್ನಾಡು ಗುತ್ತಿನಲ್ಲಿರುವ ವೆಂಕಪ್ಪ ಮಲ್ಲಿಯರ ಮಗ ಶೇಷಪ್ಪ ಮಲ್ಲಿಯವರಿಗೆ—

ತಾ. 27—1—1932ರಲ್ಲು ನೀವು ಕೃಷ್ಣಪ್ಪಯ್ಯ ಕೂಡಾ 2 ಜನರಿಂದ ರೂ. 8000ಕ್ಕೆ ಬರೆಸಿಕೊಂಡ ಕ್ರಯ ಚೀಟಿನಲ್ಲಿ ತಾರೀಕು 27—1—1937ರ ವಾಯಿದೆಗೆ ನೀವು ಸದ್ರಿ ಕ್ರಯಗಾರರಿಗೆ ಕೊಡುವ ತರದ ಸ್ವೀಕೆ ನಿಮ್ಮ ವಶಾ ಸದ್ರಿ ಕ್ರಯದ ಪ್ರತಿಫಲಧ ಕ್ಕಾವಜಿನಲ್ಲಿ ಬಾಕಿಯಿರಗೊಡಿಸಿರುವ ರೂ. 1000 ಒಂದು ಸಾವಿರ ಮತ್ತು ಆದ್ರ—ಮೇಲಣ ಈ ವರೆಗಿನ ಬಡ್ಡಿ ಬಾಕಿಯನ್ನೂ ಜಡ್ಜ್‌ಮೆಂಟಿಗೆ ಮುಂಚಿತವಾಗಿ ಜಪ್ತಿ ಕೇಳಿ ಅರ್ಜಿದಾರನು ದಾಖಲು ಮಾಡಿರುವ ಮೇಲ್ಕಂಡ ಅರ್ಜಿಯನ್ನು ತಾರೀಕು 22—3—41ನೇ ಶನಿವಾರ ತನಿಗೆ ಇಟ್ಟಿರುತ್ತದೆ. ಆ ಕುರಿತು ನಿಮಗೇನಾದರೂ ಆಕ್ಷೇಪಣೆ ಇದ್ದರೆ ನೀವು ಈ ಕೋರ್ಟಿನ ಮುಂದೆ ಆ ದಿವಸ ಬೆಳಗ್ಗೆ 11 ಗಂಟೆಗೆ ಹಾಜರಾಗಿ ನಿಮ್ಮ ಆಕ್ಷೇಪಣೆಯನ್ನು ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಶಿಕ್ಷೆ ಮಾಡಲಾದೀತು.

Mangalore } U. Rama Rao,
12-3-41 } Vakil for Petitioner.

ಬೊಂಬಾಯಿಯಲ್ಲಿ ಮುಖಂಡರು ಕೂಡಿದ್ದಾರೆ

— ಸಾವರ್ಕರ್-ವೈಸರಾಯರ ಪತ್ರವ್ಯವಹಾರ —

ಹಿಂದೂ ಮಹಾಸಭೆಯು ಚಳವಳ ಹೂಡುವುದೆ?

ಃ ಲಾಹೋರಿನಲ್ಲಿ ಹಿಂದೂ ಮುಸ್ಲಿಂ ಐಕ್ಯ ಸಮ್ಮೇಳನ ಃ

ಭಾರತದ ರಾಜಕೀಯದಲ್ಲಿಯೂ ತಳಮಳವು ಕಡಿಮೆಯಾಗಿಲ್ಲ. ಸತ್ಯಾಗ್ರಹವು ಭರದಿಂದ ನಡೆಯುತ್ತಿದೆ; ಇತ್ತ, ಮಂದಪಕ್ಷದ ಮುಖಂಡರು ಬೊಂಬಾಯಿಯಲ್ಲಿ ಸಭೆ ಸೇರಿ ಪ್ರಕೃತದ ರಾಜಕೀಯ ವೈಷಮ್ಯವನ್ನು ಪರಿಹರಿಸುವ ಕಾರ್ಯ ಯೋಜನೆಯಲ್ಲಿದ್ದಾರೆ. ಲಾಹೋರಿನಲ್ಲಿ ಹಿಂದೂ ಮುಸ್ಲಿಂ ಐಕ್ಯ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ಜರಗಿತು. ಹಿಂದೂ ಮಹಾಸಭೆಯ ವರ್ಕಿಂಗ್ ಕಮಿಟಿ ಬೊಂಬಾಯಿಯಲ್ಲಿ ಸೇರಿದೆ. ಮಧುರೆಯ ನಿರ್ಣಯದ ರೀತಿ ನಡೆಯಲು ಸರಕಾರವು ಸಮ್ಮತಿಸದಿದ್ದರೆ, ಮಾರ್ಚಿ ತಿಂಗಳ ಅಂತ್ಯದ ಮೇಲೆ ಹಿಂದೂ ಮಹಾಸಭೆಯು ಚಳವಳ ಹೂಡುವುದೆಂದು ತಿಳಿದಿದೆ. ಈ ಕುರಿತು ವೈಸರಾಯರೊಡನೆ ಪತ್ರವ್ಯವಹಾರ ನಡೆದಿದೆ.

ಹಿಂದೂ ಮಹಾಸಭೆಯು ಚಳವಳ ಹೂಡುವುದೇ?

ಹಿಂದೂ ಮಹಾಸಭೆಯ ವರ್ಕಿಂಗ್ ಕಮಿಟಿ ಸಭೆಯು ಬೊಂಬಯಿಯಲ್ಲಿ ಸೇರಿದೆ. ವೈಸರಾಯರಿಗೆ ಒಂದು ಪತ್ರ ಬರೆದಿರುವುದಾಗಿಯೂ ಮಧುರೆಯ ಅಧಿವೇಶನದ ನಿರ್ಣಯದಂತೆ ನಡೆಯಲು ಒಪ್ಪಿಗೆ ಕೊಡದಿದ್ದರೆ ಮಾರ್ಚಿ ೩೧ರ ಅನಂತರ ಚಳವಳ ಹೂಡುವುದಾಗಿಯೂ ಅದರಲ್ಲಿ ಹೇಳಲಾಗಿದೆಯಂತೆ.

ರಾಜೇಂದ್ರ ಪ್ರಸಾದ್-ಗಾಂಧಿ ಭೇಟಿ

ವರ್ಧಾಕ್ಕೆ ಬಂದ ಡಾ. ರಾಜೇಂದ್ರ ಪ್ರಸಾದರು ಮಹಾತ್ಮಾಜಿಯವರೊಡನೆ ದೀರ್ಘಕಾಲದ ತನಕ ದೇಶದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಮಾತನಾಡಿದರೆಂದು ತಿಳಿದುಬರುತ್ತದೆ.

ಪಾಕಿಸ್ಥಾನವು ನಿಷೇಧವಾದುದು

ಸರ್. ಸಿಕಂದರರ ಭಾಷಣ

ಪಂಜಾಬ ಎಸೆಂಬ್ಲಿಯಲ್ಲಿ ಬಜೆಟ್ ಭಾಷಣಮಾಡುತ್ತಾ ಅಲ್ಲಿನ ಪ್ರಧಾನ ಮಂತ್ರಿ ಸಿಕಂದರ್ ಹಯ್ಯತ್ ಖಾನರು ಎಲ್ಲಾ ಖಾತೆಗಳಲ್ಲಿಯೂ ಎಲ್ಲಾ ಜಾತಿಯವರಿಗೂ ನ್ಯಾಯ ದೊರಕಿದೆಯೆಂದು ಪಾಕಿಸ್ಥಾನ ಯೋಜನೆಯೂ ನಿಷಿದ್ಧವೆಂದೂ ಹೇಳಿದರು.

ಪಂಜಾಬಿನಲ್ಲಿ ಹಿಂದೂ-ಮುಸ್ಲಿಂ ಐಕ್ಯಪ್ರಯತ್ನ
ಸರಕಾರದ ಸಹಾಯ

ಪಂಜಾಬ್ ಸರಕಾರವು ಹಿಂದೂ ಮುಸ್ಲಿಂ ಐಕ್ಯಕಾರ್ಯಕ್ಕಾಗಿ ಒಂದುಲಕ್ಷ ರೂಪಾಯಿಯಷ್ಟು ಹಣವನ್ನು ತೆಗೆದಿಟ್ಟಿರುವುದೆಂದು ತಿಳಿದು ಬರುತ್ತದೆ. ಪಂಜಾಬಿನಲ್ಲಿ ಪರಸ್ಪರ ಈ ಉಭಯಜಾತಿಗಳು ಸಹಕಾರದಿಂದಿರುವಂತೆ, ಸಹಭೋಜನ ಮೊದಲಾದುವು ನಡೆವಂತೆ ಹಾಗೂ ಹಿಂದೂ-ಮುಸ್ಲಿಂ ಐಕ್ಯಕ್ಕಾಗಿ ಪುಸ್ತಕ ಪತ್ರಿಕೆಗಳನ್ನು ಪ್ರಕಟಿಸುವಂತೆ, ಯೋಜನೆಗಳನ್ನು ಮಾಡಲಾಗುವುದಂತೆ. ಇಂತಹ ಸರಕಾರದ ಉಪಕ್ರಮವು ಅತ್ಯಂತ ಸ್ತುತ್ಯವಾಗಿದೆ. ಇತರ ಪ್ರಾಂತ್ಯಗಳ ಅಧಿಕಾರಿಗಳೂ ಈ ಮಾದರಿಯನ್ನು ಅನುಸರಿಸುವುದು ಅವಶ್ಯವಾಗಿದೆ. ಇಂದಿನ ರಾಜಕೀಯ ಬಿಕ್ಕಟ್ಟಿನ ಕಾಲದಲ್ಲಿ ಈ ವಿಧದ ಸರಕಾರದ ಯತ್ನ ಪೂರ್ಣ ಯಶಸ್ವಿಯಾಗಬೇಕೆಂದು ಹಾರೈಸಬೇಕಾಗಿದೆ.

ವೈಸರಾಯ್-ಸಾವರ್ಕರ್ ಪತ್ರವ್ಯವಹಾರ

ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ. ಸಾವರ್ಕರರ ಪತ್ರಕ್ಕೆ ವೈಸರಾಯರು ಉತ್ತರ ಕೊಟ್ಟಿರುವರೆಂದು ತಿಳಿದಿದೆ. ಹಿಂದೂ ಮಹಾಸಭೆಯ ವರ್ಕಿಂಗ್ ಕಮಿಟಿಯಲ್ಲಿ ಈ ಕುರಿತು ಆಲೋಚಿಸಲಾಗುತ್ತದೆ.

ಸಂಪೂರ್ಣಸಿಂಗರು ತಿರಿಗಿ ಸತ್ಯಾಗ್ರಹ ಹೂಡುವರು.

ಪಂಜಾಬ್ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಧುರೀಣರಾದ ಶ್ರೀ. ಸಂಪೂರ್ಣಸಿಂಗರು ಮತ್ತೊಮ್ಮೆ ಸತ್ಯಾಗ್ರಹ ಹೂಡಲು ಗಾಂಧಿಜಿಯವರ ಅನುಮತಿಗಾಗಿ ವರ್ಧಾಕ್ಕೆ ತೆರಳಿರುವರೆಂದು ತಿಳಿದಿದೆ.

ಭಾರತೀಯ ಮಾಜಿ ಮಂತ್ರಿಗಳ ದಸ್ತಗಿರಿಗಳ ಕುರಿತು ಪಾರ್ಲಿಮೆಂಟಿನಲ್ಲಿ ಪ್ರಶ್ನೆ
ಅವರು ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದವರಲ್ಲವೇ?

ಭಾರತದಲ್ಲಿ ಸತ್ಯಾಗ್ರಹವನ್ನಾಚರಿಸಿ ಎಷ್ಟು ಮಂದಿ ಮಾಜೀ ಮಂತ್ರಿಗಳೂ ಮಾಜೀ ಮುಖ್ಯ ಮಂತ್ರಿಗಳೂ ದಸ್ತಗಿರಿಯಾಗಿದ್ದಾರೆ ಎಂಬುದಾಗಿ ಸೊರೆನ್‌ಸನರು ಪ್ರಶ್ನಿಸಲಾಗಿ ಎಮೆರಿಯವರು ಉತ್ತರವೀಯುತ್ತಾ, "೧೯ ಜನ ಮಾಜೀ ಮಂತ್ರಿಗಳೂ ೫ ಜನ ಮಾಜೀ ಮುಖ್ಯ ಮಂತ್ರಿಗಳೂ ಶಿಕ್ಷೆ ಅನುಭವಿಸುತ್ತಿದ್ದಾರೆ. ೬ ಜನ ಮಾಜೀ ಮಂತ್ರಿಗಳೂ ಇಬ್ಬರು ಮಾಜೀ ಮುಖ್ಯ ಮಂತ್ರಿಗಳೂ ದಸ್ತಗಿರಿಯಾಗಿದ್ದಾರೆ" ಎಂದರು.

ಪ್ರ. ಇವರೆಲ್ಲರೂ ಪ್ರಜಾಸತ್ತಾತ್ಮಕ ರೀತಿಯಿಂದಲೇ ಚುನಾಯಿತರಾಗಿಲ್ಲವೇ? ನಮ್ಮ ಗೌರವಕ್ಕೆ ಚ್ಯುತಿ ಬರುವಂತಹ ರೀತಿಯ ಪ್ರಸಂಗವನ್ನು ಪರಿಹರಿಸಲು ಏನು ಕ್ರಮ ಜರುಗಿಸಲಾಗುತ್ತಿದೆ?

ಉ. ಅಕ್ರಮವಾಗಿ ವರ್ತಿಸಿದುದರಿಂದ ಇವರ ದಸ್ತಗಿರಿಯಾಗಿದೆ. ಇಂತಹ ವರ್ತನೆಗೆ ಪ್ರಜಾಸತ್ತಾತ್ಮಕವಾದ ಚುನಾವಣೆಯೇನೂ ಅಡ್ಡಿ ಬರಲಾರದೆಂದು ನಾನು ಅರಿಯುತ್ತೇನೆ.

ರಾಜಕೀಯ ಕೈದಿಗಳಿಗೆ ವರ್ಗೀಕರಣ ಬೇಡ
ಬೇಡಿಗಳನ್ನು ಹಾಕಬೇಡಿರಿ
ಕೇಂದ್ರ ಅಸೆಂಬ್ಲಿಯಲ್ಲಿ ನಿರ್ಣಯ

ಕಾಜ್ಮಿ ಇವರು ಕೇಂದ್ರ ಎಸೆಂಬ್ಲಿಯಲ್ಲಿ ಅಹಿಂಸಾತ್ಮಕ ಹೋರಾಟ ನಡೆಸಿದ ರಾಜಕೀಯ ಕೈದಿಗಳಿಗೆ ವರ್ಗೀಕರಣ ಭೇದವನ್ನು ಮಾಡಬಾರದೆಂದು, ರಾಜಕೀಯ ಕೈದಿಗಳನ್ನು ಯಾವುದೇ ತರದ ಅಪಮಾನಕ್ಕೆ ಗುರಿಪಡಿಸಬಾರದೆಂದೂ ನಿರ್ಣಯ ತಂದರು.

'ಕಾಯಿಲೆಯಿದ್ದು ಸತ್ಯಾಗ್ರಹ ಹೂಡಿದರೆ ಸರಕಾರಕ್ಕೆ ತೊಂದರೆಕೊಟ್ಟಂತೆ'
ಡಾ. ಸಯ್ಯದ್ ಮಹಮ್ಮದರಿಗೆ ಮಹಾತ್ಮರ ಸೂಚನೆ

ಬೀಹಾರಿನ ಹಿಂದಿನ ಮಂತ್ರಿಯಾದ ಡಾ. ಸಯ್ಯದ್ ಮಹಮ್ಮದರು ಕಾಯಿಲೆಯಿಂದಿದ್ದರೂ ತನಗೆ ಸತ್ಯಾಗ್ರಹ ಹೂಡಲು ಅಪ್ಪಣೆ ಕೊಡಬೇಕೆಂದು ಮಹಾತ್ಮರ ಅಪ್ಪಣೆ ಕೇಳಿದರು. ಅದಕ್ಕೆ ಅವರು ಉತ್ತರ ಕೊಡುತ್ತಾ 'ಕಾಯಿಲೆಯಿಂದಿದ್ದು ಸತ್ಯಾಗ್ರಹ ಹೂಡುವುದರಿಂದ ಸರಕಾರಕ್ಕೆ ನಾವು ತೊಂದರೆ ಕೊಟ್ಟಂತಾಗುವುದು. ಹೀಗೆ ಮಾಡುವುದು ಸತ್ಯಾಗ್ರಹ ತತ್ವಕ್ಕೆ ವಿರೋಧ. ಪ್ರಕೃತಿ ಸುಧಾರಿಸಿಕೊಳ್ಳುವುದಕ್ಕಾಗಿ ನೀವು ವರ್ಧಾಕ್ಕೆ ಬನ್ನಿರಿ' ಎಂದು ಬರೆದಿರುವರು.

ಸತ್ಯಾಗ್ರಹ

ಈ ವರೆಗೆ (ಫೆಬ್ರವರಿ ೧೫) ೫೧೦೦ ಜನರು ಸೆರೆಮನೆಗೆ ಹೋಗಿರುವರು.

ಫೆಬ್ರವರಿ ತಾ. ೧೫ರ ವರೆಗೆ ಸೆರೆಮನೆಗೆ ಹೋದ ಸತ್ಯಾಗ್ರಹಿಗಳ ಪಟ್ಟಿಯನ್ನು ಪ್ರಾಂತವಾರು ಅಖಿಲಭಾರತ ಕಾಂಗ್ರೆಸ್ ಸಮಿತಿಯು ಪ್ರಕಟಿಸಿದೆ. ಅದನ್ನು ಈ ಕೆಳಗೆ ಕೊಡಲಾಗಿದೆ.

ಪ್ರಾಂತ	ದಸ್ತಗಿರಿ	ಜುಲ್ಮಾನೆ
ಅಜಮೀರ್	೧೦	ರೂ. ೫೬೫
ಆಂಧ್ರ	೬೮೩	ರೂ. ೭೬,೫೫೩
ಆಸಾಮ್	೧೭೬	ರೂ. ೩,೧೪೫
ಬಂಗಾಳ	೩೯	ರೂ. ೨,೬೨೫
ಬಿಹಾರ್	೩೪೨	ರೂ. ೪,೩೪೦
ಬೊಂಬಾಯಿ	೪೭	ರೂ. ತಿಳಿದಿಲ್ಲ.
ಡೆಲ್ಲಿ	೩೯	ರೂ. ೭,೦೫೦
ಗುಜರಾತ್	೨೯೬	ರೂ. ೬,೧೫೦
ಕರ್ನಾಟಕ	೨೧೦	ರೂ. ೫,೩೪೦
ಕೇರಳ	೭೦	ರೂ. ೫,೬೦೦
ಮಹಾಕೋಸಲ	೧೨೭	ರೂ. ೧೦,೩೦೦
ಮಹಾರಾಷ್ಟ್ರ	೨೪೧	ರೂ. ೧,೪೧೫
ನಾಗಪುರ	೨೦	ರೂ. ೫,೨೧೫
ಗಡಿನಾಡು	೨	ಬಿಡಲ್ಪಟ್ಟಿದ್ದಾರೆ
ತಮಿಳುನಾಡು	೪೨೪	ರೂ. ೨೯,೦೩೦
ಸಂ. ಪ್ರಾಂತ	೧,೪೯೫	ರೂ. ೩೮,೦೦೦
ಉತ್ಕಲ	೩೧೫	ರೂ. ೯,೫೩೭
ವಿದರ್ಭ	೧೨೩	ರೂ. ೮,೧೭೭
ಪಂಜಾಬ್	೩೫೭	ರೂ. ೨೭,೪೦೩
ಜಮ್ಲಾ	೫,೧೦೧	ರೂ. ೨,೩೭,೬೯೯

THE
Canara Banking Corporation Ltd.,
(INCORPORATED IN BRITISH INDIA)
Estd: 1906
Head Office: UDIPI, S. Kanara.
Our attractive Rates on Deposits
FIXED DEPOSITS
3 to 6 months ...... 2¼% p. a.
6 to 9 „ ...... 3% „
One year ...... 3½% „
Two years ...... 4% „
SHORT TERM Deposits: 2½% p. a.
Current Account: 1% p. a.
Savings Bank: 2½% „
Particulars of other kinds of deposits on application.

U. K. BHUJANGA NAYAK
CLOTH COMMISSION AGENT
SHEVAPET, SALEM
ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.
ನಮ್ಮಲ್ಲಿ ಯಾವತ್ತು ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತರಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.
ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಗ್ರೀಕರನ್ನು ಹಿಂದಟ್ಟಲು ಹಿಟ್ಲರನು ಯೋಚಿಸುತ್ತಾನೆ!

— ಗ್ರೀಸ್ ಗಡಿನಾಡಿನಲ್ಲಿ ಜರ್ಮನ್ ಸೈನ್ಯ —

ಯುಗೋಸ್ಲೇವಿಯ ಒಪ್ಪಂದ ಮಾಡುವುದು

ಅಮೇರಿಕದಿಂದ ಬ್ರಿಟನಿಗೆ ಹೆಚ್ಚಿನ ಸಹಾಯ

ಜಪಾನ್ ಮಂತ್ರಿಯು ಜರ್ಮನಿಗೆ ತೆರಳಿದನು

ಯೂರೋಪಿನಲ್ಲಿ ಗಡಿಬಿಡಿ ಹೆಚ್ಚಾಗುತ್ತಾ ಇದೆ. ಬಲ್ಗೇರಿಯವನ್ನು ಬಗ್ಗಿಸಿದ ಹಿಟ್ಲರನು ಈಗ ಯುಗಸ್ಲೊವಿಯವನ್ನೂ ಸ್ವಾಧೀನ ಪಡಿಸಿದನು. ಗ್ರೀಸಿನ ಮೇಲೆ ಧಾಳಿ ಇಡಲು ಸಮಯ ಕಾಯುತ್ತಿರುವನೆಂದು ತಿಳಿಯಲಾಗಿದೆ ಬಾಲ್ಕನಿನಲ್ಲಿ ಅಶಾಂತಿಯ ಕೋಲಾಹಲವುಂಟಾಗಿದೆ. ಟರ್ಕಿಯ ಅವಸ್ಥೆಯೇನಾಗುವುದೆಂದು ತಿಳಿಯುವುದಿಲ್ಲ. ಹಿಟ್ಲರನದು ಟರ್ಕಿಯನ್ನು ಹಿಡಿವ ಆಶೆಯಾಗಿರಬಹುದಾದರೂ ಆತನು ಅಲ್ಲಿಯೂ ಕೃತಾರ್ಥನಾಗುವನೆಂದು ಹೇಳಬರುವುದಿಲ್ಲ. ಲಂಡನಿನ ಮೇಲೆ ಈ ವಾರವೂ ಬಾಂಬಿನ ಸುರಿಮಳೆ ಆಗಿದೆ.

ಆಲ್ಬೇನಿಯಕ್ಕೆ ಜರ್ಮನ್ ವಿಮಾನಗಳು

ಗ್ರೀಕರನ್ನು ಆಲ್ಬೇನಿಯದಿಂದ ಪುನಃ ಅವರ ದೇಶಕ್ಕೆ ಓಡಿಸಲು ಇಟಲಿಗೆ ಜರ್ಮನಿ ಆಧುನಿಕ ವಿಮಾನಗಳನ್ನೂ ಯುದ್ಧ ಸಾಮಗ್ರಿಗಳನ್ನೂ ಕಳುಹಿಸಿರುವುದಂತೆ

ಜರ್ಮನಿಗೆ ಯುಗೊಸ್ಲವಿಯವೂ ಬಗ್ಗಿತೇ?

ಯುಗೊಸ್ಲೇವಿಯ ಹಾಗೂ ಜರ್ಮನಿಯ ನಡುವೆ ಒಪ್ಪಂದವಾಗುವುದು. ಒಪ್ಪಂದದಲ್ಲಿ ಇಟಲಿ ಬಲ್ಗೇರಿಯಗಳೊಡನೆ ಯುಗೊಸ್ಲೇವಿಯವು ಮೈತ್ರಿಯಿಂದ ನಡೆದುಕೊಳ್ಳುವಂತೆ ಶರ್ತು. ಒಟ್ಟಿನಲ್ಲಿ ಈ ಒಪ್ಪಂದದಿಂದ ಪರಸ್ಪರ ಒಬ್ಬರಿಗೊಬ್ಬರು ಸಹಾಯಕ್ಕೆ ನಿಲ್ಲಬೇಕೆಂಬುದೇ ಅರ್ಥವು ಹಿಟ್ಲರನ ತಂತ್ರವು ಯುಗಸ್ಲವಿಯದಲ್ಲಿಯೂ ಫಲಿಸಿತು. ಇನ್ನು ಗ್ರೀಸಿನ ಅವಸ್ಥೆ ನೋಡತಕ್ಕದ್ದಿದೆ.

ಲೀಸ್ ಎಂಡ್ ಲೆಂಡ್ ಬಿಲ್ಲ ಸಿನೆಟಿನಲ್ಲಿ ಪಾಸಾಯಿತು

ಬ್ರಿಟನಿಗೆ ಸಹಾಯಕೊಡುವ ಲೀಸ್ ಎಂಡ್ ಲೇಂಡ್ ಬಿಲ್ಲು ೩೧ರ ವಿರುದ್ಧ ೬೦ ಮತಗಳಿಂದ ಅಮೇರಿಕದ ಸಿನೆಟಿನಲ್ಲಿ ಪಾಸಾಯಿತು.

ಗ್ರೀಸು ಇಟೆಲಿಯೊಡನೆ ಒಪ್ಪಂದಮಾಡಲು ಒಪ್ಪುವುದೋ, ಇಲ್ಲದಿದ್ದರೆ ಜರ್ಮನಿ ದಾಳಿ ಮಾಡುವುದೆ?

ಜರ್ಮನಿಯು, ಗ್ರೀಸು ಇಟಲಿಯೊಡನೆ ಒಪ್ಪಂದಮಾಡಿಕೊಳ್ಳಲು ಬೆದರಿಕೆ ಹಾಕಿದೆಯಂತೆ. ಇಲ್ಲವಾದರೆ ಗ್ರೀಸಿನ ಮೇಲೆ ಜರ್ಮನಿಯು ಧಾಳಿಮಾಡುವುದಂತೆ. ಇಟೆಲಿಯನ್ ಪತ್ರಿಕೆಗಳು ಗ್ರೀಸಿನೊಡನೆ ಹೋರಾಟವನ್ನು ನಿಲ್ಲಿಸುವುದು ಸಾಧ್ಯವಿಲ್ಲವೆಂದೇ ಅಭಿಪ್ರಾಯಪಡುತ್ತವೆ.

ಜಪಾನ ವಿದೇಶ ಮಂತ್ರಿ ಜರ್ಮನಿಗೆ ಹೋಗುವನು.

ಜಪಾನ್ ವಿದೇಶಿ ಮಂತ್ರಿ ಮಟ್ಸುವೋಕಾ ಬರ್ಲಿನಿಗೆ ತೆರಳಿರುವನೆಂದು ತಿಳಿದಿದೆ. ಬರ್ಲಿನ್ ಒಪ್ಪಂದದ ಕುರಿತು ಖಾಸಗಿ ಮಾತುಕತೆ ಮಾಡಲು ಹೋಗಿರುವುದಾಗಿ ಊಹೆ. ಅಲ್ಲಿಂದ ಆತನು ರೋಮಿಗೂ ತೆರಳುವನೆಂದು ತಿಳಿಯುತ್ತದೆ

ಗ್ರೀಸಿಗೆ ಜರ್ಮನಿಯ ಕೊನೆಯ ಮಾತು

ನಾವು ಹೇಳಿದಂತೆ ಕೇಳಿರಿ

ಗ್ರೀಸ್ ದೇಶಕ್ಕೆ ಜರ್ಮನಿಯು ಕೊನೆಯ ಮಾತನ್ನು ಹೇಳುವುದಂತೆ ಗ್ರೀಸ್ ಬ್ರಿಟನಿನೊಡನೆ ಸಂಬಂಧ ಕಡಿದುಕೊಳ್ಳಬೇಕೆಂದೂ, ಇಟಲಿಯೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂದೂ, ಬಲ್ಗೇರಿಯದ ಗಡಿಯಲ್ಲಿ ಬಲ್ಗೇರಿಯಕ್ಕೆ ಹೆಚ್ಚು ರಿಯಾಯತಿ ಕೊಡಬೇಕೆಂದೂ, ಕೆಲ ಪ್ರಾಂತಗಳನ್ನು ಜರ್ಮನಿಗೆ ಬಿಟ್ಟುಕೊಡಬೇಕೆಂದೂ ಹೇಳುವ ೨೪ ತಾಸುಗಳ ಕೊನೆಯ ಮಾತು ಶನಿವಾರ ದಿನ ಕೊಡಲಾಗುವುದಂತೆ

ಅಮೆರಿಕದ ಸಹಾಯ ದಿನನಿತ್ಯ ಬರುತ್ತದೆ

ಬ್ರಿಟನಿನ ಅಮೇರಿಕನ್ ರಾಯಭಾರಿಯು ಒಂದು ಹೇಳಿಕೆ ಹೊರಡಿಸಿ ಅದರಲ್ಲಿ ಅಮೇರಿಕದಿಂದ ಬ್ರಿಟನಿಗೆ ದಿನನಿತ್ಯ ಹೆಚ್ಚು ಹೆಚ್ಚು ಸಾಮಗ್ರಿ ಸಹಾಯಗಳು ಬರುತ್ತಿವೆಯೆಂದು ತಿಳಿಸುತ್ತಾನೆ

ಗ್ರೀಸ್ ಗಡಿನಾಡಿನಲ್ಲಿ ಜರ್ಮನ್ ಸೈನ್ಯ

೧೫ ಮೈಲ್ ಮಾತ್ರ ದೂರದಲ್ಲಿ

ಜರ್ಮನ್ ಸೈನಿಕರು ಮೋಟರ್ ಲಾರಿ ಬಸ್ಸು ಮತ್ತು ವಿಮಾನಗಳಲ್ಲಿ ತುಂಬಿ ಗ್ರೀಕ್ ಗಡಿಯ ಕಡೆಗೆ ಹೊರಟಿರುವರೆಂದೂ ದಕ್ಷಿಣಕ್ಕೆ ಹೋಗುವ ರಾಜಬೀದಿಗಳಲ್ಲಿ ತುಂಬಾ ಈ ಸೈನಿಕರೇ ಕಾಣುತ್ತಿರುವರೆಂದೂ ಸುದ್ದಿ ಬಂದಿದೆ ೧೫ ಮೈಲು ಮಾತ್ರ ದೂರವಿರುವ ಪಳ್ಳಿಯಲ್ಲಿ ಜರ್ಮನ್ ಸೈನಿಕರು ಬಂದು ತಂಗಿರುವರಂತೆ

ಚೀನವು ಜಪಾನನ್ನು ಜಯಿಸುವುದು

ಜಪಾನಿನ ಮೇಲೆ ಚೀಣದ ಸೈನಿಕರು ಜಯವನ್ನು ಪಡೆಯುವರೆಂದೂ, ಚೀಣವು ಏಕಾಂಗಿಯಾಗಿ ನಿಂತು ಯುದ್ಧಮಾಡಲು ಶಕ್ತವಾಗಿದೆಯೆಂದೂ, ಚೀಣದ ಜಯದಿಂದ ರಶ್ಯ, ಅಮೇರಿಕ, ಬ್ರಿಟನುಗಳಿಗೆ ಅನುಕೂಲವಾಗುವುದೆಂದೂ ಚೈನ ದಳಪತಿ ಚಿಯಾಂಗ್ ಕೈಶೇಕರು ಹೇಳಿದರು.

ಬ್ರಿಟಿಷ ಸಹಾಯಕ ಮಸೂದೆಯ ಅವಧಿ

ಬ್ರಿಟಿಷ ಸಹಾಯಕ ಮಸೂದೆ (ಲೀಸ್ ಎಂಡ್ ಲೆಂಡ್ ಬಿಲ್) ಇದರ ಅವಧಿಯು ೧೯೪೩ನೆಯ ಜುಲಾಯಿ ವರೆಗೆ ಎಂದು ನಿರ್ದೇಶಿಸುವ ನಿರ್ಣಯವು ಅಂಗೀಕಾರವಾಯಿತು

ಇಟಾಲಿಯನ ಸೋಮಾಲಿಲೇಂಡಿನಲ್ಲಿ ಜಯ

ಬ್ರಿಟಿಷರು ಮುಂದೊತ್ತಿದರು.

ಇಟಲಿಯನ್ ಸೋಮಾಲಿಲೇಂಡಿನಲ್ಲಿ ಬ್ರಿಟಿಷರಿಗೆ ಪ್ರಚಂಡ ಜಯವಾಗಿರುವುದೆಂದೂ, ಕಿಸ್ಮಾಯು ಬಂದರವು ಅವರ ಸ್ವಾಧೀನಕ್ಕೆ ಬಂದಿರುವುದೆಂದೂ ತಿಳಿಯಲಾಗಿದೆ. ಅಲ್ಲಿ ವೈರಿಗಳ ೭ ಹಡಗುಗಳು ಕೈಬಿಟ್ಟಿವಲ್ಲದೆ ೪ ಹಡಗುಗಳು ಆತ್ಮಹತ್ಯೆ ಮಾಡಿಕೊಂಡವೆಂದೂ ತಿಳಿದಿದೆ

ಬಲ್ಗೇರಿಯ ಗಡಿ ಬಂದಾಗಿದೆ:

೨॥ ಲಕ್ಷ ಜರ್ಮನ ಸೈನ್ಯ.

ಹೊರಗೆ ಹೋಗಲು ಅಪ್ಪಣೆ ಬೇಕು

ಬಲ್ಗೇರಿಯ ಗಡಿನಾಡಿನಲ್ಲಿ ಪಹ್ರೆ ಕಾವಲಿದ್ದು ಹೊರಗೆ ಹೋಗಲು ಸರಕಾರದ ಅಪ್ಪಣೆ ಪಡೆಯಬೇಕೆಂದು ಆಜ್ಞೆ ಹೊರಡಿಸಲಾಗಿದೆ

ಜರ್ಮನರ ೨॥ ಲಕ್ಷ ಸೈನ್ಯವೂ ಸುಮಾರು ೬೦೦ ವಿಮಾನಗಳೂ ಬಲ್ಗೇರಿಯದಲ್ಲಿವೆಯಂತೆ.

ಅಮೇರಿಕದಿಂದ ಬ್ರಿಟನಿಗೆ ಕೂಡಲೇ ಸಹಾಯ

ಲೀಸ್ ಎಂಡ್ ಲೆಂಡ್ ಬಿಲ್ ಪಾಸಾಗಿರುವುದರಿಂದ ಇನ್ನು ಮುಂದೆ ಕೂಡಲೆ ಬ್ರಿಟನಿಗೆ ಬೇಕಾದ ಸಹಾಯಗಳನ್ನು ಒದಗಿಸಿ ಜರ್ಮನಿಯನ್ನು ಗೆಲ್ಲಲು ನಾವು ಸಹಾಯಮಾಡುವೆವು ಎಂದು ಕರ್ನಲ್ ನೋಕ್ಸರು ಹೇಳಿದರು.

ಮಸೂದೆ ಪಾಸಾಗಲು ತಡವಾದರೆ ಸಹಾಯವೂ ತಡವಾಗುತ್ತಿದ್ದು.

ರೂಸವೆಲ್ಟರ ಹೇಳಿಕೆ

ಬ್ರಿಟಿಷ ಸಹಾಯಕ ಮಸೂದೆಯು ಪಾಸಾಗಲು ತಡವಾದರೆ ಬ್ರಿಟನಿಗೆ ಅಮೇರಿಕವು ಕಳುಹಿಸುವ ಸಹಾಯವೂ ತಡವಾಗುವುದೆಂದು ಹೇಳಿದರು. ತಮ್ಮ ಹೇಳಿಕೆಯಲ್ಲಿ ಪ್ರಜಾಪ್ರಭುತ್ವ ರಾಷ್ಟ್ರಗಳಿಗೆ ಬೆಂಬಲಕೊಡುವ ಭರವಸೆ ಕೊಟ್ಟಿರುವರು.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ. —

ಆದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ, ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ—

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು

ಮಂಗಳೂರಿನ ಡಿಸ್ಟ್ರಿಬ್ಯೂಟರರು— ದಿ. ಕೊರನೇಷನ್ ಟ್ರೇಡಿಂಗ್ ಕೊ., ಮುಹಮ್ಮದಾಲಿ ರೋಡ್, ಮಂಗಳೂರು.

ಸತ್ಯಾಗ್ರಹದ ಬಗ್ಗೆ ಸೂಚನೆಗಳು

— ಕೆ. ಪಿ. ಸಿ. ಸಿ. ಪ್ರಕಟಣೆ —

ಸತ್ಯಾಗ್ರಹ ಆಂದೋಲನವು ಪ್ರಾರಂಭವಾದಂದಿನಿಂದ ನಮ್ಮ ಕಡೆಗೆ ಬಂದ ವರದಿಯ ಮೇಲಿಂದ ಈ ವರೆಗೆ ೩೩೫ ಸತ್ಯಾಗ್ರಹಿಗಳು ಸತ್ಯಾಗ್ರಹ ಮಾಡಿದ್ದು ೩೧೫ ಜನರು ಕೈದುಮಾಡಲ್ಪಟ್ಟಿರುವರು. ಹಾಗೂ ೨೦ ಜನರು ಸತ್ಯಾಗ್ರಹ ಮಾಡಿದರೂ ಕೈದುಮಾಡಲ್ಪಟ್ಟಿಲ್ಲ. ೩ನೆಯ ಹಾಗೂ ೪ನೆಯ ಪಟ್ಟಿಯಲ್ಲಿ ಮಂಜೂರಿ ಪಡೆದ ಎಲ್ಲಾ ಸತ್ಯಾಗ್ರಹಿಗಳು, ಎಪ್ರಿಲ್ ೫ನೇ ತಾರೀಕಿನೊಳಗೆ ಸತ್ಯಾಗ್ರಹ ಮಾಡಬೇಕು. ಗಾಂಧೀಜಿಯವರಿಂದ ಒಪ್ಪಿಗೆ ಪಡೆದ ಸತ್ಯಾಗ್ರಹಿಗಳು ಯಾರೂ ಹೊರಗೆ ಉಳಿಯತಕ್ಕದ್ದಲ್ಲ.

ಮೊದಲು ಸ್ಥಾನಿಕ ಸಂಸ್ಥೆಗಳಲ್ಲಿಯ ಕಾಂಗ್ರೆಸ್ ಸದಸ್ಯರು ಅಪ್ಪಣೆ ಪಡೆದುಕೊಂಡಿದ್ದರೂ ಇನ್ನೊಮ್ಮೆ ನಾವು ತಿಳಿಸುವವರೆಗೆ ಸತ್ಯಾಗ್ರಹ ಮಾಡಬಾರದಾಗಿ ವಿನಂತಿ ಮಾಡಲಾಗಿತ್ತು. ಆದರೆ ಈಗ ನಾವು ಪ್ರತಿಯೊಂದು ಸ್ಥಾನಿಕ ಸಂಸ್ಥೆಯ ಪರಿಸ್ಥಿತಿಯನ್ನು ಪರಿಶೀಲಿಸಿ ಈ ಕೆಳಗೆ ಕಾಣಿಸಿದ ಸ್ಥಾನಿಕ ಸಂಸ್ಥೆಗಳಲ್ಲಿಯ ಸತ್ಯಾಗ್ರಹ ಮಾಡಲು ಸಿದ್ಧರಿದ್ದ (ಅಪ್ಪಣೆ ದೊರೆತ) ಸದಸ್ಯರಿಗೆ ಸತ್ಯಾಗ್ರಹ ಮಾಡಲು ಅಪ್ಪಣೆ ಕೊಡಲಾಗಿದೆ.

(೧) ಬೆಳಗಾವಿ ಜಿಲ್ಲೆಯೊಳಗಿನ ಎಲ್ಲ ಸ್ಥಾನಿಕ ಸಂಸ್ಥೆಗಳು (೨) ವಿಜಾಪೂರ ಜಿಲ್ಲೆಯೊಳಗಿನ ಎಲ್ಲ ಸ್ಥಾನಿಕ ಸಂಸ್ಥೆಗಳು (೩) ಧಾರವಾಡ ಜಿಲ್ಲಾ ಲೋಕಲ್ ಬೋರ್ಡ್ (೪) ಕಾರವಾರ ಜಿಲ್ಲಾ ಲೋಕಲ್ ಬೋರ್ಡ್.

ನಾವು ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ಈ ವಿಚಾರವಾಗಿ ಒಂದು ಪ್ರಶ್ನಾವಳಿ ಕಳಿಸಿದ್ದು ಅದಕ್ಕೆ ಉತ್ತರ ಬಂದ ನಂತರ ಉಳಿದ ಬಳ್ಳಾರಿ, ಮಂಗಳೂರ ಹಾಗು ಕೊಡಗು ಜಿಲ್ಲೆಗಳಲ್ಲಿಯ ವಿಚಾರ ಮಾಡದೇ ಇರುವ ಸಂಸ್ಥೆಗಳ ಬಗ್ಗೆ ನಿರ್ಣಯಮಾಡಲಾಗುವುದು.

ಬೆಂಗಳೂರ ದಂಡು ಬಳ್ಳಾರಿ ಹಾಗೂ ಹೊಸಪೇಟೆ ಈ ಮೂರು ಮುನಿಸಿಪಾಲಿಟಿಗಳಲ್ಲಿ ಕಾಂಗ್ರೆಸ್ ಧೋರಣೆಯ ವಿರುದ್ಧ ಗೊತ್ತುವಳಿಗಳು ಪಾಸಾದ್ದರಿಂದ ಅಲ್ಲಿಯ ಕಾಂಗ್ರೆಸ್ ಸದಸ್ಯರಿಗೆ ರಾಜಿನಾಮೆ ಕೊಡಲು ತಿಳಿಸಲಾಗಿದೆ. ಈಗಾಗಲೇ ಬಳ್ಳಾರಿ ಹಾಗು ಬೆಂಗಳೂರ ದಂಡಿನ ಮುನಿಸಿಪಾಲಿಟಿಯ ಕಾಂಗ್ರೆಸ್ ಸದಸ್ಯರು ಮುನಿಸಿಪಾಲಿಟಿಯ ತಮ್ಮ ಸ್ಥಳಗಳಿಗೆ ರಾಜಿನಾಮೆ ಕೊಟ್ಟಿರುವರು.

ಸತ್ಯಾಗ್ರಹದ ಬಗ್ಗೆ ಕೆಲ ಸೂಚನೆಗಳು

(೧) ಸತ್ಯಾಗ್ರಹ ಮಾಡುವ ಸಮಯಕ್ಕೆ ಸಭೆಗಳನ್ನು ಮಾಡುವುದನ್ನು ಕಡಿಮೆ ಮಾಡಬೇಕು. ಶಹರದಲ್ಲಿಯಂತೂ ಸತ್ಯಾಗ್ರಹದ ಸಮಯಕ್ಕೆ ಸಭೆಗಳನ್ನು ಕೂಡಿಸಲೇಬಾರದು. ಪತ್ರಿಕೆಗಳಲ್ಲಿ ಕೂಡಿದ ಜನರಿಗೆ ಘೋಷಣೆಯನ್ನು ತಿಳಿಸಿಹೇಳಬಹುದು. ಒಂದು ವೇಳೆ ಸತ್ಯಾಗ್ರಹಿಯು ಭಾಷಣಮಾಡಬೇಕೆಂದೇ ಇಚ್ಛಿಸಿದಲ್ಲಿ ಸತ್ಯಾಗ್ರಹಿಯು ನೋಟೀಸು ಕೊಡುವ ಪೂರ್ವದಲ್ಲಿಯೇ ಸಭೆಗಳನ್ನು ಕರೆದು ಭಾಷಣಮಾಡಬಹುದು. ಅಂಥ ಸಭೆಗಳಲ್ಲಿ ಕಾಂಗ್ರೆಸ್ಸಿನ ಧೋರಣೆ ಹಾಗು ಕಾರ್ಯಕ್ರಮವನ್ನು ತಿಳಿಸಿಹೇಳಬೇಕು, ಆದರೆ ಇಂಥ ಸಭೆಗಳಲ್ಲಿ ಯುದ್ಧವಿರೋಧ ಘೋಷಣೆಯನ್ನು ಮಾಡಬಾರದು.

೨. ಸಭೆಗಳಲ್ಲಿ ಭಾಷಣಮಾಡತಕ್ಕ ಭಾಷಣ ಕರ್ತರು ಒಳ್ಳೇ ನುರಿತವರೂ ಮತ್ತು ಕಾಂಗ್ರೆಸಿನ ತತ್ವವನ್ನು ತಿಳಿಸಿ ಹೇಳುವಂಥವರೂ ಇರಬೇಕು. ಸಭೆಗಳಲ್ಲಿ ಗಂಭೀರ (dignified)ವಾದ ಭಾಷಣ ಮಾಡಬೇಕು. ಅಶ್ಲೀಲ ಶಬ್ದ ಇಲ್ಲವೇ ವಾಕ್ಯಗಳನ್ನು ಭಾಷಣದಲ್ಲಿ ಉಪಯೋಗಿಸಬಾರದು.

೩. ಸತ್ಯಾಗ್ರಹದ ಪೂರ್ವದಲ್ಲಿ ರಾಷ್ಟ್ರಧ್ವಜ ವಂದನೆಯ ಕಾರ್ಯಕ್ರಮವನ್ನಿಡಬಹುದು. ಧ್ವಜವಂದನೆಯನ್ನು ಸತ್ಯಾಗ್ರಹಿಯಿಂದ ಮಾಡಿಸಬೇಕು.

೪. ಶಕ್ಯವಾದ ಮಟ್ಟಿಗೆ ಸತ್ಯಾಗ್ರಹಿಗಳನ್ನು ಕೂಡಿಸಿ ಮೆರವಣಿಗೆ ಮಾಡುವ ಮುಂತಾದ ಕಾರ್ಯಕ್ರಮಗಳನ್ನು ಮಾಡದಿರುವುದು ಒಳ್ಳೆಯದು. ಬಜಂತ್ರಿಬ್ಯಾಂಡ್ ಮುಂತಾದ ವಾದ್ಯಗಳನ್ನು ಉಪಯೋಗಿಸಬಾರದು.

(೫) ಸತ್ಯಾಗ್ರಹಿಯು ಸತ್ಯಾಗ್ರಹ ಮಾಡಲು ಸಿದ್ಧನಾದರೆಗ್ಗೆ ತನ್ನ ನೂಲುವ ಸಾಹಿತ್ಯ ಚರಕ, ಹೂಜಿ, ತಕಲಿ ವಗೈರೆ ಸಿದ್ಧವಾಗಿಯೇ ಇಟ್ಟಿರಬೇಕು. ಕೈದಾದ ನಂತರ ಜೈಲಿನಲ್ಲಿ ಅವುಗಳನ್ನು ತೆಗೆದುಕೊಂಡು ಹೋಗಲು ಪರವಾನಗಿ ಇದ್ದಲ್ಲಿ ತೆಗೆದುಕೊಂಡು ಹೋಗಬೇಕು.

ಕೆಲ ವಿಭಾಗದಲ್ಲಿ ಸತ್ಯಾಗ್ರಹಿಯು ಜಿಲ್ಲಾ ಮೆಜಿಸ್ಟ್ರೇಟರಿಗೆ ನೋಟೀಸು ಕೊಟ್ಟ ಕೂಡಲೇ ಹಾಗು ಸತ್ಯಾಗ್ರಹ ಮಾಡುವ ಪೂರ್ವದಲ್ಲಿ ಸರಕಾರದವರು ಬಂಧಿಸುವರು. ಇಂಥ ಸಂದರ್ಭಗಳಲ್ಲಿ ಸತ್ಯಾಗ್ರಹಿಯು ಅಧಿಕಾರಿಗಳನ್ನು ತಪ್ಪಿಸಿ ನಿಯಮಿತ ವೇಳೆ ಹಾಗು ಸ್ಥಳಕ್ಕೆ ಬಂದು ಸತ್ಯಾಗ್ರಹ ಮಾಡಿಯೇ ತೀರಬೇಕೆಂದು ಹಂಬಲಿಸಬಾರದು. ಸತ್ಯಾಗ್ರಹ ಮಾಡುವ ಪೂರ್ವದಲ್ಲಿ ಕೈದು ಮಾಡಿದರೂ, ಕೈದಾದ ನಂತರ ಸತ್ಯಾಗ್ರಹವು ಪೂರ್ತಿಯಾದಂತಾಯಿತು ಎಂದು ಕರ್ನಾಟಕ ಪ್ರಾಂತೀಕ ಕಾಂಗ್ರೆಸು ಕಮಿಟಿ ಅಧ್ಯಕ್ಷರು ತಾ. ೭-೩-೪೧ರ ಪ್ರಕಟಣೆಯಲ್ಲಿ ತಿಳಿಸುತ್ತಾರೆ.

ಸತ್ಯಾಗ್ರಹದ ಹೊಸ ರೂಪ ಮನೆಮನೆಗೆ ಹೋಗಿ ಯುದ್ಧ ವಿರುದ್ಧ ಪ್ರಚಾರ ಗಾಂಧೀಜಿಯವರ ಅನುಮತಿ

"ಯುದ್ಧ ವಿರುದ್ಧ ಪ್ರಚಾರ ಕಾರ್ಯವನ್ನು ಕಾಂಗ್ರೆಸ್ ಸತ್ಯಾಗ್ರಹಿಗಳು ಮನೆಮನೆಗೆ ಹೋಗಿ ಮಾಡಬಹುದು. ಇದಕ್ಕೆ ಮನೆಯವರ ಆಕ್ಷೇಪಣೆ ಇಲ್ಲದಿದ್ದರೆ ಸರಿ" ಎಂಬುದಾಗಿ ಮಹಾತ್ಮಾ ಗಾಂಧಿಯವರು ತಮಿಳುನಾಡು ಪ್ರಾಂತ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಗಳಿಗೆ ಕೊಟ್ಟ ಭೇಟಿಯಲ್ಲಿ ತಿಳಿಸಿದರು. ಮುಂದಿನ ವಾರದಿಂದ ಈ ತರಹದ ಸತ್ಯಾಗ್ರಹವನ್ನು ಆರಂಭಿಸಲಾಗುವುದು.

ಸತ್ಯಾಗ್ರಹದ ಬಗ್ಗೆ ಪ್ರಕಟಣೆ ಆಚಾರ್ಯ ಕೃಪಲಾನಿಯವರಿಂದ

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿ ಆಚಾರ್ಯ ಜೆ. ಬಿ. ಕೃಪಲಾನಿಗಳು ಒಂದು ಹೇಳಿಕೆಯನ್ನು ಹೊರಡಿಸಿ ತಿಳಿಸುವುದೇನೆಂದರೆ, "ಪ್ರಾಂತ ಕಾಂಗ್ರೆಸ್ ಕಮಿಟಿಗಳು ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ತಮ್ಮ ಸಭೆಗಳನ್ನು ನಡೆಸುವುದು ಒಳ್ಳೆಯದಲ್ಲ. ಯುದ್ಧವಿರುದ್ಧ ಘೋಷಣೆಗಾಗಿ ಜನಸಮೂಹ ಸೇರಿಸುವುದು ಸರಿಯಲ್ಲ. ತಮ್ಮನ್ನು ಮುಂಚೆಯೇ ದಸ್ತಗಿರಿಮಾಡುವರೆಂದು ಸತ್ಯಾಗ್ರಹಿಗಳು ಮನೆಬಿಟ್ಟು ಹೋಗುವುದೂ ಅನಂತರ ಸತ್ಯಾಗ್ರಹಕ್ಕಾಗಿ ಆಕಸ್ಮಿಕವಾಗಿ ಬರುವುದೂ ನಡೆಯುತ್ತದೆ. ಸತ್ಯಾಗ್ರಹ ನಡೆಸಬೇಕೆಂದು ಉದ್ದೇಶವಾದರೂ ಗಾಂಧಿಜಿಯವರು ಈ ತರಹದ ಉಪಾಯವನ್ನು ಒಪ್ಪುವುದಿಲ್ಲ. ಇದು ಸತ್ಯಾಗ್ರಹಕ್ಕೆ ವಿರುದ್ಧವಾದುದು."

ಕೆಮ್ಮು ಶೀತ ಮತ್ತು ಹಿಮಬಾಧೆಗಳನ್ನು ಹೋಗಲಾಡಿಸಿರಿ

ನಿಮ್ಮ ಗಂಟಲು ಕೆರೆಕೆಯಾದಾಗ, ನಿಮ್ಮ ಕಣ್ಣುಗಳಲ್ಲಿ ನೀರು ಬಂದಾಗ, ನಿಮ್ಮ ಮೈನಡುಕವುಂಟಾಗಿ ಸೀನುಗಳು ಬಂದಾಗ ನೀವು ಖಂಡಿತವಾಗಿ ಶೀತ ಬಾಧೆಗೊಂಡಿದ್ದೀರೆಂದು ತಿಳಕೊಳ್ಳತಕ್ಕದ್ದು; ಇದಕ್ಕೆ ಪೆಪ್ಸುಗಳು ಯೋಗ್ಯವಾದ ನಿವಾರಣೆಯನ್ನು ಕೊಡುವವು.

ಬಾಯಲ್ಲಿ ಹಾಕಿದ ಕೂಡಲೇ ಕರಗುವುದಾಗಿ, ಪೆಪ್ಸು ಬಾಯಿಯಲ್ಲಿ ಬಳ್ಳಿಯ ಔಷಧಕಾರಕವಾದ ಸತ್ವವನ್ನು ಹೊರಗೆಡಹುತ್ತದೆ. ಇದು ಶ್ವಾಸವಾಯುವಿನೊಡನೆ ಶ್ವಾಸಕೋಶವನ್ನು ಸೇರಿ ಅಲ್ಲಿರುವ ಶೀತವನ್ನು ಹೊರಹಾಕುತ್ತದೆ ಮಾತ್ರವಲ್ಲದೆ ಕ್ರಿಮಿಗಳನ್ನೂ ಕೊಲ್ಲುತ್ತದೆ. ಶ್ವಾಸಕೋಶವನ್ನು ಅವುಗಳು ಬಲಪಡಿಸಿ ಸಂಪೂರ್ಣವಾದ ಮತ್ತು ಶಾಸ್ವತವಾದ ಗುಣವನ್ನು ಕೊಡುತ್ತದೆ ಮತ್ತೆ ಶೀತಬಾಧೆಯಾಗದಂತೆಯೂ ಮಾಡುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಇಷು ಒಂದು ರೂಪಾಯಿಗೆ ಸಿಕ್ಕುತ್ತದೆ.

ಏಜೆಂಟ್ಸ್:—

ಮೆಸರ್ಸ್ ರಾಧಾ ಮತ್ತು ಕಂಪೆನಿ, ಪಿ. ಟಿ. ಮದರಾಸು.

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸನೀಯ, ಗುಳಿಗೆಗಳು

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ವಿಚಿತ್ರ ಪ್ರಪಂಚ

ಮರಹತ್ತುವ ಏಡಿಗಳು

ಬಂಗಾಳ ಆಖಾತದೊಳಗಿನ ಅಂಡಮಾನ ನಿಕೊಬರ ದ್ವೀಪಸಮುದಾಯಗಳಲ್ಲಿ ಕೆಲವು ಜಾತಿಯ ವಿಚಿತ್ರ ನೆಲ ಏಡಿಗಳು ಇವೆ. ಇವು ಒಂದೊಂದು ಅಡಿ ಉದ್ದವಾಗಿ ಇರುವವು. ತೆಂಗಿನ ಮರಗಳನ್ನು ಹತ್ತುವವು, ಅವುಗಳ ಮೇಲಿದ್ದ ತೆಂಗಿನಕಾಯಿಗಳನ್ನು ಕೊಯ್ದು ಕೆಳಗೆ ಹಾಕುವವು; ಮತ್ತೆ ಇಳಿದು ಸಿಪ್ಪೆಯನ್ನು ಸುಲಿಯುವವು; ಚಿಪ್ಪಿನ ಕಣ್ಣುಗಳನ್ನು ಉಗುರುಗಳಿಂದ ಕೊರೆದು ತೆಗೆದು ಕಾಯಿಯೊಳಗಿನ ತಿರುಳನ್ನು ಕೆರೆದು ತಿನ್ನುವವು; ಮತ್ತೆ ಸುಲಿದ ಸಿಪ್ಪೆಯನ್ನು ತಮ್ಮ ನೆಲದೊಳಗಿನ ಮನೆಗಳಿಗಾಗಿ ಕೊಳೆಯಿಸಿ ನಾರುಮಾಡಿ ಉಪಯೋಗಿಸಿಕೊಳ್ಳುವವು. ಯಾರಾದರೂ ಕುಶಲರು ಈ ಏಡಿಗಳನ್ನು ಸಾಧುಮಾಡಿ ತೆಂಗಿನ ತೋಟಗಳಲ್ಲಿ ಇಟ್ಟುಕೊಂಡರೆ, ಈ ತೋಟಗಳಲ್ಲಿ ಕೆಲಸಮಾಡುವ ಎಷ್ಟೋ ಜನರಿಗೆ ಆರಾಮ ದೊರೆಯಬಹುದು.

ಪ್ರಾರ್ಥನೆಗಾಗಿ ಚಕ್ರ

ಟಿಬೇಟಿನಲ್ಲಿ ಲಾಮ ಬೌದ್ಧಧರ್ಮದ ಗುರುಗಳಿದ್ದಾರೆ. ಹೊರಗಿನ ಪ್ರಪಂಚದಲ್ಲಿ ಎಷ್ಟೋ ಪರಿವರ್ತನೆಗಳಾಗಿದ್ದರೂ, ಈ ಲಾಮರ ಆಚಾರ ಪದ್ಧತಿಗಳು ಈಗಲೂ ಹಳೆಯವಾಗಿಯೇ ಇವೆ. ಹತ್ತಿಪ್ಪತ್ತು ಶತಮಾನಗಳ ಮೊದಲು ಹೇಗಿದ್ದವೋ ಈಗಲೂ ಹಾಗೇ ಇವೆ. ಅವನ್ನು ಕಂಡರೆ, ಕೇಳಿದರೆ ವಿಚಿತ್ರವೂ ಅದ್ಭುತವೂ ಆಗುತ್ತದೆ. ಈ ಲಾಮರು ಪ್ರಾರ್ಥನೆಗಾಗಿ ಒಂದು ಚಕ್ರವನ್ನು ಉಪಯೋಗಿಸುವರು. ಈ ಚಕ್ರದ ಸುತ್ತಲಿನ ಪಟ್ಟಿಯ ಮೇಲೆ ಪ್ರಾರ್ಥನಾ ಮಂತ್ರಗಳು ಬರೆದಿವೆ. ಚಕ್ರವನ್ನು ಒಂದು ಸುತ್ತು ತಿರುಗಿಸಿದರೆ, ಒಂದು ಸಲ ಮಂತ್ರೋಚ್ಚಾರದೊಂದಿಗೆ ಪ್ರಾರ್ಥನೆ ಮಾಡಿದಂತಾಗುವುದೆಂದು ಇವರು ತಿಳಿಯುವರು. ಹೀಗೆ ಎಷ್ಟು ಸಲ ಪ್ರಾರ್ಥನೆಮಾಡಿ ಪುಣ್ಯ ಸಂಪಾದಿಸಬೇಕೋ, ಅಷ್ಟು ಸಲಕ್ಕೆ ಬರೇ ಈ ಚಕ್ರವನ್ನು ತಿರುಗಿಸಿದರಾಯಿತು; ಪುಣ್ಯ ಪ್ರಾಪ್ತವಾಗುತ್ತದೆ ಅಥವಾ ಮನೋರಥವು ಕೈಗೂಡುತ್ತದೆ ಎಂದು ಈ ಜನರ ವಿಚಿತ್ರ ವಿಶ್ವಾಸವು ಇರುತ್ತದೆ.

ಭುವನೇಶ್ವರದ ವಿಚಿತ್ರ ದೇವಾಲಯ

ಒರಿಸ್ಸದ ಭುವನೇಶ್ವರದಲ್ಲಿ ಒಂದು ಪುರಾತನ ದೇವಾಲಯವಿದೆ. ಇದನ್ನು ಅಲ್ಲಿಯ ಜನರು ವೈತಾಲ್ ಮಂದಿರ್ ಎಂದು ಕರೆಯುವರು. ಯಾಕಂದರೆ ಈ ದೇವಸ್ಥಾನದ ಆಕಾರ ರಚನೆಗಳು ಅಡಿ ಮೇಲಾಗಿ ಇಟ್ಟ ದೊಡ್ಡ ದೋಣಿ ಅಥವಾ ಮಂಜಿಯನ್ನು ಹೋಲುವವು. ಈ ದೇವಾಲಯಕ್ಕೆ ನಾಲ್ಕು ಕಡೆಗಳಲ್ಲಿ ದ್ವಾರಗಳಿವೆ; ನಡು ಉದ್ದಕ್ಕೆ ಒಂದು ಕಡೆ ಗೋಪುರವಿದೆ. ಇದರ ಮಾಡು ದಕ್ಷಿಣ ಹಿಂದುಸ್ಥಾನದ ದೇವಸ್ಥಾನಗಳ ಮಾಡುಗಳನ್ನು ಹೋಲುತ್ತವೆ.

ಚೀನಿಯರ ಅಂತ್ಯಸಂಸ್ಕಾರ

ವ್ಯಾ ಸೀ ತ್ಸಾ ಎಂಬ ಚೀನೀ ಸೇನಾಪತಿಯೊಬ್ಬನು ಕೆಲವು ದಿನಗಳ ಹಿಂದೆ ಕಾಲವಾದನು. ಇವನು ಸಮರ್ಥನೂ ಯೋಗ್ಯನೂ ಆಗಿದ್ದನು; ಮಾತ್ರವಲ್ಲದೆ ದೇಶಾಭಿಮಾನಿಯೂ ಆಗಿದ್ದನು. ಇದ್ದರಿಂದ ಚೀನೀ ಜನರಿಗೆ ಅವನ ಮೇಲೆ ತುಂಬಾ ಶ್ರದ್ಧೆ ವಿಶ್ವಾಸಗಳಿದ್ದವು. ಜಪಾನು ಅನೇಕ ತರದ ಲೋಭಗಳನ್ನು ತೋರಿಸಿ ಅವನನ್ನು ದೇಶದ್ರೋಹಕ್ಕೆ ಪ್ರೇರೇಪಿಸಿದರೂ ಅವನು ಆ ಲೋಭಗಳಿಗೆ ಬಲಿಯಾಗಲಿಲ್ಲ. ಹೀಗಾದ್ದರಿಂದ ಚೀನಿಯರು ಇವನನ್ನು ಒಬ್ಬ ಮಹಾಪುರುಷನೆಂದೇ ತಿಳಿಯುತ್ತಿದ್ದರು.

ಒಬ್ಬನು ಕಾಲವಾದ ಮೇಲೆ ಚರ ಸೊತ್ತುಗಳೊಂದಿಗೆ ಆತನ ದಹನಕ್ರಿಯೆ ಮಾಡುವುದು ಚೀನೀಯರ ವಿಶೇಷ ಪದ್ಧತಿ. ಆದರೆ ಈಗ ಚೀನವು ಜಪಾನಿನೊಂದಿಗೆ ಯುದ್ಧಕ್ಕಿಳಿದಿದೆ. ಮೋಟರು, ಸೈಕಲು ಮೊದಲಾದ ಉಪಯುಕ್ತ ಸಾಮಗ್ರಿಗಳನ್ನು ಸತ್ತವರೊಂದಿಗೆ ಸುಡಲು ಇದು ತಕ್ಕ ಸಮಯವಲ್ಲ. ಅದ್ದರಿಂದ ಚೀನವು ಕಾಲವಾದ ಈ ಸೇನಾಧಿಪತಿಯ ಮೋಟರು, ಕಾರು, ಸೈಕಲು, ಹಾಸಿಗೆ, ಮಂಚ ಮೊದಲಾದುವನ್ನು ಕಾಗದದಿಂದ ತಯಾರಿಸಿ ಅವನ್ನೇ ಆತನ ಕಳೇಬರದೊಂದಿಗೆ ಸ್ಮಶಾನಕ್ಕೆ ಸಾಗಿಸಿದರು; ಮತ್ತು ಅವನ್ನು ಆತನ ಮೃತ ಶರೀರದೊಂದಿಗೆ ಸುಟ್ಟರು.

ಇಲ್ಲಿ ಜೀವಿಸಿದ್ದಾಗ ಯಾವ ಸುಖಭೋಗಗಳನ್ನು ಅನುಭವಿಸುತ್ತಿದ್ದರೋ, ಅವನ್ನೇ ಸತ್ತ ತರುವಾಯವೂ ಸ್ವರ್ಗಲೋಕದಲ್ಲಿ ಅನುಭವಿಸಲಿಕ್ಕಾಗಿ ಚೀನಿಯರು ಸತ್ತವರ ಶರೀರದೊಂದಿಗೆ ಅವರ ಸೊತ್ತುಗಳ ಸ್ಮಶಾನಕ್ರಿಯೆ ಮಾಡುವುದು.

ಜಪಾನಿಗೆ ಬುದ್ಧಿ ಕಲಿಸಿದವರು ಭಾರತೀಯರು

ಜಪಾನಿನ ಜನರು ಅನಾಗರಿಕ ಸ್ಥಿತಿಯಲ್ಲಿದ್ದಾಗ ಅವರಲ್ಲಿ ಧರ್ಮಜ್ಞಾನದ ಪ್ರಸಾರಮಾಡಿ ನಾಗರಿಕತೆಯ ಬೆಳಕನ್ನು ಬೀರಿದವರು ಹಿಂದುಸ್ಥಾನದ ಜನರು ಎಂಬುದು ಇತಿಹಾಸದಿಂದ ಪ್ರಮಾಣಿತವಾಗಿದೆ. ಹಿಂದೂದೇಶದಿಂದಲೇ ಬೌದ್ಧ ಭಿಕ್ಷುಗಳು ಜಪಾನಿಗೆ ಹೋಗಿ ಅಲ್ಲಿ ಬೌದ್ಧ ಧರ್ಮದ ಪ್ರಸಾರ ಮಾಡಿದರು. ಅಷ್ಟುಮಾತ್ರವೇ ಅಲ್ಲ; ಹಿಂದುಗಳೇ ಜಪಾನಿಯರಿಗೆ ಕೈಗಾರಿಕೆಗಳನ್ನು ಕಲಿಸಿದರಂತೆ. ೧೦–೧೨ ಶತಮಾನಗಳ ಹಿಂದೆ ಜಪಾನಿಯರು ಹತ್ತಿ ಎಂದರೇನೆಂದು ತಿಳಿದವರೇ ಅಲ್ಲ. ಹಿಂದುಗಳೇ ಅವರಿಗೆ ಹತ್ತಿಯ ಬೀಜಗಳನ್ನು ಕೊಟ್ಟು ಅವನ್ನು ನಟ್ಟು ಬೆಳೆಸುವ ಕ್ರಮಗಳನ್ನು ಹೇಳಿಕೊಟ್ಟರು. ಹಡಗು ಒಡೆದು ನೀರುಪಾಲಾದ ಇಬ್ಬರು ಹಿಂದೂ ನಾವಿಕರು ಈಜಾಡುತ್ತಾ ಜಪಾನಿನ ಕಡಲು ದಂಡೆಯನ್ನು ಸೇರಿದರು, ಮತ್ತು ಅಲ್ಲಿಯ ಜನರಿಗೆ ತಮ್ಮ ಬಳಿ ಇದ್ದ ಹತ್ತಿಬೀಜಗಳನ್ನು ಕೊಟ್ಟು ಬೆಳೆ ಮಾಡುವುದನ್ನು ತಿಳಿಸಿದರು ಎಂಬುದಾಗಿ ಒಂದು ಕತೆ ಇದೆ.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

R. I. A. 1866/1940

O. S. 549/1939

ಸುಂದರರಾವ. ವಾದಿ ಅರ್ಜಿದಾರ.

ಮತ್ತು

ವೆಂಕಟ್ರಮಣಯ್ಯ ಕೂಡಾ

ಪ್ರತಿವಾದಿ ಎದ್ರಿರು.

1ನೇ ಪ್ರತಿವಾದಿ ಜೋನ್ ಸಾಲ್ದಾನ ಸಿಲ್ವಾ [illegible] ಸಿಲ್ವರ ಮಗ, 6ನೇ ಪ್ರತಿವಾದಿ [illegible] ಸಿಲ್ವಾ, 7ನೇ ಪ್ರತಿವಾದಿ [illegible] ಸಿಲ್ವಾ [illegible] ಕೆ ಪಡುಕೋಣೆಯಲ್ಲಿರುವವರು.

ವಾದಿಯು [illegible] ಮಾಡಬೇಕಾಗಿ ಕೊಟ್ಟ ಅರ್ಜಿಯು ತಾ. 18–3–1941ಕ್ಕೆ ತನ್ನಗೆ [illegible] ಕೋರ್ಟಿನ ಮುಂದೆ ಇಡುತ್ತದೆ ಎಂದು ಈ ಮೂಲಕ 1, 6, 7ನೇ ಪ್ರತಿವಾದಿಗೆ ತಿಳಿಸಲಾಗುತ್ತದೆ.

ತಾರೀಕು 7–3–1941.

G. Sanjiva Rao,
Vakil for Plaintiffs.

BHUVANENDRA PRODUCTS LTD.,
KATAPADI, S. K.

Why Doctors prescribe

"BHUVANENDRA"

NARAYANA TAILA

Because it sets right
the nervous system and gives good relief
from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರ ನಾರಾಯಣ ತೈಲ'

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ,
ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ವೀಕರ್ತರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ರಥಬೀದಿ.
ಡಾ. ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಅವರ ಜೀವನವು ಕ್ರಾಂತಿಯ ರೋಮಾಂಚಕ ಇತಿಹಾಸ!

ಸುಬಾಸ ಬೋಸರ ಜೀವನದ ಸವಿ ನೆನಹು

ಅದೃಶ್ಯರಾಗಿ ಅತ್ಯಂತ ಕಳವಳವುಂಟಾಗಿದೆ!

ಸುಬಾಸಬೋಸರೆಂದರೆ ಸ್ವಾತಂತ್ರ್ಯ ಪ್ರಿಯ ವಾದ ತರುಣ ಭಾರತದ ಮೂರ್ತಿಮಂತ ಪ್ರತಿ ನಿಧಿಯಂತಿದ್ದರು. ಬಂಗಾಳಕ್ಕೆ ಸಹಜವಾದ ಕ್ರಾಂತಿಕಾರಕ ವಿಚಾರಗಳು, ಗಾಂಧಿಜಿಗೆ ಅಸ್ಪೃಶ್ಯವಾದ ಕಾಂಗ್ರೆಸಿನ ಶಿಸ್ತುಪಾಲನೆಗಳು, ಇವುಗಳೆರಡರ ಮಧ್ಯದಲ್ಲಿ ಸುಬಾಸಬಾಬು ಉಜ್ವಲ ಕೀರ್ತಿ ಕಾಂತಿಯಿಂದ ಬೆಳಗಿದರು. ಅದರ ಫಲವಾಗಿಯೇ ಅವರಿಗೆ ಕಾಂಗ್ರೆಸಿನ ಅಧ್ಯಕ್ಷತೆಯ ಮನ್ನಣೆಯ ಪಟ್ಟವೂ ಕಟ್ಟಲ್ಪಟ್ಟಿತು. ಆದರೆ ತ್ರಿಪುರಿಯ ಅಧಿವೇಶನವು ಅವರ ಕೀರ್ತಿಗೆ ಕಳಂಕವನ್ನು ತಂದಿತು; ಭಾರತದ ರಾಜಕೀಯದಲ್ಲಿ ಅವರದು ಒಂದು ವಿರುದ್ಧಮಾರ್ಗವಾಗಿ ಬಿಟ್ಟಿತು. ಆ ಮೇಲೆ ಅವರು ತಲೆಯೆತ್ತಲಿಲ್ಲ. ಆದರೂ ಅವರ ಅದ್ಭುತ ವ್ಯಕ್ತಿತ್ವದಿಂದ ಬೆರಗುಗೊಂಡ ಜನತೆ ಅವರು ಸೆರೆವಾಸದಿಂದ ಬರುವಾಗ ಸ್ವಾಗತಕ್ಕೆ ಕಾದಿತ್ತು. ಆದರೆ ಇಂಥ ಅವರು ಅದೃಶ್ಯರಾಗಿ ಹಲವು ವಿಧದ ಊಹಾಪೋಹನೆಗಳಿಗೆ ಗುರಿಯಾಗಿರುವ ನಿಮಿತ್ತ ದೇಶಕ್ಕೆ ದೇಶವೇ ದುಃಖಸಾಗರದಲ್ಲಿ ಅದ್ದಿದೆ!

ಸುಬಾಸ ಬಾಬುಗಳದು ಖಂಡತುಂಡ ಮಾತು; ಯಾರಿಗೂ ತಲೆಬಗ್ಗಿಸುವಂತಿಲ್ಲ; ಮಂದಪಕ್ಷವು ಅವರಿಗೆ ಸಹಿಸದು; ಅವರ ಇಡಿಯ ಜೀವನವೂ ಕ್ರಾಂತಿಯ ಇತಿಹಾಸವೇ ಆಗಿದೆ. ವಿದ್ಯಾರ್ಥಿಯಾಗಿದ್ದಾಗಲೇ ತನ್ನ ಈ ಸ್ವಭಾವ ಗುಣವನ್ನು ಅವರು ಚನ್ನಾಗಿ ಸ್ಪಷ್ಟಪಡಿಸಿದರು. ವಿದ್ಯಾರ್ಥಿಗಳ ಮುಷ್ಕರದಲ್ಲಿ ಮುಂದಾಳುವಾದರು. ಭಾರತೀಯರನ್ನು ಅಗೌರವಗೊಳಿಸಿದನೆಂದು ತಮ್ಮ ಆಂಗ್ಲೇಯ ಪ್ರೊಫೆಸರರೊಬ್ಬರಿಗೇ ಕೆನ್ನೆ ಸೇರಿಸಲು ಹೋಗಿದ್ದರು. ಅದಕ್ಕಿಂತಲೂ ಹಿಂದೆಯೇ ಒಮ್ಮೆ ಮನೆಯ ಮಂದಿ ಬಂಧು ಬಾಂಧವರನ್ನೆಲ್ಲಾ ತೊರೆದು ಸನ್ಯಾಸಿಯಾಗಿ ಮುಕ್ತಿಮಾರ್ಗದಲ್ಲಿ ಹೊರಟಿದ್ದರು—ಮತ್ತೆ ಐ. ಸಿ. ಎಸ್. ಕಲಿತು ಬಂದು ಸ್ವಲ್ಪವೇ ಸಮಯದಲ್ಲಿ ಕೆಲಸ ನೋಡದೆ, ನಾಳೆಯ ವಿಚಾರವೇನೆಂಬುದನ್ನೇನೂ ಮಾಡದೆ ಅದಕ್ಕೆ ರಾಜೀನಾಮೆ ಬರೆದು ಕೊಟ್ಟುಬಂದರು. ಆ ಮೇಲೆ ಸೆರೆಮನೆಯೊಳಗೆ ಸೇರುತ್ತಿದ್ದು ಭಯಂಕರ ರೋಗವಾದ ಕ್ಷಯರೋಗದ ಕಂಗಾಲಾದರು. ಆದರೂ ತಿರುಗಿ ಹೋರಾಟ ಹೂಡಿ, ಸರಕಾರದೊಡನೆಯೇ ಕಾದಾಡಿ ಕದನಕಲಿಗಳಾಗಿ ಮೆರೆದರು.

ಒಂದು ರೀತಿಯಿಂದ ವಿಚಾರಿಸಿದರೆ ಬೋಸರು ಪಟವಾರಿಧೀಶನಬಹುದು. ಆದರೆ ಘಟವೇಳುವದೂ ಉದಾತ್ತವಾಗಿದ್ದರೆ ಅದೇ ಮುಕಿದ ಶಕ್ತಿಯಾಗುತ್ತದೆ. ಇಂತಹ ಪಟವಾರಿತನವನ್ನು ಬೋಸರಲ್ಲಿ ನಾವು ಕಾಣಬಹುದಾಗಿತ್ತು.

ಕಲ್ಕತ್ತದಲ್ಲಿ ಇಂದು ಅವರ ಸೋದರರಾದ ಸರತ್ ಬೋಸರು ಹೇಗೆ ಪ್ರಸಿದ್ಧ ವಕೀಲರಾಗಿದ್ದಾರೋ ಅದೇ ತೆರದಲಿ ಅವರ ತಂದೆ ಜಾನಕೀನಾಥ ಬೋಸರೂ ಕಟಕ್ಕಿನ ಒಬ್ಬ ಪ್ರಮುಖ ವಕೀಲರಾಗಿ ಧನಮಾನಗಳನ್ನು ಗಳಿಸಿದ್ದರು. ತಾಯಿಯಲ್ಲಿದ್ದ ಅಚಲ ಧಾರ್ಮಿಕ ಭಕ್ತಿಯು ಮಗುವಿದ್ದಾಗಲೇ ಸುಭಾಸ ಬೋಸರ ಜೀವನದಲ್ಲಿ ಹೆಚ್ಚಿನ ಪ್ರಭಾವವನ್ನು ಬೀರಿತು. ಮತ್ತೆ ವಿದ್ಯಾರ್ಥಿ ದೆಸೆಯಲಿ ಅವರು ರಾಮಕೃಷ್ಣ ಪರಮಹಂಸ, ವಿವೇಕಾನಂದ ಇವರ ಜೀವನ ಬೋಧನೆಗಳನ್ನು ಅಭ್ಯಸಿಸಿದಾಗ ಅವರಲ್ಲಿದ್ದ ಆಧ್ಯಾತ್ಮಿಕ ಬುದ್ಧಿಯು ಮತ್ತಷ್ಟು ಪ್ರಕಾಶಿತವಾಯಿತು.

ಬೋಸರು ಜೀವನದ ನಿಸ್ಸಾರತೆಯನ್ನು ಮನಗಂಡು ತನ್ನ ಬಾಲ್ಯಕಾಲದಲ್ಲಿಯೇ ಹಿಮ್ಮೆ ವಿರಕ್ತ ಸನ್ಯಾಸಿಯಾಗಿ ಹಿಮಾಲಯ ಕಡೆಗೆ ತೆರಳಿದ್ದರು.

ಸುಬಾಸರು ನಿರ್ಧಾರಪೂರ್ವಕವಾಗಿ ಸನ್ಯಾಸಿಯಾಗಲು ನಿಶ್ಚಯಿಸಿದ್ದರು. ೧೯ನೆಯ ಇಸವಿಯಲ್ಲಿ ಒಂದು ರಾತ್ರಿಯಲ್ಲಿ ಒಬ್ಬರೇ ಮನೆಯಿಂದ ಹೊರಬಿದ್ದರು. ಸುಖಭೋಗಗಳನ್ನು ತೊರೆದು ಉದಾತ್ತ ತತ್ವಾನ್ವೇಷಣಕ್ಕಾಗಿ ಗೃಹತ್ಯಾಗ ಮಾಡಿದ ಬುದ್ಧನ ಆದರ್ಶ ಅವರ ಕಣ್ಣ



ಮುಂದಿತ್ತು; ತನಗಾದರೂ ಅಂತಹ ತತ್ತ್ವೋಪದೇಶ ಕೊಡಬಲ್ಲ ಮನಸ್ಸಿನ ಸಂದೇಹ ಸಾವಿರಗಳನ್ನು ಕಳೆಯಬಲ್ಲ ಗುರುವೊಬ್ಬನು ದೊರಕಬೇಕೆಂದು ಅದಕ್ಕಾಗಿ ಅಲೆದಾಡಿದರು. ಬದಾ ಹಿರಲಾಲರು ವಿದ್ಯಾರ್ಥಿಯಾಗಿದ್ದು ವಿಜ್ಞಾನ, ಪ್ರಾಣಿಶಾಸ್ತ್ರ, ಸಾಹಿತ್ಯಗಳನ್ನು ಅಭ್ಯಾಸ ಮಾಡುತ್ತಾ ಹುಡುಗಾಟ ಮಾಡುತ್ತಿದ್ದಾಗ, ಬೋಸರು ಸಂಸಾರವನ್ನು ತೊರೆದು ಮೋಕ್ಷವನ್ನು ಪಡೆವ ಕೊನೆಯ ನಿರ್ಧಾರಕ್ಕೆ ಬಂದಿದ್ದರು!

ಹಿಮಾಲಯದಲ್ಲಿ ಹೀಗೆ ಅಲೆದಾಡಿದ ಸುಭಾಸರು ಕೊನೆಗೆ ನಿರಾಶರಾದರು. ಅವರು ದರ್ಶನಮಾಡಿದ ಯಾವನೇ ಒಬ್ಬ ಸಾಧುವಿಗೂ ಧ್ಯಾನಜ್ಞಾನ ಇರಲಿಲ್ಲ. ಮತ್ತೆ ಅವರು ಗಂಗಾನದಿಯ ತಡಿಯಲ್ಲಿ ನಗರ ಗ್ರಾಮಗಳನ್ನು ದಾಟುತ್ತಾ ಸಂಚರಿಸತೊಡಗಿದರು. ಮಥುರೆಯಿಂದ ಬೃಂದಾವನ, ಕಾಶಿಯಿಂದ ಗಯಾ—ಹೀಗೆ ಅಲೆದಾಟ ಮಾಡುತ್ತಿರುವಾಗ ದೇಹದಲ್ಲೂ ಮನದಲ್ಲೂ ಉಭಯ ರೀತಿಯಲ್ಲಿಯೂ ಅಶಾಂತಿ ನೆಲಸಲು, ಅವರ ಆರೋಗ್ಯ ಬಹಳ ಕೆಟ್ಟಿತು; ಬೇನೆಬಿದ್ದರು. ಒಬ್ಬ ಕರುಣಾಳುವು ಆ ಸುದ್ದಿಯನ್ನು ಅಲ್ಲಿಂದ ಅವರ ತಂದೆಗೆ ತಿಳಿಸಿದರು; ಗಾಬರಿಗೊಂಡ ಮತ್ತು ಉದ್ವೇಗಗೊಂಡ ಅವರ ಕೌಟುಂಬಿಕರು ಈ ವಾರ್ತೆ ಕೇಳಿ ಸ್ವಲ್ಪವೂ ತಡಮಾಡದೆ ಸುಬಾಸರನ್ನು ಮನೆಗೆ ಕರೆತಂದರು. ಬೋಸರು ಮತ್ತೆ ಹಿಂದಿನ ದಾರಿಯೇ ಹಿಡಿದು ವಿದ್ಯಾಭ್ಯಾಸ ಮುಗಿಸಿದರು.

ಅಸಹಕಾರ ಚಳವಳದ ಕಾಲದಲ್ಲಿ ಬೋಸರು ಇಂಡಿಯನ್ ಸಿವಿಲ್ ಸರ್ವಿಸಿನಲ್ಲಿದ್ದರು. ವಿದೇಶದಿಂದ ಸ್ವದೇಶಕ್ಕೆ ಮರಳಿ ಬಂದವರು ಭಾರತದಲ್ಲಿ ಪ್ರಚಂಡವಾಗಿ ನಡೆಯುತ್ತಿರುವ ಅಸಹಕಾರಚಳವಳದ ತೀವ್ರ ಗತಿಯನ್ನು ಕಂಡರು. ೧೮೫೭ರ ಕ್ರಾಂತಿಯ ಅನಂತರ ಜನತೆಯ ಭಾವನೆಯನ್ನು ಅಸಹಕಾರದಷ್ಟು ಕೆರಳಿಸಿದ ಘಟನೆ ಬೇರೆ ಆಗಿಲ್ಲ. ವಕೀಲರು ಕೋರ್ಟಿಗೆ ಹೋಗಬಾರದೆಂದೂ, ಪದವಿಪಡೆದವರು ಅದನ್ನು ತಿರಸ್ಕರಿಸಬೇಕೆಂದೂ ವಿದ್ಯಾರ್ಥಿಗಳು ಸರಕಾರದ ಶಾಲೆಗಳಿಂದ ಹೊರಬರಬೇಕೆಂದೂ, ಸರಕಾರದ ಕೆಲಸಕ್ಕೆ ರಾಜೀ ಕೊಡಬೇಕೆಂದೂ ಗಾಂಧಿಜಿ ಬಿನ್ನಹಮಾಡಿತು. ಠಾಗೋರರು ತನ್ನ ಸರ್ ಪದವಿಯನ್ನು ತ್ಯಜಿಸಿದರು. ರಾಜಾಜಿ ತನ್ನ ಬಹಳ ಸಂಪಾದನೆಯ ಕೀರ್ತಿಯ ವಕಾಲತ್ತನ್ನು ಬಿಟ್ಟರು. ಸಾವಿರಾರು ಮಂದಿ ವಿದ್ಯಾರ್ಥಿಗಳು ಶಾಲೆ ಕಾಲೇಜುಗಳಿಂದ ಹೊರಟರು. ಸುಬಾಸರಿಗೆ ಮತ್ತೆ ಕೆಲಸದಲ್ಲಿ ಇರುವುದು ಸಾಧ್ಯವಾಗಲಿಲ್ಲ: ಗಾಂಧಿಜಿ ಸರಕಾರದ ಕೆಲಸವು ರಾಕ್ಷಸೀ ಕಾರ್ಯವೆಂದು ಘಂಡಿಸಿಬಿಟ್ಟ ಮೇಲೆ ಅವರು ಹೇಗೆ ಅದರಲ್ಲಿ ಇರಬಲ್ಲವರು? ಬಂಧುಗಳ, ಸ್ನೇಹಿತರ ವಚನಗಳನ್ನು ಕೇಳದೆ ಕೂಡಲೇ ಐ. ಸಿ. ಎಸ್.ಗೆ ರಾಜೀನಾಮೆ ಕೊಟ್ಟುಬಿಟ್ಟರು!

ಬೋಸರನ್ನು ಗತಿಸಿದ ದೇಶಬಂಧು ದಾಸರು ಬಹಳವಾಗಿ ಪ್ರೀತಿಸುತ್ತಿದ್ದರು. ಬಲವಂತವಾದ ಬ್ರಿಟಿಷ್ ಸರಕಾರವನ್ನಾದರೂ ತನ್ನ ಧೈರ್ಯಶಕ್ತಿಯಿಂದ ಎದುರಿಸಿದ ಧೈರ್ಯಶಾಲಿ ಬೋಸರು, ದೇಶಬಂಧು ದಾಸರು ಕೀರ್ತಿಶೇಷರಾದರೆಂಬ ಸುದ್ದಿಯನ್ನು ಸೆರೆಮನೆಯಲ್ಲಿ ಕೇಳಿ ಸಣ್ಣ ಮಗುವಿನಂತೆ ಅತ್ತುಬಿಟ್ಟಿದ್ದರು.

ಬೋಸರು ದೇಶಬಂಧು ದಾಸರ ಹೇಳಿಕೆಯಂತೆ ನೇಶನಲ್ ಕಾಲೇಜಿನಲ್ಲಿ (ಐ. ಸಿ. ಎಸ್.ಗೆ ರಾಜೀನಾಮೆ ಕೊಟ್ಟ ಅನಂತರ) ಪ್ರಿನ್ಸಿಪಾಲರಾಗಿದ್ದರು. ದೇಶಬಂಧು ದಾಸರು ಹೋದ ಹಜ್ಜೆಯಲ್ಲಿ ಬೋಸರು ತಪ್ಪದೆ ಮುನ್ನಡೆದು ಅವರಿಗೆ ಬಲಗೈ ಬಂಟನಾಗಿದ್ದರು.

ದೇಶಬಂಧು ದಾಸರೊಬ್ಬರನಲ್ಲದೆ, ತನ್ನ ಇಡೀ ಜೀವನದಲ್ಲಿ ಬೋಸರು ಇನ್ನೊಬ್ಬರ ರಾಜಕೀಯ ಅಭಿಪ್ರಾಯಕ್ಕೆ ಬೇರೆ ಯಾರಿಗೂ ತಲೆಬಗ್ಗಿಸಿದ್ದಿಲ್ಲ. ಅಲ್ಲಿಂದ ಮೊದಲುಗೊಂಡು ಬೋಸರು ಒಬ್ಬ ಪ್ರಮುಖ ಸ್ವತಂತ್ರ ಹಾದಿಯ ವ್ಯಕ್ತಿಯಾಗಿ ಮೆರೆದರು. ಅದರ ಸಲುವಾಗಿಯೇ ಅವರು ಅನೇಕ ವಿಪತ್ತುಗಳನ್ನೂ ಎದುರಿಸಬೇಕಾಯಿತು. ದೇಶಬಂಧು ದಾಸರ ಅನಂತರ ಬಂಗಾಳದಲ್ಲಿ, ಗತಿಸಿದ ಸೇನಗುಪ್ತರೊಡನೆ ಅವರಿಗಿದ್ದ ಅಭಿಪ್ರಾಯ ವ್ಯತ್ಯಾಸದಿಂದ ಹೀಗೆ ಕಾಲ್ಪ ಅವರೊಬ್ಬರು ಹೋರಾಡಬೇಕಾಯಿತು. ಆದರೆ ಇತ್ತೀಚೆಗೆ, ಅವರಿಗೆ ಅಂದು ವಿರೋಧವಿದ್ದ ಸೇನಗುಪ್ತ ಪಕ್ಷದವರು ಬೋಸರ ಪ್ರಭಾವಕ್ಕೆ ಒಲಿದಿದ್ದರೆಂಬುದು ಹೆಮ್ಮೆಯ ಮಾತಾಗಿದೆ.

ಸಾರ್ವಜನಿಕ ಕೆಲಸವೇ ಅವರ ಜೀವನ ಸರ್ವಸ್ವ. ಅನೇಕ ವರ್ಷ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿದ್ದರು. ಮತ್ತೆ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧ್ಯಕ್ಷರಾಗಿದ್ದರು. ಅಖಿಲ ಭಾರತ ಕಾಂಗ್ರೆಸಿಗೆ ಎರಡು ಸಲ ಆರಿಸಲ್ಪಟ್ಟ ಅಧ್ಯಕ್ಷರಿವರು!

ಯೂರೋಪಿಗೆ ತೆರಳಿ ಅವರು ವಿಶಾಲ ವಿಶ್ವದ ಅನುಭವ ಮಾಡಿಕೊಂಡವರು. ಕೊನೆಗೆ ಅವರ ನಿರ್ಧಾರವು ಸಮತಾವಾದದ ಕಡೆಗೇ ಹರಿದಿತ್ತು. ಆಗಾಗ ಸೆರೆಮನೆಗೆ ಹೋಗುವ ದುರ್ಘಟನೆಗಳಿಂದ ಅವರ ಆರೋಗ್ಯವು ಬಹಳ ಮಟ್ಟಿಗೆ ಹಾಳಾಗಿ ಹೋಗಿತ್ತು!

ಸಂಘಟನಾಶಕ್ತಿ ಬೋಸರಲ್ಲಿ ಬಹಳವಾಗಿತ್ತು. ಅಂತೆಯೇ ತೀಕ್ಷ್ಣ ಭಾಷಣಗಳಿಂದಲೂ ಅವರು ಜನತೆಯನ್ನು ಸ್ವಾಧೀನಪಡಿಸುವ ಪ್ರಭಾವಶಾಲಿಗಳಾಗಿದ್ದರು. ಅವರು ಅಪ್ರತಿಮ ಕದನಕಲಿಗಳಾಗಿದ್ದರು.

ತ್ರಿಪುರಿಯ ಅಧಿವೇಶನವು ಅವರ ಅಭ್ಯುದಯಕ್ಕೆ ತಡೆಯಾಯಿತು! ಅಪಕಾರಿಯಾಯಿತೆಂಬುದು ಬಹಳ ವಾದದ ವಿಚಾರ. ಆದರೆ ಕಾಂಗ್ರೆಸ್ ಅಧ್ಯಕ್ಷಪಟ್ಟಕ್ಕೆ ರಾಜೀನಾಮೆ ಕೊಟ್ಟವರೇ ಹೊಸ ಫಾರ್ವರ್ಡ್ ಬ್ಲಾಕ್ ವೊಂದನ್ನು ಸ್ಥಾಪಿಸಿ ತನ್ನ ಅಭಿಮತವನ್ನು ಸಾರಿದರು. ಕಾಂಗ್ರೆಸಿನ ಬಲಪಕ್ಷದಿಂದ ಬೇರಾಗಿ ತನ್ನ ಹಠವನ್ನು ಮೆರೆಸಿದರು. ಸುಬಾಸರ ಪಕ್ಷವು ಒಂದು ರೀತಿಯಿಂದ ಅವರೊಬ್ಬರ ಅಸಮಾಧಾನದಿಂದ ಸ್ಥಾಪಿತವಾಯಿತು. ಅದರ ವಿಚಾರವು ಹೇಗಿದ್ದರೂ ಅವರಿಂದ ದೇಶವು ಬಹಳವಾದ ಸೇವೆಯನ್ನು ಹಾರೈಸಿತ್ತು; ಏನೆಂದರೆ ಅವರ ಜೀವವು ಭಾರತ ದೇಶಕ್ಕೆ ಅಮೂಲ್ಯವಾದೊಂದು ಸೊತ್ತು; ಇಂದು ಅಕಸ್ಮಾತ್ ಅದೃಶ್ಯರಾಗಿ ಅವರು ದೇಶಬಾಂಧವರೆಲ್ಲರನ್ನೂ ಚಿಂತಾಮಗ್ನರನ್ನಾಗಿ ಮಾಡಿದ್ದಾರೆ.

K. K. Ra

ನಿಮ್ಮ ವ್ಯಾಪಾರ ಅಭಿವೃದ್ಧಿಯಾ
ಬೇಕಾದರೆ ಇಂದೇ
ಸ್ವದೇಶಾಭಿಮಾನಿಗೆ
ಚಂದಾದಾರರಾಗಿ

★ ಸಿನೇಮಾ ಪುಟ ★

ದಿ ಗ್ರೇಟ್ ಡಿಕ್ಟೇಟರ್ ಚಿತ್ರವನ್ನು ಚಾಪ್ಲಿನನು ಯಾಕೆ ತಯಾರಿಸಿದನು!

ಅವನೇ ಹೀಗನ್ನುತ್ತಾನೆ

ನನಗೆ ಬಹಳ ಕುತೂಹಲದ ಒಂದು ವಿಷಯವೆಂದರೆ, ದೊಡ್ಡ ಮನುಷ್ಯರೆಂಬವರನ್ನು ವ್ಯಂಗರೂಪದಿಂದ ವಿಡಂಬಿಸುವುದು. ಈಗ ಲೋಕದಲ್ಲಿರುವ ದೊಡ್ಡ ಮನುಷ್ಯರೆಂಬವರಲ್ಲಿ ಹಿಟ್ಲರನೇ ಪ್ರಮುಖನು. ಆತನಲ್ಲಿ ವಿಡಂಬಿಸಬೇಕಾದ ಹಲವು ಗುಣಗಳಿವೆ. ಹಾಗಾಗಿ ನಾನು ಆತನ ವಿಡಂಬನೆಯಾದ 'ದಿ ಗ್ರೇಟ್ ಡಿಕ್ಟೇಟರ್' ಚಿತ್ರವನ್ನು ತಯಾರಿಸಿದೆ.

ಕೆಲವರು ಹೇಳುತ್ತಾರೆ, ನಾನು ಈ ಚಿತ್ರವನ್ನು ಮಾಡಿದ್ದು ಪ್ರಚಾರಕಾರ್ಯಕ್ಕಾಗಿ ಎಂದು. ಇದು ಸರ್ವಥಾ ಸತ್ಯವಲ್ಲ. ನಾನು ಪ್ರಚಾರ ಮಾಡುವುದರಲ್ಲಿ ಅಷ್ಟೇನೂ ಕುತೂಹಲಗೊಂಡವನಲ್ಲ. ಹಲವು ಪ್ರಚಾರಕಾರ್ಯಕ್ಕೆಂದು ಮಾಡಿದ ಚಿತ್ರಗಳೂ ಬಹಳ ಬೇಸರವನ್ನೇ ತರುತ್ತವೆ. ನಾನು 'ಡಿಕ್ಟೇಟರ್' ಜಾತಿಯನ್ನು ದ್ವೇಷಿಸುತ್ತೇನೆ; ಅದಕ್ಕಾಗಿ ಅವರನ್ನು ವಿಡಂಬಿಸಿದೆ; ಅದರಿಂದ ಜನರು ನಗಾಡುವಂತೆ ಆಗಬೇಕೆಂಬುದು ನನ್ನ ಇಷ್ಟ. ನಾನು ರಾಜಕೀಯದಲ್ಲಿ ಇಲ್ಲ. ಯಾವ ರೀತಿ ಸರಕಾರವಿರಬೇಕೆಂಬ ಕುರಿತೂ ನಾನು ವಿಚಾರ ಮಾಡುತ್ತಿಲ್ಲ. ಆದರೆ ಒಬ್ಬ ಮದಾಂಧನು ತನ್ನ ಸುತ್ತಲಿನ ಹಲವಾರು ದೀನ ದಲಿತರನ್ನು ತನ್ನ ಕಾಲ ಕೆಳಗೆ ಹಾಕಿ ತುಳಿಯುವುದನ್ನು ಕಂಡರೆ ನನಗಾಗದು.

ನಾನು ಈ ಚಿತ್ರ ಮಾಡಿದಾಗ ಅದು ಜರ್ಮನಿಯಲ್ಲಿ ಪ್ರದರ್ಶಿತವಾಗುವುದೆಂದು ನಂಬಿರಲಿಲ್ಲ. ಜರ್ಮನಿಯ ಅಧಿಕಾರಿಯೇ ನನ್ನೀ ಚಿತ್ರವನ್ನು ಖಂಡಿಸಿ ಬೆದರಿಕೆಯ ಮಾತುಗಳನ್ನು ಬರೆದಿದ್ದನು. ಆದರೆ ಮುಂದೆ ಸರ್ವಾಧಿಕಾರಿಗಳ ರಾಜ್ಯದಲ್ಲಿ ಇದು ಪ್ರದರ್ಶಿತವಾಗಬಹುದೆಂಬ ಭರವಸೆ ನನಗೆ ಇದೆ. ಈ ಚಿತ್ರದ ಪ್ರಿಂಟುಗಳನ್ನು ನಾನು ಸರ್ವಾಧಿಕಾರಿಗಳ ರಾಜ್ಯದಲ್ಲಿ ಪ್ರದರ್ಶಿಸಲು ಧರ್ಮಾರ್ಥವಾಗಿ ಹಂಚಲು ಸಿದ್ಧನಿದ್ದೇನೆ.

ಈ ಚಿತ್ರವು ನನಗೆ ಅಷ್ಟೇನೂ ಮಹತ್ವದಲ್ಲ; ನನ್ನ ಚಲಚ್ಚಿತ್ರ ಜೀವನಕ್ಕೆ ಮಹತ್ವವೇನಾದರೂ ಬರಬಹುದೆಂದೇನೂ ನನಗೆ ಅನಿಸುವುದಿಲ್ಲ. ಇದರಲ್ಲಿರುವ ಹಲವು ಪಾತ್ರಗಳನ್ನು ನಮ್ಮ ಇಂದಿನ ಪ್ರಸಿದ್ಧ ರಾಜಕಾರಣ ಪುರುಷರ ವಿಡಂಬನೆಗಳಾಗಿ ಕಾಣಬಹುದಾದರೂ ಅವರ ಕುಟುಂಬಕ್ಕೆ ಅಂತಹ ಸ್ಪರ್ಶವು ಇದರಲ್ಲಿ ಇರುವುದಿಲ್ಲ.

ಇದಕ್ಕಾಗಿ ಆ ಅಮಿತ ವೆಚ್ಚವು ಹೇಗೆ ಬರಬಹುದೆಂಬ ವಿಷಯವೂ ನನಗೆ ಚೆನ್ನಾಗಿ ತಿಳಿಯುವುದಿಲ್ಲ. ಆದರೆ ಹಾಸ್ಯವಿಲ್ಲದ ಲೋಕದಲ್ಲಿ ಜೀವಿಸಲು ಸಾಧ್ಯವಿಲ್ಲ. ಅದಕ್ಕಾಗಿ ಈ ಸರ್ವಾಧಿಕಾರಿಗಳನ್ನು ವಿಡಂಬಿಸಿ ನಾನು ಈ ಚಿತ್ರ ಮಾಡಿದೆನು.

ಪಡೋಶಿ ಮತ್ತು ಶೇಜಾರಿ

ಶಾಂತಾರಾಮರ ಈ ಎರಡು ಚಿತ್ರಗಳು ಈಗ ಬೊಂಬಾಯಿಯಲ್ಲಿ ದೀರ್ಘಕಾಲ ನಡೆಯುತ್ತಿವೆ. 'ಅನ್ ಎಕ್ಸ್‌ಪೆಕ್ಟೆಡ್' ಮತ್ತು 'ಆದ್ಮಿ' ಚಿತ್ರಗಳಲ್ಲಿ ನಿರ್ದೇಶಕ ಶಾಂತಾರಾಮರು ತೋರಿಸಿದ ಜಾಣ್ಮೆಯನ್ನು ಮೀರಿ ಈ ಚಿತ್ರಗಳು ಮೆರೆದಿವೆ. 'ಪಡೋಶಿ'ಯ ಸಂಗೀತವೂ ಅತ್ಯುತ್ತಮವೆಂದು ಕೊಂಡಾಡಲಾಗಿದೆ. ಶ್ರೀ ಅವಧೂತ ಮತ್ತು ಪ್ರಲ್ಹಾದ ದತ್ತರ ಫೋಟೋಗ್ರಫಿಯೂ ಪ್ರಶಂಸನೀಯವಾಗಿದೆ. ದಿಲ್ಲಿ, ಲಾಹೋರ್ ಮತ್ತು ಅನೇಕ ಪ್ರಸಿದ್ಧ ನಗರಗಳಲ್ಲಿ ಆ ಚಿತ್ರಗಳು ಬೇಗನೇ ಪ್ರದರ್ಶಿತವಾಗಲಿವೆ.

ಸಂತಸಖುವಿನ ಪಾತ್ರದಲ್ಲಿ ಹಂಸಾವಾಡಕರ್

ಪ್ರಭಾತದ ಮುಂದಿನ ಭಕ್ತಿ ಚಿತ್ರವಾದ 'ಸಂತಸಖು'ವಿನಲ್ಲಿ ಹಂಸಾವಾಡಕರ್ ಸಖುವಿನ ಪಾತ್ರವಹಿಸುವಳಾಗಿ ಈಗ ನಿಶ್ಚಯ ಮಾಡಲಾಗಿದೆ. ತುಕಾರಾಮನ ಹೆಂಡತಿಯ ಅಭಿನಯದ ಗೌರಿಯು ಸಖುವಿನ ಅತ್ತೆಯ ಪಾತ್ರಾಭಿನಯ ಮಾಡುವಳು. ಶಂಕರ ಕುಲಕರ್ಣಿ, ಸುಮಿತ್ರ ಮತ್ತು ಅನೇಕ ಪ್ರಸಿದ್ಧ ನಟರು ಇದರಲ್ಲಿ ನಟಿಸುವರು. ಹಿಂದಿ ಮತ್ತು ಮರಾಠಿ ಈ ಉಭಯ ಭಾಷೆಗಳ ಚಿತ್ರಗಳಲ್ಲಿಯೂ ಪಾತ್ರಗಳನ್ನು ವಹಿಸುವವರು ಎಲ್ಲರೂ ಸಮಾನರೇ ಆಗಿರುವರು. ಕಲಾನಿರ್ದೇಶಕರಾದ ಫಾತೇಲಾಲರು ಸಖುವಿನ ಮನೆಯ ಒಳಭಾಗದ ಒಂದು ಅತ್ಯುತ್ತಮ ನೋಟವನ್ನು ತಯಾರಿಸುತ್ತಾರೆ.

'ಸುಭದ್ರಾ'

ಕನ್ನಡ ಚಿತ್ರ

ಗುಬ್ಬಿ ಬಾಲಾಜಿ ಫಿಲ್ಮ್ಸಿನವರು 'ಸುಭದ್ರಾ' ಎಂಬ ಕನ್ನಡ ಚಿತ್ರವೊಂದನ್ನು ತಯಾರಿಸುತ್ತಾರೆ. ಜಯಮ್ಮ, ರಮಾದೇವಿ, ಹೊನ್ನಪ್ಪ ಭಾಗವತ್, ವಾಸುದೇವರಾವ್, ವೀರಣ್ಣ ಇವರು ನಟಿಸುವರು. ದೇವೇಂದ್ರಪ್ಪನವರ ಸಂಗೀತ ನಿರ್ದೇಶಕತ್ವ. ಶ್ರೀ. ಪುಲ್ಲಯ್ಯನವರು ನಿರ್ದೇಶಕರು. ಕಥಾಲೇಖಕರು ಪುಟ್ಟಸ್ವಾಮಯ್ಯ. ಸಂಗೀತ ಲೇಖಕರು ಬೆಳ್ಳಾವೆ ನರಹರಿ ಶಾಸ್ತ್ರಿ.

ಮಜಾರ್ ಖಾನ್

ಇವರು ಸಿಕೆರ್ಜೀ ಕಂಪೆನಿಯಿಂದ ಹೊರಬಂದಿದ್ದಾರೆ. ಪ್ರಭಾತದವರು ತಯಾರಿಸುವ 'ರಾಮಶಾಸ್ತ್ರಿ' ಚಿತ್ರದಲ್ಲಿ ಮುಂದೆ ಅವರು ಪಾತ್ರವಹಿಸುವರಾಗಿ ಸುದ್ದಿ.

ನಾವೆಲ್ಲರೂ ಅದನ್ನು
ಉಪಯೋಗಿಸುತ್ತಿದ್ದೇವೆ!

ಅಜ್ಜಿಯಿಂದ ಹಿಡಿದು ಸಣ್ಣ ಮಗುವಿನ ತನಕ ಕುಟುಂಬದ ಸಮಸ್ತರಿಗೂ ತಮ್ಮ ಮೈಯ ಚರ್ಮವನ್ನು ಅಂದವಾಗಿರಿಸಲು ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಅಗತ್ಯವಾಗಿದೆ. ಕುಟಿಕೂರಾ ಟಾಲ್ಕಮ್ (Cuticura Talcum) ಚರ್ಮವನ್ನು ತಂಪಾಗಿರಿಸಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ. ಇದಕ್ಕೆ ಇದರ ಔಷಧಿಯುಕ್ತವಾದ ಗುಣವೇ ಕಾರಣವಾಗಿರುತ್ತದೆ. ಮೈಗೆ ತುರಿಗಜ್ಜಿಗಳುಂಟಾದಲ್ಲಿ ಇದು ಕೂಡಲೇ ಗುಣಪಡಿಸಿ ತಂಪಾಗಿರಿಸುತ್ತದೆ ಮಾತ್ರವಲ್ಲದೆ ಬೆವರನ್ನು ಹೀರುವ ಗುಣವುಳ್ಳದ್ದಾಗಿರುತ್ತದೆ. ಸಣ್ಣ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡ ಡಾಕ್ಟರರು ಇದನ್ನು ಶಿಫಾರಸು ಮಾಡುತ್ತಾರೆ. 'ಕುಟಿಕೂರಾ ಪೌಡರಿನ (Cuticura Talcum) ಸುಗಂಧಪೂರಿತ ಪರಿಮಳವು ಅನೇಕ ಗಂಟೆಗಳ ತನಕ ಬಾಳುವುದು.

ನಿಮ್ಮ ಅನುನಿತ್ಯದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನಕಾರಿಯೆಂದು ಕಂಡುಕೊಳ್ಳಿರಿ. ಇಂದೇ ಒಂದು ಟಿನ್ನನ್ನು ಕೊಂಡುಕೊಳ್ಳಿರಿ. ಮುಖಕ್ಷೌರದ ನಂತರ ಕುಟಿಕೂರಾ ಟಾಲ್ಕಮ್ (Cuticura Talcum) ಬಹಳ ಹರ್ಷದಾಯಕವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ಸಾಧನಾಬೋಸ್ ಬೆಂಗಳೂರಿಗೆ

ಸಾಧನಾಬೋಸಳು ನರ್ತನಯಾತ್ರೆಯಲ್ಲಿ ಬೆಂಗಳೂರಿಗೆ ಬರಲಿರುವಳೆಂದು ತಿಳಿದುಬರುತ್ತದೆ. ಈಕೆ ಸುಪ್ರಸಿದ್ಧ ನಟಿ ಮತ್ತು ನರ್ತಕಿ. ನಾಡಿಯಾ ಮುವಿಟೋನಿನವರ 'ರಾಜನರ್ತಕಿ' (ತ್ರಿಭಾಷಾಚಿತ್ರ)ಯಲ್ಲಿ ಅದ್ಭುತವಾಗಿ ನಟಿಸಿ ಜಗತ್ಪ್ರಸಿದ್ಧಿ ಪಡೆದಿರುವಳು. ಬರುವ ಎಪ್ರಿಲ್ ಕೊನೆಯಲ್ಲಿ ಆಕೆ ಬೆಂಗಳೂರಿಗೆ ಬರುವಳಂತೆ.

ಮೊದಲು ನೃತ್ಯದಲ್ಲಿ ಭಾಗಿಗಳು!

ಇಂದು ಆ ಜೀವ ಭಾಗಿಗಳಾದರು! ಚಂದ್ರಭಾಗ ಕೃಷ್ಣರ ದಾಂಪತ್ಯಾನುಕೂಲ

ಶ್ರೀ. ಪಡುಕೋಣೆ ರಮಾನಂದರ ಮತ್ತು ಶ್ರೀಮತಿ ಪಡುಕೋಣೆ ಸೀತಾಬಾಯಿ ಇವರ ಪುತ್ರಿ ಚಂದ್ರಭಾಗಾ ಇವರು ದಿವಾಂಗತ ಶ್ರೀ. ಶಿವರಾಂ ಬಿ. ಉಭಯಂತರ ಕುಮಾರ ಕೃಷ್ಣರಾಯರೊಡನೆ ವಿವಾಹಿತರಾದರೆಂದು ತಿಳಿಯುತ್ತೇವೆ. ಇಬ್ಬರೂ ನೃತ್ಯಕಲಾಕುಶಲರು. ನೃತ್ಯ ಕಲೆಯನ್ನು ಅಭ್ಯಾಸವಾಗಿಟ್ಟುಕೊಂಡ ಕಲಾರಸಿಕರು. ಇಬ್ಬರೂ ಬೆಂಗಳೂರ್ ಕಾಲೇಜಿನಲ್ಲಿರುವರು.

(ಚಿತ್ರ ಸಮಾಚಾರ)

ವಸಂತ ಸೇನೆ

ಕನ್ನಡ ಚಿತ್ರ

ಮೈಸೂರಿನ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯವರು ಈಗಾಗಲೇ ಭೂಕೈಲಾಸವನ್ನು ಚಲಚ್ಚಿತ್ರದಲ್ಲಿಯೂ ಅಭಿನಯಿಸಿ ಹೆಸರು ಪಡೆದಿರುವರು. ಈಗ ತಿರುಗಿ 'ವಸಂತ ಸೇನಾ' ಚಿತ್ರವನ್ನು ಕನ್ನಡದಲ್ಲಿ ತಯಾರಿಸುವರೆಂದು ತಿಳಿದಿದೆ, ಇವರು 'ಭಕ್ತ' ಎಂಬ ತಮಿಳು ಚಿತ್ರವನ್ನೂ ಅಭಿನಯಿಸಿರುವರು.

HALFTONE & LINE BLOCK MAKING UNDERTAKEN
Sharada Press, MANGALORE

ಧಾರ್ಮಿಕ ವಿಚಾರ:

ದೀನಬಂಧುಗಳೇ

ದೇವರ ಅವತಾರ

ಕ್ರೈಸ್ತ-ಬುದ್ಧರ ಪ್ರತಿಮೂರ್ತಿ ಗಾಂಧಿಜಿ

ರಶ್ಯದಲ್ಲಿ ಸ್ಟಾಲಿನನೇ ದೇವರು

— ಬ್ರಿಟಿಷ್ ಗ್ರಂಥಕರ್ತರ ಅಭಿಪ್ರಾಯ —

೧೯೩೦ನೇ ಇಸವಿಯಲ್ಲಿ ಆರಂಭವಾದ ಸಾಮುದಾಯಿಕ ಕಾಯಿದೆಭಂಗದ ಆ ಮಹತ್ವದ ದಿನಗಳನ್ನು ನೋಡಿದವರಿಗೆ ರಿಜಿನಾಲ್ಡ ರಿನೋಲ್ಡ್ಸ ಎಂಬ ಆಂಗ್ಲ ಮಹನೀಯರ ನೆನಪು ಬರುವದು. ಸ್ಕೊಟ್ಲೆಂಡಿನ ಈ ಮಹನೀಯರು ಮಹಾತ್ಮಾ ಗಾಂಧಿಯವರ ಶಿಷ್ಯರು. ಅವರೇ ಗಾಂಧಿಯವರ ಕೊನೆಯ ಮಾತನ್ನು ಆಗ ವ್ಹಾಯ್ಸರಾಯರಾಗಿದ್ದ ಲೋರ್ಡ್ ಇರ್ವಿನರಿಗೆ ತಿಳಿಸಿದ್ದರು. ಮತ್ತು ಅವರು ಅದನ್ನು ಅಲಕ್ಷಿಸಿದ್ದರಿಂದಲೇ ಆ ವರ್ಷದ ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಕರ ನಿರಾಕರಣ ಸತ್ಯಾಗ್ರಹ ಮೊದಲಾದುವು ಪ್ರಚಂಡವಾಗಿ ನಡೆದು ಲಕ್ಷಾಂತರ ಜನರು ಜೈಲು ಪಾಲಾಗಿದ್ದರು. ಮತ್ತೆ ಗಾಂಧಿ-ಇರ್ವಿನ್ ಒಡಂಬಡಿಕೆಯಾಗುವ ವರೆಗೂ ಈ ಆಂದೋಲನವು ಪ್ರಚಂಡವಾಗಿ ನಡೆದಿದ್ದಿತು.

ಮಹನೀಯರಾದ ಈ ರೆಜಿನಾಲ್ಡ ರಿನೋಲ್ಡ್ಸರ ಧರ್ಮಪತ್ನಿ ಎಥೆಲ್ ಮೆನಿನ್ ಎಂಬವರು. ಇವರೂ ಪತಿಯಂತೆ ಸುಲೇಖಕರೂ, ಗ್ರಂಥಕರ್ತರೂ, ಕವಿಗಳೂ ಆಗಿರುವರು. ಗಾಂಧಿಯವರ ಎಲ್ಲಾ ತತ್ವಗಳು ರಿನೋಲ್ಡ್ಸರಂತೆ ಇವರಿಗೂ ಬಹಳ ಮಾನ್ಯವಾಗಿವೆ. ಆದ್ದರಿಂದ ಪಾಶ್ಚಾತ್ಯ ದೇಶಗಳಲ್ಲಿ ಇವರ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಲೇಖನಗಳು ಕ್ರಾಂತಿಕಾರಿಯಾಗಿರುವುವು.

ರಶ್ಯದಲ್ಲಿ ಅವರು ಕಂಡದ್ದು

ರಶ್ಯವು ನಾಸ್ತಿಕರ ರಾಜ್ಯವಾಗಿರುವದೆಂದು ಹೇಳುತ್ತಾರೆ. ಅಲ್ಲಿಯ ಜನರಿಗೆ ದೇವರ ಮೇಲೆ ವಿಶ್ವಾಸವಿರುವದಿಲ್ಲವೆಂದು ಹೊರಜನರು ನಂಬುವರು. ಆದರೆ ಈಗ ತಾನೇ ಬರೆದು ಮುಗಿಸಿರುವ ಒಂದು ಪುಸ್ತಕದಲ್ಲಿ ಶ್ರೀಮತಿ ಮೇನಿನವರು ಕೊಟ್ಟ ತಮ್ಮ ಅನುಭವಕ್ಕೆ ಬಂದ ಒಂದು ಘಟನೆಯನ್ನು ನೋಡಿದರೆ, ರಶ್ಯದ ಕುರಿತಾದ ಜನರ ಭಾವನೆಯು ನಿರಾಧಾರವೆಂದು ಗೊತ್ತಾಗುತ್ತದೆ. ಒಮ್ಮೆ ರಶ್ಯದ ಒಬ್ಬ ಹಳ್ಳಿಯ ಹುಡುಗಿ ಇನ್ನೊಬ್ಬಳೊಡನೆ ತನಗೆ ರಶ್ಯದ ಭಾಗ್ಯವಿಧಾತ ಸ್ಟಾಲೀನನನ್ನು ನೋಡುವ ಆಸೆಯಾಗಿರುವದೆಂದು ಹೇಳಿದಳಂತೆ. ಆಗ ಇನ್ನೊಬ್ಬ ಹುಡುಗಿ ಅತ್ತ ಇತ್ತ ಸುತ್ತಲೂ ನೋಡಿ ಆಕೆಯೊಡನೆ 'ಸ್ಟಾಲೀನನನ್ನು ನೋಡುವದೆಂದೇನು? ಆತನು ಯಾವಾಗಲೂ ನಮ್ಮೊಡನೆಯೇ ಇದ್ದಾನೆ. ಅವನು ಈಗಲೂ ನಮ್ಮನ್ನು ನೋಡುತ್ತಿದ್ದಾನೆ. ಮತ್ತು ನಮ್ಮೊಡನಿದ್ದು ಆನಂದವನ್ನು ಸೂಚಿಸುತ್ತಿದ್ದಾನೆ' ಎಂದು ಬಹು ಮೆಲ್ಲಗೆ ಹೇಳಿದ ಮಾತುಗಳು ರಶ್ಯದ ಜನರಲ್ಲಿ ದೃಢವಾಗಿರುವ ದೇವರ ಮೇಲಿನ ವಿಶ್ವಾಸವನ್ನೂ ಶ್ರದ್ಧೆಯನ್ನೂ ಸೂಚಿಸುವದಿಲ್ಲವೆ? ದೇವರನ್ನು ಸಾಕ್ಷಾತ್ಕಾರವಾಗಿ ಕಂಡವರು ಯಾರಿದ್ದಾರೆ? ರಶ್ಯದ ಜನರು ಸ್ಟಾಲೀನನನ್ನೇ ದೇವರೆಂದು ಭಾವಿಸಿ ವರ್ಣಿಸುತ್ತಾರೆ.

ಸಾಧುಸಂತರ ಉಪಕಾರ

ಸಾಧುಸಂತರು ಪ್ರಪಂಚಕ್ಕೆ ಮಾಡಿದ, ಮಾಡುತ್ತಿರುವ ಉಪಕಾರವು ಅತಿಶಯವಾಗಿದೆ. ಅದರಲ್ಲಿ ತಿಳುವಳಿಕೆಯುಳ್ಳ ಜನರು ಮಾತ್ರ ಅವರನ್ನು ಹುಚ್ಚರು ಉನ್ಮತ್ತರು ಎಂದು ತಿಳಿಯುತ್ತಾರೆ. ಆದ್ದರಿಂದ ಶ್ರೀಮತಿ ಮೇನಿನರವರು ಈ ಸಾಧುಸಂತರಿಗೆ ಅವರಿಗೆ ಪ್ರಾಪ್ತವಾಗಬೇಕಾದ ಉಚ್ಚ ಸ್ಥಾನವನ್ನು ಕೊಡಲಿಕ್ಕೆ ಕಂಕಣಬದ್ಧರಾಗಿರುವರು. ಅವರು ತಯಾರಿಸಿದ ಪ್ರಪಂಚದ ದೊಡ್ಡ ಸಾಧುಸಂತರ ಪಟ್ಟಿಯಲ್ಲಿ ಗಾಂಧಿ ಮತ್ತು ಎಲ್ವಿನರು ಅದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ.

ಕ್ರೈಸ್ತ ಬುದ್ಧರ ಅವತಾರ

ಗಾಂಧಿಜಿಯವರ ವಿಷಯದಲ್ಲಿ ಶ್ರೀಮತಿಯವರಿಗಿರುವ ಭಾವನೆಯು ಧಾರಣೆ ಅತ್ಯುತ್ಕೃಷ್ಟವಾಗಿರುವುದು. ಕ್ರೈಸ್ತ-ಬುದ್ಧರ ದ್ವಿತೀಯ ಅವತಾರವೇ ಮಹಾತ್ಮಾ ಗಾಂಧಿಯವರು ಎಂದು ಅವರು ತಮ್ಮ ಗ್ರಂಥದಲ್ಲಿ ಬರೆದಿರುತ್ತಾರೆ. ಭಾರತದ ಇನ್ನೊಬ್ಬ ಶ್ರೇಷ್ಠ ಸಂತರೆಂದರೆ ಫಾದರ್ ಎಲ್ವಿನರು. ಇವರು ಒಬ್ಬ ಕ್ರೈಸ್ತ ಮತೋಪದೇಶಿಯಾಗಿ ಭಾರತಕ್ಕೆ ಬಂದಿದ್ದರು. ಆದರೆ ಅವರು ಸ್ವಲ್ಪ ದಿನಗಳಲ್ಲಿಯೇ ಆ ಸಂಬಂಧವನ್ನು ಕಡಿದುಕೊಂಡು ತಮ್ಮ ಶ್ರೇಷ್ಠ ಜೀವನವನ್ನು ದೀನ ದರಿದ್ರರ ಸೇವೆಗೆ ಧಾರೆಯೆರೆದರು. ಈಗ ಅವರು ಹಿಂದುಳಿದ ಅನಾಗರಿಕ ಕಾಡು ನಿವಾಸಿಗಳ ಸುಧಾರಣೆ, ಪತಿತೋದ್ಧಾರದ ಬಗ್ಗೆ ಒಂದು ಆಶ್ರಮವನ್ನು ಸ್ಥಾಪಿಸಿದ್ದಾರೆ. ಎಲ್ವಿನರ ಸುಧಾರಣೆಯ ಕ್ರಮವು ಇತರ ಮಿಶ್ನರಿಗಳಂತೆ ಕಾಡುನಿವಾಸಿಗಳನ್ನು ಮತಾಂತರಗೊಳಿಸುವುದಿಲ್ಲ. ಆದರೆ ಅವರನ್ನು ಅವರ ಮತದಲ್ಲಿಯೇ ಇರಗೊಳಿಸಿ ಅವರ ಗತಿಗಳನ್ನು ಸುಧಾರಿಸುತ್ತಿದ್ದಾರೆ. ಡಾ. ಎಲ್ವಿನರು ಕುಷ್ಠರೋಗಿಗಳಿಗೆ ಒಂದು ಆಶ್ರಮವನ್ನು ಗಂಡು ಮಕ್ಕಳ ಶಿಕ್ಷಣಕ್ಕಾಗಿ ಒಂದು [illegible]ಯನ್ನೂ ತೆರೆದಿದ್ದಾರೆ.

ಸುಕ್ರ ಸಂಜೀವನ

ಭಾರತ ದೇಶದಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶಗಳಿಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಬೇಕೆಂಬುದೇ. ಈ ಔಷಧಿಯು ಮಾತ್ರ ಅವಗೆ ಸಂಪೂರ್ಣ ಗುಣವನ್ನು ಹೊಂದಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್. (ಲಂಡನ್) ಎಂ. ಸಿ. ಎಸ್. (ಅಮೆರಿ
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜೆಂಟ್ಸ್: ಷಾ ಕಂಪನಿ, ಹಂಪನಕಟ್ಟಾ ಮಂಗಳೂರು.

ಕೊಳ್ಳಿರಿ ಡಿಫೆನ್ಸ್

ಸೇವಿಂಗ್ ಸ್ಟಾಂಪ್‌ಗಳನ್ನು ಮತ್ತು ಹಣಗಳಿಸಿರಿ

ಪ್ರತಿ ೧೦ ರೂಪಾಯಿ ೧೦ ವರ್ಷಗಳಲ್ಲಿ ರೂ. [illegible] ಅನ್ನು ಗಳಿಸುತ್ತದೆ.

೪ ಆಣೆ, ೮ ಆಣೆ ಮತ್ತು ೧ ರೂಪಾಯಿ ಬೆಲೆಯ ಸೇವಿಂಗ್ಸ್ ಸ್ಟಾಂಪುಗಳು ಪೋಸ್ಟಾಫೀಸಿನಲ್ಲಿ ಮಾರಾಟಕ್ಕಿವೆ. ನೀವು ಅವನ್ನು ಕೊಂಡಂತೆಲ್ಲಾ ಅವನ್ನು ಪೋಸ್ಟಾಫೀಸುಗಳಲ್ಲಿ ಉಚಿತವಾಗಿ ಕೊಡುವ ಸೇವಿಂಗ್ಸ್ ಸ್ಟಾಂಪ್ಸ್ ಕಾರ್ಡಿಗೆ ಅಂಟಿಸಿರಿ. ಆ ಕಾರ್ಡಿನ ಮೇಲೆ ೧೦ ರೂಪಾಯಿ ಬೆಲೆ ಬಾಳುವ ಸ್ಟಾಂಪುಗಳನ್ನು ಅಂಟಿಸಿದ ಮೇಲೆ ಅದನ್ನು ಪೋಸ್ಟಾಫೀಸಿನಲ್ಲಿ ಕೊಟ್ಟು ಅದಕ್ಕೆ ಬದಲಾಗಿ ಒಂದು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟನ್ನು ತೆಗೆದುಕೊಳ್ಳಿ. ಅದು ನಿಮಗೆ ಹಣವನ್ನು ಗಳಿಸಿ ಕೊಡುವುದು.

ಇಂದೇ ನಿಮ್ಮ ಸೇವಿಂಗ್ಸ್ ಕಾರ್ಡನ್ನು ತೆಗೆದುಕೊಂಡು

ಪುಸ್ತಕಾವಲೋಕನ

ದೀಪದ ಕೆಳಗೆ*

ಇದೊಂದು ಸಾಮಾಜಿಕ ಕಾದಂಬರಿ, ನಾಟ್ಯಕಲೆಯಲ್ಲಿ ಹೆಸರುಪಡೆದ ಶ್ರೀಮಾನ್ ಕುಲಕರ್ಣಿ ಶ್ರೀನಿವಾಸರು ಇದನ್ನು ಬರೆದಿದ್ದಾರೆ. ಕಲಾ ಪ್ರಪಂಚದಲ್ಲಿ ದುಡಿಯುತ್ತಿರುವ ಲೇಖಕರನ್ನು, ಕಲಾಜೀವಿಗಳ ಜೀವನ ಸಮಸ್ಯೆಯನ್ನು ಎತ್ತಿಕೊಂಡು ಈ ಕಥೆಯನ್ನು ಕಟ್ಟಿದ್ದಾರೆ. ದೀಪ ಉರಿಯುತ್ತದೆ, ಸುತ್ತು ಬೆಳಕನ್ನು ಕೊಡುತ್ತದೆ, ಆದರೆ ಅದರ ಕೆಳಗೆ ಕತ್ತಲೆಯೇ ಕವಿದಿದೆ. ಕಲೋಪಾಸಕನ ಜೀವನಕ್ಕೂ ಈ ಸಾಮ್ಯವನ್ನು ಹೋಲಿಸಿ, ಒಂದು ಮನೋಹರ ಕಾದಂಬರಿಯನ್ನು ಶ್ರೀಯುತರು ಕನ್ನಡಿಗರ ಮುಂದಿಟ್ಟಿದ್ದಾರೆ.

ಶ್ಯಾಮು ಕಲಾಜೀವಿ ಅಂತೆಯೇ ಕಲೋಪಾಸಕ. ಸೂಸಿ ಆತನ ಕೈ ಹಿಡಿದಾಕೆ. ಚಿತ್ರಲೇಖನದಿಂದ ಆತನು ಜೀವನ ಮಾಡುತ್ತಿದ್ದ. ಆದರೆ ಬಡತನದ ಬಾಗುವೆಯಲ್ಲಿ ದಂಪತಿಗಳು ಬದುಕಬೇಕಾಯಿತು. ಆದರೂ ಆ ಗಂಡು-ಹೆಣ್ಣು ಹೃದಯದ ಪ್ರೇಮಪ್ರವಾಹದಲ್ಲಿ ಕಷ್ಟಕಾರ್ಪಣ್ಯಗಳನ್ನು ತೇಲಾಡಿಸಿ ಸುಖಪಡುತ್ತಿದ್ದರು.

ಸೂಸಿ ರೂಪವತಿಯಾಗಿದ್ದಳು. ಶ್ಯಾಮುನಿಗೆ ಮಗುವಿರಲಿಲ್ಲ. ಚಲಚ್ಚಿತ್ರ ಕಂಪೆನಿಯೊಂದರಲ್ಲಿ ಸುಂದರಿಯಾದ ಸ್ತ್ರೀಯರು ಬೇಕಾಗಿದೆಯೆಂದು ಜಾಹೀರಾತು ಕಂಡನು ಶ್ಯಾಮು. ಸೂಸಿ ನಟಿಯಾಗಬಾರದು ಎಂದು ಆತ ಯೋಚಿಸಿದ. ಹೆಂಡತಿಯು ಕಲೋಪಾಸಕನ ಶ್ರೀಮಂತ ಆದರಲ್ಲಿ ನ್ಯಾಯವೇನಿದೆ? ಇದರಿಂದ ಸುಖದ ಜೀವನ ಸಾಗಬಹುದೆಂದು ಆತ ನಿರ್ಧರಿಸಿದ. ಕೊನೆಗೆ ಒಪ್ಪಲಾರದ ಮನಸ್ಸಿನಿಂದ, ಪತಿಯ ಅಪ್ಪಣೆ ಪಡೆದು ಸೂಸಿ ನಟಿಯಾದಳು.

ಸೂಸಿ ನಟಿಯಾಗಲು ಒಪ್ಪಿದಳು, ಆದರೆ ಕಂಪೆನಿಯೊಳಗಿನ ವ್ಯವಹಾರ ಅವಳಿಗೆ ಹಿತವೆನಿಸಲಿಲ್ಲ. ಕುಲೀನತೆಗೆ ಸರಿತೋರಲಿಲ್ಲ. ಪ್ರಪಂಚಕ್ಕೆ ಸಮ್ಮತಿಸಲಿಲ್ಲ. ಕಲೆಗಾಗಿ ಕಲೆಯೆಂದು ಶ್ಯಾಮು ಉಪದೇಶಿಸಿದ. ಪತಿಯ ಹಿತದೃಷ್ಟಿಗಾಗಿ ಸಮ್ಮತಿಸಿದಳು. ಮತ್ತೆ ಕೊನೆಗೆ ಸರ್ವಾನುಮತದಿಂದ ಸರ್ವಶ್ರೇಷ್ಠವಾಗಿ ಸೂಸಿ ನಟಿಯಾದಳು! ಅಪ್ರತಿಮವಾಗಿ ಅಭಿನಯಿಸಿದಳು. 'ಕಲೆಗಾಗಿ ಕಲೆ'ಯನ್ನು ಸಾಧಿಸಿದಳು!

ಸೂಸಿ, ನಟಿ 'ತಾರಿಣಿ' ಯಾದಳು! ನಿರ್ದೇಶಕ ಮಹಾಶಯರು ಈ ನಟಿಯನ್ನು ಹೊಗಳಿ ಪ್ರಶಂಸೆ ಮಾಡಿದರು. ಕಥಾಲೇಖಕರು ಮೆಚ್ಚಿದರು, ನಾಯಕ ಪಾತ್ರಧಾರರು ಹಿಗ್ಗಿದರು, ತಾರಿಣಿ ಎಲ್ಲರನ್ನೂ ಮೆಚ್ಚಿಸಿ ನಟಿಸಿದಳು. ತುಂಬ ಸಂಪತ್ತು ಖ್ಯಾತಿಗಳು ದೊರೆತವು. ಆದರೆ ತಾರಿಣಿಯ ಕುಲೀನತೆಯ ವಿಷಯ ಹೊರಗಿನ ಜನರು ಕೆಟ್ಟದು ಮಾತನಾಡದೆ ಬಿಡುವರೆ?

ಶ್ಯಾಮುನ ಮನಸ್ಸೂ ಕದಡಿತು. ಆತನಲ್ಲಿ ತಾರಿಣಿಯ ಜೀವನಕ್ಕೆ ಸ್ವಲ್ಪ ಹೊಟ್ಟೆಕಿಚ್ಚು ಹುಟ್ಟಿತು. ತನ್ನವಳೇ ಆಗಿರಬೇಕೆಂದು ಆತನ ಸ್ವಾರ್ಥ ಹೃದಯವು ಬಯಸುತ್ತಿತ್ತು. ಆದರೆ 'ಕಲೆಗಾಗಿ ಕಲೆ'ಯನ್ನು ಆರಾಧಿಸಲು ಶ್ಯಾಮುನೇ ಹೇಗೆ ಹೇಳಿದ್ದನಷ್ಟೆ? ಅದೇ ಆತನಿಗೆ ಅಂತಃಕರಣದಲ್ಲಿ ತಾರಿಣಿ ಕೊಟ್ಟ ಉತ್ತರವಾಗಿತ್ತು. ತಾರಿಣಿ ಪೂರ್ಣವಾಗಿ 'ಕಲೆ'ಯನ್ನು ಮೆಚ್ಚಿದಳು! ಶ್ಯಾಮುನು ಅಪ್ರತಿಭನಾಗಿ ಬಿಡುವನು! ಸೂಸಿ ಕಲಾಕೀರ್ತಿಯನ್ನು ಪಡೆದಿದ್ದಾಳೆ. ಕಲಾಕಾಶದ ತಾರೆಯಾಗಿದ್ದಾಳೆ! ಪ್ರಪಂಚದ ಸೊತ್ತಾಗಿದ್ದಾಳೆ! ಮೇಜಿನ ಮೇಲಿನ ದೀಪವು ಬೆಳಕು ಕೊಡುತ್ತಿತ್ತು. ಕತ್ತಲೂ ಬೆಳಕು ಹರಡಿತ್ತು, ಆದರೆ ಅದರಡಿಯಲ್ಲಿ, ಕರಾಳ ಕತ್ತಲು, ನೀಲಗಗನದ ನೋಡಿದರೆ ಪ್ರಶಾಂತ ಚಂದ್ರಮನಿದ್ದ, ಆತನ ಮುಖದಲ್ಲಿಯೂ ಒಂದು ಕಪ್ಪಾದ ಕಲೆ! ಶ್ಯಾಮು ಈಗ ಕಲಾಜೀವನದ ಸಮಸ್ಯೆಯನ್ನು ತಾನಾಗಿ ಅರಿತುಕೊಂಡನು!

ಕಲಾಜೀವನದ ಕಥೆ ಹೀಗೆ ರಮಣೀಯವಾಗಿದೆ! ಅಲ್ಲಲ್ಲಿ ಚಿಕ್ಕ ಚಿಕ್ಕ ವಾಕ್ಯಗಳು ಪುಷ್ಟಿಯಾಗಿ ಅರ್ಥ ಗರ್ಭಿತವಾಗಿವೆ, ಸರಳ ಶೈಲಿಯಿಂದ ಅಲಂಕೃತವಾಗಿವೆ. ಒಟ್ಟು ಕಾದಂಬರಿಯು ಸುಂದರವಾಗಿದೆ.

ಇದನ್ನು ಕಾದಂಬರಿಯೆನ್ನುವುದಕ್ಕಿಂತ ಒಂದು ದೀರ್ಘವಾದ ಸಣ್ಣಕತೆಯೆನ್ನಬಹುದು. ಕಾದಂಬರಿಯಲ್ಲಿ ಬರಬೇಕಾಂದತಹ ವಿವರಣೆ, ಘಟನೆ, ವರ್ಣನೆಗಳು ಇಲ್ಲಿ ಬಹು ಕಡಿಮೆ, ಕೇವಲ ಭಾವನೆಯ ಬೆಳವಣಿಗೆಯಿಂದ ಒಂದು ಘಟನೆ ಬಿಂಬಿಸಿದೆ. ಹೀಗಿದ್ದರೂ, ಕನ್ನಡ ಸಾಹಿತ್ಯದಲ್ಲಿ ಈ ತರದ ಕತೆ ಹೊಸತು. ಕಲೋಪಾಸಕರು, ಕಲಾಸಮಸ್ಯೆಯನ್ನು ಬಗೆಹರಿಸುವ ವಿಚಾರವಾಗಿ ಬರೆದು ಸಮಾಜಕ್ಕೆ ಉಪಕಾರಮಾಡಬೇಕಾಗಿದೆ. ಶ್ರೀಕುಲಕರ್ಣಿಯವರು ಆ ಕೆಲಸವನ್ನು ಸಾಕಷ್ಟು ಯಶಸ್ವಿಯಾಗಿಯೇ ಮಾಡಿದ್ದಾರೆ.

ಶ್ಯಾಮ

---

*ಬರೆದವರು: ಕುಲಕರ್ಣಿ ಶ್ರೀನಿವಾಸ, ಬಿ. ಎ. ಗೋಪಾಲಪುರಂ 3ನೇ ಬೀದಿ, ಮದ್ರಾಸು. ಮುದ್ರಣಾಲಯದ ಆನೆಯ ಪ್ರೆಸ್ಸಿನ ಕ್ರೌನ್ ಆಕಾರದ ೧೪೨ ಪುಟಗಳು. ಬೆಲೆ ೧ ರೂಪಾಯಿ.

ಒಳ್ಳೆಯ ಸ್ಕೌಟ್ ಆಗಬೇಕಾಗಿದ್ದರೆ ನೀವು ಶಕ್ತಿ ಮತ್ತು ಆರೋಗ್ಯಶಾಲಿಗಳಾಗಿರಬೇಕು. ಅದ್ದರಿಂದ ನಿಮ್ಮ ಶರೀರದೊಳಭಾಗವು ನಿತ್ಯ ಶುಚಿಯಾಗಿರುವುದು ಅತ್ಯಂತ ಆವಶ್ಯಕವೆಂದು ನೆನಪಿನಲ್ಲಿಡಿರಿ. ನಿಮ್ಮ ಶರೀರದೊಳಭಾಗವನ್ನು ನಿರ್ಮಲವಾಗಿಟ್ಟರೆ, ಅಶುದ್ಧ ವಸ್ತುಗಳು ಹೊಟ್ಟೆಯೊಳಗೆ ಸೇರಿ ನಿಮ್ಮ ಆರೋಗ್ಯವು ಹಾಳಾಗಲಾರದು. ನಿಮ್ಮ ಮೆದುಳು ಮತ್ತು ಶರೀರಗಳ ಶಕ್ತಿಗಳು ಕುಂದಲಾರವು. ದಿನಾಲು ಒಂದು ಗ್ಲಾಸು ತಂಪುಕೊಡುವ ಆಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಳ್ಳುವುದರಿಂದ ಮಲಬದ್ಧತೆಯು ಬರಲಾರದು. ಹಾಗಾಗಿ ಮತ್ತೆ ದೇಹದೊಳಗಿನ ಕೊಳೆಯು ಉಳಿಯಲಾರದು. ಶರೀರವು ನಿರ್ಮಲವಾಗಿರುವುದು—ನೀವು—ಶಕ್ತಿಗೊಳ್ಳುವಿರಿ.

ಅಂತರಂಗ ನೈರ್ಮಲ್ಯಕ್ಕೆ ದಿನನಿತ್ಯವೂ ನೀವು

ಆಂಡ್ರೂಸ್ ಲಿವರ್ ಸಾಲ್ಟನ್ನು

ತೆಗೆದುಕೊಳ್ಳಿರಿ

ANDREWS LIVER SALT

ಆರೋಗ್ಯಕರ ಮತ್ತು ಶಕ್ತಿ ಕರಪಾನೀಯ ಶುದ್ಧಕರ ತಂಪುಕರ, ಪಿತ್ತಕರ ಮತ್ತು ಆನಂದಕರವಾದುದು

ಸಣ್ಣ ಸೈಜಿಗೆ ಆ. 11
ದೊಡ್ಡ ಸೈಜಿಗೆ ರೂ. 1-4-0

SEASON-DEPOSITS

Season Deposits are accepted at all branches at very favourable rates

Please enquire at the nearest branch.

CANARA BANK LIMITED.

Estd 1906

Members Reserve Bank of India and Bombay Clearing House

ನೆಸೆಟ್

ಡಿ ಲಕ್ಸ್

ನೆಸೆಟ್ ಬ್ಲೇಡುಗಳು ಅನೇಕ ವರ್ಷಗಳಿಂದ ಕಡಿಮೆ ಕ್ರಯದ ಉತ್ತಮ ಬ್ಲೇಡುಗಳಲ್ಲಿ ಹೆಸರುಪಡೆದಿವೆ. ಸಿಗಿಯಲ್ಪಟ್ಟ ನೆಸೆಟ್ ಡಿ ಲಕ್ಸ್ ಬ್ಲೇಡುಗಳು ಸ್ವಲ್ಪ ಹೆಚ್ಚಿಗೆ ಕ್ರಯವಾಗಿರುವುದು ನಿಜ. ಆದರೆ ನುಣುಪಾದ ಕ್ಷೌರವನ್ನು ಕಂಡು ಆನಂದಿಸುವಿರಿ ಮತ್ತು ಅವು ಮೂರು ಗೂಟದ ರೇಜರಿಗೂ ಬಾರಿನಂತಹ್ದ ರೇಜರಿಗೂ ಒಪ್ಪುವಂತೆ ಸೀಳಿವೆ.





ಸಿಗಿಯಲ್ಪಟ್ಟ ಬ್ಲೇಡುಗಳು

IDLI

ಅಮೃತ

ರಕ್ತಶುದ್ಧಿಯನ್ನು ಮಾಡುವ ನರಗಳ ದೌರ್ಬಲ್ಯವನ್ನು ಪರಿಹರಿಸುವ ಟಾನಿಕ್!

ಮಲಬದ್ಧತೆ, ಅಜೀರ್ಣ, ಮುತ್ತು ಇತರ ಜಠರ ದೋಷಗಳನ್ನು ನಿವೃತ್ತಿಗೊಳಿಸುತ್ತದೆ; ಕ್ಷೀಣಗೊಂಡವರಿಗೆ ತಿರಿಗಿ ಶಕ್ತಿ ಧಾತು ಪುಷ್ಟಿಯನ್ನು ಕೊಡುತ್ತದೆ

ವಿಶೇಷ ವಿಷಯಗಳಿಗೆ ಯಾವುದೇ ಕೆಮಿಸ್ಟರಲ್ಲಾಗಲಿ, ಇಲ್ಲವೇ ಇದರಲ್ಲಾಗಲಿ ವಿಚಾರಿಸಿರಿ.

"ಕೇಸರೀ ಕುಟೀರಂ"

ಇಂಡಿಯನ್ ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್

ರಾಯಪೇಟೆ, ಮದ್ರಾಸು

THE PIE-MONEY BANK LTD.

Maidan Road, MANGALORE.

Undertakes all kinds of Banking Business. Current account at 2½% per annum Savings Bank Deposits at 4½% per annum

FIXED DEPOSITS

For 2 Years—5% 1 Year 4½% For 6 months 4% 3 months 3½%

Auction chit Funds ranging from Rs. 100/- to Rs. 5000 run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director*

ವಿಜ್ಞಾನಯುಗ

ಮಲ್ಲಿಗೆಸೊಪ್ಪಿನಿಂದ ಪರಿಮಳ ದ್ರವ್ಯಗಳು

ನಮ್ಮ ದೇಶದಲ್ಲಿ ಮಲ್ಲಿಗೆಸೊಪ್ಪು ಧಾರಾಳವಾಗಿ ದೊರೆಯುತ್ತದೆ ಸರ್ವಸಾಧಾರಣ ಜನರು ಇದರ ಔಷಧಿ ಗುಣವನ್ನಷ್ಟೆ ತಿಳಿಕೊಂಡಿದ್ದರಲ್ಲದೆ, ಇದರಿಂದ ಸುಗಂಧ ಪದಾರ್ಥಗಳನ್ನು ತಯಾರಿಸಬಹುದೆಂದು ಅರಿತಿರಲಿಲ್ಲ. ಕಲ್ಕತ್ತಾ ವಿಶ್ವವಿದ್ಯಾಲಯದ ಡಾಕ್ಟರ ಗೋಸ್ವಾಮಿಯವರು ಕೆಲವು ಪರಿಶೋಧನೆಗಳನ್ನು ಮಾಡಿ, ಸಾಬೂನ ಮೊದಲಾದ ಪದಾರ್ಥಗಳ ಉಪಯೋಗಕ್ಕೆ ಬೇಕಾದ ಕೆಲವು ಸುಗಂಧ ದ್ರವ್ಯಗಳನ್ನು ಈ ಹುಲ್ಲಿನಿಂದ ತಯಾರಿಸಬಹುದೆಂಬುದನ್ನು ಕಂಡುಕೊಂಡಿರುವರು. ಅದಕ್ಕೋಸ್ಕರ ಭಾರತ ಸರಕಾರವೂ ಒಂದು ಕಾರ್ಖಾನೆಯವರೂ ಡಾಕ್ಟರ ಗೋಸ್ವಾಮಿಯವರಿಗೆ ೮೦೦ ಮತ್ತು ೨೪೦೦ ರೂಪಾಯಿಗಳ ಸಹಾಯದ್ರವ್ಯವನ್ನು ಕೊಟ್ಟು, ಈ ವಿಷಯದಲ್ಲಿ ಇನ್ನೂ ಹೆಚ್ಚಿಗೆ ಪರಿಶೋಧನೆಗಳನ್ನು ಮಾಡಲಿಕ್ಕೆ ಹೇಳಿದ್ದಾರೆ.

★

ಜಗತ್ತಿನೊಳಗಿನ ಪ್ರಥಮದ ಟ್ಯೂಬ್ ರೈಲು

ಜಗತ್ತಿನ ಮೊತ್ತಮೊದಲಿನ ನೆಲಾಂತರ್ಗತ ಅಥವಾ ಟ್ಯೂಬ್ ರೈಲನ್ನು ಮಾಡಿ ಐವತ್ತು ವರ್ಷಗಳು ಆದುವು. ಥೇಮ್ಸ ನದಿಯ ತಳದ ಅಡಿಯಲ್ಲಿ ಈ ರೈಲನ್ನು ಮಾಡಿದ್ದರು ಇದು ಲಂಡನ್ ನಗರದೊಳಗೆ ಓಡಾಡುವ ಅನೇಕ ರೈಲ್ವೆಗಳಿಗೆ ಪರಸ್ಪರ ಸಂಬಂಧವನ್ನು ಉಂಟುಮಾಡಿತ್ತು. ಆಗ ಪ್ರಿನ್ಸ್ ಆಫ್ ವೇಲ್ಸರಾಗಿದ್ದ ದಿವಂಗತ ಸಪ್ತಮ ಎಡ್ವರ್ಡರು ಈ ರೈಲ್ವೆಯ ಅನಾವರಣ ಸಮಾರಂಭವನ್ನು ನಡೆಸಿದ್ದರು. ಆಗ ಅದು ಬರೇ ಮೂರು ಮೈಲು ಉದ್ದವಾಗಿದ್ದಿತು ಆದರೆ ಈಗ ಅದರ ಉದ್ದವು ೨೦೦ ಮೈಲಿಯಾಗಿರುವುದು. ಒಂದೊಂದು ಮೈಲಿಯಷ್ಟು ಉದ್ದದ ಈ ದಾರಿಯನ್ನು ಕಟ್ಟಲಿಕ್ಕೆ ಒಂದೊಂದು ಮಿಲಿಯ ಪವನು ಖರ್ಚಾಗಿದೆ! ಲಂಡನಿನ ೧೦ ಮಿಲಿಯ ಜನರ ಸಂಚಾರಕ್ಕೆ ಈ ರೈಲು ಅನುಕೂಲ ಮಾಡಿಕೊಟ್ಟಿದೆ. ಇವುಗಳಲ್ಲಿ ೨೫ ಮೈಲುಗಳಷ್ಟು ಉದ್ದವಾಗಿರುವ ಒಂದು ದಾರಿಯು ಪ್ರಪಂಚದಲ್ಲಿಯೇ ಅತಿ ದೀರ್ಘವಾಗಿದೆ. ಐವತ್ತು ವರ್ಷಗಳ ಮೊದಲು ಲಂಡನಿನಲ್ಲಿ ಕಟ್ಟಲ್ಪಟ್ಟ ಟ್ಯೂಬು ರೈಲುಗಳ ಮಾದರಿಯಲ್ಲಿ ಪೆರಿಸ್, ನ್ಯೂಯೊರ್ಕ್, ಬರ್ಲಿನ್ ಮೊದಲಾದ ಇತರ ಅನೇಕ ನಗರಗಳಲ್ಲಿ ಬೇರೆ ರೈಲುಗಳು ಕಟ್ಟಲ್ಪಟ್ಟಿವೆ ಯಾದರೂ ಯಾವುವೂ ಲಂಡನ ರೈಲ್ವೆಯಷ್ಟು ಐತಿಹಾಸಿಕ ಮಹತ್ವವುಳ್ಳವುಗಳಾಗಿಲ್ಲ. ಆದ್ದರಿಂದಲೇ ಈ ರೈಲ್ವೆಯ ಸುವರ್ಣೋತ್ಸವವು ಇದೇ ದಶಂಬರ ತಿಂಗಳಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು.

★

ಗಂಡು ಅಥವಾ ಹೆಣ್ಣು ಮಕ್ಕಳು ಹುಟ್ಟುವುದು

ಕೆಲವರಿಗೆ ಗಂಡುಮಕ್ಕಳೇ ಹೆಚ್ಚು. ಬೇರೆ ಕೆಲವರಿಗೆ ಹೆಣ್ಣುಮಕ್ಕಳೇ ಹೆಚ್ಚು. ಕೆಲವರಿಗೆ ಕೇವಲ ಗಂಡುಗಳು ಹುಟ್ಟುವವಾದರೆ ಕೆಲವರಿಗೆ ಬರೇ ಹೆಣ್ಣುಗಳು ಹುಟ್ಟುವವು. ಹೀಗಾಗಲು ಕಾರಣವೇನು? ಇದನ್ನು ತಿಳಕೊಳ್ಳಲು ಮನುಷ್ಯನು ಸಾವಿರಾರು ವರ್ಷಗಳಿಂದ ಪ್ರಯತ್ನಿಸಿದ್ದನಾದರೂ ಅವನು ಸಫಲನಾಗಲಿಲ್ಲ. ಈಚೆಗೆ ಕೆಲವು ವೈಜ್ಞಾನಿಕರು ಮಾಡಿದ ಕೆಲವು ಶೋಧೆಗಳಿಂದ ಅವರು ಇನ್ನು ಸ್ವಲ್ಪ ಸಮಯದಲ್ಲಿಯೇ ಸಂಪೂರ್ಣ ಸಫಲರಾಗುವರೆಂದು ತಿಳಿದುಕೊಳ್ಳಬಹುದು. ೧೯೩೦ರಲ್ಲಿ ಜರ್ಮನಿಯ ಡಾಕ್ಟರ ಫೆಲಿಕ್ಸ ಎಂಬಾತನು, ಮತ್ತೆ ೧೯೩೪ರಲ್ಲಿ ಅಮೇರಿಕದ ಕೆಲವು ವಿಜ್ಞಾನಿಗಳು ಮಾಡಿದ ಪ್ರಯತ್ನಗಳಿಂದ ಸೇಕಡಾ ೭೫ರಷ್ಟು ಮನೋವಾಂಛಿತ ಸಂತತಿಗಳು ಆಗಿವೆ. ತಾಯಿಯ ಶರೀರವು ಕ್ಷಾರ ಗುಣವುಳ್ಳದ್ದಾದರೆ ಗಂಡು ಸಂತತಿಯೂ ಆಮ್ಲಗುಣವುಳ್ಳದ್ದಾದರೆ ಹೆಣ್ಣು ಸಂತತಿಯೂ ಆಗುವುದು. ಶರೀರದ ಈ ಗುಣವನ್ನು ತಿಳಿದು ಗರ್ಭಧಾರಣ ಕಾಲದಲ್ಲಿ ಔಷಧ ಪ್ರಯೋಗಗಳಿಂದ ಬೇಕಾದಂತೆ ಬದಲಾಯಿಸಿಕೊಂಡರೆ ಇಚ್ಛಿಸಿದಂಥ ಗಂಡು ಅಥವಾ ಹೆಣ್ಣು ಮಕ್ಕಳು ಹುಟ್ಟುವರೆಂಬುದು ಇವರ ನಿರ್ಧಾರವಾಗಿದೆ.

★

ಹೆದರುವವರಿಗೆ ಮದ್ದು

ಕೆಲವು ಜನರು ಯಾವಾಗಲೂ ಅಂಜುಬುರುಕರಾಗಿ ಇರುತ್ತಾರೆ. ಇವರು ... ಮಿಷ ನಿಮಿಷಕ್ಕೂ ಹೆದರುತ್ತ ಮೈ ... ಯುತ್ತ ಇರುತ್ತಾರೆ ಇದಕ್ಕೆ ಅವ... ಮೈಯ ರಕ್ತದಲ್ಲಿ ಸಕ್ಕರೆಯ ಅಂಶ... ಕಡಿಮೆಯಾಗಿರುವುದೇ ಕಾರಣವೆಂದು ಡಾಕ್ಟರ ವಿಲಿಯಂ ಎಂಬವರು ಶೋ... ಸಿರುವರು. ಆದ್ದರಿಂದ ಇಂಥ ಜನರು ಆಗಾಗ ಸ್ವಲ್ಪ ಸಕ್ಕರೆ ಅಥವಾ ... ಸಿಹಿ ಪದಾರ್ಥಗಳನ್ನು ತಿನ್ನುತಿದ್ದರೆ ... ಜನರ ಆತುರ, ಕಳವಳ, ಹೆದರಿಕೆ ಮೊ... ಲಾದವು ಮೆಲ್ಲಮೆಲ್ಲಗೆ ಕಡಿಮೆಯಾ... ಅವರು ಕ್ರಮೇಣ ಧೀರರೂ ಸಾಹ... ಗರೂ ಆಗಬಹುದೆಂಬ ಅಭಿಪ್ರಾಯವು ... ಟಾಗಿದೆ ಈ ಸಂಗತಿಯನ್ನು ನಮ್ಮ ದೇಶದ ಪುರಾತನ ಜನರೂ ತಿಳಿದಿದ್ದರೊ ಏನೋ! ಆದ್ದರಿಂದಲೇ ನಮ್ಮ ದೇ... ದಲ್ಲಿ ಮೃಷ್ಟಾನ್ನ ಭೋಜನಗಳು ನ... ಯುವ ಎಲ್ಲಾ ಸಂದರ್ಭಗಳಲ್ಲಿ ಪಾಯಸ ಪರಮಾನ್ನಗಳನ್ನು ಬಳಸದೆ ಊಟವೇ ಮುಗಿಯುವುದಿಲ್ಲ

★

ನೀರು ವಿಷಪೂರಿತವಾದರೆ

ಯುದ್ಧಸಮಯದಲಿ ಶತ್ರುಪಕ್ಷ... ವರು ವಿಷದ ಗಾಳಿಯನ್ನು ಹರಡುವು... ರಿಂದ ಕೆರೆ ಬಾವಿಗಳ ನೀರು ವಿಷಪೂರಿ... ವಾಗುವುದು. ಜನರು ಕುಡಿಯಲಿ... ಶುದ್ಧ ನೀರು ಇಲ್ಲದೆ ನೀರಡಿಕೆಯಿಂ... ಸಾಯಬೇಕಾಗುವುದು. ಆದಕಾರ... ವಿಷಪೂರಿತ ನೀರನ್ನು ಶುದ್ಧಮಾಡಿ ಕು... ಯಲನುಕೂಲವಾಗುವಂತೆ ಲಂಡನಿ... ಒಂದು ಕಾರ್ಖಾನೆಯು ಹೊಸಬಗೆಯ ಒಂದು ಪಂಪನ್ನು ರಚಿಸಿದೆ. ಅದ... ತೋಟದಲ್ಲಿ ಹೂಗಿಡಗಳಿಗೆ ನೀರುಹಾ... ಕುವ ಪಂಪಿನಂತೆಯೇ ಇರುತ್ತದೆ. ಭಾ... ದಲ್ಲಿಯೂ ಸುಮಾರಾಗಿ ಅಷ್ಟೇ ಇ... ಆದರೆ ಈ ಪಂಪಿನೊಳಗಿನ ಸಿಲಿಂಡ... ನಲ್ಲಿ ನೀರನ್ನು ಶುದ್ಧಮಾಡುವ ಇದ್ದಲು ಮೊದಲಾದ ಕೆಲವು ಪದಾರ್ಥಗಳು ಅ... ಇರುವವು. ನೀರು ಇವನ್ನು ಹಾ... ಹೊರಗೆ ಬರುತ್ತಿರುವಷ್ಟಕ್ಕೆ ಅದು ಪ... ಶುದ್ಧವಾಗಿ ಕುಡಿಯಲಿಕ್ಕೆ ತಕ್ಕುದಾ... ವುದು. ಇಂಥ ಪಂಪುಗಳನ್ನು ಸಾವಿ... ಗಟ್ಟಲೆಯಲ್ಲಿ ತಯಾರಿಸಿ ಅನೇಕ ಕೇ... ಗಳಿಗೆ ಕಳುಹಿಸಿಕೊಡಲಿಕ್ಕೆ ಆರಂಭ... ಗಿದೆ. ಯುದ್ಧಕಾಲದಲ್ಲಿ ಮಾತ್ರವಲ್ಲ ಭೂಸಂಚಾರಕ್ಕೆ ಹೊರಟ ವಿಜ್ಞಾನಿಗ... ಗೂ ತಮ್ಮ ಸಂಚಾರದಲ್ಲಿ ಶುದ್ಧ ನೀರ... ಪಡೆಯಲಿಕ್ಕೂ ಈ ಪಂಪುಗಳು ಉ... ಯುಕ್ತವಾಗಿ ಇರುತ್ತವೆ.

ಪ್ರಕಾಶಿಸುವ ನೇತ್ರಗಳು ಆರೋಗ್ಯ ಜೀವನದ ಚಿಹ್ನೆ

ವಿಪರೀತವಾದ ಸೆಕೆ, ಮತ್ತು ಸರಿಯಾದ ಪೋಷಣೆ ಇಲ್ಲದಿರುವಿಕೆ, ಇವುಗಳೇ ನರಗಳ ದೌರ್ಬಲ್ಯಕ್ಕೂ ಮತ್ತು ಸಾಮಾನ್ಯ ನಿಶ್ಶಕ್ತಿಗೂ ಕಾರಣ. ಜೀವಾಮೃತಂ ಸೇವಿಸಿ ನಿಮ್ಮ ದೇಹವನ್ನು ಬೆಳೆಸಿರಿ. ಜೀವಕ್ಕೊಂದು ಸಂಜೀವಿನಿ.

ಬಲಿದ ನರಗಳಿಗೆ ಜೀವಾಮೃತಂ

ಜೀವಾಮೃತಂ
ನರಗಳಿಗೆ ಅತ್ಯುತ್ತಮ ಟಾನಿಕ್.
K.A.2

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ಮೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ದ. ಕ. ಜಿಲ್ಲಾ ಯುದ್ಧ ಸಮಿತಿಯ ಬಗ್ಗೆ ಸೋಡ್ತಿ.

ಹಿಟ್ಲರರು ಬಲ್ಗೇರಿಯವನ್ನು ಪ್ರವೇಶಿಸಿದ್ದರಿಂದ, ಹಿಂದುಸ್ಥಾನದ ಸಮೀಪಕ್ಕೆ ಮತ್ತೊಂದು ಹೆಜ್ಜೆಯನ್ನಿಟ್ಟಂತಾಯಿತು. ದ. ಕನ್ನಡವು ಇದನ್ನು ಸಹಿಸುವುದೇ? ಇದುವರೆಗೆ ಆದ ಕೆಲಸದಿಂದಲೇ ಜನರು ತೃಪ್ತಿಹೊಂದುವರೆ? ಇದುವರೆಗೆ ದ. ಕನ್ನಡವು ತನ್ನ ಹೆಸರಿನ ಮೇಲಿರುವ ಜಿಲ್ಲೆಯು ಒಟ್ಟುಗೂಡಿಸಿದ ಹಣದ ಅರ್ಧಕ್ಕಿಂತ ಕಡಿಮೆ, ಪಟ್ಟಿಯಲ್ಲಿರುವ ಮೇಲಿನ ಜಿಲ್ಲೆಯಿಂದ ಹತ್ತನೇ ಒಂದಂಶಕ್ಕಿಂತಲೂ ಕಡಿಮೆ ಹಣವನ್ನು ಸಂಗ್ರಹಿಸಿದೆ. ವಂತಿಗೆ ಕೊಡಲು ಇದೀಗ ಸಂದರ್ಭ. ಜಿಲ್ಲಾ ಯುದ್ಧ ಸಮಿತಿಯ ಆಶ್ರಯದಲ್ಲಿ ಏರ್ಪಡಿಸಿದ ಸೋಡ್ತಿಯ ಟಿಕೇಟನ್ನು ಇಂದೇ ಕೊಳ್ಳಿರಿ. ಮಾರ್ಚಿ ತಾ. ೨೨ರಲ್ಲಿ ಸೋಡ್ತಿ ತೆಗೆಯಲಾಗುವುದು. ನೀವೇಕೆ ಟಿಕೇಟು ಕೊಳ್ಳಬೇಕು ಚಂದಾ ಏಕೆ ಕೊಡಬೇಕು? ಎಂಬುದಕ್ಕೆ ಇಲ್ಲಿವೆ ಕಾರಣಗಳು:

ವ್ಯಾಪಾರಿಗಳು ಚಂದಾ ತೆರಬೇಕು ಏಕೆಂದರೆ ಅವರ ಸರಕುಗಳನ್ನು ನೌಕಾಪಡೆಯು ರಕ್ಷಿಸುತ್ತದೆ. ಸರಿಯಾಗಿ ವ್ಯಾಪಾರ ವಹಿವಾಟು ನಡೆಯುವುದಕ್ಕಾಗಲು ಸರಿಯಾದ ವಾತಾವರಣವುಂಟಾಗುವಂತೆ ಮಾಡುವುದಕ್ಕಾಗಿ ವ್ಯಾಪಾರಿಗಳು ಚಂದಾ ಕೊಡಬೇಕು. ಭೂಮ್ಯಾಲಿಕರು ಕೊಡಬೇಕು, ಏಕೆಂದರೆ ಅವರು ಕೊಡದೆ ಹೋದರೆ ಅವರ ಭೂಮಿಯೇ ಹೋಗಿಬಿಡಬಹುದು. ದುಷ್ಪಶಕನವನ್ನು ನಾಶಮಾಡುವುದಕ್ಕಾಗಿ ಇಗರ್ಜಿಗಳು ತೆರಬೇಕು. ಸ್ವತಂತ್ರಾಭಿಪ್ರಾಯದ ಭಾಷಣಕರ್ತರೂ ಕೊಡಬೇಕು. ಏಕೆಂದರೆ ಬರಬಹುದಾದ ಅನಾಹುತಕ್ಕೆ ಸ್ವಾತಂತ್ರ್ಯದ ಪರಿಚಯವೇ ಇಲ್ಲ. ನಾಗರಿಕ ಜೀವನವನ್ನು ಕೆಡಿಸುವ ಪದ್ಧತಿಯನ್ನಿದಿರಿಸಲು ದೊಡ್ಡವರು, ಸಣ್ಣವರು, ಗಂಡಸರು, ಹೆಂಗಸರು, ಮುದುಕರು, ಯುವಕರು—ಸಕಲರೂ ಕೊಡಬೇಕು. ಸೋಡ್ತಿ ಟಿಕೇಟಿಗೆ ಬರೇ ೮ ಆಣೆ ಬೆಲೆ. ಸಾಧ್ಯವಾದಷ್ಟು ಟಿಕೇಟು ಕೊಂಡುಕೊಳ್ಳಿ. ಒಂದನ್ನು ಕೊಳ್ಳಲು ಸಾಧ್ಯವಿಲ್ಲದವರು ಇಬ್ಬರು ಒಂದಾಗಿ ಕೊಳ್ಳಿರಿ. ಎಲ್ಲೆಡೆಗಳಲ್ಲಿಯೂ ಟಿಕೇಟು ಸಿಗುತ್ತವೆ. ಸಿಕ್ಕದಿದ್ದರೆ ಗ್ರಾಮ ಅಥವಾ ತಾಲೂಕು ಆಫೀಸುಗಳಲ್ಲಿ ಕೇಳಿ; ಕೂಡಲೆ ದೊರೆಯುವುವು. ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಪೇಶಾವರದಲ್ಲಿ ಕಪಟ ಬಾಂಬಿನ ಸುರಿಮಳೆ

ವಿಮಾನಧಾಳಿ ಪ್ರಯೋಗ

ಪೇಶಾವರ ಜಿಲ್ಲೆಯಲ್ಲಿ ವೈಮಾನಿಕ ಧಾಳಿಯ ಪರೀಕ್ಷೆ ನಡೆಯುತ್ತಿದೆ. ಸ್ವಂತ ವಿಮಾನಗಳು ಬಂದ ಕಪಟನಾಟಕವು ಬಹಳ ಗಂಭೀರ ರೀತಿಯಲ್ಲಿತ್ತು. ಎಲ್ಲಾ ಕಡೆಗಳಲ್ಲಿಯೂ ಕೃತಕ ಬಾಂಬುಗಳು ಸುರಿಸಲಾಗಿತ್ತು. ಆಸಾಮಿನಲ್ಲಿಯೂ ಹೀಗೆ ವಿಮಾನಧಾಳಿಯ ಪ್ರಯೋಗ ಪರೀಕ್ಷೆಯು ನಡೆಯಿತು. ಪರರಾಷ್ಟ್ರದ ಧಾಳಿ ಭಾರತಕ್ಕೆದುರೆತ್ತಿ ಬಂದರೆ ಏನೇನು ಅನುಭವವಾಗಬಹುದೆಂಬ ಬಗ್ಗೆ ಈ ಪ್ರಯೋಗಗಳು.

ನೋಟೀಸು

ದ. ಕ. ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R. E. P. 46/1941—R. E. A. 102/1941—O. S. 468 of 1936.

ವಾದಿ—ಪರಮೇಶ್ವರಿ ಅಮ್ಮ, ರಿಸೀವರ್ M. ಸದಾಶಿವರಾವ್ . ಅರ್ಜಿದಾರ.

ಪ್ರತಿವಾದಿರು—ಪ್ರೋಲೇಪ್ಪ ಹೆಗ್ಡೆ ವಗೈರೆ, ತ್ಯಾಂಪ ಸೆಟ್ಟಿ ಸಹ . ಎದ್ರಿರು.

ಎದ್ರಿರು:

2. ನಂದಪ್ಪ ಸೆಟ್ಟಿ }
3. ಮಂಜಣ ಸೆಟ್ಟಿ } ನ್ಯಾಕ್ರಿ ಹೆಗ್ಗಿನ ಮಕ್ಕಳು } ಪುತ್ತೂರು ತಾಲ್ಲೂ ವಿಟ್ಲ ಕಸ್ಬೆ ಗ್ರಾಮದ ಕೊಳ್ನಾಡಿಬಲ್ಲಿರುವರು.
4. ಚಿಕ್ಕ ಭಂಡಾರಿ, ಪದುವ ಮುತ್ತು ಭಂಡಾರಿ ಮಗ } ಕಾಸ್ರಗೋಡು ತಾಲೂಕು ಬಾಯಾರು ಗ್ರಾಮ
5. ಕೃಷ್ಣ ಭಟ್ಟ, ತಾಳ್ತಜೆ ಕೃಷ್ಣ ಭಟ್ಟ ಮಗ
6. ಸುಬ್ಬಪ್ಪ ಸೆಟ್ಟಿ, ವೆಂಕಟ ಸೆಟ್ಟಿ ಅಳಿಯ } ಸ್ಥಳ.
7. ಸಂಕಪ್ಪ ಸೆಟ್ಟಿ
8. ಮೋನಪ್ಪ
9. ವೆಂಕಪ್ಪ
10. ಸೇಸಮ್ಮ
11. ಕುಂಞಿಂಞ } ಕುಂಞಕ್ಕೆ ಹೆಗ್ಗಿನ ಮಕ್ಕಳು—8, 9, 10, 11ನೇ ಯವರು ಮ್ಯಾನೇಜರು ಗಾರ್ಡಿಯನ್ ಆದ 7ನೇ ಎದ್ರಿ ಸಂಕಪ್ಪ ಸೆಟ್ಟಿ } ಕಾಸ್ರಗೋಡು ತಾಲ್ಲೂ ಇಚ್ಲಂಪಾಡಿ ಗ್ರಾಮದ ಕಾರಿಂಜೆ ಎಂಬಲ್ಲಿರುವ ಸ್ಥಾನಿಕರು.

ಮೇಲ್ಕಂಡ ಅಮಲ್ಜಾರಿಯಲ್ಲಿ ಸ್ವಸ್ತ ಹಣಕ್ಕೆ ಜವಾಬುದಾರ್ರ [illegible] ಆಸ್ತಿ ಏಲಂ ಡಿಕ್ರೀಕೆಂತ ವಗೈರೆ ಅರ್ಜಿದಾರರು ಹಾಜರು ಮಾಡಿದ, ಇಸ್ತಿಹಾರಿನ ಶರತ್ತುಗಳು ನಿರ್ಣಯಿಸುವರೇ ಇದೇ 1041ನೇ ಇಸವಿ ಮಾರ್ಚಿ ತಾ. 21ಕ್ಕೆ ಇಡಲಾಗಿಯದೆಂತಲ್ಲು. ಸದ್ರಿ ಏಲಂನಲ್ಲಿ [illegible] ಗೆ ಸಲ್ಲುವರೇ ತನಗೂ ಪರ್ಮಿಶನ್ ಕೊಡಬೇಕೆಂತ ವಗೈರೆ ಕೊಟ್ಟ R. E. A. 102/41ನೇ ಅರ್ಜಿ ಸಹ ತಾ. 21—3—1941ಕ್ಕೆ ಇಟ್ಟಿರುತ್ತದೆಂತಲ್ಲು, ಈ ಕುರಿತು ಆಕ್ಷೇಪವುಳ್ಳವರು ಸದ್ರಿ ವಾಯಿದೆ ದಿನ ಪೂರ್ವಾಹ್ನ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹ ಯಾ ವಕೀಲರ ದ್ವಾರ ಹಾಜರಾಗಿ ಉಜುರನ್ನು ತಿಳಿಸತಕ್ಕದ್ದೆಂತಲ್ಲು, ತಪ್ಪಿದ್ದಲ್ಲಿ ಏಕಪಕ್ಷ ಮಾಡಿ ಯುಕ್ತ ಕಂಡಂತೆ ತೀರ್ಮಾನ್ಯವಾಗುವುದೆಂತ ಸಹ ಈ ಮೂಲಕ ಕೋರ್ಟಿನ ಹುಕುಮ ಪ್ರಕಾರ ನಿಮಗೆ ತಿಳಿಯಪಡಿಸಲಾಗಿಯದೆ.

Puttur, S. K. }
Date 5—3—41 }

B. SHIVARAMA HOLLA.
Advocate for Petitioner.

ದಿ ಕೆಂಬ್ರ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

DEVEGADABETTU
9—3—[illegible]

FROM:

Sri K. Shivarama Nair,
Kerikeundah Estate,
Post Devegadabettu,
KADUR DISTRICT.

To,

The Joint Managers,
C. P. C. Motor Service Ltd.,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair.

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2-13-0   Regd. No. M. 3460

ಸ್ವದೇಶಾಭಿಮಾನಿ

ಸಂಪುಟ 35]   ತಾರೀಕು 14-3-1941   [ಸಂಚಿಕೆ 11]

The Bombay Life Assurance Company, Ltd.

(ESTABLISHED 1908)

Death! { is not a matter of supposition / is a matter of Certainty.

There is no "IF" in the matter.

Therefore,

A Policy now with the "BOMBAY LIFE" assure old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES,

The Bombay Life Building,

Gandhi Nagar, UDIPI.

OR AT ANY OF THEIR OFFICES AT:—

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Bombay No. 4.	Post Box No. 337 Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮೂತ್ರಾದ ಬೇನೆ, ಪಕ್ಕನೋವು, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬ್ಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ನಿಲಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

...ited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

ಕೀರ್ತಿಶೇಷ ಕೃಷ್ಣಪ್ಪನವರು

"ಬಾನಿನಂಚಿನೊಳಿಂದು ನಿಂತು ನೋಳ್ಪೆಯ ದೂರ?
ಬರಿದಯ್ಯೋ! ಬರಿದು ನೆಲ!! ಕೀರ್ತಿ ಶಾಶ್ವತ ನೀರ!"

—ಮುಗಾರ್ವಾಸ

BLOCK: SHARADA PRESS, MANGALORE.

KANNADA ILLUSTRATED WEEKLY

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2-13-0   **Regd. No. M. 3460**

ಸ್ವದೇಶಾಭಿಮಾನಿ

ಸಂಪುಟ 35]   ತಾರೀಕು 14-3-1941   [ಸಂಚಿಕೆ 11]

The Bombay Life Assurance Company, Ltd.

(ESTABLISHED 1908)

Death! { **is not a matter of supposition**
is a matter of Certainty

There is no "IF" in the matter.

Therefore,

A Policy now with the "BOMBAY LIFE" assures
old age Security & Family Protection

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES.

The Bombay Life Building,

Gandhi Nagar, UDIPI.

OR AT ANY OF THEIR OFFICES AT:—

Puthiyara, Calicut

Car Street, Mangalore.

Central Station Road, Trivandrum.

Gautam Nivas, Charni Road, Bombay No. 4.

Post Box No. 337, Mount Road, Madras.

Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮೊಣಕಾಲದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

ಕೀರ್ತಿಶೇಷ ಕೃಷ್ಣಪ್ಪನವರು

"ಬಾನಿನಂಚಿನೊಳಿಂದು ನಿಂತು ನೋಳ್ಪೆಯ ದೂರ?
ಬರಿದಯ್ಯೊ! ಬರಿದು ನೆಲ!! ಕೀರ್ತಿ ಶಾಶ್ವತ ವೀರ!"

—ಮರ್ಗಾವಾಸ

BLOCK SHARADA PRESS MANGALORE

KANNADA ILLUSTRATED WEEKLY

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2-13-0   Regd. No. M. 346

ಸ್ವದೇಶಾಭಿಮಾನಿ

ಸಂಪುಟ 35]   ತಾರೀಕು 14—3—1941   [ಸಂಚಿಕೆ 11]

The Bombay Life Assurance Company, Ltd.

(ESTABLISHED 1908)

Death! { is not a matter of supposition
is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection

BUSINESS IN FORCE EXCEEDS EIGHT CRORES

To Insure or to represent write to

KOCHIKAR BROTHERS, LIMITED.

MADRAS BRANCH SECRETARIES.

The Bombay Life Building,

Gandhi Nagar, UDIPI.

OR AT ANY OF THEIR OFFICES AT:—

Puthiyara, Calicut

Car Street, Mangalore.

Central Station Road, Trivandrum.

Gautam Niyas, Charni Road, Bombay No. 4.

Post Box No. 337 Mount Road, Madras.

Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಪ್ರಮುಖ ಊರುಗಳಲ್ಲಿ ಆ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಾಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

**ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!**

Edited Printed & Published by A. S. Kamath at the Sharada Press, Car Street, Mangalore.

ESTD 1906

ಸ್ವದೇಶಾಭಿಮಾನಿ

SWADESHABHIMANI

ಕೀರ್ತಿಶೇಷ ಕೃಷ್ಣಪ್ಪನವರು

"ಬಾನಿನಂಚಿನೊಳೊಂದು ನಿಂತು ನೋಳ್ಪೆಯು ದೂರ?
ಬರಿದಯ್ಯೊ! ಬರಿದು ನೆಲ!! ಕೀರ್ತಿ ಶಾಶ್ವತ ವೀರ!"

— ಮುರ್ಗಾಪಾಕ

BLOCK: SHARADA PRESS, MANGALORE.

KANNADA ILLUSTRATED WEEKLY

ಅಕ್ಕಿಯ ಧಾರಣೆ ಇಳಿಸುವುದು

ಕಲೆಕ್ಟರರ ಪ್ರಕಟಣೆ

ಎಂದಿನಂತೆ ಬರ್ಮಾ ದೇಶದಿಂದ ಮಲಬಾರಿಗೆ ಬರುತ್ತಿರುವ ಅಕ್ಕಿಯು ಈ ವರುಷ ಬಾರದ್ದರಿಂದ ಅಲ್ಲಿ ಅಕ್ಕಿಯು ಕಡಿಮೆಯಾಗಿದೆಯೆಂದೂ ಆ ಕಾರಣದಿಂದ ಪ್ರಕೃತ ಅಕ್ಕಿಯ ಬೆಲೆಯು ವಿಶೇಷವಾಗಿ ಏರುತ್ತದೆಂದೂ ಆರೋಪವನ ಹೊರಟಿದೆ. ಇಲ್ಲಿಯ ಕೆಲವು ಕಡೆಗಳಲ್ಲಿ ಈ ಕಾರಣದಿಂದ ಅಕ್ಕಿಯ ಬೆಲೆ ಏರಬಹುದೆಂದು ಆಲೋಚಿಸಲು ಎಡೆ ಇದೆ. ಆದರೆ ಇಲ್ಲಿಯ ಹೆಚ್ಚಿನ ಕಡೆಗಳಲ್ಲಿ ಅಕ್ಕಿಯ ಬೆಲೆಯನ್ನು ಬೇಕಾದಂತೆ ಏರಿಸುವುದಕ್ಕೋಸ್ಕರವಾಗಿಯೇ ಈ ನೆವನವನ್ನು ಮುಂದಿಡಲಾಗಿದೆ.

ಅದು ಹೇಗಿದ್ದರೂ, ಈ ಕಾರಣವು ಬರೇ ಅತ್ಯಲ್ಪ ಕಾಲಕ್ಕೆ ಸಂಬಂಧಿಸಿದುದಾಗಿದೆ. ಎಂದಿನಂತೆ ಬರುವ ಅಕ್ಕಿಯು ಬರ್ಮಾ ದೇಶದಿಂದ ಈಗಾಗಲೇ ಮಲಬಾರಿಗೆ ಬಂದಿರುತ್ತದೆ. ಆದ್ದರಿಂದ ಇಲ್ಲಿ ಅಕ್ಕಿಯ ಬೆಲೆ ಏರಿದುದಕ್ಕೆ ಆ ಕಾರಣವನ್ನು ಕೊಡಲು ಸಾಧ್ಯವಿಲ್ಲ. ನಮ್ಮ ಜಿಲ್ಲೆಯಲ್ಲಿ ಅಕ್ಕಿಯ ಸಂಗ್ರಹವು ಕಡಿಮೆಯಾಗಿದೆಯೆಂದೂ ಬರ್ಮಾ ದೇಶದಿಂದ ಇಲ್ಲಿಗೆ ಅಕ್ಕಿಯನ್ನು ತರಿಸಲು ಅಸಾಧ್ಯವಾಗುವುದೆಂದೂ ಆ ಕಾರಣದಿಂದ ಮಳೆಗಾಲದಲ್ಲಿ ಅಕ್ಕಿಯ ಕೊರತೆಯು ಇನ್ನೂ ಏರುವುದೆಂದೂ ಜನರು ಭಾವಿಸಿ ಅಕ್ಕಿಯ ಕ್ರಯವನ್ನು ಇನ್ನೂ ಏರಿಸುತ್ತಾರೆಂದೂ ಇಲ್ಲದೆ ಅಕ್ಕಿಯನ್ನು ದಾಸ್ತಾನು ಮಾಡುವರೆಂದೂ ತಿಳಿದು ಬಂದಿದೆ.

ಈ ಕಾರಣವನ್ನು ಒಪ್ಪಲು ಸಾಧ್ಯವಿಲ್ಲ. ಜನರು ಬರೇ ಊಹನೆಯಿಂದಲೇ ಈ ರೀತಿ ಮಾಡುತ್ತಾರೆ. ಈ ಊಹನೆಯಿಂದ ಅಕ್ಕಿಯನ್ನು ದಾಸ್ತಾನು ಮಾಡುವ ಜಮೀನುದಾರರನ್ನೂ, ದಲಾಲಿಗಳನ್ನೂ, ರಖಂ ವ್ಯಾಪಾರಸ್ಥರನ್ನೂ, ಡಿಫೆನ್ಸ್ ಆಫ್ ಇಂಡಿಯಾ ಕಾನೂನು ಪ್ರಕಾರ ಶಿಕ್ಷಿಸಲಾಗುವುದೆಂದು ಎಚ್ಚರಿಕೆ ಕೊಡುವಂತೆ ರೆವಿನ್ಯೂ ಡಿವಿಜನಲ್ ಆಫೀಸರರಿಗೂ ತಹಸಿಲ್ದಾರರಿಗೂ ತಿಳಿಸಲಾಗಿದೆ. ಅದೇ ರೀತಿಯಾಗಿ ಚಿಲ್ಲರೆ ವ್ಯಾಪಾರಸ್ಥರನ್ನು ಎಚ್ಚರಿಸಬೇಕು. ಏಕೆಂದರೆ ಇವರು ರಖಂ ವ್ಯಾಪಾರಸ್ಥರಿಂದ ಅಕ್ಕಿಯನ್ನು ಕೊಂಡು ಮಾಡುವುದರಿಂದ ಬೆಲೆಯನ್ನು ಏರಿಸುವ ಅಗತ್ಯವಿಲ್ಲ. 'ಪ್ರೈಸಸ್ ಎಡ್ವೈಸರಿ ಕಮಿಟಿ'ಯವರು ನಿರ್ಣಯಿಸಿದ ಧಾರಣೆಗಿಂತ ಹೆಚ್ಚು ಧಾರಣೆಯಲ್ಲಿ ಇವರು ಅಕ್ಕಿಯನ್ನು ಮಾರಿದರೆ ಡಿಫೆನ್ಸ್ ಆಫ್ ಇಂಡಿಯಾ ಕಾನೂನು ಮೇರೆಗೆ ಇವರನ್ನು ಶಿಕ್ಷಿಸಲಾಗುವುದು.

'ಪ್ರೈಸಸ್ ಎಡ್ವೈಸರಿ ಕಮಿಟಿ'ಗಳು ಇನ್ನೂ ವಿವಿಧ ಧಾರಣೆಗಳನ್ನು ನಿರ್ಧರಿಸುವಾಗ ರೆವಿನ್ಯೂ ಡಿವಿಜನಲ್ ಆಫೀಸರರು ಈ ವಿಷಯದಲ್ಲಿ ಹೆಚ್ಚಿನ ಜಾಗ್ರತೆಯನ್ನು ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ. 'ಪ್ರೈಸಸ್ ಎಡ್ವೈಸರಿ ಕಮಿಟಿ'ಯವರು ನಿರ್ಣಯಿಸಿದ ಧಾರಣೆಗಿಂತ ಹೆಚ್ಚು ಧಾರಣೆಯಲ್ಲಿ ಅಕ್ಕಿಯನ್ನು ವಿಕ್ರಯಿಸಿದ ಚಿಲ್ಲರೆ ವ್ಯಾಪಾರಸ್ಥರು, ರಖಂ ವ್ಯಾಪಾರಸ್ಥರು ಮತ್ತು ಜಮೀನುದಾರರು—ಇವರ ವಿಷಯ ಕೂಲಂಕಷ ವಿವರಗಳನ್ನು ಮೇಲೆ ತಿಳಿಸಿದ ಆಫೀಸರರು ನನಗೆ ತಿಳಿಸತಕ್ಕದ್ದು. ಧಾರಣೆ ವಿಚಾರವಾಗಿ ಇವರು ಎಚ್ಚರಿಕೆ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ. ಮಲಬಾರಿಗೆ ಅಕ್ಕಿ ಸಂಗ್ರಹ ಮಾಡಿದುದರಿಂದ ಈ ಜಿಲ್ಲೆಯಲ್ಲಿ ಅಕ್ಕಿಯ ಸಂಗ್ರಹವು ಎಷ್ಟು ಕಡಿಮೆಯಾಗಿದೆಯೆಂದು ನಾನು ತನಿಖೆ ಮಾಡುತ್ತಿರುವೆನು. ಇಲ್ಲಿಗೆ ಅಕ್ಕಿಯು ಅಗತ್ಯವಿದ್ದರೆ ಬರ್ಮಾದಿಂದ ಅಕ್ಕಿಯನ್ನು ತರಿಸುವ ವ್ಯವಸ್ಥೆ ಮಾಡಲಾಗುವುದು. ಅಗತ್ಯ ಇದ್ದ ವ್ಯಾಪಾರಸ್ಥರು ತಿಳಿಸಬಹುದು. ತನಿಖೆಗಳು ಮುಗಿದೊಡನೆ ನಾನು ಈ ಏರ್ಪಾಡುಗಳನ್ನು ನಡೆಸಲು ಆಲೋಚಿಸುವೆನು. ಅಗತ್ಯವಿದ್ದರೆ ವಿಶೇಷವಾದ ಏರ್ಪಾಡುಗಳನ್ನು ಮಾಡಲಾಗುವುದೆಂದು ಎಲ್ಲರೂ ನಂಬಿಕೆಪಡಬಹುದು.

ಕಲೆಕ್ಟರರ ಆಫೀಸು, ಮಂಗಳೂರು. ತಾ 13-8-'41 } (ಸಹಿ) ಕಲೆಕ್ಟರ್.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R L P. 415/40
O S 427/31 A. S. 224 & 2..3/32
A. 459/38

...ತನ್ನು ಕೂಡಾ . ಅರ್ಜಿದಾರರು
ಮತ್ತು
ಶ್ರೀನಿವಾಸರಾವ್ ಕೂಡಾ . .
. . . ರೆಸ್ಪೊಂಡೆಂಟರು.

ಸದ್ರಿ ನೆವಸರಸೆಯ

1ನೇ ಪ್ರೈ ಶ್ರೀನಿವಾಸರಾವ್ ಸಸಿಹಿತ್ಲು ಸುಬ್ರಾಯರ ಮಗ	
2ನೇ ಪ್ರೈ ನಾಗವೇಣಿಯಮ್ಮ—1ನೇ ಶ್ರೀನಿವಾಸರಾಯರ ಹೆಂಡ್ತಿ	
7ನೇ ಪ್ರೈ ...ಂದು ಶೆಟ್ಟಿ } ಕಾವೇರಿ	
...ನೇ ಪ್ರೈ ...ಂಜು ಶೆಟ್ಟಿ } ಮಕ್ಕಳು.	
10. ...ಮು ಶೆಟ್ಟಿ ...ಂಜು ಹೆಂಗ್ಸಿನ ಮ...	
11. ದೇಜು ಶೆಟ್ಟಿ } ...ನು ಹೆಂಗ್ಸಿನ	
13 ...ನು ಶೆಟ್ಟಿ } ಮಕ್ಕಳು.	

ಕ್ರಮವಾಗಿ 7 ಜನರಿಗೆ ಈ ಮೂಲಕ ತಿಳಿಸುವ ದೇನೆಂದರೆ—

ಮೇಲಿನ ಅರ್ಜಿದಾರರು ನೀವು ವಗೈರೆ ಮೇಲೆ ದಾಖ್ಲೆ ಮಾಡಿದ 415/40ನೇ ಅಮಲ್ದಾರಿಯು ತಾ. 29—3—41ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಟ್ಟಿದೆ. ನಿಮ್ಮ ಮೇಲೆ ಯಾಕೆ ಅಮಲ್ದಾರಿ ಸದ್ರಿ ಕೂಡದು ಎಂಬುದಕ್ಕೆ (O. 21 Rule 22) ನಿಮ್ಮ ಆಕ್ಷೇಪಣೆ ಇದ್ದರೆ ನೀವು ಅದನ್ನು ಆ ದಿವಸ ಆ ಕೋರ್ಟಿನ ಮುಂದೆ ಖುದ್ದು ಯಾ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮ ಗೈರುಹಾಜ್ರಿಯಲ್ಲಿಯೂ ಅಮಲ್ದಾರಿ ಮುಂದರಿಯುವದು. ಇತಿ.

10-8-'41 } ಮಂಗಳೂರು } K Vyasa Rau, Advocate for Petitioners

ಬ್ರಿಟನಿಗೆ ಸಹಾಯಮಾಡಲು ವಿಜ್ಞಾನಿಗಳ ಆತುರ

ಈಗ ಬ್ರಿಟನಿನಲ್ಲಿ ವಾಸವಾಗಿರುವ ಅರುನೂರು ಲೋಕವಿಖ್ಯಾತ ವಿಜ್ಞಾನಿಗಳು, ಇವರೆಲ್ಲರೂ ವಿದೇಶೀಯರಾಗಿ ಬ್ರಿಟನಿನಲ್ಲಿ ನೆಲೆನಿಂತವರಾಗಿರುವರು. ಬ್ರಿಟನಿನ ಯುದ್ಧಕಾರ್ಯದಲ್ಲಿ ಅದಕ್ಕೆ ತಮ್ಮ ಸರ್ವಸಹಾಯವನ್ನು ಕೊಡುವ, ಅಗತ್ಯಬಿದ್ದರೆ ತಮ್ಮ ಪ್ರಾಣಗಳನ್ನು ಸಹ ಕೊಡುವ ದೃಢ ನಿರ್ಧಾರಮಾಡಿ, ಅದನ್ನು ಬ್ರಿಟಿಷ್ ಸರಕಾರಕ್ಕೆ ತಿಳಿಸಿರುವರು.

ಈ ವಿಜ್ಞಾನಿಗಳು ತಮ್ಮ ಒಂದು ಸಂಘವನ್ನು ಸ್ಥಾಪಿಸಿದ್ದಾರೆ. ಪ್ರಜಾಪ್ರಭುತ್ವದ ರಕ್ಷಣೆಗಾಗಿ ಹೋರಾಡುವುದೇ ಈ ಸಂಘದ ಮಹೋದ್ದೇಶವಾಗಿರುವದು. ಸೈನಿಕ ಕಾವಲು ಇರುವ ಒಂದು ಕಾರ್ಖಾನೆಯಲ್ಲಿ ಶತ್ರುಸಿಗ್ರಹಕ್ಕೆ ಬೇಕಾದ ಸಾಧನೋಪಾಯಗಳನ್ನು ಕಂಡುಹಿಡಿಯುವ ಕಾರ್ಯದಲ್ಲಿ ಸಂಘದ ಎಲ್ಲಾ ಸದಸ್ಯರೂ ತೊಡಗುವರು.

ಈ ಸದಸ್ಯರಲ್ಲಿ ಅನೇಕರು ಬ್ರಿಟಿಷರ ಕೈಸೆರೆಯಲ್ಲಿದ್ದಾರೆ. ಸೆರೆಯಲ್ಲಿದ್ದಾಗಲೇ ಇವರು ಈ ವಿಚಾರ ಮಾಡಿಕೊಂಡು ಮೇಲಿನ ಸಂಘವನ್ನು ಸ್ಥಾಪಿಸಿದ್ದಾರೆ.

ಈ ವಿಜ್ಞಾನಿಗಳು ಮಾತ್ರವಲ್ಲದೆ ೫೦೦ ಮಂದಿ ಬೇರೆ ನುರಿತ ಕೆಲಸಗಾರರು ಕೂಡ ಬ್ರಿಟನಿಗೆ ತನ್ನ ಸಂಪೂರ್ಣ ಸೇವೆಯನ್ನು ಒಪ್ಪಿಸಲಿಕ್ಕೆ ಸಿದ್ಧರಾಗಿ ನಿಂತಿದ್ದಾರೆ. ಈ ಇನ್ನೂರು ಮಂದಿಯೂ ವಿದೇಶೀಯರಾಗಿರುವರು. ಆದರೆ ಬ್ರಿಟನಿನ ಯುದ್ಧನೀತಿಯು ಅವರಿಗೆ ಮಾನ್ಯವಾಗಿದೆ. ಆದ್ದರಿಂದಲೇ ಅವರು ತಮ್ಮ ಅನುಭವವನ್ನು ಬ್ರಿಟನಿಗೆ ಕೊಡುವರು. ಕೈಸೆರೆಯಾಗಿ ವ್ಯರ್ಥ ಜೀವನವನ್ನು ಸಾಗಿಸುವುದಕ್ಕಿಂತ ಈ ರೀತಿ ಉಪಕಾರಿಗಳಾಗಿ ಸಾಯುವದು ಮೇಲೆಂದು ಅವರಿಗೆ ತೋರಿದೆ.

ಏಲ್ಯುಮಿನಿಯಂ ತಜ್ಞ

ಬ್ರಿಟನಿಗೆ ಎಲ್ಲಾ ಸಹಾಯವನ್ನು ಕೊಡಲಿಕ್ಕೆ ಹೆಸರು ಕೊಟ್ಟುವರಲ್ಲಿ ಒಬ್ಬ ಏಲ್ಯುಮಿನಿಯಂ ತಜ್ಞನೂ ಇದ್ದಾನೆ. ಇವನು ಪ್ರಪಂಚದಲ್ಲೇ ಸಿಕಖ್ಯಾತ ತಜ್ಞನಾಗಿದ್ದಾನೆ. ಆದ್ದರಿಂದಲೇ ಅವನ ಅನ...

ಭೂಪಟವನ್ನು ಜಪಾನ್, ರಷ್ಯ, ಅಮೇರಿಕೆ ದಂಥ ವಿಜ್ಞಾನದಲ್ಲಿ ಬಹಳ ಮುಂದುವರಿದ ರಾಷ್ಟ್ರಗಳು ಕೂಡ ಅಪೇಕ್ಷಿಸಿವೆ.

TENDER NOTICE

Sealed tenders from registered contracters will be received up to 3 P. M. on the 2nd day of April 1941 for constructing a bridge across Vodenchal stream at 10/3 of Hosdurg Panathady road estimate Rs. 16000/- Tender documents, plans etc. can be seen in the District Board Engineer's office Mangalore during office hours and can be obtained on payment of Rs 5— per set which amount will on no account be refunded.

Mangalore, 16-8-1941 } (Sd) P. T. Narayana Nayar, District Board Engineer, South Kanara.

ರೋಗ ವಾಸಿಯಾದ ಕೂಡಲೇ, ದಿನನಿತ್ಯ ಓವಲ್‌ಟಿನನ್ನು ಕುಡಿದು ನಿಮ್ಮ ಹಿಂದಿನ ಆರೋಗ್ಯವನ್ನು ಪಡೆಯಿರಿ. ನೀವು ಅದರ ಹಿತಕರವಾದ ಸವಿಯನ್ನು ಕೊಂಡಾಡುವಿರಿ. ನಿಶ್ಶಕ್ತವಾದ ಶರೀರಕ್ಕೆ ದುರ್ಬಲವಾದ ನರಗಳಿಗೆ, ಅದು ತಿರಿಗಿ ಶಕ್ತಿಯನ್ನು ಉಂಟು ಮಾಡಿ, ಸುಖ ನಿದ್ರೆಯನ್ನುಂಟು ಮಾಡುವುದಲ್ಲದೆ ಶರೀರವನ್ನು ಕ್ರಮಕ್ರಮೇಣ ಬಲಗೊಳಿಸುವುದು.

ಓವಲ್‌ಟಿನ್ ಶುದ್ಧ, ಪೂರ್ಣ ನೈಸರ್ಗಿಕ ಆಹಾರವಾಗಿದೆ. ದಿನನಿತ್ಯ ಆರೋಗ್ಯದ ಸಲುವಾಗಿ ಅದನ್ನು ಕುಡಿಯಿರಿ. ಇತರ ನಕಲಿ ಮಾಲುಗಳನ್ನು ಉಪಯೋಗಿಸದಿರಿ.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಅಂಗಡಿಗಳಲ್ಲಿಯೂ ಇದು ಮಾರಾಟಕ್ಕಿದೆ.

ಡಿಸ್ಟ್ರಿಬ್ಯೂಟರ್ಸ್—ಗ್ರೆಹಮ್ಸ್ ಟ್ರೇಡಿಂಗ ಕಂಪೆನಿ (ಇಂಡಿಯಾ) ಲಿಮಿಟೆಡ್, ಬೊಂಬಾಯಿ, ಕಲ್ಕತ್ತ, ಮದ್ರಾಸು, ಕರಾಚಿ, ರಂಗೂನ್.

ಓವಲ್‌ಟಿನ್
OVALTINE

ಓವಲ್ಟಿನ್ ಬಿಸ್ಕುಟುಗಳು

ಕೆಲವು ಓವಲ್ಟಿನ್ ಬಿಸ್ಕುಟುಗಳನ್ನು ಉಪಯೋಗಿಸಿ ನೋಡಿರಿ.

ಮಧುರವಾಗಿವೆ, ಜೀರ್ಣಕಾರಿಯಾಗಿವೆ, ಮತ್ತು ಆರೋಗ್ಯಕರವಾಗಿವೆ; ನಿಮಗೆ ಬೇಕಾದ ಯೋಗ್ಯವಾಗಿವೆ. ೪ ಔನ್ಸ್ ಮತ್ತು ೮ ಔನ್ಸ್‌ಗಳ ಪಕೇಟುಗಳಾಗಿಯೂ, ಒಂದು ಪೌಂಡಿನ ಡಬ್ಬಿಗಳಾಗಿಯೂ ಮಾರಾಟವಾಗಲಾಗುತ್ತವೆ.

OV/26740

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

21—3—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೧—೩—೧೯೪೧

ಭಾರತದ ಕುರಿತು ಅಮೇರಿಕವು ಹೇಳುವುದೇನು?

'ರಾಷ್ಟ್ರೀಯ ಜಾಗೃತಿಯು ಜನತಾ ಆಂದೋಲನವನ್ನೇ ಹುಟ್ಟಿಸಿದೆ'

ವಿನಯಪೂರ್ವಕವಾಗಿ ಅವಿಧೇಯರಾಗಿದ್ದಾರೆ

— ಅಮೇರಿಕದ ಟೈಮ್ ಪತ್ರಿಕೆಯ ಲೇಖನ —



ಅಮೇರಿಕವು ಭಾರತದ ಪರಿಸ್ಥಿತಿಯ ಕುರಿತು ಏನೆಂದು ಅಭಿಪ್ರಾಯಪಡುತ್ತದೆ? ಅಮೇರಿಕದ ಪತ್ರಿಕೆ 'ಟೈಮ್' ಎಂಬುದರಲ್ಲಿ ಈ ವಿಷಯದ ಲೇಖನವು ಸಬ ವರಿಯಲ್ಲಿ ಪ್ರಕಟವಾಗಿದೆ. ಅದರಿಂದ ಅಲ್ಲಿ ಭಾರತದ ಹೇಗೆ ಸುದ್ದಿಗಳು ಹರಡುತ್ತಿವೆ ಎಂಬ ವಿಚಾರವು ತಿಳಿದು ಬರುತ್ತದೆ. ಇದ ಕುತೂಹಲ ಜನಕವಾಗಿರುವುದಾಗಿದೆ.

— ಲೇಖನದ ಸಾರಾಂಶ —

'ಭಾರತದ ಇಂದಿನ ವಿಷಮ ಪರಿಸ್ಥಿತಿಯಲ್ಲಿದೆ. ಕಳೆದ ಹತ್ತು ವರ್ಷಗಳ ಹಿಂದಿನ ಸತ್ಯಾಗ್ರಹ ಸಮರದ ಮೇಲು ಈ ರೀತಿಯ ವಿಷಮತೆಯು ಏರಿ ಅಲ್ಲಿ ಉಂಟಾಗಿಲ್ಲ.

ಈ ವರ್ಷದಲ್ಲಿ ಕಾಂಗ್ರೆಸ್ ಪಕ್ಷದ ಒರಲಾದ ವಿನೋಬಾ ಭಾವೆಯೆಂಬವರನ್ನು ಯುದ್ಧ ವಿರುದ್ಧ ಭಾಷಣ ಕೊಟ್ಟುದರ ಸಲುವಾಗಿ ಸೆರೆ ಹಾಕಿದ್ದಾರೆ. ಮೂರು ತಿಂಗಳ ಹಿಂದೆ ಗಾಂಧಿ ಅವರನ್ನು ಮೊದಲನೆಯ ಸತ್ಯಾಗ್ರಹಿಯಾಗಿ ಆರಿಸಿದರು. ಈಗ ೬೦೧ ಜನರು ಬಿಡುಗಡೆ ಹೊಂದಿ ಪುನಃ ಸತ್ಯಾಗ್ರಹ ಮಾಡುವವರಿದ್ದಾರೆ.'

'ಅವರ ಬಿಡುಗಡೆಯನ್ನು ಹಿಂಬಾಲಿಸಿ ೫,೦೦೦ ಮಂದಿ ಭಾರತೀಯರು ಇಂದು ಸೆರೆಮನೆ ಸೇರಿದ್ದಾರೆ. ಇವರಲ್ಲಿ ಕಾಂಗ್ರೆಸ್ ಅಧ್ಯಕ್ಷ ಆಜಾದರು, ಹಿಂದಿನ ಅಧ್ಯಕ್ಷರು, ಹಲವು ಮುಖ್ಯಮಂತ್ರಿಗಳು, ಸ್ಪೀಕರರು, ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರು, ಹೀಗೆ ಎಲ್ಲಾ ಪ್ರಮುಖ ಕಾಂಗ್ರೆಸ್ ಸದಸ್ಯರೂ ಈಗ ಸೆರೆಮನೆಯಲ್ಲಿದ್ದಾರೆ. ಆದರೆ ಗಾಂಧೀಜಿ ಮಾತ್ರ ಬಂಧಿತರಾಗಲಿಲ್ಲ.

ಸವಿನಯ ಅವಿಧೇಯತೆ

"ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು ಯುದ್ಧವಿರುದ್ಧ ಮಾತನಾಡುವುದನ್ನು ಸಹಿಸಲು ಸಾಧ್ಯವಿಲ್ಲವೆಂದು ಗಾಂಧೀಜಿಯವರನ್ನು ಎಚ್ಚರಿಸಿದರು. ಗಾಂಧೀಜಿಯವರು, ಕೂಡಲೇ ತನ್ನ ಅನುಯಾಯಿಗಳಿಗೆ ಹಳ್ಳಿಗಳಿಗೆ ಹೋಗಿ ಅಲ್ಲಿ ಪ್ರಚಾರ ಮಾಡಿರೆಂದರು. ಅಲ್ಲಿ ಪ್ರಚಾರಮಾಡುವವರನ್ನು ಸರಕಾರವು ಬಂಧಿಸಿತು.

'ಇಂತಹ ವಿನಯಪೂರ್ವಕವಾದ ಅವಿಧೇಯತೆಯು ಬ್ರಿಟಿಷ್ ರಾಜನಿಗೆ ಒಳ್ಳೆ ತೊಂದರೆ ಕೊಟ್ಟಿದೆ. ಬ್ರಿಟನ್ನಿನಿಂದ ಬರುವಂಥ ಪತ್ರಿಕೆಗಳು ಸೆರೆಮನೆಯ ಈ ಸುದ್ದಿಗಳನ್ನು ಪ್ರಕಟಿಸುವುದಿಲ್ಲ. ಭಾರತದಲ್ಲಿ ಕಾರ್ಯಕಲಾಪಗಳ ಸೂತ್ರಧಾರಿ ಸಾಗುತ್ತಿವೆ. ಹಲವು ಕಾಂಗ್ರೆಸ್ ಮುಖಂಡರೂ ತಪ್ಪು ಮಾಡದೆಯೇ ಸೆರೆಮನೆಗೆ ಸೇರಿಸಲ್ಪಟ್ಟಿರುವುದರಿಂದ ಈಗ ಭಾರತದಲ್ಲಿ ಎಲ್ಲಾ ಕಡೆಗಳಲ್ಲಿಯೂ ಜನತೆಯಲ್ಲಿ ಅಸಂತೋಷವು ತಲೆಯೆತ್ತಿದೆ.

'ಇತ್ತೀಚೆಗೆ ಭಾರತದ ರಾಷ್ಟ್ರೀಯ ಜಾಗೃತಿಯು ಜನತಾ ಆಂದೋಲನವನ್ನೇ ಹುಟ್ಟಿಸಿದೆ.' ಅಲ್ಲಿ ವಿಜ್ಞಾನದಲ್ಲಿ ವಿದ್ಯೆಯಲ್ಲಿ ಹೊಸ ಸಂವತ್ಸರ ಉಂಟಾಗಿದೆ. ಸಾಮಾಜಿಕ ಮತ್ತು ರಾಜಕೀಯ ವಿಚಾರಗಳಲ್ಲಿ ಅದು ಎಚ್ಚತ್ತಿದೆ. ಹನ್ನೊಂದು ವರ್ಷಗಳ ಹಿಂದೆ ಕಾಂಗ್ರೆಸ್ಸು ಸ್ವಾತಂತ್ರ್ಯದ ಘೋಷಣೆಯೊಂದನ್ನು ಸಾರಿಬಿಟ್ಟಿದೆ.

ಇತ್ತೀಚೆಗೆ ಕಾಂಗ್ರೆಸ್ಸಿನ ಪ್ರಭಾವವು ಬಹಳವಾಗಿ ಬೆಳೆಯುತ್ತಾ ಬಂದಿದೆ. ಹಿಂದುಗಳು, ಬಹಳ ಮಂದಿ ಮುಸಲ್ಮಾನರು ಅದರಲ್ಲಿ ಸೇರಿ ಸದಸ್ಯರಾಗಿದ್ದಾರೆ. ಕಾಂಗ್ರೆಸ್ಸು ಭಾರತದಲ್ಲಿ ಬಹು ಮತವನ್ನು ಪಡೆದ ಪ್ರಬಲ ಸಂಸ್ಥೆಯಾಗಿದೆ.

ಚರ್ಚಿಲರು ಏನು ಹೇಳಿದರು!

ಬ್ರಿಟನು ಭಾರತದ ವಿಷಯ ಹೇಳುವುದೆಂದರೆ ಹೀಗಿದೆ. ಬ್ರಿಟನವು ಬ್ರಿಟಿಷ್ ಸಾಮ್ರಾಜ್ಯವನ್ನು ಉಳಿಸಲು ಸಮರ ಮಾಡುತ್ತಿರುವಾಗ ಇತರ ನಾಗರಿಕರ ಜನರ ಸ್ವಾಧೀನತೆಗಳನ್ನು ಎಳೆಯುವುದು, ನಾವು ಜಯಿಸಿದ ಮೇಲೆ ಸಾಮಂತ ಸ್ವರಾಜ್ಯವನ್ನು ಕೊಡುವೆವು. ಭಾರತದಲ್ಲಿ ಬ್ರಿಟನಿನ ಸಾಮ್ರಾಜ್ಯವಾದವು ಒಂದು ವಾಲಬ್ಯ ವಿಷಯವಾಗಿದೆ. ಇದು 'ಪತ್ರದಲ್ಲಿ ವಾಕ್ಯಮೆಂದು ಬರೆದರು. ಭಾರತೀಯರಾಗಿಯೇ ಜೀವಿಸುತ್ತಾರೆ' ಹೀಗೆ ಚರ್ಚಿಲ್ಲರು ಹೇಳಿದರು.

'ಆದರೆ ಭಾರತವು ಸ್ವರಾಜ್ಯವನ್ನು ಮಾಡುವ ತರ್ಕವು ಹೀಗಿದೆ. ಬ್ರಿಟನು ಆತ್ಮಸಾಕ್ಷಿಯಿಂದ ಪ್ರಜಾಪ್ರಭುತ್ವಕ್ಕೋಸ್ಕರ ಹೋರಾಡುತ್ತದೆಯೇ? ಹಾಗಾದರೆ ಈ ವಿಷಯವನ್ನು ಭಾರತಕ್ಕೆ ಪ್ರಜಾಪ್ರಭುತ್ವ ಕೊಡುವ ಮೂಲಕ ಬ್ರಿಟನು ತೋರಿಸಲಿ. ಹಾಗಾದರೆ ಭಾರತವು ಬ್ರಿಟನಿನ ಪಕ್ಷವನ್ನೇ ಹಿಡಿಯುವುದು. ಅವರಿಗೆ ಯಾವ ತರದ ಸ್ವರಾಜ್ಯ ಬೇಕೆಂಬುದನ್ನು ನಿರ್ಣಯಿಸುವ ಅಧಿಕಾರ ಭಾರತಕ್ಕೇ ಸಿಗಬೇಕು ಎಂದು ಒಂದು. ಸಾಮ್ರಾಜ್ಯವು ಭಾರತಕ್ಕೆ ಎನ್ನು ವಿಷಯದಲ್ಲಿ ... ಈಗ ಭಾರತದಲ್ಲಿ ನೆಲಸಿರುವ ಸಾಧ್ಯವಿಲ್ಲದ ಪರಿಸ್ಥಿತಿ ಏರ್ಪಡುವಾಗ ಇನ್ನು ಯಾವುದನ್ನೂ ಇಲ್ಲಿ ಎಂದಿಗೂ ಆವಶ್ಯವಾಗಿದೆ.

'ಭಾರತದಲ್ಲಿ' ಗಾಂಧಿಯವರು ಎಲ್ಲ ವಿಧದಲ್ಲಿಯೂ ಸಮಾಧಾನ ಗುಣದವರು. ಬ್ರಿಟನು ಭಾರತವನ್ನು ರಾಷ್ಟ್ರವನ್ನಾಗಿ ಈ ತಯಾರಿ ಹೀಗೆ ಹರಡುತ್ತಿದ್ದರೆ, ಗಾಂಧಿ ತನ್ನ ಅನುಯಾಯಿಗಳನ್ನು ಸಮಾಧಾನದಿಂದಲೇ ನಡೆಸಿದ್ದಾನೆ. ಗಾಂಧಿಯನ್ನು ಒಂದು ಪಕ್ಷ ... ಭಾರತದ ... ತಿಳಿಯಬೇಕಾಗಿದೆ.

ಅದೇ ರೀತಿ ಪತ್ರಿಕೆಯು ಈ ಅಭಿಪ್ರಾಯವು ಸ್ವರಾಜ್ಯಕ್ಕಾಗಿ ಹೋರಾಡುತ್ತಿದೆ ಅದರ ಹೋರಾಟವು ಕಡಿಮೆಯಾಗಿಲ್ಲವೆಂದು ...

U. K. BHUJANGA NAYAK
CLOTH COMMISSION AGENT
SHEVAPET, SALEM
ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶೆವಪೇಟೆ, ಸೇಲಂ.
ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ಧೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.
ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಸ್ವದೇಶಾಭಿಮಾನಿ

ತಾರೀಕು 21—3—1941

ರೂಸ್‌ವೆಲ್ಟರ ವೀರವಾಣಿ

ಬ್ರಿಟಿಷ್ ಸಹಾಯಕ ಮಸೂದೆಗೆ ಸಹಿ ಹಾಕುತ್ತಾ, ಬ್ರಿಟನಿನ ಹಾಗೂ ಪ್ರಜಾಪ್ರಭುತ್ವ ರಾಷ್ಟ್ರಗಳ ರಕ್ಷಣೆಗಾಗಿ ಬೆಂಬಲ ಕೊಡುವ ನಿಶ್ಚಲ ನಿರ್ಧಾರವನ್ನು ಸಾರಿದ ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರ ವೀರವಾಣಿಯು ಪ್ರಜಾಪ್ರಭುತ್ವ ಪ್ರಿಯವಾದ ಜಗತ್ತಿಗೇ ಅತ್ಯಂತ ಆನಂದವನ್ನು ಕೊಡುವಂತಹುದಾಗಿದೆ. ಎಂತಹ ವಿಪತ್ತು ಬಂದರೂ, ಪ್ರಜಾಪ್ರಭುತ್ವದ ಸಲುವಾಗಿ, ಸ್ವಾತಂತ್ರ್ಯದ ಸಲುವಾಗಿ ಅಮೆರಿಕವು ಎಲ್ಲಾ ಕಡೆಗೂ ಎಲ್ಲಾ ತರದ ಸಹಾಯಗಳನ್ನೂ ಕೊಡುವುದೆಂದು ಸ್ಪಷ್ಟವಾಗಿಯೂ ಬಹಳ ಗಂಭೀರವಾಗಿಯೂ ವರುಅ ಉದ್ಘೋಷಿಸಿದರು. ಪ್ರಜಾಪ್ರಭುತ್ವದ ಜ್ಯೋತಿಯನ್ನು ಸದಾ ಪ್ರಕಾಶಮಾನವಾಗಿ ಉರಿಸಬೇಕು; ಅಮೇರಿಕನರು ಇಂದಿನ ಗಂಭೀರತೆಯನ್ನು ಅರ್ಥ ಮಾಡಿಕೊಂಡಿದ್ದಾರೆ. ಆದ್ದರಿಂದಲೇ ಅವರು ಬ್ರಿಟಿಷ ಸಹಾಯಕ ಮಸೂದೆಯನ್ನು ಮಂಜೂರು ಮಾಡಿದ್ದಾರೆ; ಮತ್ತು ಗ್ರೀಸ್, ಚೈನ ಮತ್ತು ಕಲಹಕಂಟಕರ ಆಕ್ರಮಣಕ್ಕೆ ಗುರಿಯಾದ ಎಲ್ಲಾ ಸರಕಾರಗಳಿಗೂ ಬೆಂಬಲ ಕೊಡಲು ಸಿದ್ಧರಾಗಿದ್ದಾರೆ' ಹೀಗೆಂದು ಅಧ್ಯಕ್ಷ ರೂಸ್‌ವೆಲ್ಟರು ಸಾರಿದರು.

ಈ ನಿರ್ಧಾರ ವಚನದಿಂದ ರೂಸ್‌ವೆಲ್ಟರು, ಯಾವ ದೇಶಕ್ಕೆ ಸರ್ವಾಧಿಕಾರಿಗಳೆದುರು ಯುದ್ಧ ಮಾಡುವಲ್ಲಿ ಸಹಾಯ ಬೇಕಾಗಿದೆಯೋ ಆ ದೇಶಕ್ಕೆ ಸಹಾಯ ಕಳುಹಿಸಲು ನಿಶ್ಚಯ ಮಾಡಿರುವರೆಂದು ತಿಳಿದುಕೊಳ್ಳಬಹುದಾಗಿದೆ. ಇದು ನಿಜವಾಗಿಯೂ ಸಂತೋಷದಾಯಕವಾದ ವಾರ್ತೆಯೆನ್ನಬಹುದು. ಇಂದಿನ ಕಾಲದಲ್ಲಂತೂ, ಅಮೇರಿಕದಿಂದ ಎಷ್ಟು ತೀವ್ರವಾಗಿ ಸಹಾಯವು ಒದಗಬಹುದೋ ಅಷ್ಟು ತೀವ್ರವಾಗಿ ಬ್ರಿಟನಿನ ಯುದ್ಧಕ್ಕೆ ಬಲವು ಕೂಡುವುದು. ಬ್ರಿಟನಿಗೆ ಈ ಕಾಲದಲ್ಲಿ ಅಮೇರಿಕದ ಸಹಾಯವು ಅತ್ಯಂತ ಮಟ್ಟಿಗೆ ಅಗತ್ಯವಿದೆಯೆಂಬುದನ್ನು ಅಧ್ಯಕ್ಷ ರೂಸ್‌ವೆಲ್ಟರೂ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆನ್ನಬಹುದು. ಅಮೇರಿಕವು ವಿಮಾನಗಳನ್ನೂ, ಹಡಗಗಳನ್ನೂ, ಆಹಾರ ಸಾಮಗ್ರಿಗಳನ್ನೂ ಇವೆಲ್ಲವನ್ನೂ ಬ್ರಿಟನಿಗೆ ಮಾತ್ರವಲ್ಲ ಗ್ರೀಸು ಮತ್ತು ಚೀನಗಳಿಗೂ ಕಳುಹಿಸಿ ಕೊಡುವುದಾಗಿ ಭರವಸೆ ಕೊಡಲಾಗಿದೆ. ಇತ್ತ ಯುದ್ಧವು ಸುರುವಾದ ಮೇಲೆ ಪ್ರಜಾಪ್ರಭುತ್ವದ ರಕ್ಷಣೆಗೆ ಇದಕ್ಕಿಂತ ಹೆಚ್ಚಿನ ಪ್ರೋತ್ಸಾಹಕರವಾದ ಮಾತು ಬೇರೆ ಯಾರೂ ಕೊಟ್ಟಿಲ್ಲವೆನ್ನಬಹುದು.

ಹೀಗೆ ಸಹಾಯ ಮಾಡುವ ಈ ಹೊಸ ಧೋರಣೆಗೆ ಅಮೇರಿಕದ ಜನತೆಯ ಐಕ್ಯ ಸಮ್ಮತಿಯುಂಟೆಂಬುದನ್ನು ರೂಸ್‌ವೆಲ್ಟರು ತಿಳಿಸಿದ್ದಾರೆ. ಸರ್ವಾಧಿಕಾರೀ ರಾಷ್ಟ್ರಗಳು, ಅಮೇರಿಕದಲ್ಲಿ ಒಕ್ಕಟ್ಟು ಇಲ್ಲವೆಂದು ಪ್ರಚಾರ ಮಾಡುತ್ತಿರುವ ಸಂದರ್ಭದಲ್ಲಿ, ಅಧ್ಯಕ್ಷರು ಹೀಗೆ ಸಾರಿ ಹೇಳಿದ್ದು ಸಂದರ್ಭೋಚಿತವೂ ಆವಶ್ಯವೂ ಆಗಿದೆ. ಮಾತ್ರವಲ್ಲದೆ, ಬ್ರಿಟಿಷ್ ಸಹಾಯಕ ಮಸೂದೆಯಿಂದ, ಇನ್ನು ಮುಂದೆ ಸರ್ವಾಧಿಕಾರಿಗಳೊಡನೆ ಸಮಾಧಾನದಿಂದಿರುವಿಕೆಯು ಖಂಡಿತವಾಗಿ ಮುಗಿದಂತೆಯಾಗಿದೆಯೆಂದೂ, ಶತ್ರುಬಲದೊಡನೆ ಅಮೇರಿಕನರು ಸ್ನೇಹಸಂಬಂಧವನ್ನಿಟ್ಟುಕೊಳ್ಳುವುದು ಸಾಧ್ಯವಿಲ್ಲವೆಂದೂ ತಿಳಿಸಿದ್ದಾರೆ. ಇದೂ ಅಮೇರಿಕದ ಮುಂದಿನ ಸ್ಪಷ್ಟವಾದ ಧೋರಣೆ ಸುವಂತಿದೆ.

'ಒಂದು ರಾಷ್ಟ್ರವು ಎಷ್ಟೇ ಸಣ್ಣದಿದ್ದರೂ, ಅದರ ಜನ್ಮಸಿದ್ಧ ಹಕ್ಕಾಗಿ ರಾಷ್ಟ್ರೀಯತೆಯನ್ನು ಕಾಪಾಡಿಕೊಳ್ಳಬೇಕಾಗಿದೆಯೆಂದು ನಾವು ನಂಬುತ್ತೇವೆ.' 'ಯಾವುದೇ ಒಂದು ಜನಾಂಗವೂ ತಮ್ಮ ಬಂಧು ಜನಾಂಗದ ಮೇಲೆ ಪ್ರಭುತ್ವ ನಡೆಸುವುದು ಸರಿಯಲ್ಲ.'

ಹೀಗೆಂದು ಅಧ್ಯಕ್ಷ ರೂಸ್‌ವೆಲ್ಟರು ಹೇಳಿರುವರು. ಈ ಮಾತು ಸರ್ವಥಾ ಭಾರತೀಯರೂ ಸ್ವಾಗತಿಸುವಂತಹುದು. ಈ ಮಾತುಗಳಲ್ಲಿ ಭಾರತದ ರಾಷ್ಟ್ರೀಯ ಕೇಳಿಕೆಯು ಸ್ಪಷ್ಟ ಶುದ್ಧವಾಗಿ ಅಡಕವಾಗಿದೆಯೆನಬಹುದು.

ಸಮಸ್ಯೆ ಬಗೆಹರಿಯುವುದೆ?

ಭಾರತದ ರಾಜಕೀಯ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಆಶಾತುರರಾಗಿ ಹಲವು ಮಂದಿ ಈಗ ಮುಂದೆ ಬಂದಿದ್ದಾರೆ. ಮುಂಬಯಿಯಲ್ಲಿ ಕಳೆದ ವಾರ ಆಪಕ್ಷ ಧುರೀಣರು ಕೆಲವರು ಸಪ್ರುಗಳ ಅಧ್ಯಕ್ಷತೆಯಲ್ಲಿ ಒಂದು ಸಮ್ಮೇಳನವನ್ನು ಕರೆದು ಹಿತಸೂಚನೆಗಳನ್ನು ಮಾಡಿದ್ದಾರೆ. ಇತ್ತ 'ಹಿಂದೂ' ಪತ್ರಿಕೆಯ ಸಂಪಾದಕರಾದ ಶ್ರೀ. ಶ್ರೀನಿವಾಸರೂ ಆ ಪ್ರಯತ್ನದಲ್ಲಿ ವೈಸರಾಯರನ್ನು, ಗಾಂಧಿಜಿ ಮೊದಲಾದವರನ್ನೂ ಕಂಡು ಕಂಡು ಮಾತನಾಡಿದರೆಂದು ಕೇಳುತ್ತೇವೆ. ಒಂದು ಕಡೆಯಿಂದ ಹಿಂದೂ ಮಹಾಸಭೆಯ ಕಾರ್ಯದರ್ಶಿ ಡಾ: ನಾಯ್ಡುರವರೂ ಅತ್ತಿತ್ತ ಓಡಾಡುತ್ತಿದ್ದಾರೆ. ಪಂಜಾಬಿನ ಪ್ರಧಾನರಾದ ಸರ್ ಸಿಕಂದರರು ಈ ಬಗ್ಗೆ ತಮ್ಮ ಯೋಜನೆಯೊಂದನ್ನು ತಯಾರಿಸಿ ಸರಕಾರಕ್ಕೆ ಸೂಚನೆ ಮಾಡಿದ್ದಾರೆಂದು ಸುದ್ದಿ. ಹೀಗೆ ದೇಶ ಸರ್ವತ್ರ ಭಾರತದಲ್ಲಿ ಇಂದು ಬಂದೊದಗಿದ ರಾಜಕೀಯ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಒಳ್ಳೆಯ ಆತುರದ ವಾತಾವರಣವೇ ಕಂಡುಬರುತ್ತದೆ.

ಆದರೆ, ಸಮಸ್ಯೆಯು ಬಗೆಹರಿಯುವ ಸಲ್ಲಕ್ಷಣಗಳಾವವೂ ತೋರಿಬರುತ್ತಿಲ್ಲ. ಬ್ರಿಟಿಷ್ ಪ್ರಧಾನರು ಭಾರತದ ಬಗ್ಗೆ ಎಂತಹ ಮನೋಧರ್ಮವುಳ್ಳವರೆಂಬುದು ಹಿಂದೆಯೇ ಭಾರತೀಯರಿಗೆ ಚೆನ್ನಾಗಿ ಪರಿಚಯವಾಗಿದೆ. ಈಗಿನ ಕಾಲದಲ್ಲಂತೂ ಅವರು 'ಬ್ರಿಟನಿನ ಉಳಿಗಾಲಕ್ಕಾಗಿ ಹೋರಾಡುವ' ಸಾಹಸಕ್ಕೆ ಬಿದ್ದಿರುವಾಗ ಭಾರತದ ವಿಚಾರವನ್ನು ತಲೆಗೆ ತೆಕ್ಕೊಳ್ಳುವಂತೆ ಕಂಡುಬರುವುದಿಲ್ಲ. ಭಾರತ ಮಂತ್ರಿ ಎಮೆರಿಯವರು ಹಾಡಿದ್ದನ್ನೇ ಹಾಡುತ್ತಾ ಬಹಳ ಬೇಸರವನ್ನೇ ಹುಟ್ಟಿಸಿ ಬಿಟ್ಟಿದ್ದಾರೆ. ವೈಸರಾಯರಾದ ಲಿನ್‌ಲಿತ್‌ಗೋ ರವರಿಗಂತೂ ಪಾರ್ಲಿಮೆಂಟು ಸರ್ವಾಧಿಕಾರವನ್ನೇ ಕೊಟ್ಟು, ಯುದ್ಧ ಪ್ರಯತ್ನದಲ್ಲಿ ಅವರು ತನ್ನ ಸರ್ವಸಾಮರ್ಥ್ಯವನ್ನೂ ಉಪಯೋಗಿಸುತ್ತಿರುವಂತೆ ಕಂಡುಬರುತ್ತದೆಯಲ್ಲದೆ, ಇತರ ಭಾರತದ ಪ್ರಾಮುಖ್ಯ ರಾಜಕೀಯ ವಿಚಾರಗಳಲ್ಲಿ ಸಾಕಷ್ಟು ಲಕ್ಷ್ಯ ಹರಿಸಿದಂತೆ ಕಾಣುವುದಿಲ್ಲ. ಪ್ರಾಂತಿಕ ಮಂತ್ರಿಗಳು ರಾಜಿನಾಮೆ ಕೊಟ್ಟು ಉಂಟಾದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಬೇಕಾದಷ್ಟು ಗಮನ ಕೊಟ್ಟಿದ್ದೂ ತೋರುವುದಿಲ್ಲ. ಜನತಾ ಪ್ರತಿನಿಧಿಗಳ ಮನಸ್ಸಿನಲ್ಲಿ ಉಂಟಾದ ಈ ಅಸಂತೋಷವನ್ನು ಸಮಾಧಾನಪಡಿಸಲು ಯಾವ ಹೆಜ್ಜೆಯನ್ನೂ ತೆಕ್ಕೊಂಡದ್ದಿಲ್ಲ. ಇಷ್ಟು ಮಾತ್ರವಲ್ಲದೆ ದೇಶ ಮುಖಂಡರು ತೋರಿಸಿದ, ನಿಷೇಧ ಸೂಚನೆಗಾಗಿ ಅವರಲ್ಲಿ ಹಲವರನ್ನು ಸೆರೆಮನೆಗೆ ದೂಡಿರುವುದೂ ವೈಸರಾಯರಿಗೆ ಭಾರತದ ಬಿಕ್ಕಟ್ಟನ್ನು ಶಾಂತರೀತಿಯಿಂದ ಬಗೆಹರಿಸುವ ವಿಚಾರವುಂಟೆಂಬ ನಂಬಿಕೆಯನ್ನು ಹುಟ್ಟಿಸುವಂತಿರುವುದಿಲ್ಲ.

ಹೀಗಾಗಿ ಭಾರತದ ಮುಖಂಡರು ಕೆಲವರು ಮಾಡುವ ಯತ್ನವು ಕೇವಲ ಅರಣ್ಯರೋದನವಾಗಬಹುದೇ ಎಂಬ ಸಂಶಯವು ತಲೆಯೆತ್ತುತ್ತದೆ. ಸಂಧಾನ ಸೂಚಕರಾದರೂ ಭಾರತದ ಮಟ್ಟಿಗೆ ಅರಾಷ್ಟ್ರೀಯವೆನಿಸುವ ಸೂಚನೆಗಳನ್ನು ತರುವುದು ಸಾಧ್ಯವಿಲ್ಲ. ಭಾರತ ರಾಷ್ಟ್ರೀಯ ಹಿತಕ್ಕಿಂತಲೂ ಬ್ರಿಟನಿನ ಯುದ್ಧ ಪ್ರಯತ್ನವೇ ಪ್ರಬಲ ಸಮಸ್ಯೆಯಾಗಿರುವ ಅಧಿಕಾರೀ ವರ್ಗವು ರಾಷ್ಟ್ರೀಯ ಸೂಚನೆಗಳನ್ನು ಮನ್ನಿಸುವುದೂ ಸಂಭವವಿಲ್ಲ. ರಾಷ್ಟ್ರೀಯವಲ್ಲದ ಸೂಚನೆಗಳಿಗೆ ಭಾರತದ ಯಾವುದೇ ರಾಜಕೀಯ ಪಕ್ಷದವರೂ ಸಮ್ಮತಿಸಲಾರರು. ಹೇಗೆ ದ್ವಿಮುಖದಲ್ಲಿಯೂ ಭಿನ್ನಭಿನ್ನ ತತ್ವಗಳ ಕಡೆಗೆ ಪ್ರಬಲವಾದ ಹಟವಿರುವಾಗಯಾರೂ ತಲೆತಗ್ಗಿಸುವ ಸಂದರ್ಭ ಕಾಣುವುದಿಲ್ಲ.

ಆದರೆ ಗಾಂಧಿಜಿ ಸಂಧಾನಕ್ಕೆ ಸದಾ ಸಿದ್ಧರಿದ್ದಾರೆ. ಬ್ರಿಟಿಷ್ ಸರಕಾರಕ್ಕಾದರೂ ಇಂದು ದೊರಕಬೇಕಾದ ಸಹಾಯವು ದೊರಕುವುದಿದ್ದರೆ ಗಾಂಧಿಜಿಯವರೊಬ್ಬರಿಂದ ಮಾತ್ರ. ಸರಕಾರಕ್ಕೂ ಗಾಂಧಿಜಿಯ ಪ್ರಭಾವವು ತಿಳಿಯದೆ ಇಲ್ಲ. ಭಾರತದ ಬಿಕ್ಕಟ್ಟು ಬಗೆಹರಿಯಬೇಕೆಂದಿರುವವರು ಹಾಗೂ ಸರಕಾರವೂ ಕೂಡ ಸಂಧಾನಕ್ಕೆ ಸದಾ ಸಿದ್ಧವಾಗಿರುವ ಗಾಂಧಿಜಿಯವರನ್ನೇ ಕಂಡು ವಿಚಾರ ವಿನಿಮಯ ಮಾಡುವುದು ಉಚಿತವೂ ಫಲಕಾರಿಯೂ ಆಗಬಹುದು.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R. E. P. 122/1941
R. E. A. 179/1941
O. S. 568/1938

ಚಂದ್ರಾವತಿ ಅಮ್ಮ—ವಾದಿ—ಅರ್ಜಿದಾರಳು.

ಮತ್ತು

ಮುತ್ತು ಹೆಂಗ್ಸು ಕೂಡಾ—ಪ್ರತಿವಾದಿಯು—ಎದ್ರಿಯು.

ಇವರೊಳಗೆ—

1ನೇ ಎದ್ರಿ ಮುತ್ತು ಹೆಂಗ್ಸು, 2ನೇ ಎದ್ರಿ ಪದ್ಮಯ ಕಂಬಳಿ, ದೇವಮ್ಮನ ಮಕ್ಕಳು, 3ನೇ ಎದ್ರಿ ಚಂದಯ್ಯ, 5ನೇ ಎದ್ರಿ ಸರಸ್ವತಿ, 1ನೇ ಎದ್ರಿ ಮುತ್ತು ಹೆಂಗ್ಸಿನ ಮಕ್ಕಳು, ಎಲ್ಲರೂ ಕಾರ್ಕಳ ತಾಲ್ಲೂಕು ಪಾದನ್ನೈಲು ಗ್ರಾಮದಲ್ಲಿದ್ದವರು ಇವರಿಗೆ—

ಸದ್ರಿ ಅಮಲ್ದಾರಿಯಲ್ಲಿ ಪ್ರತಿಮಿಸರಿ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿದುವ ಸ್ಥಿರಾಸ್ತಿಗಳ ಏಲಂನ ಬಗ್ಗೆ ಏಲಂ ಇಸ್ತಿಹಾರಿನ ಡ್ರಾಫ್ಟ್ ಮತ್ತು ಏಲಂ ಸಮಯ ಬಿಡ್ ಮತ್ತು ಸೆಟ್ ಆಫ್ ಪರ್ಮಿಶನು ಕೇಳಿ ಅರ್ಜಿ ಸಹಾ ಅರ್ಜಿದಾರಳು ಬರಕೊಂಡಿರುವುದರಿಂದ ಅವುಗಳ ಕುರಿತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ತಾ. 8–4–1941ನೇ ಪೂರ್ವಾಹ್ನ 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ನೀವು ಜಾಹೀರು ಮಾಡಿಕೊಳ್ಳತಕ್ಕದು. ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರಿ ಮಾಡಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ಸಂಗತಿಗಳು ತೀರ್ಮಾನಿಸಲಾಗುವುವು ಎಂಬುದನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗಿಯದೆ.

ಕಾರ್ಕಳ 16–3–41	H. P. A. JAIN, ಅರ್ಜಿದಾರಳ ಕಡೆ ವಕೀಲ.

ನೋಟೀಸು

ಪುತ್ತೂರು ಡಿಸ್ಟ್ರಿಕ್ ಮುನ್ಸೀಫ್ ಕೋರ್ಟಿನಲ್ಲಿ

O. P. 25/1941

ಬೆಳ್ಳೂರು ಗುತ್ತು ಸಿದ್ದಮ್ಮ—Petitioner.

ಮಹಾದೇವಿ ಕೂಡಾ 8 ಜನರು

—Respondents.

1. ಮಹಾದೇವಿ 2. ನೇಜಮ್ಮ 3. ದೇಜಮ್ಮ	ಬೆಳ್ಳೂರು ಗುತ್ತು ಚಂದಪ್ಪ ರೈಯ ಸೊಸೆಯಂದಿರು. 1, 2ನೇಯವರು ಪುತ್ತೂರು ತಾಲ್ಲೂಕು ಕನ್ಯಾಡಿ ಗ್ರಾಮದ ಮೂಡಬೆಟ್ಟು. 3ನೇಯವಳು ನೂಜಿ ಬಾಳಿಲ ಗ್ರಾಮದಲ್ಲಿ ಅವಳ ಗಂಡ ನಿಡ್ಯಣ್ಣ ಪೆರ್ಗಡೆರ ಮನೆಯಲ್ಲಿರುವವಳು—

ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಸದ್ರಿ ನಿವಹಣೆಯಲ್ಲಿ ಅರ್ಜಿದಾರಳ ಗಂಡ ಮೃತ ಮಂಜಪ್ಪಾಳ್ವರ ಬಾಬ್ತು ಅರ್ಜಿಯಿಂದ ತೋರುವಂತೆ ಬರ ಸಾಲಗಳ ವಸೂಲಿ ಕುರಿತು ತಾನು ಹಕ್ಕುದಾರಳೆಂತ ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಬರಕೊಂಡ ಮೇಲಿನ ಅರ್ಜಿಯ ನೋಟೀಸಿನ ತನಿಖೆ ವ್ಯಾಜ್ಯವು ತಾ. 3—4—41ಕ್ಕೆಂತ ನಿಶ್ಚೈಸಿರುತ್ತದೆ. ಆ ವ್ಯಾಜ್ಯಕ್ಕೆ ಎದ್ರಿಯ ಆಕ್ಷೇಪಗಳೇನಾದರೂ ಇದ್ದರೆ ಈ ಕೋರ್ಟಿಗೆ 11 ಗಂಟೆಗೆ ಹಾಜರಾಗಿ ಬರಹ ಮೂಲಕ ಸ್ವತಹಾ ಯಾ ವಕೀಲರ ಮುಖಾಂತ್ರ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಅವರನ್ನು ಗೈರ್ಹಾಜರು ಎಂತ ಮಾಡಿ ಈ ನಿವಹಣೆಯನ್ನು ಮುಂದಿನ ತನಿಖೆಯಿಂದ ತೀರ್ಮಾನಿಸಲಾಗುತ್ತದೆ. ಎಂತ ಕೋರ್ಟಿನವರ ಹುಕುಂ ಪ್ರಕಾರ ಅರ್ಜಿದಾರಳ ಕಡೆಯಿಂದ ಈ ನೋಟೀಸು ಮಾಡಿಸಿಯದೆ.

ತಾ. 8–3–41 Puttur.	[illegible] Ramachandra Rao,

ಬೊಂಬಾಯಿ ಸಮ್ಮೇಳನದ ಮಹತ್ವದ ನಿರ್ಣಯಗಳು

ಸಂರಕ್ಷಣಾ ಮತ್ತು ಅಧಿಕಾರಗಳು ಭಾರತೀಯರಿಗೆ-

ಯುದ್ಧನಂತರ ಕೊಡಲಾಗುವ ಘಟನೆಯ ಘೋಷಣೆ

ವೈಸರಾಯರ ಕಾರ್ಯಕಾರೀ ಮಂಡಳದ ಪುನರ್ಘಟನೆ

"ಭಾರತದಲ್ಲಿ ಇಂದು ಕಂಡುಬರುತ್ತಿರುವ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಅನತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕಾದ ಆವಶ್ಯಕತೆ ಒದಗಿ ಬಂದಿದೆ. ಈ ಸಮ್ಮೇಳನವು ಏನನ್ನಾದರೂ ಗಳಿಸಲಿ ಅಥವಾ ಗಳಿಸದಿರಲಿ, ಇಂದಿನ ತೊಡಕನ್ನು ಬಗೆಹರಿಸಲು ಪ್ರಯತ್ನವನ್ನಾದರೂ ಮಾಡಬೇಕಾಗಿದೆ. ಕೇಂದ್ರ ಸರಕಾರವನ್ನು ವಿಸ್ತರಿಸಿ, ಭಾರತೀಯರನ್ನು ಆರ್ಥಿಕ ಮಂತ್ರಿಯನ್ನಾಗಿಯೂ ಮತ್ತು ರಕ್ಷಣಾ ಮಂತ್ರಿಯನ್ನಾಗಿಯೂ ನೇಮಿಸಬೇಕೆಂದು ಬ್ರಿಟಿಷ್ ಸರಕಾರವನ್ನು ಕೇಳಬೇಕೆಂಬುದು ನನ್ನ ಖಚಿತಾಭಿಪ್ರಾಯವಾಗಿದೆ. ಭಾರತದ ಮುಖ್ಯ ರಾಜಕೀಯ ಪಕ್ಷಗಳು ಪ್ರಭುತ್ವದ ಹೊಣೆಗಾರಿಕೆಯನ್ನು ಹೊರಲು ಒಪ್ಪದಿದ್ದರೆ, ಕೇಂದ್ರದಲ್ಲಿ ಕೂಡಲೇ ಭಾರತೀಯ ಸರಕಾರವು ಏರ್ಪಡಬೇಕೆಂಬ ಸಂ...ಯುಳ್ಳವರು, ವೈಸರಾಯರ ಮಂತ್ರಿಮಂಡಲವನ್ನು ವಿಸ್ತಾರ ಮಾಡಲಾಗುವುದೆಂಬ ಮತ್ತು ಯುದ್ಧಾನಂತರ ಕ್ಷಿಪ್ರದಲ್ಲಿಯೇ ಸಾಮ್ರಾಜ್ಯಾಂತರ್ಗತ ಸ್ವರಾಜ್ಯ (ಡೊಮಿನಿಯನ್ ಸ್ಟೇಟಸ್) ನೀಡಲಾಗುವುದೆಂಬ ಬ್ರಿಟಿಷ್ ಸರಕಾರದ ಘೋಷಣೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಬ್ರಿಟಿಷ್ ಸರಕಾರವನ್ನು ಒತ್ತಾಯಪಡಿಸಬೇಕು. ಭಾರತದ ಕೇಂದ್ರ ಸರಕಾರದಲ್ಲಿ ಭಾರತೀಯರಿಗೆ ಹಣಕಾಸಿನ ಮತ್ತು ರಕ್ಷಣಾ ಇಲಾಖಾಧಿಕಾರಗಳನ್ನು ಪಡೆದು, ಕ್ರಮೇಣ ದೇಶದಲ್ಲಿ ಕೈಗಾರಿಕೆಗಳನ್ನು ಹೆಚ್ಚಿಸುವುದೇ ಅಲ್ಲದೆ, ಶಕ್ತಿಯುತವಾದ ಸೈನ್ಯ ನೇಮಿಸುವಿಕೆಯಿಂದ ಭಾರತವನ್ನು ಆತ್ಮಾವಲಂಬಿಯನ್ನಾಗಿಯೂ ಮತ್ತು ಸ್ವಯಂಪೂರಿತವನ್ನಾಗಿಯೂ ರೂಪುಗೊಳಿಸಬೇಕಾಗಿದೆ."

ಹೀಗೆಂದು ಈ ವಾರ ಮುಂಬಯಿಯಲ್ಲಿ ನೆರೆದ ಭಾರತದ ಅಪಕ್ಷ (Non-Praty) ಮುಂಡಳದ ಸಭೆಯ ಅಧ್ಯಕ್ಷತೆಯಿಂದ ಸರ್ ತೇಜ್‌ಬಹದ್ದೂರ್ ಸಪ್ರುಗಳು ಭಾಷಣವಿತ್ತರು. ಈ ಸಭೆಗೆ ಸರ್ ಸಪ್ರು, ಸಾವರ್ಕರ್, ಕುಂಜ್ರು, ಅಣೆ, ಜಗದೀಶ ಪ್ರಸಾದ್ ಮೊದಲಾದವರು ಬಂದಿದ್ದರು. ಇವರೆಲ್ಲರೂ ಒಂದು ಸೂಚನೆಯನ್ನು ಮಾಡಿ ಅದನ್ನು ಸರಕಾರಕ್ಕೆ ಕಳುಹಿಸಿ ದೇಶದಲ್ಲಿ ಬಂದೊದಗಿದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಯತ್ನಮಾಡಿದ್ದಾರೆ.

ಯುದ್ಧ ನಿರ್ವಹಣ ಕಾರ್ಯದಲ್ಲಿ ಹಿಂದುಸ್ಥಾನದ ಚಟುವಟಿಕೆಗಳನ್ನು ಇನ್ನೂ ಬಲವತ್ತರ ಮಾಡಬೇಕಾದರೆ ಏನು ಉಪಾಯ ಕೈಕೊಳ್ಳಬೇಕು ಮತ್ತು ಸದ್ಯದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಬೇಕಾದರೆ ಯಾವ ಉಪಾಯ ಯೋಜನೆ ಮಾಡಬೇಕು ಎಂದು ಆಲೋಚಿಸಲಾಯಿತು.

ಸಭೆಯಲ್ಲಿ ಸದ್ಯದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸುವದು ಮತ್ತು ಯುದ್ಧ ನಡೆದಿರುವ ವರೆಗೆ ಸದ್ಯದ ಸರಕಾರದ ಘಟನೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಲ್ಲಿ ಏನೇನು ಬದಲಾವಣೆ ಮಾಡತಕ್ಕದ್ದು ಎಂಬ ಬಗ್ಗೆ ಒಂದು ನಿರ್ಣಯವು ಮಂಜೂರಾಯಿತು.

ನಿರ್ಣಯದ ವಿಷಯಗಳು

ಯುದ್ಧಪೂರ್ವದಲ್ಲಿ ಹಿಂದಿ ಸೈನಿಕರು ಸಂಪಾದಿಸಿದ ವಿಜಯದ ಬಗ್ಗೆ ಅವರಿಗೆ ಧನ್ಯವಾದ ಅರ್ಪಿಸಿ, ಸುರಕ್ಷಣೆಯ ವಿಷಯದಲ್ಲಿ ಹಿಂದುಸ್ಥಾನವು ಸ್ವಾವಲಂಬಿಯಾಗಿರತಕ್ಕದ್ದೆಂಬ ಬಗ್ಗೆ ಪರಿಷತ್ತು ಉತ್ಸುಕತೆ ತೋರಿಸಿ, ಹಿಂದುಸ್ಥಾನದ ಜನಬಲ, ಧನಬಲ ಮೊದಲಾದವುಗಳನ್ನು ಅದರ ಗಡಿನಾಡಿನ ಸಂರಕ್ಷಣೆಗಾಗಿ ಸಂಪೂರ್ಣ ಉಪಯೋಗಿಸುವದಲ್ಲದೆ ಶಕ್ಯವಿದ್ದ ರೀತಿ ಬ್ರಿಟಿಶ್ ಜನರಿಗೆ ಸಹಾಯ ಮಾಡುವದಕ್ಕೂ ಉಪಯೋಗಿಸತಕ್ಕದ್ದೆಂದೂ, ಪರಿಷತ್ತು ಈ ಧೋರಣವನ್ನು ತನ್ನ ಗುರಿಯನ್ನಾಗಿ ಇಟ್ಟುಕೊಂಡು ಮತ್ತು ಸದ್ಯಕ್ಕೆ ಈ ದೇಶ ಹಾಗು ಸಾಮ್ರಾಜ್ಯದ ಇತರ ಭಾಗಗಳಿಗೆ ಪ್ರಾಪ್ತವಾಗಿರುವ ಗಂಡಾಂತರವನ್ನು ಲಕ್ಷದಲ್ಲಿ ತಂದುಕೊಂಡು ಕೆಳಗಿನ ಸೂಚನೆಗಳನ್ನು ಮಾಡಿತು.

ಸೂಚನೆಗಳು

ಬ್ರಿಟನಿನ ಕಠಿಣ ಪರಿಸ್ಥಿತಿಯ ಲಾಭ ತೆಗೆದುಕೊಳ್ಳುವುದು ಹಿಂದುಸ್ಥಾನದ ಇಚ್ಛೆಯಿಲ್ಲ. ಅದರ ಅಪರಂತೆ ಹಿಂದುಸ್ಥಾನದ ಆಂತರಿಕ ಅಡಚಣೆಗಳೂ ದುರುಪಯೋಗಿಸಲ್ಪಡಬಾರದೆಂದು ಈ ಪರಿಷತ್ತು ಇಚ್ಛಿಸುತ್ತದೆ. ದೇಶದ ಕಾಯಮ ಘಟನೆಯನ್ನು ನಿರ್ಣಯಿಸುವ ಪೂರ್ವದಲ್ಲಿ ಅನೇಕ ಆಂತರಿಕ ಸಮಸ್ಯೆಗಳನ್ನು ಬಿಡಿಸುವದು ಆವಶ್ಯವಿರುವದೆಂದು ಈ ಪರಿಷತ್ತು ಒಪ್ಪಿಕೊಳ್ಳುತ್ತದೆ. ಆದ್ದರಿಂದಲೇ ಅದು ತನ್ನ ತಾತ್ಕಾಲಿಕ ಉದ್ದೇಶವನ್ನು ಕಾರ್ಯಕಾರಿ ಮಂಡಳವನ್ನು ಯುದ್ಧ ನಡೆದಿರುವ ಕಾಲದ ವರೆಗೆ ಸಂಯುಕ್ತ ಹೊಣೆಗಾರಿಕೆಯೊಂದಿಗೆ ಪುನರ್ಘಟಿಸಬೇಕೆಂದು ಮರ್ಯಾದಿತವಾಗಿ ಇಟ್ಟುಕೊಂಡಿರುವದು. ಈ ಪರಿಷತ್ತಿನ ಅಭಿಪ್ರಾಯದ ಮೇರೆಗೆ ವೈಸರಾಯರು, ಮುಖ್ಯ ಸೇನಾಪತಿಗಳು, ಮೂವರು ಆಯ್. ಸಿ. ಎಸ್. ಯುರೋಪಿಯನ್ ಮೆಂಬರರು ಹಾಗು ಮೂವರು ಹಿಂದೀಯರು (ಇವರಲ್ಲಿ ಇಬ್ಬರು ಸರಕಾರೇತರರು). ಶಾಂತತಾ ಕಾಲದ ಕಾರ್ಯಕಾರಿ ಮಂಡಳವು ೮೦ ಕೋಟಿ ಜನರಲ್ಲಿ ಸ್ಥಿರವಾಗಿ ಯುದ್ಧಪ್ರಯತ್ನ ಸಂಘಟಿಸಲು ಸಾಕಷ್ಟು ಇರುವದಿಲ್ಲ; ಇಷ್ಟೇ ಅಲ್ಲದೆ ಸಂಪೂರ್ಣ ಪ್ರಾತಿನಿಧಿಕವೂ ಆಗಿರುವದಿಲ್ಲ.

ಸಂರಕ್ಷಣಾಖಾತೆ ಭಾರತೀಯನಿಗೆ ಒಪ್ಪಿಸಬೇಕು

ಆಗಸ್ಟ ೧೯೪೦ರಲ್ಲಿ ಬ್ರಿಟಿಶ ಸರಕಾರದವರು ವೈಸರಾಯರ ಕಾರ್ಯಕಾರಿ ಮಂಡಳದಲ್ಲಿರುವ ಸರಕಾರೇತರ ಹಿಂದಿ ಜನರ ಸಂಖ್ಯೆಯನ್ನು ಹೆಚ್ಚು ಮಾಡಲು ಮುಂದೆ ಬಂದಿದ್ದುದು ಈ ಮೇಲಿನದಕ್ಕೆ ಮನ್ನಣೆ ಕೊಟ್ಟಂತೆಯೇ ಆಗಿದೆ. ಆದ್ದರಿಂದ ಯುದ್ಧದ ಆವಶ್ಯಕತೆ ಲಕ್ಷಕ್ಕೆ ತಂದುಕೊಂಡು ವೈಸರಾಯರ ಕಾರ್ಯಕಾರಿ ಮಂಡಳವನ್ನು ಕೂಡಲೆ ಪುನರ್ಘಟಿಸಬೇಕು. ಸಂರಕ್ಷಣ ಖಾತೆಯನ್ನು, ಮುಖ್ಯ ಸೇನಾಪತಿಗಳೇ ಸೈನ್ಯದ ಮುಖ್ಯ ಕಾರ್ಯಕಾರಿ ಅಧಿಕಾರಿಗಳೆಂದು ಅವರ ದರ್ಜೆ ಕಾಯ್ದುಕೊಳ್ಳಲು ಯೋಗ್ಯ ಭದ್ರತೆ ಏರ್ಪಡಿಸಿ, ಓರ್ವ ಭಾರತೀಯನ ಕೈಗೆ ಒಪ್ಪಿಸಬೇಕು. ಇದರಂತೆ ಆರ್ಥಿಕ ಖಾತೆಯನ್ನು ಓರ್ವ ಭಾರತೀಯನಿಗೆ ಕೊಡಬೇಕು. ಇನ್ನು ಕಾರ್ಯಕಾರಿ ಮಂಡಳದ ಸಂಬಂಧದಲ್ಲಿ ಹೇಳುವದಾದರೆ ಇಡೀ ಕಾರ್ಯಕಾರಿ ಮಂಡಳವು ಸಾರ್ವಜನಿಕ ಜೀವನದೊಂದಿಗೆ ನಿಕಟವಾಗಿ ಸಂಬಂಧಿಸಿದ ಸರಕಾರೇತರ ಹಿಂದಿಯರಿಂದ ಕೂಡಿದ್ದಿರಬೇಕು. ಆದರೂ ಯುದ್ಧ ನಡೆದಿರುವ ವರೆಗೆ ಪುನರ್ಘಟಿತ ಮಧ್ಯವರ್ತಿ ಸರಕಾರವು ಚಕ್ರವರ್ತಿಗಳಿಗೆ ಹೊಣೆಗಾರವಾಗಿ ಉಳಿಯುವದಕ್ಕೆ ಪರಿಷತ್ತಿನ ಅಡ್ಡಿಯಿಲ್ಲ.

ಆದರೆ ಈ ಪುನರ್ಘಟಿತ ಮಧ್ಯವರ್ತಿ ಸರಕಾರವು ಕೇವಲ ಖಾತೆಗಳ ಮುಖ್ಯಾಧಿಕಾರಿಗಳ ಕೂಟವಾಗಿರದೆ, ಧೋರಣದ ಹಾಗೆಯೇ ಮಹತ್ವದ ವಿಷಯಗಳನ್ನು ಸಂಯುಕ್ತವಾಗಿ ಸಾಗಿಸಿಕೊಂಡು ಹೋಗತಕ್ಕದ್ದಿರಬೇಕು.

ಮುಂದಿನ ರಾಜ್ಯಘಟನೆಯ ಘೋಷಣೆಯಾಗಬೇಕು

ಈ ಪುನರ್ಘಟಿತ ಸರಕಾರದ ಕಾರ್ಯಕ್ರಮವು ಯಶಸ್ವಿಯಾಗಿ ಸಾಗಬೇಕಾದರೆ ಯೋಗ್ಯವಾದ ವಾತಾವರಣ ಹುಟ್ಟಿಸುವದು ಅವಶ್ಯವಿದೆ. ಅದು ಸಾಧ್ಯವಾಗಬೇಕಾದರೆ ಬ್ರಿಟಿಶರ ನಿಜವಾದ ಉದ್ದೇಶದ ಸಂಬಂಧದಲ್ಲಿ ಜನರಲ್ಲಿ ಮನೆಮಾಡಿಕೊಂಡ ತಪ್ಪು ತಿಳುವಳಿಕೆ, ಸಂಶಯ ಮೊದಲಾದವುಗಳನ್ನು ಹೋಗಲಾಡಿಸುವದು ಅಗತ್ಯವಿರುವದು. ಆದ್ದರಿಂದ ಬ್ರಿಟಿಶ ಸರಕಾರದವರು ಮಧ್ಯವರ್ತಿ ಸರಕಾರವನ್ನು ಪುನರ್ಘಟಿಸುವ ಸಮಯದಲ್ಲಿ, ಯುದ್ಧವು ಮುಗಿದ ಮೇಲೆ ನಿಶ್ಚಿತ ಅವಧಿಯೊಳಗಾಗಿ ಹಿಂದುಸ್ಥಾನಕ್ಕೂ ಆಸ್ಟ್ರೇಲಿಯಾ ಹಾಗೂ ಕೆನಡಾ ವಸಾಹತುಗಳಿಗೆ ಯುದ್ಧದ ನಂತರ ದಯಪಾಲಿಸಲ್ಪಡುವ ರಾಜ್ಯಘಟನೆಯನ್ನು ದಯಪಾಲಿಸಲಾಗುವದೆಂದು ಪ್ರಕಟಮಾಡಬೇಕು.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ

— ತಯಾರಿಸಿದ ಸ್ನೋ —

ಎಂದಿನಂದಲೂ ಶ್ರೇಷ್ಠವಾಗಿಯೇ ಇದೆ.— ಮುಖದ ಮೇಲಿನ ಯಾವತ್ತೂ ಕಲೆ, ಸುಕ್ಕು ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ—

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು

ಮಂಗಳೂರಿನ ಡಿಸ್ಟ್ರಿಬ್ಯೂಟರು:- ದಿ. ಕೊರನೇಷನ್ ಟ್ರೇಡಿಂಗ್ ಕೋ.

ಮುಹಮ್ಮದಾಲಿ ರೋಡ್, ಮಂಗಳೂರು.

ಬೊಂಬಯಿ ಸಮ್ಮೇಳನದ ಮಹತ್ವದ ನಿರ್ಣಯಗಳು

ಸಂರಕ್ಷಣ ಮತ್ತು ಅಧಿಕಾರಗಳು ಭಾರತೀಯರಿಗೆ-

ಯುದ್ಧನಂತರ ಕೊಡಲಾಗುವ ಘಟನೆಯ ಘೋಷಣೆ

ವೈಸರಾಯರ ಕಾರ್ಯಕಾರೀ ಮಂಡಳದ ಪುನರ್ಘಟನ

"ಭಾರತದಲ್ಲಿ ಇಂದು ಕಂಡುಬರುತ್ತಿರುವ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಅನತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕಾದ ಅವಶ್ಯಕತೆ ಒದಗಿ ಬಂದಿದೆ. ಈ ಸಮ್ಮೇಳನವು ಏನನ್ನಾದರೂ ಗಳಿಸಲಿ ಅಥವಾ ಗಳಿಸದಿರಲಿ, ಇಂದಿನ ತೊಡಕನ್ನು ಬಗೆಹರಿಸಲು ಪ್ರಯತ್ನವನ್ನಾದರೂ ಮಾಡಬೇಕಾಗಿದೆ. ಕೇಂದ್ರ ಸರಕಾರವನ್ನು ವಿಸ್ತರಿಸಿ, ಭಾರತೀಯರನ್ನು ಆರ್ಥಿಕ ಮಂತ್ರಿಯಾಗಿಯೂ ಮತ್ತು ರಕ್ಷಣಾ ಮಂತ್ರಿಯಾಗಿಯೂ ನೇಮಿಸಬೇಕೆಂದು ಬ್ರಿಟಿಷ್ ಸರಕಾರವನ್ನು ಕೇಳಬೇಕೆಂಬುದು ನನ್ನ ಖಚಿತಾಭಿಪ್ರಾಯವಾಗಿದೆ. ಭಾರತದ ಮುಖ್ಯ ರಾಜಕೀಯ ಪಕ್ಷಗಳು ಪ್ರಥ ತ್ವದ ಹೊಣೆಗಾರಿಕೆಯನ್ನು ಹೊರಲು ಒಪ್ಪದಿದ್ದರೆ ಕೇಂದ್ರದಲ್ಲಿ ಕೂಡಲೇ ಭಾರತೀಯ ಸರಕಾರವು ಏರ್ಪಡಬೇಕೆಂಬ ಸಂ[illegible]ಯುಳ್ಳವನ್ನು, ವೈಸರಾಯರ ಮಂತ್ರಿಮಂಡಲವನ್ನು ವಿಸ್ತಾರ ಮಾಡಲಾಗುವುದೆಂಬ ಮತ್ತು ಯುದ್ಧಾನಂತರ ಕ್ಷಿಪ್ರದಲ್ಲಿಯೇ ಸಾಮ್ರಾಜ್ಯಾಂತರ್ಗತ ಸ್ವರಾಜ್ಯ (ಡೊಮಿನಿಯನ್ ಸ್ಟೇಟಸ್) ನೀಡಲಾಗುವುದೆಂಬ ಬ್ರಿಟಿಷ್ ಸರಕಾರದ ಘೋಷಣೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಬ್ರಿಟಿಷ್ ಸರಕಾರವನ್ನು ಒತ್ತಾಯಪಡಿಸಬೇಕು. ಭಾರತದ ಕೇಂದ್ರ ಸರಕಾರದಲ್ಲಿ ಭಾರತೀಯರಿದ್ದು, ಹಣಕಾಸಿನ ಮತ್ತು ರಕ್ಷಣಾ ಇಲಾಖಾಧಿಕಾರಗಳನ್ನು ಪಡೆದು ತನ್ಮೂಲಕ ದೇಶದಲ್ಲಿ ಕೈಗಾರಿಕೆಗಳನ್ನು ಹೆಚ್ಚಿಸುವುದೇ ಅಲ್ಲದೆ, ಶಕ್ತಿಯುತವಾದ ಸೈನ್ಯ ಸೇರಿಸುವಿಕೆಯಿಂದ ಭಾರತವನ್ನು ಅತ್ಮಾವಲಂಬಿಯನ್ನಾಗಿಯೂ ಮತ್ತು ಸ್ವಯಂಪೂರಿತವನ್ನಾಗಿಯೂ ರೂಪಗೊಳಿಸಬೇಕಾಗಿದೆ."

ಹೀಗೆಂದು ಈ ವಾರ ಮುಂಬಯಿಯಲ್ಲಿ ನೆರೆದ ಭಾರತದ ಅಪಕ್ಷ (Non Party) ನಾಯಕರ ಸಭೆಯ ಅಧ್ಯಕ್ಷತೆಯಿಂದ ಸರ್ ತೇಜ್ ಬಹದ್ದೂರ್ ಸಪ್ರುರವರು ಭಾಷಣವಿತ್ತರು. ಈ ಸಭೆಗೆ ಸರ್ ಸಪ್ರು, ಸಾವರ್ಕರ್, ಕುಂಜ್ರು, ಅಣೆ, ಜಗದೀಶ ಪ್ರಸಾದ್ ಮೊದಲಾದವರು ಬಂದಿದ್ದರು. ಇವರೆಲ್ಲರೂ ಒಂದು ಸೂಚನೆಯನ್ನು ಮಾಡಿ ಅದನ್ನು ಸರಕಾರಕ್ಕೆ ಕಳುಹಿಸಿ ದೇಶದಲ್ಲಿ ಬಂದೊದಗಿದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಯತ್ನ ಮಾಡುವರು.

ಯುದ್ಧ ನಿರ್ವಹಣ ಕಾರ್ಯದಲ್ಲಿ ಹಿಂದೂಸ್ಥಾನದ ಘಟನೆಗಳನ್ನು ಇನ್ನೂ ಬಲವತ್ತರ ಮಾಡಬೇಕಾದರೆ ಏನು ಉಪಾಯ ಕೈಕೊಳ್ಳಬೇಕು ಮತ್ತು [illegible] ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಬೇಕಾದರೆ ಯಾವ ಉಪಾಯ ಯೋಜನೆ ಮಾಡಬೇಕು ಎಂದು ಆಲೋಚಿಸಲಾಯಿತು.

ಸಭೆಯಲ್ಲಿ ಸದ್ಯದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸುವದು ಮತ್ತು ಯುದ್ಧ ನಡೆದಿರುವ ವರೆಗೆ ಸದ್ಯದ ಸರಕಾರದ ಘಟನೆ ಮತ್ತು [illegible]ಕ್ಕೆ ಸಂಬಂಧಿಸಿದ ಇತರ ವಿಷಯಗಳಲ್ಲಿ ಏನೇನು ಬದಲಾವಣೆ ಮಾಡತಕ್ಕದ್ದು ಎಂಬ ಬಗ್ಗೆ ಒಂದು ನಿರ್ಣಯವು ಮಂಜೂರಾಯಿತು.

ನಿರ್ಣಯದ ವಿಷಯಗಳು

ಮಧ್ಯಪೂರ್ವದಲ್ಲಿ ಹಿಂದಿ ಸೈನಿಕರು ಸಂಪಾದಿಸಿದ ವಿಜಯದ ಬಗ್ಗೆ ಅವರಿಗೆ ಅಭಿನಂದನೆ ಅರ್ಪಿಸಿ, ಸುರಕ್ಷತೆಯ ವಿಷಯದಲ್ಲಿ ಹಿಂದುಸ್ಥಾನವು ಸ್ವಾವಲಂಬಿಯಾಗಿರತಕ್ಕದ್ದೆಂಬ ಬಗ್ಗೆ ಪರಿಷತ್ತು ಉತ್ಸುಕತೆ ತೋರಿಸಿ, ಹಿಂದ ಸ್ಥಾನದ ಜನಬಲ ಧನಬಲ ಮೊದಲಾದವುಗಳನ್ನು ಅದರ ಗಡಿನಾಡಿನ ಸಂರಕ್ಷಣೆಗಾಗಿ ಸಂಪೂರ್ಣ ಉಪಯೋಗಿಸುವದಲ್ಲದೆ ಶಕ್ಯವಿದ್ದ ರೀತಿ ಬ್ರಿಟಿಶ್ ಜನರಿಗೆ ಸಹಾಯ ಮಾಡುವದಕ್ಕೂ ಉಪಯೋಗಿಸತಕ್ಕದ್ದೆಂದೂ, ಪರಿಷತ್ತು ಈ ಮೇಲಿನದನ್ನು ತನ್ನ ಗುರಿಯನ್ನಾಗಿ ಇಟ್ಟುಕೊಂಡು ಮತ್ತು ಸದ್ಯಕ್ಕೆ ಈ ದೇಶ ಹಾಗೂ ಸಾಮ್ರಾಜ್ಯದ ಇತರ ಭಾಗಗಳಿಗೆ ವ್ಯಾಪ್ತವಾಗಿರುವ ಗಂಡಾಂತರವನ್ನು ಲಕ್ಷ್ಯದಲ್ಲಿ ತಂದುಕೊಂಡು ಕೆಳಗಿನ ಸೂಚನೆಗಳನ್ನು ಮಾಡಿತು.

ಸೂಚನೆಗಳು

ಬ್ರಿಟನಿನ ಕಠಿಣ ಪರಿಸ್ಥಿತಿಯ ಲಾಭ ತೆಗೆದುಕೊಳ್ಳುವುದು ಹಿಂದುಸ್ಥಾನದ ಇಚ್ಛೆಯಿಲ್ಲ. ಆದರೆ ಅದರಂತೆ ಹಿಂದುಸ್ಥಾನದ ಅಂತರಿಕ ಅಡಚಣೆಗಳೂ, ದುರುಪಯೋಗಿಸಲ್ಪಡಬಾರದೆಂದು ಈ ಪರಿಷತ್ತು ಇಚ್ಛಿಸುತ್ತದೆ. ದೇಶದ ಕೊನೆಯ ಘಟನೆಯನ್ನು ನಿರ್ಣಯಿಸುವ ಪೂರ್ವದಲ್ಲಿ ಅನೇಕ ಅಂತರಿಕ ಸಮಸ್ಯೆಗಳನ್ನು ಬಿಡಿಸುವದು ಅವಶ್ಯವಿರುವದೆಂದು ಈ ಪರಿಷತ್ತು ಒಪ್ಪಿಕೊಳ್ಳುತ್ತದೆ. ಆದ್ದರಿಂದಲೇ ಅದು ತನ್ನ ತಾತ್ಕಾಲಿಕ ಉದ್ದೇಶವನ್ನು ಕಾರ್ಯಕಾರಿ ಮಂಡಳವನ್ನು ಯುದ್ಧ ನಡೆದಿರುವ ಕಾಲದ ವರೆಗೆ ಸಂಯುಕ್ತ ಹೊಣೆಗಾರಿಕೆಯೊಂದಿಗೆ ಪುನರ್ಘಟಿಸಬೇಕೆಂದು ಮುಖ್ಯವಾಗಿ ಇಟ್ಟುಕೊಂಡಿರುವದು. ಈ ಪರಿಷತ್ತಿನ ಅಭಿಪ್ರಾಯದ ಮೇರೆಗೆ ವ್ಹಾಯಿಸರಾಯರು, ಮುಖ್ಯ ಸೇನಾಪತಿಗಳು, ಮೂವರು ಆಯ್ ಸಿ ಎಸ್ ಯ ಮೆಂಬರರು ಹಾಗೂ ಪ್ರಸ್ತುತ ಹಿಂದೀಯರು (ಅವರಲ್ಲಿ ಇಬ್ಬರು ಸರಕಾರೇತರರ) ಶಾಂತತಾ ಕಾಲದ ಕಾರ್ಯಕಾರಿ ಮಂಡಳವು ೪೦ ಕೋಟಿ ಜನರಲ್ಲಿ ನೇರವಾಗಿ ಯುದ್ಧಪ್ರಯತ್ನ ಸಂಘಟಿಸಲು ಸಾಕಷ್ಟು ಇರುವುದಿಲ್ಲ. ಇಷ್ಟೇ ಅಲ್ಲದೆ ಸಂಪೂರ್ಣ ಪ್ರಾತಿನಿಧಿಕವೂ ಆಗಿರುವದಿಲ್ಲ.

ಸಂರಕ್ಷಣೆಖಾತೆ ಭಾರತೀಯನಿಗೆ ಒಪ್ಪಿಸಬೇಕು

ಆಗಸ್ಟ ೧೯೪೦ರಲ್ಲಿ ಬ್ರಿಟಿಶ ಸರಕಾರದವರು ವೈಸರಾಯರ ಕಾರ್ಯಕಾರಿ ಮಂಡಳದಲ್ಲಿರುವ ಸರಕಾರೇತರ ಹಿಂದಿ ಜನರ ಸಂಖ್ಯೆಯನ್ನು ಹೆಚ್ಚು ಮಾಡಲು ಮುಂದೆ ಬಂದಿದ್ದುದು ಈ ಮೇಲಿನದಕ್ಕೆ ಮನ್ನಣೆ ಕೊಟ್ಟಂತೆಯೆ ಆಗಿದೆ. ಆದ್ದರಿಂದ ಯುದ್ಧದ ಅವಶ್ಯಕತೆ ಲಕ್ಷ್ಯಕ್ಕೆ ತಂದುಕೊಂಡು ವೈಸರಾಯರ ಕಾರ್ಯಕಾರಿ ಮಂಡಳವನ್ನು ಕೂಡಲೆ ಪುನರ್ಘಟಿಸಬೇಕು. ಸಂರಕ್ಷಣ ಖಾತೆಯನ್ನು, ಮುಖ್ಯ ಸೇನಾಪತಿಗಳೇ ಸೈನ್ಯದ ಮುಖ್ಯ ಕಾರ್ಯಕಾರಿ ಅಧಿಕಾರಿಗಳೆಂದು ಅವರ ದರ್ಜೆ ಕಾಯ್ದುಕೊಳ್ಳಲು ಯೋಗ್ಯ ಬದಲಾವಣೆ ಮಾಡಿ, ಒಬ್ಬ ಭಾರತೀಯನ ಕೈಗೆ ಒಪ್ಪಿಸಬೇಕು. ಇದರಂತೆ ಅರ್ಥ ಖಾತೆಯನ್ನೂ ಒಬ್ಬ ಭಾರತೀಯನಿಗೆ ಕೊಡಬೇಕು. ಇನ್ನು ಕಾರ್ಯಕಾರಿ ಮಂಡಳದ ಸಂಬಂಧದಲ್ಲಿ ಹೇಳುವದಾದರೆ ಇಡೀ ಕಾರ್ಯಕಾರಿ ಮಂಡಳವು ಸಾರ್ವಜನಿಕ ಜೀವನದೊಂದಿಗೆ ನಿಕಟವಾಗಿ ಸಂಬಂಧಿಸಿದ ಸರಕಾರೇತರ ಹಿಂದಿಯರಿಂದ ಕೂಡಿದ್ದಿರಬೇಕು. ಆದರೂ ಯುದ್ಧ ನಡೆದಿರುವ ವರೆಗೆ ಪುನರ್ಘಟಿತ ಮಧ್ಯವರ್ತಿ ಸರಕಾರವು ತಕ್ಕವರ್ತಿಗಳಿಗೆ ಹೊಣೆಗಾರವಾಗಿ ಉಳಿಯುವದಕ್ಕೆ ಪರಿಷತ್ತಿನ ಅಡ್ಡಿಯಿಲ್ಲ.

ಆದರೆ ಈ ಪುನರ್ಘಟಿತ ಮಧ್ಯವರ್ತಿ ಸರಕಾರವು ಕೇವಲ ಖಾತೆಗಳ ಮುಖ್ಯಾಧಿಕಾರಿಗಳ ಕೂಟವಾಗಿರದೆ, ಧೋರಣದ ಯಾವತ್ತೂ ಮಹತ್ವದ ವಿಷಯಗಳನ್ನು ಸಂಯುಕ್ತವಾಗಿ ಸಾಗಿಸಿಕೊಂಡು ಹೋಗತಕ್ಕದ್ದಿರಬೇಕು.

ಮುಂದಿನ ರಾಜ್ಯಘಟನೆಯ ಘೋಷಣೆಯಾಗಬೇಕು

ಈ ಪುನರ್ಘಟಿತ ಸರಕಾರದ ಕಾರ್ಯಕ್ರಮವು ಯಶಸ್ವಿಯಾಗಿ ಸಾಗಬೇಕಾದರೆ ಯೋಗ್ಯವಾದ ವಾತಾವರಣ ಹುಟ್ಟಿಸುವದ ಅವಶ್ಯವಿದೆ. ಅದು ಸಾಧ್ಯವಾಗಬೇಕಾದರೆ ಬ್ರಿಟಿಶರ ನಿಜವಾದ ಉದ್ದೇಶದ ಸಂಬಂಧದಲ್ಲಿ ಜನರಲ್ಲಿ ಮನೆಮಾಡಿಕೊಂಡ ತಪ್ಪು ತಿಳುವಳಿಕೆ, ಸಂಶಯ ಮೊದಲಾದವುಗಳನ್ನು ಹೋಗಲಾಡಿಸುವುದು ಅಗತ್ಯವಿರುವದು. ಆದ್ದರಿಂದ ಬ್ರಿಟಿಶ ಸರಕಾರದವರು ಮಧ್ಯವರ್ತಿ ಸರಕಾರವನ್ನು ಪುನರ್ಘಟಿಸುವ ಸಮಯದಲ್ಲಿ, ಯುದ್ಧವು ಮುಗಿದ ಮೇಲೆ ನಿಶ್ಚಿತ ಅವಧಿಯೊಳಗಾಗಿ ಹಿಂದುಸ್ಥಾನಕ್ಕೂ ಆಸ್ಟ್ರೇಲಿಯಾ ಹಾಗೂ ಕೆನೆಡಾ ವಸಾಹತುಗಳಿಗೆ ಯುದ್ಧದ ನಂತರ ದಯಪಾಲಿಸಲ್ಪಡುವ ರಾಜ್ಯಘಟನೆಯನ್ನೆ ದಯಪಾಲಿಸಲಾಗುವುದೆಂದು ಪ್ರಕಟಮಾಡಬೇಕು.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತ್ತೂ ಕಲೆ, ಸುಕ್ಕು ಮೊದಲಾದವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ—

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು

ಮಂಗಳೂರಿನ ಡಿಸ್ಟ್ರಿಬ್ಯೂಟರರು — ದಿ. ಕೊರನೇಷನ್ ಟ್ರೇಡಿಂಗ್ ಕೊ. ಮುಹಮ್ಮದಾಲಿ ರೋಡ್, ಮಂಗಳೂರು.

ಮಹಾಯುದ್ಧ ಮಾಡಿದರೂ ಲೋಕಶಾಂತಿಯುಂಟಾಗದು!

ಅನ್ಯಾಯಹೊಂದಿದವರಿಗೆ ನ್ಯಾಯಕೊಡದಿದ್ದರೆ- ಪರತಂತ್ರರಿಗೆ ಸ್ವಾತಂತ್ರ್ಯವನ್ನು ಕೊಡಬೇಕು

— ಬ್ರಿಟಿಷ್ ಸರಕಾರಕ್ಕೆ ಸರ್ ರಾಧಾಕೃಷ್ಣನರ ಕರೆ —

'ನಾಜಿಗಳ ರಾಕ್ಷಸೀ ರಾಜ್ಯದ ನಿರ್ನಾಮಮಾಡಲಿಕ್ಕೆ ಬೇಕಾದ ಎಲ್ಲಾ ಸಾಧನಗಳು ಹಿಂದುಸ್ಥಾನದಲ್ಲಿವೆ. ಆದರೂ ನಾಜಿಗಳ ವಿರೋಧವಾಗಿ ಯುದ್ಧ ಹೂಡಿರುವ ಬ್ರಿಟನು ಹಿಂದುಸ್ಥಾನವನ್ನು ಸಮಾಧಾನಿಸಿಲ್ಲವೆಂಬುದು ಒಂದು ದೊಡ್ಡ ಪ್ರಮಾದ-ದುಃಖಾಂತ ಘಟನೆಯಾಗಿರುವುದು. ಬ್ರಿಟಿಷರು ಯುದ್ಧ ಮಾಡುವ ಉದ್ದೇಶವು ಪ್ರಪಂಚದ ಎಲ್ಲಾ ಜನಗಳ ಸ್ವಾತಂತ್ರ್ಯವಾಗಿರುವುದಾದರೆ, ಬ್ರಿಟನು ಹಿಂದೆ ಗೆದ್ದುಕೊಂಡ ಜನರನ್ನೆಲ್ಲ ಈಗ ಸ್ವತಂತ್ರರನ್ನಾಗಿ ಮಾಡಬೇಕು' ಎಂದು ಆರ್ಯ ಎಂಶ್ ಕಲ್ಚರ್ ಎಂಬ ಆಂಗ್ಲ ಪತ್ರಿಕೆಯಲ್ಲಿ ಕಾಶಿ ಹಿಂದೂ ವಿಶ್ವವಿದ್ಯಾಲಯದ ಪ್ರಧಾನರಾದ ಸರ್. ಎಸ್. ರಾಧಾಕೃಷ್ಣನವರು ಒಂದು ಮಹತ್ವಪೂರ್ಣ ಲೇಖನವನ್ನು ಬರೆದಿರುತ್ತಾರೆ.

ಆ ಲೇಖನದ ಅಭಿಪ್ರಾಯು ಹೀಗಿದೆ:—

ಗೆದ್ದು ಫಲವಿಲ್ಲ

'ಜಗತ್ತಿಗೆ ಈ ತನಕ ಆದ ಅನ್ಯಾಯಗಳನ್ನು ಸರಿಪಡಿಸಿ ಲೋಕಶಾಂತಿಯನ್ನು ಸ್ಥಾಪಿಸುವುದಿಲ್ಲವಾದರೆ ಬ್ರಿಟನು ಯುದ್ಧದಲ್ಲಿ ಗೆದ್ದು ಫಲವಿಲ್ಲ. ನಾಜಿಗಳು ನ್ಯಾಯ, ಧರ್ಮ, ಪ್ರಜಾಪ್ರಭುತ್ವ, ಸ್ವರಾಜ್ಯ ಸ್ವಾತಂತ್ರ್ಯಗಳನ್ನು ಮೂಲೆ ಪಾಲು ಮಾಡಿದ್ದಾರೆ. ಅವರು ಇವುಗಳಿಗೆ ಯಾವ ಮಹತ್ವವನ್ನೂ ಕೊಡುವುದಿಲ್ಲ. ಆದುದರಿಂದಲೇ ನಾವು ಅವರನ್ನು ಖಂಡಿಸುತ್ತೇವೆ. ಆದರೆ ಯಾವ ತತ್ವಗಳಿಗಾಗಿ ನಾವು ನಾಜಿಗಳನ್ನು ಖಂಡಿಸಿ ನಿಂದಿಸುತ್ತೇವೋ ಅಂಥ ತತ್ವಗಳನ್ನು ನಾವು ಜೀವನಕ್ಕಿಂತಲೂ ಹೆಚ್ಚಾಗಿ ಮನ್ನಿಸುತ್ತೇವೆ ಎಂಬುದನ್ನು ನಮ್ಮ ಕೃತಿಗಳಿಂದ ನಾಜಿಗಳಿಗೆ ತೋರಿಸಿಕೊಡಬೇಕು. ಆಗ ಮಾತ್ರ ಯುದ್ಧದಲ್ಲಿ ಸೋಲುವುದಕ್ಕಿಂತಲೂ ಹೆಚ್ಚಿನದಾದ ಪರಿಣಾಮವು ನಾಜಿಗಳ ಮೇಲೆ ಆಗುವುದು.

ಬ್ರಿಟಿಷರ ಅದೂರದರ್ಶಿತ್ವ

ಆದರೆ ಬ್ರಿಟಿಷ ರಾಜಕಾರಣಿಗಳು ಪ್ರಪಂಚ ಪರಿವರ್ತಿತ ಪರಿಸ್ಥಿತಿ ಮತ್ತು ವಿಚಾರ ಪ್ರವಾಹದ ಗತಿಯನ್ನು ಲಕ್ಷಿಸುತ್ತಿಲ್ಲ. ಪ್ರಪಂಚದ ಹೊಸ ಪರಿಸ್ಥಿತಿ ಮತ್ತು ವಿಚಾರ ಪ್ರವಾಹವು ಚೆನ್ನಾಗಿ ತಿಳಿಯಬೇಕಾದರೆ ಬ್ರಿಟಿಷ್ ರಾಜಕಾರಣಿಗಳಿಗೆ ಹೊಸ ದೃಷ್ಟಿ ಬರಬೇಕು. ಅವರು ಹೊಸ ಕಾರ್ಯಧೋರಣೆಯನ್ನು ಇಟ್ಟುಕೊಳ್ಳಬೇಕು. ಯೋಗ್ಯತೆ ಮತ್ತು ಕಾರ್ಯಶಕ್ತಿಯನ್ನು ಹೇಳುವುದಾದರೆ, ಈಗಿನ ಬ್ರಿಟಿಷ್ ಮಂತ್ರಿಮಂಡಲದಲ್ಲಿ ಕಂಡು ಬರುವಂಥ ಯೋಗ್ಯತೆ ಮತ್ತು ಶಕ್ತಿ, ಹಿಂದೆ ಎಂದೂ ಇದ್ದುದಿಲ್ಲವೆಂದು ನಿಸ್ಸಂಕೋಚವಾಗಿ ಹೇಳಬಹುದು. ಆದರೆ ಬ್ರಿಟಿಷ್ ಸರಕಾರದ ಈ ಮಂತ್ರಿಗಳು ಹಿಂದಿನ ಪುರಾತನ ಕ್ರಮದಲ್ಲಿ ಮಾತ್ರ ಆಡಳಿತ ಮಾಡಲು ಸಮರ್ಥರಾಗಿದ್ದಾರೆ. ಅವರಿಗೆ ಪ್ರಪಂಚದ ಪರಿವರ್ತಿತ ಪರಿಸ್ಥಿತಿ ಮತ್ತು ವಿಚಾರ ಪ್ರವಾಹವನ್ನು ತಿಳಕೊಳ್ಳಲಿಕ್ಕಾಗುವುದಿಲ್ಲ. ಆದುದರಿಂದಲೇ ಅವರು ಲೋಕಶಾಂತಿಗೆ ಅನುಕೂಲವಾದ ಯಾವುದಾದರೊಂದು ಪರಿಣಾಮಕಾರಿಯಾದ ಹೊಸ ಧೋರಣೆಯನ್ನು ಇಟ್ಟುಕೊಳ್ಳಲಾರರು. ಯುದ್ಧವನ್ನು ಯಶಸ್ವಿಯಾಗಿ ಕೊನೆಗಾಣಿಸಲಿಕ್ಕೆ ತನ್ನ ಎಲ್ಲಾ ಶಕ್ತಿಯುಕ್ತಿಗಳನ್ನು ಪ್ರಯೋಗಕ್ಕೆ ತರುತ್ತಿರುವ ಬ್ರಿಟಿಷ್ ಪ್ರಧಾನರಾದ ಚರ್ಚಿಲ್ಲರಲ್ಲಿ ಧೈರ್ಯ, ಸ್ಥೈರ್ಯ ಮುಂತಾದ ಉತ್ತಮ ಗುಣಗಳು ಇವೆಯಾದರೂ ಅವರು ಹಿಂದುಸ್ಥಾನದ ಸಮಸ್ಯೆಯನ್ನು ಬಗೆಹರಿಸುವ ಕುರಿತು ಸಂಪೂರ್ಣ ಮೌನವ್ರತವನ್ನು ತಾಳಿರುವರು. ಮಂತ್ರಿ ಮಂಡಲದ ಬಿಕ್ಕಳದ ಸದಸ್ಯರೆಲ್ಲ ಪುರಾತನ ಪರಂಪರೆಗೆ ಸಂಬಂಧವುಳ್ಳವರಾಗಿದ್ದಾರೆ. ಅವರಿಂದ ಹೊಸ ಪರಿಸ್ಥಿತಿಗೆ ಬೇಕಾದಂತೆ ಕಾರ್ಯನಿರ್ವಾಹ ಮಾಡಲು ಆಗುವುದಿಲ್ಲ.

ಪರಿವರ್ತಿತ ಪರಿಸ್ಥಿತಿ

ಕಾಲವು ಬದಲಾಗಿದೆ. ಬ್ರಿಟನು ಮುಂಚಿನ ಸ್ಥಾನದಲ್ಲಿ ಈಗಿಲ್ಲ. ಮೆಲ್ಲಗೆ ಒಡಂಬಡಿಕೆ ಮಾಡಿಕೊಂಡು ಹೊಂದಿಸಿಕೊಳ್ಳುವ ಹಳೆಯ ಧೋರಣೆಯಿಂದ ಈಗ ಸಮಸ್ಯೆಗಳನ್ನು ಬಿಡಿಸಲಿಕ್ಕಾಗುವುದಿಲ್ಲ. ಹಿಂದಿನ ಕಾರ್ಯನಿರ್ವಾಹ ಕ್ರಮವು ಈಗ ಕೆಲಸಕ್ಕೆ ಬಾರದಾಗಿದೆ. ಆದುದರಿಂದ ಪುರಾತನ ಸಂಪ್ರದಾಯವಾದಿಗಳು ಈ ಕಾಲಕ್ಕೆ ತಮ್ಮನ್ನು ಹೊಂದಿಸಿಕೊಂಡು ಕಾರ್ಯನಿರ್ವಾಹದಲ್ಲಿ ಸಫಲರಾಗಲಾರರು. ಹಳೆಯ ಕ್ರಮದಲ್ಲಿ ಆಳುವ ಯೋಗ್ಯತೆ ಈಗಿನ ಬ್ರಿಟಿಷ್ ಮಂತ್ರಿಮಂಡಲಕ್ಕೆ ಚೆನ್ನಾಗಿ ಇದೆ. ಆದರೆ ಆಧುನಿಕ ಜಗತ್ತಿಗೆ ಅವರಿಂದ ಯಾವ ಪ್ರಯೋಜನವೂ ಆಗದು. ಅವರ ಬುದ್ಧಿ ಸಾಮರ್ಥ್ಯ ಅತ್ಯದ್ಭುತವಾಗಿದೆ. ಆದರೆ ಅವರ ಭಾವನೆಯು ಮಂದವಾಗಿರುವುದು.

ಸಂದೇಹ ದೃಷ್ಟಿ

ಅಲ್ಲವಾದರೆ ಹಿಂದುಸ್ಥಾನದಲ್ಲಿ ಜನಪ್ರೀತಿಯನ್ನು ಸಂಪಾದಿಸಿದ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲಿಕ್ಕೆ ಬ್ರಿಟಿಷ್ ಸರಕಾರವು ಅಂಜುತ್ತಿದ್ದಿಲ್ಲ; ಇಲ್ಲಿಯ ಸನ್ಮಾನಿತರ ಪ್ರಜಾಪ್ರಮುಖರನ್ನು ಸಂದೇಹ ದೃಷ್ಟಿಯಿಂದ ನೋಡುತ್ತಿರಲಿಲ್ಲ. ದೇಶ ರಕ್ಷಣೆಗೆ ಅತ್ಯಗತ್ಯವಾಗಿ ವಿಮಾನ ಕಾರ್ಖಾನೆ, ಹಡಗು ಕಟ್ಟುವ ಕಾರ್ಖಾನೆ ಇತ್ಯಾದಿಗಳನ್ನು ಇಲ್ಲಿ ಸ್ಥಾಪಿಸಲಿಕ್ಕೆ ಅದು ಹೆದರುತ್ತಿರಲಿಲ್ಲ. ಬ್ರಿಟಿಷ್ ಸರಕಾರದ ವ್ಯರ್ಥ ಅಂಜಿಕೆ, ಸಂಕೋಚ, ಸಂದೇಹ ಮತ್ತು ಭಯದ ಪರಿಣಾಮವಾಗಿಯೇ ಭಾರತದ ಪರಿಸ್ಥಿತಿಯು ಹದಮೀರಿ ಪ್ರತಿಕೂಲವಾಗುತ್ತ ನಡೆದಿದೆ. ಈಗಲಾದರೂ ಬ್ರಿಟಿಷ್ ರಾಜಕಾರಣಿಗಳು ದೇಶದ ಪರಿಸ್ಥಿತಿಯನ್ನು ಕಣ್ಣುಬಿಟ್ಟು ನೋಡುವರೆ? ಆಡಿದ ಮಾತುಗಳಂತೆ ನಡೆದು ತೋರಿಸುವರೆ? ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಟ್ಟು ಹಿಂದುಸ್ಥಾನ ಮತ್ತು ಬ್ರಿಟನು ಪರಸ್ಪರವಾಗಿ ರಕ್ಷಣೆ, ಭದ್ರತೆ ಮತ್ತು ಉನ್ನತಿಯನ್ನು ಹೊಂದಲಿಕ್ಕೆ ಅನುಕೂಲ ಮಾಡುವುದೆ? ಮತ್ತೆ ಹೀಗೆ ಮಾಡಿ ಬ್ರಿಟನು ಪ್ರಪಂಚದಲ್ಲಿ ನಿಶ್ಚಿತವಾದ ಚಿರಶಾಂತಿಯನ್ನು ಸ್ಥಾಪಿಸಲಿಕ್ಕೆ ತೆರವಾಗುವುದೆ?

THE
BANK OF MANGALORE LTD.,
H. O. MANGALORE
ESTD. 1931
Branches:-
Moodabidri & Padubidri.

NOTICE

On and from 1st January 1941 the following are the revised rates of interest on deposits:

FIXED DEPOSITS:

For 2 years or over ...	5½%
,, 1 ,, ...	4½%
,, 6 months ...	3½%
,, 3 months ...	3

Interest Payable Quarterly.

SAVINGS BANK DEPOSITS:

On daily balances on balances over Rs. 5-0-0 in multiples of Rs. 5-0-0 @ 3%.

All kinds of banking business transacted

1941ನೇ ಇಸವಿ ಮಾರ್ಚ ತಿಂಗಳ ತಾರೀಕು 17ನೇ ಸೋಮವಾರ ದಿವಸದ ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆಗಳು.

	ರಿಂದ	ವರೆಗೆ
1. (a) ಭತ್ತ ಅವ್ವಲ್ ತರದ ಗುಡ್ಡು ಮುಡಿಗೆ	2—2—0	—
(b) ,, ಮಯಂ ,, ,, ,,	2—4—0	—
2. (a) ಅಕ್ಕಿ ಅವ್ವಲ್ ತರದ ಗುಡ್ಡು ಮುಡಿಗೆ	5—14—0	5—14—0
(b) ,, ಮಯಂ ,, ,, ,,	5—8—0	5—10—0
3. (a) ,, ಅವ್ವಲ್ ,, ಸುಗ್ಗಿ ,,	5—6—0	5—6—0
(b) ,, ಮಯಂ ,, ,, ,,	5—2—0	—
4. (a) ತೆಂಗಿನಕಾಯಿ ಸುಲಿದದ್ದು 1000ಕ್ಕೆ	35—0—0	40—0—0
(b) ,, ಸಿಪ್ಪೆಯಿದ್ದದ್ದು ,,	37—8—0	42—8—0
5. (a) ಕೊಬ್ಬರಿ ಆಫೀಸು ಖಂಡಿಗೆ	57—8—0	—
(b) ,, ದೀವಿ ,,	65—0—0	—
(c) ,, ದಿಲ್‌ಪಸಂದ್ ,,	60—0—0	—
6. ತೆಂಗಿನ ಎಣ್ಣೆ ಮಣಕ್ಕೆ	8—15—0	8—15—0
7. (a) ಸಿಪ್ಪೆಯಿದ್ದ ಅಡಿಕೆ 1000ಕ್ಕೆ	3—0—0	3—8—0
(b) ಸುಲಿದ ಅಡಿಕೆ ಖಂಡಿಗೆ (ಹಳ್ತು)	115—0—0	130—0—0
(ಹೊಸ್ತು)	100—0—0	120—0—0
8. ಗೇರುಬೀಜ ಮುಡಿಗೆ	8—2—0	8—6—0
9. ಕಬ್ಬಿನ ಬೆಲ್ಲ ಖಂಡಿಗೆ	22—8—0	27—8—0
10. ಒಳ್ಳೆ ಮೆಣಸು ಹಂಡ್ರೆಡ್ ವೇಟಿಗೆ	18—0—0	18—8—0
11. (a) ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	4—0—0	5—8—0
(b) ಹುಡಿಯ ,, ,,	7—0—0	10—0—0
12. (a) ಮೈಸೂರು ಏಲಕ್ಕಿ ಮಣಕ್ಕೆ	—0—0	——0
(b) ಕೊಡಗಿನ ,, ,,	60—0—0	65—0—0
13. (a) ಕುಮಟೆಯ ಮೆಣಸು ಖಂಡಿಗೆ	60—0—0	70—0—0
(b) ಕಾಸರಗೋಡು ,, ಮಣಕ್ಕೆ	3—0—0	—
(c) [illegible] ,, ,,	8—12—0	—

ಸಡಗರ

ಕತೆಗಾರ
ಎಚ್. ವಿಟ್ಠಲ್ ಶೆಟ್ಟಿ, ಮಂಗಳೂರು

ಅವನು ಈ ದಿನವೂ ನಿರಾಶನಾಗಿ ಮನೆಗೆ ಹಿಂತೆರಳಬೇಕಾಯಿತು. ಅಷ್ಟು ದೊಡ್ಡ ನಾಗಪುರದಲ್ಲಿ ಕೇವಲ ಒಬ್ಬ ನಿಶಾಕಾಂತನಿಗೆ ಅದರಲ್ಲೂ ಕಾಲೇಜಿನ ಪದವೀಧರನಿಗೆ ಒಂದು ನೌಕರಿಯು ಸಿಗಲಿಲ್ಲವೆಂದರೆ ಅವನು ದುರ್ದೈವಿಯೇ ಎನ್ನಬೇಕು. ೩ ಲಕ್ಷ ಜನಸಂಖ್ಯೆಯಿರುವ ಪ್ರಚಂಡ ನಗರದಲ್ಲಿ ಅದೆಷ್ಟು ಕಾರ್ಖಾನೆಗಳು! ಬ್ಯಾಂಕುಗಳು! ಇನ್ಸೂರೆನ್ಸ್ ಕಂಪೆನಿಗಳು! ಅಷ್ಟು ಇದ್ದರೂ ಅವನಿಗೆ ಒಂದು ಕೆಲಸವಾದರೂ ದೊರೆಯದಿರಬೇಕೇ?

ತನ್ನ ಹಳ್ಳಿಯಿಂದ ಬೆಳಿಗ್ಗೆ ೮ ಗಂಟೆಗೆ ಸುಮಾರು ೩ ಕಿಲೋಮೀಟರ್ ದೂರವಿರುವ ನಾಗಪುರಕ್ಕೆ ಹೋಗುವುದು, ಇಡೀ ದಿನ ಪಟ್ಟಣವನ್ನು ಸುತ್ತಾಡುವುದು, ಬ್ಯಾಂಕು ಮುಂತಾದ ಎಲ್ಲಾ ಸಂಸ್ಥೆಗಳ ಮೆಟ್ಟಿಲನ್ನು ಹತ್ತಿ ಹೊರಗೆ ಹಾಕಿರುವ 'ನೋ ವೇಕೆನ್ಸಿ' ಎಂಬ ಬೋರ್ಡನ್ನು ನೋಡಿ ಕೂಡಲೇ ಹಿಂತಿರುಗುವುದು (ಒಳಗೆ ಹೋಗಿ ಸಂಸ್ಥೆಯ ಮಾಲಿಕರೊಡನೆ ಮಾತಾಡುವ ಕ್ರಮವನ್ನು ತಪ್ಪಿಸಿದ್ದಕ್ಕಾಗಿ ಅವನು ಆ ಬೋರ್ಡಿಗೆ ಮನಸ್ಸಿನಲ್ಲಿಯೇ ಅಭಿವಂದನೆಗಳನ್ನು ಸಮರ್ಪಿಸುತ್ತಿದ್ದನೋ ಏನೋ!) ಸಾಯಂಕಾಲ ೬ ಗಂಟೆ ಹೊಡೆಯುತ್ತಲೇ ಹತಾಶನಾಗಿ ತನ್ನ ಹಳ್ಳಿಯ ಕಡೆ ಮರಳುವುದು-ಇದೇ ನಿಶಾಕಾಂತನ ದಿನನಿತ್ಯದ ಕೆಲಸವಾಗಿತ್ತು. ಇಡೀ ದಿನ ಅವನು ಅಷ್ಟು ಪ್ರಯಾಸಪಡುತ್ತಿದ್ದರೂ ರಾತ್ರಿಯೆಲ್ಲಾ ಅವನಿಗೆ ನಿದ್ರೆಯೇ ಬರುತ್ತಿರಲಿಲ್ಲ, ಅಷ್ಟೇ ಅಲ್ಲದೆ ಅತ್ತಿಗೆಯ ಬೈಗಳ ಮಳೆ ಬೇರೆ

ಎಂದಿನಂತೆ ನಿಶಾಕಾಂತನು ಹತಾಶನಾಗಿ ಮನೆಯ ಮೆಟ್ಟಿಲನ್ನು ಒಂದೊಂದಾಗಿ ಹತ್ತುತ್ತಿದ್ದನು. ಅವನ ಮುಖದ ಮೇಲೆ ಹೊರಟ ನಿಟ್ಟುಸಿರು ಅವನು ತನ್ನ ಕೆಲಸ ಹುಡುಕುವ ಕೆಲಸದಲ್ಲಿ ಜಯಪ್ರದನಾಗಿಲ್ಲವೆಂದು ಸೂಚಿಸುತ್ತಿತ್ತು. ಅವನು ಬಾಗಿಲಿಗೆ ಕಾಲಿಡುತ್ತಲೇ ಸಿಡುಕಿನ ಮೋರೆಯ ಅತ್ತಿಗೆಯ ಪುಣ್ಯಮೂರ್ತಿಯ ದರ್ಶನವಾಯಿತು. ಅವಳನ್ನು ಕಂಡರೆ ಅವನಿಗೆ ಭಯವಾಗುತ್ತಿತ್ತು. ತನ್ನ ಭಯವನ್ನು ಮರೆಸುತ್ತ ನಿಶಾಕಾಂತನು 'ಅತ್ತಿಗೆ ಇದೋ ಡಾಕ್ಟರರಿಂದ ಮದ್ದನ್ನು ತಂದಿದ್ದೇನೆ. ೩ ದಿನಕ್ಕೆ ರಡು ಬಾರಿ ಹಾಲಿನೊಂದಿಗೆ ಸೇರಿಕೊಡಬೇಕಂತೆ' ಎಂದನು. ಅವಳು ಆ ಮದ್ದಿನ ಬಾಟಲಿಯನ್ನು ತಿರಸ್ಕಾರದಿಂದ ತೆಗೆದುಕೊಳ್ಳುತ್ತ 'ನಿನ್ನ ಕೆಲಸದ ಅವಸ್ಥೆಯೇನಾಯಿತು? ಎಲ್ಲಿಯಾದರೂ ಸಿಕ್ಕಿತೇ? ಅಥವಾ ನಿನ್ನ ಹಾಗೆ ಬೀದಿ ಭಿಕಾರಿಯಂತೆ ಅಲೆದು ಕೈಬೀಸಿಕೊಂಡು ಬಂದೆಯಾ?'

ನಿಶಾಕಾಂತನು ಉಗುಳು ನುಂಗುತ್ತ 'ಇಂಪೀರಿಯಲ್ ಬ್ಯಾಂಕಿನಲ್ಲಿ ನನಗೆ ಸಿಗುವ ಸಂಭವವಿದೆ. ಕಡೆಗೆ ನಾನು ಕಲಿತ ಕಾಲೇಜಿನಲ್ಲೇ ನನಗೆ ಕೆಲಸ ಸಿಕ್ಕಿದರೂ ಸಿಗಬಹುದು'.

'ಏನು ಸಂಭವ ಮಾತ್ರವಿದೆ? ಅಷ್ಟೇ' ಇಂತೂ ಕೆಲಸ ಸಿಕ್ಕಿಲ್ಲ ಅನ್ನು. ಹೀಗೇ ಆದರೆ ಹೇಗೆ? ಹೀಗೆ ಪೋಲಿಯಾಗಿ ತಿರುಗುವುದಕ್ಕಿಂತ ಒಂದು ಅಂಗಡಿಯಲ್ಲಿ ಗುಮಾಸ್ತೆಯ ಕೆಲಸಕ್ಕಾದರೂ ಸೇರಬಾರದೇ?'

ನಿಶಾಕಾಂತನು ಮೌನವಾಗಿದ್ದನು. ದೇಶಾಂತರಕ್ಕೆ ಹೋಗುವ ಆಲೋಚನೆಯಲ್ಲಿ ಅವನು ಮಗ್ನನಾಗಿದ್ದನು. ಅತ್ತಿಗೆಯು ಒಳಗೆ ಹೋದಳು. ನಿಶಾಕಾಂತನ ಮನಸ್ಸು ಸಾಗರದಂತೆ ಅಲ್ಲೋಲಕಲ್ಲೋಲವಾಗುತ್ತಿತ್ತು

'ಇನ್ನೂ ಆ ಸೋಮಾರಿಗೆ ಊಟಕ್ಕೆ ಏಳಲು ಸಮಯ ಸಿಗುತ್ತದೋ ನೋಡಿರಿ. ರಾತ್ರಿ ೧೦ ಗಂಟೆಯಾದರೂ ಆ ಮಹಾರಾಜನಿಗೆ ಊಟಕ್ಕೆ ಬರಲು ಸಮಯವಿಲ್ಲ. ಪ್ರತಿದಿನವೂ ಊಟಕ್ಕೆ ಕರೆಯಲು ಇವನೇನು ರಾಜಪುತ್ರನೇ? ಇನ್ನು ಮುಂದೆ ಅವನನ್ನು ಇಡೀ ರಾತ್ರಿ ಕಾಯಲು ನನ್ನಿಂದಾಗದು' ಎಂದು ನಿಶಾಕಾಂತನ ಅತ್ತಿಗೆಯು ಗಂಡನೊಡನೆ ಹೇಳುವ ಕರ್ಣಕಠೋರವಾದ ಮಾತುಗಳು ನಿಶಾಕಾಂತನ ಆಲೋಚನಾ ಮಗ್ನತೆಯನ್ನು ಭಂಗಪಡಿಸಿದುವು. ಅವನು ಮೊದಲೇ ಬಹಳ ಬೇಸರದಲ್ಲಿದ್ದನು. ಈ ಮಾತುಗಳು ಕೇಳಿ ಬಂದೊಡನೆಯೇ ಅವನ ಹಸಿವೆಯೇ ಅಡಗಿಹೋಯಿತು. 'ನನಗಿಂದ ಮೈ ಚೆನ್ನಾಗಿಲ್ಲ ಅತ್ತಿಗೆ. ಇವತ್ತು ನಾನು ಊಟವನ್ನು ಮಾಡಲಾರೆ' ಎಂದು ಅವನು ತನ್ನ ಕೋಣೆಗೆ ನಡೆದನು.

'ಹಸಿವೆಯಾದರೂ ಹೇಗಾದೀತು? ಹೋಟೇಲಿನ ರುಚಿ ರುಚಿಯಾದ ಊಟವಲ್ಲಿಷ್ಟ ಮಹಾರಾಜನಿಗೆ ಈ ಹಾಳನ್ನವು ಹೇಗೆ ಹಿಡಿದೀತು' ಬೆಳಿಗ್ಗೆಯೇ ತಾನು ಊಟಮಾಡುವುದಿಲ್ಲವೆಂದು ಹೇಳಿದ್ದರೆ ಈ ಹಾಳಾಗುವ ಅನ್ನವಾದರೂ ಉಳಿಯುತ್ತಿತ್ತು'. ಪುನಃ ಅತ್ತಿಗೆಯ ನಂಜಿನ ಮಾತುಗಳು ಕೇಳಿಸಿದುವು. ಪ್ರಚಂಡವಾದ ಪ್ರಲಯವಾದರೂ ಈ ಪದವೀಧರನು ಹೆದರುವವನಾಗಿರಲಿಲ್ಲ. ಆದರೆ ನಾರಿಯ ಈ ಕ್ರೂರ ವಾಕ್ಯಗಳನ್ನು ಕೇಳಿ ಅವನು ಕಳವಳಗೊಂಡನು. ಪ್ರತ್ಯುತ್ತರವನ್ನು ಕೊಡಬೇಕೆಂದು ನಿಶ್ಚಯಿಸಿದನಾದರೂ ತನ್ನ ಪರಾಧೀನತೆಯನ್ನೂ, ಅಣ್ಣನು ತನಗಾಗಿ ಅಪಾರವಾದ ಹಣವನ್ನು ವೆಚ್ಚ ಮಾಡಿದ್ದನ್ನೂ ಸ್ಮರಿಸಿ ಸುಮ್ಮನಾದನು. ಅವನಲ್ಲಿ 'ದೇಶಾಂತರಕ್ಕೆ ಹೊರಡುವ ಆಲೋಚನೆಯು ದೃಢವಾಯಿತು.

ಅಂದು ಮಧ್ಯರಾತ್ರಿಯ ಸಮಯ ಭಯಂಕರವಾದ ಮಳೆಯು ಸುರಿಯಲಾರಂಭಿಸಿತು. ಈ ನಡುವೆ ನಿಶಾಕಾಂತನ ಅಣ್ಣನ ಮಗುವಾದ ದೇವರಾಯನಿಗೆ ಕೆಲವು ದಿನಗಳಿಂದಿದ್ದ ಕಾಯಿಲೆಯು ವಿಪರೀತವಾಯಿತು. ಹಣದಾಸೆಗಾಗಿ ಆ ಊರಿನ ಕೆಲವು ವೈದ್ಯರು ಮುದ್ದಿನ ಮಳೆಸುರಿಯುತ್ತಿದ್ದರೂ ಮಧ್ಯರಾತ್ರಿಯನ್ನದೆ ಬಂದು ದೇವರಾಯನನ್ನು ಪರೀಕ್ಷಿಸಿದರು. ಆದರೆ ಅವರಿಂದ ಮಗುವನ್ನು ಬದುಕಿಸುವುದು ಅಸಾಧ್ಯವೆಂದಾಯಿತು. ನಾಗಪುರದಿಂದಲೇ ಡಾಕ್ಟರರನ್ನು ಕರೆಸಬೇಕೆಂದು ವೈದ್ಯರು ಸೂಚಿಸಿದರು. ಆದರೆ ಆ ಮಳೆಗೆ ಆ ಮಧ್ಯರಾತ್ರಿಗೆ ಘನಘೋರವಾದ ಅಡವಿಯನ್ನು ದಾಟಿ ನಾಗಪುರಕ್ಕೆ ಹೋಗುವ ಕೆಚ್ಚೆದೆಯವನಾದರೂ ಯಾರು? ಅಲ್ಲಿ ನೆರೆದವರಲ್ಲಿ ಅಂತಹ ಧೀರನು ಯಾರೂ ಇರಲಿಲ್ಲ. ಮಗು ದೇವರಾಯನು ಪ್ರಾಣಸಂಕಟದಲ್ಲಿದ್ದನು. ನಿಶಾಕಾಂತನ ಅತ್ತಿಗೆಯು ನಿರಾಶಳಾಗಿ 'ನನ್ನ ಮಗುವನ್ನು ಬದುಕಿಸುವವರಾರೂ ಇಲ್ಲಿ ಇಲ್ಲವೇ?' ಎಂದು ಮರುಕದಿಂದ ಹೇಳಿದಳು. ಅಷ್ಟರಲ್ಲಿ 'ಸ್ವಲ್ಪವೂ ಹೆದರಬೇಡ ಅತ್ತಿಗೆ! ನಾನು ಇರುವಾಗ ನೀವು ಹೆದರುವುದೇಕೆ? ನಾಗಪುರಕ್ಕೆ ಹೋಗಲು ನಾನು ಸಿದ್ಧನಿದ್ದೇನೆ.' ಹೀಗೆಂದು ಹೇಳಿ ನಿಶಾಕಾಂತನು ಗಂಭೀರನಾಗಿ ಹೊರಟು ನಿಂತಿದ್ದನು!

★

ನಿಶಾಕಾಂತನು ನಾಗಪುರಕ್ಕೆ ಹೋಗಿ ಆ ರಾತ್ರಿಯೇ ತನ್ನ ಪರಿಚಯದ ಡಾಕ್ಟರೊಬ್ಬರನ್ನು ತನ್ನ ಊರಿಗೆ ಕಾರಿನಲ್ಲಿ ಕಳುಹಿಸಿದನು. ಆದರೆ ಅವನು ಮಾತ್ರ ತನ್ನೂರಿಗೆ ಮರಳಲಿಲ್ಲ. ಮರುದಿನ ಪ್ರಾತಃಕಾಲದಲ್ಲೇ ಅವನು ಕಲ್ಕತ್ತೆಗೆ ಪ್ರಯಾಣ ಮಾಡಿದನು. ಹೇಗೂ ಕಡೆಗೆ ನಿರುದ್ಯೋಗಿಗಳ ಆಶ್ರಯ ಸ್ಥಾನವಾದ ಹಿಂದೂಸ್ಥಾನದ ಲಂಡನ್ ಎನಿಸಿದ ಕಲಕತ್ತೆಯನ್ನು ತಲುಪಿದನು.

ಕಲ್ಕತ್ತೆಯ ಅದ್ಭುತ ಪಟ್ಟಣವೂ ಈ ನಿಶಾಕಾಂತನು ಅಲ್ಲಿ ಬೆರಗಾಗಲಿಲ್ಲ. ನಾಗಪುರದಲ್ಲಿ ಬಾಲ್ಯವನ್ನು ಕಳೆದ ಅವನಿಗೆ ಕಲ್ಕತ್ತೆಯು ಸ್ವಲ್ಪ ವಿಶೇಷವಾಗಿ ತೋರಿತಲ್ಲದೆ ಅವನೇನು ಗಾಬರಿಯಾಗಲಿಲ್ಲ. ಒಂದು ಹೋಟೇಲಿನಲ್ಲಿ ಊಟಕ್ಕೆ ನಿಂತು ಒಂದು ಕೋಣೆಯನ್ನು ಬಾಡಿಗೆಗೆ ಹಿಡಿದನು.

ಅನಂತರ ಅವನಿಗೆ ಪುನಃ ಆ ಹಾಳು ಕೆಲಸವು ದೊರೆಯಬೇಕು. ಕೆಲಸ ಹುಡುಕುವಂತಹ ಅನಿಷ್ಟ ಕೆಲಸವು ಬೇರೊಂದಿಲ್ಲ. ಅಲ್ಲಿಯ ವಿಸ್ತಾರವಾದ ಮಾರ್ಗಗಳಲ್ಲಿ ಅವನು ಸಂಚರಿಸಿದನು. ಗಲ್ಲಿ ಓಣಿಗಳೆನ್ನದೆ ಸುತ್ತಾಡಿದನು. ಆದರೆ ಅವನಿಗೆ ಕೆಲಸವು ಸುಲಭದಲ್ಲಿ ದೊರೆಯುವುದೇ? ಆ ದಿನವು ನಿಷ್ಫಲವಾಗಿ ಕಳೆಯಿತು. ಮರುದಿನವೂ ಹಾಗೆಯೇ ಕಳೆಯಿತು.

ಹಾಗೂ ಹೀಗೂ ಒಂದು ವಾರದೊಳಗೆ ನಿರಾಶನಾದ ನಿಶಾಕಾಂತನಿಗೆ ಹ್ಯಾರಿಸನ್ ರೋಡಿನಲ್ಲಿರುವ ಪ್ರಸಿದ್ಧ ಸಾಹುಕಾರರೊಬ್ಬರಲ್ಲಿ ಕೆಲವು ಮಕ್ಕಳಿಗೆ ಪಾಠ ಹೇಳಿಕೊಡುವ ಕೆಲಸವು ಸಿಕ್ಕಿತು. ಇದರಿಂದ ಅವನಿಗೆ ತಿಂಗಳೊಂದರ ೩೦ ರೂ.ಗಳು ಸಿಗಲಾರಂಭಿಸಿದುವು. ಕಲ್ಕತ್ತೆಯಂತಹ ಮಹಾನಗರದಲ್ಲಿ ೩೦ ರೂ.ಗಳಲ್ಲಿ ದಿನದೂಡುವುದೆಂದರೆ ಅದೊಂದು ಮಹಾ ದಿಗ್ವಿಜಯವೇ ಸರಿ. ನಿಶಾಕಾಂತನು ಈ ದಿಗ್ವಿಜಯವನ್ನು ಸಾಧಿಸಿದನೆನ್ನಬೇಕು. ಅಷ್ಟರಿಂದಲೇ ಅವನು ತೃಪ್ತನಾಗುತ್ತಿದ್ದನು

★

ನಿಶಾಕಾಂತನ ಅಣ್ಣನ ಮಗ ದೇವರಾಯನು ಕಾಯಿಲೆಯಿಂದ ಪಾರಾದನು. ಆದರೆ ಒಂಬತ್ತು ದಿನಗಳು ಕಳೆದರೂ ನಿಶಾಕಾಂತನು ಬಾರದೇ ಇದ್ದುದನ್ನು ಕಂಡು ದಂಪತಿಗಳೀರ್ವರೂ ವ್ಯಥೆಗೊಳಗಾದರು. ಮಗು ದೇವರಾಯನೂ ಚಿಕ್ಕಪ್ಪನಿಲ್ಲದೆ ಬಹಳ ಬೇಸರದಲ್ಲಿದ್ದನು. ಅವನು ಕಾಯಿಲೆಯಿಂದ ಪಾರಾದರೂ ಮುಂಚಿನಂತೆ ಮಂದಹಾಸದಿಂದ ಯಾರೊಡನೆಯೂ ಮಾತಾಡುತ್ತಿರಲಿಲ್ಲ. ಆಗಾಗ 'ಚಿಕ್ಕಪ್ಪಾ ಬಾ. ನನಗೆ ಗೊಂಬೆ ತಾ. ಪಾಠಗಳನ್ನು ಕಲಿಸು' ಎಂದು ತನ್ನ ಪಕ್ಕ ಕರೆಯುವನು. ಒಮ್ಮೊಮ್ಮೆ ತಾಯಿಯೊಡನೆ ಚಿಕ್ಕಪ್ಪನೆಲ್ಲಿರುವನೆಂದು ಕೇಳುವನು. ಅವಳು ಆಗ ಏನಾದರೂ ಸುಳ್ಳು ಹೇಳಿ ಅವನನ್ನು ವಂಚಿಸುವಳು.

ನಿಶಾಕಾಂತನ ಅಣ್ಣನು ನಾಗಪುರಕ್ಕೆ ಹೋಗಿ ತಮ್ಮನಿಗಾಗಿ ಬಹಳ ಹುಡುಕಾಡಿದನು. ಆದರೆ ನಿಶಾಕಾಂತನ ಪತ್ತೆ ಸಿಗಬೇಕಲ್ಲ

ಇತ್ತ ದೇವರಾಯನ ಹಟವು ಬಹಳ ಹೆಚ್ಚಾಯಿತು. ಚಿಕ್ಕಪ್ಪನನ್ನು ಕರೆತರಲೇ ಬೇಕೆಂದು ಅವನು ಆಗಾಗ ಅಳುತ್ತಿದ್ದನು. ತನ್ನ ದುರ್ಬುದ್ಧಿಗಾಗಿ ದೇವರಾಯನ ತಾಯಿಯು ಮನಸ್ಸಿನಲ್ಲೇ ಮರುಗುವಳು. ನಿಶಾಕಾಂತನು ತನಗಿಂತಲೂ ಹೆಚ್ಚಾಗಿ ದೇವರಾಯನನ್ನು ಪ್ರೀತಿಸುತ್ತಿದ್ದನೆಂದು ಅವಳಿಗೆ ಗೊತ್ತಿತ್ತು. ಅವನು ಅರೇಳು ತಿಂಗಳುಗಳಿಂದ ಇಲ್ಲದಂತಾಗಿರುವುದರಿಂದ ದೇವರಾಯನು ಚಿಕ್ಕಪ್ಪನನ್ನು ನೋಡಲು ಬಹಳವಾಗಿ ಹಂಬಲಿಸುತ್ತಿದ್ದನು

★

ನಾಲ್ಕು ವರ್ಷಗಳು ಉರುಳಿದುವು-ಕಾಲವೇನು ಒಂದೇ ರೀತಿಯಲ್ಲಿದೆಯೇ? ನಿಶಾಕಾಂತನ ಜೀವನದಲ್ಲಿ ವಿಶೇಷವಾದ ಪರಿವರ್ತನವುಂಟಾಗಿದೆ. ಅವನು ಇಷ್ಟರಲ್ಲೇ ಹ್ಯಾರಿಸನ್ ರಸ್ತೆಯಲ್ಲಿರುವ ಪ್ರಸಿದ್ಧವಾದ ಬ್ಯಾಂಕೊಂದರಲ್ಲಿ ಕೆಲಸವನ್ನು ಸಂಪಾದಿಸಿದ್ದನು. ತಿಂಗಳೊಂದರ ೧೫೦ ರೂಪಾಯಿಗಳು ಸಿಗುತ್ತಿದ್ದವು. ಇನ್ನೂ ಹೆಚ್ಚಾಗುವ ಸಂಭವವಿತ್ತು

ಒಮ್ಮೆ ನಿಶಾಕಾಂತನಿಗೆ ತನ್ನ ಅಣ್ಣ, ಅತ್ತಿಗೆ ಮತ್ತು ದೇವರಾಯನ ನೆನಪಾಯಿತು. ಕೂಡಲೇ ಅವನಲ್ಲಿ ಅವರನ್ನು ನೋಡುವ ಇಚ್ಛೆಯುಂಟಾಯಿತು. ಇದು

(೧೬ನೆಯ ಪುಟವನ್ನು ನೋಡಿ)

"ನಮ್ಮ ದೇಶವು ಪ್ರಜಾಪ್ರಭುತ್ವದ ಔಷಧಾಲಯ"

ಅಮೇರಿಕ ಅಧ್ಯಕ್ಷರು ಘೋಷಿಸಿದರು

ಸರ್ವಾಧಿಕಾರಿಗಳೊಡನೆ ಸಮಾಧಾನವಿಲ್ಲ — ಬ್ರಿಟನಿನ ಧೈರ್ಯವು ಅನುಪಮವಾಗಿದೆ

ಅಮೇರಿಕವನ್ನೊಳಗೊಂಡ ಪ್ರಜಾಪ್ರಭುತ್ವಾತ್ಮಕವಾದೀ ಲೋಕವನ್ನೇ ನುಂಗಲು ಬಂದೀ ವಿಪತ್ತನ್ನು ಎದುರಿಸಲು ಅಮೇರಿಕವು ಇಂದು ಜಾಗೃತವಾಗಿ ಎದ್ದು ನಿಂತಿದೆ. ಬ್ರಿಟಿಷ್ ಸಹಾಯಕ ಮಸೂದೆಯಿಂದ ಇನ್ನು ಮುಂದೆ ಸರ್ವಾಧಿಕಾರಿಗಳನ್ನು ಸಮಾಧಾನ ಪಡಿಸುವ ಧೋರಣೆಯನ್ನು ಅಮೇರಿಕವು ಬಿಟ್ಟುಕೊಟ್ಟಂತಾಗಿದೆ. ದಬ್ಬಾಳಿಕೆ ಮತ್ತು ಆಕ್ರಮಣಗಳೊಡನೆ ಸ್ನೇಹ ಬೆಳೆಸುವುದು ಸರಿಯಾಗಿಲ್ಲ. ಹೀಗೆಂದು ಅಮೇರಿಕೆಯ ಅಧ್ಯಕ್ಷರಾದ ರೂಸ್‌ವೆಲ್ಟರು ಪತ್ರಿಕಾ ಸಂಘದವರನ್ನು ಉದ್ದೇಶಿಸಿ ಒಂದು ಉದಾತ್ತ ಭಾಷಣವಿತ್ತರು.

ಭಾಷಣದ ವಿವರವು ಹೀಗಿದೆ:

ಅಮೇರಿಕದಲ್ಲಿ ಒಕ್ಕಟ್ಟಿಲ್ಲವೆಂದು, ಕಳೆದ ಯುದ್ಧದ ಕಾಲದಲ್ಲಿ ಇಲ್ಲಿದ್ದ ಜರ್ಮನರು ತಮ್ಮ ಬಂಧುಗಳಿಗೆ ಹೇಳಿದ್ದರು. ಯೂರೋಪಿನ ಹಾಗೂ ಏಶಿಯದ ಸರ್ವಾಧಿಕಾರಿಗಳು ಈಗ ನಮ್ಮ ಒಕ್ಕಟ್ಟಿನ ಬಗ್ಗೆ ಸಂಶಯ ಪಡುವ ಕಾರಣವು ಇಲ್ಲ. ಅಮೇರಿಕನರು ಈಗ ಹೊಸ ಚರಿತ್ರೆಯನ್ನೇ ಬರೆಯುತ್ತಿರುವರು. ನಾವು ಒಕ್ಕಟ್ಟಿನ ರಾಷ್ಟ್ರದವರು. ನಮ್ಮೆದುರಿಗೆ ಬಂದಿರುವ ಗಂಡಾಂತರವನ್ನು ಒಕ್ಕಟ್ಟಿನಿಂದ ಎದುರಿಸಲು ಬಂದಿರುವೆವೆಂದು ಈಗ ಅಮೇರಿಕನರು ಹೇಳುತ್ತಿರುವುದು ಈ ವಾರಗಳಿಂದ ಖಚಿತವಾಗುವುದು. ಪ್ರಶಿಯನ್ ಚಕ್ರಾಧಿಪತ್ಯಕ್ಕಿಂತಲೂ ಹಿಟ್ಲರನ ನಾಜೀ ಪ್ರಭುತ್ವವು ಹೆಚ್ಚು ಅನಿಷ್ಟವಾಗಿದೆ. ಈ ನಾಜಿಗಳೂ ಅವರ ಮದದಿಂದ ಉಬ್ಬಿದ ಅವರ ಅನುಯಾಯಿಗಳೂ ತಾವು ನವಯುಗವನ್ನು ನಿರ್ಮಾಣ ಮಾಡುತ್ತಿರುವೆವೆಂದು ಡಂಭಕೊಚ್ಚುತ್ತಾರೆ. ಅವರದು ಹೊಸ ಯುಗವೇನೂ ಅಲ್ಲ. ಜಯದ ಹೆಮ್ಮೆಯಿಂದ ಜನರನ್ನು ದಾಸ್ಯಕ್ಕೆ ನೂಕಿ ಅವರ ತಲೆಯ ಮೇಲೆ ಏನಾದರೂ ಹೊರಿಸಿದರೆ ಅದನು ಜನತೆ ಸಹಿಸದು. ೧೯೩೯—೪೦ರಲ್ಲಿ ಯೂರೋಪಿಯನ್ ರಾಷ್ಟ್ರಗಳ ನಾಶವು ಹಿಂದಿನ ಯೋಜನೆಯಂತೆ ನಡೆಯಿತು. ಆದರೆ ಬ್ರಿಟನಿನ ಆಸದಳ ಯೋಧರು ಇಂದು ಆ ಯೋಜನೆಯನ್ನು ಬಲವಂತವಾಗಿ ಹಿಮ್ಮೆಟ್ಟಿಸಿರುವರು. ಪ್ರಜಾಪ್ರಭುತ್ವವು ಇನ್ನೂ ಬದುಕಿ ಬಾಳಬಲ್ಲುದು ಎಂಬುದು ವಿರೋಧಿಗಳಿಗೂ ಈಗ ಗೊತ್ತಾಗಿದೆ.

ಬ್ರಿಟಿಷ್ ಸಹಾಯಕ ಮಸೂದೆಯು ಅಂಗೀಕೃತವಾದುದನ್ನು ನೋಡಿದರೆ ಸರ್ವಾಧಿಕಾರಿಗಳೊಡನೆ ಸಮಾಧಾನದಿಂದಿರುವ ಧೋರಣೆಯನ್ನು ಅಮೇರಿಕವು ಬಿಟ್ಟುಕೊಟ್ಟಿದೆಯೆಂದು ತಿಳಕೊಳ್ಳತಕ್ಕದ್ದು. ದಬ್ಬಾಳಿಕೆ ಮತ್ತು ಆಕ್ರಮಣಗಳೊಡನೆ ಸ್ನೇಹ ಬೆಳೆಸುವುದನ್ನು ಬಿಟ್ಟುಬಿಟ್ಟೆವು.

ತಮ್ಮ ಶಕ್ತಿಯ ಪರಿಮಿತಿ ಮುಗಿದ ಮೇಲೆ ಸರ್ವಾಧಿಕಾರಿಗಳಿಗೆ ಸೋಲು ಖಂಡಿತ. ನಾವು ಉಳಿಸಬಹುದಾದ ಪ್ರತಿಯೊಂದು ವಿಮಾನ ಹಾಗೂ ಅಸ್ತ್ರಗಳನ್ನು ಸಮುದ್ರದಾಚೆ ಕಳುಹಿಸಿಕೊಡುವೆವು. ವಸ್ತುಗಳು ಈಗಾಗಲೇ ಬ್ರಿಟನಿನ ಹಾದಿ ಹಿಡಿದಿವೆ. ಈ ಯತ್ನದಲ್ಲಿ ಎಲ್ಲರೂ ತ್ಯಾಗ ಮಾಡಬೇಕು. ಉದ್ಯಮದವರಿಗೆ ಲಾಭವು ಕಡಿಮೆಯಾಗಿ ಕರವು ಹೆಚ್ಚಾಗಬಹುದು. ಅಮೇರಿಕವು ಎಂದೂ ಆಗದಷ್ಟು ಹೆಚ್ಚು ಉತ್ಪಾದಕ ಶಕ್ತಿಯನ್ನು ಹೊಂದಬೇಕಾಗಿದೆ. ಕೆಲಸಗಾರರು ಮುಷ್ಕರ ಮೊದಲಾದುದು ಹಿಡಿದು ರಾಷ್ಟ್ರದ ಉದ್ಯೋಗಕ್ಕೆ ತೊಂದರೆ ಕೊಡಬೇಡಿ. ಈಗಿನ ಗಂಡಾಂತರ ಪರಿಸ್ಥಿತಿಯು ಅಮೇರಿಕನರಿಗೆ ಗೊತ್ತಿದೆ. ಬ್ರಿಟನು ಹಾಗೂ ಇತರ ಪ್ರಜಾಪ್ರಭುತ್ವ ರಾಷ್ಟ್ರಗಳ ರಕ್ಷಣೆಯನ್ನು ಏಕೆ ನಾವು ಮಾಡಬೇಕೆಂದೂ ಅವರಿಗೆ ಗೊತ್ತಿದೆ.

ಬ್ರಿಟಿಷರು ಧೈರ್ಯಶಾಲಿಗಳು. ಅವರಿಗೂ ಗ್ರೀಕರಿಗೂ ಯುದ್ಧ ಸಾಧನಗಳು ಬೇಕು; ಟೇಂಕು ಬೊಂಬುಗಳು ಬೇಕು. ಮದ್ದುಗುಂಡುಗಳೂ ಬೇಕು. ನಾವದನ್ನು ಒದಗಿಸಿ ಕೊಡಬೇಕು. ಚೀನವೂ ಇದರಂತೆ ಸಹಾಯ ಕೇಳುವುದು. ನಮ್ಮ ದೇಶವು ಪ್ರಜಾಪ್ರಭುತ್ವದ ಔಷಧಾಲಯವಾಗುವುದು. ಅದು ತನ್ನ ಕಾರ್ಯವನ್ನು ಪೂರ್ಣ ನಿರ್ವಹಿಸುವುದು. ನಮ್ಮ ರಾಷ್ಟ್ರದ ಈ ಕೆಲಸವನ್ನು ಈಗ ಮಾಡಲೇ ಬೇಕಾಗಿದೆ.

ಒಂದು ಲಾಭಕರ ಧನ ಸಂಚಯ

ಈಗಿನ ನಿಮ್ಮ ವರಮಾನವು, ವ್ಯವಹಾರ, ಉದ್ಯೋಗ ಅಥವಾ ಧನಸಂಚಯ ... ಭವಿಷ್ಯದಲ್ಲಿ ... ಅಪಾಯವನ್ನು ಎದುರಿಸ... ನಿಮಗೆ ಸುರಕ್ಷಿತವೇ ಬೇಕು ಮತ್ತು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ಹಣವನ್ನು ವಿನಿಯೋಗಿಸುವದಕ್ಕಿಂತ ಬೇರೆ ಯಾವ ಕ್ಷೇಮಕರವಾದ ಮಾರ್ಗವೂ ಇಲ್ಲ. ಪೋಸ್ಟಾಫೀಸಿನಲ್ಲಿ ... ಮತ್ತು ರೂ. ೪/೯ ಲಾಭವನ್ನು ಹತ್ತು ವರ್ಷಗಳ ಕೊನೆಯಲ್ಲಿ ಆದಾಯ ತೆರಿಗೆ ವಿನಾಯಿತಿಯಿಂದ ದೊರೆಯುತ್ತೆ. ಬೇಕಾದಾಗ ಹಣವನ್ನು ... ಗಳಿಸಿದ ಬಡ್ಡಿಯನ್ನೂ ವಾಪಸು ಕೊಡಲಾಗುತ್ತೆ.

ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪುಗಳು ಉಳಿಸಲು ಸಹಾಯ ಮಾಡುತ್ತವೆ

ಪೋಸ್ಟಾಫೀಸಿನಲ್ಲಿ ಮಾರುವ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳು ಆದರ್ಶವಾದ ಸುರಕ್ಷಿತೆಯಾಗಿದೆ, ಇವನ್ನು ಕದಿಯಲು ಅವಕಾಶವಿಲ್ಲ, ಮೌಲ್ಯದಲ್ಲಿ ತಗ್ಗುವದಿಲ್ಲ. ಈಗಲೇ ಉಳಿಸಲು ಆರಂಭಿಸಿ. ನಿಮಗೆ ರೂ. ೧೦ನ್ನು ಕೊಡಲು ಸಾಧ್ಯವಿಲ್ಲದಿದ್ದರೆ ಆಣೆ ೪, ಆಣೆ ೮ ಅಥವಾ ೧ ರೂ.ನ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್‌ಗಳನ್ನು ಕೊಳ್ಳಿರಿ ಮತ್ತು ಅವನ್ನು ಕಾರ್ಡ್ ಮೇಲೆ ಅಂಟಿಸಿರಿ— ಇವು ಉಚಿತವಾಗಿ ದೊರೆಯುತ್ತವೆ. ನಿಮ್ಮಲ್ಲಿ ರೂ. ೧೦ ಬೆಲೆ ಬಾಳುವ ಸ್ಟಾಂಪುಗಳಾದ ಕೂಡಲೆ ಅವನ್ನು ಪೋಸ್ಟಾಫೀಸಿನಲ್ಲಿ ಸರ್ಟಿಫಿಕೇಟಿಗೆ ಬದಲಿಸಿರಿ.

ನೀವು ಕೊಳ್ಳಬಹುದು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

G.I. KN. 37.

— ರಹಸ್ಯವು ಪ್ರಕಟಮಾಡಲ್ಪಟ್ಟಿತು —

ಕ್ರಮವಾಗಿ ಲೋಧ್ರವನ್ನುಪಯೋಗಿಸುವುದರಿಂದ ಅದು ತನ್ನನ್ನು ಈ ಮುದಿಪ್ರಾಯದಲ್ಲಿ ಕೂಡಾ ಆರೋಗ್ಯದಲ್ಲಿಯೂ, ತಾರುಣ್ಯದಂತೆ ಆನಂದದಾಯಕವಾಗಿರಿಸುವುದೆಂದು ಅಜ್ಜಿಯು ಶಿಫಾರಸು ಮಾಡುತ್ತಿರುವಳು.

ಆರೋಗ್ಯಕ್ಕೆ, ಸೌಂದರ್ಯಕ್ಕೆ ಗರ್ಭಾಶಯ ರೋಗಗಳಿಗೆ ಟಾನಿಕು ಲೋಧ್ರ

ಎಲ್ಲಾ ಕೆಮಿಸ್ಟರಲ್ಲಿಯೂ ದೊರಕುತ್ತದೆ.

KESARI KUTEERAM
MADRAS

ಜಿಲ್ಲಾ ಸಮಾಚಾರ

ಮಂಗಳೂರು

ನಗರಸಭೆ:— ಕಳೆದ ತಾ. 10ನೇ ಸಂಜೆ 4-45ಕ್ಕೆ ಸರಿಯಾಗಿ ನಗರಸಭೆಯು, ವೈಸ್ ಪ್ರೆಸಿಡೆಂಟ್ ಮಿ. ಯಲ್. ಸಿ. ಪಾಯಸ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು.

ವೆಬ್‌ಸ್ಟರ್ ಮಾರ್ಕೆಟಿನ ಪುನರ್ರಚನೆಗೆ 70,000 ರೂ. ವ್ಯಯಿಸಬೇಕಾದೀತೆಂದು ಮೊದಲೇ ಅಂದಾಜು ಮಾಡಲಾಗಿದೆ. ಇದಕ್ಕಾಗಿ 30,000 ಸರಕಾರದಿಂದ ಮೊಂಚೆಯೇ ಸಾಲ ಪಡೆಯಲಾಗಿತ್ತು. ಈಗ ಪುನಹ 40,000 ಸಾಲ ಪಡೆಯುವರೇ ಕಮಿಷನರಿಗೆ ಅಧಿಕಾರ ಕೊಟ್ಟರು.

ಶ್ರೀ ಮರೋಳಿ ರಾಮರಾಯ ಶೆಣೆಯುವರನ್ನು ಹೊನ್ನಾವರದಲ್ಲಿ ಬಂಧಿಸಿದರು:— ಮಂಗಳೂರಲ್ಲಿ ಸತ್ಯಾಗ್ರಹ ಮಾಡಿ ಬಂಧಿತರಾಗದೆ ಡಿಲ್ಲಿಯ ಕಡೆಯು ದ್ಧವಿರುದ್ಧ ಪ್ರಚಾರಮಾಡುತ್ತಾ ಹೋಗುತ್ತಿದ್ದ ಶ್ರೀ ಮರೋಳಿ ರಾಮರಾಯ ಶೆಣೆಯವರನ್ನು ಹೊನ್ನಾವರದಲ್ಲಿ ತಾ. 16ರಂದು ಬಂಧಿಸಿ 17ರಂದು ವಿಚಾರಣೆ ನಡೆಸಿ 6 ತಿಂಗಳ ಸಾದಾ ಶಿಕ್ಷೆ ವಿಧಿಸಿರುವರಾಗಿ ತಿಳಿದುಬರುತ್ತದೆ.

ಭಾವಚಿತ್ರದ ಅನಾವರಣ:— ಕಳೆದ ತಾ. 10ನೇ ಸೋಮವಾರ ಸಾಯಂಕಾಲ ಪಾಯಿಂಟ್‌ಲೆಂಡ್ ಪೇಟೆಯಲ್ಲಿರುವ ಸೂಟರ್ ಪಾಸ್ಕೆಲಿನಲ್ಲಿ ಸರ್. ಚಾರ್ಲ್ಸ್ ಸೂಟರರ ಭಾವಚಿತ್ರವು ಕೋ-ಓಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರಾದ ಶ್ರೀ. ಎಸ್. ಕೆ. ವೆಂಕಟರಾಮನ್ ಐ. ಸಿ. ಎಸ್.ರವರ ಅಧ್ಯಕ್ಷತೆಯಿಂದ ಅನಾವರಣ ಮಾಡಲ್ಪಟ್ಟಿತು.

ವಾರ್ಷಿಕ ವರ್ಧಂತಿ:— ಸ್ಥಳೀಯ ... ಯ ಯಾನೆ ನಾಡವರ ಯುವಕ ಸಂಘದ ... ನೇ ವಾರ್ಷಿಕ ವರ್ಧಂತಿಯು ಕಳೆದ ಆದಿತ್ಯವಾರ ಸ್ಥಳೀಯ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ವಕೀಲ್ ಎ. ಶಂಕರಾಳ್ವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಜೈಲಿನ ಅನುಭವ:— ರಿಮಾಂಡಿನಲ್ಲಿದ್ದು ಬಿಡುಗಡೆ ಹೊಂದಿದ ಶ್ರೀ ಗಳವಾಡ ಶ್ರೀನಿವಾಸ ಪೈಗಳು, ಮತ್ತು ವಿಟ್ಠಲದಾಸ ಶೆಟ್ಟಿ ... ಮೈದಾನಿನಲ್ಲಿ ಭಾಷಣ ಮಾಡಿದರು. ಶ್ರೀ ಪೈಗಳು ಅಧ್ಯಕ್ಷತೆ ವಹಿಸಿದ್ದರು. ತಮ್ಮ ಜೈಲುವಾಸದ ಅನುಭವವನ್ನು ಶ್ರೀ. ವಿಟ್ಠಲದಾಸ ಶೆಟ್ಟಿ ಸಾರ್ವಜನಿಕರ ಮುಂದಿರಿಸಿದರು. ಮಂಗಳೂರು ಸಬ್ ಜೈಲಿನಲ್ಲಿ ರಾಜಕೀಯ ಕೈದಿಗಳ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆಯೆಂದರು. ಮೊದಲನೆಯವಾಗಿ ಆಕ್ಕಿಯನ್ನು ಬೇಯಿಸಿ, ಅದನ್ನು ಚೆನ್ನಾಗಿ ಕುಟ್ಟಿ ಅದೇ ಮುಂಚಿನ ರಾತ್ರಿಯಲ್ಲಿ ತಯಾರಿಸಿದ ಅನ್ನದ ತಳಿಯನ್ನು ಬಾಳೆ ಬಾಳ್ತ ... ಶುದಿಸಿ, ಆ ವಿಚಿತ್ರವಾದ ಅಸಹ್ಯ ಪದಾರ್ಥವನ್ನು ಗಂಜಿ ಎಂಬ ಹೆಸರಿನಿಂದ ಕೈದಿಗಳಿಗೆ ಕೊಡುತ್ತಿರುವರೆಂದೂ, ತರಕಾರಿ ಕೊಡಬೇಕೆಂದು ಜೈಲಿನ ನಿಯಮಗಳಲ್ಲಿದ್ದರೂ, ಜೈಲಿನ ಕಂಪೌಂಡಿನಲ್ಲಿಯೇ ದೀವಿಹಲಸಿನ ಕಾಯಿಗಳು ಧಾರಾಳವಾಗಿ ಬೆಳೆಯುತ್ತಿದ್ದರೂ, ಅವುಗಳಲ್ಲಿ ನಬಳ್ಳಿಯ ಕಾಯಿಗಳನ್ನು ಕೊಡದೆ, ಬಾವಲಿ, ಇಲಿ, ತಿಂದ ಮತ್ತು ಮರದಲ್ಲಿಯೇ ಬಾಡಿ ಕೆಳಕ್ಕೆ ಬಿದ್ದ ಕಾಯಿಗಳ ಪದಾರ್ಥವನ್ನಾಗಿ ಕೊಡುತ್ತಾರೆಂದೂ, ಒಂದೆರಡು ದಿವಸದ ಮಟ್ಟಿಗೆ ದೀಪ ಇಲ್ಲದೇನೇ ಜೈಲಿನ ಕೋಣೆಯಲ್ಲಿ ಇರಬೇಕಾಯಿತೆಂದೂ, ಸ್ನಾನಮಾಡುವುದಕ್ಕೆ ಬಚ್ಚಲಿನ ವ್ಯವಸ್ಥೆಯೇ ಇಲ್ಲವೆಂದೂ ಒಂದು ಜಟ್ಟಿ, ಒಂದು ಅಂಗವಸ್ತ್ರ ಇವುಗಳನ್ನಷ್ಟೇ ಕೊಡುತ್ತಾರೆಂದೂ ಆಗಾಗ ಅವನ್ನು ಒಗೆದುಹಾಕಬೇಕೆಂದರೆ ಬೇರೆ ವಸ್ತ್ರಗಳು ಇಲ್ಲದಿರುವುದರಿಂದ ಸಾಧ್ಯವಾಗುವುದಿಲ್ಲವೆಂದೂ ಹೇಳಿದರು.

ಕೊಂಚಾಡಿ:— ವರ್ಧಂತ್ಯುತ್ಸವ. ಕೊಂಚಾಡಿ ಶ್ರೀ ... ಎಲಿಮೆಂಟರಿ ... ಶಾಲಾ ವರ್ಧಂತ್ಯುತ್ಸವವು ತಾ. 16-3-41ನೇ ರವಿವಾರ ಮಂಗಳೂರ ರೇಂಜಿನ ಡೆಪ್ಯುಟಿ ಇನ್ಸ್‌ಪೆಕ್ಟರಾದ ಹೊಸಬೆಟ್ಟು ರಾಮರಾಯರ ಅಧ್ಯಕ್ಷತೆಯಲ್ಲಿ ಬಹಳ ಯಶಸ್ವಿಯಾಗಿ ಜರಗಿತು. ಪ್ರಭಾತಫೇರಿ, ಚಿತ್ತಾಕರ್ಷಕವಾದ ಪಂದ್ಯಾಟ, ಉಪಹಾರಗಳೂ ಸಂಜೆಗೆ ಸ್ವಾಗತಗೀತ, ಪ್ರಾರ್ಥನೆ, ಅಧ್ಯಕ್ಷರ ಪೀಠಿಕಾ ಭಾಷಣ, ಶ್ರೀ. ಎಂ. ಎನ್. ಶ್ರೀಯಾನ್‌ರವರಿಂದ ಶಾಲಾಹಿತ ಬಯಸುವಿಕೆ ವರದಿವಾಚನ, ಬಹುಮಾನಗಳನ್ನು ಹಂಚುವುದು, ಅಧ್ಯಕ್ಷರ ಉಪಸಂಹಾರಗಳು ನಡೆದುವು. ಶ್ರೀ. ಎಂ. ಮಾಧವ ರಾಯರು ಧನ್ಯವಾದಗಳನ್ನಿತ್ತರು. ಅನಂತರ ಮಕ್ಕಳು ವಾಳಂಬಿ, ಗರೀಬೋಂಕಾ ಸ್ವರ್ಗ, ದೂತ ಹನುಮಂತ ಎಂಬ ನಾಟಕಗಳನ್ನು ಆಡಿತೋರಿಸಲಾದುವು. ಅಲ್ಲದೆ ನೃತ್ಯ ಮತ್ತು ಅಭಿನಯಗಳು ಆಡಿ ತೋರಿಸಲಾದುವು. ತಾರೀಕು 15ನೇ ಶನಿವಾರ ಅಪರಾಹ್ನ ಘಂಟೆ 5-30ಕ್ಕೆ ಶ್ರೀ. ಜಿ. ವಾಸುದೇವ ಪೈ, ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಅದೇ ಶಾಲೆಯ ಹಳೇ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವು ಬಹಳ ವಿಜೃಂಭಣೆಯಿಂದ ಜರಗಿತು.

ಜನ್ಮದಿನೋತ್ಸವ:— ಮಂಗಳೂರಲ್ಲಿ ಭಗವಾನ್ ಶ್ರೀ ರಾಮಕೃಷ್ಣರ 106ನೆಯ ಜನ್ಮದಿನೋತ್ಸವವನ್ನು ಎಪ್ರಿಲ್ 5 ಮತ್ತು 6ರಲ್ಲಿ ಮದ್ರಾಸಿನ ಸ್ವಾಮಿ ಶಾಶ್ವತಾನಂದರ ಅಧ್ಯಕ್ಷತೆಯಿಂದ ಆಚರಿಸುವುದಾಗಿ ನಿಶ್ಚಯಿಸಿದೆ. ಮಂಗಳೂರು ಮಹಾಜನರು ಈ ಉತ್ಸವದಲ್ಲಿ ಸಹಭಾಗಿಗಳಾಗಿ, ಚಂದಗಾಣಿಕೆ ಕೊಡಬೇಕೆಂದು ಶ್ರೀ. ರಾಮಕೃಷ್ಣ ನರ್ಸಿಂಗ್ ಹೋಮಿನ ಶ್ರೀ. ಸಿ. ಪಿ. ಕಾಮತರು ತಿಳಿಸುತ್ತಾರೆ.

ಸತ್ಯಾಗ್ರಹ:— ಮಂಗಳೂರು ರಥಬೀದಿಯ ಪೈ ಬ್ರದರ್ಸಿನ ವ್ಯಾಲಕರಾದ ಶ್ರೀ. ಗೋವಿಂದ ಪೈಗಳು ತಾ. 17ರಂದು ಬೇಡಿಗುಡ್ಡೆಯಲ್ಲಿ ಸತ್ಯಾಗ್ರಹ ಮಾಡಿದರು. ತುಂಬಾ ಜನರೂ ಪೊಲೀಸರೂ ನೆರೆದಿದ್ದರು. ಪೋಲೀಸಿನವರೂ ಬಂದಿದ್ದರು. ಆದರೆ ಅವರನ್ನು ಕೈದು ಮಾಡಲಿಲ್ಲ. ಶ್ರೀಯುತರು ದಾರಿ ನಡೆಯುತ್ತಾ (ನಗರದಲ್ಲಿ ಸಿಕ್ಕಿದವರೊಡನೆಲ್ಲಾ) ಯುದ್ಧಕ್ಕೆ ಸಹಾಯ ಮಾಡಬಾರದಾಗಿ ಹೇಳುತ್ತಾ ಹೊರಟಿದ್ದಾರೆ.

ಸತ್ಯಾಗ್ರಹ:— ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ. ರಾಮಕೃಷ್ಣ ರಾಯರು ಕಳೆದ ತಾ. 14ರಲ್ಲಿ ಮೂಡಬಿದ್ರೆಯಲ್ಲಿ ಸತ್ಯಾಗ್ರಹ ಮಾಡಿದರು. ಇವರ ಸೆರೆಯಾಗಿಲ್ಲ.

ರಿಮಾಂಡ್:— ಕುಂದಾಪುರದಲ್ಲಿ ಬಿ. ಜೋ. ನೆಂಬರರಾದ ಶ್ರೀ. ಜಿ. ಸುಬ್ಬಣ್ಣ ಶೆಟ್ಟರು ಕಳೆದ ತಾ. 15ರಂದು ಮುಂಜಾನೆ 10 ಘಂಟೆಗೆ ಸರಿಯಾಗಿ ಯುದ್ಧವಿರೋಧ ಘೋಷಣೆಯನ್ನು ಕೂಗಿ ಸತ್ಯಾಗ್ರಹ ನಡೆಸಿ ಸೆರೆ ಹಿಡಿಯಲ್ಪಟ್ಟಿದ್ದಾರೆ. ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಇವರಿಗೆ 5 ದಿನಗಳ ರಿಮಾಂಡ್ ಕೊಟ್ಟಿದ್ದಾರೆ.

ಕಾಸರಗೋಡು

ಶ್ರೀನಿವಾಸ ಅನಾಥಾಶ್ರಮ:— ಕಾಸರಗೋಡಿನಲ್ಲಿ ಮೇಲಿನ ಹೆಸರಿನ ಅನಾಥಾಶ್ರಮವೊಂದು ಸ್ಥಾಪಿತವಾಗಿದೆ. ಅನಾಥರು ಹಾಗೂ ಕೆಲಸವಿಲ್ಲದ ನಿರ್ಗತಿಕರಿಗೆ ಅನ್ನಬಟ್ಟೆಗಳನ್ನು ಕೊಟ್ಟು, ವಿವಿಧ ಕೈಗಾರಿಕೆಗಳನ್ನು ಕಲಿಸುವ ಉದ್ದೇಶದಿಂದ ಈ ಸಂಸ್ಥೆಯು ಕಾಸರಗೋಡಿನ ಹಲವು ಮಂದಿ ಪ್ರಮುಖರ ಸಹಕಾರದಿಂದ ಸ್ಥಾಪಿತವಾಗಿರುವುದು. ಆಶ್ರಮವಾಸಿಗಳಿಗೆ ಧರ್ಮಮಾರ್ಗ ಶಿಕ್ಷಣ, ಮಗ್ಗದ ಕೆಲಸ, ನೂಲುವುದು, ಕೃಷಿವಿಷಯ ಮೊದಲಾದ ಜೀವನೋಪಕಾರಿ ಕೈಗಾರಿಕೆಗಳು ಇಲ್ಲಿ ಕಲಿಸಿ ಕೊಡುವ ಉದ್ದೇಶಗಳಿಂದ ಆಶ್ರಮವು ಆರಂಭಿಸಲಾಗಿದೆ.

ಈ ಅನಾಥಾಶ್ರಮದ ನಿಯಮಾವಳಿಗಳನ್ನು ಮಾರ್ಚ ಅಂತ್ಯದೊಳಗೆ ತಯಾರಿಸುವರೆ ಒಂದು ಕಮಿಟಿಯು ಕೆಳಗಿನ ಮಹನೀಯರಿಂದ ಕೂಡಿದ ಒಂದು ಸಮಿತಿಯು ಸ್ಥಾಪಿತವಾಯಿತು. ಶ್ರೀ. ದೇವದಾಸ ಶೆಣೈ ವಕೀಲ್, ಶ್ರೀ. ಬಿ. ಎಸ್. ಕಕ್ಕಿಲ್ಲಾಯ, ಎಡ್ವೊಕೇಟ್, ಶ್ರೀ. ಕೆ. ಪಿ. ಮಾಧವ ರಾವ್, ಎಡ್ವೊಕೇಟ್, ಶ್ರೀ. ಎಂ. ವೆಂಕಟೇಶ ಪೈ, ಸರಾಫ್, ಮತ್ತು ಕೆ. ವಿ. ಶೆಣೈ, ಪ್ರೊಪ್ರೈಟರ್, ಶ್ರೀನಿವಾಸ ಪ್ರಿಂಟಿಂಗ್ ವರ್ಕ್ಸ್, ಕಾಸರಗೋಡು.

ಇದರ ಕರೆಸ್ಪಾಂಡೆಂಟರಾಗಿ ಶ್ರೀ. ಕೆ. ವಿ. ಶೆಣೈ, ಪ್ರೊಪ್ರೈಟರ್, ಶ್ರೀನಿವಾಸ ಪ್ರಿಂಟಿಂಗ್ ವರ್ಕ್ಸ್, ಕಾಸರಗೋಡು ಇವರನ್ನು ನೇಮಿಸಲಾಗಿದೆ. ಪತ್ರವ್ಯವಹಾರವನ್ನು ಮಾಡಲಿಚ್ಛಿಸುವವರು ಆ ವಿಳಾಸಕ್ಕೆ ಬರೆದು ಮಾಹಿತಿಯನ್ನು ತಿಳಿದುಕೊಳ್ಳುವುದು.

ಕಾಸರಗೋಡಿನ ಸರಾಫ್ ಮೂಡಬಿದ್ರಿ ವೆಂಕಟೇಶ ಪೈಗಳು ಈಗಾಗಲೇ ಆಶ್ರಮದ ಬಗ್ಗೆ ರೂ. 105 ಉದಾರ ದಾನ ಮಾಡಿರುವುದು ಬಹಳ ಪ್ರಶಂಸನೀಯವಾಗಿದೆ.

ಶ್ರೀ. ಬಿ. ಜಗನ್ನಾಥ ರೈಗಳಿಗೆ ಶಿಕ್ಷೆ:— ಬಾಡೂರಿನಲ್ಲಿ ಸತ್ಯಾಗ್ರಹ ಮಾಡಿದ ಶ್ರೀ ಬಾಡೂರು ಜಗನ್ನಾಥ ರೈಗಳನ್ನು ಹತ್ತು ದಿವಸಗಳ ರಿಮಾಂಡಿನಲ್ಲಿಟ್ಟು ಪುತ್ತೂರಲ್ಲಿ ವಿಚಾರಣೆ ನಡೆಸಿ, 4 ತಿಂಗಳ ಶಿಕ್ಷೆ ವಿಧಿಸಿರುವರಾಗಿ ತಿಳಿದುಬರುತ್ತದೆ. ಇವರನ್ನು 'ಸಿ' ಕ್ಲಾಸಿನಲ್ಲಿ ಇರಿಸಲಾಗಿದೆ. ಇವರು ಮಂಗಳೂರು ಜೈಲಿಗೆ ತರಲ್ಪಟ್ಟಿದ್ದಾರೆಂದು ತಿಳಿಯುತ್ತದೆ.

ಪುತ್ತೂರು

ಸತ್ಯಾಗ್ರಹಿಗಳು:— ತಲಚೇರಿ ಪ್ರಭಾಕರ ಶೆಟ್ಟಿ ಇವರು ಮಂಗಳೂರಿನಲ್ಲಿ ಸತ್ಯಾಗ್ರಹ ಮಾಡಿ ಸ್ವಲ್ಪ ಸಮಯ ರಿಮಾಂಡಿನಲ್ಲಿದ್ದು ಅಲ್ಲಿಂದ ಬಿಟ್ಟಕೂಡಲೇ ಅನೇಕ ಕಡೆಯಲ್ಲಿ ಯುದ್ಧವಿರೋಧ ಭಾಷಣ ಮಾಡುತ್ತಾ ತಾ. 16ರಲ್ಲಿ ಯುದ್ಧವಿರೋಧ ಭಾಷಣ ಮಾಡಿ ಅವರು ರಿಮಾಂಡಿನಲ್ಲಿದ್ದಾಗ ಅನುಭವಿಸಿದ ವಿಷಯಗಳನ್ನು ತಿಳಿಸಿದ್ದರು.

ಪದ್ಮನಾಭ ರೈ ಇವರು ತಾ. 24-2-41ರಲ್ಲಿ ಆನೆಕಲ್ಲು ಎಂಬಲ್ಲಿ ಸತ್ಯಾಗ್ರಹವನ್ನು ಮಾಡಿ ದಸ್ತಗಿರಿಯಾಗದೆ ಮುಂದೆ ಮಂಜೇಶ್ವರ, ಮಂಗಲ್ಪಾಡಿ, ಕುಂಬಳೆ, ನಾರಾಯಣ ಮಂಗಲ, ಬದಿಯಡ್ಕ, ಪೆರ್ಲ, ಕುಂಬ್ರಾಜೆ, ... ಬೆಟ್ಟಂಪಾಡಿ ಇತ್ಯಾದಿ ಕಡೆಗಳಲ್ಲಿ ತಿರುಗಾಡಿಕೊಂಡು ತಾರೀಕು 16-3-41ರಲ್ಲಿ ಪುತ್ತೂರಿಗೆ ಬಂದು ಯುದ್ಧವಿರುದ್ಧ ಘೋಷಣೆ ಮಾಡಿದರು.

ಕೊಳಾಲು ವೆಂಕಪ್ಪ ರೈಗಳು ತಾರೀಕು 15-3-41ರಲ್ಲಿ ಕುಂಬ್ರ ಗ್ರಾಮದಲ್ಲಿ ಸತ್ಯಾಗ್ರಹ ಮಾಡಿ ದಸ್ತಗಿರಿಯಾಗದೆ ತಾರೀಕು 16ರಲ್ಲಿ ಪುತ್ತೂರಿಗೆ ಬಂದು ಯುದ್ಧವಿರೋಧ ಭಾಷಣ ಮಾಡಿದರು. ನಂತರ ಈ ಮೂರು ಸತ್ಯಾಗ್ರಹಿಗಳು ಪಾಣೆಮಂಗಳೂರು ಕಡೆ ಹೋಗುತ್ತಾರೆಂಬುದಾಗಿ ತಿಳಿಯುತ್ತದೆ.

ಆರ್ಯಸಮಾಜ:— ತಾ. 16ನೇ ರವಿವಾರ ಪುತ್ತೂರು ಮಾರ್ಕೆಟ್ ಬಳಿಯಲ್ಲಿರುವ ಮಾಳಿಗೆಯಲ್ಲಿ ಆರ್ಯಸಮಾಜದ ಪ್ರಚಾರಕರಾದ ಕೆ. ಮಂಜುನಾಥ ಶೆಣೈ ಇವರು ಆರ್ಯರಿಂದ ಸುಮಾರು 11 ಘಂಟೆಯ ತನಕ ದೇವರ ಪ್ರಾರ್ಥನೆ ಹೋಮ, ಸಂಧ್ಯಾವಂದನೆ ಮಾಡುವ ಕ್ರಮ ಮುಂತಾದುವುಗಳನ್ನು ಮಾಡಿ ತೋರಿಸಿ ಸಮಾಜದ ಉಪದೇಶವನ್ನು ಹಾಗೂ ಚರಿತ್ರೆಯನ್ನು ಭಾಷಣ ತಿಳಿಸಿಮಾಡಿದರು.

ಆತ್ಮಹತ್ಯೆ:— ತಾ. 12ನೇ ಬುಧವಾರ ರಾತ್ರಿ ನರಿಮೊಗ್ರುನಲ್ಲಿರುವ ಬಂಟಿಜಾಲಿಯ ಸುಮಾರು 50 ವರ್ಷ ಪ್ರಾಯದ ಒಬ್ಬ ಗೃಹಸ್ಥನು ಆತ್ಮಹತ್ಯೆ ಮಾಡಿಕೊಂಡನು. ಅವನ ಶವವನ್ನು ಮರುದಿನ ತಾ. 13ನೇ ಗುರುವಾರ ಸಾಯಂಕಾಲ ಪುತ್ತೂರು ಆಸ್ಪತ್ರೆಗೆ ಪೋಲೀಸಿನವರು ತಂದಿರುತ್ತಾರೆ.

ಕಾರ್ಕಳ

ದಿ. ಜವಾಹರ್ ಎಂಪೋರಿಯಂ ಫೇಶನ್ ಶೆಲ್ರಿನ ಬಹುಮಾನದ ಲೋಡ್ರಿಯು ಡಿಸ್ಟ್ರಿಕ್ಟ್ ಮುನ್ಸಿಫ್ ಕೋಲಾರೆಡ್ಡಿಯವರ ದಿವ್ಯ ಹಸ್ತಗಳಿಂದ ತೆರೆಯಲ್ಪಟ್ಟು ಕ್ರಮವಾಗಿ ನಂಬ್ರ 4, 160, 2, 376, 406 ನೋಟೀಸಿನ ನಂಬ್ರಗಳಿಗೆ ಬಹುಮಾನಗಳು ಸಿಕ್ಕಿರುವುವು.

ಸತ್ಯಾಗ್ರಹಿಗಳಿಗೆ ಶಿಕ್ಷೆ:— ತಾರೀಕು 10-3-1941ರ ದಿನ ಸಾಯಂಕಾಲ ಸತ್ಯಾಗ್ರಹ ಮಾಡಿ ಕೈದಾದ ಇಲ್ಲಿಯ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ. ಕೆ. ವೆಂಕಟೇಶ ಪ್ರಭುಗಳ ವಿಚಾರಣೆಯು ತಾರೀಕು 12-3-41ರ ದಿನ ಇಲ್ಲಿ ಕ್ಯಾಂಪು ಮಾಡಿದ ಕುಂದಾಪುರ ಸಬ್ ಕಲೆಕ್ಟರರ ಮುಂದೆ ನಡೆದು ಅವರಿಗೆ 'ಬಿ' ತರಗತಿಯಲ್ಲಿ ನಾಲ್ಕು ತಿಂಗಳ ಸಶ್ರಮ ಶಿಕ್ಷೆಯನ್ನು ಕೊಡಲಾಗಿದೆ.

ಕಾಂಗ್ರೆಸ್ ಪ್ರಚಾರಕಾರ್ಯ:— ಸತ್ಯಾಗ್ರಹ ಮಾಡಿ ಕೈದಾಗದಿರುವ ಶ್ರೀ. ಕೆ. ವೇದವ್ಯಾಸ ನಾಯಕ, ಶ್ರೀ. ಕೆ. ನರಸಿಂಹ ಕಾಮತ ಮತ್ತು ಶ್ರೀ. ಕೆ. ನರಸಿಂಹ ಪ್ರಭು ಮೊದಲಾದವರು ಬೋಳ್ಕಟ್ಟೆ, ಬಜಗೋಳಿ ಇತ್ಯಾದಿ ತಾಲೂಕಿನ ಹಳ್ಳಿಗಳಲ್ಲಿ ಯುದ್ಧವಿರುದ್ಧ ಘೋಷಣೆಗಳನ್ನು ಮಾಡಿಯೂ ಕೂಡಿದ ಸಾರ್ವಜನಿಕ ಸಭೆಗಳಲ್ಲಿ ಭಾಷಣಮಾಡಿ ಕಾಂಗ್ರೆಸ್ಸಿನ ಪ್ರಚಾರ ಮಾಡುತ್ತಿದ್ದಾರೆ.

ಕೇಂದ್ರ ದಿನಾಚರಣೆ:— ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯ ಸಂಘದ ವಾರ್ಷಿಕ ದಿನಾಚರಣೆಯು ತಾರೀಕು 14 ಮತ್ತು 15 ಎರಡು ದಿನ ಆಟಸ್ಪರ್ಧೆ ವಿವಿಧ ವಿನೋದಗಳು, ಶಾಲಾ ಮಕ್ಕಳ ಮೆರವಣಿಗೆ, ಉಪಹಾರ, ಬಹುಮಾನ ವಿತರಣ ಇತ್ಯಾದಿ ಮನೋರಂಜಕ ಮತ್ತು ಬೋಧಪ್ರದ ಕಾರ್ಯಕ್ರಮಗಳೊಂದಿಗೆ ಬಹಳ ಯಶಸ್ವಿಯಾಗಿ ನಡೆಯಿತು.

ಉಪಾಧ್ಯಾಯರ ಸಭೆ:— ಕಾರ್ಕಳ ತಾಲೂಕಿನ ಬೋರ್ಡ್ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯ ಸಂಘದ ವಾರ್ಷಿಕ ಸಭೆಯು ತಾ. 16-3-41ರ ದಿನ ಶ್ರೀ. ಎ. ವೆಂಕಟರಂಗ ಶೆಣೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಉಡುಪಿ

ಹಿಂದೂ ಮಹಾಸಭೆ:— ದ. ಕನ್ನಡ ಜಿಲ್ಲಾ ಹಿಂದೂ ಮಹಾಸಭೆಯ ಪ್ರಾಂತ್ಯ ಸರ್ವದ ಪ್ರಥಮ ಅಧಿವೇಶನವು ಇದೇ ತಿಂಗಳ ತಾ. 23ನೇ ರವಿವಾರ ... ಘಂಟೆ 2ಕ್ಕೆ ನಗರ ಮೆರವಣಿಗೆ ಮೊದಲಾದ ಅನೇಕ ಕಾರ್ಯಕ್ರಮಗಳಿರುತ್ತವೆ. ಜಿಲ್ಲೆಯ ಅನೇಕ ಹಿಂದೂ ಮುಖಂಡರುಗಳು ಭಾಷಣಮಾಡಲಿಕ್ಕಿರುವರು. ಹಿಂದೂ ಬಾಂಧವರೆಲ್ಲರಿಗೂ ಆಮಂತ್ರಣವಿದೆ.

ಮುನ್ಸಿಪಲ್ ಕ್ಷೇತ್ರದ ಪ್ರಜಾಸಂಖ್ಯೆ:— ಉಡುಪಿ ಪಟ್ಟಣವನ್ನು ಮುನಿಸಿಪಾಲಿಟಿಯನ್ನಾಗಿ ಘೋಷಣೆಸಿದ ತಾರೀಕು 1-11-1935ರಲ್ಲಿ ಇದ್ದ 17,250 ಜನಸಂಖ್ಯೆಯು ಈ ಬಾರಿಯ ಖಾನೇಸುಮಾರಿಯಲ್ಲಿ 18,043ಕ್ಕೇರಿದೆ. ಗಂಡಸರ ಸಂಖ್ಯೆಯು 8767; ಹೆಂಗಸರ ಸಂಖ್ಯೆಯು 9277. ಈ ಪೈಕಿ 4252 ಗಂಡಸರು ಮತ್ತು 2779 ಹೆಂಗಸರು ಅಕ್ಷರಜ್ಞಾನವುಳ್ಳವರು. ಶಾಲೆಗೆ ಹೋಗತಕ್ಕ ವಯಸ್ಸಿನ ಬಾಲಕರ ಸಂಖ್ಯೆಯು 1430 ಮತ್ತು ಬಾಲಿಕೆಯರ ಸಂಖ್ಯೆಯು 1427. ವಾಯಂ ವಾಸ್ತವ್ಯದ ಮನೆಗಳ ಸಂಖ್ಯೆಯು 2814.

ಪ್ರಾಂತಿಕ ಸಹಕಾರಿ ರಿಜಿಸ್ಟ್ರಾರರ ಆಗಮನ:— ಮದ್ರಾಸ್ ಪ್ರಾಂತಿಕ ಸಹಕಾರೀ ರಿಜಿಸ್ಟ್ರಾರಾದ ಶ್ರೀ. ವೆಂಕಟರಾಮನ್ ಐ. ಸಿ. ಎಸ್. ಅವರು ತಾ. 12ರಲ್ಲಿ ಉಡುಪಿಗೆ ಭೇಟಿತ್ತು, ಅನೇಕ ಸಂಘಗಳನ್ನು ಸಂದರ್ಶಿಸಿದರು.

ಹಿಟ್ಲರನ ಯುದ್ಧವನ್ನು ಅಮೇರಿಕವು ಎದುರಿಸುವುದೆ?

ಅಟ್ಲಾಂತಿಕ ಸಾಗರದಾಚೆ ಜರ್ಮನ್ ಯು ಬೋಟುಗಳು
ಯುಗಸ್ಲೇವಿಯ ಸಂಧಾನ ಮಾಡಿಲ್ಲ
ಬರ್ಮ ದೇಶದ ಮೇಲೆ ಜಪಾನರ ಧಾಳಿ
ಹಿಟ್ಲರನಿಗೆ ಟರ್ಕಿ ಅಧ್ಯಕ್ಷರ ಉತ್ತರ

ಅಮೇರಿಕವು ಬ್ರಿಟಿಷ್ ಸಹಾಯಕ ಮಸೂದೆಯನ್ನು ಮಂಜೂರು ಮಾಡಿ ಹಿಟ್ಲರನ ವಿರೋಧ ಮಾಡಲು ತೊಡಗಿದೆ. ಬ್ರಿಟನಿಗೆ ಹಾಗೂ ಇತರ ಪ್ರಜಾಪ್ರಭುತ್ವ ರಾಷ್ಟ್ರಗಳಿಗೆ ಅಮೇರಿಕವು ನೆರವಾಗುವುದೆಂದು ರೂಸ್‌ವೆಲ್ಟರು ಹೇಳಿದರು. ಹಿಟ್ಲರನು ಕಳುಹಿಸಿದ ಪತ್ರಕ್ಕೆ ಟರ್ಕಿ ಅಧ್ಯಕ್ಷರು ಉತ್ತರ ಕಳುಹಿಸಿರುವರೆಂದು ತಿಳಿದಿದೆ. ಚೀನದ ಮಿಲಿಟರಿ ಕೇಂದ್ರವು ಬರ್ಮಕ್ಕೆ ಸ್ಥಳಾಂತರ ಮಾಡಿರುವುದರಿಂದ ಅಲ್ಲಿಗೆ ಜಪಾನರು ಬಾಂಬೆಸೆದಿರುವರು. ಜರ್ಮನ್ ಯು ಬೋಟುಗಳು ಅತ್ಲಾಂತಿಕ ಸಾಗರದಾಚೆ ಬಂದಿರುವದೆಂದು ತಿಳಿಯುತ್ತದೆ. ಇಂಗ್ಲಂಡಿನ ಮೇಲೆ ಜರ್ಮನರ ಧಾಳಿ ನಡೆಯುತ್ತಾ ಇದೆ. ಯುಗಸ್ಲೇವಿಯವು ಇದು ವರೆಗೆ ಒಪ್ಪಂದಕ್ಕೆ ಸಹಿಮಾಡಿಲ್ಲ. ಬ್ರಿಟಿಷರು ಅಬಿಸೀನಿಯದಲ್ಲಿಯೂ ಮುಂದುವರಿಯುತ್ತಿದ್ದಾರೆ.

ಹಿಟ್ಲರನ ಭಾಷಣ
ಈ ವರ್ಷ ಯುದ್ಧ ಮುಗಿಸುವನಂತೆ

'೧೯೪೧ನೆಯ ವರ್ಷವು ಜಗತ್ತಿನ ಇತಿಹಾಸದಲ್ಲಿ ಅತ್ಯಂತ ಮಹತ್ವದ್ದಾಗಿದೆ. ಆ ವರ್ಷ ಪ್ರಾರಂಭಿಸಿದ ಕಾರ್ಯವನ್ನು ಈ ವರ್ಷ ಜರ್ಮನರು ಮುಗಿಸುವರು' ಎಂದು ಹಿಟ್ಲರನು ಬರ್ಲಿನಿನಲ್ಲಿ ಭಾಷಣಮಾಡುತ್ತಾ ಹೇಳಿದನು.

ಚೀನೀಯರ ವಿಜಯ

ಇಚಾಂಗಿನ ಪಶ್ಚಿಮಕ್ಕೆ ೨೦೦೦ ಜಪಾನೀ ಸೈನಿಕರನ್ನು ಚೀನೀಯರು ಹಿಂದಕ್ಕಟ್ಟಿದರೆಂದು ಸುದ್ದಿ.

ರಶ್ಯ ಜರ್ಮನಿಗಳ ಘರ್ಷಣೆಯೆ?

ಜರ್ಮನಿಗೂ ರಶ್ಯಾಕ್ಕೂ ವೈಮನಸ್ಯ ಬೆಳೆದಿದೆಯೆಂದೂ ಘರ್ಷಣಕ್ಕಾಗಿ ತಯಾರಾಗುತ್ತಿರುವುದಾಗಿಯೂ ಗೊತ್ತಾಗಿದೆ.

'ಲಿಥ್ವೇನಿಯದಲ್ಲಿ ಸೋವಿಯೆಟ್ಟಿನವರು ಬಲವಾಗಿ ಸೈನಿಕ ಶೇಖರಣೆ ಮಾಡಿಕೊಂಡಿದ್ದಾರೆ. ಸಮೀಪದಲ್ಲಿಯೇ ಜರ್ಮನರು ಮತ್ತು ರಶ್ಯನರು ಸ್ವರಹದ್ದಿನಿಂದ ಜನರನ್ನು ಹಿಂದಕ್ಕೆ ಕರೆಸಿಕೊಂಡು ಸರಹದ್ದು ಪ್ರದೇಶಗಳನ್ನೆಲ್ಲಾ ಖಾಲಿ ಮಾಡಿದ್ದಾರೆ' ಎಂಬುದಾಗಿ ಲಿಥ್ವೇನಿಯದಿಂದ ಲಿಸ್‌ಬನಿಗೆ ಬಂದ ಕ್ರೈಸ್ತ ಪಾದ್ರಿಯು ತಿಳಿಸಿದರೆಂದು ಡೈಲಿ ಎಕ್ಸ್‌ಪ್ರೆಸ್ ಪತ್ರಿಕೆಯ ಲಿಸ್‌ಬನ್ ಬಾತ್ಮೀದಾರರು ತಿಳಿಸುತ್ತಾರೆ.

ಹಿಟ್ಲರನ ಪತ್ರಕ್ಕೆ
ಟರ್ಕಿ ಅಧ್ಯಕ್ಷರ ಉತ್ತರ

ಟರ್ಕಿ ಪರರಾಷ್ಟ್ರ ಕಚೇರಿಯಿಂದ ಓರ್ವ ಅಧಿಕಾರಿಯು ಸೋಫಿಯಾಕ್ಕೆ ಬಂದಿರುವನೆಂದೂ ಆತನು ಹಿಟ್ಲರನು ಕಳುಹಿಸಿದ ಪತ್ರಕ್ಕೆ ಟರ್ಕಿ ಅಧ್ಯಕ್ಷರ ಲಿಖಿತ ಉತ್ತರವನ್ನು ತಂದಿರುವನೆಂದೂ ತಿಳಿದು

ಅಬಿಸೀನಿಯದ ಮೇಲೆ ಮುತ್ತಿಗೆ

ಸುಡಾನದಿಂದ ಬ್ರಿಟಿಷ್ ಸೈನ್ಯಗಳು ಬೇರೊಂದು ದಾರಿಯಿಂದ ಅಬಿಸೀನಿಯದೊಳಗೆ ಹೊರಟಿರುವವೆಂದೂ, ಆ ಸೈನ್ಯವು ಅಫೂಡಾ, ಅರೋಸಾ ಮೊದಲಾದ ಕಡೆ ಆಕ್ರಮಿಸುವವೆಂದೂ ತಿಳಿದಿದೆ.

ಆಲ್ಬೇನಿಯದಲ್ಲಿ ೧೨೦,೦೦೦ ಪ್ರಾಣಹಾನಿ
ಇಟಲಿಯ ಅವಸ್ಥೆ

ಗ್ರೀಕರು ಮಧ್ಯ ಆಲ್ಬೇನಿಯದಲ್ಲಿ ಪ್ರಾರಂಭಿಸಿದ ದಾಳಿಯಿಂದ ೩೦೦೦ ಮಂದಿ ಇಟಲಿಯನರನ್ನು ಸೆರೆಹಿಡಿದರೆಂದೂ, ಇದುವರೆಗೆ ಒಟ್ಟು ೨೦,೦೦೦ ಸೈನಿಕರನ್ನು ಸೆರೆಹಿಡಿಯಲಾಯಿತೆಂದೂ ಆಲ್ಬೇನಿಯದಲ್ಲಿ ಇದುವರೆಗೆ ೧೩೦,೦೦೦ ಇಟಲಿಯನರ ಪ್ರಾಣಹಾನಿಯಾಯಿತೆಂದೂ ತಿಳಿದಿದೆ.

ಇಸ್ತಾಂಬೂಲ್ ಪೇಲೆಸ್ ಹೋಟೆಲಿನಲ್ಲಿ ಬಾಂಬು

ಬ್ರಿಟಿಷ್ ಮಂತ್ರಿ ರೆಂಡೆಲರು ಇಸ್ತಾಂಬೂಲ್ ಪೇಲೆಸ್ ಹೋಟೆಲಿನಲ್ಲಿರಲು ಅಲ್ಲಿಗೆ ಬಾಂಬು ಬಿತ್ತೆಂದು ತಿಳಿದುಬರುತ್ತದೆ. ಇದರಿಂದ ಒಟ್ಟು ೨೩ ಜನರು ಮೃತಿ ಹೊಂದಿದರು.

ಸಿರಿಯಕ್ಕೆ ಬ್ರಿಟಿಷರ ಸೈನ್ಯ

ಸುಮಾರು ಆರು ತಿಂಗಳಿಂದ ಉತ್ತರ ಆಫ್ರಿಕದಲ್ಲಿದ್ದ ಜನರಲ್ ವೇಗಾನರು ಈ ಗಲಬೆಗೆ ಬಂದಿರುವರೆಂದು ಊಹಿಸಲಾಗಿದೆ. ಬ್ರಿಟಿಷರು ಸಿರಿಯವನ್ನು ಆಕ್ರಮಿಸಿಕೊಂಡರೆ ಟರ್ಕಿ ಸುಮ್ಮನಿರಬೇಕೆಂದು ಈಡನರು ಟರ್ಕಿ ಸರಕಾರಕ್ಕೆ ತಿಳಿಸಿರುವರಂತೆ. ಬ್ರಿಟಿಷ್ ಸೈನ್ಯ ಸಿರಿಯಕ್ಕೆ ನುಗ್ಗಿರುವುದೆಂದು ತಿಳಿದಿದೆ.

ಆಲ್ಬೇನಿಯದಲ್ಲಿ ಸಿನಾರ ಮುಸೋಲಿನಿ

ಈಗ ಐದಾರು ದಿನಗಳ ಹಿಂದೆ ಆಲ್ಬೇನಿಯ ರಣಭೂಮಿಗೆ ಬಂದ ಸಿನಾರ ಮುಸೋಲಿನಿಯು ಇನ್ನೂ ಅಲ್ಲಿಯೇ ಇರುವನಂತೆ. ಈಗ ಅಲ್ಲಿ ನಡೆಯುತ್ತಿರುವ ಯುದ್ಧವು ಅವನ ಮೇಲ್ವಿಚಾರಣೆಯಲ್ಲಿಯೇ ನಡೆಯುತ್ತಿರುವದೆಂದು ತಿಳಿದುಬರುತ್ತದೆ. ಬಹುಶಃ ಶನಿವಾರ ಅವನು ರೋಮಿಗೆ ಹಿಂತಿರುಗಬಹುದಂತೆ.

ರೂಸ್‌ವೆಲ್ಟರಿಗೆ ಚರ್ಚಿಲ್ಲರ ಧನ್ಯವಾದ

ಬ್ರಿಟಿಷ್ ಸಹಾಯಕ ಮಸೂದೆಯು ಪಾಸಾಗುವಂತೆ ಬಹಳ ಪ್ರಯಾಸಪಟ್ಟು ಕೊನೆಗೆ ಅದಕ್ಕೆ ಸಹಿ ಹಾಕಿದ ಅಧ್ಯಕ್ಷ ರೂಸ್‌ವೆಲ್ಟರನ್ನು ಮುಖ್ಯ ಮಂತ್ರಿ ಚರ್ಚಿಲ್ಲರು ಬ್ರಿಟಿಷ್ ಸರಕಾರ ಬ್ರಿಟಿಷ್ ಪಾರ್ಲಿಮೆಂಟು ಮತ್ತು ಸ್ವಾತಂತ್ರ್ಯವನ್ನು ಪ್ರೀತಿಸುವ ಎಲ್ಲ ರಾಷ್ಟ್ರಗಳ ಪರವಾಗಿ ಅಭಿನಂದಿಸಿದ್ದಾರೆ.

ಯುಗೊಸ್ಲಾವಿಯದ ಘೋಷಣೆ
ತ್ರಿರಾಷ್ಟ್ರ ಒಪ್ಪಂದಕ್ಕೆ ಸಹಿ ಮಾಡುವುದಿಲ್ಲ
ತಾಟಸ್ಥ್ಯ ರಕ್ಷಿಸುವ ನಿರ್ಧಾರ

ನಾತ್ಸಿಗಳು ಯುಗೊಸ್ಲಾವಿಯದ ಮನವೊಲಿಸಲು ಎಷ್ಟೇ ಪ್ರಯತ್ನಿಸಿದರೂ ಅದು ತ್ರಿರಾಷ್ಟ್ರ ಒಪ್ಪಂದಕ್ಕೆ ಸಹಿ ಮಾಡಲು ಒಪ್ಪುವದಿಲ್ಲೆಂದು ತಿಳಿಯುತ್ತದೆ. ಎಂಥ ಪ್ರಸಂಗ ಬಂದರೂ ತನ್ನ ತಾಟಸ್ಥ್ಯವನ್ನು ರಕ್ಷಿಸಿಕೊಳ್ಳಲು ನಿರ್ಧರಿಸಿದೆಯಂತೆ. ಯುಗೊಸ್ಲಾವಿಯವು ಶರಣಾಗತವಾಗುವದು ಅಥವಾ ಅದಕ್ಕೆ ಕೊನೆಯ ಎಚ್ಚರಿಕೆ ಕೊಡಲಾಗಿದೆ ಎಂದು ಹುಟ್ಟಿದ ಸುದ್ದಿಗಳು ನಿರಾಧಾರವಿರುವವು. ಆದರೆ ಜರ್ಮನಿಗೆ ಕೆಲವು ರಿಯಾಯತಿಗಳನ್ನು ಕೊಟ್ಟು ಅನಾಕ್ರಮಣ ಒಪ್ಪಂದ ಮಾಡಿಕೊಳ್ಳಬಹುದು.

ಸೋಮಾಲಿಲೇಂಡ್ ದಂಡಯಾತ್ರೆ ಮುಗಿದಿದೆ
ಅಬಿಸೀನಿಯದ ದಂಡಯಾತ್ರೆ ಮುಗಿಯುತ್ತಲಿದೆ

ಸ್ಮಟ್ಸರು ಈಡನ್, ಸರ್ ಜಾನ್ ಡಿಲ್ ಮತ್ತು ಸರ್ ವೇವೆಲ್‌ರೊಡನೆ ನಡೆಸಿದ ಮಾತುಕತೆಗಳಲ್ಲಿ ಅಬಿಸೀನಿಯಾ ದಂಡಯಾತ್ರೆಯ ಮುಕ್ತಾಯದ ಅಂಶವಾಗಿಯೂ, ಇತರ ಯುದ್ಧ ಪರಿಸ್ಥಿತಿಯ ವಿಷಯವಾಗಿಯೂ ಸಂಭಾಷಣೆ ನಡೆಯಿತು ಎಂದು ಸ್ಮಟ್ಸರು ತಿಳಿಸಿದರು.

ಸೋಮಾಲಿಲೇಂಡಿನ ದಂಡಯಾತ್ರೆಯೆಲ್ಲಾ ಮುಗಿದಂತೆಯೇ ಆಗಿದೆ. ಅಬಿಸೀನಿಯದ ದಂಡಯಾತ್ರೆಯು ಕೊನೆಯ ಹಂತದಲ್ಲಿದೆ ಎಂದು ಸ್ಮಟ್ಸರು ತಿಳಿಸಿದರು.

ಗ್ರೀಸಿಗೆ ಬ್ರಿಟಿಷರ ಸಹಾಯ

'ವೆಕ್ಕೊ ಜರ್ನಲೆನ್' ಎಂಬ ಸ್ವೀಡಿಶ್ ಪತ್ರಿಕೆಯಲ್ಲಿ ಗ್ರೀಕರಿಗೆ ಬ್ರಿಟಿಷರು ಮಾಡಿದ ಸಹಾಯದ ಕುರಿತು ಫಿಲಿಪ್ ಸ್ಕೋಪೋವ ಎಂಬವರು ಈ ರೀತಿ ಬರೆದಿದ್ದಾರೆ.

'ಸೂಕ್ಷ್ಮವಾಗಿ ವಿಚಾರಿಸಿದಲ್ಲಿ ಇಂಗ್ಲಂಡು ಬಹಳ ತೊಡಕುಗಳನ್ನು ಎದುರಿಸಬೇಕಾಯಿತು. ಇನ್ನು ಭೌಗೋಲಿಕ ಕಾರಣಗಳಿಂದ ಒಮ್ಮಿಂದೊಮ್ಮೆಲೆ ಜರ್ಮನರನ್ನು ತಡೆಯುವದಾಗಲಿ ಅಥವಾ ಜರ್ಮನರಿಂದ ಇಂಥ ಕಾರಭಾರಗಳು ನಡೆಯುವದೆಂದಾಗಲಿ ನಿರೀಕ್ಷಿಸುವದಾಗಲಿಲ್ಲ.

ಇಟಾಲಿಯನ್ನರು ಗ್ರೀಸಿನ ಮೇಲೆ ಧಾಳಿಮಾಡಿದ ದಿನವೇ ಆರ್. ಎ. ಎಫ್‌ನವರು ಗ್ರೀಕರಿಗೆ ನೆರವಾದರು. ಇಟಲಿಯನ್ನು ಎದುರಿಸಲು ಗ್ರೀಕರಿಗೆ ಸುಲಭವಾಯಿತು.

ಟೇಂಕ ವಿರೋಧಕ ತೋಪುಗಳು ಕಾಲಕ್ಕೆ ತಕ್ಕಂತೆ ಬ್ರಿಟನಿನಿಂದ ಗ್ರೀಕರಿಗೆ ದೊರೆತವು.

ಸಾವಿರಾರು ಸೈನಿಕರಿಗೆ ಪ್ರಾಣರಕ್ಷಣಾ ದೋಣಿಗಳು

ಸಾವಿರಾರು ಮಂದಿ ಜರ್ಮನ್ ಸೈನಿಕರಿಗೆ ಪ್ರಾಣರಕ್ಷಣಾ ದೋಣಿಗಳನ್ನು ಒದಗಿಸಲಾಗಿದೆಯೆಂದೂ ಅವರು ದಿನವೂ ಹಡಗಿನಿಂದ ಇಳಿದು ಈ ದೋಣಿಗಳಲ್ಲಿ ಹೋಗುವ ಅಭ್ಯಾಸಮಾಡಿಕೊಳ್ಳುತ್ತಿದ್ದಾರೆಂದೂ ಸ್ವಿಸ್ ಪತ್ರಿಕೆಯಾದ ಎ. ಬಿ. ಸಿ. ಎಂಬುದು ವರದಿಮಾಡಿದೆ.

WANTED

A graduate, strong in English. Preference will be given to person having previous experience in office work. Apply with testimonials stating the salary required to

The Managing Director,
THE HANUMAN TRANSPORT COMPANY, LIMITED,
UDIPI.

ಮುನ್ಶಿಯವರ ಆರೋಗ್ಯದ ಬಗ್ಗೆ ಕಳವಳ!

ಶ್ರೀನಿವಾಸನರು ಸಂಧಿ ಪ್ರಯತ್ನ ಮಾಡುತ್ತಾರೆ?

ಅಪಕ್ಷದ ಧುರೀಣರ ಸಂಧಾನ ಸೂಚನೆಗಳು

ರಾಜೇಂದ್ರ ಪ್ರಸಾದರು ಮೈಸೂರಿಗೆ ಬರುವರು

ಕೇಂದ್ರ ಅಸೆಂಬ್ಲಿಯಲ್ಲಿ ಚರ್ಚೆಗಳು

ಭಾರತದಲ್ಲಿ ಈ ವಾರ ಸಂಧಾನ ಸೂಚನೆಗಳು ಕೇಳಿಬರುತ್ತಿವೆ. ಮುಂಬಯಿಯಲ್ಲಿ ನೆರೆದ ಅಪಕ್ಷ ಮುಖಂಡರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಮದರಾಸಿನ 'ಹಿಂದೂ' ಪತ್ರಿಕೆಯ ಸಂಪಾದಕರಾದ ಶ್ರೀನಿವಾಸನರೂ ಆ ಪ್ರಯತ್ನ ಮಾಡುತ್ತಿರುವರಂತೆ. ಆದರೆ ಇದರ ಪ್ರತಿಕ್ರಿಯೆ ಅಷ್ಟೇನೂ ಆಶಾದಾಯಕವಾಗಿಲ್ಲ. ಸತ್ಯಾಗ್ರಹವು ಬಹಳ ಭರದಿಂದ ಸಾಗುತ್ತಿದೆ. ಮುಂಬಯಿಯ ಮಾಜಿ ಮಂತ್ರಿಗಳಾಗಿದ್ದ ಮುನ್ಶಿಯವರ ಆರೋಗ್ಯವು ಬಹಳ ವಿಷಮ ಪರಿಸ್ಥಿತಿಗೆ ಬಂದಿರುವುದು. ಅವರನ್ನು ಬಿಡುಗಡೆ ಮಾಡಿರುವರು. ಅವರ ಪತ್ನಿಯನ್ನೂ ಪತಿಯ ಶುಶ್ರೂಷೆಗಾಗಿ ಬಿಟ್ಟಿರುವರು. ಸರ್. ಸಿ. ವಿ. ರಾಮನರ ಪುತ್ರ ಶ್ರೀ. ಚಂದ್ರಶೇಖರರನ್ನು ಕಮ್ಯುನಿಸ್ಟ್ ಚಳವಳಗಾರನೆಂದು ಬಂಧಿಸಿರುವರು. ಜವಾಹಿರಲಾಲ ನೆಹರುಗಳು ಬರೆದ ಬ್ರಿಟನು ಮತ್ತು ಭಾರತಗಳ 'ಅಗಲುವಿಕೆ' ಎಂಬ ಲೇಖನವು ಗಾಂಧಿಜಿಯವರ ಮುನ್ನುಡಿಯೊಡನೆ ಪ್ರಕಟವಾಗಿದೆ.

ಮುನ್ಶಿಯವರ ಆರೋಗ್ಯದ ಬಗ್ಗೆ ಕಳವಳ

ಮುಂಬಯಿ ಸರಕಾರದ ಹಿಂದಿನ ಮಂತ್ರಿಗಳಾದ ಶ್ರೀ. ಕೆ. ಎಂ. ಮುನ್ಶಿಯವರನ್ನು ಅನಾರೋಗ್ಯದ ನಿಮಿತ್ತ ಎರವಾಡಾ ಸೆರೆಮನೆಯಿಂದ ಬಿಡುಗಡೆ ಮಾಡಿರುವರೆಂದು ತಿಳಿದಿದೆ. ಅವರ ಆರೋಗ್ಯವು ಬಹಳ ಕಳವಳಕ್ಕೆ ಕಾರಣವಾದ್ದರಿಂದ ಅವರನ್ನು ಪೂನದಲ್ಲಿರಿಸಲಾಗಿದೆಯೆಂದೂ, ಶ್ರೀಮತಿ ಲೀಲಾವತಿ ಮುನ್ಶಿಯವರೂ ಪತಿಯನ್ನು ನೋಡಲು ಸೆರೆಮನೆಯಿಂದ ಬಿಡುಗಡೆಗೊಳಿಸಲ್ಪಟ್ಟಿರುವರೆಂದೂ ತಿಳಿದುಬರುತ್ತವೆ.

ಸಂಧಾನ ಪ್ರಯತ್ನ

ಮದ್ರಾಸಿನ 'ಹಿಂದು' ಪತ್ರಿಕೆಯ ಸಂಪಾದಕರಾದ ಶ್ರೀ. ಕೆ. ಶ್ರೀನಿವಾಸನರು ಫೆಬ್ರವರಿ ಪ್ರಾರಂಭದಲ್ಲಿ ಪತ್ರಿಕಾಕರ್ತರ ಸ್ಥಾಯಿ ಸಮಿತಿಯ ಸಭೆಗೆ ಬಂದಾಗ ವೈಸರಾಯರನ್ನು ಭೆಟ್ಟಿಯಾಗಿದ್ದರಷ್ಟೆ? ಅಲ್ಲಿ ಏನು ನಡೆಯಿತೆಂಬ ಬಗ್ಗೆ ಈಗೀಗ ಕೆಲವು ಸಂಗತಿಗಳು ಹೊರಬೀಳುತ್ತಿವೆ.

ಈಗಿನ ರಾಜಕೀಯ ಬಿಕ್ಕಟ್ಟನ್ನು ಬಿಡಿಸುವದಕ್ಕಾಗಿ ರಾಷ್ಟ್ರೀಯ ತತ್ವದ ಮೇಲೆ ಕೇಂದ್ರ ಸರಕಾರವನ್ನು ಹೇಗೆ ಪುನರ್ಘಟಿಸಬೇಕು ಎಂಬ ಬಗ್ಗೆ ಶ್ರೀ. ಶ್ರೀನಿವಾಸನರು ಆಗ ಕೆಲವು ಸೂಚನೆಗಳನ್ನು ಮಾಡಿದರೆಂದು ತಿಳಿಯುತ್ತದೆ. ವೈಸರಾಯರು ಒಪ್ಪಂದದ ಬಗ್ಗೆ ಸಹಾನುಭೂತಿ ವ್ಯಕ್ತಮಾಡಿದರೆಂದೂ ಆದರೆ ಶ್ರೀ. ಶ್ರೀನಿವಾಸನರು ಮುಂದೆ ಮಾಡಿದ ಸೂಚನೆಗಳ ಬಗ್ಗೆ ಯಾವುದೇ ಬಗೆಯ ಆಶ್ವಾಸನೆ ಕೊಡಲಿಲ್ಲೆಂದೂ ಗೊತ್ತಾಗುತ್ತದೆ. ಅನಂತರ ಶ್ರೀ. ಶ್ರೀನಿವಾಸನರು ತ್ರಿಚಿನಾಪಳ್ಳಿಗೆ ಹೋಗಿ ಶ್ರೀ. ರಾಜಾಜಿಯವರನ್ನು ಕಂಡು ವಿಚಾರ ವಿನಿಮಯ ಮಾಡಿದರು. ಮೇಲೆ ಅಲ್ಲಹಾಬಾದಿನಲ್ಲಿ ಸರ್ ತೇಜಬಹದ್ದೂರ್ ಸಪ್ರೂರವರನ್ನು ಭೆಟ್ಟಿಯಾದರು. ಮುಂದೆ ದಿಲ್ಲಿಯಲ್ಲಿ ಬ್ಯಾ. ಜಿನ್ನಾರವರನ್ನು ಕಂಡು ಮಾತನಾಡಿದರು. ಜಿನ್ನಾರವರು ಒಪ್ಪಂದ ಮನೋವೃತ್ತಿಯನ್ನು ವ್ಯಕ್ತಮಾಡಿದರಂತೆ. ಈ ಮೇಲೆ ಹೊಸದಿಲ್ಲಿಯಿಂದ ಅವರು ವರ್ಧಾಕ್ಕೆ ಪ್ರಯಾಣ ಬೆಳಸಿ ಮಹಾತ್ಮರ ಭೆಟ್ಟಿ ತೆಗೆದುಕೊಂಡು ನಡೆದ ಎಲ್ಲ ಸಂಗತಿಗಳನ್ನು ವಿವರಿಸಿದರಂತೆ.

ಡಾ। ಬಾಬು ರಾಜೇಂದ್ರ ಪ್ರಸಾದ್

ಏಪ್ರಿಲ್ ೬ನೇ ತಾರೀಕು ಹರಿಹರಕ್ಕೆ ಆಗಮನ

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಡಾ। ಬಾಬು ರಾಜೇಂದ್ರ ಪ್ರಸಾದರವರು ಏಪ್ರಿಲ್ ೪ನೇ ತಾರೀಕು ಸಂಜೆ ವರ್ಧಾವನ್ನು ಬಿಟ್ಟು ನಾಗಪುರ ಮೆಯಿಲ್ ಗಾಡಿಯಲ್ಲಿ ಪೂನಾ ಮಾರ್ಗವಾಗಿ ಹೊರಟು ಹರಿಹರಕ್ಕೆ ೬ನೇ ತಾರೀಕಿನ ಪ್ರಾತಃಕಾಲ ೮ ಗಂಟೆಗೆ ಆಗಮಿಸುವರು. ಆ ದಿನ ಅವರು ಮೈಸೂರು ಕಾಂಗ್ರೆಸ್ಸಿನ ನಾಲ್ಕನೆಯ ಮಹಾಧಿವೇಶನದ ಸಂಬಂಧದಲ್ಲಿ ಏರ್ಪಡಿಸಿರುವ ಸ್ವದೇಶಿ ಮತ್ತು ಗ್ರಾಮ ಕೈಗಾರಿಕೆಯ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ವಿನೋಬ ನಗರದಲ್ಲಿ ನೆರವೇರಿಸುವರು.

ವೈಸರಾಯರು ನಿವೃತ್ತರಾಗುವರೆ?

ಈಗಿನ ವೈಸರಾಯರಾದ ಲಾರ್ಡ್ ಲಿನ್‌ಲಿಥ್‌ಗೋರವರು ಖಾಸಗಿ ಕಾರಣಗಳಿಗಾಗಿ ರಜೆಯ ಮೇಲೆ ಬೇಗನೆ ಇಂಗ್ಲಂಡಿಗೆ ಹೋಗಲಿರುವರೆಂದು ಸುದ್ದಿ. ಆದರೆ ಇವರು ಬೇಸಿಗೆ ಮುಗಿಯುವುದರೊಳಗಾಗಿ ಅಥವಾ ಮಳೆಗಾಲದಲ್ಲಿ ಮರಳಿ ಬರುವರೋ ಅಥವಾ ಇಲ್ಲವೋ ಗೊತ್ತಿಲ್ಲ. ಅದೆಲ್ಲವೂ ಮುಂದಿನ ವೈಸರಾಯರ ನೇಮಕವನ್ನು ಅವಲಂಬಿಸಿದೆ. ಲಾರ್ಡ್ ಲಿನ್‌ಲಿಥ್‌ಗೋರವರು ತಮ್ಮ ಬೆಳೆದ ಅವಧಿ ಮುಗಿಯುವ ವರೆಗೆ ಅಧಿಕಾರದಲ್ಲುಳಿಯುವದಿಲ್ಲವೆಂದು ಮತ್ತೊಂದು ಸುದ್ದಿ. ಇದು ನಿಜವಾದರೆ ಭಾರತೀಯ ಬಿಕ್ಕಟ್ಟನ್ನು ಬಿಡಿಸುವ ಭಾರವು ಹೊಸ ವೈಸರಾಯರ ಮೇಲೆಯೇ ಬೀಳುವದು.

ಇವರ ತರುವಾಯ ಈಗ ಉಪ ಭಾರತ ಮಂತ್ರಿಗಳಾದ ಡೆವಾನಶಾಯರ ಡ್ಯೂಕರಿಗೆ ವೈಸರಾಯರ ಪಟ್ಟ ದೊರೆಯುವದೆಂದು ವದಂತಿ.

ಮೈಸೂರು ಕಾಂಗ್ರೆಸ್ ಅಧ್ಯಕ್ಷರು

ಶ್ರೀ. ಸಿದ್ದಯ್ಯನವರು ಚುನಾಯಿತರಾದರು

ಮೈಸೂರು ಕಾಂಗ್ರೆಸಿನ ಅಧ್ಯಕ್ಷಸ್ಥಾನಕ್ಕೆ ಶ್ರೀ.ಗಳಾದ ಕೆ. ಟಿ. ಭಾಷ್ಯಂ, ಹೆಚ್. ಸಿದ್ದಯ್ಯ ಮತ್ತು ಕೆ. ಚಂಗಲರಾಯ ರೆಡ್ಡಿಯವರು ಉಮೇದುವಾರರಾಗಿ ನಿಂತಿದ್ದರು. ಶ್ರೀ.ಗಳಾದ ಭಾಷ್ಯಂ ಮತ್ತು ಚಂಗಲರಾಯ ರೆಡ್ಡಿಯವರು ತಮ್ಮ ಉಮೇದುವಾರಿಕೆಯನ್ನು ವಾಪಾಸ್ ತೆಗೆದುಕೊಂಡುದರಿಂದ ಶ್ರೀ. ಹೆಚ್. ಸಿದ್ದಯ್ಯನವರು ಅಧ್ಯಕ್ಷರಾಗಿ ಚುನಾಯಿತರಾದರು.

ಸತ್ಯಾಗ್ರಹವು ನೈತಿಕ ಹೋರಾಟ

ಈ ಬಗ್ಗೆ ಸರಕಾರದ ದಬ್ಬಾಳಿಕೆ ಸರಿಯಲ್ಲ

ಕೇಂದ್ರ ಅಸೆಂಬ್ಲಿಯಲ್ಲಿ ಚರ್ಚೆ

"ಸತ್ಯಾಗ್ರಹ ಚಳವಳವನ್ನು ಎದುರಿಸುವುದಕ್ಕೆ ಸರಕಾರದವರು ದಬ್ಬಾಳಿಕೆ ನೀತಿಯನ್ನು ಅನುಸರಿಸುತ್ತಿದ್ದಾರೆ, ಸತ್ಯಾಗ್ರಹವು ನೀತಿಯುತವಾದ ದಂಗೆ, ಇದು ನೈತಿಕ ಹೋರಾಟ, ಸರಕಾರದ ವರ್ತನೆಯೂ ದಬ್ಬಾಳಿಕೆಯೂ ತೀರ ಖಂಡನೀಯವಾದುದು" ಎಂಬದಾಗಿ ಕಾಜ್ಮಿಯವರು ತಮ್ಮ ನಿರ್ಣಯವನ್ನು ಅಸೆಂಬ್ಲಿಯಲ್ಲಿ ಸೂಚಿಸಿ ಭಾಷಣ ಮಾಡಿದರು. ೬೫ ವರ್ಷ ವಯಸ್ಸಿನ ಒಬ್ಬ ಸತ್ಯಾಗ್ರಹಿಗೆ ಶಿಕ್ಷೆಮಾಡಲಾಗಿದೆ. ಇವರಿಗೆ ಮುಂಚೆ ಆರು ಸಾರ ಶಿಕ್ಷೆಯಾಗಿದೆ. ಇಂಥವರಿಗೆ ಸಹಾ ಕಠಿಣ ಶಿಕ್ಷೆ ಕೊಡಲಾಯಿತು.

ಇನ್ನೊಂದು ಸ್ಥಳದಲ್ಲಿ, ಕೇಂದ್ರ ಅಸೆಂಬ್ಲಿ ಉಪಚುನಾವಣೆಗೆ ನಿಂತಿದ್ದ ಕಾಂಗ್ರೆಸ್ ಸದಸ್ಯರನ್ನು ದಸ್ತಗಿರಿ ಮಾಡಲಾಯಿತು. ಚುನಾವಣೆ ಮುಗಿದ ನಂತರ ಅವರನ್ನು ಬಿಡುಗಡೆ ಮಾಡಲಾಯಿತು.'

ಸತ್ಯಾಗ್ರಹಿಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕಳುಹಿಸುವಾಗ ಅವರಿಗೆ ಸಂಕೋಲೆಗಳನ್ನು ಹಾಕುತ್ತಾರೆ. ಹೀಗೆ ದಬ್ಬಾಳಿಕೆ ಮತ್ತು ಕ್ರೂರತನ ನಡೆಯುತ್ತದೆ ಎಂದರು.'

ಸರ್ ರೆಜಿನಾಲ್ಡ್ ಮ್ಯಾಕ್ಸ್‌ವೆಲ್ಲರು ಚರ್ಚೆಗಳಿಗೆ ಉತ್ತರ ಕೊಡುತ್ತಾ "ಸತ್ಯಾಗ್ರಹಿಗಳು ತಾವಾಗಿಯೇ ಬಂಧನಕ್ಕೊಳಗಾದರು" ಎಂದರು.



ಕ್ರಿಕೆಟ್ ಆಟಗಾರ
ಕೃಷ್ಣಪ್ಪನವರ ಅಕಾಲ ನಿಧನ

ಮಂಗಳೂರಿನಲ್ಲಿ ಕ್ರಿಕೆಟ್ ಮತ್ತು ಇನ್ನಿತರ ಆಟಗಳಲ್ಲಿ ಹೆಸರುವಾಸಿಯಾದ ಕೆನರಾ ಹೈಸ್ಕೂಲಿನ ಡ್ರಿಲ್ ಅಧ್ಯಾಪಕರಾಗಿದ್ದ ಶ್ರೀಯುತ ಕೃಷ್ಣಪ್ಪನವರು ತಾ. ೧೪ರಲ್ಲಿ ಬೆಳಿಗ್ಗೆ ದೈವಾಧೀನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಇವರು ಅಸಾಮಾನ್ಯ ಕ್ರಿಕೆಟ್ ಆಟಗಾರರೆನಿಸಿದ್ದರು. ಇವರು ಮೊದಲು ಕಲಿತ ಗಣಪತಿ ಹೈಸ್ಕೂಲಿನಲ್ಲಿ ಆಗ ಜೂನಿಯರ್ ಆಟಗಳಲ್ಲಿ ಭಾಗವಹಿಸಿ ಶಾಲೆಗೆ ಹಲವು ಕಪ್ಪುಗಳನ್ನೂ ರಜತ ಪದಕಗಳನ್ನೂ ಒದಗಿಸಿ ಕೊಟ್ಟಿದ್ದರು. ಅನಂತರ, ಗವರ್ನಮೆಂಟ್ ಕೊಲೇಜಿನಲ್ಲಿರುವಾಗ, ಆಟಗಳಲ್ಲಿ ಬಹಳವಾಗಿ ಹೆಸರು ಪಡೆದರು. ಮಂಗಳೂರಿನಲ್ಲಿ ಮಾತ್ರವಲ್ಲ, ಮದರಾಸಿನಲ್ಲಿಯೂ ಶ್ರೀಯುತರಿಗೆ ಹೆಚ್ಚಿನ ಗೌರವ ದೊರೆತಿದೆ. ಪ್ರೆಸಿಡೆನ್ಸಿ ಕ್ರಿಕೆಟ್ ಪಂದ್ಯಾಟದಲ್ಲಿ ಇವರು ಭಾಗವಹಿಸಿ, ಮದರಾಸಿನ ಜನರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಎರಡು ತಿಂಗಳ ಹಿಂದೆ ಮದ್ರಾಸಿನಲ್ಲಿ ನಡೆದ ಮಿನರ್ವಾ ಕ್ರಿಕೆಟ್ ದಳದ ಆಟದಲ್ಲಿ ಶ್ರೀಯುತರು ಒಳ್ಳೆಯ ಕೌಶಲ್ಯವನ್ನು ಪ್ರದರ್ಶಿಸಿದ್ದಾರೆ. ಅಂತರ್ರಾಷ್ಟ್ರೀಯ ಕ್ರಿಕೆಟ್ ಕೀರ್ತಿಯನ್ನು ಪಡೆಯುವಷ್ಟು ನೈಪುಣ್ಯ ಕೃಷ್ಣಪ್ಪನವರಲ್ಲಿ ಇತ್ತು. ಕೃಷ್ಣಪ್ಪನವರು ಆಟರಂಗದಲ್ಲಿ ಇಳಿದರೆಂದರೆ ಮಂಗಳೂರ ಕ್ರಿಕೆಟ್ ಪ್ರಿಯರಿಗೆ ಉತ್ಸಾಹ ತುಂಬುತಿತ್ತು. ಕ್ರಿಕೆಟಿನಲ್ಲಿ ಪಡೆದಷ್ಟೇ ಹೆಸರನ್ನು, ಹೊಕ್ಕಿ, ಫ್ಹುಟ್‌ಬೋಲ್, ಬಾಸ್ಕೆಟ್‌ಬೋಲ್, ವಾಲ್ಲಿಬೋಲ್ ಮತ್ತು ಇನ್ನಿತರ ಆಟಗಳಲ್ಲಿಯೂ ಶ್ರೀಯುತರು ಪಡೆದಿದ್ದರು. ಶ್ರೀಯುತರ ಅಕಾಲ ನಿಧನವು ನಮ್ಮ ಜಿಲ್ಲೆಯ ಕ್ರಿಕೆಟ್ ಮತ್ತು ಇನ್ನಿತರ ಆಟಗಳ ಕ್ಷೇತ್ರಗಳಲ್ಲಿ ಉಂಟಾದ ಮಹಾ ನಷ್ಟವಾಗಿದೆ.

ಕೃಷ್ಣಪ್ಪನವರ ಶವದ ಶ್ಮಶಾನಯಾತ್ರೆಯು ಒಂದು ಗಂಭೀರವಾದ ದೃಶ್ಯವಾಗಿತ್ತು. ಮಂಗಳೂರಲ್ಲಿ ಇದುವರೆಗೆ ಇಷ್ಟು ಜನಸಂದಣಿಯು ಯಾರಿಗೂ ಸೇರಿದ್ದಿಲ್ಲವೆನ್ನಬಹುದು. ಶ್ರೀಮಂತರು ಬಡವರೆನ್ನದೆ, ಆಬಾಲವೃದ್ಧರೆಲ್ಲರೂ ಶವದ ಬೆಂಬಳಿ ಸಾಗಿದ್ದರು. ಜನಸಂಖ್ಯೆ ಮೂರು ಸಾವಿರಕ್ಕೆ ಮಿಕ್ಕಿತ್ತು. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಬಂಧುಗಳೆಲ್ಲರೂ ಕೂಡಿದ್ದರು. ಕೃಷ್ಣಪ್ಪನವರು ಎಷ್ಟರ ಮಟ್ಟಿಗೆ ಜನಪ್ರಿಯರಾಗಿದ್ದರೆಂಬುದಕ್ಕೆ ಇದೇ ಸಾಕ್ಷಿಯಾಗಿತ್ತು.

ದಿವಂಗತ ಶ್ರೀ. ಕೃಷ್ಣಪ್ಪನವರ ಸ್ಮಾರಕ

ಕೆನರಾ ಹೈಸ್ಕೂಲಿನ ಸುಬ್ರಾಯ ಪೈ ಸ್ಮಾರಕ ಭವನದಲ್ಲಿ, ಕಳೆದ ತಾ. ೧೬ರಲ್ಲು, ಡಾ. ಬಿ. ರಾಮ ಬಾಳಿಗರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ [illegible]

ಅಣ್ಣಪ್ಪ ಕಾಮತರು ಸಭೆಯ ಉದ್ದೇಶವನ್ನು ವಿವರಿಸಿ, ಸುಪ್ರಖ್ಯಾತ ಆಟಗಾರರಾದ ದಿವಂಗತ ಯಂ. ಕೃಷ್ಣಪ್ಪನವರ ಅನಿರೀಕ್ಷಿತ ಮರಣದ ವಿಚಾರದಲ್ಲಿ ಸಂತಾಪವನ್ನು ಪ್ರಕಟಿಸಲೂ ಹಾಗೂ ಅವರ ಕುಟುಂಬದ ಸಹಾಯಾರ್ಥವಾಗಿ ಮತ್ತು ದಿವಂಗತರ ಸ್ಮಾರಕ ಸ್ಥಾಪನೆಗಾಗಿ ಧನ ಕೂಡಿಸುವ ಯೋಜನೆಗಾಗಿಯೂ ಸಭೆ ಜರಗಿದುದೆಂದರು. ಜಿಲ್ಲೆಯ ಪ್ರಖ್ಯಾತ ಆಟಗಾರರಾಗಿದ್ದು, ಪ್ರಾಂತ್ಯದಲ್ಲೇ ಜಿಲ್ಲೆಗೆ ಕೀರ್ತಿಯನ್ನು ತಂದ ಶ್ರೀ. ಕೃಷ್ಣಪ್ಪನವರ ಸದ್ಗುಣಗಳನ್ನು ಶ್ಲಾಘಿಸಿ, ವರ್ಣಿಸುತ್ತಾ ಶ್ರೀಗಳಾದ ಯಂ. ಮಾಧವರಾವ್, ಬಿ. ಅಚ್ಯುತ ಬಾಳಿಗ, ಯನ್. ರಾಮರಾವ್, ಕೆ. ಉಗ್ಗಪ್ಪ ಶೆಟ್ಟಿ, ಯಸ್. ಯನ್. ಹೊಳ್ಳ, ಯಂ. ರಾಮಚಂದ್ರ ಪೈ, ರಾವ್ ಬಹದ್ದೂರ್ ಡಾ। ವಿ. ಪಿ. ಕಾಮತ್, ರಾಮಕೃಷ್ಣ ಪೈ, ಬಿ. ಅಪ್ಪಯ್ಯ ಮತ್ತು ಅಣ್ಣಪ್ಪ ಕಾಮತರವರು ಭಾಷಣವಿತ್ತರು. ದಿವಂಗತರ ಕುರಿತಾದ ಸಂತಾಪಸೂಚನಾ ನಿರ್ಣಯವೊಂದು ಮಂಜೂರಾಗಿ, ಧನಸಂಗ್ರಹಿಸಬೇಕೆಂದೂ ಗೊತ್ತಾಗಿ ಅದಕ್ಕಾಗಿ ಸಮಿತಿಯೊಂದು ರಚಿತವಾಯಿತು. ನಿಧಿಗಾಗಿ ಸಭೆಯಲ್ಲೇ ಸುಮಾರು ೫೦೦ ರೂಪಾಯಿ ಸಂಗ್ರಹಿಸಲ್ಪಟ್ಟಿತು.

ದಿವಂಗತ ಕೃಷ್ಣಪ್ಪನವರ ವಿಷಯದಲ್ಲಿ ಅಭಿಮಾನವುಳ್ಳ ಮಹನೀಯರು ಅವರ ಬಡ ಕುಟುಂಬದ ಹಾಗೂ ಸ್ಮಾರಕದ ಸಲುವಾಗಿ ಈ ನಿರ್ಮಿಸಿದ ನಿಧಿಗೆ ಉದಾರ ಸಹಾಯ ಮಾಡಬೇಕಾಗಿ ಪ್ರಾರ್ಥಿಸುತ್ತೇವೆ.

ಇದುವರೆಗೆ ಸಹಾಯವಿತ್ತ ಮಹನೀಯರ ಹೆಸರು:

೧. ಎಸ್. ರಾಘುರಾವ್ ಮತ್ತು ಎನ್. ಶಿವರಾವ್ ರೂ. ೧೦೧. ೨. ಡಾ. ಬಿ. ರಾಮ ಬಾಳಿಗ ರೂ. ೩೫. ೩. ಕೆ. ಸರ್ವೋತ್ತಮ ಪೈ ರೂ. ೫೧. ೪. ನರಸಿಂಹ ಡಾಂಗೆ ರೂ. ೫೧. ೫. ಎಮ್. ವೆಂಕಟೇಶ ಪೈ (ಬೇಂಕರ್) ರೂ. ೫೧. ೬. ಲಕ್ಷ್ಮಣ ಬಾಬು ಪೈ ರೂ. ೫೧. ೭. ಎಮ್. ಎ. ಕಾಮತ್ ರೂ. ೫೧. ೮. ಮಿಸೆಸ್ ಬಿ. ಕೆ. ಬಾಳಿಗ ರೂ. ೨೫. ೯. ಕೆ. ಉಗ್ಗಪ್ಪ ಶೆಟ್ಟಿ ರೂ. ೨೫. ೧೦. ಡಾ. ವಿ. ಪಿ. ಕಾಮತ್ ರೂ. ೨೫. ೧೧. ಎಮ್. ರಾಮಚಂದ್ರ ಪೈ ರೂ. ೧೫. ಬಿ. ವಾಮನ ಶೆಣೈ ರೂ. ೧೫.

ಸ್ಮಾರಕ ಹಾಗೂ ಸಹಾಯ ನಿಧಿಗೆ ಹಣ ಸಹಾಯ ಮಾಡುವವರು ಕಮಿಟಿಯ ಟ್ರೆಜರರ್ (ಶ್ರೀ. ಎಂ. ವೆಂಕಟೇಶ ಪೈ, ಬೇಂಕರ್) ಇವರ ಹೆಸರಿಗೆ ಕಳುಹಿಸುವುದು.

ದಿವಂಗತರು ಕೇವಲ ತಮ್ಮ ೨೯ನೆಯ ವರ್ಷ ಪ್ರಾಯದಲ್ಲಿ ಅಕಾಲ ಮೃತಿ ಹೊಂದಿದರು. ಮುದುಕಿ ತಾಯಿ, ವಿಧವೆ ಪತ್ನಿ, ಇಬ್ಬರು ಸಣ್ಣ ಮಕ್ಕಳು ಇವರ ಮರಣದಿಂದ ಅಸಹಾಯರಾಗಿ [illegible]

ಮಲಬದ್ಧತೆಯಿಂದ ನರಳಿದನು ಶಕ್ತಿ ಚೈತನ್ಯ ಕುಂದಿತು—ಪುಸ್ತಕದಲ್ಲಿ ಮಗ್ನನಾದನು ಬಾಳುವೆ ಬೇಸರವಾಯಿತು.

ದೇಹದೊಳಗಿನ ನೈರ್ಮಲ್ಯವು ಅವನನ್ನು ಉತ್ತಮ ಎಕೌಂಟೆಂಟನನ್ನಾಗಿ ಮಾಡಿತು!

ಸಾವಿರಾರು ಮಂದಿ ಮಲಬದ್ಧತೆಯಿಂದ ನರಳುತ್ತಿದ್ದಾರೆ. ಅಜೀರ್ಣ ಅಗ್ನಿಮಾಂದ್ಯಗಳು ಉಂಟಾಗುತ್ತವೆ. ಅವರ ಕೆಲಸವು ಚೆನ್ನಾಗುವುದಿಲ್ಲ, ಅವರಿಗೆ ನೌಕರಿ ಉಳಿಯುವುದೇ ಕಷ್ಟವಾಗುತ್ತದೆ. ಅವರ ಸುಖ ಜೀವನವು ಹಾಳಾಗುತ್ತದೆ. ಅವರ ಈ ಸಂಕಷ್ಟ ಅವರ ಶರೀರದೊಳಗೆ ಇರುವ ಕೆಟ್ಟ ವಸ್ತುಗಳಿಂದಲೇ ಆಗಿದೆ. ಈ ವಿಷಗಳನ್ನು ತೊಳೆದುಬಿಡಿರಿ. ಹಾಗೆ ಮಾಡಿ ಬುದ್ಧಿಯನ್ನು ಮತ್ತು ಶರೀರವನ್ನು ತೀಕ್ಷ್ಣಗೊಳಿಸಿರಿ. ತಂಪಾದ, ಹಿತವಾದ ಎಂಡ್ರೂಸ್ ಲಿವರ್ ಸಾಲ್ಟನ್ನು ದಿನನಿತ್ಯ ಒಂದು ಗ್ಲಾಸು ತೆಗೆದುಕೊಳ್ಳುವುದರಿಂದ ನಿಮ್ಮ ಉದರವು ಕ್ರಮವಾಗಿ ಶುಚಿಯಾಗಿ ಇರುತ್ತದೆ. ಅಂತರಂಗ ನೈರ್ಮಲ್ಯವುಂಟಾಗುತ್ತದೆ. ಹೊಟ್ಟೆಯ ಅವ್ಯವಸ್ಥೆಯನ್ನು ನೀಗುತ್ತದೆ. ಇಡೀ ಶರೀರವೇ ತಿರುಗಿ ಶಕ್ತಿ ಚೈತನ್ಯಗಳಿಂದ ಕೂಡುತ್ತದೆ.

ನಿಮ್ಮ ದೇಹದೊಳಗಿನ ನೈರ್ಮಲ್ಯಕ್ಕೆ ದಿನನಿತ್ಯ ಎಂಡ್ರೂಸ್ ಲಿವರ್ ಸಾಲ್ಟನ್ನು ಕುಡಿಯಿರಿ.

ANDREWS LIVER SALT



ಆರೋಗ್ಯಕರ ಪಾನೀಯ— ಉತ್ತಮವಾದ ಪಾನೀಯ— ನೈರ್ಮಲ್ಯ—ತಂಪು—ಹಿತ—ಶಕ್ತಿದಾಯಕವಿದು.

ಸಣ್ಣ ಸೈಜಿಗೆ ಆಣೆ 11
ದೊಡ್ಡ ಸೈಜಿಗೆ ರೂ. 1-4-0

ಳ ನಾಚುಗಳು ಮತ್ತು ೯೬೫ ಬಹುಮಾನಗಳು
ರೂಪಾಯಿ ೧—೪—೦ಕ್ಕೆ

ಉತ್ತಮ ಪಾಮಳದ 6 ಸೀಸೆ ಒಟ್ಟೊ ರೋಸ್ ಅಥವಾ 6 ಸೀಸೆ ರಿಂಗ್ ವರ್ಮ್ (ಗಜಕರ್ಣ) ಮುಲಾಮು; ಇವನ್ನು ಕ್ರಯಕ್ಕೆ ರೂ. 1—4—0ಕ್ಕೆ ಕೊಂಡುಕೊಂಡವರಿಗೆ ಎರಡು ಬಂಗಾರದ ಗಿಲೀಟಿನ ಧಮ್ಮಿ ರಿಸ್ಟ್ ವಾಚು (ಚೇಂಡ್ ಸಹಿತ) ಒಂದು ಧಮ್ಮಿ ಬಿ. ಟ್ರೆಂಪೀಸ್, ಒಂದು ಸೇಪ್ಟಿ ರೇಜರ್, ಒಂದು ಶೇವಿಂಗ್ ಬ್ರಶ್, ಒಂದು ಪೇಕೆಟ್ ಪೌಡರ್, ಒಂದು ಬಾಚಣಿಗೆ, ಒಂದು ಸೋಪು, ಒಂದು ಸೆಟ್ ಗುಬ್ಬಿಗಳು, ಒಂದು ಜೊರಿ, ಒಂದು 14 ಕ್ಯಾರೆಟಿನ ನಿಬ್ಬುಳ್ಳ ಪೆನ್ನು, 500 ಶೀಟು ಪೇಪರಿನ 36 ತಾಸು ಉರಿಯುವ ಒಂದು ಲೈಟು ಮತ್ತು ಅನೇಕ ಸುಂದರ ವಸ್ತುಗಳು ಅಥವಾ ಒಂದು ಸಲ ಕೀ ಕೊಟ್ಟರೆ 36 ತಾಸು ನಡೆವ 10 ವರ್ಷ ಗ್ಯಾರಂಟಿಯ ಒಂದು ಲಿವರ್ ಪೋಕೆಟ್ ವಾಚು ಸಿಗುತ್ತವೆ. ಪೋಸ್ಟೇಜ್ ಮತ್ತು ಪೇಕಿಂಗ್ ಪ್ರತ್ಯೇಕ 12 ಆಣೆ.

ವಿಳಾಸ:—
THE AMERICAN COMMERCIAL STORES. POST BOX NO. 12213, [illegible]

ವಿಚಿತ್ರ ಪ್ರಪಂಚ

ಪೋಲೆಂಡಿನ ಕೈದಿಗಳೊಡನೆ ಜರ್ಮನ ಸ್ತ್ರೀಯರ ಸರಸ

ಜರ್ಮನಿಯ ಗಂಡಸರೆಲ್ಲ ಯುದ್ಧರಂಗಕ್ಕೆ ತೆರಳಿದ್ದಾರೆ. ಅಲ್ಲಿ ಹೆಂಗಸರು ವಿರಹ ಬೇನೆಯಿಂದ ಬೇಯುತ್ತಿರುವರು. ಪೋಲಾಂಡಿನಿಂದ ಕೈದು ಮಾಡಿ ತಂದ ಕೆಲಸಗಾರರನ್ನು ನಾಜಿಗಳು ಜರ್ಮನಿಯಲ್ಲಿ ಹೊಲಕೆಲಸಗಳಿಗೆ ಹಚ್ಚಿರುವದು ತಿಳಿಯುವಷ್ಟೇ? ವಿರಹದಿಂದ ಕಂಗೆಟ್ಟ ಜರ್ಮನ ಸ್ತ್ರೀಯರಿಗೆ ಕೈದಿಗಳ ಜೀವನ ಕಂಡು ಬಹಳ ಕನಿಕರ ಉಂಟಾಗಿದೆ; ಎದೆ ಕರಗಿದೆ ಎಂದು ಅವರು ಆ ಕೈದಿಗಳೊಡನೆ ಸರಸವನ್ನು ಆರಂಭಿಸುವರು. ಆಲಿಂಗನ ಚುಂಬನ ಮೊದಲಾದ ಕರ್ಮಗಳಿಂದ ಅವರನ್ನು ಸಂತೋಷಿಸುವರು. ಜರ್ಮನ ಹೆಂಗಸರ ಈ ವರ್ತನವು ಆಚಾರಕ್ಕೂ ಆಯಿತು, ಸುಖಕ್ಕೂ ಆಯಿತು ಎಂಬಂತೆ ಆಗಿದೆಯಾದರೂ, ನಾಝಿ ಅಧಿಕಾರಿಗಳಿಗೆ ಮಾತ್ರ ಇದು ಇಷ್ಟವಾಗಿಲ್ಲ. ಕೈದಿಗಳ ಪವಿತ್ರ ಜೀವನವನ್ನು ಕೆಡಿಸಿ ಅವರನ್ನು ವ್ಯಭಿಚಾರಕ್ಕೆ ತಳ್ಳುತ್ತಾರೆಂದು ಅಧಿಕಾರಿಗಳು ಇಂಥ ಅನೇಕ ಮಂದಿ ಸ್ತ್ರೀಯರ ಮೇಲೆ ಆರೋಪ ಹೊರಿಸಿ ಕಾರಾಗೃಹಕ್ಕೆ ಕಳುಹಿಸಿದ್ದಾರೆ. ಪರಂತು ಸ್ತ್ರೀಯರ ಈ ವರ್ತನವು ಮತ್ತಷ್ಟು ಬೆಳೆಯುತ್ತಾ ಇದೆಯೆಂದು ಅಮೇರಿಕದ ಪತ್ರಿಕೆಗಳು ಬರೆಯುತ್ತಿವೆ.

ಮಾತನಾಡುವ ಹೂ—

ಪೆಂಟಗೋನಿಯ ಎಂಬಲ್ಲಿ ಅಲ್ಲಿ ಜಾತಿಗೆ ಸೇರಿದ ಒಂದು ವಿಚಿತ್ರ ಹೂವು ಇದೆ. ಇದು ಅತ್ಯಂತ ಸುಂದರವಾಗಿದೆ. ಮನೋಹರವಾಗಿದೆ ಮಾತ್ರವಲ್ಲ ಪರಸ್ಪರ ಸೇರಿಕೊಂಡು ಮಾತನಾಡುತ್ತಿರುವ ಹಾಗೆ ಇವು ಇಡೀ ಹಗಲು ಶಬ್ದ ಮಾಡುತ್ತಿರುವವು. ಸೂರ್ಯೋದಯದಿಂದ ಸೂರ್ಯಾಸ್ತಮಾನದ ತನಕ ಈ ಹೂವುಗಳ ಎಸಳುಗಳು ಶಲಾಕೆಯೊಂದಿಗೆ ಬಡಿದು ವಿಚಿತ್ರ ಸ್ವರವನ್ನು ಉಂಟುಮಾಡುವವು. ಈ ಸ್ವರವು ಅನೇಕ ಮಂದಿ ಮನುಷ್ಯರು ಒಂದೆಡೆ ಸೇರಿ ಮಾತನಾಡಿಕೊಳ್ಳುವಂತೆ ಭಾಸವಾಗುತ್ತದೆ. ಈ ಹೂವುಗಳು ಮಾತನಾಡುವ ಕೆಲಕೆಲವು ವಿಷಯಗಳು ತಮಗೂ ಅರ್ಥವಾಗುವದೆಂದು ಅಲ್ಲಿ ವಾಸವಾಗಿರುವ ಮೂಲನಿವಾಸಿಗಳು ಹೇಳುತ್ತಾರೆ. ಅದು ಹೇಗಿದ್ದರೂ ಮಾತನಾಡುತ್ತಿರುವಂತೆ ಭ್ರಮೆಯನ್ನುಂಟುಮಾಡುವ ಈ ಹೂವುಗಳು ಪ್ರಪಂಚದಲ್ಲಿ ಆಶ್ಚರ್ಯಕರವಾಗಿರುವವು.

ಮೂರು ಪಾಲು ದೊಡ್ಡದಾದ ಎದೆಗುಂಡಿಗೆಯುವ!

ಪ್ರತಿಯೊಬ್ಬನಿಗಿರುವ ಎದೆಗುಂಡಿಗೆಯು ಅವನವನ ಮುಷ್ಟಿ ಗಾತ್ರವಾಗಿರುವದೆಂದು ಮೇಲೆ ಬರೆದಿದ್ದೇವಷ್ಟೆ! ಆದರೆ ಬಂಗಾಳದ ಕಿಶಾನ ಗಂಜ ಎಂಬಲ್ಲಿ ನಡೆದ ಹೋರಾಟದಲ್ಲಿ ಕೊಲ್ಲಲ್ಪಟ್ಟ ಒಬ್ಬ ಡಕಾಯಿತನ ಶವ ಪರೀಕ್ಷೆಯು ಆಸ್ಪತ್ರೆಯಲ್ಲಿ ನಡೆದಿದ್ದಾಗ, ಆತನ ಎದೆಗುಂಡಿಗೆಯು ಸಾಮಾನ್ಯವಾಗಿ ಇರುವುದಕ್ಕಿಂತ ಮೂರು ಪಾಲಿನಷ್ಟು ದೊಡ್ಡದಾಗಿತ್ತೆಂಬುದು ತಿಳಿದುಬಂದಿದೆ. ಒಬ್ಬನ ಎದೆಗುಂಡಿಗೆಯು ಸಾಮಾನ್ಯವಾಗಿರುವುದಕ್ಕಿಂತ ಹೆಚ್ಚು ದೊಡ್ಡದಾಗಿರುವುದಕ್ಕೂ ಅವನು ಡಕಾಯಿತನಾಗುವುದಕ್ಕೂ ಏನಾದರೂ ಸಂಬಂಧವಿದೆಯೋ ಎಂದು ಶೋಧಿಸಿ ತೆಗೆಯಲಿಕ್ಕೆ ಇದು ವಿಜ್ಞಾನಿಗಳಿಗೆ ಸಂದರ್ಭವನ್ನು ಒದಗಿಸಿಕೊಟ್ಟಿದೆ.

ಎಂಟು ವರ್ಷಗಳ ಹಿಂದಿನ ಅನ್ನ ಹಾಳಾಗಲೇ ಇಲ್ಲ!

೧೯೩೨ರಲ್ಲಿ ಅಲಾಸ್ಕಾ ಪರ್ವತವನ್ನು ಹತ್ತಲಿಕ್ಕೆ ಕೆಲವು ಮಂದಿ ಸಾಹಸಿಗರು ಭಗೀರಥ ಪ್ರಯತ್ನ ಮಾಡಿದ್ದರು. ಸೂರ್ಯಕಿರಣಗಳ ಪರೀಕ್ಷೆ ಮಾಡುವದು ಈ ಪರ್ವತಾರೋಹಣದ ಉದ್ದೇಶವಾಗಿತ್ತು. ಪರಂತು ಪರ್ವತವು ಹಿಮಾಚ್ಛಾದಿತವಾಗಿದ್ದುದರಿಂದ ಆರೋಹಣವು ಸುಲಭವಾಗಿರಲಿಲ್ಲ. ಅರ್ಧ ಪ್ರಯತ್ನ ನಡೆಯುತ್ತಿದ್ದ ಹಾಗೆಯೇ ಆರೋಹಿಗಳು ಹಿಮದಲ್ಲಿ ಹೂತುಹೋದರು. ಅವರನ್ನು ಬದುಕಿಸಲಿಕ್ಕೆ ಮಾಡಿದ ಪ್ರಯತ್ನಗಳು ವ್ಯರ್ಥವಾದುವು. ಆದರೆ ಅವರು ಆ ಸಮಯ ತಮ್ಮೊಡನೆ ತೆಗೆದುಕೊಂಡು ಹೋದ ಆಹಾರ ಸಾಮಾಗ್ರಿಗಳು ಮಾತ್ರ ಒಂದಿಷ್ಟು ಹಾಳಾಗದ ಸ್ಥಿತಿಯಲ್ಲಿ ಮೊನ್ನೆ ಮೊನ್ನೆ ದೊರೆತಿವೆ. ಎಂಟು ವರ್ಷಗಳು ಕಳೆದುವಾದರೂ ಈ ಅನ್ನಾಹಾರಗಳು ಕೆಡದೆ ಇರುವದನ್ನು ಕಂಡು ಜನರಿಗೆ ಪರಮಾಶ್ಚರ್ಯವಾಗಿದೆ.

ಅಮೇರಿಕದಲ್ಲಿ ಒಂದು ವಿಚಿತ್ರ ಮಗು

ಪ್ರತಿಯೊಬ್ಬನಿಗೆ ಎದೆಗುಂಡಿಗೆ ಎನ್ನುವ ಒಂದು ಅಂಗವಿದೆ. ಇದು ಎದೆಯ ಎರಡು ಶ್ವಾಸಕೋಶಗಳ ನಡುವೆ ಸ್ವಲ್ಪ ಎಡಕ್ಕೆ ಒತ್ತಿಕೊಂಡು ಇರುತ್ತದೆ. ಅವನವನ ಮುಷ್ಟಿಯಷ್ಟು ದೊಡ್ಡದಾಗಿ, ಮಾವಿನ ಹಣ್ಣಿನಂತೆ ಜೋತಾಡಿಕೊಂಡು ಇರುತ್ತದೆ. ಪರಂತು ಅಮೇರಿಕೆ ಊರಿಗಾಂವ್ ಪ್ರಾಂತ್ಯದ ಪೋರ್ಟ್‌ಲ್ಯಾಂಡಿನ ಮಕ್ಕಳ ಆಸ್ಪತ್ರೆಯಲ್ಲಿ ಸತ್ತು ಹೋದ ಮೂರು ದಿನಗಳ ಒಂದು ಮಗುವಿನ ಎದೆಗುಂಡಿಗೆಯು ಶರೀರದ ಒಳಗೆ, ಶ್ವಾಸಕೋಶಗಳ ನಡುವೆ ಇರಲಿಲ್ಲ. ಅದು ಶರೀರದ ಹೊರಗೆ ಜೋತಾಡಿಕೊಂಡಿತ್ತು. ಊರಿಗಾಂವದ ಅಜ್ಞಾತ ದಂಪತಿಗಳಿಗೆ ಈ ವಿಚಿತ್ರ ಮಗುವು ಹುಟ್ಟಿತ್ತು. ಅದನ್ನು ೪೦೦ ಮೈಲು ದೂರದಲ್ಲಿರುವ ಪೋರ್ಟ್‌ಲ್ಯಾಂಡ ಆಸ್ಪತ್ರೆಗೆ ಮೋಟಾರಿನಲ್ಲಿ ತಂದಿದ್ದರು. ಈ ಅದ್ಭುತ ಮಗುವನ್ನು ಬದುಕಿಸಬೇಕೆಂದು ವೈದ್ಯರು ಶತಪ್ರಯತ್ನಗಳನ್ನು ಮಾಡಿದರೂ ವ್ಯರ್ಥವಾಯಿತು.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ
ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ

BHUVANENDRA PRODUCTS LTD.,
KATAPADI, S. K.

Why Doctors prescribe

"BHUVANENDRA"
NARAYANA TAILA

Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರ ನಾರಾಯಣ ತೈಲ'
ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ.
ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ಟೋಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ರಥಬೀದಿ.
ಡಾ। ಎಮ್. ಎನ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್
ಕಟಪಾಡಿ, ದ. ಕನ್ನಡ

ಸಮತಾವಾದದ ದೀವಿಟಿಗೆ ಹಿಡಿದು ಹೊರಟವರು!

ಜಯಪ್ರಕಾಶ ನಾರಾಯಣರ ಅಪೂರ್ವ ವ್ಯಕ್ತಿತ್ವ.

ಕೂಲಿಗಳೊಡನೆ ಕೂಲಿಯಾಗಿ ದುಡಿದು ಪಡೆದ ಅನುಭವ!

— ಅಸದೃಶವಾದೊಂದು ದಾಂಪತ್ಯ —

ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಪ್ರಾದುರ್ಭಾವದ ಅನಂತರ, ಭಾರತದ ರಾಜಕೀಯ ಇತಿಹಾಸದಲ್ಲಿ ನವೀನವಾದೊಂದು ಅಧ್ಯಾಯವೇ ಆರಂಭವಾಯಿತು. ಸಮತಾವಾದದ ತತ್ವವನ್ನು ಸರ್ವಪ್ರಥಮವಾಗಿ ತಂದು ಸಾರಿದ ಶ್ರೀ ಜವಾಹಿರಲಾಲರಾದರೂ, ಸಮತಾವಾದದ ವಿಷಯವಾಗಿ ರಾಷ್ಟ್ರೀಯ ಜನಜಾಗೃತಿಯುಂಟಾಗುವಂತೆ ಹೊಸಪಕ್ಷವೊಂದನ್ನೇ ಸೇರಿಸಿ ಪಂಥಕಟ್ಟಿ ಪ್ರಸಾರಮಾಡಿದ ಸಾಹಸಪೂರ್ಣ ವ್ಯಕ್ತಿ ಜಯಪ್ರಕಾಶ ನಾರಾಯಣರು. ಜನತಾ ಧುರೀಣರಿಗೆ ಒಪ್ಪುವಂತಹ ದೀರ್ಘವಾದ ಮತ್ತು ಗಂಭೀರವಾದ ವ್ಯಕ್ತಿತ್ವ, ಶುದ್ಧವಾದ ವಿಚಾರಸರಣಿ, ಜನತಾಸಂಪರ್ಕದಿಂದ ಪಡೆದ ವಿಮಲ ಅನುಭವ, ದೇಶದ ಸಲುವಾಗಿ, ಜನತೆಯ ಸಲುವಾಗಿ ಬಿಡುವಿಲ್ಲದೆ ದುಡಿವ ಹವ್ಯಾಸ, ಇವುಗಳೆಲ್ಲಾ ಕೂಡಿದ್ದು, ಜಯಪ್ರಕಾಶ ನಾರಾಯಣರು ಭಾರತದ ರಾಜಕೀಯ ಕ್ಷೇತ್ರದಲ್ಲಿ ಮುಂದುಮುಂದಾಗಿ ತೋರುವ ಒಬ್ಬ ಪ್ರಮುಖರಾದ, ಪ್ರಥಮಪಂಕ್ತಿಯ ಮುಂದಾಳುವಾಗಿದ್ದಾರೆ.

ಗ್ರೀಷ್ಮನ ಇಸವಿಯಲ್ಲಿ, ನಾಸಿಕ ಸೆರೆಮನೆಯಿಂದ ಶಿಕ್ಷೆಯ ಅವಧಿ ಮುಗಿದ ಮೇಲೆ ಜಯಪ್ರಕಾಶ ನಾರಾಯಣರನ್ನು ಸರಕಾರವು ಬಿಡುಗಡೆ ಮಾಡಿತು. ಆ ಸಮಯವನ್ನು ಭಾರತದ ರಾಜಕೀಯ ಇತಿಹಾಸಕಾರರು ಮರೆಯುವಂತಿಲ್ಲ. ವಿಧವಿಧ ಶಿಕ್ಷೆಗಳನ್ನು, ಕಠಿಣ ಬಂಧನಗಳನ್ನಾದರೂ ನಿರ್ಧಾರಪೂರ್ವಕವಾಗಿ ಅನುಭವಿಸಿದ ಮೇಲೆ ಮುಂದಿನ ಮಹಾಸಾಧನೆಯ ನಿಶ್ಚಯವನ್ನು ಮಾಡಿಕೊಂಡು ಪ್ರಭಾವಶಾಲಿಯಾದ ತೇಜಸ್ವಿಯಾದ ತರುಣನು ಕಾರಾಗಾರದಿಂದ ಹೊರಬಂದನು. ಜಯಪ್ರಕಾಶರು ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷವೊಂದನ್ನು ಸ್ಥಾಪಿಸಿ ಅಂದಿನಿಂದ ತರುಣರಲ್ಲಿ, ಕಾರ್ಯಕರ್ತರಲ್ಲಿ, ದೇಶಪ್ರೇಮಿಗಳಲ್ಲಿ, ಭಾರತದ ಜನತೆಯಲ್ಲಿ ಹೊಸಶಕ್ತಿ, ಹೊಸ ಹುರುಪು, ಹೊಸ ಆಸೆ, ಭರವಸೆಗಳನ್ನು ತುಂಬಿಸಿದರು. ಅವರ ಅಂದಿನ ಕನಸು ಇಂದು ನನಸಾಗಿ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷವು ಅತ್ಯಂತ ಬಲಶಾಲಿಯಾಗಿ ರಾಷ್ಟ್ರದ ಚಳವಳದಲ್ಲಿ ಅಗ್ರಗಣ್ಯವಾಗಿ ಕಾಂಗ್ರೆಸಿನ ಬೆನ್ನೆಲುಬಾಗಿ ನಿಂತಿವೆ.

ಜಯಪ್ರಕಾಶರ ಈ ವ್ಯಕ್ತಿತ್ವಕ್ಕೆ ಅವರು ಇಷ್ಟರಲ್ಲಿಯೇ ಪಡೆದ ಅಪಾರ ಅನುಭವವೇ ಕಾರಣವೆನ್ನಬಹುದು. ಜನತಾಜೀವನವನ್ನು ಅವರು ತೆರೆದ ಕಣ್ಣಿನಿಂದ ನೋಡಿದ್ದಾರೆ. ಬಡವರೊಡನೆ ಬಡವರಾಗಿ ದುಡಿದಿದ್ದಾರೆ. ಭಾರತದ ವಿಶಾಲತೆಯಲ್ಲಿ ಹರಡಿದ ಈ ತರಹದ ಜೀವನ ಸಮಸ್ಯೆಯು ಅವರ ವಿಚಾರವನ್ನು ಸಹಜವಾಗಿ ಕೆರಳಿಸಿದೆ. ಅವರ ಪರಿಣಾಮದಿಂದಲೇ ಸಮತಾವಾದ ದೀವಟಿಗೆ ಹಿಡಿದು ಅವರು ಇಂದು ಮುನ್ನಡೆದಿದ್ದಾರೆ.

ಪ್ರೌಢ ವಿದ್ಯಾಭ್ಯಾಸಕ್ಕಾಗಿ ಜಯಪ್ರಕಾಶರು ಅಮೇರಿಕಕ್ಕೆ ತೆರಳಿದರು. ಆದರೆ ಅಲ್ಲಿ ಅವರು ಕಲಿತದ್ದು ಕಾಲೇಜಿನ ಕೋಣೆಯಲ್ಲಿ ಕುಳಿತುಕೊಂಡಲ್ಲ; ಬಡವರೊಂದಿಗೆ ಹೊಲಕೆಲಸ ಮಾಡಿಕೊಂಡು. ಗ್ರೀಷ್ಮದಲ್ಲಿ ಅವರು ಕೆಲಿಫೋರ್ನಿಯಕ್ಕೆ ಹೋದರು. ಯುನಿವರ್ಸಿಟಿ ಪ್ರಾರಂಭವಾಗಲು ಮತ್ತೂ ಮೂರು ತಿಂಗಳ ಅವಧಿಯಿತ್ತು. ಸುಖವಾಗಿ ಆರಾಮವಾಗಿ ಜೀವನಮಾಡುವಷ್ಟು ಅವರು ಧನಿಕರಾಗಿರಲಿಲ್ಲ. ಹಾಗಾಗಿ ಹಣ್ಣಿನ ತೋಟದಲ್ಲಿ ಅವರು ಕೂಲಿಯಾಗಿ ಸೇರಿದರು. ಅನೇಕ ಮಂದಿ ಭಾರತೀಯರು ಅಲ್ಲಿ ದುಡಿದು ಜೀವನ ಮಾಡುತ್ತಿರುವರು. ಅವರಲ್ಲಿ ಸಿಕ್ಖರು ಪಠಾಣರು ಬಹುಮಂದಿ. ಅವರೊಂದಿಗೆ ಜಯಪ್ರಕಾಶರೂ ಸೇರಿದರು. ಭಾರತದಲ್ಲಿ ಪ್ರಚಂಡವಾಗಿ ನಡೆದ ಅಸಹಕಾರ ಚಳವಳವು ಅಲ್ಲಿನ ಭಾರತೀಯರ ವಿಚಾರದಲ್ಲಿಯೂ ಬಹಳ ಕ್ರಾಂತಿಯನ್ನುಂಟುಮಾಡಿತ್ತು. ಭಾರತದಿಂದ ಹೊಸತಾಗಿ ಒಂದು ವ್ಯಕ್ತಿ ಬಂದದ್ದೂ, ಅದರ ಮೇಲೆ, ಅಸಹಕಾರ ಚಳವಳದಲ್ಲಿ ಜಯಪ್ರಕಾಶರು ಕಾಲೇಜು ಬಿಟ್ಟದ್ದೂ, ಸ್ಕಾಲರ್‌ಶಿಪ್ ಕಳಕೊಂಡದ್ದೂ, ಅದರಿಂದಾಗಿ ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಕಷ್ಟವಾದದ್ದೂ—ಈ ವಿಷಯಗಳನ್ನೆಲ್ಲಾ ತಿಳಿದ ಮೇಲಂತೂ ಜಯಪ್ರಕಾಶರಿಗೆ ಅಲ್ಲಿ ಕೆಲಸ ಸಿಗುವುದು ಏನೂ ಕಷ್ಟವೇ ಆಗಲಿಲ್ಲ.

ಜಯಪ್ರಕಾಶರು ಮುಂಜಾನೆಯಿಂದ ಸಂಜೆಯ ವರೆಗೆ ಅಲ್ಲಿ ದುಡಿದರು. ದಿನಕ್ಕೆ ಹತ್ತು ತಾಸುಗಳಂತೆ, ವಾರಕ್ಕೆ ಏಳು ದಿನಗಳಂತೆ, ಶಾಂತಿ ವಿಶ್ರಾಂತಿಗಳಿಲ್ಲದೆ, ಕೆಲಸಮಾಡಿದರು. ಕೆಲಸಕ್ಕೆ, ಸಾಕಷ್ಟು ಉತ್ತೇಜಕವಾದ ಸಂಬಳವೂ ಸಿಗುತ್ತಿತ್ತು. ಇದರಿಂದ ಸ್ವಲ್ಪ ಹಣವನ್ನು ಕೂಡಿಸಿಕೊಂಡು ಅವರು ಬರ್ಕ್‌ಲಿ ಯುನಿವರ್ಸಿಟಿ ಪ್ರಾರಂಭವಾಗಲು ವಿದ್ಯಾಭ್ಯಾಸಕ್ಕೆ ಗಮನಕೊಟ್ಟರು. ಅಲ್ಲಿಯೂ ತಾನು ಒಂದು ಕಿರಿದಾದ ಕೋಣೆ ಮಾಡಿಕೊಂಡು ಆಡಂಬರಗಳಿಲ್ಲದೆ ಸ್ವಯಂಪಾಕ ಮಾಡಿ ಜೀವಿಸುತ್ತಿದ್ದರು.

ಯುನಿವರ್ಸಿಟಿಯ ಮೊದಲನೆಯ ಅವಧಿ ಮುಗಿಯಿತು. ಜಯಪ್ರಕಾಶರ ಕೈ ಬರಿದಾಯಿತು. ಮತ್ತೆ ವಿದ್ಯಾಭ್ಯಾಸ ಮುಂದುವರಿಸುವುದು ಕಷ್ಟವಾಗಲು ಬರ್ಕ್‌ಲಿಗಿಂತ ೧/೪ರಷ್ಟು ಕಡಿಮೆ ಸಂಬಳ ತೆರಬೇಕಾದ ಐಓವಾ ಯುನಿವರ್ಸಿಟಿಯನ್ನು ಸೇರಿದರು. ಅಲ್ಲಿಯಾದರೂ ವಿದ್ಯಾಭ್ಯಾಸ ಮಾಡಬೇಕಾದರೆ ಅವರು ಆಗಾಗ ಕೂಲಿಕೆಲಸ ಮಾಡಿಕೊಳ್ಳಬೇಕಾಯಿತು.

ಐಓವಾದಿಂದ ವಿಸ್ಕಾನ್ಸಿನ್ ಯುನಿವರ್ಸಿಟಿಯನ್ನು ಸೇರಿದರು. ಅಲ್ಲಿ ಜಯಪ್ರಕಾಶರ ದೃಷ್ಟಿಗೆ ಹೊಸತೊಂದು ಬೆಳಕು ಬಂದಿತು. ಅದೇ ಅವರ ಮುಂದಿನ ಬಾಳುವೆಯನ್ನು ಬೆಳಗಿಸಿತು.

ಅಮೇರಿಕವು ವಿಪುಲ ಸಂಪತ್ಸಮೃದ್ಧವಾದ ದೇಶ. ಆದರೂ ಅಲ್ಲಿ ಬಡಜನರಿಗೆ ದುರಂತವಾದ ದಾರಿದ್ರ್ಯವಿದೆ. ಇಂತಹ ರಾಷ್ಟ್ರದಲ್ಲಿಯೇ ಹೀಗೆ ಜನತೆಯ ಜೀವನದಲ್ಲಿ ಇರುವ ತಾರತಮ್ಯವು ಅವರನ್ನು ಗಾಢವಾಗಿ ವಿಚಾರಿಸುವಂತೆ ಮಾಡಿತು. ಇದಕ್ಕೆ ಪರಿಹಾರೋಪಾಯವಾದರೂ ಏನು? ಕೆಲವೇ ಜನರು ಸಂಪತ್ಸುಖದಿಂದ ಜೀವಿಸಬೇಕೇಕೆ? ಹಲವು ಜನರು ಹೀಗೆ ದುರಂತ ಜೀವನ ನಡೆಸುತ್ತಿರುವುದರಲ್ಲಿ ಏನು ನ್ಯಾಯವುಂಟು? ರಾಷ್ಟ್ರರಾಷ್ಟ್ರಗಳಲ್ಲಿರುವ ಈ ವೈಪರೀತ್ಯಕ್ಕೆ ವಿಚಾರವಂತರಾದರೂ ಏನು ಉತ್ತರಕೊಡಬಲ್ಲರು? ಈ ಪ್ರಶ್ನೆಗಳು ದಿನನಿತ್ಯ ಅವರ ತಲೆ ಸುತ್ತುಸುತ್ತುತ್ತಿದ್ದವು.

ಯುನಿವರ್ಸಿಟಿಯ ಪ್ರೊಫೆಸರರೊಬ್ಬರು ಭಾಷಣ ಮಾಡುತ್ತಾ, ರಾಷ್ಟ್ರದ ಬಡತನವು ಬಂಡವಾಳಶಾಹಿಯು ಇರುವವರೆಗೆ ದೂರವಾಗುವುದು ಸಾಧ್ಯವಿಲ್ಲವೆಂದು ಸಾರಿದರು; ಸಮತಾವಾದವೇ ರಾಷ್ಟ್ರದ ಉನ್ನತಿಗೆ ಒಂದೇ ಒಂದು ಪರಿಹಾರ ಉಪಾಯವೆಂದು ಹೇಳಿದರು. ಈ ಮಾತು ಜಯಪ್ರಕಾಶರಿಗೆ ಅಮೃತವಾಣಿಯಾಯಿತು. ಪ್ರೊಫೆಸರರು ಹೊಸ ರುಷ್ಯವಾಸಿಯಾದ ಸಮತಾವಾದಿಯಾಗಿದ್ದರು. ಅವರೊಡನೆ ಜಯಪ್ರಕಾಶರ ಸಂಬಂಧ ಬೆಳೆಯಿತು. ಅವರಿಂದ ಅನೇಕ ಪುಸ್ತಕಗಳನ್ನು ಪಡೆದರು. ಮಾರ್ಕ್ಸಿಸಂ ಅವರಿಗೆ ಸ್ಪಷ್ಟವಾಗಿ ಒಪ್ಪಿತು. ಜಯಪ್ರಕಾಶರು ಮುಂದೆ ಸಮತಾವಾದಿಯಾದರು. ವಿಜ್ಞಾನದ ತನ್ನ ಅಭ್ಯಾಸವನ್ನು ಬಿಟ್ಟು, ಅರ್ಥಶಾಸ್ತ್ರವನ್ನು ಅಭ್ಯಸಿಸಿದರು. ಮುಂದಿನ ಅವರ ವಿದ್ಯಾಭ್ಯಾಸ ನ್ಯೂಯಾರ್ಕಿನಲ್ಲಿ ನಡೆಯಿತು. ಅಲ್ಲಿರುವಾಗ ಬೇನೆಬಿದ್ದು ಅನೇಕ ತಿಂಗಳುಗಳವರೆಗೆ ಆಸ್ಪತ್ರೆ ಸೇರಬೇಕಾಯಿತು.

ಹೀಗೆ ಅಮೇರಿಕದಲ್ಲಿ ಅವರು ಸುಮಾರು ಎಂಟು ವರ್ಷಗಳನ್ನು ಕಳೆದರು. ಎಲ್ಲಾ ಶಾಸ್ತ್ರೀಯ ವಿಚಾರಗಳ ಕುರಿತು ಬಹಳ ನಿಷ್ಠೆಯಿಂದ ಅಭ್ಯಾಸ ಮಾಡಿದರು. ಅಭ್ಯಾಸ ಮಾಡುವ ಮಧ್ಯದಲ್ಲಿ ಹೊಟ್ಟೆ ಬಟ್ಟೆಗಳ ಪಾಡಿಗಾಗಿ ಮತ್ತೆ ಮತ್ತೆ ಯುನಿವರ್ಸಿಟಿಯನ್ನು ಬಿಡಬೇಕಾಗಿಯೂ ಅನೇಕ ಸಲ ಒದಗಿತ್ತು. ಹೋಟೆಲಿನಲ್ಲಿ ನೀರು ಹೊರುವುದು, ಯಂತ್ರ ಶಾಲೆಯಲ್ಲಿ ಕೆಲಸ ಮಾಡುವುದು, ಅಂಗಡಿಯಲ್ಲಿ ವ್ಯಾಪಾರ ಮಾಡುವುದು—ಹೀಗೆ ಅವರು ಜೀವನದ ವೈವಿಧ್ಯತೆಯನ್ನು ಬಹಳ ಸಮೀಪದಿಂದ ತೆರೆದ ಕಣ್ಣಿನಿಂದ ನೋಡಿ ಅನುಭವ ಮಾಡಿಕೊಂಡರು.

ಭಾರತಕ್ಕೆ ಮರಳಿಬಂದವರೇ ತನ್ನ ಜೀವನವನ್ನು ಸಾರ್ವಜನಿಕ ಕಾರ್ಯದಲ್ಲಿಯೇ ವ್ಯಯಿಸಲು ನಿಶ್ಚಯಮಾಡಿದರು. ಅಖಿಲಭಾರತ ಕಾಂಗ್ರೆಸ್ಸಿನ ಲೇಬರ್ ರಿಸರ್ಚ್ ಡಿಪಾರ್ಟ್‌ಮೆಂಟಿನ ಅಧಿಕಾರದಲ್ಲಿ ನೆಹರೂಗಳು ಅವರನ್ನು ನೇಮಿಸಿದರು. ಕಳೆದ ಸತ್ಯಾಗ್ರಹ ಕಾಲದಲ್ಲಿ ಅವರು ಕಾಂಗ್ರೆಸಿನ ಜನರಲ್ ಸೆಕ್ರೆಟರಿಯಾಗಿಯೂ ಕೆಲಸಮಾಡಿದರು. ಮುಂದೆ ಅವರಿಗೂ ಸೆರೆಮನೆಯನ್ನು ಸೇರುವ ಸಂದರ್ಭ ಬಂತು. ನಾಸಿಕ ಸೆರೆಮನೆಯಲ್ಲಿ ವಿವಿಧ ಪ್ರಾಂತ್ಯಗಳಿಂದ ಅನೇಕ ಮಂದಿ ತರುಣರು ಬಂದು ಸೇರಿದ್ದರು. ಅವರಲ್ಲಿ ಮಸಾನಿ, ಅಚ್ಯುತ ಪಟವರ್ಧನ್ ಇವರೇ ಮೊದಲಾದವರೂ ಇದ್ದರು. ಜಯಪ್ರಕಾಶರಿಗೆ ಆಗ ವಿಚಾರ ವಿನಿಮಯ ಮಾಡಲು ಸಾಕಷ್ಟು ಸಮಯ ದೊರಕಿತು. ಈ ತರುಣರೆಲ್ಲ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ರೂಪರೇಖೆಯನ್ನು ನಿರ್ಣಯಿಸಿದರು. ಮುಂದೆ ಆ ದಾರಿಯಲ್ಲಿ ಭರದಿಂದ ಕಾರ್ಯಮಾಡಲು ನಿಶ್ಚಯಿಸಿಕೊಂಡರು.

ಬಂಧನದಿಂದ ಬಿಡುಗಡೆಯಾದ ಕೂಡಲೇ ಜಯಪ್ರಕಾಶರು ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಪ್ರಬಲ ಪ್ರಚಾರವನ್ನು ಕೈಕೊಂಡರು. ದೇಶಸರ್ವತ್ರ ಅನೇಕ ಮಂದಿ ಕಾರ್ಯಕರ್ತರು ಇದಕ್ಕೆ ಬೆಂಬಲವಿತ್ತರು. ಪ್ರಾಂತಪ್ರಾಂತಗಳಲ್ಲಿ ಸಮತಾವಾದ ಹೊಸ ಕಹಳೆಯ ದನಿ ಕೇಳಿತು. ಜಯಪ್ರಕಾಶರು ಬಿಡುವಿಲ್ಲದೆ, ತಡೆಯಿಲ್ಲದೆ, ಅದನ್ನು ಊದುತ್ತಿದ್ದರು. ಜಯಪ್ರಕಾಶರು ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಜನರಲ್ ಸೆಕ್ರೆಟರಿಯಾಗಿ ಕೆಲಸಮಾಡಿದರು. ಸೋಶಿಯಲಿಸ್ಟ್ ಪಕ್ಷದಲ್ಲಿ ಎಲ್ಲಾ ಮಂದಿಯ ವಿಶ್ವಾಸಕ್ಕೆ ಪಾತ್ರರಾದ, ಎಲ್ಲ ರಾಜಕೀಯ ಪಕ್ಷದವರ ಗೌರವಕ್ಕೂ ಗುರಿಯಾದ ಮುಖಂಡರೆಂದರೆ ಜಯಪ್ರಕಾಶ ನಾರಾಯಣರೊಬ್ಬರೇ ಆಗಿದ್ದಾರೆ.

ಅವರು ಒಳ್ಳೆಯ ಲೇಖಕರೂ ಆಗಿರುವರು. ಅವರ ವಾಕ್ಯಗಳು ಸರಳ ಹಾಗೂ ಹೃದಯಂಗಮವಾದವುಗಳು. ಅವರು ಪ್ರಚಂಡ ವಾಗ್ಮಿಯಲ್ಲದಿದ್ದರೂ ತನ್ನ ಸ್ಪಷ್ಟವಾದ ಮತ್ತು ಚಿತ್ತಾಕರ್ಷಕವಾದ ತರ್ಕಶುದ್ಧವಾದ ಸರಣಿಯಿಂದ ಸಭಿಕರ ಚಿತ್ತವನ್ನು ಆಕರ್ಷಿಸಬಲ್ಲವರಾಗಿದ್ದಾರೆ.

ಜಯಪ್ರಕಾಶರು ಇನ್ನೂ ತರುಣರು. ಕೇವಲ ನಲ್ವತ್ತು ವರ್ಷ ತುಂಬಿದ ಜವ್ವನಿಗರು. ಇಷ್ಟರೊಳಗೆ ವಿಶಾಲ ಲೋಕ ಅನುಭವ ಪಡೆದವರು. ಬಹಳ ಗಂಭೀರ ಪ್ರಕೃತಿಯವರು. ಭಾರತದ ಮುಂದಿನ ಸ್ವಾತಂತ್ರ್ಯದಲ್ಲಿ ಬಡವರು, ಕೂಲಿಗಾರರು, ಕೃಷಿಕರು ಎಲ್ಲಾ ಶ್ರಮಜೀವಿಗಳೂ ತಮ್ಮ ಪಾಲನ್ನು ಪಡೆಯಬೇಕೆಂಬ ಉದಾತ್ತ ವಿಚಾರದಿಂದ ರಾಜಕೀಯದಲ್ಲಿ ಮುನ್ನಡೆಯುತ್ತಿರುವ ಉಜ್ವಲ ದೇಶಭಕ್ತರು!

ಜಯಪ್ರಕಾಶರ ಪತ್ನಿ ಪ್ರಭಾವತಿಯು ಗಂಡನೊಡನೆ ರಾಜಕೀಯದಲ್ಲಿ ಸೇರಿ ದುಡಿಯುತ್ತಾರೆ. ರಾಮಗಡ ಕಾಂಗ್ರೆಸ್ ಅಧಿವೇಶನದ ಕಾಲದಲ್ಲಿ ಜೆ. ಸ್ವಯಂಸೇವಕ ದಳದ ಮುಖ್ಯಳಾಗಿ ದುಡಿದಿದ್ದಾರೆ. ಇಂತಹ ಅನುಕೂಲ ದಾಂಪತ್ಯ ಕೇವಲ ಪುಣ್ಯಾತ್ಮರಿಗೆ ಮಾತ್ರ ದೊರಕಬಹುದು. ಪತಿಪತ್ನಿಯರಿಬ್ಬರೂ ಸೆರೆಮನೆಗೆ ಸಾಗಿದ್ದಾರೆ. ಗಂಡ ಸಮತಾವಾದಿಯಾಗಿದ್ದರೆ ಪತ್ನಿ ಗಾಂಧಿವಾದಿಯಾಗಿರುವುದೂ, ಗಂಡ ಮಾಂಸಾಹಾರಿಯಾಗಿದ್ದರೆ, ಪತ್ನಿ ಶಾಕಾಹಾರಿಯಾಗಿರುವುದೂ, ಹೀಗಿದ್ದರೂ ಅವರು ಅನ್ಯೋನ್ಯ ಸಮರಸದಿಂದ ರಾಜಕೀಯದಲ್ಲಿ ದುಡಿದು ತನ್ನ ಜೀವನವನ್ನು ರಾಷ್ಟ್ರಸೇವೆಗೆ ಅರ್ಪಿಸುತ್ತಿರುವುದೂ ಇದು ಬಹಳ ಅಸದೃಶವಾದ ಅಪೂರ್ವವಾದ ಉಜ್ವಲವಾದೊಂದು ಜೀವನವಾಗಿದೆ.

—K. K. Ra[illegible]

★ ಸಿನೆಮಾ ಪ್ರಪಂಚ ★

ನರ್ತಕಿ ಮತ್ತು ರಾಜನರ್ತಕಿ

ನ್ಯೂ ಥಿಯೇಟರ್ಸಿನ ಚಿತ್ರವಾದ 'ನರ್ತಕಿ'ಯೂ, ವಾಡಿಯಾರವರ 'ರಾಜನರ್ತಕಿ'ಯೂ ಬೇರೆ ಬೇರೆ ಕಥೆಗಳು. ನ್ಯೂ ಥಿಯೇಟರ್ಸಿನ ಚಿತ್ರದಲ್ಲಿ ಅಭಿನಯಿಸುವವರು ಲೀಲಾ ದೇಸಾಯಿ ಮತ್ತು ನಜಮುಲ್ ಹುಸೇನ್. ವಾಡಿಯಾದ ನಟಿ ಸಾಧನಾ ಬೋಸ್. 'ನರ್ತಕಿ'ಯಲ್ಲಿ ಒಬ್ಬ ಸನ್ಯಾಸಿನಿಯು ರಾಜನ ಪ್ರೇಮವನ್ನು ತಿರಸ್ಕರಿಸಿ ಬ್ರಹ್ಮಚಾರಿಯನ್ನು ಪ್ರೇಮಿಸುವುದು. 'ರಾಜನರ್ತಕಿ'ಯಲ್ಲಿ ರಾಜನರ್ತಕಿಯು ರಾಜಕುಮಾರನನ್ನೇ ಪ್ರೇಮಿಸಿ ದೇಶದ ಸಲುವಾಗಿ ಪ್ರಾಣತ್ಯಾಗ ಮಾಡುವುದು.

ಮಹಾತ್ಮಾ ವಿಧುರ

ಸಿರ್ಕೋ ಸ್ಟುಡಿಯೋದವರು ಮಹಾತ್ಮಾ ವಿಧುರ ಎಂಬ ಭಕ್ತಿಚಿತ್ರವನ್ನು ತಯಾರಿಸುತ್ತಾರೆ. ದುರ್ಗಾಖೋಟೆ ಇದರಲ್ಲಿ ಪ್ರಾಮುಖ್ಯ ಪಾತ್ರವಹಿಸುವಳು.

ಗುಲಾಂ ಮಹಮ್ಮದ್

ಭಾರತದ ಪ್ರಸಿದ್ಧ ನಟನಾದ ಗುಲಾಮ್ ಮಹಮ್ಮದನು ಈಗ ಪಂಚೋಲಿ ಆರ್ಟ್ ಪಿಕ್ಚರ್ಸಿನವರ ಚೌಧರಿ ಚಿತ್ರದಲ್ಲಿ ಅಭಿನಯಿಸುತ್ತಾನೆ.

ಆತನಿಗೆ ಪ್ರತ್ಯೇಕ ಶಕ್ತಿಯಾಗಿದೆ ಎಂಬ ಸುದ್ದಿ ಸಿನೆಮಾ ಪ್ರೇಮಿಗಳಿಗೆ ಸಂತೋಷವನ್ನುಂಟುಮಾಡುವುದು.

ಪೃಥ್ವೀರಾಜ ಹಾಲಿವುಡ್ಡಿಗೆ ಹೋಗುವನೇ?

ಭಾರತದ ಚಲಚ್ಚಿತ್ರ ನಟರಲ್ಲಿ ಪ್ರಸಿದ್ಧನಾದ ಪೃಥ್ವೀರಾಜನಿಗೆ ಹಾಲಿವುಡ್ಡಿನಿಂದ, ಅಲ್ಲಿ ತಯಾರಾಗುವ ಚಲಚ್ಚಿತ್ರದಲ್ಲಿ ನಟಿಸಲು ಒಂದು ಆಶಾಜನಕವಾದ ಆಮಂತ್ರಣ ಬಂದಿದೆಯಂತೆ.

ರಾಧಿಕಾ — ಮುಂದುವರಿಸಿದೆ

ಬೊಂಬಾಯಿಯಲ್ಲಿ ಫೆಬ್ರವರಿ ೨೧ರಂದು ಪ್ರದರ್ಶಿಸಲು ನಿಶ್ಚಯಿಸಿದ್ದ ನೇಶನಲ್ ಸ್ಟುಡಿಯೋದವರ 'ರಾಧಿಕಾ' ಚಿತ್ರವು ಸೆನ್ಸರ್‌ನವರಿಂದಾಗಿ ಪ್ರದರ್ಶನವನ್ನು ಮುಂದುವರಿಸಲಾಗಿದೆ.

ದೇವಿಕಾರಾಣಿಗೆ ದೇವಕೀ ಬೋಸರ ನಿರ್ದೇಶನ

ಬೊಂಬಾಯಿ ಟಾಕೀಸಿನವರು ತಯಾರಿಸುವ ಹಿಂದೀ ಮರಾಠೀ ಉಭಯ ಭಾಷಾ ಚಿತ್ರದಲ್ಲಿ ದೇವಿಕಾರಾಣಿ ನಟಿಸುವಳೆಂದೂ ಅದನ್ನು ದೇವಕಿ ಬೋಸರು ನಿರ್ದೇಶಿಸುವರೆಂದೂ ಸುದ್ದಿ.

ಶಾಹುಮೋಡಕ್ ಪ್ರಕಾಶದಲ್ಲಿ

ಪ್ರಕಾಶದವರ 'ಭಾರತ ಮಿಲಾಪ್' ಚಿತ್ರದಲ್ಲಿ ಪ್ರಮುಖಪಾತ್ರ ವಹಿಸಲು ಶಾಹುಮೋಡಕ್ ಪ್ರಕಾಶ್ ಚಿತ್ರ ಕಂಪೆನಿಯನ್ನು ಸೇರಿರುವನಂತೆ. ಇವನು ಪ್ರಭಾತ ಚಿತ್ರ ಕಂಪೆನಿಯ ನಟನು.

ಸುಲೋಚನಾ ಹುಮಾಯೂನದಲ್ಲಿ ಅಭಿನಯಿಸುವಳೇ?

ನೇಶನಲ್ ಸ್ಟುಡಿಯೋದವರಿಗಾಗಿ ಮೆಹಬೂಬರು ನಿರ್ದೇಶಿಸುವ ಹುಮಾಯೂನ್ ಚಿತ್ರದಲ್ಲಿ ಸುಲೋಚನಾ ಪ್ರಮುಖಪಾತ್ರವಹಿಸುವಳೆಂದು ತಿಳಿದು ಬರುತ್ತದೆ.

ಚಿತ್ರಲೇಖಕ್ಕಾಗಿ ಸ್ಪರ್ಧೆ

ಫಿಲ್ಮ್ ಕೊರ್ಪೊರೇಶನಿನವರ ಹೊಸ ಚಿತ್ರ 'ಚಿತ್ರಲೇಖ'ದ ಅಧಿಕಾರ ಪಡೆಯಲು ಹಲವು ಸಂಸ್ಥೆಗಳು ಸ್ಪರ್ಧಿಸುತ್ತಿವೆಯೆಂದೂ ಈಗಾಗಲೇ ಒಂದು ಸಂಸ್ಥೆಯವರು ೮೦,೦೦೦ವನ್ನು ಕೊಡಲು ಒಪ್ಪಿರುವರೆಂದೂ ತಿಳಿದಿದೆ.

ಕಾಲೇಜ್ ಕುಮಾರಿ

ತಮಿಳು ಚಿತ್ರ 'ಕಾಲೇಜ್ ಕುಮಾರಿ' ಎಂಬುವನ್ನು 'ಪ್ರಾಕ್ ಜ್ಯೋತಿ'ಯವರು ತಯಾರಿಸುತ್ತಿದ್ದಾರೆ. ಇದು ಒಂದು ಸಾಮಾಜಿಕ ಚಿತ್ರ. ಉತ್ತಮ ಹಾಸ್ಯ ಕಥೆಯಾಗಿದೆ.

ಸವಾನ್

ಫಿಲ್ಮ್ ಕಾರ್ಪೊರೇಶನ್ ಓಫ್ ಇಂಡಿಯಾದ ಮುಂದಿನ ಚಿತ್ರ 'ಸವಾನ್' ಎಂಬುದನ್ನು ನಿರ್ದೇಶಕ ಕೇದಾರ ಶರ್ಮರು ಆರಂಭಿಸಿದ್ದಾರೆ. ನಂದಕಿಶೋರ, ರೋಮಲಾ, ಮಾಣಿಕಾ ದೇಸಾಯಿ ಮತ್ತು ಮೆಹತಾಬ್ ಇವರಿಂದ ಕೂಡಿ ಈ ಚಿತ್ರವು ತಯಾರಾಗಲಿದೆ.

ಪನ್ನಾ

ಪ್ರಸಿದ್ಧ ಐತಿಹಾಸಿಕ ಕಥೆಯಿದನ್ನು ಅತ್ರೆ ಪಿಕ್ಚರ್ಸಿನವರು ತಯಾರಿಸುತ್ತಿದ್ದಾರೆ. ಹಿಂದೀ ಮತ್ತು ಮರಾಠೀ ಉಭಯ ಭಾಷೆಗಳಲ್ಲಿ ತಯಾರಾಗಲಿರುವುದು.

ಜೀವನ ಸರಸ

ಹರಿಶ್ಚಂದ್ರ ಪಿಕ್ಚರ್ಸ್‌ನವರು 'ಜೀವನ ಸರಸ'ವೆಂಬ ಚಿತ್ರವನ್ನು ಯುಸೂಫರ ನಿರ್ದೇಶಕತ್ವದಿಂದ ರಚಿಸುವರು. ಹರೀಶ್, ಹುಸ್ನಾಬಾನು ಇವರು, ಗೋಪಿ, ಪಾಟೀ ಪ್ರಸಾದ್ ಇವರೂ ಅಭಿನಯಿಸುವರು.

ಶಾಂತಾ ಆಪ್ಟೆಯು ತಿರಿಗಿ ವಿಚಿತ್ರವಾಗಿ ವರ್ತಿಸುತ್ತಾಳೆ

ನ್ಯೂ ಥಿಯೇಟರ್ಸ್ ಸ್ಟುಡಿಯೋದಲ್ಲಿ 'ಸಾವಿತ್ರಿ' ಎಂಬ ತಮಿಳು ಚಿತ್ರದ ತಯಾರಿ ಆಗುತ್ತಿದೆಯಷ್ಟೆ? ಇದರಲ್ಲಿ ಶಾಂತಾ ಆಪ್ಟೆಯು ಅಭಿನಯಿಸುವುದಾಗಿ ಏರ್ಪಾಡಾಗಿತ್ತು. ಒಂದು ದಿನ ಶಾಂತಾ ಆಪ್ಟೆ ಸ್ಟುಡಿಯೋಕ್ಕೆ ಬಂದಾಗ, ನಿರ್ದೇಶಕ ವೈ. ವಿ. ರಾಯರು ಆಕೆಯನ್ನು ನಿರ್ದೇಶಿಸಿದ ರೀತಿಗೆ ಆವಳು ಸಿಟ್ಟಿಗೆದ್ದಳಂತೆ. 'ಇಂತಹ ನಿರ್ದೇಶಕರ ಕೈಯಲ್ಲಿ ಅಭಿನಯಿಸುವುದು ಗೌರವಕ್ಕೆ ಕೊರತೆ' ಯೆಂದಳಂತೆ. ಮಾತ್ರವಲ್ಲದೆ ಹಿಂದೆ ಅವರು ನಿರ್ದೇಶಿಸಿ ಹಾಡಿದ ಕೆಲವು ಹಾಡುಗಳ ವಿಷಯ ತನಗೆ ಏನೂ ತೃಪ್ತಿಯಿಲ್ಲವೆಂದು ಚಡಪಡಿಸಿದಳಂತೆ. ಹೀಗೆ ಆಕೆ ಉರಿದುಬೀಳುತಿದ್ದಾಗ ಕೆಮರಾದವರು ಬಂದು, ಆಪ್ಟೆಯೊಡನೆ ನಿರ್ದೇಶಕರು ಹೇಳಿದ ರೀತಿಯ ಫೋಟೋ ತೆಗೆದರೆ ಅತ್ಯುತ್ತಮವಾಗುವುದೆಂದು ಸಮಾಧಾನ ಪಡಿಸಲು, ಅವರನ್ನೂ ದೂರಿಬಿಟ್ಟಳಂತೆ. ಇಷ್ಟುಮಾತ್ರವಲ್ಲದೆ, ಇದಕ್ಕಾಗಿ ಬೇಕಾದರೆ ನೀವು ನ್ಯಾಯವಾದಿರೆಂದು ಸ್ಟುಡಿಯೋ ಬಿಟ್ಟು ನಡೆದೇಬಿಟ್ಟಳೆಂದೂ ತಿಳಿದಿದೆ. ಇದರಿಂದ ಕಂಪನಿಯವರು ಬಹಳ ಬೇಸರಗೊಂಡು ಸಾವಿತ್ರಿ ಪಾತ್ರ ನಟಿಸುವುದಕ್ಕೆ ಸುಬ್ಬುಲಕ್ಷ್ಮಿಯನ್ನು ಆಹ್ವಾನಿಸಿರುವರೆಂದು ವದಂತಿಯಿದೆ.



ಕೋಮಲವಾದ ಚರ್ಮಕ್ಕೆ
ಹೆಚ್ಚು ಪಾಲನೆಯ ಅವಶ್ಯವಿದೆ

ನಿಮ್ಮ ಮಕ್ಕಳ ಕೋಮಲವಾದ ಚರ್ಮಕ್ಕೆ ಕುಟಿಕೂರಾ ಟ್ಯಾಲೆಟ್ ಸಾಬೂನಿನಿಂದ (Cuticura Medicated Toilet Soap) ಹೆಚ್ಚಿನ ರಕ್ಷಣೆಯನ್ನು ಕೊಡಿರಿ ಇತರ ಸಾಬೂನುಗಳು ಮಕ್ಕಳ ಚರ್ಮದ ಕೋಮಲತ್ವವನ್ನೇ ನಾಶಮಾಡುವುವು. ಕುಟಿಕೂರಾ ಸಾಬೂನಿನಲ್ಲಿರುವ (Cuticura Soap) ಕ್ರಿಮಿನಾಶಕ, ಗುಣಪಡಿಸುವ ಸುಗುಣವುಳ್ಳ ಔಷಧಿಯು ಮೈಯ ಚರ್ಮವನ್ನು ನಿರ್ಮಲವಾಗಿರಿಸಿ ಕೋಮಲವಾಗಿರಿಸುವುದು.
ಮಗುವಿನ ಸ್ನಾನವು ಸಂಪೂರ್ಣವಾಗಬೇಕಾದರೆ ಅತ್ಯಂತ ನುಣುಪಾದ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಹಾಕಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ದೊರಕುತ್ತದೆ.

ಕುಟಿಕೂರಾ ಸೋಪ್
CUTICURA SOAP

SEASON-DEPOSITS

Season Deposits are accepted at all branches at very favourable rates

Please enquire at the nearest branch.

CANARA BANK LIMITED.
ESTD. 1906

Members: Reserve Bank of India and Bombay Clearing House.

ಸಡಗರ

(೭ನೆಯ ಪುಟದಿಂದ ಮುಂದುವರಿದುದು)

ವರೆಗೆ ತನ್ನ ಅಣ್ಣನಿಗೆ ಒಂದು ಪತ್ರವನ್ನೂ ಬರೆಯುದಿದ್ದುದಕ್ಕಾಗಿ ಅವನಿಗೆ ಪಶ್ಚಾತ್ತಾಪವಾಯಿತು. ಕೂಡಲೇ ಅವನು ಒಂದು ವಾರದ ರಜೆಯನ್ನು ಪಡೆದು ರೈಲಿನಲ್ಲಿ ನಾಗಪುರಕ್ಕೆ ಪ್ರಯಾಣಮಾಡಿದನು. ಅಲ್ಲಿಂದ ಒಂದು ಕಾರನ್ನು ಬಾಡಿಗೆಗೆ ಪಡೆದು ತನ್ನ ಊರತ್ತ ಹೊರಟನು. ತನ್ನ ಅಣ್ಣನ ಮನೆಯ ಗುರುತನ್ನು ಅವನು ಹಿಡಿಯದಾದನು. ನಾಲ್ಕೇ ವರ್ಷಗಳಲ್ಲಿ ಎಷ್ಟೊಂದು ಪರಿವರ್ತನ! ಆದರೂ ಮನೆಯನ್ನು ಕಷ್ಟದಿಂದ ಗುರುತಿಸಿ ಅಲ್ಲಿ ಕಾರನ್ನು ನಿಲ್ಲಿಸಿ, ಚಾವಡಿಯನ್ನು ಹತ್ತಿದನು.

ನಿಶಾಕಾಂತನು ಒಳಗೆ ಪ್ರವೇಶಿಸುವಾಗ ೧೨ ಗಂಟೆ ಹೊಡೆದಿತ್ತು. ಅವನು ಒಮ್ಮೆ ಮನೆಯ ಒಳಭಾಗಕ್ಕೆ ದೃಷ್ಟಿ ಹೊರಳಿಸಿದನು. ಸಾಮಾನುಗಳೆಲ್ಲಾ ಅಸ್ತವ್ಯಸ್ತವಾಗಿದ್ದುವು. ಕಸಗುಡಿಸದೆ ಅನೇಕ ದಿನಗಳಾಗಿದ್ದುವು. ಅನಂತರ ಅವನ ದೃಷ್ಟಿಯು ತಾನು ಹಿಂದೆ ಓದಲು ಕುಳಿತುಕೊಳ್ಳುತಿದ್ದ ಕೋಣೆಯ ಕಡೆಗೆ ಹೊರಳಿತು. ತಾನು ಎಲ್ಲಿ ಕುಳಿತು ಓದುತಿದ್ದನೋ ಅದೇ ಸ್ಥಳದಲ್ಲಿ ೧೦ ವರ್ಷದ ಬಾಲಕನೊಬ್ಬನು ಕುಳಿತು ಗಂಭೀರವಾಗಿ ಓದುತಿದ್ದಾನೆ! ಹೊರಗಿನ ಕಾರಿನ ಸಪ್ಪಳಕ್ಕೂ ಅವನು ವಿಚಲಿತನಾಗದೆ ಇದ್ದಾನೆ! ನಿಶಾಕಾಂತನಿಗೆ ಆಶ್ಚರ್ಯವಾಯಿತು. ಅವನೇ ದೇವರಾಯನೆಂದು ಅವನಿಗೆ ಆಗಲೇ ಹೊಳೆದಿತ್ತು. ಆಗಲೇ ಅವನನ್ನು ಕರೆಯೋಣವೇ ಎಂದು ದೇವರಾಯನಿಗನಿಸಿತು. ಆದರೆ ಇದು ಸಮಯವಲ್ಲವೆಂದು ನೆನಸಿ ಸುಮ್ಮನಾದನು. ಹಳೆಯ ದಿನಗಳೆಲ್ಲಾ ನೆನಪಿಗೆ ಬಂದು ಅವನ ಕಂಠವು ಬಿಗಿದು ಬಂತು.

ಒಳಗಿಂದ ಅವನ ಅತ್ತಿಗೆಯು ಬಂದಳು. ಆದರೆ ಸಾಹೇಬರ ಪೋಷಾಕಿನಲ್ಲಿದ್ದ ನಿಶಾಕಾಂತನ ಗುರುತು ಆಕೆಗೆ ಹತ್ತಲಿಲ್ಲ. ಅವಳಲ್ಲಿ ವಿಲಕ್ಷಣವಾದ ಪರಿವರ್ತನ ಉಂಟಾಗಿತ್ತು. ಮುಖವು ಬತ್ತಿ ಹೋಗಿತ್ತು, ಸೀರೆಯಂತೂ ಎರಡು ಸಂವತ್ಸರಗಳನ್ನು ಕಂಡಿತ್ತೆನ್ನಬಹುದು. ಅವಳ ಆ ಮುಂಚಿನ ಗರ್ವವೆಲ್ಲಿ? ಈಗಿನ ದೀನತೆಯೆಲ್ಲಿ?

ಅನಂತರ ಅವಳು ಮಾತಾಡದೆ ಒಳಗೆ ಹೋಗಿ ತನ್ನ ಗಂಡನನ್ನು ಕಳುಹಿಸಿದಳು. ಅವನೂ ಕಳೆಗುಂದಿದ ಮುಖದೊಡನೆ ಹೊರಗೆ ಬಂದು, ದೊಡ್ಡ ಸಾಹೇಬರೊಬ್ಬರು ತನ್ನ ಬಡ ಮನೆಗೆ ಬಂದುದಕ್ಕೆ ಆಶ್ಚರ್ಯಗೊಂಡನು.

'ತಾವು ಯಾರು ಸ್ವಾಮಿ? ತಮಗೆ ನನ್ನಿಂದ ಏನಾಗಬೇಕಾಗಿದೆ? ಎಂದು ನಮಸ್ಕರಿಸುತ್ತ ಕೇಳಿದನು. ನಿಶಾಕಾಂತನಾದರೂ 'ನನಗೆ ಈ ಊರಿನಲ್ಲಿ ಸ್ವಲ್ಪ ಕೆಲಸವಿದೆ. ಸಾಯಂಕಾಲದ ವರೆಗೂ ನಾನು ಈ ಊರಲ್ಲಿದ್ದೇನೆ. ಈ ಹಳ್ಳಿಯಲ್ಲಿ ಊಟದ ಹೊಟೇಲಿಲ್ಲದೆ ಬಹಳ ಕಷ್ಟ ನೋಡಿ; ನನಗೆ ಊಟದ ಮಟ್ಟಿಗೆ ಸ್ವಲ್ಪ ಏರ್ಪಾಡು ಮಾಡಿಸುವಿರಾ?' ಎಂದನು ನಿಶಾಕಾಂತನು.

'ಓಹೋ, ಬಹಳ ಸಂತೋಷ. ಕೂತುಕೊಳ್ಳಿರಿ' ಎಂದು ಅವನ ಅಣ್ಣನು ಒಂದು ಚಾಪೆಯನ್ನು ಹಾಸಿದನು.

'ತಾವು ಯಾವ ಕೆಲಸದಲ್ಲಿದ್ದೀರಿ?' ಕುತೂಹಲಾಕ್ರಾಂತನಾದ ನಿಶಾಕಾಂತನು ಪ್ರಶ್ನಿಸಿದನು.

'ಕೆಲಸವೇ. ಅದನ್ನು ಹೇಳಿ ಪ್ರಯೋಜನವಿಲ್ಲ ಸ್ವಾಮಿ? ಇದ್ದ ಕೆಲಸವೂ ಹೋಗಿ ಒಂದು ವರ್ಷವಾಯಿತು. ಅನಂತರ ಹೇಗೂ ದೇವರದಯೆಯಿಂದ ಇದುವರೆಗೆ ದಿವಸಗಳನ್ನು ಕಳೆದೆನು.'

'ಅಲ್ಲಿ ಕೂತು ಓದುವ ಆ ಹುಡುಗನು ಯಾರು?'

'ಅವನೇ? ಅವನು ನನ್ನ ಮಗನು.'

'ಯಾವ ತರಗತಿಯಲ್ಲಿ ಓದುತ್ತಾನೆ?

'ಕಳೆದ ವರ್ಷ ೫ನೇ ತರಗತಿಯಲ್ಲಿದ್ದನು. ನಮ್ಮ ಬಡತನದ ದೆಸೆಯಿಂದ ಈಗ ಶಾಲೆಯನ್ನು ಕಳಕೊಂಡಿದ್ದಾನೆ. ಆದರೂ ನಾನು ಮನೆಯಲ್ಲೇ ಅವನಿಗೆ ಕಲಿಸುತ್ತೇನೆ.'

ತವ್ಮ ಮನೆಯವರ ದುರ್ದೆಸೆಯನ್ನು ಕೇಳಿ ನಿಶಾಕಾಂತನಿಗೆ ಸಂಕಟವಾಯಿತು. ತಾನು ಇಲ್ಲಿಗೆ ಬಾರದೆ ಇದ್ದಿದ್ದರೆ ಕೆಲಸವು ಕೆಟ್ಟುಹೋಗುತಿತ್ತೆಂದು ಅವನು ವಿಚಾರಿಸಿದನು. ಇನ್ನೇನು? ನಿಶಾಕಾಂತನು ತನ್ನ ಅಣ್ಣನ ಕಾಲುಗಳನ್ನು ಹಿಡಿದು ಕ್ಷಮೆ ಬೇಡುವವನಿದ್ದನು. ಅಷ್ಟರಲ್ಲಿ 'ಚಿಕ್ಕಪ್ಪಾ' ಎಂಬ ಮೃದು ಧ್ವನಿಯು ಕೇಳಿಸಿತು. ಈ ಮಧುರವಾದ ಕರೆಯನ್ನು ಅವನು ಕೇಳದೆ ನಾಲ್ಕು ಸಂವತ್ಸರಗಳು ಕಳೆದಿದ್ದುವು. ಅವನೂ ಅವನ ಅಣ್ಣನೂ ಹಿಂತಿರುಗಿ ನೋಡಿದರು. ದೇವರಾಯನು ಕೋಣೆಯಿಂದ ಚಾವಡಿಗೆ ಓಡಿಬರುತಿದ್ದಾನೆ. ಪುನಃ 'ಚಿಕ್ಕಪ್ಪಾ, ನಿನಗೆ ನಮ್ಮ ಮೇಲೆ ಇಷ್ಟು ಕೋಪವೇ? ಇವತ್ತಾದರೂ ನಮ್ಮ ಮನೆಗೆ ಬಂದೆಯಾ?' ಎನ್ನುತ್ತ ದೇವರಾಯನು ತನ್ನ ಚಿಕ್ಕಪ್ಪನನ್ನು ಅಪ್ಪಿಕೊಂಡನು.

ನಿಶಾಕಾಂತನು 'ನಿನ್ನನ್ನು ನಾನು ಮರೆಯುವುದುಂಟೇ ದೇವಾ?' ಎಂದು ಅವನನ್ನು ಎತ್ತಿಕೊಂಡನು. ದೇವರಾಯನಿಗೆ ೧೦ ವರ್ಷಗಳಾದರೂ ಅವನಿನ್ನೂ ಚಿಕ್ಕ ಮಗುವೆಂದೇ ಅವನ ಭಾವನೆ. ಮತ್ತೆ ಅಣ್ಣನ ಕಡೆಗೆ ನೋಡುತ್ತ ನಿಶಾಕಾಂತನು ದೇವರಾಯನನ್ನು ಕುರಿತು 'ನಿನ್ನ ತಂದೆಯಾಗಲಿ ತಾಯಿಯಾಗಲಿ ನನ್ನ ಗುರುತನ್ನು ಹಿಡಿಯಲು ಸಮರ್ಥರಾಗಲಿಲ್ಲ. ಆದರೆ ನೀನು ನನ್ನನ್ನು ಗುರುತಿಸಿದೆ' ಎಂದು ನಕ್ಕನು. ಅವನ ಅಣ್ಣನೂ ಅತ್ತಿಗೆಯೂ ಬಹಳ ಆಶ್ಚರ್ಯಾನ್ವಿತರಾಗಿ ಅವನ ಕಡೆ ನೋಡುತಿದ್ದರು.

★

ಮರುದಿನ ದೇವರಾಯನೂ ಕಲ್ಕತ್ತೆಗೆ ಹೊರಡುವ ಸಡಗರದಲ್ಲಿದ್ದನು.

ಸ್ತ್ರುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳು ನಿಯಮಗೇಗನುಸಾರವಾಗಿ ನಡೆಯುವ ದೇಶಗಳಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುವೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

¼ ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎ (ಅಮೇರಿ
ಆಯುರ್ವೇದ ಶಾಸ್ತ್ರಿ.
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಢಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜೆಂಟ್ಸ್: ಪಾ ಕಂಪೆನಿ, ಹಂಪನಕಟ್ಟಾ ಮಂಗಳೂರು.

THE

Canara Banking Corporation Ltd.,

(INCORPORATED IN BRITISH INDIA)

Estd: 1906

Head Office: UDIPI, S. Kanara.

Our attractive Rates on Deposits

FIXED DEPOSITS

3 to 6 months	2½% p. a.
6 to 9 „	3% „
One year	3½% „
Two years	4% „
SHORT TERM Deposits:	2½% p. a.
Current Account:	1% p. a.
Savings Bank:	2½% „

Particulars of other kinds of depositson application.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines. Unique Banking facilitie to Businessmen and interested Public.

Apply for particulars

K. R. GURU. *Managing Director*

ಜಿನ್ನರು ಪಾರ್ಲಿಮೆಂಟಿಗೆ ಕಳುಹಿಸಿರುವುದೇನು?

ಪಾಕಿಸ್ತಾನ ಕೊಡಿರೆಂದೆ?

— ಜಿನ್ನ-ಲೀಗುಗಳಿಗೆ ಪ್ರಾತಿನಿಧ್ಯವಿಲ್ಲ —

ಜಿನ್ನಾ ಸಾಹೇಬರವರು ಕಾಂಗ್ರೆಸಿನ ಸ್ವಾತಂತ್ರ್ಯ ಬೇಡಿಕೆಗಳ ಕುರಿತು ಬ್ರಿಟಿಷ್ ಸರಕಾರಕ್ಕೆ ಒಂದು ಬಿನ್ನವತ್ತಳೆಯನ್ನು ಕಳುಹಿಸಿದ್ದಾರಾಗಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲೇ ಒಬ್ಬರು ಕೇಳಿದ ಪ್ರಶ್ನೆಗೆ ಸರಕಾರದ ಉತ್ತರ ಬಂದಿದೆ. ಈ ಬಿನ್ನವತ್ತಳೆಯಲ್ಲಿ ಜಿನ್ನಾ ಸಾಹೇಬರು ಏನು ಬರೆದಿದ್ದಾರೆ ಎಂಬುದು ಸರಕಾರವು ಹೇಳಿಲ್ಲ. ಜಿನ್ನಾ ಸಾಹೇಬರನ್ನು ಕೇಳಿದ್ದಕ್ಕೆ ಅದನ್ನು ಈಗ ಹೇಳಲಾಗುವುದಿಲ್ಲ ಎಂದಿದ್ದಾರೆ. ಆದರೂ ಅವರು ಏನು ಬರೆದಿರಬಹುದೆಂಬುದನ್ನು ನಾವು ಸುಲಭವಾಗಿ ಊಹಿಸಬಹುದು. ಆದರೆ ಮುಸಲ್ಮಾನ ಸಮಾಜದ ಸರ್ವಾಧಿಕಾರಿಗಳೆಂದು ಹೇಳಿಸಿಕೊಳ್ಳುವ ಜಿನ್ನಾ ಸಾಹೇಬರಿಗೆ ಸಂಪೂರ್ಣ ಭಾರತದ ಪರವಾಗಿ ಮಾತನಾಡುವ ಅಧಿಕಾರ ಸ್ವಾತಂತ್ರ್ಯವು ಎಲ್ಲಿಂದ ಬಂದಿತು? ಅವರು ಮುಸಲ್ಮಾನ ಸಮಾಜದ ಅಖಂಡ ಮುಖಂಡರೆನ್ನುವ ಧರಲ್ಲಿಯಾದರೂ ಸತ್ಯವಿದೆಯೊ? ಇದನ್ನು ನಾವು ಪರ್ಯಾಲೋಚಿಸಬೇಕು.

ಮುಸ್ಲಿಂ ಲೀಗಿನ ಸತ್ವಪರೀಕ್ಷೆ

ಒಂದು ರಾಜಕೀಯ ಪಕ್ಷದ ಬಲಾಬಲಗಳು ಚುನಾವಣೆಯ ಸಮಯದಲ್ಲಿ ಗೊತ್ತಾಗುತ್ತವೆ. ಚುನಾವಣೆಗಳು ಪಕ್ಷಗಳ ಸತ್ವಪರೀಕ್ಷೆಯ ಒರೆಗಲ್ಲುಗಳಾಗಿವೆ. ಕಳೆದ ಬಾರಿಯ ಚುನಾವಣೆಯಲ್ಲಿ ೧೧ ಬ್ರಿಟಿಷ್ ಹಿಂದುಸ್ಥಾನ ಪ್ರಾಂತ್ಯಗಳಲ್ಲಿ — ಅವುಗಳ ಪೈಕಿ ಎಲ್ಲಿ ಮುಸಲ್ಮಾನರು ಅಧಿಕಸಂಖ್ಯಾಕರಾಗಿದ್ದಾರೆ — ಎಲ್ಲಿಯೂ ಮುಸ್ಲಿಮ್ ಲೀಗಿನ ಸದಸ್ಯರು ಬಹುಮತ ಪಡೆಯಲಿಲ್ಲ. ಹಿಂದುಸ್ಥಾನದ ಶೇಕಡಾ ೯೦ರಷ್ಟು ಮುಸಲ್ಮಾನರ ಪ್ರಾತಿನಿಧಿಕ ಸಂಸ್ಥೆಯೆಂದು ಜಂಭ ಕೊಚ್ಚಿಕೊಳ್ಳುವ ಈ ಲೀಗು ಮುಸಲ್ಮಾನರು ಅಲ್ಪಸಂಖ್ಯಾಕರಾಗಿರುವಲ್ಲಿ ಕೂಡ ಬೊಂಬಾಯಿ ಬಿಟ್ಟು ಬೇರೆಲ್ಲಿಯೂ ಒಂದು ಪಕ್ಷ ಅನ್ನಿಸಿಕೊಳ್ಳುವಷ್ಟು ಸದಸ್ಯರು ಚುನಾಯಿಸಲ್ಪಡುವಂತೆ ಮಾಡಲಿಕ್ಕೆ ಸಮರ್ಥವಾಗ

ಬಂಗಾಳದಲ್ಲೂ ನೆಲೆ ಇಲ್ಲ

ಜಿನ್ನಾ ಸಾಹೇಬರ ಪಾಕಿಸ್ತಾನದಲ್ಲಿ ಬಂಗಾಳವು ಒಂದು ಮುಖ್ಯ ಅಂಗವಾಗಿದೆ. ಆ ಪ್ರಾಂತ್ಯದಲ್ಲಿ ಕೂಡ ಲೀಗು ತಲೆ ಎತ್ತಿಕೊಂಡು ನಿಲ್ಲಲಾರದಾಯಿತು. ಅಲ್ಲಿಯ ಕೃಷಿಕ ಪ್ರಜಾ ಪಕ್ಷವೇ ಬಹುಮತದಿಂದ ಆರಿಸಿ ಬಂದಿತು. ಕೊನೆಗೆ ಆ ಪಕ್ಷದ ಮುಖಂಡರಾದ ಫಜ್ಲುಲ್ ಹಕ್ಕರ ಕಿವಿಗಳಲ್ಲಿ ಮಂತ್ರ ಗಾಳಿ ಊದಿ ಜಿನ್ನಾ ಸಾಹೇಬರು ತಮ್ಮ ಮರ್ಯಾದೆಯನ್ನು ಕಾಪಾಡಿಕೊಳ್ಳಬೇಕಾಯಿತು. ಪಂಜಾಬಿನಲ್ಲಿ ಸಹ ಮುಸ್ಲಿಂ ಲೀಗಿಗ ಬೆಂಬಲವಿಲ್ಲ. ಅಲ್ಲಿ ಮುಸಲ್ಮಾನರು ಅಧಿಕಸಂಖ್ಯಾಕರಾದರೂ, ಸಿಕಂದರ ಹಯಾತಖಾನರ ಯೂನಿಯನಿಸ್ಟ್ ಪಾರ್ಟಿಯೇ ಬಹುಮತದಿಂದ ಅಧಿಕಾರಕ್ಕೆ ಬಂದಿತು. ಸಿಕಂದರ ಹಯಾತಖಾನರು ಜಿನ್ನರ ಪಾಕಿಸ್ತಾನವನ್ನು ಘಂಟಾಘೋಷದಿಂದ ಖಂಡಿಸುತಿದ್ದಾರೆ—ಜಿನ್ನಾ ಸಾಹೇಬರ ಅಖಂಡ ಮುಖಂಡತನವನ್ನು—ಅವರ ಸರ್ವಾಧಿಕಾರತ್ವವನ್ನು—ಕಟೂಕ್ತಿಗಳಿಂದ ಖಂಡಿಸಿ ನಿಂದಿಸುತಿದ್ದಾರೆ. ಇದನ್ನು ನೋಡಿಯೂ ಕೇಳಿಯೂ ಜಿನ್ನಾ ಸಾಹೇಬರು ಸುಮ್ಮಗಿದ್ದಾರೆ—ಎಲ್ಲವನ್ನೂ ಮಾತೆತ್ತದೆ ಸಹಿಸಿಕೊಳ್ಳುತಿದ್ದಾರೆ. ಮತ್ತೆ ಮುಸಲ್ಮಾನರು ಅಧಿಕರಾಗಿರುವ ಗಡಿನಾಡಿನ ವಿಷಯ. ಇಲ್ಲಿ ಮುಸಲ್ಮಾನರೇ ಹೆಚ್ಚಾಗಿರುವರು. ಹಿಂದುಗಳ ಸಂಖ್ಯೆ ತೀರಾ ಅಲ್ಪ. ಆದರೂ ಇಲ್ಲಿ ಲೀಗಿಗೆ ಕಾಲೂರಲಿಕ್ಕೆ ಕೂಡ ಸ್ಥಳ ಸಿಕ್ಕದಾಯಿತು. ಕಾಂಗ್ರೆಸಿನ ಸದಸ್ಯರು ಬಹುಮತದಿಂದ ಆರಿಸಿ ಬಂದರು. ಸಿಂಧದಲ್ಲಂತೂ—ಯಾವ ತಿರುಮಂತ್ರ ಹಾಕಿದರೂ, ಎಂಥ ಭೇದೋಪಾಯಗಳನ್ನು ಹೂಡಿದರೂ—ಜಿನ್ನಾ ಸಾಹೇಬರು ಮುಖ ತೋರಿಸಲಾರದವರಾಗಿದ್ದಾರೆ. ಅಲ್ಲಾಬಕ್ಷರವರೇ ಅಲ್ಲಿ ಅಧಿಕಾರದಲ್ಲಿದ್ದಾರೆ.

ಮುಸಲ್ಮಾನರ ಪ್ರಾತಿನಿಧಿಕ ಸಂಸ್ಥೆ

ಮುಸ್ಲಿಂ ಲೀಗು ಭಾರತದ ಶೇಕಡಾ ೯೦ರಷ್ಟು ಮುಸಲ್ಮಾನರ ಪ್ರಾತಿನಿಧಿಕ ಸಂಸ್ಥೆಯೆಂದು ಬಡಾಯಿ ಕೊಚ್ಚಿಕೊಳ್ಳಬಹುದು. ಆದರೆ ಇದರ ರಹಸ್ಯವನ್ನು ಎಲ್ಲರೂ ಬಲ್ಲವರಿದ್ದಾರೆ. ಭಾರತದಲ್ಲಿ ಲೀಗು ಮಾತ್ರವಲ್ಲದೆ ಇನ್ನೂ ಅನೇಕ ಮುಸಲ್ಮಾನ ಸಂಘ ಸಂಸ್ಥೆಗಳಿವೆ. ಈ ಎಲ್ಲಾ ಸಂಸ್ಥೆಗಳು ಲೀಗನ್ನು ತೀವ್ರವಾಗಿ ಖಂಡಿಸುತ್ತವೆ; ವಿರೋಧಿಸುತ್ತವೆ. ಮುಸಲ್ಮಾನರಲ್ಲಿ ಅಧಿಕಸಂಖ್ಯಾಕರಾಗಿರುವ ಮೋಮಿನರಿಗೆ ಜಿನ್ನಾ ಸಾಹೇಬರಲ್ಲಿ ಎಳ್ಳಷ್ಟೂ ವಿಶ್ವಾಸವಿಲ್ಲ. ಲೀಗಿನ ಕಾರ್ಯಕ್ರಮಗಳನ್ನು ಅವರು ಸಂದೇಹ ದೃಷ್ಟಿಯಿಂದ ನೋಡುತಿದ್ದಾರೆ. ಶೀಯರು ಸಂಪೂರ್ಣವಾಗಿ ಲೀಗಿನಿಂದ ಬೇರೆಯಾಗಿದ್ದಾರೆ; ತಮಗೆ ಲೀಗಿನ ಯಾವ ಸಂಪರ್ಕವೂ ಬೇಡವೆಂದು ಅವರು ಅದಕ್ಕೆ ದೂರದಿಂದ ನಮಸ್ಕಾರ ಮಾಡುತ್ತಾರೆ. ಮತ್ತೆ ಜಮಾಯತ್-ಉಲ್-ಉಲೇಮಾರವರಂತೂ ಬಹುಕಾಲದಿಂದ ಲೀಗಿನ ಪರಮ ವಿರೋಧಿಗಳಾಗಿರುವರು. ರಾಷ್ಟ್ರೀಯ ಮುಸಲ್ಮಾನರೂ ಅಹರಾರರೂ ಲೀಗಿನ ಬದ್ಧ ವೈರಿಗಳು.

ಜಿನ್ನಾ ಸಾಹೇಬರ ಸ್ಥಾನ

ಹೀಗೆ ನೋಡಹೋದರೆ ಲೀಗು ಎಂಬುದು ಬರೇ ಕೆಲವು ಜನ ಮುಸಲ್ಮಾನರ ಸಂಸ್ಥೆಯಾಗಿದೆ. ಅದು ಭಾರತದ ಮುಸಲ್ಮಾನರ ಪ್ರಾತಿನಿಧಿಕ ಸಂಸ್ಥೆಯೇ ಅಲ್ಲ. ಜಿನ್ನಾ ಸಾಹೇಬರು ಈ ಕೆಲವು ಜನ ಮುಸಲ್ಮಾನರ ಮುಖಂಡರು. ಲೀಗಿಗೆ ಮತ್ತು ಜಿನ್ನಾ ಸಾಹೇಬರಿಗೆ ಮುಸಲ್ಮಾನ ಸಮಾಜದ ಪರವಾಗಿ ಮಾತನಾಡುವ ಅಧಿಕಾರ ಸ್ವಾತಂತ್ರ್ಯಗಳು ಇರುವದಿಲ್ಲ. ಹಾಗಿದ್ದ ಮೇಲೆ ಅವರು ಬ್ರಿಟಿಷ ಸರಕಾರಕ್ಕೆ ಒಪ್ಪಿಸಿದ್ದೆಂಬ ಆ ಬಿನ್ನವತ್ತಳೆಯಲ್ಲಿ ಏನಿದ್ದರೇನು? ಅದು ಭಾರತೀಯರನ್ನು ಯಾವ ಪ್ರಕಾರವೂ ಕಟ್ಟಿಹಾಕದು. ಇವರ ಕಾರ್ಯಗಳ ಪರಿಣಾಮವಾಗಿ ಜನತೆಯು ಸ್ವಲ್ಪ ಸಮಯದ ತನಕ ಕಷ್ಟ ಪಡಬೇಕಾಗುವದು. ಸ್ವಾತಂತ್ರ್ಯ ಸಂಪಾದನೆಯ ಜನತೆಯ ಪ್ರಯತ್ನಗಳಿಗೆ ಅನಾವಶ್ಯಕ ವಿಘ್ನ ಬಿಕ್ಕಟ್ಟುಗಳು ಬರುವವು.

HALFTONE & LINE
BLOCK MAKING
UNDERTAKEN

Sharada Press,
MANGALORE

ವಿಜ್ಞಾನಯುಗ

ಮೊಸಳೆಯು ಜೀವನದ ನೂತನ ಹಡಗ!

ಅಮೆರಿಕದ ಪ್ರಸಿದ್ಧ ವಿಜ್ಞಾನಿಯಾಗಿರುವ ರೋನಾಲ್ಡ ರೊಬ್ಲಿಂಗ ಎಂಬಾತನು ಕಳೆದ ಏಳು ವರ್ಷಗಳಿಂದ ಸತತ ಪ್ರಯತ್ನ ಮಾಡಿ ಒಂದು ಹೊಸ ಜಾತಿಯ ಹಡಗನ್ನು ನಿರ್ಮಿಸಿದ್ದಾನೆ ಪ್ರಪಂಚದ ಎಲ್ಲೆಡೆಗಳಲ್ಲಿ ಯುದ್ಧವು ಹೊಗೆ ಹೊಡಿ ಪ್ರಜ್ವಲಿಸುವ ಈ ಸಮಯದಲ್ಲಿ ರೊಬ್ಲಿಂಗನು ಸಾಹಸಪಟ್ಟು ಮಾಡಿದ ಈ ಅಪ್ರತಿಮ ಶೋಧೆಯನ್ನು ಪ್ರತಿಯೊಬ್ಬನು ಶ್ಲಾಘಿಸುತ್ತಿರುವರು ಈ ಹಡಗು ಶತ್ರುಪಕ್ಷದ ಎಲ್ಲಾ ಒಗೆಯು ಧಾಳಿಗಳನ್ನು ತಡೆಯಲಿಕ್ಕೆ ತಕ್ಕ ಭದ್ರತೆಯನ್ನು ಪಡೆದಿರುತ್ತದೆ. ಇದು ಮಿತ್ರ ಪಕ್ಷದ ಸೈನಿಕರನ್ನು ಸಾವಿರಗಟ್ಟಲೆಯಿಂದ ಹೇರಿಕೊಂಡು ಶತ್ರುಪಕ್ಷದ ರಾಜ್ಯಗಳ ಮೇಲೆ ತಂದಿಳಿಸುವ ಕಾರ್ಯದಲ್ಲಿ ತುಂಬಾ ಹೆಸರು ಪಡೆಯುವದು. ಇದರ ವಿಶೇಷತೆಯೆಂದರೆ ಇದು ಮೊಸಳೆಯು ಹಾಗೆ ಸಮುದ್ರದಲ್ಲಿಯೂ ನೆಲದ ಮೇಲೆಯೂ ಚಲಿಸಬಲ್ಲದು. ಇಂಥ ೩೦೦ ಹಡಗುಗಳನ್ನು ಕಟ್ಟಬೇಕೆಂದು ಅಮೆರಿಕಾ ಸರಕಾರದ ನೌಕಾ ಪಡೆಯವರು ಆಲೋಚಿಸಿದ್ದಾರೆ. ಒಂದೊಂದು ಹಡಗನ್ನು ಕಟ್ಟಲಿಕ್ಕೆ ನೂರುವರೆ ಮಿಲಿಯ ಡಾಲರುಗಳು ಖರ್ಚಾಗಬಹುದೆಂದು ಅಂದಾಜು ಮಾಡಿರುವರು

◈ ◈

ಲಿಬರೇಟರು ವಿಮಾನಗಳು

ನಾಝಿಗಳ ರಾಕ್ಷಸೀ ಶಾಸನದಿಂದ ಪ್ರಪಂಚವನ್ನು ಉದ್ಧರಿಸುವದಕ್ಕಾಗಿಯೇ ಹುಟ್ಟಿದುದೆಂಬ ಅರ್ಥವನ್ನು ಇಟ್ಟುಕೊಂಡು ಅಮೇರಿಕವು ಲಿಬರೇಟರ್ ಎಂಬ ಹೆಸರಿನ ಒಂದು ಜಾತಿಯ ಅತ್ಯಾಧುನಿಕ ವಿಮಾನಗಳನ್ನು ತಯಾರಿಸಿ ಬ್ರಿಟನಿಗೆ ಕಳುಹಿಸಿಕೊಟ್ಟಿದೆ. ಇವರಲ್ಲಿ ನಾಲ್ಕು ಎಂಜಿನುಗಳು ಇರುವವು ಬಹು ದೂರದ ತನಕ ಬಾಂಬುಗಳನ್ನು ಸುರಿಸುತ್ತ ಹೋಗುವ ವಿಶೇಷ ತರದ ಶಕ್ತಿಯು ಈ ವಿಮಾನಗಳಿಗೆ ಇರುತ್ತದೆ. ತುಂಬ ಬಾಂಬುಗಳನ್ನು ಹೇರಿದಾಗ ಈ ವಿಮಾನದ ಭಾರವು ೧೮ ಟನ್ ಆಗುವದು. ಆಗಲೂ ಅದು ಗಂಟೆಗೆ ೩೦೦ ಮೈಲುಗಳ ವೇಗದಿಂದ ಹಾರಬಲ್ಲದು. ಮತ್ತು ೧೦ ತಾಸುಗಳ ತನಕ ಎಡೆಬಿಡದೆ ಹಾರಾಡಿ ವಿಲ್ದಾಣಕ್ಕೆ ಮರಳಬಲ್ಲದು. ಅಂದರೆ ಇದು ಕಾಲಮಾನ ಋತುಭೇದಗಳನ್ನು ಎಣಿಸದೆ ಯುರೋಪನ್ನೆಲ್ಲಾ ಸಂಚರಿಸಿ ಬರಬಹುದು ಇಂಥ ೫೦ ವಿಮಾನಗಳ-

ದ್ದು ಅವುಗಳನ್ನು ಆರನ್ನು ಈಗಾಗಲೇ ಅಮೆರಿಕವು ಬ್ರಿಟಿಷರಿಗೆ ಕೊಟ್ಟಿರುತ್ತದೆ. ಉಳಿದವು ಇನ್ನು ಸ್ವಲ್ಪವೇ ದಿನಗಳಲ್ಲಿ ಬ್ರಿಟನಿಗೆ ಹೊರಡಲು ಸಿದ್ಧವಾಗುವವು

◈ ◈

ಮಿನಿಟಿಗೆ ೩೦೦ ಗುಂಡು ಹೊಡೆವ ಕೋವಿಗಳು

ಇವು ಮಿನುಟಿಗೆ ಮುನ್ನೂರರಂತೆ ಗುಂಡುಗಳನ್ನು ಹೊಡೆಯಬಲ್ಲವು, ಮತ್ತು ಒಂದು ಸಾವಿರ ಗಜಗಳಷ್ಟು ದೂರದಲ್ಲಿರುವ ಶತ್ರುವಿಮಾನಗಳಿಗೆ ಹೊಡೆದು ಅವನ್ನು ಕೆಡವಿ ಹಾಕಲಿಕ್ಕೂ ಈ ಕೋವಿಗಳು ಸಮರ್ಥವಾಗಿವೆ ಇಂಥ ಕೋವಿಗಳನ್ನು ಬ್ರಿಟಿಷರು ತಮ್ಮ ಯುದ್ಧ ವಿಮಾನಗಳಿಗೆ ಜೋಡಿಸುತಿದ್ದಾರೆ ಹೀಗೆ ಜೋಡಿಸುವುದರಿಂದ, ಶತ್ರು ವಿಮಾನಗಳ ಹಲ್ಲೆಯನ್ನು ತಡೆಯಲಿಕ್ಕೂ, ಅವುಗಳನ್ನು ಬೆನ್ನಟ್ಟಿ ಹಿಂದಕ್ಕೋಡಿಸಲಿಕ್ಕೂ, ಕೆಡವಿ ಹಾಕಿ ನಾಶಮಾಡಲಿಕ್ಕೂ ಬ್ರಿಟಿಷ್ ವಿಮಾನಗಳು ಸಮರ್ಥವಾಗುವವು ವಿಮಾನಗಳು ಈ ಎಲ್ಲಾ ಕೆಲಸಗಳಿಗೆ ಬರಲಿಕ್ಕೆಬೇಕಾಗಿ ಬ್ರಿಟಿಷರು ಈ ವಿಮಾನಗಳನ್ನು ಗುಂಡು ತಾಗದ ಲೋಹ ಕವಚಗಳಿಂದ ಮುಚ್ಚುತ್ತಾರೆ. ಬೇಕಾದ ಇತರ ಶಸ್ತ್ರೋಪಕರಣಗಳನ್ನು ಇಡುತ್ತಾರೆ ಹೀಗಾಗಿ ಇವು ಈಗ ಬಳಕೆಯಲ್ಲಿರುವ ನಾಝೀ ವಿಮಾನಗಳಿಗಿಂತ ಎಷ್ಟೋ ಪಾಲು ಉತ್ತಮವೆನ್ನಿಸಿಕೊಳುವವು

◈ ◈

ಗುರಿ ನೋಡುವ ಹೊಸ ಯಂತ್ರ

ಆಕಾಶದಿಂದ ಹಾರಿಕೊಂಡು ಬರುವ ಶತ್ರುವಿಮಾನಗಳನ್ನು ನೆಲದಿಂದ ಗುರಿಯಿಟ್ಟು ಹೊಡೆಯಲಿಕ್ಕಾಗುವಂತೆ ಅಮೇರಿಕದ ಸೇನಾಖಾತೆಯ ವಿಜ್ಞಾನಿಗಳು ಒಂದು ಅದ್ಭುತ ಯಂತ್ರಸಾಧನವನ್ನು ಶೋಧಿಸಿ ತೆಗೆದಿರುವರು. ವಿಮಾನಗಳು ಹಾರಿಬರುವಾಗ ಈ ಯಂತ್ರಸಾಧನವು ಅದರ ಹಾರಿಬರುವ ವೇಗವನ್ನು ತಿಳಿದು, ಯಾವ ದಿಕ್ಕಿಗೆ ಗುಂಡು ಹೊಡೆದರೆ ಅದು ವಿಮಾನಕ್ಕೆ ತಾಗಿ ವಿಮಾನವು ಕೆಳಕ್ಕೆ ಉರುಳುವದು ಎಂಬುದನ್ನು ಸೈನಿಕರಿಗೆ ಹೇಳಿಕೊಡುತ್ತದೆ. ಇದಕ್ಕೆ ಸರಿಯಾಗಿ ಗುಂಡು ಹೊಡೆದರೆ ಗುಂಡು ಹೋಗಿ ವಿಮಾನಕ್ಕೆ ನಾಟುವುದು ಖಂಡಿತ ಅದು ಗುರಿ ತಪ್ಪುವುದೆಂಬ ಹೆದರಿಕೆಯೇ ಇಲ್ಲ ಇದರಂತೆ ಈ ವಿಜ್ಞಾನಿಗಳು ಬೋಂಬ್ ಸ್ಯಾಟ್ ಎಂಬ ಇನ್ನೊಂದು ಉಪಕರಣವನ್ನು ಸಜ್ಜುಗೊಳಿಸಿರುವರು ಇದು ಹಾರಾಡಿಕೊಂಡು ಹೋಗುತ್ತಿರುವ ವಿಮಾನಗಳಿಂದ ವೈರಿಠಾಣೆಗಳ ಮೇಲೆ ಗುರಿತಪ್ಪದ ಹಾಗೆ ಬಾಂಬು ಹಾಕಲು ಅನುಕೂಲವಾಗಿದೆ ಇವೆರಡೂ ಸಾಧನಗಳನ್ನು ಅಮೇರಿಕವು ಬ್ರಿಟಿಷರ ಉಪಯೋಗಕ್ಕೆ ಕೊಟ್ಟಿರುವದಾಗಿ ಹೇಳಲಾಗುತ್ತದೆ

◈ ◈

ನವನವೀನ ಯುದ್ಧ ವಿಮಾನಗಳು

ಆಕಾಶದಲ್ಲಿ ಹಾರಾಡಬಲ್ಲ ಸುಭದ್ರ ಕೋಟೆಗಳೆಂಬ ಅನ್ವರ್ಥನಾಮವನ್ನು ಪಡೆಯುವಂಥ ವಿಜಾತೀಯ ಯುದ್ಧವಿಮಾನಗಳನ್ನು ಇಂಗ್ಲೆಂಡಿನಲ್ಲಿ ತಯಾರಿಸಲಾರಂಭಿಸಿರುವರು ಇವು ಎಲ್ಲಿಯಾದರೂ ಒಂದೊಂದೇ ಇದ್ದರೂ ಸಾಕು ಇದನ್ನು ನೋಡಿದ ಮಾತ್ರಕ್ಕೇ ನಾಝಿ ವಿಮಾನಗಳು ಪಲಾಯನ ಮಾಡುವ ಈ ಯುದ್ಧ ವಿಮಾನಗಳು ರಚಿಸಲ್ಪಟ್ಟವು. ಕೆಲವು ದಿನಗಳ ಹಿಂದೆ ಇಂಥ ಒಂದು ವಿಮಾನವು ಹಗಲಿನಲ್ಲಿಯೆ ಹಾರಾಡಿಕೊಂಡು ಹಾಲೆಂಡಿಗೆ ಹೋಗಿ ಅಲ್ಲಿ ಬಹಳ ಕೆಳಗಿನಲ್ಲಿ ಹಾರಾಡುತ್ತ ನಾಝಿಗಳ ಒಂದು ವಿಮಾನ ನಿಲ್ದಾಣವನ್ನು ಧ್ವಂಸ ಮಾಡಿತಂತೆ ಅದನ್ನು ಎದುರಿಸಲಿಕ್ಕೆ ಅಥವಾ ಹಿಂದಟ್ಟಲಿಕ್ಕೆ ಒಂದೇ ಒಂದು ನಾಝಿ ವಿಮಾನವು ಬರಲಿಲ್ಲ ಕಾರಣವೇನೆಂದರೆ ದಕ್ಕೆ ಮೊದಲು ಕೆಲವು ನಾಝಿ ವಿಮಾನಗಳು ಇಂಥ ಒಂದು ವಿಮಾನವನ್ನು ಎದುರಿಸಿ ಆತ್ಮಘಾತಮಾಡಿಕೊಂಡಿದ್ದವು. ಬ್ರಿಟಿಷರ ಈ ಹೊಸ ತರದ ವಿಮಾನಗಳು ಪದ್ರವಾದ ಕೋಟೆಗಳ ಯಾರಿಗೂ ಮಣಿಯದಂತಿರುವವು

◈ ◈



NOTICE BY SUBSTITUTED SERVI[CE]

In the Court of the Distric[t] Munsif of Mangalore

(O S No 65/1940)

R E P No 767/1940

Between

K Ramesh Rao ... *Plaintiff – Petition[er]*

and

K Srinivasa Alva & anot[her] ... *Defendants – Re[s]ponden[ts]*

To

1st Respondent —K. Srinivasa Alva son of Kalmap[ady] Kotiappa Alva Advoc[ate] residing in Mangalore To[wn]

Please take notice that [the] Petitioner has made appl[ica]tion to the above court [for] execution of decree in O [S] No 65/1940 and you [are] hereby required to app[ear] before the said court at 10 A M on the 1st day of Ap[ril] 1941 to show cause why e[x]ecution should not be gran[ted] and arrest warrant iss[ued] against you.

Mangalore, 15-3-1941 } H Keshava Kan[...] Vakil for Petitio[ner]

ಸ್ವದೇಶಾಭಿಮಾನಿಯ[...]
ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಭೀಕರ ಕೊಲೆ

ಪ್ರಣಯ ಸಂಬಂಧದ ಪ್ರಸಂಗ ಡಾ। ಆಲ್ಬುಕರ್ಕ್ ಬಂಗಲೆಯಲ್ಲಿ ನಡೆದ ಘಟನೆ

ಡ್ರೈವರನೊಬ್ಬನ ದಸ್ತಗಿರಿ

ಬೆಂಗಳೂರು

ಸೆನಟಾಫ್ ರಸ್ತೆಯಲ್ಲಿರುವ ಡಾ (ಮಿಸ್) ಆಲ್ಬುಕರ್ಕ್‌ರವರ ಬಂಗಲೆಯಲ್ಲಿ ಕಳೆದ ವಾರ ಒಂದು ಭೀಕರ ಕೊಲೆ ಕೃತ್ಯವು ನಡೆಯಿತು. ರೇಸ್‌ಕೋರ್ಸಿನಲ್ಲಿ ಕೆಲಸ ಮಾಡುವ ಬಾಲು ಎಂಬ ಡ್ರೈವರನ್ನು ಈ ಬಂಗಲೆಯಲ್ಲಿ ಕೊಲೆ ಮಾಡಲ್ಪಟ್ಟನೆಂದು ಅಲ್ಸೂರು ಗೇಟ್ ಸ್ಟೇಷನ್ ಪೋಲೀಸಿನವರಿಗೆ ಫಿರ್ಯಾದು ಬಂದಿತು.

ಪೋಲೀಸಿನವರು ಸ್ಥಳಕ್ಕೆ ಹೋಗಿ ನೋಡಿದಾಗ ಬಾಲುವು ಮೃತಿ ಹೊಂದಿದ್ದ ತಲೆಯಲ್ಲಿ ಪೆಟ್ಟಾಗಿ ರಕ್ತವು ಸುರಿಯುತ್ತಿತ್ತು ಮೈಮೇಲೆ ಇತರ ಗಾಯಗಳೂ ಆಗಿದ್ದವು ಇವನು ಸತ್ತು ಬಿದ್ದ ಪಕ್ಕದಲ್ಲೇ ಒಬ್ಬ ಹೆಂಗಸು ಮಲಗಿದ್ದಳು ಒಂದೇ ಹಾಸಿಗೆಯ ಮೇಲೆ ಇವರಿಬ್ಬರೂ ಮಲಗಿದ್ದರು. ಈಕೆಯು ಕ್ರಿಶ್ಚಿಯನ್ ಜಾತಿಯ ಪುಟ್ಟಮ್ಮ ಎಂಬ ಒಬ್ಬ ದಾದಿಯೆಂದೂ, ಇವಳು ಡಾ ಆಲ್ಬುಕರ್ಕ್‌ರವರ ಕೈಕೆಳಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದಳೆಂದೂ ಹೇಳಲಾಗಿದೆ ಪುಟ್ಟಮ್ಮನಿಗೆ ಕೈಗಳ ಮೇಲೂ ಬೆನ್ನಿನ ಮೇಲೂ ಗಾಯಗಳಾಗಿತ್ತು. ರಕ್ತವು ಧಾರಾಕಾರವಾಗಿ ಹರಿದಿದ್ದ ಸ್ಥಳದಲ್ಲೇ ಇವಳು ಮಲಗಿದ್ದಳು ಹಾಸಿಗೆ ಮತ್ತು ಬಟ್ಟೆಗಳೆಲ್ಲಾ ರಕ್ತಮಯವಾಗಿದ್ದವು.

ಪೋಲೀಸಿನವರು ಬಾಲುವಿನ ಶವದ ಮಹಜರು ಕ್ರಮವನ್ನು ನಡೆಸಿದರು ಶವವನ್ನು ವೈದ್ಯ ಪರೀಕ್ಷೆಗೆ ಕಳುಹಿಸಿಕೊಟ್ಟರು ದಾದಿ ಪುಟ್ಟಮ್ಮನು ಗುಣ ಹೊಂದುತ್ತಿದ್ದಾಳೆ

ಈ ಕೊಲೆ ಕೃತ್ಯದ ಸಂಬಂಧದಲ್ಲಿ ಪೋಲೀಸಿನವರು ಮೋಟಾರ್ ಡ್ರೈವರ್ ಸೈಯದ್ ಅಹಮದ್ ಎಂಬಾತನನ್ನು ದಸ್ತಗಿರಿ ಮಾಡಿದ್ದಾರೆ. ಈತನು ಡಾ ಆಲ್ಬುಕರ್ಕ್‌ರವರ ಬಳಿ ಕೆಲಸ ಮಾಡುವ ಮೋಟಾರು ಡ್ರೈವರನು.

ಮೃತಿ ಹೊಂದಿದಾತನೂ ಇವನೂ ಒಬ್ಬಳಲ್ಲೇ ಪ್ರಣಯ ಸಂಬಂಧವನ್ನು ಹೊಂದಿದ್ದುದೇ ಈ ಕೃತ್ಯಕ್ಕೆ ಕಾರಣವಾಯಿತೆಂದೂ ತನ್ನ ಪ್ರಣಯಿನಿಯು ಮತ್ತೊಬ್ಬನೊಡನೆ ಪ್ರಣಯ ಸಂಬಂಧವನ್ನಿಟ್ಟುಕೊಂಡಿದ್ದುದನ್ನು ಕಂಡು ಸಹಿಸಲಾರದೆ ಈ ಕೃತ್ಯವನ್ನು ನಡೆಸಿರಬಹುದೆಂದೂ ಊಹಿಸಲಾಗಿದೆ

ಸೈಯದ್ ಅಹಮದನು ತುಮಕೂರಿಗೆ ಹೋಗಿದ್ದನೆಂದೂ ಅವನು ಅಲ್ಲಿಂದ ವಾಪಾಸು ಬಂದಾಗ ಅವನ ಬಳಿ ರಕ್ತಮಯವಾಗಿದ್ದ ಕೆಲವು ಬಟ್ಟೆಗಳು ಸಿಕ್ಕಿದವೆಂದೂ ಅವನನ್ನು ಪೋಲೀಸಿನವರು ವಶಪಡಿಸಿಕೊಂಡಿರುವರೆಂದೂ ಗೊತ್ತಾಗಿದೆ. ಇವನನ್ನು ದಸ್ತಗಿರಿ ಮಾಡಲಾಗಿದೆ.

ಈ ಕೃತ್ಯ ನಡೆದ ರಾತ್ರಿ ಡಾ। ಆಲ್ಬುಕರ್ಕ್‌ರವರು ಮನೆಯಲ್ಲಿರಲಿಲ್ಲವೆಂದೂ ತುಮಕೂರಿಗೆ ಹೋಗಿದ್ದರೆಂದೂ ಗೊತ್ತಾಗಿದೆ. ಡ್ರೈವರ್ ಸೈಯದ್ ಅಹಮದನು ಅವರನ್ನು ಕಾರಿನಲ್ಲಿ ತುಮಕೂರಿಗೆ ಕರೆದುಕೊಂಡು ಹೋಗಿದ್ದನೆಂದೂ ಹೇಳಲಾಗಿದೆ. ಈ ಡ್ರೈವರು ಶನಿವಾರ ರಾತ್ರಿ ತುಮಕೂರಿನಿಂದ ಅದೇ ಕಾರಿನಲ್ಲಿ ಇಲ್ಲಿಗೆ ಬಂದು ಮತ್ತೆ ತುಮಕೂರಿಗೆ ವಾಪಾಸ್ ಹೋಗಿದ್ದಕ್ಕೆ ಟೋಲ್‌ಗೇಟಿನಲ್ಲಿ ದಾಖಲೆ ಇದೆಯೆಂದೂ ಈಗ ಈ ಕಾರನ್ನು ಪೋಲೀಸಿನವರು ವಶಪಡಿಸಿಕೊಂಡಿರುವರೆಂದೂ ತಿಳಿದುಬಂದಿದೆ ಅವನ ಬಳಿ ರಕ್ತದ ಕಲೆಗಳಿದ್ದ ಬಟ್ಟೆಗಳೂ ಸಿಕ್ಕಿದೆವೆಂದೂ ಹೇಳಲಾಗಿದೆ

ಪುಟ್ಟಮ್ಮನ ಹೇಳಿಕೆಯನ್ನು ಪೋಲೀಸಿನವರು ತೆಗೆದುಕೊಂಡಿರುವರೆಂದು ಗೊತ್ತಾಗಿದೆ

ಮುಂದಿನ ತನಿಖೆ ಕ್ರಮವನ್ನು ಪೋಲೀಸ್ ಇನ್‌ಸ್ಪೆಕ್ಟರ್ ಶ್ರೀ ನರಸಿಂಹಯ್ಯನವರು ನಡೆಸುತಿದ್ದಾರೆ.

(ತಾ. ನಾ)

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. 186/1927

R. I. A 1584/1940

B. ಶಿವರಾವ್ — ಅರ್ಜಿದಾರ

ಮತ್ತು

H ಸದಾಶಿವ ರಾವ್ — ಎದ್ರಿರು

ಇವರೊಳಗೆ

2ನೆಯ ಎದ್ರಿಳು—ಭವಾನಿ ಬಾಯಿ, ಗಣೇಶರಾಯರ ವಿಧವೆ. C/o Manige Shankar Narayana Rao, M A L T. Professor. Jodhpur College Jodhpur ಇವರಿಗೆ,

ಸದ್ರಿ ಅರ್ಜಿದಾರನನ್ನು ಮೇಲ್ಕಂಡ ದಾವೆಯಲ್ಲಿ ಪಕ್ಷಿಯಲ್ಲಿ ಸೇರಿಸಿ ಸದ್ರಿ ಅರ್ಜಿದಾರನು ಮೃತ ಗಣೇಶರಾಯರ ಮೇಲೆ ಪಡೆದ ಸದ್ರಿ ಕೋರ್ಟಿನ O. S. 495/25ನೇ (ಡಿಕ್ರಿಯ) ಮೇಲೆ ನಡಿಸಿದ R E P. 795/38ರಲ್ಲಿ ರಿಸೀವರ capacity ಯಲ್ಲಿ 1ನೆ ಎದ್ರಿಯು ಸ್ವಾಧೀನ ವಸೂಲು ಆಗಿರುವ ಸದ್ರಿ ಗಣೇಶರಾಯರ ಎಸ್ಟೇಟಿನ ಎಲ್ಲಾ ಉತ್ಪತ್ತಿಯನ್ನು ಮತ್ತು ಹಣವನ್ನು ಜಪ್ತಿ ಮಾಡಿದುವುದರಿಂದ ಆ ಬಾಬ್ತು 1ನೆ ಎದ್ರಿಯಿಂದ 2ನೆಯ ಎದ್ರಿಳಿಗೆ ಸಲ್ಲತಕ್ಕ ಹಣವನ್ನು ತಪ್ಪಿಯಿಂದ ಕಂಡುಹಿಡಿದು ಅದನ್ನು O S 495/25ನೆ ಡಿಕ್ರಿಯ ಸಮಾಧಾನಕ್ಕೆ ಈ ಅರ್ಜಿದಾರಗೆ ಕೊಡಿಸುವಂತೆಯೂ ತಪ್ಪಿದಲ್ಲಿ 1ನೆ ಎದ್ರಿಯ ಸ್ಕೂರಿಟಿ ಬಾಂಡಿನಿಂದ ಹಣ ಈ ಅರ್ಜಿದಾರಗೆ ಕೊಡಿಸಬೇಕಾಗಿ ವಗೈರೆ ಈ ಅರ್ಜಿದಾರನು ಒದಗಿಸಿದ ಸದ್ರಿ ಅರ್ಜಿಯು ತಾರೀಕು 16-6-41ಕ್ಕೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಇದ್ದಲ್ಲಿ ಸದ್ರಿ ದಿನ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಪ್ಲೀಡರು ಮಾಡಿಕೊಳ್ಳತಕ್ಕದ್ದು ತಪ್ಪಿದ್ದಲ್ಲಿ ನಿಮ್ಮನ್ನು ಏಕ್ಸ್‌ಪಾರ್ಟಿ ಮಾಡಿ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ಅರ್ಜಿಯು ತೀರ್ಮಾನಿಸಲ್ಪಡುವುದು ಎಂಬುದನ್ನು ಕೋರ್ಟ ಹುಕ್ಕುಂ ಪ್ರಕಾರ ಈ ಮೂಲಕ ಪ್ರಕಟಿಸಲಾಗಿಯದೆ

ಕಾರ್ಕಳ, ತಾ 14-3-41 } P. Ramachandra Rao, Pleader for petitioner

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

DEVEGADABETT
9— — 1940

From
Sri K. Shivarama Nair,
Kerikcundah Estate,
Post Devegadabettu
KADUR DISTRICT.

To
The Joint Managers,
C P. C Motor Service Ltd.,
MANGALORE

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair.

ಭೀಕರ ಕೊಲೆ

ಪ್ರಣಯ ಸಂಬಂಧದ ಪ್ರಸಂಗ ಡಾ॥ ಆಲ್ಬುಕರ್ಕ್ ಬಂಗಲೆಯಲ್ಲಿ ನಡೆದ ಘಟನೆ

ಡ್ರೈವರನೊಬ್ಬನ ದಸ್ತಗಿರಿ.

ಬೆಂಗಳೂರು.

ಸೆನಟಾಫ್ ರಸ್ತೆಯಲ್ಲಿರುವ ಡಾ. (ಮಿಸ್) ಆಲ್ಬುಕರ್ಕ್‌ರವರ ಬಂಗಲೆಯಲ್ಲಿ ಕಳೆದ ವಾರ ಒಂದು ಭೀಕರ ಕೊಲೆ ಕೃತ್ಯವು ನಡೆಯಿತು. ರೇಸ್‌ಕೋರ್ಸಿನಲ್ಲಿ ಕೆಲಸ ಮಾಡುವ ಬಾಲು ಎಂಬ ಡ್ರೈವರನ್ನು ಈ ಬಂಗಲೆಯಲ್ಲಿ ಕೊಲೆ ಮಾಡಲ್ಪಟ್ಟನೆಂದು ಅಲ್ಸೂರು ಗೇಟ್ ಸ್ಟೇಷನ್ ಪೋಲೀಸಿನವರಿಗೆ ಫಿರ್ಯಾದು ಬಂದಿತು.

ಪೋಲೀಸಿನವರು ಸ್ಥಳಕ್ಕೆ ಹೋಗಿ ನೋಡಿದಾಗ ಬಾಲುವು ಮೃತಿ ಹೊಂದಿದ್ದ. ತಲೆಯಲ್ಲಿ ಪೆಟ್ಟಾಗಿ ರಕ್ತವು ಸುರಿಯುತ್ತಿತ್ತು. ಮೈಮೇಲೆ ಇತರ ಗಾಯಗಳೂ ಆಗಿದ್ದವು. ಇವನು ಸತ್ತುಬಿದ್ದ ಪಕ್ಕದಲ್ಲೇ ಒಬ್ಬ ಹೆಂಗಸು ಮಲಗಿದ್ದಳು. ಒಂದೇ ಹಾಸಿಗೆಯ ಮೇಲೆ ಇವರಿಬ್ಬರೂ ಮಲಗಿದ್ದರು. ಈಕೆಯು ಕ್ರಿಶ್ಚಿಯನ್ ಜಾತಿಯ ಪುಟ್ಟಮ್ಮ ಎಂಬ ಒಬ್ಬ ದಾದಿಯೆಂದೂ, ಇವಳು ಡಾ. ಆಲ್ಬುಕರ್ಕ್‌ರವರ ಕೈಕೆಳಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದಳೆಂದೂ ಹೇಳಲಾಗಿದೆ. ಪುಟ್ಟಮ್ಮನಿಗೆ ಕೈಗಳ ಮೇಲೂ ಬೆನ್ನಿನ ಮೇಲೂ ಗಾಯಗಳಾಗಿತ್ತು. ರಕ್ತವು ಧಾರಾಕಾರವಾಗಿ ಹರಿದಿದ್ದ ಸ್ಥಳದಲ್ಲೇ ಇವಳು ಮಲಗಿದ್ದಳು. ಹಾಸಿಗೆ ಮತ್ತು ಬಟ್ಟೆಗಳೆಲ್ಲ ರಕ್ತಮಯವಾಗಿದ್ದವು.

ಪೋಲೀಸಿನವರು ಬಾಲುವಿನ ಶವದ ಮಹಜರು ಕ್ರಮವನ್ನು ನಡೆಸಿದರು. ಶವವನ್ನು ವೈದ್ಯ ಪರೀಕ್ಷೆಗೆ ಕಳುಹಿಸಿಕೊಟ್ಟರು. ದಾದಿ ಪುಟ್ಟಮ್ಮನು ಗುಣ ಹೊಂದುತ್ತಿದ್ದಾಳೆ.

ಈ ಕೊಲೆ ಕೃತ್ಯದ ಸಂಬಂಧದಲ್ಲಿ ಪೋಲೀಸಿನವರು ಮೋಟಾರ್ ಡ್ರೈವರ್ ಸೈಯದ್ ಅಹಮದ್ ಎಂಬಾತನನ್ನು ದಸ್ತಗಿರಿ ಮಾಡಿದ್ದಾರೆ. ಈತನು ಡಾ. ಆಲ್ಬುಕರ್ಕ್‌ರವರ ಬಳಿ ಕೆಲಸ ಮಾಡುವ ಮೋಟಾರು ಡ್ರೈವರನು.

ಮೃತಿ ಹೊಂದಿದಾತನೂ ಇವನೂ ಒಬ್ಬಳಲ್ಲೇ ಪ್ರಣಯ ಸಂಬಂಧವನ್ನು ಹೊಂದಿದ್ದುದೇ ಈ ಕೃತ್ಯಕ್ಕೆ ಕಾರಣವಾಯಿತೆಂದೂ ತನ್ನ ಪ್ರಣಯಿನಿಯು ಮತ್ತೊಬ್ಬನೊಡನೆ ಪ್ರಣಯ ಸಂಬಂಧವನ್ನಿಟ್ಟುಕೊಂಡಿದ್ದುದನ್ನು ಕಂಡು ಸಹಿಸಲಾರದೆ ಈ ಕೃತ್ಯವನ್ನು ನಡೆಸಿರಬಹುದೆಂದೂ ಊಹಿಸಲಾಗಿದೆ.

ಸೈಯದ್ ಅಹಮದನು ತುಮಕೂರಿಗೆ ಹೋಗಿದ್ದನೆಂದೂ ಅವನು ಅಲ್ಲಿಂದ ವಾಪಾಸು ಬಂದಾಗ ಅವನ ಬಳಿ ರಕ್ತಮಯವಾಗಿದ್ದ ಕೆಲವು ಬಟ್ಟೆಗಳು ಸಿಕ್ಕಿದವೆಂದೂ ಅವನನ್ನು ಪೋಲೀಸಿನವರು ವಶಪಡಿಸಿಕೊಂಡಿರುವರೆಂದೂ ಗೊತ್ತಾಗಿದೆ. ಇವನನ್ನು ದಸ್ತಗಿರಿ ಮಾಡಲಾಗಿದೆ.

ಈ ಕೃತ್ಯ ನಡೆದ ರಾತ್ರಿ ಡಾ॥ ಆಲ್ಬುಕರ್ಕ್‌ರವರು ಮನೆಯಲ್ಲಿರಲಿಲ್ಲವೆಂದೂ ತುಮಕೂರಿಗೆ ಹೋಗಿದ್ದರೆಂದೂ ಗೊತ್ತಾಗಿದೆ. ಡ್ರೈವರ್ ಸೈಯದ್ ಅಹಮದನು ಅವರನ್ನು ಕಾರಿನಲ್ಲಿ ತುಮಕೂರಿಗೆ ಕರೆದುಕೊಂಡು ಹೋಗಿದ್ದನೆಂದೂ ಹೇಳಲಾಗಿದೆ. ಈ ಡ್ರೈವರು ಶನಿವಾರ ರಾತ್ರಿ ತುಮಕೂರಿನಿಂದ ಅದೇ ಕಾರಿನಲ್ಲಿ ಇಲ್ಲಿಗೆ ಬಂದು ಮತ್ತೆ ತುಮಕೂರಿಗೆ ವಾಪಾಸ್ ಹೋಗಿದ್ದಕ್ಕೆ ಟೋಲ್‌ಗೇಟಿನಲ್ಲಿ ದಾಖಲೆ ಇದೆಯೆಂದೂ ಈಗ ಈ ಕಾರನ್ನು ಪೋಲೀಸಿನವರು ವಶಪಡಿಸಿಕೊಂಡಿರುವರೆಂದೂ ತಿಳಿದುಬಂದಿದೆ. ಅವನ ಬಳಿ ರಕ್ತದ ಕಲೆಗಳಿದ್ದ ಬಟ್ಟೆಗಳೂ ಸಿಕ್ಕಿದೆವೆಂದೂ ಹೇಳಲಾಗಿದೆ.

ಪುಟ್ಟಮ್ಮನ ಹೇಳಿಕೆಯನ್ನು ಪೋಲೀಸಿನವರು ತೆಗೆದುಕೊಂಡಿರುವರೆಂದು ಗೊತ್ತಾಗಿದೆ.

ಮುಂದಿನ ತನಿಖೆ ಕ್ರಮವನ್ನು ಪೋಲೀಸ್ ಇನ್‌ಸ್ಪೆಕ್ಟರ್ ಶ್ರೀ. ನರಸಿಂಹಯ್ಯನವರು ನಡೆಸುತ್ತಿದ್ದಾರೆ.

(ತಾ. ನಾ.)

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. 186/1927
R. I. A. 1584/1940

B. ಶಿವರಾವ್ —ಅರ್ಜಿದಾರ

ಮತ್ತು

H. ಸದಾಶಿವ ರಾವ್ —ಎದ್ರಿದು

ಇವರೊಳಗೆ

2ನೆಯ ಎದ್ರಿಳು—ಭವಾನಿ ಬಾಯಿ, ಗಣೇಶರಾಯರ ವಿಧವೆ. C/o Manige Shankar Narayana Rao, M. A. L. T. Professor. Jodhpur College Jodhpur ಇವರಿಗೆ.

ಸದ್ರಿ ಅರ್ಜಿದಾರನನ್ನು ಮೇಲ್ಕಂಡ ದಾವೆಯಲ್ಲಿ ಪಕ್ಷಿಯಲ್ಲಿ ಸೇರಿಸಿ ಸದ್ರಿ ಅರ್ಜಿದಾರನು ಮೃತ ಗಣೇಶರಾಯರ ಮೇಲೆ ಪಡೆದ ಸದ್ರಿ ಕೋರ್ಟಿನ O. S. 495/25ನೇ (ಡಿಕ್ರಿಯ) ಮೇಲೆ ನಡಿಸಿದ R. E. P. 795/38ರಲ್ಲಿ ರಿಸೀವರ capacityಯಲ್ಲಿ 1ನೆ ಎದ್ರಿಯು ಸ್ವಾಧೀನ ವಸೂಲು ಆಗಿರುವ ಸದ್ರಿ ಗಣೇಶರಾಯರ ಎಸ್ಟೇಟಿನ ಎಲ್ಲಾ ಉತ್ಪತ್ತಿಯನ್ನು ಮತ್ತು ಹಣವನ್ನು ಜಪ್ತಿ ಮಾಡಿಸುವುದರಿಂದ ಆ ಬಾಬ್ತು 1ನೆ ಎದ್ರಿಯಿಂದ 2ನೆಯ ಎದ್ರಿಳಿಗೆ ಸಲ್ಲತಕ್ಕ ಹಣವನ್ನು ತನ್ನಿಯಿಂದ ಕಂಡುಹಿಡಿದು ಅದನ್ನು O. S. 495/25ನೆ ಡಿಕ್ರಿಯ ಸಮಾಧಾನಕ್ಕೆ ಈ ಅರ್ಜಿದಾರನಿಗೆ ಕೊಡಿಸುವಂತೆಯೂ ತಪ್ಪಿದಲ್ಲಿ 1ನೆ ಎದ್ರಿಯ ಸ್ವಂತ ಜಪ್ತಿಯಿಂದ ಹಣ ಈ ಅರ್ಜಿದಾರನಿಗೆ ಕೊಡಿಸಬೇಕಾಗಿ ವಗೈರೆ ಈ ಅರ್ಜಿದಾರನು ಬರಕೊಂಡ ಸದ್ರಿ ಅರ್ಜಿಯು ತಾರೀಕು 16-6-41ಕ್ಕೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಇದ್ದಲ್ಲಿ ಸದ್ರಿ ದಿನ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರಿ ಮಾಡಿ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ಅರ್ಜಿಯು ತೀರ್ಮಾನಿಸಲ್ಪಡುವುದು ಎಂಬುದನ್ನು ಕೋರ್ಟಿನ ಹುಕ್ಮಂ ಪ್ರಕಾರ ಈ ಮೂಲಕ ಪ್ರಕಟಿಸಲಾಗಿಯದೆ.

ಕಾರ್ಕಳ, ತಾ. 14-3-41 } **P. Ramachandra Rao,** Pleader, for petitioner.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

DEVEGADABETTU
9—3—1940

From:

Sri K. Shivarama Nair,
Kerikcundah Estate,
Post Devegadabettu.
KADUR DISTRICT.

To:

The Joint Managers,
C. P. C. Motor Service Ltd.,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair.

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2—12—0   Regd. No. M.1346

ಸ್ವದೇಶಾಭಿಮಾನಿ

ಸಂಪುಟ 35]   ತಾರೀಕು 21—3—1941   [ಸಂಚಿಕೆ 12]

The Bombay Life Assurance Company, Ltd.

(ESTABLISHED 1908)

Death! { **is not a matter of supposition**
{ **is a matter of Certainty**

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES

The Bombay Life Building,

Gandhi Nagar, UDIPI.

OR AT ANY OF THEIR OFFICES AT:—

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Bombay No. 4.	Post Box No. 337 Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆಶೋಷ, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು



ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಕಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ಹಲ್ಲುಪುಡಿಯೆಂದರೆ

ನಂಜನಗೂಡು ಟೂತ್ ಪೌಡರ್

ಸಧ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

ಲಂಡನ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು

KANNADA ILLUSTRATED WEEKLY

ನರನಾಡಿಗಳ ದೌರ್ಬಲ್ಯತೆಯಿಂದ ಜೀವವು ಕೆಡದಂತೆ ನೋಡಿಕೊಳ್ಳಿರಿ.

ಅಧಿಕ ಜನರು ಮೊದಲಾಗಲೀ, ಕಡೆಗಾಗಲಿ, ನರಗಳ ದೌರ್ಬಲ್ಯತೆಯಿಂದ ಸರ್ವ ಆರೋಗ್ಯವನ್ನು ಕಳೆದುಕೊಂಡು ಖಿನ್ನಚಿತ್ತರಾಗುತ್ತಾರೆ. ಈ ಪ್ರಕಾರವಾಗಿ ನೀವು ನರಳುವಿರಾದರೆ, ಅಮೂಲ್ಯ ಆಹಾರಪಾನೀಯವಾದ 'ಓವಲ್ಟಿನ್'ನ್ನು ಸ್ವಲ್ಪದಿನಗಳ ತನಕ ಕುಡಿದುನೋಡಿರಿ. ಆಗ ಪುನಹ ಎಷ್ಟು ಉತ್ತಮ ಆರೋಗ್ಯದಿಂದಿದ್ದರೆಂಬುದು ನಿಮಗೆ ತಿಳಿಯುವದು. ನಿಮ್ಮ ನರನಾಡಿಗಳು ಹೊಸತಾಗಿ ಕಾಣುವವು. ಖಿನ್ನತೆಯು ಮಾಯವಾಗುವುದು. ಸುಖವಾದ ನಿದ್ರೆಯು ಬೀಳುವುದು.

'ಓವಲ್ಟಿನ್' ನರನಾಡಿಗಳಿಗೆ ಪೋಷಣೆಯನ್ನೀಯುವುದು, ಜೀರ್ಣಶಕ್ತಿಯನ್ನು ವೃದ್ಧಿಸುವುದು, ಮತ್ತು ಅದೇ ಸಮಯದಲ್ಲಿ ದೇಹವನ್ನೂ, ಮೆದುಳನ್ನೂ ಬಲಗೊಳಿಸುವುದು. 'ಓವಲ್ಟಿನ್'ನ್ನು ಯಾವಾಗಲೂ ಕುಡಿದು ನಿಮ್ಮ ಆರೋಗ್ಯವನ್ನು ಸರಿಯಾಗಿರಿಸಿರಿ.

ನೆನೆಯಹಾಕಿ ಮಾಗಿದ ಬಾರ್ಲಿ, ಘನದ ಹಸುಹಾಲಿನ ಕೆನೆ, ಇತರ ನೈಸರ್ಗಿಕ ವಸ್ತುಗಳಿಂದ ತಯಾರಿಸಲ್ಪಟ್ಟಿದೆ 'ಓವಲ್ಟಿನ್' ಜಗತ್ತಿನ ಒಂದು ಉತ್ತಮ ಆಹಾರಪಾನೀಯ. ಇತರ ಎಲ್ಲಾ ನಕಲಿಯನ್ನು ತ್ಯಜಿಸಿರಿ.

'ಓವಲ್ಟಿನ್' ಒಂದು ರುಚಿಕರವಾದ ಆಹಾರ ಪಾನೀಯ ಟಾನಿಕ್ಕಾಗಿರುತ್ತದೆ. ಇದನ್ನು ತಣ್ಣಗೆಯೂ ಬಿಸಿಯಾಗಿಯೂ ಸೇವಿಸಬಹುದು. ಅದಲ್ಲದೆ ಇದನ್ನು ತಯಾರಿಸುವುದು ಬಹಳ ಸುಲಭ ಮತ್ತು ತಯಾರಿಸುವ ವಿಧಾನವು ಟಿನ್ನಿನೊಂದಿಗಿದೆ.

ಎಲ್ಲಾ ಕೆಮ್ಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

'ಓವಲ್‌ಟಿನ್'

OVALTINE [illegible]

ಡಿಸ್ಟ್ರಿಬ್ಯೂಟರ್ಸ್:—
ಗ್ರೇಹಮ್ಸ್ ಟ್ರೇಡಿಂಗ್ ಕೋ. (ಇಂಡಿಯಾ) ಲಿಮಿಟೆಡ್.
ಕೃಷ್ಣನ್ಸ್ ಹೋಂ, 310/311, ಲಿಂಗಿಚೆಟ್ಟಿಸ್ಟ್ರೀಟ್, ಮದ್ರಾಸು, ಹಾಗೂ ಕಲ್ಕತ್ತಾ, ಬೊಂಬ್ಯಾ, ಕರಾಚಿ ಮತ್ತು ರಂಗೂನ್.

'ಓವಲ್ಟಿನ್' ಬಿಸ್ಕುಟು'ಗಳು
ರುಚಿಕರ, ಜೀರ್ಣಕಾರಿ, ಪೋಷಕ [illegible] ಬಿಸ್ಕುಟುಗಳು [illegible] ಅಮೂಲ್ಯ ಗುಣವುಳ್ಳ [illegible] 4 ಔನ್ಸ್ ಮತ್ತು [illegible] ಪ್ಯಾಕೆಟುಗಳಲ್ಲಿಯೂ [illegible] ಟಿನ್ನುಗಳಲ್ಲಿಯೂ ಮಾರಲ್ಪಡುತ್ತವೆ.

OV/10/40

ಕ್ಷಯರೋಗವೂ ಹಾಲೂ

ಹಾಲು ಅತ್ಯುತ್ತಮವಾದ ಆಹಾರ ಪದಾರ್ಥವಾಗಿರುವದು ನಿಜ. ಕ್ಷಯದಂಥ ಭಯಂಕರ ರೋಗಗಳನ್ನು ನಿವಾರಿಸಲಿಕ್ಕೂ ಹಾಲಿನ ಉಪಯೋಗವಾಗುತ್ತದೆ. ಆದರೆ ನಾವು ಉಪಯೋಗಿಸುವ ಹಾಲು ಪರಿಶುದ್ಧವಾಗಿರಬೇಕು. ಬಹಳ ಸಮಯದ ವರೆಗೆ ಕುದಿಸದೆ ಇಟ್ಟ ಹಾಲಿನಲ್ಲಿ ರೋಗಾಣುಗಳು ಬಂದು ಸೇರುತ್ತವೆ. ರೋಗಿಯಾಗಿರುವ ದನ-ಎಮ್ಮೆ ಹಾಲಿನಲ್ಲಿ ರೋಗಾಣುಗಳು ಸೇರಿಕೊಂಡು ಇರುತ್ತವೆ. ಇಂಥ ಹಾಲನ್ನು ಕುಡಿಯುವದರಿಂದ ರೋಗ ನಿವಾರಣೆಯಾಗಿ ಆರೋಗ್ಯವುಂಟಾಗುವ ಬದಲಿಗೆ ರೋಗವು ಪ್ರಜ್ವಲಿಸಬಹುದು; ಹೊಸ ರೋಗಗಳು ಹುಟ್ಟಬಹುದು. ಕ್ಷಯದಂಥ ರೋಗಗಳು ಬರಲಿಕ್ಕೆ ಉಪಯೋಗಿಸುವ ಹಾಲಿನಲ್ಲಿ ಕ್ಷಯದ ಜಂತುಜೀವಿಗಳು ಸೇರಿಕೊಂಡಿರುವದೂ ಹಾಲು ಕೊಡುವ ದನಕರುಗಳು ಕ್ಷಯದಿಂದ ಪೀಡಿತವಾಗಿರುವದೂ ಕಾರಣವೆಂದು ತಿಳಿದುಬಂದಿದೆ. ಆದುದರಿಂದ ನಿರೋಗವಾಗಿರುವ ಎಮ್ಮೆ ದನಗಳ ಹಾಲನ್ನೇ ಉಪಯೋಗಿಸಬೇಕು. ಅಂಥ ಹಾಲಿನಲ್ಲಿ ಕೂಡ ವಾತಾವರಣದಿಂದ ರೋಗಾಣುಗಳು ಬಂದು ಸೇರಿಕೊಳ್ಳದಂತೆಯೂ ಎಚ್ಚರಿಕೆ ತೆಗೆದುಕೊಳ್ಳಬೇಕು.

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ — ೨೮—೩—೧೯೪೧

ರಾಷ್ಟ್ರೀಯ ವಾರದಲ್ಲಿ ರಚನಾತ್ಮಕ ಕಾರ್ಯಗಳು

— ಮಹಾತ್ಮರ ಮಹತ್ವದ ಸಂದೇಶ —

ಸ್ಥಳೀಕ ಸಂಸ್ಥೆಗಳಲ್ಲಿ ಮುಖಂಡರ ಚಿತ್ರವಿಡಕೂಡದು— ಮದ್ರಾಸು ಸರಕಾರದ ಕಟ್ಟಪ್ಪಣೆ

ಸತ್ಯಾಗ್ರಹಿಗಳಿಗೆ ಸೂಚನೆಗಳು

ಎಪ್ರಿಲ್ ಆರರಿಂದ ತೊಡಗಿ ಹದಿಮೂರನೆಯ ತಾರೀಕಿನ ವರೆಗೆ ರಾಷ್ಟ್ರೀಯ ಸಪ್ತಾಹವು ಆಚರಿಸಲ್ಪಡುವುದಷ್ಟೆ? ಆಗ ಕಾಂಗ್ರೆಸಿನವರು ರಚನಾತ್ಮಕ ಕಾರ್ಯಕ್ರಮಗಳ ಕಡೆಗೇ ಹೆಚ್ಚಿನ ಗಮನಕೊಡಬೇಕಾಗಿದೆಯೆಂದು ಮಹಾತ್ಮಾಜಿಯವರು ಒಂದು ಮಹತ್ವದ ಪ್ರಕಟಣೆಯನ್ನು ಹೊರಡಿಸಿದ್ದಾರೆ.

ಆ ಪ್ರಕಟಣೆಯಲ್ಲಿ ಈ ರೀತಿ ಉಲ್ಲೇಖಿತವಾಗಿದೆ.

"ರಾಷ್ಟ್ರೀಯ ವಾರದ ಆಚರಣೆಯು ಎರಡು ಉದ್ದೇಶಗಳುಳ್ಳದ್ದು. ಮೊದಲನೆಯದು ಆರನೆಯ ತಾರೀಕು ಹಾಗೂ ಹದಿಮೂರನೆಯ ತಾರೀಕು ಉಪವಾಸಮಾಡಿ ಆತ್ಮಶುದ್ಧಿಗಳಿಸಿಕೊಳ್ಳುವಂತಹುದು. ಮತ್ತೆ ಎರಡನೆಯದು ರಚನಾತ್ಮಕ ಕಾರ್ಯಕ್ರಮದ ಮೇಲೆ ಹೆಚ್ಚು ಲಕ್ಷ್ಯಹರಿಸಿ ಜನಸಾಮಾನ್ಯರಲ್ಲಿ ಜನಜಾಗೃತಿಯುನ್ನು ಹುಟ್ಟಿಸುವುದು. ರಚನಾತ್ಮಕ ಕಾರ್ಯಕ್ರಮವನ್ನು ವ್ಯಾಪಕವಮಾಡಿ ಜನಸಾಮಾನ್ಯರಲ್ಲಿ ಆ ಕುರಿತು ವಿಶೇಷ ತಿಳುವಳಿಕೆ ಹುಟ್ಟಿಸುವುದರಲ್ಲಿಯೇ ಅಹಿಂಸೆಯನ್ನು ನಿಜವಾಗಿ ಆಚರಣೆಗೆ ತಂದಂತಾಗುವುದು. ಸವಿನಯ ಶಾಸನಭಂಗವು ಆವಶ್ಯವಾದರೆ ಅದು ರಚನಾತ್ಮಕ ಕಾರ್ಯಕ್ರಮದ ಕೊನೆಗೆ ಬರುವುದೇ ಹೊರತು ಪ್ರಾರಂಭದಲ್ಲಿ ಬರುವುದಿಲ್ಲ. ಸವಿನಯ ಶಾಸನಭಂಗದ ಯಶಸ್ಸಾದರೂ ರಚನಾತ್ಮಕ ಕಾರ್ಯಕ್ರಮದ ಯಶಸ್ಸನ್ನೇ ಅವಲಂಬಿಸಿರುತ್ತದೆ. ಆದ್ದರಿಂದ ಎಲ್ಲಾ ಕಾಂಗ್ರೆಸ್ ಕೆಲಸಗಾರರೂ ರಾಷ್ಟ್ರೀಯ ವಾರದಲ್ಲಿ ರಚನಾತ್ಮಕ ಕಾರ್ಯಕ್ರಮಗಳ ಕಡೆಗೇ ಹೆಚ್ಚು ಗಮನಕೊಡತಕ್ಕದ್ದು.

ಸ್ಥಳೀಕ ಸಂಸ್ಥೆಗಳಮೇಲೆ ಗದೆ!

ದೇಶದ ಮುಖಂಡರ ಭಾವಚಿತ್ರಗಳಿಡಕೂಡದು. ಮದ್ರಾಸು ಸರಕಾರದ ಕಟ್ಟಾಜ್ಞೆ.

ಮದ್ರಾಸ್ ಸರಕಾರದವರು ಒಂದು ಹುಕುಂ ಹೊರಡಿಸಿ, ಸ್ಥಳೀಕ ಸಂಸ್ಥೆಗಳು ಸಾರ್ವಜನಿಕ ಗೃಹಸ್ಥರ ಅಥವಾ ದೇಶದ ಮುಖಂಡರ ಭಾವಚಿತ್ರಗಳನ್ನು ಸ್ಥಳೀಕ ಸಂಸ್ಥೆಗಳಲ್ಲಿ ಇಡುವ ಸಂಬಂಧವಾಗಿ ಹಣವನ್ನು ವೆಚ್ಚಮಾಡತಕ್ಕದ್ದಲ್ಲವೆಂದು ಅಪ್ಪಣೆ ವಿಧಿಸಿರುವರು. ಆದಕೆ ಚಕ್ರವರ್ತಿ ದಂಪತಿಗಳ ಭಾವಚಿತ್ರಗಳನ್ನು ಇಡಲು ಅಡ್ಡಿಯಿಲ್ಲವಂತೆ. ಯಾರಾದರೂ ಖಾಸಗಿ ಹಣ ಖರ್ಚುಮಾಡಿ ಮುಖಂಡರ ಭಾವಚಿತ್ರಗಳನ್ನು ಕೊಟ್ಟರೆ ಅವುಗಳನ್ನು ಸ್ವೀಕರಿಸುವ ಮೊದಲು ಸರಕಾರದ ಅಪ್ಪಣೆ ಪಡೆಯಬೇಕಂತೆ.

ಸತ್ಯಾಗ್ರಹಿಗಳಿಗೆ ಸೂಚನೆಗಳು

ಸತ್ಯಾಗ್ರಹಿಗಳಿಗಾಗಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಕೆಳಗಿನ ಸೂಚನೆಗಳನ್ನು ಕಳಿಸಿದ್ದಾರೆ. ಹಳ್ಳಿಗಳ ಸತ್ಯಾಗ್ರಹಿಗಳನ್ನು ನಗರಗಳಿಗೆ ಕರೆಕೂಡದು. ಸೆರೆ ಹಿಡಿಯಲ್ಪಡದೆ ಇದ್ದ ಸತ್ಯಾಗ್ರಹಿಗಳು ಸೆರೆಮನೆಗೆ ಹೋಗಿ ಯುದ್ಧವಿರೋಧಕ ಚಳವಳ ಮಾಡಬಹುದು. ಆದರೆ ಅದು ಪಿಕೆಟಿಂಗಿನ ಸ್ವರೂಪ ತಳೆಯಬಾರದು. ಅಲ್ಲದೆ ಬೇಡವೆಂದು ಹೇಳಿದವರ ಮನೆಗಳನ್ನು ಪ್ರವೇಶಿಸಕೂಡದು. ಸ್ಥಾನಿಕ ಸಂಸ್ಥೆಗಳ ಸದಸ್ಯರು ಸತ್ಯಾಗ್ರಹ ಮಾಡುವ ಮೊದಲು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕು. ಯಾವದೊಂದು ಕಾಂಗ್ರೆಸ್ ಸಮಿತಿಯು ಸಸ್ಪೆಂಡಾಗಿದ್ದರೆ ಕಾಂಗ್ರೆಸ್ ಕಾರ್ಯವನ್ನು ಯೋಗ್ಯ ಸತ್ಯಾಗ್ರಹಿಗಳೊಪ್ಪಿಸಬೇಕು. ಸೆರೆ ಹಿಡಿಯಲ್ಪಡದೆ ಇದ್ದ ಸ್ತ್ರೀ ಸತ್ಯಾಗ್ರಹಿಗಳು ದಿಲ್ಲಿಗೆ ಹೋಗಲು ಅಸಮರ್ಥರಾದರೆ ತಮ್ಮ ಜಿಲ್ಲೆಗಳಲ್ಲಿ ಇಲ್ಲವೇ ಪ್ರಾಂತದಲ್ಲಿ ಇಚ್ಛೆಬಂದಂತೆ ಸಂಚರಿಸಬೇಕು. ಬೀದಿಗಳಲ್ಲಿ ಗೊಂದಲ ಹಾಕಿದ ಆರೋಪ ಹೊರಿಸಲ್ಪಟ್ಟರೂ ಸತ್ಯಾಗ್ರಹಿಗಳು ಕೋರ್ಟಿನಲ್ಲಿ ಸಂರಕ್ಷಣೆ ಮಾಡಿಕೊಳ್ಳಬಾರದು. ಯುದ್ಧ ವಿರೋಧಕ ಚಳವಳ ಮಾಡುವುದೇ ತಮ್ಮ ಉದ್ದೇಶವಾಗಿತ್ತೆಂದು ಕೋರ್ಟಿಗೆ ಅವರು ಸ್ಪಷ್ಟವಾಗಿ ತಿಳಿಸಬೇಕು. ರಸ್ತೆ ಪ್ರತಿಬಂಧಕ ಆರೋಪವನ್ನು ಅವರು ಅಲ್ಲಗಳೆಯಬೇಕು. ಹರಿಜನ ಕಾಂಗ್ರೆಸ್ ಕಾರ್ಯಕರ್ತರು ವಿಧಾಯಕ ಕಾರ್ಯಕ್ರಮವನ್ನೇ ಮಾಡತಕ್ಕದ್ದು. ಅನಾರೋಗ್ಯಕರ ಇಲ್ಲವೆ ತಿನ್ನಲಿಕ್ಕೆ ಆಯೋಗ್ಯವಿದ್ದ ಆಹಾರವನ್ನು ಮಾತ್ರ ಸತ್ಯಾಗ್ರಹಿಗಳು ತೆಗೆದುಕೊಳ್ಳಕೂಡದು. ಜುಲ್ಮಾನೆಮಾಡಿ ಬಿಡುಗಡೆ ಮಾಡಲ್ಪಟ್ಟ ಸತ್ಯಾಗ್ರಹಿಗಳು ಮತ್ತೆ ಸೂಚನೆ ಕೊಡದೆ ಸತ್ಯಾಗ್ರಹ ಮಾಡಬಹುದು. ಜುಲ್ಮಾನೆ ತಪ್ಪಿಸಬಾರದು. ಆದರೆ ಆಸ್ತಿ ಮಾರಿ ಜುಲ್ಮಾನೆ ಕೊಡುವ ಆವಶ್ಯಕತೆ ಇಲ್ಲ. ಗಲಭೆ ಕಲಹ ಹೆಚ್ಚಿದ ಸ್ಥಳದಲ್ಲಿ ಸತ್ಯಾಗ್ರಹ ಮಾಡಲಾಗದು. ಸತ್ಯಾಗ್ರಹಿಗಳಿಗೆ ಬೇಡಿ ಮುಂತಾದ್ದನ್ನು ಹಾಕಿದರೆ ಚಾಚೂ ಆನ್ನದೆ ಆನಂದದಿಂದ ಅದನ್ನು ಸಹಿಸಬೇಕು. ದಿಲ್ಲಿಗೆ ಹೊರಟ ಸತ್ಯಾಗ್ರಹಿಗಳು ಯುದ್ಧವಿರೋಧಕ ಘೋಷಣೆ ಮಾಡುವುದಲ್ಲದೆ ವಿಧಾಯಕ ಕಾರ್ಯಕ್ರಮದ ಪ್ರಚಾರವನ್ನೂ ಮಾಡಬೇಕು.

ಅಮೃತ

ರಕ್ತಶುದ್ಧಿಯನ್ನು ಮಾಡುವ ನರಗಳ ದೌರ್ಬಲ್ಯವನ್ನು ಪರಿಹರಿಸುವ ಟಾನಿಕ್!

ಮಲಬದ್ಧತೆ, ಅಜೀರ್ಣ, ಮತ್ತು ಇತರ ಜಠರ ದೋಷಗಳನ್ನು ನಿವೃತ್ತಿಗೊಳಿಸುತ್ತದೆ; ಕ್ಷೀಣಗೊಂಡವರಿಗೆ ತಿರಗಿ ಶಕ್ತಿ ಧಾತುಪುಷ್ಟಿಯನ್ನು ಕೊಡುತ್ತದೆ.

ವಿಶೇಷ ವಿಷಯಗಳಿಗೆ ಯಾವುದೇ ಕೆಮಿಸ್ಟರಲ್ಲಾಗಲಿ, ಇಲ್ಲವೇ ಇವರಲ್ಲಾಗಲಿ ವಿಚಾರಿಸಿರಿ:

"ಕೇಸರೀ ಕುಟೀರಂ"
ಇಂಡಿಯನ್ ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್
ರಾಯಪೇಟೆ, ಮದ್ರಾಸು.

೪ ವಾಚುಗಳು ಮತ್ತು ೯೩೫ ಬಹುಮಾನಗಳು

ರೂಪಾಯಿ ೧—೪—೦ಕ್ಕೆ

ಉತ್ತಮ ಪರಿಮಳದ 6 ಸೀಸೆ ಪಟ್ಟೊ ರೋಸ್ ಅಥವಾ 6 ಸೀಸೆ ರಿಂಗ್ ವರ್ಮ್ (ಗಜಕರ್ಣ) ಮುಲಾಮು, ಇವನ್ನು ರೂ. 1—4—0ಕ್ಕೆ ಕೊಂಡುಕೊಂಡವರಿಗೆ ಎರಡು ಬಂಗಾರದ ಗಿಲಿಟಿನ ಪಾಕೆಟ್ ರಿಸ್ಟ್ ವಾಚು (ಬೇಂಡ್ ಸಹಿತ) ಒಂದು ಪೆನ್ನು, ಟೈಂಪೀಸ್, ಒಂದು ಸೇಫ್ಟಿ ರೇಜರ್, ಒಂದು ಶೇವಿಂಗ್ ಬ್ರಶ್, ಒಂದು ಪಾಕೆಟ್ ಪೌಡರ್, ಒಂದು ಬಾಚಣಿಗೆ, ಒಂದು ಸೋಪು, ಒಂದು ಸೆಟ್ ಗುಬ್ಬಿಗಳು, ಒಂದು ಚೂರಿ, ಒಂದು 14 ಕ್ಯಾರೆಟಿನ ನಿಬ್ಬುಳ್ಳ ಪೆನ್ನು, 500 ಫೋಟೊ ಫ್ರೇಮಿನ 36 ತಾಸು ಉರಿಯುವ ಒಂದು ಲೈಟು ಮತ್ತು ಅನೇಕ ಸುಂದರ ವಸ್ತುಗಳು ಅಥವಾ ಒಂದು ಸಲ ಕೀ ಕೊಟ್ಟರೆ 36 ತಾಸು ನಡೆವ 10 ವರ್ಷ ಗ್ಯಾರಂಟಿಯ ಒಂದು ಲಿವರ್ ಪಾಕೆಟ್ ವಾಚು ಸಿಗುತ್ತವೆ. ಪೋಸ್ಟೇಜ್ ಮತ್ತು ಪೇಕಿಂಗ್ ಪ್ರತ್ಯೇಕ 12 ಆಣೆ

ವಿಳಾಸ:—
THE AMERICAN COMMERCIAL STORES. POST BOX NO. 12213.
CALCUTTA (S. A.)

“ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

28—3—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೮—೩—೧೯೪೧

ರಾಷ್ಟ್ರೀಯ ವಾರದಲ್ಲಿ ರಚನಾತ್ಮಕ ಕಾರ್ಯಗಳು

— ಮಹಾತ್ಮರ ಮಹತ್ವದ ಸಂದೇಶ —

ಸ್ಥಳೀಕ ಸಂಸ್ಥೆಗಳಲ್ಲಿ ಮುಖಂಡರ ಚಿತ್ರವಿಡಕೂಡದು—

ಮದ್ರಾಸು ಸರಕಾರದ ಕಟ್ಟಪ್ಪಣೆ

ಸತ್ಯಾಗ್ರಹಿಗಳಿಗೆ ಸೂಚನೆಗಳು

ಏಪ್ರಿಲ್ ಆರರಿಂದ ತೊಡಗಿ ಹದಿಮೂರನೆಯ ತಾರೀಕಿನ ವರೆಗೆ ರಾಷ್ಟ್ರೀಯ ಸಪ್ತಾಹವು ಆಚರಿಸಲ್ಪಡುವುದಷ್ಟೆ? ಆಗ ಕಾಂಗ್ರೆಸಿನವರು ರಚನಾತ್ಮಕ ಕಾರ್ಯಕ್ರಮಗಳ ಕಡೆಗೇ ಹೆಚ್ಚಿನ ಗಮನಕೊಡಬೇಕಾಗಿದೆಯೆಂದು ಮಹಾತ್ಮಾಜಿಯವರು ಒಂದು ಮಹತ್ವದ ಪ್ರಕಟಣೆಯನ್ನು ಹೊರಡಿಸಿದ್ದಾರೆ.

ಆ ಪ್ರಕಟಣೆಯಲ್ಲಿ ಈ ರೀತಿ ಉಲ್ಲೇಖಿತವಾಗಿದೆ.

“ರಾಷ್ಟ್ರೀಯ ವಾರದ ಆಚರಣೆಯು ಎರಡು ಉದ್ದೇಶಗಳುಳ್ಳದ್ದು. ಮೊದಲನೆಯದು ಆರನೆಯ ತಾರೀಕು ಹಾಗೂ ಹದಿಮೂರನೆಯ ತಾರೀಕು ಉಪವಾಸಮಾಡಿ ಆತ್ಮ ಶುದ್ಧಿ ಗಳಿಸಿಕೊಳ್ಳುವಂತದ್ದು. ಮತ್ತೆ ಎರಡನೆಯದು ರಚನಾತ್ಮಕ ಕಾರ್ಯಕ್ರಮದ ಮೇಲೆ ಹೆಚ್ಚು ಲಕ್ಷ್ಯವಿರಿಸಿ ಜನಸಾಮಾನ್ಯರಲ್ಲಿ ಜನಜಾಗೃತಿಯನ್ನು ಹುಟ್ಟಿಸುವುದು. ರಚನಾತ್ಮಕ ಕಾರ್ಯಕ್ರಮವನ್ನು ವ್ಯಾಪಕವಾಗಿ ಜನಸಾಮಾನ್ಯರಲ್ಲಿ ಆ ಕುರಿತು ವಿಶೇಷ ತಿಳುವಳಿಕೆ ಹುಟ್ಟಿಸುವುದರಲ್ಲಿಯೇ ಅಹಿಂಸೆಯನ್ನು ನಿಜವಾಗಿ ಆಚರಣೆಗೆ ತಂದಂತಾಗುವುದು. ಸವಿನಯ ಶಾಸನಭಂಗವು ತಪ್ಪಿದರೆ ಅದು ರಚನಾತ್ಮಕ ಕಾರ್ಯಕ್ರಮದ ಕೊನೆಗೆ ಬರುವುದೇ ಹೊರತು ಪ್ರಾರಂಭದಲ್ಲಿ ಬರುವುದಿಲ್ಲ. ಸವಿನಯ ಶಾಸನಭಂಗದ ಯಶಸ್ಸಾದರೂ ರಚನಾತ್ಮಕ ಕಾರ್ಯಕ್ರಮದ ಯಶಸ್ಸನ್ನೇ ಅವಲಂಬಿಸಿರುತ್ತದೆ. ಆದ್ದರಿಂದ ಎಲ್ಲಾ ಕಾಂಗ್ರೆಸ್ ಕೆಲಸಗಾರರೂ ರಾಷ್ಟ್ರೀಯ ವಾರದಲ್ಲಿ ರಚನಾತ್ಮಕ ಕಾರ್ಯಕ್ರಮಗಳ ಕಡೆಗೇ ಹೆಚ್ಚು ಗಮನಕೊಡತಕ್ಕದ್ದು.

ಸ್ಥಳೀಕ ಸಂಸ್ಥೆಗಳಮೇಲೆ ಗದೆ!

ದೇಶದ ಮುಖಂಡರ ಭಾವಚಿತ್ರಗಳಿಡಕೂಡದು

ಮದ್ರಾಸು ಸರಕಾರದ ಕಟ್ಟಾಜ್ಞೆ

ಮದ್ರಾಸ್ ಸರಕಾರದವರು ಒಂದು ಹುಕುಂ ಹೊರಡಿಸಿ, ಸ್ಥಳೀಕ ಸಂಸ್ಥೆಗಳು ಸಾರ್ವಜನಿಕ ಗೃಹಸ್ಥರ ಅಥವಾ ದೇಶದ ಮುಖಂಡರ ಭಾವಚಿತ್ರಗಳನ್ನು ಸ್ಥಳೀಕ ಸಂಸ್ಥೆಗಳಲ್ಲಿ ಇಡುವ ಸಂಬಂಧವಾಗಿ ಹಣವನ್ನು ವೆಚ್ಚಮಾಡತಕ್ಕದ್ದಲ್ಲವೆಂದು ಅಪ್ಪಣೆ ವಿಧಿಸಿರುವರು. ಆದರೆ ಚಕ್ರವರ್ತಿ ದಂಪತಿಗಳ ಭಾವಚಿತ್ರಗಳನ್ನು ಇಡಲು ಅಡ್ಡಿಯಿಲ್ಲವಂತೆ. ಯಾರಾದರೂ ಖಾಸಗಿ ಹಣ ಖರ್ಚುಮಾಡಿ ಮುಖಂಡರ ಭಾವಚಿತ್ರಗಳನ್ನು ಕೊಟ್ಟರೆ ಅವುಗಳನ್ನು ಸ್ವೀಕರಿಸುವ ಮೊದಲು ಸರಕಾರದ ಅಪ್ಪಣೆ ಪಡೆಯಬೇಕಂತೆ.

ಸತ್ಯಾಗ್ರಹಿಗಳಿಗೆ ಸೂಚನೆಗಳು

ಸತ್ಯಾಗ್ರಹಿಗಳಿಗಾಗಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಕೆಳಗಿನ ಸೂಚನೆಗಳನ್ನು ಕಳಿಸಿದ್ದಾರೆ. ಹಳ್ಳಿಗಳ ಸತ್ಯಾಗ್ರಹಿಗಳನ್ನು ನಗರಗಳಿಗೆ ಕರಕೂಡದು. ಸೆರೆ ಹಿಡಿಯಲ್ಪಡದೆ ಇದ್ದ ಸತ್ಯಾಗ್ರಹಿಗಳು ಸೆರೆಮನೆಗೆ ಹೋಗಿ ಯುದ್ಧ ವಿರೋಧಕ ಚಳವಳಿ ಮಾಡಬಹುದು. ಆದರೆ ಅದು ಪಿಕೆಟಿಂಗಿನ ಸ್ವರೂಪ ತಳೆಯಬಾರದು. ಅಲ್ಲದೆ ಬೇಡವೆಂದು ಹೇಳಿದವರ ಮನೆಗಳನ್ನು ಪ್ರವೇಶಿಸಕೂಡದು. ಸ್ಥಾನಿಕ ಸಂಸ್ಥೆಗಳ ಸದಸ್ಯರು ಸತ್ಯಾಗ್ರಹ ಮಾಡುವ ಮೊದಲು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕು. ಭಾವದೊಂದು ಕಾಂಗ್ರೆಸ್ ಸಮಿತಿಯು ಸಸ್ಪೆಂಡಾಗಿದ್ದರೆ ಕಾಂಗ್ರೆಸ್ ಕಾರ್ಯವನ್ನು ಯೋಗ್ಯ ಸತ್ಯಾಗ್ರಹಿಗಳು ನಡೆಸಬೇಕು. ಸೆರೆ ಹಿಡಿಯಲ್ಪಡದೆ ಇದ್ದ ಸ್ತ್ರೀ ಸತ್ಯಾಗ್ರಹಿಗಳು ದಿಲ್ಲಿಗೆ ಹೋಗಲು ಅಸಮರ್ಥರಾದರೆ ತಮ್ಮ ಜಿಲ್ಲೆಗಳಲ್ಲಿ ಇಲ್ಲವೇ ಪ್ರಾಂತದಲ್ಲಿ ಇಚ್ಛೆಪ್ರಕಾರ ಸಂಚರಿಸಬೇಕು. ಬೀದಿಗಳಲ್ಲಿ ಗೊಂದಲ ಹಾಕಿದ ಆರೋಪ ಹೊರಿಸಲ್ಪಟ್ಟರೂ ಸತ್ಯಾಗ್ರಹಿಗಳು ಕೋರ್ಟಿನಲ್ಲಿ ಸಂರಕ್ಷಣೆ ಮಾಡಿಕೊಳ್ಳಬಾರದು. ಯುದ್ಧ ವಿರೋಧಕ ಚಳವಳಿ ಮಾಡುವುದೇ ತಮ್ಮ ಉದ್ದೇಶವಾಗಿತ್ತೆಂದು ಕೋರ್ಟಿಗೆ ಅವರು ಸ್ಪಷ್ಟವಾಗಿ ತಿಳಿಸಬೇಕು. ರಸ್ತೆ ಪ್ರತಿಬಂಧಕ ಆರೋಪವನ್ನು ಅವರು ಅಲ್ಲಗಳೆಯಬೇಕು. ಹರಿಜನ ಕಾಂಗ್ರೆಸ್ ಕಾರ್ಯಕರ್ತರು ವಿಧಾಯಕ ಕಾರ್ಯಕ್ರಮವನ್ನೇ ಮಾಡತಕ್ಕದ್ದು. ಅನಾರೋಗ್ಯಕರ ಇಲ್ಲವೆ ತಿನ್ನಲಿಕ್ಕೆ ಅಯೋಗ್ಯವಿದ್ದ ಆಹಾರವನ್ನು ಜೈಲಿನಲ್ಲಿ ಸತ್ಯಾಗ್ರಹಿಗಳು ತೆಗೆದುಕೊಳ್ಳಕೂಡದು. ಜುಲ್ಮಾನೆ ಮಾಡಿ ಬಿಡುಗಡೆ ಮಾಡಲ್ಪಟ್ಟ ಸತ್ಯಾಗ್ರಹಿಗಳು ಮತ್ತೆ ಸೂಚನೆ ಕೊಡದೆ ಸತ್ಯಾಗ್ರಹ ಮಾಡಬಹುದು. ಜುಲ್ಮಾನೆ ತಪ್ಪಿಸಬಾರದು. ಆದರೆ ಆಸ್ತಿ ಮಾರಿ ಜುಲ್ಮಾನೆ ಕೊಡುವ ಅವಶ್ಯಕತೆ ಇಲ್ಲ. ಗಲಭೆ ಕಲಹವು ಹೆಚ್ಚಿದ ಸ್ಥಳದಲ್ಲಿ ಸತ್ಯಾಗ್ರಹ ಮಾಡಲಾಗದು. ಸತ್ಯಾಗ್ರಹಿಗಳಿಗೆ ಬೇಡಿ ಮುಂತಾದ್ದನ್ನು ಹಾಕಿದರೆ ಶಾಂತಿ ಆಸ್ಪದ ಆನಂದದಿಂದ ಅದನ್ನು ಸಹಿಸಬೇಕು. ದಿಲ್ಲಿಗೆ ಹೊರಟ ಸತ್ಯಾಗ್ರಹಿಗಳು ಯುದ್ಧವಿರೋಧಕ ಘೋಷಣೆ ಮಾಡುವುದಲ್ಲದೆ ವಿಧಾಯಕ ಕಾರ್ಯಕ್ರಮದ ಪ್ರಚಾರವನ್ನೂ ಮಾಡಬೇಕು.

ಅಮೃತ

ರಕ್ತಶುದ್ಧಿಯನ್ನು ಮಾಡುವ ನರಗಳ ದೌರ್ಬಲ್ಯವನ್ನು ಪರಿಹರಿಸುವ ಟಾನಿಕ್!

ಮಲಬದ್ಧತೆ, ಅಜೀರ್ಣ, ಮತ್ತು ಇತರ ಜಠರ ದೋಷಗಳನ್ನು ನಿವೃತ್ತಿಗೊಳಿಸುತ್ತದೆ; ಕ್ಷೀಣಗೊಂಡವರಿಗೆ ತಿರಿಗಿ ಶಕ್ತಿ ಧಾತು ಪುಷ್ಟಿಯನ್ನು ಕೊಡುತ್ತದೆ.

ವಿಶೇಷ ವಿಷಯಗಳಿಗೆ ಯಾವುದೇ ಕೆಮಿಸ್ಟರಲ್ಲಾಗಲಿ, ಇಲ್ಲವೇ ಇವರಲ್ಲಾಗಲಿ ವಿಚಾರಿಸಿರಿ.

“ಕೇಸರೀ ಕುಟೀರಂ”
ಇಂಡಿಯನ್ ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್
ರಾಯಪೇಟೆ, ಮದ್ರಾಸು.

೪ ವಾಚುಗಳು ಮತ್ತು ೪೬ ಬಹುಮಾನಗಳು

ರೂಪಾಯಿ ೧—೪—೦ಕ್ಕೆ



ಉತ್ತಮ ಜಾಮೀನದ 4 ಸೀಸೆ ಒಟ್ಟೊ ರೋಸ್ ಅಥವಾ 6 ಸೀಸೆ ಡಿಂಗ್ ವರ್ಮ (ಗಜಕರ್ಣ) ಮುಲಾಮು ಇವನ್ನು ಕಿಮ್ಮತ್ತಿಗೆ ರೂ. 1—4—0ಕ್ಕೆ ಕೊಂಡುಕೊಂಡವರಿಗೆ ಎರಡು ಬಂಗಾರದ ಗಿಲೀಟಿನ ರಿಸ್ಟ್ ವಾಚು (ಬೇಂಡ್ ಸಹಿತ) ಒಂದು ಪಾಕೆಟ್ ವಾಚು, ಒಂದು ಟೈಂಪೀಸ್, ಒಂದು ಸೇಪ್ಟಿ ರೇಜರ್, ಒಂದು ಶೇವಿಂಗ್ ಬ್ರಶ್, ಒಂದು ಪೇಕೆಟ್ ಪೌಡರ್, ಒಂದು ಬಾಚಣಿಗೆ, ಒಂದು ಸೋಪು, ಒಂದು ಸೆಟ್ ಗುಬ್ಬಿಗಳು, ಒಂದು ಚೂರಿ, ಒಂದು 14 ಕ್ಯಾರೆಟಿನ ನಿಬ್ಬಿನ ಪೆನ್ನು, 500 ಫೀಟು ಫೋಕಸಿನ 36 ತಾಸು ಉರಿಯುವ ಒಂದು ಲೈಟು ಮತ್ತು ಅನೇಕ ಸುಂದರ ವಸ್ತುಗಳು ಅಥವಾ ಒಂದು ಸಲ ಕೀ ಕೊಟ್ಟರೆ 36 ತಾಸು ನಡೆವ 10 ವರ್ಷ ಗ್ಯಾರಂಟಿಯ ಒಂದು ಲಿವರ್ ಪೋಕೆಟ್ ವಾಚು ಸಿಗುತ್ತವೆ. ಪೋಸ್ಟೇಜ್ ಮತ್ತು ಪೇಕಿಂಗ್ ಪ್ರತ್ಯೇಕ 12 ಆಣೆ.

ವಿಳಾಸ:—
THE AMERICAN COMMERCIAL STORES. POST BOX NO. 12213,
CALCUTTA (S. A.)

ಸ್ವದೇಶಾಭಿಮಾನಿ

ತಾರೀಕು 28—3—1941

ಯುಗೋಸ್ಲಾವಿಯಾ ಒಪ್ಪಿತು

ಕಳೆದ ಕೆಲವು ದಿನಗಳಿಂದ ಜಗತ್ತಿನ ಜನರ ದೃಷ್ಟಿಯು ಯುಗೊಸ್ಲಾವಿಯದ ಕಡೆಗೆ ಹರಿದಿತ್ತು; ಜರ್ಮನರ ಒತ್ತಾಯವನ್ನು ಯುಗೊಸ್ಲವಿಯವು ಎದುರಿಸುವುದೇ ಎಂಬ ಬಗ್ಗೆ ಆಶಾದಾಯಕ ಸುದ್ದಿಗಳೂ ಹರಡಲ್ಪಟ್ಟಿದ್ದುವು. ಬ್ರಿಟನು ಅಂತಹ ಸಂದರ್ಭದಲ್ಲಿ ಯುಗೊಸ್ಲವಿಯಕ್ಕೆ ಸಹಾಯಕೊಡುವ ಭರವಸೆಯನ್ನೂ ಕೊಟ್ಟಿತ್ತು. ಆದರೆ ಇಷ್ಟು ದಿನಗಳ ಗಂಭೀರ ವಿಚಾರ ಮಾಡಿದ ಮೇಲೆ, ತನಗೆ ದೊರಕಬಹುದಾದ ಸಹಾಯ, ಶತ್ರುವಿನ ಅನಾಕ್ರಮವು, ತನ್ನ ನೈಸರ್ಗಿಕ ದೌರ್ಬಲ್ಯ ಇವುಗಳನ್ನೆಲ್ಲಾ ಅರಿತುಕೊಂಡು, ಕೊನೆಗೆ ಯುಗೊಸ್ಲೇವಿಯಾ ಜರ್ಮನಿಯ ಒತ್ತಾಯಕ್ಕೆ ಒಪ್ಪಿ ಒಪ್ಪಂದಕ್ಕೆ ಸಹಿಹಾಕಿತು. ಯೂರೋಪಿನ ದುರ್ಬಲ ರಾಷ್ಟ್ರಗಳ ಸಾಲಿನಲ್ಲಿ ಈಯೊಂದು ರಾಷ್ಟ್ರವೂ ನಾಜೀ ಪದಹತಿಯಲ್ಲಿ ಬಿದ್ದು ಭಗ್ನವಾಯಿತು!

ಯುಗೊಸ್ಲವಿಯವನ್ನು ಹೀಗೆ ಬಗ್ಗಿಸಬೇಕಾದರೆ ಜರ್ಮನಿಗೆ ಏನೇನೂ ಕಷ್ಟವಾದಂತೆ ತೋರುವುದಿಲ್ಲ. ಎಲ್ಲಾ ವಿಧದ ಒತ್ತಾಯಗಳನ್ನೂ ಜರ್ಮನಿಯು ಅದರ ಮೇಲೆ ಒಮ್ಮೆಲೇ ಹಾಕಲು ಸಮರ್ಥವಾಯಿತು. ಜರ್ಮನಿಯ ಆರ್ಥಿಕ, ಸೈನಿಕ ರಾಜತಾಂತ್ರಿಕ ಉಪಾಯ ಒತ್ತಾಯಗಳ ಮೂಲಕ ಯುಗೊಸ್ಲವಿಯಕ್ಕೆ ಬೇರೆ ಶರಣಿಲ್ಲವಾಗಿ ಜರ್ಮನಿಯು ತನ್ನ ಉದ್ದೇಶವನ್ನು ಇಂದಿನ ಮಟ್ಟಿಗೆ ಸುಲಭವಾಗಿ ಗಳಿಸಿಕೊಂಡಿದೆ; ಜರ್ಮನಿಗೆ ಇದೂ ಒಂದು ವಿಶೇಷದ ಜಯವೆನ್ನಲು ಅಡ್ಡಿಯಿಲ್ಲ.

ಆಗ್ನೇಯ ಯೂರೋಪಿನ ಐದಾರು ಸಣ್ಣ ರಾಷ್ಟ್ರಗಳನ್ನೂ, ಗ್ರೀಸ್ ಮತ್ತು ಟರ್ಕಿಯನ್ನುಳಿದ ಬಾಲ್ಕನ್ ರಾಷ್ಟ್ರಗಳನ್ನೂ ಇಂದು ಬಗ್ಗುಬಡಿದು ಮುಂದೊತ್ತುತ್ತಿರುವ ಜರ್ಮನಿಯು ಯೂರೋಪಿನಲ್ಲಿ ಪ್ರಬಲವಾದ ರಾಜಕೀಯ ಕ್ರಾಂತಿಯನ್ನೇ ಉಂಟುಮಾಡಿದೆಯೆನ್ನಲು ಯಾತರ ಅಡ್ಡಿಯೂ ಇರುವುದಿಲ್ಲ. ಇಂದು ಯುಗೊಸ್ಲವಿಯವನ್ನು ಶರಣು ಹೊಂದಿಸಿದುದರಿಂದಲಾದರೂ ಜರ್ಮನಿಗೆ ದೊರೆತ ಲಾಭವು ಗಮನಾರ್ಹವಾಗಿಲ್ಲವೆಂದು ಹೇಳುವಂತಿಲ್ಲ. ಜರ್ಮನಿಗೆ ಯುಗೊಸ್ಲೇವಿಯವು ಸೇರಿದರೆ ಯೂರೋಪಿನಲ್ಲಿ ಹೆಚ್ಚಿನ ತೊಂದರೆಯೊದಗುವುದೆಂದೇ ಬ್ರಿಟನು ಯುಗೊಸ್ಲವಿಯಕ್ಕೆ ಜರ್ಮನನ್ನೆದುರಿಸಲು ಸರ್ವ ಸಹಾಯವನ್ನು ಕೊಡುವ ಭರವಸೆಯಿತ್ತಿತು.

ಯುಗೊಸ್ಲವಿಯವನ್ನು ಸ್ವಾಧೀನಪಡಿಸಿಕೊಂಡುದರಿಂದ ಜರ್ಮನಿಯು ತನ್ನ ಸೈನ್ಯವನ್ನು ಗ್ರೀಸ್ ಟರ್ಕಿಗಳಿಗೆ ಈ ದಾರಿಯಾಗಿ ಸಾಗಿಸಲು ಮಾರ್ಗವು ಸುಲಭವಾದಂತಾಯಿತು. ಮಾತ್ರವಲ್ಲದೆ, ಬ್ರಿಟಿಷ್ ಹಡಗುಗಳಿಗೆ ತೊಂದರೆ ಕೊಡುವ ಜಲಾಂತರ್ಗಾಮಿ ನಾವೆಗಳಿಗೆ ಇಲ್ಲಿ ಅನುಕೂಲತೆಯೊದಗುವುದರಿಂದ ಬ್ರಿಟಿಷರೊಡನೆ ಮಾಡುವ ಜರ್ಮನಿಯ ನೌಕಾಯುದ್ಧದಲ್ಲಿ ಇದೂ ಒಂದು ಸಹಾಯವಾದಂತಾಗುವುದು. ಪೂರ್ವ ಭೂಮಧ್ಯ ಸಮುದ್ರದಲ್ಲಿ ಜರ್ಮನಿಯ ಹಂಚಿಕೆಗಳನ್ನು ತೊಂದರೆಗೊಳಿಸುವ ಗ್ರೀಸು ಟರ್ಕಿಗಳಿಗೆ ಇನ್ನು ಮೇಲೆ-ಜರ್ಮನಿಯ ಬೆದರಿಕೆ ಹುಟ್ಟಲು ಇದರಿಂದ, ಅವಕಾಶವೂ ಆಯಿತು.

ಜರ್ಮನಿಯು ಹೀಗೆ ತನ್ನ ಪ್ರಭಾವ ಕ್ಷೇತ್ರವನ್ನು ವಿಸ್ತರಿಸುವುದರೊಡನೆ ತನ್ನ ಹೊಣೆಗಾರಿಕೆಯನ್ನೂ ಹೆಚ್ಚಿಸಿಕೊಂಡಂತಾಗುವುದೆಂಬುದಕ್ಕೆ ಏನೇನೂ ಸಂಶಯವಿಲ್ಲ. ಆದರೆ ಇಂದು ಜಗತ್ತಿನ ಕಣ್ಣು ಮುಂದೆ ಕಾಣುವ ಒಂದೇ ಒಂದು ವಿಷಯವೆಂದರೆ, ಯುಗೊಸ್ಲವಿಯವು ಶರಣಾಗಿ ನಾಜಿಗಳು ವಿಜಯ ಹೊಂದಿದರೆಂಬುದು. ಇದೇ ಜರ್ಮನಿಯು ವಿಶೇಷವಾಗಿ ಕೊಚ್ಚಿಕೊಳ್ಳಬಹುದಾದ ಜಂಭವಾಗಿದೆ.

ಯುಗೊಸ್ಲವಿಯ ಶರಣಾಗದೆ ಅನ್ಯ ಮಾರ್ಗವಿಲ್ಲದಿದ್ದರೂ, ಅದರ ಪತನವು ನಿಜವಾಗಿಯೂ ದುಃಖದಾಯಕವಾಗಿದೆ. ಯುಗೊಸ್ಲವಿಯವು ಸ್ವಾತಂತ್ರ್ಯವನ್ನು ಕಳಕೊಂಡಿದೆ. ಅನ್ಯರಾಷ್ಟ್ರದ, ನಿರ್ದಯ ನಾಜೀ ರಾಷ್ಟ್ರದ ತೀವ್ರ ಪದಹತಿಗೆ ಒಳಗಾಗಿದೆ. ಈ ಸಂಕಟವನ್ನು ವಿಚಾರಿಸಿಕೊಂಡೇ ಅದು ಕೆಲವು ದಿನಗಳಿಂದ ಗಂಭೀರ ವಿಚಾರಕ್ಕೆ ಬಿದ್ದಿತ್ತು. ಆದರೆ ಎಲ್ಲಾ ಕಡೆಗಳಿಂದಲೂ ನಾಜಿ ಹೊಡೆತ ಬೀಳುವ ಸಂಭವವನ್ನು ಪರ್ಯಾಲೋಚಿಸಿ, ಯುಗೊಸ್ಲವಿಯವು ತನ್ನ ಸ್ವಾತಂತ್ರ್ಯವನ್ನು ನಾಜಿಗಳ ಪಾದತಲದಲ್ಲಿ ಇಂದು ಚೆಲ್ಲಿಕೊಟ್ಟಿದೆ! ನಿಜವಾಗಿಯೂ ಪ್ರಜಾಪ್ರಭುತ್ವ ಸ್ವಾತಂತ್ರ್ಯಪ್ರಿಯ ಜಗತ್ತಿಗೆ ಇಂತಹ ಕರುಣ ಕಥೆಯು ಬೇರೊಂದು ಇರಲಾರದು!

ಸಿಲೋನಿನ ಭಾರತೀಯರು

ಸಿಲೋನ್ ಭಾರತಗಳ ಸಂಬಂಧದ ವಿಚಾರವಾಗಿ ಇತ್ತ ಹಲವು ಸಮಯದಿಂದ ಬಹಳ ವಾದ-ವಿವಾದಗಳು ಉಂಟಾದವು. ಸಿಲೋನ್, ಭಾರತದ ನೆರೆಕರೆಯ ದ್ವೀಪವಾಗಿದ್ದು ಬಹುಕಾಲದಿಂದಲೇ ಅಲ್ಲಿಗೆ ಹೋಗಿ ಭಾರತೀಯರು ನೆಲಸಿದ್ದಾರೆ. ಇವರಲ್ಲಿ ಹಲವರು ಕೂಲಿಗಾರರೇ ಆಗಿದ್ದಾರೆ. ಸಿಲೋನ್ ದೇಶದ ಔದ್ಯೋಗಿಕ ಉನ್ನತಿಯಲ್ಲಿ ಈ ಭಾರತೀಯರಿಂದ ಸಿಲೋನಿಗೆ ಬಹಳ ಲಾಭವೇ ಆಗಿದೆಯೆನ್ನಬಹುದು. ಇತ್ತೀಚೆಗೆ ಸಿಲೋನಿನ ಮುಖಂಡರು ಹಾಗೂ ಅಲ್ಲಿನ ಸರಕಾರವು ಭಾರತೀಯ ಕೂಲಿಗಾರರ ವಿಷಯ ಹಾಗೂ ಅಲ್ಲಿ ಹಲಗಾಲದಿಂದ ನೆಲಸಿ ಸಿಲೋನೀಯರೊಡನೆ ಸಂಪರ್ಕಗೊಂಡು ಸ್ಥಿರವಾಗಿ ಉಳಿದ ಭಾರತೀಯರ ವಿಷಯ ಬಹಳ ನಿಷ್ಠುರವಾದ ನೀತಿಯನ್ನೇ ಅನುಸರಿಸತೊಡಗಿದ್ದಾರೆ. ಸಿಲೋನೇ ತಮ್ಮ ಮಾತೃಭೂಮಿಯೆಂದು ಭಾವಿಸಿದ ಜನರ ವಿಷಯವಾಗಿ ಅಲ್ಲಿನ ಮಂತ್ರಿಮಂಡಳದವರು ವಹಿಸುವ ನೀತಿಯಿಂದ, ಹೊರಗಟ್ಟುವ ಕಾರ್ಯದಿಂದ ಬಹಳ ಸಂಕಷ್ಟವೇ ಬಂದೊದಗಿದೆಯೆಂಬುದರಲ್ಲಿ ಏನೇನೂ ಸಂಶಯವಿಲ್ಲ.

ಸಿಲೋನಿನ ಸರಕಾರವಾದರೂ, ತಮ್ಮ ದೇಶೀಯರಿಗೆ ಸಾಕಷ್ಟು ಉದ್ಯೋಗ ಸೌಕರ್ಯಗಳನ್ನು ಕಲ್ಪಿಸಕೊಡುವ ದೃಷ್ಟಿಯಲ್ಲಿ ಹೊರಗಿನಿಂದ ಎಂದರೆ ಭಾರತದಿಂದ ಹೊಸತಾಗಿ ಕೂಲಿಗಾರರು ಬರಬಾರದೆಂದು ಕಾಯಿದೆಯ ಮೂಲಕ ನಿರ್ಬಂಧಪಡಿಸುವುದು ಸಮಂಜಸವೆನಬಹುದು. ಯಾವುದೇ ದೇಶಕ್ಕಾದರೂ ಇಂತಹ ಅವಶ್ಯಕತೆಯಿದ್ದೇ ಇರುತ್ತದೆ. ಆದರೆ ಬಹುಕಾಲದ ಹಿಂದೆ ತಮ್ಮ ದೇಶಕ್ಕೆ ಕೂಲಿಗಾರರಾಗಿ ಬಂದು, ಅಲ್ಲಿನ ಸಂಪತ್ಸಮೃದ್ಧಿಯ ಕಾರ್ಯದಲ್ಲಿ ಬೇಕಾದಷ್ಟು ನೆರವಾಗಿ, ಅದರ ಪ್ರತಿಫಲದಿಂದ ಗಳಿಸಿದ ಆಸ್ತಿಪಾಸ್ತಿಯಲ್ಲಿ ಸ್ಥಿರವಾಗಿ ನೆಲಸಿಕೊಂಡ ಜನರ ವಿಷಯವಾಗಿ ಸರಕಾರವು ಸ್ವಲ್ಪವೂ ದಾಕ್ಷಿಣ್ಯ ತೋರಿಸದೆ ಹೊರದೂಡುವ ಕಾನೂನು ಮಾಡುವುದು ತೀರಾ ಆಕ್ಷೇಪಣೀಯವಿದೆಯೆನ್ನದೆ ನಿರ್ವಾಹವಿಲ್ಲ. ಇಂತಹ ಕಠಿಣ ನೀತಿಯನ್ನು ಅನುಸರಿಸುವ ನಮ್ಮ ಬಂಧುಗಳಾದ ಸಿಲೋನೀಯರು ಮಾನವ ಸಹಜವಾದ ಗುಣವನ್ನು ಮರೆತು ಕಾರ್ಯ ಮಾಡುತ್ತಾರೆಯೆನ್ನುವುದು ವಿಶೇಷವಾಗ ಲಿಕ್ಕಿಲ್ಲ.

ಸಿಲೋನಿನ ಮಹಾಸಭೆಯ ಇಂದಿನ ಈ ನಿರ್ಣಯವು ಕಾರ್ಯರೂಪಕ್ಕಿಳಿದ ಪಕ್ಷದಲ್ಲಿ ಭಾರತ–ಸಿಲೋನುಗಳೊಳಗಿದ್ದ ಮಧುರ ಸಂಬಂಧವು ಸಂಪೂರ್ಣವಾಗಿ ಕೆಟ್ಟುಹೋದಂತೆಯೇ ಆಗುವುದು. ಸಿಲೋನ್ ಮತ್ತು ಭಾರತ ಇವುಗಳ ಭೌಗೋಲಿಕ ಸ್ಥಿತಿಗಳಾದರೂ ಬೇರೆ ಬೇರೆಯೆನುವಷ್ಟು ಅನೈಸರ್ಗಿಕವಾಗಿಲ್ಲ. ಸಾಲದುದಕ್ಕೆ ಆ ಎರಡು ದೇಶಗಳ ಸಂಸ್ಕೃತಿಯನ್ನಾದರೂ ವಿಚಾರಿಸಿದರೆ ಅವುಗಳೊಳಗೆ ಬಹಳ ಸಮೀಪದ ಸಂಬಂಧವೇ ಇರುತ್ತದೆ. ಹಲವು ಸಂಗತಿಗಳಿಂದ ಈ ಎರಡು ದೇಶದ ಜನರು ಬಹಳ ಪ್ರಾಚೀನಕಾಲದಿಂದಲೇ ಬಾಂಧವ್ಯದಿಂದಿರುವವರು. ಆದರೆ, ಇಂದಿನ ಸರಕಾರದ ವ್ಯವಸ್ಥೆಯಿಂದಲಾಗಿ ಈ ಎರಡು ದೇಶಗಳು ಭಿನ್ನವಾಗಿ ಕಂಡರೂ ಹಿಂದೆ ಹೇಳಿದ ಹಲವು ಕಾರಣಗಳಿಂದ ಅಭೇದ್ಯವಾದ ಸಂಬಂಧವು ತೋರದಿರದು. ಸರಕಾರದ ವ್ಯವಸ್ಥೆಯೊಂದನ್ನುಳಿದರೆ ಸಿಲೋನು ಭಾರತವನ್ನು ಬಿಡಲಾರದು; ಬಿಟ್ಟು ಉರ್ಜಿತವಾಗಿ ಬಾಳಲಾರದು. ಹೀಗಿರುವಾಗ ಇಂದು ಕೇವಲ ಸರಕಾರದ ಧೋರಣೆಯೊಂದನ್ನು ಮುಂದಿಟ್ಟು ಭಾರತೀಯರನ್ನು ವಿದ್ವೇಷಿಸುವ ಸಿಲೋನೀಯರ ನೀತಿಯು ಕೇವಲ ಆತ್ಮಘಾತುಕದ್ದಾಗಿದೆಯೆನ್ನದೆ ಬೇರೇನೂ ಹೇಳುವಂತಿಲ್ಲ. ಇದರಿಂದಲಾಗಿ ಸಿಲೋನು ಪ್ರಪಂಚದ ಪ್ರಗತಿಯ ಕಾಲದಲ್ಲಿ ಹಿಂದೆ ಬೀಳುವುದೆಂಬುದರಲ್ಲಿ ಸಂಶಯವಿಲ್ಲ.

ಸಿಲೋನಿಗಿಂತ ಭಾರತವು ಎಲ್ಲಾ ವಿಧಗಳಿಂದಲೂ ಮುಂದುವರಿದಿದೆ. ಅಧಿಕ ಬಲಶಾಲಿಯಿದೆ; ಹೆಚ್ಚು ಪ್ರಗತಿಪುಷ್ಟವಾಗಿದೆ. ಸಂಸ್ಕೃತಿಯುತ್ತಾಗಿದೆ. ಇಂತಹ ಒಂದು ವಿಶೇಷವಾದ ಸಂಬಂಧವನ್ನು ಇಂದು ಈ ರೀತಿಯ ಸಂಕುಚಿತ ಧೋರಣೆ ವಹಿಸಿಕೊಂಡ ಸಿಲೋನು ಕಡಿದುಕೊಳ್ಳುತ್ತಿದೆ. ಭಾರತದವರೂ ಈ ವಿಷಯದಲ್ಲಿ ನ್ಯಾಯವಾಗಿ ತೀವ್ರ ಯೋಚನೆಗೀಳಿಯದಿರದು. ಮುಂದೆ ಉಭಯ ದೇಶಗಳೊಳಗೆ ವೈಷಮ್ಯ ಬೆಳೆಯಲು ಅವಕಾಶವನ್ನು ಸಿಲೋನಿನ ಬಂಧುಗಳೇ ಆಹ್ವಾನಿಸಿಕೊಂಡಿದ್ದಾರೆ. ತಮ್ಮ ಮುಂದಿನ ಏಳಿಗೆಯ ದೃಷ್ಟಿಯಿಂದಲಾದರೂ ಸಿಲೋನಿನ ಬಂಧುಗಳು ಭಾರತದ ಸಂಬಂಧವನ್ನು ಕಡಿದುಕೊಳ್ಳದೆ ಕಾಯ್ದುಕೊಳ್ಳುವುದು ವಿಹಿತವಾದುದು.

ನೋಟೀಸು

ದ. ಕ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S. 3/1941

R. I. A. 33/1941

ಇದ್ದಿ ಬ್ಯಾರಿ–ಪಕ್ಕಿ ಬ್ಯಾರಿಗಳ ಮಗ, ಮಂಗಳೂರು ತಾಲೂಕು ಪೆರಮನ್ನೂರು ಗ್ರಾಮಸ್ಥ

. . . . ಅರ್ಜೀದಾರ–(ವಾದಿ)

ಮತ್ತು

1. ಹಸನಬ್ಯಾರಿ–ಪಕ್ಕಿಬ್ಯಾರಿಗಳ ಮಗ, 2 ಆರಬಿಬ್ಯಾರಿ–ಹಾಜಿ ಅಬ್ದುಲ್ಲ ಮೊಲಾರ ಮಗ, ಸದ್ರಿ ಪೆರಮನ್ನೂರು ಗ್ರಾಮಸ್ಥರು .

ರೆಸ್ಪೋಂಡೆಂಟರು–(ಪ್ರತಿವಾದಿರು)

ಮೇಲೆ ಹೆಸರು ಕಾಣಿಸಿದ 1ನೇ ಪ್ರತಿವಾದಿಯು ತನ್ನ ಎಲ್ಲಾ ಆಸ್ತಿಗಳ ಕುರಿತು 2ನೇ ಪ್ರತಿವಾದಿಗೆ ಮಾಡಿಕೊಟ್ಟ ಪಟ್ಟಾಧಾರೆಗಳನ್ನು–ರದ್ದುಗೊಳಿಸಬೇಕಾಗಿ ಮೇಲಿನ ವಾದಿಯು ಮಾಡಿದ ಮೇಲಿನ ದಾವೆಯನ್ನು ತಾನು ಸದ್ರಿ 1ನೇ ಪ್ರತಿವಾದಿ ಬಾಬ್ತು ಎಲ್ಲಾ ಕ್ರೆಡಿಟರರ ಪರವಾಗಿ ದಾಖಲುಮಾಡಿ ವ್ಯವಹರಿಸುವರೇ ತನಗೆ ಹುಕ್ಕುಂ ಕೊಡಬೇಕಾಗಿ ವಾದಿಯು ಮೇಲೆ ಹೇಳಿದ ಅರ್ಜಿಮಾಡಿರುವುದರಿಂದ ಅದಕ್ಕೆ ಆಕ್ಷೇಪಣೆ ಹೇಳಲಿಕ್ಕೆ ಇರುವವರು ಮೇಲಿನ ಕೋರ್ಟಿನ ಮುಂದೆ ಸ್ವತಹ ಅಥವಾ ವಕೀಲರ ಮುಖಾಂತರ ತಾ. 5—4—'41 ಪೂರ್ವಾಹ್ನ 10 ಘಂಟೆಗೆ ಹಾಜರಾಗಿ ತಮ್ಮ ಆಕ್ಷೇಪಣೆ ಬರಹ ಮೂಲಕ ಹೇಳಿಕೊಳ್ಳಬೇಕಾಗಿಯೂ ಇಲ್ಲವಾದ್ರೆ ಅರ್ಜಿ ಪ್ರಕಾರ ಹುಕ್ಕುಂ ಆದೀತಾಗಿಯೂ ಈ ಮೂಲಕ ಸರ್ವರಿಗೂ ತಿಳಿಸಲಾಗಿದೆ.

ಮಂಗಳೂರು 20—2—'41 } K. Balakrishna Rao, ಅರ್ಜಿದಾರ (ವಾದಿಯ) ಎಡ್ವೊಕೇಟ್

ಬರಹ ಬಾರದವರೆಂದು ರಾಜಾಜಿ ಎಣಿಸಲ್ಪಟ್ಟರು!

೧೯೨೧ರ ಸೆರೆಮನೆಯ ಜೀವನದಲ್ಲಿ

— ಅದರ ಕುರಿತು ಅವರು ಬರೆದ ರಮ್ಯ ಲೇಖನ —

ಸೆರೆಮನೆಯ ಕಠಿಣ ಬಾಗಿಲುಗಳನ್ನು ತೆರೆದು ಆ ಒಂದು ದುರ್ಬಲ ಶರೀರದ ಮನುಷ್ಯನನ್ನು ಒಳಗೆ ದೂಡಿ ಆತನ ಕೊರಳಿಗೆ ನಂ.೮೩೯೮ ಕೈದಿಯೆಂಬ ಬಿರುದನ್ನು ಕಟ್ಟಿದ ಆ ಕಾಲದಲ್ಲಿ, ವೆಲ್ಲೂರಿನ ಸೆರೆಮನೆಯ ಅಧಿಕಾರಿಯು ಮುಂದೆ ಅದೇ ಮನುಷ್ಯನು, ಆದೇ ಕೈದಿ ನಂಬ್ರ ೮೩೯೮, ಅವನೇ ತನ್ನ ಪ್ರಾಂತದ ಪ್ರಧಾನ ಮಂತ್ರಿಯಾಗಿ ಮೂರು ವರ್ಷಗಳ ತನಕ ಬಹಳ ಪ್ರಖ್ಯಾತನಾಗಿ ಆಳಬಹುದೆಂದು ಕನಸು ಮನಸ್ಸುಗಳಲ್ಲಿಯೂ ಎಣಿಸಿರಲಿಕ್ಕಿಲ್ಲ. ಅದೇ ರಾಜಾಜಿ ಇಂದೂ ತಿನ್ನ ಹಿಂದಿನ ಸೆರೆಮನೆ ಆಶ್ರಮವನ್ನು ಸೇರಿದ್ದಾರೆ! ೧೯೨೧ರಂದು ಸೆರೆಮನೆಯಲ್ಲಿ ಕಳೆದ ತನ್ನ ಜೀವನದ ವಿಷಯವಾಗಿ '೧೯೨೧ರ ಸೆರೆಮನ ಜೀವನ' ಎಂಬ ಪುಸ್ತಕದಲ್ಲಿ ರಾಜಾಜಿ ಬಹಳ ಘು ನೋರಂಜಕ ಮನೋವೇದಕವಾಗಿ ಬರೆಯುತ್ತಾರೆ. ಭಾರತದ ಪ್ರಸಿದ್ಧ ಮೇಧಾವಿಗಳಲ್ಲಿ ಒಬ್ಬನೆನಿಸಿದ ಮಹಾಪುರುಷನ ಲೆಕ್ಕಣಿಕೆಯಿಂದ, ಜೀವನಅನುಭವದ ಆಳದಿಂದ ಹೊರಟ ಆ ಮಾತುಗಳು ಬಹಳ ಚಿತ್ತಸ್ಪರ್ಶಿಯಾಗಿವೆ

ದುರ್ಬಲ ಆರೋಗ್ಯ ಪ್ರಕೃತಿ

ರಾಜಾಜಿಯವರ ಆರೋಗ್ಯವು ಅಷ್ಟು ಒಳ್ಳೆಯದಿರಲಿಲ್ಲ. ಆಗ ಅವರಿಗೆ ೪೨ ವರ್ಷ ಪ್ರಾಯವಾಗಿತ್ತು. ೧೦೪ ಪೌಂಡು ಭಾರ ಇತ್ತು ಅವರ ದೇಹ. ಅವರ ಕುರಿತು ಗಾಂಧಿಜಿಯವರೇ ಒಮ್ಮೆ ತಮಾಷೆಗೆ ಹೀಗೆ ಬರೆದಿದ್ದರು: ನಾನೇ ಬಹಳ ಕೃಶನೆಂದು ಬಾಂದವನೆಂದು ಗ್ರಹಿಸಿದ್ದೆ. ಆದರೆ ರಾಜಾಜಿಯವರು ನನಗಿಂತಲೂ ಹೆಚ್ಚು ಸೌಂದರ್ಯ ಕವಿಯವರಾಗಿ ನನ್ನನ್ನು ಸೋಲಿಸಿದ್ದಾರೆ' ರಾಜಾಜಿಗೆ ಆಸ್ತ್ಮಾ ರೋಗವಿತ್ತು. ಕಾಲಲ್ಲಿ ... ಗಳು ವಸಿದ್ದುವು ಎಂದು ಬಕ್ಕಿ ಬಹಳ ಭಾರವಿತ್ತು. ಅವನ್ನು ಐದು ಮಿನಿಟುಗಳ ವರೆಗೆ ಎದದ ಒಗೆವಷ್ಟು ತ್ರಾಣವು ಅವರಿಗಿರಲಿಲ್ಲ. ಸ್ವಲ್ಪ ಮಾತ್ರವೇ ಆಯಾಸವಾದರೂ ಅದರಿಂದ ಅವರು ಬಹಳ ಕಂಗಾಲಾಗುತ್ತಿದ್ದರ

ನಿರಕ್ಷರರೆಂದು ರಿಕಾರ್ಡು

ರಾಜಾಜಿಯವರ ಕುರಿತು ಸೆರೆಮನೆಯ ರಿಕಾರ್ಡಿನಲ್ಲಿ ನಿರಕ್ಷರರೆಂದಿತ್ತು! ಇದು ಅತ್ಯಂತ ಆಶ್ಚರ್ಯದ ಸಂಗತಿಯಾಗಿದೆ. ರಾಜಾಜಿ ಆಗಲೇ ವಕಾಲತ್ತು ಬಿಟ್ಟಿದ್ದರಾದರೂ ಬಹಳ ಪ್ರಸಿದ್ಧಿ ಪಡೆದ ವಕೀಲರೆನಿಸಿದ್ದರು!

ಜೈಲಿಗೆ ಹೋಗುವವರು ಸ್ವಲ್ಪವಾದರೂ ಸಂಗೀತ ಮತ್ತು ಸಂಸ್ಕೃತ ಭಾಷಾ ಜ್ಞಾನ ಮಾಡಿಕೊಳ್ಳಬೇಕೆಂದು ರಾಜಾಜಿ ಬರೆಯುತ್ತಾರೆ. ಸಂಗೀತದ ಜ್ಞಾನವು ನನಗಿಲ್ಲ. ಆದುದರಿಂದ ನನ್ನ ಅಲ್ಲಿನ ಜೀವನದಲ್ಲಿ ಬಹಳ ಬೇಸರವಿತ್ತು. ಸಂಸ್ಕೃತಭಾಷಾಜ್ಞಾನವೂ ಆಗ ಇರಲಿಲ್ಲ. ಅದರಿಂದ ಬಹಳ ತೊಂದರೆಯಾಯಿತು. ಎಂದು ಅವರು ಬರೆಯುತ್ತಾರೆ. ಕತ್ತಲು ಕೋಣೆಯನ್ನು ಸೇರಿದವನಿಗೆ ಪಂಜರದಲ್ಲಿ ಬಿದ್ದ ನರನಿಗೆ, ಒಮ್ಮೆ ಒಂದು ಹಾಡು ಮನಸ್ಸಿನ ಅನೇಕ ಉದ್ವೇಗ ವಿಚಾರಗಳನ್ನು ಕಳೆದುಬಿಡಬಹುದು. ಮತ್ತೆ ದೇವವಾಣಿಯಾದ ಸಂಸ್ಕೃತವು ಆನಂದವನ್ನೇ ಕೊಡಬಹುದು

ಮನೆಯ ನೆನಪು

ಸೆರೆಮನೆಯಲ್ಲಿ ಅವರು ಒಬ್ಬ ಆದರ್ಶ ಕೈದಿಯಾಗಿದ್ದರು. ತನ್ನ ಅನುಯಾಯಿಗಳ ಮತ್ತು ಅಧಿಕಾರಿಗಳ ಇಬ್ಬರ ಪ್ರೀತಿಗೂ ಪಾತ್ರರಾಗಿದ್ದರು. ಅಲ್ಲಿ ಉಂಟಾದ ಯಾವುದೇ ಗಲಭೆಯನ್ನು ರಾಜಾಜಿ ಶಾಂತಪಡಿಸುತ್ತಿದ್ದರು.

'ನನ್ನನ್ನು ಲಾಕಪ್ಪಿನಲ್ಲಿ ಹಾಕಿದ ಆ ದಿನ ನಾನು ಕೋಣೆಯೊಳಗೆ ಕುಳಿತುಕೊಂಡೆನು. ನಾನು ತಿಳಿಯುವಂತೆಯೇ ನನ್ನಲ್ಲಿ ದೌರ್ಬಲ್ಯವು ತಲೆದೋರಿತು. ನನ್ನ ಮಕ್ಕಳ ನೆನಪು ನನಗೆ ಬಂತು, ನನಗೆ ಅವನ್ನು ತಡೆವುದಾಗಲಿಲ್ಲ. ಅದರ ಸಲುವಾಗಿ ನಾನು ಆತ್ಮದೊಡನೆ ಹೋರಾಡಬೇಕಾಯಿತು'

ಡೈರಿಯಲ್ಲಿ ಅವರ ಹೀಗೆ ಬರೆದಿರುವರು:—

'ನಾನು ೧೦೦ ಸಲ ಗಾಯತ್ರಿ ಹೇಳುವವನು. ಪ್ರಾರಂಭದಲ್ಲಿ ಮೊದಲು ಹೀಗೆ ಮಾಡುವುದು ಕಷ್ಟವಾಯಿತು. ಆದರೆ ಪ್ರತಿ ದಿನ ಹೋದಂತೆ ಸೆರೆಮನೆಯಲ್ಲಿ ಅದಕ್ಕೆ ಬಹಳ ಸೌಕರ್ಯ ದೊರಕಿತು. ದೇವರ ಸ್ಮರಣೆಯಿಂದ ಒಲಿದೊಂದ ನಾನು ಈ ಸೆರೆಯ ಭದ್ರವಾದ ಬಾಗಿಲುಗಳನ್ನಾದರೂ ಮುರಿಯುವಷ್ಟು ಬಲವನ್ನು ಪಡೆದೆನೆಂದು ಭಾವಿಸಿದೆನು. ಸತ್ಯ ಮತ್ತು ನ್ಯಾಯದ ಸಲುವಾಗಿ ಎಷ್ಟು ಕಡಿಮೆ ಜನರು ಮಾತ್ರ ಶಿಕ್ಷೆಗೆ ಒಳಗಾಗಿದ್ದಾರೆ! ಇಂತಹ ಕೆಲವರಲ್ಲಿಯೂ ನಮ್ಮ ಮಾತೃಭೂಮಿ ಎಷ್ಟು ಜನರನ್ನು ಪಡೆದಿರುವಳು? ಅಂತಹವರು ಕೆಲವರೇ! ನಿಜವಾಗಿಯೂ ಅಂತಹವರಲ್ಲಿ ನಾನೊಬ್ಬ. ಇದು ನಾನು ಪಡೆದ ಭಾಗ್ಯವೆಂದು ನಾನು ಭಾವಿಸಿದೆನು. ಇದೊಂದು ನನ್ನ ಅಹಂಕಾರವೇ ಆಯಿತು. ಇದೇ ನಾನು ದೇವರಿಂದ ಬಲಪಡೆದೆನೆಂಬ ಸಿಧ್ಧಾಂತವನ್ನು ಉಂಟುಮಾಡಿತು.'

ರಾಜಾಜಿ ಇನ್ನೊಂದು ಕಡೆ ಹೀಗೆಂದು ಬರೆದಿರುವರು —

'ಆತ್ಮಶಕ್ತಿ ಎಷ್ಟು ದೃಢವಾದರೂ ಶರೀರ ದುರ್ಬಲ ತಾನೆ? ಇದರಿಂದಲೇ ರಾಜಾಜಿ ತನ್ನ ಪುಸ್ತಕದಲ್ಲಿ ಹೀಗೆ ಬರೆದರು:—

ವಸ್ತ್ರ ಒಗೆವ ಕೆಲಸ ನನಗೆ ಬಹಳ ಕಷ್ಟವಾಯಿತು. ನನಗೆ ಅತ್ಯಂತ ಆಯಾಸವೇ ಉಂಟಾಯಿತು. ಚೆನ್ನಾಗಿ ಊಟ ಮಾಡುವುದೂ ನನ್ನಿಂದ ಆಗಲಿಲ್ಲ. ಅಪರಾಹ್ನ ೨ ತಾಸಿನ ವರೆಗೆ ನನಗೆ ಹಾಸಿಗೆ ಬಿಡುವುದಾಗಲಿಲ್ಲ. ನಾನೆಷ್ಟು ದುರ್ಬಲನಾದೆನೊ? ಪ್ರಾಯ ಮತ್ತು ಅನಾರೋಗ್ಯಗಳು, ನಾನು ಮುದುಕನಲ್ಲದಿದ್ದರೂ, ನನ್ನ ತಾರುಣ್ಯವು ಹುಚ್ಚೆಂದು ಹೇಳುತ್ತಿವೆ.'

ಹಾಗೆ ದಿನಗಳು ಧ್ಯಾನ ತಪಸ್ಸುಗಳಲ್ಲಿ ಕಳೆದವು. ನೂಲುವುದರಲ್ಲಿ, ಓದುವುದರಲ್ಲಿ, ಭಾಷಾಂತರ ಮಾಡುವುದರಲ್ಲಿ ಹೊತ್ತು ಹೋಯಿತು. ಇರುಳು ಘೋರವಾಗಿತ್ತು, ಹಾಸುವುದಕ್ಕೆ ತಗಣೆ ನುಸಿಗಳ ಕಾಟವು ಸಹಿಸದಾಗಿತ್ತು. ಸಾಕಷ್ಟು ನಿದ್ರೆಗೆ ಅವಕಾಶವಿರಲಿಲ್ಲ!!

ಯೌವನದ ನೆನಹು!

ಆಗಾಗ ಏಕಾಂತಜೀವನವಾದ ಸರೆಮನೆಯಲ್ಲಿ ಅವರಿಗೆ ಮನೆಯ ನೆನಪು ಬರುತ್ತಿತ್ತು. ಆಲಿದಾಡುವ ಪಕ್ಷಿಗಳ ವಿಚಾರದ ಲೆದಾಟವನ್ನುಂಟುಮಾಡುತ್ತಿದ್ದವು. ತಾಯಿ ನೆನಪು ಬರುತ್ತಿತ್ತು, ನಾಗಸ್ವರದ ಶಬ್ದ ಕೇಳಿದಾಗ, ತನ್ನ ಅಗಲಿದ ಆತ್ಮವಲ್ಲಭೆಯ ನೆನಹು ಬರುತ್ತಿತ್ತು. ಹೀಗೆ ಆ ಬರಹದಲ್ಲಿ ರಾಜಾಜಿ ತನ್ನ ಜೀವನದ, ಸಂಸಾರದ ಹಲಕೆಲವು ರಮ್ಯ ಚಿತ್ರವನ್ನು ಕೊಟ್ಟಿದ್ದಾರೆ.

'ಈ ಸ್ವಪ್ನಜಗತ್ತಿನಲ್ಲಿ ನಾನು ಅಲೆದಾಡುವೆನು. ಕಂಬನಿಗಳು ಕೆಳಗೆ ಉದುರದೇ ಉಳಿಯುತ್ತಿರಲಿಲ್ಲ. ದೇವರು ನನಗೆ ಕೊಡದೆ ಇದ್ದುದಿರಲಿಲ್ಲ. ನನ್ನ ಪತ್ನಿ, ನನ್ನ ಮಿತ್ರರು ಎಲ್ಲರೂ ನನ್ನನ್ನು ಚೆನ್ನಾಗಿ ಪ್ರೀತಿಸುತ್ತಿದ್ದರು. ದೇವರು ಅದನ್ನು ಕೊಟ್ಟಿದ್ದಾನೆ. ಆಘಲೆ ಅಷ್ಟುಮಾತ್ರ ಪ್ರೀತಿ ಪಡೆದು ಯಾವನು ತಾನೇ ಸಮಾಧಾನಪಟ್ಟುಕೊಂಡಾನು?

ತಾಯಿ ಮತ್ತು ಪತ್ನಿ

'ತಾಯಿ ನೆನಪು ಆಗಾಗ ರಾಜಾಜಿಯವರ ಹೃದಯವನ್ನು ಕೊರೆಯುತ್ತಿತ್ತು!'

'ಹೇಗೋ, ದಿನದಿನವೂ ತನ್ನ ಒಡತಾಯ ನೆನಪು ನನ್ನನ್ನು ಬಾಧಿಸುತ್ತದೆ. ತನ್ನ ಪ್ರೀತಿಯು, ತನ್ನಾಧಾರವಾದ ಮಗನು ಇಂತಹ ಒಂದು ಕಠಿಣ ಪಂಜರದಲ್ಲಿ ಬೀಗದಡಿ ಹಾಕಲ್ಪಟ್ಟು ಇಡಲ್ಪಟ್ಟಿರುವನೆಂದು ಆಕೆಗೆ ನೆನಪು ಆಗುವುದೂ ಕಷ್ಟವೇ ಆಗಿದೆ. ಈ ತರದ ಹೋರಾಟ ಹೂಡುವುದರ, ಕಷ್ಟ ಅನುಭವಿಸುವುದರ ಚಂದ ಹೆಚ್ಚು ಅಗತ್ಯವನ್ನು ನಾನು ಆಕೆಗೆ ತಿಳಿಸಿ ಹೇಳಬಹುದು. ಆದರೆ ಇನ್ನೊಂದು ಆತ್ಮವಿದೆ, ಆ ಆತ್ಮ ಈ ಲೋಕದಿಂದ ಆ ಲೋಕಕ್ಕೆ ಹಾರಿ ಹೋಗಿದೆ, ಆ ಆತ್ಮವಾದರೂ ನಾನು ಒಂದಾನೊಂದು ದಿನ ಸೆರೆಮನೆ ಸೇರಬಹುದೆಂದು ನೆನಸಿರಲಿಕ್ಕೆ ಇಲ್ಲ. ಏಕೆಂದರೆ ಅವಳಿಗೆ ಗೊತ್ತು, ಎಷ್ಟೋ ಅಪರಾಧಿಗಳನ್ನು ಬಿಡಿಸಿ ಕೊಡುವವನಾಗಿ, ನಾನು ಕಠಿಣವಾದ ಜೈಲಿನ ಜೀವನದಿಂದ ಬಿಡುಗಡೆಗೊಳಿಸಿದ ಸಮರ್ಥನೆಂಬುದ!

ಆದರೆ ತನ್ನ ಜತೆಕೆಲಸಗಾರರು ಒಬ್ಬೊಬ್ಬರೇ ಸೆರೆಮನೆಯನ್ನು ಒಂದು ಸೇರುವಾಗ, ಹೊರಗಿನ ವಿಚಾರಗಳೆಲ್ಲ ಮಾಯವಾಗುವುದೂ, ಮತ್ತೆ ಹೊರಗೆ ಹೋಗುವುದೇ ಒಂದು ರೀತಿಯ ಸಂಕಟವಾಗುವುದೂ ಎಂದು ಅದರು ಬರೆದಿರುವರು.

ಮತ್ತೆ ಸೆರೆವಾಸ ಮುಗಿದ ಕೂಡಲೆ ಮಿತ್ರರಿಗೆ ಅಭಿವಂದನೆ ಮಾಡಿ ರಾಜಾಜಿ ಹೊರಹೊರಟರು. ಜೈಲು ಸುಪರಿಂಟೆಂಡೆಂಟರು ಬೀಳಬಂದವರು, 'ಹೊರಗಿನ ಸ್ವಾತಂತ್ರ್ಯಕ್ಕೆ ಹೋಲುವುದಕ್ಕಿಂತ ಒಳಗಡೆಯಲ್ಲಿ ಜೈಲು ಒಳ್ಳೆಯದಿಲ್ಲವೇ' ಎಂದು ರಾಜಾಜಿಯೊಡನೆ ಕೇಳಿದರು. 'ಒಳಗಡೆ ನಾವು ನೆನಸಿದಷ್ಟು ಕೆಟ್ಟದು ಇಲ್ಲ'' ಎಂದರು ರಾಜಾಜಿ.

'ಹಾಗಾದರೆ ಮರಳಿ ಇಲ್ಲಿಗೆ ಬರಬೇಡಿ' ಎಂದು ಹೇಳುತ್ತ ಸುಪರಿಂಟೆಂಡೆಂಟರು ಕಳುಹಿಸಿದರು.

ಇಲ್ಲಿಗೆ ಸೆರೆಮನೆಯ ಜೀವನ ಇತಿಹಾಸವು ಮುಗಿಯುತ್ತದೆ.



ಸುಯೇಜಿಗಾಗಿ ಕದನವೇ?

ಅದರ ಸೋಲು ಗೆಲವುಗಳ ಮೇಲೆ—

ಪ್ರಪಂಚದ ಭಾಗ್ಯ ನಿರ್ಧಾರವೇ?

ಸೈನಿಕ ಕಾರ್ಯಕ್ರಮಗಳ ದೃಷ್ಟಿಯಿಂದ ಆಲೋಚಿಸುವುದಾದರೆ, ಭೂಮಧ್ಯ ಸಮುದ್ರದ ಪಶ್ಚಿಮ ಕೊನೆಯಲ್ಲಿರುವ ಜಿಬ್ರಾಲ್ಟರ ಜಲಸಂಧಿಯು ಯಾವ ಪ್ರಾಮುಖ್ಯತೆಯನ್ನು ಪಡೆದಿರುವುದೋ ಅದೇ ಪ್ರಾಮುಖ್ಯತೆಯನ್ನು ಈ ಸಮುದ್ರದ ಪೂರ್ವ ಕೊನೆಯಲ್ಲಿರುವ ಸುಯೇಜ್ ಕಾಲುವೆಯೂ ಪಡೆದಿರುತ್ತದೆ. ೧೮೭೫ರಲ್ಲಿ ಡಿಸ್ರೇಲಿಯು ಈಜಿಪ್ತಿನ ಅರಸನಿಂದ ಈ ಕಾಲುವೆಯ ಶೇಕಡಾ ೪೪ರಷ್ಟು ಪಾಲುಗಳನ್ನು ಬ್ರಿಟಿಷ್ ಸರಕಾರಕ್ಕಾಗಿ ಕ್ರಯಕ್ಕೆ ಕೊಂಡುದಲ್ಲವಾದರೆ, ಬ್ರಿಟಿಷ್ ಸಾಮ್ರಾಜ್ಯದ ರೂಪುರೇಷೆಗಳು ಈಗಿರುವುದರಿಂದ ಸಂಪೂರ್ಣ ಬೇರೆಯಾಗಿ ಇರುತ್ತಿದ್ದವು. ಸುಯೇಜ್ ಕಾಲುವೆಯ ಮೇಲೆ ಸರಕಾರದ ಅಧಿಕಾರ ಸ್ಥಾಪನೆಯಾದ ಕಾರಣದಿಂದಲೇ ಅದಕ್ಕೆ ತನ್ನ ಪೂರ್ವದ ಸಾಮ್ರಾಜ್ಯ ವಿಭಾಗವನ್ನು ವಿಸ್ತರಿಸುವುದೂ, ಕಾಯುವುದೂ ಅತ್ಯಂತ ಸುಲಭವಾಗಿ, ಯೂರೋಪಿನಲ್ಲಿ ಬ್ರಿಟಿಷರ ಪ್ರಭಾವವು ಅತಿ ಬೆಳೆಯುವಂತಾಯಿತು. ಅದಲ್ಲವಾಗಿದ್ದರೆ ಅದು ತನ್ನ ಎಲ್ಲಾ ಕಾರ್ಯವ್ಯವಹಾರಗಳನ್ನು ಕೇಪ್ ಭೂಶಿರದ ಸುತ್ತುದಾರಿಯ ಮೂಲಕ ಬಹಳ ಪರಿಶ್ರಮದಿಂದ ಮಾಡಬೇಕಾಗಿ, ಮುಂದಿನ ಘಟನೆಗಳ ಪರಿಣಾಮವಾಗಿ ಬ್ರಿಟಿಷ್ ಸಾಮ್ರಾಜ್ಯವೆಂದರೆ ಕೇವಲ ಬ್ರಿಟಿಷ್ ನಡುಗಡ್ಡೆಗಳೆಂದೇ ಆಗುತ್ತಿತ್ತು.

ಸಾಮ್ರಾಜ್ಯದ ಭವಿಷ್ಯ

ಬ್ರಿಟಿಷ ಸಾಮ್ರಾಜ್ಯದ ಭವಿಷ್ಯವು ಪಶ್ಚಿಮದಲ್ಲಿ ಜಿಬ್ರಾಲ್ಟರದ ಬಂಡೆಯ ಮೇಲೂ ಪೂರ್ವದಲ್ಲಿ ಸುಯೇಜದ ಮರಳು ದಂಡೆಯ ಮೇಲೂ ರೂಪಿತವಾಗಿದೆ. ಪ್ರಪಂಚದ ಭೂಗೋಲದಲ್ಲಿ ಸುಯೇಜ ಕಾಲುವೆಯು ಪ್ರಾಮುಖ್ಯ ಸ್ಥಾನವನ್ನು ಪಡೆದಿದೆ. ಕಾಲುವೆಯನ್ನು ಕಡಿಯುವ ಮೊದಲು ಸುಯೇಜ ಭೂಸಂಧಿಯು ಏಸ್ಯ ಮತ್ತು ಆಫ್ರಿಕದ ವಿಸ್ತಾರವಾದ ಭೂಭಾಗಗಳನ್ನು ಒಂದುಗೂಡಿಸಿತ್ತು. ಆ ಪ್ರದೇಶವು ಮರಳಿನಿಂದ ತುಂಬಿರುವುದರಿಂದ, 'ಕೇಪ್' ಭೂಶಿರದ ಸಮುದ್ರದಾರಿಯನ್ನು ಕಂಡುಕೊಳ್ಳುವ ತನಕ ಪಶ್ಚಿಮದ ನಾವಿಕರು ಪೂರ್ವದವರನ್ನಾಗಲೀ, ಪೂರ್ವದ ನಾವಿಕರು ಪಶ್ಚಿಮದವರನ್ನಾಗಲೀ ನೋಡುವುದು ಅಪರೂಪವಾಗಿತ್ತು. ಆದರೆ ಸುಯೇಜ ಭೂಸಂಧಿಯನ್ನು ಕಡಿದು ಕಾಲುವೆ ಮಾಡುವ ವಿಚಾರ ಬಹು ಪುರಾತನ ಕಾಲದ ಜನರಿಗೂ ಇತ್ತೆಂದು ಕಾಣುತ್ತದೆ. ಕ್ರಿಸ್ತ ಪೂರ್ವದಲ್ಲಿಯೇ ಇಲ್ಲಿ ಕಾಲುವೆ ಕಡಿದ ಕೀರ್ತಿಯು ಅಂದಿನಿಂದ ಸಾವಿರಾರು ವರ್ಷಗಳು ಕಳೆದ ಮೇಲೆ ಫರ್ಡಿನಾಂಡ್ ಡಿ ಲೆಸೆಪ್ಸ ಎಂಬ ಫ್ರೆಂಚನಿಗೆ ಪ್ರಾಪ್ತವಾಯಿತು.

ಕಾಲುವೆಯ ಇತಿಹಾಸ

೧೮೫೪ರಲ್ಲಿ ಫರ್ಡಿನಾಂಡನು ಈಜಿಪ್ತಿನ ಅರಸನಿಂದ ಕಾಲುವೆ ಕಡಿಯುವ ಅನುಮತಿಯನ್ನು ಪಡೆದಿದ್ದನು. ವರ್ಷದ ೯೯ ವರ್ಷಗಳ ತನಕ ಹೆಚಿನ ಯಾವ ಕೆಲಸವೂ ನಡೆಯಲಿಲ್ಲ. ಏಕೆಂದರೆ ಕಾಲುವೆ ಕಡಿಯಲಿಕ್ಕೆ ತುರ್ಕಿಯ ಸುಲ್ತಾನನ ಒಪ್ಪಿಗೆಯೂ ಬೇಕಾಗಿತ್ತು. ಅದು ದೊರೆಯುವ ತನಕ ಫರ್ಡಿನಾಂಡನು ಹಣಸಂಗ್ರಹ ಮಾಡುತ್ತ ಇದ್ದನು. ೧೮೫೯ರಲ್ಲಿ ಆ ಒಪ್ಪಿಗೆಯೂ ದೊರೆಯಲು, ಕೂಡಲೇ ಕೆಲಸವನ್ನಾರಂಭಿಸಿ ಅವನು ಮೂರು ವರ್ಷಗಳಲ್ಲಿ ಕಾಲುವೆಯನ್ನು ಕಡಿದು ಮುಗಿಸಿದನು. ೧೮೬೯ನೇ ನವಂಬರ ತಿಂಗಳಲ್ಲಿ ಈ ಕಾಲುವೆಯ ಅನಾವರಣ ಸಮಾರಂಭ ನಡೆಯಿತು. ಈ ಕಾಲುವೆ ಕಡಿಯಲಿಕ್ಕೆ ೪೪೦ ಮಿಲಿಯ ಫ್ರಾಂಕುಗಳು ಖರ್ಚಾಗಿದ್ದವು. ಆ ಸಮಯದಲ್ಲಿ ಫ್ರೆಂಚ್ ಸರಕಾರವು ಅನೇಕ ಬಗೆಯ ಕಷ್ಟನಷ್ಟ ನಿರಾಶೆ ಬಳಲಿಕೆಗಳಿಗೆ ಬಲಿಯಾಗಿದ್ದುದರಿಂದ ಕಾಲುವೆ ಕಡಿದು ಕೃತಕೃತ್ಯನಾಗಲಿಕ್ಕೆ ಫರ್ಡಿನಾಂಡನು ಭಗೀರಥ ಪ್ರಯತ್ನಗಳನ್ನೇ ಮಾಡಬೇಕಾಯಿತು. ಬ್ರಿಟಿಷ ಸರಕಾರದ ಪ್ರಬಲ ವಿರೋಧವನ್ನು ಕೂಡ ಅವನು ಎದುರಿಸಬೇಕಾಗಿತ್ತು.

ದೂರದೃಷ್ಟಿಯ ಪರಿಣಾಮ

ಕಾಲುವೆ ಕಡಿಯಲಿಕ್ಕೆ ಬ್ರಿಟಿಷ್ ಸರಕಾರವು ಬಹಳ ವಿರೋಧ ಮಾಡಿತಾದರೂ ಮತ್ತೆ ಅದು ಆ ಕಾಲುವೆಯ ಮಹತ್ವಾದ ಉಪಯೋಗವನ್ನು ಕಂಡುಕೊಂಡಿತು. ಕಾಲುವೆಯ ಅಧಿಕಾರವು ಶತ್ರು ಪಕ್ಷದ ಕೈಗೆ ಹೋದರೆ ಸಾಮ್ರಾಜ್ಯದ ಮೇಲಾಗುವ ದುಷ್ಪರಿಣಾಮವನ್ನು ಅದು ತಿಳಿಯಿತು. ಆದ್ದರಿಂದ ಕಾಲುವೆಯಲ್ಲಿ ಹಡಗುಗಳ ಚಲಾವಣೆಗೆ ಆರಂಭವಾದ ಆರು ವರ್ಷಗಳ ಒಳಗಾಗಿಯೇ ಅದು ಈಜಿಪ್ತಿನ ಅರಸನಿಂದ ಶೇಕಡಾ ೪೪ರಷ್ಟು ಕಾಲುವೆಯ ಪಾಲುಗಳನ್ನು ಪಡೆಯಿತು. ಈ ಒಂದು ಕಾರ್ಯದ ಪರಿಣಾಮವಾಗಿ ಸುಯೇಜ ಕಾಲುವೆಯ ಮೇಲೆ ಮಾತ್ರವಲ್ಲ, ಕ್ರಮಶಃ ಈಜಿಪ್ತಿನ ಮೇಲೆ ಕೂಡ ಬ್ರಿಟಿಷರ ಕೈ ಮೇಲಾಗತೊಡಗಿತು. ೧೮೮೨ರಲ್ಲಿ ಈಜಿಪ್ತು ಬ್ರಿಟಿಷರ ಅಧೀನವಾಯಿತು. ಆಗ ಯುರೋಪಿನ ರಾಷ್ಟ್ರಗಳು ಕತ್ತರಿದುವು. ಅವು ಚಳವಳಿಸಿದ ಪರಿಣಾಮವಾಗಿ ೧೮೮೮ರಲ್ಲಿ ಸುಯೇಜ ಕಾಲುವೆಯು ಅಂತರಾಷ್ಟ್ರೀಯ ಸೊತ್ತೆಂದು ಒಡಂಬಡಿಕೆಯಾಯಿತು.

ಯುದ್ಧಕಾಲದಲ್ಲಿ ಅದರ ಮಹತ್ವ

ಶಾಂತಿಯ ಕಾಲದಲ್ಲಿ ಪ್ರಪಂಚದ ರಾಷ್ಟ್ರಗಳೂ ಜನಾಂಗಗಳೂ ಈ ಕಾಲುವೆಯನ್ನು ಉಪಯೋಗಿಸುವುದಕ್ಕೆ ಯಾವ ಆತಂಕವೂ ಉಂಟಾಗಿಲ್ಲ. ಆದರೆ ಯುದ್ಧ ಕಾಲದಲ್ಲಿ ಮಾತ್ರ ಈ ಕಾಲುವೆಯ ಪ್ರಯೋಜನವು ಕೇವಲ ಬ್ರಿಟಿಷರ ಹಿತಕ್ಕಾಗಿ ಆಗಿದೆ. ಕಳೆದ ಯುದ್ಧಕಾಲದಲ್ಲಿ ಬ್ರಿಟಿಷರು ಶತ್ರುಪಕ್ಷದ ಯಾ ಹಡಗು ಚಲಾವಣೆಯಾಗಲಿಕ್ಕೂ ಬಿಡಲಿಲ್ಲ. ಆದ್ದರಿಂದಲೇ ಆ ಯುದ್ಧ ಮುಗಿದ ಮೇಲೆ ಈ ಕಾಲುವೆಯಲ್ಲಿ ಬ್ರಿಟಿಷರಿಗಿರುವ ಅಧಿಕಾರವನ್ನು ಕಸಕೊಳ್ಳಲಿಕ್ಕೆ ಹಿಟ್ಲರನೂ, ಮುಸೋಲಿನಿಯೂ, ಬಹಳ ಚತಪಡಿಸಿದ್ದಾರೆ. ಅನೇಕ ಸೂತ್ರ ಚಾಲನೆಗಳನ್ನು ಮಾಡಿದ್ದಾರೆ.

ಕಾಲುವೆಯ ಈಗಿನ ಪರಿಸ್ಥಿತಿ

ಈಗಿನ ಯುರೋಪಿನ ಯುದ್ಧವಾರಂಭವಾಗುವ ಮೊದಲು ಸುಯೇಜು ಕಾಲುವೆ ಕಂಪೆನಿಯಲ್ಲಿ ಬ್ರಿಟಿಷ್ ಸರಕಾರಕ್ಕೆ ಸೇಕಡಾ ೫೦ ಕ್ಕಿಂತ ಕಡಿಮೆ ಪಾಲುಗಳಿದ್ದುವು. ಮತ್ತು ಆಡಳಿತ ಅಧಿಕಾರವೆಲ್ಲ ಫ್ರೆಂಚರ ಕೈಯಲ್ಲಿ ಇದ್ದಿತು. ೩೨ ಮಂದಿ ಡ್ಯಾರೆಕ್ಟರುಗಳಲ್ಲಿ ೧೦ ಮಂದಿ ಬ್ರಿಟಿಷರು, ೨೧ ಮಂದಿ ಫ್ರೆಂಚರು ಮತ್ತು ಒಬ್ಬನು ಡಚ್ಚನಾಗಿದ್ದನು. ಆದರೆ ೧೯೩೭ರಲ್ಲಿ ಈ ಕಂಪೆನಿಯು ಇಬ್ಬರು ಫ್ರೆಂಚ ಡ್ಯಾರೆಕ್ಟರರ ಬದಲಿಗೆ ಇಷ್ಟೇ ಈಜಿಪ್ತದವರನ್ನು ತೆಗೆದುಕೊಂಡು, ಈಜಿಪ್ತ ಸರಕಾರಕ್ಕೆ ವರ್ಷಾವಧಿ ೩೦೦೦೦೦ ಪವನು ಲಾಭಾದಾಯವನ್ನು ಕೊಡಲಿಕ್ಕೆ ಒಪ್ಪಿತು. ಕಂಪೆನಿಯ ನೌಕರರಲ್ಲಿ ಮೂರನೆ ಒಂದಂಶದಷ್ಟು ಜನರು ಈಜಿಪ್ತಿನವರಾಗಿರಬೇಕೆಂಬುದಕ್ಕೂ ಒಪ್ಪಿತು. ಹೇಗಿದ್ದೂ ೧೯೬೮ರಲ್ಲಿ ಕಾಲುವೆಯ ಸಮಸ್ತ ಅಧಿಕಾರ ಈಜಿಪ್ತ ಸರಕಾರಕ್ಕೆ ಬರುವದು. ಆದ್ದರಿಂದ ಈಗ ಈ ಕಾಲುವೆಯ ನಿಜವಾದ ಅಧಿಕಾರಿಗಳು ಬ್ರಿಟಿಷರೇ ಎಂದು ಹೇಳಬಹುದು. ಈ ಕಾರಣದಿಂದಲೇ ಈ ಅಧಿಕಾರವನ್ನು ಮುರಿಯಲಿಕ್ಕೆ ಹಿಟ್ಲರನು ಬಹಳ ದಿನಗಳಿಂದ ಪ್ರಯತ್ನಿಸಿದ್ದಾನೆ. ಭವಿಷ್ಯವನ್ನು ಹೇಳಲಾಗುವುದಿಲ್ಲ. ಆದರೂ ಈ ಕಾಲುವೆಯ ಮೇಲೆ ಅಧಿಕಾರ ಸಂಪಾದಿಸಲಿಕ್ಕಾಗಿ ಶೀಘ್ರದಲ್ಲಿ ಮಹಾಸಂಗ್ರಾಮವು ನಡೆಯುವುದೆಂಬುದನ್ನು ಖಂಡಿತ. ಇದರಲ್ಲಿ ಯಾರು ಗೆಲ್ಲುವರೋ ಅವರೇ ಪ್ರಪಂಚದ ಭಾಗ್ಯನಿರ್ಧಾರ ಮಾಡಬಹುದು.

ಸ್ವುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳು ನಿಯಮಗಳಿಗನುಸಾರವಾಗಿ ನಡೆಯುವ ದೇಶಗಳಲ್ಲ— ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬೆಳೆಯುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಆವರಿಗೆ ಸಂಪೂರ್ಣ ಗುಣವನ್ನು ತೋರಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

ಸೇರಿಗೆ ರೂ. ೪



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್. (ಲಂಡನ್) ಎಂ.ಸಿ.ಎಸ್. (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೇ ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜೆಂಟ್ಸ್: ಮಾ ಕಂಪನಿ, ಹಂಪನಕಟ್ಟಾ ಮಂಗಳೂರು.

ವಾರದ ಕತೆ:

ತ್ಯಾಗಪತ್ರ

ಕೈಯಲ್ಲಿ ಪೇಪರು ಹಿಡಿದು ಓದುತ್ತಿದ್ದ ಹಾಗೆ 'ಬೇಕು' ಎಂಬುದರ ಕಡೆಗೆ ಸೋಮನಾಥನ ದೃಷ್ಟಿ ಹೊರಳಿತು. ಹೀಗೆ ಅನೇಕ ಬಾರಿ ಅವನು 'ಬೇಕು' ಎಂಬುದನ್ನು ನೋಡಿದ್ದ, ಅದನ್ನು ಓದಿದ್ದ, ಅರ್ಜಿಗಳನ್ನು ಮಾಡಿದ್ದ; ಕೃತಾರ್ಥ ಮಾತ್ರ ಆಗಿರಲಿಲ್ಲ. ಆದರೂ ನಿರುದ್ಯೋಗಿ; ಆಶೆಯೇ ನಿರುದ್ಯೋಗಿಗಳ ಜೀವನದ ಆಧಾರ. ಅವರ ಜೀವನದಲ್ಲಿ ಆಸೆ ಎಂಬುದು ಇರುತ್ತಿದ್ದಿಲ್ಲವಾದರೆ ಅವರು ಎಂದಿಗೋ ವಿಷ ತಿಂದು, ನೇಣು ಹಾಕಿ, ಅಥವಾ ಹೊಳೆ ಕೆರೆಗೆ ಬಿದ್ದು ಪ್ರಾಣ ತೆಗೆದುಕೊಳ್ಳುತ್ತಿದ್ದರು. 'ಬೇಕು' ಒಬ್ಬ ಅನುಭವಿಯಾದ ಗುಮಾಸ್ತನು ಬೇಕು. ಯೋಗ್ಯತಾನುಸಾರ ಸಂಬಳ ಕೊಡಲಾಗುತ್ತದೆ' ಎಂದು ಬರೆದಿರುವದನ್ನು ಓದಿ ಸೋಮನಾಥನ ಶರೀರದಲ್ಲಿ ನವಜೀವನದ ಸಂಚಾರವಾಯಿತು. ಅವನು ಒಂದು ತುಂಡು ಕಾಗದದ ಮೇಲೆ ವಿಳಾಸ ಬರೆದುಕೊಂಡು ಮನೆಗೆ ಬಂದ.

'ಏನು, ನಸುನಗುತ್ತಾ ಇದ್ದೀರಿ? ಕೆಲಸವಾಯಿತೇ?' ಎಂದು ಮೋಹಿನಿ ಉತ್ಸುಕತೆಯಿಂದ ಕೇಳಿದಳು.

'ಇಲ್ಲ ಮೋಹಿನಿ, ಸುಮ್ಮಗೆ ನಗುತ್ತಾ ಇದ್ದೆ. ಇಚ್ಛಿಸಿದ ಮಾತ್ರಕ್ಕೆ ನೌಕರಿ ಸಿಗುವದಾಗಿದ್ದರೆ, ಅದು ನನಗೆ ನಾಲ್ಕು ವರ್ಷಗಳ ಮೊದಲೇ ಸಿಕ್ಕಬೇಕಾಗಿತ್ತು' —ಹೇಳುತ್ತಾ ಸೋಮನಾಥನ ಕಣ್ಣುಗಳು ನೀರಿನಿಂದ ತುಂಬಿದುವು.

ಇದನ್ನು ನೋಡಿ ಮೋಹಿನಿಯ ಕಣ್ಣುಗಳಿಂದಲೂ ಅಶ್ರುಬಿಂದುಗಳು ತೊಟ್ಟಿಕ್ಕಿದುವು. ಅವನು ಹೇಳಿದ—'ಮೋಹಿನಿ, ಹೀಗೆ ಅತ್ತು ಎಷ್ಟು ದಿನ ಇರಬಹುದು? ನಿಮ್ಮ ಊರಿನ ಗಿರಣಿಯಲ್ಲಿ ಒಂದು ಕೆಲಸ ಖಾಲಿ ಆಗಿದೆ ಎಂದು ಪೇಪರಿನಲ್ಲಿ ಬಂದಿದೆ. ನಿನ್ನ ತಂದೆ ಸ್ವಲ್ಪ ಪ್ರಯತ್ನ ಮಾಡಿದರೆ . . .'

'ಸರಿ, ಈ ಹೊತ್ತೇ ಬರೆಯೋಣ'.

'ಆದರೆ ಮೋಹಿನಿ, ಅವಸರಿಸಿದರೆ ಕೆಲಸ ಹಾಳಾಗುತ್ತದೆ.'

'ಅಂದರೆ?'

'ಚೆನ್ನಾಗಿ ಆಲೋಚಿಸಲಿಕ್ಕೆ ಸ್ವಲ್ಪ ಸಮಯ ಕೊಡು.'

'ಏನು ಆಲೋಚನೆ?'

'ಅಲ್ಲ, ನೀನು ಬರೆದ ಪತ್ರವನ್ನು ಅವರು ತಿರಸ್ಕರಿಸಿದರೆ—ನಮ್ಮ ಅವಮಾನವಾಗುವದಲ್ಲವೆ? ನಿರುದ್ಯೋಗಿಯಾದ ಅಳಿಯ, ಮಾವನಿಂದ ಅವಮಾನಿತನಾಗುವದಕ್ಕಿಂತ ಸಾಯುವದು ಲೇಸು. ಮೋಹಿನಿ, ಅದ್ದರಿಂದಲೇ ಚೆನ್ನಾಗಿ ಆಲೋಚಿಸಬೇಕಾಗಿದೆ.'

'ಇಲ್ಲ, ನಾನಿರುವ ತನಕ ನೀವು ಅವಮಾನಿತರಾಗಲಾರಿರಿ. ನಿಮ್ಮ ಅವಮಾನವಾಗುವದೂ, ನನ್ನ ಅವಮಾನವಾಗುವದೂ ಒಂದೇ ಎಂದು ತಿಳಕೊಂಡಿದ್ದೇನೆ.'

'ಹಾಗಿದ್ದರೆ, ಇಚ್ಛೆ ಬಂದಹಾಗೆ ಮಾಡು' ಎಂದು ಸೋಮನಾಥ ಹೇಳಿದ. ಮೋಹಿನಿ ಅದೇ ಸಮಯ ತಂದೆಗೆ ಒಂದು ಪತ್ರವನ್ನು ಬರೆದಳು.

★

'ಪತ್ರ, ಸ್ವಾಮೀ!' ಎಂದು ಟಪ್ಪಾಲು ಪೇದೆ ಕೂಗಿದ.

ಸೋಮನಾಥ ಬಂದು ಕಾಗದ ತೆಗೆದುಕೊಂಡ. 'ಯಾರ ಪತ್ರ? ತಂದೆಯದ್ದಾಗಿರಬಹುದಲ್ಲವೆ?' ಎಂದು ಹಿಂದಿನಿಂದ ಬರುತ್ತಿದ್ದ ಹಾಗೆ ಮೋಹಿನಿ ಕೇಳಿದಳು. ಹೌದು, ಅದು ಅವಳು ನಿನ್ನೆ ಬರೆದ ಕಾಗದಕ್ಕೆ ಬಂದ ಉತ್ತರವಾಗಿತ್ತು.

ಮೋಹಿನಿಯ ಕುತೂಹಲವು ಅಪರಿಮಿತವಾಗಿತ್ತು. ಅವಳು ಸೋಮನಾಥನ ಕೈಗಳಿಂದ ಪತ್ರವನ್ನು ತೆಗೆದುಕೊಂಡು ತಾನೇ ಓದತೊಡಗಿದಳು. 'ಸಾಧ್ಯವಿದ್ದಷ್ಟು ಪ್ರಯತ್ನ ಮಾಡುತ್ತೇನೆ. ನೀವು ಕೂಡಲೇ ಹೊರಟು ಬನ್ನಿ' ಎಂದು ಅದರಲ್ಲಿ ಬರೆದಿತ್ತು.

ಅದೇ ದಿನ ಸಂಜೆಯ ಗಾಡಿಯಲ್ಲಿ ಇಬ್ಬರೂ ಹೊರಟು ಶೋಲಾಪುರವನ್ನು ಸೇರಬೇಕೆಂದು ನಿಶ್ಚಯವಾಯಿತು.

★

'ಓಹೋ! ರಾಮಪ್ಪಯ್ಯನವರು ಹೇಳಿದವರು ನೀವೇಯೋ? ಬಹಳ ಸಂತೋಷವಾಯಿತು; ಬನ್ನಿ, ಕೂತುಕೊಳ್ಳಿ' ಎಂದು ಎದುರಿಗಿದ್ದ ಕುರ್ಚಿಯನ್ನು ತೋರಿಸಿ ಗಿರಣಿಯ ಆಫೀಸು ಮೆನೇಜರರು ಹೇಳಿದರು.

'ಹೌದು ಸ್ವಾಮಿ, ನಾನೇ ಸೋಮನಾಥರಾವ್' ಎಂದು ಮೆಲ್ಲಗೆ ಹೇಳುತ್ತ ಅವನು ಕೂತುಕೊಂಡ.

'ಸರಿ, ಸೋಮನಾಥರಾವ್! ನಿಮ್ಮನ್ನು ನೋಡಿ ನನಗೆ ಬಹಳ ಸಮಾಧಾನವಾಯಿತು. ಹೇಗಾದರೂ ಮಾಡಿ ನಿಮ್ಮನ್ನು ಕೆಲಸಕ್ಕೆ ತೆಗೆದುಕೊಳ್ಳಲೇ ಬೇಕು. ಜನರಲ್ ಮೆನೇಜರರೊಡನೆ ಮುಖ್ಯಾಕ್ಷ ಮಾತನಾಡುತ್ತೇನೆ.'

'ಬಹು ದೊಡ್ಡ ಉಪಕಾರ ಸ್ವಾಮಿ.'

'ಉಪಕಾರದ ಮಾತೇನು, ತಮ್ಮಾ! ನಿನ್ನಂಥವನಿಗೆ ಕೆಲಸ ಕೊಡಿಸದಿದ್ದರೆ, ಮತ್ತೆ ಯಾರಿಗೆ ಕೊಡಿಸುವದು? ನೋಡು; ಜಾಹೀರಾತು ಕೊಟ್ಟ ಗುಮಾಸ್ತಿಕೆಯ ಕೆಲಸಕ್ಕೆ ಬಂದ ಅರ್ಜಿಗಳ ಕಟ್ಟು! ಇದರಲ್ಲಿ ೫೧೭ ಅರ್ಜಿಗಳಿವೆ. ಇಬ್ಬರು ಯಂ. ಎ. ಗಳೂ ಅರ್ಜಿ ಮಾಡಿದ್ದಾರೆ! ಆದರೂ ನಿನಗೆ ಕೆಲಸ ದೊರೆಯುತ್ತದೆಂದು ತಿಳಕೊ'.

ಅರ್ಜಿಗಳ ಕಟ್ಟನ್ನು ನೋಡಿ ಸೋಮನಾಥನ ಎದೆ ಧಸಕ್ಕೆಂದಿತು. ೧೫–೨೦ ರೂಪಾಯಿಗಳ ಕೆಲಸಕ್ಕೆ ೫೦೦–೬೦೦ ಜನರು ಉಮೇದುವಾರರು! ಅದರಲ್ಲೂ ಇಬ್ಬರು ಯಂ. ಎ. ಗಳು! ಅವನು ಆಲೋಚಿಸುತ್ತಿದ್ದ ಹಾಗೆ ಮೇಲೆ ಇದ್ದ ಸೋಮನಾಥನ ಅರ್ಜಿ ಗಾಳಿಗೆ ಹಾರಿತು. ಸೋಮನಾಥ ಅದರ ಕೆಳಗಿರುವದನ್ನು ನೋಡಿದ. ಕಂಠವು ಬಿಗಿದು ಬಂದಿತು. ಮಾತನಾಡಲಿಕ್ಕೆ ಆಗಲಿಲ್ಲ. 'ಇವರೂ ನನ್ನ ಹಾಗೆ ನಿರುದ್ಯೋಗಿಗಳು! ಅಯ್ಯೋ ಪರಮಾತ್ಮ! ಎಂಥ ದುರವಸ್ಥೆ ಇದು?' ಅವನು ಬಹಳ ಕಷ್ಟದಿಂದ ಎದ್ದು ಆಫೀಸು ಮೆನೇಜರನಿಗೆ ನಮಸ್ಕಾರ ಕೊಟ್ಟು ಹೊರಗೆ ಬಂದ.

ದಾರಿಯಲ್ಲಿ ರಾಘವೇಂದ್ರ ಹೋಗುತ್ತಿರುವದನ್ನು ನೋಡಿ ಸೋಮನಾಥನಿಗೆ ಬಹಳ ಆಶ್ಚರ್ಯವಾಯಿತು. ಇಬ್ಬರೂ ಪರಸ್ಪರ ನೋಡಿದರು. ಇಬ್ಬರ ಕಣ್ಣುಗಳಿಂದಲೂ ಗಂಗಾಪ್ರವಾಹ ಹರಿಯಿತು. ಒಬ್ಬನು ನಾಲ್ಕು ವರ್ಷಗಳಿಂದ ನಿರುದ್ಯೋಗಿಯಾಗಿದ್ದರೆ, ಮತ್ತೊಬ್ಬ ಎಂಟು ವರ್ಷಗಳಿಂದ ನಿರುದ್ಯೋಗಿಯಾಗಿದ್ದ. ಇಬ್ಬರೂ ಒಂದೇ ಮಾರ್ಗದ ಪ್ರಯಾಣಿಕರು. ಒಬ್ಬನು ಸ್ವಲ್ಪ ಹಿಂದೆ, ಇನ್ನೊಬ್ಬನು ಸ್ವಲ್ಪ ಮುಂದೆ. ಸೋಮನಾಥ ಕೇಳಿದ—'ರಘು! ಇಷ್ಟು ದಿನ ಎಲ್ಲಿದ್ದೆ? ಇಲ್ಲಿಗೆ ಏನು ಕಾರಣ ಬಂದೆ?'

'ಸೋಮು! ಏನು ಹೇಳುವದು? ನಿರುದ್ಯೋಗವು ನನ್ನನ್ನು ಈ ನಗರಕ್ಕೆ ಎಳೆತಂದಿತು. ನಿನಗೆ ಯಾಕೆ ದುಃಖ ಕೊಡಲಿ ಎಂದು ಅಡಗಿ ಇದ್ದೆ.'

'ಯಾಕೆ ರಘು?'

'ಜನರಲ್ ಮೆನೇಜರರು ನನಗೆ ಮಾತನ್ನು ಕೊಟ್ಟಿದ್ದರು. ಆದರೆ . . .'

'ಆದರೆ ಏನು ರಘು?'

'ಮುಂಚಿನದೆಲ್ಲ ನಿನಗೆ ತಿಳಿದೇ ಇದೆ. ಮತ್ತೆ ನೀನು ಬಂದೆ. ಅವರು ಕೊಟ್ಟ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಯಿತು.'

ಇದನ್ನು ಕೇಳಿ ಸೋಮನಾಥನ ಕಣ್ಣುಗಳಿಂದ ಪುನಃ ಧಾರೆಕಟ್ಟಿ ನೀರು ಇಳಿಯಿತು. 'ರಘು, ಚಿಂತಿಸಬೇಡ. ನನ್ನ ಕಾರಣದಿಂದ ನಿನಗೆ ಹಾನಿ ಆಗದು' ಎಂದ.

'ಬೇಡ ಸೋಮು, ನಿನ್ನನ್ನು ನಾನು ಚೆನ್ನಾಗಿ ಬಲ್ಲೆ. ಹಾಗೇನೂ ಮಾಡಬೇಡ' ಎಂದು ಹೇಳಿ ರಘು ಹೋದ.

★

ಸೋಮನಾಥ ಆಫೀಸಿನಿಂದ ಮನೆಗೆ ಬರುವಾಗ ಅವನ ಸ್ಥಿತಿಯಲ್ಲಿ ಬಹಳ ಅಂತರವುಂಟಾಗಿತ್ತು. ಹರ್ಷ–ವಿಷಾದ, ಭಯ–ಉಲ್ಲಾಸಗಳ ವಿರೋಧಭಾವಗಳು ಅಲ್ಲಿ ತುಮುಲನಾದವನ್ನು ಮಾಡುತ್ತಿದ್ದುವು. 'ಈ ಹೊತ್ತು ಇಷ್ಟು ಬೇಗೇನು ಬಂದಿರಿ?' ಎಂದು ಮೋಹಿನಿ ಸಶಂಕಿತಳಾಗಿ ಕೇಳಿದಳು.

ಸೋಮನಾಥನ ಮುಖದ ಮೇಲೆ ಒಂದು ಮೋಡ ಬಂದು, ಹೋದಂತೆ ಆಯಿತು. ಅವನು ನಕ್ಕು ಹೇಳಿದ—'ಮೋಹಿನಿ, ನಾನು ಕೆಲಸಕ್ಕೆ ರಾಜೀನಾಮೆ ಕೊಟ್ಟೆ.'

'ಏನು, ರಾಜೀನಾಮೆ ಕೊಟ್ಟಿರಾ?' ಅವಳು ಅತ್ಯಾಶ್ಚರ್ಯಗಳಿಂದ ಕೇಳಿದಳು.

'ಹೌದು ಮೋಹಿನಿ! ರಾಜೀನಾಮೆ ಕೊಟ್ಟೆ.'

ಇಬ್ಬರ ಕಣ್ಣುಗಳಲ್ಲಿಯೂ ನೀರು ತುಂಬಿತ್ತು. ಅಷ್ಟರಲ್ಲಿ ಯಾರೋ ಹೊರಗಿನಿಂದ ಬಂದಂತಾಯಿತು. ಹೌದು, ರಾಘವೇಂದ್ರ ಮತ್ತು ಗಿರಣಿಯ ಜನರಲ್ ಮೆನೇಜರ! ಸೋಮನಾಥ ಎದ್ದು ಇಬ್ಬರನ್ನೂ ಸನ್ಮಾನಪೂರ್ವಕ ಕುಳ್ಳಿರಿಸಿದ. ಅವನು ರಾಜೀನಾಮೆ ಕೊಟ್ಟಾಗ ಜನರಲ್ ಮೆನೇಜರರ ವಿಚಿತ್ರ ಮನೋಸ್ಥಿತಿಯಾಗಿತ್ತು. ರಾಘವೇಂದ್ರನಿಗಾಗಿ ಸೋಮನಾಥನ ಅದ್ಭುತ ತ್ಯಾಗವನ್ನು ನೋಡಿ ಜನರಲ್ ಮೆನೇಜರರು ಆಶ್ಚರ್ಯಚಕಿತರಾಗಿದ್ದರು. ಅವರು ಆ ಕೂಡಲೆ ರಾಘವೇಂದ್ರನನ್ನು ಕರಕೊಂಡು ಸೋಮನಾಥನ ಮನೆಗೆ ಬಂದರು. ಕೈಯಲ್ಲಿ ಎರಡು ಲಕೋಟೆಗಳಿದ್ದುವು. ಒಂದು ರಾಘವೇಂದ್ರನಿಗೆ, ಮತ್ತೊಂದು ಸೋಮನಾಥನಿಗೆ. ಅವರಿಬ್ಬರೂ ಅವನ್ನು ಒಡೆದು ನೋಡಿದರು. ಇಬ್ಬರಿಗೂ ತಿಂಗಳೊಂದರ ೫೦ ರೂಪಾಯಿ ತಲಬಿನ ಎರಡು ನೇಮಕಪತ್ರಗಳು ಅವುಗಳೊಳಗಿದ್ದುವು. ಇಬ್ಬರೂ ಜನರಲ್ ಮೆನೇಜರರ ಚರಣಗಳ ಮೇಲೆ ನತಮಸ್ತಕರಾದರು.

— ಕತೆಗಾರ.

ಪಾಕಿಸ್ತಾನಕ್ಕೆ ಮುಸ್ಲಿಂ ಪತ್ರಿಕೆಗಳ ವಿರೋಧ!

ಅಲೀಘರ ವಿದ್ಯಾರ್ಥಿಗಳ ಪ್ರಚಾರ ಕಾರ್ಯ

ಜಿನ್ನರ ಮೇಲೆ ಮುಖಂಡರಿಗೂ ವಿಶ್ವಾಸವಿಲ್ಲ

ಮುಸಲ್ಮಾನ ಜನರೊಳಗೆ ಬಹಳವಾ ಪ್ರಚಾರದಲ್ಲಿರುವ ಉರ್ದು ಪತ್ರಿಕೆಗಳನ್ನು ನೋಡಿದರೆ, ಯಾರು ಪಾಕ್ಸ್ತಾನದ ಆಧಾರಸ್ತಂಭರಾಗಿದ್ದರೋ, ವರಿಗೇ ಅವರ ವ್ಯವಹಾರಿಕತೆಯು ಕುರಿತು ಸಂದೇಹವಾಗತೊಡಗಿದೆ ಎಂದು ಕಾಣುತ್ತಾಗುತ್ತದೆ. ಪಾಕಿಸ್ತಾನ ಎಂಬ ಶಬ್ದದ ಅರ್ಥ ವೇತನ ಸಾಗುವುದಿಲ್ಲ ದಿ ಮದೀನಾ ಎಂಬ ಸುಪ್ರಸಿದ್ಧವಾದ ಉರ್ದು ಪತ್ರಿಕೆಯು ಹಲವು ಬಾರಿ ಕೇಳಿದಿರುತ್ತದೆ. ಮುಸ್ಲಿಂ ಲೀಗಿನ ಅಖಿಲ ಮುಖಂಡರಿಗೇ ಪಾಕಿಸ್ತಾನದ ಅರ್ಥವಾಗಿರುವುದಿಲ್ಲ. ಈಗಂತೂ ಪಾಕಿಸ್ತಾನದ ಸಮರ್ಥಕರಾಗಿದ್ದವರೂ ಅದರ ವಿರೋಧಿಗಳಾಗುತಿದ್ದಾರೆ. ಲೀಗಿನ ಒಬ್ಬ ಪ್ರಮುಖರಾದ ಫಜ್ಲುಲ್ ಹಕ್‌ರವರೂ ಪಾಕಿಸ್ತಾನದಲ್ಲಿ ಅವಿಶ್ವಾಸವನ್ನು ಸೂಚಿಸಿದ್ದಾರೆ. ಪಾಕಿಸ್ತಾನದ ಹೊರತು ಹಿಂದುಸ್ಥಾನದ ರಾಜಕೀಯ ಸಮಸ್ಯೆಯನ್ನು ಬಿಡಿಸಲಿಕ್ಕೇ ಆಗುವುದಿಲ್ಲವೆಂಬುದು ಜಿನ್ನರ ದೃಢ ಅಭಿಪ್ರಾಯವಾಗಿರುವುದಾದರೆ, ಪಾಕಿಸ್ತಾನವು ಏನೆಂದು ಜಿನ್ನರು ಜನರಿಗೆ ಯಾಕೆ ವಿವರಿಸಿ ಹೇಳುವುದಿಲ್ಲ?, ಎಂದು ಹಕ್ಕರು ಜಿನ್ನರನ್ನು ಪ್ರಶ್ನಿಸಿದ್ದಾರೆ. ಮುಸಲ್ಮಾನ ಜನರು ಜಿನ್ನರ ವರ್ಣನೆಯ ಕುರಿತು ಬಹಳ ಸಂದೇಹಗ್ರಸ್ತರಾಗಿರುವರು.

ಲೀಗಿನ ಬಣ್ಣ ಬಯಲಾಯಿತು

ಜಿನ್ನರಿಗೂ ಹಕ್ಕರಿಗೂ ನಡೆದ ಪತ್ರವ್ಯವಹಾರವು ಪ್ರಕಟವಾಗಿದೆಯಷ್ಟೆ! ಅದರಿಂದ ಹಕ್ಕರಿಗೆ ಪಾಕಿಸ್ತಾನದಲ್ಲಿ ಎಳ್ಳಷ್ಟು ನಂಬಿಗೆ ಇಲ್ಲವೆಂಬುದು ಗೊತ್ತಾಗುತ್ತದೆ. ಮುಸ್ಲಿಂ ಲೀಗಿನ ಲಾಹೋರು ಠರಾವನ್ನು ಮುಂತಂದ ಸರ್ ಸಿಕಂದರ ಹಯಾತಖಾನರಿಗೂ ಪಾಕಿಸ್ತಾನದ ಮೇಲೆ ಸಮಾಧಾನವಿಲ್ಲ. ಜಿನ್ನಾ ಹಕ್ ಪತ್ರವ್ಯವಹಾರವು ಪ್ರಕಟವಾದುದರಿಂದ ಲೀಗಿನ ಬಣ್ಣವು ಬಯಲಾಯಿತೆಂದು ಲಾಹೋರಿನ ಮುಸಲ್ಮಾನ ಪತ್ರಿಕೆಯು ಬರೆದಿದೆ. ಲೀಗಿನ ವ್ಯವಹಾರಗಳು ಮುಸಲ್ಮಾನರಲ್ಲಿ ತುಂಬ ನಿರಾಶೆಯನ್ನುಂಟು ಮಾಡಿವೆ ಎಂದು ಅದೇ ಪತ್ರಿಕೆ ಹೇಳುತ್ತದೆ.

ಇಂಕ್ವಿಲಾಬದ ಅಂಬೋಣ

ಸ್ವಯಂ ನಿರ್ಧಾರದ ಹಕ್ಕು ಸ್ವಾತಂತ್ರ್ಯವು ಹಿಂದುಸ್ಥಾನಕ್ಕೆ ಇರಲಿಕ್ಕೇ ಬೇಕು ಎಂದು ಕಾಂಗ್ರೆಸು ಹೇಳುವುದನ್ನು ಲಾಹೋರಿನ ಇನ್ನೊಂದು ಮುಸಲ್ಮಾನ ಪತ್ರಿಕೆ ಇಂಕ್ವಿಲಾಬ್ ಬಹಳ ಪ್ರತಿಪಾದಿಸಿದೆ. ಹಿಂದುಸ್ಥಾನದ ಸ್ವರಾಜ್ಯ ಘಟನೆಯನ್ನು ತಯಾರಿಸಲಿಕ್ಕೆ ಕಾನ್ಸ್ಟಿಟ್ಯೂಯೆಂಟ ಎಸೆಂಬ್ಲಿಯನ್ನು ಕರೆಯುವುದು ಅಗತ್ಯವೆಂದು ಅದು ಹೇಳಿದೆ. ಬ್ರಿಟಿಷ ಸರಕಾರವು ಭಾರತೀಯರ ಸ್ವಯಂ ನಿರ್ಧಾರದ ಹಕ್ಕನ್ನು ಸಂಪೂರ್ಣವಾಗಿ ಅಲ್ಲಗಳೆಯುವುದಿಲ್ಲ. ಆದರೆ ಎಷ್ಟರ ತನಕ ಇಲ್ಲಿಯ ಭಿನ್ನಭಿನ್ನ ಜಾತಿ ಪಂಗಡಗಳು ಕಾನ್ಸ್ಟಿಟ್ಯೂಯೆಂಟ್ ಎಸೆಂಬ್ಲಿ ಕರೆಯುವ ವಿಚಾರವನ್ನು ಒಮ್ಮತದಿಂದ ಸಮರ್ಥಿಸುವುದಿಲ್ಲವೋ ಅಷ್ಟರ ತನಕ ಬ್ರಿಟಿಷ್ ಸರಕಾರವು ಅದನ್ನು ಒಂದಲ್ಲ ಒಂದು ರೀತಿಯಿಂದ ವಿರೋಧಿಸಿ ತನ್ನ ಸ್ವಾರ್ಥವನ್ನು ಸಾಧಿಸುವುದರಲ್ಲಿ ಅರ್ಥವಿದೆ. ಕಾನ್ಸ್ಟಿಟ್ಯೂಯೆಂಟ್ ಎಸೆಂಬ್ಲಿ ಕರೆಯುವುದನ್ನು ವಿರೋಧಿಸಿರುವ ಜಾತಿ ಪಂಗಡಗಳಲ್ಲಿ ಮುಸ್ಲಿಂ ಲೀಗು ಪ್ರಧಾನ ಪಾತ್ರವನ್ನು ತೆಗೆದುಕೊಂಡಿರುವುದು ನಮಗೆ ಖೇದಾಸ್ಪದ ಮಾತ್ರವಲ್ಲ ಲೀಗಿಗೆ ಬಹಳ ಲಾಂಛನಾಸ್ಪದವಾಗಿರುವದೆಂದು ಅದೇ ಪತ್ರಿಕೆ ಬರೆದಿದೆ.

ನಿರರ್ಥಕತೆಯ ಪ್ರಚಾರ

ಪಾಕಿಸ್ತಾನದ ನಿರರ್ಥಕತೆಯನ್ನು ಮುಸ್ಲಿಂ ಪತ್ರಿಕೆಗಳು ಸಾರಿರುವುದು ಮಾತ್ರವಲ್ಲದೆ, ವಿದ್ಯಾರ್ಥಿಗಳೂ ಅದರ ಪ್ರಚಾರ ಮಾಡುತ್ತಿದ್ದಾರೆ. ಅಲಿಘರ ಮುಸ್ಲಿಂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸಭೆಕೂಡಿ ಪಾಕಿಸ್ತಾನದ ವಿರೋಧ ಪ್ರಚಾರ ಮಾಡಲಿಕ್ಕೆ ಇದೇ ಬೇಸಿಗೆಯ ರಜಾಕಾಲದಲ್ಲಿ ಒಂದು ಶಿಷ್ಟಮಂಡಲವನ್ನು ಕಳುಹಿಸುವ ನಿರ್ಧಾರಮಾಡಿದೆ. ಈ ಶಿಷ್ಟಮಂಡಲವು ಮೇ ತಿಂಗಳಲ್ಲಿ ಬಿಹಾರ, ಬಂಗಾಳ ಮತ್ತು ಆಸ್ಸಾಮುಗಳನ್ನು ಸಂಚರಿಸಿ ಅಲ್ಲಿಯ ಮುಸಲ್ಮಾನರಿಗೆ ಪಾಕಿಸ್ತಾನದ ಪುರಸ್ಕೃತರಾಗಿರುವ ಲೀಗಿನ ಆ ಕೆಲವು ಸ್ವಾರ್ಥಾಂಧ ಮುಖಂಡರ ಸ್ವಾರ್ಥವನ್ನು ತಿಳಿಸಿ, ಮುಸಲ್ಮಾನ ಜನತೆಯು ಪಾಕಿಸ್ತಾನವನ್ನು ಪ್ರಬಲವಾಗಿ ವಿರೋಧಿಸಬೇಕೆಂದು ಸ್ಪಷ್ಟ ಮಾಡುವುದು. ಅದು ಹಿಂದು ಮುಸಲ್ಮಾನ ಐಕ್ಯತೆಗಾಗಿಯೂ ಕೆಲಸ ಮಾಡುವುದು. ಮುಸಲ್ಮಾನ ವಿದ್ಯಾರ್ಥಿಗಳ ಈ ವಿಚಾರವು ಪ್ರಶಂಸನೀಯವೂ ಅನುಕರಣೀಯವೂ ಆಗಿರುವುದೆಂದು ಪತ್ರಿಕೆಗಳು ಬರೆದಿವೆ.

ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು
ಕೊಡಿರಿ.

ಸಣ್ಣ ಸಣ್ಣ ಕಲೆ ಮತ್ತು ಗಾಯಗಳನ್ನು ನಿಮ್ಮ ಚರ್ಮದಿಂದ ಮಾಸಿಬಿಡಿ

ಪ್ರತೀ ರಾತ್ರಿಯೂ ಜ್ಯಾಂಬಕನ್ನು ಚೆನ್ನಾಗಿ ಹಚ್ಚಿರಿ

ಸಣ್ಣ ಸಣ್ಣ ಕಲೆ, ಗಾಯ ಮುಂತಾದವುಗಳಿಂದ ಸ್ವಲ್ಪವಾದರೂ ಮನಸ್ಸಿನ ಬೇಜಾರ ಪಡಬೇಡಿರಿ. ಗಾಯ ಮತ್ತು ಕಲೆಯಿದ್ದಂತಾ ಭಾಗದ ಮೇಲೆ ಪ್ರತೀ ರಾತ್ರೆಯೂ ಜ್ಯಾಂಬಕನ್ನು ಚೆನ್ನಾಗಿ ಸವರಿ ಚರ್ಮವನ್ನು ಆರೋಗ್ಯ ಸ್ಥಿತಿಯಲ್ಲಿರಿಸಿರಿ. ಜ್ಯಾಂಬಕಿನಲ್ಲಿರುವ ಔಷಧೀಯ ಗಿಡಮೂಲಿಕೆಗಳ ಎಣ್ಣೆಯು ನರನಾಡಿಗಳಿಂದ ಎಳೆಯಲ್ಪಟ್ಟು, ನೋವು ಮಾಯವಾಗಿ, ಬಾತುವಿಕೆಯು ಕಡಿಮೆಯಾಗಿ ಚರ್ಮದ ಬಿಗಿತವು ಕಡಿಮೆಯಾಗುವುದು. ಜ್ಯಾಂಬಕು ವಿಷಾಣುಗಳನ್ನು ನಾಶಮಾಡುತ್ತದೆ. ಚರ್ಮವನ್ನು ಆರೋಗ್ಯದಲ್ಲಿರಿಸಿ ಹಿಂದು ಕಲೆಯನ್ನುಂಟುಮಾಡದೆ ಗುಣಪಡಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳು ರೂ. 1 ಮತ್ತು 2–4–0ರಂತೆ ಮಾರಲ್ಪಡುತ್ತದೆ.

ಏಜೆಂಟ್ಸ್:—
ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಾರ್ಕಟೌನ್ ಮದ್ರಾಸ

ಯಾವಾಗಲೂ ಜ್ಯಾಂಬಕನ್ನು ಉಪಯೋಗಿಸಿರಿ.

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದುದು

ಪ್ರಕಾಶಿಸುವ ನೇತ್ರಗಳು ಆರೋಗ್ಯ ಜೀವನದ ಚಿಹ್ನೆ

ವಿಪರೀತವಾದ ಸೆಕೆ, ಮತ್ತು ಸರಿಯಾದ ಪೋಷಣೆ ಇಲ್ಲದಿರುವಿಕೆ, ಇವುಗಳೇ ನರಗಳ ದೌರ್ಬಲ್ಯಕ್ಕೂ ಮತ್ತು ಸಾಮಾನ್ಯ ನಿಶ್ಶಕ್ತಿಗೂ ಕಾರಣ. ಜೀವಾಮೃತಂ ಸೇವಿಸಿ ನಿಮ್ಮ ದೇಹವನ್ನು ಬೆಳೆಸಿರಿ. ಜೀವಕ್ಕೊಂದು ಸಂಜೀವಿನಿ.

ಬಲಿದ ನರಗಳಿಗೆ ಜೀವಾಮೃತಂ

ಜೀವಾಮೃತಂ
ನರಗಳಿಗೆ
ಅತ್ಯುತ್ತಮ ಟಾನಿಕ್.

K.A.2

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಜಿಲ್ಲಾ ಸಮಾಚಾರ

ಸತ್ಯಾಗ್ರಹಿಗಳ ಪ್ರಚಾರ

ತಾ. ೨೦-೩-೪೧ರಂದು ಬದಿಯಡ್ಕದಲ್ಲಿ ಸತ್ಯಾಗ್ರಹ ಮಾಡಿ ಬಂಧಿತರಾಗದ ಬಿ. ಕಮಲಾಕ್ಷ ಪೈಗಳೂ ಅದೇ ದಿನ ಉಕ್ಕಿನಡ್ಕದಲ್ಲಿ ಸತ್ಯಾಗ್ರಹ ಮಾಡಿ ಬಂಧಿತರಾಗದ ಪಡ್ರೆ ಗ್ರಾಮದ ಮಾಜಿ ಪಟೇಲ್ ಶ್ರೀ. ಪಿ. ವಿ. ಕಡಂಬಳಿತ್ತಾಯರೂ (ಈ ಮೊದಲು ಕಾಡಿನ ಸತ್ಯಾಗ್ರಹದಲ್ಲಿ ಕಾರಾಗ್ರಹ ವಾಸವನ್ನು ಅನುಭವಿಸಿದವರು) ಪುತ್ತೂರು ತಾಲೂಕಿನ ಗ್ರಾಮಗಳಲ್ಲಿ ಯುದ್ಧ ವಿರುದ್ಧ ಪ್ರಚಾರ ಮಾಡಿದರು. ಇವರೊಡನೆ ಕಾಸರಗೋಡಿನಲ್ಲಿ ತಾ. ೨೮-೨ರಲ್ಲಿ ಸತ್ಯಾಗ್ರಹಮಾಡಿ ಬಂಧಿತರಾಗದ ಶ್ರೀ ರಾಮನವರೂ ಕೂಡಿ, ಅಲ್ಲಲ್ಲಿ ಪ್ರಬಲವಾದ ಪ್ರಚಾರಕಾರ್ಯ ನಡೆಯಿತು. ಗಾದಲಿನ ಇಬ್ಬರು ಸತ್ಯಾಗ್ರಹಿಗಳು ಪೆರ್ಲ, ಅಡ್ಕಸ್ಥಳ, ವಿಟ್ಲ, ಕಬಕ ಈ ಕಡೆಗಳಲ್ಲಿ ಯುದ್ಧ ವಿರೋಧ ಭಾಷಣಗಳನ್ನು ಮಾಡುತ್ತ ಪುತ್ತೂರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯೊಂದಿಗೆ ಯುದ್ಧವಿರೋಧ ಘೋಷಣೆಮಾಡಿ, ಕೋರ್ಟು ಗುಡ್ಡೆಯಲ್ಲಿಯೂ, ದೇವಸ್ಥಾನದ ಬಳಿಯಲ್ಲಿಯೂ ಭಾಷಣ ಮಾಡಿದರು. ತಾ. ೨೪-೩-೪೧ರಂದು ಕುಂಬ್ರಕ್ಕೆ ತಲಪಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ಕುಂಬ್ರ ಜತ್ತಪ್ಪ ರೈಗಳ ಅತಿಥಿಗಳಾಗಿದ್ದು ಸಾರ್ವಜನಿಕ ಸಭೆಯಲ್ಲಿ ಶ್ರೀ. ಬಿ. ಕಮಲಾಕ್ಷ ಪೈಗಳೂ, ಶ್ರೀ. ಪಿ. ವಿ. ಕಡಂಬಳಿತ್ತಾಯರೂ ಯುದ್ಧವಿರೋಧ ಘೋಷಣೆ ಮಾಡಿದರು. ಅಲ್ಲಿಂದ ಕಾಲ್ನಡೆಯಿಂದ ಎಲಿಯಕ್ಕೆ ತಲಪಿದರು. ತಾ. ೧೬ನೇ ಎಲಿಯದಿಂದ ಹೊರಟ ಸತ್ಯಾಗ್ರಹಿಗಳು ಮಾಡಾವಿಗೆ ತಲಪಿ ಯುದ್ಧ ವಿರೋಧ ಘೋಷಣೆ ಮತ್ತು ವಿಧಾಯಕ ಕಾರ್ಯಗಳ ಕುರಿತು ಸಭೆಯಲ್ಲಿ ಭಾಷಣಮಾಡಿದರು. ಅಲ್ಲಿಂದ ಬೆಳ್ಳಾರೆಗೆ ತೆರಳಿದರು. ಸತ್ಯಾಗ್ರಹಿಗಳು ತಾ. ೨೦ರಂದು ಬೆಳ್ಳಾರೆಯಲ್ಲಿ ಯುದ್ಧ ವಿರೋಧ ಘೋಷಣೆಯನ್ನು ಹಳ್ಳಿಹಳ್ಳಿಗಳಲ್ಲಿ ಮಾಡಿದರು. ಬೆಳ್ಳಾರೆಯಲ್ಲಿ ಭಾಷಣಗೈದರು. ಮರುದಿನ ಸುಳ್ಯಕ್ಕೆ ತೆರಳಿದರು. ತಾ. ೨೮-೨ರಲ್ಲಿ ಕಾಸರಗೋಡಲ್ಲಿ ಸತ್ಯಾಗ್ರಹ ಮಾಡಿದ ಶ್ರೀ ಎಂ. ಕೆ. ರಾಮನವರು ಒಡಿಯೂರಿನಿಂದ ಸುಳ್ಯಕ್ಕೆ ಬಂದರಲ್ಲದೆ ಬೆಳ್ಳಾರೆಯಿಂದ ಊ ಸತ್ಯಾಗ್ರಹಿಗಳು ಅಲ್ಲಿಗ ಗಂಟೆ ೧ಕ್ಕೆ ತಲಪಿದರು. ಸುಳ್ಯ ಕ್ಲಬ್ಬಿನಲ್ಲಿ ಭಾಷಣವಿತ್ತ ಸತ್ಯಾಗ್ರಹಿಗಳು ಯುದ್ಧವಿರೋಧ ಘೋಷಣೆ ಮಾಡಿದರು. ಶ್ರೀ. ಎಂ. ಕೆ. ರಾಮನವರು ಸ್ಟೇಶನಿಂದ ಅಲೆಟ್ಟಿವರೆಗೆ ಹೋಗಿ ಯುದ್ಧವಿರೋಧ ಘೋಷಣೆ ಮಾಡಿದರು. ರಾತ್ರಿ ಸುಳ್ಯದಲ್ಲಿ ಉಳಿದರು. ತಾ. ೪ರಂದು ಸುಳ್ಯದಿಂದ ಹೊರಟ ಸತ್ಯಾಗ್ರಹಿಗಳು ದಾರಿಯುದ್ದಕ್ಕೂ ಯುದ್ಧ [illegible] ಕಟ್ಟೆಯಲ್ಲಿ ಯುದ್ಧವಿರೋಧ ಭಾಷಣಮಾಡಿದರು. ಅಲ್ಲಿಂದ ಹಾಸನಡ್ಕ ತಿಮ್ಮಪ್ಪಯ್ಯನವರಲ್ಲಿಯೂ ಸಭೆಜರಗಿತು. ಅಲ್ಲಿ ಮರುದಿನ ಸಭೆಯಲ್ಲಿಯೂ ಭಾಷಣಗೈದರು. ಪಂಜಕ್ಕೆ ತೆರಳಿ ಅಲ್ಲಿ ಉಳಿದರು. ತಾ. ೫ರಂದು ಪಂಜದಲ್ಲಿ ನೆರೆದ ಸಾರ್ವಜನಿಕ ಸಭೆಯಲ್ಲಿ ಸತ್ಯಾಗ್ರಹಿಗಳು ಭಾಷಣವಿತ್ತರು. ಬಳ್ಪದಲ್ಲಿಯೂ ಸಾರ್ವಜನಿಕ ಸಭೆಜರಗಿ ಯುದ್ಧ ವಿರೋಧ ಭಾಷಣ ಮಾಡಿದರು. ಅದೇ ದಿವಸ ಸತ್ಯಾಗ್ರಹಿಗಳು ಏನೆಕಲ್ಲಿಗೆ ಬರಲು ಅಲ್ಲಿನ ಪಂಚಾಯತ ಬೋರ್ಡ ಪ್ರೆಸಿಡೆಂಟರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಜರಗಿ ಸತ್ಯಾಗ್ರಹಿಗಳು ಭಾಷಣವಿತ್ತರು. ಅಲ್ಲಿಂದ ಕಾಲ್ನಡಿಗೆಯಿಂದಲೇ ಸುಬ್ರಹ್ಮಣ್ಯಕ್ಕೆ ತೆರಳಿದರು. ತಾ. ೬ರಲ್ಲಿ ಸತ್ಯಾಗ್ರಹಿಗಳು ಸುಬ್ರಹ್ಮಣ್ಯದಲ್ಲಿ ಹಳ್ಳಿಗಳನ್ನು ಸಂಚರಿಸಿ ಯುದ್ಧವಿರೋಧ ಘೋಷಣೆ ಮಾಡಿದರು. ಸಂಜೆ ಶ್ರೀ ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಜರಗಿ ಯುದ್ಧವಿರೋಧ ಭಾಷಣಗಳಾದುವು. ಸತ್ಯಾಗ್ರಹಿಗಳಿಗೆ ಹೋದೆಡೆಗಳಲ್ಲಿ ಒಳ್ಳೆಯ ರೀತಿಯ ಸ್ವಾಗತವೇ ದೊರಕಿತೆಂದು ಕೇಳುತ್ತೇವೆ. ಅಲ್ಲಿಂದ ಕುಜುಂಬಾರು, ಕುಲ್ಕುಂದ, ಸುಂಕದಕಟ್ಟೆ, ಗುತ್ತಿಗಾರು, ಕಡಬ, ಪೆರಿಯಶಾಂತಿ, ಕೊಕ್ಕಡ, ಪಟ್ರಮೆ, ಶಿಬಾಜೆ, ನಿಡ್ಲೆ, ಧರ್ಮಸ್ಥಳ, ಕಲ್ಮಂಜ, ಮುಂಡಾಜೆ, ನಡುಗಲ್ಲು, ಉಜಿರೆ, ಲಾಯಿಲ, ಬೆಳ್ತಂಗಡಿ, ಗುರುವಾಯನ ಕೆರೆ, ಉಪ್ಪಿನಂಗಡಿ, ಮಾಣಿ, ಕಲ್ಲಡ್ಕ, ಪಾಣೆಮಂಗಳೂರು, ಬಂಟ್ವಾಳ, ಕಾರಿಂಜೆ, ಫರಂಗಿಪೇಟೆಗಾಗಿ ತಾ. 23-3-41ಕ್ಕೆ ಮಂಗಳೂರಿಗೆ ತಲಪಿದರು. ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಂಚಾಲಕರಾದ ಡಾಕ್ಟರ್ ಯು. ಪಿ. ಮಲ್ಯರು ಇನ್ನು ಕೆಲಸಮಯ ಶ್ರೀ. ಬಿ. ಕಮಲಾಕ್ಷ ಪೈಗಳೂ, ಶ್ರೀ. ಕೆ. ಮೈಂದಪ್ಪ ರೈಗಳೂ, ಪುತ್ತೂರು ತಾಲೂಕಿನಲ್ಲಿಯೂ ಶ್ರೀ. ಪಿ. ವಿ. ಕಡಂಬಳಿತ್ತಾಯರು ಕಾಸರಗೋಡು ತಾಲೂಕಿನಲ್ಲಿಯೂ ಪ್ರಚಾರಕಾರ್ಯವನ್ನು ಮಾಡಬೇಕೆಂದು ಅಪ್ಪಣೆಯಿತ್ತಿರುವುದರಿಂದ ಸತ್ಯಾಗ್ರಹಿಗಳು ತಾ. 26-3-41ರಿಂದ ಅದರಂತೆ ವರ್ತಿಸಲಿರುವರಾಗಿ ತಿಳಿದುಬರುತ್ತದೆ.



ಮಂಗಳೂರು ಸ್ವದೇಶಿ ಸ್ಟೋರ್ಸಿನ ಮಾಲಿಕರಲ್ಲಿ ಒಬ್ಬರಾದ ಶ್ರೀ ಜಿ. ಮಾಧವಪ್ರಭುಗಳು ಇವರನ್ನು ಅರಿತವರು ತುಂಬಾ ಮಂದಿ ಇಲ್ಲದಿದ್ದರೂ, ಇವರ ಪ್ರಚಾರವಿಲ್ಲದ ದೇಶಸೇವಾಕಾಂಕ್ಷೆಯ ಕುರಿತು ಎಷ್ಟೋ ಬಲ್ಲರು. ದೇಶದ ಕರೆ ಬಂದಾಗಲೆಲ್ಲ ಸತ್ಯಾಗ್ರಹ ಸಮರಕ್ಕೆ ಮುನ್ನುಗ್ಗಿದ್ದಾರೆ. ೧೯೩೦ರ ಸತ್ಯಾಗ್ರಹ ಚಳವಳದಲ್ಲಿ ಭಾಗವಹಿಸಿ ಇವರು ಹನ್ನೆರಡು ತಿಂಗಳ ಜೈಲುವಾಸವನ್ನು ಅನುಭವಿಸಿದರು. ೧೯೩೨ರಲ್ಲಿ ಕಾಂಗ್ರೆಸ್ಸಿನ [illegible] ನೋಡಲಿನ ಬಂಗಡದಲ್ಲಿ ಇದ್ದಿದ್ದರು.

ಇಂದಿಗೆ ಮೂರು ವರ್ಷಗಳಿಂದ ಇವರು ಓ. ಸಿ. ಸಿ.ಯ ಸದಸ್ಯರಾಗಿರುವರು ಈಗ ಕೊಂಗ್ರೆಸ್ಸು ನಡೆಸುತ್ತಿರುವ ಈ ಮೂರನೆಯ ಸತ್ಯಾಗ್ರಹ ಚಳವಳದಲ್ಲಿಯೂ ಇವರು ಭಾಗವಹಿಸಲು ಮುಂದೆ ಬಂದಿರುತ್ತಾರೆಂದೂ, ಎಪ್ರಿಲ್ ತಾ. ೩ನೆಯ ದಿನ ಮಂಗಳೂರು ಶ್ರೀ ವೆಂಕಟ್ರಮಣ ದೇವಳದ ಸಮೀಪ ಸತ್ಯಾಗ್ರಹವನ್ನು ಮಾಡಲಿರುವರೆಂದೂ ಸುದ್ದಿಬಂದಿದೆ

ಕಾರ್ಕಳ

ಸತ್ಯಾಗ್ರಹ ಸಮಾಚಾರಗಳು:— ಶ್ರೀ ಸೋಮನಾಥ ಗೋಖಲೆಯವರು ತಾ. ೨೦ರ ದಿನ ಬಜಗೋಳಿಯಲ್ಲಿ ಸತ್ಯಾಗ್ರಹ ಮಾಡಿದರು. ಅವರನ್ನು ಕೈದುಮಾಡಿಲ್ಲ. ಈಗ ಶ್ರೀ ಗೋಖಲೆಯವರು ಈ ವಾರದಲ್ಲಿ ಇತರ ಕಡೆಗಳಿಂದ ಇಲ್ಲಿಗೆ ಬಂದ ಶ್ರೀಗಳಾದ ರಾಮಯ್ಯ ಶೆಟ್ಟಿ, ಪಿ. ಕೇಶವ ಕುಡ್ವ, ರಾಮಕೃಷ್ಣ ರಾವ್, ತ್ರಿವಿಕ್ರಮ ಭಟ್ಟ ಮೊದಲಾದವರೂ ಅಲ್ಲಲ್ಲಿ ಕೂಡಿದ ಸಾರ್ವಜನಿಕ ಸಭೆಗಳಲ್ಲಿಯೂ, ಮನೆಮನೆಗಳ ಮುಂದೆ ನಿಂತೂ ಯುದ್ಧವಿರೋಧ ಘೋಷಣೆಗಳ ಮೂಲಕ ಸತ್ಯಾಗ್ರಹವನ್ನೂ, ಕಾಂಗ್ರೆಸ್ ಪ್ರಚಾರಕಾರ್ಯವನ್ನೂ ಮಾಡುತ್ತಿದ್ದಾರೆ.

ಕುಂದಾಪುರ

ಬಿ. ಸುಬ್ಬಣ್ಣ ಸೆಟ್ಟರಿಗೆ ನಾಲ್ಕು ತಿಂಗಳ ಕಠಿಣಶಿಕ್ಷೆ:— ತಾ. ೧೫ರಲ್ಲಿ ಕುಂದಾಪುರದಲ್ಲಿ ಸತ್ಯಾಗ್ರಹ ಮಾಡಿದ ಶ್ರೀ. ಬಿ. ಸುಬ್ಬಣ್ಣ ಸೆಟ್ಟಿಯವರನ್ನು ತಾ. ೨೦ರ ದಿವಸ ಕುಂದಾಪುರ ಸಬ್ ಕಲೆಕ್ಟರರು ವಿಚಾರಿಸಿ ೪ ತಿಂಗಳ ಶಿಕ್ಷೆ ವಿಧಿಸಿ 'ಬಿ' ವರ್ಗ ಕೊಟ್ಟರು. ಅವರು ಮಂಗಳೂರ ಸಬ್ ಜೇಲಿಗೆ ಕರೆದೊಯ್ಯಲ್ಪಟ್ಟು ಅಲ್ಲಿಂದ ೨೪ನೇ ತಾರೀಕಿನ ದಿವಸ ಕನ್ನಾನೂರ ಸೆಂಟ್ರಲ್ ಜೇಲಿಗೆ ಕರೆದೊಯ್ಯಲ್ಪಡುವರು.

ಶ್ರೀ. ಬಿ. ಸುಬ್ಬಣ್ಣ ಶೆಟ್ಟರು ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಮೆಂಬರರೂ, ಜಿಲ್ಲಾ ಕಾಂಗ್ರೆಸ ಕಮಿಟಿ ಕಾರ್ಯದರ್ಶಿಗಳೂ ಕುಂದಾಪುರ ತಾಲೂಕು ಕಾಂಗ್ರೆಸ್ ಕಮಿಟಿ ಅಧ್ಯಕ್ಷರೂ ಆಗಿರುವರು.

ಮಂಗಳೂರು

ಹಿಂದುಸ್ಥಾನ ಸ್ಕೌಟ್ಸ್:— ಜಿಲ್ಲಾ ಹಿಂದುಸ್ಥಾನ ಸ್ಕೌಟ್ಸ್ ಎಸೋಸಿಯೇಶನಿನ ಕಾರ್ಯಕಾರಿ ಮಂಡಳಿಯ ಸಭೆಯು, ಸಂಘದ ಅಧ್ಯಕ್ಷರಾದ ಶ್ರೀ ಕೆ. ಸದಾಶಿವ ರಾಯರ ಅಧ್ಯಕ್ಷತೆಯಲ್ಲಿ ಕಳೆದ ತಾ. ೩೦ರಲ್ಲಿ ಕೆನರಾ ಹೈಸ್ಕೂಲಿನಲ್ಲಿ ಜರಗಿ ಬರುವ ಮೂರು ತಿಂಗಳಲ್ಲಿ ಕಾರ್ಕಳದಲ್ಲಿ ರೋವರ್ ಲೀಡರ್ಸ್ ಮತ್ತು ಸ್ಕೌಟ್ ಲೀಡರ್ಸ್ ತರಬೇತಿ ಕೇಂಪು ನಡೆಸಲು ನಿಶ್ಚಯಿಸಿತು. ಪ್ರಾಂತಿಕ ಸ್ಕೌಟ್ ಸಂಘದ ನಿಯಮಾವಳಿಗಳಲ್ಲಿ, ಜಿಲ್ಲಾ ಹಾಗೂ ಇತರ ಪ್ರದೇಶಗಳಿಗೆ ಅನ್ವಯಿಸುವವುಗಳಲ್ಲಿ ಆಗಬೇಕಾದ ತಿದ್ದುಪಡಿಗಳನ್ನು ಸೂಚಿಸಿದರು.

ಗೌಡ ಸಾರಸ್ವತ ಬ್ರಾಹ್ಮಣ ವೈದಿಕರ ಸಂಘ:— ಗೌಡ ಸಾರಸ್ವತ ಬ್ರಾಹ್ಮಣ ವೈದಿಕರ ಸಂಘದ ಮಹಾಸಭೆಯು ತಾರೀಕು ೨೩-೩-೪೧ರಲ್ಲಿ ಕಾತ್ಯಾಯಿನಿ ಮಠದಲ್ಲಿ ವೇದಮೂರ್ತಿ ಕೇಶವಭಟ್ಟರ ಅಧ್ಯಕ್ಷತೆಯಲ್ಲಿ ನೆರೆಯಿತು. ಗತವರುಷದ ವರದಿ ಓದಿದ ನಂತರ ಪಂಡಿತ ಮಂಗಳೂರು ರಾಘವೇಂದ್ರಾಚಾರ್ಯರ ನಿಧನದ ಸಂತಾಪಸೂಚಕ ಠರಾವು ಮಂಜೂರಾಯಿತು. ಹೊಸ ವರುಷದಲ್ಲಿ ಈ ವೈದಿಕ ಸಂಘದ ಪುಸ್ತಕಾಲಯವನ್ನು ತೆರೆಯಬೇಕಾಗಿ ನಿರ್ಣಯಿಸಿದೆ.

ಭಟ್ಕಳದಲ್ಲಿ ದ. ಕ. ಸತ್ಯಾಗ್ರಹಿಗಳನ್ನು ಸೆರೆಹಿಡಿದರು:— ದಕ್ಷಿಣ ಕನ್ನಡದಲ್ಲಿ [illegible] ಕಾರ್ಕಳ ನರಸಿಂಹ ಶೆಣೈ, ತಾವು ಇವರನ್ನು ಭಟ್ಕಳದಲ್ಲಿ ಹಿಡಿದು ೬ ತಿಂಗಳ ಸಾದಾ ಸಜೆ ವಿಧಿಸಿದರೆಂದು ತಿಳಿಯುತ್ತದೆ. ಶ್ರೀ ವೈಕುಂಠ ಬೀರು ಶೆಣೈನ್ನು ಬಂಧಿಸಿರುವರೆಂದೂ ವಿಚಾರಣೆ ನಡೆದಿಲ್ಲವೆಂದೂ ತಿಳಿದುಬಂದಿದೆ. ಶ್ರೀಗಳಾದ ಪದ್ಮನಾಭ ಶೆಣೈ, ಉಪೇಂದ್ರ ಶೆಣೈ, ರಘುನಾಥ ಶೆಣೈ, ಪುಂಡಲೀಕ ಕಾಮತ್ ಮೊದಲಾದವರೂ ಇರುವರು ಇವರೆಲ್ಲರನ್ನು ಸೆರೆಹಿಡಿದರಾಗಿ ಸುದ್ದಿಯಿದೆ.

ಜಿಲ್ಲಾ ಬಿಲ್ಲವರ ಯೂನಿಯನ್ ದ. ಕನ್ನಡ:— ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಗಳವರ ಮುಖ್ಯ ಶಿಷ್ಯರಾದ ಶ್ರೀ ಗುರುಪ್ರಸಾದ ಸ್ವಾಮಿಗಳು ಕಳೆದ ಶಿವರಾತ್ರಿ ಮಹೋತ್ಸವ ಸಮಯ ಶ್ರೀ ಗೋಕರ್ಣನಾಥ ಕ್ಷೇತ್ರಕ್ಕೆ ಬಂದವರು ತನಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸಮಾಡಬೇಕೆಂದು ನಿಶ್ಚಯಿಸಿ ತಾ. ೧೭-೩-೪೧ರಲ್ಲಿ ಶ್ರೀ. ಗೋಕರ್ಣನಾಥ ಕ್ಷೇತ್ರದಿಂದ ತೆರಳಿದ ಅವರನ್ನು ಕೂಳೂರು ಗ್ರಾಮಸ್ಥರು ಎದುರುಗೊಂಡು ಸ್ವಾಗತವಿತ್ತರು. ಇಲ್ಲಿ ಗ್ರಾಮಸ್ಥರ ಸಭೆ ನೆರೆದು ಸ್ವಾಮಿಜಿಯವರ ಉಪದೇಶಪರ ಭಾಷಣವಾಯಿತು. ಅಲ್ಲಿಂದ ಸ್ವಾಮಿಜಿಯವರು ಶ್ರೀ ಗೋಕರ್ಣನಾಥ ಕ್ಷೇತ್ರದ ಪ್ರತಿನಿಧಿ ಸದ್ಗೃಹಸ್ಥರೊಡನೆ ಪಣಂಬೂರಿಗೆ ತೆರಳಿದರು. ಇಲ್ಲಿ ಕೂಡಾ ಬಿಲ್ಲವ ಸಮಾಜದ ದೊಡ್ಡ ಸಭೆ ಜರುಗಿತು. ಸ್ವಾಮಿಜಿಯವರು ಪಣಂಬೂರಲ್ಲಿ ಇತ್ತೀಚೆಗೆ ದೇವಸ್ಥಾನ ಪ್ರವೇಶದ ವಿಷಯ ನಡೆದ ಗಲಾಟೆಗಳ ಕುರಿತು ಅತಿ ಬೋಧಪರ ಭಾಷಣಮಾಡಿದರು. ದೇವಸ್ಥಾನ ಪ್ರವೇಶದ ಕುರಿತು ನಾವು ಮಾಡುವುದು ಸರಿಯಲ್ಲವೆಂದೂ ಸಮಯಾನುಸಾರ ತ್ರಾವಣಕೂರು ಪ್ರಾಂತ್ಯದಲ್ಲಿ ನಿರ್ಧಾರಗಳಾದಂತೆ ಎಲ್ಲಾ ಕಡೆಗಳಲ್ಲಿಯೂ ಆಗಬಹುದೆಂದೂ ವಿಸ್ತರಿಸಿ ಹೇಳಿದರು. ನಮ್ಮ ಜಾತಿಯು ಒಂದೇ ಒಂದಾದ ದೇವಸ್ಥಾನದ ಅಭಿವೃದ್ಧಿಯ ಕುರಿತು ಪ್ರತಿಯೊಬ್ಬ ನಿರ್ಬಂಧವು ಪ್ರಯತ್ನಿಸುವುದು ತನ್ನ ಕರ್ತವ್ಯವೆಂದು ಒತ್ತಿಹೇಳಿದರು.

ಕಾಸರಗೋಡು

ಕುಂಬಳೆ ಸರ್ಕಲ್ ಹಿಂದೂ ಮಹಾಸಭೆ:— ತಾ. ೧೭ರಂದು ಕುಂಬಳೆ ಹಿಂದೂಮಹಾಸಭೆಯ ಅಧ್ಯಕ್ಷರಾದ ಸಾಂತಪ್ಪ ರೈಗಳವರ ಮನೆಯಲ್ಲಿ ಒಂದು ವಿಶೇಷ ಸಭೆ ಜರಗಿ ಜಿಲ್ಲಾ ಪ್ರಚಾರಕರಾದ ಶ್ರೀ. ಯು. ವಿದ್ಯಾರ್ಥಿಯವರು ಹಿಂದೂ ಮಹಾಸಭೆ ಮತ್ತು ಹಿಂದೂ ಜನಾಂಗದ ಏಕೀಕರಣದ ಆವಶ್ಯಕತೆಯ ಕುರಿತು ಭಾಷಣ ಮಾಡಿದರು. ಈ ಸಭೆಗೆ ಕುಂಬಳೆ ಸರ್ಕಲ್ ಕಾರ್ಯನಿರ್ವಾಹಕ ಸಮಿತಿಯವರು ಹಾಗೂ ಅನೇಕ ಜನರನ್ನು ಕೂಡಿಕೊಂಡು ಒಂದು ಸಭೆಯು ಭಾಗವಹಿಸಿದ್ದರು

ತಾ. ೧೭ರಲ್ಲಿ ಪ್ರಚಾರಕರು ಮತ್ತು ಕುಂಬಳೆ ಸರ್ಕಲ್ ಹಿಂದೂ ಮಹಾಸಭೆಯ ಕಾರ್ಯದರ್ಶಿಯಾದ ಕೆ. ಬಾಬ್ರಾಯ ಪುಂಡಲೀಕ ಭಟ್ಟ ಇವರು ನಾರಾಯಣ ಮಂಗಲ ಸಂಸ್ಕೃತ ಪಾಠಶಾಲೆಯಲ್ಲಿ ವಿ. ಶ್ಯಾಮ ಭಟ್ಟರ ಅಧ್ಯಕ್ಷತೆಯಲ್ಲಿ ಜರುಗಿಸಿದರು. ತಾ. 18ನೇ ಮಂಗಳವಾರ ಪ್ರಚಾರಕರು ಬೇಳ ಗ್ರಾಮದ ಕೋಡಿಂಗಾರು ಮನೆಯಲ್ಲಿ ಹರಿಕಥೆಯ ಮೂಲಕ ಹಿಂದೂಸಭೆಯ ತತ್ವವನ್ನು ಪ್ರಚಾರಗೊಳಿಸಿದರು. ಮತ್ತು ಅದೇ ದಿನ ರಾತ್ರಿ ಕಾರ್ಯದರ್ಶಿಗಳಾದ ಕೆ. ಬಾಬ್ರಾಯ ಪುಂಡಲೀಕ ಭಟ್ಟರು ಕುಂಬಳೆ ಭಂಡಾರಿ ಮನೆಯಲ್ಲಿ ಕೂಡಿದ ಬಿಲ್ಲವ ಸಮಾಜದ ಮಹಾಸಭೆಯಲ್ಲಿ ಹಿಂದೂ ಮಹಾಸಭೆಯ ತತ್ವವನ್ನು ಪ್ರಚಾರಗೊಳಿಸಿದರು. ತಾ. ೨೧ನೇ ದಿನಗಳಲ್ಲಿ ಮಂಗಲ್ಪಾಡಿ ಮತ್ತು ಕುಕ್ಕಾರು ಎಂಬಲ್ಲಿ ಸಭೆ ಜರಗಿತು.

ಹೆತ್ತವರ ಸಂಘ:— ಕುಂಬಳೆ ಹಾಯರ್ ಎಲಿಮೆಂಟರಿ ಶಾಲೆಯ ಹೆತ್ತವರ ಸಂಘವನ್ನು ಗವರ್ನಮೆಂಟ್ ಸಕ್ಯುಲರ್ ನೋಟಿಸಿನಂತೆ ಸ್ಥಾಪಿಸುವ ಬಗ್ಗೆ ಅದೇ ಶಾಲೆಯಲ್ಲಿ ತಾ. ೨೫ ಸಾಯಂಕಾಲ ಘಂಟೆ ೬ಕ್ಕೆ ಜನಾಬ್ ಎಂ. ಸಿ. ಮಮ್ಮೊಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿತು.

ಪುತ್ತೂರು

ರಾಮಕುಂಜ:— ತಾ. ೨೦ರಂದು ಇಲ್ಲಿಯ ಎಯ್ಡೆಡ್ ಸಂಸ್ಕೃತ ಪಾಠಶಾಲೆಯಲ್ಲಿ ಸನ್ನಿ ಶಾಲೆಯ ಪ್ರಧಾನೋಪಾಧ್ಯಾಯರ ಅಧ್ಯಕ್ಷತೆಯಲ್ಲೊಂದು ಸಭೆ ಜರಗಿ, ಪ್ರತಿಷ್ಠಾಪ್ಯ ವಿದ್ಯಾರ್ಥಿಗಳು ಅವರವರ ಯೋಗ್ಯತೆಗೆ ತಕ್ಕಂತೆ ಬಹುಮಾನ ಪಡೆದರು. ಈ ವರ್ಷ ಶಾಲೆಯಿಂದ ಯುನಿವರ್ಸಿಟಿ, ಮದ್ರಾಸು ಗವರ್ನಮೆಂಟ್ ಪರೀಕ್ಷೆಗಳಿಗೆ ಕುಳಿತುಕೊಳ್ಳುವವರ ಶ್ರೇಯೋಭಿವೃದ್ಧಿಯ ವಿಷಯವಾಗಿ ಪಾಠಾ ಪಂಡಿತರ ಹಾಗೂ ಅಧ್ಯಕ್ಷರ ಭಾಷಣ ನಡೆದು ಉಪಹಾರ ಕೂಟದೊಡನೆ ಸಭೆಯು ಕೊನೆಗೊಂಡಿತು.

ಧಾರವಾಡ

ಹೊಸ ಕನ್ನಡ ಮಾಸಿಕ:— ಬರುವ ತಿಂಗಳಿನ ಮೊದಲನೆಯ ವಾರದಿಂದ 'ಪ್ರತಿಭಾ' ಎಂಬ ನೂತನ ಮಾಸಪತ್ರಿಕೆ ಹೊರಡಲಿದೆಯೆಂದು ತಿಳಿದುಬರುತ್ತದೆ.

ದೀನಬಂಧು ನಿಧಿಗಾಗಿ ಮಹಾತ್ಮರ ಕೇಳಿಕೆ.

ಭಾರತದಲ್ಲಿ ವಿಶೇಷ ಸಂಭವಗಳೇನೂ ಆಗಿಲ್ಲ. ಕೇಂದ್ರ ಎಸೆಂಬ್ಲಿಯಲ್ಲಿ ಕಳೆದ ವಾರದಿಂದ ಹಲವು ವಿಚಾರಗಳ ಕುರಿತು, ಸರಕಾರದ ಧೋರಣೆಗಾಗಿ ಸದಸ್ಯರು ಆಕ್ಷೇಪವೆತ್ತಿ ವಾದಿಸಿದರು. ಸತ್ಯಾಗ್ರಹ ಸಮರವು ಭರದಿಂದ ನಡೆಯುತ್ತದೆ. ಏಪ್ರಿಲ್ ೬ರಿಂದ ೧೩ರ ವರೆಗೆ ರಾಷ್ಟ್ರೀಯ ಸಪ್ತಾಹದ ವಾರ ರಚನಾತ್ಮಕ ಕಾರ್ಯ ಮಾಡಬೇಕೆಂದು ಗಾಂಧಿಜಿ ಹೇಳಿದ್ದಾರೆ. ಮುನ್ಶಿಯವರು ಆರೋಗ್ಯ ಹೊಂದುತಿದ್ದಾರೆ. ಪಟ್ಟಾಭಿಯವರನ್ನು ಬಂಧಿಸಲಾಗಿದೆ.

ಮುನ್ಶಿಯವರ ಆರೋಗ್ಯ. ಮುಂಬೈಗೆ ಬಂದರು

ಶ್ರೀ. ಕೆ. ಎಂ. ಮುನ್ಶಿ (ಹಿಂದಿನ ಮಂತ್ರಿ) ಗಳು ಅನಾರೋಗ್ಯದ ನಿಮಿತ್ತ ಸೆರೆಮನೆಯಿಂದ ಬಿಡುಗಡೆ ಹೊಂದಿದವರು, ಅವರ ಪತ್ನಿ ಲೀಲಾವತಿ ಮುನ್ಶಿಯವರೊಡನೆ ಪುಣೆಯಿಂದ ಮುಂಬೈಗೆ ಬಂದಿರುವರು. ಆರೋಗ್ಯವು ದಿನದಿಂದ ದಿನಕ್ಕೆ ಸುಧಾರಿಸುತ್ತಿದೆಯೆಂದು ತಿಳಿದಿದೆ.

ರಾಜಕೀಯ ಬಿಕ್ಕಟ್ಟು ಬಿಡಿಸಬೇಕು

ಹಡಗು ವ್ಯವಸಾಯಕ್ಕೆ ಸಹಕರಿಸಬೇಕು

ಸಂಯುಕ್ತ ವಣಿಕ ಸಂಘದ ಕೇಳಿಕೆ

ಹೊಸ ಡಿಲ್ಲಿಯಲ್ಲಿ ಸೇರಿದ ಸಂಯುಕ್ತ ವಣಿಕ ಸಂಘದವರು, ಸರಕಾರದೊಡನೆ, ಭಾರತದ ಇಂದಿನ ರಾಜಕೀಯ ಬಿಕ್ಕಟ್ಟನ್ನು ಬೇಗನೇ ಬಿಡಿಸಬೇಕೆಂದೂ, ಹಡಗು ವ್ಯವಸಾಯಕ್ಕೆ ಸಹಕರಿಸಬೇಕೆಂದೂ ಬಿನ್ನವಿಸಿಕೊಂಡಿರುವರು. ಅವರು ಹಲವು ಆರ್ಥಿಕ ವಿಚಾರಗಳನ್ನು ಸರಾಮರ್ಶಿಸಿದರು. ಇಂದಿನ ಹೊಸ ತೆರಿಗೆಗಳ ಕುರಿತು ಚರ್ಚಿಸಿದರು.

ಡಾಕಾದಲ್ಲಿ ದಂಗೆ

ಡಾಕಾದಲ್ಲಿ ಜಾತೀಯ ದಂಗೆಯೊಂದು ಉಂಟಾಗಿ ಅದರಲ್ಲಿ ೨೬ ಜನರು ಸತ್ತು ೧೫೦ ಮಂದಿ ಗಾಯಗೊಂಡಿರುವರು.

ಪಾಕಿಸ್ತಾನ ಸಭೆ ಕೂಡದು

ಹಕ್ಕರ ಪ್ರಕಟಣೆ

ಬಂಗಾಳದ ಮುಖ್ಯ ಮಂತ್ರಿಗಳಾದ ಫಜಲುಲ್ ಹಕ್ಕರು, ಪಾಕಿಸ್ತಾನದಲ್ಲಿ ವಿಶ್ವಾಸವಿದ್ದವರೂ ಕೂಡಾ ಪಾಕಿಸ್ತಾನದ ಸಭೆಗಳನ್ನು ಮಾಡಬಾರದಾಗಿ ಒಂದು ಪ್ರಕಟಣೆಯನ್ನು ಹೊರಡಿಸಿರುವರು.

ಕಾಶಿಯ ಹತ್ತಿರ ಭಯಂಕರ ದರೋಡೆ

ಶಸ್ತ್ರಾಸ್ತ್ರ ಸಜ್ಜಿತರಾದ ೨೦೦ ಮಂದಿ ಮುಸಲ್ಮಾನರು ತಾ. ೨೦ರಂದು ರಾತ್ರಿ ಅಜಮಗಡ ಎಂಬ ಹಳ್ಳಿಯ ಮೇಲೆ ಧಾಳಿಮಾಡಿ ಹಿಂದೂ ಜನರ ಅಂಗಡಿ ಮತ್ತು ಮನೆಗಳನ್ನು ಲೂಟಿಮಾಡಿದರು.

ಡಾಕ್ಕಾದಲ್ಲಿ ಭಾರೀ ದೊಂಬಿ

ಪಟ್ಟಾಭಿಯವರನ್ನು ಬಂಧಿಸಿದರು

ಈ ಗೊಂದಲದಲ್ಲಿ ಸುಮಾರು ಒಂದು ನೂರು ಜನರು ಸ್ತ್ರೀ ಪುರುಷರಿಗೆ ಗಾಯಗಳಾಗಿರುತ್ತವೆ. ೧೪೪ನೇ ಕಲಂ ಜಾರಿ ಮಾಡಲಾಗಿದೆ.

ಪಟ್ಟಾಭಿಯವರನ್ನು ಬಂಧಿಸಿದರು

ಡಾ। ಪಟ್ಟಾಭಿಯವರನ್ನೂ, ಕಾಳೆ ವೆಂಕಟರಾಯರನ್ನೂ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನನ್ವಯ ಬಂಧಿಸಿರುವರೆಂದು ತಿಳಿದಿದೆ.

ಡಾಕ್ಕಾದಲ್ಲಿ ಭಾರಿ ದೊಂಬಿ

ಪಟ್ಟಣದ ಬಹುಭಾಗ ಬೆಂಕಿಗೆ ಬಲಿ

ವಿಶೇಷ ಪ್ರಾಣಹಾನಿ ಆಸ್ತಿಗೆ ವಿಶೇಷ ನಷ್ಟ

ಹೆಂಡದ ಅಂಗಡಿಯಲ್ಲಿ ಪ್ರಾರಂಭವಾಯಿತೆಂದು ಹೇಳಲಾದ ಜಾತಿಯ ಗಲಭೆಯು ಇತರ ಕಡೆಗೂ ಹರಡಿತು. ಜಾಬರ್ ಬಜಾರಿನಲ್ಲಿ ಕಾಲು ಚೀಲ ತಯಾರು ಮಾಡುವ ಅಂಗಡಿಯೊಂದಕ್ಕೆ ಜನರ ಗುಂಪು ಬೆಂಕಿ ಹೊತ್ತಿಸಿದುದರ ಫಲವಾಗಿ, ಪೋಲೀಸಿನವರು ಗುಂಪಿನ ಮೇಲೆ ಗುಂಡು ಹಾರಿಸಿದರು. ಪರಿಣಾಮವಾಗಿ, ಒಂಭತ್ತು ಮಂದಿಗೆ ವಿಪರೀತ ಗಾಯಗಳಾದವು. ನ್ಯಾಯಸರಕ್ ನಲ್ಲಿ ದೊಂಬಿ ನಡೆಸಿದ್ದ ಗುಂಪಿನ ಮೇಲೆ ಪೋಲೀಸಿನವರು ಗುಂಡು ಹೊಡೆದು ಇದರ ಫಲವಾಗಿ ನಾಲ್ಕು ಮಂದಿ ಸತ್ತರು. ಇತರರಿಗೆ ತುಂಬಾ ಘಾಯವಾಯಿತು. ಇತ್ತೀಚೆಗೆ ಬಂದಿರುವ ವರದಿ ಪ್ರಕಾರ, ಹದಿನಾಲ್ಕು ಮಂದಿ ಸತ್ತಿದ್ದಾರೆ, ಒಂಬತ್ತೊಂದು ಮಂದಿ ಜನರಿಗೆ ಗಾಯಗಳಾಗಿವೆ. ಚೌಕ್ ಬಜಾರ್ ನಲ್ಲಿರುವ ಅತ್ಯಂತ ದೊಡ್ಡದಾದ ಬಟ್ಟೆ ಅಂಗಡಿಯನ್ನು ಪೂರ್ತಿಯಾಗಿ ಲೂಟಿ ಮಾಡಲಾಯಿತು. ಅಷ್ಟೇ ಅಲ್ಲದೆ ಸಾಮಾನುಗಳನ್ನು ಸುಟ್ಟು ಒಂದು ಲಕ್ಷ ರೂಪಾಯಿಗಳ ವರೆಗೆ ನಷ್ಟವಾದಲ್ಲಾಯಿತು. ಇದೇ ಬಜಾರ್ ನಲ್ಲಿರುವ ಅನೇಕ ಮಿಠಾಯಿ ಅಂಗಡಿಗಳಿಗೂ ಬೆಂಕಿ ಹಾಕಲಾಯಿತು. ಬೂರಿ ಗಂಗಾ ನದಿಯಿಂದಲೂ ಅಗ್ನಿ ತ್ಪಾತದ ಕೃತ್ಯಗಳ ವರದಿಗಳು ಬಂದಿವೆ. ಅಲ್ಲಿ ೪ ದೋಣಿಗಳಿಗೆ ಬೆಂಕಿ ಹಚ್ಚಲಾಯಿತೆಂದು ಹೇಳಲಾಗಿದೆ. ದಿನವೆಲ್ಲಾ ಪಟ್ಟಣ ನಾನಾ ಭಾಗಗಳಲ್ಲಿ ಬೆಂಕಿ ಹಾಕಲಾಯಿತೆಂಬ ವರದಿಗಳು ಒಂದೇ ಸಮನೆ ಬರುತ್ತಿವೆ. ಬಾಬರ್ ಬಜಾರ್ ನಲ್ಲಿರುವ ಒಂದು ದೊಡ್ಡ ಅಕ್ಕಿ ಅಂಗಡಿಗೆ ಬೆಂಕಿ ಹಾಕಿ, ಅದನ್ನು ಪೂರ್ತಿಯಾಗಿ ಭಸ್ಮ ಮಾಡಿ ಹಾಕಲಾಯಿತು. ಸುಮಾರು ೩೦,೦೦೦ ರೂ. ನಷ್ಟಸಂಭವಿಸಿದೆ. ತ್ರೈಮಾಸಿಕವಿಲ್ಲ ಎಲ್ಲ ಸಿವಿಲ್ ಕೋರ್ಟುಗಳನ್ನು ಬಂದುಮಾಡಲಾಗಿದೆ. ಅನೇಕ ಮಂದಿ ಹೆಂಗುಸರು ಕ್ರಿಮಿನಲ್ ಕೋರ್ಟುಗಳ ಆವರಣಗಳಲ್ಲಿ ರಕ್ಷಣೆ ಹೊಂದುತ್ತಿದ್ದಾರೆ. ಮಿಲಿಟರಿಯವರನ್ನು ಕರೆಯಲಾಗಿದೆ. ಅವರೆಲ್ಲರೂ ಊರಿನಲ್ಲಿ ಗಸ್ತು ತಿರುಗುತ್ತಿದ್ದಾರೆ. ಅಲ್ಪ ಸಂಖ್ಯೆಯಲ್ಲಿರುವ ಉಭಯ ಕೋಮುಗಳ (ಹಿಂದೂ-ಮುಸ್ಲಿಂ) ಸಂಸಾರದವರು ತಮ್ಮ ತಮ್ಮ ಮನೆಮಠಗಳನ್ನು ಬಿಟ್ಟು ಹೊರಡುತ್ತಿದ್ದಾರೆ.

ಬೊಂಬಾಯಿ ಬಡ್ಜೆಟ್

ಹುಟ್ಟುವಳಿ ೧೩,೫೭,೭೫೦೦೦ ರೂ. ಗಳು. ಉಳಿತಾಯ ೭೫ ಸಾವಿರ

ಬೊಂಬಾಯಿ ಸರಕಾರದ ೧೯೪೧-೪೨ನೆಯ ಸಾಲಿನ ಆಯವ್ಯಯ (ಬಡ್ಜೆಟ್) ಅಂದಾಜು ಪ್ರಕಾರ ಹುಟ್ಟುವಳಿ ೧೩ ಕೋಟಿ ೫೭ ಲಕ್ಷ ೭೫ ಸಾವಿರ ರೂಪಾಯಿಗಳು. ಖರ್ಚು ೧೩ ಕೋಟಿ ೫೭ … ಲಕ್ಷ ರೂಪಾಯಿಗಳು. ಉಳಿತಾಯ … ೭೫ ಸಾವಿರ.

ಯುದ್ಧಾನಂತರ ಒದಗುವ ಕೈಗಾರಿಕೆ … ವಿಪತ್ತಿನ ಆಪತ್ತಿಗಾಗಿ ೧೧೧ ಲಕ್ಷ ರೂ… ಗಳನ್ನು ತೆಗೆದಿಡಲಾಗಿದೆ.

ಬಡ್ಜೆಟ್ ವಿಚಾರವಾಗಿ ಗವರ್ನರರು … ಪತ್ರಿಕೋದ್ಯಮಿಗಳ ಸಮ್ಮೇಳನದಲ್ಲಿ … ಭಾಷಣಮಾಡುತ್ತಾ ಕೆಲವು ಅಂಕೆ ಅಂ… ಶಗಳನ್ನು ಸೂಚಿಸಿದರು.

ಶಿಕ್ಷೆಗೆ ಗುರಿಯಾದ ಕರ್ನಾಟಕದ ಸತ್ಯಾಗ್ರಹಿಗಳು

ಕರ್ನಾಟಕದಲ್ಲಿ ೧-೩-೪೧ರಿಂದ … ೧೫-೩-೪೧ರ ವರೆಗೆ ಒಟ್ಟು ೧೩… ಜನರು ಸತ್ಯಾಗ್ರಹ ಹೂಡಿದರು. … ರಲ್ಲಿ ೧೧೪ ಜನರಿಗೆ ಶಿಕ್ಷೆಯಾಗಿದೆ. ೧… ಜನರನ್ನು ಕೈದುಮಾಡಲಿಲ್ಲ. ೨೭… ರೂಪಾಯಿ ದಂಡ ವಿಧಿಸಲಾಗಿದೆ.

ಇದೇ ತಾ. ೧೫-೩-೪೧ರ ವರೆ… ಕರ್ನಾಟಕದಿಂದ ಒಟ್ಟು ೪೨೮ ಜನರು … ಸತ್ಯಾಗ್ರಹಿಗಳು ಸತ್ಯಾಗ್ರಹ ಹೂಡಿದ… ೩೮೫ ಜನರನ್ನು ಕೈದುಮಾಡಲಿಲ್ಲ … ಒಟ್ಟು ಮಾರ್ಚ ತಾ. ೧೫ರ ವರೆಗೆ ರೂ… ೯೪೩೫ ದಂಡ ವಿಧಿಸಲಾಗಿದೆ.

* ಸ್ಥಾನಬದ್ಧರಾದವರ ಸಂಖ್ಯೆಯನ್ನು ಈ ಪಟ್ಟಿಯಲ್ಲಿ ನಮೂದಿಸಿಲ್ಲ.

ದೀನಬಂಧು ಆಂಡ್ರೂಸರ ಸ್ಮಾರಕ ನಿಧಿ

ಐದು ಲಕ್ಷ ರೂ. ಸಂಗ್ರಹವಾಗಬೇಕೆಂದು ಗಾಂಧಿಜಿಯವರ ಪ್ರಾರ್ಥನೆ

ದಿವಂಗತ ರೆವರೆಂಡ್ ಸಿ. ಎಫ್. ಆಂಡ್ರೂಸ್ ರವರ ಸ್ಮಾರಕನಿಧಿಯ ಬಗ್ಗೆ … ಮಹಾತ್ಮಾ ಗಾಂಧಿಯವರು ಒಂದು … ಪ್ರಾರ್ಥನೆಯನ್ನು ಹೊರಡಿಸಿ ತಿಳಿಸಿರು… ದೇನೆಂದರೆ: ಶ್ರೀ. ಚಾರ್ಲಿ ಆಂಡ್ರೂಸ… ದೀನಬಂಧುಗಳಾಗಿದ್ದರು. ಜಾತಿ ಮ… ಭೇದಗಳನ್ನೆಣಿಸದೆ, ವರ್ಣದ್ವೇಷವಿಲ್ಲ… ಇಂಗ್ಲಿಷರವರು, ಇತರರು ಎಂಬ … ವಿಡದೆ ಎಲ್ಲರ ಮಿತ್ರರಾಗಿ ಸಹಾಯ… ಮಾಡುತ್ತಿದ್ದರು. ದೀನಬಂಧು ಆಂಡ್ರೂ… ಸರು ಶಾಂತಿನಿಕೇತನವನ್ನು ತಮ್ಮ ಮ… ಯಂತೆ ಮಾಡಿಕೊಂಡಿದ್ದರು.

ಏಪ್ರಿಲ್ ೬ರೊಳಗೆ ದೀನಬಂಧು ಆಂ… ಡ್ರೂಸರ ನಿಧಿಗೆ ಐದು ಲಕ್ಷ ರೂಪಾ… ಗಳನ್ನು ಸಂಗ್ರಹಿಸಬೇಕು. ವಿದ್ಯಾರ್ಥಿ… ಗಳೂ, ಉಪಾಧ್ಯಾಯರೂ, ಕಲಾಪ್ರೇ… ಗಳೂ, ಕೂಲಿ ಕೆಲಸಗಾರರೂ, ಸಾಮಾ… ನ್ಯ ಬಡಜನರೂ, ಇವರೆಲ್ಲರಿಗೂ ದೀ… ಬಂಧುಗಳು ಅಜೀವ ಪರ್ಯಂತರ ದು… ಇದ್ದರು.

ನಿಮ್ಮ ವ್ಯಾಪಾರ ಅಭಿವೃದ್ಧಿಯಾ… ಬೇಕಾದರೆ ಇಂದೇ

ಸ್ವದೇಶಾಭಿಮಾನಿಗೆ

ಚಂದಾದಾರರಾಗಿ…

THE

Canara Banking Corporation Limited

(In corporated in British India)

ESTD: 1906

*HEAD OFFICE: **UDIPI,** South Kanara.*

SEASON DEPOSITS

are now accepted at all our Offices at the following rates of interest:

2 & 3 months	... ...	3% p. a.
4 & 5 "	... ...	3½% p. a.

These deposits will not be allowed to run beyond September 1941.

ಜರ್ಮನಿಯ ತುಳಿತದಲ್ಲಿ ಯುಗೊಸ್ಲವಿಯಾ!

ನಾಜಿಗಳ ಪದಹತಿಯಿಂದ ಇನ್ನೊಂದು ದುರ್ಬಲ ರಾಷ್ಟ್ರವು ಚೂರ್ಣವಾಯಿತು. ಯುಗೊಸ್ಲವಿಯ ಜರ್ಮನಿಯ ಒತ್ತಾಯಕ್ಕೆ ಬಗ್ಗಿ ಒಪ್ಪಂದಮಾಡಿತು. ಇದರಿಂದ ಹಿಟ್ಲರನ ಗರ್ವ ಹೆಚ್ಚಿದಂತಾಗುತ್ತದೆ. ಮುಂದೆ ಗ್ರೀಸು ಟರ್ಕಿಗಳು ಮಾತ್ರ ಬಾಲ್ಕನಿನಲ್ಲಿ ಬಾಕಿಯುಳಿದವು. ಟರ್ಕಿಯ ಮೇಲೆ ಧಾಳಿಯಾಗಿ ಯುದ್ಧ ನಡೆದರೆ ಆಗ ರಶ್ಯವು ತಟಸ್ಥ ಧೋರಣ ವಹಿಸುವುದೆಂದು ರಶ್ಯವು ಹೇಳಿದೆಯೆಂದು ಸುದ್ದಿ. ಟರ್ಕಿ ಇದಕ್ಕೆ ಕೃತಜ್ಞತೆ ಸೂಚಿಸಿದೆಯಂತೆ. ಬ್ರಿಟಿಷರು ಅಬಿಸೀನಿಯದಲ್ಲಿ ಮುಂದೊತ್ತುತಿದ್ದಾರೆ. ಚೀನದಲ್ಲಿ ಜಪಾನರನ್ನು ಚೈನೀಯರು ಹಿಂದಕ್ಕಟ್ಟುತ್ತಿರುವರು.

ಅಬಿಸೀನಿಯದಲ್ಲಿ ಬ್ರಿಟಿಷರ ಮುನ್ನಡೆ

ಅಬಿಸೀನಿಯದಲ್ಲಿ ಬ್ರಿಟಿಷರು ಇಟಲಿಯವರನ್ನು ಸೋಲಿಸಿ ಮುಂದುವರಿಯುತ್ತಿರುವರು. ನಗೇಲಿಯೆಂಬ ಪ್ರಸಿದ್ಧವಾದ ಕೋಟೆಯನ್ನು ಬ್ರಿಟಿಷರು ಸ್ವಾಧೀನಪಡಿಸಿಕೊಂಡಿರುವರು. ಲಿಬಿಯದಲ್ಲಿ ವಿಶೇಷವೇನೂ ಇಲ್ಲ.

೪ ಇಂಜಿನುಗಳ ಹೊಸ ವಿಮಾನ ಅಮೇರಿಕದಿಂದ

ನಾಲ್ಕು ಇಂಜಿನುಗಳ ಒಂದು ಹೊಸ ವಿಮಾನವು ಅಮೇರಿಕದಿಂದ ಬ್ರಿಟನಿಗೆ ಬಂದಿದೆಯಂತೆ. ಇದಕ್ಕೆ ಲಿಬರೇಟರ್ ಎಂದು ಹೆಸರು. ಇದು ಬಹು ದೂರ ಹಾರಿ ಹೋಗಿ ಬಾಂಬಿನ ಮಳೆಗರೆಯುವುದಂತೆ. ಇದು ೬೬ ಅಡಿ ಉದ್ದವಿದ್ದು ಇಂಜಿನು ೧,೨೦೦ ಅಶ್ವಶಕ್ತಿಯುಳ್ಳದ್ದಂತೆ.

ಚೀನದ ಯುದ್ಧ

ಶಾಂಘಾಯಿಯ ಹತ್ತಿರ ತಾಯಿಹೂ ಎಂಬಲ್ಲಿ ಭೀಕರ ಕಾಳಗ ನಡೆಯುತ್ತಿದೆ. ಶಾಂಘಾಯ್ ನಾಕಿಂಗ್ ರೈಲ್ವೆಮಾರ್ಗವನ್ನು ಚೀನೀಯರ ದಂಡುಗಳು ಅಪ್ಪಟ್ಟಿವೆ.

ಮಾಸ್ಕೊ ನಗರಕ್ಕೆ ಮತ್ಸುವೋಕರ ಆಗಮನ

ಮಾಸ್ಕೋ ನಗರಕ್ಕೆ ಬಂದ ಜಪಾನಿನ ಮತ್ಸುವೋಕಾ ಇವರು ಬೇರೆ ಬೇರೆ ದೇಶದ ರಾಯಭಾರಿಗಳನ್ನು ಕಾಣಲಿದ್ದಾರಂತೆ. ಮುಖ್ಯವಾಗಿ ಬ್ರಿಟಿಷ್ ರಾಯಭಾರಿ ಕ್ರಿಪ್ಸ್, ವಿಚಿ ಸರಕಾರದ ರಾಯಭಾರಿಗಳೇ ಮೊದಲಾದವರನ್ನು ಕಂಡು ಮಾತನಾಡಲಿರುವರೆಂದು ತಿಳಿದಿದೆ.

ಸಿಲೋನಿನಲ್ಲಿ ಬಹಿಷ್ಕಾರ

ಹೊರಗಿಂದ ಬರುವ ಜನರನ್ನು ಸಿಲೋನೀಯರು ಬಹಿಷ್ಕರಿಸಬೇಕೆಂದೂ, ಈಗ ಇರುವ ವಿದೇಶೀ ಜನರ ಹೆಸರನ್ನು ರಜಿಸ್ಟರ್ ಮಾಡಬೇಕೆಂದೂ, ಸಿಲೋನೇತರ ಸಾಮಾನುಗಳನ್ನು ಬಹಿಷ್ಕರಿಸಬೇಕೆಂದೂ ಸಿಂಹಳ ಮಹಾಸಭೆಯವರು ನಿರ್ಧರಿಸಿದ್ದಾರೆ.

— ತ್ರಿರಾಷ್ಟ್ರ ಒಪ್ಪಂದಕ್ಕೆ ಸಹಿ —

ಟರ್ಕಿ-ರಶ್ಯಗಳೊಳಗೆ ತಾಟಸ್ಥ್ಯ ಘೋಷಣೆ

ಗ್ರೀಸು ಹಿಟ್ಲರನ ಮುಂದಿನ ಕೊಳ್ಳೆಯೆ?

ಲಂಡನಿನ ಮೇಲೆ ಭಯಂಕರ ದಾಳಿ.

ಯುದ್ಧ ಸುರುವಾದ ಮೇಲೆ ಇದು ಕಠಿಣವಾದುದು

ಯುದ್ಧ ಸುರುವಾದ ಬಳಿಕ ಇಷ್ಟು ಕಠಿಣ ರೀತಿಯಿಂದ ಲಂಡನಿನ ಮೇಲೆ ಹಿಂದೆ ಎಂದಿಗೂ ಧಾಳಿ ನಡೆದಿರಲಿಲ್ಲವೆಂದು ತಿಳಿದುಬರುತ್ತದೆ. ಅಗ್ನಿಜನಕ ಬಾಂಬುಗಳಿಂದ ಬಹಳ ತೊಂದರೆಯೇ ಉಂಟಾಯಿತೆಂದು ತಿಳಿಯುತ್ತದೆ.

ಯುಗೊಸ್ಲವಿಯದ ಮಂತ್ರಿಮಂಡಳ

ಯುಗೊಸ್ಲವಿಯದ ಹಿಂದಿನ ಮುಖ್ಯ ಮಂತ್ರಿಗಳಾದ ಸ್ಟೊಯಡಿನೋವಿಚರವರು ಈಗ ಬ್ರಿಟಿಷರ ಹಸ್ತಗತರಾಗಿ ಸ್ಥಾನಬದ್ಧರಾಗಿರುವರೆಂದು ತಿಳಿದಿದೆ. ಯುಗೊಸ್ಲವಿಯದ ಹೊಸ ಮಂತ್ರಿಮಂಡಳವು ಬೇಗನೆ ರಚಿತವಾಗಲಿರುವುದೆಂದು ಸುದ್ದಿಯಿದೆ.

ಆಕ್ರಮಿತವಾಗದ ಫ್ರಾನ್ಸಿಗೆ ಅಮೇರಿಕದ ಸಹಾಯ

ಅನಾಕ್ರಮಿತವಾದ ಫ್ರಾನ್ಸಿಗೆ ಅಮೇರಿಕವು ೨ ಹಡಗು ತುಂಬಾ ಆಹಾರ ಸಾಮಗ್ರಿಗಳನ್ನು ಕಳುಹಿಸುವ ಏರ್ಪಾಡು ಮಾಡಿರುವುದೆಂದು ತಿಳಿದಿದೆ.

ರಶ್ಯದ ಯುಕ್ರೇನಿನ ಮೇಲೆ ಹಿಟ್ಲರನ ಕಣ್ಣು?

ಹಿಟ್ಲರನು ಇಂದು ತನ್ನ ಅನುಕೂಲತೆಗಾಗಿ ರಶ್ಯದೊಡನೆ ಸ್ನೇಹಸಂಬಂಧವಿಟ್ಟುಕೊಂಡಿರುವನಾದರೂ ರಶ್ಯದ ವಿರುದ್ಧ ಅವನ ಗುಪ್ತ ಕಾರಸ್ಥಾನಗಳು ನಡೆಯುತ್ತಿವೆಯೆಂದು ಹಲವು ಸುದ್ದಿಗಳು ಬರುತ್ತಿವೆ. ರಶ್ಯನ್ ಗಡಿಯಲ್ಲಿ ಅನೇಕ ಜರ್ಮನ್ ಸೈನಿಕರನ್ನು ಇಟ್ಟಿರುವನಂತೆ. ರಶ್ಯದ ಗಡಿನಾಡಿನಲ್ಲಿರುವ ಪೋಲ, ಸ್ಲೋವಾಕ್, ಹಾಗೂ ಯುಕ್ರೇನಿಯನ್ ಜನರೊಡನೆ ಅವನು ಗುಪ್ತರೀತಿಯಲ್ಲಿ ರಶ್ಯದ ವಿರುದ್ಧವಾಗಿ ಒಳಸಂಚು ನಡೆಸುತ್ತಿರುವನೆಂದು ತಿಳಿದುಬರುತ್ತದೆ.

ಟರ್ಕಿಗೆ ರಶ್ಯದ ಭರವಸೆ

ಬೇರೆ ರಾಷ್ಟ್ರಗಳೊಡನೆ ಟರ್ಕಿಯ ಸಂಬಂಧವು ಕೆಟ್ಟರೂ ರಶ್ಯವು ಮಾತ್ರ ಟರ್ಕಿಯೊಡನೆ ಸಖ್ಯ ಸ್ನೇಹಸಂಬಂಧದಿಂದ ಇರುವುದಾಗಿ ರಶ್ಯ ಸರಕಾರವು ಟರ್ಕಿಗೆ ಭರವಸೆ ಕೊಟ್ಟಿರುವುದೆಂದು ತಿಳಿದುಬರುತ್ತದೆ.

ಬ್ರಿಟಿಷರಿಗೆ ಅಮೇರಿಕದ ಸಹಾಯ

೨೦ ಕೋಟಿ ಡಾಲರುಗಳು

೨೦ ಸಾವಿರ ಯುದ್ಧವಿಮಾನಗಳು

ಬ್ರಿಟಿಷ್ ಸಹಾಯಕ ಮಸೂದೆಯನ್ನು ಜಾರಿಗೆ ತರಲು ರೂಸ್‌ವೆಲ್ಟರು ಕೇಳಿದ ೨೦ ಕೋಟಿ ಡಾಲರನ್ನು ಸೆನೇಟಿನವರು ಮಂಜೂರು ಮಾಡಿರುವರು. ಈ ಧನವನ್ನು ಅರ್ಧದಷ್ಟು ಕಡಿಮೆಮಾಡಬೇಕೆಂದು ಬಂದಿದ್ದ ಉಪಸೂಚನೆಗಳು ಬಿದ್ದುಹೋದವು. ಬ್ರಿಟನಿಗೆ ೨೦ ಸಾವಿರ ಯುದ್ಧವಿಮಾನಗಳನ್ನು ಕಳುಹಿಸಲು ಅಮೇರಿಕವು ನಿಶ್ಚಯಿಸಿದೆ.

ಗ್ರೀಸಿನ ಮೇಲೆ ಧಾಳಿ ಆಗಿಲ್ಲವೇಕೆ?

ಅಥೆನ್ಸ್ ನಗರದ ಸಮೀಪದಲ್ಲಿರುವ ಹೆಮಟೀಸ್ ಪರ್ವತವು ಹಿಮದಿಂದ ತುಂಬಿದೆ; ಬಲ್ಗೇರಿಯ ಗಡಿನಾಡಿನಲ್ಲಿರುವ ರೆಡೋಪಿ ಪರ್ವತವೂ ಹಿಮದಿಂದ ತುಂಬಿದೆ; ರಶ್ಯದ ಕಡೆಯಿಂದ ಪ್ರಚಂಡ ಹಿಮಗಾಳಿ ಬೀಸುತ್ತಿದೆ. ಆದ್ದರಿಂದ ಜರ್ಮನರು ಗ್ರೀಸಿನ ಮೇಲೆ ಧಾಳಿ ಮಾಡುವುದನ್ನು ಹಿಂದಕ್ಕೆ ಹಾಕಿರುವರೆಂದು ತಿಳಿದುಬರುತ್ತದೆ. ಜರ್ಮನರು ಬಲ್ಗೇರಿಯವನ್ನು ನುಗ್ಗಿ ಮೂರು ವಾರಗಳು ಕಳೆದವು. ಆದರೆ ಗ್ರೀಸನ್ನು ನುಗ್ಗಲು ಹವೆಯೊಂದೇ ಕಾರಣವಾಗಿರಲಿಕ್ಕಿಲ್ಲ. ಯುಗೊಸ್ಲವಿಯದ ಅನಿಶ್ಚಿತ ಧೋರಣೆಯಿಂದ ಹಿಟ್ಲರನು ತನ್ನ ಮುಂದಿನ ಕಾರ್ಯಕ್ರಮವನ್ನು ಸ್ವಲ್ಪ ವಿಳಂಬ ಮಾಡುತ್ತಿರುವನೇ ಎಂದೂ ಊಹಿಸಲಾಗಿದೆ.

ಬ್ರಿಟಿಷ್ ಫೈಟರ್ ವಿಮಾನಗಳಿಗೆ ಬಲವಾಗಿ ಶಸ್ತ್ರಸಜ್ಜು

ಇನ್ನು ಮುಂದೆ ಆರ್. ಎ. ಎಫ್. ಫೈಟರ್ ವಿಮಾನಗಳಲ್ಲಿ ೧೨ ಗುಂಡುಗಳನ್ನು ಅಥವಾ ೪ ಕ್ಯಾನನ್‌ಗಳನ್ನು ಇಡಲಾಗುವುದು ಎಂದು ತಿಳಿಸಲಾಗಿದೆ. ಈಗ ಬ್ರಿಟಿಷ್ ಫೈಟರ್ ವಿಮಾನಗಳಲ್ಲಿ ೮ ಗುಂಡುಗಳು ಮಾತ್ರ ಇವೆ. ಫೈಟರ್‌ಗಳಲ್ಲಿ ಕ್ಯಾನನ್‌ಗಳನ್ನಿಡುವುದಾದರೆ ಅವು ಶತ್ರುವಿಮಾನಗಳಿಗಿಂತ ಉತ್ತಮವಾಗಿರುವುದೆಂದು ಹೇಳಲಾಗುತ್ತಿದೆ.

ಸಾದರ-ಸ್ವೀಕಾರ

ದಿ ಕೆನರಾ ಇಂಡಸ್ಟ್ರಿಯಲ್ ಅಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ ಉಡುಪಿ ಈ ಸಂಸ್ಥೆಯ ಹದಿನೈದನೆಯ ಡೈರೆಕ್ಟರರ ವರದಿಯೂ 1940ನೆಯ ಇಸವಿ ಡಿಸಂಬರ ತಿಂಗಳ 31ನೆಯ ತಾರೀಕಿಗೆ ಅಂತ್ಯವಾಗುವ ಸಾಲವಸೂಲಿಗಳ ಲೆಕ್ಕಾಚಾರಪಟ್ಟಿಯೂ ನಮ್ಮ ಹಸ್ತಗತವಾಗಿ ಅದನ್ನು ಆನಂದದಿಂದ ಸ್ವೀಕರಿಸಿದ್ದೇವೆ.

ಕಳೆದ ವರ್ಷ ಮಹಾಯುದ್ಧದ ಬೇಗೆ ನಮ್ಮ ದೇಶಕ್ಕೂ ಹರಡಿ ದೇಶದ ವ್ಯಾಪಾರೋದ್ಯಮಗಳಿಗೆ ಬಹಳವಾದ ಧಕ್ಕೆ ಬಂದಿದ್ದರೂ, ಈ ಸಂಸ್ಥೆಯು ವಿಶೇಷ ದಕ್ಷತೆಯಿಂದ ಕಾರ್ಯ ನಿರ್ವಹಿಸಿಕೊಂಡು ಬಂದು ಜನಪ್ರಿಯವಾಗಿರುವುದು ವಿಶೇಷ ಕೊಂಡಾಡತಕ್ಕ ವಿಷಯವಾಗಿದೆ. ಸಂಸ್ಥೆಯ ತೆತ್ತ ಮೂಲಧನವು ರೂಪಾಯಿ 11,42,000ದಿಂದ ರೂ. 12,85,000ಕ್ಕೆ ಏರಿದ್ದು ವಸೂಲಾದ ಮೂಲಧನವು ರೂ. 4,60,000ದಿಂದ ರೂ. 5,22,000ಕ್ಕೆ ಏರಿದ್ದು ಗಮನಾರ್ಹವಾದ ವಿಚಾರವಾಗಿದೆ. ಒಳ್ಳೆಯ ನಿಪುಣರೂ ವ್ಯವಹಾರ [illegible] ರರೂ ಆದ ಸಮರ್ಥ ಕಾರ್ಯಕರ್ತ [illegible] ಆಡಳಿತದಲ್ಲಿ ಈ ಸಂಸ್ಥೆಯು ಇ [illegible] ಕಾಲದ ವರೆಗೆ ಊರ್ಜಿತವಾದಂ [illegible] ಮುಂದೆಯೂ ಊರ್ಜಿತಹೊಂದಿ ಸ [illegible] ಜಿಲ್ಲೆಗೇ ಕೀರ್ತಿ ತರಲೆಂದು ಹಾರೈ [illegible]

CANARA BANK LIMITED

(Incorporated in British India with Limited Liability.)

ABSTRACT BALANCE SHEET

AS AT 31st DECEMBER 1940.

Capital		***Fixed Capital Expenditure***	
Subscribed	6,00,000—0—0	Premises & Furniture	94,217—6—8
Paid up	3,92,591—15—11	***Advances to Customers***	
Reserve Funds	4,50,000—0—0	Secured by Valuable	
Deposits	86,71,764—2—6	Securities	37,87,804—13—8
Due to Bankers	Nil	Secured by Bills of	
Sundries	7,98,533—14—5	Exchange etc.	9,29,550—0—6
Net Profits		***Investments***	20,34,328—12—9
Appropriation account	1,244—10—6	***Sundries***	6,81,012—5—7
Net Profit for the year	71,726—5—0	***Cash On Hand And At Call At***	
	72,970—15—6	***Bankers***	28,17,538—5—7
Less amount transferred to Reserves 41,369—3—7	31,601—11—11		
Rs.	1,03,44,451—12—9	Rs.	1,03,44,451—12—9

ಸಾದರ-ಸ್ವೀಕಾರ

ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು, ಇದರ ಗತಿಸಿದ ೧೯೪೦ನೆಯ ಇಸವಿ ಡಿಸೆಂಬರ ೩೧ನೆಯ ತಾರೀಕಿಗೆ ಅಂತ್ಯವಾಗುವ ವರ್ಷದ ವಾರ್ಷಿಕ ವರದಿ ಮತ್ತು ಲಾಭ ನಷ್ಟಗಳ ಪತ್ರಿಗಳನ್ನು ಆದರದಿಂದ ಸ್ವೀಕರಿಸಿದ್ದೇವೆ.

ನಮ್ಮ ಜಿಲ್ಲೆಯ ಪ್ರಾಮುಖ್ಯ ಸಂಸ್ಥೆಗಳಲ್ಲಿ ಒಂದಾದ ಕೆನರಾ ಬೇಂಕಿನ ಕಾರ್ಯಕಲಾಪಗಳು, ಇಂದಿನ ಈ ಯುದ್ಧಕಾಲದಲ್ಲಿಯಾದರೂ ಬಹಳ ಸುಸೂತ್ರವಾಗಿ, ಜನರ ಮೆಚ್ಚುಗೆಗೆ ಪಾತ್ರವಾಗಿ ನಡೆಯುತ್ತಾ ಬರುತ್ತದೆಯೆಂದು ತಿಳಿದುಬರುವುದು ಅತ್ಯಂತ ಅಭಿಮಾನದ ಸಂಗತಿಯಾಗಿದೆ.

ಬೇಂಕಿನಲ್ಲಿ ರೂ. ೧,೦೩,೪೪,೪೨೧–೧೨–೯ಯಷ್ಟು ವ್ಯವಹಾರ ಧನವಿದ್ದು, ೮೭ ಲಕ್ಷ ರೂಪಾಯಿಗಳ ಡಿಪೊಜಿಟು ಇದ್ದು, ೩೮ ಲಕ್ಷ ರೂಪಾಯಿಗಳಷ್ಟು ಬೇಂಕಿನ ನಗದು ಹಣವಿರುವುದೂ, ಡಿಪೊಸಿಟಿನಲ್ಲಿ ಈ ವರ್ಷ ೫ ಲಕ್ಷ ರೂಪಾಯಿ ಹೆಚ್ಚಿಗೆ ಕಾಣುವುದೂ, ಸಂತೋಷದ ಸಂಗತಿಯಾಗಿದೆ. ಈ ವರ್ಷದ ಲಾಭವು ೭೧ ಸಾವಿರ ರೂಪಾಯಿಗಳಷ್ಟು ಇದೆ. ಬೇಂಕು ಶೇಕಡಾ ಎಂಟರಂತೆ ಡಿವಿಡೆಂಡು ಹಂಚಿದೆ.

ಆದರಿಂದಾಗಿ ಕೆನರಾ ಬೇಂಕು ತನ್ನ ಹಿಂದಿನ ಲೋಕಪ್ರಿಯತೆಯನ್ನು ಮುಂದೆಯೂ ಕಾಯ್ದುಕೊಳ್ಳುವುದರಲ್ಲಿ ಸಂಶಯವಿಲ್ಲ. ಕಾರ್ಯದಕ್ಷರಾದ, ವ್ಯವಹಾರ ಚತುರರಾದ ಆಡಳಿತದಾರರ ಕೈಕೆಳಗೆ ಬೇಂಕು ಇತೋಪ್ಯತಿಶಯ ಊರ್ಜಿತ ಸ್ಥಿತಿಗೇರಲೆಂದೂ, ಜನರ ಮೆಚ್ಚುಗೆಗೆ ಗುರಿಯಾಗಿ ಉನ್ನತಿ ಹೊಂದಲೆಂದೂ ನಾವು ಹಾರೈಸುತ್ತೇವೆ.

ಗಾಂಧೀಜಿಯವರ ಹರಿಜನ ಪತ್ರಿಕೆಗಳು

ಬೇಗನೇ ಪ್ರಕಟವಾಗಲಿವೆ

ಮಹಾತ್ಮ ಗಾಂಧಿಯವರ ಮೂರು ಹರಿಜನ ವಾರ ಪತ್ರಿಕೆಗಳೂ ಕೂಡ ಮಾರ್ಚ ಅಂತ್ಯದಲ್ಲಿ ಅಥವಾ ಏಪ್ರಿಲ್ ಆರಂಭದಲ್ಲಿ ಪ್ರಕಟಿಸಲ್ಪಡುವವೆಂದು ಗೊತ್ತಾಗಿದೆ.

ಆಲ್ಬೇನಿಯದಲ್ಲಿ ಗ್ರೀಕರ ವಿಜಯ

ಇಟಲಿಯನರನ್ನು ಗ್ರೀಕರು ಆಲ್ಬೇನಿಯದಲ್ಲಿ ಹಿಂದಕ್ಕಟ್ಟಿದರೆಂದು ತಿಳಿಯುತ್ತದೆ. ಇಟಲಿಯನರು ಅಪಜಯ ಹೊಂದಿದ್ದು ಮಾತ್ರವಲ್ಲದೆ ಅನೇಕ ವಿಧಗಳಲ್ಲಿ ಕಷ್ಟಗಳಿಗೂ ಗುರಿಯಾದರೆಂದು ಸುದ್ದಿ.

Canara Banking Corporation Limited, Mangalore.

ಈ ಕೆಳಗೆ ಹೆಸರು ಕಾಣಿಸಿದವರು ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್ ಇವರ ರಥಬೀದಿ ಮಂಗಳೂರು ಶಾಖೆಯಲ್ಲಿ ನಗದು ಈಡಿನ ಮೇಲೆ ಪಡಕೊಂಡ ನಂತರ ಕ್ಲಪ್ತ ವ್ಯಾದೆಗೆ ಅಸಲು ಬಡ್ಡಿ ಕೊಡದೆ ಈ ವರೆಗೆ ಬಾಕಿ ಮಾಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೇ ಅವರಿಗೆ ಬಿಟ್ಟ ರಿಜಿಸ್ಟ್ರ ನೋಟೀಸು ಜ್ಯಾರಿಯಾಗದೆಯೂ ಊರು ಬಿಟ್ಟು ಓಡಿಹೋಗಿರುವರೆಂದು ವಾಪಾಸು ಬಂದಿರುವುದರಿಂದಲೂ ಸದ್ರಿಯವರು ಈಡಾಗಿಟ್ಟ ನಗಗಳನ್ನು ಇದೇ 1941ನೇ ಇಸವಿ ಏಪ್ರಿಲ್ ತಾ. 19ನೇ ಶನಿವಾರದೊಳಗೆ ಬೇಂಕಿಗೆ ಸಲ್ಲತಕ್ಕ ಅಸಲು ಬಡ್ಡಿ ನೋಟೀಸು ಚಾರ್ಜು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದರೆ ಸದ್ರಿಯವರು ಈಡಾಗಿಟ್ಟ ನಗಗಳನ್ನು ಇದೇ 1941ನೇ ಇಸವಿ ಏಪ್ರಿಲ್ ತಾ. 26ನೇ ಶನಿವಾರ ಯಾ ಅನಂತರ ನಮಗೆ ಯುಕ್ತಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ ಘಂಟೆ 2ಕ್ಕೆ ಬಹಿರಂಗವಾಗಿ ಏಲಂ ಮಾಡಲ್ಪಡುವುದು.

ಲೋನ್ ನಂಬ್ರ	ಹೆಸರು	ಸೊಬಲಗು
Ji 260/89	ಬೆಲ್ಲ ಜಾನ್ ಸಿಕೇರಾ, ಜೆಕೋಬ್ ಸಿಕೇರರ ಮಗ, C/o ಮೆಸರ್ಸ್ ಎ. ಜೆ. ಎಸ್. ಸಲ್ದಾಂಞ ಎಂಡ್ ಸನ್ಸ್, ಮಂಗಳೂರು.	ರೂ. 85/-

Office of the Corporation Mangalore. 25—3—41

K. Vittal Bhandary
Agent.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. E. P. 1273/40

T. ನರ್ಸಪ್ಪ—ಟಿ. ಕಾಂತಪ್ಪನವರ ಮಗ ಮಂಗಳೂರು ಶಹಾರ ಅತ್ತಾವರ ಗ್ರಾಮದ ಮಿಲಾಗ್ರಿಸ್ ಇಗರ್ಜಿ ಬಳಿಯಿರುವವ—ವಾದಿ, ಅರ್ಜಿದಾರ.

ಎದ್ರು

ಯಂ. ಅಬ್ದುಲ್ ರಹಿಮಾನ್—ಕ್ಲಾರ್ಕ, ಡಿಸ್ಟ್ರಿಕ್ಟ್ ಪೋಲಿಸ್ ಆಫೀಸು, ಮಂಗಳೂರು
—ಪ್ರತಿವಾದಿ, ರೆಸ್ಪೊಂಡೆಂಟ್.

ಸದ್ರಿ ಪ್ರತಿವಾದಿ ಯಂ. ಅಬ್ದುಲ್ ರಹಿಮಾನ್ ನವರಿಗೆ:—

ಮೇಲ್ಕಂಡ ಅಮ್ಲ್ಯಜಾರಿಯಲ್ಲಿ ನೀವು ಡಿಕ್ರಿಯ ಹಣವನ್ನು ವಸೂಲು ಕೊಡದಿದ್ದರೆ ನಿಮ್ಮನ್ನು ಯಾಕೆ ಸಿವಿಲ್ ಜೈಲಿಗೆ ರವಾನಿಸ ಕೂಡದು ವಗೈರೆ ಹೇಳಿ ಅರ್ಜಿದಾರನು ಮೇಲೆ ಕಾಣಿಸಿದ ಕೋರ್ಟಿನಲ್ಲಿ ಅಮ್ಲ್ಯಜಾರಿ ಅರ್ಜಿಯನ್ನು ದಾಖಲ್ಲ ಮಾಡಿರುತ್ತಾನೆ. ಸದ್ರಿ ಅರ್ಜಿಯು ತನಿಖೆಗೆ ತಾ. 1—4—'41ರಲ್ಲು 10-30 ಗಂಟೆಗೆ ಇಟ್ಟಿರುತ್ತದೆ. ಸದ್ರಿ ದಿವಸ ನೀವು ಖುದ್ದಾಗಿ, ವಕೀಲರ ಮುಖಾಂತ್ರ ಹಾಜರಾಗದೆ ಉಪೇಕ್ಷೆ ಮಾಡಿದ್ದರೆ, ನಿಮ್ಮ ಮೇಲೆ ಏಕಪಕ್ಷವಾಗಿ ತೀರ್ಮಾನವಾದೀತು ಎಂತ ಈ ಮೂಲಕ ತಿಳಿಸಲಾಗಿಯದೆ.

By order of the court

Mangalore 20–3–1941 **A. M. D'sa**, B.A.LL.B, Vakil for Petitioner.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —

ಅಂದಸಂದಲೂ ಶ್ರೇಷ್ಠವಾಗಿಯೇ ಇದೆ.—ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ, ಬೊಕ್ಕೆ ಮುಂತಾದುವನ್ನು ಗುಣಪಡಿಸುತ್ತದೆ.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ—
ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು
ಮಂಗಳೂರಿನ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ್ ಕೊ.
ಮಹಮ್ಮದಾಲಿ ರೋಡ್, ಮಂಗಳೂರು.

ಈಸ್ಟರಿನಲ್ಲಿ ವಿಶೇಷ ಕಾಣಿಕೆ

COMPETITION LICENSED BY THE COLLECTOR OF BOMBAY

ಎಲ್ಲಾ ಸರಿಯಿರುವ 14 ಮಂದಿಗೆ ಬಹುಮಾನ ಕೊಡಲಾಗುವುದು.

ಭದ್ರತೆಯ ಇನಾಮು — ಸ್ಪರ್ಧೆ ನಂಬ್ರ 7.

ಕಾಣಿಸಿ ಪಕ್ಕದಲ್ಲಿ ಎರಡು ಸಾವಿರ ರೂಪಾಯಿಗಳ ಇನಾಮು ಪ್ರತಿಯೊಂದು ಶುದ್ಧ ಉತ್ತರಕ್ಕೆ ಕೊಡಲಾಗುವುದು. ಶುದ್ಧ ಉತ್ತರವು ಬೊಂಬಾಯಿಯ ಪ್ರಾಮುಖ್ಯ ಬೇಂಕೊಂದರಲ್ಲಿ ಡಿಪೋಜಿಟ್ ಇಡಲಾಗಿದೆ.



ಮಾತ್ರವಲ್ಲದೆ, ಹೆಚ್ಚಿನ ರೂ. ಫ್ರೀ-ಇನಾಮುಗಳು ಯಾರ ಮೊದಲನೆಯ ಅಡ್ಡಗೆರೆಯ ಮೊದಲನೆಯ ಎರಡು ಅಂಕೆಗಳು ನಮ್ಮ ಉತ್ತರಕ್ಕೆ ಸರಿಯಾಗಿ ಬರುವೋ ಅವರಿಗೆ ಕೊಡಲಾಗುವುದು. ಮತ್ತೆ ಯಾರ ಯಾವುದಾದರೊಂದು ಸಾಲು ನಮ್ಮ ಉತ್ತರದ ಸಾಲಿಗೆ ಸಮವಿರುತ್ತದೋ ಅವರಿಗೆ ರೂ. … ಕನ್ಸೊಲೇಶನ್ ಪ್ರೈಸ್ ಕೊಡಲಾಗುವುದು. 1. ಮೊದಲನೆಯ ಎರಡು ಅಡ್ಡಗೆರೆಯ ಸಾಲುಗಳಿಗೆ ಸಮವಿದ್ದರೆ ಅಥವಾ 2. ಯಾವುದೇ ಎರಡು ಮೇಲಿಂದ ಕೆಳಗಿನ ಗೆರೆಯ ಸಾಲುಗಳು ನಮ್ಮ ಉತ್ತರದ ಯಾವುದೇ ಎರಡು ಮೇಲಿಂದ ಕೆಳಗಿನ ಗೆರೆಯ ಸಾಲುಗಳಿಗೆ ಸರಿಹೋಗುವುದೋ ಅಂಥವರಿಗೆ ರೂ. 300 ಕೊಡಲಾಗುವುದು. ಹೆಚ್ಚು ಉತ್ತರ ಕಳುಹಿಸಿದವರಿಗೆ ರೂ. 200 ಪ್ರತ್ಯೇಕ ಇನಾಮು ಮುಂದೆ ಹಾಕಿ ಇಡಲಾಗಿದೆ. 9ರಿಂದ 24ರ ವರೆಗೆ ಅಂಕೆಗಳನ್ನು ಈ ಚೌಕಗಳಲ್ಲಿ, ಪ್ರತಿಯೊಂದು ಸಾಲಿನ ಅಂಕೆಗಳು ಮತ್ತು ಎರಡು ಮೂಲೆಯಿಂದ ಎದುರು ಮೂಲೆಗೆ ಹೋಗುವ … ಕೂಡಿ 66 ಆಗುವಂತೆ ಜೋಡಿಸಿರಿ. ಪ್ರತಿಯೊಂದು ಅಂಕೆಯನ್ನು ಒಂದು ಸಲ ಮಾತ್ರ ಉಪಯೋಗಿಸಬಹುದು. ಉತ್ತರ ಕಳುಹಿಸುವ ಕಡೆಯ ತಾರೀಕು 9—4—41. ಫಲಿತಾಂಶವು ಪ್ರಕಟವಾಗುವ ತಾರೀಕು 18–4–41.

ಪ್ರವೇಶ ಫೀಸು ಪ್ರತಿಯೊಂದಕ್ಕೆ ರೂ. 1. 3 ಉತ್ತರಗಳಿಗೆ ರೂ. 2. 8 ಉತ್ತರಗಳಿಗೆ ರೂ. 5. ಮೇಲೆ ಹೇಳಿದ ನಿಯಮದಂತೆ ಎಷ್ಟೇ ಉತ್ತರಗಳನ್ನು ಕಾಗದದಲ್ಲಿ ಬರೆದು ಕಳುಹಿಸುವಲ್ಲಿ ಸ್ವೀಕರಿಸಲಾಗುವುದು. ಹಣವನ್ನು ಮನಿ ಆರ್ಡರ್ ಮೂಲಕ ಇಲ್ಲವೇ ಇಂಡಿಯನ್ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸುವುದು.—

ಮೇಲಿನ ಇನಾಮುಗಳು ರೂ. 28,000 ಆಗುತ್ತವೆ. ಇದನ್ನು ಇನಾಮು ಪಡೆದ ಜನರ ಸಂಖ್ಯೆಯನ್ನು ಹೊಂದಿಕೊಂಡು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು. ಫಲಿತಾಂಶ ತಿಳಿಯುವರೆ ನಿಮ್ಮ ವಿಳಾಸ ಬರೆದ ಸ್ಟಾಂಪು ಹಚ್ಚಿದ ಲಕೋಟೆಯೊಂದನ್ನು ಉತ್ತರದೊಡನೆ ಕಳುಹಿಸಿರಿ. ಮೆನೇಜರರ ನಿರ್ಧಾರವೇ ಕೊನೆಯ ನಿರ್ಧಾರ.

ಒಟ್ಟು ಸಂಖ್ಯೆ 70ರ ಬಗೆಯು.
1ನೆಯ ಸಾಲು 21, 24, 11, 14
2ನೆಯ ಸಾಲು 18, 10, 17, 25
3ನೆಯ ಸಾಲು 15, 23, 20, 12
4ನೆಯ ಸಾಲು 16, 13, 22, 19

ಪ್ರವೇಶ ಮತ್ತು ಹಣ ಕಳುಹಿಸುವ ವಿಳಾಸ:—

The Manager,
Forward Commercial Company
S. W. B. Zaveri Bazar, BOMBAY. 2.

ವಿಚಿತ್ರ ಪ್ರಪಂಚ

ಬೇಸರ ಕಳೆಯಲಿಕ್ಕೆ ಹೆಂಗಸರು ಬೇಕು

ಯುದ್ಧ, ಅನ್ನಾಹಾರಗಳ ಕೊರತೆ, ಹೆಂಡತಿ ಮಕ್ಕಳ ವಿರಹ ಇತ್ಯಾದಿ ಅನೇಕ ಕಾರಣಗಳಿಂದ ಜರ್ಮನಿಯ ಗಂಡಸರಿಗೆ ಮನಸ್ಸಿನ ಬೇಸರವು ಬಹಳವಾಗಿದೆ. ಅವರು ಒಂದು ರೀತಿಯಿಂದ ಉನ್ಮತ್ತರಂತೆ ಆಗಿದ್ದಾರೆ. ಇದಕ್ಕೆ ತಕ್ಕ ಪರಿಹಾರ ಮಾಡಿಕೊಳ್ಳಲಿಕ್ಕೆ ಜರ್ಮನಿಯ ಪತ್ರಿಕೆಗಳಲ್ಲಿ—'ಬೇಕು, ಮನಸ್ಸಿನ ಬೇಸರ, ಕಳೆಯಲಿಕ್ಕೆ ಸಮರ್ಥ ಹೆಂಗಸರು ಬೇಕು' ಎಂಬರ್ಥದ ಜಾಹೀರಾತುಗಳು ಬರಲಾರಂಭಿಸಿವೆ. ಹೆಂಡದಂಗಡಿಗಳಲ್ಲಿ ನೌಕರಿಗೆ ನಿಂತು ಊರ ಜನರನ್ನು ಕುಡಿಯಲಿಕ್ಕೆ ಪ್ರೋತ್ಸಾಹಿಸುವುದು ಈ ಹೆಂಗಸರ ಮುಖ್ಯ ಕೆಲಸವಾಗಿದೆ. ಕುಡಿದು ಮತ್ತನಾದಾಗ ಮನುಷ್ಯನ ಕ್ಷೋಭೆಯನ್ನು ಮರೆಯಲಿಕ್ಕಾಗುತ್ತದೆ ಎಂಬುದಕ್ಕೋಸ್ಕರ ಲಾವಣ್ಯವತಿಯರಾದ ಸ್ತ್ರೀಯರನ್ನೇ ಈ ಕೆಲಸಕ್ಕೆ ನೇಮಿಸುವರು. ಇವರು ಸೊಗಸಾದ ಉಡುಪುಗಳನ್ನು ಧರಿಸಿ, ಮಧುರವಾದ ಮಾತುಗಳಿಂದಲೂ, ಒನಪು ಒಯ್ಯಾರಗಳಿಂದಲೂ, ನರ್ತನ ಆಲಿಂಗನ ಚುಂಬನಾದಿಗಳಿಂದಲೂ ಗಂಡಸರನ್ನು ಮರುಳುಮಾಡಿ ಅವರಲ್ಲಿ ಕುಡಿಯುವ ಹುರುಪು ಉತ್ಸಾಹಗಳು ಹುಟ್ಟುವಂತೆ ಮಾಡುವರು. ಇಂಥ ಹೆಂಗಸರಿಗೆ ನಾಜೀ ಸರಕಾರವು ಎಲ್ಲಾ ಬಗೆಯ ಪ್ರೋತ್ಸಾಹ ರಕ್ಷಣೆಗಳನ್ನು ಕೊಡುವುದು

ಆರು ವರ್ಷ ಕಾದು ಚೋರ ಶಿಖಾಮಣಿಯೊಡನೆ ಮದುವೆ

ಕುಂಟಿ, ಕುರುಡಿಯಲ್ಲ; ಕಿವುಡಿ, ರೋಗಿಯಲ್ಲ, ಪರಮ ಸುಂದರಿ, ಅತ್ಯಂತ ಲಾವಣ್ಯವತಿ ಎಂದು ಹೆಸರಾದ ಕುಮಾರಿ ಎಥೆಲ್ ಬಾರಿಟ್ ಎಂಬ ಅಮೇರಿಕದವಳೊಬ್ಬಳು ಆರು ವರ್ಷ ಕಾದು ಕೂತು ಡಿಲ್ಲನ್ ಎಂಬ ಚೋರ ಶಿಖಾಮಣಿಯೊಬ್ಬನನ್ನು ಮದುವೆಯಾಗಿರುವಳು. ಅನೇಕ ಮಂದಿ ಶ್ರೀಮಂತರು ಬಹಳ ಮಂದಿ ಯೋಗ್ಯರು ಅವಳ ಪ್ರೇಮಭಿಕ್ಷೆಯನ್ನು ಬೇಡಿ ಬಂದಿದ್ದರೂ ಅವರೆಲ್ಲರನ್ನು ತಿರಸ್ಕರಿಸಿ ಅವಳು ಇವನನ್ನು ಮದುವೆಯಾದದನ್ನು ನೋಡುವಾಗ ಪ್ರೇಮವು ಕುರುಡು ಎಂಬುದರ ಸತ್ಯವು ಗೊತ್ತಾಗುತ್ತದೆ. ಡಿಲ್ಲನ್‌ನು ಮಹಾ ಚೋರ ಶಿಖಾಮಣಿ. ಮಹಾಕೇಡಿ. ಅದು ತನಕ ೭೪ ಬಾರಿ ಮನೆಗಳಿಗೆ ಕನ್ನ ಹಾಕಿ ಒಟ್ಟು ೧೪ ವರ್ಷ ಸೆರೆಮನೆಯಲ್ಲಿದ್ದ. ೭ನೆಯ ಬಾರಿಗೆ ಅವನಿಗೆ ೬ ವರ್ಷಗಳ ಶಿಕ್ಷೆಯಾದಾಗ ಆತನ ಅಪ್ರತಿಮ ಧೈರ್ಯ ಸ್ಥೈರ್ಯಗಳನ್ನು ಕಂಡು ಆಕೆ ಹುಚ್ಚಾದಳು. ಅವನೇ ನನಗೆ ಗಂಡನಾಗಬೇಕೆಂದು ಹೇಳಿ ಶಿಕ್ಷೆಯ ಅವಧಿಯು ಮುಗಿಯುವ ತನಕ ಕಾದು ಕೂತಳು. ಮೊನ್ನೆ ತಾನೇ ಆತನು ಸೆರೆಮನೆಯಿಂದ ಹೊರಗೆ ಬಂದಾಗ, ತಾನೇ ಹೋಗಿ ಆತನನ್ನು ಆಲಿಂಗಿಸಿ ಚುಂಬಿಸಿ ಮದುವೆ ಆದಳು!

ಭೀಮಕಾಯನನ್ನು ಕೆಡವಿ ಹಾಕಿದವಳು ಕುಂಟ ಮಾಣಿಗೆ ಮನಸೋತಳು

ಅಮೇರಿಕದ ಲೂಯಿಡಿಫೀ ಎಂಬಾಕೆ ಬಹಳ ಚೆಲುವೆಯಂತೆ. ಆಕೆ ಲೇಡಿ ಶೇಂಡೋ ಆಗಿದ್ದಳು. ಎತ್ತರ ಆರೂವರೆ ಅಡಿ ಭಾರ ೭ ಮಣ. ಸಾಧಾರಣ ಎಲ್ಲ ಗಂಡಸರೂ ಹಸಿನಿಯಂತೆ ಬೆಳೆದ ಆಕೆಯ ಹತ್ತಿರ ಹೋಗುವ ಮಾತು ಹಾಗಿರಲಿ, ನೋಡಿಯೇ ಹೆದರುತ್ತಿದ್ದರು. ದೂರ ಹೋಗುತ್ತಿದ್ದರು. ಅವಳು ಸ್ಪಿಮೋ ಕರ್ನರಾ ಎಂಬ ಇಟಾಲಿಯನ್ ಜಟ್ಟಿಯನ್ನು ಕೂಡ ಕಾಲಗ ಹೂಡಿ ನೆಲಕ್ಕೆ ಕೆಡವಿ ಹಾಕಿದ್ದಳು. ಒಮ್ಮೆ ಸವಾರನ ಸಮೇತ ಇರುವ ಜೂಜಿನ ಕುದುರೆಯೊಂದನ್ನು ಎತ್ತಿ ಹಾರಿಸಿ ನಡುಹೊಳೆಗೆ ಬಿಸಾಡಿದ್ದಳು. ಅದಕೆ ಈಗ ಇವಳಿಗೆ ಒಬ್ಬ ಕುಂಟ ಮಾಣಿಯ ಮೇಲೆ ಅನುರಾಗ ಹುಟ್ಟಿದೆ. ಆತನೊಡನೆ ಅವಳ ಮದುವೆಯಾಗಿದೆ. ಲೂಯಿಡಿಫೀ ಅಲ್ಲದೆ ಎಲ್ಲೇಂಬ ಇನ್ನೊಬ್ಬ ಹೆಂಗಸು ಅಮೇರಿಕದಲ್ಲಿದ್ದಾಳೆ. ಇವಳ ಎತ್ತರ ಏಳೂವರೆ ಅಡಿ, ಭಾರ ೧೦ ಮಣ. 'ನಿನಗೆ ಮದುವೆ ಆಗುವ ಆಸೆ ಆಗುವುದಿಲ್ಲವೇ?' ಎಂದು ಒಬ್ಬ ಹೋಗಿ ಆಕೆಯನ್ನು ಪ್ರಶ್ನಿಸಿದ. ಅವಳು 'ಪ್ರಾಯಕ್ಕೆ ಬಂದ ಮೇಲೆ ಮದುವೆ ಆಸೆ ಆಗದೆ ಇರುತ್ತದೆಯೋ? ನನ್ನನ್ನು ಇಟ್ಟುಕೊಳ್ಳಲು ಸಮರ್ಥನಾದವ ಯಾರಾದರೂ ಮುಂದೆ ಒದಗಿದಲ್ಲಿ ಆತನನ್ನು ಖಂಡಿತಕ್ಕೂ ಮದುವೆ ಆಗುತ್ತೇನೆ' ಎಂದಿದ್ದಾಳೆ. ಸಮರ್ಥರು ಯಾರಾದರೂ ಅರ್ಜಿ ಹಾಕಬಹುದು!

ನಾಯಿಮರಿಗಳಿಗೆ ಜಾತಕ ಫಲ

ಅಮೇರಿಕದ ಜನರು ತುಂಬ ವಿನೋದಪ್ರಿಯರು, ರಸಿಕರು. ಹಿಂದೂಸ್ಥಾನದ ಜನರು, ಮತ್ತೆ ಯೂರೋಪಿನಲ್ಲಿ ಕೆಲಕೆಲವರು ಕೂಡ ಫಲಜ್ಯೋತಿಷ್ಯದಲ್ಲಿ ತುಂಬಾ ವಿಶ್ವಾಸವಿಟ್ಟಿರುತ್ತಾರೆ. ಅವರು ಪ್ರತಿಯೊಂದು ಕೆಲಸವನ್ನು ಜ್ಯೋತಿಷ್ಯ ಫಲ ನೋಡಿ ಮಾಡುವರು. ಮದುವೆ ಮುಂಜಿಗಳಾಗಬೇಕೆಂದರೂ ಜಾತಕ ಸ್ಫುಟಮಾಡಿ ನೋಡಬೇಕು. ಜ್ಯೋತಿಷ್ಯಕ್ಕಾಗಿ ಈ ಜನರು ತುಂಬಾ ಹಣ ಖರ್ಚುಮಾಡುವರು. ಅಮೇರಿಕದ ಜಾಣರಾದ ಜನರು ಇದನ್ನು ಕಂಡು ಹಣ ಸಂಪಾದನೆಯ ಹೊಸ ಉಪಾಯವನ್ನು ಅನುಸರಿಸಿದ್ದಾರೆ. ಈ ಅಮೇರಿಕದ ಜನರು ನಾಯಿಗಳ ಜಾತಕಫಲ ನೋಡುವರು. 'ನಿಮ್ಮ ನಾಯಿಗಳ ಭವಿಷ್ಯ ಹೇಳಬೇಕೆ? ರೂಪಾಯಿ ಕಳುಹಿಸಿ ಕೊಡಿ. ಅದು ಹುಟ್ಟಿದ ಸಮಯ ಅದರ ಪ್ರತ್ಯೆ ಬರೆಯುವ ಕಾಲವನ್ನು ತಿಳಿಸಿ! ಜಾತಕ ಮಾಡಿ ಫಲ ಹೇಳುತ್ತೇವೆ!' ಎಂದು ಪತ್ರಿಕೆಗಳಲ್ಲಿ ಇವರ ಜಾಹೀರಾತುಗಳು ಬರುತ್ತವೆ. ಅನೇಕ ಮಂದಿ ಹಣ ಕಳುಹಿಸಿ ತಮ್ಮ ನಾಯಿಗಳ ಜಾತಕ ಫಲವನ್ನು ನೋಡಿಯೂ ನೋಡಿರುತ್ತಾರೆ. ಹೆಣ್ಣು ನಾಯಿಯೊಡನೆ ಗಂಡನ್ನು ಬಿಡಬೇಕಾದಾಗಲೂ ಕೂಡ ಇವರು ಜೋಯಿಸರನ್ನು ಕೇಳುವರಂತೆ. ಜೋಯಿಸರ ಭಾಗ್ಯವಲ್ಲವೆ?

BHUVANENDRA PRODUCTS LTD.,
KATAPADI, S. K.

Why Doctors prescribe

"BHUVANENDRA"
NARAYANA TAILA

Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರನಾರಾಯಣ ತೈಲ'

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ,
ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ಟೋಕಿಸ್ಟರು —
ಯು. ಪಾಂಡುರಂಗ ನಾಯಕ್, ರಥಬೀದಿ
ರಾಘವೇಂದ್ರ ರಂಗ ಶ್ಶೈ, ರಥಬೀದಿ.
ಡಾ। ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಅಹಿಂಸಾ ಸೈನ್ಯದ ದಂಡಧಾರಿಯಾದ ದಳಪತಿ!

ವಲ್ಲಭಬಾಯಿ ಪಟೇಲರ ವಿಶಿಷ್ಟ ವ್ಯಕ್ತಿತ್ವ

ಗುಜರಾಥಿನಲ್ಲಿ ರಾಜಾಧಿರಾಜ ಪಟ್ಟದ ಧುರೀಣ!

ಗಾಂಧಿಜಿ ಹುಟ್ಟಿದ ಊರು ಗುಜರಾಥ್. ಆದರೆ, ಗುಜರಾಥಿನಲ್ಲಿ ರಾಜಾಧಿರಾಜ ಪಟ್ಟದ ಧುರೀಣರು ವಲ್ಲಭಭಾಯಿ ಪಟೇಲರು! ತಾನು ಹುಟ್ಟಿದ ಪ್ರಾಂತದಲ್ಲಿ ವಲ್ಲಭಭಾಯಿಯಂತಹ ಅದ್ಭುತ ಕಾರ್ಯಕರ್ತ, ಸಂಘಟನಾ ಸಮರ್ಥ, ಪ್ರಭಾವಶಾಲೀ ವ್ಯಕ್ತಿಯಿರುವಾಗ, ಗಾಂಧಿಜಿಗಾದರೂ ತನ್ನ ಪ್ರಾಂತದ ಸೇವೆಯನ್ನು ಪ್ರತ್ಯೇಕವಾಗಿ ಮಾಡುವ ಅವಶ್ಯ ಬೀಳಲಿಲ್ಲ. ಗುಜರಾಥ್ ಪ್ರಾಂತ್ಯದಲ್ಲಿ, ಗುಜರಾಥದ ನಗರ ನಗರ ಗ್ರಾಮಗ್ರಾಮಗಳಲ್ಲಿ ವಲ್ಲಭಭಾಯಿಯವರದೇ ಸರ್ವತಂತ್ರ ಸ್ವಾತಂತ್ರ್ಯವೆನ್ನಬಹುದು. ಕಳೆದ ಕರನಿರಾಕರಣ ಚಳವಳದ ಕಾಲದಲ್ಲಿ, ಪಟೇಲರ ಈ ಪ್ರಭಾವವು ಅಖಿಲಭಾರತಕ್ಕೆ ಮಾತ್ರವಲ್ಲ ಅಖಿಲ ಜಗತ್ತಿಗೇ ಗೋಚರವಾಗಿದೆ!

ಗಾಂಧಿಜಿಯವರ ಸೇನೆಯಲ್ಲಿ ದಳಪತಿ ವಲ್ಲಭಭಾಯಿ. ಪ್ರಭುತ್ವವನ್ನು ತೋರಿಸುವ, ಪ್ರಭುತ್ವವನ್ನು ನಡೆಸಿಬಿಡುವ ಸ್ವಭಾವ ಅವರದು. ಅಖಿಲ ಭಾರತದಲ್ಲಿಯೇ ಅವರಷ್ಟು ಪ್ರಭಾವಶಾಲಿಗಳಾದ ಸಂಘಟನಾ ಸಮರ್ಥರು ಬೇರೆ ಇಲ್ಲವೆನ್ನಬಹುದು. ಅವರು ಅಹಿಂಸಾ ಸೇನೆಯಲ್ಲಿ ದಂಡಧಾರಿಗಳಾಗಿ ನಿಂತಿದ್ದಾರೆ. ಇತ್ತೀಚೆಗೆ ಕಾಂಗ್ರೆಸು, ಪ್ರಾಂತಗಳಲ್ಲಿ ಮಂತ್ರಿಮಂಡಳಗಳನ್ನು ವಹಿಸಿ ಅಧಿಕಾರ ನಡೆಸುತ್ತಿದ್ದಾಗ, ಪಾರ್ಲಿಮೆಂಟರಿ ಕಮಿಟಿಯ ಚೇರ್‌ಮೇನರಾಗಿ ಅವರು ಮಂತ್ರಿ ಪ್ರಧಾನ ಮಂತ್ರಿಗಳನ್ನು, ಹಾಗೆ ಹಲವಾರು ಕಾಂಗ್ರೆಸು ಮುಖಂಡರನ್ನು, ಒಟ್ಟಿನಲ್ಲಿ ಹೇಳುವುದಿದ್ದರೆ, ಏಳು ಪ್ರಾಂತಗಳನ್ನೇ ತನ್ನೊಂದು ಹಿಡಿತದಲ್ಲಿ ಹಿಡಿದುಕೊಂಡಿದ್ದರು; ಎಲ್ಲರೂ ಅವರ ಕಡೆಗೆ ಗೌರವ ಮತ್ತು ಭಯ ಮಿಶ್ರಿತವಾದ ದೃಷ್ಟಿಯಿಂದ ನೋಡುತ್ತಿದ್ದರು. ಭಾರತದ ರಾಜಕೀಯದಲ್ಲಿ ಪಟೇಲರದು ಅಂತಹ ವ್ಯಕ್ತಿತ್ವ!

ಪ್ರಾಯದಲ್ಲಿ ಪಟೇಲರು ಅರುವತ್ತರ ಗಡಿ ದಾಟಿದ್ದಾರೆ. ಇಷ್ಟು ಕಾಲದೊಳಗೇ ಅವರು ಅನೇಕ ಹೋರಾಟ ಹೂಡಿದ್ದಾರೆ. ವ್ಯಕ್ತಿವ್ಯಕ್ತಿಗಳಿಂದ ಹಿಡಿದು, ಪಕ್ಷಪಕ್ಷಗಳಿಂದ ಹಿಡಿದು, ಪ್ರಬಲವಾದ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಎದುರು ಪಂಥ ಹೂಡಿ ಸೆಣಸಾಡಿದ್ದಾರೆ. ನಿರಂತರವಾಗಿ ಕಾದಾಡಿದ್ದಾರೆ; ಆದರೂ ಅವರ ಶಕ್ತಿ ಕುಂದಲಿಲ್ಲ. ಅವರ ತಾರುಣ್ಯದ ಸ್ಫೂರ್ತಿ ಜಗ್ಗಲಿಲ್ಲ. ಹೋರಾಡುವುದರಲ್ಲಿ ಬೇಸರ ಬಂದಿಲ್ಲ.

ಗಾಂಧಿಜಿಯವರ ಪ್ರಭಾವವೊಂದು ಇಂತಹವರನ್ನೂ ಮಂತ್ರಮುಗ್ಧರನ್ನಾಗಿ ಮಾಡಿದೆ. ಇದೂ ಬಹಳ ಸುಲಭವಾಗಿ ಏನೂ ಆಗಿಲ್ಲ. ಆಫ್ರಿಕದಿಂದ ಗಾಂಧಿಜಿ ಭಾರತಕ್ಕೆ ಮರಳಿಬಂದ ಮೇಲೆ, ಅವರು ಅಹಮ್ಮದಾಬಾದಿನಲ್ಲಿ ಬಂದು ನೆಲಸಿದರು. ವಲ್ಲಭಭಾಯಿಯವರು ಆಗ ಬಹಳ ಪ್ರಖ್ಯಾತಿ ಹೊಂದಿದ ಬ್ಯಾರಿಸ್ಟರರು! ವಕೀಲರು ಕೂಡುವ ಕ್ಲಬ್ಬಿನಲ್ಲಿ, ಗಾಂಧಿಜಿಯವರ ವಿಷಯದಲ್ಲಿ ಮಾತುಕತೆ ನಡೆದಿತ್ತು. ಒಬ್ಬರು ಸತ್ಯ ಅಹಿಂಸೆಗಳಿಂದ, ಪ್ರಬಲವಾದ ಬ್ರಿಟಿಷ್ ಸಾಮ್ರಾಜ್ಯವನ್ನು ಎದುರಿಸುವ ಗಾಂಧಿಜಿಯವರ ಹುಚ್ಚು ವಿಚಾರವನ್ನು ಟೀಕಿಸುತ್ತಾ ಮಾತನಾಡುತ್ತಿದ್ದರು. ವಲ್ಲಭಭಾಯಿಯವರು ಆ ಮಾತಿನಲ್ಲಿ ಸೇರಿ ಮಹಾತ್ಮರನ್ನು ಉಪಹಾಸ್ಯ ಮಾಡುತ್ತಿದ್ದರು.

ಒಮ್ಮೆ ಅಹಮ್ಮದಾಬಾದಿನ ಕ್ಲಬ್ ಒಂದರಲ್ಲಿ ಗಾಂಧಿಜಿಯು ಆಮಂತ್ರಿತರಾಗಿ ಅವರ ವಿಚಾರಗಳನ್ನು ಕುರಿತು ವಿವರಿಸುತ್ತಿದ್ದಾಗ, ವಲ್ಲಭ ಭಾಯಿಯವರು ಕ್ಲಬ್ಬಿನ ಮೂಲೆಯೊಂದರಲ್ಲಿ ಕುಳಿತು ಕೆಲವರೊಂದಿಗೆ ಇಸ್ಪೀಟು ಆಟವಾಡುತ್ತಾ, ತಮಾಷೆಯ ನಗುವಿನಿಂದ ಗಾಂಧಿಜಿಯವರ ಮಾತನ್ನು ಪರಿಹಾಸ್ಯಪೂರ್ವಕ ಕೇಳುತ್ತಿದ್ದರು!

ಗಾಂಧಿಜಿಯವರ ಅಹಿಂಸಾ ಸೇನೆಯನ್ನು ಸೇರುವ ಪಟೇಲರ ನಿರ್ಧಾರವು ಹಲವರನ್ನು ಆಶ್ಚರ್ಯಚಕಿತರನ್ನಾಗಿ ಮಾಡಿತು. ಯಾವುದೇ ಒಂದು ಕಾರ್ಯಕ್ಕೆ ದುಡುಕಿ ಪ್ರವೇಶಮಾಡುವ ಸ್ವಭಾವ ಅವರದಲ್ಲ. ಹಿಡಿದ ಕೆಲಸವನ್ನು ಹಟ ಹಿಡಿದು ಸಾಧಿಸುವ ಧೋರಣೆ ಅವರದು. ಇಂತಹುದೇ ಗಂಭೀರ ಪ್ರವೃತ್ತಿಯಿಂದ ಕಾಂಗ್ರೆಸಿನಲ್ಲಿ ಮುಂಬಂದು ಇಂದು ಪ್ರಥಮ ಪಂಕ್ತಿಯಲ್ಲಿ ಪಟೇಲರು ವಿರಾಜಮಾನರಾಗಿದ್ದಾರೆ.

ವಿದ್ಯಾರ್ಥಿಯಾಗಿದ್ದಾಗಲೇ ಅವರು ತಾವು ಕಲಿತ ಶಾಲೆಯಲ್ಲಿ ಸಹಪಾಠಿಗಳಿಂದ ಹಿಡಿದು ಅಧ್ಯಾಪಕರ ವರೆಗೆ ಒಳ್ಳೆಯ ವರ್ಚಸ್ಸು ಹರಡಿದ್ದರು. ವಿದ್ಯಾಭ್ಯಾಸ ಮುಗಿದ ಕೂಡಲೇ ವಕೀಲಿಗೆ ಸೇರಿದರು. ವಕಾಲತ್ತಿನಲ್ಲಿಯೂ ಕ್ರಿಮಿನಲ್ ಕೇಸುಗಳಲ್ಲಿ ಅವರದು ಮೇಲುಗೈಯಾಗಿತ್ತು. ಸಿವಿಲ್ ಕಾನೂನು ಅವರ ಉಗ್ರಪ್ರವೃತ್ತಿಗೆ ಸಾಲದಾಯಿತು. ಡಕಾಯಿತಿ, ಕಳವು, ಕೊಲೆಗಳ ಕೇಸುಗಳನ್ನು ಹಿಡಿದೆತ್ತಿ ಅವರು ವಾದಿಸುತ್ತಿದ್ದರು. ಹೀಗಾಗಿ ಅವರ ಹೆಸರು ಕೋರ್ಟಿನವರಿಗೂ ಭಯದಾಯಕವಾಗಿಯೇ ಪರಿಣಮಿಸಿತು. ಇವರನ್ನು ತಪ್ಪಿಸಲಿಕ್ಕಾಗಿಯೇ ಬೋರ್ಸಾದದಿಂದ ಆನಂದಕ್ಕೆ ಕೋರ್ಟನ್ನು ವರ್ಗಾಯಿಸಿದರೆಂದೂ, ಪಟೇಲರು ಆನಂದದಲ್ಲಿ ಮತ್ತೆ ಬಂದು ನೆಲಸಲು ತಿರುಗಿ ಕೋರ್ಟು ಬೊರ್ಸಾದಕ್ಕೇ ವರ್ಗಾಯಿಸಲ್ಪಟ್ಟಿತೆಂದೂ ಇತಿಹಾಸವೇ ಇದೆ!

ವಕಾಲತ್ತಿನಲ್ಲಿ ಅಗ್ರಗಣ್ಯರಾಗಿ ಮೆರೆವ ಸಾಹಸವನ್ನೇ ಪಟೇಲರು ಮಾಡಿದರು. ಇದಕ್ಕಾಗಿಯೇ ಅವರು ಹೆಚ್ಚಿನ ಅನುಭವಕ್ಕೆ ಇಂಗ್ಲೆಂಡಿಗೂ ತೆರಳಿದರು. ಶಾಲೆಯಲ್ಲಿ ಬಹಳ ತುಂಟತನದಿಂದಲೇ ಇದ್ದರೂ, ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಉತ್ತೀರ್ಣರಾಗಿ ಪದವಿ ಪಡೆದರು. ಪರೀಕ್ಷೆ ಮುಗಿದ ಕೂಡಲೇ ಅಲ್ಲಿಂದ ಭಾರತಕ್ಕೇ ಮರಳಿಬಂದರು; ಅಖಿಲ ಯೂರೋಪವನ್ನು ಸಂಚಾರಮಾಡುವುದು ಅವರ ಉದ್ದೇಶವೇ ಆಗಿರಲಿಲ್ಲ.

ಗಾಂಧಿಜಿಯ ತತ್ವಕ್ಕಿಂತಲೂ ಮಹಾತ್ಮರ ಮಹಾಪ್ರಭಾವವು ಪಟೇಲರನ್ನು ಬೆರಗುಗೊಳಿಸಿತ್ತೆನ್ನಬಹುದು. ಭಾರತದ ರಾಜಕೀಯದಲ್ಲಿ ಗುಜರಾಥು ಬಹಳ ಹಿಂದುಳಿದಿತ್ತು; ಗಾಂಧಿಜಿಯವರ ಪ್ರಭಾವದಿಂದ ಅಲ್ಲಿಯೂ ಉದ್ವೇಗ ಚೈತನ್ಯ ತುಂಬುತ್ತಿತ್ತು. ಗಾಂಧಿಜಿ ಕಾರ್ಯರೂಪಕ್ಕೆ ಇಳಿಸಬಯಸಿದ ಉದಾತ್ತ ಉದ್ದೇಶಗಳನ್ನು, ಕಾರ್ಯಕ್ರಮಗಳನ್ನು ವಲ್ಲಭಭಾಯಿ ಅಂಗೀಕರಿಸಿಕೊಂಡು ಭರದಿಂದ ಮುಂದು ನುಗ್ಗಿ ಕೆಲಸ ಮಾಡತೊಡಗಿದರು. ಹಳ್ಳಿಯಿಂದ ಹಳ್ಳಿಗೆ ಗಾಂಧಿಜಿಯವರ ಸಂದೇಶವನ್ನು ಹೊತ್ತು ಪಟೇಲರು ಪ್ರಚಾರ ಮಾಡಿದರು. ನಿರಂತರ ಪ್ರಬಲವಾದ ಸಂಘಟನೆಯಲ್ಲಿ ಮಗ್ನರಾದರು.

ಇದರಲ್ಲಿ ಬಹಳ ಯಶಸ್ವಿಯಾದ ಅವರ ಕಾರ್ಯವೆಂದರೆ ಗ್ರಾಂಟರ ತೀರ್ವೆ ನಿರಾಕರಣ ಆಂದೋಲನ. ವಲ್ಲಭಭಾಯಿಯವರ ಪ್ರಚಂಡ ಧುರೀಣತೆಯಲ್ಲಿ ಇಡೀ ರಾಷ್ಟ್ರವೇ ಸರಕಾರದ ಕ್ರೂರ ದಬ್ಬಾಳಿಕೆಯನ್ನು ಧೈರ್ಯಪೂರ್ವಕ ಎದುರಿಸಿ ನಿಂತಿತು; ಕೊನೆಗೆ ಅದರಲ್ಲಿ ಗುಜರಾಥಿಗೆ ಅಪೂರ್ವ ವಿಜಯವೇ ದೊರಕಿತೆನ್ನಬಹುದು. ಇದರೊಂದಿಗೆ ವಲ್ಲಭಭಾಯಿಯವರಿಗೆ ಅಖಿಲ ಭಾರತ ಕೀರ್ತಿಯೂ ಬಂದಿತು! ಮತ್ತೆ 1930ರಲ್ಲಿ ಅವರು ಗುಜರಾಥಿನಲ್ಲಿ ಶಾಸನಭಂಗ ಆಂದೋಲನವನ್ನು ನಡೆಸಿದರು. ನೂರಾರು ಮಂದಿ ಸರಕಾರದ ನೌಕರಿಗೆ ರಾಜಿನಾಮೆ ಕೊಟ್ಟರು. ಬ್ರಿಟಿಷ್ ರಾಜ್ಯಭಾರವು ಅಂತಹ ಒಂದು ಪ್ರಬಲ ಅಹಿಂಸಾ ವಿರೋಧವನ್ನು ಬೇರೆಂದೂ ಪಡೆದಿರಲಿಕ್ಕಿಲ್ಲವೆನ್ನುವಷ್ಟು ಅದು ತೀವ್ರಸ್ವರವಾಗಿ ಪರಿಣಮಿಸಿತು. ಅದೇ ಅವರಿಗೆ ಅತ್ಯಂತ ಮನ್ನಣೆಯನ್ನೂ ದೊರಕಿಸಿ ಕೊಟ್ಟಿತು! ಮುಂದಿನ ವರ್ಷ ಅವರು ಅಖಿಲ ಭಾರತ ರಾಷ್ಟ್ರಸಭೆಯ ಅಧ್ಯಕ್ಷ ಸ್ಥಾನಕ್ಕೇರಿಸಲ್ಪಟ್ಟರು. ತಿರುಗಿ 1932ರಲ್ಲಿ ಶಾಸನಭಂಗವು ಆರಂಭವಾದಾಗ ಅವರೂ ಗಾಂಧಿಜಿಯವರೊಡನೆಯೇ ಬಂಧಿತರಾಗಿ ಕಾರಾಗಾರ ಸೇರಿದರು.

ವಲ್ಲಭಭಾಯಿ ಗಾಂಧಿಜಿಯವರ ಅನುಯಾಯಿಗಳಾದರೂ ಅನೇಕ ವಿಷಯಗಳಲ್ಲಿ ಅವರು ಗಾಂಧಿಜಿಯವರೊಡನೆ ಒಪ್ಪುವುದಿಲ್ಲ. ಪಟೇಲರ ದೃಷ್ಟಿ ಕಾರ್ಯಗಳ ಕಡೆಗೆ, ಕಾರ್ಯಕ್ಕೆ ಬೇಕಾದ ಸಂಘಟನೆಯ ಕಡೆಗೆ. ಗಾಂಧಿಜಿಯಂತೆ ಧರ್ಮತತ್ವವನ್ನು ಅವರು ರಾಜಕೀಯದಲ್ಲಿ ಬೆರೆಸುವುದಿಲ್ಲ. ಅಖಿಲ ಭಾರತದಲ್ಲಿಯೇ ಮಹಾಸಂಘಟನಾಸಮರ್ಥರೆಂದು ವಲ್ಲಭಭಾಯಿ ಕೀರ್ತಿ ಹೊತ್ತಿದ್ದಾರೆ. ವಿರೋಧಿಗಳೊಡನೆ ಅವರದು ಬಹಳ ನಿಷ್ಠುರ ವಿರೋಧ; ನಿಷ್ಠುರವೂ ಪ್ರಭಾವಪೂರ್ಣವೂ ಆದ ವಿರೋಧ. ಹೀಗೆಂದೇ ಅವರು ಭಾರತದ ರಾಜಕೀಯದಲ್ಲಿ ತಮ್ಮದೇ ಆದ ಒಂದು ವಿಶಿಷ್ಟ ಮಾಹಾತ್ಮ್ಯೆಯನ್ನು ಮೆರೆಸಿದ್ದಾರೆ.

ಅನೇಕ ಮಂದಿ ಗಾಂಧಿಜಿಯವರ ಅನುಯಾಯಿಗಳು, ಮಹಾತ್ಮರ ರಚನಾತ್ಮಕ ಕಾರ್ಯಗಳ ಕಡೆಗೇ ತಮ್ಮ ಶಕ್ತಿಯನ್ನು ಹರಿಸುತ್ತಿದ್ದಾರೆ. ವಲ್ಲಭಭಾಯಿ ರಾಜಕೀಯದಲ್ಲಿ; ಗಾಂಧಿಜಿ ಯಾವುದಾದರೊಂದು ರಾಜಕೀಯ ಅಸ್ತ್ರವನ್ನು ಹೊರ ತೆಗೆದರೆ ಮುಗಿಯಿತು. ಅದನ್ನು ಆದಷ್ಟು ಶಕ್ತನಕ್ತನ್ನಾಗಿ ಮಾಡುವುದರಲ್ಲಿ ಶ್ರಮ ಹಾಕುತ್ತಾರೆ. ಗಾಂಧಿಜಿ ಶಾಸನಸಭೆಗಳನ್ನು ಬಹಿಷ್ಕ… ಸಬೇಕೆಂದಾಗ, ಪಟೇಲರು ಗತಿಸಿದ ದಾ… ಸರೊಡನೆ, ಹಿರಿಯ ನೆಹರುಗಳೊಡನೆ… ಸ್ವತಃ ತಮ್ಮ ಸ್ವಸಹೋದರ ವಿಠ್ಠ… ಭಾಯಿಯವರೊಡನೆಯೇ ಆ ಕು… ಕು ಹಟಕಟ್ಟಿ ಕಾದಿದರು. ತಿರುಗಿ ಗಾಂ… ಧಿಜಿ ಶಾಸನ ಸಭಾ ಪ್ರವೇಶ ಮಾಡಬೇ… ಕೆಂದು ಹೇಳಿದಾಗ ಸ್ವತಃ ಪಾರ್ಲಿಮೆಂ… ಟರಿ ಬೋರ್ಡಿನ ಅಧ್ಯಕ್ಷತೆಯನ್ನೇ ವಹಿ… ಸಿಕೊಂಡು ಪಟೇಲರು ಅದರ ಯಶಸ್ವಿ… ಗೂ ಹೋರಾಡಿದರು. ಅವರು ವಿಧೇ… ಯತೆಯಿಂದ ನಡೆಯಬಲ್ಲರು; ತನಗೂ… ವಿಧೇಯತೆ ತೋರಿಸಬೇಕೆಂದು ಇತರರ… ನ್ನೂ ನಡಸಬಲ್ಲರು. ಇಂತಹ ಸ್ವಭಾ… ಹಲವರಿಗೆ ಇರಲಾರದು.

ಗುಜರಾತಿನ ಗುಡಿಸಲೊಂದರಲ್ಲಿ ಹು… ಟ್ಟಿ ಇಂದು ವಿಖ್ಯಾತಿಯ ಶಿಖರಕ್ಕೇ… ದ್ದಾರೆ. ಅವರ ವಂಶದ ಇತಿಹಾಸವೇ… ಶೂರತ್ವದ ಚರಿತ್ರೆಯಾಗಿದೆ. ಗಲಾಟೆ… ದಂಗೆಯಲ್ಲಿ ಅವರ ತಂದೆಯವರು ಬ್ರಿ… ಪರಿಗೆದುರಾಗಿ ಕಾದಾಡಿದ್ದರು. ಅವ… ಅಣ್ಣ ವಿಠ್ಠಲಭಾಯಿಯವರೂ ಬಹ… ವಿಚಾರಶಾಲಿಯಾದ, ರಾಜನೀತಿಜ್ಞರಾ… ದ್ದು ಶಾಸನ ಸಭೆಯ ಮೊದಲನೆಯ… ಭಾರತೀಯ ಅಧ್ಯಕ್ಷರಾಗಿ ಕೀರ್ತಿ ಪ… ದವರು. ಶಾಸನಭಂಗ ಆಂದೋಲ… ಕಾಲದಲ್ಲಿ ಅವರು ಅಧ್ಯಕ್ಷಪಟ್ಟದಿಂದ… ದು ಕಾರಾಗಾರವನ್ನು ಸೇರಿ ಕಣ್ಮರೆಯಾ… ದರು. ಅಂತಹ ತಂದೆಯ, ಅಂತಹ… ಸೋದರನ ಅತುಲ ಧೈರ್ಯ ಛಾಯೆ… ಗಳು ವಲ್ಲಭಭಾಯಿಯವರ ಜೀವ… ದಲ್ಲಿ ಒಳ್ಳೆಯ ಪ್ರಭಾವಿತವಾಗಿ ತೋ… ರುತ್ತವೆ.

ವಲ್ಲಭಭಾಯಿಯನ್ನೇ ಇಂದು ಕಾಂಗ್ರೆಸು ಬ… ಪಕ್ಷದ ಬಲವಾದ ಮುಂದಾಳುವೆನ್ನಬಹುದು… ಆತುರದ ಹೋರಾಡುವ ಸ್ವಭಾವ. ಕಾಂಗ್ರೆ… ಸೊಳಗೇ ಅವರು ಹಲವರೊಡನೆ ಹೋರಾ… ಡ್ದಾರೆ; ಹಲವರನ್ನು ನೆಲಕ್ಕಪ್ಪಳಿಸಿದ್ದಾರೆ. ಕಾಂ… ಗ್ರೆಸು ಸಮಾಜವಾದಿಗಳನ್ನು ಬೆರಗುಗೊಳಿ… ಸಿದ್ದಾರೆ, ಹಿಂದೂಡಿಬಿಟ್ಟಿದ್ದಾರೆ.

ವರ್ಷಗಳ ಹಿಂದೆ ವಕೀಲರಾಗಿದ್ದಾ… ವಲ್ಲಭಭಾಯಿ ಕೋರ್ಟಿನಲ್ಲಿ ಕ… ವ್ಯಾಜ್ಯದ ಪರವಾಗಿ ವಾದಿಸುವ ಕಾ… ಒಂದು ಟೆಲಿಗ್ರಾಮ್ ಬಂದಿತು. ಅ… ರು ಅದನ್ನು ಓದಿದರು. ಅದರಲ್ಲಿ ಅವ… ಪತ್ನಿ ಗತಿಸಿದ ಸುದ್ದಿಯಿತ್ತು. ಅದನ್ನ… ಓದಿದರೂ ಏನೊಂದೂ ಕಳೆಗುಂದ… ತಿರುಗಿ ತನ್ನ ವಕಾಲತ್ತನ್ನು ಬಿಡದೆ ಮು… ವರಿಸಿದರು. ಮತ್ತೆ ಕೋರ್ಟು ಮು… ಯಿತು. ಆಗ ನೆರೆದವರಿಗೆ ತಿಳಿಯಿ… ವಲ್ಲಭಭಾಯಿಯವರಿಗೆ ಬಂದ ತ… ಅವರ ಪತ್ನಿಯ ಮರಣದ ಸುದ್ದಿಯೆ… ದು! ಭಾರತದ ರಾಜಕೀಯ ಕ್ಷೇತ್ರದ… ಯೂ ವಲ್ಲಭಭಾಯಿ ಅಂತಹುದೇ ಧೈ… ರ್ಯದಿಂದ ಇಂದು ಹೋರಾಡುತ್ತಾ…

—K. K. R…

★ ಸಿನೇಮಾ ಪ್ರುಟ ★

ಸೈಗಲನು "ಸರ್" ಏಕೆ ಆಗಬಾರದು? ನವಾಬನು "ಖಾನ್ ಬಹದ್ದೂರ್" ಆಗಬಾರದೇಕೆ?

ಯಾವ ರಾಷ್ಟ್ರದಲ್ಲಿಯೇ ಆಗಲಿ, ಜನತೆಗೆ, ರಾಷ್ಟ್ರಕ್ಕೆ ಸಲ್ಲಿಸಿದ ಸೇವೆಯ ಪರಿಣಾಮವಾಗಿ ಆ ರೀತಿ ಉತ್ತಮ ಸೇವೆ ಸಲ್ಲಿಸಿದವರಿಗೆ ಆ ರಾಷ್ಟ್ರವು ಗೌರವದ ಪ್ರತೀಕವೆಂದು ಬಿರುದು ಬಾವುಲಿಗಳನ್ನು ಕೊಡುವದುಂಟು. ಆ ಸೇವೆ ರಾಜಕೀಯವೇ ಇರಲಿ, ಸಾಮಾಜಿಕವಿರಲಿ, ಆರ್ಥಿಕ ಸಮಸ್ಯೆಯದಿರಲಿ, ಸಾಹಿತ್ಯದಲ್ಲಿರಲಿ, ಕಲಾಪ್ರಪಂಚದಲ್ಲಿರಲಿ ರಾಷ್ಟ್ರಕ್ಕೆ ಮುಡಿಪಿಟ್ಟ ಸೇವೆ. ಹೀಗೆ ಗೌರವಕೊಟ್ಟು ಮನ್ನಿಸುವ ಪದ್ಧತಿ ಹಿಂದೆಯೂ ಇದ್ದಿತು ಈಗ್ಲೂ ಇದೆ. ಚಲಚ್ಚಿತ್ರ ನಿರ್ಮಾಣವೂ ಅದರಲ್ಲಿಯ ಅಭಿನಯವೂ ಒಂದು ಕಲೆಯಾಗಿವೆ. ಅಭಿನಯವನ್ನೇ ವಿಷಯವಾಗಿಟ್ಟುಕೊಂಡು ಅದರ ವೇದವನ್ನೇ ಬರೆದ ಭರತಮುನಿ ತ್ರಿಕಾಲಕ್ಕೂ ಮಂದ್ಯನಾಗಿ ಆ ಕಲೆಯನ್ನು ಅಮರವಾಗಿ ಮಾಡಿದನು. ನಾಟ್ಯಶಾಸ್ತ್ರವನ್ನು ಬರೆದ ಆವನ ಸೇವೆಗೆ ದೇವಲೋಕವೇ ಅವನನ್ನು ಗೌರವಿಸಿತು. ಅಂದ ಮೇಲೆ ಈಗಿನ ಕಾಲದಲ್ಲೂ ತಮ್ಮ ನಟನಾಕೌಶಲ್ಯದಲ್ಲಿ ನಿಪುಣಶ್ರೇಷ್ಠರಾಗಿ ಜನತೆಯ ಮೇಲೆ ಒಳ್ಳೇ ಪ್ರಭಾವವನ್ನು ಬೀರಿದ ಮತ್ತು ಬೀರುತ್ತಿರುವ ವ್ಯಕ್ತಿಗಳಿಗೆ ಕಾಲಕ್ಕೆ ತಕ್ಕಂತೆ ಬಿರುದುಬಾವುಲಿಗಳನ್ನೇಕೆ ಕೊಟ್ಟು ಗೌರವಿಸಬಾರದು, ಸೈಗಲನೇಕೆ ಸರ್ ಆಗಬಾರದು? ನವಾಬನೇಕೆ ಖಾನ್ ಬಹಾದ್ದೂರನಾಗಬಾರದು? ಸರಕಾರವು ಇತ್ತ ಲಕ್ಷ ಕೊಡುವುದೇ ಎಂಬ ವಿಚಾರವನ್ನು ಬಾರ್ಟ್ ಪತ್ರಿಕೆಯು ಬರೆದ ಸಂ ವಿಚಾರಣೀಯವಾಗಿದೆ.

ಗೋಪೀನಾಥ ದಂಪತಿಗಳು ಮಲೆಯಾಳಿ ಚಿತ್ರದಲ್ಲಿ ನರ್ತಿಸುವರು

ನಿರ್ದೇಶಕ ಸುಬ್ರಹ್ಮಣ್ಯಂ ಇವರು ಪ್ರಹ್ಲಾದ್ ಎಂಬ ಮಲೆಯಾಳೀ ಚಿತ್ರವನ್ನು ತಯಾರಿಸಲಿರುವರೆಂದೂ, ತಿರುವಾಂಕೂರಿನ ಮಹಾರಾಣಿ ಮತ್ತು ಮಹಾರಾಜರು ಅದಕ್ಕೆ ಬೇಕಾದ ಸರಕಾರದ ಸಹಾಯಗಳನ್ನು ಒದಗಿಸುವರೆಂದೂ, ಅರಮನೆಯ ನರ್ತಕರಾದ ಶ್ರೀ ಗೋಪೀನಾಥರು ತಮ್ಮ ಪತ್ನಿ ತುಂಗಮಣಿಯೊಡನೆ ಇವರಲ್ಲಿ ಹಿರಣ್ಯಕಶಿಪು ಮತ್ತು ಆತನ ಪತ್ನಿಯ ಪಾತ್ರವರ್ಗದಲ್ಲಿ ನಟಿಸುವರೆಂದು ಗೊತ್ತಾಗಿದೆ. ಲಲಿತೆ ಲಕ್ಷ್ಮಿಯು ಪ್ರಹ್ಲಾದನ ಪಾತ್ರವನ್ನು ವಹಿಸಲಿರುವಳೆಂದು ತಿಳಿಯುತ್ತದೆ.

ಲೀಲಾ ಚಿಟ್ನೀಸಳು ನರ್ತನ ಮಾಡುವಳೆ?

ಕಾಂಚನ ಚಿತ್ರವನ್ನು ನೋಡಿ. ಲೀಲಾ ಚಿಟ್ನೀಸಳನ್ನು ಮೆಚ್ಚುವ ಸಿನೇಮಾ ಪ್ರಿಯರು ಮತ್ತಷ್ಟು ಚಕಿತರೂ ಹರ್ಷಿತರೂ ಆಗುವರು. ಸಿನೇಮಾ ಜೀವನದಲ್ಲಿ ಇದೇ ಮೊದಲನೆಯ ಬಾರಿಯಾಗಿ ಲೀಲಾ ಚಿಟ್ನೀಸಳು ಕಾಂಚನ್ ಚಿತ್ರದಲ್ಲಿ ನರ್ತನವನ್ನು ಮಾಡುವಳು.

ಅನೇಕ ಮಂದಿ ಹುಡುಗಿಯರೂ, ಹುಡುಗರೂ ಕೂಡಿ ಒಂದು ಸಂತೋಷಕೂಟದಲ್ಲಿ ಹಾಡಿ ಕುಣಿವ ಸಂದರ್ಭದಲ್ಲಿ ಲೀಲಾ ಚಿಟ್ನೀಸಳ ಕಾಲುಗಳೂ ನರ್ತನಮಾಡದೆ ಸುಮ್ಮನೆ ನಿಲ್ಲಲಿಲ್ಲ.

ಕಾಂಚನ್ ಚಿತ್ರವು ಪೂರ್ತಿಯಾಗುತ್ತಾ ಬಂತು. ಬೇಗನೆ ಅದು ಪ್ರದರ್ಶಿತವಾಗುವುದು.

ನ್ಯೂಥಿಯೇಟರ್ಸ್

ನ್ಯೂಥಿಯೇಟರ್ಸ್ನವರ "ಲಗನ್" ಮತ್ತು "ಪರಿಚಯ" ಚಿತ್ರಗಳು ಅಣಿಯಾಗಿವೆ. ಇವುಗಳ ಹಿಂದೀ ವಾಕ್ಪಟವು ಎಪ್ರಿಲ್ ೧ನೇ ವಾರದಲ್ಲಿ ಬಂಗಾಲ ದೇಶದ ಹೊರಗೆ ತೋರಿಸಲಾಗುವುದು

ಮಲಿನಾ

ಸೌ|| ಮಲಿನಾ ಇವಳು ತನ್ನನ್ನು ಕರಾರಿನಿಂದ ಮುಕ್ತಮಾಡಬೇಕೆಂದು ನ್ಯೂಟೋಕಿಸ್‌ನವರಿಗೆ ಬಿನ್ನವಿಸಿಕೊಂಡದ್ದರಿಂದ ಅವಳ ಸ್ಥಳದಲ್ಲಿ ಸುಪ್ರಭಾ ಮುಖರ್ಜಿ ಎಂಬವಳು "ಎಪರ ಓಪರ" ಎಂಬ ಚಿತ್ರದಲ್ಲಿ ಭಾವಹಿಸುವಳು.

ಭಾರತ ವಿಲಾಸ್

ನಿರ್ದೇಶಕ ವಿಜಯಭಟ್ಟರು 'ಭಾರತ ವಿಲಾಸ್' ಚಿತ್ರದ ನಿರ್ದೇಶಕರಾಗಿರುವರು. ಚಿತ್ರದ ಪ್ರಾರಂಭಕಾರ್ಯವು ನೆರವೇರಿದೆ. ಇದು ಹಿಂದುಸ್ಥಾನೀ, ಮರಾಠೀ ಈ ಉಭಯ ಭಾಷೆಗಳಲ್ಲಿ ತಯಾರಾಗಲಿರುವದು. ಎರಡು ಭಾಷಾ ಚಿತ್ರಗಳಲ್ಲಿಯೂ ಪಾತ್ರವರ್ಗವು ಒಂದೇ. ತೆರೆ ಹಿಂದುಸ್ತಾನಿ ಚಿತ್ರದಲ್ಲಿ ನಟಿಸಿದ ಪ್ರೇಮ ಅದೀಬನ ಸ್ಥಾನದಲ್ಲಿ ಮರಾಠೀ ಚಿತ್ರದಲ್ಲಿ ಚಂದ್ರಕಾಂತನು ಅಭಿನಯಿಸುವನು.

ಮೋಹನ್ ಪಿಕ್ಚರ್ಸ್

ಬೊಂಬೇ ಮೋಹನ್ ಪಿಕ್ಚರ್ಸನವರು ತಾಜ್‌ಮಹಾಲ್ ಮತ್ತು ಮುಮ್ತಾಜಮಹಾಲ್ ಎಂಬೀ ಎರಡು ಚಿತ್ರಗಳನ್ನು ತಯಾರಿಸಲಿರುವರು. ತಾಜ್‌ಮಹಾಲ್ ಚಿತ್ರದಲ್ಲಿ ಕುಮಾರನು ಪ್ರಾಮುಖ್ಯ ಪಾತ್ರ ವಹಿಸಲಿರುವನೆಂದು ತಿಳಿದು ಬರುತ್ತದೆ.

ಸಣ್ಣ ಫಿಲ್ಮುಗಳು

ಅಮೇರಿಕದ 'ಕ್ರೈಮ್ ಡಸ್ ನೋಟ್ ಪೇ' ಎಂಬೀ ಚಿತ್ರದ ಮಾದರಿಯಲ್ಲಿ ಪ್ರಕಾಶ ಕಂಪನಿಯು ಶ್ರೀ ಶಿಕುಭಾಯಿ ಬಿ. ದೇಸಾಯಿಯವರು ಹಲವು ಸಣ್ಣ ಫಿಲ್ಮುಗಳನ್ನು ತಯಾರಿಸಲಿರುವರೆಂದು ತಿಳಿಯುತ್ತದೆ.

ತಾಯಿಯೇ! ನಿನಗೆ ಆಗಾಗ ಅಗತ್ಯಬೀಳುವ ಸ್ನೇಹಿತಳಿಲ್ಲಿರುವಳು.

ಮಕ್ಕಳಿಗೆ ಆಗಾಗ ಕೆಳಗೆ ಬಿದ್ದು ಗಾಯ, ಪೆಟ್ಟುಗಳಾಗುತ್ತವೆ. ಇದಕ್ಕಾಗಿ ಪ್ರತೀ ಒಂದು ಮನೆಯಲ್ಲಿಯೂ ಅಗತ್ಯ ಬೇಕಾಗುವುದಾವುದೆಂದರೆ ಕ್ರಿಮಿನಾಶಕ ಔಷಧಿ. ಒಂದು ಟಿನ್ನು ಕುಟಿಕೂರಾ ಮುಲಾಮನ್ನು (Cuticura Ointment) ನಿಮ್ಮ ಬಳಿಯಲ್ಲಿರಿಸಿ ನಂತರ ಯಾವ ಪೆಟ್ಟು, ಗಾಯಗಳಿಗೂ ತಯಾರಾಗಿರಿ.

ಗಾಯವು ಕೂಡಲೇ ಗುಣವಾಗಬೇಕಾದರೆ, ಬಾತುವಿಕೆಯು, ಮಾಯವಾಗಬೇಕಾದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಗಾಯ, ಪೆಟ್ಟು, ಪರಚುವಿಕೆ, ಮುದ್ದಣ ಇವುಗಳಿಗೆ ಹಚ್ಚಿರಿ. ಅದರಿಂದ ಯಾತೊಂದು ಬೆರಿಕೆಯಿಲ್ಲ. ಕುಟಿಕೂರಾ ಮುಲಾಮು (Cuticura Ointment) ಸುಟ್ಟುಹೋದ ಮತ್ತು ಬೆಂದುಹೋದ ಭಾಗಗಳಿಗೆ ಹಚ್ಚಲು ಕೂಡಾ ಬಹಳ ಉತ್ತಮ. ಸಹಿಸಲಸಾಧ್ಯವಾದ ವೇದನೆಯನ್ನು ನಿಲ್ಲಿಸಿ ಗಾಯಗಳು ಹರಡದಂತೆ ಮಾಡುತ್ತದೆ. ಚರ್ಮರೋಗಗಳಿಗೆ ಕೂಡಾ ಉತ್ತಮ ಔಷಧಿ. ಅಸಹ್ಯವಾದ ತುರಿಗಜ್ಜಿಗಳು ಇದರ ಸ್ಪರ್ಶದಿಂದಲೇ ಮಾಯವಾಗುತ್ತವೆ. ಇಷ್ಟಲ್ಲದೆ ದೀರ್ಘಕಾಲದ ಚರ್ಮವ್ಯಾಧಿಗಳು ಕೂಡ ಕುಟಿಕೂರಾ ಮುಲಾಮಿನಿಂದ (Cuticura Ointment) ಗುಣವಾಗುತ್ತವೆ. ನಿಮ್ಮ ಕೆಮಿಸ್ಟರಲ್ಲಿಂದ ಒಂದು ಟಿನ್ನನ್ನು ಕೊಂಡುಕೊಳ್ಳಿರಿ.

ಕುಟಿಕೂರಾ ಮುಲಾಮನ್ನು (Cuticura Ointment) ಕಜ್ಜಿ, ಕಾರು, ಗಾಯ, ಪೆಟ್ಟು, ವ್ರಣ, ಮುದ್ದಣ, ಬಾತುವಿಕೆ, ತುರಿಕಜ್ಜಿ ವಿಷಪ್ರಾಯವಾದ ಗಾಯ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉಪಯೋಗಿಸಿರಿ.

ಕುಟಿಕೂರಾ ಮುಲಾಮು
Cuticura Ointment



NACET
BLADES

ನೂರು ಗೂಟದ ರೇಜರುಗಳಿಗೆ

ನೆಸೆಟು ಬ್ಲೇಡುಗಳು

ನಿಜವಾದ ಕ್ಷೌರ ಸುಖಕ್ಕೆ ಹರಿತವಾದ ಅಲಗುಗಳು. ಬೇಗನೇ ಉತ್ತಮವಾಗಿ ಸ್ವಾರ್ಥಕರ ರೀತಿಯಲ್ಲಿ ನಯವಾದ ಕ್ಷೌರವು ಬೇಕಾದಲ್ಲಿ ಅತೀ ಕಡಿಮೆ ಕ್ರಯದ ನೆಸೆಟು ಬ್ಲೇಡುಗಳಲ್ಲಿ ಭರವಸೆಯನ್ನಿಡಿ.



I.N.B.I.

ನಯಾ ಸಂಸಾರ್

ಬೊಂಬೇ ಟಾಕೀಸಿನ ನಯಾ ಸಂಸಾರ ಚಿತ್ರವು ತಾ. ... ರಲ್ಲಿ ಬೊಂಬಾಯಿಯಲ್ಲಿ ಪ್ರದರ್ಶಿತವಾಗಲಿರುವುದೆಂದು ತಿಳಿಯುತ್ತದೆ.

ಭಕ್ತಿಮಾಲಾ

ಭಕ್ತಿಮಾಲಾ ಎಂಬೀ ಚಿತ್ರದಲ್ಲಿ ಲಿಂಗಮೂರ್ತಿಯು ನರ್ತನವಿದೆ. ಶ್ರೀ. ದೇಸಾಯಿಯವರ ನಿರ್ದೇಶಕತ್ವದಿಂದೀ ಚಿತ್ರವು ತಯಾರಾಗಲಿರುವುದು.

ಪುಸ್ತಕಾವಲೋಕನ

ದರ್ಪಚೂರ್ಣ*

ವಂಗ ಸಾಹಿತ್ಯದಲ್ಲಿ ಸುಪ್ರಸಿದ್ಧ ಕಾದಂಬರಿಕಾರರೆನಿಸಿದ ಶರತ್‌ಚ್ಚಂದ್ರರ ಮೂಲ ಕಥೆಯ ಕನ್ನಡ ಅನುವಾದವಿದು. ಮೊದಲು ಅದೇ ಗ್ರಂಥಕರ್ತರ 'ಪ್ರೇಮಯೋಗಿನಿ'ಯನ್ನು ಕನ್ನಡಕ್ಕಿಳಿಸಿದ ಕತೆಗಾರರಾದ ಬೆಂಗಳೂರಿನ ಶ್ರೀ. ಎ. ಕೆ. ನಾಗರಾಜರಾಯರು ಇದನ್ನು ಅನುವಾದಿಸಿದ್ದಾರೆ. ಭಾರತೀಯ ಸಾಹಿತ್ಯಕಾರರ ಸಾಲಿನಲ್ಲಿ ಪ್ರಥಮ ಪಂಕ್ತಿಗೆ ಸೇರಿದ ಡಾ। ಶರಚ್ಚಂದ್ರ ಬಾಬುಗಳ ರಸವತ್ತಾದ ಕಾದಂಬರಿಗಳನ್ನು ಹೀಗೆ ಕನ್ನಡಕ್ಕೆ ಇಳಿಸುವ ಈ ಲೇಖಕರು ಕನ್ನಡ ಸಾಹಿತ್ಯಕ್ಕೆ ಉತ್ತಮವಾದ ಪ್ರಶಂಸನೀಯವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

'ದರ್ಪಚೂರ್ಣ'ವೆಂಬ ಕಥೆಯ ಹೆಸರು ಮೊದಲು ನಮಗೆ ಅಷ್ಟೊಂದು ವಿಶೇಷ ಆಕರ್ಷಕವಾಗಿ ತೋರುವುದಿಲ್ಲ. ಆದರೆ, ತನ್ನ ಮಾತಾಪಿತೃಗಳ ಐಶ್ವರ್ಯದ, ತನ್ನ ಸ್ವಾತಂತ್ರ್ಯ ನಡತೆಯ ದರ್ಪದ ಒಬ್ಬ ಗೃಹಿಣಿಯು, ಬಡತನದಿಂದ ಜೀವಿಸುವ ತನ್ನ ಪತಿಯನ್ನು ಹಲವಾರು ಸಂದರ್ಭಗಳಲ್ಲಿ ಕೆಣಕಿ, ನಿಂದಿಸಿ, ಕೊನೆಗೆ ಹೇಗೆ ಪತಿಯ ದುಃಖದಲ್ಲಿ ಸತಿ ಸಹಭಾಗಿಯಾಗಬೇಕೆಂದು ತಿಳಕೊಂಡಳು, ಹೇಗೆ ಅವಳಲ್ಲಿ ಪರ್ವತದಂತೆ ನೆಲಸಿದ್ದ ದರ್ಪವು ಚೂರ್ಣಚೂರ್ಣವಾಗಿ ಛಿದ್ರಿತು—ಎಂಬುದನ್ನು ಓದಿ ತಿಳಿದಾಗ ಕಥೆಯ ಹೆಸರಿನ ಸೊಗಸನ್ನು ಬಹಳ ಮೆಚ್ಚುವಂತಾಗುತ್ತದೆ.

ನರೇಂದ್ರನು ಒಬ್ಬ ಸಾಹಿತಿ. ಕತೆಕವಿತೆ ಬರೆಯುವುದು ಅವನ ಜೀವನ. ಆದರೆ ಸಂಪಾದನೆ ಬಹಳ ಕಡಿಮೆಯಾಗಿತ್ತು. ಜೀವನವು ಬಹಳ ಕಷ್ಟದಿಂದ ಸಾಗಬೇಕಿತ್ತು. ಆತನ ಹೆಂಡತಿ ಇಂದುಮತಿಯು ದೊಡ್ಡವರ ಮಗಳು, ಆಕೆಯ ತಂದೆತಾಯಿಗಳು ನರೇಂದ್ರನ ಸ್ಥಿತಿಗತಿ ನೋಡಿ ಆತನಿಗೆ ಮಗಳನ್ನು ಕೊಡಲು ಅಷ್ಟೊಂದು ಉತ್ಸಾಹವಾದದಿದ್ದರೂ, ಮಗಳ ಒಮ್ಮೆಯಿಂದಲೇ ಆಕೆಯನ್ನು ನರೇಂದ್ರನಿಗೆ ಕೊಟ್ಟಿದ್ದರು. ಆದರೆ ಈಗ ಅವಳೇ ಗಂಡನು ಬಡವನೆಂದು ಅವನನ್ನು ಹಂಗಿಸುವಳು. ನರೇಂದ್ರನು ಎಲ್ಲವನ್ನೂ ಬಹಳ ತಾಳ್ಮೆಯಿಂದ ಸಹಿಸುವನು. ನರೇಂದ್ರನ ಚಿಕ್ಕಪ್ಪನ ಮಗಳು ವಿಮಲೆಯು ನರೇಂದ್ರನಿಗೆ ನೆರವಾಗುವಳು. ಅತ್ತಿಗೆಗೆ ಅನೇಕ ಸಲ ಬುದ್ಧಿ ಹೇಳುವಳು. ಆದರೆ ಅವಳು ತನ್ನ ದೊಡ್ಡಸ್ತಿಕೆಯ ದರ್ಪವನ್ನು ಬಿಡುವುದಿಲ್ಲ.

ನರೇಂದ್ರನು ಬೇನೆ ಬೀಳುವನು. ಇಂದುಮತಿ ಗಂಡನನ್ನು ಬಿಟ್ಟು ತೌರೂರಿಗೆ ಹೋಗಿದ್ದಳು. ಆಗ ವಿಮಲೆ ಉಪಚರಿಸುವಳು. ತೌರೂರಿಂದ ಬಂದ ಬಳಿಕ ಇಂದುಮತಿಯು ತನಗೆ, ಬೇನೆ ಬಿದ್ದುದನ್ನು ತಿಳಿಸದ್ದ ಸಲುವಾಗಿಯೂ ಆತನನ್ನು ಹಂಗಿಸುವಳು. ಒಟ್ಟು ಗಂಡನು ತನ್ನ ದೊಡ್ಡಸ್ತಿಕೆಗೆ ಸರಿಯಾಗುವಷ್ಟು ಯೋಗ್ಯನಲ್ಲವೆಂದು ಅವಳ ವರ್ತನೆಯಿಂದ ತಿಳಿಯುವುದು. ಎಲ್ಲವನ್ನೂ ನರೇಂದ್ರನು ತಾಳ್ಮೆಯಿಂದ ಸಹಿಸುವನು.

ಕೊನೆಗೆ ಇಂದುಮತಿ ಗಂಡನೊಡನೆ ಕೋಪಿಸಿ ತೌರುಮನೆಗೆ ಹೋಗುತ್ತಾಳೆ. ಇತ್ತ ಸಾಲಗಾರರು ನರೇಂದ್ರನನ್ನು ಸೆರೆಮನೆಗೆ ಸೆಳೆಯುವರು. ಆಗ ವಿಮಲೆಯೂ ಆಕೆಯ ಗಂಡನೂ ನೆರವಾಗಿ ಅವನನ್ನು ಸೆರೆಮನೆಯ ವಾಸದಿಂದ ಬಿಡಿಸುವರು. ತೌರುಮನೆಯಲ್ಲಿ ಬಹಳ ದಿನವಿರುವುದು ಸರಿಯೆನಿಸದೆ ವಿಮಲೆ ಗಂಡನಲ್ಲಿಗೆ ಬರುತ್ತಾಳೆ. ಗಂಡನಿಗೊದಗಿದ ಕಷ್ಟ ಜೀವನವನ್ನು ಕೇಳಿ ಅವಳ ದರ್ಪವು ಚೂರ್ಣವಾಗುತ್ತದೆ. ತನ್ನ ಮೈಮೇಲಿರುವ ಆಭರಣ ರಾಶಿಯನ್ನು ವಿಮಲೆಗೆ ಒಪ್ಪಿಸಿ ಅದರಿಂದ ಪತಿಯ ಸಲುವಾಗಿ ತೆತ್ತ ಹಣವನ್ನು ಸಲ್ಲಿಸುತ್ತಾಳೆ. ಮತ್ತೆ ತನ್ನ ಹಿಂದಿನ ಆಚರಣೆಗಾಗಿ ಬಹಳ ಪಶ್ಚಾತ್ತಾಪಪಡುತ್ತಾಳೆ. ಸತೀಧರ್ಮವು ಕೊನೆಗೆ ಅವಳಲ್ಲಿ ಪರ್ವತದಂತೆ ತುಂಬಿದ್ದ ದರ್ಪವನ್ನು ಚೂರ್ಣಚೂರ್ಣವಾಗಿ ಮಾಡುತ್ತದೆ.

ನರೇಂದ್ರ, ಇಂದುಮತಿ, ವಿಮಲೆ, ಇವರು ಮೂವರಲ್ಲಿ ಮೂರು ವಿಧದ ಜೀವನ ಚಿತ್ರವು ತೋರುತ್ತದೆ. ನರೇಂದ್ರ ಉತ್ತಮ ಕ್ಷಮಾಶೀಲ, ಪತ್ನಿಯ ದೌರ್ಬಲ್ಯವನ್ನೂ ತನ್ನ ದೌರ್ಬಲ್ಯವನ್ನೂ ಸಮವಾಗಿ ತಿಳಿದ ವಿಚಾರವಂತ. ಇಂದುಮತಿ ಸುಖ ಮಾತ್ರ ಬಯಸುವ, ದೊಡ್ಡಸ್ತಿಕೆಯ ದರ್ಪವುಳ್ಳ, ಸ್ವಾತಂತ್ರ್ಯ ವಿಚಾರದ ಅಧುನಿಕ ಪತ್ನಿ, ವಿಮಲೆ ಉತ್ತಮ ಗುಣದ, ಪ್ರೇಮಸ್ವಭಾವದ ಗೃಹಿಣಿ—ಸಮಾಜದಲ್ಲಿ ಈ ತರದ ಮೂರು ಜೀವಿಗಳು ಒಂದೆಡೆ ಸೇರಿದಾಗ ಒದಗುವ ಘಟನೆಗಳ ಉತ್ತಮವಾದ ಚಿತ್ರವಿದು. ಈ ಕಥೆ

ಇದರಲ್ಲಿ ವಿಶೇಷ ಮನೋಹರವಾದ ಘಟನೆಗಳೇನೂ ಇಲ್ಲವಾದರೂ ಅಲ್ಲಲ್ಲಿ ಬರುವ ಸಂಭಾಷಣೆಗಳು ವಿಚಾರವನ್ನು ಕೆರಳಿಸುತ್ತವೆ. ಸಂಭಾಷಣೆಗಳಿಂದಲೇ ಕತೆಗಾರರು ಪಾತ್ರಪರಿಚಯವನ್ನು ಬಹಳ ಚನ್ನಾಗಿ ಮಾಡಿದ್ದಾರೆ.

ಶರಚ್ಚಂದ್ರರ ಸಾಹಿತ್ಯವು ಕನ್ನಡದಲ್ಲಿ ವಿಪುಲವಾಗಿ, ಪೂರ್ಣವಾಗಿ ಬರಬೇಕು. ಇಂತಹ ಉದ್ಯಮಕ್ಕೆ ಕೈ ಹಚ್ಚಿದ ಶ್ರೀ. ನಾಗರಾಜ ರಾಯರ ಯತ್ನವನ್ನು ಕನ್ನಡಿಗರು ವಿಶೇಷ ಪ್ರೋತ್ಸಾಹಿಸುವರೆಂದು ನಾವು ನಂಬುತ್ತೇವೆ.

—ಕೆಯ್ಯಾರ.

*ದರ್ಪಚೂರ್ಣ: ಮೂಲ ಕಾದಂಬರಿಕಾರರು: ಡಾ. ಶರಚ್ಚಂದ್ರ ಚಟರ್ಜಿ,—ಅನುವಾದಕರು: ಶ್ರೀ. ಎ. ಕೆ. ನಾಗರಾಜರಾವ್, 128, ಸರಸ್ವತೀ ರಾಜ ಕೊಠಡಿ, ಬೆಂಗಳೂರು ನಗರ, ಕ್ರೌನ್ ... ಪುಟಗಳು ... ಎಂಟಾಣೆ.

ಅಜೀರ್ಣ ಅರುಚಿಗಳ ಬಾಧೆಯಿಂದ ಅವನ ಬುದ್ಧಿ ಮತ್ತು ಶರೀರಗಳು ಬಾಧ್ಯ ಹೊಂದಿದ್ದವು - ಹಾಗಾಗಿಯೇ ಆತನು ಅಷ್ಟು ಹುಷಾರಾಗಿರಲಿಲ್ಲ!

ಅಂತರಂಗ ನೈರ್ಮಲ್ಯವೇ ಆತನನ್ನು ಉತ್ತಮ ವಿದ್ಯಾವಂತನನ್ನಾಗಿ ಮಾಡಿತು!

ಅಜೀರ್ಣ ಅರುಚಿ ಮತ್ತು ತಲೆನೋವು ಇನ್ನು ಮುಂದೆ ಆತನನ್ನು ಬಾಧಿಸಲಾರವು ಏಕೆಂದರೆ ಈಗ ಆತನ ಒಳಗೂ ನಿರ್ಮಲತೆಯುಂಟಾಗಿದೆ.

ನಿಮ್ಮ ಹೊಟ್ಟೆಯೊಳಗಣ ಅಶುದ್ಧ ವಸ್ತುಗಳಿದ್ದರೆ ನೀವು ಜಯಶೀಲರಾಗಿರಲೂ ಸಂತುಷ್ಟರಾಗಿರಲೂ ಸಾಧ್ಯವಿಲ್ಲ. ಆಗಾಗ ಅಜೀರ್ಣ ಅರುಚಿ ತಲೆನೋವುಗಳು ನಿಮ್ಮನ್ನು ಯಾವ ಕೆಲಸದಲ್ಲಿಯೂ ನಿಷ್ಪ್ರಯೋಜನಕರವನ್ನಾಗಿ ಮಾಡುವವು. ಮೆದುಳು ಮತ್ತು ಶರೀರದೊಳ ಭಾಗವನ್ನು ನೀವು ಶುಚಿಯಾಗಿಡಬೇಕು. ದಿನನಿತ್ಯ ತಂಪಾದ ಅಂಡ್ರೂಸ್ ಲಿವರ್ ಸಾಲ್ಟಿನ ಒಂದು ಪಾನೀಯ ತೆಗೆದುಕೊಳ್ಳುವುದರಿಂದ ನೀವು ಸಂಪೂರ್ಣ ಆನಂದ ಪಡೆಯುವಿರಿ. ಅದು ಬಾಯಿ ಮತ್ತು ನಾಲಗೆಗಳನ್ನು ಶುಚಿಗೊಳಿಸುತ್ತದೆ. ಹೊಟ್ಟೆಯನ್ನು ಕ್ರಮದಲ್ಲಿರಿಸುತ್ತದೆ. ಹೊಟ್ಟೆಯ ಸರ್ವಾಂಗಗಳನ್ನು ಶುದ್ಧಿಗೊಳಿಸುತ್ತದೆ. ಹೊಟ್ಟೆಗೆ ತಂಪನ್ನುಂಟುಮಾಡಿ ರಕ್ತವನ್ನು ಶುದ್ಧಿಗೊಳಿಸುತ್ತದೆ.

ಹೊಟ್ಟೆಯೊಳಗಡೆಯ ನೈರ್ಮಲ್ಯಕ್ಕೆ ದಿನನಿತ್ಯ ಅಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸಿರಿ

ANDREWS LIVER SALT

ಆರೋಗ್ಯಕರ ಪಾನೀಯ—ಶಕ್ತಿವರ್ಧಕವಾದ ಔಷಧಿ—ಶುಚಿಕರ—ತಂಪುಕರ—ಆನಂದಕರ—ಆಮೋದಕರ

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2¼% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public.

Apply for particulars

K. R. GURU, *Managing Director*.

ಸಾದರ-ಸ್ವೀಕಾರ

ದ. ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್—ಉಡುಪಿ. ಇದರ ಆಡಳಿತ ಮಂಡಳಿಯು 35ನೇ ವರ್ಷದ ರಿಪೋರ್ಟು ತಾ. 31-12-40ಕ್ಕೆ ಅಂತ್ಯವಾಗುವ ಒಂದು ವರ್ಷದ ಲಾಭ ನಷ್ಟದ ಲೆಕ್ಕ ಮತ್ತು ಸಾಲ ಮೂಳ್ಳಗಳ ತಖ್ತೆ—ಇದನ್ನು ಅತ್ಯಾದರದಿಂದ ಸ್ವೀಕರಿಸಿದ್ದೇವೆ.

ನಮ್ಮ ಜಿಲ್ಲೆಯಲ್ಲಿ ಪ್ರಾಮುಖ್ಯ ಬ್ಯಾಂಕುಗಳಲ್ಲಿ ಒಂದಾಗಿದ್ದು, ಇಂದಿಗೆ 35 ವರ್ಷಗಳ ಕಾರ್ಯಕಲಾಪಗಳನ್ನು ಯಥಾಯೋಗ್ಯವಾಗಿ ಮುನ್ನಡೆಸಿ, ಈಗ 36ನೇ ವರ್ಷಕ್ಕೆ ಕಾಲಿಟ್ಟಿದೆ. ಕಳೆದ 1940ನೇ ವರ್ಷವು ಈಗ ನಡೆಯುವ ಮಹಾಯುದ್ಧದ ದೆಸೆಯಿಂದ ಮತ್ತು ಇನ್ನಿತರ ಕಾರಣಗಳಿಂದ ವ್ಯಾಪಾರ ವಹಿವಾಟುಗಳಿಗೆ ಅಷ್ಟೊಂದು ಪ್ರಶಸ್ತ ಪರಿಣಾಮಕಾರಿಯಾಗಿಲ್ಲದಿದ್ದರೂ ಅಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕೂಡಾ ಜಾಗ್ರತೆಯಿಂದ ಮುನ್ನಡೆದ ಸಂಗತಿಯು ಈ ಕೆಳಗಿನ ಅಂಕೆಸಂಖ್ಯೆಗಳಿಂದ ಕಾಣಬರುತ್ತದೆ

	ತಾ. 31-12-39ರಲ್ಲಿ	31-12-40ರಲ್ಲಿ
ಪಾಲುಭಂಡವಾಳ	380715	435060
ಕ್ಷೇಮನಿಧಿಗಳು	390000	390000
ಠೇವಣಾತಿಗಳು	2166196	2472399
ಏಟ್ ಮುನಾಫೆ	27342	30077
ಕೈಯಲ್ಲಿದ್ದ ಶಿಲ್ಕು	254186	635300

ಭದ್ರಾವತಿಯಲ್ಲಿ ಒಂದು ಹೊಸ ಶಾಖೆಯನ್ನು ಏರ್ಪಡಿಸಿದುದು ಆನಂದದಾಯಕವಾದ ಸಂಗತಿ. ಎಲ್ಲಕ್ಕೂ ಮಿಗಿಲಾಗಿ ಆಡಳಿತ ಮೆಂಬರರಿಂದ ಬರತಕ್ಕ ಸಾಲಗಳು ಏನೂ ಇರುವುದಿಲ್ಲ. ಇದು ಆದರ್ಶನೀಯ ವಿಚಾರವಾಗಿದೆ

ಈ ಬ್ಯಾಂಕಿನ ಕಾರ್ಯದಕ್ಷತೆ ವಿಚಕ್ಷಣತೆ, ಮುಂಜಾಗ್ರತೆ ಇವುಗಳಿಂದಾಗಿ ಇದು ಹೆಸರುವಾಸಿಯಾಗಿದೆ. ಚಲಾವಣೆಯ ಭಂಡವಾಳವು ದಿನದಿಂದ ದಿನಕ್ಕೆ ಏರುತ್ತಲಿರುವುದು ಸಂತೋಷಾಸ್ಪದದ ಸಂಗತಿಯಾಗಿದೆ. ಬ್ಯಾಂಕು ಸಮಯ ಹೋದಂತೆ ಇಂದಿನ ವರೆಗೆ ಮುನ್ನಡೆದಂತೆ ಇನ್ನೂ ಪ್ರಗತಿಯನ್ನು ಹೊಂದಲೆಂದೇ ನಾವು ಬಯಸುತ್ತೇವೆ.

ಶ್ರೀ ಪ್ಯಾರೆಲಾಲರಿಗೆ ೬ ತಿಂಗಳ ಸಾದಾ ಸಜೆ

ಗಾಂಧೀಜಿಯವರ ಕಾರ್ಯದರ್ಶಿಯವರಾದ ಶ್ರೀ ಪ್ಯಾರೇಲಾಲರು ಪುನಃ ಸತ್ಯಾಗ್ರಹ ಹೂಡಿದರು. ಸರಕಾರದವರು ಇವರನ್ನು ಕೈದುಮಾಡಿ ತಾ ೯ರಲ್ಲಿ ವಾರ್ಧಾದಲ್ಲಿ ಇವರ ವಿಚಾರಣೆಯನ್ನು ನಡೆಸಿದರು. ಇವರಿಗೆ ೬ ತಿಂಗಳ ಸಾದಾ ಸಜೆಯನ್ನು ವಿಧಿಸಲಾಗಿದೆ ಮತ್ತು 'ಬಿ' ತರಗತಿಯನ್ನು ಕೊಡಲಾಗಿದೆ.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R. I. A. 421/1941
O S. No. 85/1941

ಮಂಜೇಶ್ವರ ಶ್ರೀ ಮದನಂತೇಶ್ವರ ದೇವರ ಭಂಡಾರ ಇವರ ಎಕ್ಸಿಕ್ಯೂಟಿವ್ ಆಫೀಸರ್ ಕೆ. ಪದ್ಮನಾಭ ಕಮ್ತಿ . . . . ವಾದಿ.

ಮತ್ತು

ಸುಬ್ರಾಯ ಅಚಾರಿ ಸಹ . ಪ್ರತಿವಾದಿರು.

ವಾದಿ ಭಂಡಾರಕ್ಕೆ ತಾ. 12—10—1916ರಲ್ಲಿ 1, 2ನೇ ಪ್ರತಿವಾದಿ ವಗೈರರು ಬರೆಕೊಟ್ಟ ರಿಜಿಸ್ಟ್ರಿ ವಾಯಿದೆ ಗೇಣಿ ಚೀಟು ಪ್ರಕಾರ ವಾದಿ ಭಂಡಾರದಿಂದ, ಭಜನಾ ಮಂದಿರ ಕಟ್ಟಿಸುವ ಬಗೆ ಪಡೆದ ಸ್ಥಳದ ಗೇಣಿ ಬಾಕಿ ಬಗ್ಗೂ ಆಸ್ತಿ ಸ್ವಾಧೀನತೆ ಬಗ್ಗೆ ಕೂಡಾ ಮೇಲ್ಕಂಡ ಕೋರ್ಟಿನಲ್ಲಿ ವಾದಿಯು ವ್ಯಾಜ್ಯ ದಾಖಲುಮಾಡಿ ಸದ್ರಿ ವ್ಯಾಜ್ಯವು ತಾರೀಕು 3—4—1941ಕ್ಕೆ ಪ್ರತಿವಾದಿದ ಹಾಜ್ರಾತಿ ಬಗ್ಗೆ ಇಟ್ಟಿರುವದಲ್ಲದೆ ಸದ್ರಿ ವ್ಯಾಜ್ಯದಲ್ಲಿ ಸಿ ಪಿ. ಕೋಡಿನ 1ನೇ ಓರ್ಡರ 8ನೇ ರೂಲ ಪ್ರಕಾರ R. I. A. 421/1941ನೇಗೆ ಪ್ರತ್ಯೇಕ ಅರ್ಜಿ ಕೂಡಾ ವಾದಿಯು ದಾಖಲು ಮಾಡಿರುವುದರಿಂದ ಆ ಸಂಗತಿಯಲ್ಲಿ ಆಕ್ಷೇಪಯಿದ್ದವರು ಈ ಕೋರ್ಟಿನಲ್ಲಿ ತಾ. 3—4—'41ರಲ್ಲಿ ವ್ಯಾಜ್ಯದ ತಪ್ಪಿ ವ್ಯಾದೆಗೂ ಯಾ ತಾ 5—4—1941ರಲ್ಲು ಅರ್ಜಿ ತಪ್ಪಿ ವ್ಯಾದೆಗೂ ಹಾಜ್ರಾಗಿ ತಮ್ಮ ಆಕ್ಷೇಪಗಳನ್ನು ಹೇಳತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ವ್ಯಾದೆಗೆ ಕೋರ್ಟಿನವರಿಗೆ ಯುಕ್ತಕಂಡ ರೀತಿಯಲ್ಲಿ ವ್ಯಾಜ್ಯವು ತೀರ್ಮಾನಿಸಲ್ಪಡುವದು. ಎಂತ ಕೋರ್ಟು ಹುಕುಂ ಪ್ರಕಾರ ಸರ್ವಜನರಿಗೂ ಈ ಮೂಲಕ ತಿಳಿಸೋಣಾಗಿಯದೆ.

ಕಾಸರಗೋಡು 21—3—'41 } **K. P. ANANTHA RAO,** Advocate for Plaintiff

In the Courtof District Judge of South Kanara.

O. P. No. 26/1941

In the matter of minors K. Balakrishna Prabhu, & K. Leelavati Bai

Between

1. K. Sunandi Bai, 2. K. P Narayana Prabhu— *Petitioners.*

and

1. K. Srinivasa Prabhu, 2 K. Narasimha Prabhu, 3. K. Vittal Prabhu, 4. K. Gopal Prabhu— *Respondents*

Whereas the abovenamed Petitioners have made application to the above Court praying that 1st Petitioner or Sri G Upendra Prabhu Vakil Mangalore who is the maternal uncle of 1st Petitioner or any other fit and proper person may be appointed guardian of the property of the above minors, it is hereby made known that the above application has been posted to 18-6-1941 at 10-30 A M in the above Court. Those who object to the above petition may appear in person or by Vakil on that day and oppose the petition

Mangalore } 25—3—41 } **M. Keshava Pai,** Counsel for Petrs

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S No. 7/1941

ರಾಮಕೃಷ್ಣ ಆಚಾರ್ಯ —ವಾದಿ

ಮತ್ತು

ನಾರಾಯಣ ಆಚಾರ್ಯ—ಕುಕ್ಕುಂದೂರು ನರಸಿಂಹ ಆಚಾರ್ಯರ ಮಗ—is a Shantigar in the Manalr temple, Quilon, Cochin State. ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ _

ನಮ್ಮ ಕುಟುಂಬದೊಳಗೆ ತಾ 6-3-1933ರಲ್ಲು ರಿಜಿಸ್ಟ್ರಿ ಆದ ವಿಭಾಗ ಪತ್ರದ ಶರ್ತಗಳ ಪ್ರಕಾರ ನಿಮ್ಮ ಹಿಸೆಗೆ ಬಂದ ಆಸ್ತಿ ಜವಾಬ್ದಾರಿಯಿಂದ ನಿಮ್ಮ ತಾಯಿ ನಾಗವೇಣಿ ಅಮ್ಮಗೆ ಸಲ್ಲತಕ್ಕ ಅಶನಾರ್ಥದ ಸ್ಥಿತಿ ಪ್ರಮಾಣ ಸಂದರ ಅಂತ್ಯದ ವರೆಗಿನ ಅಶನಾರ್ಥವನ್ನು ವಸೂಲು ಮಾಡುವ ಹಕ್ಕನ್ನು ಟ್ರಾನ್ಸಫರ್ ಪಡಕೊಂಡ ನಿಮ್ಮ ತಮ್ಮನಾದ ವಾದಿಯು ಸದ್ರಿ ಆಯಿವೇಜು ವಸೂಲಿಯ ಬಗ್ಗೆ ನಿಮ್ಮ ಮೇಲೆ ದಾಖಲು ಮಾಡಿದ ಈ ದಾವೆಯು ತಾರೀಕು 4—6—1941ಕ್ಕೆ ಇಟ್ಟಿರುವುದರಿಂದ ಈ ದಾವೆಯ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ಅವುಗಳನ್ನು ಆ ದಿನ ಈ ಕೋರ್ಟು ಮುಂದೆ ಹಾಜರಾಗಿ ತಿಳಿಸಿಕೊಳ್ಳತಕ್ಕದ್ದು ತಪ್ಪಿದರೆ ಸದ್ರಿ ದಾವೆಯು ನಿಮ್ಮ ಪರೋಕ್ಷದಲ್ಲಿ ತೀರ್ಮಾನಿಸೋಣಾಗುವುದು. ತಿಳಿದಿರಲಿ.

(By order of the Court)

ಮೊಕ್ಕಾಂ ಕಾರ್ಕಳ ತಾ 21-3-1941 } **P. V Upadhyaya** Vakil for plaintiff

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

GONO KILLER ORIGINAL

ಡಾ|| ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು ಗೊನೊಕಿಲರ್ ಎಂಬ ಸೀಲು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರಿ, ಅದೇ ರೋಗಗಳಿಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹನಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು. ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ 3—0—0 (ವಿ ಪಿ ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer, **Dr. D. N. JASANI,** Vithalbhai Patel Road, BOMBAY 4

Madras Agent: **Appah & Co, China Bazar Madras**

ಪುಸ್ತಕಾವಲೋಕನ

ದರ್ಪಚೂರ್ಣ*

ವಂಗ ಸಾಹಿತ್ಯದಲ್ಲಿ ಸುಪ್ರಸಿದ್ಧ ಕಾಂಬರಿಕಾರರೆನಿಸಿದ ಶರತ್ಚಂದ್ರರ ಸೂಲ ಕಥೆಯ ಕನ್ನಡ ಅನುವಾದವಿ. ಮೊದಲು ಅದೇ ಗ್ರಂಥಕರ್ತರ ಶ್ರೀಮಯೋಗಿನಿ'ಯನ್ನು ಕನ್ನಡಕ್ಕಿಳಿಸಿ ಕತೆಗಾರರಾದ ಬೆಂಗಳೂರಿನ ಶ್ರೀ. . ಕೆ. ನಾಗರಾಜರಾಯರು ಇದನ್ನು ನುವಾದಿಸಿದ್ದಾರೆ. ಭಾರತೀಯ ಸಾಹಿಕಾರರ ಸಾಲಿನಲ್ಲಿ ಪ್ರಥಮ ಪಂಕ್ತಿಗೆ ರಿದ ಡಾ। ಶರಚ್ಚಂದ್ರ ಬಾಬುಗಳ ಸವತ್ತಾದ ಕಾದಂಬರಿಗಳನ್ನು ಹೀಗೆ ನ್ನಡಕ್ಕೆ ಇಳಿಸುವ ಈ ಲೇಖಕರು ನ್ನಡ ಸಾಹಿತ್ಯಕ್ಕೆ ಉತ್ತಮವಾದ ಪ್ರಶಂನೀಯವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

'ದರ್ಪಚೂರ್ಣ'ವೆಂಬ ಕಥೆಯ ಹೆಸ ಮೊದಲು ನಮಗೆ ಅಷ್ಟೊಂದು ಶೇಷ ಆಕರ್ಷಕವಾಗಿ ತೋರುವು ಲ್ಲ. ಆದರೆ, ತನ್ನ ಮಾತಾಪಿತೃಗಳ ಶ್ವರ್ಯದ, ತನ್ನ ಸ್ವಾತಂತ್ರ್ಯ ಸಡತೆಯ ರ್ವದ ಒಬ್ಬ ಗೃಹಿಣಿಯು, ಬಡತನ ಂದ ಜೀವಿಸುವ ತನ್ನ ಪತಿಯ ನ್ನು ಹಲವಾರು ಸಂದರ್ಭಗಳಲ್ಲಿ ಕೆಣ, ನಿಂದಿಸಿ, ಕೊನೆಗೆ ಹೇಗೆ ಪತಿಯ ಃಖದಲ್ಲಿ ಸತಿ ಸಹಭಾಗಿಯಾಗಬೇಂದು ತಿಳಕೊಂಡಳು, ಹೇಗೆ ಅವಳಲ್ಲಿ ರ್ವತದಂತೆ ನೆಲಸಿದ್ದ ದರ್ಪವು ಚೂರ್ಣ ೂರ್ಣವಾಗಿ ಬಿಟ್ಟಿತು—ಎಂಬುದನ್ನು ದಿ ತಿಳಿದಾಗ ಕಥೆಯ ಹೆಸರಿನ ಸೊಗನ್ನು ಬಹಳ ಮೆಚ್ಚುವಂತಾಗುತ್ತದೆ.

ನರೇಂದ್ರನು ಒಬ್ಬ ಸಾಹಿತಿ. ಕತೆಕವಿ ಬರೆಯುವುದು ಅವನ ಜೀವನ. ಆದರೆ ಪಾದನೆ ಬಹಳ ಕಡಿಮೆಯಾಗಿತ್ತು. ಜೀವನವು ಬಹಳ ಕಷ್ಟದಿಂದ ಸಾಗಬೇಕ್ತು. ಆತನ ಹೆಂಡತಿ ಇಂದುಮತಿಯು ಿಮತ್ತ ಪರ ಮಗಳು, ಆಕೆಯ ತಂದೆತಾಯಿಗಳು ನರೇಂದ್ರನ ಸ್ಥಿತಿಗತಿ ನೋಡಿ ತನಿಗೆ ಣಗಳನ್ನು ಕೊಡಲು ಅಷ್ಟೊಂ ಉತ್ಸಾಹಪಡದಿದ್ದರೂ, ಮಗಳ ಮೋದಿನಿಂದಲೇ ಆಕೆಯನ್ನು ನರೇಂದ್ರಗೆ ಕೊಟ್ಟಿದ್ದರು. ಆದರೆ ಈಗ ಅವಳೇ ಂಡನು ಬಡವನೆಂದು ಅವನನ್ನು ಹಂಗಿಸುವಳು. ನರೇಂದ್ರನು ಎಲ್ಲವನ್ನೂ ಬಹ ತಾಳ್ಮೆಯಿಂದ ಸಹಿಸುವನು. ನರೇಂದ್ರ ಚಿಕ್ಕಪ್ಪನ ಮಗಳು ವಿಮಲೆಯು ರೇಂದ್ರನಿಗೆ ನೆರವಾಗುವಳು. ಅತ್ತಿಗೆಗೆ ನೇಕ ಸಲ ಬುದ್ಧಿ ಹೇಳುವಳು. ಆದರೆ ವಳು ತನ್ನ ದೊಡ್ಡಸ್ತಿಕೆಯ ದರ್ಪವನ್ನು ಡುವುದಿಲ್ಲ.

ನರೇಂದ್ರನು ಬೇನೆ ಬೀಳುವನು. ಇಂದುಮತಿ ಗಂಡನನ್ನು ಬಿಟ್ಟು ತೌರೂರಿಗೆ ಹೋಗಿದ್ದಳು. ಆಗ ವಿಮಲೆ ಉಪಚರಿಸುವಳು. ತೌರೂರಿಂದ ಬಂದ ಬಳಿಕ ಇಂದುಮತಿಯು ತನಗೆ, ಬೇನೆ ಬಿದ್ದುದನ್ನು ತಿಳಿಸಲ್ಲದ ಸಲುವಾಗಿಯೂ ಆತನನ್ನು ಹಂಗಿಸುವಳು. ಒಟ್ಟು ಗಂಡನು ತನ್ನ ದೊಡ್ಡಸ್ತಿಕೆಗೆ ಸರಿಯಾಗುವಷ್ಟು ಯೋಗ್ಯನಲ್ಲವೆಂದು ಅವಳ ವರ್ತನೆಯಿಂದ ತಿಳಿಯುವುದು. ಎಲ್ಲವನ್ನೂ ನರೇಂದ್ರನು ತಾಳ್ಮೆಯಿಂದ ಸಹಿಸುವನು.

ಕೊನೆಗೆ ಇಂದುಮತಿ ಗಂಡನೊಡನೆ ಕೋಪಿಸಿ ತೌರುಮನೆಗೆ ಹೋಗುತ್ತಾಳೆ. ಇತ್ತ ಸಾಲಗಾರರು ನರೇಂದ್ರನನ್ನು ಸೆರೆಮನೆಗೆ ಸೆಳೆಯುವರು. ಆಗ ವಿಮಲೆಯೂ ಆಕೆಯ ಗಂಡನೂ ನೆರವಾಗಿ ಅವನನ್ನು ಸೆರೆಮನೆಯ ವಾಸದಿಂದ ಬಿಡಿಸುವರು. ತೌರುಮನೆಯಲ್ಲಿ ಬಹಳ ದಿನವಿರುವುದು ಸರಿಯೆನಿಸದೆ ವಿಮಲೆ ಗಂಡನಲ್ಲಿಗೆ ಬರುತ್ತಾಳೆ. ಗಂಡನಿಗೊದಗಿದ ಕಷ್ಟ ಜೀವನವನ್ನು ಕೇಳಿ ಅವಳ ದರ್ಪವು ಚೂರ್ಣವಾಗುತ್ತದೆ. ತನ್ನ ಮೈಮೇಲಿರುವ ಆಭರಣ ರಾಶಿಯನ್ನು ವಿಮಲೆಗೆ ಒಪ್ಪಿಸಿ ಅದರಿಂದ ಪತಿಯ ಸಲುವಾಗಿ ತೆತ್ತ ಹಣವನ್ನು ಸಲ್ಲಿಸುತ್ತಾಳೆ. ಮತ್ತೆ ತನ್ನ ಹಿಂದಿನ ಆಚರಣೆಗಾಗಿ ಬಹಳ ಪಶ್ಚಾತ್ತಾಪಪಡುತ್ತಾಳೆ. ಸತೀಧರ್ಮವು ಕೊನೆಗೆ ಅವಳಲ್ಲಿ ಪರ್ವತದಂತೆ ತುಂಬಿದ್ದ ದರ್ಪವನ್ನು ಚೂರ್ಣಚೂರ್ಣವಾಗಿ ಮಾಡುತ್ತದೆ.

ನರೇಂದ್ರ, ಇಂದುಮತಿ, ವಿಮಲೆ, ಇವರು ಮೂವರಲ್ಲಿ ಮೂರು ವಿಧದ ಜೀವನ ಚಿತ್ರವು ತೋರುತ್ತದೆ. ನರೇಂದ್ರ ಉತ್ತಮ ಕ್ಷಮಾಶೀಲ. ಪತ್ನಿಯ ದೌರ್ಬಲ್ಯವನ್ನೂ ತನ್ನ ದೌರ್ಬಲ್ಯವನ್ನೂ ಸಮವಾಗಿ ತಿಳಿದ ವಿಚಾರವಂತ. ಇಂದುಮತಿ ಸುಖ ಮಾತ್ರ ಬಯಸುವ, ದೊಡ್ಡಸ್ತಿಕೆಯ ದರ್ಪವುಳ್ಳ, ಸ್ವಾತಂತ್ರ್ಯ ವಿಚಾರದ ಆಧುನಿಕ ಪತ್ನಿ, ವಿಮಲೆ ಉತ್ತಮ ಗುಣದ, ಪ್ರೇಮಸ್ವಭಾವದ ಗೃಹಿಣಿ—ಸಮಾಜದಲ್ಲಿ ಈ ತರದ ಮೂರು ಜೀವಿಗಳು ಒಂದೆಡೆ ಸೇರಿದಾಗ ಒದಗುವ ಘಟನೆಗಳ ಉತ್ತಮವಾದ ಚಿತ್ರವಿದು. ಈ ಕಥೆ

ಇದರಲ್ಲಿ ವಿಶೇಷ ಮನೋಹರವಾದ ಘಟನೆಗಳೇನೂ ಇಲ್ಲವಾದರೂ ಅಲ್ಲಲ್ಲಿ ಬರುವ ಸಂಭಾಷಣೆಗಳು ವಿಚಾರವನ್ನು ಕೆರಳಿಸುತ್ತವೆ. ಸಂಭಾಷಣೆಗಳಿಂದಲೇ ಕತೆಗಾರರು ಪಾತ್ರಪರಿಚಯವನ್ನು ಬಹಳ ಚೆನ್ನಾಗಿ ಮಾಡಿದ್ದಾರೆ.

ಶರಚ್ಚಂದ್ರರ ಸಾಹಿತ್ಯವು ಕನ್ನಡದಲ್ಲಿ ವಿಪುಲವಾಗಿ, ಪೂರ್ಣವಾಗಿ ಬರಬೇಕು. ಇಂತಹ ಉದ್ಯಮಕ್ಕೆ ಕೈ ಹಚ್ಚಿದ ಶ್ರೀ. ನಾಗರಾಜ ರಾಯರ ಯತ್ನವನ್ನು ಕನ್ನಡಿಗರು ವಿಶೇಷ ಪ್ರೋತ್ಸಾಹಿಸುವರೆಂದು ನಾವು ನಂಬುತ್ತೇವೆ.

—ಕೆಯ್ಯಾರ.

* ದರ್ಪಚೂರ್ಣ: ಮೂಲ ಕಾದಂಬರಿಕಾರರು: ಡಾ. ಶರಚ್ಚಂದ್ರ ಚಟರ್ಜಿ. ಅನುವಾದಕರು: ಶ್ರೀ. ಸಿ. ಕೆ. ನಾಗರಾಜರಾವ್, 128, ನರಸಿಂಹರಾಜ ಕಾಲೊನಿ, ಬೆಂಗಳೂರು ನಗರ. ಕ್ರೌನ್ ಆಕಾರದ ೬೫ ಪುಟಗಳು. ಬೆಲೆ ಎಂಟಾಣೆ.

ಅಜೀರ್ಣ ಅರುಚಿಗಳ ಬಾಧೆಯಿಂದ ಅವನ ಬುದ್ಧಿ ಮತ್ತು ಶರೀರಗಳು ಜಾಡ್ಯ ಹೊಂದಿದ್ದವು. ಹಾಗಾಗಿಯೇ ಆತನು ಅಷ್ಟು ಹುಷಾರಾಗಿರಲಿಲ್ಲ!

ಅಜೀರ್ಣ ಅರುಚಿ ಮತ್ತು ತಲೆನೋವು ಇನ್ನು ಮುಂದೆ ಆತನನ್ನು ಬಾಧಿಸಲಾರವು
ಏಕೆಂದರೆ ಈಗ ಆತನ ಒಳಗೂ ನಿರ್ಮಲತೆಯುಂಟಾಗಿದೆ.

ನಿಮ್ಮ ಹೊಟ್ಟೆಯೊಳಗಡೆ ಅಶುದ್ಧ ವಸ್ತುಗಳಿದ್ದರೆ ನೀವು ಜಯಶೀಲರಾಗಿರಲೂ ಸಂತುಷ್ಟರಾಗಿರಲೂ ಸಾಧ್ಯವಿಲ್ಲ. ಆಗಾಗ ಅಜೀರ್ಣ ಅರುಚಿ ತಲೆನೋವುಗಳು ನಿಮ್ಮನ್ನು ಯಾವ ಕೆಲಸದಲ್ಲಿಯೂ ನಿಷ್ಪ್ರಯೋಜನಕರನ್ನಾಗಿ ಮಾಡುವವು. ಮೆದುಳು ಮತ್ತು ಶರೀರದೊಳಭಾಗವನ್ನು ನೀವು ಶುಚಿಯಾಗಿಡಬೇಕು. ದಿನನಿತ್ಯ ತಂಪಾದ ಅಂಡ್ರ್ಯೂಸ್ ಲಿವರ್ ಸಾಲ್ಟಿನ ಒಂದು ಪಾನೀಯ ತೆಗೆದುಕೊಳ್ಳುವುದರಿಂದ ನೀವು ಸಂಪೂರ್ಣ ಆನಂದ ದಗೊಳ್ಳುವಿರಿ. ಅದು ಬಾಯಿ ಮತ್ತು ನಾಲಗೆಗಳನ್ನು ಶುಚಿಗೊಳಿಸುತ್ತವೆ. ಹೊಟ್ಟೆಯನ್ನು ಕ್ರಮದಲ್ಲಿರಿಸುತ್ತವೆ. ಹೊಟ್ಟೆಯ ಸರ್ವಾಯವಗಳನ್ನೂ ಶುದ್ಧಿಗೊಳಿಸುತ್ತವೆ, ಹೊಟ್ಟೆಗೆ ತಂಪನ್ನುಂಟುಮಾಡಿ ರಕ್ತವನ್ನು ಶುದ್ಧಿಗೊಳಿಸುತ್ತವೆ.

ಹೊಟ್ಟೆಯೊಳಗಡೆಯ ನೈರ್ಮಲ್ಯಕ್ಕೆ ದಿನನಿತ್ಯ ಅಂಡ್ರ್ಯೂಸ್ ಲಿವರ್ ಸಾಲ್ಟನ್ನು ಉಪಯೋಗಿಸಿರಿ

ANDREWS LIVER SALT

ಆರೋಗ್ಯಕರ ಪಾನೀಯ—ಶಕ್ತಿವರ್ಧಕವಾದ ಔಷಧಿ—ಶುಚಿಕರ—ತಂಪುಕರ—ಆನಂದಕರ—ಆಮೋದಕರ

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director.*

ಸಾದರ-ಸ್ವೀಕಾರ

ದಿ. ಕೆನರಾ ಬ್ಯಾಂಕಿಂಗ್ ಕೋರ್ಪರೇಶನ್ ಲಿಮಿಟೆಡ್–ಉಡುಪಿ. ಇದರ ಆಡಳಿತೆ ಮಂಡಳಿಯು 35ನೇ ವರ್ಷದ ರಿಪೋರ್ಟು ತಾ. 31-12-40ಕ್ಕೆ ಅಂತ್ಯವಾಗುವ ಒಂದು ವರ್ಷದ ಲಾಭ ನಷ್ಟದ ಲೆಕ್ಕ ಮತ್ತು ಸಾಲ ಮೂಲಗಳ ತಖ್ತೆ—ಇದನ್ನು ಅತ್ಯಾದರದಿಂದ ಸ್ವೀಕರಿಸುತ್ತೇವೆ.

ನಮ್ಮ ಜಿಲ್ಲೆಯಲ್ಲಿ ಪ್ರಾಮುಖ್ಯ ಬೇಂಕುಗಳಲ್ಲಿ ಒಂದಾಗಿದ್ದು, ಇಂದಿಗೆ 35 ವರ್ಷಗಳ ಕಾರ್ಯಕಲಾಪಗಳನ್ನು ಯಥಾಯೋಗ್ಯವಾಗಿ ಮುನ್ನಡೆಸಿ, ಇದೀಗ 36ನೇ ವರ್ಷಕ್ಕೆ ಕಾಲಿಟ್ಟಿದೆ. ಕಳೆದ 1940ನೇ ವರ್ಷವು ಈಗ ನಡೆಯುವ ಮಹಾಯುದ್ಧದ ದೆಸೆಯಿಂದ ಮತ್ತು ಇನ್ನಿತರ ಕಾರಣಗಳಿಂದ ವ್ಯಾಪಾರ ವಹಿವಾಟುಗಳಿಗೆ ಅಷ್ಟೊಂದು ಪ್ರಶಸ್ತ ಪರಿಣಾಮಕಾರಿಯಾಗಿಲ್ಲದಿದ್ದರೂ ಅಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕೂಡಾ ಜಾಗ್ರತೆಯಿಂದ ಮುನ್ನಡೆದ ಸಂಗತಿಯು ಈ ಕೆಳಗಿನ ಅಂಕೆಸಂಖ್ಯೆಗಳಿಂದ ಕಾಣಬರುತ್ತದೆ

	ತಾ. 31-12-39ರಲ್ಲಿ	31-12-40ರಲ್ಲಿ
ಪಾಲುಭಂಡವಾಳ	380715	435060
ಕ್ಷೇಮನಿಧಿಗಳು	390000	390000
ಠೇವಣಾತಿಗಳು	2106196	2472399
ನೆಟ್ ಮುನಾಫೆ	27342	0077
ಕೈಯಲ್ಲಿದ್ದ ಶಿಲ್ಕು	254186	635300

ಭದ್ರಾವತಿಯಲ್ಲಿ ಒಂದು ಹೊಸ ಶಾಖೆಯನ್ನು ಏರ್ಪಡಿಸಿದುದು ಆನಂದದಾಯಕವಾದ ಸಂಗತಿ. ಎಲ್ಲಕ್ಕೂ ಮಿಗಿಲಾಗಿ ಆಡಳಿತೆ ಮೆಂಬರರಿಂದ ಬರತಕ್ಕ ಸಾಲಗಳು ಏನೂ ಇರುವುದಿಲ್ಲ. ಇದು ಆದರ್ಶಪ್ರಾಯ ವಿಚಾರವಾಗಿದೆ.

ಈ ಬ್ಯಾಂಕಿನ ಕಾರ್ಯದಕ್ಷತೆ, ವಿಚಕ್ಷಣತೆ, ಮುಂಜಾಗ್ರತೆ ಇವುಗಳಿಂದಾಗಿ ಇದು ಹೆಸರುವಾಸಿಯಾಗಿದೆ ಚಲಾವಣೆಯ ಭಂಡವಾಳವು ದಿನದಿಂದ ದಿನಕ್ಕೆ ಏರುತ್ತಲಿರುವುದು ಸಂತೋಷಾಸ್ಪದದ ಸಂಗತಿಯಾಗಿದೆ. ಬ್ಯಾಂಕು ಸಮಯೋಚಿತವಾಗಿ ನಡೆದಂತೆ ಇಂದಿನ ವರೆಗೆ ಮುನ್ನಡೆದಂತೆ ಇನ್ನೂ ಪ್ರಗತಿಯನ್ನು ಹೊಂದಲೆಂದೇ ನಾವು ಬಯಸುತ್ತೇವೆ

ಶ್ರೀ ಪ್ಯಾರೇಲಾಲರಿಗೆ ೬ ತಿಂಗಳ ಸಾದಾ ಸಜೆ

ಗಾಂಧೀಜಿಯವರ ಕಾರ್ಯದರ್ಶಿಯವರಾದ ಶ್ರೀ ಪ್ಯಾರೇಲಾಲರು ಪುನಃ ಸತ್ಯಾಗ್ರಹ ಹೂಡಿದರು. ಸರಕಾರದವರು ಇವರನ್ನು ಕೈದುಮಾಡಿ ತಾ. ೧೯ರಲ್ಲಿ ವಾರ್ಧಾದಲ್ಲಿ ಇವರ ವಿಚಾರಣೆಯನ್ನು ನಡೆಸಿದರು. ಇವರಿಗೆ ೬ ತಿಂಗಳ ಸಾದಾ ಸಜೆಯನ್ನು ವಿಧಿಸಲಾಗಿದೆ ಮತ್ತು ಬಿ ತರಗತಿಯನ್ನು ಕೊಡಲಾಗಿದೆ.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R. I. A. 421/1941
O. S. No. 85/1941

ಮಂಜೇಶ್ವರ ಶ್ರೀ ಮದನಂತೇಶ್ವರ ದೇವರ ಭಂಡಾರ ಇವರ ಎಕ್ಸಿಕ್ಯೂಟಿವ್ ಆಫೀಸರ್ ಕೆ. ಪದ್ಮನಾಭ ಕಮ್ತಿ . . . . . ವಾದಿ.

ಮತ್ತು

ಸುಬ್ರಾಯ ಆಚಾರಿ ಸಹ . ಪ್ರತಿವಾದಿರು-

ವಾದಿ ಭಂಡಾರಕ್ಕೆ ತಾ. 12–10–1916 ರಲ್ಲಿ 1, 2ನೇ ಪ್ರತಿವಾದಿ ವಗೈರೆರು ಬರೆದುಕೊಟ್ಟ ರಿಜಿಸ್ಟ್ರಿ ಪಾಯಿದೆ ಗೇಣಿ ಚೀಟು ಪ್ರಕಾರ ವಾದಿ ಭಂಡಾರದಿಂದ, ಭಜನಾ ಮಂದಿರ ಕಟ್ಟಿಸುವ ಬಗ್ಗೆ ಪಡೆದ ಸ್ಥಳದ ಗೇಣಿ ಬಾಕಿ ಬಗ್ಗೂ ಆಸ್ತಿ ಸ್ವಾಧೀನತೆ ಬಗ್ಗೆ ಕೂಡಾ ಮೇಲ್ಕಂಡ ಕೋರ್ಟಿನಲ್ಲಿ ವಾದಿಯು ವ್ಯಾಜ್ಯ ದಾಖಲ್ಲುಮಾಡಿ ಸದ್ರಿ ವ್ಯಾಜ್ಯವು ತಾರೀಕು 3—4—1941ಕ್ಕೆ ಪ್ರತಿವಾದಿರ ಹಾಜ್ರಾತಿ ಬಗ್ಗೆ ಇಟ್ಟಿರುವದಲ್ಲದೆ ಸದ್ರಿ ವ್ಯಾಜ್ಯದಲ್ಲಿ ಸಿ. ಪಿ. ಕೋಡಿನ 1ನೇ ಓರ್ಡರ 8ನೇ ರೂಲ್ಸ ಪ್ರಕಾರ R. I. A. 421/1941ನೇಗೆ ಪ್ರತ್ಯೇಕ ಅರ್ಜಿ ಕೂಡಾ ವಾದಿಯು ದಾಖಲು ಮಾಡಿರುವುದರಿಂದ ಆ ಸಂಗತಿಯಲ್ಲಿ ಆಕ್ಷೇಪಯಿದ್ದವರು ಈ ಕೋರ್ಟಿನಲ್ಲಿ ತಾ 3—4—'41ರಲ್ಲಿ ವ್ಯಾಜ್ಯದ ಪಕ್ಷಿ ವ್ಯಾದೆಗೂ ಯಾ ತಾ. 5—4—1941 ರಲ್ಲು ಅರ್ಜಿ ತಕ್ಷಿ ವ್ಯಾದೆಗೂ ಹಾಜ್ರಾಗಿ ತಮ್ಮ ಆಕ್ಷೇಪಗಳನ್ನು ಹೇಳತಕ್ಕದ್ದು ತಪ್ಪಿದ್ದಲ್ಲಿ ಸದ್ರಿ ವ್ಯಾದೆಗೆ ಕೋರ್ಟಿನವರಿಗೆ ಯುಕ್ತಕಂಡ ರೀತಿಯಲ್ಲಿ ವ್ಯಾಜ್ಯವು ತೀರ್ಮಾನಿಸಲ್ಪಡುವದು, ಎಂತ ಕೋರ್ಟು ಹುಕುಂ ಪ್ರಕಾರ ಸರ್ವಜನರಿಗೂ ಈ ಮೂಲಕ ತಿಳಿಸಲಾಗಿಯದೆ.

ಕಾಸರಗೋಡು 21–3–'41 } **K P ANANTHA RAO,** Advocate for Plaintiff

---

In the Court of District Judge of South Kanara.

— O. P. No. 26/1941

In the matter of minors K. Balakrishna Prabhu, & K. Leelavati Bai

Between

1. K Sunandi Bai, 2 K. P. Narayana Prabhu— *Petitioners.*

and

1. K. Srinivasa Prabhu, 2. K. Narasimha Prabhu, 3. K. Vittal Prabhu, 4. K. Gopal Prabhu— *Respondents.*

Whereas the abovenamed Petitioners have made application to the above Court praying that 1st Petitioner or Sri G. Upendra Prabhu Vakil Mangalore who is the maternal uncle of 1st Petitioner or any other fit and proper person may be appointed guardian of the property of the above minors, it is hereby made known that the above application has been posted to 18–6 1941 at 10–30 A. M in the above Court. Those who object to the above petition may appear in person or by Vakil on that day and oppose the petition

Mangalore, 25—3—41 } **M. Keshava Pai,** Counsel for Petrs

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S. No. 7/1941

ರಾಮಕೃಷ್ಣ ಆಚಾರ್ಯ —ವಾದಿ

ಮತ್ತು

ನಾರಾಯಣ ಆಚಾರ್ಯ—ಕುತ್ಯಾದುಸಕ್ಕೆರಾಯ ನರಸಿಂಹ ಆಚಾರ್ಯರ ಮಗ—is a Shantigar in the Manali temple, Quilon, Cochin State. ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ನೋಟಿಸ ತಿಳಿಯಪಡಿಸುವುದೇನೆಂದರೆ—

ನಿಮ್ಮ ಕುಟುಂಬದೊಳಗೆ ತಾ. 6-9-1933 ರಲ್ಲು ರಿಜಿಸ್ಟ್ರಿ ನಿಬಿ ಆದ ವಿಭಾಗ ಪತ್ರದ ಶರ್ತಗಳ ಪ್ರಕಾರ ನಿಮ್ಮ ಹಿಸೆಗೆ ಬಂದಿದಿದ ಆಸ್ತಿ ಜವಾಬ್ದಾರಿಯಿಂದ ನಿಮ್ಮ ತಾಯಿ ನಾಗವೇಣಿ ಅಮ್ಮಗೆ ಸಲ್ಲತಕ್ಕ ಅಶನಾರ್ಥದ ಪೈಕಿ ಪ್ರಮಾಥಿ ಸಂವತ್ಸರದ ಅಂತ್ಯದ ವರೆಗಿನ ಅಶನಾರ್ಥವನ್ನು ವಸೂಲು ಮಾಡುವ ಹಕ್ಕನ್ನು ಟ್ರಾನ್ಸಫರ್ ಪಡೆಕೊಂಡ ನಿಮ್ಮ ತಮ್ಮನಾದ ವಾದಿಯು ಸದ್ರಿ ಆಯಿವೇಜು ವಸೂಲಿಯ ಬಗ್ಗೆ ನಿಮ್ಮ ಮೇಲೆ ದಾಖಲು ಮಾಡಿದ ಈ ದಾವೆಯು ತಾರೀಕು 4—6—1941ಕ್ಕೆ ಇಟ್ಟಿದುವುದರಿಂದ ಈ ದಾವೆಯ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ಅವುಗಳನ್ನು ಆ ದಿನ ಈ ಕೋರ್ಟು ಮುಂದೆ ಹಾಜರಾಗಿ ತಿಳುಹಿಸಿಕೊಳ್ಳತಕ್ಕದ್ದು. ತಪ್ಪಿದರೆ ಸದ್ರಿ ದಾವೆಯು ನಿಮ್ಮ ಪರೋಕ್ಷದಲ್ಲಿ ತೀರ್ಮಾನಿಸಲ್ಪಡುವುದು. ತಿಳಿದಿರಲಿ,

(By order of the Court)

ಮೊಕ್ಕಾಂ ಕಾರ್ಕಳ ತಾ 21-3-1941 } **P. V. Upadhyaya** Vakil for plaintiff

---

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ॥ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಶುಕ್ರಮೇಹ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ–ಕೋಕಸ್ ಎಂಬ ವಿಷಕ್ರಿಮಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವವು.

ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3–0–0 (ವಿ. ಪಿ. ಚಾರ್ಜು 8 ಆಣೆ ಬೇರೆ) ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer. **Dr. D. N. JASANI,** Vithalbhai Patel Road, BOMBAY 4

Madras Agent **Appah & Co, China Bazar Madras**

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ.

ವಿಜ್ಞಾನಯುಗ

ಗಂಟೆಗೆ ೬೨೦ ಮೈಲು ಓಟ!

ಅಮೆರಿಕದ ತಜ್ಞರು ಒಂದು ಅದ್ಭುತವಾದ ವಿಮಾನವನ್ನು ರಚಿಸಿದ್ದಾರೆ. ಇಷ್ಟರ ತನಕ ಯಾವ ವಿಮಾನವೂ ತಾಸಿಗೆ ೫೫೫ ಮೈಲುಗಳಿಗಿಂತ ಹೆಚ್ಚಿನ ವೇಗದಲ್ಲಿ ಹಾರಿದುದಿಲ್ಲ. ಒಂದು ವಿಮಾನದ ಸರಾಸರಿ ವೇಗವು ೨೦೦—೩೦೦ ಮೈಲುಗಳಷ್ಟು ಇರುತ್ತದೆ. ಪರಂತು ಈಗ ತಾನೇ ಕಂಡು ಹಿಡಿದ ವಿಮಾನದ ದೂರವು ತಾಸಿಗೆ ೬೨೦ ಮೈಲುಗಳಷ್ಟು ಇದ್ದು ಅದು ಹಿಂದಿನ ದಾಖಲೆಗಳನೆಲ್ಲಾ ಮೀರಿಸಿ ಕೀರ್ತಿಶಾಲಿಯಾಗಿರುತ್ತದೆ. ಈ ವಿಮಾನವು ಬಹಳ ವೇಗದಿಂದ ಎತ್ತರಕ್ಕೆ ಹಾರಿ ಕೆಳಗಿಳಿಯಲೂ ಬಹುದು. ಇದರ ಯಂತ್ರಬಲವು ಅತ್ಯದ್ಭುತವಾಗಿದೆ. ಇದು ಒಮ್ಮೆಗೆ ೨೧೦೦೦ ಅಡಿಗಳಷ್ಟು ಕೆಳಗೆ ಧುಮುಕಿ ಬಂದಿರುವದು. ಆದರೂ ಯಂತ್ರರಚನೆಯು ಎಳ್ಳಷ್ಟು ಕೆಟ್ಟು ಹೋಗಿರುವದಿಲ್ಲ. ಈ ವಿಮಾನಗಳು ಹೆಚ್ಚೆಚ್ಚು ಪ್ರಚಾರಕ್ಕೆ ಬಂದಹಾಗೆ ವಿಮಾನ ಸಂಚಾರದ ಸುರಕ್ಷಿತತೆಯ ಬಗ್ಗೆ ಜನರಲ್ಲಿ ಹೆಚ್ಚೆಚ್ಚು ವಿಶ್ವಾಸ ಹುಟ್ಟಲು ಅವಕಾಶ ಉಂಟಾಗಿದೆ.

ದನದ ಹಾಲಿನಿಂದ ಉಣ್ಣೆ ತಯಾರಿಸಬಹುದು

ದನದ ಹಾಲು ಅತ್ಯುತ್ತಮವಾದ ಆಹಾರ ಪದಾರ್ಥವಾಗಿದೆ. ಶರೀರ ಪೋಷಣೆಗೆ ಬೇಕಾದ ಎಲ್ಲಾ ಪದಾರ್ಥಗಳು ಅದರಲ್ಲಿ ಸಮತೂಕದಲ್ಲಿ ಇರುತ್ತವೆ. ಹಾಲು ಅಮೂಲ್ಯವಾದ ಆಹಾರವಾಗಿರುವುದು ಮಾತ್ರವಲ್ಲದೆ, ಅನೇಕ ಕೈಗಾರಿಕೆ ಸಾಮಾನುಗಳನ್ನು ತಯಾರಿಸಲಿಕ್ಕೆ ಬೇಕಾದ ಮೂಲ ಪದಾರ್ಥಗಳನ್ನು ಹಾಲಿನಿಂದಲೂ ತಯಾರಿಸಬಹುದಾಗಿದೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳೊಂದರಲ್ಲೇ ವರ್ಷ ಒಂದರ ೧೨೦೦೦ ಮಿಲಿಯ ರಾತಲು ತೂಕದ ಹಾಲು ಈ ಕೈಗಾರಿಕೆ ಸಾಮಾನುಗಳನ್ನು ತಯಾರಿಸಲಿಕ್ಕೆ ಉಪಯೋಗಿಸಲ್ಪಡುತ್ತದೆ. ಇದು ಅಮೆರಿಕದ ಒಟ್ಟು ಹಾಲಿನ ಉತ್ಪತ್ತಿಯ ಐದನೆ ಒಂದಂಶವಾಗಿರುವದು. ಹಾಲಿನಿಂದ ತಯಾರಾದ ಮೂಲ ಪದಾರ್ಥಗಳಿಂದ ಬಣ್ಣಗಳು, ಅಂಟುಗಳು, ಕೃತಕ ದಂತಗಳು, ಬಿಲಿಯಾರ್ಡ್ ಚೆಂಡುಗಳು, ಗುಬ್ಬಿಗಳು ಮೊದಲಾದವನ್ನು ತಯಾರಿಸಬಹುದಲ್ಲದೆ ಅದರ ಕೆನೆಯನ್ನು ಕೊಬ್ಬಿಕ ಸೋಡದೊಂದಿಗೆ ಬೆರಸಿ ಮಾಡಿದ ಮಿಶ್ರಣದಿಂದ ಕೃತಕ ಉಣ್ಣೆಯನ್ನು ತಯಾರಿಸಬಹುದಾಗಿದೆ. ಈ ಕೃತಕ ಉಣ್ಣೆಯು ಕಾಚಾ ಉಣ್ಣೆಯನ್ನೇ ಪ್ರತಿಯೊಂದು ಪರೀಕ್ಷೆಯಲ್ಲಿ ಹೋಲುತ್ತದೆ. ಕೇವಲ ರಾಸಾಯನಿಕ ಕ್ರಿಯೆಯಲ್ಲಿ ಮಾತ್ರ ವ್ಯತ್ಯಾಸವಿರುವದು.

ಕಣ್ಣಿಗೆ ಕಾಣದ ಕಾರ್ಖಾನೆ

ಕಣ್ಣಿಗೆ ಕಾಣದ ಮನುಷ್ಯ, ಕಣ್ಣಿಗೆ ಕಾಣದ ಮನೆ ಎಂದು ಮೊದಲಾಗಿ ನಾವು ಸಿನೇಮಗಳಲ್ಲಿ ನೋಡಿದ್ದೇವೆ. ಈಗ ಅಮೆರಿಕದ ಯುದ್ಧಖಾತೆಯವರು ಕಣ್ಣಿಗೆ ಕಾಣದ ಕಾರ್ಖಾನೆಯೊಂದನ್ನು ಕಟ್ಟಿ, ಅಸಂಭವವೆಂದಿರುವದನ್ನು ಸಂಭವವೆಂದು ತೋರಿಸಿಕೊಟ್ಟಿದ್ದಾರೆ. ಅಮೆರಿಕದ ಡೊಗ್ಲಾಸ್ ವಿಮಾನ ಕಾರ್ಖಾನೆಯ ಪ್ರಧಾನರಾದ ಡೊನಾಲ್ಡ ಡೊಗ್ಲಾಸ್ ಎಂಬವರು ಇಂಥ ಒಂದು ಕಾರ್ಖಾನೆಯನ್ನು ಕಟ್ಟುವ ಸಾಹಸ ತೋರಿಸಿದ್ದಾರೆ. ಈ ಕಾರ್ಖಾನೆಯ ಕಟ್ಟಡಕ್ಕೆ ಮೂರು ಮಿಲಿಯ ಪವನುಗಳು ಖರ್ಚಾಗುವವಂತೆ. ಕಟ್ಟಡಗಳು ಆಕಾಶದ ಮೇಲಿನಿಂದ ಹಾರಾಡುವ ವಿಮಾನಗಳಿಗೆ ಎಳ್ಳಷ್ಟು ತೋರದ ಹಾಗೆ ಅವುಗಳ ರಚನೆಯು ವಿಶೇಷ ರೀತಿಯಿಂದ ಆಗುತ್ತದೆ. ಆದುದರಿಂದಲೇ ಈ ಕಟ್ಟಡಗಳಿಗೆ ಇಷ್ಟು ಖರ್ಚಾಗುವದು. ಕಟ್ಟಡಗಳ ಹೆಚ್ಚಿನ ಭಾಗಗಳೆಲ್ಲ ನೆಲದಡಿಯಲ್ಲಿ ಕಟ್ಟಲ್ಪಡುತ್ತವೆ. ತಯ್ಯಾರಾದ ವಿಮಾನಗಳ ಉಗ್ರಾಣವೂ ನೆಲದಡಿಯಲ್ಲಿ ಇರುತ್ತದೆ. ೨೦೦೦೦ ಕೆಲಸಗಾರರ ಉಳಕೊಳ್ಳುವ ಮನೆಗಳೂ ನೆಲದಡಿಯಲ್ಲಿ ಇರುವವು. ಮೇಲಿನಿಂದ ನೋಡುವಾಗ ಒಟ್ಟು ಬಯಲು ಮಾತ್ರ ಕಾಣುತ್ತದೆ.

ಜರ್ಮನರು ಉಪಯೋಗಿಸಬಹುದಾದ ಆಕ್ರಮಣದ ಗ್ಯಾಸು

ಪ್ರಕೃತ ನಡೆಯುತ್ತಿರುವ ಯುದ್ಧದಲ್ಲಿ ಜರ್ಮನರು ಬ್ರಿಟನನ್ನು ದಂಡೆತ್ತಿ ಹೋಗುವದೇ ಆಗಿದ್ದರೆ ಅವರು ಅದಕ್ಕಾಗಿ ಗ್ಯಾಸನ್ನು ಉಪಯೋಗಿಸಬಹುದೆಂದು ಹೇಳುತ್ತಾರೆ. ಹಾಗೆ ಅವರು ಉಪಯೋಗಿಸುವ ಗ್ಯಾಸು ಅಂಗಾರಾಮ್ಲ ಅನಿಲವಾಗಿರಬಹುದು. ಇದು ಬ್ರಿಟನಿನ ಜನರನ್ನು ಎಚ್ಚರ ತಪ್ಪಿಸಿ ಅವರು ಯುದ್ಧಕಾರ್ಯಕ್ಕೆ ಬಾರದ ಹಾಗೆ ಮಾಡಲಿಕ್ಕೆ ಇರುವದಿಲ್ಲ. ಪರಂತು ಈ ಅಂಗಾರಾಮ್ಲ ಅನಿಲವು ಯುರೋಪಿಗೂ ಬ್ರಿಟಿಷ ನಡುಗಡ್ಡೆಗಳಿಗೂ ನಡುವಿರುವ ಸಮುದ್ರಭಾಗವನ್ನು ದಾಟಿಹೋಗಲಿಕ್ಕೆ ಅನುಕೂಲವಾಗಿ ಇರುವದು. ಅಂಗಾರಾಮ್ಲ ಅನಿಲವು ಕುದಿಯುವ ಬೆಂಕಿಯನ್ನು ನೊಂದಿಸಲಿಕ್ಕೆ ಆಗುತ್ತದೆ. ಆದರಂತೆ ರಬ್ಬರಿನೊಳಗೆ ಇದನ್ನು ತುಂಬಿಸಿದರೆ ರಬ್ಬರು ನೀರಿನಲ್ಲಿ ತೇಲುತ್ತದೆ. ಈ ಅನಿಲವನ್ನು ಸೋಡಾ ಬಾಟಲಿಗಳಲ್ಲಿ ತುಂಬಿಸುವದರಿಂದಲೇ ಬಾಟಲಿಯೊಳಗಿನ ಭಾರವಾದ ಗುಳಿಗೆಯು ಮೇಲೆ ಬಂದು ಬೂಚಿನಂತೆ ಗಟ್ಟಿಯಾಗಿ ಕೂತುಕೊಳ್ಳುತ್ತದೆ. ಈ ಅನಿಲವನ್ನು ದ್ರವ ರೂಪಕ್ಕೆ ತಂದು ಬಾಟಲಿಗಳಲ್ಲಿ ತುಂಬಿಸಿಕೊಂಡು ಹೋಗುವರು. ಮತ್ತೆ ಬೇಕಾದಾಗ ರಬ್ಬರುಗಳಲ್ಲಿ ತುಂಬಿಸಿ ಆ ರಬ್ಬರುಗಳನ್ನು ಸಮುದ್ರದಲ್ಲಿ ತೇಲಬಿಟ್ಟು ಅವುಗಳ ಮೇಲೆ ಕೂತು ದಂಡೆ ಸೇರುವರು. ಸೈನಿಕರಿಗೆ ಬ್ರಿಟನಿನವರೆಗೂ ಹೋಗಲಿಕ್ಕೆ ಹಡಗುಗಳ ಅಗತ್ಯವು ಇರುವದಿಲ್ಲ. ಯಾರಿಗೂ ತಿಳಿಯದಂತೆ ದಾಳಿಯನ್ನಿಡಲಿಕ್ಕೆ ಇದು ಅನುಕೂಲವಾಗಿದೆ.

ಯುದ್ಧಕಾರ್ಯಕ್ಕೆ ಹೊಸ ಸೂಚನೆಗಳು

ಬ್ರಿಟಿಷರ ಯುದ್ಧ ಕಾರ್ಯವು ಪೂರ್ಣ ಸಫಲವಾಗಬೇಕೆಂಬುದಕ್ಕೋಸ್ಕರ ಉತ್ಸಾಹಭರಿತರಾದ ಜನರು ತಮಗೆ ಯುಕ್ತಕಂಡ ಸೂಚನೆಗಳನ್ನೆಲ್ಲ ಯುದ್ಧ ಕಾರ್ಯಾಲಯಕ್ಕೆ ಕಳುಹಿಸುತ್ತಿರುವರು. ಇವುಗಳಲ್ಲಿ ಹೆಚ್ಚಿನವುಗಳು ಹುಚ್ಚರ ಆವೇಶದಿಂದ ಕೂಡಿದವುಗಳಾಗಿದ್ದು ಪ್ರಯೋಜನಕ್ಕೆ ಬಾರದಂಥವುಗಳಾಗಿವೆ. ಪರಂತು ಕೆಲವು ಆಲೋಚನೀಯವಾಗಿರುವವು. ರಾತ್ರಿ ಪೇಟೆಪಟ್ಟಣಗಳ ಮೇಲೆ ದಾಳಿಯನ್ನಿಡಲು ಬರುವ ಶತ್ರುವಿಮಾನಗಳನ್ನು ಎದುರಿಸುವದಕ್ಕೋಸ್ಕರ ಆಕಾಶದಲ್ಲಿ ಹಾರಾಡುತ್ತಿರುವ ಮೋಡಗಳನ್ನು ಗಟ್ಟಿಮಾಡಿ ಅವುಗಳ ಮೇಲೆ ಫಿರಂಗಿಗಳನ್ನು ಇಡಬೇಕೆಂದು ಒಬ್ಬನ ಸೂಚನೆಯಾಗಿದೆ. ಕೆಳಗಿನಿಂದ ತೋರದ ಅದೃಶ್ಯ ವಿಮಾನಗಳನ್ನು ಕಂಡುಹಿಡಿಯಲಿಕ್ಕೆ ಅವು ಹಾರಿಬರುವ ದಾರಿಯ ಮೇಲೆ ಬಣ್ಣದ ಹೊಗೆ ಕೊಡುವ ದುರುಸುಗಳನ್ನು ಬಿಡಬೇಕೆಂದೂ, ಆ ಹೊಗೆಯನ್ನು ದಾಟಿ ಬರುವಾಗ ಹೊಗೆಯ ಬಣ್ಣವು ವಿಮಾನಗಳಿಗೆ ಅಂಟಿಕೊಂಡು ಅವನ್ನು ಕೆಳಗಿನಿಂದ ನೋಡಬಹುದೆಂದೂ ಮತ್ತೊಬ್ಬನು ಸೂಚಿಸಿರುವನು. ಬ್ರಿಟಿಷ ಯುದ್ಧಖಾತೆಯ ವಿಜ್ಞಾನಿಗಳು ಯುಕ್ತಾಯುಕ್ತವಾದ ಈ ಸೂಚನೆಗಳನ್ನು ಪರ್ಯಾಲೋಚಿಸುತ್ತಿದ್ದಾರೆ.

THE
BANK OF MANGALORE LTD.,
H. O. MANGALORE
ESTD 1931
Branches-
Moodabidri & Padubidri.
NOTICE
On and from 1st January 1941 the following are the revised rates of interest on deposits.
FIXED DEPOSITS:

For 2 years or over	5½%
„ 1 „	4½%
„ 6 months	3½%
„ 3 months	3 —

Interest Payable Quarterly
SAVINGS BANK DEPOSITS:
On daily balances on balances over Rs. 5-0-0 in multiples of Rs. 5-0-0 @ 3%
All kinds of banking business transacted.

HALFTONE & LINE BLOCK MAKING UNDERTAKEN
Sharada Press, MANGALORE

ಪತ್ರಿಕೆಗಳು ಮತ್ತು ಸರಕಾರದ ಸೌಹಾರ್ದತೆ.

ಶ್ರೀ. ಕೆ. ಶ್ರೀನಿವಾಸನ್‌ರವರು ಸರಕಾರಕ್ಕೆ ಬರೆದ ಪತ್ರ

ಅಖಿಲ ಭಾರತ ಸಂಪಾದಕ ಸಮ್ಮೇಳನದ ಅಧ್ಯಕ್ಷರಾದ ಶ್ರೀ. ಕೆ. ಶ್ರೀನಿವಾಸನ್‌ರವರು ಇಂಡಿಯಾ ಸರಕಾರದ ಅಡಿಷನಲ್ ಸೆಕ್ರೆಟರಿ ಸರ್ ರಿಚರ್ಡ್ ಟಾಟನ್‌ಹ್ಯಾಂರಿಗೆ ಸಂಪಾದಕ ಸಮ್ಮೇಳನದ ಸ್ಟ್ಯಾಂಡಿಂಗ್ ಕಮಿಟಿ ಪರವಾಗಿ ಒಂದು ಪತ್ರವನ್ನು ಬರೆದಿದ್ದರು. ಇಂಡಿಯಾ ಸರಕಾರದ ಅನುಮತಿಯಿಂದ ಶ್ರೀ. ಶ್ರೀನಿವಾಸನ್‌ರವರು ಆ ಪತ್ರವನ್ನು ಈಗ ಪ್ರಕಟಿಸಿರುತ್ತಾರೆ.

ಆ ಪತ್ರದಲ್ಲಿರುವ ಮುಖ್ಯಾಂಶಗಳೇನೆಂದರೆ:—ಇಂಡಿಯಾ ಸರಕಾರದವರು ಸಂಪಾದಕರ ಸಮ್ಮೇಳನದ ಡೆಲ್ಲಿ ಒಪ್ಪಂದವನ್ನು ಮನ್ನಿಸುವುದಕ್ಕೆ ಸಂತೋಷ. ಸರಕಾರದ ಚೀಫ್ ಪ್ರೆಸ್ ಅಡ್ವೈಜರು ಕೇಂದ್ರ ಪ್ರೆಸ್ ಸಲಹಾ ಸಮಿತಿಯ ಸಲಹೆಗಳನ್ನು ತಿಳಿದುಕೊಳ್ಳುವುದಕ್ಕೆ ಒಪ್ಪಿರುವುದೂ, ಸರಕಾರಕ್ಕೂ ಪತ್ರಿಕಾ ಕರ್ತರಿಗೂ ಸಮಾಧಾನ ಪರಿಸ್ಥಿತಿ ನೆಲೆಸುವುದಕ್ಕೆ ಸೌಹಾರ್ದತೆ ತೋರಿಸಿರುವುದಕ್ಕೂ ವಂದನೆಗಳು.

ಆದರೆ ಸೈನಿಕ್ ಮತ್ತು ನ್ಯಾಷನಲ್ ಹೆರಾಲ್ಡ್ ಪತ್ರಿಕೆಗಳ ಬಗ್ಗೆ ಸರಕಾರವು ಅನುಸರಿಸುತ್ತಿರುವ ವರ್ತನೆಯು ಅತೃಪ್ತಿಕರವಾಗಿದೆ. ಈ ಪತ್ರಿಕೆಗಳ ಮೇಲೆ ಹಾಕಲಾದ ಪ್ರತಿಬಂಧಕಾಜ್ಞೆಗಳನ್ನು ಇಂಡಿಯಾ ಸರಕಾರದವರು ವಾಪಸು ತೆಗೆದುಕೊಳ್ಳಬೇಕು. ಮಹಾತ್ಮಾ ಗಾಂಧಿಯವರ ಹೇಳಿಕೆಗಳ ಪ್ರಕಟಣೆ ಬಗ್ಗೆ ಸರಕಾರವು ಕೊಟ್ಟ ಭರವಸೆಗಾಗಿ ವಂದಿಸುತ್ತೇವೆ.

ಮಹಾತ್ಮಾ ಗಾಂಧಿಯವರು ಹರಿಜನ ವಾರಪತ್ರಿಕೆಗಳನ್ನು ಮತ್ತೆ ಹೊರಡಿಸುವುದಕ್ಕೆ ಸರಕಾರದವರು ಪ್ರತಿಬಂಧಕಗಳನ್ನು ತೆಗೆದುಹಾಕಿ ಸಹಾಯಕರಾಗುವರೆಂದು ನಂಬಿದೆ. ಗಾಂಧಿಜಿಯವರ ಹರಿಜನ ಪತ್ರಿಕೆಗಳು ಭಾರತದ ಪತ್ರಿಕಾ ಪ್ರಪಂಚದಲ್ಲಿ ಪ್ರಾಮುಖ್ಯ ಸ್ಥಾನವನ್ನು ಗಳಿಸಿರುವುದರಿಂದ ಅವುಗಳ ಪ್ರಚಾರ ಇಲ್ಲದಿರುವುದು ದೇಶಕ್ಕೆ ದೊಡ್ಡ ಕೊರತೆಯಾಗಿದೆ. ಆದ್ದರಿಂದ ಈ ಬಗ್ಗೆ ಗಾಂಧಿಯವರಿಗೆ ಯಾವ ಅನಾನುಕೂಲತೆಯೂ ಉಂಟಾಗಬಾರದೆಂದು ಕೋರಿದೆ.

ಕೃಷಿಗರ ಸಂಘ

ಕಾಸರಗೋಡು

ನಮ್ಮ ಜಿಲ್ಲೆಯ ಕೃಷಿ ಮತ್ತು ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಯನ್ನು ಹಾರೈಸುವ ಒಂದು ಕೃಷಿಕರ ಸಂಘವನ್ನು ಸ್ಥಾಪಿಸುವರೆ ಕಾಸರಗೋಡು ಬೋರ್ಡ್ ಹೈಸ್ಕೂಲಿನಲ್ಲಿ ತಾ. ೧೮—೩—೪೧ನೇ ಸಾಯಂಕಾಲ ಒಂದು ಕೃಷಿಕರ ಮಹಾಸಭೆಯು ಜರಗಿತು. ಡಾ. ಕೆ. ನಾರಾಯಣ ನಾಯಕ್, ಅಸಿಸ್ಟೆಂಟ್ ಸರ್ಜನ್ ಇವರು ಅಗ್ರಾಸನವನ್ನು ವಹಿಸಿದ್ದರು. ಸಭೆಯ ಚಾಲಕರಾದ ಶ್ರೀ. ಎನ್. ಕೃಷ್ಣ ಭಟ್ಟರು ಸಭಿಕರನ್ನು ಸ್ವಾಗತಿಸಿ ಕೃಷಿಕರ ಸಂಘದ ಆವಶ್ಯಕತೆ ಮತ್ತು ಉದ್ದೇಶಗಳನ್ನು ವಿವರಿಸಿದರು. ಅಧ್ಯಕ್ಷರು ಸಂಘಕ್ಕೆ ಶ್ರೇಯಸ್ಸನ್ನು ಬಯಸಿ, ತಮ್ಮ ಸಾರವತ್ತಾದ ಭಾಷಣದಲ್ಲಿ ಅನೇಕ ಉತ್ತಮ ಸಲಹೆಗಳನ್ನು ಸೂಚಿಸಿದ ಬಳಿಕ ಕಾಸರಗೋಡು ಎಗ್ರಿಕಲ್ಚರಲ್ ಡೆಮನ್‌ಸ್ಟ್ರೇಟರರು ವ್ಯವಸಾಯದಲ್ಲಿ ಗೊಬ್ಬರ ಮತ್ತು ಬೀಜದ ಪ್ರಾಮುಖ್ಯತೆಯನ್ನು ಅಂದವಾಗಿ ತಿಳಿಸಿದರು. ಶ್ರೀ. ಖಂಡಿಗೆ ಕೃಷ್ಣ ಭಟ್ಟರು ಕೃಷಿಯಿಂದ ದಾರಿದ್ರ್ಯ ಮತ್ತು ನಿರುದ್ಯೋಗವನ್ನು ಹೇಗೆ ನಿವಾರಣೆಮಾಡಿಕೊಳ್ಳಬಹುದೆಂದು ಉಪಯುಕ್ತ ಸಲಹೆಗಳನ್ನಿತ್ತರು. ತರುವಾಯ ಸಂಘದ ನಿಬಂಧನೆಯನ್ನು ತಯಾರಿಸಲು ಈ ಕೆಳಗಿನ ಮಹನೀಯರನ್ನೊಳಗೊಂಡ ಸಮಿತಿಯು ಚುನಾಯಿಸಲ್ಪಟ್ಟಿತು: ಶ್ರೀ. ಡಾ. ಪಿ. ಎನ್. ಭಟ್ಟರು ಅಧ್ಯಕ್ಷರಾಗಿಯೂ, ಶ್ರೀ. ಬಿ. ಯಸ್. ಕಕ್ಕಿಲ್ಲಾಯ, ಎಡ್ವಕೇಟ್ ಇವರು ಕಾರ್ಯದರ್ಶಿಯಾಗಿಯೂ ಶ್ರೀ. ಯಸ್. ಕೃಷ್ಣ ಭಟ್ಟ, ಪಟ್ಟೆ ನಾಯಕ್ ಎಡ್ವಕೇಟ್, ಯಸ್. ವೆಂಕಟ್ರಮಣ ಭಟ್ ಎಡ್ವಕೇಟ್, ಬಿ. ಉಮೇಶರಾವ್ ವಕೀಲ್; ಕೆ. ವೆಂಕಪ್ಪ ಭಟ್ ಇವರನ್ನು ಮೆಂಬರರಾಗಿಯೂ ಆರಿಸಿದ ಮೇಲೆ, ಶ್ರೀ. ಎ. ಪಿ. ಗಣಪತಿ ಭಟ್ ಇವರಿಂದ ಧನ್ಯವಾದ ಅರ್ಪಣೆಯೊಂದಿಗೆ ಸಭೆಯು ಅಂತ್ಯಗೊಂಡಿತು.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್.
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು
ಮಂಗಳೂರು. ಕೊಡಿಯಾಲಬೈಲು.

DEVEGADABETTU
9—3—1940

FROM:

Sri K. Shivarama Nair,
Kerikcundah Estate,
Post Devegadabettu,
KADUR DISTRICT.

To,

The Joint Managers,
C. P. C. Motor Service Ltd.,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair.

ಸಂಚಿಕೆ ಬಿಡಿ ಒಂದಾಣೆ ವಾರ್ಷಿಕ ಚಂದಾ ರೂ. 2-0-0 Regd. No. M. 3460

ಸ್ವದೇಶಾಭಿಮಾನಿ

ಸಂಪುಟ 35] ತಾರೀಕು 28-3-1941 [ಸಂಚಿಕೆ 13]

The Bombay Life Assurance Company, Ltd.

(ESTABLISHED 1908)

Death! is not a matter of supposition
is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To insure or to represent, write to

KOCHIKAR BROTHERS, LIMITED.

MADRAS BRANCH SECRETARIES.

The Bombay Life Building,
Gandhi Nagar, UDIPI.

OR AT ANY OF THEIR OFFICES AT:—

Pathiyara, Calicut. — Car Street, Mangalore. — Central Station Road, Trivandrum.
Gautam Nivas, Charni Road, Bombay No. 4. — Post Box No. 337, Mount Road, Madras. — Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಸ್ನಾಯುಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಚೇಷ್ಟೆ, ಪಕ್ಷವಾತ, ಪ್ರಸೂತಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ/ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.